UNIVERSAL LIBRARY
OU_200656
UNIVERSAL LIBRARY

OSMANIA UNIVERSITY LIBRARY

Call No. K.81/N45D Accession No. K 3

Author [illegible]

Title [illegible]

This book should be returned on or before the date last marked

University of Mysore

Oriental Library Publications

KANNADA SERIES No. 14

ನಯಸೇನ ವಿರಚಿತಂ

ಧರ್ಮಾಮೃತಂ

ಪೂರ್ವಭಾಗ—ಅಧ್ಯಾಯಗಳು ೧-೯

DHARMAMRITAM

BY

NAYASENA

PART I—CHAPTERS 1—9

EDITED BY

DR R. SHAMA SASTRY, B.A., Ph.D., M.R.A.S.,

Curator, Government Oriental Library, Mysore, Director of Archaeological Researches in Mysore, Periodical Lecturer to the Post Graduates' Classes of the Calcutta University, and B B R A S Campbell Memorial Medalist

MYSORE

PRINTED AT THE GOVERNMENT BRANCH PRESS

1924

(All Rights Reserved)

ವಿ ಷ ಯಾ ನು ಕ್ರ ಮ ಣಿ ಕೆ.

ಉಪೋದ್ಘಾತ ... v-xxiii

೧ ಪ್ರಥಮಾಶ್ವಾಸಂ—ದರ್ಶನದ ಕಥೆ ...

೨. ದ್ವಿತೀಯಾಶ್ವಾಸಂ—ನಿಶ್ಶಂಕೆಯ ಕಥೆ .. ೪೩

೩. ತೃತೀಯಾಶ್ವಾಸಂ—ನಿಷ್ಕಾಂಕ್ಷೆಯ ಕಥೆ . ೯೩

೪. ಚತುರ್ಥಾಶ್ವಾಸಂ—ನಿರ್ವಿಚಿಕಿತ್ಸೆಯ ಕಥೆ .. ೧೪೭

೫. ಪಂಚಮಾಶ್ವಾಸಂ—ಅಮೂಢದೃಷ್ಟಿತ್ವದ ಕಥೆ ೧೯೩

೬. ಷಷ್ಠಾಶ್ವಾಸಂ—ಉಪಗೂಹನದ ಕಥೆ ೨೫೧

೭. ಸಪ್ತಮಾಶ್ವಾಸಂ—ಸ್ಥಿತಿಕರಣದ ಕಥೆ ... ೩೦೨

೮. ಅಷ್ಟಮಾಶ್ವಾಸಂ—ವಾತ್ಸಲ್ಯದ ಕಥೆ .. ೩೭೪

೯. ನವಮಾಶ್ವಾಸಂ—ಪ್ರಭಾವನೆಯ ಕಥೆ ೪೨೩

ಉಪೋದ್ಘಾತ.

ಈ ಗ್ರಂಥವು ಮುಖ್ಯವಾಗಿ ಮೂರು ಲಿಖಿತ ಪುಸ್ತಕಗಳ ಸಹಾಯದಿಂದ ಶೋಧಿತವಾಗಿದೆ.

(೧) ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ ೬ನೆಯ ನಂಬರಿನ ಓಲೆಯ ಪುಸ್ತಕ (ಓ).

(೨) ಅದೇ ಲೈಬ್ರರಿಯಲ್ಲಿರುವ ೨. ೩೩ನೆಯ ನಂಬರಿನ ಕಾಗದದ ಪುಸ್ತಕ (ಕ).

(೩) ಮೈಸೂರು ಜೈನ ಬೋರ್ಡಿಂಗ್ ಹೋಮಿನಲ್ಲಿರುವ ಶ್ರೀ ನೇಮಿಸಾಗರ ವರ್ಣಿಸ್ವಾಮಿಗಳು ಕೊಟ್ಟ ಓಲೆಯ ಪುಸ್ತಕ (ಗ)

ಶ್ರವಣಬೆಳಗೊಳದ ಶ್ರೀ ಜೈನಮಠದಿಂದ ಬಂದ ಓಲೆಯ ಪ್ರತಿಯನ್ನು ತರಿಸಿ ನೋಡಲು ಅದೂ ಮೇಲೆ ಹೇಳಿದ (೨)ನೆಯ ಪುಸ್ತಕವೂ ಒಂದೇಯೆಂದು ತೋರಿತು. ಲೈಬ್ರರಿಯ ಎರಡು ಪ್ರತಿಗಳಿಗೂ ಪರಸ್ಪರ ಹೆಚ್ಚು ವ್ಯತ್ಯಾಸವಿಲ್ಲ. ಇವುಗಳಲ್ಲಿ ಓಲೆಯ ಪುಸ್ತಕವೇ ಹೆಚ್ಚು ಶುದ್ಧವಾಗಿದೆ. ಆದುದರಿಂದ ಅದನ್ನೇ ಇಲ್ಲಿ ಮುಖ್ಯವಾಗಿ ಅನುಸರಿಸಿದೆ.

ಆದರೆ ಈ ಎರಡು ಪ್ರತಿಗಳಿಗೂ ನೇಮಿಸಾಗರ ವರ್ಣಿಸ್ವಾಮಿಗಳಿಂದ ಬಂದ ಪುಸ್ತಕಕ್ಕೂ ವ್ಯತ್ಯಾಸಗಳು ಬಹಳವಾಗಿವೆ. (ಗ) ಪುಸ್ತಕದಲ್ಲಿರುವ ಕಥಾಭಾಗ ಹೆಚ್ಚು, (ಕ) ಮತ್ತು (ಓ) ಪುಸ್ತಕಗಳಲ್ಲಿರುವುದು ಕಡಿಮೆ. ಇವುಗಳಲ್ಲಿ (ಕ) ಮತ್ತು (ಓ) ಪುಸ್ತಕಗಳು ಮೂಲಗ್ರಂಥವಾಗಿದ್ದು ಅದರ ಸಂಗ್ರಹವಾಗಿ (ಗ) ಪುಸ್ತಕವು ಹುಟ್ಟಿತೋ, ಅಥವಾ (ಗ) ಪುಸ್ತಕವೇ ಮೂಲವಾಗಿದ್ದು ಅದಕ್ಕೆ ಪ್ರಕ್ಷಿಪ್ತಭಾಗಗಳು ಸೇರಿ 'ಕ' ಮತ್ತು 'ಓ' ಪುಸ್ತಕಗಳು ಹುಟ್ಟಿದುವೋ ಹೇಳುವುದು ಕಷ್ಟ. ಈ ಎರಡನೆಯ ಪಕ್ಷವೇ ಸಂಭವವೆಂದು ತೋರುವುದು. ಆದರೂ ಪಾಠಕರ ಸೌಕರ್ಯಕ್ಕಾಗಿ ವಿಸ್ತಾರವಾದ ಪಾಠವೇ ಕೊಡಲ್ಪಟ್ಟಿದೆ. (ಗ) ಪುಸ್ತಕದಲ್ಲಿಲ್ಲದ ಹೆಚ್ಚು ಪಾಠವನ್ನು [ ] ಈ ಆವರಣಚಿಹ್ನೆಗಳಿಂದ ಸೂಚಿಸಿದೆ.

ಈ ಪ್ರತಿಗಳಲ್ಲೆಲ್ಲಾ ಅಶುದ್ಧಗಳು ಹೇರಳವಾಗಿರುವುದರಿಂದ ಗ್ರಂಥದಲ್ಲಿ ಬರುವ ಭಾಷೆಯ ಸ್ವರೂಪವನ್ನೂ ಶಬ್ದರೂಪಗಳನ್ನೂ ನಿಷ್ಕರ್ಷಿಸುವುದು ಕಷ್ಟವಾಯಿತು. ಕೊನೆಗೆ ಹನ್ನೆರಡನೆಯ ಶತಮಾನವಲ್ಲಿ ಪ್ರಚಾರದಲ್ಲಿದ್ದಿರಬಹುದಾದ ಕೆಲವು 'ಮಧ್ಯಗನ್ನಡ' ರೂಪಗಳನ್ನು ಉಪಯೋಗಿಸಬೇಕೆಂದು ತೀರ್ಮಾನಿಸಿ ಅದೇ ನಿಯಮವನ್ನು ಅನುಸರಿಸಿದೆ. ಈ ವಿಚಾರವೂ ಈ ಗ್ರಂಥ ಮತ್ತು ಗ್ರಂಥಕಾರನಿಗೆ ಸಂಬಂಧಪಟ್ಟ ಇತರ ವಿಚಾರಗಳೂ ಎರಡನೆಯ ಸಂಪುಟದ ಉಪೋದ್ಘಾತದಲ್ಲಿ ಬರೆಯಲ್ಪಡುವುವು.

ಈ ಗ್ರಂಥದ ಪ್ರತಿಪಾದ್ಯ ವಿಷಯವು ಸುಲಭವಾಗಿ ತಿಳಿಯುವಂತೆ ಈ ಸಂಪುಟದ ಒಂಬತ್ತು ಅಧ್ಯಾಯಗಳ ಸಾರಾಂಶವೂ ಮುಂದೆ ಬರೆಯಲ್ಪಟ್ಟಿದೆ.

ಎ. ಆರ್. ಕೃಷ್ಣಶಾಸ್ತ್ರೀ.

ಕಥಾಸಾರಾಂಶ.

ಪ್ರಥಮಾಶ್ವಾಸ

ದರ್ಶನದ ಕಥೆ.

ಸೌರಾಷ್ಟ್ರ ವಿಷಯದಲ್ಲಿ ಗಿರಿನಗರವೆಂಬುದೊಂದು ಊರು; ಅದನ್ನು ವಿಶ್ವಸೇನನೆಂಬ ಮಹಾಮಂಡಳಿಕನು ಆಳುತ್ತಿದ್ದನು. ಆದೇ ಊರಲ್ಲಿ ದಯಾಮಿತ್ರ ಸೆಟ್ಟಿಯೆಂಬ "ರಾಜಶ್ರೇಷ್ಠಿ" ಇದ್ದನು. ಅವನು ಒಂದು ದಿನ ವ್ಯಾಪಾರಕ್ಕೆಂದು ಹೊರಟು ಪೊರಬೀಡು ಬಿಟ್ಟಿರಲು, ವಸುಭೂತಿ ಎಂಬ ಒಬ್ಬ ಬ್ರಾಹ್ಮಣನು ಬಂದು, ತಾನು ಗಂಗಾಸ್ನಾನಕ್ಕೆ ಹೊರಟಿರುವುದಾಗಿಯೂ, ಆದರೆ ಒಬ್ಬನೇ ಇರುವುದರಿಂದ ಅವರ ಜೊತೆಯನ್ನು ಅಪೇಕ್ಷಿಸುವುದಾಗಿಯೂ ಹೇಳಿದನು. ಎಲ್ಲರೂ ಪ್ರಯಾಣ ಹೊರಟರು. ದಿವಸಕ್ಕೆ ಮೂರುಗಳಿಗೆಯ ಹೊತ್ತು ಧರ್ಮಶ್ರವಣ ಮಾಡದೆ ಊಟಮಾಡುವುದಿಲ್ಲವೆಂಬುದು ದಯಾಮಿತ್ರ ಸೆಟ್ಟಿಯ ವ್ರತ. ಅದರಂತೆ ದಾರಿಯಲ್ಲಿ ಅವನು ಧರ್ಮವನ್ನು ಹೇಳುತ್ತಿರಲು ವಸುಭೂತಿಯು ನಕ್ಕು ಅವನ ಮೂರ್ಖತನವನ್ನು ತಿಳಿಸಿ ತನ್ನ ನಿಜವಾದ ಧರ್ಮವನ್ನು ಹೇಳುತ್ತೇನೆಂದು ಹೊರಟು ಸವಣರ ಕಾರ್ಯವೆಲ್ಲ "ಕೂಪ" ಕಾರಣವಲ್ಲದೆ ಗತಿಕಾರಣಮಲ್ಲದು, ಗತಿಗಾಡೆವನೆಂಬುದು ಕಾಯಕ್ಲೇಶಂಬೇಳ್ಪುದು; ಆ ಕಾಯಕ್ಲೇಶಂ ನಿಮ್ಮ ನಿಶ್ಚಿನಸವಣರ ಮೆಯ್ಯೊಳ್ಳಸಿತುಮಿಲ್ಲ," ಇಂಥವರನ್ನೂ ಅವರ ದೇವರನ್ನೂ ಕೊಂಡಾಡುವುದು "ಮರುಳಾಟ" ವೆಂದು ಹೇಳಿದನು ಸೆಟ್ಟಿಯೂ "ಕರ್ಮದ ತೀವ್ರತೆಯಿಂದೀ ಪಾರ್ವಂಗೆ ಲೌಕಿಕಧರ್ಮವೆ ಧರ್ಮವಾಗಿ ತೋರ್ಪುದು" ಎಂದು ಪಶ್ಚಾತ್ತಾಪಪಟ್ಟು ಸಮಯ ನೋಡಿ ಅವನಿಗೆ ಬುದ್ಧಿಕಲಿಸಬೇಕೆಂದು ನಿಶ್ಚಯಿಸಿಕೊಂಡನು.

ಎಂಟು ಹತ್ತು ದಿನಗಳು ಕಳೆದ ಮೇಲೆ ಒಂದುದಿನ ವಸುಭೂತಿಯನ್ನು ಕರೆಸಿ "ಋಷಿಯರಿಂದ ಒಂದು ದೊಡ್ಡ ವ್ರತವನ್ನು ಮಾಡಿಸಿ

ಅವರಿಗೆ ಬೇಕಾದದ್ದನ್ನು ಕೊಡುವುದು ನಮ್ಮಲ್ಲಿ ನಡೆದುಬಂದಿದೆ. ಇಲ್ಲಿ ಋಷಿಯಾದವರಾರೂ ಇಲ್ಲ; ಇಲ್ಲದಿದ್ದರೇನಾಯಿತು ? ನಿಮಗಿಂತ ನಮಗೆ ಬೇರೆ ಋಷಿಗಳುಬೇಕೆ ? ಆದ್ದರಿಂದ ತಾವು ಆ ವ್ರತವನ್ನು ಕೈಕೊಂಡು ಮುಗಿಸಿ ಬೇಕಾದಷ್ಟು ದಕ್ಷಿಣೆಯನ್ನು ಕೇಳಿ, ಕೊಡುವೆನು ;" ಎಂದು ಹೇಳಿದನು. ಬ್ರಾಹ್ಮಣನು ಸಂತೋಷಪಟ್ಟು ಆ ವ್ರತದ ಕ್ರಮ ವೇನೆಂದು ಕೇಳಲು ಅವನು ಶೆಟ್ಟಿಗೆ ಹೀಗೆ ಹೇಳಿದನು—"ಅನ್ನ ತುಪ್ಪ ಭಕ್ಷ್ಯ ಭೋಜ್ಯಗಳನ್ನು ಕೈಗೆ ಹಾಕಿಸಿಕೊಂಡು ಊಟಮಾಡ ಬೇಕು; ಮರುದಿನ ಆ ಹೊತ್ತು ಬರುವವರೆಗೂ ತಾಂಬೂಲಾದಿಗಳಾಗಲಿ ಪುನಃ ಅನ್ನಪಾನಾದಿಗಳಾಗಲಿ ಕೂಡದು, ಮನೆ ಬಿಟ್ಟು ಹೊರಡದೆ ಹಗಲೂ ಇರುಳೂ ಓದುತ್ತಿರಬೇಕು. ಮೈಕೊಳಕಾಯಿತೆಂದು ಸ್ನಾನ ಮಾಡಕೂಡದು. ಬೇಕಾದರೆ ಮನೆಯಲ್ಲಿ ಮಲಗಿಕೊಳ್ಳಬಹುದು. ತಲೆಯ ಕೂದಲುಗಳನ್ನೆಲ್ಲ ಕೀಳಿಸಿಕೊಳ್ಳಬೇಕು ಹೀಗೆ ಎರಡು ತಿಂಗಳು ದಿವಸ ಒಂದೇವಿಧವಾಗಿ ನಡೆಸಬೇಕು" ಎಂದು ಹೇಳಿದನು. ಹಣದಾಸೆ ಯಿಂದ ವಸುಭೂತಿಯು ಇದಕ್ಕೆ ಒಪ್ಪಿದನು. ಮೊದಲು ಲೋಚು ಮಾಡಿಸಿಕೊಳ್ಳುವಾಗಲೇ ಬಹಳ ಸಂಕಟವನ್ನು ಅನುಭವಿಸಬೇಕಾ ಯಿತು. ಆದರೆ ಅದನ್ನು ಹೇಗೋ ಸೈರಿಸಿಕೊಂಡು ಆ ದಿನ ಉಪವಾಸವಿದ್ದು ಮರುದಿನ ಭಕ್ಷ್ಯಭೋಜ್ಯಗಳನ್ನು ಕೈಯಲ್ಲಿ ಹಾಕಿಸಿ ಕೊಂಡು ಊಟಮಾಡಿದನು. ರಾತ್ರಿ ಒಂದು ಹೊತ್ತಿಗೆ ಬಲವಾದ ಬಾಯಾರಿಕೆಯಾಯಿತು, ಸಂಕಟ ಹೆಚ್ಚಾಗಿ ಅಂದಿನ ರಾತ್ರಿಯನ್ನು ಕಳೆಯುವುದೇ ದುಸ್ತರವಾಯಿತು. ಮರುದಿನ ಊಟದ ಹೊತ್ತು ಬರಲು ಪುನಃ ಹಾಲು ತುಪ್ಪ ಭಕ್ಷ್ಯ ಭೋಜ್ಯಗಳನ್ನು ತಂದು ಬಡಿಸಿ ದನು. ಆದರೆ ಹಿಂದಿನ ರಾತ್ರಿ ಅನುಭವಿಸಿದ ಬಾಯಾರಿಕೆಯನ್ನು ನೆನಸಿ ಕೊಂಡು ಅವೊಂದನ್ನೂ ತೆಗೆದುಕೊಳ್ಳುವುದಕ್ಕೆ ಅವನು ಇಷ್ಟಪಡಲಿಲ್ಲ. ವೈಶ್ಯನು ಇದನ್ನು ಕಂಡು "ನಮ್ಮ ಋಷಿಗಳು ನಾವು ಹೇಳಿದಂತೆ ಮಾತನಾಡದೆ ಊಟಮಾಡುತ್ತಾರೆ; ಭೂದೇವರಾದ ನಿಮಗೆ ಇದೊಂದತಿ ಶಯವೇ ?" ಎಂದು ಮೂದಲಿಸಿದನು. ಬಹಳ ಕಷ್ಟದಿಂದ ಅದೆಲ್ಲ ವನ್ನೂ ಊಟಮಾಡಬೇಕಾಯಿತು. ಹೀಗೆ ಏಳೆಂಟುದಿನಗಳು ಏಳೆಂಟು

ವರ್ಷಗಳಂತೆ ಕಳೆದುವು. ಅಲ್ಲಿಂದ ಮುಂದಕ್ಕೆ ಈ ವ್ರತವನ್ನು ನಡೆಸಲಾರದೆ ವ್ಯಾಕುಲಿತ ಬಾಲಿಕೆ ತಲೆನೋವು ಸೋನೆ ಮುಂತಾದವುಗಳಿಂದ ಪೀಡಿತನಾಗಿ "ಕೆರೆಗೆ ಹೋಗಿ ಮಿಂದು ತಂದಿಕೊಂಡೊಮ್ಮೆಯಿರ್ಮೆ ನೀರಂ ಕುಡಿವು ಬಿಸ್ಮ್ರ ಬಿಡಿಸೋಳಲುದೆಂದುಗಳಿಗೆ ಸುಖವಾಡುವೆಂತು ಮಾಡುವುದು" ಎಂದು ವಿಶ್ವಾಮಿತ್ರ ಸೆಟ್ಟಿಯನ್ನು ಪ್ರಾರ್ಥಿಸಲು ಅವನು ನಕ್ಕು "ನೀವು ಬಂದೆರಡು ಸಣ್ಣ ಪರೀಕ್ಷೆಗಳಿಗೇ ಹಿಮ್ಮೆಟ್ಟಿದಿರಿ, ಹೀಗಿರಲು ಆಮರಣಾಂತವಾಗಿ ಹನ್ನೆರಡು ವಿಧವಾದ ತಪಸ್ಸು ಇಪ್ಪತ್ತೆರಡು ಮಹಾ ಪರೀಷಹ ಮುಂತಾದವುಗಳನ್ನು ನಡೆಸುವ ಮಹರ್ಷಿಗಳ ಧೈರ್ಯವನ್ನು ಎಷ್ಟೆಂದು ಹೇಳೋಣ" ಎಂದು ತನ್ನ ಋಷಿಗಳ ಮಹತ್ವವನ್ನು ತಿಳಿಸಿದನು. ಆಗ ವಸುಭೂತಿಯು ಮಹರ್ಷಿಯರ ತಪೋಮಾರ್ಗವನ್ನು ಅರಿಯದೆ ಇದ್ದರೂ ತನ್ನ ಚಾರಿತ್ರವೇ ಹಿರಿಯದೆಂದು ತೋರುತ್ತಿದ್ದಿತೆಂದು 'ಸಾದರೊಳ್ ಸುದಂಶಿ' ಎಂದೂ ಅವನು ಹಿಡಿದ ಧರ್ಮವೇ ಧರ್ಮವೆಂದೂ ನಿರ್ಣಯಿಸಿ ಆಗಿಂದ ದ [illegible] ಪದೇಶಮಾಡಿಸಿಕೊಂಡನು. "ಸಿದ್ದೋಕ್ಷಿಯು [illegible] ದಾಗಮಂ; ಆ ಪವ [illegible] ಗಸುವರ್ಣಮ ತತ್ಸಾ [illegible] ಸನ್ಯಕ್ತ್ವಂ"

ಮರುದಿನ ಎಲ್ಲರೂ ಅಲ್ಲಿಂದ ಹೊರಟು ಸಂಧ್ಯಾ ವೇಳೆಗೆ ಬಂದೊಂದು ಆಸಪಿಯಲ್ಲಿ ಬಿಡಾರ ಮಾಡಲು ಅಲ್ಲಿ ವನಚರರೊಡನೆ ಜಗಳ ನಡೆದು, ಆ ಜಗಳದಲ್ಲಿ ವಸುಭೂತಿಗೆ ಬಂದು ಬಾಣವು ತಗಲಲು, ಆತನು [illegible] ಸನ್ಯಾಸವನ್ನು ಪಡೆದು ಸತ್ತು ಸೌಧರ್ಮಕಲ್ಪದಲ್ಲಿ ಮಣಿ [illegible] ದೇವನಾಗಿ ಹುಟ್ಟಿದನು. ಅಲ್ಲಿ ಭವಪ್ರತ್ಯಯಾವಧಿಯಿಂದ ಬರಲು, ವಿಶ್ವಾಮಿತ್ರ ಸೆಟ್ಟಿಯಿಂದ ಪೂರ್ವಜನ್ಮದಲ್ಲಿ ತನಗೆ ಆದ ಉಪಕಾರವನ್ನು ನೆನೆದು ಬಂದು ಅವನಿಗೆ ನಮಸ್ಕಾರ ಮಾಡಿ ಹೋದ. [illegible] ಸುಖವನ್ನು ಬಂದು ಸಾಗರೋಪಮ ಕಾಲ ಅನುಭವಿಸಿ [illegible] ಸೇನ ರಾಜನ ಹೊಟ್ಟೆಯಲ್ಲಿ ಹುಟ್ಟಿದನು

ದ್ವಿತೀಯಾಶ್ವಾಸ

ನಿಶ್ಶಂಕೆಯ ಕಥೆ.

ಕಾಶ್ಮೀರ ದೇಶದ ವಿಜಯಪುರವೆಂಬ ಪಟ್ಟಣದಲ್ಲಿ ಅರಿಮಥನನೆಂಬ ರಾಜನು ಸೌಂದರಿಯೆಂಬ ಪಟ್ಟದರಸಿಯೊಡನೆ ಆಳುತ್ತಿದ್ದನು ಅವನಿಗೆ ಲಲಿತಾಂಗನೆಂಬ ಮಗನು ಹುಟ್ಟಿದನು; ತಾಯಿತಂದೆಗಳು ಅವನಲ್ಲಿ ಅಧಿಕವಾದ ಮೋಹವನ್ನಿಟ್ಟು ಅವನು ಏನು ಮಾಡಿದರೂ ಅವನನ್ನು ಬಯ್ಯದೆ ಹೊಡೆಯದೆ ಮುದ್ದಿಸುತ್ತಿದ್ದರು. ಅವನು ತನ್ನ ಗೆಳೆಯರೊಡಗೂಡಿ ಪುರಜನರನ್ನೂ ಪರಿಜನರನ್ನೂ ಹಿಡಿದು ಹೊಡೆದರೆ ಅದು ಅವನ ತಾಯಿತಂದೆಗಳಿಗೆ ವಿನೋದವಾಗಿತ್ತು; ಹೀಗೆ ಅವನು "ಅಂಕುಶವಿಲ್ಲದ ಮದದಾನೆಯಂತೆ" ಬೆಳೆದು, ಪ್ರಾಪ್ತಯೌವನನೂ ಲೋಕಕಂಟಕನೂ ಆಗಲು ಜನರೆಲ್ಲರೂ ಬಂದು ಅರಮನೆಯ ಬಾಗಿಲಲ್ಲಿ ಗೋಳಿಟ್ಟರು. ಅರಿಮಥನ ಮಹಾರಾಜನು ಅವರ ದೂರನ್ನು ವಿಚಾರಿಸಿ ಕೇಳಿ ತಾನು ಮೊದಲಿನಿಂದಲೂ ಮಗನನ್ನು ಮುದ್ದುಮಾಡಿ ಅಶಿಕ್ಷೆಯಲ್ಲಿ ಬೆಳಸಿದುದೇ ಇದಕ್ಕೆ ಕಾರಣವೆಂದು ಎಂದುಕೊಂಡು ಲಲಿತಾಂಗನನ್ನು ಕರೆಸಿ ಅವನಿಗೆ ರಾಜನೀತಿಯನ್ನೂ ಬುದ್ಧಿವಾದವನ್ನೂ ಹೇಳಿದನು. ಆದರೆ ಇದರಿಂದ ಫಲವೇನೂ ಆಗದೆ ಲಲಿತಾಂಗನು ಎಂದಿನಂತೆ ಜನರನ್ನು ಕಾಡುತ್ತಲೇ ಬಂದನು. ಇದನ್ನು ಕಂಡು ಮಹಾರಾಜನು ಕೋಪಗೊಂಡು ತನ್ನ ದೇಶವನ್ನು ಬಿಟ್ಟು ಹೊರಟು ಹೋಗಬೇಕೆಂದು ಮಗನಿಗೆ ಅಪ್ಪಣೆಮಾಡಿದನು. ಅದರಂತೆ ಅವನು ವಿಜಯಪುರವನ್ನು ಬಿಟ್ಟು ಹೊರಟು ನೇಪಾಳದೇಶವನ್ನು ಸೇರಿ ಅಲ್ಲಿ ಕಳ್ಳರಿಗೆ ಅಧಿಪತಿಯಾಗಿ ಅವರಿಂದ ಅದೃಶ್ಯಘುಟಿಕವನ್ನು ಪಡೆದನು ಅದರ ಸಹಾಯದಿಂದ ಅನಂಗಸೌಂದರಿಯೆಂಬ ಆ ಊರಿನ ವೇಶ್ಯಾಸ್ತ್ರೀಯೊಬ್ಬಳಿಗೆ ಬೇಕಾದ ವಸ್ತುಗಳನ್ನು ತಂದು ಕೊಡುತ್ತ ಇದ್ದನು. ದೊಡ್ಡ ದೊಡ್ಡ ರಾಜರೂ ಸಾಹುಕಾರರೂ ಕೂಡ ತಂದೀಯಲಾರದ ವಸ್ತುಗಳನ್ನೆಲ್ಲಾ ಅವನು ತಂದು ಕೊಡುತ್ತಿದ್ದುದನ್ನು ನೋಡಿ ಆಶ್ಚರ್ಯಪಟ್ಟು ಆ ವೇಶ್ಯೆಯು ಒಂದು ದಿನ ಇದರ ಗುಟ್ಟನ್ನು ಅವನಿಂದ ಹೊರಡಿಸಿದಳು.

ಮರುದಿವಸ ರಾಜನೂ ರಾಣಿಯೂ ಜಲಕ್ರೀಡೆಗಾಗಿ ಆ ಮಾರ್ಗದಿಂದ ಹೋಗುತ್ತಿರಲು ಮಹಾರಾಣಿಯು ಧರಿಸಿಕೊಂಡಿದ್ದ ಜ್ಯೋತಿಪ್ರಭವೆಂಬುದೊಂದು ಪದಕವನ್ನು ಆ ವೇಶ್ಯೆಯು ಕಂಡು ಅದನ್ನು ತನಗೆ ತಂದುಕೊಂಡಬೇಕೆಂದು ಲಲಿತಾಂಗನನ್ನು ನಿರ್ಬಂಧ ಪಡಿಸಿದಳು. ಅವಳ ಇಷ್ಟದಂತೆ ಅವನು ಅದನ್ನು ಒಂದು ರಾತ್ರಿ ಅರಮನೆಯಿಂದ ಕದ್ದು ತರುತ್ತಿರಲು, ಅವನು ಅದೃಶ್ಯನಾಗಿದ್ದರೂ ಆರತ್ನವು ಸೂರ್ಯನಂತೆ ಪ್ರಕಾಶಿಸುತ್ತಿದ್ದಿತು. ಇದನ್ನು ನೋಡಿದ ದಂಡಕನೆಂಬ ತಳವಾರನು ಅಟ್ಟಿಸಿಕೊಂಡು ಬರಲು ಲಲಿತಾಂಗನು ದೆಸೆಗೆಟ್ಟು ಓಡುತ್ತ ಶ್ಮಶಾನಕ್ಕೆ ಬಂದನು. ಅಲ್ಲಿ ವರಸೇನನೆಂಬವನೊಬ್ಬನು ಒಂದು ಮರದ ಕೆಳಗೆ ಪರಶು ಕೊಂತ ಮುಂತಾದ ಮುವ್ವತ್ತೆರಡು ಆಯುಧಗಳನ್ನು ನೆಟ್ಟು ಪೂಜಿಸಿ ಅವರ ಮೇಲೆ ತೂಗುಹಾಕಿದ ಒಂದು ನೆಲುವಿನ ಮೇಲಕ್ಕೆ ಹತ್ತಿ ಇಳಿದು ಮಾಡುತ್ತಿದ್ದನು. ಇವನ್ನು ನೋಡಿ ಅಂಜನಚೋರನು, ಅದರ ವಿಚಾರವನ್ನು ಪ್ರಶ್ನೆಮಾಡಲು ಆತನು ಜಿನದತ್ತಸೆಟ್ಟಿಯು ಹೇಳಿಕೆಯಂತೆ ಒಂದು ವಿದ್ಯೆಯನ್ನು ಸಾಧಿಸಲೋಸುಗ ತಾನು ಹೀಗೆ ಮಾಡುತ್ತಿದ್ದನೆಂದೂ ಆದರೆ ಆ ಆಯುಧಗಳ ಮೇಲೆ ಬೀಳುವುದಕ್ಕೆ ಮನಸ್ಸಿರಲಿಲ್ಲವೆಂದೂ ಗೊತ್ತಾಯಿತು. ಲಲಿತಾಂಗನು ಇವನ್ನು ತಿಳಿದು, ತಳಾರರ ಕೈಯಲ್ಲಿ ಸಾಯುವುದಕ್ಕಿಂತ ಹೀಗೆ ಸಾಯುವುದೇ ಮೇಲೆಂದು ನಿರ್ಧರಿಸಿ ಅವನಿಂದ ತಕ್ಕ ಮಂತ್ರವನ್ನು ಉಪದೇಶಮಾಡಿಸಿಕೊಂಡು ನೆಲುವಿನ ಮೇಲಿನಿಂದ ಆಯುಧಗಳ ಮೇಲೆ ಬಿದ್ದನು. ಆದರೆ ಆಯುಧಗಳ ಹತ್ತಿರ ಬಂದಕೂಡಲೆ ಮೇಲಕ್ಕೆ ಹಾರಿದನು. ಆ ವಿದ್ಯಾದೇವತೆಯು ಮುಂದೆ ಬಂದು ನಿಂತು 'ಏನಪ್ಪಣೆ ?' ಎಂದು ಕೇಳಿತು. ಅದಕ್ಕೆ ಅವನು ತನ್ನನ್ನು ಜಿನದತ್ತನಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಅಪೇಕ್ಷಿಸಿದನು. ಅದರಂತೆ ಅದು ಅವನನ್ನು ಕರೆದುಕೊಂಡು ಹೋಗಿ ಬಿಡಲು ಅವನು ಜಿನದತ್ತನನ್ನು ಕುರಿತು ಈ ವಿದ್ಯೆ ಬಂದ ಪರಿಯನ್ನು ಕೇಳಿದನು. ಅದನ್ನು ಜಿನದತ್ತನು ಈ ರೀತಿಯಾಗಿ ವಿವರಿಸಿದನು :—

"ಜಿನಪದವೆಂಬ ದೇಶದಲ್ಲಿ ಭೂವಿತಿಲಕವೆಂಬ ನಗರವಿದೆ. ಅದಕ್ಕೆ ನರಪಾಲನೆಂಬ ದೊರೆ ಅವನ ರಾಜಶ್ರೇಷ್ಠಿ ಸೌಂದರನೆಂಬವನಿಗೂ ಆ ಶ್ರೇಷ್ಠಿಯ ಹೆಂಡತಿ ಸುನಂದೆ ಎಂಬವಳಿಗೂ ಶ್ರೀವರ್ಮ, ಜಯವರ್ಮ, ಜಿನಸೇನ, ಜಿನದತ್ತ, ಜಿನದಾಸ, ಧನ್ವಂತರಿ ಎಂದು ಮುಂತಾಗಿ ಎಂಟುಜನ ಮಕ್ಕಳಾದರು. ಆ ರಾಜನ ಪುರೋಹಿತನಾದ ಸೋಮಶರ್ಮನಿಗೂ ಅವನ ಹೆಂಡತಿ ಅಗ್ನಿಲೆಗೂ ವಿಶ್ವಾನುಲೋಮನೆಂಬ ಮಗನಾದನು ಈ ಧನ್ವಂತರಿಯೂ ವಿಶ್ವಾನುಲೋಮನೂ ದುರ್ವ್ಯಾಪಾರಕ್ಕೆ ಬಿದ್ದು ಅರಮನೆಯಲ್ಲಿ ಕಳವುಮಾಡಿ ದೇಶಭ್ರಷ್ಟರಾಗಿ ಹೊರಡಲ್ಪಟ್ಟು ತಾಯಿ ಹೆಂಡತಿಯರೊಡನೆ ಪರದೇಶಕ್ಕೆ ಹೋಗಿ ಅಲ್ಲಿ ಕಳವಿನಿಂದ ಜೀವಿಸುತ್ತಿದ್ದರು. ಧನ್ವಂತರಿಯು ವಿಶ್ವಾನುಲೋಮನ ಇಷ್ಟದಂತೆ ಬಸದಿಗೆ ಹೋಗುವುದನ್ನು ಬಿಟ್ಟು ಬಿಟ್ಟನು ಆದರೆ ಒಂದುದಿನ ಅವರಿಬ್ಬರೂ ಕೆರೆಗೆ ಹೋಗುತ್ತಿರುವಾಗ ಒಂದು ಮದವಾದಾನೆಯು ಆ ದಾರಿಯಲ್ಲಿ ಬರುವುದನ್ನು ನೋಡಿ ಅವರು ಭಯಗೊಂಡು ಹತ್ತಿರದಲ್ಲಿದ್ದ "ಸಹಸ್ರ ಕೂಟ ಮಂಡಿತ" ವೆಂಬ ಒಂದು ಜಿನಾಲಯದಲ್ಲಿ ಹೋಗಿ ಸೇರಿಕೊಂಡರು ಅಷ್ಟರಲ್ಲಿಯೇ ಮಳೆ ಬಂದಿತು, ಕತ್ತಲೆಯಾಯಿತು, ಊರಬಾಗಿಲನ್ನು ಹಾಕಿಬಿಟ್ಟರು ಆದುದರಿಂದ ಅವರಿಬ್ಬರೂ ಅಲ್ಲಿಯೇ ನಿಲ್ಲಬೇಕಾಯಿತು ಅಲ್ಲಿ ವರಧರ್ಮರೆಂಬ ಮುನಿಗಳು ಧರ್ಮೋಪದೇಶ ಮಾಡುತ್ತಿದ್ದರು. ಇದು ಕಿವಿಗೆ ಬೀಳಬಾರದೆಂದು ಇಬ್ಬರೂ ಕಿವಿಗೆ ಬಟ್ಟೆಗಿಡಿದುಕೊಂಡು ಮಲಗಿದ್ದರು. ವಿಶ್ವಾನುಲೋಮನಿಗೆ ನಿದ್ದೆ ಬಂದಮೇಲೆ ಧನ್ವಂತರಿಯು ತನ್ನ ಕಿವಿಗೆ ಗಿಡಿದುಕೊಂಡದ್ದನ್ನು ತೆಗೆದುಹಾಕಿ ಮುನಿಗಳ ಉಪದೇಶವನ್ನು ಕೇಳಿ ಶಮೋಪಶಮವಾಗಲು ಅವರಹತ್ತಿರ ಹೋಗಿ "ನನಗೊಂದು ವ್ರತವನ್ನು ಕೊಡಬೇಕು" ಎಂದು ಕೇಳಿದನು. ಅದಕ್ಕೆ ಅವರು "ನಿತ್ಯವೂ ತಜಿಂಟು ತಲೆಯನ್ನು ನೋಡದೆ ಊಟ ಮಾಡಬೇಡ" ಎಂದರು ಇವರಂತೆ ಅವನು ನಡೆಸುತ್ತ ಒಂದುದಿವಸ ಊಟದ ಸಮಯದಲ್ಲಿ ಈ ವ್ರತವನ್ನು ಜ್ಞಾಪಿಸಿಕೊಂಡು ತನ್ನ ನೆರೆಯಲ್ಲಿದ್ದ ಕುಂಬಾರನು ತಜಿಂಟು ತಲೆಯವನಾಗಿದ್ದುದ್ದರಿಂದ ಅವನನ್ನು ನೋಡುವುದಕ್ಕೆಂದು ಹೋದನು. ಅವನು

ಮನೆಯಲ್ಲಿರಲಿಲ್ಲ; ಆದುದರಿಂದ ಅವನು ಹಣ್ಣು ತರುವುದಕ್ಕೆಂದು ಹೋಗಿದ್ದ ಸ್ಥಳಕ್ಕೆ ತಾನೇಹೋಗಿ ನೋಡಿ 'ನೋಡಿದೆ' ಎಂದು ಕೂಗಿಕೊಂಡನು. ಆದರೆ ಅಷ್ಟುಹೊತ್ತಿಗೆ ಸರಿಯಾಗಿ ಆ ಕುಂಬಾರನಿಗೆ ಒಂದು ನಿಧಿಯು ಕಣ್ಣಿಗೆ ಬಿದ್ದಿತ್ತು. ಇದನ್ನು ಧನ್ವಂತರಿಯು ಕಂಡು ಹಾಗೆ ಕೂಗಿರಬಹುದೆಂದು ಅವನು ತಿಳಿದುಕೊಂಡು ಸಾಯಂಕಾಲ ಅವನ ಮನೆಗೆ ಬಂದು ಆ ನಿಧಿಯನ್ನು ಅವನ ಮುಂದೆ ಇಟ್ಟನು. ಇದರಲ್ಲಿ ಕುಂಬಾರನಿಗೆ ಬೇಕಾದಷ್ಟನ್ನು ಕೊಟ್ಟು ಕಳುಹಿಸಿ ಧನ್ವಂತರಿಯು ಬೆಳಗಾಗುತ್ತಲೆ ಬಸದಿಗೆ ಬಂದು ಭಟ್ಟಾರಕರಿಗೆ ನಮಸ್ಕಾರಮಾಡಿ ತನಗೆ ಇನ್ನೊಂದು ವ್ರತವನ್ನು ಕೊಡಬೇಕೆಂದು ಕೇಳಿದನು ಅದಕ್ಕೆ ಅವರು "ಹೆಸರು ಗೊತ್ತಿಲ್ಲದ ಯಾವಮರದ ಹಣ್ಣುಗಳನ್ನೂ ತಿನ್ನಬೇಡ" ಎಂದರು. ಕೆಲವು ದಿನಗಳಮೇಲೆ ಇವರಿಬ್ಬರೂ ಪರದೇಶಕ್ಕೆ ಹೋಗಿಬರುತ್ತ ದಾರಿಯಲ್ಲಿ ಕಾಡಿನೊಳಗೆ ಹಸಿವಾಗಲು ಭೃತ್ಯರನ್ನು ಹಣ್ಣು ಹಂಪಲು ತರುವುದಕ್ಕಾಗಿ ಕಳುಹಿಸಿಕೊಟ್ಟರು. ಅವರು ಹೋಗಿ "ಕಾಂಚೀರ" ಮರದ ಹಣ್ಣುಗಳನ್ನು ತಂದರು. ಇದರ ಹೆಸರು ಗೊತ್ತಿಲ್ಲದಿದ್ದುದರಿಂದ ಧನ್ವಂತರಿಯು ಅವುಗಳನ್ನು ತಿನ್ನಲಿಲ್ಲ, ಅವನು ತಿನ್ನದೆ ಇದ್ದುದರಿಂದ ವಿಶ್ವಾನುಲೋಮನೂ ತಿನ್ನಲಿಲ್ಲ. ಭೃತ್ಯರುಮಾತ್ರ ಹಸಿವಿನ ಆತುರಕ್ಕೆ ತಿಂದು ಸತ್ತುಹೋದರು. ಆದುದರಿಂದ ಅವರೆಲ್ಲರ ಐಶ್ವರ್ಯವನ್ನೂ ಇವರಿಬ್ಬರೇ ತೆಗೆದುಕೊಂಡು ಬಂದರು. ಧನ್ವಂತರಿಯು ಇದನ್ನು ಭಟ್ಟಾರಕರಿಗೆ ತಿಳಿಸಿ ಮತ್ತೊಂದು ವ್ರತವನ್ನು ಕೊಡಬೇಕೆಂದು ಕೇಳಿದನು. ಅದಕ್ಕೆ ಅವರು "ಹಿಟ್ಟಿನ ಎತ್ತನ್ನೂ ಬಂಡಿಯನ್ನೂ ತಿನ್ನಬೇಡ" ಎಂದರು. ಒಂದುದಿನ ಹಿಂದಿನಂತೆ ಅವನೂ ವಿಶ್ವಾನುಲೋಮನೂ ಕಾಡಿನಲ್ಲಿ ಸಿಕ್ಕಿ ಹಸಿದು, ಯಾರೋ ಪೂಜಿಸಿಬಿಟ್ಟು ಹೋಗಿದ್ದ ಒಂದು ಹಿಟ್ಟಿನ ಎತ್ತನ್ನೂ ಗಾಡಿಯನ್ನೂ ನೋಡಿದರು. ಇದನ್ನು ಅವರ ಭೃತ್ಯರು ತಿಂದರು. ಆದರೆ ಹಿಂದಿನ ದಿವಸ ಅದರಲ್ಲಿ ಒಂದು ಹಾವು ವಿಷವನ್ನು ಕಾರಿದ್ದುದರಿಂದ ಅವರೆಲ್ಲರೂ ಸತ್ತುಹೋದರು. ಧನ್ವಂತರಿಯು ತಾನು ಬದುಕಿದುದಕ್ಕೆ ಸಂತೋಷಬಟ್ಟು ಪುನಃ ಬಸದಿಗೆ ಬಂದು ಭಟ್ಟಾರಕರಿಗೆ ಎಲ್ಲವನ್ನೂ ತಿಳಿಸಿ

ಮತ್ತೊಂದು ವ್ರತವನ್ನು ಕೇಳಿದನು. ಅವರು " ಪರ್ವಗಳು ಅಷ್ಟಮಿ ಚತುರ್ದಶಿ ಈ ದಿನಗಳಲ್ಲಿ ಮದ್ಯಮಾಂಸಗಳನ್ನು ಬಿಟ್ಟುಬಿಡು " ಎಂದರು. ಇದಾದ ಕೆಲವುದಿನದಮೇಲೆ ಪರದೇಶವಲ್ಲಿ ಕದ್ದು ಹಿಂತಿರುಗಿ ಬರುತ್ತಾ ದಾರಿಯಲ್ಲಿ ಇಳಿದುಕೊಂಡು, ಮಾಂಸದಮೇಲೆ ಆಸೆಯಾಗಲು ಇವರಿಬ್ಬರೂ ತಮ್ಮ ತಮ್ಮ ಜನರನ್ನು ಹತ್ತಿರವಲ್ಲಿದ್ದ ಒಂದು ಹಳ್ಳಿಯಿಂದ ಮಾಂಸವನ್ನು ತರುವಂತೆ ಹೇಳಿಕಳುಹಿಸಿದರು. ಅವರು ದುರಾಲೋಚನೆಮಾಡಿ ಎದುರು ಕಕ್ಷಿಯವರನ್ನು ಕೊಂದು ಅವರ ಐಶ್ವರ್ಯವನ್ನು ದೋಚಿಕೊಳ್ಳುವುದಕ್ಕೋಸ್ಕರ ಎರಡು ಗುಂಪಿನವರೂ ಬೇರೆಬೇರೆ ತಾವು ತಂದ ಮಾಂಸಕ್ಕೆ ವಿಷವನ್ನು ಬೆರಸಿ ತಂದರು. ಆದರೆ ಅಂದು ಚತುರ್ದಶಿಯಾದುದರಿಂದ ಧನ್ವಂತರಿಯು ಅದನ್ನು ತಿನ್ನಲಿಲ್ಲ; ಅವನು ತಿನ್ನದಿದ್ದುದರಿಂದ ವಿಶ್ವಾನುಲೋಮನೂ ತಿನ್ನಲಿಲ್ಲ. ಪರಿಜನರು ಮಾತ್ರ ಒಂದು ಗುಂಪಿನವರು ತಂದದ್ದನ್ನು ಇನ್ನೊಂದು ಗುಂಪಿನವರು ತಿಂದು, ಎಲ್ಲಾ ಮೃತರಾದರು. ಇದನ್ನು ನೋಡಿ ತನ್ನ ವ್ರತದ ಮಹಿಮೆಯನ್ನು ತಿಳಿದು ಧನ್ವಂತರಿಯು ಬಂದು ಭಟ್ಟಾರಕರನ್ನು ವಂದಿಸಿ ಮತ್ತೊಂದು ವ್ರತವನ್ನು ಕೇಳಿಕೊಂಡನು. ಅದಕ್ಕೆ ಅವರು "ನೀನು ಯಾವಪ್ರಾಣಿಯ ಮೇಲಾದರೂ ಕೋಪಿಸಿಕೊಂಡಾಗ ಹಿಂದಕ್ಕೆ ಏಳು ಹೆಜ್ಜೆಹೋಗಿ ಆಮೇಲೆ ನಿನ್ನಮನಸ್ಸಿಗೆ ಬಂದಂತೆ ಮಾಡು" ಎಂದರು. ಇದಾದನಂತರ ಕಳಿಂಗದೇಶಕ್ಕೆ ಕಳ್ಳತನಕ್ಕೆ ಹೋಗಿ ಆರುತಿಂಗಳು ಅಲ್ಲಿ ಕದಿಯುತ್ತಿದ್ದು ತಟ್ಟನೆ ಮನೆಯಮೇಲೆ ಮನಸ್ಸುತಿರುಗಿ ಬಂದುರಾತ್ರಿ ಊರಿಗೆ ಬಂದು 'ಕವಾಟೋದ್ಘಾಟನವಿದ್ಯೆ'ಯಿಂದ ಬಾಗಿಲನ್ನು ತೆಗೆದು ಒಳಗೆ ನುಗ್ಗಿ ತನ್ನ ತಾಯಿಯೂ ಹೆಂಡತಿಯೂ ಒಟ್ಟಿಗೆ ಮಲಗಿದ್ದುದನ್ನು ನೋಡಿ ಯಾರೋ ಪರಪುರುಷನೊಬ್ಬನು ಅಲ್ಲಿಗೆ ಬಂದಿರಬೇಕೆಂದು ನೆನೆಸಿದನು. ಕೂಡಲೆ ಕೋಪಬಂದಿತು. ಆದರೆ ವ್ರತವನ್ನು ಅನುಸರಿಸಿ ಹಿಂದಕ್ಕೆ ಏಳಡಿಹೋದನು, ಇಷ್ಟುಹೊತ್ತಿಗೆ ಅವನ ಹೆಂಡತಿಯು 'ಅತ್ತೆ! ಸೆಕೆಯಾಗುತ್ತಿದೆ, ಸ್ವಲ್ಪ ಅತ್ತಲಾಗಿ ಮಲಗಿಕೊಳ್ಳಿ' ಎಂದಳು. ಅದನ್ನು ಕಂಡು ತಾನುಮಾಡಬೇಕೆಂದಿದ್ದ ಕೊಲೆಯು ನಿವಾರಣೆಯಾದುದಕ್ಕೆ ಸಂತೋಷಪಟ್ಟು, ಐದುವ್ರತ

ಗಳೂ ಸಫಲವಾದುದರಿಂದ ವಿಶ್ವಾಸವನ್ನೂ ವೈರಾಗ್ಯವನ್ನೂ ಪಡೆದು ದೀಕ್ಷೆಯನ್ನು ಕೈಕೊಂಡು ತಪಸ್ಸಿಗೆ ಹೊರಟು ಹೋದನು. ಮುಂದಿನ ಜನ್ಮದಲ್ಲಿ ಇವನು ಅಚ್ಯುತಕಲ್ಪದ ಅಹಮಿಂದ್ರದೇವನಾಗಿಯೂ ವಿಶ್ವಾನುಲೋಮನು ವಾಹನದೇವನಾಗಿಯೂ ಹುಟ್ಟಿದರು. ಅಲ್ಲಿಯೂ ಇವರಿಗೆ ತಮ್ಮ ತಮ್ಮ ಧರ್ಮವೇ ಹೆಚ್ಚೆಂಬ ಹುರುಡು ಬಂದಿತು. ಆಗ ವಿಶ್ವಾನುಲೋಮನು ತೋರಿಸಿದ ತಮ್ಮ ಧರ್ಮದ ಒಬ್ಬ ಋಷಿಯು ಮಾಡುತ್ತಿದ್ದ ತಪಸ್ಸನ್ನು ಅಚ್ಯುತೇಂದ್ರನು (ಧನ್ವಂತರಿಯು) ಭಂಗ ಪಡಿಸಿ ಅವನನ್ನು ಸಂಸಾರದಲ್ಲಿ ಪ್ರವೇಶಮಾಡಿಸಿದನು. ಆದರೆ ಅದ ರಂತೆ ಧನ್ವಂತರಿಯು ತೋರಿಸಿದ ಒಬ್ಬ ಗೃಹಸ್ಥನ ತಪಸ್ಸನ್ನು ಮಾತ್ರ ವಿಶ್ವಾನುಲೋಮನು ಮಹಾಪ್ರಯತ್ನಮಾಡಿದರೂ ಭಂಗಪಡಿಸುವುದ ಕ್ಕಾಗಲಿಲ್ಲ. ಆಗ ವಾಹನದೇವನು (ವಿಶ್ವಾನುಲೋಮನು) ಮಿಥ್ಯಾತ್ವ ವನ್ನು ಬಿಟ್ಟು ಸದ್ದೃಷ್ಟಿಯಾದನು.

ಈ ಅಚ್ಯುತೇಂದ್ರನು ಒಂದುದಿನ ಬಂದು ನನಗೆ ನಮಸ್ಕರಿಸಿ 'ಪರ್ವದಿನಗಳಲ್ಲಿ ಅಕೃತ್ರಿಮ ಚೈತ್ಯಾಲಯಗಳಿಗೆ ಹೋಗಿಬರುವು ದಕ್ಕೆ ಅನುಕೂಲವಾಗುತ್ತದೆ' ಎಂದು ಹೇಳಿ ಈ ವಿದ್ಯೆಯನ್ನು ಕೊಟ್ಟು ಹೋದನು. ನಾನು ಅದನ್ನು ನಮ್ಮ ದೇಶದ ಮಾಣಿವರ ಸೇನನಿಗೆ ಕೊಟ್ಟೆನು"

ಈ ಕಥೆಯನ್ನು ಕೇಳಿ ಲಲಿತಾಂಗನು ಬೆರಗಾಗಿ, ಅಂತಹ ದೇವನೂ ಈ ಮನುಷ್ಯ ಮಾತ್ರನಿಗೆ ನಮಸ್ಕಾರಮಾಡಿದನೆಂದಮೇಲೆ
" . . . . . .ಜಿನಾಗಮಮುಮಂ ನಿಶ್ಶಂಕೆಯಿಂ ನಂಬುವಾತನಸಂಖ್ಯೋ ನ್ನತಿಯುಂ ಮಹಾಮಹಿಮೆಯುಂ ಪೇಳ್ಬಣ್ಣಿಸಲ್ ಬರ್ಕುಮೇ " ಎಂದು ದರ್ಶನದೊಳ್ ನಿಶ್ಶಂಕನಾಗಿ" ಸಂಸಾರ ಭೋಗಕ್ಕೆ ಹೇಸಿ ದೀಕ್ಷೆ ಯನ್ನು ತೆಗೆದುಕೊಂಡು ತಪಸ್ಸುಮಾಡಿ ಕರ್ಮಕ್ಷಯವಾಗಲು "ತ್ರಿಲೋಕ ಶಿಖರಿ ಶೇಖರ" ನಾದನು.

ತೃತೀಯಾಶ್ವಾಸ.

ನಿಷ್ಕಾಂಕ್ಷೆಯ ಕಥೆ

ಅಂಗವಿಷಯದ ಚಂಪಾಪುರದಲ್ಲಿ ಪ್ರಿಯದತ್ತನೆಂಬ ವರ್ತಕನು ಇದ್ದನು; ಅವನಿಗೆ ಅಂಗವತಿಯೆಂಬ ಹೆಂಡತಿಯೂ ಅನಂತಮತಿಯೆಂಬ ಮಗಳೂ ಇದ್ದರು. ಒಂದಾದಿನ ಕೆಲವು ಹುಡುಗರು ಸೇರಿಕೊಂಡು ಅನಂತಮತಿಯ ಜೊತೆಯಲ್ಲಿ ಒಂದು ಬೊಂಬೆಯನ್ನು ಇಟ್ಟು ಅದು ಅವಳ ಗಂಡನೆಂದು ಹೇಳುತ್ತ ಮದುವೆಯ ಆಟವನ್ನು ಆಡುತ್ತಿದ್ದರು. ಪ್ರಿಯದತ್ತನು ಬಸದಿಗೆ ಹೋಗುತ್ತ ದಾರಿಯಲ್ಲಿ ಇದನ್ನು ನೋಡಿ 'ಯಾವ ಉತ್ಸವವೂ ಇಲ್ಲದೆ ಹೀಗೆ ನೀನು ಮದುವೆಯಾಗುವುದು ಉಚಿತವಲ್ಲವೆಂದು ಹೇಳಿ ಕರೆದುಕೊಂಡುಹೋಗಿ ಬಸದಿಯಲ್ಲಿ ಭಟ್ಟಾರಕರನ್ನು ಕುರಿತು 'ಈ ಹುಡುಗಿಗೆ ಬ್ರಹ್ಮಚರ್ಯವನ್ನು ಕೊಡಿ' ಎಂದು ಹೇಳಿದನು. ಅವರು ಹಾಸ್ಯಕ್ಕೆ 'ಇಂದಿನಿಂದ ನಿನಗೆ ಬ್ರಹ್ಮಚರ್ಯವ್ರತವನ್ನು ಕೊಟ್ಟಿದ್ದೇವೆ' ಎಂದು ಹೇಳಿಬಿಟ್ಟರು. ಆದರೆ ಅವಳು ಮಾತ್ರ ಇದನ್ನು ಪರಮಾರ್ಥವಾಗಿ ತಿಳಿದುಕೊಂಡು ಐದನೆಯ ವರ್ಷದಲ್ಲಿ ಅನಪೇಕ್ಷಿತವಾಗಿ ಈ ವ್ರತವು ಬಂದುದಕ್ಕಾಗಿ ಸಂತೋಷಪಟ್ಟುಕೊಂಡಿದ್ದಳು. ಅವಳಿಗೆ 'ಬ್ರಹ್ಮಚಾರಿ' ಎಂಬ ಅಡ್ಡಹೆಸರು ರೂಢಿಗೆ ಬಂದಿತು. ಹೀಗಿರಲು ಹನ್ನೆರಡನೆಯ ವರ್ಷದಲ್ಲಿ ಒಂದಾದಿನ ಅವಳು ಉದ್ಯಾನದಲ್ಲಿ ಉಯ್ಯಾಲೆಯಾಡುತ್ತಿದ್ದಾಗ ಕುಂಡಲಮಂಡಿತನೆಂಬ ವಿದ್ಯಾಧರನು ಆಕಾಶಮಾರ್ಗದಿಂದ ಬಂದು ಅವಳನ್ನು ಎತ್ತಿಕೊಂಡುಹೋದನು. ಇದನ್ನು ಅವನ ಹೆಂಡತಿಯು ಅವಲೋಕಿನೀ ವಿದ್ಯೆಯಿಂದ ಅರಿದು ಕೋಪದಿಂದ ಅವನನ್ನು ಅಟ್ಟಿಸಿಕೊಂಡು ಬರಲು ಅವನು ಅನಂತಮತಿಯನ್ನು ಪರ್ಣಲಘುವಿದ್ಯೆಯಿಂದ ಮೆಲ್ಲಗೆ ಕಾಡಿನಲ್ಲಿ ಇಳಿಸಿದನು. ಅವಳು ಕರ್ಮವಶದಿಂದ ಬಂದ ತನ್ನ ಸ್ಥಿತಿಯನ್ನು ನೋಡಿಕೊಂಡು ಜೈನಸ್ತವನವನ್ನು ಮಾಡುತ್ತಿರಲು ಆ ಕಾಡಿನ ಬೇಡಪಡೆಯ ಯಜಮಾನನು ಬಂದು ಅವಳನ್ನು ಮೋಹಿಸಿ ಸಂಭೋಗವನ್ನಪೇಕ್ಷಿಸಿದನು. ಆದರೆ ಅವಳು ತಾನು ಹಿಡಿದ ಬ್ರಹ್ಮಚರ್ಯವ್ರತವನ್ನು ಬಿಡುವುದಿಲ್ಲವೆಂದು ನಿರ್ಧರಿಸಿದಳು. ಇದರಿಂದ ಆಸನಕಂಪವಾದ ಯಕ್ಷಿಯು ಬಂದು

ಕಿರಾತನ ವೇಷದಿಂದ ಅವಳನ್ನು ಪರೀಕ್ಷಿಸಿ, ಅವಳು ಸ್ವಲ್ಪವೂ ಸಗ್ಗದಿರಲು, ತನ್ನ ರೂಪವನ್ನು ತೋರಿಸಿ, ಪುನಃ ಅವೇ(ಅನಂತಮತಿಯು) ರೂಪಿನಿಂದ ಕಿರಾತರಾಜನಲ್ಲಿಗೆ ಹೋಗಿ "ನಾನು ದೇವತೆ ; ನನ್ನನ್ನು ಕಳುಹಿಸದೆ ಇದ್ದರೆ ನಿನಗೆ ಏನಾಗುತ್ತದೆ ಎಂಬುದನ್ನು ಮುಂದೆ ನೀನೇ ಅರಿಯುವೆ" ಎಂದು ಹೆದರಿಸಿದಳು. ಅದರಂತೆ ಅವನು ಹೆದರಿಕೊಂಡು ಅನಂತಮತಿಯನ್ನು ಬಿಟ್ಟು ಅಯೋಧ್ಯೆಗೆ ದಾರಿಯನ್ನು ತೋರಿಸಿ ಕಳುಹಿಸಿದನು.

ಅಯೋಧ್ಯೆಯ ಒಂದು ಬಸದಿಯಲ್ಲಿದ್ದಾಗ ಅವಳನ್ನು ಬಪ್ಪವರ್ತಕನು ಕಂಡು "ದರ್ಶನವಿಶುದ್ಧಿ" ಯೆಂದು ತಿಳಿದು ಅವಳನ್ನು ಕರೆತಂದು ತನ್ನ ಪಂಡಿತೆಯ ವಶಕ್ಕೆ ಒಪ್ಪಿಸಿದನು. ಆಕೆಯು ಅವಳಲ್ಲಿ ವಾತ್ಸಲ್ಯದಿಂದ ಅನಂತಮತಿಯನ್ನು ವ್ಯಾಳಿ ಯೆಂಬ ಕುಂಟಣಿಗೆ ಮಾರಿದಳು. ವ್ಯಾಳಿಯು ಅವಳನ್ನು ದುರ್ಮಾರ್ಗಕ್ಕೆ ಒಪ್ಪಿಸಲು ಸಾಧ್ಯವಾಗದೆ ಆ ಪುರಿನ ರಾಜನಾದ ಸಿಂಹರಥನಿಗೆ ಒಪ್ಪಿಸಿದಳು. ಅವನು ಅವಳ ರೂಪದಿಂದ ಮೋಹಿತನಾಗಿ ಅವಳನ್ನು ನಯದಿಂದ ತನ್ನ ವಶವರ್ತಿನಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಪಟ್ಟು ಕೊನೆಗೆ ಅದು ಸಾಧ್ಯವಾಗದೆ ಅವಳಿಗೆ ಬಾಧಕ ವಿಧಿಗಳನ್ನು ಮಾಡೆಯಿಸಿದನು. ಅವಳು ಮಾತ್ರ ಹೆದರದೆ ಪಂಚನಮಸ್ಕಾರವನ್ನು ಧ್ಯಾನಿಸುತ್ತ ಸ್ಥಿರವಾಗಿದ್ದಳು. ಇದನ್ನು ನೋಡಿ ಆ ಪುರದ ದೇವತೆಗಳು ಬಂದು ಅವಳ ನೋವೆಲ್ಲವನ್ನೂ ಪಟ್ಟದರಸಿಯ ಮೇಲೆಯೂ ಪರಿವಾರದವರ ಮೇಲೆಯೂ ತಿರುಗಿಸಿದರು; ಕೂಡಲೇ ಅವರೆಲ್ಲರೂ ವಸ್ತ್ರಗಳನ್ನು ಹಾರಿಕೊಂಡು ನೆಲದ ಮೇಲೆ ಬಿದ್ದರು. ದೊರೆಯೂ ನೋವನ್ನು ಸೈರಿಸಲಾರದೆ ಹೊರಳಾಡುತ್ತಿದ್ದನು. ಇದನ್ನು ನೋಡಿ ದೇವತೆಗಳು ಸಕ್ಕು, ಜಯ-ಜಯನಿನಾದವನ್ನೂ ಪುಷ್ಪವೃಷ್ಟಿಯನ್ನೂ ಮಾಡಿ ಉಪಸರ್ಗವನ್ನು ನಿವಾರಣೆ ಮಾಡಿದರು. ಅನಂತರ ಸಿಂಹರಥ ಮುಂತಾದವರೆಲ್ಲರೂ ಅವಳನ್ನು ಪೂಜಿಸಿ ಶ್ರಾವಕರಾದರು. ಅನಂತಮತಿಯೂ ರಾಜಶ್ರೇಷ್ಠಿಯಾದ ಜಿನೇಂದ್ರದತ್ತಸೆಟ್ಟಿಯ ದೇಹಾರದಲ್ಲಿ ನಾನಾವ್ರತಗಳನ್ನು ಕೈಕೊಂಡು ಮಾಡುತ್ತ ಇದ್ದಳು.

ಇತ್ತ ಪ್ರಿಯದತ್ತಸೆಟ್ಟಿಯು ತನ್ನ ಮಗಳು ಅದೃಶ್ಯಳಾಗಿ ಹೋದುದನ್ನು ನೋಡಿ ದುಃಖಿಸುತ್ತ ಕೆಲವು ಕಾಲದಮೇಲೆ ತನ್ನ ಭಾವನಾದ ಜಿನದತ್ತಸೆಟ್ಟಿಯ ಮನೆಗೆ ಬಂದು ಅವನ ದೇಹಾಂದಲ್ಲಿ ತನ್ನ ಮಗಳನ್ನು ಕಂಡನು. ಆಮೇಲೆ ಪರಸ್ಪರ ಯೋಗಕ್ಷೇಮಗಳು ನಡೆದು ಆದ ಸಂಗತಿಗಳೆಲ್ಲಾ ಗೊತ್ತಾದುವು. ಇದಾದ ಎಂಟುಹತ್ತು ದಿವಸಕ್ಕೆ ಪ್ರಿಯದತ್ತಸೆಟ್ಟಿಯು ಅವಳನ್ನು ತನ್ನ ಸೋದರ ಅಳಿಯನಾದ ಶ್ರುತಸಾಗರನಿಗೆ ಕೊಟ್ಟು ಮದುವೆ ಮಾಡಬೇಕೆಂದು ಯೋಚಿಸಿ ಬೇಕಾದ ಏರ್ಪಾಡುಗಳನ್ನು ಮಾಡಿದನು. ಆದರೆ ಏನುಹೇಳಿದರೂ ಅನಂತಮತಿಯು ಮಾತ್ರ ಮದುವೆಗೆ ಒಪ್ಪದೆ ಎಲ್ಲರನ್ನೂ ಒಡಂಬಡಿಸಿ ಕಮಳಶ್ರೀಗಂತಿಯರಲ್ಲಿ ಜಿನದೀಕ್ಷೆಯನ್ನು ಕೈಕೊಂಡು ತಪಸ್ಸುಮಾಡಿ ಸಮಾಧಿಯಿಂದ ಶರೀರವನ್ನು ಬಿಟ್ಟು ಸಹಸ್ರಾರ ಕಲ್ಪದಲ್ಲಿ ಸುಕಾಂತನೆಂಬ ಮಹತ್ತರದೇವನಾಗಿ ಹುಟ್ಟಿದಳು.

ಚತುರ್ಥಾಶ್ವಾಸ.

ನಿರ್ವಿಚಿಕಿತ್ಸೆಯ ಕಥೆ.

ಇಂದ್ರಕಚ್ಛ ವಿಷಯದಲ್ಲಿ ರೌರವ ಪುರವೆಂಬುದೊಂದು ಪಟ್ಟಣವಿರುವುದು. ಅದನ್ನು ಪ್ರಭಾವತಿಯೆಂಬ ಪಟ್ಟದರಾಣಿಯೊಡನೆ ಉದ್ದಾಯನನೆಂಬ ರಾಜನು ಆಳುತ್ತಿದ್ದನು.

ಅತ್ತ ಸೌಧರ್ಮಕಲ್ಪದಲ್ಲಿ ಸೌಧರ್ಮೇಂದ್ರನಿಂದ ಧರ್ಮವನ್ನು ಕೇಳಿದ ದೇವತೆಗಳು "ನಿರ್ವಿಚಿಕಿತ್ಸೆಯಲ್ಲಿ ಪ್ರಸಿದ್ಧರಾದವರಾರು?" ಎಂದು ಪ್ರಶ್ನೆಮಾಡಲು, ಸೌಧರ್ಮೇಂದ್ರನು ಉದ್ದಾಯನ ಮಹಾರಾಜನ ಹೆಸರನ್ನು ಹೇಳಿದನು ಇದನ್ನು ಕೇಳಿ ವಾಸವನೆಂಬ ದೇವನು ಆಶ್ಚರ್ಯಪಟ್ಟು ಇದನ್ನು ಪರೀಕ್ಷಿಸಬೇಕೆಂದು ಹೊರಟು ಕುಷ್ಠದಿಂದ ಮಹಾ ಅಸಹ್ಯಕಾರವಾದ ದೇಹವನ್ನೂ ರೂಪವನ್ನೂ ಧರಿಸಿ ರೌರವಪುರದಲ್ಲಿ ಹೋಗುತ್ತಿದ್ದನು. ಅವನನ್ನು ನೋಡಿ ಬಬ್ಬೊಬ್ಬರು ಬಂದೊಂದು ಮಾತನಾಡುತ್ತಿದ್ದರು. ವಾಸವನು ಇದನ್ನೆಲ್ಲಾ ಕೇಳುತ್ತ ಸಕಲ ವೈಭ

ವದಿಂದ ಒಪ್ಪಿದ್ದ ಉಪಾಧ್ಯಾಯನನ ಒಡ್ಡೋಲಗಕ್ಕೆ ಬಂದನು ಮಹಾ ರಾಜನು ಅವನನ್ನು ಕಂಡಕೂಡಲೇ ಎದ್ದು ನಮಸ್ಕರಿಸಿ ಉಚ್ಚಾಸನದಲ್ಲಿ ಕುಳ್ಳಿರಿಸಿದನು. ಪರಿವಾರದವರೆಲ್ಲರೂ ಋಷಿಯ ದುರ್ವಾಸನೆಯನ್ನು ತಡೆಯಲಾರದೆ ಒಬ್ಬೊಬ್ಬರಾಗಿ ಹೊರಟುಹೋದರು ಆದರೆ ರಾಜನೂ ರಾಣಿಯೂ ಮಾತ್ರ ಅಸಹ್ಯವಿಲ್ಲದೆ ನಿಂತು ಅವನಿಗೆ ಬೇಕಾದ ಆಹಾರ ವನ್ನು ತಂದಿತ್ತರು. ಋಷಿಯು ತೃಪ್ತಿಯಾಗಿ ಊಟಮಾಡಿ, ಸಂಕಟ ಪಡುತ್ತ ತಟ್ಟನೆ ಮಹಾರಾಜನಮೇಲೆ ವಮನಮಾಡಿಬಿಟ್ಟನು ; ದೊರೆಯ ಮೈಯೆಲ್ಲಾ ತೊಯಿದು ಲೋಳೆಯಿಂದ ವಜ್ರಲೇಪಹಾಕಿದಹಾಗಾಯಿತು.. ಆದರೆ ಅವನು ಇದಕ್ಕೂ ಅಸಹ್ಯಪಟ್ಟುಕೊಳ್ಳದೆ ತಾನು ಬಡಿಸಿದುದರಲ್ಲಿ ಹೆಚ್ಚು ಕಡಿಮೆಯಾದುದರಿಂದ ಹೀಗಾಯಿತೆಂದು ತನ್ನನ್ನು ತಾನು ನಿಂದಿ ಸಿಕೊಂಡು, ಬೀಳುತ್ತಿದ್ದ ಋಷಿಯನ್ನು ಒಂದು ಜಾವದ ವರೆಗೆ ಹಿಡಿದು ಕೊಂಡು ಕುಳಿತಿದ್ದನು. ಆಯಾಸವು ತೀರಿದಮೇಲೆ ಗಂಡಹೆಂಡರಿ ಬ್ಬರೂ ಅವನನ್ನು ಕರೆದುಕೊಂಡುಹೋಗಿ ತೊಳದು ಪೀತಾಂಬರದಿಂದ ಮೈಯೊರೆಸಿ ಒಳ್ಳೆಯದೊಂದು ಆಸನದಲ್ಲಿ ಕುಳ್ಳಿರಿಸಿ ತಮ್ಮಿಂದಾದ ಕಷ್ಟ ವನ್ನು ಕ್ಷಮಿಸಬೇಕೆಂದು ಬೇಡಿಕೊಂಡರು ಇದನ್ನು ಕೇಳಿ ಸಂತೋ ಷಪಟ್ಟು ವಾಸವನು ತನ್ನ ನಿಜಸ್ವರೂಪವನ್ನು ತೋರಿಸಿ ತಾನು ಬಂದ ವೃತ್ತಾಂತವನ್ನು ತಿಳಿಸಿ ಪ್ರಭಾವತಿಯ ಮಾಹಾತ್ಮ್ಯವನ್ನು ಮುಂದೆ ಹೇಳುವಂತೆ ವಿವರಿಸಿದನು:—

"ಮಹಾರಾಜ ! ಈಕೆಗೆ ಶೀಲವತಿಯೆಂಬ ಹೆಸರು ಬಂದ ವೃತ್ತಾಂ ತವನ್ನು ವಿವರಿಸುತ್ತೇನೆ ಕೇಳು ; ಒಂದುಸಾರಿ ನೀನು ವಿಜಯಯಾತ್ರೆ ಹೊರಟುಹೋದಾಗ ನಾರಾಯಣದತ್ತೆ ಯೆಂಬಾಕೆಯು ಅರಮನೆಗೆ ಬಂದಳು. ಅವಳು ಪ್ರಭಾವತಿಯ ಬಾಲ್ಯಕಾಲದ ಗೆಳತಿ ; ಆದರೆ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾಗಿ ತರ್ಕಶಾಸ್ತ್ರಗಳನ್ನೋದಿ ಪಂಡಿತೆಯೆ ನ್ನಿಸಿಕೊಂಡಿದ್ದಳು. ಪ್ರಭಾವತೀದೇವಿಯು ಈಕೆಯ ಮಿಥ್ಯಾವೇಷ ವನ್ನು ನೋಡಿ ಉದಾಸೀನಳಾಗಿದ್ದಳು. ನಾರಾಯಣದತ್ತೆಗೆ ಅವಮಾ ನವಾಗಿ ಕೋಪಬಂದಿತು. ಅನಂತರ ಹಿಂತಿರುಗಿಹೋಗಿ ಅವಳ ಶ್ರಾವಕ ತ್ವವನ್ನು ಹೇಗಾದರೂ ಮಾಡಿ ಕೆಡಿಸಬೇಕೆಂದು ನಿಶ್ಚಯಿಸಿದಳು. ಅದ

ಕ್ಕಾಗಿ ಅವಳ ಚಿತ್ರಪಟವೊಂದನ್ನು ಬರೆದು ಮಾಳವೇಶ್ವರನಾದ ಚಂಡಪ್ರದ್ಯೋತನಲ್ಲಿಗೆ ಹೋಗಿ ಅದನ್ನು ತೋರಿಸಿ ಅವನಿಗೆ ಅವಳಲ್ಲಿ ಮನಸ್ಸನ್ನುಂಟುಮಾಡಿದಳು. ಅವನು ನಿನ್ನ ಪಟ್ಟಣವನ್ನು ಮುತ್ತಿ ತನ್ನ ಹೆಗ್ಗಡೆಯೊಡನೆ ಪ್ರಭಾವತಿಯನ್ನು ಕೊಡಬೇಕೆಂದು ಹೇಳಿ ಕಳುಹಿಸಿದನು. ಆಕೆಯು ಅವನ ವಶವಾಗಲು ಒಪ್ಪದಿದ್ದ ಕಾರಣ ಅವನು ಯುದ್ಧಕ್ಕೆ ಸಿದ್ಧನಾದನು. ಈ ಸಮಯದಲ್ಲಿ ನಾನು ವಿಮಾನದಲ್ಲಿ ನಂದೀಶ್ವರದ್ವೀಪಕ್ಕೆ ಹೋಗುತ್ತ ಇದನ್ನು ತಿಳಿದು ಚಂಡಪ್ರದ್ಯೋತನ ಸೈನ್ಯವನ್ನೆಲ್ಲಾ ಉಜ್ಜಯಿನಿಗೆ ತೆಗೆದುಕೊಂಡುಹೋಗಿ ಬಿಟ್ಟು, ನಿನ್ನ ಪಟ್ಟಣದವರನ್ನೆಲ್ಲಾ ನಿದ್ರೆಗೊಳಿಸಿ ಚಂಡಪ್ರದ್ಯೋತನ ವೇಷದಿಂದ ಈಕೆಯನ್ನು ಮಹಾ ಭಯಪಡಿಸಿ ದೆನು. ಆದರೂ ಆಕೆಯು ಹೆದರಲಿಲ್ಲ. ಅನಂತರ ನನ್ನ ನಿಜವಾದ ರೂಪವನ್ನು ತೋರಿಸಿ ಪುಷ್ಪವೃಷ್ಟಿಯನ್ನು ಸುರಿಸಿ ಶೀಲವತಿಯೆಂಬ ಹೆಸರನ್ನು ಕೊಟ್ಟು ದೇವಲೋಕಕ್ಕೆ ಹೊರಟು ಹೋದೆನು."

ಇಷ್ಟನ್ನು ಹೇಳಿದವೇಲೆ ಆತನು ರತ್ನಖಚಿತವಾದ ಒಂದು ಸಿಂಹಾಸನವನ್ನು ಮಾಡಿ ಅದರಲ್ಲಿ ರಾಜರಾಣಿಯರನ್ನು ಕೂರಿಸಿ, ದೇವ ದುಂದುಭಿಯು ಮೊಳಗುತ್ತಲೂ ಪುಷ್ಪವೃಷ್ಟಿಯು ಕರೆಯುತ್ತಲೂ ಇರಲು, ಅವರಿಗೆ ಅಭಿಷೇಕಮಾಡಿ ಹೊಗಳಿ ದೇವಲೋಕಕ್ಕೆ ತೆರಳಿದನು.

"ದೇವತೆಗಳಿಂದ ಪೂಜಿಸಲ್ಪಟ್ಟ ಮನುಷ್ಯರೂ ಉಂಟೇ ! ನಮ್ಮ ಮಹಾರಾಜನ ಸಮಾನರಾರು !" ಎಂದು ಲೋಕವೆಲ್ಲ ಹೊಗಳುತ್ತಿ ದ್ದರು. ಹೀಗೆ ಹಲವುಕಾಲ ರಾಜ್ಯವಾಳಿದಮೇಲೆ ಅವನೂ ಅವನ ಹೆಂ ಡತಿಯೂ ವೈರಾಗ್ಯವನ್ನು ತಳೆದು ದೀಕ್ಷೆಯನ್ನು ಕೈಕೊಂಡು ಸದ್ಗತಿ ಯನ್ನು ಪಡೆದರು.

ಪಂಚಮಾಶ್ವಾಸ.

ಅಮೂಢದೃಷ್ಟಿಯ ಕಥೆ.

ಶೂರಸೇನ ವಿಷಯದಲ್ಲಿ ಉತ್ತರ ಮಥುರೆಯೆಂಬ ಪಟ್ಟಣವಿದೆ. ಅದರಲ್ಲಿ ರೇವತಿಯೆಂಬ ಪಟ್ಟದರಸಿಯೊಡನೆ ವರುಣನೆಂಬ ಮಹಾಮಂಡ ಳಿಕನು ಆಳುತ್ತಿದ್ದನು.

ಅತ್ತ ಮೇಘಕೂಟ ಪುರದಲ್ಲಿ ಚಂದ್ರಾಭನೆಂಬ ಖೇಚರರಾಜನಿದ್ದನು. ಅವನಿಗೆ ಸುಮತಿ ಮಹಾದೇವಿಯೆಂಬ ಹೆಂಡತಿಯೂ ಚಂದ್ರಶೇಖರನೆಂಬ ಮಗನೂ ಇದ್ದರು. ಒಂದುದಿನ ರಾಜನು ನಾನಾ ಆಕಾರಗಳುಳ್ಳ ಮೇಘಗಳನ್ನೂ ಅವು ಕ್ಷಣಮಾತ್ರದಲ್ಲಿ ಕರಗಿಹೋಗುವದನ್ನೂ ನೋಡಿ ವೈರಾಗ್ಯವನ್ನು ಪಡೆದನು. ಆದುದರಿಂದ ತನ್ನ ರಾಜ್ಯವನ್ನು ಮಗನಿಗೆ ಕೊಟ್ಟು ಅವನಿಗೆ ಬುದ್ಧಿವಾದವನ್ನು ಹೇಳಿ ತನ್ನ ದೇಶವನ್ನು ಬಿಟ್ಟು ಹೊರಟು ಪಾಂಡ್ಯದೇಶದ ದಕ್ಷಿಣಮಧುರೆಗೆ ಬಂದನು. ಅಲ್ಲಿ ಜಿನಾಲಯಗಳನ್ನು ನೋಡುತ್ತ ಹೋಗುತ್ತಿರಲು, ಆ ಪುರದ ರಾಜನಾದ ಚಿತ್ರವಾಹನ ಮಹಾರಾಜನು ತಮ್ಮ "ಅನ್ವಯದ ಬಸದಿ" ಗೆ ಬಂದು ಚತುರ್ಮುಖ ಶಾಂತಿನಾಥನನ್ನು ಪೂಜಿಸಿ ಸ್ತುತಿಸಿ ಹೋದನು. ಚಂದ್ರಾಭಮಹಾರಾಜನು ಇವನ್ನು ಕಂಡು ಚಿತ್ರವಾಹನನನ್ನು ಹೊಗಳಿ ತಾನೂ ಜಿನಭವನವನ್ನು ಹೊಕ್ಕು ಅಲ್ಲಿದ್ದ ಮುನಿಗುಪ್ತ ಭಟ್ಟಾರಕರನ್ನು ನಮಸ್ಕರಿಸಿ ತಾನು ತಪಸ್ಸಿಗಾಗಿ ಬಂದಿರುವುದನ್ನು ಅವರಿಗೆ ತಿಳಿಸಿದನು. ಅವರು ತಪಸ್ಸಿನ ಕಷ್ಟಸುಖಗಳನ್ನೂ ಋಷಿಗಳ ಗುಣವನ್ನೂ ತಿಳಿಸಿ 'ತಪಮೆಂಬುದು ಸಾಮಾನ್ಯಮಲ್ಲದು; ನೀನುಂ ನಿನ್ನ ಮುನ್ನಿನ ವಿದ್ಯಾಧರರಾಜ್ಯಮಂ ಕೈಕೊಂಡು ಸುಖದಿನಿರೆಂ' ದು ಹೇಳಿದರು. ಆದರೆ ಅವನು ಒಪ್ಪಲಿಲ್ಲ. ಆದುದರಿಂದ ಭಟ್ಟಾರಕರು "ಅವನ ವೈರಾಗ್ಯಕ್ಕೆ ಮೆಚ್ಚಿ ಮನಃಪೂರ್ವಕವಾಗಿ ನಿನ್ನ ಪರಿಗ್ರಹಗಳನ್ನೆಲ್ಲಾ ತೊರೆದುಬಿಡು" ಎಂದು ಅಪ್ಪಣೆ ಮಾಡಿದರು. ರಾಜನು ಎಲ್ಲವನ್ನೂ ತೊರೆದು ಜಿನಾಲಯಗಳನ್ನು ನೋಡುವುದಕ್ಕೆ ಹೋಗಲು ಸಹಕಾರಿಗಳಾದ ಕೆಲವು ವಿದ್ಯೆಗಳನ್ನು ಮಾತ್ರ ಇಟ್ಟುಕೊಂಡನು. ಅದನ್ನು ನೋಡಿ ಮುನಿಗಳು ನಕ್ಕು ನಿನಗೆ "ಮಹಾವ್ರತಗಳು ಬೇಡ, ಅಣುವ್ರತಧಾರಿಯಾಗಿರು" ಎಂದು ಹೇಳಿ ಅವುಗಳ ಸ್ವರೂಪವನ್ನೂ ಹನ್ನೊಂದುಬಗೆಯ ಶ್ರಾವಕರ ಲಕ್ಷಣಗಳನ್ನೂ ತಿಳಿಸಿದರು. ಮಹಾರಾಜನು ಅವುಗಳಲ್ಲಿ ಹನ್ನೊಂದನೆಯ ಶ್ರಾವಕತ್ವವನ್ನು ಅಪೇಕ್ಷಿಸಲು ಅದನ್ನೇ ಅವನಿಗೆ ಕೊಟ್ಟರು. ಒಂದುದಿನ ಅವನಿಗೆ ಶೂರಸೇನ ವಿಷಯದ ಉತ್ತರ ಮಧುರೆಯ ಜಿನಾಲಯಗಳನ್ನು ವಂದಿಸಬೇಕೆಂಬ ಆಶೆ

ಹುಟ್ಟಲು ಅದನ್ನು ತನ್ನ ಗುರುಗಳಿಗೆ ತಿಳಿಸಿ ಅವರ ಅಪ್ಪಣೆಯನ್ನು ಬೇಡಿದನು. ಅವರು ಅದಕ್ಕೆ ಅನುಮತಿಯನ್ನಿತ್ತು, ವರುಣಮಹಾರಾಜನ ಅರಸಿಯಾದ ರೇವತೀ ಮಹಾದೇವಿಗೆ ಆಶೀರ್ವಾದವನ್ನೂ ಉಂಡುರುಳಿ ಭಟ್ಟಾರಕರಿಗೆ ವಂದನೆಯನ್ನೂ ಹೇಳಿಕಳುಹಿಸಿದರು. ಆಪುರದ ಶ್ರಾವಕರನ್ನೂ ಭವಸೇನಾಚಾರ್ಯರು ಮುಂತಾದ ಇತರ ಮುನಿಗಳನ್ನೂ ಬಿಟ್ಟು, ಉಂಡುರುಳಿ ಭಟ್ಟಾರಕರಿಗೂ ರೇವತೀ ದೇವಿಗೂ ಗೌರವ ಕೊಟ್ಟದಕ್ಕಾಗಿ ಅವರು ಆಶ್ಚರ್ಯಪಡುತ್ತ ಉತ್ತರಮಧುರೆಗೆ ಬಂದು ಅಲ್ಲಿ ಭವಸೇನಾಚಾರ್ಯರೊಡನೆಯೂ ಉಂಡುರುಳಿ ಭಟ್ಟಾರಕರಲ್ಲಿಯೂ ಮಾತನಾಡಿ ಪರೀಕ್ಷಿಸಿ ಭವಸೇನಾಚಾರ್ಯರಲ್ಲಿ ಸಮ್ಯಕ್ತ್ವವಿಲ್ಲದಿರುವನ್ನೂ ಉಂಡುರುಳಿ ಭಟ್ಟಾರಕರಲ್ಲಿ ಇರುವುದನ್ನೂ ತಿಳಿದುಕೊಂಡನು. ಅನಂತರ ರೇವತೀ ಮಹಾದೇವಿಯ ಅಮೂಢದೃಷ್ಟಿತ್ವವನ್ನು ಪರೀಕ್ಷಿಸಬೇಕೆಂದು ಹೊರಟು ಪೂರ್ವದಿಕ್ಕಿನಲ್ಲಿ ಬ್ರಹ್ಮನ ವೇಷವನ್ನು ಹಾಕಿಕೊಂಡು ನಿಂತನು. ಪಟ್ಟಣದವರಲ್ಲಿ ಅನೇಕರು ಬಂದು ಅವನನ್ನು ಅರ್ಚಿಸಿದರು. ಅರಸನು ತಾವೂ ಪೂಜೆಗೆ ಹೋಗಬೇಕೆಂದು ರೇವತೀ ದೇವಿಗೆ ಹೇಳಿದನು. ಆದರೆ ಅವಳು ಬರಲಿಲ್ಲ. ಇದರಂತೆ ನಾರಾಯಣ ಈಶ್ವರರ ವೇಷಗಳನ್ನು ಕ್ರಮವಾಗಿ ಒಂದಾದಮೇಲೆ ಒಂದರಂತೆ ಹಾಕಿಕೊಂಡನು. ಆಗಲೂ ರೇವತೀಮಹಾದೇವಿ ಮಾತ್ರ ಇದೆಲ್ಲಾ ಸುಳ್ಳೆಂದು ನಿರ್ಧರಿಸಿ ಪೂಜೆಗೆ ಹೋಗಲು ಇಷ್ಟಪಡಲಿಲ್ಲ. ಕೊನೆಗೆ ಚಂದ್ರಾಭನು ರೇವತಿಯ ಕುಲಸ್ವಾಮಿಯಾದ ವರ್ಧಮಾನನ ವೇಷವನ್ನು ಹಾಕಿಕೊಂಡನು. ಇದೂ ಅನುಪಪನ್ನವೆಂದು ಹೇಳಿ ರೇವತಿಯು ಮೂಢತ್ರಯಗಳನ್ನು ಅರಸನಿಗೆ ತಿಳಿಸಿದಳು. ಇತ್ತ ಚಂದ್ರಾಭನು ಈಗಲೂ ರೇವತಿಯು ಬರದೇ ಇದ್ದುದನ್ನು ನೋಡಿ ತನ್ನ ಮಾಯೆಯನ್ನು ಉಪಸಂಹರಿಸಿ, ನಿಜರೂಪವನ್ನು ಧರಿಸಿ ರೇವತೀ ಮಹಾದೇವಿಯನ್ನು ಕಾಣಿಸಿಕೊಂಡು ಅದುವರೆಗೂ ನಡೆದ ಸಂಗತಿಯನ್ನೆಲ್ಲಾ ಅವಳಿಗೆ ತಿಳಿಸಿ ಮುನಿಗುಪ್ತಭಟ್ಟಾರಕರ ಆಶೀರ್ವಾದವನ್ನು ಹೇಳಿ ದಕ್ಷಿಣಮಧುರೆಗೆ ಹೊರಟು ಹೋದನು.

ಪುರಜನರೆಲ್ಲರೂ ರೇವತೀದೇವಿಯನ್ನು ಹೊಗಳಿದರು. ವರುಣ

ಮಹಾರಾಜನು ಮೂಢತ್ರಯವನ್ನು ಬಿಟ್ಟು ತನ್ನ ಮಗನಾದ ಶಿವಕೀರ್ತಿಗೆ ರಾಜ್ಯದಲ್ಲಿ ಪಟ್ಟವನ್ನು ಕಟ್ಟಿ ತಾನು ದೀಕ್ಷೆಯನ್ನು ಕೈಕೊಂಡನು. ರೇವತೀ ದೇವಿಯೂ ಸುವ್ರತಗಂತಿಯರಲ್ಲಿ ದೀಕ್ಷೆಯನ್ನು ಪಡೆದು ಉತ್ತರಮಧುರೆಯಿಂದ ದಕ್ಷಿಣಮಧುರೆಯ ಕಡೆಗೆ ಯಾತ್ರಾರ್ಥವಾಗಿ ಹೊರಟು ದಾರಿಯಲ್ಲಿ ಮುಡಿಪಿ ಅಚ್ಯುತ ಕಲ್ಪದಲ್ಲಿ ಮಹರ್ಧಿಕ ದೇವನಾಗಿ ಹುಟ್ಟಿದಳು. ಆಕೆಯು ಮುಡಿಪಿದ ಸ್ಥಳವು ರೇವತೀ ತೀರ್ಥವೆಂದು ಪ್ರಸಿದ್ಧವಾಯಿತು.

ಷಷ್ಠಾಶ್ವಾಸ.

ಉಪಗೂಹನದ ಕಥೆ

ಗೊಲ್ಲ ವಿಷಯದಲ್ಲಿ ಕಾಮಲಿಪ್ತಿಯೆಂಬ ಊರು ಇದೆ. ಅದರಲ್ಲಿ ಮನೋಹರನೆಂಬ ರಾಜನೂ ಜಿನಭಕ್ತನೆಂಬ ರಾಜಶ್ರೇಷ್ಠಿಯೂ ಇದ್ದರು.

ಅತ್ತ ಮಗಧ ವಿಷಯದ ಪಾಟಲೀ ಪುತ್ರವೆಂಬ ಊರಿನಲ್ಲಿ ವೀರಧ್ವಜನೆಂಬ ಅರಸನಿದ್ದನು ಅವನಿಗೆ ಸುಸೀಮೆಯೆಂಬ ಹೆಂಡತಿಯೂ ವೀರಕುಮಾರನೆಂಬ ಮಗನೂ ಇದ್ದರು. ಈ ವೀರಕುಮಾರನು ದುಷ್ಟರೊಡನೆ ಸೇರಿ ಒಂದುದಿನ ಊರ ಹೊರಗೆ ಕಳ್ಳತನದ ಮಾತನ್ನು ಕೇಳುತ್ತಿದ್ದನು. ಆಗ ಕಳ್ಳನೊಬ್ಬನು "ದೇವಾ! ನಾನು ಹೋಗದ ದೇಶವಿಲ್ಲ, ಕದಿಯದ ವಸ್ತುವಿಲ್ಲ, ಆದರೆ ಕಾಮಲಿಪ್ತಿಪುರದ ಜಿನೇಂದ್ರಭಕ್ತನ ದೇಹಾರದಲ್ಲಿ ಒಂದು ಮುಕ್ಕೊಡೆಯೂ ಅದರಲ್ಲಿ ಒಂದು ರತ್ನವೂ ಇವೆ. ಆ ರತ್ನಕ್ಕೆ ಮೂರುಲೋಕವನ್ನೂ ಬೆಲೆಯಾಗಿ ಕೊಟ್ಟರೂ ಸಾಲದು" ಎಂದನು. ಇದನ್ನು ಕೇಳಿ ತನಗೆ ಅದರಮೇಲೆ ಆಸೆಯಾಗಲು ರಾಜಕುಮಾರನು "ಈ ರತ್ನವನ್ನು ತಂದುಕೊಟ್ಟವರಿಗೆ ನನ್ನ ರಾಜ್ಯದಲ್ಲಿ ಅರ್ಧವನ್ನು ಕೊಡುತ್ತೇನೆ, ಯಾರು ತಂದುಕೊಡುವಿರಿ?" ಎಂದು ಕೇಳಿದನು ಅದಕ್ಕೆ ಸೂರ್ಯನೆಂಬ ಕಳ್ಳನು ಒಪ್ಪಿ ಮುಂದೆ ಬಂದು ವೀಳೆಯವನ್ನು ತೆಗೆದುಕೊಂಡನು.

ಅನಂತರ ಸೂರ್ಪನು ಪೂರ್ವದಿಕ್ಕಿಗೆ ಹೋಗಿ ಅಲ್ಲಿದ್ದ ಋಷಿಗಳೂಡನೆ ಕೆಲವುಕಾಲ ವಾಸವಾಗಿದ್ದು ಅವರ ನಡೆನುಡಿಗಳನ್ನೆಲ್ಲಾ ಚೆನ್ನಾಗಿ ಅಭ್ಯಾಸಮಾಡಿಕೊಂಡು ತಪಸ್ವಿಯ ವೇಷದಿಂದ ಕಾಮಲಿಪ್ತಿನಗರದ ಹತ್ತಿರ ಒಂದು ಊರಿನಲ್ಲಿ ಬಂದು ನಿಂತನು. ಅಲ್ಲಿ ಇವನ ಪ್ರಸಿದ್ಧಿ ಬಹಳವಾಗಿ ಜಿನೇಂದ್ರಭಕ್ತಸೆಟ್ಟಿ ಮುಂತಾದವರಿಗೆಲ್ಲಾ 'ಯಾರೋ ಮಹಾಪುರುಷರು ಬಂದಿದಾರೆಯಂತೆ' ಎಂಬ ವರ್ತಮಾನವು ತಿಳಿಯಿತು. ಜಿನೇಂದ್ರಭಕ್ತ ಸೆಟ್ಟಿಯು ಬಂದು ನೋಡಿ ಸೂರ್ಪನ ವೈರಾಗ್ಯವನ್ನು ನಿಜವೆಂದು ತಿಳಿದು ಅವನನ್ನು ಕರೆದುಕೊಂಡು ಹೋಗಿ ತನ್ನ ದೇಹಾರದಲ್ಲಿ ಇರಿಸಿದನು. ಸೂರ್ಪನು ನಂಬಿಸುವುದಕ್ಕೋಸ್ಕರ ಉಪವಾಸದ ಮೇಲೆ ಉಪವಾಸವನ್ನೂ ಮೌನವ್ರತವನ್ನೂ ಮಾಡುತ್ತಿದ್ದನು. ಹೀಗಿರಲು ಒಂದಾದಿನ ಜಿನೇಂದ್ರಭಕ್ತಸೆಟ್ಟಿಯು ಪರದೇಶಕ್ಕೆ ವ್ಯಾಪಾರಕ್ಕೆಂದು ಹೊರಟನು. ಈ ಸಮಯವನ್ನು ನೋಡಿಕೊಂಡು ನಡುರಾತ್ರಿಯಲ್ಲಿ, ಕಾವಲಿನವರು ನಿದ್ರಿಸುತ್ತಿದ್ದಾಗ, ಸೂರ್ಪನು ಮುಕ್ಕೊಡೆಯಲ್ಲಿದ್ದ ರತ್ನವನ್ನು ಕಳಚಿಕೊಂಡು ಹೊರಕ್ಕೆ ಹೊರಟನು. ಆದರೆ ಆ ರತ್ನವು ಬಾಲಾರ್ಕನಂತೆ ಪ್ರಜ್ವಲಿಸುತ್ತಿದ್ದಿತು. ಇದನ್ನು ಕಂಡು ತಳವಾರರು ಸದ್ದುಮಾಡಿದರು, ಅದನ್ನು ಕೇಳಿ ದೇಹಾರದ ಕಾವಲಿನವರು ಎಚ್ಚೆತ್ತು ರತ್ನವು ಕಳವಾದುದನ್ನು ತಿಳಿದು ಅಟ್ಟಿಸಿಕೊಂಡು ಬಂದರು ಅವರ ಏಟುಗಳನ್ನು ತಡೆಯಲಾರದೆ ಸೂರ್ಪನು ಊರ ಹೊರಗೆ ಬೀಡುಬಿಟ್ಟಿದ್ದ ಜಿನೇಂದ್ರ ಭಕ್ತಸೆಟ್ಟಿಯ ಬಿಡಾರದಲ್ಲಿ ಹೋಗಿ ಸೇರಿಕೊಂಡನು. ಸೆಟ್ಟಿಯು ಇದನ್ನು ಕಂಡು 'ಇವನು ಹೋದ ದಾರಿಗೆ ಹೋಗಲಿ ನಾನು ನನ್ನ ಧರ್ಮವನ್ನು ನಡೆಸುತ್ತೇನೆ' ಎಂದು ಅವನನ್ನು ಪೀಠದಮೇಲೆ ಕುಳ್ಳಿರಿಸಿ ಕಾಲನ್ನು ಒತ್ತುತ್ತಿದ್ದನು. ಇಷ್ಟು ಹೊತ್ತಿಗೆ ತಳವಾರರೂ ಕಾವಲಿನವರೂ ಬಂದು ನಡೆದ ಸಂಗತಿಯನ್ನು ತಿಳಿಸಿದರು. ಸೆಟ್ಟಿಯು ತಳವಾರನಾಯಕನನ್ನು ಕುರಿತು "ಇದೇನು ಗದ್ದಲ! ನನ್ನ ಬಡವನನ್ನು ನನ್ನ ಹತ್ತಿರಕ್ಕೆ ತಂದು ಕೊಡುವವನು ಕಳ್ಳ ಹೇಗಾದಾನು? ಹಾಗೆ ಈತನು ಅದನ್ನು ಕದ್ದುಕೊಂಡು ಬಂದಿದ್ದರೆ ಮಿಕ್ಕಸ್ಥಳವನ್ನು ಬಿಟ್ಟು ಇಲ್ಲಿಗೆ ಬರುತ್ತಿದ್ದನೇ?" ಎಂದು ಹೇಳಿ ಗದ

ರಿಸಿ ಕಳುಹಿಸಿದನು. ಅವನು ಹೊರಟು ಹೋಗಲು ಸೆಟ್ಟಿಯು ಸೂರ್ವನನ್ನು ಗೋಪ್ಯವಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವನಿಗೆ ಧರ್ಮಾಧರ್ಮ ಸ್ವರೂಪಗಳನ್ನೂ ಅವುಗಳ ಫಲಗಳನ್ನೂ ವಿವರಿಸಿದನು. ಇದರಿಂದ ಅವನಿಗೆ ಜ್ಞಾನೋದಯವಾಗಲು ಜಿನೇಂದ್ರ ಭಕ್ತಸೆಟ್ಟಿಗೆ ನಮಸ್ಕರಿಸಿ ತನ್ನ ಹಿಂದಿನ ವೃತ್ತಾಂತವನ್ನೆಲ್ಲಾ ಹೇಳಿ, ವೈರಾಗ್ಯವನ್ನು ಪಡೆದು ದೀಕ್ಷೆಯನ್ನು ಕೈಕೊಂಡನು. ಕೊನೆಗೆ ಸಮಾಧಿಮರಣದಿಂದ ಮುಡಿಪಿ ದೇವಗತಿಯನ್ನು ಪಡೆದನು.

ಸಪ್ತಮಾಶ್ವಾಸ.

ಸ್ಥಿತಿಕರಣದ ಕಥೆ.

ಶ್ರೇಣಿಕ ಮಹಾರಾಜನಿಗೂ ಚೇಳಿನೀದೇವಿಗೂ ವಾರಿಷೇಣನೆಂಬ ಕುಮಾರನು ಹುಟ್ಟಿದನು. ಅವನು ಹುಟ್ಟಿದಂದಿನಿಂದ ಜಿನಮುನಿಗಳೊಡನೆಯೇ ಬೆಳೆಯುತ್ತ ವಿವೇಕಿಯಾಗಿದ್ದನು. ಒಂದು ದಿನ ಮುಂಡಿಯ ಪುತ್ರಾಚಾರ್ಯರೆಂಬ ಮುನಿಗಳು ಆ ಊರಿನ ಹತ್ತಿರಕ್ಕೆ ಬರಲು ಮಹಾರಾಜನು ಸಕುಟುಂಬ ಪರಿವಾರನಾಗಿ ಅವರನ್ನು ಎದುರುಗೊಂಡು ಸತ್ಕರಿಸಿದನು. ಅನಂತರ ಎಲ್ಲರೂ ಊರಿಗೆ ಹಿಂತಿರುಗಿ ಹೊರಟು ಹೋದರು. ಆದರೆ ರಾಜಪುತ್ರನಾದ ವಾರಿಷೇಣನು ಮಾತ್ರ ಹೊನ್ನನ್ನು ಕಂಡ ಲೋಭಿಯಂತೆ ಮುನಿಗಳನ್ನು ಬಿಟ್ಟು ಹೋಗಲಾರದೆ ಅವರನ್ನು ಉಪಚರಿಸುತ್ತ ಅವರಿಂದ ಧರ್ಮವನ್ನು ಕೇಳಲಪೇಕ್ಷಿಸಿದನು. ಅವರು "ಕಿಱಿದಱೊಳ್ ಧರ್ಮಮಂ ತಿಳಿಪುವುದುಂ" ಅದನ್ನು ಕೇಳಿ ಸಂತೋಷಪಟ್ಟು ವಾರಿಷೇಣನು ಅಂದಿನ ರಾತ್ರಿ ಶ್ಮಶಾನಕ್ಕೆ ಹೋಗಿ ಅಲ್ಲಿ "ರಾತ್ರಿ ಪ್ರತಿಮೆ" ನಿಂತನು.

ಈ ಮಧ್ಯೆ ಮೃಗವೇಗನೆಂಬ ಒಬ್ಬ ಕಳ್ಳನು ರಾಜಶ್ರೇಷ್ಠಿಯ ಹೆಂಡತಿಯಾದ ಕೀರ್ತಿಮತಿಯ ಹಾರವನ್ನು ಕದ್ದುಕೊಂಡು ಹೋಗುತ್ತಿದ್ದನು. ಅವನನ್ನು ತಳವಾರರು ಕಂಡು ಅಟ್ಟಿಸಿಕೊಂಡು ಬರಲು ಅವನು ಹೆದರಿ ಆ ಹಾರವನ್ನು ವಾರಿಷೇಣನ ಹತ್ತಿರ ಹಾಕಿ ಓಡಿಹೋ

ದನು. ತಳವಾರರು ಅಲ್ಲಿಗೆ ಬಂದು ವಾರಿಷೇಣನೇ ಕಳ್ಳನೆಂದು ಭಾವಿಸಿ ಅವನನ್ನು ನಾನಾವಿಧವಾಗಿ ಮೂದಲಿಸಿ ಹಿಂಸಿಸಿ ಹೊಡೆಯುತ್ತಿದ್ದರು. ಅವನು ಮಾತ್ರ ಜಿನಧ್ಯಾನ ಮಾಡುತ್ತ ಸುಮ್ಮನಿದ್ದನು. ಆಗ ಅಲ್ಲಿದ್ದ ದೇವತೆಗಳಿಗೆ ಆಸನ ಕಂಪವಾಗಲು ಅವರು ಬಂದು ರಾಜಪುತ್ರನಿಗೆ ಬೀಳುತ್ತಿದ್ದ ಏಟುಗಳನ್ನೆಲ್ಲಾ ಆಭರಣಗಳನ್ನಾಗಿ ಮಾಡಿದರು. ಇದನ್ನು ಕಂಡು ಆಶ್ಚರ್ಯವಾಗಲು ತಳವಾರರು ಈ ವರ್ತಮಾನವನ್ನು ರಾಜನಿಗೆ ತಿಳಿಸಿದರು. ಅದನ್ನು ಕೇಳಿ ರಾಜನು ಸಕಲಜನ ಪರಿವೃತನಾಗಿ ಬಂದನು. ಇಷ್ಟು ಹೊತ್ತಿಗೆ ಸೂರ್ಯೋದಯವಾಗಲು ವಾರಿಷೇಣನ ಪ್ರತಿಜ್ಞೆಯೂ ತೀರಿ ಅವನು ಎತ್ತಿದ್ದ ಕೈಗಳನ್ನು ಕೆಳಕ್ಕೆ ಇಳಿಸಿದನು. ರಾಜನು ಅವನನ್ನು ಕಂಡು ಕ್ಷಮೆಯನ್ನು ಬೇಡಿಕೊಂಡನು ಆದರೆ ರಾಜಪುತ್ರನು ಇದೆಲ್ಲವೂ ಕರ್ಮದ ಫಲವೆಂದು ಹೇಳಿ ರಾಜನನ್ನು ಸಮಾಧಾನಮಾಡಿದನು. ಎಲ್ಲರೂ ಅರಮನೆಗೆ ಬಂದರು. ಇದಾದ ಕೆಲವುದಿನದಮೇಲೆ ವಾರಿಷೇಣನು ತಾಯಿತಂದೆಗಳನ್ನು ಒಡಂಬಡಿಸಿ ಪುಷ್ಪಗಿರಿಪರ್ವತಕ್ಕೆ ಹೋಗಿ ಅಲ್ಲಿ ಸುರದೇವರೆಂಬವರಿಂದ ಜಿನದೀಕ್ಷೆಯನ್ನು ಕೈಕೊಂಡು ತಪಸ್ಸು ಮಾಡುತ್ತಿದ್ದನು

ಹೀಗಿರಲು ಒಂದು ದಿವಸ ವಾರಿಷೇಣನು ತನ್ನ ಬಾಲಸಖನಾದ ಪುಷ್ಪದಾಡನೆಂಬವನು ಸುವಂತಿಯೆಂಬ ಹುಡುಗಿಯನ್ನು ಮದುವೆಯಾದನೆಂದು ಕೇಳಿ ಅವನಮನೆಗೆ ಹೋಗಿ ಅವನನ್ನು ಕರೆದುಕೊಂಡು ಬಂದು ಅವನಿಗೆ ತಮ್ಮ ಗುರುಗಳಲ್ಲಿ ಬಲಾತ್ಕಾರವಾಗಿ ದೀಕ್ಷೆಯನ್ನು ಕೊಡಿಸಿದನು. ಆದರೆ ಪುಷ್ಪದಾಡನು ಮಾತ್ರ "ಅಡವಿಯನ್ನು ಬಿಟ್ಟು ಬಂದ ಆನೆಯಂತೆ" ಕೊರಗುತ್ತಿದ್ದನು. ಇದನ್ನು ಕಂಡು ವಾರಿಷೇಣನು "ಶರೀರದೊಳಾದ ಪೊಲ್ಲಮೆಯುಮಂ ಸಂಸಾರದೊಳಾದ ದುಃಖಮುಮಂ ಭೋಗಂಗಳ ಕೇಡುಮಂ ಬಾಳ್ಕೆಯನಿತ್ಯತೆಯುಮಂ ವನಿತೆಯರ ಕಷ್ಟತೆಯುಮಂ ಸ್ಥಿತಿಕರಣಂ ಮಹಾಪುಣ್ಯಮೆಂಬುದುಮಂ ಬಗೆದು ಪನ್ನೆರಡುವರ್ಷಬರಂ ಪೇೞ್ದ" ಉಪದೇಶಮಾಡಿದನು. ಪುಷ್ಪದಾಡನಿಗೆ ಮಾತ್ರ ಅದು ಮನಸ್ಸಿಗೆ ಅಂಟದೆ ಸಂಸಾರದಮೇಲೆಯೇ ಮನಸ್ಸು ಹೋಗುತ್ತಿದ್ದಿತು. ಹೀಗಿರಲು ಒಂದುದಿನ ವಾರಿಷೇಣನು ವರ್ಧಮಾನ

ಸ್ವಾಮಿಗಳ ಹತ್ತಿರಕ್ಕೆ ಹೋಗಿದ್ದಾಗ ಪುಷ್ಪದಾಡನು ಮನೆಗೆ ಹಿಂತಿರುಗಿದನು. ಆವರೆ ವಾರಿಷೇಣನು ಅವನನ್ನು ಪುನಃ ಹಿಡಿದುಕೊಂಡು ಬಂದು ತನ್ನ ತಾಯಿತಂದೆಗಳಿದ್ದ ಅರಮನೆಗೆ ಹೋದನು. ಅಲ್ಲಿ ಅವನ ಇಷ್ಟದಂತೆ ಅವನ ಪತ್ನಿಯರಾಗಿದ್ದ ಐನೂರು ಜನ ಸ್ತ್ರೀಯರೂ ಪುಷ್ಪದಾಡನ ಹೆಂಡತಿಯಾದ ಸುದಂತಿಯೂ ಕರೆಸಲ್ಪಟ್ಟರು. ಆಗ ವಾರಿಷೇಣನು ಪರಮಸುಂದರಿಯರಾದ ತನ್ನ ಹೆಂಡತಿಯರನ್ನು ತೋರಿಸಿ "ನಾನು ಇಂತಹವರನ್ನೇ ಬಿಟ್ಟು ತಪಶ್ಚರ್ಯೆಗಾಗಿ ಹೊರಟು ಹೋಗಿದ್ದೇನೆ. ನೀನು ಮಾತ್ರ ಹನ್ನೆರಡುವರ್ಷ ಧರ್ಮೋಪದೇಶವನ್ನು ಕೇಳಿದರೂ ಕುರೂಪಿಯಾದ ಈ ಸುದಂತಿಯಲ್ಲಿಯೇ ಅನುರಾಗವನ್ನಿಟ್ಟುಕೊಂಡಿದ್ದೀಯೆ" ಎಂದು ಹೇಳಿ ಸುದಂತಿಯನ್ನು ಕುರಿತು, "ಅಮ್ಮಾ, ಜಿನೇಶ್ವರ ರೂಪವನ್ನು ಧರಿಸಿ ಪುನಃ ತನ್ನ ಸ್ತ್ರೀಯನ್ನು ನೆನಸಿಕೊಳ್ಳುವನೂ ಒಬ್ಬ ಮನುಷ್ಯನೇ?" ಎಂದು ಕೇಳಿದನು ಅದಕ್ಕೆ ಆಕೆಯು "ಅಂತಹವನು ನಾಯಿಗಿಂತಲೂ ಕಡೆ; ಏಕೆಂದರೆ ನಾಯಿಯು ತಾನು ವಮನ ಮಾಡಿದುದನ್ನು ಮುಟ್ಟುವುದಿಲ್ಲ" ಎಂದಳು ಇದನ್ನು ಕೇಳಿ ಪುಷ್ಪದಾಡನಿಗೆ ನಾಚಿಕೆಯಾಯಿತು; ಸಾಲದುದಕ್ಕೆ ಅಂತಹ ಸುಂದರಿಯರಾದ ಸ್ತ್ರೀಯರನ್ನೂ ವಾರಿಷೇಣನು ತ್ಯಜಿಸಿ ಹೊರಟು ಹೋದುದರಿಂದ ತಪಸ್ಸಿನ ಮಹತ್ವವನ್ನು ಊಹಿಸಿ ತಾನು ಅವನಿಂದ ಕೇಳಿದ ಧರ್ಮೋಪದೇಶವನ್ನೆಲ್ಲಾ ನಂಬಿದನು. ಅನಂತರ ಅವನಿಗೆ ಪುನಃ ದೀಕ್ಷೆಯು ಕೊಡಲ್ಪಟ್ಟಿತು; ಮರಣಾನಂತರ ದೇವಗತಿಯು ಪ್ರಾಪ್ತವಾಯಿತು ವಾರಿಷೇಣನೂ "ಮನುಷ್ಯರ ಪರಿಣಾಮ"ವನ್ನು ಭಾವಿಸಿ ಹನ್ನೆರಡು ತಪಸ್ಸನ್ನೂ ಆಚರಿಸಿ ಕೊನೆಗೆ "ಸಂನ್ಯಸನ ಸಮಾಧಿ"ಯಿಂದ ಮುಡಿಪಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದನು.

ಅಷ್ಟಮಾಶ್ವಾಸ.

ವಾತ್ಸಲ್ಯದ ಕಥೆ

ಪಾಂಚಾಲವಿಷಯದಲ್ಲಿ ಅಹಿಚ್ಛತ್ರವೆಂಬ ಪಟ್ಟಣವಿದೆ. ಅದನ್ನು ಸಂತಪನೆಂಬ ಅರಸನು ಆಳುತ್ತಿದ್ದನು. ಅವನ ಪುರೋಹಿತನಾದ

ಸೋಮದತ್ತನ ಹೆಂಡತಿ ಯಜ್ಞದತ್ತೆಯು ಗರ್ಭಿಣಿಯಾಗಲು ಆಕೆಗೆ ಜಿನಸೇವೆ ಮಾಡಬೇಕೆಂಬ ಬಯಕೆಯುಂಟಾಯಿತು. ಅವಳ ವಂಶದಲ್ಲಾಗಲಿ ಅವಳ ಗಂಡನ ವಂಶದಲ್ಲಾಗಲಿ ಹಿಂದೆ ಯಾರೂ ಜಿನಪೂಜೆಯನ್ನು ಮಾಡಿದವರಲ್ಲ. ಆದುದರಿಂದ ತನ್ನ ಬಯಕೆಯನ್ನು ಹೇಳಿಕೊಂಡರೆ ನಾಚಿಕೆ ಕೇಡಾಗಬಹುದೆಂದು ಅವನ್ನು ಹೇಳಲಾರದೆ ಆಕೆಯು ಮನಸ್ಸಿನಲ್ಲಿಯೇ ಕೊರಗುತ್ತ ಬಡವಾದಳು. ಆಕೆಯ ನಂಟರು ಇವಳು ಬಡವಾದುದನ್ನು ನೋಡಿ ತಾವು ಬಯಕೆಯನ್ನು ತಂದು ಕೊಡುವುದಾಗಿಯೂ ಏನುಬೇಕೋ ಅದನ್ನು ಕೇಳಬಹುದೆಂದೂ ಹೇಳಿದರು. ಆದರೆ ಯಜ್ಞದತ್ತೆ ಮಾತ್ರ ನಿಜಸ್ಥಿತಿಯನ್ನು ಹೇಳದೆ ತನಗೆ ಒಳ್ಳೆಯ ಮಾವಿನ ಹಣ್ಣಿನಮೇಲೆ ಬಯಕೆಯಾಗಿದೆಯೆಂದು ಹೇಳಿದಳು. ಆಗ ಮಾವಿನ ಹಣ್ಣಿನ ಕಾಲವಲ್ಲದುದರಿಂದ ಎಲ್ಲೆಲ್ಲಿ ಹುಡುಕಿದರೂ ಅದು ಸಿಕ್ಕಲಿಲ್ಲ. ಕೊನೆಗೆ ಸೋಮದತ್ತನೂ ಅವನ ಶಿಷ್ಯರೂ ಬಲವಾಹಿನಿ ಯೆಂಬ ನದಿಯ ಹತ್ತಿರ ಒಂದು ತೋಟದಲ್ಲಿ ಮಾವಿನ ಹಣ್ಣುಗಳು ಬಿಟ್ಟಿದ್ದುದನ್ನೂ ಅದರ ಕೆಳಗೆ ಸುಮತಿಭಟ್ಟಾರಕರೆಂಬ ಯತಿಗಳು ಇದ್ದುದನ್ನೂ ಕಂಡರು. ಈ ಅಕಾಲದಲ್ಲಿ ಫಲವಾಗಿದ್ದುದು ಅವರ ತಪಃಫಲದಿಂದಲೇ ಎಂದು ನಿಶ್ಚಯಿಸಿ ಅವರ ಮುಂದೆ ಬಂದುನಿಂತರು. ಆಗ ಯತಿಗಳು ಸಹಸ್ರಾರಕಲ್ಪದಲ್ಲಿ ಸೂರ್ಯಾಭವೆಂಬ ವಿಮಾನವನ್ನು ವರ್ಣಿಸುತ್ತಿದ್ದರು. ಇದನ್ನು ಕೇಳಿದಕೂಡಲೆ ಸೋಮದತ್ತನಿಗೆ ತಾನು ಹಿಂದಿನ ಜನ್ಮದಲ್ಲಿ ಆ ವಿಮಾನದಲ್ಲಿ ಸೂರ್ಯಪ್ರಭನೆಂಬ ದೇವನಾಗಿ ಹುಟ್ಟಿದ್ದುದು ಜ್ಞಾಪಕಕ್ಕೆ ಬಂದಿತು. ಕೂಡಲೆ ಸೋಮದತ್ತನು ಪುಳಕಿತನಾಗಿ ಹೋಗಿ ಎಚ್ಚತ್ತು ಆ ಮುನಿಗಳಿಗೆ ವಂದಿಸಿ ತನ್ನ ಹೆಂಡತಿಯು ಎಲ್ಲ ವಸ್ತುಗಳನ್ನೂ ಬಿಟ್ಟು ಮಾವಿನ ಹಣ್ಣನ್ನು ಬಯಸಿದುದಕ್ಕೆ ಕಾರಣವನ್ನು ಕೇಳಿದನು. ಅವರು, ಆಕೆಯ ಗರ್ಭದಲ್ಲಿದ್ದ ಮಗುವು ಜಿನಭಕ್ತನಾಗಿದ್ದನೆಂದೂ ಅವನ ಬಯಕೆಯೇ ಆಕೆಯ ಬಯಕೆಯಾಗಿದ್ದಿತೆಂದೂ ಅದನ್ನು ತಿಳಿಸಲಾರದೆ ಮಾವಿನ ಹಣ್ಣು ಬೇಕೆಂದಳೆಂದೂ ಹೇಳಿದರು. ಅನಂತರ ಸೋಮದತ್ತನು ಮಾವಿನ ಹಣ್ಣುಗಳನ್ನು ತನ್ನ ಶಿಷ್ಯರೊಡನೆ ಹೆಂಡತಿಗೆ ಕಳುಹಿಸಿಕೊಟ್ಟು ತಾನು ವೈರಾಗ್ಯ

ದಿಂದ ಜಿನದೀಕ್ಷೆಯನ್ನು ಪಡೆದು ನಾಭಿಗಿರಿಗೆ ತಪಸ್ಸಿಗಾಗಿ ಹೊರಟು ಹೋದನು

ಇತ್ತ ಯಜ್ಞದತ್ತೆಯು ಒಂದು ಗಂಡುಮಗುವನ್ನು ಹೆತ್ತಳು. ಆ ಮಗುವಿಗೆ ಶ್ರೀವತ್ಸನೆಂದು ಹೆಸರಿಟ್ಟರು. ಕೆಲವುಕಾಲದಮೇಲೆ ಸೋಮದತ್ತನು ನಾಭಿಗಿರಿಯಲ್ಲಿದ್ದ ವರ್ತಮಾನವು ತಿಳಿಯಲು ಯಜ್ಞದತ್ತೆಯೂ ಇತರ ಬಂಧುಗಳೂ ಹೇಗಾದರೂ ಅವನ ತಪಸ್ಸನ್ನು ಕೆಡಿಸಿ ಅವನನ್ನು ಕರೆದುಕೊಂಡು ಬರಬೇಕೆಂದು ನಾಭಿಗಿರಿಗೆ ಹೋದರು. ಆದರೆ ಸೋಮದತ್ತನು ಅಚಲನಾಗಿದ್ದನು ಇದನ್ನು ಕಂಡು ಅವನ ಬಂಧುಗಳೆಲ್ಲರೂ ಮಗುವನ್ನು ಅವನಮುಂದೆ ಹಾಕಿ ಹೊರಟುಹೋದರು

ಅತ್ತ ಅಮರಾವತಿಯಲ್ಲಿದ್ದ ಶಂಭುವೆಂಬ ವಿದ್ಯಾಧರರಾಜನು ತನ್ನ ಹಿರಿಯಮಗನಾದ ಭಾಸ್ಕರದೇವನಿಗೆ ಯೌವರಾಜ್ಯವನ್ನು ಕೊಟ್ಟು ತಾನು ತಪಸ್ಸಿಗೆ ಹೊರಟುಹೋದನು. ಭಾಸ್ಕರದೇವನ ತಮ್ಮನಾದ ಮಂದರದೇವನು ವಿದ್ಯಾಬಲದಿಂದ ಅಣ್ಣನನ್ನು ಗದ್ದು ಅವನನ್ನು ಓಡಿಸಿದನು. ಭಾಸ್ಕರದೇವನು ತಮ್ಮನೊಡನೆ ಹೋರಾಡಲಿಷ್ಟವಿಲ್ಲದೆ ತನ್ನ ಮೈದುನನಾದ ವಿಪುಳಮಹಾರಾಜನ ಹತ್ತಿರ ಬಂದು ನಿಂತನು ಒಂದುದಿವಸ ಭಾಸ್ಕರದೇವನೂ ಅವನ ಹೆಂಡತಿ ಮಣಿಮಾಲೆಯೂ ವಿಮಾನದಲ್ಲಿ ಹೋಗುತ್ತ ಸೋಮದತ್ತ ಮುನಿಯನ್ನು ಕಂಡು ವಂದಿಸಿ ಅವನಮುಂದೆ ಮಲಗಿದ್ದ ಮಗುವನ್ನು ಕರೆತಂದು ಅದಕ್ಕೆ ವಜ್ರಕುಮಾರನೆಂಬ ಹೆಸರಿಟ್ಟು ಸಾಕುತ್ತಿದ್ದರು ವಜ್ರಕುಮಾರನು ಪ್ರಾಪ್ತವಯಸ್ಕನಾಗಲು ಅವನಿಗೂ ವಿಪುಳಮಹಾರಾಜನ ಮಗಳಾದ ಇಂದುಮತಿಗೂ ಮದುವೆಯಾಯಿತು. ಒಂದುದಿನ ಅವರಿಬ್ಬರೂ ವಿಮಾನದಲ್ಲಿ ಹೋಗುತ್ತಿರಲು ಪವನವೇಗೆಯೆಂಬ ವಿದ್ಯಾಧರೆಯನ್ನು ಒಂದು ಹಾವು ನುಂಗುತ್ತಿದ್ದಿತು. ವಜ್ರಕುಮಾರನು ಅವಳನ್ನು ಬಿಡಿಸಿದನು. ಅದಕ್ಕೆ ಪ್ರತಿಯಾಗಿ ಅವಳು ಅವನಿಗೆ ನಾನಾವಿದ್ಯೆಗಳನ್ನು ಕೊಟ್ಟಳು. ಅವುಗಳ ಸಹಾಯದಿಂದ ವಜ್ರಕುಮಾರನು ಅಮರಾವತೀನಗರದಲ್ಲಿ ಆಳುತ್ತಿದ್ದ ಮಂದರದೇವನನ್ನು ಸೋಲಿಸಿ ಅಲ್ಲಿ ಸುಖವಾಗಿ ಆಳುತ್ತಿದ್ದನು. ತಾನು ಹಿಂದೆ ಹಾವಿನ ಬಾಯಿನಿಂದ ಬಿಡಿಸಿದ ಪವನವೇಗೆಯು ಸ್ವಯಂವರದಲ್ಲಿ ಇವನನ್ನೇ

ಪರಿಸಿದಳು. ಒಂದು ದಿವಸ ವಜ್ರಕುಮಾರನು ತಾನು ಹುಟ್ಟಿ ಬಳೆದ ವೃತ್ತಾಂತವನ್ನು ಅರಿತು ವೈರಾಗ್ಯವನ್ನು ತಾಳಿ ಸೋಮದತ್ತ ಭಟ್ಟಾರಕರಲ್ಲಿಗೆ ಬಂದು ದೀಕ್ಷೆಯನ್ನು ಪಡೆದು ತಪಶ್ಚರ್ಯೆಗೆ ಆರಂಭಿಸಿದನು.

ಅವನು ತಪಸ್ಸಿಗೆ ನಿಂತ ಊರಿನಲ್ಲಿ ಪೂತಿವಾಹನನೆಂಬ ರಾಜನು ಆಳುತ್ತಿದ್ದನು. ಅವನ ಪಟ್ಟದರಸಿಯಾದ ಓಹಿಲೆಯೆಂಬಾಕೆಯು "ಫಾಲ್ಗುನದ ನಂದೀಶ್ವರದಂದು" ಎಂದಿನಂತೆ ಜಿನಪೂಜೆಯನ್ನು ಮಾಡಬೇಕೆಂದಿದ್ದಳು. ಆದರೆ ರಾಜನ ಪ್ರಿಯ ಪತ್ನಿಯಾದ ಬುದ್ಧದಾಸಿಯು ಬುದ್ಧನ ಉತ್ಸವವನ್ನು ಹೊರಡಿಸಿದಳು. ಇದರಿಂದ ಓಹಿಲೆಗೆ ಅವಮಾನವಾಗಲು ಆಕೆಯು ಸೋಮದತ್ತ ಮುನಿಯಲ್ಲಿಗೆ ಬಂದು ಹೇಗಾದರೂ ತನ್ನ ಇಷ್ಟಸಿದ್ಧಿಸುವಂತೆ ಮಾಡಬೇಕೆಂದು ಪ್ರಾರ್ಥಿಸಿದಳು. ಆತನು ವಜ್ರಕುಮಾರ ಮುನಿಯಿಂದ ಆಕೆಯ ಕೆಲಸವು ಆಗುವುದೆಂದು ಧೈರ್ಯ ಹೇಳಿದನು. ಅದರಂತೆ ಆಕೆಯು ವಜ್ರಕುಮಾರನಿದ್ದೆಡೆಗೆ ಹೋಗಿ ಅವನನ್ನು ಪ್ರಾರ್ಥಿಸಲು ಆತನು ಅಮರಾವತಿಯಲ್ಲಿದ್ದ ಭಾಸ್ಕರ ದೇವನ ಹತ್ತಿರಕ್ಕೆ ಹೋಗಿ ಅವನೂ ಇತರ ವಿದ್ಯಾಧರರೂ ತನ್ನೊಡನೆ ಬಂದು ಓಹಿಲೆಯು ನಡೆಸಬೇಕೆಂದಿರುವ ಜಿನಪೂಜೆಯನ್ನು ನಡೆಸಬೇಕೆಂದು ಕೇಳಿಕೊಂಡನು. ಅದರಂತೆ ಎಲ್ಲರೂ ಬಂದು ಎಂಟುದಿವಸದ ವರೆಗೆ ಜಿನಪೂಜೋತ್ಸವಗಳನ್ನು ಮಹಾವೈಭವದಿಂದ ಮಾಡಿಸಿದರು. ಭಾಸ್ಕರದೇವನು ಓಹಿಲೆಯ ಇಷ್ಟಪ್ರಕಾರ "ವಜ್ರಮಯಮಪ್ಪ ಜಿನಪ್ರತಿಮಾವಳಿಗಳಿಂ ತುರುಗಿದ ಸ್ತೂಪಮಂ ದಕ್ಷಿಣಮಧುರಾಪುರದೊಳಿರಿಸಿ" ದನು. ಅದನ್ನು ದೇವತೆಗಳೂ ಪೂಜಿಸುವುದಕ್ಕೆ ಮೊದಲು ಮಾಡಿದರು.

ನವಮಾಶ್ವಾಸಂ.

ಪ್ರಭಾವನೆಯ ಕಥೆ.

ಕುರುಜಾಂಗಣ ವಿಷಯದಲ್ಲಿ ಹಸ್ತಿನಾಪುರವೆಂಬ ಊರು ಇದೆ; ಅದರಲ್ಲಿ ಲಕ್ಷ್ಮೀಮತಿ ಮಹಾದೇವಿಯೆಂಬ ಅರಸಿಯೊಡನೆ ಮಹಾಪದ್ಮ

ನೆಂಬ ಮಾಂಡಳಿಕನು ಆಳುತ್ತಿದ್ದನು. ಅವನಿಗೆ ಪದ್ಮ ವಿಷ್ಣುಕುಮಾರ ಎಂಬ ಇಬ್ಬರು ಮಕ್ಕಳಿದ್ದರು. ಒಂದುದಿನ ಶ್ರುತಸಾಗರರೆಂಬಾಚಾರ್ಯರು ಹಸ್ತಿನಾವತಿಗೆ ಬರಲು ಮಹಾಪದ್ಮನು ಅವರ ಉಪದೇಶವನ್ನು ಕೇಳಿ ವೈರಾಗ್ಯವನ್ನುತಾಳಿ, ತಪಸ್ಸಿಗೆ ಹೋಗುವುದಕ್ಕೋಸ್ಕರ ವಿಷ್ಣುಕುಮಾರನಿಗೆ ಯುವರಾಜ ಪದವಿಯನ್ನು ಕೊಡುವುದಕ್ಕೆ ಹೋದನು. ಆವರೆ ವಿಷ್ಣುಕುಮಾರನೂ ತಪಸ್ಸಿಗೆ ಹೋಗುವುದಕ್ಕೆ ಇಷ್ಟಪಟ್ಟನು. ಆದುದರಿಂದ ಅವರಿಬ್ಬರೂ ದೀಕ್ಷೆಯನ್ನು ಪಡೆದು ತಪಸ್ಸಿಗೆ ಹೊರಟು ಹೋದರು ಪದ್ಮನೇ ರಾಜ್ಯವಾಳುವುದಕ್ಕೆ ತೊಡಗಿದನು.

ಅತ್ತ ಅವಂತಿವಿಷಯದ ಉಜ್ಜಯಿನೀ ಪುರದಲ್ಲಿ ಜಯವರ್ಮ ಮಹಾರಾಜನೆಂಬ ದೊರೆಯು ಆಳುತ್ತಿದ್ದನು. ಅವನಿಗೆ ಬಲಿಯೆಂಬ ಮಂತ್ರಿ ಇದ್ದನು ಈ ಬಲಿಯು ಶುಕ್ರ, ಬೃಹಸ್ಪತಿ, ಪ್ರಹ್ಲಾದ ಎಂಬ ಶಾಸ್ತ್ರ ಪಂಡಿತರಾದ ಒಡಹುಟ್ಟಿದವರೊಡನೆ ಸುಖವಾಗಿದ್ದನು. ಒಂದುದಿನ ಅಲ್ಲಿಗೆ ಐನೂರುಜನ ಋಷಿಗಳನ್ನು ಕರೆದುಕೊಂಡು ಅಕಂಪನಾಚಾರ್ಯರೆಂಬ ಮುನೀಶ್ವರರು ಬಂದರು. ರಾಜನು ತನ್ನ ಮಂತ್ರಿಗಳಿಂದಲೂ ಪರಿವಾರದಿಂದಲೂ ಕೂಡಿ ಅವರಿದ್ದ ಸ್ಥಳಕ್ಕೆ ಹೋಗಿ ಪರಲೋಕ ಜೀವ ಧರ್ಮ ಇವುಗಳು ಉಂಟೇ ಇಲ್ಲವೇ ಎಂದು ಅವರನ್ನು ಪ್ರಶ್ನೆಮಾಡಿದನು. ಅವರು ಉಂಟೆಂದು ಸಿದರ್ಶಿಸಿದರು. ಬಲಿಯು ಇಲ್ಲವೆಂದನು. ಮುಂದೆ ಅವರಿಬ್ಬರಿಗೂ ನಡೆದ ವಾಕ್ಯಾರ್ಥದಲ್ಲಿ ಬಲಿಯು ಸೋತುಹೋದನು. ಅವನ ಮೌರ್ಖ್ಯವನ್ನೂ ಹೀನವಾದ ಮಾತುಗಳನ್ನೂ ನೋಡಿ ಜಯವರ್ಮ ಮಹಾರಾಜನು ಬಲಿಯನ್ನು ಸಪರಿವಾರನಾಗಿ ತನ್ನ ದೇಶದಿಂದ ಹೊರಕ್ಕೆ ಹೊರಡಿಸಿದನು. ಇದಕ್ಕಾಗಿ ನಂಟರಿಷ್ಟರೆಲ್ಲರೂ ಬಲಿಯನ್ನು ಬೈದರು. ಬಲಿಯು ಬಹಳವಾಗಿ ನೊಂದು ತನಗೆ ಅವಮಾನಮಾಡಿದ ಅಕಂಪನಾಚಾರ್ಯರನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿ ಅದನ್ನು ಸಾಧಿಸುವುದಕ್ಕೆ ಪದ್ಮನ ಹತ್ತಿರಕ್ಕೆ ಬಂದು ಅವನ ಆಶ್ರಯದಲ್ಲಿ ನಿಂತನು.

ಒಂದುದಿನ ಸಿಂಹಕೀರ್ತಿಯೆಂಬ ರಾಜನು ಪದ್ಮನ ಸೈನ್ಯವನ್ನು ಸೋಲಿಸಿ ಓಡಿಸಿದನು. ಆಗ ಬಲಿಯು ಅವನಮೇಲೆ ದಂಡೆತ್ತಿ ಹೋಗಿ

ಅವನನ್ನು ಸೋಲಿಸಿ ಸೆರೆಹಿಡಿದುಕೊಂಡು ಬಂದು ಪದ್ಮನಿಗೆ ಒಪ್ಪಿಸಿದನು. ಪದ್ಮನು ಸಂತೋಷಪಟ್ಟು ಬಲಿಗೆ ಒಂದು ವರವನ್ನು ಕೊಡುವುದಾಗಿ ಹೇಳಿದನು. ಬಲಿಯು ಆ ವರವನ್ನು ಆಗಲೇ ತೆಗೆದುಕೊಳ್ಳುವುದಿಲ್ಲವೆಂದೂ ತನಗೆ ಆವಶ್ಯಕವಾದಾಗ ತೆಗೆದುಕೊಳ್ಳುವೆನೆಂದೂ ಅಲ್ಲಿಯವರೆಗೆ ಅದು ರಾಜನಲ್ಲಿಯೇ ಇರಬೇಕೆಂದೂ ಪ್ರಾರ್ಥಿಸಿದನು. ಇದಕ್ಕೆ ರಾಜನು ಒಪ್ಪಿದನು.

ಕೆಲವು ಕಾಲದ ಮೇಲೆ ಅಕಂಪನಾಚಾರ್ಯರು ಆ ಪೂರಿಗೆ ಬಂದು ಚಾತುರ್ಮಾಸ್ಯ ವ್ರತಕ್ಕಾಗಿ ಅಲ್ಲಿ ನಿಂತರು. ಇದನ್ನು ನೋಡಿ ಬಲಿಯು ತನ್ನ ವೈರವನ್ನು ತೀರಿಸಿಕೊಳ್ಳಬೇಕೆಂದು ಉದ್ದೇಶಿಸಿ ಮಹಾರಾಜನನ್ನು ಕುರಿತು ತಾನು ರಾಜನಿಗೂ ದೇಶಕ್ಕೂ ಕ್ಷೇಮವಾಗುವಂತೆ ಒಂದು ದೊಡ್ಡ ಯಾಗವನ್ನು ಕೈಕೊಳ್ಳುವುದಾಗಿಯೂ ಅದು ಮಹತ್ಕಾರ್ಯವಾಗಿದ್ದುದರಿಂದ ಅವನ ರಾಜ್ಯವನ್ನು ಹನ್ನೆರಡು ದಿನದವರೆಗೆ ತನ್ನ ವಶಮಾಡಬೇಕಾಗಿಯೂ ಬೇಡಿಕೊಂಡನು. ಮಹಾರಾಜನು ತಾನು ಮಾತು ಕೊಟ್ಟಿದ್ದಂತೆ ಈ ವರವನ್ನು ಬಲಿಗೆ ಕೂಡಲೇ ಕೊಟ್ಟುಬಿಟ್ಟನು.

ಅನಂತರ ಬಲಿಯು ಅಕಂಪನಾಚಾರ್ಯರಿದ್ದ ಸಿತಗಿರಿಗೆ ಬಂದು ಅಲ್ಲಿ ಭೂಮಿಶೋಧನೆ ಮಾಡಿಸುತ್ತ ಅವರಿದ್ದ ಗುಹೆಯನ್ನು ನೋಡಿ 'ಇದರೊಳಗೆ ಏನಾದರೂ ಕ್ರೂರಮೃಗಗಳು ಸೇರಿಕೊಂಡಿದ್ದರೆ ಓಡಿಹೋಗಲಿ, ಇದರೊಳಗೆ ಪುಳ್ಳೆಯನ್ನು ತುಂಬಿ ಉರಿಹಾಕಿಬಿಡಿ' ಎಂದು ಆಜ್ಞೆ ಮಾಡಿದನು. ಇದನ್ನು ಮಿಥಿಲಾಪುರದಲ್ಲಿದ್ದ ಜಿಷ್ಣುಗಳೆಂಬ ಆಚಾರ್ಯರು ಪರಮಾವಧಿ ಲೋಚನದಿಂದ ತಿಳಿದು ಮುನಿವರರ ಉಪಸರ್ಗವನ್ನು ಕಳೆಯುವುದಕ್ಕೋಸ್ಕರ ತಮ್ಮ ಶಿಷ್ಯನಾದ ವಿಷ್ಣುಕುಮಾರನನ್ನು ಕಳುಹಿಸಿಕೊಟ್ಟರು. ವಿಷ್ಣುಕುಮಾರನು ಪದ್ಮರಾಜನ ಹತ್ತಿರಕ್ಕೆ ಬಂದು ಈ ವರ್ತಮಾನವನ್ನು ತಿಳಿಸಲು ರಾಜನು ಮಹಾಕೋಪಗೊಂಡು ಎಲ್ಲವನ್ನೂ ಧ್ವಂಸಮಾಡುತ್ತೇನೆಂದು ಹೊರಟನು. ವಿಷ್ಣುಕುಮಾರನು ಹಿಂಸೆಯಾಗದಂತೆ ಬಲಿಯನ್ನು ಶಿಕ್ಷಿಸುವ ಭಾರವನ್ನು ತಾನು ತಗೆದುಕೊಂಡು ವಾಮನರೂಪಿನಿಂದ ಬಲಿಯ ಯಜ್ಞಶಾಲೆಗೆ ಹೋದನು. ಅಲ್ಲಿ ಬಲಿ ಮುಂತಾದವರೆಲ್ಲರೂ ಇವನನ್ನು

ಸಾಕ್ಷಾತ್ ವಿಷ್ಣುವೆಂದು ನಂಬಿ ಬಹಳವಾಗಿ ಉಪಚರಿಸಿ ತಮ್ಮಿಂದ ಏನನ್ನಾದರೂ ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು ; ವಾಮನನು ಅವರ ಇಷ್ಟದಂತೆ ಮೂರಡಿ ಭೂಮಿಯನ್ನು ಪ್ರಾರ್ಥಿಸಲು ಬಲಿಯು ಅದನ್ನು ಧಾರೆಯೆರೆದು ಕೊಡುತ್ತಿದ್ದನು. ಆಗ ವಾಮನನ ಕೈಯ ಲ್ಲಿದ್ದ ಶಂಖ ಕುಲಿಶ ಕಮಲ ಮುಂತಾದ ಚಿಹ್ನೆಗಳನ್ನು ನೋಡಿ ಶುಕ್ರನು ಹೆದರಿ ಬಲಿಯನ್ನು ತಡೆಯುವುದಕ್ಕೆ ಪ್ರಯತ್ನಪಟ್ಟನು. ಆದರೆ ಬಲಿಯು ಕೊಟ್ಟಮಾತಿಗೆ ತಪ್ಪಲೊಲ್ಲದೆ ಧಾರೆಯನ್ನು ಎರೆದು ಬಿಟ್ಟನು. ಕೂಡಲೆ ವಾಮನನು ಅದ್ಭುತ ರೂಪನ್ನು ತಾಳಿ ಇದ್ದಸ್ಥಳ ವನ್ನೆಲ್ಲಾ ಎರಡು ಹೆಜ್ಜೆಗಳಿಂದ ಆಳೆದನು. ಮೂರನೆಯ ಹೆಜ್ಜೆಗೆ ಅವಕಾಶವಿಲ್ಲದೆ ಅದನ್ನು ಆಕಾಶದಲ್ಲಿ ತಿರುಗಿಸುತ್ತಿರಲು ದೇವತೆಗಳಿಗೆ ಭಯವೂ ಆಸನಕಂಪವೂ ಆಗಿ ಎಲ್ಲರೂ ಬಂದರು. ಪುಷ್ಪವೃಷ್ಟಿ ಯಾಯಿತು. ದೇವದುಂದುಭಿಗಳು ಮೊಳಗಿದುವು. ಆಗ ಇಂದ್ರನ ಅಪ್ಪ ಣೆಯಂತೆ ದೇವಕುಮಾರರು ಬಲಿಯನ್ನು ಮೆಟ್ಟಿಗಟ್ಟಿ ಹಸ್ತಿನಾಪುರ ದಿಂದ ಹೊರಕ್ಕೆ ಹಾಕಿದರು. ಋಷಿಗಳೂ ಸೌಧರ್ಮೇಂದ್ರಾದಿಗಳೂ ಅಕಂಪನಾಚಾರ್ಯರ ಗುಹೆಯ ಬಾಗಿಲಲ್ಲಿದ್ದ ಕಸವನ್ನೂ ಕಿಚ್ಚನ್ನೂ ನಂದಿಸಿ ಅವರಿಗೆ ಪ್ರಾಪ್ತವಾಗಿದ್ದ ಉಪಸರ್ಗವನ್ನು ತಪ್ಪಿಸಿದರು. ವಿಷ್ಣುಕುಮಾರನು ನಿಜರೂಪನ್ನು ತಾಳಲು ದೇವತೆಗಳೆಲ್ಲರೂ ಅವ ನನ್ನು ಹೊಗಳಿ ತಮ್ಮ ಲೋಕಕ್ಕೆ ಹಿಂತಿರುಗಿ ಹೊರಟು ಹೋದರು. ಪದ್ಮಮಹಾರಾಜನೂ ಅವನನ್ನು ಪೂಜಿಸಿ ಧರ್ಮದಲ್ಲಿ ದೃಢಚಿತ್ತನಾದನು.

"ಕುಸಿಯದೆ ಪೆಱರಱಿಪಂ ಬಿಂ
ತಿಸುವಂ ತಾನಱಿಗುಮಂತ ತೊದಱಿಲ್ಲದೆ ಬಿಂ ।
ತಿಸುವಾತಂ ಪೆಱಗೊಪ್ಪಂ
ವಸುಮತಿಯೊಳ್ ತಾನೆ ಸಿರಿಗೆ ನೆರೆಯಾಗಿರ್ಕುಂ ॥"

ಶೋಧನಪತ್ರ.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
1	12	ರವುಳಿ	ರವುಳ
4	2	ಪೊರವುಣಿಸು	ಪೊೞವುಡಿಸು
,,	4	ಸ್ವಾಮಿಗಳಿ	ಸ್ವಾಮಿಗಳ
,,	,,	ಪರಮೇಷಿ	ಪರಮೇಷ್ಠಿ
6	14	ದ್ಧಾಂತ	ದ್ಧಾಂತ
8	4	ಶರಭತ್ರ್ಯ	ಶರಭರ್ ತ್ರ್ಯ
,,	23	ಕೂಪಲಾರಐದ	ಕೂಪಲಾಱದ
10	22	ಬಿಟ್ಟುರವಿ ಪೆಱರಾರ್ಕ್ಕಂ	ೞಟ್ಟುರವಿಕ್ಕಂ ಪೆಱರಾಱ
18	3	ಟೊಳ್ತ್ತಾಗುವ	ಜೊಳ್ತ್ತಾಗುವ
,,	7	ನೆಱಿ	ನೆಱೆ
20	15	ಪುತ್ರನುಮುಂ	ಪುತ್ರನುಮಂ
30	14	ಮುಚ್ಜರಿಸುವ	ಮುಚ್ಚರಿಸುವ
58	17	ಉಳಿಯೆ	ಉೞಿಯೆ
60	14	ನೀಮಂಬೆಜೇಡ	ನೀಮಂಜಬೇಡ
63	4	ಕೆಡಿಸಿದಂ	ಕಿಡಿಸಿದಂ
67	10	ಕನಿಷ	ಕನಿಷ್ಠ
94	10	ತತಣ	ತತ್ಕ್ಷಣ
,,	12	ಕೆಡಿಸಿ	ಕಿಡಿಸಿ
98	8	ಪಾರ	ಪೌರ
104	9	ನೋಷತ್ತ್ರಂ	ನೋತುತ್ತ್ರಂ
107	13	ರಣೆಲ್ಲಂಬೀ	ಶರಣೆಲ್ಲಂಬೀ
,,	14	ಮೊಹೋದಯಂ	ಮೋಹೋದಯಂ
108	8	ಧೃವ	ಧ್ರುವ
109	1	ನೆತ್ತ್ರಱಿಂ	ನೆತ್ತ್ರರಿಂ
,,	23	ಎಂದು	3 ಎಂದು

ಪುಟ.	ಪಙ್ಕ್ತಿ	ಅಶುದ್ಧ.	ಶುದ್ಧ.
112	18	ತಿವಿನ	ತ್ರಿವಿನ
157	7	ದಾರಣ್ಯ	ದಾರಣ್ಯಾ
187	15	ಳಂಕಾರ	ಸಾಳಂಕಾಯು
138	21	,,	,,
232	12	ಜಿವಂಗಳಂ	ಜೀವಂಗಳಂ
317	4	ಇತೀ	ಇಂತೀ
447	13	ಬಿಲಿ	ಬಲಿ
455	1	ವಿಷುಣ	ಜಿಷ್ಣು

ಶ್ರೀ

ನಯಸೇನ ವಿರಚಿತಂ

ಧರ್ಮಾಮೃತಂ.

ಶ್ರೀರಾಮಾರಮಣೀಯಪಾದಸರಸೀಜಾತಂ ನಿಲಿಂಪೇಂದ್ರವೃಂ
ದಾರಾಧ್ಯಂ ಭುವನತ್ರಯಪ್ರಭು ವಿನೇಯಾನೀಕಕಲ್ಪದ್ರುಮಂ ।
ಧೀರಂ ನಿತ್ಯನನಂತನಕ್ಷಯಸುಖಂ ಮುಕ್ತ್ಯಂಗನೇಶಂ ಜಗ
ತ್ಸಾರಂ ವೀರಜಿನೇಂದ್ರನೀಗೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ॥ ೧

ಪುದಿದೆಂಟುಂ ಕರ್ಮಬಂಧಂ ಪಱಿವಡೆ ಕಿಡದೆಂಟುಂ ಗುಣಂ ಪೊರ್ದೆ ಲೋಕಾ
ಗ್ರದೊಳೇರಂತೊಪ್ಪಿ ನಿಂದಚ್ಯುತರಜಿತರಮೂರ್ತರ್ಪ್ರಣೂತರ್ಸುಸೌಖ್ಯಾ
ಭ್ಯುದಯರ್ನಿತ್ಯರ್ಜಗನ್ಮಂಗಳರಮಳಗುಣೋತ್ತುಂಗರುದ್ಧೂತಲೇಪ
ರ್ಮುದದಿಂ ಸಿದ್ಧರ್ಸ್ವಕೀಯಪ್ರಭುತೆಯನೆಮಗಂ ಮಾಳ್ಕೆ ಕಾರುಣ್ಯದಿಂದಂ ॥ ೨

ವರಪಂಚಾಚಾರದೊಂದುನ್ನತಿಯೊಳವರೆ ಲೋಕೋತ್ತಮರ್ವಿಶ್ವಸತ್ವೋ
ತ್ಕರಮಂ ರಕ್ಷಿಪ್ಪುಪಾಯಕ್ಕವರೆ ಧರಣಿಯೊಳ್ ಸಜ್ಜನರ್ಪ್ರಸ್ತುತರ್ಭೂ।
ಸುರಮುವ್ವತ್ತಾಱುಮತ್ಯುತ್ತಮಗುಣದೊಳವರ್ತಾಮೆಸತ್ಪೂಜ್ಯರೆಂಬಂ
ತಿರೆ ಮಿಕ್ಕಾಚಾರ್ಯವರ್ಯರ್ಕರುಣದಿ[1] ನಘನಿರ್ಮುಕ್ತರಂ ಮಾಡುಗೆಮ್ಮಂ ॥

[1] ನಘದೂರೀಕೃತಂ ಮಾಡುಗೆಂದುಂ; (ಕ)

ನುತಭವ್ಯಾನೀಕನೀಳಾಂಬುರುಹಮಲರೆ ಮಿಥ್ಯಾತ್ವಸೂರ್ಯಾಂಶು ಕುಂ
ದಲ್
ಶ್ರುತದುಗ್ಧಾಂಬೋಧಿ ಪೆರ್ಚಲ್ಜಿನನಿಗದಿತತತ್ತ್ವಾಂಶು ಪರ್ವಲ್ಸುರತ್ನ ।
ತ್ರಿತಯಾದ್ರೀಂದ್ರಾಗ್ರದೊಳ್ ಶೋಭಿಸುವನಘರುಪಾಧ್ಯಾಯತಾರಾಧಿಪ
ರ್ಸಂ
ತತಮುಸ್ಮಚ್ಚಿತ್ತಗೇಹಾಂತರವಿಮಳತೆಯಂ ಮಾಲ್ಕೆ ವಾಗ್ಜ್ಯೋತಿಯಿಂ
ದಂ॥ ೪

ಮನದೊಳ್ಕೈಗೆಣ್ಮಿ ಪೊಣ್ಮುತ್ತಿರೆ ದಯೆ ಮಂಚಾರಿತ್ರದೊಳ್ಪರ್ಚೆ ಶೀಲಂ
ಜಿನಪಾದಾಂಭೋಜದೊಳ್ತಳ್ತಿರೆ ಮತಿ ಜಿನತತ್ತ್ವಾಬ್ಧಿಯೊಳ್ ಸಂತತಂ ಭಾ
ವನೆ ಮತ್ತೋಲಾಡೆ [1] ಕರ್ಮಾರಿಯನದಟಲೆ [2] ವಾಸಂದವೀರರ್ತಪಶ್ರೀ
ವನಿತಾಳಂಕಾರರಪ್ಪಿಂದಪಹರಿಸುಗೆ [3] ದುರ್ಮೋಹಮಂ ಸಾಧುವ
ರ್ಗಂ ॥ ೫

ಶತಪತ್ರಾನನ ಜೈನಧರ್ಮಕುಲಿಶಪ್ರಾಕಾರ ಮಿಥ್ಯಾತ್ವಪ
ರ್ವತವಜ್ರಾಭ ಸಮಸ್ತಭವ್ಯಜನಚಿತ್ತಾಪ್ಲಾದ ಲೋಕೈಕಸಂ ।
ಸ್ತುತೆ ಧರ್ಮಪ್ರಿಯೆ ಕೋಮಲಾಂಗಿ ವಿಲಸನ್ಮಾಂಗಲ್ಯಸದ್ಧರ್ಮಸಂ
ಯುತೆ ಸಿದ್ಧಾಯಿಸಿ ಯಕ್ಷಿ ಮಾಳ್ಕೆ [1] ನುತಮತ್ಕಾವ್ಯಕ್ಕೆ ನಿರ್ವಿಘ್ನಮಂ ॥

ವರಲಕ್ಷಣಾಂಗನರ್ಹ
ಚ್ಚರಣಾಂಬುಜಮಧುಪನನುಪಮಂ ಗುಣರತ್ನಾ ।
ಭರಣಂ ಗಜಮುಖಯಕ್ಷಂ
ಸಿರುತಂ ರಕ್ಷಿಸುಗೆ ಕೂರ್ತು ಭವ್ಯೋತ್ತಮರಂ ॥ ೭

ಕುಂದದ ಕೋಮಲಾಂಗರುಚಿಯಿಂ ಚೆಲುವಿಂಗೆಡೆಯಾಗಿ ವೃತ್ತದೊಂ
ದಂದದೊಳಿರ್ದ ಪೆರ್ಮೊಲೆಯಿನಂತೆಸೆದೊಪ್ಪುವನೇಕಛಂದದೊಂ ।

1 ಕಾವನಿರ (ಕ) 2 ದೋರಂತೆಧೀರ (ಬ) 3 ದುಷ್ಕರ್ಮಮಂ (ಕ)
4 ಮುದದಿಂ, (ಬ)

ದಂವದ ಯಾನದೊಂದು ರಮಣೀಯತೆಯಿಂ ಕಡುಗಾಡಿವೆತ್ತ ವಾ
ಕ್ಸುಂದರಿ ಕೂರ್ತು ನಿಲ್ಕೆ ನಯಸೇನಮುನೀಂದ್ರಮುಖಾಬ್ಜಷಂಡ
ದೊಳ್ ॥ ೮

[ದುರಿತೇಂಧನಾನಲರ್ಭಾ
ಸುರಕೀರ್ತಿಪತಾಕರಮಳಗುಣನಿಕರಕ್ಕಾ ।
ಗರರರ್ಹದ್ಬಲ್ಯಾಚಾ
ರ್ಯರೆ ಜಗದೊಳನಿಂದ್ಯರದಱನೆಮಗಭಿವಂದ್ಯರ್] ॥ ೯

ಪ್ರಕಟಯಶರ್ಗುಣನಿಧಿಗ
ಳ್ಸಕಳಧರಾವಳಯಪೂಜಿತ ರ್ಸು[1] ಶ್ರುತರ ।
ಕ್ಷಕರೆನೆ ಗುಣಧರಭಟ್ಟಾ
ರಕರೆ ವಲಮನಿಂದ್ಯರದಱನೆಮಗಭಿವಂದ್ಯರ್ ॥ ೧೦

ವರ್ಯರೆನಿಪಾರ್ಯಮಂಕ್ಷು[2]
ಚಾರ್ಯರ ನೆಗೞ್ದರ್ ನಾಗಹಸ್ತ್ಯಾಚಾರ್ಯ ।
ದ್ಯಾರ್ಯರ ನುತಯತಿವೃಷಭಾ
ಚಾರ್ಯರ ಪದಕಮಲಮೀಗೆ ಶಾಶ್ವತ[3] ಪದಮಂ ॥ ೧೧

ಧೈರ್ಯಯುತ[4] ರ್ಧರಸೇನಾ
ಚಾರ್ಯರ್ಭೂತಬಲಿಪುಷ್ಪದಂತಾಚಾರ್ಯರ್ ।
ವರ್ಯರ್ಭವ್ಯಾಂಭೋರುಹ
ಸೂರ್ಯರ್ದಯೆಗೆಯ್ಗೆ ವಿಮಳರತ್ನತ್ರಯಮಂ ॥ ೧೨

ವರ್ಯರ್ಲೋಕೋತ್ತಮರ್ಭಾವಿಸುವೊಡನಘರತ್ಯುನ್ನತರ್ಕೊಂಡಕುಂ
ದಾ
ಚಾರ್ಯರ್ಚಾರಿತ್ರರತ್ನಾಕರರಧಿಕಗುಣರ್ಸಜ್ಜಟಾಸಿಂಹನಂದ್ಯಾ ।

---

1 ವ್ರತ (ಬ) 2 ಪಿಂಛಾ. (ಗ) 3 ಸುಖಮುಂ, (ಬ)
4 ಸಿದ್ಧಸೇನಾ, (ಬ) ತರ್ವರ (ಗ)

ಚಾರ್ಯಶ್ರೀಕೂಚಿಭಟ್ಟಾರಕರುದಿತಯಶರ್ಮಿಕ್ಕ ಪೆಂಪಿಂಗೆ ಲೋಕಾ
ಶ್ಚರ್ಯನಿಷ್ಕರ್ಮರೆಮ್ಮಂ ಪೊರಮಡಿಸುಗೆ ಸಂಸಾರಕಾಂತಾರದಿಂ
ದಂ ॥ ೧೩

ಶ್ರೀಮತ್ಸಮಂತಭದ್ರ
ಸ್ವಾಮಿಗಳ ನೆಗಳ್ತೆವೆತ್ತ ಕವಿಪರಮೇಷ್ಠಿ ।
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಬೋಧೋದಯಮಂ ॥ ೧೪

[ಶ್ರೀಮದ್ವಿದ್ಯಾನಂದ
ಸ್ವಾಮಿಗಳ ಸಮಸ್ತಶಾಸ್ತ್ರವಾರಾಶಿಗಳ ।
ನ್ನೀಮಾತೊ ಸಕಳಶಾಸ್ತ್ರದೊ
ಳೀಮಹಿಯೊಳನಂತವೀರ್ಯದೇವರೆ ದೇವರ್] ॥ ೧೫

ಕ್ಷಿತಿಪೂಜ್ಯಸಿದ್ಧಸೇನವ್ರತಿಪತಿನುತವಾಕ್ಶ್ರೀವಧೂಕರ್ಣಪೂರರ್
ಶ್ರುತಕೀರ್ತ್ಯಾಚಾರ್ಯರುರ್ವೀವಳಯವ್ಯಾಪ್ತಯಶೋರಾಶಿಗಳ್ ಕರ್ಮ
ಸಂದೋ ।
ಹತಮಃಪ್ರಧ್ವಂಸನೈಕದ್ಯುಮಣಿಗಳಮಳಶ್ರೀಪ್ರಭಾಚಂದ್ರದೇವರ್
ಜಿತಮಾರರ್ಬೊಪ್ಪದೇವರ್ವಿದಿತಸಕಲವಿದ್ಯಾಬ್ಧಿತಾರಾಧಿನಾಥರ್ ॥ ೧೬

ನಿರುಪಮರೇಳಾಚಾರ್ಯರ
ನಿರತಿಶಯರ್ವೀರಸೇನಜಿನಸೇನಾಚಾ ।
ರ್ಯರ ಗುಣಭದ್ರಭಚಂದ್ರರ [1]
ಚರಣಯುಗಂ ಮಾಡುಗೆಮಗೆ ನಿರ್ವೃತಿಸುಖಮಂ ॥ ೧೭

ಪರಮಜಿನಾಗಮಾಂಬುನಿಧಿಪಾರಗರೂರ್ಜಿತಗಂಡ [2] ಮಂಡಳೇ
ಶ್ವರನುತಪಾದಪಂಕರುಹರುನ್ನತಕೀರ್ತಿಪತಾಕರಿಂದ್ರ [3] ಭೂ ।

---

[1] ಧಂತರ (ಗ)   [2] ಗಂಧ (ಬ)   [3] ರುಂದ್ರ (ಗ)

ಧರನಿಭಧೈರ್ಯಧುರಂಗಜನ್ಯಸೋಮದೇಭಟ್ಟರರ್ ಸದ್ಗುಣಾ
ಭರಣರೆನಿಪ್ಪ ಪೆಂಪಜಿತಸೇನಮುನೀಶ್ವರನೊಳ್ ವಿರಾಜಿಕುಂ ॥ ೧೮

ಅನುಪಮಗುಣನಿಳಯರ್ ಮೇ
ದಿನಿಪೂಜ್ಯರ್ ಸೋಮದೇವಪಂಡಿತರಮಳರ್ ।
ಮುನಿವೃಷಭರ್ ವಿನತತ್ರಿಭು
ವನದೇವರ್ ವಿಬುಧವನಜವನಕಳಹಂಸರ್ ॥ ೧೯

ಪಡೆದೊಡೆ ತಪಮಂ ಶ್ರುತಮಂ
ಪಡೆಯರ್ ತಚ್ಛ್ರುತಮನೆಯ್ದೆ ಪಡೆದೊಡೆ ತಪಮಂ ।
ಪಡೆಯರದಂತವನೆರಡುಮ
ನೊಡವಡೆದ ನರೇಂದ್ರಸೇನಮುನಿಪನೆ ಧನ್ಯಂ ॥ ೨೦

ಎನಿತೊಳವು ತರ್ಕಶಾಸ್ತ್ರಮ
ವನಿತುಮನತಿಶಯದಿನೆಸೆಯೆ ನಯಸೇನಮುನೀಂ ।
ದ್ರನೆ ಬಲ್ಲನೆಂದು ಧಾರಿಣಿ
ಮನದಾದರದಿಂದೆ ಪೊಗಟೆ ಕೀರ್ತಿಯನಾಂತಂ ॥ ೨೧

ಶಾಂತಮೂರ್ತಿಗಳಗ್ರಕರ್ಮಹರರ್ ದಿವಾಕರಣಂದಿಸಿ
ದ್ಧಾಂತದೇವರುದಗ್ರಮನ್ಮಥವೈರಿಗಳ್ ಶುಭಚಂದ್ರಸಿ ।
ದ್ಧಾಂತದೇವರುದಾತ್ತಚಾರುಚರಿತ್ರರೀಧರೆಯೊಳ್ ಮನೋ
ಜಾಂತಕರ್ ಮುನಿವಂದಿತರ್ ಗುಣವಾರ್ಧಿಗಳ್ ಮದವರ್ಜಿತರ್ ॥ ೨೨

ಮಂತಣಮೇಂ ಶ್ರುತದಿಂ ಗುಣ
ದಿಂ ತಪದಿಂ [1] ರಾಮಣಂದಿಸಿದ್ಧಾಂತಿಗಳ್ ।
ರ್ದಂತೆ ಪೆಱಪೆಱರನಂತಿಂ
[2] ತುಂತೆಂದೇನೆಂದು ಬಣ್ಣಿಪರ್ ಜಡಮತಿಗಳ್ ॥ ೨೩

---

1 ಮಾಘಣಂದಿ (ಖ. ಗ) 2 ತುಂತೆಂಪಮಂ ಬಣ್ಣಿಪರ್ ಜಡಮತಿರ
ಹಿತರ (ಖ

ನುತಸಿದ್ಧಾಂತದೊಳೊಪ್ಪುವೆತ್ತ ಜಿನಸೇನಾಚಾರ್ಯರಿಂ ಶಾಸ್ತ್ರದು
ನ್ನತಿಯೊಳ್ ಭಾವಿಸೆ ಪೂಜ್ಯಪಾದಮುನಿಯಿಂ ಷಟ್ತರ್ಕದೊಳ್ಧಾರಿಣೀ
ಸ್ತುತನಾಗಿರ್ದ ಸಮಂತಭದ್ರಮುನಿಯಿಂ ಮಿಕ್ಕಿರ್ದನುದ್ವೃತ್ತಪ
ಶ್ಶ್ರುತವಾರಾಶಿನರೇಂದ್ರಸೇನಮುನಿಪಂ ತ್ರೈವಿದ್ಯಚಕ್ರೇಶ್ವರಂ ‖ ೨೪

ಪ್ರೌಢವೀಶಭುರ್ವನೈಕಮಲ್ಲನುತಪಾದಾಂಭೋಜರತ್ಯೂರ್ಜಿತರ್
ದೃಢಚಿತ್ತರ್ ಗುಣಚಂದ್ರಪಂಡಿತರಿಳಾಲೋಕೈಕಪೂಜ್ಯರ್ಮನಂ ।
ಬಿಡೆ ತ್ರೈವಿದ್ಯಮಹಾಭಿಧಾನಮನದಂ ಕೂರ್ತಬ್ಕಿಱಿಂ ಕೊಟ್ಟರೆಂ
ದೊಡೆ ತ್ರೈವಿದ್ಯನರೇಂದ್ರಸೇನಮುನಿವೋಲ್ವಾಗ್ಮಿಕ್ರಿಯೇಶರಾಲೋಕ
ದೊಳ್ ‖ ೨೫

ಘೇರೆಂಡಪಂಡಿತರ್ವಾ
ಕ್ಷೀರಮಣರ್ಮಾಸುಪೂಜ್ಯಸಿದ್ಧಾಂತೇಶರ್ ।
ಮೇರುನಗಕ್ಷಮರವನೀ
ಶಾರಾಧ್ಯರ್ಮುನಿಕದಂಬವನಮಾಕಂದರ್ ‖ ೨೬

[ಕಂತುವಿರೋಧಿಕಿಲ್ಬಿಷಗಜಾಧಿಪಕೇಸರಿಪದ್ಮಣಂದಿಸೈ
ದ್ಧಾಂತಮುನೀಂದ್ರರಂತವರಶಿಷ್ಯರನಂತಗುಣರ್ಚತುಷ್ಕಷಾ ।
ಯಾಂತಕರುಗ್ರಕರ್ಮಹರಣಶ್ರುತವಾರಿಧಿಮೇಘಚಂದ್ರಸಿ
ದ್ಧಾಂತಮುನೀಂದ್ರರಿಂದ್ರಧರಣೀಧ್ರನಿಭಕ್ಷಮರೀಡ್ಯಸತ್ಕ್ರಮರ್ ‖ ೨೭

ಯತಿವಂದಿತಕ್ರಮರ್ದು
ಷ್ಕೃತದೂರರ್ಮಾಘಣಂದಿಸೈದ್ಧಾಂತಿಗಳೂ ।
ರ್ಜಿತರವನಿಪೂಜ್ಯರತ್ಯು
ನ್ನತಪ್ರಭಾಚಂದ್ರಸೇನಸೈದ್ಧಾಂತೇಶರ್ ‖ ೨೮

ಅವರಿವರೊಳ್ಳಿದರೆಂಬೀ
ಬವರದೊಳೇನರ್ಹಣಂದಿಭಟ್ಟಾರಕರು ।
ದ್ಭವಚಾರುಚರಿತರೆನಲೀ
ಭುವನಂ ಕೈಮುಗಿಯೆ ಗಣಕೆ ಮೌಲಿಗಳಾದರ್ ‖ ೨೯

ಒದವಿದ ಕವಿತೆಯ ವಾಗ್ಮಿ
ತ್ವದ ಗಮಕದ ವಿಬುಧತತಿಗೆ ರಂಜಿಪ ವಾದಿ ।
ತ್ವದ ಬಲ್ಮೆಗೆ ಸಕಲಕಲಾ
ಭ್ಯುದಯಶ್ರುತಕೀರ್ತಿದೇವನಲ್ಲವೆ ದೇವಂ ॥ ೩೦

ಖಳಕರ್ಮ ಜಲಧಿಬಡಬಾ
ನಳರುದ್ಧತವಾದಿನಿಕರಧರಣೀಧರಸಂ ।
ಕುಳಕುಳಿಶರಮಳಗುಣಗಣ
ನಿಳಯಶ್ರುತವಾರ್ಧಿರಾಮಸಿಂಹಬುಧೇಂದ್ರರ್ ॥ ೩೧

ಪರಮಜಿನೇಂದ್ರಾಗಮಸಾ
ಗರಚಂದ್ರರ್ವಾಸುಪೂಜ್ಯಭಟ್ಟಾರಕರು ।
ರ್ವರೆ ಪೊಗೞೆ ಗುಣಗಣಕ್ಕಾ
ಗರಮಾಗಲ್ಧರೆಗೆ ಚಾರುಸೇನಾಚಾರ್ಯರ್ ॥ ೩೨

ಅಳವಟ್ಟುಗ್ರೋಗ್ರತಪೋ
ನಳನಿಂ ದುರಿತೇಂಧನಂಗಳಂ ಸುಟ್ಟು ತಪೋ ।
ಜ್ಜ್ವಳಮೆಪ್ಪ ಕುಕ್ಕುಟಾಸ
ಮಳಧಾರಿಮುನೀಂದ್ರರವನಿತಳಸಂಸ್ತುತ್ಯರ್ ॥ ೩೩

ಅಗಣಿತಮೆನಿಸುವ ಗುಣದಿಂ
ನೆಗತ್ತೆವಡೆದಿರ್ದ ಶಾಸ್ತ್ರತರ್ಕಾಗಮದಿಂ ॥
ಜಗತೀವಳಯಂ ಬಣ್ಣಿಸೆ
ನೆಗೞ್ದರ್ ತ್ರೈವಿದ್ಯಮೇಘಚಂದ್ರಮುನೀಂದ್ರರ್ ॥ ೩೪

ಪರಲಿಂ ಮುದ್ರಿಕೆ ವಜ್ರದಿಂ ಕುಲಿಶಮಾತಾರೇಶನಿಂ ರಾತ್ರಿ ಭಾ
ಸ್ಕರನಿಂದಂಬರಚಕ್ರಮಾಮ್ರತರುವಿಂದುದ್ಯಾನಮುರ್ವೀಶರಿಂ ।
ಧರೆ ಪಂಕೇಜದಿನೊಳ್ಗೊಳಂ ಬುಧನುತ [1] ಶ್ರೀರಾಮಸೇನವ್ರತೀ
ಶ್ವರನಿಂ ನಿರ್ಮಳಜೈನಧರ್ಮಮೆ ವಲಂ ರಮ್ಯಂ ಮಹೀಚಕ್ರದೊಳ್ ॥

[1] ಶ್ರೀರಾಮಚಂದ್ರ (ಬ)

ಪರವಾದಿಘನಾಘನನಿ
ಷ್ಠುರಪವನರ್ಜೈನಸಮಯದುಗ್ಧಾಬ್ಧಿನಿಶಾ |
ಕರರುಗ್ರಕರ್ಮಗಜರಿಪು
ಶರಭರ್ತೈವಿದ್ಯಕನಕನಂದಿಮುನೀಂದ್ರರ್] ೩೬

ವಿವಿಧಮುನಿಸಮಿತಿ ಗಣಧರ
ನಿವಹಂ ಯತಿಪತಿಮುನೀಂದ್ರನಿಕರಂ ಮಾಳ್ಕು |
ತ್ಸವದಿಂ ಭವ್ಯಸಮೂಹ
ಕ್ಕವಿತಥಸಮ್ಯಕ್ತ್ವರತ್ನಮಂ ದಯೆಯಿಂದಂ || ೩೭

[ನಿರವದ್ಯಜಿನಸಮಯಾಂ
ಬರಹಿಮಕರರಖಿಳವಿಬುಧಜನಸಂಸ್ತುತ್ಯರ್ |
ಧರೆಯೊಳಕಳಂಕದೇವರೆ
ಪರಮಾರ್ಥಂ ನೋಡೆ ಸಕಲವಿದ್ಯಾಂಬುಧಿಗಳ್] || ೩೮

ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ |
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿಮನಂಗೊಳೆ ಮತ್ಕೃತಿಯೊಳ್ನಿರಂತರಂ || ೩೯

ರಸಭಾವಂ ಗಮಕಂ ಕಾ
ಣಿಸೆ ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ |
ಕುಸುಮುಖಿಯ ಬಗೆಯಿಂದಿನಿತಜೊ
ಳಸೆಯದ ಕೃತಿ ಕೃತಿಯೆ ಬಗೆದು ನೋಳ್ಪೊಡೆ ಜಗದೊಳ್ ||೪೦

[ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ |
ತಿಸಿ ಕೂಡಲಾರದಕ್ಕಟ
ವಿಸುಕದ ಸಕ್ಕದಮನಿಕ್ಕುವವನುಂ ಕವಿಯೇ] || ೪೧

ಸಕ್ಕದಮುಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ಧಗನ್ನಡದೊಳ್ತಂ ।
[1] ದಿಕ್ಕುವುದೇ ಸಕ್ಕದಮಂ
ತಕ್ಕದೆ ಬೆರಸಲ್ಕೆ ಘೃತಮುಮಂ ತೈಲಮುಮಂ ॥ ೪೦

'[ಪರಿಣತರೆನಿಸುವ ನಿರ್ಮ
ತ್ಸರರಂ ಮೆಚ್ಚಿಪುದು ಗಹನಮಲ್ಲದು ಜಡರಂ ।
ಕರಮಱಿವು ತಿಳಿಪಲೆಂತೆನೆ
ಖರಕರನಂ ಗೂಗೆಗೆಯ್ದೆ ತೋರ್ಪಂತಕ್ಕುಂ ॥ ೪೧

ಮಂಡೂಕಂ ಶರನಿಧಿಯುಂ
ಕಂಡಱಿಯದೆ ಪಳಗುಮಬ್ಧಿಗದು ಭಂಗಮೆ ಪೇೞ್ ।
ಖಂಡಿಸೆ ಕುಕವಿಸಮೂಹಂ
ಪಂಡಿತರಪ್ಪವರ್ಗೆ ಭಂಗಮಕ್ಕುಮೆ ಜಗದೊಳ್ ॥ ೪೨

ಪೊಲ್ಲಮೆಗಂಡದನಱಿದುಂ
ಮೆಲ್ಲನೆ ಸಯ್ತಾಗೆ ತಿರ್ದುವೆಸುಕವೀಶರ್ ।
ಪೊಲ್ಲಮೆಯಿಲ್ಲದೊಡಂ ಲೇ
ಸಲ್ಲದು ಕೃತಿಯೆಂದು ಕುಕವಿನಿಕರಂ ಪಳಗುಂ ॥ ೪೩

ಇಲಿಗಂ ಮರಕುಟವಕ್ಕಿಗೆ
ಮಲಸದೆ ಕರ್ದುಕುತ್ತೆ ಕಡಿಯುತಿರ್ಪುದೆ ಸಹಜಂ ।
ಸಲೆ ಚದಲಂಗಂ ಕುಕವಿಗ
ಮಲಸದೆ ತೆಗಳ್ವುದುವೆ ಸಹಜಮುಮೆಱಿಂತೆ ಕರಂ] ॥ ೪೪

ನವಿಲಾಟಂ ಸೊಗಯಿಸುವುದು
ವಿವೇಕಿಯಪ್ಪಂಗೆ ನಾಯ್ಗೆ ಸೊಗಯಿಸ-ವುದೆ ಸ ।

---

[1] ದಿಕ್ಕುವುದಿಸದಂಗಳ (ಕ), ದಿಕ್ಕುವುದೇಕೆಪದಂಗಳ (ಖ)

ತ್ಕವಿಯು ಬಗೆಗೊಳ್ಪು ಪುಗುವವೊ
ಲವಿವೇಕಿಯ ಮನಮನೊಳ್ಪುದೇಂ ಪೊಕ್ಕಪುದೇ ॥ ೪೭

ಅಡಕಿಲ ಮಡಕೆಗಳಂ ಸ
ಯ್ತಿಡಲಱಿವುವೆ ನಾಯ್ಗಳೊಡೆವುವಲ್ಲದೆ ಕೃತಿಯಂ ।
ಕಿಡೆನುಡಿವರಲ್ಲದೇಂ ಜಡ
ರೊಡಂಬಡಲ್ತಿದ್ದಿನುಡಿಯಬಲ್ಲರೆ ಕಪಿವೊಲ್ ॥ ೪೮

ಮಡೆಯಿಲ್ಲದೆ ಪೊಯ್ನೀರಿಂ
ಬೆಳಗುಮೆ ಧರೆ ಮುೞುಗಿ ಕುದಿದು ಶಾಸ್ತ್ರದ ಬಲದಿಂ ।
ದಳಪಿಂ ಪೇೞ್ದೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ॥ ೪೯

ಉಪ್ಪಿಲ್ಲದೆ ಕೇಳೊಕ್ಕಳ
ತುಪ್ಪವನೆಱೆದುಣ್ಬೆನೆಂಬೊಡುಂಬುಣಿಸೇಂ ಸ್ವಾ ।
ದಪ್ಪುದೆ ಸಹಜಂ ತನಗಿನಿ
ಸಪ್ಪೊಡಮಿಲ್ಲದನ ಕವಿತೆ ರುಚಿವಡೆದಪುದೇ ॥ ೫೦

ಮುನಿದಪರೆಂಬುದೊಂದುಭಯಮೆಳ್ಳನಿತಪ್ಪೊಡಮೊಂದುಮಿಲ್ಲ ಸ
ಜ್ಜನರೊಳದೇಕವರ್ಪುರುಡಿಪರ್ಮುನಿವರ್ಕಡುದುಷ್ಟರಪ್ಪವರ್ ।
ಮುನಿದೊಡೆ ರಾಗದಿಂದೊಸೆದೊಡಂ ಕಡುಪೊಲ್ಲದಱಿಂದಮಂಜಿ ದು
ರ್ಜನಪರಮೇಶ್ವರರ್ಗಱಿದು ಕೈಮುಗಿವೆಂ ಬಲಗೊಂಡು ಭಕ್ತಿಯಿಂ ॥

ಪಱಗೋಲೊಳ್ ವಾರ್ಧಿಯ ತಡಿ
ಗುಱದೆ ಭರಂಗೆಯ್ದು ಪೋಪೆನೆಂಬಗ್ಗನವೊಲ್ ।
ನೆಱೆ [1] ಜಿನವಾಕ್ಯಾಂಬುಧಿಯುಮ
ನುಱದೀಸುವೆನೆಂಬ [2] ದಿಟ್ಟರೆಮಿ ಪೆಱರಾರ್ಕ್ಕಂ ॥ ೫೨

ತರಣಿ ಬೆಳಗಲ್ಪಂಪೇಕೆಂದಿರ್ದುವೇ ಭಗಣಂ ಸುರ
ದ್ವಿರದಮಿರಲಿಂ ಸೊರ್ಕೇಕೆಂದಿರ್ದುವೇ ಪೆಱವಾನೆಗಳ್ ।

---

1 ಜಿನರಾಗಮವಾರ್ಧಿ (ಗ)   2 ದುಷ್ಟ (ಬ, ಕ)

ಪರಮಕವಿಗಳ್ ಸಾಲ್ವರ್ತಾವೆಂದು ಮೊಣದೆ ಪೇಳ್ವೆನಾ
ದರದಿ [1] ನೊಲವಿಂದರ್ಥೀ ದೋಷಂ ನಪಶ್ಯತಿ ಯೆಂಬಿನಂ ॥೫೩॥

ಮಱೆದಾನುಂ ಜಿನನಾಮಮಂ ಸುಮನದಿಂ ಪೇಳ್ವಾತನುಂ ದುಃಖಮಂ
ಕಿಱಿದುಂ ಪೊರ್ದದನಂತಮಪ್ಪ ಸುಖದೊಳ್ ಕೂಡಿರ್ಪನೆಂದಂದು ತ ।
ಳ್ತುಱೆ ಪುಣ್ಯೋದಿತಮಪ್ಪ ತಚ್ಚರಿತಮಂ ಕಾವ್ಯಂಗಳೊಳ್ ಭಕ್ತಿಯಿಂ
ನೆಱೆ ಪೇಳ್ವಾತನ ಕರ್ಮನಿರ್ಜರೆಯನಂತಿಂತುಂತೆನಲ್ಬರ್ಕುಮೋ ॥೫೪

ಜಿನಮತದೊಳನಿತುಸಾರಮ
ದನಿತುಂ ಲೇಸಾಗಿ ತೋರ್ಪುದೀಕೃತಿಯೊಳದೆಂ ।
ತೆನೆ ಕನ್ನಡಿಯೊಳಗೆ ಜಬ
ಕ್ಕನೆ ತೋರ್ಪವೊಲಿಭಗ ರೂಪು ವಿಸ್ತಾರದಿಂದಂ ॥ ೫೫

ಗುರು ವಿದ್ಯಾಬ್ಧಿನರೇಂದ್ರಸೇನಮುನಿಪಂ ತ್ರೈಲೋಕ್ಯಚಕ್ರೇಶ್ವರಂ
ಪರಮಶ್ರೀಜಿನನಿಷ್ಟದೈವನಮಳಂ ಶ್ರೀಜೈನಯೋಗೀಶ್ವರರ ।
ಪರಮಾರ್ಥಂ ತನಗಾಳ್ದರುತ್ತಮವಿನೇಯರ್ಬಂಧುವರ್ಗಂ ನಿಜಾ
ದರದಿಂದೆಂದೊಡೆ ಭೂಪು ಧನ್ಯನ [2] ದಿಟಂ ವಾತ್ಸಲ್ಯರತ್ನಾಕರಂ ॥ ೫೬

ಸ್ಥಿರವಾಕ್ಯಂ ಸುವ್ರತಾಂಭೋನಿಧಿ ಸಕಲಜಗತ್ಪಾವನಂ ರಾಜಪೂಜ್ಯಂ
ಪರಮಶ್ರೀಜೈನಧರ್ಮಾಂಬರದಿನಕರನುದ್ವೃತ್ತಪ್ರೋಮೂರ್ತಿವಾಣ್ಯಾ ।
ಭರಣಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ॥ ೫೭

ಮಾನಿತಶೀಲನಿಧಾನನ
ನೂನಗುಣಂ ಸಕಳಭವ್ಯಜನಬುಧಜನಚಿ ।
ತ್ತಾನಂದಕರಂ ಕೇಳ್ಗೊಯು
ಸೇನಬುಧಂ ಸುಕವಿನಿಕರಪಿಕಮಾಕಂದಂ ॥ ೫೮

---

1 ಬಗೆವಂದರ್ಥ (ಗ)   2 ಬ ಬ್ಬುಧನ್ವನೆ (ಗ)

ಅತಿಶಯಜಿನೇಂದ್ರವಚನಾ
ಮೃತಮಂ ಸಕಲೈಕಜೀವಹಿತಮಂ ಪುಣ್ಯೋ |
ದಿತಮಂ ಭವ್ಯನಿಕಾಯ
ಸ್ತುತಮಂ ನೆಱೆ ಪೇೞ್ವೆನಱಿಯೆ ಧರ್ಮಾಮೃತಮಂ ‖ ೫೯

ಅದು ಮತ್ತಂತೆಂದೊಡಿಂದ್ರಪ್ರಣುತಪದಯುಗಂ ಮೋಕ್ಷಲಕ್ಷ್ಮೀವಿ |
ಳಾಸಂ
ಮದನೇಭೇಂದ್ರೋಗ್ರಕಂಠೀರವನಮಳಯಶಂ ನಿರ್ಮಳಂ ಸರ್ವಸೌಖ್ಯಾ
ಭ್ಯುದಯಂ ಶ್ರೀವೀರನಾಥಂ ನೆಲಸಿರೆ ವಿಪುಳಾದ್ರೀಂದ್ರದೊಳ್ ಶೋಭೆಯಿಂ
ಮು
ತ್ತಿದ ದೇವಾನೀಕದಿಂ ಸುತ್ತಿದ ಖಚರನರಾಧೀಶಸಂದೋಹದಿಂದಂ ‖ ೬೦

[ಅಂತಿರ್ದಾ ತ್ರಿಜಗನ್ಮಹೀಶಸಭೆಯೊಳ್ ಭವ್ಯಾಳಿಗಂ ಚಂದ್ರನೆಂ
ಬಂತೊಪ್ಪಿರ್ದ ಸಮಸ್ತಶಾಸ್ತ್ರವಿದರಂ ಧರ್ಮೋಪದೇಶಜ್ಞರಂ |
ಮುಂತಾಗೌತಮರಂ ಮುನೀಂದ್ರನುತರಂ ಸದ್ಭಕ್ತಿಯಿಂ ಶ್ರೇಣಿಕಂ
ಸಂತೋಷಂ ಮಿಗೆ ಕೂರ್ತು ಕೇಳ್ದನಧಿಕಶ್ರೀಗಾರ್ಮವಂ ಧರ್ಮ
ಮಂ] ‖ ೬೧

ಅಂತಾಗಿರೀಂದ್ರದೊಳ್ಚರಮತೀರ್ಥಕರಪರಮದೇವರ ಸಮವಸರಣಂ ಬಂದು ನೆಲಸಿರ್ದುದನಱಿದು ಋಷಿನಿವೇದಕಂ ಷಡೃತುಫಲಂಗಳನಾಶ್ಚರ್ಯಮಪ್ಪಂತೆ ಶ್ರೇಣಿಕಮಹಾರಾಜಂಗೆ ಕಾಣ್ಕೆಗೊಟ್ಟು ಸರ್ವಾಂಗಪ್ರಣತನಾಗಿ ಕೈಮುಗಿದು ದೇವಾ ನಮ್ಮ ವಿಪುಳಗಿರಿಯೊಳ್ ಶ್ರೀವೀರವರ್ಧಮಾನಸ್ವಾಮಿಗಳ ಸಮವಸರಣಂ ಬಂದು ನೆಲಸಿರ್ದುದೆಂದು ಬಿನ್ನಪಂಗೆಯ್ಯಲೊಡನೆ ಕೇಳ್ದು ಸಿಂಹಾಸನದಿಂದಿಳಿದತ್ತಲೇಳಡಿಯಂ ನಡೆದು ವಿನಮಿತಶಿರಸ್ಕನಾಗಿ ಋಷಿನಿವೇದಕಂಗೆ ಪೂರ್ಣಾನಂದಪುರಸ್ಸರ[1] ಮಂಗಚಿತ್ತಮಂ ಕೊಟ್ಟಾನಂದಭೇರಿಯಂ ಪೊಯ್ಸಿ ಪಡೆವಳನಂ ಬರಿಸಿ ಬೀಡೆಲ್ಲಮರ್ಚನಾದ್ರವ್ಯಂಬೆರಸು ಪೂಜೆಮಾಡುವಂತೆ ಸಾರೆಂದು

1 ತುಷ್ಟಿದಾನಪುರಸ್ಸರಂ (ಗ)

ನಿಯಮಿಸಿ ತಾನುಂ ಚೇಳನಿಮಹಾದೇವಿಯುಂ ಪಟ್ಟವರ್ಧನಗಜೇಂದ್ರಮನೇಱಿ ಸಪರಿವಾರಂ ವಿಪುಳಾದ್ರಿಯನೆಯ್ದಿ ದೂರೋತ್ಸಾರಿತವಾಹನಂ ವಿಚಿತ್ರಾತಪತ್ರಪ್ರಮುಖರಾಜಚಿಹ್ನಂಗಳಂ ಬಿಟ್ಟು ಸಮವಸರಣಮನೆಯ್ದಿ ಗಂಧಕುಟಿಯುಮಂ ತ್ರಿಃಪ್ರದಕ್ಷಿಣಂಗೆಯ್ದು [1] ಪರಮೇಶ್ವರನ ಪಾದಪದ್ಮಂಗಳಂ ದಿವ್ಯಾರ್ಚನೆಗಳಿಂದರ್ಚಿಸಿ ತ್ರೈಲೋಕ್ಯಸ್ವಾಮಿಗಭಿಮುಖನಾಗಿ ನಿಂದು ಮುಕುಳಿತಕರಕಮಳನುಂ ವಿಕಸಿತಹೃತ್ಕಮಳನುಮಾಗಿ ॥ ೬೦

ದುರಿತತಿಮಿರಪ್ರಭಾವಂ
ಪರಿಹರಿಪುದು ದೇವ ನಿನ್ನ ಮುಖಚಂದ್ರಮನಿಂ ।
ತ್ವರಿತಂ ನೋಡಲದೆಂತುಂ
ದೊರೆಕೊಳ್ವುದು ವೀರಜಿನಪ ನಿರ್ವೃತಿಸೌಖ್ಯಂ ॥ ೬೧

ಎಂದನೇಕಸ್ತುತಿಸಹಸ್ರಂಗಳಿಂ ಸ್ತುತಿಯಿಸಿ ನಿರ್ಭರಭಕ್ತಿಯಿಂದೆಱಗಿ ಪೊಡೆಮಟ್ಟು ಶ್ರೇಣಿಕಮಹಾರಾಜಂ ಜ್ಞಾನರ್ಧಿಸಂಪನ್ನರಪ್ಪ ಗೌತಮಸ್ವಾಮಿಗಳ್ಗೆ ಪೊಡೆಮಟ್ಟು ಮುಕುಳಿತಕರಕಮಳನುಮಾಗಿ ॥ ೬೨

ತಿರಿಯನಾರಕಮಾನವಾಮರಲೋಕದೊಳ್ ನೆಲೆಗೊಂಡು ನಿ
ತ್ತರಿಸದೆಲ್ಲಿಯುಮೆಲ್ಲಿಗಲ್ಲಿಗೆ ಪುಟ್ಟಿ ರಾಟಳದಂದದಿಂ ।
ತಿರಿವ ಸಂಸೃತಿದುಃಖದಿಂ ಪೊಱಮಟ್ಟು ಶಾಶ್ವತಸೌಖ್ಯದೊಳ್
ನೆರೆವುಪಾಯಮನಕ್ಕೆಯಿಂ ಬೆಸಸಲ್ಕೆವೇೞ್ಕು ಮುನೀಶ್ವರಾ ॥ ೬೩

ಎನೆ ನಯದಿಂ ಚತುರ್ವಿಧಸುರಾಳಿ ಶಿರೋನತರಾಗಿ ಹಸ್ತಕೋ
ಕನದಯುಗಂಗಳಂ ಮುಗಿಯೆ ದಂತಮರೀಚಿ ಸುಧಾಂಶುರಶ್ಮಿಯುಂ ।
ತನುಪಮಮಾಗಿ ಶೋಭಿಸಿರೆ ಸರ್ವಜನಸ್ತುತರಪ್ಪ ಗೌತಮರ್ ।
ಮನಧಿಗಭೀರದಿಂನುಡಿದರಾಪ್ತಮುಖೋದ್ಗತಮಪ್ಪ ತತ್ವಮಂ ॥ ೬೪

---

[1] ಭಗವಜ್ಜಿನೇಂದ್ರಶ್ರೀಪಾದ. (ಗ)

ನೀಂ ಬೆಸಗೊಂಡ ಚತುರ್ಗತಿಚ್ಛೇದಮುಂ ಜಾತಿಜರಾಮರಣ ದೂರಮುಂ ಸಾರಮುಮಪ್ಪ ನಿರಂತರಸುಖಂ [1] ಮುಕ್ತಿಯೊಳಲ್ಲದೆ ದೊರೆಕೊಳದಾಮುಕ್ತಿಯುಂ ತ್ರಿಜಗನ್ಮಾಂಗಲ್ಯಮಪ್ಪ ಸಮ್ಯಗ್ದರ್ಶನದಿಂದಲ್ಲದೆ ಸಮನಿಸದಾಸಮ್ಯಗ್ದರ್ಶನಮುಂ ಕರಣಲಬ್ಧಿಯಿಲ್ಲದೆ ಕೂಡದಾಸಮ್ಯಗ್ದರ್ಶನಮಿಲ್ಲದೆ ನಿರಂತರಸ್ಥಾಯಿಯುಪ್ಪ ಮುಕ್ತಿಶ್ರೀಯುಂ ಪಡೆವೆನೆಂಬಾತಂ [2] ಕಣ್ಣಿಲ್ಲದೆ ಕಾಣ್ಬೆನೆಂಬ, ಮಣ್ಣಿಲ್ಲದೆ ಬೆಳೆವೆನೆಂಬ, ಸತಿಯಿಲ್ಲದೆ ಸುತರಂ ಪಡೆವೆನೆಂಬ, [3] ಮತಿಯಿಲ್ಲದೆ ಪರದುಗೆಯ್ವೆನೆಂಬ, ಕೇರಿಲ್ಲದೆ ಚಿತ್ರಮಂ ಬರೆವೆನೆಂಬ, ನೀರಿಲ್ಲದೆ ಕೂಳನಡುವೆನೆಂಬ, ಅಂಬಿಲ್ಲದೆ ಬಿಲ್ವಿಡಿವೆನೆಂಬ, ತೂಬಿಲ್ಲದೆ ಕೆಱೆಯಂ ಕಟ್ಟುವೆನೆಂಬ, ಕಾಲಿಲ್ಲದೆ ಪರಿವೆನೆಂಬ, ಕೀಲಿಲ್ಲದೆ [4] ಪಡಿದೆಱೆವೆನೆಂಬ, ಛತ್ರಮಿಲ್ಲದೆ ಸಮುದ್ರದೊಳ್ಪೋಪೆನೆಂಬ, ಗೋತ್ರಮಱಿಯದೆ ಕೂಸುಗುಡುವೆನೆಂಬ, ಕಿವಿಯಿಲ್ಲದೆ ಕೇಳ್ವೆನೆಂಬ, ಸವಿಯಿಲ್ಲದುಣ್ಬೆನೆಂಬ, ಕೆಯ್ಯಿಲ್ಲದೆ ಬೇಲಿಯಿಕ್ಕುವೆನೆಂಬ, [5] ಬಾಗಿಲಿಲ್ಲದೆ ಪೊಗುವೆನೆಂಬ, [6] [ಧನಮಿಲ್ಲದಧಿಕನೆಂಬ, ವಾಹನಮಿಲ್ಲದೇರುವೆನೆಂಬ,] ನಾಲಗೆಯಿಲ್ಲದೆ ನುಡಿವೆನೆಂಬ, ಪಱುಗೋಲಿಲ್ಲದೆ ತೊಱೆಯುಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ, ಇಂತು ‖ ೬೭

ವರಚಕ್ರವರ್ತಿಪದವಿಗ
ಮುರುಗೀರ್ವಾಣಾಧಿಪತಿಯ ಸದ್ವಿಭವಕ್ಕಂ [7] ।
ಪರಮಾರ್ಹಂತ್ಯಪದಕ್ಕಂ
ಪರಮಾರ್ಥಂ ಶುದ್ಧದರ್ಶನಂ ಮೊತ್ತಮೊದಲ್ ‖ ೬೮

---

1 ಗತಿದೂರಮುಂ ಸಾರಮುಮಪ್ಪ ಶಾಶ್ವತಸುಖಂ (ಗ)

2 ನಿರಂತರಂ ಸುಖಂಬಡೆವನೆಂಬಾತಂ (ಗ)

3 ಅಂಗಡಿಯಿಲ್ಲದೆ (ಗ)   4 ಪಡಿಯಂ ಕಿಱುವ (ಬ ಪ್ರ.) ಪಡಿಗೇರುವೆ (ಗ)

5 ಕ್ಯಯಿಲ್ಲದೆ ಪಿಡಿವೆನೆಂಬ, ನೇಗಿಲಿಲ್ಲದ ಉಳುವೆನೆಂಬ (ಗ)

6 ಮನವಿಲ್ಲದಱಿವೆನೆಂಬ (ಗ)

7 ಸುರರಾಜಸುಖಾಸ್ಪದಕಂ ನರರೊಳಗಗ್ಗಳದ ಚಕ್ರವರ್ತಿತ್ವಕ್ಕಂ (ಕ, ಬ)

ಆದರ್ಶನವೆಂತಪ್ಪುದೆಂದೊಡೆ ॥ ೬೯

ಅಮರ್ದಷ್ಟಾದಶದೋಷವರ್ಜಿತನವಂ ಸರ್ವಜ್ಞ ಸಿಂದ್ರಾರ್ಚಿತ
ಕ್ರಮನನಂತಾತನೆ ಪೇಳ್ದುದಾಗಮಮಿಳಾಲೋಕೈಕಪೂಜ್ಯಂ ತದಾ ।
ಗಮದೊಂದರ್ಥಮೆ ತತ್ವಮೆಂಬು ನಯದಿಂ ಕೈಕೊಂಡು ನಂಬಿರ್ಪುದು
ತ್ತಮ [1] ಸೌಖ್ಯಾನ್ವಿತಮಪ್ಪ ನಿರ್ವೃತಿನುತಶ್ರೀಸ್ಪರ್ಶನಂ ದರ್ಶನಂ ॥ ೭೦

ವಿದಿತಂ ದರ್ಶನಮುಳ್ಳವಂಗೆ ಭವನಜ್ಯೋತಿಷ್ಕರಾವ್ಯಂತರಾ
ಸ್ಪದಮಲ್ಪಾಯುಮನಂಗತಾಪಮಬಲತ್ವಂ ನಿರ್ಧನತ್ವಂ [2] ದುರಾ ।
ಸ್ಪದಭೋಗಾವನಿಜತ್ವಮುಗ್ರನರಕಂ ತಾಮಾಗವೆಂದಂದು ಲೋ
ಕದೊಳಾರ್ಬಣ್ಣಿಪರಣ್ಣ ದರ್ಶನದೊಳಾದೈಶ್ವರ್ಯಮಂ ಸ್ಥೈರ್ಯ
ಮಂ ॥ ೭೧

ಘಟಸಂಘಕ್ಕದಟೆಂತುಟಂತುಟೆ ಮುಖಾಂಭೋಜಕ್ಕೆ ಮೂಗೆಂತುಟಂ
ತುಟೆ ಬಿತ್ತಿಂಗೆಲೆಯೆಂತುಟಂತುಟೆ ಮಹಾಛತ್ರಕ್ಕೆ ಕೀಲೆಂತುಟಂ ।
ತುಟೆ ಕೈಗಂಗುಲಿಯೆಂತುಟಂತುಟೆ ಲಸದ್ದೀಪಕ್ಕೆ ಸಂದೆಣ್ಣೆಯೆಂ
ತುಟುತಾನಂತುಟೆ ದರ್ಶನಂ [3] ಸಕಲಧರ್ಮಕ್ಕಂ ಧರಾಚಕ್ರದೊಳ್ ॥ ೭೨

ಪಟುದೇಹಕ್ಕಸುವೆಂತುಟಂತುಟೆ ಕುಜಾನೀಕಕ್ಕೆ ಬೇರೆಂತುಟಂ
ತುಟೆ ಕಣ್ಗಾಲಿಮದೆಂತುಟಂತುಟೆ ತಟಾಕಕ್ಕೇರಿ ತಾನೆಂತುಟಂ ।
ತುಟೆ ಕಾಲಿಂಗಡಿಯೆಂತುಟಂತುಟೆ ಚಿರಾವಾಸಕ್ಕಧಿಷ್ಠಾನಮೆಂ
ತುಟು ತಾನಂತುಟೆ ದರ್ಶನಂ [1] ಸಕಲಧರ್ಮಕ್ಕಂ ಮಹೀಚಕ್ರದೊಳ್ ॥

ಸುದತಿಯರಿಲ್ಲದೋಲಗದ ಲೀಲೆ ಮನೋಹರಮಪ್ಪ ಪುತ್ರರಿ
ಲ್ಲದ ಮನೆವಾಳ್ತೆ ಸಾರಜಲಮಿಲ್ಲದ ಬಾವಿ ವಿಶೇಷದುರ್ಗಮಿ ।
ಲ್ಲದ ಮಹಿಪಾಲನುಗ್ರತೆ ಜನೋನ್ನತಿಯಿಲ್ಲದ ನಾಡು ಕೂರ್ಮೆಯಿ
ಲ್ಲದ ನಿಜಕಾಂತೆ ಸತ್ವದಯೆಯಿಲ್ಲದ [4] ಧರ್ಮಮದೊಪ್ಪಲಾರ್ಕು
ಮೇ ॥ ೭೪

1 ಸದ್ರತ್ನಮುಮಪ್ಪ (ಗ)   2 ನಿರಾಸ್ಪದ (ಕ)
3 ಸಕಲಸೌಖ್ಯಕ್ಕಂ (ಕ)   4 ಸವ್ಯಕ್ತಮಿಲ್ಲದ (ಗ)

ಕಂಪಿಲ್ಲದ ತುಪ್ಪಮುಂ ಪೆಂಪಿಲ್ಲದ ಪ್ರಭುತ್ವಮುಂ ಸ್ನೇಹಮಿಲ್ಲದ ಕ್ರೋಧಮುಂ ಮೋಹಮಿಲ್ಲದ ಬಾೞುಂ ಭಕ್ತಿಯಿಲ್ಲದ ಕೊಂಡಾಟಮುಂ ಶಕ್ತಿಯಿಲ್ಲದ ಸೆಣಸುಂ ಕೋಡಿಲ್ಲದ ಸಿರಿಯುಂ ನಾಡಿಲ್ಲದರಸುಂ ಫಲಮಿಲ್ಲದ ತೋಟಮುಂ ಕುಲಮಿಲ್ಲದ ಮಹಿಮೆಯುಂ ಬಟ್ಟೆಯಿಲ್ಲದ ಪಯಣಮುಂ ಪಟ್ಟಣಮಿಲ್ಲದ ರಾಜ್ಯಮುಂ ಕಿಚ್ಚಿಲ್ಲದಡುಗೆಯುಂ ನಚ್ಚಿಲ್ಲದ ಪೆಂಡತಿಯುಂ ದಯೆಯಿಲ್ಲದ ನೆಗೞ್ತೆಯುಂ ನಯಮಿಲ್ಲದ ಸೇವೆಯುಂ [1] ಭಂಡಮಿಲ್ಲದಂಗಡಿಯುಂ ಗಂಡನಿಲ್ಲದ ಸತಿಯುಂ ಮೊದಲಿಲ್ಲದ ಪರದುಂ ಮದಮಿಲ್ಲದಾನೆಯುಂ ನೀರಿಲ್ಲದೂರುಂ ಕೇರಿಲ್ಲದ ಮನೆಯುಂ ಶ್ರುತಮಿಲ್ಲದ ತಪಮುಂ ಘೃತಮಿಲ್ಲದೂಟಮುಂ ಸಮ್ಯಗ್ದರ್ಶನಮಿಲ್ಲದ ದಾನಮುಂ ತಪಮುಂ ಜಪಮುಂ ಧರ್ಮಮುಮೊಪ್ಪಲಾರ್ಕುಮೆ ? ॥ ೭೫

ಒದವಿದ ಭೂಪರಿಲ್ಲದಿಳೆ ಭೋಜನಮಿಲ್ಲದ ಬಾಡು [2] ವಸ್ತ್ರಮಿಲ್ಲದ ಬಹುಭೂಷಣಂ ನಯನಮಿಲ್ಲದ ಸೂಳೆ ವಿಶೇಷಲಾಭಮಿಲ್ಲದ ಪರದಬ್ಜಮಿಲ್ಲದ ಕೊಳಂ ಬೆಳಸಿಲ್ಲದ ಧಾತ್ರಿ ರಕ್ಷೆಯಿಲ್ಲದ ನೃಪನಾಳ್ಕೆ ದರ್ಶನದೊಳೊಂದದ ಧರ್ಮಮುಮೊಪ್ಪಲಾರ್ಕುಮೇ ॥ ೭೬

ದುರಿತವಶದಿಂದೆ ತಿರ್ಯಜ
ತಿರಿಯದೆ ಸುಖನಿಳಯಮಪ್ಪ ಮುಕ್ತಿಶ್ರೀಯೊಳ್ ।
ನೆರೆದಿರ್ಪೆನೆಂಬ ಭವ್ಯಂ
ಪರಮಾದರದಿಂದೆ ತಾಳ್ದುವುದು ದರ್ಶನಮಂ ॥ ೭೭

ಆ ದರ್ಶನಸೌಖ್ಯಕ್ಕಷ್ಟಾಂಗಮುಂ ಶರೀರಕ್ಕವಯವಮುಂ ಮರಕ್ಕೆಶಾಖೆಯುಮೆಂತಂತೆ [3] ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಂ ಧರ್ಮಪ್ರಭಾವನೆಯುಮೆಂದು ॥ ೭೮

---

[1] ಸಸಿಯುಂ (ಗ) [2] ಮಾದ್ರ (ಗ) [3] ಸೌಖ್ಯಕ್ಕೆ ತಲೆಯುಂ ಮೂಗುಂ ಬಲದ ತೋಳು ಎಡದತೋಳ್ ಬಲದಕಾಲು ಎಡದಕಾಲು ಮಿರ್ಪಂತೆ (ಗ).

ಎಸೆವಂಗಮೆಂಟಱಿಂ ರಂ
ಜಿಸುವ ಮಹಾನರ್ಘ್ಯಮಪ್ಪ ದರ್ಶನಮಂ ಕಂ ।
ಕಿಸದೆ ತಡೆದಿರದೆ ಕೈಕೊಂ
ಡೆಸಗುಗೆ ತಾಂ ಬಳಿಕಮೈದಣುವ್ರತತತಿಯಂ ॥ ೩೯

ಅವಾವುವೆಂದೊಡೆ ॥ ೪೦

ಕೊಲ್ಲದ ಪುಸಿಯದ ಕಳವಿನಿ
ಸಿಲ್ಲದ ಪರವನಿತೆಯರ್ಗೆ ಪದಪಿಂ ಚಿತ್ತಂ ।
ಸಲ್ಲದ ಪರಿಗ್ರಹಕ್ಕಳ
ವಿಲ್ಲದ ಸುವ್ರತಮಿವೈದುಮಲ್ಲವೆ ರತ್ನಂ ॥ ೪೧

[ಇಂತೀ ಪದಿನಾಲ್ಕುಮನ
ತ್ಯಂತಂ ದೃಢಹೃದಯನಾಗಿ ತಾಳ್ದಿದರ್ಗಂಗೋ ।
ರಂತೆ ನಿರಂತರಸೌಖ್ಯಂ
ಭ್ರಾಂತಿಲ್ಲದೆ ಕೂಡುಗಲ್ಲಿ ಸಂದೆಯಮುಂಟೇ ॥ ೪೨

ಇನಿತುಮನೋರಂತಿರೆ ನೆ
ಟ್ಟನೆ ತಾಳ್ದಿದ ನರನ ಸುಖಮನೇವೊಗಳ್ವುದೊ ಕೇ ।
ಳನಿತರೊಳೊಂದಂ ತಾಳ್ದಿದ
ಮನುಜಂಗಂ ಮುಕ್ತಿಲಕ್ಷ್ಮಿ ಗಹನಮೆ ಧರೆಯೊಳ್] ॥ ೪೩

ಎಂಬುದುಂ ಗಣಧರದೇವರ್ಗೆ ಮಗಧಾವನೀವಲ್ಲಭಂ ಭಕ್ತಿ ಪೂರ್ವಕಂ ವಂದಿಸಿ ನಿಮ್ಮಡಿಯೆನಗೆ ತಿಳಿವಂತಾಗೆ ದರ್ಶನಮುಂ ನಿಶ್ಶಂಕಾದ್ಯಷ್ಟಗುಣಂಗಳುಂ ಪಂಚಾಣುವ್ರತಮುಮೆಂಬ ಪದಿನಾಲ್ಕು ಮಹಾರತ್ನಂಗಳೊಳೊಂದೊಂದಱೊಳ್ ಚರಿಯಿಸಿ ನಿರ್ವೃತಿಯನೆಯ್ದಿದ

ಮಹಾಪುರುಷರ ಕಥೆಗಳಂ ಬೆಸಸಲ್ವೇಳ್ಕುಮೆಂಬುದುಂ ಮೃದುಮಧುರ
ಗಂಭೀರಧ್ವನಿಯಿನಿಂತೆಂದು ಪೇೞಲ್ತಗುಳ್ದರ್[1] ॥ ೧-೪

ಮುದದಿಂದೊಂದೊಂದಱೊಳ್ತಾಗುವ ಜಲಚರಸಂದೋಹದಳ್ಳೇಱಿನಿಂ ಪೊ
ಣ್ಮಿದ ತಚ್ಛೀತಾಂಬುವಿಂ ತಜ್ಜಲದಿನೊಗೆದ ಮುಕ್ತಾಳಿಯಿಂದೆಯ್ದೆ ಶುಭ್ರಂ ।
ಬಾದಮಂ ತಾರಾಳಿಯುಂ ಪ್ರೋಲ್ಲಸೆವನೆಱೆನಭೋಭಾಗದಂತೊಪ್ಪಿ[2] ಸುತ್ತಿ
ರ್ದುದು ಜಂಬೂದ್ವೀಪಮಂ ವಾರಿಧಿ ಕವಯುರಮಂ ಬೀಸಿದಂತಾಗೆ ಚೆಲ್ವಿಂ ॥ ೧-೫

ಆ ಜಂಬೂದ್ವೀಪದ ನಟ್ಟನಡುವೆ ॥ ೧-೬

ಮುದದಿಂ ಜಿನಾಭಿಷೇಕ
ಕ್ಕಿದು ಮಜ್ಜನಪೀಠಮೆನಿಸಿ ಮಹಿಮೆಯಿನೊಪ್ಪಿ ।
ರ್ದುದು ಪೆಂಪಿಂ ತ್ರೈಲೋಕ್ಯಾ
ಭ್ಯುದಯಂ ರಮಣೀಯಮಪ್ಪ ಮಂದರಶೈಲಂ ॥ ೧-೭

ಆ ಮೇರುಗಿರಿಯ ದಕ್ಷಿಣಭಾಗದ ಭರತಕ್ಷೇತ್ರದೊಳ್ ಸೌರಾಷ್ಟ್ರವಿಷಯಮೆಂಬುದು ನಾಡಲ್ಲಿ ॥ ೧-೮

ಜಿನಭವನಾವಳಿಯಿಂದುಪ
ವನದಿಂ ಪೆರ್ಗೆಱೆಗಳಿಂ ಸರೋಜಾಕರದಿಂ ।
ಧನದನ ಪುರದಂತೊಪ್ಪುವು
ದನವರತಂ ಶೋಭೆಯಿಂ ಕರಂ ಗಿರಿನಗರಂ ॥ ೧-೯

---

1 ಇಂತೀದರ್ಶನಮುಂ ದರ್ಶನಾಂಗಮೆಂಟುಮೈದಣುವ್ರತಮೆಂಬ ಪದಿನಾಲ್ಕು ಮಹಾರತ್ನಂಗಳಂ ತಾಳ್ದಿದ ಮಹಾಪುರುಷರ ಮಹಾಮಹಿಮೆಯುಂ ನುಡಿಯುವೇಡ ಮಱೊಳೊಂದನೆ ತಾಳ್ದಿ ನಿರಂತರ ಸುಖಮನೆಯ್ದಿದವರ ಕಥೆಗಳಂ ಕೇಳಿಮೆಂದಿ ತೆಂದಂ (ಗ)

2 ಸೆದಾಗಗನದಂತೊಪ್ಪಿ ಚೆಲ್ವಾಗಿಸುತ್ತಿ (ಗ)

ಆ ಪುರಮನಾಳ್ವಂ ವಿಶ್ವಸೇನನೆಂಬ ಮಹಾಮಂಡಳಿಕನಾತನ ರಾಜಶ್ರೇಷ್ಠಿ ಯನ್ವಯಶುದ್ಧನುಂ ಪ್ರಸಿದ್ಧನುಮಪ್ಪ ದಯಾಮಿತ್ರಸೆಟ್ಟಿ ಯೆಂಬ ಪರದನಿರ್ದನಾತಂ ॥ ೯೦

ಸಿರಿಯೊಳ್ ಕುಬೇರನಂ ತ್ರ
ಸ್ತರಿಯಿಸುವನಹಿಪನೊಡನೆ ಭೋಗಕ್ಕಂ ಮ ।
ಚ್ಚರಿಸುವನುದಾರಗುಣದೊಳ್
ಪುರುಡಿಸುವಂ ಕಲ್ಪವೃಕ್ಷದೊಳ್ ತದ್ವಣಿಜಂ ॥ ೯೧

ಅಂತಳವಿಗಳೆದ ಸಿರಿಯೊಳಮುಪಮೆಗಳೆದ ಭೋಗದೊಳಮ ಪರಿಮಿತಜಿನಭಕ್ತಿಯೊಳಂ ನೆಗೞ್ತೆವೆತ್ತು ಸುಖಸಂಕಥಾವಿನೋದದಿಂ ಪಲವುಕಾಲಂ ಪೋಪುದುಮೊಂದುದಿವಸಂ ತನ್ನೊಳಿಂತೆಂದಂ:— ॥೯೨

ಪುರುಷಂ ಧನಮನಗುಂಟಿಂ
ದಿರಲಾಗದು ದ್ರವ್ಯಮುಳ್ಳೊಡಂ ದ್ರವ್ಯಮನಾ ।
ರ್ಜಿಪುದೇಕೆನೆ [1] ವಿತ್ತಂ ತಾಂ
ದೊರೆಕೊಳೆ ಕೇಳಿಹಪರಂಗಳೆರಡುಂ ಸಾಧ್ಯಂ ॥ ೯೩

ಎಂದು ಪರದುವೋಪೆನೆಂಬ ಬಗೆಯಂ ತಂದು [2] ಯಥೋಚಿತಮಪ್ಪ ಭಂಡಮಂ ಕೊಂಡು ಶುಭದಿನದೊಳ್ ಪೊಱವೀಡಂ ಬಿಟ್ಟು ತನ್ನನಾಶ್ರಯಿಸಿಬರ್ಪವರ್ ಬರ್ಪನ್ನೆವರಮಿರ್ಪನ್ನೆಗಂ, ೯೪

ಕೊರಲ ಪೊಸಜನ್ನಿವರಮೊ
ಪ್ಪಿರೆ ನಿಡುಬೊಟ್ಟೆಸೆಯೆ ದರ್ಭೆ ಕರಮತಿಶಯದಿಂ ।
ಬೆರಳೊಳ್ ರಂಜಿಸೆ ಕಾಶಾಂ
ಬರಮೆಸೆದಿರೆ [3] ಬಂದು ನಿಂದು ಭೂಸುರನೊರ್ವಂ ॥ ೯೫

ವೇದರುಕ್ಕಂ ಪೇೞ್ದಕ್ಷತೆಯನೀವುದುಂ ದಯಾಮಿತ್ರಸೆಟ್ಟಿ ನೋಡಿ ನಿಮ್ಮ ಪೆಸರೇನೆಂದೆತ್ತಣಿಂ [4] ಬಂದಪ್ಪಿರಿನ್ನೆಲ್ಲಿಗೆ ಪೋದಪ್ಪಿರಿಲ್ಲಿಗೇಂ ಕಾರಣಂ ಬಂದಿರೆಂದು ಬೆಸಗೊಳ್ವುದುಂ ಪಾರ್ವನಿಂತೆಂದಂ ೯೬

---

[1] ದ್ರವ್ಯಮನೋಸರಿಸುವುದೆಂತೆನೆ (ಗ) [2] ಉತ್ತರಾಪಥಕ್ಕೆ ಪೋಪುದ್ಯೋಗದಿಂ ಯಥೋ(ಗ) [3] ಶೋಭಾಕರಮಾಗಿರೆ. (ಬ ಕ.) [4] ಬಂದಿರಪ್ಪಿರಿನ್ನೆಲ್ಲಿಗೆ(ಬ)

ವಸುಭೂತಿಯೆಂಬುದೆನ್ನ ಯ
ಪೆಸರುನ್ನತಿವೆತ್ತ ತೆಂಕನಾಡಿಂ ಬಂದೆಂ ।
ವಸುಧೆಗೆಸೆದಿರ್ದ ಗಂಗೆಯ
ನಸಹಾಯನೆಯರ್ತಿವೆರಸು ಮೀಯಲ್ಕೆಂದಾಂ ॥ ೯೭

ಎಂದು ಮುಂದಣಡವಿಯುಪ್ಪುದಱಿಂ [1] ಕ್ರೂರಮೃಗಂಗಳಿಂದಾನುಂ ವನಚರರಿಂದಾನುಂ ಪ್ರಾಣಭಯಮಕ್ಕುಮೆಂದಂಜಿ ನೆರವಂ ಪೊೞಲಿನೊಳಱಸುತ್ತುಮಿರ್ದು ನಿಮ್ಮ ಪೋಗಂ ಪುರಜನಂ ಪೇಳೆ ಕೇಳ್ದು ನಿಮ್ಮ [ನೆರವನಾಶ್ರಯಿಸಿ ಬಂದೆನೆಂಬುದುಂ ಸೆಟ್ಟಿ ಕರಮೊಳ್ಳಿತ್ತು] ಬನ್ನಿಮೆನೆ ವಸುಭೂತಿ, ೯೮

ಕರಮೊಸೆದು ರಾಗದಿಂ ಪೆ
ರ್ಚಿರೆ ಸೆಟ್ಟಿ ಮನೋನುರಾಗದಿಂದೊಡನೆಯುಮರ ।
ಬರೆ ನಯದಿಂ ಪಿರಿದುಬಲಂ
ಬೆರಸು ಮಹೋತ್ಸಾಹಚಿತ್ತದಿಂ ಮಱುದಿವಸಂ ॥ ೯೯

[2] ಮುವ್ವತ್ತಿರ್ವರ್ಪೆಂಡಿರುಮಂ ಬಂಧುಜನಮುಮಂ ಜ್ಯೇಷ್ಠಪುತ್ರನುಮಂ ಕರೆದು, ೧೦೦

[ಸಂತತಂ ಮುನಿಸಂಕುಳಕ್ಕೆಱೆದನ್ನಮಂ ಜಿನಪೂಜೆಗೋ
ರಂತೆ ಬೇಳ್ಪ ಸಮಸ್ತವಸ್ತುವ ಸಾರಿಸಾರಿಗೆ ದಾನಮಂ ।
ಸಂತಸಂ ಮಿಗೆ ನಿಮ್ಮನಾಶ್ರಯಿಸಿರ್ಪ ಭವ್ಯಜನಕ್ಕೆ ನಾ
ನೆಂತುಮಾಡುವೆನೆನ್ನ ಬರ್ಪಿನಮಂತೆ ಮಾಡಿ ನಿರಂತರಂ ॥] ೧೦೧

ಎಂದು ಕೈಮುಗಿದು ಬೇಡಿಕೊಂಡು ಭರದಿಂದೊಪ್ಪೈಸಿ ಪೊಱಮಟ್ಟು ಕಿಱಿದಂತರಮಂ ಬಂದು ಬಂಧುಜನರುಮಂ ತನಯರುಮಂ ರಮಣೀಯುಮಪ್ಪ ಬಹಿರುದ್ಯಾನವನದೊಳ್ ನಿಂದು ಮಗುೞ್ಚಲ್ವೇೞ್ದು

1 ದೀನನುಂ ಕ್ರೂರಮೃಗಗಳಿಂ ವನಚರರಿಂ (ಬ)

2 ಮುವ್ವತ್ತಿರ್ವರ್ಪೆಂಡಿರ್ಗಂ ಬಂಧುಜನಗಳ್ಗಂ ಜ್ಯೇಷ್ಠಪುತ್ರರ್ಗಂ ಪೆಱಗಣ ಧರ್ಮಕಾರ್ಯಮಂ ಕೈಮುಗಿದೊಪ್ಪೈಸಿ ಪಯಣಂಬೋಗುತ್ತುಂ (ಗ)

ಪಯಣಂಬೋಗುತ್ತುಂ ತನಗೆ [ದಿವಸಕ್ಕೆ] ಮೂಱುಗಳಿಗೆವರಂ ಧರ್ಮಶ್ರವಣಮಂ ಕೇಳ್ದಲ್ಲದುಣ್ಣೆನೆಂಬ ವ್ರತಮುಂಟಪ್ಪುದಱಿಂ ಬಿಟ್ಟ ಬೀಡುಗಳೊಳ್ ಸಕಲ ಶ್ರಾವಕರ್ಗೆ ಧರ್ಮಮಂ ಪೇೞ್ವ ದಯಾಮಿತ್ರ ಸೆಟ್ಟಿಯ ಧರ್ಮಶ್ರವಣಕ್ಕೆ ವಸುಭೂತಿ ಕಳಕಳಿಸಿ ನಕ್ಕು ತನ್ನೊಳಿಂತೆಂದಂ॥೧೦೨

ಅಕಟಕಟ ವೈಶ್ಯಜಂ ಭಾ
ವಕನಲ್ಲಂ ಲಜ್ಜೆಗೆಟ್ಟ ಸವಣರ ಮಾತಂ ।
ನಿಕರಕ್ಕೆ ನಂಬಿ ಠಕ್ಕಿಂ
ಗೆ ಕರಂ ಮತಿಗೆಟ್ಟು ಗತಿಯನಱಿಯದೆ ಕೆಟ್ಟಂ ॥ ೧೦೩

ವಸುಮತಿಯೊಳ್ ಪಲರುಂ ಪೂ
ಜಿಸುವೆಸಗುವ ದೈವಮಂ ಮಹಾಧರ್ಮಮುಮಂ ।
ಬಿಸುಟಹಹ ನೋಡ ಕೋಣೆಯ
ಕುಸುಕುಱು [1] ಧರ್ಮಮನದೆಂತು ನಂಬಿದನೀತಂ ॥ ೧೦೪

ಕಾಯಕ್ಲೇಶಂಗಳನಿನಿ
ಸಾಯಾಸಂಬಡದೆ ಪೆಱರ ಮನೆಯೊಳ್ಳುಣಿಸಂ ।
ಮಾಯಾವಿತನದಿನುಣ್ಬ ರ
ದಾಯುಮನೀಪರರದನಱಿಯದಕ್ಕಟ ಕೆಟ್ಟಂ ॥ ೧೦೫

ತಿರಿದಾಕುಳಂ ನೀರೊಳ್
ಗರಗರನಪ್ಪಂತು ಕರ್ಚಿ ಮೇಣುಂಡಪರೋ ।
ಪರಿಯೊಳ್ ಮೇೞ್ಕೊಂದಪರೋ
ಮರುಳೀತಂ ಶ್ರವಣರಾವ [2] ತಪಮಂ ಕಂಡರ್ ॥ ೧೦೬

ಜಗದಧಿವಲ್ಲಭನಂ ಲ
ಡ್ಡುಗೆಯಿಂ ಪಲತೆಱದ ಪುಷ್ಪದಿಂ ನಾನಾಪ ।

---

1 ಕುಸುಕುರು (ಬ) ಕುಸುಕಲ (ಗ)   2 ಮಾತಂ (ಬ)

ತ್ರಗಳಂ ಪೂಜಿಸಿ ನಿಚ್ಚಂ
ಸೊಗಯಿಸಿ ಮೆಯ್ಯಿಕ್ಕಿ ನಾಡೆ ಬಡವಾದಪರೋ ॥ ೧೦೭

[ಕುಲಮಂ ಮೂಸಿಸಿ ವಿವಾಹಮಂ ತೊಱೆದು ಕಂಡರ್ಪೇಸೆ ಮೆಯ್ಯೊಳ್ ಮಹಾ
ಮಲಮಂ ತಾಳ್ದಿದ ಕಷ್ಟರಂ ಸವಣರಂ ಕಂಗೆಟ್ಟರಂ ಕಂಡು ಸಂ ।
ಚಲಚಿತ್ತಂ ಕುಲದೈವಮೆಂದು ಪದಪಿಂ ಕೊಂಡಾಡುವಿಂತಪ್ಪ ಗಾ
ವಿಲನಂ ಗಾಂಪನನೆಗ್ಗನಂ ಜಡನನಾಂ ಕಾಣೆಂ ಮಹೀಚಕ್ರದೊಳ್॥]೧೦೮

ಎಂದು ನಾನಾವಿಧದಿಂ ದೂಷಿಸಿ ಮತ್ತಂ ಸೈರಿಸಲಾಱದೆ ಈತನ ಧನಮುಂ ಬುದ್ಧಿಯುಂ ವ್ಯಥೆಯಾಗದಂತೆನ್ನ ಬಲ್ಲ ಮಾರ್ಗದಿಂ ತಿಳಿಪಿ ಬೞಿಕ್ಕೀಧರ್ಮಮಂ ಪತ್ತುವಿಡಿಸಿ ಮದೀಯಧರ್ಮದೊಳ್ ಪತ್ತಿಸುವೆ ನೆಂಬ ಬಗೆಯುಂ ತಂದು ಸೆಟ್ಟಿಗಿಂತೆಂದಂ ॥ ೧೦೯

ವರವಸ್ತುವನಱಿವೆಡೆಗಂ
ಪರದರ್ಕಡುಜಾಣರೆಂದು ಕರಮೊದರರದಿಂ ।
ನರನಾಥಪೂಜಿಸುವ
ಧರೆಪೊಗೞ್ವುದು ವಸ್ತುಪುರುಷರೆಂದುಱೆ ನಿಮ್ಮಂ ॥ ೧೧೦

ಎಲ್ಲೆಲ್ಲ ವಸ್ತುಗಳುಮಂ
ಬಲ್ಲಿರ್ನಿಮ್ಮನ್ನರಿಲ್ಲ ಬುದ್ಧಿಗೆ ನೀವುಂ ।
ನಿರ್ಲಜ್ಜರಪ್ಪ ಸವಣರ
ಸೊಲ್ಲಿಂಗೊಳಗಾದುದಕ್ಕೆ ನಾಂ ಬೆಱಗಾದೆಂ ॥ ೧೧೧

ಮಾಯಮನೆ ಬೀಸಿ ಪೆಱರನು
ಪಾಯದೆ ತಕ್ಕಿಕ್ಕಿ ದೇವಕಾರ್ಯದೊಳನಿಸುಂ ।
ನೋಯದೆ ಸುಖಿಯಿಪ ಸವಣರು
ಪಾಯಮನಿಂ ನಿನ್ನೊಳಣ್ಣ ಭಾವಿಸಿ ನೋಡಾ ॥ ೧೧೨

ಮಲವುಂ ಧರಿಯಿಸಿ ನಾಣಂ
ತೊಲಗಿಸಿ ನಿರ್ಗ್ರಂಥಮಿರ್ದು ಸೋಂಬಿಂ ಪಲ್ಲಂ ।
ಸುಲಿಯದೆ ಮಿಾಯದೆ ಮಿಳ್ಕದೆ[1]
ಕುಲದಿಂ ಕೆಟ್ಟವರನಣ್ಣ ನೀಂ ಮನ್ನಿಪುದೇ ॥ ೧೧೩

ಮತ್ತಂ [ಭಾವಿಸುವೊಡ] ವರ ಮಾಟವೆಲ್ಲಂ ಕೂಪ'ಕಾರಣಮಲ್ಲದೆ ಗತಿಕಾರಣಮಲ್ಲದು; ಗತಿವಡೆವೆನೆಂಬುದು ಕಾಯಕ್ಲೇಶಂಬೇಟ್ಪುದು; ಆ ಕಾಯಕ್ಲೇಶಂ ನಿಮ್ಮ ನಚ್ಚಿನ ಸವಣರ ಮೆಯ್ಯೊಳೆಳ್ಳನಿತುಮಿಲ್ಲ; ನೀನವರುಮನವರ ದೈವಮುಮಂ ಕೊಂಡಾಡುವ ಮರುಳಾಟಕ್ಕೆನಗೆ ಪಿರಿದುಂ ವಿಸ್ಮಯಮಾದಪುದೆಂಬುದುಂ ದಯಾಮಿತ್ರಸೆಟ್ಟಿ ಮುಗುಳ್ನಗೆನಕ್ಕು ತನ್ನೊಳಿಂತೆಂದಂ, ೧೧೪

ಬೇಡಂ ಮಾಣಿಕಮೊಂದಂ
ಕಾಡೊಳ್ ಕಂಡೊರ್ಮೆ ಮುಲ್ದು ಪಗಿನಲ್ಲಿಂದೀ ।
ಡಾಡಿದನೆಂಬೀ ನಾಣ್ಣುಡಿ
ನಾಡೆಯುಮೆಸೆದಪುದು ದುರಿತವಶದಿಂದಿವನೊಳ್ ॥ ೧೧೫

ಬೆಳಗಿನೊಳಂ ಕಾಣದು ನಿಶಿ
ಯೊಳ್ ಕಾಣ್ಬುದು ಪೆಗ್ಗಣಕ್ಕೆ ನಿರ್ಗುಣರ್ಗಂತು ।
ಜ್ಜ್ವಳಧರ್ಮಮನಱಿಯದೆಯು
ಮ್ಮಳಮಂ[2] ಪೊರ್ದುವುದು ಜಡರ್ಗೆ ಸಹಜಮೆನಿಕ್ಕುಂ ॥ ೧೧೬

ಅಱಿಯದು ಕಪ್ಪೆ ಸಾಗರಮನಂಬುಧಿಗಂತದು ಕುಂದೆ ಗೂಗೆ ಕಂ
ಡಱಿಯದು ಚಂಡರೋಚಿಮನಿನಂಗದು ಭಂಗಮೆ ನೋಡೆ ಕಾಗೆ ಕಂ ।
ಡಱಿಯದು ಚಂದ್ರನಂ ಸಸಿಗೆ ಹೀನಮೆ ಸಜ್ಜನರೊಳ್ಪನಿಂ
ತಱಿಯದೆ ದೂರ್ತನಿಂ ಪಱಿಯೆ ಕಷ್ಟತೆ ಸಾರ್ಗುಮೆ ದಿವ್ಯರಪ್ಪರಂ ॥

1 ನೊಕ್ಕಡೆ (ಬ. ಕ.)

2 ದುಮ್ಮಳಮಂ (ಬ. ಕ.) ಅಱಿಯದೆಮುಳಮಂ (ಗ)

ಮೆದ್ದು ಕುಣಿಕೆಯುಂ ತಿಂದಂಗೆ ಕಲ್ಲುಂ ಮಣ್ಣುಂ ಮರನುಂ ಪೊಂಬಣ್ಣಮಾಗಿ ತೋರ್ಪಂತೆ ಕರ್ಮದ ತೀವ್ರತೆಯಿಂದೀಪಾಪಂಗೆ ಲೌಕಿಕಧರ್ಮಮೆ ಧರ್ಮಮಾಗಿ ತೋರ್ಪುದದುಕಾರಣದಿಂ ಸದ್ಧರ್ಮಮನೊರ್ಮೆಯೆ ಪೇೞ್ದನಪ್ಪೊಡೆ ಪಿತ್ತಜ್ವರಮುಳ್ಳವಂಗೆ ಕುದಿವ ಪಾಲನೆಱೆವಂತಾನುಂ, ಶಿಶುವಿನ ಕೆಯ್ಯೊಳ್ ಮಸೆದ ಬಾಳಂ ಕೊಟ್ಟಂತಾನುಂ, ಕಟಿಯು ಕೊರಲೊಳ್ ಪೂಮಾಲೆಯಿಕ್ಕಿದಂತಾನುಮಕ್ಕುಮದಱಿಂದುಪಾಯದೊಳ ತಿಳಿಪಲ್ವೇೞ್ಕುಮೆಂದು ದಯಾಮಿತ್ರಸೆಟ್ಟಿ ಪತ್ತೆಂಟುದಿವಸಂ ಪೋಗಲ್ ಮತ್ತೊಂದುದಿವಸಂ , ೧೧೮

ಬರಿಸಿ ವಸುಭೂತಿಯುಂ ವಿ
ಷ್ಟರಮಂ ಕುಡವೇೞ್ದು ಪಿರಿದು ಮನ್ನಣೆಯಿಂದಾ ।
ದರದಿಂ ವೀಳಯಮಂ ಕ
ರ್ಪುರಸಹಿತಂ ಕೊಟ್ಟು ವೈಶ್ಯಸುತನಿಂತೆಂದಂ ॥ ೧೧೯

ಭಟ್ಟರೆ ಕೇಳಿಂ ನಿಮ್ಮಂ
ಬಿಟ್ಟು ಕೆಲರ್ಕುಲಜರೊಳರೆ ನಂಬಿದೆಸೀಗಳ್ ।
ನೆಟ್ಟನೆ ನಿಮ್ಮಿಂ ಸುಗತಿಯು
ಬಟ್ಟೆಯ ತೆಱನಱಿಯಲಾಯ್ತು ಪುಣ್ಯೋದಯದಿಂ ॥ ೧೨೦

ಎಂಬುದುಂ ವಸುಭೂತಿ ಮಹಾಭೂತಿವೆತ್ತರಂತೆ ಮನದೊಳ್ ಪೆರ್ಚೆ ದಯಾಮಿತ್ರಸೆಟ್ಟಿ ಮೆಲ್ಲನಿಂತೆಂದಂ, ೧೨೧

ಎಮ್ಮನ್ವಯದಿಂ ಬಂದುದು
ತಾಮ್ಮಗಿಲಪ್ಪೊಂದು ನೋಂಪಿ [1] ಯಾನೋಂಪಿಯುಮಂ ।
ನಾಮ್ಮಱೆದೆಂ ಸಂತತಮಂ
ತೆಮ್ಮಯ್ಯಂ ನೋಂಪನಂತು ನೋನುತುಮಿಪ್ಪೆಂ ॥ ೧೨೨

[ಅದೆಂತೆಂದೊಡೆ ಮನೋಜಮದಹರನುಂ ಸುರಾಸುರಮಕುಟತಟಘಟಿತಚರಣಾರವಿಂದನುಮಪ್ಪರ್ಹತ್ಪರಮೇಶ್ವರನಮ್ಮನ್ವಯದಿಂ

1 ಯದಸಿಂನಾಂಮಱೆ ಮದೆಸಂತತಮಂತೆಂಮಯ್ಯಂನೋಂಪ (ಗ)

ಬಂದ ಕುಲದೈವಮುಮಿಷ್ಟದೈವಮುಮಪ್ಪುದಱಿಂ ಜಿನೇಶ್ವರಸಾಕ್ಷಿಯಾಗಿ ಮಹರ್ಷಿಯರ್ಕಳಿಂ ನೋಂನಿಸಿ ಬೇಳ್ಪುದಂ ಕುಡುವೆನೀಗಳ್] ಆ ನೋಂಪಿಯುಂ ನೋಂಪ ಕಾಲಮಾಸನ್ನ [1] ಮಾಯ್ತೀಯವಸರದೊಳ್ ಋಷಿಯರಾರುಮಿಲ್ಲ ಇಲ್ಲದೊಡಮೇನಾಯ್ತು, ೧೦೩

ಪಾಲೇಮರ್ದೆಂಬಂತಿರೆ
ಭೂಲೋಕಸ್ತುತ್ಯರಪ್ಪನಿಮ್ಮನ್ನರ್ವರ್ [2] |
ಸಾಲದೆ ಜಗದೊಳ್ ನೀವಿರೆ
ಮೇಲೆನಿಸುವರಾರೊ ಕುಲದೊಳಂ ಶೀಲದೊಳಂ ॥ ೧೦೪

[ನಿತ್ತರಿಸದೆ ಬಲ್ಸೊಱೆಯೊಳ್
ಮತ್ತನಿಸದೆ ಬಿರ್ದೊಡಣ್ಣ ಸಹವಾಸಿಯೆ ಬಂ |
ದೆತ್ತುವುದುಳದವರಱಿಸಿಯು
ಮೆತ್ತಲ್ ಕೇಳಾಗದೆಂಬ ನಿಯಮಮುಮುಂಟೇ ॥ ೧೦೫

ಅದಱಿಂದೆಮಗೆ ರಿಸಿಯರಲ್ಲದೆ ಪೆಱರಾಗದೆಂಬ ನಿಯಮಮಿಲ್ಲ ; ಅದಂ ಬಗೆವೊಡಮೆರಿಂ ನೀಮೆಮಗೆ ಸಹಸ್ರಮಡಿಯಪ್ಪುದಱಿಂ] ನಿಮಗೆ ಮಾಡಿದ [3] ದಾನಮುಂ ಪಾಲುಕ್ಕಿಮ್ಮಡಿಸುವಂತಿಮ್ಮಡಿಯುಕ್ಕುಮದುಕಾರಣದಿನಿಲ್ಲಿ ನೋಂಪಿಯುಂ ನೋಂತು ನೋಂಪಿಯ ತದನಂತರಂ ಬೇಳ್ಪನಿತು ದಕ್ಷಿಣೆಯುಂ ಬೇಡಿಕೊಳ್ಳಮೆನೆ ಸೆಟ್ಟಿಯ ಮಾತಿಂಗೆ ವಸುಭೂತಿ ಮನದೊಳ್ ಗುಡಿಗಟ್ಟಿ, ೧೦೬

ಬಿತ್ತರದಿಂ ಕುರುಡಂ ಕ
ಣ್ಬೆತ್ತಂತಿರೆ ರಾಗಮೊದವೆ ಬೆಲೆವೆಣ್ ಪೆಣ್ಣಂ |
ಪೆತ್ತಂತಿರೆ ಪಾರ್ವಂ ಮ
ಣ್ಬೆತ್ತಂತಿರೆ ಪಿರಿದು ಸಂತಸಂ ಮಿಗೆ ಮನದೊಳ್ ॥ ೧೦೭

---

1 ಮಾಯ್ತುಮುನ್ನ ಋಷಿಯರಿಂ ನೋಂನಿಸಿ ತದನಂತರಂ ಬೇಳ್ಪನಿತು ದಕ್ಷಿಣೆಯಂ ಕುಡುವೆವು (ಗ) 2 ನೀವೀ ನೋಂಪಿ ಸಾಲ್ವಿರಿ ನಿಮ್ಮಿಂ ಪೆಳ್ವೊಡೆ ಮೇಲೆನಿಸು (ಗ) 3 ದಾನಮುಪೊರ್ಕಿಂಮ್ಮಡಿಸಿಸು (ಕ) ದಾನಮುಪೊರ್ಕ್ಕಿಮಡಿಸು (ಬ)

ಮರ್ದನಗಳಲ್ಲೊಪ್ಪಿದಂ ನಿದಿಗಂಡಂತೆ ಪೆರ್ಚೆ ಕರಮೆಶುಚಿಗಳಪ್ಪ ಸವಣರ್ಗೆ ಕುಡುವಾತನಮ್ಮನ್ನರಪ್ಪ ಸದ್ಬ್ರಾಹ್ಮಣರ್ಗೆ ಕುಡುವನೆಂಬು ದಾವ ಚೋದ್ಯಂ, ೧೨೮

ಬಡವಿದ ಪೊನ್ನಪ್ಪೊಡೆ ಜೋ
ಳದ ರಾಶಿಯೊಳಿರ್ಪುದಿಲ್ಲಿ ತಾನೇನಂ ಬೇ ।
ಡಿದೊಡಂ ಬೇಡಿದುದಂ ಕುಡು
ವುದು ಪುಸಿಯೇ ವೈಶ್ಯನಂದನಂ ಪುಸಿದಪನೇ ॥ ೧೨೯

ಕರವೊಳ್ಳಿತಾಯ್ತು ಪರದನ
ನರವಿಂ [1] ಮುಟ್ಟಿತ್ತಲತ್ತ ಚಪ್ಪಟೆಯೆಂಬಂ ।
ತಿರಲಾಂ ಬೇಳ್ಪನಿತರ್ಥಂ
ದೊರೆಕೊಂಡಪುದಾನೆ ಧನ್ಯನೆಂ ಭೂತಳದೊಳ್ ॥ ೧೩೦

ನೆರಪಲ್ಬಾರದ ವಿತ್ತಂ
ದೊರೆಕೊಂಡುದು ನೆಲೆಗೆ ಪೋಗಿ ಮಕ್ಕಳುಮಂ ಪೆಂ ।
ಡಿರೊಳಮೊಡಗೂಡಿ ಸುಖದಿಂ
ಚರಿಯಿಸುವೆಂ ಮೆಚ್ಚಿದಂದದಿಂ ಭೋಗಿಸುವೆಂ ॥ ೧೩೧

ಎಂದು ಮನದೊಳ್ ಪಾಲ್ಗುಡಿದು [2] ನೋಂಪಿಯುಂ ನೋಂಪ ಕ್ರಮಮಂ ಪೇೞುವೆನೆ ವೈಶ್ಯವಂಶಲಲಾಮನಿಂತೆಂದನಾ ನೋಂಪಿ ತೀರ್ವನ್ನಂ ಗ್ರಾಸದೊಳ್ ಕಳವೆಯ ಕೂೞಂ [3] ತಿಳಿದುಪ್ಪಮಂ [4] ಪೆಱರೊರ್ವರ್ಬಡಿಸೆ ಕಯ್ಯೊಳ್ ಮೋನದಿಂದುಂಡು, ೧೩೨

---

1 ಮುಟ್ಟಿತ್ತಲತ್ತಚಪ್ಪಟೆ (ಕ) ನರವೆತ್ತಲ್ಮೆಟ್ಟಲೆತ್ತಚಪ್ಪಟೆ (ಖ)

2 ಸೆಟ್ಟಿಯು ಮೊಗಮಂ ನೋಡಿ ನೋಂಪಿ (ಗ)

3 ತಿಗುಣಾ ಕಳೆದ ಪೊಂಬೆಸಱ ತೊವೆಯುಂ (ಗ)

4 ಪಲವು ಭಕ್ಷ್ಯಂಗಳವೆರಸು (ಗ)

ಮಱುದಿನಮಾಪೊತ್ತಿಪ್ಪಿನ
[ಮಱಕೆಯ ನೀರೂಟತಂಬುಲಂಗಳ ಮಾತಂ ।
ತೊಱೆದು ಮತಿಮಱೆದು ಮನೆಯೊಳ್
ಪೊಱಮಡದೋದುತ್ತು ಮಿರ್ಪುದಿರುಳುಂ ಪಗಲುಂ ॥ ೧೩೩

ಸಲೆಮೞೆಯೊಳ್ಪಡುವುದು ಮೈ
ಮಲವೇಱಿತ್ತೆಂದು ಮಿಾಯಲಾಗದು ಪಲ್ಲಂ ।
ಸುಲಿಯದೆ ಮನಿತೆಯರಂ ಮಂ
ಬಲಿಸದೆ ತಲ್ಲಣಿಸದಿರ್ಪುದತ್ಯುತ್ಸವದಿಂ ॥] ೧೩೪

ಮತ್ತಂ [ನೋಂಪಿಯ] ಪ್ರಾರಂಭದೊಳಂ ನೆಱವಿಯೊಳಂ [ಮೆಂಚರದಂತೆ ಧೈರ್ಯ್ಯಂಬೆರಸು, ಲಾಭಂಬೆತ್ತ ಪೆರದನಂತುತ್ಸಾಹಂಬೆರಸು, ಪಂದೆಯಂತು ನೋವಿಂಗಳ್ಕದೆ, ತಣಿಯುಂಡನಂತೆ ಸಾಲ್ಗುಮೆನ್ನದೆ ದೃಢಚಿತ್ತದಿಂದಿರ್ದು] ತಲೆಯ ರೋಮಂಗಳೆಲ್ಲಮಂ [2] ಪಱಿಯಿಸಿ ರಾಗದಿನೆಮಗೀವುದಿತ್ತು ಮನದೊಳುಮ್ಮಳಿಸದೊಂದೆಡೆಯೊಳ್ ಮುನ್ನಿನ ವಿನೋದಂಗಳಂ ಮಱೆದಪ್ಪೊದಂ ನೆನೆಯದೆ ಸ್ವಾಧ್ಯಾಯಪರನಾಗಿ ಬೀಡಿನೊಳಾವಿನಿತಕ್ಕಂ ವಿಸ್ಮಯಕ್ಕಂ ವಸ್ತ್ರಕ್ಕಮುಪೇಕ್ಷೆಯಿಂದೆಳಸದಿಂತೆರಡುತಿಂಗಳ್ವರಂ ಎಮ್ಮ ಪೇಲ್ದೋಜೆಯಿಂ [ಕ್ರಮಂದಪ್ಪದೆ] ನೋಂಪುದೆಂದುಪೇೞ್ವುದುಂ, ೧೩೫

ಬಳಗಱಿಯದನಿತುಮಂ ಸಂ
ಚಲಚಿತ್ತಂ ಮಾೞ್ಪೆನೆಂದು ಪೂಣ್ದಂ ತನ್ನೊಂ ।
ದಳವಱಿಯದೆ ಕಡುಲೋಭದಿ
ನೆಳಗಱ ಭಯಮಱಿಪುದೆಂಬವೊಲ್ತದ್ವಿಪ್ರಂ ॥ ೧೩೬

---

1 ನೀರ್ತಂಬುಲಮೂಟಮುಂಬಿನಂ ಬಯಸದೂರೊಳಗಣ ವಿನೋದಮುಂ ವಿಳಾಸಮುಂ ಪೊಡಿರುಮಂ ಸೀರೆಯುಮಂ ಪಂಬಲಿಸದಿರ್ಪುದು (ಗ)

2 ಪಱಿದೆಮಗೀವುದೀಮಾರ್ಗದಿಂದೆಮ್ಮ ಪೇಳ್ದಾಜೆ (ಗ)

ಆರಯ್ದು ನೋಡಿ ನಗುವವ
ರಾರೆನ್ನಂ ದೂರದೇಶಮಂ ನೋಂಪೆನಿದಂ ।
ಸ್ವೈರಣೆಯಿಂ ಚೆಂಬೊಂಗಳ
ನೋರಂತಿರೆ ಬೇಡಿಕೊಳ್ವೆನೆನ್ನಾರ್ಪನಿತಂ । ೧೩೭

ಉಸಿರದೆ ಗಳಗೆವರಂ ಸ್ವೈ
ರಿಸಿ ತಲೆಯಂ ಪಱಿಸಿಕೊಂಡು ಚೆಂಬೊನ್ನಂ ಸಂ ।
ತಸದಿಂ ಕೈಕೊಳ್ವಂ ಭಾ
ವಿಸುವೊಡೆ ತಲೆಯಲ್ಲಿ ಮತ್ತೆ ಪುಲ್ಮೊಳೆದಪುದೇ ॥ ೧೩೮

ಉಂಬುದು ಕಳವೆಯ ಕೂೞ್ಗಡ
ತಂಬುಲಮಿರ್ಪೊತ್ತಿನುಣಿಸು ಮಿಾಹಂ ಕೇಳ ।
ಲ್ಲಂಬಿನಿತೆ ಗಡಂ ತಿಂಗಳು
ಮೆಂಬುದು ತಾಂ ದೂರಮಾಯ್ತು ಪೇೞಿಂಗಹನಂ ॥ ೧೩೯

ಎಂದು ತನ್ನೊಳ್ ರಾಗಿಸುತ್ತಿರೆ ವಣಿಗ್ವಂಶಲಲಾಮಂ [1] ಬೀಡಿನ
ಪ್ಪಯಣಂಮಾಡಿ ಮಱುದಿವಸಂ ಸಮಸ್ತದುರಿತವಿಳಯನಪ್ಪ ಜಿನಸ್ವಾ
ಮಿಗೆ ತೂರ್ಯರವಮೆಸೆಯೆ ಮಹಾಭಿಷೇಕಪೂಜೆಯಂ ಮಾಡಿಸಿ ವಸುಭೂ
ತಿಯಂ ಬಡಗಮುಖನಾಗಿ ಕುಳ್ಳಿರಿಸಿ, ೧೪೦

ತಲೆಯಂ ಬಲುದಡಿಗರ್ಕಳ್
ನಿಲಲಾಱದೆ ಸುಂಟದಿಂದ ಕೋಡಗದಂತು ।
ಮ್ಮಳಿಸಿ ಕಳವಳಿಸಿ ನೋವಿಂ
ತಲೆಯಂ ತಿರಿಪುತ್ತುಮಂಜಿ ಕೆಟ್ಟೆನೆನುತ್ತುಂ ॥ ೧೪೧

ನಡುಗೆ ಶರೀರಂ ಪಲ್ಲಂ
ಗಿಡಿಗಿಱಿದರ್ದೆ ಗೂಡುವಾಯೆ ಪಂದೆಯಮೇಲ್ವಾ ।

---

1 ಬಿಡಂಪಯಣಂಮಾಡಿ (ಬ)

ಪಡರ್ದಂತಿರೆ ದೇಹಂ ಪೆರ
ಪಡೆ ಕಣ್ಣೀರ್ಸುರಿಯೆ ತಳದಿನದನೊತ್ತುತ್ತುಂ ॥ ೧೪೨
ಬಿೞ್ದೌಡುಗರ್ಚಿ ನೋವಿಂ
ದಡಿಗಡಿಗಹಹಾ ಯೆನುತ್ತುಮುಡಗಯ್ಯಿಂದಂ ।
ತಡವರಿಸುತ್ತುಂ ಸಾಸವೆ
ಗುಡಿವಂತಿರೆ ಕರಮೆ ಮೆಱುಗಿ ತಳವೆಳಗಾದಂ ॥ ೧೪೩

ಮತ್ತಂ ಕುದುರೆಯೇರ್ದ ಕುಱುಂಬನಂತೆ ನಡುಗುತ್ತುಂ, ಪೆಣನಂ ಕಂಡ ಪಂದೆಯಂತೆ ಕಣ್ಣಂ ಮುಚ್ಚುತ್ತುಂ, ಬಿನ್ನಪಂಗೆಯ್ವವೊಕ್ಕಲಿಗನಂತೆ ಬಿಕ್ಕುತ್ತುಂ, ಸಾಕ್ಷಿಯಿಲ್ಲದೆ ಸಾಲಂಗೊಟ್ಟೊ [ಕ್ಕಲಿಗ]ನಂತೆ ಸುಯ್ಯುತ್ತುಂ, [1] ಸಿಕ್ಕಿದ ಕಳ್ಳನಂತೆ ಪಲವಂ ನೆನೆಯುತ್ತುಂ, ಗ್ರಹಪೀಡಿತನಂತೆ ತೊನೆಯುತ್ತುಂ, ಪೇನುಳ್ಳನಂತೆ ತಲೆಯಂ ತುಱಿಸುತ್ತುಂ [2] ಕಱುಸತ್ತಾವಿನಂತೆ ಮಱುಗುತ್ತುಂ, ತಾಯ್ಸತ್ತ ಶಿಶುವಿನಂತೆ ಬಾಯ್ವಿಡುತ್ತುಂ, ಕೆಸಱೊಳ್ ಬಿೞ್ದನಂತೆ ಮಿಡುಕುತ್ತುಂ, ಮಗನಿಲ್ಲದರ್ಥಪತಿಯಂತೆ ಬೆವೆಬೆದೆಬೇಯುತ್ತುಂ, ಸೂಲವೇಱಿದನಂತೆ ಕಾಲಂ ನೀಡುತ್ತುಂ, ಕೂರ್ವಿಡೆಯದನಂತೆ ಬಂಬಲ್ಬಡುತ್ತುಂ, [3] ಮುಳ್ಪೊಕ್ಕವನಂತೆ ಕುಸಿಯುತ್ತುಂ, ಸೂಳೆಯುಳ್ಳವನಂತೆ ಕವಿದು ಬೀೞುತ್ತುಂ, ಮೋನಂಗೊಂಡ ಚಪಳನಂತುಮ್ಮಳಿಸುತ್ತುಂ, [ಚಿತ್ತದೊಳಳ್ಳಳ್ಕುತ್ತುಂ, ನಿಲಲ್ಬಾರದೆನಿಸುವ ನೋವಿಂಗೆ ಬೆಬ್ಬಳವೋಗಿ ಬಾಳ ಮೋಹಕ್ಕೆ ಶಿಶುವಂ ಪಿಡಿದರೆಂಬ ನಾಣ್ಣುಡಿಯಂತೆ ಪೊನ್ನ ಮೋಹಕ್ಕೆ ಮನಮಂ ಬಲ್ವಿಡಿದು] ನಿಶ್ರೇಯಸಶ್ರೀಯ ವಿವಾಹಗೇಹದ ಭೂಮಿಶೋಧನೆಯೆನಿಪ ಲೋಚನಂ ತಾನುಂ ಸ್ಥೈರಿಸಿ, ॥ ೧೪೪

[4] [ವಿನಯಪಯೋನಿಧಿ ಸತ್ಯದ
ಮನೆಯೆನಿಸಿದ ಸೆಟ್ಟಿ ಪೇೞ್ದ ಮಾರ್ಗದೊಳಂತಂ ।

---

[1] ದ್ರೋಹನತಾಯಂತೆ ಚಿಂತಿಸುತ್ತುಂ. (ಗ) [2] ತಾಗಿದನಂತೆತಲೆಯನೊರಸುತ್ತಿರಲು (ಗ), ಕೆಟ್ಟಬೀಡಿನಂತೆ ತಲ್ಲಣಿಸುತ್ತುಂ (ಬ) [3] ಕೆಮ್ಮುಳ್ಳನಂತೆತೇಂಕುತ್ತುಂ, (ಗ) [4] ಮಱುದಿವಸಂಸೆಟ್ಟಿಕರೆಯೆ ಮನೆಗೆ ಪೋಗಿ ವಣಿಗ್ವಂಶಲಲಾಮಂ ಪೇಳ್ಬಿಜೆಯೊಳ್ ನಿಂದು. (ಗ)

ದಿನದಿನಮುಪವಾಸಮೆನಿ
ರ್ದನುನಯದಿಂದೇಕಚಿತ್ತದಿಂ ಮೞಿದಿವಸಂ ॥ ೧೪೫

ಆಯಾಚಿತವ್ರತಮಪ್ಪುದಱಿಂ ಸೆಟ್ಟಿ ನಿಱಿಸೆ ಮನೆಗೆ ಪೋಗಿ ವೈಶ್ಯೋತ್ತಮಂ ಪೇೞ್ದೆಡೆಯಿಂ ನಿಂದಿರ್ದು ಪಾಣಿಪಾತ್ರೆಯೊಳ್ ಶರ್ಕರೆವೆರಸಿದ ಪಾಲಂ ಕುಡಿದು ತದನಂತರಂ,] ೧೪೬

ಸೊಗಯಿಸ ಘೃತಪೂರಂ ಹೋ
ಳಿಗೆ ಮಂಡಗೆ ತಱಗು ನಾಡೆ ರುಚಿವೆರಸಿದ ು ।
ಡ್ಡಗೆ ಚಕ್ಕುಲಿ ಗಾರಿಗೆ ಪೂ
ರಿಗೆ ಮೊದಲಾಗಿರ್ದ ಪಲವು ಭಕ್ಷ್ಯಮನಾಗಳ್ ॥ ೧೪೭

ಆಜ್ಯಯುತಮಪ್ಪುವಂ ಮೆಲ್ದು [ತೊಱೆಯೊಳ್ ಪೋಸಸಂಗೆ ತೆಪ್ಪವನಿಕ್ಕಿದಂತಿಕ್ಕಿದ ಗಟ್ಟಿಗೊಂಡ ಬಳ್ಕ್ರಸರಂ ಕೊಂಡು ಪದುಳಿಸ ನಿಂದ ಬಟ್ಟಿಕ್ಕಂ,] ೧೪೮

ಕಳವೆಯ ಕೂೞ್ಮ್ರಗಮೆಗಿಸುವ
ತಿಳಿದುಪ್ಪಂ ತಿವುಡುಗಳೆದ ಪೊಂಬೆಸಱ ಪುಷಂ ।
ಜ್ಜ್ವಳಮಪ್ಪ ಕಂಪಿನಿಂಪಿನ
ನಿಳಯಮುಮೆನಿಸಿರ್ದ ಸವಿಯಿನೊದವಿದ ತೊವಯುಂ ॥ ೧೪೯

ಅಂತಮೃತದೊಳ್ [ಮೆಚ್ಚರಿಸುವ, ರಸಾಯನದೊಳ್] ಪುರುಡಿಸುವ ದಿವ್ಯಾಹಾರಮಂ [ಕಯ್ಯೊಳಕ್ಕುವ್ರದುಮಾಕಂಠಂ] ಉಂಡು ಬೞಿಲ್ಕೆವೋಗಿರ್ಪುದುಂ, ೧೫೦

ಬಾೞೆಯ ಕರ್ಜೂರದ ಕಿ
ತ್ತೀಳೆಯ ಕಂಪುರದ ರಂಜಿಪಿಮ್ಮಾವಿನ ಪೇ ।
ರೀಳೆಯ ನಾರಂಗದ ಕಂ
ಚೀಳೆಯ ತನಿವಣ್ಣನಿಕ್ಕೆ ಮೆಲ್ಪಾದರದಿಂ ॥ ೧೫೧

[ಕಯ್ಯಂ ಕರ್ಚಿಕೊಂಡು][1] ತಣ್ಗರಗದ ತಣ್ಗೊಳಿಸುವಾಲಿನೀರಂ
ಆರ್ಪನಿತಂ ಕುಡಿದು ಸಂತೋಷದಿಂ ನುಡಿದು ಪವಮಾಮಿತ್ರಸೆಟ್ಟಿಯು
ಧ್ಯಕ್ಷಂ ಬೆರಸು ವಿಹಾರಕ್ಕೆ ಬಂದು [ಕಾಷ್ಠಾಸನದೊಳ್] ಕುಳ್ಳಿರ್ದ
[ತನ್ನೊಳ್ ॥ ೧೫೨

ಇವು ಲೇಸವುಲೇಸೆಂಬೀ
ವಿವರದೊಳೇಂ ಸಕಲಭಕ್ಷ್ಯಮುಮಂ ಬಾಡುಗಳುಮಂ ।
ಸವಿಯೊಳ್ ಸಾಸಿರಮಡಿ ಮಿ
ಕ್ಕುವು ಭಾವಿಸಿನೋಳ್ಪೊಡಿಂದ್ರನುಣ್ಬಮೃತಮುಮಂ ॥ ೧೫೩

ಎಂದು ತನ್ನತೂಟಂ ತನಗೆಜನ್ಮಾಪೂರ್ವಮಪ್ಪುದಱಿಂ ಮಹಾವಿ
ಸ್ಮಯಮಂ ಬಟ್ಟು] ಇರುಳ್ಕಂಡ ಕನಸುಗಳಂ ಪಗಲ್ನೆನೆವಂತೆ ನೆನೆಯು
ತ್ತುಂ [ಪಗಲೆಲ್ಲಂ ಸಂತಸದಿಂದಿರ್ದ] ನೇಸರ್ಪಟ್ಟೊಂದು ಜಾವಕ್ಕೆ
ತೊಟ್ಟನೆ ॥ ೧೫೪

ಅಸದಳಮೆನಿಸುವ ತೀವ್ರದ
ತೃಷೆ ಮೊಕ್ಕಳಮಾಗೆ ನಾಡೆಯುಂ ಮನದೊಳ್ಸೈ ।
ರಿಸಲಾಱದೆ ತಲ್ಲಣದಿಂ
ಬಿಸುಸುಯ್ದುಮ್ಮಳಿಸಿ[3] ಬಾಟಿಲರಿಪಾಯ್ತೆನುತುಂ ॥ ೧೫೫

ಕೋಡಗಮಂ ಪುಲ್ಲೊಳ್ ಮುಚ್ಚೆ ಸಿಡಿಮಿಡಿಗೊಂಬಂತೆ ಸಿಡಿಮಿ
ಡಿಗೊಳುತ್ತುಂ ಪೆಱರ್ಗೆ ಪೇೞಲಂಜಿ ಲಜ್ಜೆಯಿಂ ಮೂಗಿಯ ಕೋಗಿಲೆ
ಯಂತೆ ಬಾಯ್ವಿಟ್ಟಡದೆ ಮಳಲೇರಿಯಂತೆ [ಜಬ್ಬನೆ] ಜರಿದು, ॥ ೧೫೬

ಬಿಡುಗುಂ ಬಾಯುಂ ನೆಲದೊಳ್
ಪಡುಗುಂ ಪೊಱಗಣ್ಗೆ ಪೋಗಿ ತಣ್ಪಪ್ಪೆಡೆಯೊಳ್ ।
ಪಡುಗುಂ ತಂಪಿಲ್ಲದೊಡೆರ್ದೆ
ಗಿಡುಗುಂ ವಸುಭೂತಿ ಧೈರ್ಯಮಿಲ್ಲದೆ ಮನದೊಳ್ ॥ ೧೫೭

---

1 ವಣಿಗರಗದ (ಗ) 2 ತನ್ನುಂಡೂಟಮಂ (ಗ) 3 ಕಟ್ಟೆನಳಿದನೆನುತ್ತುಂ (ಗ)

ತರುವೆಲಿಯು ತಲೆಯು ಕಿರೀಟಮೆನಾಲಿಕಲ್ಲ ಮೆಱೆ ಕೊಂಡು ಬೆಂಬಂತೆನಗೀಮುನ್ನಿ ನಿರುಳ್ಗಳಂ ನೋಡಲಿಂದಿನಿದುಳ್ಳಿರಿದಾಯ್ತೋವೊ ಕೆಟ್ಟೆನೆಂದು, ॥ ೧೫೪

ನೀರಱ್ಕೆ ಪೆರ್ಚೆ ನಿಲಲುಂ
ಸೈರಿಸಲುಂ ಬಾರದಳ್ಕಿ ತನ್ನಿಂದಂ ತಾ।
ನೋರಂತೆ ಕುದಿದು ಮಱುಗುವ
ಸಾರಂಗದ ಪೋೞಿಯಂದಮಂ ನೆಱೆ ಪೋಲ್ತಂ ॥ ೧೫೫

ಅಂತಿರುಳ್ ನಾಲ್ಕುಂ ಜಾವಮುಂ ಮೌಹೂರ್ತಿಕನಂತೆ ಪೊತ್ತಿನಳವಿಯಂ ನೋಡುತ್ತುಂ, ಪೆರ್ಬಾವಿನಂತೆ ಮಂಡಲಂಗೊಳ್ಳುತ್ತುಂ, ಜಾವದ ಕಾಪಿನವರಂತೇೞುತ್ತುಂ, ಜಂಘಾಬಲವಿಲ್ಲದನಂತೆ ಕುಳ್ಳಿರುತ್ತುಂ, ಮರುಳನಂತೆ [1]ತನ್ನೊಳ್ತಾನೆ ನುಡಿಯುತ್ತುಂ, ಮಱೆಯಂಪಾರ್ವ ಕ್ಕಲಿಗನಂತೆ ಗಗನಮಂಡಲಮಂ ನೋಡುತ್ತುಂ, ನೂತನಶ್ರೀಮಂತನಂತೆ ಮುಮ್ಮೞಿಯದೆ ಬಳ್ಕುತ್ತುಂ, ಚಾದಗೆಯಂತಾಕಾಸವನಿಗೆ ಬಾಯಂ ಬಿಡುತ್ತುಂ, ದಾಹಜ್ವರಂಬೆತ್ತಂತೆ ಗಾಳಿಗಾಸೆಗೆಯ್ಯುತ್ತುಂ, ಕಪ್ಪೆಯಂತೆ ತಣ್ಪಪ್ಪೆಡೆಯೊಳ್ ಪತ್ತುತ್ತುಂ, ಚೊಚ್ಚಲ್ಪೆಱುವಳಂತೆ ತೊಡಲುತ್ತುಂ, ಪಲ್ಲಿಯಂತೆ ಕೇರಂ ಪತ್ತುತ್ತುಂ, ಎಲೆವಳ್ಳಿಯಂತೆ ಕಂಬಮಂ ಸುತ್ತುತ್ತುಂ, ಪಾದರಿಗೆಯಂತೆ ಪೆಱಗಣ್ಜುತ್ತುಂ, [2] ಸೂಲೆವೆತ್ತರಂತೆ ಪೊರಳುತ್ತುಂ, ಕಳ್ಗುಡಿದರಂತೆ ಮತಿಗಿಡುತ್ತುಂ, ವೃದ್ಧನಂತೆ ತಡವರಿಸುತ್ತುಂ, ಲತೆಯಂತಲ್ಲಾಡುತ್ತುಂ, ಕಣ್ಣೊಳ್ ಬಳಗಾಗೆ, ೧೬೦

ನಿಲಲಾಱದಲಸಿ ಪೋದೊಡೆ
ಪಲವುಂ ಚೆಂಬೊನ್ನ ಪಡಪು ಕೆಟ್ಟಪುದು ಕರಂ।
ಕಲಿಯಾಗಿ ನಿಂದೆನಪ್ಪೊಡೆ
ನಿಲಲಾಱದು ನೀರ ದೆಸೆಯನುೞಿದಸುವಿನಿಸುಂ॥ ೧೬೧

ಎಂದೆರಕಕ್ಕೆ ಬಿಟ್ಟ ಕರುವಿನಂತೆ ಮಱುಗುತ್ತುಂ [ಇರ್ದ ಮತ್ತಂ ದಯಾಮಿತ್ರಸೆಟ್ಟಿ ನಿಱಿಸಿ ಮನೆಗೆ ಪೋಗಿ ಮನದ ಕಾಂಕ್ಷೆಯಿಂ ಮುನ್ನಿ

1 ಜಿನುಗುತ್ತುಂ (ಗ)　　ಪಸುಗೂಸಿನಂತೆತೆವಳುತ್ತುಂ (ಗ)

ನಂತುಂಡು ಮುನ್ನಿನ ಮುಱುಕದಿಂದಿಮ್ಮಡಿ ಮಱುಕಮಾಗೆ ಮಱುದಿವಸಂ] ಭಕ್ಷ್ಯದ ದೆಸೆಗೆ ಪಕ್ಷಂಗೆಟ್ಟು, ಪಾಲಿಂಗೆ ಬೆರ್ಚಿ[1] ತುಪ್ಪಕ್ಕಿನಿಸಪ್ಪೊಡಂ ಮನಂದರಲಾಱದೆ [ತೃಷೆಯೊಳಾದ ಭೀತಿಯಿಂದೊಲ್ಲೆನೆಂಬುದುಂ ವೈಶ್ಯನಂಶಲ್ಲಲಾಮಸಿಂತೆಂದಂ :— ೧೬೨

ಅಂತಿತೆನ್ನದೆ ಮುಂಪೇ
ಳ್ದಂತುಸಿರದೆ ಮೋನದಿಂದಮುಣ್ಬುದು ನಾನೇ ।
ನಂ ತಂದಿಕ್ಕಿದೊಡಂ ಗುಣ
ವಂತರ್ಕುಲದೊಡೆಯರೆನಿಪ ನಿಮಗಿದು ಪಿರಿದೇ ॥ ೧೬೩

ಅಱಿವರಪ್ಪ ರಿಸಿಯರ್ಮೊದಲಾಗಿಯುಸಿರದೆಮ್ಮ ಪೇಳ್ದಂತೆ ಮೋನದಿಂದುಂಬರೆಂದೊಡೆ, ಕುಲಜರುಂ ಭೂದೇವರುಮಪ್ಪ ನಿಮಗಿದಾವುದರಿದಾಯ್ತುಸಿರದಿರಿಮೆಂಬುದುಂ ಮಱುಮಾತುಗುಡಲಱಿಯದುಮ್ಮಳಿಸಿ ಬೆಮರ್ತುಸಿರದುಣುತ್ತುಮಾಮಾರ್ಗದಿಂದೇಳೆಂಟುದಿವಸಮಿರ್ದಿರಲಾಱದೆ ತಲ್ಲಣಿಸಿ] ನಿಂದುಣಿಸಿನಂ ಪಕ್ಕಲಿಸಿ “ ಕಯ್ಯೊಳುಂಬುದು ರಯ್ಯಮಲ್ಲಮು , ಬತ್ತಲೆಯಿರವು[2] ನಿತ್ತರಿಸಲರಿದು , ನೆಲೆವಕ್ಕೆ ಸಲೆಕಷ್ಟಂ ” ಎಂದು ಸೈರಣೆಗೆಟ್ಟು, ೧೬೪

[ನಸುಗುನ್ನಿ ಮುಟ್ಟಿದಂತಿರೆ
ಬಸಮಲ್ಲದೆ ತಿಂಬ ಮೆಯ್ಯ ತಿನಿಸಿಂಗಂ ಸೈ ।
ರಿಸಲಾಱದೆರಡುಕಯ್ಯಿಂ
ಮಸಗಿ ಮನಂಗೆಟ್ಟು ಮರುಳವೊಲ್ತುಱಿಸುತ್ತುಂ ॥] ೧೬೫

ಕುಂದದಿನಿಸುಂ ಮನಕೆ ಬಂದುಣಿಸನುಂಡು ಪದ
ಪಿಂದೆ ಪೆಱತೇಂ ಕೆಱೆಗೆ ಪೋಗಿ ತಿಳಿನೀರಂ ।
ಮಿಂದು ಬಿಡದೂರೊಳಗಣೊಂದುಲಿವ ಮಾತುಗಳ
ದಂದುಗದೊಳಾರ್ತಸಗಿ ಕೂರ್ತಿರದೆ ನಿಚ್ಚಂ ॥ ೧೬೬

---

1 ಸಾಲೆ (ಗ)   2 ನಿರ್ಗ್ರಂಥದಿರವು (ಕ. ಬ.)

ನಿಂದುಣಿಸಿನಿಂದೊಡಲದೊಂದುತಿನಿಸಿಂ ತೃಷೆಯು
ದೊಂದುಕುದಿಪಿಂ ತಿಗುಳನಾಡ ಸೆಱೆಯಂ ತಾ।
ನೊಂದಿದತಿ[1] ದುಃಖದೊಳ್ ಬೆಂದು ನಿಲಲಿನ್ನರಿದಿ
ದೆಂದು ವಸುಭೂತಿ[2] ಸಡೆದಳ್ಕಿ ಬಡವಾದಂ ॥ ೧೬೭

[ಅಂತು ಬೆಗಡುಗೊಂಡು ನಿಲಲುಂ ನಿತ್ತರಿಸಲುವಾಱದೆ] ಗಾಳಿಗೊಡ್ಡಿದ ಸೊಡರಂತೆ ನಡುಗಿ,[3] ಸೂಳೆಯ ಕೊರಳಂತೆ ಕರ್ಗಿ, ಪಿಡಿವೆತ್ತ ಕಳ್ಳನಂತೆ ತಲ್ಲಣಿಸಿ, ಬಡಿವೆತ್ತ [ಬಡವ] ನಂತೆ ಶಕ್ತಿಗೆಟ್ಟು, ಮಟದ ಬೆಕ್ಕಿನಂತೊಳಗಣ್ಗೋಡಿಯಾಡಿ, ಪಟದ ಸೀರೆಯಂತಲ್ಲಾಡಿ, ಬಲ್ಲದ ಪೆಂಡತಿಯಂತೆ ಸುಯ್ದು, ಮಲ್ಲರೊಳ್ ತೊಡರ್ದರಂತೆ ತಳ್ಗಿ, ಗರ್ಭಿಣಿಯಾದ ಗಂಡೆಯಂತೆ ಬಾಯಂ ಬಿಟ್ಟು, ಪರ್ವತವೇಱಿ ಬಿದ್ದರಂತೆ ನಿರ್ಜೀವನಾಗಿ, ಪಗಲ ಚಂದ್ರನಂತೆ ತೇಜಂಗೆಟ್ಟು ಜಗಳಗಂಟಿಯಂತೆ ಮಿಡುಮಿಡುಮಿಡುಕಿ, ಬೇಸಗೆಯ ಕೋಣನಂತೆ ನಾಲಗೆಯನುರ್ಚಿ, ಹಾಸುಗೊಂಡ ನಾಯಂತೆ ಸಿಡಿಮಿಡಿಗೊಂಡು, ಕಿಚ್ಚು ತಗುಳ್ದ ಮರದಂತೆ ನಯಂಗೆಟ್ಟು, ನಚ್ಚುಗೆಟ್ಟ ಬಡವನಂತೆ ಬೆಂಬಿರ್ದು, ದೆಸೆಗೆಟ್ಟರಂತೆ ಚಿಂತಿಸಿ, ಸಿಸುಗೆಟ್ಟರಂತೆ ಮಱುಗಿ, ಹುಣಿಸೆಯ ಕಾಯಂ ತಿಂದರಂತೆ ಚಳಿತು, ಪಣ್ತ ಕಬ್ಬಿನಂತೆ ನೆಲನಂ ಪತ್ತಿ, ಸೆಱೆಸಿಕ್ಕಿದನಂತುಮ್ಮಳಿಸಿ, ನೆಱವಿಲ್ಲದನಂತೆ ಕುಂದಿ, ಕೂರ್ಪರನಗಲ್ದರಂತೆ ಬೆದೆಬೆದೆಬೆಂದು, ಸರ್ಪನಂ ಮೆಟ್ಟಿದರಂತೆ ಭಯಂಗೊಂಡು, ಬಂಧನಕ್ಕೆ ಬಂದಾನೆಯಂತೆ ಜಾಕರಿಸಿ, ಬಡವ್ರೊಡಲಂತೆ ಜೋಲ್ದು, ಪರ್ವಡೆದ ಪಂದೆಯಂತೆ ತಲ್ಲಣಿಸಿ, ಮಾಱುವಡೆಯದ ಪರದನಂತೆ ಕಂದಿ, ತಣ್ಪೇಱಿದ ಪಱೆಯಂತೆ ದನಿ ಪೊಱಮಡದೆ, ಮಣ್ಪತ್ತಿದ ಮೂಲಿಗನಂತೆ ದೂರಿಸಿ, ಬಯಲೊಳ್ಕ್ಕಿದ ಮೀನಂತೆ ಮಿಡುಕಿ, ತಳಾಱನಂತೆ ನಿದ್ರೆಗೆಟ್ಟು, ಸಮ್ಯಕ್ತ್ವಚೂಡಾಮಣಿಗಿಂತೆಂದಂ :— ೧೬೮

1 ತೋರೊಂದಿದತಿದುಃಖ (ಕ)

2 ದುಃಖದೊಳಿಂದೆನಿಲಲಾಱದರೆಂದು (ಬ, ಗ.)

3 ಗಾಳಿಯಂತೆನಡುಗಿ (ಬ)

ಪುಲಿಯ ಮೀಸೆಯನಂಜದುಯ್ಯಲನಾಡಲಪ್ಪುದು ನಂಜನಂ
ಜಳಿಸಲಪ್ಪುದು ಸಿಂಹಮಂ ಪಿಡಿದೇಱಲಪ್ಪುದು ಕಿಚ್ಚಿನೊ ।
ಳ್ತೊಲಗದೊರ್ವರ್ಯೆ ಪಾಯಲಪ್ಪುದು ಸೊಕ್ಕಿದಾನೆಗೆ ಸಂದು ಮಾ
ರ್ಮಲೆಯಲಪ್ಪುದು ನಿನ್ನ ನೋಂಪಿಗೆ ಗಂಡನಾವನೊ ಸೈರಿಸಂ ॥

[ತ್ರಿಸೆ ಮೆಯ್ಯ ತಿನಿಸು ನೆಱೆ ಸೈ
ರಿಸಬಾರದ ತಲೆಯನೋವು ಮತ್ತೆತ್ತಲ್ ಮುಂ ।
ಪಿಸುಕದಿರವೆಂಬವಿನಿತುಂ
ಪುಸಿಯಲ್ತೊಂದೊಂದೆ ಕಿಡಿಸಲಾಱವೆ ನರರಂ ॥] ೧೩೦

ಕೇಳೊಂದನೆ ಪೆಱಗಣ ಪೋ
ದೇೞೆಂಟುಂದಿವಸವೆಂಬವೆನಗುಮ್ಮಳದಿಂ ।
ದೇೞೆಂಟು ವರ್ಷಮಾದುವು
ಕೇಳೀ ದುಃಖಕ್ಕೆ ಸೈರಿಸಿರ್ಪವನಾವಂ ॥ ೧೩೧

ಪೇೞಿನ ಮೇಲೆ ಪಾಸಱೆ ಯೇೞಿನ ಮೇಲೆ ಬಡಿಗೋಲ್ ಕೊಲೆಯ ಮೇಲೆ ಕವರ್ತೆ ಯೆಂಬಂತೆ ಸಂತಾಪದ ಮೇಲೆ ಸಂತಾಪಮಂ ಪೊೞ್ಪ ನಿನ್ನ ನೋಂಪಿಯೆಂಬ ಗರಗಸಕ್ಕೆನ್ನ ಮೆಯ್ಯನೊಡ್ಡಲಾಱೆಂ ; ಮತ್ತ ಮೊಂದೆರಡು ತಿಂಗಳ್ ವಿಶೇಷಮಾಗಿ ನೋಂತುಕೊಟ್ಟಪೆಂ, ಪಿರಿದಪ್ಪೆನ್ನ ಮ್ಮಳಕೆ ಪೋಪಂತು ನಿಮ್ಮಧ್ಯಕ್ಷಂಬೆರಸು ಕೆಱೆಗೆ ಪೋಗಿ ಮೆಯ್ಯಂ ಕರ್ಚಿಕೊಂಡೊರ್ವರ್ಯಿರ್ವರ್ ನೀರಂ ಕುಡಿದು ನಿಮ್ಮ ಬೀಡಿನೊ ಳೊಂದೆರಡುಗಳಿಗೆ ಸುಱಿದಾಡುವಂತು ಮಾೞ್ಪುದೆನೆ, ದಯಾಮಿತ್ರಸೆಟ್ಟಿ ಬಾಯ ತಂಬುಲಂ ಸೂಸೆ ಕಳಕಳಿಸಿ ನಕ್ಕು, ೧೩೨

ಕಲಿತನದಿಂದಂ ಲೋಗರ್
ಪುಲಿಯುಂ ಪಿಡಿದೊಡಮದೇಂ ಬಿಡೆಂಬರ್ತಾವೊಂ ।
ದಿಲಿಯುಂ ಪಿಡಿದೊಡಮದು ಪೆ
ರ್ಬುಲಿಯೆಂಬರ್ದುರ್ಜನರ್ಗೆ ತಾನಿದು ಸಹಜಂ ॥ ೧೩೩

[ಪಾಪಿಲ್ಲದೆಡೆಯೊಳ್ ಕಪ್ಪೆಗಳ್ ತಮ್ಮ ಗಜಱಿ ಗಱುಱುಗಿರ್ಪುವು, ಪಾವು ಬರೆ ಗಜಱುಗೆಟ್ಟು ಸತ್ತಂತಿರ್ಪುವು. ಅಂತೆ ಮಹಾಪರೀಷಹಂಗಳ್ ತಮ್ಮ ಮನಮಂ ಕನಡದನ್ನಂ ಕುತ್ಸಿತರ್ ತಮ್ಮ ನೆಗೞ್ತೆಯೆ ಪಿರಿದೆಂದು ಪೊಂಗುತ್ತಿರ್ಪರ್, ಪರೀಷಹಂಗಳಡಸಿದಂದು ದೆಸೆಗೆಟ್ಟು ಬಾಯ್ಗೆಟ್ಟು ಮಱುಗುತ್ತಿರ್ಪರ್,] ೧೭೪

ಕಡುಮೂರ್ಖರ್ತಮ್ಮಿಚ್ಛೆಗೆ
ಪಿಡಿದುದೆ ಪಿರಿದೆಂಬರಣ್ಣ ಜಿನಮಾರ್ಗದೊಳೇಂ ।
ನಡೆಯಲ್ ಬರ್ಕುಮೆ ಬಾರದು
ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ ॥ ೧೭೫

ಇಂತು ನೆಗೞ್ಚಲ್ಕರಿದಾದುವುಂ ಫಲದೊಳ್ ಪಿರಿಯುವುಮಪ್ಪ ಪನ್ನೆರಡು ತೆಱದ ತಪಮುಮಂ[1] [ನಿಲಲುಂ ನಿತ್ತರಿಸಲುಂ ಬಾರದಿಪ್ಪತ್ತೆರಡು ಮಹಾಪರೀಷಹಂಗಳುಮಂ, ಮೋಕ್ಷನಿಶ್ರೇಣಿಗಿವು ಮೆಟ್ಟೆನಿಸಿ ಪಿರ್ಪತ್ತೆಂಟು ಮೂಲಗುಣಂಗಳುಮಂ, ಮಹಾವ್ರತಕ್ಕಿವು ವಜ್ರಪ್ರಾಕಾರಮೆನಿಸಿ ನೆಗೞ್ತೆವಡೆದ ಪಂಚಾಚಾರನುಮಂ, ರತ್ನತ್ರಯಕ್ಕೆ ಕಾಪಾಗಿ ಬಳಸಿದ ಕೋಂಟೆಯಿದೆನೆಸಿರ್ಪ ಪದಿಮೂಱು ಚಾರಿತ್ರಮುಮಂ, ಸಕಲಗುಣಂಗಳೆಂಬ ರತ್ನಂಗಳ್ಗೆ ಕರಂಡಮೆನಿಸುವ ದಶಧರ್ಮಮುಮಂ, ಬರ್ವಗಲ್ಪೊಡಂ ತಪ್ಪಲೀಯದೆ] ಮರಣಪರ್ಯಂತಂ [ಬೇಬೀಱದಲಸದೋಸರಿಸದಾಱನೆನ್ನದೆ ಬೆಚ್ಚದೆ] ನಡೆಯಿಸುವ ಮಹರ್ಷಿಗಳ ಮನದ ಧೈರ್ಯಮಂ ಬಣ್ಣಿಪನಾವನವನೊಳ್ಕುಱಿಯುವಪ್ಪೊಂದೆರಡು ಪರೀಷಹಂಗಳ್ಗೆ ಬೆಂಬಿರ್ದಿರಕ್ಕುಬಾಯೆಂಬುದುಂ ವಸುಭೂತಿ ವಿಸ್ಮಯಂಬಟ್ಟು, ೧೭೬

ಅಳಿಪಿಂದಮೆಳೆಯ ಬರ್ದೆಗೆ
ಯಳೆಯುಂ ಕುಡಿಯಿಸಿದರೆಂಬ ತೆಱದಿಂ ಮುನಿಸಂ ।

1 ಪಲವು ನೆಗೞ್ತೆಗಳಂ

ಕುಳಮುಮನಾನುಕ್ರಿಂದಂ
ಪಳಿದೊಡೆ ಮುನಿದೆನ್ನ ಸಿಟ್ಟನೆನ್ನೊಳ್ ಕಳೆವಂ ॥ ೧೭೭

ಕಟಕವುಮಂ ಕಂಡಱಿಯದವಂಗೆ ಪಳ್ಳಿ ಪಿರಿಯೂರಾಗಿ ತೋರ್ಪಂತೆ ಧೈರ್ಯಾನ್ವಿತರಪ್ಪ ಮಹರ್ಷಿಯರ ತಪೋಮಾರ್ಗಮನಱಿಯದೆನಗೆ ವೆಮ್ಮ[1] ಚಾರಿತ್ರವು ಪಿರಿದಾಗಿರ್ದುದು ಸಾಜವಾದೊಡಂ " ಪರದರೊಳ್ಮರುಳಿಲ್ಲ, ಸೂಳ ಸಾಧುವಲ್ಲ " ಎಂಬ ನಾಣ್ಣುಡಿಯುಂಟಪ್ಪುದಱಿಂದೀತಂ ಮರುಳಲ್ಲವೀತನ ಪಿಡಿದ ಧರ್ಮಮೆ ಧರ್ಮಮೆಂಬುದು, ೧೭೮

ಆರುಮಿದಕ್ಕೆ ನಿತ್ತರಿಸಲಾಱರೆನಿಪ್ಪ ಪರೀಷಹಂಗಳಂ
ಸೈರಣೆಯಿಂದೆ ಗೆಲ್ವ ಮುನಿಮುಖ್ಯರ ಸಾರ್ದ ಜಿನೇಂದ್ರಧರ್ಮಮಂ
ಸಾರಮೆನಿಪ್ಪುದಂ ತಿಳಿದು ನಂಬಿದರನ್ಯರನೇಕೆ ಪೊರ್ದುವರ್
ಮೇರುವನೇಱಿ ನೋಡಿದವರ್ಗೀಧರೆ ತಾಂ ಕಿಱಿದಾಗಿ ತೋರದೇ ॥೧೭೯

[2] [ಎಂದು ತನ್ನೊಳ್ ವಿಚಾರಿಸಿ ವಾತ್ಸಲ್ಯರತ್ನಾಕರಂಗೆ ಕೈಗಳಂ ಮುಗಿದು ನಿಮ್ಮ ಪಿಡಿದ ಧರ್ಮಮು ಲೇಸೆಂಬುದನೀಗಳಱಿದೆಂ ನೀನೆನಗೆ ಧರ್ಮದೊಳಾದಭಿಪ್ರಾಯಮನಱಿಯೆ ಪೇಟಿಲ್ವೇಟ್ಕೆಂಬುದುಂ ಸೆಟ್ಟಿಯಿಂತೆಂದಂ:—] ೧೮೦

ಪರಮಾರ್ಥಮಪ್ಪುದಂ ಮ
ಚ್ಚರಿಸದೆ ಕೋಪಿಸದೆ ಡಂಗೆಗೊಳ್ಳದೆ ಪಕ್ಷ ।
ಕ್ಕುರಿದೇಳದೊಂದೆಮನದಿಂ
ನಿರುತಂ ಕೇಳ್ವವನೆ ಧರ್ಮದೊಳಗಂ ತಿಳಿಗುಂ ॥ ೧೮೧

[ಕನ್ನಡಿಯುಂ ನೋಡುವವಂ
ತನ್ನಯ [3] ಪೆಱಗಣ್ಗೆ ಕಾಣಲಾರ್ಪನೆ ರೂಪಂ ।

---

[1] ಅನ್ಯರ ಚರಿತ್ರಮೆ ಪಿಱಿದಾಗಿ ತೋರದತುಂ ಪರವರೊಳ್ (ಕ)

[2] ಸೆಟ್ಟಿಗೆ ಕೈಮುಗಿದು ನೀವು ಧರ್ಮಮಂ ಬೆಸಸಿಮೆಂಬುದುಮೆಮ್ಮ ಧರ್ಮಮನಂತು ಪೇಳುವೆನೆಂದು ಮೆಲ್ಲನಿಂತೆಂದಂ (ಗ) [3] ತನ್ನಂ, (ಕ,ಬ)

ಮುನ್ನಮೆ ಬಱಿದೊಳಱುವವಂ
ಸನ್ನುತಸದ್ಧರ್ಮಮಪ್ಪುದಂ ತಾನಱಿಯಂ ॥] ೧೪೨

ಜನ್ರಲಿಯಂತೆ ಪೊಲ್ಲಮೆಯುಂ ಪಿಡಿಯದೆ, ಕೋಣನಂತೆ ಕದಡದೆ, ಬಕನಂತೆ ಧೂರ್ತನಾಗದೆ, ನರಿಯಂತೊಡನೊಡನೊಡಱದೆ, ಜಡನಂತವಿಚಾರಿಯಾಗದೆ, ಪಾಣ್ಬಯಂತೆ ಮತ್ತೊಂದು ಮನಮಾಗದೆ, ನಪುಂಸಕನಂತೆರಡಕ್ಕಾಸೆಗೆಯ್ಯದೆ, ಗಿಳಿಯಂತೆ ಪಲವಂ ಗಳಪದೆ, ಸವತಿಯಂತೆ ಪುರುಡಿಸದೆ, ಪುಲಿಯಂತೆ ಮೇಲ್ವಾಯದೆ, ಪೆಱೆಯಂತೆ ವಕ್ರನಾಗದೆ, [1] ಸಿಡಿಲಂತೆ ಭಯಂದೋಱದೆ, ಲಂಚಗಾಱನಂತೆ ನುಡಿಗೆಡಿಸದೆ, [ಏಕಚಿತ್ತದಿಂ] ಕೇಳ್ವರಪ್ಪೊಡೆ ಪೇೞ್ದಪೆನೆಂಬುದುಂ, [2] ವಸುಭೂತಿ ನಿಮ್ಮ ಬೆಸಸಿದಂತೆ ಪೆಱತು ಭಾವನೆಯಿಲ್ಲದೊಂದೆಬುದ್ಧಿಯಿಂ ಕೇಳ್ದಪೆನೆಂಬುದುಂ, ಸುಖಕ್ಕಾಗರಮೆನಿಸುವ ಸದ್ಧರ್ಮಮಂ ಸಟ್ಟಯಿಂತೆಂದು ಪೇೞ್ದಂ ॥ ೧೪೩

ನೆರೆದೆಲ್ಲರ್ ಕೞ್ಗಡಿಯಂ
ತ್ತಿರೆ ಬಡವರ್ಗಲ್ಲಿ ಧರ್ಮಗಳ್ಳಂದೆಱೆವರ್ ।
ಧರೆಯೊಳಗದುವಂ ಧರ್ಮಮ
ನಿರುತಂ ಪೇೞ್ಣ ನೀನೆ ಭಾವಿಸಿ ಮನದೊಳ್ ॥ ೧೪೪

ಪರವನಿತೆಗೋತು ಸ್ವೈರಿಸ
ಲರಿದಾಗಿಂಬಾಗಿ ತೋರ್ಪ ಧರ್ಮಂ ನಿನಗ ।
ಕ್ಕೆರಡಿಲ್ಲದೆಂದು ನಂಬಿಸಿ
ನೆರೆವರ್ಸದ್ಧರ್ಮಮಪ್ಪುದೇ ಕೇಳದುವುಂ ॥ ೧೪೫

ಬಸಮಲ್ಲದ ರುಚಿಯುಂ ಸ್ವೈ
ರಿಸಲಾಱದೆ [3] ಧರ್ಮಮಣ್ಣ ಕೊಲ್ಲ್ಣೆ ದಯೆಯಿಂ ।

---

1 ಮೇರದನಂತೆ ಸೀಳೆತ್ತದ (ಗ)

2 ನೀಮುಂದಂತೆ ಕೇಳ್ದಪೆಂ ಬೆಸಸುವೆ ನ ಸಟ್ಟಯಿಂತೆಂದಂ (ಗ)

3 ರುಚಿಯಿಂ ಜೀವಿಸಲಾರದ (ಕ.. ಖ)

ನೆಸುವಮತಿಯೊಳಱಿವರದುವುಂ
ಮಿಸುಗುವ ಸದ್ಧರ್ಮವೆಂದು ನಂಬುವುದೆ ಬುಧಂ ॥ ೧೮೬

[ಧರೆಯೊಳ್ ಕಳವುಂ ಕೊಲೆಯುಂ ಪ್ರಸಿದ್ಧ ಪಾಪಂಗಳಾಗಿರ್ದುಂ] ಕವರ್ದು ತಂದ ಧನಮುಮಂ [ಬೇಂಟೆಯೊಳ್] ಕೊಂದು ತಂದಪಶುಗುಮಂ ತಮ್ಮೊಳ್ ಧರ್ಮದಿಂ ಪಚ್ಚಿಕೊಡಿಮೆಂಬರದುವುಂ ಧರ್ಮಮಕ್ಕುಮೆ, ೧೮೭

ಅರಸೆಂಬ ಪೆಸರ್ ಪಗರಣ
ದರಸಂಗಂ ಧಾರಿಣೀಶ್ವರಂಗಂ ಕರಮಾ।
ದರದಿಂದಮಕ್ಕುಮನಿತಱೊ
ಳರಸನದೊಂದಾಜ್ಞೆ ಬಗೆವೊಡಾತಂಗುಂಟೇ ॥ ೧೮೮

[1] [ಪಿಟ್ಟೆಂಬ ಪೆಸರ್ ಕಳವೆಯು
ಪಿಟ್ಟಂಗಂ ಭೂತಳಾಗ್ರದೊಳ್ಬ್ಬಿಪಿಸೆ ಬೆಳ್।
ಪಿಟ್ಟಂಗಮಕ್ಕುಮಾದೊಡೆ
ಪಿಟ್ಟನೊಳಿರ್ಪೊಂದುರುಚಿಯುನದು ತಳದಪ್ಪುದೇ ॥ ೧೮೯

ಕಬ್ಬೆಂಬಭಿಧಾನಂ ಕಾ
ಬ್ಬಿಗಂ ನೆಗಳ್ದ ಮೆಲ್ವ ಕಬ್ಬಿಂಗಂ ಕೇ।
ಳುರ್ಬರೆಯೊಳಕ್ಕುಮಾದೊಡೆ
ಕಬ್ಬಿನೊಳುಂಟಾದ ರುಚಿಯುನದು ತಳದಪ್ಪುದೇ ॥ ೧೯೦

ಪೊನ್ನೆಂಬ ಪೆಸರ್ ಕನಕ
ಕ್ಕನ್ನಯದಿಂ ಮದ್ದುಗುಣಿಕೆಗಂ ಸಮನಕ್ಕುಂ।
ಪೊನ್ನೆಲ್ಲಿಗಮೆಸೆವಂತಿರೆ
ತಾನ್ನೆಱಿ ಸಂದಪ್ಪುದೆ ಮದ್ದುಗುಣಿಕೆಯುಮಿಳೆಯೊಳ್ ॥] ೧೯೧

---

1 ಕಳವೆಯ ಪಿಟ್ಟುಮಂ ಬೆಳ್ವಟ್ಟುಮಂ ಪಿಟ್ಟೆಂಬರಾವಿನತುಪ್ಪಮುಮಂ ಕೇರತುಪ್ಪಮುಮಂ ತುಪ್ಪಮೆಂಬಂತೆ ಪಾಪಿಗಳ್ಗಂ ಕುತ್ಸಿತಧರ್ಮಮೆ ಧರ್ಮಮಾಗಿ ತೋರ್ಕುಮದು ಧರ್ಮಮಲ್ಲದು (ಗ)

ಪಾಲೆಂಬ ನಾಮಮೊವಿನ
ಪಾಲಿಂಗಂ ನಾಯುವಟದ ಕಳ್ಳಿಯೊಳಾದಾ ।
ಪಾಲಿಂಗಮೆಕ್ಕಮಾದೊಡೆ
ಪಾಲೊಳ್ಪಂ ಸವಿಯುಮದಱೊಳೇಂ ಸಮನಿಕುಮೇ ॥ ೧೯೨

[ತುಪ್ಪವೆಂಬ ಪೆಸರಾವಿನ ತುಪ್ಪಕ್ಕಂ ಗೇರ ತುಪ್ಪಕ್ಕಮುಂಟೆಪ್ಪೊಡಂ, ತುಪ್ಪದಂತಿನಿದಕ್ಕುಮೇ ? ಕುದುರೆಯೆಂಬ ಪೆಸರ್ ಬಿಸಿಲ್ಕುದುರೆಗಂ ಜಾತ್ಯಶ್ವಕ್ಕಮುಂಟಾವನಿತಱೊಳ್ ಕುದುರೆಯಂತಕ್ಕುಮೇ, ಧರ್ಮವೆಂಬ ಪೆಸರ್ ಸದ್ಧರ್ಮಕ್ಕಂ ಕುಧರ್ಮಕ್ಕಂ ಸಮನಿಸುಗುಮೆನಿಸಿ ತಱೊಳ್ ಸದ್ಧರ್ಮದೊಳಾದೈಶ್ವರ್ಯಮಂ ಪಡೆಯಲಾರ್ಕುಮೇ ಪಡೆಯ ಕೂಡದದು ಕಾರಣದಿಂ ॥ ೧೯೩

ರಸಮಂ ಪೊರ್ದಿ ಸಮಂತು ಲೋಹನಿಕರಂ ಪೊನ್ನಪ್ಪವೋಲುರ್ವಿಯೊಳ್ ರಸಮೆಂಬೀ ಪೆಸರಿಂಗೆ ಕೇರ ರಸದೊಳ್ ಪೊನ್ನಕ್ಕುಮೇ ನೋಡ ಪೊರ್ದಿಸಿ ಸದ್ಧರ್ಮಮನೇನು ನಂಬಿ ಸುಖಮಪ್ಪಂತಣ್ಣ ನೀಂ ನೋಡ ಭಾವಿಸಿ ಪೊರ್ದಿದೊಡೆ ಕೊಳ್ವಧರ್ಮದೊಳದೇಂ ಕೈಸಾರ್ಗುಮೇ ತತ್ಸುಖಂ

ಪುರುಳ ಪಯಣಕ್ಕೆ ತಱಗೆಲೆಯೆ ಸಂಗಡಿಗನೆಂಬಂತೆ ಪಾಪಿಯಪ್ಪಂಗೆ ಕುತ್ಸಿತಧರ್ಮಮೆ ಸದ್ಧರ್ಮಮಾಗಿ ತೋರ್ಕುಂ ॥] ೧೯೪

ಎಲ್ಲೆಲ್ಲ ಸುಖಂಗಳೊಳಂ
ನಿಲ್ಲದೆ ನೆರೆದಿರ್ಪೆನೆಂಬ ಮನಮುಳ್ಳೊಡೆ ತ ।
ಳ್ಪಿಲ್ಲದೆ ಪಿರಿದಾದರದಿಂ
ಕೊಲ್ಲದ ಧರ್ಮಮನೆ ಪಿಡಿಗೆ ನಂಬುಗೆಯಿಂದಂ ॥ ೧೯೫

ಆ ಕೊಲ್ಲದ ಧರ್ಮಂ ಜೈನಾಗಮದೊಳಲ್ಲದಱಿಯಲ್ಬಾರದಾ ಪರಮಾಗಮಮುಂ [1] ನಿರ್ದೋಷಿಯಪ್ಪ ಪರಮಾತ್ಮನ ಮುಖಕಮಲದಿಂದಲ್ಲದೆ ಪೊಱಮಡದಾದೇವನೆಂತಪ್ಪನೆಂದೊಡೆ:— ೧೯೬

1 ಪೂರ್ವಾಪರವಿರುದ್ಧಮಲ್ಲದ ಪರಮಾಗಮದೊಳಲ್ಲದಱಿಯಲ್ಬಾರದು ಮುಕ್ತಿಶ್ರೀಯ ತವರ್ಮನೆಯೆನಿಸುವ ಆ ಪರಮಾಗಮಮುಂ (ಕ)

ಮರಣಂ ಚಿಂತೆ ಭಯಂ ಮದಂ ಮುಳಿಸು ಮೋಹಂ ಖೇದ ರೋಗಂ
ಬೆಮ
ಜರೆ ನೀರೞ್ಕೆ ವಿಷಾದಮೂಟ ಜನನಂ ಲೋಭಂ ಮಹಾವಿಸ್ಮಯಂ
ಸ್ಮರಬಾಣಾಹತಿ ನಿದ್ರೆಯೆಂಬಿವಿನಿತಂ ಗೆಲ್ದಾತನೇ ತಾಂ ಜಿನೇ
ಶ್ವರನಿಂದ್ರಾರ್ಚಿತಪಾದನಾತನೆ ವಲಂ ಸೌಖ್ಯಕ್ಕೆ ತಾಂ ಕಾರಣಂ॥ ೧೯೮

ಆ ಪರಮೇಶ್ವರನನಱಿವರೆತ್ತಾನುಮೊರ್ವರಪ್ಪರದೆಂತೆನೆ:- ೧೯೯

ಕಕ್ಕಿನ ಪವಳದ ಮಣಿಗಳ
ನಿಕ್ಕುವವರ್ಪಲರೊ ಮುತ್ತಿನ್ಸರಮಂ ಕೇ ।
ಳಿಕ್ಕುವವರ್ಪಲರೊ ಕರಂ
[1] ನಿಕ್ಕುವಮೊರ್ವ್ಯದು ನೋೞ್ಪೊಡವನೀತಳದೊಳ್ ॥ ೨೦೦

[2] ನಿಕ್ಕುವದಿಂ ತಾಳೋಲೆಯು
ನಿಕ್ಕುವವರ್ಪಲರೊ ನೋಡ ಪೊನ್ನೋಲೆಯುನಂ ।
ತಿಕ್ಕುವವರ್ಪಲರೊ ಮನ
ಕ್ಕಕ್ಕೆವಮಂ ಪೊರ್ದಲೀಯದಿದನಾರಯ್ನೇಂ ॥ ೨೦೧

ವರರತ್ನಮನಱಿವವರು
ಮಱೆಯೊಳ್ಕೇಳ್ಪಲರೊ ಕಲ್ಲುಮಂ ಪುಲ್ಲುಮನು ।
ಮಱೆಯೊಳಱಿವವರನೇಕರೊ
ಪರಿಕಿಸಿ ನೋಡಣ್ಣ ನಿನ್ನ ಮನದೊಳ್ ನಯದಿಂ ॥ ೨೦೨

ಮರನನಱಿವಂತು ಬಲ್ಲರೆ
ಸಿರಿಖಂಡವನಣ್ಣ ಪಗಿನನಱಿವಂತಿರೆ ಕ ।
ರ್ಪೂರಮಂ ಬಲ್ಲರೆ ಕುತ್ಸಿತ
ಸುರರಂ ನರರಱಿವ ತೆಱದಿನಱಿವರೆ ಜಿನನಂ ॥ ೨೦೩

[ಅದಱಿಂಸು]ವಸ್ತುವನಱಿವರುಂ ಸುವಸ್ತುವಂ ಕೊಡುವವರುಂ ಕೆಲಂಬರ್; ಕುವಸ್ತುವನಱಿವರುಂ ಕುವಸ್ತುವಂ ಕೊಡುವವರುಂ ಪಲಂ

---

1 ನಿಕ್ಕಿದನಾರ್ವದು (ಕ)   2 ಬಕ್ಕುದಿಯಿಂತಾಳೋಲೆ (ಗ)

ಬಾದೊಡಂ [ಸುವಸ್ತು] ವಸ್ತುಪರೀಕ್ಷಕರಿಂದಲ್ಲದಱಿಯಲ್ಬಾರದು,[1] ಕುವಸ್ತುವಾದೊಡೆ ಹಲಧರಗೋಪಾಲಾದಿಗಳಱಿತಕ್ಕೊಳಗಾದುದಱಿಂ [2] ಸರ್ವಜ್ಞನುಂ ಸುವಸ್ತುವಪ್ಪುದಱಿಂ ವಸ್ತುಪುರುಷರ್ಗಲ್ಲದಱಿಯಲ್ಬಾರದು

[3] ಪರಮಾರ್ಥಂ ನಿರ್ದೋಷಿಯೆ
ಪರಮೇಶ್ವರನಾತನೆಂದುದಾಗಮಮಂತಾ ।
ಪರಮಾಗಮದರ್ಥಂ ವಿ
ಸ್ತರದಿಂದಂ ತತ್ವಮೆಂಬ ನಂಬುಗೆಯೆ ವಲಂ ॥ ೧೦೫

ಸಮ್ಯಕ್ತ್ವಮಾಸಮ್ಯಕ್ತ್ವಮೇಗೆಯುಂ ದೊರೆಕೊಳ್ಳದದು ಪುಣ್ಯದಿಂ ದೊರೆಕೊಂಡುದಪ್ಪೊಡನಂತಸುಖದೊಳ್ಕೂಡುಗುಮೆಂದು ವಣಿಗ್ವಂಶಲಲಾಮಂ ಪೇೞೆ, ವಸುಭೂತಿ [ಕೇಳ್ದು] ತಾಗಿ ಬಾಗಿದನಂತೆ [ಮುನ್ನಿನ] ದರ್ಪಂಗೆಟ್ಟು ಕದಡಿ ತಿಳಿದ ನೀರಂತೆ [ಮನದೊಳ್] ನಿರ್ಮಳನಾಗಿ ಸಮ್ಯಗ್ದರ್ಶನಂ ದೊರೆಕೊಂಡುದಕ್ಕೆ [4] [ಮನದೊಳಾನಂದಂಬೆತ್ತು ಸಮ್ಯಕ್ತ್ವಚೂಡಾಮಣಿಯುಂ ನಾನಾವಿಧದಿಂ ಪೊಗೞ್ದು ದರ್ಶನದೊಳ್ ದೃಢನಾಗಿರ್ದನನ್ನೆಗಮಿಭ್ಯಾನ್ವಯಪವಿತ್ರಂ ಮಱುದಿವಸಂ ಬೀಡನೆತ್ತಿ ಕತಿಪಯಪಯಣಂಬೋಗಿ ನಂದ್ಯಾವಲಿಯೆಂಬ ಪೇರಡವಿಯೊಳ್ ಬೀಡಂ ಬಿಡುವುದುಂ, ೧೦೬

ನೆರೆದು ವನಚರರುಮೊರ್ಮೆಯೆ
ಭರವಶದಿಂ ತಾಗೆ ಸೆಟ್ಟಿ ಪಿರಿದಪ್ಪ ಬಲಂ ।
ಬೆರಸಿದಿರನದಿರದಣ್ಮಿಂ
ಕರಿಯೊಡ್ಡಂ ಸಿಂಹದೊಡ್ಡು ತಾಗುವ ತೆಱದಿಂ ॥ ೧೦೭

---

1 ಪರೀಕ್ಷೆಯಿಂದಲ್ಲದಱಿಯಲ್ 2 ಕುವಸ್ತುಗಳ್ ಗೋಪಾದಿಅಱಿತಕ್ಕೊಳಗಾಗ್ಗದು (ಗ) 3 ಅದಱಿಂ ನಿರ್ದೋಷಿಯೆ ದೇವನಾತನೆಂದುದಾಗಮಮುಂ ಆ ಪರಮಾಗಮದರ್ಥಮೆ ತತ್ವಮೆಂದು ನಂಬುವುದುಂ ಸಮ್ಯಕ್ತ್ವಂ. (ಗ)

4 ದರ್ಶನರತ್ನಂ ದೊರೆಕೊಂಡುದಕ್ಕೆ. (ಕ)

ತಾಗಿ ಕಿಚ್ಚಿಂ ಕಿಡಿಯುವಾಗಿ ಕಾದುತ್ತುಮಿರೆ] [1] ದೂರದೊಳಿರ್ದ ವಸುಭೂತಿಯಂ, ೨೦೮

ಅಂಬರಿಗುಮಾಯುತಪ್ಪಿದೊ
ಡೆಂಬೀ ನಾಣ್ಣುಡಿಯನಲ್ಲಿ ಪುಸಿಮಾಡದೆ ಕೂ ।
ರಂಪೊಂದು ಬಂದು ನಡೆ ನೋ
ವಿಂ ಬಿದ್ದಂ ಸಾವ ಪೊತ್ತನಾವಂ ಬಲ್ಲಂ ॥ ೨೦೯

[ಅಂತು ಬೀೞ್ವುದುಮತ್ತಮುಬ್ಬಿರ್ದ ಬೇಡರ ಗರ್ವದಗುರ್ವಂ ಕೆಡಿಸಿ ಕಾಳಗಮಂ ಗೆಲ್ದು ಬೀಡಂ ಪೊಕ್ಕು ನೊಂದಿರ್ದ ವಸುಭೂತಿಯಂ ಕಂಡು ಧರ್ಮಪಕ್ಷಪಾತದಿಂಗೇಱು ಪಿರಿದಪ್ಪುದಱಿಂ] [2] ಸನ್ಯಸನಮಂ ಕೊಟ್ಟು ಪಂಚನಮಸ್ಕಾರಮಂ ಪೇೞುತ್ತಿರ್ಪುದುಂ, [ಮತ್ತೆನಿಸದೆ ತನಗೆ ಜಿನನೆ ದೈವಮೆಂಬ] [3] ಭಾವನೆಯಿಂ ವಸುಭೂತಿ [ದಯಾಮೂಲಮಪ್ಪ ಧರ್ಮಮಂ ನೆನೆಯುತ್ತೆ ಮುಡಿಪಿ ದರ್ಶನಫಲದಿಂ ಸೌಧರ್ಮ ಕಲ್ಪದೊಳ್ ಮಣಿಪ್ರಭಾವಿಮಾನದೊಳ್ ಮಣಿಕುಂಡಲನೆಂಬ ದೇವ [4] ನಾಗಿ [ಪುಟ್ಟುವುದುಂ, ೨೧೦

ಇದು ನಿನ್ನಿರ್ಪ ಮಹಾಪ್ರಭೋರ್ಜಿತವಿಮಾನಂ ನೂತ್ನಲಾವಣ್ಯದಿಂ
ದೊದವಿರ್ದೀ ದಿವಿಜಾಂಗನಾಸಮಿತಿ ಪೆಂಪಿಂ ನಿನ್ನ ಕಾಂತಾಜನಂ ।
ಮುದದಿಂದೀ ವಿಬುಧಾಳಿ ನಿನ್ನ ಪರಿವಾರಂ ದೇವ ಕೈಕೊಂಡು ಕಾ
ವುದು ನೀನೆಂದು ಸುರಾಳಿ ಬಿನ್ನವಿಸೆ ತದ್ದೇವಂ ಮಹಾಚೋದ್ಯದಿಂ॥ ೨೧೧

ಆನಾರೀಲೋಕಮಾವುದೀ ಕೇಳಿಸುತ್ತಿರ್ದ ಪರಿಜನಮಾರೆಂದು ಕುಱುಂಬನರಸುಗಂಡಂತೆ ನೋಡುತ್ತುಮಿರ್ಪನ್ನೆಗಂ ಭವಪ್ರತ್ಯಯ

---

1 ರಂಗಿಸಿ ವಾತ್ಸಲ್ಯರತ್ನಾಕರನಂ ಪಲವು ತೆಱದಿಂ ಪೊಗೞ್ದು ಸಮ್ಯಕ್ತ್ವದೊಳ್ ಧೃಢನಾಗಿರ್ದನನ್ನೆಗಂ ಸೆಟ್ಟಿ ಮರುದಿವಸಂ ಬೀಡನೆತ್ತಿಸಿ ನಂದ್ಯಾವಲಿಯೆಂಬ ಅಡವಿಯೊಳ್ ಬಿಡುವುದುಂ ಬೇಡರ್ ಬೀಡಂ ಪತ್ತಿ ಕಾದುತ್ತಿರ್ಪಲ್ಲಿ (ಗ)

2 ಸೆಟ್ಟಿ ಬೇಡರೊಕ್ಕಲಂ ಗೆಲ್ದು ಬಂದು ನೊಂದಿರ್ದ ವಸುಭೂತಿಗೆ ಧರ್ಮವಾತ್ಸಲ್ಯದಿಂ. (ಗ) 3 ಶುಭಭಾವನೆ. (ಗ) 4 ಸಾಮಾನಿಕದೇವ. (ಗ).

ಜ್ಞಾನಂ ಪುಟ್ಟೆ ತಜ್ಞಾನದಿಂ ಪೆಱಗಣ] [1] ಭವಮನಱಿದು ಬೆಱಗಾಗಿ, ೧೧೨

ಆನೆತ್ತ ದೇವಲೋಕದ
ನೂನಸುಖಾಸ್ಪದಮಿದೆತ್ತ ಬಗೆವೊಡಿದೆಲ್ಲಂ ।
ಮೌನಿತದರ್ಶನದಿಂದಂ
ತಾನಾದುದು ಭಾಪು ದರ್ಶನಂ ಕೇವಳಮೇ ॥ ೧೧೩

ಪುಸಿದೆನ್ನಂ ಪೊನ್ನಿಂ ಬಂ
ಚಿಸಿ [2] ವ್ಯಸನುಪಾಯದಿಂದೆ ದರ್ಶನಮಂ ಬ ।
ಳ್ಸೆ ನಂಬಿ ದೇವನಾದೆಂ
ವಸುಧೆಗೆ ಸಮ್ಯಕ್ತ್ವಮುಳ್ಳ ಮನುಜನೆ ದೇವಂ ॥ ೧೧೪

ಆವಾವುಪಾಯದಿಂದಂ
ಜೀವಕ್ಕೋರಂತೆ ಧರ್ಮಮಂ ಪೇಳ್ದು ಸುಖ ।
ಕ್ಕಾವಗಮುಯ್ದ ಪರದಱಿಂ
ಶ್ರಾವಕರಿಂ ರುಷಿಯರಿಂ ಕೃತಾರ್ಥರುಮೊಳರೇ ॥ ೧೧೫

ಎಂದು ಮಹಾವಿಭೂತಿಯಿಂ [ವಸುಭೂತಿಚರಾಮರಂ] ಬಂದು ದಯಾಮಿತ್ರಸೆಟ್ಟಿಗೆ ಪೊಡೆಮಟ್ಟು ನಿನ್ನ ಪ್ರಸಾದದಿಂದಾಂ ದೇವನಾದೆನೆಂದು ತನ್ನ ಮಹಿಮೆಯುಂ ತೋಱಿ ದೇವಲೋಕಕ್ಕೆ ಪೋಗಿ [ಷೋಡಶಕಲ್ಪಂಗಳ ನಂದೀಶ್ವರದ್ವೀಪದ ಮೇರುಗಿರಿಯ ಜ್ಯೋತಿರ್ಲೋಕದ ವ್ಯಂತರಲೋಕದ ಭವನಲೋಕದ ಮಣಿಕನಕಮಯಮಪ್ಪಕೃತ್ರಿಮಚೈತ್ಯಾಲಯಂಗಳಂ ದರ್ಶನವಿಶುದ್ಧಿಯಿಂದಿಂದ್ರಾದಿಪಂಚಕದೊಳ್ಪುಟ್ಟುವ ದೇವರುಮಂ ಕಂಡು ಬಲ್ಲಿತ್ತಂ ಕಬ್ಬೊನ್ನೊಳ್ [3] ಕಟ್ಟಿಸಿದಂತೆ ಸಮ್ಯಕ್ತ್ವದೊಳ್ ದೃಢನಾಗಿ,] ೧೧೬

ಎಲ್ಲಿ ಜಿನಭವನಮೊಳವಂ
ತಲ್ಲಿಯೆ ಮನದೆಱಕದೋಲಗಂ ಮುದದಿಂ ಮ ।

---

1 ಭವಪ್ರತ್ಯಯಜ್ಞಾನದಿಂ ಪುಱನ್ನಿನ. (ಗ)

2 ನಂಬಿಸಿ. (ಗ) 3 ಕಬ್ಬುನದೊಳ್ (ಕ) ಕಬ್ಬೊಂನದೊಳ್ (ಬ)

ತ್ತಲ್ಲಿಯೆ ಭೋಗಂ ನೆಲೆಯುಮ
ದಲ್ಲಿಯೆ ರಾಗಂ [1] ಸುರಾಧಿಪಂಗತಿಶಯದಿಂ ‖ ೧೧೭

ಅಂತು ದೇವಲೋಕದ ಸುಖಮನೊಂದು [2] ಸಾಗರೋಪಮಕಾಲಮನನುಭವಿಸಿ ಬಂದಿಲ್ಲಿ ನಿನಗಂ ನಿನ್ನಗ್ರಮಹಿಷಿಗಂ ನಂದಶ್ರೀಗಮಭಯಕುಮಾರನಾಗಿ ಪುಟ್ಟಿ [ವನಧಿಯಂತೆ ಗಂಭೀರನುಂ, ದಿನಕರನಂತೆ ತೇಜಸ್ವಿಯುಂ, ಚಂದ್ರನಂತೆ ಸೌಮ್ಯನುಂ, ಮನೋಜನಂತೆ ಸುಭಗನುಂ, ಸಕಲಶಾಸ್ತ್ರಪ್ರವೀಣನುಂ, ಜಾಣನುಮಾಗಿ,] [3] ಪ್ರತ್ಯಕ್ಷಮಿರ್ದಪಂ; ಮೇಲೀತನುಂ ಮಹಾಮಂಡಲಿಕರ್ ತಪಂಬಡುವರೆಂಬಾದೇಶಮುಂ ಕೇಳ್ದು ತಪಂಬಟ್ಟು ಮುಡಿಪಿ ಸರ್ವಾರ್ಥಸಿದ್ಧಿಯೊಳ್ಪುಟ್ಟುವನೆಂದು ಗಣಧರಸ್ವಾಮಿಗಳ್ಪೇೞ್ವುದುಂ, ದರ್ಶನದೊಳಾದ [4] ಪ್ರತ್ಯಕ್ಷಫಲಮುಂ ಕಂಡು ನಂಬಿ, ೧೧೮

ಪಿರಿದುಂ ಸಂತೋಷದಿಂದಂ ತನಗೆ ಸಕಲಸಾಮ್ರಾಜ್ಯಮುಂ ಕೈಗೆವಂದಂತಿರೆ ಪೆರ್ಚಿದೊಂದು ಮುಯ್ಯಿಲ್ಲದೆ ನಲಿದನನಂಗಾಂತಕಂ ಶೀಲರತ್ನಾ

---

1 ತಲ್ಲಿಯೆನೆಲೆಯಲ್ಲಿಯೆಪಡೆಪಲ್ಲಿಯೆರಾಗಂ (ಕ)

2 ನೆರಡುಸಾಗರೋಪಮ(ಕ)

3 ಸುಖಮನನುಭವಿಸುತ್ತಮಿರ್ದನಿರೆ,

ನಿನಗಂ ಪರಿಗ್ರಹಕ್ಕಂ
ಜನನಿಗಮುರ್ವೀತಳಕ್ಕಮಭಯನೊಳಾದಂ |
ದನವರತಂ ಸ್ನೇಹಂ ನೆ
ಟ್ಟನೆ ಬರಿದಾಗಿಕ್ಕುಮಿವನ ಪುಣ್ಯೋದಯದಿಂ ‖

ಈತನ ಗರ್ಭದೊಳ್ ನಂದನಶ್ರೀಗಮಭಯಘೋಷಣೆಯುಮಾಳ್ಪ ಬಯಕೆ ತಿಣ್ಣಮಾದೊಡೆ, ನೀನದಂ ತೀರ್ಚಿದಾ ಬಳಿಕ ಪೆತ್ತಳ್. ಆತಂ ದಯಾಮೂರ್ತಿಯಪ್ಪುದರಿಂದಭಯಕುಮಾರನೆಂದು ಪೆಸರನಿಟ್ಟೊಡೀತನುಂ ಮಹಾಮಂಡಳಿಕನುಂತಪಂ...... . (ಕ)

4 ಮುನೀಂದ್ರೋಕ್ತಮಂ ಪೇಳೆ ಕೇಳ್ದು ಸಮ್ಯಕ್ತ್ವದೊಳಾದ (ಗ)

ಭರಣಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ ॥೭೧೯

ಇದು ನಿಖಿಳದಿವಿಜಪರಿವೃಢಮುಕುಟತಟಘಟಿತಮಣಿಗಣನಿಕರವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸೀರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರನುತಭಾವ
ಯುತದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ದರ್ಶನವ್ಯಾವರ್ಣನಂ [1]
ಪ್ರಥಮಾಶ್ವಾಸಂ.

---

[1] ದರ್ಶ ನಾಂಗವ್ಯಾವರ್ಣನಂ (ಗ)

ದ್ವಿತೀಯಾಶ್ವಾಸಂ

ಶ್ರೀಗಿದು ಮುಕುರಂ ಮುಕ್ತಿ
ಶ್ರೀಗಿದು ಲಾವಣ್ಯಮೆನಿಪ ದರ್ಶನರತ್ನಂ ।
ಬೇಗಂ ದೊರೆಕೊಳೆ ಪಿರಿದುಂ
ರಾಗಿಸಿದಂ ಸುಕವಿನಿಕರಪಿಕಮಾಕಂದಂ ॥ ೧

ಅಂತನರ್ಘ್ಯಮೆನಿಪ್ಪ ದರ್ಶನರತ್ನಮಂ ಸಂಶಯಚೋರರ್ ಪುಗದಂತು ನಂಬುಗೆಯೆಂಬ ಬಲ್ಗಾಪಸನಿಕ್ಕಿ ಮನಮೆಂಬ ವಜ್ರದೋವರಿಯೊಳಿರಿಸಿ, ೨

[ಮಗಧಾವನೀಶ್ವರಂ ಕೈ
ಮುಗಿದುತ್ಸವದಿಂ ಮುನೀಂದ್ರವಂದ್ಯಕ್ರಮರಂ ।
ಜಗತೀಮಂಡನರಂ ಮಿ
ಕ್ಕಗಣಿತಗುಣಗಣರನರ್ತಿಯಿಂ ಗೌತಮರಂ ॥] ೩

ಮುಂದಣ ನಿಶ್ಶಂಕೆಯ ಕಥೆಯುಂ ಬೆಸಗೊಳ್ವುದುಂ ಇಂತೆಂದು ಪೇೞ್ದರ್[1] :—

ಅಮಳ್ವೆತ್ತರಂತೆ ಕಾಡಿಗೆಯೆೞ್ಚುವರಂತೆ ಅಂದುಗೆಯಿಡುವರಂತೆ ಬತ್ತಂಗಟ್ಟುವರಂತೆ ಕುದುರೆಯೇಱುವರಂತೆ ಮದುವೆಯ ಮನೆಯಂತೆ ಮೀಸೆಯುಂ ತಿದ್ದುವರಂತೆ ಪೊಱಿಗಟ್ಟುವರಂತೆ ಉಳುವರಂತೆ ಬಂಡಿ ಹೂಡುವರಂತೆ ತೋರಣಂಗಟ್ಟುವರಂತೆ ಬಾಗಿಲ್ಮಾಡುವರಂತೆ ಸುರಿಗಿ

---

1 ನಿಶ್ಶಂಕೆಯ ಕಥೆಯುಮೆನಗೆ ತಿಳಿವಂತಾಗೆ ಬೆಸಸಿಮೆಂಬುದುಂ ಸುಗತಿವಿಳಾಸಿನಿಯ ವಿಳಾಸದ ಪ್ರಾಂತ (?) ಮೆನಿಸುವ ನಿಶ್ಶಂಕೆಯ ಕಥೆಯನಿಂತೆಂದು ಪೇೞ್ದಪರ್. (ಕ)

ಚಳನುತಿ ಬಿಡದಾರುಮನೊ
ಬ್ಬಳತವ್ರಡಿಂಗಾಗದಂತು [1] ಬಯ್ವಂ ಪೊಯ್ವಂ ॥ ೧೬

[ಕಂಡವರೆದೆ ನಡುಗಲ್ತಾಂ
ಮಿಂಡುಗಳಂ ಪಿಡಿದು ನಾಯುಮಂ ಪಂದಿಯುಮಂ ।
ಮಿಂಡರುಮಂ ಪೆಂಡಿರುಮಂ
ಗಂಡೆಲ್ಲಂ ನೆರೆದು ನೋಡೆ ಕಾದಿಸುತಿರ್ಪಂ ॥] ೧೭

ಪುರದೊಳಗಂ ಸೂಳೆಯರೆ
ಲ್ಲರುಮಂ ಪಿಡಿದೆಳೆದು ತರಿಸಿ ರುಕ್ಷಿಯ ಮುಂದಾ ।
ವರದಿಂದಿರುಳೆಲ್ಲಂ ಜಾ
ಗರಮಿರಿಸುವೆನವನ ಸೊರ್ಕನಿನ್ನೇವೇಳ್ವೆಂ ॥ ೧೮

[ಮತ್ತಮುರ್ಕಿಂದದಸ್ಕಂದಳವಾಯುದ್ಧ ಕ್ಷಾನುಂ ಮಿಂಡುಗಳಂ ನೆರೆದು ಪಿಡಿದು,] ೧೯

ತಿರಿದುಂಬ ತಿರಿಕರಂ ನಿ
ಷ್ಕರುಣದಿನಾರಿಯುಟ್ಟ್ರ ಪಿಡಿದು ಸುಂಕಮನಿಕ್ಕೆಂ ।
ದರವರಿಸದೆ ಕಾಡುವನು
ರ್ವರೆಯುಗ್ರವಿನವಾರೊ ಬಗೆವೊಡವನವೊಲಿಳೆಯೊಳ್ ॥ ೨೦

[ಮತ್ತಂ ಮಂತ್ರವಾದಿಯುಂ ಕಂಡ ಗ್ರಹದಂತೆ ತೆಲ್ಲಿಗರ್ ತಲ್ಲಣಿಸೆ ತೆಲ್ಲಿಗಗೇರಿಯಂ ಪೊಕ್ಕು, ೨೧

ಕೊಡದೆಣ್ಣೆಯೆಲ್ಲಮಂ ಕೂ
ಗಿಡೆ ದೂರ್ತಿಂ ಸೂಱೆಗೊಂಡು ಬಂದು ನಿತಾಂತಂ ।
ಸೊಡರಂ ಯಕ್ಷಿಯ ಮನೆಯೊಳ್
ತಡೆಯದೆ ಪೊತ್ತಿಸುವನೆಯ್ದೆ ಬಳಗಪ್ಪಿನೆಗಂ ॥ ೨೨

---

[1] ಒಬ್ಬಳಸಾವಗ ಪೋಗದಂತು (ಬ.ಕ.)

ಮತ್ತಂ ಕಾಗೆಯುಂ ಕಂಡ ಕೋಗಿಲೆಯಂತೆ ಮಾಲೆಗಾಱರ್ಬೆರ್ಚಿ
ದೆಸೆಗೆಟ್ಟು ಪರಿಯೆ ಪೂವಿನ ಸಂತೆಯುಂ ಪೊಕ್ಕು, ೬೩

ಸುರಗಿ ಮಲ್ಲಿಗೆ ಜಾಜಿ ಸಂಪಗೆ ಪೊಲ್ಲ ಕೇದಗೆ ಸಂದ ಪಾ
ದರಿಯ ಪೂಗಳನಾವಗಂ ನಱು ಸೂಱೆಗೊಂಡು ತಿಪರ್ದಿಂ
ಪರಿದು ತನ್ನೊಡನಿರ್ದ ಧೂರ್ತಜನಾಳಿಯುಂ ಸಲೆ ತಾನುಮೊ
ಪ್ಪಿರೆ ತುಱುಂಬಿ ವಿನೋದದಿಂ ನಗುವರ್ಕರುಳ್ಪುಱುವೆನ್ನೆಗಂ ‖ ೬೪

ಮತ್ತಂ ಪುಲಿಯುಂ ಕಂಡ ಪುಲ್ಲೆಯ ಪಿಂಡಿನಂತೆ ಕಂಚುಗಾಱರ್ಭ
ಯದಿಂ ಮನೆಯುಂ ಬಿಟ್ಟು ಪೋಗೆ ಕಂಚುಗಾಱಗೇರಿಯುಂ ಪೊಕ್ಕು, ೬೫

ತಳಿಗೆ ಕನ್ನಡಿ ಸಿಪ್ಪು ಕಂಚಿನ ಸಟ್ಟುಗಂ ತೆಱುವಟ್ಟಲ
ಗ್ಗಳದ ಕೈಮಳ ತಾಳವೊಪ್ಪುವ ಗಿಣ್ಣಲಂಬಿವನಾವಗಂ ।
ಕಳದುಕೊಂಡೊಡನಿರ್ದ ಧೂರ್ತಜನಕ್ಕೆ ಜೀವಿತಮೆಂದು ತ
ನ್ನೊಳ ವಿಚಾರಿಸಿ ನಿಚ್ಚಲುಂ ಕುಡುವಂ ನೃಪಾತ್ಮಜನರ್ತಿಯಿಂ ‖ ೬೬

ಮತ್ತಂ ಸಿಂಹಮುಂ ಕಂಡ ಕರಿಘಟೆಯಂತೆ ಕಂಡರ್ಬೆಗಪು
ಗೊಂಡು ನಿಂದ ನೆಲೆಯುಂ ಬಿಟ್ಟೋಡೆ ಪಸ್ಕರುಣಾಡುಂ ಬಂಕೊಂಡು, ೬೭

ಕಳ್ಳಸಿಗಗೇರಿಯೊಳಗಣ
ಕಳ್ಳಲ್ಲಮನೆಪೆದು ತರಿಸಿ ಪೊಂಗಣ ಬನದೊಳ್ ।
ಕಳ್ಳರ್ಗಂ ಧೂರ್ತರ್ಗಂ
ಭಿಲ್ಲರ್ಗಂ ಸೂಱೆಗೊಡುವನಿದುವ ವಿನೋದಂ ‖ ೬೮

ಮತ್ತಂ ಬಗೆವಂದ ಗೊಡ್ಡಾಟಮನಾಡಲೆಂದು ದುರ್ಜನಪರಿವೃತ
ನಾಗಿ,] ೬೯

ವರಭೂಷಣಮಂ ತೊಟ್ಟಿರ
ಸರವಿಗೆ ಲೇಸಾಗಿ ತೊಡಿಸುವಂ ದಿವ್ಯಸ್ತ್ರೀ ।
ಯರನಟ್ಟಿ ಪಿಡಿದು ನೀರಂ
ತರಿಸುವನೋರಂತ ದೂರ್ತನಿಂ ಲಲಿತಾಂಗಂ ‖ ೭೦

[ಎಸೆವ ಕೊಳಂಗಳೊಳಂ ರಂ
ಜಿಸುವ ಮಹೋದ್ಯಾನರಮ್ಯವನಗಳೊಳಂ ಶೋ।
ಭಿಸಿ ಪುರದ ಸೊಳೆಯರ್ವೆರಸ
ಸಸಹಾಯುಂ ಮನಕೆ ಬಂದವೋಲ್ ಕ್ರೀಡಿಸುವಂ ॥ ೩೧

ಮತ್ತಮಾತಂಗೆ ಧೂರ್ತವಿನೋದವೆ ವಿನೋದಮಪ್ಪುದಱಿಂ ದುರ್ಜನಪರಿವೃತನಾಗಿ ಬಂದಂಗಡಿಯುಂ ಪುಗೆ ತೋಳನಂ ಕಂಡ ಕುಱಿ ವಿಂಡಿನಂತೆ ಪಸವರ್ ಪಱದುವೋಗೆ, ೩೨

ದೂಸಿಗರಂಗಡಿಯಂ ಪೊ
ಕ್ಕಾಸುರಮಾಗೊದಱಿ ಪಿಡಿದು ವಿಂಡುಂ ತಾನುಂ।
ಲೇಸಪ್ಪ ವಸ್ತ್ರನಿಕರಮ
ನೋಸರಿಸದೆ ಸೂಱೆಗೊಂಡು ಚಾಗಂಗೆಯ್ವಂ ॥ ೩೩

ತಾನುಣ್ಣದ ಪೆಱರ್ಗಿಕ್ಕದ
ಹೀನಿಯ ಪಚ್ಚಡಿಕೆಯೆನಿಪ ಲೋಭಿಯ ಪೊನ್ನಂ।
ತಾನೊಂದುಮುೞಿಯದಂತಿರೆ
ಹೀನಗುಣಂ ಕವರ್ದುಕೊಂಡು ಚಾಗಂಗೆಯ್ವಂ ॥ ೩೪

ಮತ್ತಂ ಮಣಿಗಾಱರ ಪಸರಮಂ ಪೊಕ್ಕು ಓಡಲಿಂಬಿಲ್ಲದೆ ಕೈಗಳಂ ಮುಗಿದು ನಿಂದಿರ್ದವರಂ ಲೆಕ್ಕಿಸದೆ, ೩೫

ತಕ್ಕಿನ ಪವಳದ ಸಂಕೆಯ
ಟಕ್ಕೆಯ ಮಣಿಗಳನನೇಕಮಂ ಕೊಂಡವನುಂ।
ಡೊಕ್ಕರಿಸದೆ ಕರುಣಿಸಿದಯ
ಶಕ್ಕಂಪಡೆ ಸೂಱೆಗೊಳ್ವನವನುತ್ಸವದಿಂ ॥ ೩೬

ಮಸಗಿದನಿತುಂ ವಿಂಡುಂ ತಾನುಂ ಭಯಂಕರಮಾಗೆ ಬಂ
ದಸಗವೋಪೆಯುಂ ಪೊಕ್ಕೋವೋಪೆಂದು ಕೂಗಿಡುವನ್ನೆಗಂ।
ಕುಸಿಯುವದಟಿಂ ವಸ್ತ್ರವ್ರಾತಂಗಳಂ ನೆಱೆ ಕೊಂಡು ಸಂ
ಕಿಸದೆ ತುಡುವಂ ತನ್ನಂ ಸುತ್ತಿರ್ದ ಧೂರ್ತಜನಕ್ಕಮಂ ॥ ೩೭

ಸ್ಮರತಾಪಂ ಪೆಱಪಿಂಗೆ ಸೂಳೆಯರೊಳಂಗಂಬೊಂದಿ ಕೂಡಿರ್ದ ಗಂ
ಡರನಾಟಂದಲೆದಟ್ಟಿ ಪೊಯ್ದು ಕಳೆದೋರ್ಪಂದಾಂತೊಡಂ ತೂಳ್ದಿ ನಿ
ಷ್ಠುರಕೋಪಂ ಪಿಡಿದೊತ್ತಿ ಸೂಳೆಯರೊಳುಗ್ರಾಟೋಪದಿಂ ಬಲ್ಮೆಯಿಂ
ನೆರೆವಂ ಭೂಭುಜನಂದನಂ ಪಿರಿವರುಳ್ಳೆಳ್ಕಿರ್ಪಿನಂ ದರ್ಪದಿಂ ॥ ೩೮

ಮತ್ತಂ ಮಸಗಿರ್ದ ಸಿಂಗದಂತೆ ಮಿಂಡುಗಳ್ ತಂಡತಂಡದಿಂ ಸುತ್ತಿ ಮುತ್ತಿ ಬರೆ ಬಂದವರೊಳ್ ಕಂಡು ನಿಂದರ್ ನಿಂದಿರ್ದಲ್ಲಿಯೆ ಕುಳ್ಳಿರ್ದರ್ ಕುಳ್ಳಿರ್ದಲ್ಲಿಯೆ ಕಂಪಿತರಾತೆ ಬಿಟ್ಟೋಡದಿರೆ ಸೂಳಗೇರಿಯಂ ಪೊಕ್ಕು, ೩೯

ಸೂಳೆಯರೊಲ್ವ ಬೊಜಂಗರ
ನಾಳಾಪದಿನಟ್ಟಿ ಕಳವನಬ್ಜಾನನೆಯರ್ ।
ಕೇಳೊಲ್ಲವ ವಿಟರಂ ಕಡು
ಲೀಲೆಯಿನವರೊಡನೆ ನೆರೆಸುವಂ ದೂರ್ತಂದಂ ॥] ೪೦

ಈ ಕೇರಿಯ ಬಲವಣ್ಣಳ
ನಾಕೇರಿಯುಮಂದಿರೊಡನೆ ಕೂಡುವೆನಿರದಂ ।
ತಾಕೇರಿಯ ಬಲೆವಣ್ಣಳ
ನೀಕೇರಿಯುಮಂದಿರೊಡನೆ ಕೂಡುವನದಟಂ ॥ ೪೧

[ಕರಮೆಱೆಯುಟ್ಟಿ ದುಷ್ಟವಿಟಸಂಕುಲಮಂ ಪಿಡಿದೊರ್ವರಿಂದಮೊ
ರ್ವರ ತಲೆಯಂ ಕಱುತ್ತರಿಸುತುಂ ಛಲದಿಂದಿರದೊರ್ವರಿಂದಮೊ ।
ರ್ವರನಿಱಿಸುತ್ತೆ ತೂಕಱಿದು ಬೊಬ್ಬಿಱಿದಾಡುವನೊರ್ವರಿಂದಮೊ
ರ್ವರನಱೆಯುಟ್ಟಿ ಮೋದಿಸುತುಮೀತೆಱಸಿಂ ನಗುತಿರ್ಪನಾವಗಂ ॥ ೪೨

ಅಂತುಕ್ಕಿ ಸೊಕ್ಕಿಂದಕ್ಕುಂದಲೆವಾಯ್ದು ದೂರ್ತಂ ಕಣ್ಗಾಣದೆ ಸೂಳಗೇರಿಯುಂ ಪೊಕ್ಕು ತಾಂ ಮೊಬ್ಬುಬ್ಬರಕ್ಕೆ ಅಬ್ಬರಂ ಪಿರಿದಾಗೆ ಕಡೆಯ ಮನೆಯ ಕುಂಟಣಿಯೊರ್ವಳ್ ಸಜ್ಜೆವನೆಯಂ ಪೊಕ್ಕು, ೪೩

ತಡೆಯದೆ ಮೊಗಳಂದಳಿಯನ
ನಡುವಂ ತಳ್ಕೈಸಿ ಕೊಂಡು ಹಿತ್ತಿಲ ದೆಸೆಯೊಳ್ ।

ಯ್ಯಿಟ್ಟು ಲಲಿತಾಂಗನಿಱಿದಂ
ಕೆಟ್ಟನೆನುತ್ತೋಡುವಾತನಂ ಮೆತ್ತೊರ್ವಂ [1] ‖ ೫೬

ತಾಂ ಕಂಡು ದಿಟವೆಂದೆ ಬಗೆದು ಭಯದಿಂದೋಡುತ್ತಿರೆ ಕಾಡೊಳೊಂದು ಮರದ ಕೊಂಕುಗೊಂಬಾತನ ತುಱುಂಬಂ ಪಿಡಿದು ತಡೆಯೆ ಪೆಱಗಂ ನೋಡಲಣ್ಮದೆ, ೫೭

ಬಿಡು ನಿನ್ನ ಧರ್ಮವಿನ್ನಂ [2]
ನುಡಿಯೆಂ ಮತ್ತಂ ಮುಕ್ಕಳೊಳವೆನಗಾಂ ಸ ।
ತ್ತೊಡೆ ಪೆಱಗೇ ವೃಂದವನ
ಪ್ಪೊಡೆ ಪೊರೆವರಿಲ್ಲವಾಂ ದೇಸಿಗನೆಂ ‖ ೫೮

ಅಂತುರಿಯುತ್ತುಮಿರ್ದ ಲಲಿತಾಂಗನ ಪೊಲ್ಲಮೆಯುಂ ಕಂಡು ಬುದ್ಧಿವಂತರಿಂತೆಂದರ್:— ೫೯

ಅರಸನ ಮಗನುರ್ಕಿಂದು
ರ್ವರೆಯುರಿವೊಡವೊನೆ ಸೂರ್ಕಿ ಕೊಲ್ವೊಡೆ ಕಿಚ್ಚ ।
ಚ್ಚರಿಯಾಗಿ ತಾನೆ ಸುಡುವೊಡೆ
ಕರಮವನಡ್ಡೈಸಿ ತಾಗಿ ಮಾರ್ಕೊಳ್ವವರಾರ್ ‖ ೬೦

ಮತ್ತಂ ಕೆಲಂಬರ್ ವಿವೇಕಿಗಳಿಂತೆಂದರ್:— ೬೧

ಸುತನೆಂಬ ನುಸ್ನಿಪಂ ಕ್ಷಿತಿ
ಪತಿ ತುಪ್ಪದ ಕೊಡನ ಮೇಗಣಿಲಿಯಾತಂ ಗ ।
ರ್ವಿತನಾದನೆಂದೊಡವನು
ದ್ಧತಿಯಿಂದೀ ಮಹಿಯೊಳಂಜದಿರ್ಪವನಾವಂ ‖ ೬೨

ಎಂದಿಂತು] [3] ಪೊಱಲೆಲ್ಲಮುಮೆಲ್ಲೋಲಕಲ್ಲೋಲಮಾಗೆ ಕನಸಿನೊಳಂ ಲಲಿತಾಂಗನ ಭಯಮುಮ ತಿಣ್ಣಮಾಗೆ, ಬೆಗಡುಗೊಂಡೆರಡು

---

1 ವಾತನಂನೆರಯಸಗಂ (ಕ) 2 ಧರ್ಮಫಲಮಂ (ಕ)

3 ಅಂತುಲಲಿತಾಂಗಂ ಮಾಡುವದೂತರ್ ಟಕ್ಕೆ ಪೊಳಲೆಲ್ಲಂ. (ಗ)

ಬೆಟ್ಟದ ನಡುವೆ ಪರಿವ ಪೆರ್ದೊಱೆಯಂತೆ ಮೊಗಂ ಬಾಯುಮಂ ಪಿಡಿದೊತ್ತಿದಂತೆ[1] ಕರಮುಮ್ಮಳಿಸಿ ನೆರೆದೆಲ್ಲಮೊಂದಾಗಿ ರಾಜಮಂದಿರದ ಬಾಗಿಲ್ಗೆ ಬಂದು ಪುಯ್ಯಲಿಡುವುದುಮಾ ಪುಯ್ಯಲನೋಲಗದೊಳಿರ್ದರಿ ಮಥನಮಹಾರಾಜಂ ಕೇಳ್ದು ನಿಜರಂ ಬರವೇೞ್ದು ಪುಯ್ಯಲಿದೇನೆಂದು ಬೆಸಗೊಳ್ವುದುಂ ಬಿನ್ನಪಮೆಂದು ಕೈಮುಗಿದವರಿಂತೆಂದರ್:— ೬೩

ದೇವ ಭವತ್ಪುತ್ರಂ ಕರ
ಮೋವದೆ ಸಂಕಿಸದೆ ಮಿಂಡುವೆಡೆವೆರಸದಟಿಂ ।
ದೋವ್ರೋವೆಂದೆಳಱೆ ಜನಂ
ದಾವಾನಲನಂತೆ ಸುಡುವನಿರುಳುಂ ಪಗಲುಂ ॥ ೬೪

[ದೇವಾ ಮತ್ತಂ ನಿಮ್ಮಕುಮಾರನಿನಾದ ಪೊೞಲೊಳಗಣ ಮಹಾಭಯಮುಮಂ ಪೇೞ್ವೊಡೆ, ೬೫

ಪೊಱಮಟ್ಟಂ ಲಲಿತಾಂಗನೆಂದೊಡಮಬರ್ಳಳ್ಕುತ್ತು ಮಳ್ಕುತ್ತೆ
ಪೊಕ್ಕಱಿಗಟ್ಟೋಡುವರಿರ್ವರೊಂದೆಡೆಯೊಳಂ ಮಾತಾಡಲಣ್ಮರ್ ವಿಟ
ನೆರ್ಱಿ ಬೆರ್ಚಿಂ ಬೆಲೆವೆಂಡಿರೊಳ್ನುಡಿಯಲಣ್ಮರ್ ಭೀತಿಯಿಂ ಬೀರಮಂ
ಮೆಱೆದುಂ ಪಾಡಿಸಲಣ್ಮರಂಕಮನನರ್ಬಿಟ್ಟೋಡಲಣ್ಮರ್ ಭಟರ್ ॥ ೬೬

ಮತ್ತಮಾತಂ ಮಾಡುವನಾಚಾರಮಂ ಪೇೞ್ವೊಡೆ ತಂಬುಲಿಗರ ನಂಬಲಿಯುಂ ಮಟ್ಟಗಟ್ಟುವರಂತೆ ಕೋಡಗಗಟ್ಟುಂಗಟ್ಟಿ ಕಾಡುವಂ; ಚನ್ನಿಗರಂ ಮನ್ನಿಸಿಮೆಂದು ಬಡಿದು ಬಾಯ್ತೀವೆ ಪುಡಿಯುಂ ಪೊಯ್ಸುವಂ ಸೊಕ್ಕಿರ್ದರ ಮದಮಿಂತಲ್ಲದುಡುಗದೆಂದು ಸಾಯೆ ಬಡಿಸುವಂ; ಬಿರುದರ್ಗರಿದೆನಿಸುವ ಬಾಧೆಯುಂ ಮಾಡಿಸುವಂ; ವೀರರ ಪಡಪಂ ಪಾಱಿಸುವಂ; ಮಿಂಡರನಂಪಲೆದೇಳಿಸುವಂ; ಬಂಟರಂ ಕೊಂಡಾಡುವರ ಗಂಟಲೊಳ್ ನೇಣನಿಕ್ಕಿ ತೆಗೆಯಿಸುವಂ; ಗಂಡರಂ ಕೊಂಡಾಡುವರ ಮಂಡೆಯುನಣೆಸುವಂ; ಬಲ್ಲರಂ ಕೊಲ್ಲುವ ಕೊಲೆಯಿಂ ಬಾಧಿಪನಂತು ಮಲ್ಲದೆಯುಂ, ೬೭

1 ಬಡೆಯೊತ್ತಿದಂತೆ. (ಗ)

ಮರುಳ ಪಡೆಯಂತೆ ಮಿಂಡ
ರ್ವೆರಸತಿಮುದದಿಂದೆ ಕೇರಿಕೇರಿಗಳೊಳ್ ಕೂ |
ಗಿಡೆ ಪೆರ್ಚಿ ಸೊರ್ಕಿ ಪುಲ್ಲಳ್
ನುರಿಪುತ್ತುಂ ಬಡಿಸುತಿರ್ಪನಿದುವೆ ವಿನೋದಂ ||] ೬೮

ಮತ್ತಂ ಕುಮಾರನ ಭಯಮಂ ಪೇೞ್ವೊಡೆ ಪಾರ್ವರು ಮೊಡೆಯರಿಲ್ಲದಂತೆ ನಡುನಡುಗೆ, ಪರದರ್ದಱಿಯಮರದಂತಲ್ಲಾಡೆ, ದೂಸಿಗರ್ದೇಸಿಗರಂತೆ ಭಯಂಗೊಳೆ, [ಬಳೆಗಾಱರಳವುಗೆಟ್ಟ ಕುದುರೆಯಂತೆ ನಿಲೆ, ಕಂಚುಗಾಱರ್ ಮಿಂಚುಗಂಡ ಶಿಶುವಿನಂತಂಜೆ] ರಾಜಕುಮಾರರ್ ಭೋಜನಂಬಡೆಯುದರಂತೆ ಬಡವಾಗೆ, ಒಕ್ಕಲಿಗರ್ ಸಾಕ್ಷಿಯಿಲ್ಲದೆ ಸಾಲಂಗೊಟ್ಟರಂತೆ [ಬೆಕ್ಕಸಂ] ಬೆಱಗಾಗೆ, ಬಂಟರ್ ನಂಟರಂ ಕಂಡ ಬಡವನಂತೊಳಸಾರೆ, ಬಿರುದರ್ ಕರಿಗಿಕ್ಕಿದ ಕಳ್ಳನಂತೆ ಜರಿಯೆ, ಬೀರರ್ ದಾರಿಗೆಟ್ಟರಂತೆ ಬೆದಱೆ, ಮಿಂಡರ್ ದಂಡಂದೆತ್ತೊಕ್ಕಲಿಗನಂತೆರ್ದೆಗಿಡೆ, ತೆಲ್ಲಿಗರ್ಬಿಲ್ಲಂ ಕಂಡ ಕಾಗೆಯಂತೆ ಚೆಲ್ಲವರಿಯೆ, ಸೂಳೆಯರ್ ಗಾಳದ ಮೀನಂತಳವಳಿಯೆ, ಮಣಿಗಾಱರ್ ಗುಣಂಗೆಟ್ಟ ಋಷಿಯಂತೆ ಚಿಂತಿಸೆ, [ಕುಂಬಾಱರ್ ಸಂಬಳವಿಲ್ಲದ ದುಡಿನಾಳಂತ ಬೆರ್ಚೆ, ಅಸಗರ್ ದೆಸೆಗೆಟ್ಟರಂತೆ ಬಾಯ್ವಿಡೆ,] ಬೇಡರ್ ಬೀಡಂ ಬಿಟ್ಟೋಡೆ,[1] ಬೆಸದವರ್ ಬಸವಲ್ಲದವೆರಂತಂಜೆ ಉಳಿಯೆ, ದೂರ್ತರ್ ಮಾರ್ತಾಂಡನಂ ಕಂಡ ಮಂಜಿನಂತೆ ಪರಿಯೆ, ಬಚ್ಚರ್ ಕಿರ್ಚುಮುಟ್ಟಿದ ತುಪ್ಪದಂತೆ ಬಲ್ಪುಗಿಡೆ, ಜಂತಿಗರ್[2] ಸಂತತಿಗೆಟ್ಟರಂತೞಲೆ, ತಂಬುಲಿಗರ್ ನಂಬುಗೆಗೆಟ್ಟವರಂತೆ ಪೆಱಸಾರೆ, ಚೊಲ್ಲೆಯರ್ ಗಲ್ಲೆಯಂಬಲಿಯಂತೆ ನೆಲನಂ ಪತ್ತೆ, ಸರ್ವಾಂಗದ್ರೋಹರಂ ಕವರ್ವಂತೆ ಸರ್ವಸ್ವಾಪಹರಣಂಮಾಡಿ ತನ್ನೊಡನಿರ್ದ ೬೯

ಕಸವಿಂಗಂ ಕಳುಚೆಂಗಂ
ಡಸಿಕಿಂಗಂ ದೂರ್ತವಡೆಗಮತಿಚಪಳರ್ಗಂ |

---

1 ಪೊಲೆಯರ್ ಬಲೆಯೊಳ್ತೊಡರ್ದ ಪಕ್ಕಿಯಂತೆ ಮಿಡು ಮಿಡು ಮಿಡುಕೆ, ಮಾದೆಗರ್ ಮೋದುವತ್ತಭಿಮಾನಿಯಂತೆ ಉಮ್ಮಳಿಸೆ (ಗ)

2 ಪಂತವಳೆಯರ್ (ಬ.ಕ.)

ಪುಸಿವರ್ಗಂ ಸಿತಗರ್ಗಂ
ವಸುಧೇಶ್ವರ ಕೇಳ ಕುಡುವೆನುಕ್ಕಿ ಕುಮಾರಂ ॥ ೭೦

ಮತ್ತಂ ಮನೆಮಾಡುವರಂತೆ ಮುಂದಿರ್ದೆಲ್ಲರುಮಂ ಕವರೆನುತ್ತುಂ, ಪಯಣಂಬೋಪರಸಿಯಂತೆ [ಕಂತಕಂಪರಂ ತೂಳ್ದಟ್ಟಿ] ಪಿಡಿಯೆನುತ್ತುಂ, ಸಾಲಂಗೊಟ್ಟವರಂತೆ ಕಾಡಿ ಪೊಡೆಯೆನುತ್ತುಂ, ಬಡಗಿಯಂತುಳಿಯೆನುತ್ತುಂ, [1] ಸಾಲಿಗನಂತೇಪೆನುತ್ತುಂ, ಕಳ್ಳನಂತೆ ಕೊಳ್ಳೆನುತ್ತುಂ, ರಸವಾದಿಯಂತೆ ಕೊಲ್ಲೆನುತ್ತುಂ, ಕುತ್ತಂಗುಳಿಯಾಟದಂತೆ ಕಟ್ಟೆನುತ್ತುಂ, ಕೋಟೆಗಾಳಗದಂತೆ ಪತ್ತೆನುತ್ತುಂ, ಪೊಸತಾಗಿ ಬಂದೊಕ್ಕಲಿಗನಂತೆ ಮುಟ್ಟೆನುತ್ತುಂ, ಕುಳಿಯೊಳ್ ಬಿರ್ದನಂತೆ ತೆಗೆಯೆನುತ್ತುಂ, [2] ನಗೆಗಾಱನಂತೆ ಕಾಡೆನುತ್ತುಂ, ಪಗೆಗಾಱನಂತೆ ಪಾಡೆನುತ್ತುಂ, ಪೊಲೆಯರಂತೆ ಕೊಯ್ಯೆನುತ್ತುಂ, ಮಾದಿಗನಂತೆ ಮೆಟ್ಟೆನುತ್ತುಂ, ತಿರಿಕನಂತಿಕ್ಕೆನುತ್ತುಂ, ಮಾಱುಳ್ಳಳಂತೆ ಬೀಡೆನುತ್ತುಂ, ಹರಿಕಾಱರಂತೆ ಕಾಸೆನುತ್ತುಂ, ಪಿತ್ತಾಧಿಕನಂತೆ ಬೀಸೆನುತ್ತುಂ, [3] [ಬಿಕ್ಕಿಗನಂತೆ ತಿವಿಯೆನುತ್ತುಂ,] ತೊೞಿಯಂತಹೋರಾತ್ರಂ ಪರಿಯುತ್ತುಂ, ಈ ಮಾರ್ಗದಿಂ ಬಾಧೆಯುಂ ಮಾಡೆ, ಪಳ್ಳಿಯುಂ ಮನ್ನೆಯರೊಳ್ ಸುತ್ತಿರ್ದಂತೆ, ಕುೞಿವಿಂಡಂ ತೋಳಂ ಪೊಕ್ಕಂತೆ, ಗರ್ಭಿಣಿಯನೆಮ್ಮೆ ತಗುಳ್ದಂತೆ, ತಾವರೆಗೊಳನಂ ಮಂಜು ಪೊಕ್ಕಂತೆ, [ಬಡವರ ಮನೆಯನರಸಾಳ್ ಪೊಕ್ಕಂತೆ,] ಗೂಗೆಯುಂ ಕಾಗೆ ಸುತ್ತಿದಂತೆ, ಪೂಮರನಂ ಕೋಡಗವೇಱಿದಂತೆ, ಕಬ್ಬಿನ ತೋಂಟಮಂ ನರಿ ಪೊಕ್ಕಂತೆ, ಬೆಳದ ಕೆಯ್ಯಂ ಕಿಚ್ಚು ತಗುಳ್ದಂತೆ, ಪೂತ ಪುಣಿಸೆಯುಂ ಗಾಳಿ ಪೊಕ್ಕಂತೆ, [ಕಂಚುಗಾಱನ ಪಸರಮನೆತ್ತು ಪೊಕ್ಕಂತೆ,] ಮದುವೆಯ ನೆರವಿಯುಂ ಕಡಂದುಱು ಕವಿದಂತೆ,

---

1 ಪೊಲೆಯನಂತೆ ಕರೆಯೆನುತ್ತುಂ, ಪಡಿಹಾರನಂತೆ ನೂಂಕೆನುತ್ತುಂ, (ಗ)

2 ಕಮ್ಮಾಱನಂತಡೆಯೆನುತ್ತುಂ (ಗ)

3 ಎರಲೆಗೊಂಡ ತೆಲುಗನಂತಿಱಿಯೆನುತ್ತುಂ, ತೆಲ್ಲಿಗನಂತೆ ಕುಸಿಯೆನುತ್ತುಂ, ಋಷಿಯರಂತೆ ಕಟ್ಟೆನುತ್ತುಂ, ಸಿಂಬಿಗನಂತೆ ಬಳಸೆನುತ್ತುಂ, ವ್ಯವಹಾರಿಯಂತೆ ಮುತ್ತೆನುತ್ತುಂ, ಸೀರೆಗಟ್ಟುವನಂತೆ ಸುತ್ತೆನುತ್ತುಂ, ತಿಱುಳನಂತೆ ಪೊಯ್ಯೆನುತ್ತುಂ (ಕ.)

ಪಂದೆಯಂ ಪೆಣಂ ತಗುಳ್ದಂತೆ, ಗೋಷ್ಠಿಯಂ ಪಾವು ಪೊಕ್ಕಂತೆ, ಬೀಡಂ ಕಳ್ಳರ್ಕವಿದಂತೆ, ಪಸುವಮಕ್ಕಳಂ ಗೂಳಿ ತಗುಳ್ದಂತೆ, ಪತ್ತಿಯಂ ಕಿಚ್ಚು ತಗುಳ್ದಂತೆ, ಗೋವುವಿಂಡಂ ಪುಲಿ ಪೊಕ್ಕಂತೆ, ಜೋಳದ ರಾಸಿಯಂ ಪೊನಲ್ಕವಿದಂತೆ, [ಬೆಲ್ಲದ ಪೇಱಸಿಲಿ ಪೊಕ್ಕಂತೆ,] ಕಲಸುಗೂಱಿಂ ಕಾಗೆ ಸುತ್ತಿದಂತೆ, ಬೆಳ್ಳಿಲಿಯು ಬಿಲದೊಳ್ ನೀರ್ಪೊಕ್ಕಂತೆ, ಪೊಱಲೊಳಗಣ ಪ್ರಜೆಯೆಲ್ಲಮುಂ ಮಹಾಭಯಜ್ವರಂಗೊಂಡು, ಕುಮಾರನಾಡುವಾಟಕ್ಕಂ, ಮಾಡುವ ಮಾಟಕ್ಕಂ, ನಿಲಲುಂ ನಿತ್ತರಿಸಲುಮಾಱೆವೆಮಗೆ॥ ೨೧

ಬೆಸನಾವುದು ಧರಣೀಶ್ವರ-
ಬೆಸಸೆನೆ ತನಯಂಗೆ ನಾಡೆಯುಂ ಮುನಿದು ನೃಪಂ ।
ಮಿಸುಗುವ ದಂತಮರೀಚಿಗ
ಳಸೆವಿನಮಂಬುಧಿನಿನಾದದಿಂದಂ ನುಡಿದಂ ॥ ೨೨

ನೀವಿದನೆಮಗಱಿಪಿಮೆರ್ಗ
ನ್ನೀ ವಾರ್ತೆಯನಱಿಯೆವಿದಱ ದೆಸೆಗಿನಿಸಾನುಂ ।
ನೀವೆಂಬೆಜೀಡ ಸುಖವಿರ
¹ಮೂವಿದನೆಣಿಸುವವರಲ್ಲಮತಿಶಯದಿಂದಂ ॥ ೨೩

ಎಂದರಿಮಥನಮಹಾರಾಜಂ ಕಿಱಿಯರ್ಪಿರಿಯರೆನ್ನದೆ ಮನ್ನಣೆಯಿಂ ಕರ್ಪೂರಸಹಿತಂ ವೀಳಯಂಗೊಟ್ಟು ಪೋಗಲ್ವೇೞ್ದು, ಪ್ರಧಾನರ್ಗಂ ಸೌಂದರಿಮಹಾದೇವಿಗಮಿಂತೆಂದಂ:— ೨೪

[ಇನಿಸುಂ ಮಾಣದೆ ದುಶ್ಶಾ
ಸನಶಕುನಿದಿವಾಕರಾತ್ಮಜರ್ ಕೂಡೆ ಸುಯೋ ।
ಧನನಳಿದನೆಂದೊಡೇಂ ದು
ರ್ಜನರಪ್ಪವರೊಡನೆ ಕೂಡಿ ಕೆಡದವರೊಳರೇ ॥ ೨೫

---

1 ಭಾವಂಕಂಡಂತೆಬೆಚ್ಚದಿರಿಯತಿಶಯದಿಂ (ಕ).
ಮಾವಿದಸೈರಿಸುವರಲ್ಲಸುತನಾದೊಡಮೇಂ (ಖ).
ಮೂವಿದನೆಣಿಸುವದಲ್ಲಮತಿಶಯದಿಂದಂ (ಗ).

ಮೊದಲಿಂ ಪಂದಿಗಳೊಡನಾ
ಡಿದ ಕಱುವುಂ ಪಂದಿಯಂತೆ ಪೇಲಂ ತಿಂಗೆಂ |
ಬುದು ನಾಣ್ಣುಡಿ ತಾನದು ತ
ಪ್ಪದು ಸಿತಗರ ಕೂಟದಿಂದೆ ಕೆಡದವರೊಳರೇ ||] ೭೬

ಆರಯ್ದು ನೋಡೆ ತೊಱೆಗಳ
ನೀರುಂ ವಾರಿಧಿಯ ನೀರ ಪೊರ್ದುಗೆಯಿಂದಂ |
ಸಾರಂಗೆಟ್ಟುಪ್ಪಪ್ಪವೊ
ಲಾರುಂ ದುರ್ಜನರ ಕೂಟದಿಂದಂ ಕೆಡರೇ || ೭೭

ಕಡುತಣ್ಪು ಕೆಟ್ಟು ಕಿಚ್ಚಿನೊ
ಳೊಡಗೂಡಿದ ನೀರ್ ಬಱಿಕ್ಕೆ ತೀವ್ರತೆಯಿಂ ಕೈ |
ಸುಡುವಂತೆ ನೋಡೆ [1] ದುರ್ಜನ
ರೊಡಗೂಡಿದ ಮಾನಿಸರ್ಗೆ [2] ಸದ್ಗುಣಮುಂಟೇ || ೭೮

[ಅದುಕಾರಣದಿಂ. ಕುಮಾರನೊಳಾದ ದೂರ್ತೆಲ್ಲಮೆಮ್ಮಿಂದಾದು
ಪಾತನೊಳ್ ದೋಷಮಿಲ್ಲೆಂತೆನೆ] ೭೯

ಪುದಿದ ಸುತಮೋಹದಿಂದೋ
ದಿದೊಡಂ ಮುನಿಜನದ ಸಾರೆ ಬಸದಿಯೊಳಿರ್ದಾ |
ಡಿದೊಡಮಿವನಲಸುಗೆಂದಾ
ನಿದನಱಿಯದೆ ದುಷ್ಟಕಷ್ಟರೊಡನಾಡಿಸಿದೆಂ || ೮೦

[ಇನಿತುಂ ಮೋಹಂ ಕೇಳೀ
ತನ ಮೇಲಿಂ ಪಿರಿದುಮೆನ್ನೊಳುಂಟಪ್ಪುದಱಿಂ |
ದನಿಯಿತಿಕೆಯಿಂದೆ ನಡೆಸ
ಲ್ಕಿನಿತಾದುದು ಶಿಕ್ಷೆಗೆಟ್ಟ ಕಾರಣದಿಂದಂ ||] ೮೧

ಕಸದೊಡನೆ ಕೂಡಿ ಪೆರ್ಚಿದ
ಸಸಿಯುಂ ಶಿಕ್ಷಿಸದ ಮಕ್ಕಳುಂ ಮಾಣದೆ ಬೆಂ |

---

1 ಮ್ರಿಷಚಾರಧಂತೆ ದುರ್ಜನ (ಗ.) 2 ಸಜ್ಜನರ್ಗೆ (ಗ.)

ತಿಸದೋದಮಂ ಪಲವಂ ಭೂ
ವಿಸುತಿರ್ಪ ನ ತಪಮುಮೊಪ್ಪಲಾರ್ಕುಮೆ ಕಡೆಯೊಳ್ ॥ ೮೦

ಮತ್ತಂ, " ಪುತ್ರಂ ಚ ಶಿಷ್ಯಂ ಚ ತಾಡಯೇನ್ನತು ಲಾಲಯೇತ್ " ಎಂಬ ಪೂರ್ವಾಚಾರ್ಯೋಕ್ತಿಯುಂ ಕೈಕೊಳ್ಳದೆ ಮೋಹದಾಕೆವ್ರೋತಿಯಾದಳಂಬಂತೆ ಮಗನಂ ಕಿಱಿಯಂದಿಂ ತೊಡಗಿ ಶಿಕ್ಷಿಸದಿರ್ದುದಱಿನಿಂತಾಯ್ತೆಂದರಸಂ ತಲೆಯುಂ ತೂಗಿ ಬೆರಲಂ ಮಿಡಿದು ಲಲಿತಾಂಗನಂ ಬರಿಸಿ ಮುಂತೆ ಕುಳ್ಳಿರಿಸಿ ಬಟಿಕ್ಕಮಿಂತೆಂದಂ [1] :— ೮೩

ಧರೆಯುಂ ರಕ್ಷಿಸಿ ದುಷ್ಟರಂ ಜಡಿದು ಸದ್ಧರ್ಮಂಗಳಂ ಕಾಯ್ದು ತ
ಸ್ಕರರಂ ಬಾರಿಸಿ ಕಷ್ಟರಂ ಕೆಡಿಸಿ ದಂಡಂಗೊಂಡು ಮಿಂಡರ್ಕಳಂ
ಭರದಿಂ ಬಂಧಿಸಿ ಶಿಷ್ಟರಿಷ್ಟಫಲಮಂ ಸಂತೋಷದಿಂದಿತ್ತು ಧೂ
ರ್ತರ ಬೇರಂ ನೆಱೆ ಕಿೞ್ತು ಪಾಲಿಪುದಕೆ ಧಾತ್ರೀಚಕ್ರಮಂ ಕ್ಷತ್ರಿಯಂ ॥

ಸಿಸುವಂ ತಾಯ್ಸುರಸೌಖ್ಯಮಂ ಬಯಸುವಂ ಚಾರಿತ್ರಮಂ ಶೀಲಮಂ
ವಸುವಂ ತಾಂ ಬಿಡದರ್ಥಲೋಭಿ ಸಸಿಯುಂ ಶೂದ್ರಂ ತಳಾಱಂ ಸಮಂ
ತೊಸೆದೂರಂ ಗುಣಮಂ ಮಹಾಪುರುಷರೊಳ್ಸಂ ಶೌಚಿ [2] ಕೇಳಂತು ರ
ಕ್ಷಿಸುವಂ ಮೋಹದಿನಂತೆ ರಕ್ಷಿಪುದು ಧಾತ್ರೀಚಕ್ರಮಂ ಕ್ಷತ್ರಿಯಂ ॥

ಶಶಿಕಿರಣಂಗಳಂತು ಕುಮುದಾಳಿಗಳಂ ರವಿರಶ್ಮಿಯೆಂತು ರಂ
ಜಿಸುವ ಸಹಸ್ರಪತ್ರನಿಕುರುಂಬಮನೊಪ್ಪಲರ್ಚಿ ನಾಡೆ ಸಂ
ತಸಮನೆ ಮಾೞ್ಪಮಂತೆ ಖಳರೆಂದುದನೆನ್ನದೆ ತನ್ನ ಭೂಮಿಗಂ
ಮಿಸುಪ ಮಚಕೋಂಶುವಿಂ ಮುದಮನೊಪ್ಪಿರೆ ಮಾೞ್ಪುದು ಧಾರಿಣೀಶ್ವರಂ॥

ನಯುಮುಳ್ಳುದಱಿಂ ಚಂದ್ರೋ
ದಯುದೊಳ್ ಬೆಳಗುವುವು ತಾರೆ ಸೂರ್ಯೋದಯುದೊಳ್ ।
ಜಯುದಿಂದದೃಶ್ಯಮಪ್ಪುವು
ನಿಯುತಂ ಕೇಳ್ಮಗನೆ ತೀವ್ರತೆಯುನೆಯ್ದುವರೇ ॥ ೮೭

---

[1] ಮೆಲ್ಲನಿಂತೆಂದಂ (ಗ)
[2] ದಾನಿ (ಬ,ಕ.)

ಏಳಿದರ ಪುಯ್ಯಲಂ ಕರೆ
ದಾಳೋಚಿಸಿ ತಿರ್ದಿ ಸಂತಸಂಬಡಿಸದೆ ಬ |
ಲ್ಲಾಳಪ್ಪರ ಕೊರ್ವಂ ಜಡಿ
ದಾಳಾಪಂಗೆಯ್ದು ಕೆಡಿಸಿದಂ ನೃಪಸುತನೇ || ೪೮

ಎಂಬೀ ರಾಜನೀತಿಯಂ ನೀನಱಿಯದೆ ಲೋಭಿಸರದ ಮೇಲೆ ಬಂದಿ ಪರಿದಂತೆ ಪೊಱಲೆಲ್ಲಮಂ ನಿವಾಳವಟ್ಟಮಂ ಮಾಡಿದೆಯಾದೊಡೇ ನಾಯ್ತು ಪೋದುದಿಂ ಪೋಗಲಿ ಪೆಱಗನೆಣಿಸಲಾಗದು ಮುಂದಣ್ಗೆ || ೪೯

ಇಂದು ಮೊದಲಾಗೆ ನೀಂ ಸೊ
ರ್ಕಿಂದಂ ಪೊಱಲೊಳಗೆ ಕೇಳ ಬಾಧೆಗಳಂ ದೂ |
ರ್ತಿಂದಂ ಮಾಡಿದೆಯಪ್ಪೊಡೆ
ಕಂದಾ ಕಡುಮುನಿವನೆನಗೆ ನೀಂ ಮಗನಲ್ಲಯ್ || ೫೦

ಮತ್ತಮೆಮ್ಮನ್ವಯಧರ್ಮಮೆಪ್ಪೊಡೆ ಶುದ್ಧಸ್ಫಟಿಕದ ದೋಣಿಯೊಳಱೆದ ಪಾಲಂತೆ ನಿರ್ಮಳಮಪ್ಪ ಜೈನಧರ್ಮಮದಂ ಚೆನ್ನಾಗಿ ತಿಳಿದು [1] ಪಾಪಾನುರಾಗಮಂ ಪತ್ತುವಿಟ್ಟು ದುರ್ಜನರೊಡನಾಟಮಂ ಮಾಣ್ಬುದೆನ್ನಾಣೆಯೆಂದು ತನ್ನಂ ಮುಟ್ಟಿಸಿಕೊಂಡು ಮಗನ ಕದಪಂ ಕರ್ಚಿ ಪಸಾಯನಮಂ ಕೊಟ್ಟರಿಮಥನಮಹಾರಾಜಂ ಸಂತಸದಿನಿ
ರ್ದಂ, || ೫೧

ತೆಂಗಿನ ಪೊಸನೇಣಿಂದಂ
ದಿಂಗಳ್ವರಮೆಡಸಿ ಕಂಬಿಯಿಂ ಕಟ್ಟಿದೊಡಂ |
ತಾಂ ಗಡ ಬಿಟ್ಟೊಡೆ ಮತ್ತಂ
ಪಿಂಗದು ಡೊಂಕೆಂಬ ನಾಯ ಬಾಲದ ತೆಱದಿಂ || ೫೨
ಮನ್ನಿಸದೆ ತಂದೆಯಂ ಪೊಱ
ಲಂ ನೆಱೆ ಕಾಡುತ್ತುಮೆಱಲಿಸುತ್ತುಂ ದೂರ್ತಿಂ |
ದಂ ನೃಪಸುತನಿರೆ ಮತ್ತಂ
ತನ್ನಾಣೆಯನುಱದುದರ್ಕೆ ಮುಳಿದು ನರೇಂದ್ರಂ || ೫೩

1 ಧರ್ಮಮದನಱಿಯದೆಂಪಾಪಾ (ಗ)

ಲಲಿತಾಂಗನಂ ಬರಿಸಿಕೊಂಡು ಮಗನೆ ಪಲ್ಲಿಂಗೆ ಪಾಲಂ ಬಿಟ್ಟೊಡೊಸಡೆಲ್ಲಮಂ ದೈವಂ ತಿಂದುದೆಂಬಂತೆ ಮೋಹದಿಂ ನೀಂ ಮಾಡಿದ ಪಲವು ಪೊಲ್ಲಮೆಗಳಂ ಸೈರಿಸಿರ್ದೊಡಂ, ನೀಂ ಕೊರ್ವಿ ಗಾಳಿಯೊಳ್ಕೂಡಿದ. ಕಿರ್ಚಿನಂತೆ ದಳ್ಳುರ್ದು ಪೊಱಲೊಳಗೆ ಮುನ್ನಿನೆಡೆಗೀಗಳುಂ ಪಿರಿದಬ್ಬರಮಂ ಮಾಡಿದೆಯಿಂತು, ॥ ೯೪

ಕೆಟ್ಟಪೆಯೆಂದಾನೀಕ್ಷಿಸೆ
ನೆಟ್ಟನೆ ನೀನೆತ್ತಿಕೊಂಡ ಕಳ್ಳಂ ಬಾಯಂ ।
ಸುಟ್ಟೊೞಿದನೆಂಬಂತಿರೆ
ದುಷ್ಟಾ ನೀಂ ಪಿಱಿಱ ನೆಗಪ್ತೆಯೆನ್ನಾಣೆಯುಮಂ ॥ ೯೫

ಮಕ್ಕಳಂ ಪಡೆವೆನೆಂದು ಮರ್ದಂ ಕುಡಿದ ಮಱುದಿವಸಕ್ಕೆ ಗಂಡಂ ಸತ್ತನೆಂಬಂತೆ ಮತ್ತಿನ ಮಕ್ಕಳಮುದಾಸೀನಂಗೆಯ್ದು ನಿನಗೆ ರಾಜ್ಯಮಂ ಕುಡಲೆಂದಿರ್ದೆನ್ನ ಚಿತ್ತಕ್ಕೆ ಸಂತಾಪಮಂ ಮಾಡಿದೆಯಿನ್ನೆನ್ನ ಮೇಲೆ ಪೞಿಯುಂ ಪಾಪಮುಮಿಲ್ಲ ॥ ೯೬

ಕಡುಲೇಸೆಂದೊಡಂ ಪಿಡಿ
ದೊಡೆ ಕೈ ಮಸಿಯಪ್ಪ ಮಾರ್ಗದಿಂ ದುರ್ಜನರಂ ।
ಕಡುಮೋಹದಿನೊಳಕೊಂಡಿ
ರ್ದೊಡೆ ಕೆಡುಗುಂ ತನ್ನೊಳಾದ ಗುಣಮೆನಿತನಿತುಂ ॥ ೯೭

ಅದುಕಾರಣದಿಂ ದುರ್ಜನನಾಗಿರ್ದ ನಿನ್ನನೊಳಕೊಂಡಿರ್ದೊಡೆ ನಗಿಹದೊಳರ್ಪ ಕೀರ್ತಿಯುಂ ಪರದೊಳಪ್ಪ ಸದ್ಗತಿಯುಂ ಕಿಡುಗುಮಿನ್ನೆನ್ನಾಳ್ವ ದೇಶದೊಳಿರದೆ ಪೊಱಮಟ್ಟು ಪೋಗೆಂದು ಜಡಿದು ನುಡಿದೊಡರಸನ ಮಾತಿಂಗೆ ಲಲಿತಾಂಗನೆೞ್ದು ಸೌಂದರಿಮಹಾದೇವಿಯಲ್ಲಿಗೆ ಬಂದು ತನ್ನ ದೇಶತ್ಯಾಗವೃತ್ತಾಂತಮಂ ಪೇೞೆ ಕೇಳ್ದಂತೆಂದಳ್:— ೯೮

ಜಗದೀಶಂ ಸ್ನೇಹದಿಂದಂ ಕಱುವೆ ಬಿಡುವುದೀ ದೂರ್ತನೆಂದಾರ್ತನೇ ಕೈ
ಮುಗಿದಾನುಂ ಪುತ್ರ ಮೋಹೀ ಖಳರ ಕೆಳೆಯನೆಂದಾರ್ತನೇ ಮಂತ್ರಿವರ್ಗಂ

ಮಿಗೆಯಾವೇನೆಂದೆವೆಂದಂತಿರೆ ನೆಱೆ ನೆಗೞೆಂದಾರ್ತರೇ ನಿನ್ನ ಸೂರ್ಕಿಂ
ಮಗನೇ ನೀಂ ಮಾಡಿಕೊಂಡೈ ನೃಪನ ಮುಳಿಸನಾನೇಗುವೆಂ ಕೂರ್ತು ಕಂದಾ ॥೯೯

ಕ್ಷಿತಿಪಂ ನಿನ್ನ ಸಮಸ್ತಪ್ರೊಲ್ಲಮೆಗಳಂ ಕಣ್ಣಾರೆ ಕಂಡುಂ ಮಹೋ
ನ್ನತಚಿತ್ತಂ ಸುತಮೋಹದಿಂ ಪಲವುಸೂೞೆನ್ನಾಣೆ ಮಾಣೆಂದೊಡಂ
ಸಿತಗಂ ಮಾಣದೆ ದುಷ್ಟಸಂಗತಿಯನೇವಂ ಭೂಪನೆಂದಿರ್ದ್ದೂರಂ
ಟುತನಂ ಕಣ್ಗಳಿವಾಯ್ತು ಪೆತ್ತನಗೆ ನೀಂ ಪೊಂಬಟ್ಟಮಂ ಕಟ್ಟಿದೈ॥೧೦೦

ಕಡುಗಾಯ್ದುಂ ನೀರ್ ಮನೆಯಂ
ಸುಡಲಱಿಗುಮೆ ಮಗನೆ ಮುಳಿಸಿನಿಂ ನಿಮ್ಮಯ್ಯಂ ।
ನುಡಿದನಿತಱಿಂದೆ ಕಳವನ
ಬಿಡುವುದು ದುರ್ಗುಣಮನೆನ್ನ ಪಿಡಿವುದು ಗುಣಮಂ ॥ ೧೦೧

ಎಂದು ಸೌಂದರಿಮಹಾದೇವಿ ನುಡಿದ ನುಡಿಗಳಂ ಕೊೞೆವಾವು ಗಾರುಡಮಂ ಕೇಳದಂತೆ ಕೇಳದಿರೆ ಬೇಸತ್ತು, ೧೦೨

ಇಂಬಾಗಿ ತಂದೆಗಂ ತಾ
ಯ್ಗಂ ಬಗೆವೊಡೆ ನಚ್ಚಿದೆಮ್ಮ ಕೋಣನನೀದ ।
ತ್ತೆಂಬಂತೆ ಮಾಡಿದೈ ಗುಣ
ಮಂ ಬಗೆಯದೆ ಮಗನೆ ದುಷ್ಟಸಂಗತಿಯಿಂದಂ ॥ ೧೦೩

ಕಾಗೆಯ ಮಱಿಯೆಂದಱಿಯದೆ
ಕೋಗಿಲೆ ಕೈಗೊಂಡು ಕೂರ್ಮೆಯಿಂ ನಡಪಿದೊಡಂ ।
ಕಾಗಾಯೆಂದುದು ಮತ್ತಂ
ಕಾಗೆಗಳೊಡಗೂಡಿತೆಂಬವೊಲ್ನೀಂ ಮಗನೇ ॥ ೧೦೪

ಕಳ್ಳಂ ಕುಡಿದರಂತೆ ಸೊರ್ಕಿ, [1] ದೊಗ್ಗಳೆಯಂತುರ್ಬಿ [ಬಳವ ಮೊಲೆಯಂತೆ ಕೊರ್ವಿ,] ಎಳವೆಱೆಯಂತೆ ವಕ್ರನಾಗಿ, ಸೂಳೆಯಂತೆ

---

1 ಕಾಯ್ದು ಪಾಲಂತುರ್ಕಿ (ಗ)

ಕಾಪಿಳಾಗಿ, ಮೊಳ್ಳ್ಕಿಕಿಯಂತೆ ಕ್ರೂರನಾಗಿ, ಸತ್ತ್ರರಂತೆ ವೈವಿಟ್ಟು [1] ಪಗರಣಿಗನಂತೆ ವಿಪರೀತನಾಗಿ, ಪಚ್ಚೊತ್ತಿಯಂತೆ ಪಲವುಂಬಣ್ಣವಾಗಿ ಬಾಗೆಯಂತೆ ನಿಸ್ಸಾರನಾಗಿ, ಅಶೋಕೆಯಂತೆ ನಿಷ್ಫಲನಾಗಿ, ತಣಿಯದ ಮರದಂತೆ ನೇರದನಲ್ಲದೆ, ಬಡಸನಂತೆ ಪುರುಳಿಲ್ಲದೆ, ಕಾಗೆಯಂತೆ ಮತಿಯಿಲ್ಲದೆ [2] ಪಂಡೆಯಂತೆ ಪತಿಯಿಲ್ಲದೆ, ಕಾಲ್ಗಟ್ಟನಂತೆ ಗತಿಗೆಟ್ಟು, ಬೆಸನಿಯಂತೆ ಪೆಂಪಂ ಬಿಟ್ಟು, ಕುದುರೆಯಂತೆ ಕೀಟಂ ಕೈಕೊಂಡು, ತೇಱನಂತೆಲ್ಲಾ ಪಳಗವೊಳಗಾದೈ, ನಿನ್ನ ಕೇಡಿಂಗಳಲ್ಬಾರದು, ನೀನಱಿವೈಯೆಂಬುದುಂ, ವಿಜಯಪುರಮಂ ಪೊಱಮಟ್ಟು ಪೋಗಿ ನೇಪಾಳದೇಶಮಂ ಪೊಕ್ಕಲ್ಲಿ, ೧೦೫

ಪಾವಿನ ನಂಜುಮನವರುಮ
ನೋವಿನಿಸಂ ತೂಗಿ ನೋಡೆ ದುಷ್ಟತನಕ್ಕಾ ।
ಪಾವಿನ ಪಲ್ಲ ವಿಷಕ್ಕಂ
ಭಾವಿಸೆ ಮಿಗಿಲೆನಿಪ ಕಳ್ಳರೊಳ್ ಲಲಿತಾಂಗಂ ॥ ೧೦೬

[ಕೂಡಿ ಕೆಳಗೊಂಡು ಬಿಡದೊಡ
ನಾಡಿ ನೃಪಾಚಾರಮೆಲ್ಲಮಂ ಮಱೆದೊಡನುಂ ।
ಡೋಡಾಡಿ ಕೆಟ್ಟು ದೂತಿಗಂ
ನಾಡೆಯುಮವರೆಡೆಗೆ ತಾನೆ ಮಿಕ್ಕಂ ಧರೆಯೊಳ್ ॥ ೧೦೭

ಅಂತು] ಮುನ್ನ ಬಂದ ಕಿವಿಯಿಂದಂ ಬೞಿಕಂ ಬಂದ ಕೋಡು ಕೂರಿತ್ತೆಂಬ ನಾಣ್ಣುಡಿಯಂತೆ ಮುನ್ನಿನ ಕಳ್ಳರೆಡೆಗೆ ತಾನೆ ಪ್ರಸಿದ್ಧನಾಗಿ ತನಗವರ್ಕಳ್ ಮರ್ಯೆಯಿಂದುಪದೇಶಂಗೆಯ್ದಂಜನಘುಟಿಕೆಯಂ ಸಾಧಿಸಿ ತದ್ಘುಟಿಕಾಪ್ರಯೋಗದಿಂದದೃಶ್ಯರೂಪಂ ಕೈಕೊಂಡು ಜಗಮೆಲ್ಲಮಂ ಮೊಟ್ಟನಾಗೆ [3] ಕಳ್ವಂಜನಚೋರನೆಂಬ ಪೆಸರೆಸೆಯೆ ನೆಗೞ್ದು, ೧೦೮

---

1 ಪಗರಣಿಗನಂತೆ ಬೋಡಾಗಿ, ಬಂದವಾಪಿಯಂತೆ ವಿಪರೀತನಾಗಿ (ಗ)

2 ಶುಚಿಯಿಲ್ಲದ (ಬ)

3 ಲೋಕವೆಲ್ಲಮಂ ಸಿವಾಳಿಟ್ಟಂಮೂಡಿಕಳ್ವ (ಗ)

ಕಳವುಂ ಜೂಜುಂ ವೊಂಸದೆ
ಮೞನತೆಯುಂ ಮೊಟ್ಟೆ ಬೇಂಟೆಯುಂ ಪರಸತಿಗ।
ಳ್ಗಳಸುವುದುಂ ಬ್ರತವಿಲ್ಲದೆ
ಬೆಲೆವೆಣ್ಣೊಡನಿರ್ಪುದೋತು ಕುಡಿವುದು ಕಳ್ಳಂ ॥ ೧೦೯

ಅಸುಗತಿಯುನೆಯ್ದಿಸಲ್ಕಿವು
ಮಿಸುಪ ಮರುಜ್ಜವದ ತುರಗವೆನಿಸುವ ಸಪ್ತ।
ವ್ಯಸನವೆನೆ ಬಿಡದೆ ಕೈಕೊಂ
ಡೆಸಗಿ ಸದಾಚಾರವೆಲ್ಲವಂ ನೆಱೆ ಮೆಱೆದಂ ॥ ೧೧೦

ಎಲ್ಲಿ ವಿನೋದವೆಲ್ಲಿ ವಿಟರೆಲ್ಲಿ ಮನಂ ನಡುಗೆಲ್ಲಿ ದುಷ್ಕರಂ
ತೆಲ್ಲಿ ಕನಿಷ್ಠರೆಲ್ಲಿ ಗಣಿಕಾಜನವೆಲ್ಲಿ ಪುಳಿಂದಗೋಷ್ಠಿ ಮ
ತ್ತೆಲ್ಲಿ ಜಡಾತ್ಮರೆಲ್ಲಿ ಚಪಳಕರ್ಕರವೆಲ್ಲಿ ವಿಶೇಷಕಳ್ಳರಂ
ತಲ್ಲಿಯೆ ರಾಗವೆಲ್ಲಿಯೆ ಮಹೋತ್ಸವವೆಲ್ಲಿಯೆ ತಾಣಮಾಗಳುಂ ॥ ೧೧೧

ಅಂತು ತನ್ನ ಮನಕ್ಕೆ ಬಂದಂತೆ ನೆಗೞುತ್ತುಂ ಕರಟದ ಕದಿರಂತೆ ತಿಬ್ಬನೆ ತಿರುಗುತ್ತುಮೊರ್ಮೆ ರಾಜಗೃಹಮೆಂಬ ಪುರಕ್ಕೆ ಬಂದು ತತ್ಪುರದ ಸೂಳೆಗೇರಿಯುಂ ಪೊಕ್ಕಾರುಮಂ ಮೆಚ್ಚದೆ ಪೋಗುತ್ತುಮಿರ್ದು ಮನಸಿಜನ ಕಯ್ಯ ಮಸೆದಸಿಯುಮನನುಕರಿಸುವ ಅನಂಗಸೌಂದರಿಯೆಂಬ ಸೂಳೆಯುಂ ಕಂಡು ಕಣ್ಬೇಟಂಗೊಂಡೊತ್ತಗಿಟ್ಟೊಕೆಯು ಮೇಲೆ ಮೋಹಮುಂ ಸ್ನೇಹಮುಂ ತಿಣ್ಣಮಾಗೆ, [1] ॥ ೧೧೨

ಓಪಳ ಕೂರ್ಮೆಯೊಳಬ್ಜ
ದ್ವೀಪದ ಗುಳ್ಳೆಯವೊಲಗಲಲಾಱದೆ ಸಲೆ ನಿ।
ಕ್ಷೇಪದ ಪೊನ್ನಂ ಕೈಕೊಂ
ಡೇಪೊತ್ತುಂ ನೋಡುತಿರ್ಪ ಪಾಪಿನ ತೆಱದಿಂ ॥ ೧೧೩

---

1 ಪುರದಲ್ಲಿ ಕಾಮನ ಕೈಯ ಕೂರಸಿಯೆನಿಪ್ಪನಂಗಸೌಂದರಿಯೆಂಬ ಸೂಳೆಗೆ ಕೂರ್ತು (ಗ)

ಇರುತಿರ್ಪಾಕೆಯೆನಿತರ್ಥಮಂ ಬೇಡಿದೊಡನಿತುವಂ ಪ್ರೀತಿಯಿಂ ಕೈದೆಗೆಯದೆರಡುಗೇಳದೆಯನವರತಂ ಕುಡುತ್ತುಮಿರ್ಪುದುಮಾತನೋ ರಂತೀವ ಕೋಡಿಂಗನಂಗಸೌಂದರಿ ಬೆಱಗಾಗಿ ತನ್ನೊಳಿಂತೆಂದಳ್ : ೧೧೪

ಸುರಪತಿಯುಂ ಸಿರಿಯೊಳ್ಕ
ಚ್ಚರಿಸುವ ಧರಣೀಶರುತ್ತರಾಶಾಧಿಪನೊಳ್ [1] |
ದೊರೆಯೆನಿಪ ವೈಶ್ಯಜಭ್ರಾ
ಸುರತೇಜರ್ವಿರ್ಕ್ಕೆ ಗಂಡರೆನ್ನ ಬೊಜಂಗರ್ || ೧೧೫

ಅಂತಪ್ಪವರೊಳಮೀತನೊಂದುದಾರತೆಯಂ ಕನಸಿನೊಳಾದೊಡಂ ಕಂಡಱಿಯೆನೀತಂಗೆ ಪೊಱಗೆ ನಾಡಿಲ್ಲೊಳಗೆ ಭಂಡಾರಮಿಲ್ಲೀತಂಗೆ ಪೊನ್ನೆತ್ತಣಿಂ ಬರ್ಪುದಿದನಾರಯ್ವೆನೆಂದು ಪುಸಿಗೂರ್ಮೆಯಿಂದನೇಕಚಾಟುಕಾರದಿಂ ನಂಬಿಸಿ ಮೆಲ್ಲನೆ ಬೆಸಗೊಳ್ವುದುಂ, ವೈಮಱೆದು ತನ್ನ ಕಳವಿನ ಮಾರ್ಗಮೆಲ್ಲಮಂ ಪೇೞೆ, ಕೇಳ್ದನಂಗಸೌಂದರಿ ಬೆಱಗಾಗಿರ್ಪುದುಂ, ಮಱುದಿವಸಮರಸನರಸಿಯರ್ಬೆರಸು ತೂರ್ಯತ್ರಯಮೊಪ್ಪೆ ಜಲಕ್ರೀಡೆಗೆ ಪೊಱಮಟ್ಟು ಪೋಗುತ್ತಿರೆ, ೧೧೬

ತರಣಿಯ ಕಿರಣಾವಳಿಗಂ
ಸರಸಿಜವೈರಿಯ ಮಯೂಖತತಿಗಂ ಮಿಗಿಲ |
ಚ್ಚರಿ ಕಾಂತಿಯೆನಿಪ ಬೆಳಗಿಂ
ಸ್ಫುರಿಯಿಪ ಸದ್ರತ್ನನಿಕರದಿಂದೊಪ್ಪುವುದಂ || ೧೧೭

ಪಟ್ಟದ ಮಹಾದೇವಿಯುರದೊಳೊಪ್ಪುತ್ತಿರ್ದ ಜ್ಯೋತಿಪ್ರಭಮೆಂಬ ಪದಕಮಂ ಕಂಡನಂಗಸೌಂದರಿಯಾಪದಕದ ಮೇಲೆ ಪ್ರೀತಿಬಟ್ಟು,[2]ಅಂಜನಚೋರಂ ಘುಟಿಕಾಪ್ರಯೋಗದಿಂದದೃಶ್ಯರೂಪದಿಂಪೋಗಿ ಕಳ್ದು ತಂದುಕುಡುವ ಸಮರ್ಥನೆಂಬುದಂ ತಾಂ ಬಲ್ಲಳಪ್ಪುದಱಿಂದಾ ಪದಕಮನೆನಗೆ ಕೂರ್ತೆಯಪ್ಪೊಡೆ ಬೇಗದಿಂ ತಂದೀವುದೆಂದು ಅಲ್ಲಿಗೈದು

1 ಉರಗಾಧಿಪನೊಳ್ (ಗ)   2 ಅಂಕಮಾಗೆ ಪ್ರೀತಿಯಿಂದಂಜನ (ಕ)

ಪ್ರಾರ್ಥಿಸುವುದುಮದು ಪ್ರೋಱಿಗಾಗೆ ನೀನೇನಂ ತರವೇೞ್ಕುದಂ ತಂದಿತ್ತ
ಪೆನಿದೊಂದು ಮಾತ್ರಂ ಬೇಡದೇಕನೆ, ೧೧೮

ಆ ಪದಕಂ ಬಂದೊಡೆ [1] ಕೇ
ಳೇಪ್ರೊತ್ತುಂ ತೊಡಲವೇೞ್ಕುಮೆಱಿದೊಡೆ ನಿನ್ನಂ ।
ಭೂಪತಿ ಕೊಲ್ಗುಂ ಕವರುಗು
ಮೇಪಡಿಮಾತದಱ ಪಂಬಲಂ ಬಿಡು ನಯದಿಂ ॥ ೧೧೯

ಎಂಬುದುಮಂಜನಚೋರಂಗೆ ಮುಳಿದು ಪಾಸಿನ ಮೇಲಿಂ ನೆಲಕ್ಕೆ
ಬೀಳಲೊದೆದು, ಕಾಲೊಳಂ ಕೈಯೊಳಂ ಮೊಡೆಗಟ್ಟುವಂತೆ ಮೋದಿ,
ಕೋಪಾನಳನಿಂ ಕಣ್ಗಾಣದೆ ಕೆಲದೊಳಿರ್ದ ಜಂತದ ಪಾವುಗೆಯಿಂದ
ಮಿಟ್ಟು, ೧೨೦

ತೊಡವೆನಗಪ್ಪೊಡೆ ಲಕ್ಕಂ
ಬಡೆವವು ಪಲವೊಳವು ನಂಬೆಯಪ್ಪೊಡೆ ನೋಡೀ ।
ಗಡೆ ಕೂರ್ಪೆಯೆಂದು ನಾಂ ಪೇ
ೞ್ದೊಡೆ ಗಂಡರ ಬೂತ ನುಡಿವುವೇ ಪೆಱಪೆಱತಂ ॥ ೧೨೧

ಸಿತಗೆಯ ನಾನೆಮ್ಮಬ್ಬೆಯ
ಮತವಮಂ ಬಂಧುಗಳ ವಚನಮಂ ಮೀಱಿ ಮಹೋ ।
ನ್ನತಿಯಿಂ ನಿನ್ನೊಡನೋತಿ
ರ್ದತಿಚಪಳಗೆ ಭಾವಿಸಂದಿದಾವುದು ಚೋದ್ಯಂ ॥ ೧೨೨

[ಎನ್ನಂದ ಮಾತನಂತಿಂ
ತೆನ್ನದೆ ತಡೆದಿರದೆ ಕೂಡುವಚ್ಚಿಗಮಂ ಕೇಳ್ ।
ನಿನ್ನೊಡನಿರ್ದ ಬೋಜಂಗರ್
ನಿನ್ನಂತಿರೆ ಬಂಜರಲ್ಲರದಟರ್ಕಳವರ್ ॥] ೧೨೩

ಎಡೆಯನರಸಾದೊಡೆ ಕೊಡೆಯ ಕಾವು ಮೇಗಾದುದೆಂಬಂತೆ
ದೇಸಿಗನಪ್ಪ ನಿನಗೆರಡಿಲ್ಲದೆ ಸ್ನೇಹಮಂ ಮಾಡಿ ಕೂಡಿರ್ದೆನಗೆ ಸಂತೋ

1 ನಿಸಗಾಪ್ರೊತ್ತುಂ (ಕ)

ಷಮೆಂ ಮೊಱೆದೈ [ಎಂದಾತನೆರಡಿಲ್ಲದೆ ಕೂರ್ತುದನಱಿದನಪ್ಪುದನ ಱಿದು] ಕಡೆಗಣ್ಣ ನೋಟದೊಳ್ ಶೃಂಗಾರರಸಮುಂ ಮೆಲ್ನುಡಿಯೊಳ್ ಕಾರುಣ್ಯರಸಮುಮೊಡನೊಡನೆ ಪೆರ್ಚೆ ನುಡಿಯಲಿನ್ನುನಿವಪಳಂದಂಜನ ಚೋರಂ ಭಯಂಗೊಂಡು ನಲ್ಲಳ ಪಾದಮಂ ತಲೆಯೊಳ್ ಪೊತ್ತು ಕೊಂಡು [ಎನ್ನ ಮುಂದೆ ಮುನಿಯದಿರಿದಾವ ಗಹನಂ] ನಿನಗದಂ ತಂದೀ ವೆನಂಜದಿರೆಂದು ಸಂತಸಂಗೊಳಿಸಿ ಕಳ್ಳಂಗೆ ಬೆಳ್ದಿಂಗಳ್ ಸೊಗಸದೆಂಬ ನಾಣ್ನುಡಿಯಂ ನನ್ನಿಮಾಡಿ ಶುಕ್ಲಪಕ್ಷಂ ಪೋಪಿನಮಿರ್ದು ಕೃಷ್ಣಪಕ್ಷದ ಷ್ಟಮಿಯಂದು, ೧೨೪

ತುರಿಪದಿನಂಜನಮಂ ವಿ
ಸ್ತರದಿಂದಂ ಕಣ್ಗೊಳಚ್ಚಿಕೊಂಡಾವರದಿಂ ।
ಭರದಿಂದದೃಶ್ಯರೂಪಿಂ
ದರಮನೆಯಂ ಪೊಕ್ಕು ಪದಕಮಂ ಕೊಂಡಾಗಳ್ ॥ ೧೨೫

ಪೊಱಮಟ್ಟು ಪೆರ್ಚಿನಿಂ ಮು
ಯ್ಯಱಿಯುದೆ ಬರೆ ರತ್ನದೀಪ್ತಿ ದೆಸೆದೆಸೆಗೆಲ್ಲಂ ।
ಮಿಱುಗೆ ರವಿಕಿರಣನಿಕರದ
ತೆಱದಿಂ ತೊಳಲುತ್ತುಮಿರ್ಪ ದಂಡಕನೆಂಬಾ ॥ ೧೨೬

ತಳಾಱಂ ಕಂಡಱಿದಾತನಂಜನವಿದ್ಯೆಯಂ ಕೆಡಿಸಿ ಬೆನ್ನಟ್ಟಿಬರೆ ಭಯದಿಂದಂಜನಚೋರಂ ಪದಕಮನೀಡಾಡಿ [1]ಯಾ ಪುರದ ಕೋಂಟೆಯುಂ ವಿದ್ಯಾಧರಕರಣದಿಂ ಲಂಘಿಸಿ, ದೆಸೆಗೆಟ್ಟೋಡುವಾತನಂದು ಶ್ಮಶಾನಭೂಮಿ ಯೊಳಾಲದ ಮರದ ಕೆಳಗುರಿವ ಸೊಡರಂ ಕಂಡಲ್ಲಿಗೆ ಬಂದು ನಿಂದು ನೋಡುವಾಗಳಾಲದ ಮರದ ಕೊಂಬಿನೊಳ್ ನೂಱೊಂದು ಕಾಲ ನೇಲ ಪಂ ಕಟ್ಟಿ ನೆಲಪಿನ ಕೆಳಗೆ, ೧೨೭

ಪರಶು ಬಿಲು ಕೊಂತಮುಸಿ ತೋ
ಮರ ಮುದ್ಗರ ಭಿಂಡಿವಾಳ ಚಕ್ರಂ ಶೂಲಂ ।

---

[1] ಬೆನ್ನಟ್ಟೆಹಾರಮನೀಡಾಡಿ (ಗ)

ಸುರಿಗಿ ಮೊದಲಾಗೆ ಮೂವ
ತ್ತೆರಡಾಯುಧಮಮಂ ಮಹೋತ್ಸವಂಬೆರಸಿನಿತಂ ॥ ೧೨೮

ನಿಲಿಪಿ ಪೂಜಿಸಿ ನೆಲಪಿನ ಕಾಲಂ ಕೊಯ್ಯಲ್ಕಣ್ಮದೇಱುತ್ತುಮಿೞಿಯುತ್ತುಮಿರ್ಪನಂ ಕಂಡಂಜನಚೋರನವನಂ ಪಿಡಿದು ನೀನಾರ್ಗೆ ನೀಂ ಸಾಧಿಸುವ ವಿದ್ಯೆಯ ಪೆಸರೇನಿದನುಪದೇಶಂಗೆಯ್ದರಾರ್ ಪೇೞ್', ಪೇೞದಂದು ನಿನ್ನನಿಲ್ಲಿ ಕೊಲ್ಲದೆ ಮಾಣೆನೆಂದು ಸುರಿಗಿಯಂ ಕಿೞ್ತು ಗಂಟಲ್ಗೆ ಪೂಡುವುದುಂ, [1] ಪ್ರಾಣಭಯದಿಂ ಬೆರ್ಚಿ, ೧೨೯

ಎನ್ನ ಪೆಸರ್ವರಸೇನಂ
ಸನ್ನುತಮೀವಿದ್ಯೆ ಗಗನಗಾಮಿನಿಪೆಸರಿಂ ।
ಮುನ್ನಿದನುಪದೇಶಂಗೆ
ಯ್ದನ್ನಱಿ ಜಿನದತ್ತಸೆಟ್ಟಿ ನಿರ್ಮಳಚರಿತಂ ॥ ೧೩೦

ಎಂಬುದುಮಂಜನಚೋರಂ ವರಸೇನನ ಮಾತಿಂಗೆ ಮುಗುಳ್ನಗೆ ನಕ್ಕು [2] [ಸಕಲಸದ್ಗುಣನಿಳಯನುಂ ಸದ್ಧರ್ಮಜಲನಿಧಿಚಂದ್ರನುಂ ಸತ್ಯನಿಧಿಯುಂ ದಯಾನಿಧಿಯುಮೆನಿಸಿ ನೆಗೞ್ದ ಜಿನದತ್ತಸೆಟ್ಟಿಯೆ ಮಂತ್ರೋಪದೇಶಂಗೆಯ್ದನೆ, ನಿನಗೆ ಪಂದೆತನಮೆ ತಾನಾದೊಡಿನಿತಾನುಂ ಭಯಮಿಲ್ಲಮೊರ್ಮೆಯೆ ನೆಲಪಿನ ಕಾಲೆಲ್ಲಮಂ ಕೊಯ್ವೆಂ ನೀನಾದೊಡೇಱುತ್ತುಮಿೞಿಯುತ್ತುಮಿಂತೇಕಿರ್ದಪೈ ಭಯಂಬೇಡೆನೆ, ವರಸೇನನಿಂತೆಂದಂ :— ೧೩೧

ಎತ್ತಲಱಿವರ್ಮನುಷ್ಯ
ಚಿತ್ತಮನಾರಯ್ಯನಾನಿದಂ ಕೊಯ್ದಗ್ಗಿಂ ।
ಸತ್ತೊಡೆ ಬೞಿಕ್ಕೆ ಕನಸಿನ
ಬತ್ತಕ್ಕೆಚ್ಚತ್ತು ಗೋಣಿಯಾಂತಂತಕ್ಕುಂ ॥ ೧೩೨

---

[1] ಪೋದುವುದುಂ (ಗ) [2] ಚೋರನಾ ಮಾತಿಂಗೆ ಖವಖವಿಸಿ ನಕ್ಕು (ಗ)

ಸತ್ತು ಕೊಳ್ವ ಸ್ವರ್ಗದಿಂ ಬರ್ದು ಕೊಳ್ವ ನರಕಂ ಲೇಸು।
[ಎಂಬುದು ನಾಣ್ಣುಡಿ.] ಜೀವಮುಳ್ಳೊಡೆ ಹಾಡಿ[1] ಕೊಂಡುಣಲಕ್ಕು
ಮೆಂಬ ನೀತಿಯುಂ ಬಿಟ್ಟು ಮಾರಿಯುಂ ಬಳಾರಿಯುಂ ಸಾಯ್ಗುಮಾನಾ
ದೊಡೊಲ್ಲೆನೆನೆ, ಲಲಿತಾಂಗಂ [ತನ್ನಂತರಂಗದೊಳಿಂತೆಂದಂ:—ಮುಗಿಲಂ
ಮುಟ್ಟಿದುದಱ ನೀಳಮಂ, ಮಕ್ಕಳ್ಪೆತ್ತಳ ಮದುವೆಯಂ, ಪಟ್ಟಂಗಟ್ಟಿದನ
ರಾಜ್ಯಮಂ, ಗೆಲ್ದಂಕದ ಗೆಲ್ಲಮಂ, ಮೋಕ್ಷಮನೆಯ್ದಿದನ ತಪಮಂ, ಪರ್ವ
ತಮನೆತ್ತಿದನ ಸಾಹಸಮಂ], ಸಮುದ್ರಮಂ ಲಂಘಿಸಿದನಾರ್ಪಂ, ಇಂದ್ರತ್ವ
ಮಂ ಪಡೆದವನ ಜಿನಭಕ್ತಿಯುಂ, ಕಾಮನನೊಲಿಸಿದಳ ಸೊಬಗಂ, ತ್ರಿಭು
ವನವಿಜಯಿಯ ವೀರಮಂ, ಚಕ್ರವರ್ತಿತ್ವಮನೆಯ್ದಿದನ ವಿದ್ಯೆಯುಮಂ
ಬೆಸಗೊಂಬವನ ಬೆಳ್ಪನದಂತೆ,[2] ೧೩೩

ಜಿನದತ್ತಂ ಜಿನಪಾದಪದ್ಮಮಧುಪಂ ದುಷ್ಕರ್ಮದಾವಾಗ್ನಿ ಸ
ಜ್ಜನಚೂಡಾಮಣಿ ಸರ್ವಜೀವಹಿತನಿಂದ್ರಾದ್ರಿಕ್ಷಮಂ ನಿರ್ಮಳಂ
ವಿನಯಾಲಂಕೃತನಾಗಮಾನ್ವಿತನುದಾರಂ ಸತ್ಯವಾಕ್ಯಂ ಜಗ
ಜ್ಜನಸಂಸ್ತುತ್ಯನಣುವ್ರತೈಕನಿಳಯಂ ವಾತ್ಸಲ್ಯರತ್ನಾಕರಂ ॥ ೧೩೪

[ಬಂದಿಱಂಬೆಯು ಪ್ರಾಣಕ್ಕಂ ತಪ್ಪದಾತಂ ನಿನ್ನ ಪ್ರಾಣಕ್ಕೆ
ತಪ್ಪುವನೆ? ತಪ್ಪಲಱಿಯಂ, ನಾನಾತಳಾಱನ ಕೈಯೊಳ್ಸಾಯುದಲ್ಲಿ ಪರಿಚ್ಛೇ
ದಮಂ ಮಾಳ್ಪೆನೆಂದು] ೧೩೫

ಕೊಡು ಮಂತ್ರಮನೆಲೆ ಬೇಗಂ
ಕುಡದಿರ್ದೊಡೆ ನಿನ್ನನಿಲ್ಲಿ ದೆಸೆವಲಿಗೆಯ್ವೆಂ।

---

[1] ಹಾಡಿಯುಣಲಪ್ಪುದೀ ನಿಶಿತಾಸ್ತ್ರಂಗಳ ಮೇಲೆ ಬಿದ್ದು ಮಾರಿಯುಂ (ಗ)

[2] ಬೆಳ್ಪನದಂತೆ ದಯಾನಿಧಿಯುಂ ತತ್ವವಿದನುಂ ಮಹಾಪುರುಷನುಂ ಪಂಚಾಣುವ್ರತನಿಳಯನುಮಪ್ಪ ಜಿನದತ್ತಸೆಟ್ಟಿಯ ವಚನಮನವಿಶ್ವಾಸಂಮಾಡಿದಪೆ. ನಿನ್ನಂ ಬಿಟ್ಟು ಶೂನ್ಯಹೃದಯರುಂ, ನಿರ್ಭಾಗ್ಯರುಂ ಲೋಕದೊಳಿಲ್ಲೆಂದು ಬೀಡಾಡಿ ಬೈದು ಬಗ್ಗಿಸಿ, ಕೊಡು ಮಂತ್ರಮನೆಲೆ ... (ಗ)

ತಡೆಯದೆನೆ ಪಂದೆಯುಂ ಪಾ
ವಡರ್ದಂತಿರೆ ಬೆರ್ಚಿ ನಾಡೆಯುಂ ವಗಸೇನಂ ॥ ೧೩೬

ಜಿನದತ್ತಸೆಟ್ಟಿ ಮುನ್ನಂ
ತನಗೆಂತಳವಡಿಸಿ ಪೇೞ್ದನಂತಾ ತೆಱದಿಂ ।
ಮನದ ಮಹಾಭಯದಿಂದಂ
ಜನಚೋರಂಗಱಿಯೆ ಪೇೞೆ ತಿಳಿಪಾದರದಿಂ ॥ ೧೩೭

ಪರಮಜಿನೇಶ್ವರಪದಮಂ
ಸ್ಮರಿಯಿಸಿ ಜಿನದತ್ತಸೆಟ್ಟಿಗಾದರದಿಂದಂ ।
ಕರಯುಗಮಂ ಮುಗಿದುಂ ನಿ
ರ್ಭರಚಿತ್ತಂ ಪಂಚಪದಮನುಚ್ಚರಿಸುತ್ತುಂ ॥ ೧೩೮

ಏೞು ನೆಲಪಂ ಮನಂಬಿಡೆ
ತೋೞುವ ನೂಱೆಂಟು ತೆಱದ ನೆಲಪಿನ ಕಾಲಂ ।
ಕೀೞಿಡದೆ ಶಂಕೆಯಿಂದಂ[1]
ಬೇೞೊಂದಂ ನೆನೆಯದನಿತುಮಂ ಲಲಿತಾಂಗಂ ॥ ೧೩೯

ಚಕ್ಕನೆ ಕೊಯ್ವುದುಂ, ಆಯುಧಾಗ್ರಮಂ ಮುಟ್ಟೆವೆಂದು ತಾಗದೆ ಪೋಗಲ್ ನೆಗೆಯೆ ತದ್ವಿದ್ಯಾದೇವತೆ ಮುಂದೆ ನಿಂದು ಕಯ್ಯಂ ಮುಗಿದು ಬೆಸಸು ಬೆಸಸೆನೆ, ಲಲಿತಾಂಗಂ ಬೆಸನೇನೆನ್ನಂ ಸುಕವಿನಿಕರಪಿಕಮಾಕಂದನಲ್ಲಿಗೊಯ್ವುದೆಂಬುದುಂ ಅಂತೆ ಗೆಯ್ವೆನೆಂದು ಮೇರುಗಿರಿಯ ಭದ್ರಸಾಲನಂದನವನದೊಳಿರ್ದ ಜಿನದತ್ತನಂ ತೋಱಿ ನೆಲಕ್ಕಿೞಿಪಿ ವಿದ್ಯೆ ಪೋಪುದು[2] ಮಂಜನಚೋರಂ ಮೇರುಗಿರಿಯುಂ ನೋಡಿ ॥ ೧೪೦

---

1 ಶಂಕೆಯಿಲ್ಲದೆ (ಕ)

2 ಪೆಱತು ಬೆಸನಿಲ್ಲೆನ್ನಂ ಜಿನದತ್ತಸೆಟ್ಟಿಯಲ್ಲಿಗೊಯ್ಯೆಂಬುದುಂ ಲಲಿತಾಂಗನಂ ಮೇರುಗಿರಿಗೊಯ್ದು ಭದ್ರಸಾಲನಂದನವನದೊಳಿರಿಸಿ ಸರ್ವಜ್ಞ ಚೂಡಾಮಣಿಯುಂ ದೂರದೊಳಿರ್ದ ತೋಱಿ ಪೋಪುದುಂ (ಕ)

ಏಂ ಭಕ್ತಿಯಿಂ ವಿಧಾತ್ರಂ
ತಾಂ ಭಾವಿಸಿ ನೋಡಿ ಮಾಡಲೆನಿಸಿದ ಮಾನ ।
ಸ್ತಂಭಮೆನಿಸಿರ್ದುದೊಳ್ಪಿಂ
ಶುಂಭಚ್ಛೋಭಾಕರಂ ಸುರೇಶ್ವರಶೈಲಂ ॥ ೧೪೧

ಎಂದು ಪೊಗೞ್ದು, ೧೪೨

ಅಗಣಿತಮಪ್ಪ ಕೆಂದಳಿರ ಗೊಂದಣದಿಂ ತುಱುಗಿರ್ದ ಮಾವು ಸಂ
ಪಗೆ ಸುರಹೊನ್ನೆ ಮನ್ಮಥನ ಬೀಡಿನ ಕೆಂಗುಡಿಯೆಂಬ ಚೆಲ್ವಿನಿಂ
ಸೊಗಯಿಪ ಪಲ್ಲವಪ್ರಕರದಿಂ ನೆಱೆದೊಪ್ಪುವಶೋಕೆ ನಾಗಸಂ
ಪಗೆ ಹರಿಚಂದನಂ ಬಗೆಗೆವಂದುವು ಮೇರುನಗೋಪಕಂಠದೊಳ್ ॥ ೧೪೩

ಪಾಡುವ ತುಂಬಿಯಿಂ ಕುಕಿಲ್ವ ಕೋಗಿಲೆಯಿಂ ಕಡುರಯ್ಯಮಾಗಿರಲ್
ತೀಡುವ ದಕ್ಷಿಣಾನಿಳನಿಸಟ್ಕಿರಿನೋತಿರದೊರ್ವರೊರ್ವರೊಳ್
ಕೂಡುವ ದೇವದಂಪತಿಗಳಿಂದೆಡೆಯಾಡುವ ಖೇಚರಾಳಿಯಿಂ
ದಾಡುವ ಕೇಕಿಯಿಂ ಮನಮನಿಕ್ಕುಳಿಗೊಳ್ವುದು ನೋೞ್ಪಡೀಬನಂ ॥

ಎಂದು ಮೆಚ್ಚಿ ಪೊಗೞುತ್ತುಮತಿರಮಣೀಯಮಪ್ಪ ನಂದನವನದೊಳ್ ಶುದ್ಧಸ್ಫಟಿಕದ ನೆಲಗಟ್ಟಂ ಪಚ್ಚೆಯ ಕಂಬಂಗಳಿಂ ಚಂದ್ರಕಾಂತದ ಬೋದಿಗೆಗಳಿಂ ಇಂದ್ರನೀಲದ ನಾಗವಟ್ಟಗೆಯಿಂ ವಜ್ರದ ಸೋಪಾನಂಗಳಿಂ ಪವಳದ ಕೀಲ್ಗಳಿಂ ಪೊನ್ನ ಕೇರ್ಗಳಿಂ ವೈಡೂರ್ಯದ ಪಡಿಗಳಿಂ ಸೂರ್ಯಕಾಂತದ ದ್ವಾರಬಂಧಂಗಳಿಂ ಪದ್ಮರಾಗದ ಕಲಶಂಗಳಿಂ ಪುಷ್ಯರಾಗದಮಕರತೋರಣಂಗಳಿಂ ಮುತ್ತಿನ ಸೂಸಕಂಗಳಿಂ ಮಾಣಿಕದ ಪ್ರತಿಮೆಗಳಿಂದೊಪ್ಪುವಕೃತ್ರಿಮಚೈತ್ಯಾಲಯಂಗಳಂ ಕಣ್ತಣಿವಿನಂ ನೋಡುತ್ತುಂ, ಜಿನಪ್ರತಿಮೆಗಳಂ ಭಕ್ತಿಯಿಂ ಪಲತೆಱದರ್ಚನಾದ್ರವ್ಯಂಗಳಿಂದರ್ಚಿಸುತ್ತುಂ ಬಲಗೊಂಡು ಪೊಡೆಮಡುವ ದೇವವಿದ್ಯಾಧರಸಮೂಹಮಂ ನೋಡುತ್ತುಂ ಪೊಗೞುತ್ತುಂ ಉತ್ತಮವೈರಾಗ್ಯದ ಪೆರ್ಚುಗೆಯಂ ತಡೆಯದೆ ಸೆಟ್ಟಿಯನೆಯ್ದೆವಂದು, ೧೪೫

ಅಳನಿಕುರಂಬಮುಶೋಕೆಯ
ತಳಿರಂ ಮುಸುಕುವವೊಲಂಘ್ರಿಪಲ್ಲವಮಂ ಕುಂ।
ತಳತತಿಗಳ್ಮುಸುಱೆ ಮಹೋ
ಜ್ಜ್ವಳತೇಜಂ ವೈಶ್ಯಜಂಗೆ ತಾಂ ಪೊಡೆವಟ್ಟಂ ॥ ೧೪೬

ಅಂತು ತನಗೆ ಪೊಡೆಮಟ್ಟಂಜನಚೋರನಂ ಜಿನದತ್ತಸೆಟ್ಟಿ ನೋಡಿ ಬೆಱಗಾಗಿ ತನ್ನೊಳಿಂತೆಂದಂ:— ೧೪೭

ಬಱಿದೆ ಕುಣಿವಂಗೆ ಮತ್ತಂ
ಪಱಿಯುವೆನುಂ ಕೂಡಿದಂತೆ ಧಾರಿಣಿಯಂ ಮು।
ನ್ನಱಿಯುಟ್ಟ ಕಳ್ವ ಕಳ್ಳಂ [1]
ಗಱಿಕೆಯ ಸದ್ವಿದ್ಯೆ ಯಾರ ದೆಸೆಯಿಂದಾಯ್ತೋ ॥ ೧೪೮

ಮೂಗಿನೊಳುಳ್ಳವಾತಂಗೆ ನೇಗಿಲಂ ಕೊಟ್ಟರೆಂಬಂತೆ [ಗಾಳಿಯಂ ಮೆಲ್ವನ ಬಾಯ್ಗವಲಂ ಪೊಯ್ದರೆಂಬಂತೆ ಬಡಿದುಕೊಲ್ವಂಗೆ ಸಾಲಂ ಗೊಟ್ಟರೆಂಬಂತೆ ಕೊಲಲ್ಬರ್ಪಂಗಿದಿರ್ವೋದರೆಂಬಂತೆ] ಕವರಲ್ಬಂದಂಗೆ ಬಯಕೆಯಂ ತೋಱಿದರೆಂಬಂತೆ ಕಳಲ್ಬಂದಂಗೆ ಕೈಯೆಡೆಗೊಟ್ಟರೆಂಬಂತೆ ಪಿಡಿಯಬಂದಂಗೆ ಕೈನೀಡಿ ಕೊಟ್ಟರೆಂಬಂತೆ ಲೋಕದೊಳೀತಂ ಮಾಯಾವಿದ್ಯೆಯುಪ್ಪಂಜನಘುಟಿಕೆಯಿಂ ಜನರ ಸರ್ವಸ್ವಮಂ ಕಳ್ವನೀತಂಗೆ ಗಗನಗಾಮಿನೀವಿದ್ಯೆ ಸಾಧ್ಯಮಾದುದೀತನಿನ್ನು ನಾಡೆಲ್ಲಮಂ ನಿವಾಳಿವಟ್ಟಂಮಾಡಿ ಕಳದೆ ಮಾಣನೆಂದು ಪಾಪಭೀರುತ್ವದಿಂ ಬೆರ್ಚಿ ಲಲಿತಾಂಗನ ಮೊಗಮಂ ನೋಡಿ, [2] ೧೪೯

---

[1] ಕೊಲ್ವಕಷ್ಟಂಗಱಿಕೆಯ [ಗ]

[2] [ಎನಗೆ ಕಪಟಂ ಬೇಡೀ ಸದ್ವಿದ್ಯೆಯಂ ಮನದಱ್ಕಱಿಂ
ನಿನಗೆ ನಯದಿಂ ಕೊಟ್ಟರ ಪೇೞಾರುಮಂಬುದುಮಾ ಗಳಾ
ಜನಪತನಯಂ ಕೀರ್ತಿಶ್ರೀವಲ್ಲಭಂಗೆ ಜಿನಾಂಘ್ರಿಸೋ
ಕನದಮಧುಪಂಗೆಂದಂ ತನ್ನೊಂದಾವಿದ್ಯೆಯ ಮಾರ್ಗಮಂ] ೧೫೦

ನಿನಗೆಂತು ಬಂದುದೀ ಪೇ
ದಿನಿಪೂಜಿತಮಪ್ಪ ವಿದ್ಯೆ ಪೇೞೆಂಬುದುಮಂ ।
ಜನಚಕೋರನದಱ ಕಥೆಯಂ
ವಿನಯದಿನಂದಱಿಪಿ ಬೞಿಕವಿರದಿಂತೆಂದಂ ॥ ೧೫೦

ಜಿನದತ್ತ ನಿನ್ನ ನುಡಿಯಂ
ಜಿನವಚನಮೆ ತಿಬ್ಬಮೊಂದು ನಂಬಿದ ಫಲಮಂ ।
ಮನವಾರೆ ಕಂಡೆನದಱಿಂ
ದೆನಗೆ ಶರಣ್ಜಿನರ ನಿಮ್ಮ ಚರಣಯುಗಂಗಳ್ ॥ ೧೫೧

ಕರ್ಮೋದಯದಿಂ ತಂದೆಯ
ಕೂರ್ಮೆಯುಮಂ ತಾಯ ಮಾತುಮಂ ಬಗೆಯದೆ ಸ ।
ದ್ಧರ್ಮಮುಮಂ ಬಿಸುಟುರ್ಕಿಂ
ದುರ್ಮತಿಯಾಂ ಖಳರ ಗೋಷ್ಠಿಯಿಂದಂ ಕೆಟ್ಟೆಂ ॥ ೧೫೨

ಮೊಱೆಯಱನೆಂಬಿವನೇನಂ
ದಱಿಯೆಂ ಮತಿಗೆಟ್ಟು ದುಷ್ಟಸಂಗತಿಯಿಂದಂ ।
ಮಱೆದು ಗುಣಮೆಲ್ಲಮಂ ಮೆ
ಯ್ಯಱಿಯದೆ ಕೆಟ್ಟಾಡಿದೆಂ ಮಹಾಪಾತಕನೆಂ ॥ ೧೫೩

ತಡೆಯದೆ ಮುದದಿಂದಮೃತಂ
ಬಡೆದುಮುಣಲ್ಪಡೆಯರೆಂಬ ನಾಣ್ಣುಡಿಯೆನ್ನೊಳ್ ।
ದೃಢಮಾದುದು ಸದ್ಧರ್ಮಂ
ಬಡೆದುಂ ಮರುಳಾಗಿ ಕಾಲಮಂ ವೃಥೆಗಳೆದೆಂ ॥ ೧೫೪

ಸೊಂಬನಂಗಡಿಯಂತೆ ಪಸರಮಿಲ್ಲದೆ, ಪುೞು ಮುಟ್ಟಿದ ಸಸಿಯಂತೆ ನಯಮಿಲ್ಲದೆ, ಬಿಲ್ಲಂ ಬಿಟ್ಟನಂತೆ ಗುಣಮಿಲ್ಲದೆ, ಸೂಳೆಯಂತೆ ಸಜ್ಜನಿಕೆಯಿಲ್ಲದೆ, ಬೂತಿನಂತೆ ಪೆಂಪಿಲ್ಲದೆ, ತೃಣದಂತೆ ಬಿಣ್ಪಿಲ್ಲದೆ, ಪಾಪಿಯಂತುತ್ತಮದಾನಮಿಲ್ಲದೆ, ನ್ಯಾಯಮಿಲ್ಲದರಸಿನೂರಂತೆ ಮರ್ಯಾದೆಯಿಲ್ಲದೆ,

ಕಳ್ಳರ ಕೊಟ್ಟದಂತೆ ಧರ್ಮಮಿಲ್ಲದೆ, ಗಹ್ವರದಂತೆ ಸನ್ಮಾರ್ಗಮಿಲ್ಲದೆ [ಪುಟ್ಟುಗುರುಡನಂತೇನುಮಂ ಕಾಣದೆ] ಕೆಟ್ಟೆನೆಂದು ತನ್ನಂ ತಾನೆ ನಿಂದಿಸಿಕೊಂಡು, ಜಿನವಚನದೊಳಾದ ದೃಷ್ಟಾಂತಮುಮಂ, ಸಮ್ಯಕ್ತ್ವ ಚೂಡಾಮಣಿಯೊಳಾದ ಮಹಾಗುಣಮುಮಂ, ಪೊಗೞ್ದು[1] ಬೞಿಕ್ಕಿಂತೆಂದಂ:—ನಿಮಗೆ ಪಂಚನಮಸ್ಕಾರಮಲ್ಲದುೞಿದ ಮಂತ್ರಮುಂ ಅರ್ಹತ್ಪರಮೇಶ್ವರನಲ್ಲದುೞಿದ ದೈವಮುಂ ಕೈಕೊಳ್ವುವಲ್ಲ; ಸಮ್ಯಕ್ತ್ವಚೂಡಾಮಣಿಯೆಂದು ಪ್ರಸಿದ್ಧರಾಗಿರ್ಪ ನಿಮಗೀವಿದ್ಯೆ ತಾನೆಂತು ಬಂದುದೆನೆ, ವಣಿಗ್ವಂಶಲಲಾಮನಿಂತೆಂದಂ :— ೧೫೫

ನೀಂ ಪೇೞ್ದಂತುಟೆ ಜಿನನಿಂ
ದಂ ಪೆಱತೆನಗಿಷ್ಟದೈವಮಿಲ್ಲನುನಯದಿಂ ।
ಪೆಂಪಿನ ಪಂಚನಮಸ್ಕೃತಿ
ಯಿಂ ಪೆಱತೆನಗೊಂದುಮಿಲ್ಲ ವರಮಂತ್ರಂಗಳ್ ॥ ೧೫೬

ಈ ಗಗನಗಾಮಿನಿಯೆಂಬ ವಿದ್ಯೆ ಯೆನಗೆ ಬಂದ ವೃತ್ತಾಂತಮಂ ಕಿಱಿದಿನೊಳ್ ಪೇೞ್ವೆನದೆಂತೆನೆ : — ೧೫೭

[ಮುದದಿಂದಂ ಜಿನಪದಮಂ
ಬುದು ನಾಡಾ ನಾಡಿನೊಳಗೆ ನಾಡೆ ಬೆಡಂಗಿಂ ।
ಪುದಿದೊಪ್ಪಿರ್ದುದು ಬಹುಜನ
ದೊದವಿಂದಂ ಭೂಮಿತಿಲಕಮೆಂಬುದು ನಗರಂ ॥ ೧೫೮

ಅದನಾಳ್ವಂ ನರಪಾಲನೆಂಬರಸನಾತನ ರಾಜಶ್ರೇಷ್ಠಿ ಸೌಂದರನೆಂಬನಾತನ ಭಾರ್ಯೆ ಸುನಂದೆಯೆಂಬಳಂತವರಿರ್ವರ್ಗಂ ಶ್ರೀವರ್ಮಂ ಜಯವರ್ಮಂ ಜಿನವರ್ಮಂ ಜಿನದತ್ತಂ ಜಿನದಾಸಂ ಧನ್ವಂತರಿಯೆಂಬೈವರ್ ಮಕ್ಕಳಾಗಿ ಬಳೆಯುತ್ತಿರೆ, ಆ ನರನಾಥನ ಪುರೋಹಿತಂ ಸೋೞ

---

1 ನಿಂದಿಸಿಕೊಂಡು ಸಟ್ಟಯುಂ ಪೊಗಳ್ದು (ಗ)

ಮಶರ್ಮನೆಂಬ ಬ್ರಾಹ್ಮಣಂಗಮಾತನ ಪೆಂಡತಿಯಗ್ನಿಲೆಗಂ ವಿಶ್ವಾನು
ಲೋಮನೆಂಬ ಮಗನಾಗಿ ಬಳೆಯೆ] [1] ॥ ೧೫೯

ಕರಮೊದರದಿಂ ಧನ್ಯಂ
ತರಿಗಂ ವಿಶ್ವಾನುಲೋಮದ್ವಿಜಗಂ ಸ್ನೇಹಂ ।
ಪಿರಿದಾಗೆ ಕೂರ್ಮೆಯಿಂ ದಿ
ರ್ವರುಮಿರ್ಪ್ಪಾಲ ನೀರ ಕೂಟದ ತೆಱದಿಂ ॥ ೧೬೦

ಅಂತಿರ್ವರುಂ ನಖಮಾಂಸಂಗಳಂತೆ ಸಂಪ್ರೀತಿಯಿಂ ಕೂಡಿ
ಬಳೆಯುತ್ತುಂ, ದುರ್ಜನಸಂಸರ್ಗದಿಂ ಸಪ್ತವ್ಯಸನಪರರುಂ ದುಶ್ಚರಿತರು
ಮಾಗೆ, ಸೌಂದರಸೆಟ್ಟಿಯುಂ ಸೋಮಶರ್ಮನುಮೇಗೆಯ್ದುಂ ದುಷ್ಟ
ತನಮಂ ನಿವಾರಿಸಲಾಱದೆಯರಸನ ಮುಂದೆ ತೊಱೆದು ಕಳವುದುಮವ
ರಿರ್ವರುಂ ತಂದೆತಾಯ್ಗಳನಗಲ್ದಲ್ಲಿರ್ದು । ೧೬೧

ಅರಮನೆಯಂ ಪೊಕ್ಕವರಿ
ರ್ವರುಮೊಯ್ಯನೆ ಕಳ್ದು ದಿವ್ಯರತ್ನಂಗಳನೊ ।
ಪ್ಪಿರೆ ಪೊಱಮಡಲವರಂ ನಿ
ಷ್ಠುರಕೋಪಂ ಕಂಡು ಜಡಿದು ಕೊಂಡು ತಳಾಱಂ ॥ ೧೬೨

ಅರಸಂಗೊಪ್ಪಿಸೆ ಭೂಪಂ
ಕರಮಲ್ಲದೆ ಮುನಿದು ಕೊಲೆಯನೊರ್ಮೆಗೆ ಮಾಣ್ದಂ ।
ನಿರುತಂ ನೀವಿರ್ವರುಮೀ
ಪುರದಿಂ ಪೊಱಮಟ್ಟು ಪೋಗಿಮಿರ್ದೊಡೆ ಕೊಲ್ವೆಂ ॥ ೧೬೩

ಎಂಬುದುಮವರಿರ್ವರುಂ ತಮ್ಮ ಜನನಿಯರ ಪೆಂಡಿರ ಮೋಹದಿಂ
ತಂದೆಯುಂ ಬಂಧುಗಳುಮಱಿಯದಂತಾಗೆ ಕಳ್ದು ಬಂದು ತಮ್ಮ ದೇಶ
ತ್ಯಾಗಮನವರ್ಗಱಿಪೆ ॥ [2] ೧೬೪

---

1 ಜನಪದವೆಂಬ ದೇಶದೊಳ್ ಭೂತಿಳಕವೆಂಬುದು ಪುರಮದನಾಳ್ವಂ ನರಪಾಲನೆಂಬರಸನಾತನ ರಾಜಶ್ರೇಷ್ಠಿ ಸುಂದರಜಿನಭಕ್ತನೆಂಬನಾತನ ಮಗಂ ಧನ್ಯಂತರಿಯೆಂಬಂ; ಮತ್ತಮಾ ನರಪಾಲನ ಪುರೋಹಿತಂ ಸೋಮಶರ್ಮನೆಂಬನಾತನ ಮಗಂ ವಿಶ್ವಾನುಲೋಮಂ. (ಗ)

2 ಎಂಬುದುಮವರ್ ಪೊಱಮಟ್ಟು ಪೋಗೆ ಜನನಿಯರ್ ಕಳ್ದು (ಗ)

ಕಡುಮೋಹದಿನಾತ್ಮಜರಂ
ಬಿಡಲಾಱದೆ ನೆಱೆಯೆ ತೊೞಲ್ದು ನಂಟರುಮಂ ನೀ |
ಪೆಱಡೆ ಗಂಡರುಮಂ ತಾಮೆಮ
ರೊಡವೆಂದರ್ಮೋಹದಿಂದೆ ಕಿಡದವರೊಳರೇ ‖ ೧೬೫

ಇನಿಯರ ಮೇಗಣ ಮೋಹದಿ
ನನುಜರ ಬಂಧುಗಳ ತಾಯ ತಂದೆಯ ಮಾತಂ |
ಮನದೊಳ್ ಭಾವಿಸಲೊಲ್ಲದೆ
ವನಿತೆಯರುಂ ಗಂಡರೊಡನೆ ಕೆಟ್ಟೊಡವೆಂದರ್ ‖ ೧೬೬

ಅಂತಾಗಳಿರ್ವರುಂ ತಮ್ಮ ಪೆಂಡಿರುಂ ತಾಯ್ಗಳುಂ ವೆರಸು ಗಜಪುರಕ್ಕೆ ಪೋಗಿ, ಯಮದಂಡನೆಂಬ ತಳಾಱನಂ ಸೋದರ್ಯರೊರ್ವರಯ್ಯೈರ್ವರ್ಗಂ ನಾಯಕರಾಗಿ ಪರದೇಶಂಗಳೊಳ್ ಕಳ್ದು ತಂದು ವಿಷಯಸುಖಂಗಳಂ ಸಲಿಸುತ್ತುಮಿರ್ದರ್ ವಿಶ್ವಾನುಲೋಮಂ ಧನ್ವಂತರಿಗಿಂತೆಂದಂ ‖ ೧೬೭

ಆನೊಂದಂ ಬೇಡಿದಪೆಂ
ನೀನದನೆನಗೀವುದಣ್ಣ ಮಾರ್ಕೊಳ್ಳದೆ ಪೋ |
ನೀನೆನ್ನದೆ ಮುನಿಸಿಲ್ಲದೆ
ಮೋನಂಗೊಂಡಿರದೆ ಬಿಚ್ಚತಿಕ್ಕೆಯೊಳನಿಸಂ ‖ ೧೬೮

1 ಅದಾವುದೆಂದೊಡೆ, ನೀಂ ಮುನ್ನಿನಂತೆ ಮರುಳಾಗಿ ಬಸದಿಗೆ ಪೋಪುದುಮಂ ಋಷಿಯರೊಡನೆ ಮಾತಾಡುವುದುಮಂ ಮಾಣ್ಬುದೇಕೆಂ

---

1 ನಿಮ್ಮಯ್ಯನಂತೆ ಬಸದಿಗೆ ಪೋಪುದುಮಂ, ಋಷಿಯರ ಶ್ರಾವಕರೊಡನೆ ನುಡಿವುದಂ ಮಾಣೆಂದು ಬೇಡಿಕೊಂಡು ಸೂರುಳ್ಗೊಂಡೊಡಂಬಡಿಸಿ ಸುಖಮಿರ್ದೊಂದುದಿವಸಂ ತೊೞಲೆಗೆ ಪೋಗಿ ಬರುತ್ತುಮಾನೆಯ ಭಯದಿಂ ಪುರದ ಪೊಱಗಣ ಸಹಸ್ರಮಂಡಿತಮೆಂಬ ಬಸದಿಯಂ ನೋಡಿ ಪೊಕ್ಕನೆಯುಂ ಪೋದ ಬೞಿಕ್ಕಂ ಪೋಪೆನೆಂಬುದುಂ ಮೞೆ ಪಿರಿದಾಗೆ ಪೋಗಲಱಿಯದೆ ಅಲ್ಲಿರ್ದ ಪರ್ವೋಪವಾಸಂಗೆಯ್ದ ಶ್ರಾವಕರ್ಗೆ ಧರ್ಮಾಚಾರ್ಯರ್ಧರ್ಮಶ್ರವಣಂಗೆಯ್ಯುತ್ತುಮಿರೆ ಧನ್ವಂತರಿ ವಿಶ್ವಾನುಲೋಮನಂ ನಿದ್ರೆಗೆಯ್ಸಿ ಮೆಲ್ಲನೆರ್ದು ತಾಂ ಕೇಳ್ದನಗೊಂದು ವ್ರತಮಂ ದಯೆಗೆಯ್ಯಿಮೆಂಬುದುಂ, ಅವರಾಸನ್ನಭವ್ಯನೆಂದಱಿದು, ತರಂಟುದಲೆಯಂ ಕಂಡಲ್ಲದುಣ್ಣೆನೆಂದು ಕುಡೆ, ಕೈಕೊಂಡು ಬಂದು ದಿವಸಮುಣಲ್ಬಂದವಧರಿಸಿ ನೆರಮನೆಯ ಕುಂಬಾಱಂ ತರಂಟನಪ್ಪುದನಱಿದು ಮಣ್ಣಕುೞಿಗೆ ಪರತಂದು ಕಂಡೆನೆಂದು ಬೞಿಯಾತಂ ಕಂಡ ಪೊನ್ನಂ ಕಂಡನೆಂದು ತಂದೊಪ್ಪಿಸಿ, ಆನೀಪೊನ್ನಂ.... (ಗ)

ದೊಡೆ, [ಎನ್ನಂ ಪಿರಿದಪ್ಪ ಭೋಗಕ್ಕಂತರಾಯುಮಕ್ಕುಮದಱಿಂ ಮು ನ್ನಮೆ ಬೇಡ್ವೆನೆಂದು ಕೈಯಂ ಮುಗಿದು] ಸೂರುಳ್ಗೊಂಡೊಡಂಬಡಿಸಿ ಸಂತಸದಿಂದಿರೆ, ಕೆಲವುಂದಿವಸಂ ಕಳೆಯಲೊಂದುದಿವಸಂ ॥ ೧೬೯

ಪುರದಿಂ ಪೊಱಮಟ್ಟವರ್ಗಳ
ಮುರುಮುದದಿಂ ಕೆಱೆಗೆ ಪೋಗುತಿರೆ ಮದದಿಂದಂ ।
ಕರಿಯೊಂದು ಸೊರ್ಕಿ ಪಲರಂ
ನಿರಂಕುಶಂ ಮುಸಗಿ ಕೊಲುತೆ ಬರ್ಪವಸರದೊಳ್ ॥ ೧೭೦

ಕಂಡವರ್ಗಳುಮೆಯ್ದೆ ಭಯಂ
ಗೊಂಡೋಡಲುಮತ್ತಲಿತ್ತಲೆಡೆಯಿಲ್ಲದೆ ವೇ ।
ತಂಡಂ ಪರಿತರೆ ಭೋಂಕನೆ
ಬೆಂಡಾಗಿ ಮಹಾಪ್ರತಿಜ್ಞರಿರ್ವರುಮಾಗಳ್ ॥ ೧೭೧

ಕೆಲದೊಳಿರ್ದ ಸಹಸ್ರಕೂಟಮುಂಡಿತಮೆಂಬ ಜಿನಾಲಯಮನೋ ಡಿಪೋಗಿ ಪೊಕ್ಕಾನೆಯ ಭಯಂ ಪಿಂಗುವಿನಮಿರ್ದು ಪೋಗಲೆಂದಿ ರ್ಪುದುಂ, ಮಱೆ ಪಿರಿದಾಗಿ ಬರೆ, ಮಱೆಯುಂ ಪೋದ ಬೞಿಕ್ಕಂ ಪೋಪೆ ವೆಂದಿರ್ಪುದುಂ, ನೇಸಱ್ ಪಡುವುದುಂ, ಪುರದ ಬಾಗಿಲ ಪಡಿ ಕೀ ಱುವುದುಂ, ಪೋಗಲ್ಕೊಡದೆ, ಬಸದಿಯೊಳ್ ಧನ್ವಂತರಿ ವಿಶ್ವಾನುಲೋ ಮನ ಮುನ್ನಿನ ಸೂರುಳಂ ನೆನೆದು ಕಿವಿಯೊಳ್ ತೂಂತನಿಟ್ಟು ಪಟ್ಟಿರ್ದ ನನ್ನೆಗಂ ಪರ್ವೋಪವಾಸಮಿರ್ದ ಭವ್ಯಜನಕ್ಕೆ ॥ ೧೭೨

ವರಧರ್ಮರೆಂಬ ಮುನಿಪರ್
ದುರಿತಹರರ್ ಧರ್ಮಮಂ ಮನಂಬಿಡೆ ಪೇೞ್ ।
ತ್ತಿರೆ ಮೆಲ್ಲನೆ ಧನ್ವಂತರಿ
ಪದಪಿಂದೆೞ್ಚತ್ತುಮಿರ್ದನಿರ್ಪನ್ನೆವರಂ ॥ ೧೭೩

ನೆಲದೊಳ್ಪಟ್ಟಿರ್ದ ವಿಶ್ವಾನುಲೋಮನಂ ತಡವರಿಸಿ ನೋಡಿ ಮರ ವಟ್ಟಿರ್ದನೆಂಬುದನಱಿದು ಕಿವಿಯ ತೂಂತಂ ಕಳೆದು ಮೆಲ್ಲನೆೞ್ಚು ಕುಳ್ಳಿ ರ್ದು ಕೇಳ್ವ ಪ್ರಸ್ತಾವದೊಳ್ ॥ ೧೭೪

ಪರಧರ್ಮಮೆನುತ್ಸವದಿಂ
ಸ್ಥಿರಮನದಿಂ ಕೇಳಲೊಲ್ಲದಾತನೆ ಕಿಱಿಯಂ ।
ಪರಧರ್ಮಮನಱಿವಿಂದಂ
ಸ್ಥಿರಮನನಾಗಱಿಯಲೊಲ್ಲದಾತನೆ ಬಱಿಯಂ ॥ ೧೭೫

ಎಂಬುದಂ ಕೇಳ್ದು ಕರ್ಮೋಪಶಮದಿಂದವರಂ ಸಾರ್ದೆನ ಗೊಂದು ವ್ರತಮಂ ದಯೆಗೆಯ್ಯಿಮೆಂಬುದುಂ ಪರಧರ್ಮಭಟ್ಟಾರಕರ ದಿವ್ಯಜ್ಞಾನಿಗಳಪ್ಪುದಱಿಂದಾಸನ್ನಭವ್ಯನೆಂದಱಿದು, ವಾತ್ಸಲ್ಯದಿಂ ನಿಚ್ಚಲುಂ ತಱಂಟುವಲೆಯಂ ಕಂಡಲ್ಲದುಣವೇಡೆಂಬುದುಂ ಅಂತೆ ಗೆಯ್ವೆನೆಂದು ವ್ರತಮಂ ಕೈಕೊಂಡು ಮನೆಗೆ ಪೋಗಿ, ಕೆಲವುದಿವಸಮದೆ ರೀತಿಯೊಳದೊಂದು ದಿವಸಮುಣಲ್ಬಂದು ॥ ೧೭೬

ತೊಟ್ಟನೆ ನೆನೆದಂ ವ್ರತಮಂ
ಕೆಟ್ಟೆನನುತ್ತಂತೆ ತನ್ನ ಮನದೊಳ್ ಹೇವಂ ।
ಪುಟ್ಟೆ ಮುನಿ ಪೇಳ್ದ ಮಾತಂ
ಬಿಟ್ಟೊಡೆ ಪಿರಿದಪ್ಪ ದೋಷಮೆಂದಾದರದಿಂ ॥ ೧೭೭

ನೆರೆಮನೆಯ ಕುಂಬಾಱಂ ತಱಂಟುವಲೆಯನಪ್ಪುದಱಿಂ ಮನೆಯೊಳಱಿಸಿ ಕಾಣದೆ ಮಣ್ಣ ಕುಱಿಗೆ ಪೋಗಿ ದೂರದೊಳಾತನ ಬೋಳ ಮಂಡೆಯಂ ಕಂಡು ಕಂಡೆನೆಂದು ಸಂತಸದಿಂ ಕೂಗಿ ಬರೆ, ಕಾಕತಾಳೀಯ ನ್ಯಾಯದಿಂದಾತಂ ತನ್ನ ಕಂಡ ನಿಕ್ಷೇಪಮಂ ಕಂಡನಕ್ಕುಮೆಂದಗಿದು ನಡುವಿರುಳಪ್ಪುದುಮಾತಂ ಕಂಡ ಪೊನ್ನಂ ತಂದೊಪ್ಪಿಸಿ ಕೈ ಮುಗಿದು ॥

ಆನೀ ಪೊನ್ನಂ ಕಾಣ್ಬುದು
ಮಿಾ ನೀನೊಡನಡಸಿ ಕಂಡೆನೆಂದೊಡೆ ಭಯದಿಂ ।
ದಾನಂಜಿ ತಂದು ಕೊಟ್ಟೆಂ
ನೀನಱಿವೈ ಮುನಿದು ಕೊಲ್ವೊಡಂ ರಕ್ಷಿಪೊಡಂ ॥ ೧೭೮

ಎನೆ ಧನ್ವಂತರಿ ಮುನಿಯಂ
ನೆನೆದು ಮಹಾಹರ್ಷಚಿತ್ತದಿಂದಾ ವ್ರತಮಂ ।

ನೆನೆದು ಮುನಿಪತಿಯ ವಚನದಿ
ನಿನಿತಾದುದು ಪಡೆವ ಸುವ್ರತಂ ಕೇವಳಮೋ ‖ ೧೮೦

[1] ಎಂದಾತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಕಳಿಪಿ ಮಱುದಿವಸಂ ಬಸದಿಗೆ ಬಂದು ವರಧರ್ಮಭಟ್ಟಾರಕರಂ ವಂದಿಸಿ ತನ್ನ ಲಾಭಮಂ ಪೇೞ್ದನಗಿನ್ನೊಂದು ವ್ರತಮಂ ದಯೆಗೆಯ್ಯಿಮೆಂದು ‖ ೧೮೧

ಕರಮುಗಿದು ಬೇೞ್ಪುದುಂ ಮುನಿ
ವರನೆಂದಂ ಬೇಡ ಮಗನೆ ಪೆಸರಱಿಯದ ಭೂ ।
ಮಿರುಹಂಗಳ ಪಣ್ಗಳನಾ
ದರದಿಂ ಮೆಲಲೆಲ್ಲಿಯಾದೊಡಂ ಪಸಿವಿಂದಂ ‖ ೧೮೨

ಎಂಬುದುಂ; ಮಹಾಪ್ರಸಾದಮಂತೆ ಗೆಯ್ವೆನೆಂದು ಪೊಡೆಮಟ್ಟು ಮನೆಗೆ ಬಂದು ಕೆಲವು ದಿವಸದ ಮೇಲೆ ವಿಶ್ವಾನುಲೋಮನುಂ ತಾನುಂ ತಂತಮ್ಮ ಬಲಂಬರಸು ಪರದೇಶಕ್ಕೆ ಪೋಗಿ ಕಳ್ದು ಬಹುದ್ರವ್ಯಂ ಬಸಮಾದುದಱಿಂ ಪೆರ್ಚಿ ಮಗುೞ್ದು ಬರುತ್ತುಮೊಂದಡವಿಯೊಳ್ ಬೀಡಂ ಬಿಟ್ಟು ಕೈಯೊಳ್ ಸಂಬಳವಿಲ್ಲದೆ ಮಱುಗಿ ಸೈರಿಸಲಾಱದೆ ಪಸಿವಿಂ ತಂತಮ್ಮ ಭೃತ್ಯರ್ಗೆ ಪೇರಡವಿಯೊಳ್ ಪಣ್ಫಲಂಗಳನಱಸಿ ತನ್ನಿಮೆಂದು ಪೇೞ್ವುದುಮವರ್ಪೋಗಿ ‖ ೧೮೩

ಸಾರಂ ಕಂಪಿನೊಳಿವು ಕ
ರ್ಪೂರಮುಮಂ ಗೆಲ್ವವೆನಿಸಿ ಕುಂಕುಮರುಚಿಯಿಂ ।
ದೋರಂತೊಪ್ಪುವವಂ ಕಾಂ
ಚೀರಮಹೀರುಹದ ಪಣ್ಗಳಂ ಕಂಡಾಗಳ್ ‖ ೧೮೪

---

1 ಎಂದವರಲ್ಲಿಗೆ ಪೋಗಿ ಮತ್ತೊಂದು ವ್ರತಮಂ, ಕರಮುಗಿದು (ಗ)

2 ಎಂಬುದುಂ ಕೈಕೊಂಡು ಪೋಗಿ ಪಲವುಕಾಲಕ್ಕೆಮರ್ ಕಳ್ದು ಬರುತ್ತುಂ ಸಂಬಳವಿಲ್ಲದೆ ಬಂಟರೆಲ್ಲಂ ಕರಮ ಪಣ್ಗಳಂ ತನ್ನಿಮೆಂದು ಪೇೞ್ವುದುಮವರ್ ಪರಿದು ಪಣ್ಣನೆಲ್ಲಿಯುಂ ಪಡೆಯದೆ ಮಗುೞ್ದು ಬರುತ್ತುಂ, ಸಾರಂ ಕಂಪಿನೊಳಿವು (ಗ)

ಸಂತಸದಿಂ ತಿಱಿದು ತಂದು ಧನ್ವಂತರಿವಿಶ್ವಾನುಲೋಮರ ಮುಂದೆ ರಾಸಿಗೆಯ್ವುದುಂ, ಅವೞ ಪೆಸರನಱಿಯದವನಪ್ಪುದಱಿಂ ಧನ್ವಂತರಿ ಮೆಲಲೊಲ್ಲದುಸಿರದಿರ್ಪುದುಂ, ವಿಶ್ವಾನುಲೋಮನಿಂತೆಂದಂ [1] :— ೧೮೫

ಆವಾವುಪಾಯದಿಂದಂ
ತಾವುಣ್ಣದೆ ಪೋಪುದಲ್ಲದುೞಿದರುಮಂ ನಾ |
ನಾವಿಧಕಲ್ಪನೆಯಿಂದಂ
ಭಾವಿಸೆ ತಮ್ಮಂತು ದುಃಖಿತಂಮಾಡುವುದೇ ‖ ೧೮೬

ಸವಣರಂತಪ್ಪ ಧೂರ್ತರನೀಲೋಕದೊಳ್ ಕಾಣೆನಾಕಾಕುಗಳಪ್ಪರ ಮಾತಂ ತಾನಾವನಿಕ್ಕಯುಮೆಂದು ನುಡಿದೊಡಂ, ಪಣ್ಣಂ ಮೆಲ್ಲದಿರ್ಪುದಱಿಂ ತಾನುಮೊಲ್ಲದಿರೆ, ಭೃತ್ಯರೆಲ್ಲಂ ನೀವಿರ್ವರುಂ ಸವಣ್ಮರುಳ್ಗೊಂಡು ಸಾಯಿಮೆಂದು, ೧೮೭

ಪಸಿದಿರಲಾಱದೆ ಪಣ್ಣಂ
ಮಸಗಿ ಜಡರ್ತಿಂದು ಸಾಯೆ ಕಂಡಾಗಳ್ ಸಂ |
ಕಿಸಿ ಬಟ್ಟೆಮೆಂದು ಮಿಗೆ ಸಂ
ತಸದಿಂ ತಂತಮ್ಮ ಭೃತ್ಯನಿಕರದ ಪೊನ್ನಂ ‖ ೧೮೮

ತಾಮಿರ್ವರುಂ ಪೞ್ಕಿಕೊಂಡು ಪೊೞಿಲ್ಗೆಮೆಂದು ಲಾಭದ ಪೆರ್ಚಿಂ ಬಸದಿಗೆ ಬಂದು ವರಧರ್ಮಭಟ್ಟಾರಕರಂ ಕಂಡು ತನ್ನ ಪಡಪುಮಂ ಸುವ್ರತದ ಫಲದಿಂ ಬರ್ದುಂಕಿದುದುಮಂ ಪೇೞ್ದೆನ್ನೊಂದುವ್ರತಮಂ ಪಾಲಿಸಮೆಂಬುದುಂ, ಪಿಟ್ಟನೆತ್ತುಮಂ ಬಂಡಿಯುಮಂ ತಿನವೇಡೆಂಬ ವ್ರತಮಂ ಕುಡೆ ಕೈಕೊಂಡು ಮನೆಗೆ ಪೋಗಿ ಕೆಲವುದಿವಸಮಿರ್ದೊಂದು ದಿವಸಂ, ೧೮೯

---

1 ಕೊಂಡುಬಂದು ಕುಡೆ ಧನ್ವಂತರಿ ಪೆಸರಱಿಯದೆ ಮೆಲಲೊಲ್ಲದಿರ್ಪುದುಂ ವಿಶ್ವಾನುಲೋಮನುಂ ಮುನಿದು ಆವಾ···· (ಗ)

ತಾನುಂ ತತ್ಸಖನುಂ ಭೃ
ತ್ಯಾನೀಕಂಬೆರಸು ಪೋಗಿ ನಲ್ಗಳವಿಂದಂ ।
ತಾನಧಿಕಲಾಭಮಾದೊಡ
ನೂನಗುಣರ್ ಮಗುೞ್ದು ಲಾಭದಿಂದಂ ಬರುತುಂ ॥ ೧೯೦

ನಟ್ಟಡವಿಯ ನಡುವೆ ಪಸಿವುಂ ನೀರಳ್ಕೆಯುಂ ತಿಣ್ಣಮಾಗೆ ಬಂದವರ್ ಸಮೀಪದೊಳಿರ್ದ ನಾಗಾಲಯದ ಮುಂದಣ ತಾವರೆಗೊಳಕ್ಕೆ ನೀರ್ಗುಡಿಯಲೆಂದು ಪೋಗಿ ಮುನ್ನಿನ ದಿವಸಂ ನಾಡವರೆಲ್ಲಂ ಪೂಜಿಸಿ ಪೋದ ಪಿಟ್ಟನೆತ್ತುಮಂ ಬಂಡಿಯುಮಂ ತಂದು ತೋಱೆ ಧನ್ವಂತರಿ ಮೆಲಲೊಲ್ಲದಿರೆ, ವಿಶ್ವಾನುಲೋಮನುಮೊಲ್ಲದಿರ್ಪನ್ನೆಗಂ, ಭೃತ್ಯರ ನಿಬರುಂ ಸ್ಯೈರಣೆಗೆಟ್ಟು, ೧೯೧

ಇರುಳುರಗಂ ಪುತ್ತಿಂದಂ
ತ್ವರಿತದೆ ಪೊಱಮಟ್ಟು ಕಾಱಿ ವಿಷಮಂ ಪಿಟ್ಟಂ ।
ಪರಿದೆಂಜಲಿಸಲ್ವಿಷದು
ಬ್ಬರದಿಂ ನಂಜುರುಳಿಯೆನಿಸಿ ಮೆಱೆವಾ ಪಿಟ್ಟಂ ॥ ೧೯೨

ಮೆಲ್ದು ಗತಪ್ರಾಣರಾದುದಂ ಕಂಡಚ್ಚರಿವಟ್ಟಿರ್ದೆಯುಂ ನೀವಿಕೊಂಡು ತಂತಮ್ಮ ಭಂಟರರ್ಥಮಂ ತೆರಳ್ಚಿ ಕಟ್ಟಿಕೊಂಡು ಪೊೞಲ್ಗೆವಂದು ಪಡಪಿನ ಪೆರ್ಚುಗೆಗಚ್ಚರಿವಡುತ್ತೆ ಬಸದಿಗೆ ಪೋಗಿ ವರಧರ್ಮಭಟ್ಟಾರಕರಂ ವಂದಿಸಿ ಪ್ರಪಂಚಮೆಲ್ಲಮಂ ಬಿನ್ನಪಂಗೆಯ್ದು ನಿಮ್ಮಯ ಪ್ರಸಾದದಿಂದನೂನಮಪ್ಪ ಲಾಭಮಾದುದಿನ್ನೊಂದು ವ್ರತಮಂ ದಯೆಗೆಯ್ಯಿಮೆಂಬುದುಂ, ೧೯೩

ಎರಡುಂ ಪರ್ವಂಗಳೊಳಂ
ಸ್ಥಿರಮಪ್ಪಷ್ಟಮಿಯೊಳಂ ಚತುರ್ದಶಿಯೊಳಮೋ ।
ಸರಿಸದೆ ಕರಮೊಳಪಿಲ್ಲದೆ
ಪರಿಹರಿಪುದು ಮಗನೆ ಕಳ್ಳುಮಂ ಮಾಂಸಮುಮಂ ॥ ೧೯೪

ಎಂಬುದುಮಾವ್ರತಮಂ ಪೆಱತೊಂದುಮಂ ಬಗೆಯದೆ ಮುನಿ ವಚನಮಂ ನಿಶ್ಚಯದಿಂ ನಂಬಿ ಕರಮತಿಶಯದಿನೊಸೆದು ಕೈಕೊಂಡು ಸುಖದಿನಿರ್ದೊಂದುದಿವಸಂ, ೧೯೫

[ಬರವೇೞ್ದೊಯ್ಯನೆ ತನ್ನ ಕಾರ್ಯಭರಮಂ ವಿಶ್ವಾನುಲೋಮಂಗೆ ವಿಸ್ತರದಿಂದೆಲ್ಲಮನೊಂದುಗುಂದದಱಿಪಿದೋರಂತೆ ತಾಂ ರಾಗದಿಂ ಕರೆದಾಗಳ್ ನಿಜತಂತ್ರಮಂ ಕನಕದಿಂ ತಾಂಬೂಲದಿಂ ವಸ್ತ್ರದಿಂ ಪಿರಿದುಂ ಮನ್ನಿಸಿ ಪೋಪದೆಂದು ಸಮಕಟ್ಟಿಂ ಚೋರಸೈನ್ಯಾಧಿಪಂ] ॥ ೧೯೬

ಪೋಗಿ ಪರದೇಶಮಂ ಪೊಕ್ಕು ಕಳ್ದು ಕಳವಿನೊಳಾದ ಲಾಭದಿಂ ನೆಗುೞ್ದು ಬರುತ್ತುಮೊಂದುಗಿರಿತಟದೊಳ್ ಬೀಡಂ ಬಿಟ್ಟು, ೧೯೭

ಪಲವುಂ ದಿವಸಂ ಕಳ್ಳುಂ
ಪೊಲಸುಂ ದೊರೆಕೊಂಡುದಿಲ್ಲ ಪಯಣದ ಕತದಿಂ ।
ದೆಲೆ ನೋೞ್ಪೊಡೆ ಸಂಸಾರದ
ಫಲಮಾವುದೊ ಬಿಸುಟು ಕಳ್ಳುಮಂ ಮಾಂಸಮುಮಂ ॥ ೧೯೮

ಎಂದು ವಿಶ್ವಾನುಲೋಮಂ ತನ್ನೈನೂರ್ವರ್ ಬಂಟರೊಳ್ ನಾಲ್ವರಂ ಕರೆದು ನೀವೀಪರ್ವತದ ತಟದೊಳಿರ್ದ ಬೇಡವಳ್ಳಿಗೆ ಪೋಗಿ ಕಳ್ಳಂ ಕೊಂಡು ಬನ್ನಿಮೆಂದಟ್ಟುವುದುಂ, ಧನ್ವಂತರಿಯುಮಂತ ನಾಲ್ವರಂ ಕರೆದು ನೀವೀ ಬೇಡಕೊಟ್ಟದೊಳ್ ಮಾಂಸಮಂ ತನ್ನಿಮೆಂದಟ್ಟುವುದುಂ ವಿಶ್ವಾನುಲೋಮನ ಮಾನಿಸರ್ ಪೋಗಿ ಕಳ್ಳಂ ಕೊಂಡು ಬರುತ್ತೆ ತಮ್ಮೊಳಿಂತೆಂದರ್ :— ೧೯೯

ಇರದೀ ಕಳ್ಳೊಳ್ ವಿಷಮಂ
ಬೆರಸಿ ದಿಟಂ ಕೂರ್ಪರಂತೆ ನಾಮೆಂಜಿದವರೆ ।
ಲ್ಲರುಮಂ ಕೊಂದಿಕ್ಕಿ ಬೞಿ
ಕ್ಕರುಮುದದಿಂದವರ ಪೊಂಗಳಂ ಕೈಗೊಳ್ವಂ ॥ ೨೦೦

ಎಂದು ತಮ್ಮೊಳ್ ಚರ್ಚಿಸಿ ಕಳ್ಳೊಳ್ ವಿಷಮಂ ಬೆರೆಯಿಸಿ ಕೊಂಡು ಬಂದವರನ್ನೆಗಮಿತ್ತಲ್, "ಪರಚಿಂತಾ ಗರೀಯಸೀ" ಎಂಬ ನಾಣ್ಣುಡಿಯಂತೆ ಧನ್ವಂತರಿಯ ಮಾನಿಸರುಂ ಪೋಗಿ ಮಾಂಸಮಂ ಕೊಂಡು ಬರುತ್ತುಂ ತಮ್ಮೊಳಿಂತೆಂದರ್ :— ೨೦೧

ಅಡಗಿನೊಳು ಬೆರೆಸಿ ವಿಷಮಂ
ಕಡುಗೂರ್ಪಿಂದಿಕ್ಕಿ ಬಂಟರಂ ನಾಯಕರಂ ।
ಮಡಿಪಿ ಪೆಱತೇನೊ ನಾಮವ
ರೊಡವೆಗಳಂ ಪಱಿ ಕೊಂಡು ಸುಖದಿಂ ಪೋಪಂ ॥ ೨೦೨

ಎಂದು ಸಮಕಟ್ಟಿನಿಂ ವಿಷಮಂ ಮಾಂಸದೊಳಿಕ್ಕಿಕೊಂಡು ಬಂದೊಪ್ಪಿಸುವುದುಂ, ಅಂದಿನ ದಿವಸಂ ಚತುರ್ದಶಿಯಪ್ಪುದಱಿಂ ಕಳ್ಳುಮಂ ಮಾಂಸಮುಮಂ ಧನ್ವಂತರಿಯೆಗಲ್ಲದಿರ್ಪುದುಮಂ, ವಿಶ್ವಾನುಲೋಮನುಮೊಲ್ಲದೆ ಬಿಡುವುದುಂ, ೨೦೩

ಇವರವರ್ಗೆ ಕಪಟದಿಂದಂ
ಸವಿನಯದಿಂದೆಱೆಯೆ ಕಳ್ಳನಾದರದಿಂ ಮ ।
ತ್ತವರಿವರ್ಗೆ ತಂದು ಪೊಲಸಂ
ಸವಿನಯದಿಂದಿಕ್ಕೆ ಕುಡಿದು ತಿಂದಂತಾಗಳ್ ॥ ೨೦೪

ಸಾವುದುಮವರ ಪೆಣಂಗಳ
ನೋವದ್ಭುತಮೆಂದು ನೋಡಿ ಸುವ್ರತದೊಳ್ಪಂ ।
ಭಾವಿಸಿ ನಗುತೆಂದಂ ಮುನಿಸಿ
ಸೇವನೆಯುಂ ಬಿಟ್ಟು ಪಱಿತು ಲಾಭಮುಮೊಳವೇ ॥ ೨೦೫

ಎಂದವರ ದ್ರವ್ಯಂಗಳಂ ಕೊಂಡು ಪೋಗಲಾ ಮಱುದಿವಸಂ ಚೈತ್ಯಾಲಯಕ್ಕೆ ಬಂದು ಭಕ್ತಿಯಿಂ ವರಧರ್ಮಭಟ್ಟಾರಕರಂ ವಂದಿಸಿ, ತನ್ನ ವೃತ್ತಾಂತಮೆಲ್ಲಮಂ ಪೇೞ್ದನಗನ್ನೊಂದು ವ್ರತಮಂ ಕರುಣಿಂಗೆಯ್ವುದೆಂದು ಪ್ರಾರ್ಥಿಸುವುದುಂ, ನೀನಾವ ಪ್ರಾಣಿಗಾದೊಡಂ

ಮುನಿಪತಿ ಪೇಱಗೆಱಿಡಿಯುಂ ಪಿಂಗಿ ಬಱಿಕ್ಕಂ ನಿನ್ನ ಮೆಚ್ಚಿದಂತೆ ಮಾಡೆಂಬುದುಮಂತೆ ಗೆಯ್ವೆನೆಂದು ಕಳಿಂಗದೇಶಕ್ಕೆ ಪೋಗಿ ಕಳ್ದಾರು ತಿಂಗಳ್ವರಮಿರ್ದು ಬರುತ್ತುಂ, ಪೆಱರ ಪೆಂಡಿರ್ಗರ್ಥಕ್ಕಮೆಳಸಿ ಕಾಲಂ ಪೋಪುದೆನಗೆ, ಎನ್ನ ಪೆಂಡಿರ್ಗರ್ಥಕ್ಕಮೆಳಸುವರಾರಾನು ಮೊಳರೋ ಮೇಣಿಲ್ಲರೋ ಚೋದ್ಯಮಸಿವನಾರಯಲ್ವೇೞ್ಕುಮೆಂದು ನಾಲ್ಕೆಂಟುದಿನಮಂ ಮುನ್ನಿಸಿ ಗಜಪುರಮಂ ಪೊಕ್ಕು ಪಿಳಾಸದಿನಿರ್ದೊಂ ದುದಿನಂ ಪುರುಷಣಂಬೋಪೆನೆಂದುಸಿರ್ದು ಪೊಱಮಟ್ಟು ಪೋಗಿ, ಜಿನಮಂ ದಿರದೊಳ್ ನಡುವಿರುಳಪ್ಪನ್ನಂ ಪೂಜಾವೈಭವಮಂ ನೋಡುತ್ತಿರ್ದು ತನ್ನ ಮನೆಗೆ ಬಂದು ಕವಾಟೋದ್ಘಾಟನವಿದ್ಯೆಯಿಂ ಪಡಿಯಂ ತೆಗೆದು [1] ಮೆಲ್ಲ ನೊಳಪೊಕ್ಕು ಸೋಪಾನಗಳ್, ಪಾಸಿನ ಮೇಲೆ ಪಟ್ಟಿರ್ದ ತಾಯುಮಂ ಪೆಂಡತಿಯುಮಂ ಕಂಡು ಪಾದರಿಗನೆಂದಿಱಿಯಬಂದು ವ್ರತಮಂ ನೆನೆ ದೇಱಿಡಿಯುಂ ಪಿಂಗುಪಿನಮುಚ್ಚರ್ತುಬ್ಬಸಮಪ್ಪುದತ್ತೆಯುತ್ತುತ್ತ ಸಾರಿ ಮೊಂದು ಗರ್ಭಿಣಿಯಪ್ಪ ತನ್ನ ಪೆಂಡತಿ ಪೊದೆದ ಸೀರೆಯುಂ ಕಳವುದು ಮಿವರಾರುಮಂ ಕಂಡು ಬಱಗಾಗಿ, ೨೦೬

[ಯತಿಪೆಂಪ್ಸಂ ಕೊಟ್ಟದುಂ
ವ್ರತದೊಳಮನಗೆಯ್ದ ಲಾಭನಾದುದು ಪಿರಿದು ।
ಸ್ಮತಿಯಿಂದಮೆಂದು ತನ್ನೊಳ
ಗತುಳಬಳಂ ಪೆರ್ಚಿ ನಚ್ಚಿ ಪೊಗೞ್ದಂ ಮುನಿಯಂ] ॥ ೨೦೭

ಮುನಿಪತಿ ಕೊಟ್ಟ ಬ್ರತಮಂ
ನೆನೆಯದೆ ಕಡುಗೋಪದಿಂದಮಿಱಿದೊಡೆ ಪೆಱತೇಂ ।
ಜನನಿಯು ಗರ್ಭಿಣಿಯಪ್ಪೀ
ವನಿತೆಯುಮೊಡನಳಿವರೇಂ ಮಹಾಪಾತಕಮೋ ॥ ೨೦೮

ಎಂದು ಮುನ್ನಿನ ನಾಲ್ಕುವ್ರತಬಂದಮುಮಿವಾವ್ರತದ ಪಡಪೆ ಮಿಗಿಲದೆಂತೆಂದೊಡೆ, ೨೦೯

[1] ಕವಾಟೋದ್ಘಾಟನವು ಬ ಚೋರ್ಣರ್ವಾ ತಳಿವುದುಂ ಪಡಿ ತೆಱೆಯೆ (ಕ)

ಮುಂದಣ ಸುಗತಿಯುಮೀಗಳ್
ನೊಂದುಜ್ಜ್ವಲಮಪ್ಪ ಜಸಮುಮೀವ್ರತದಿಂದಂ ।
ನಿಂದುದು ಮಿಕ್ಕಂದೀವಧೆ
ಯಿಂದಿಹಪರಮೆರಡುಮೆನಗೆ ಕೆಡುವುದು ಪುಸಿಯೇ ॥ ೨೧೦

ಎಂದು ಮನದೊಳಾದ ಹೇವದಿಂ ನಿಚ್ಚಟಗತಿಯಪ್ಪುದುಂ ಪರಿಚ್ಛೇದಿಸಿ ತಂದರ್ಥಮೆಲ್ಲಮುಮಂ ತಾಯ್ಗಂ ಪೆಂಡತಿಗಂ ತಕ್ಕನಿತಂ ಕೊಟ್ಟು ಉಳಿದುದಂ ಬಡಶ್ರಾವಕರ್ಗಂ ಜಿನಪೂಜೆಗಂ ಕೊಟ್ಟು ವರಧರ್ಮಭಟ್ಟಾರಕರಲ್ಲಿಗೆ ಬಂದು ಪೊಡೆಮಟ್ಟು ನಿಮ್ಮಡಿಯ ಪ್ರಸಾದದಿಂದೆನಗೆ ಮಹಾಪಾತಕಂ ಪಿಂಗಿ ಪೋದುದೆಂದು ಪೆಱಗಣ ವಾರ್ತೆಯೆಲ್ಲಮಂ ಪೇೞ್ದು ದೀಕ್ಷೆಯಂ ಪ್ರಸಾದಂಗೆಯ್ಯಿಮೆಂದೊಡಾ ಮುನೀಂದ್ರೋತ್ತಮರಿಂತೆಂದರ್:— ಮಗನೆ, "ಕೆಟ್ಟ ನೂಱುಂ ತಪಂಬಟ್ಟು ನೂಱು" ಎಂಬ ನಾಣ್ಣುಡಿಯುಂಟು; "ಪುಟ್ಟಿದೆಡೆಯ ಪೊನ್ನುಱುವುದು; ಪೋದೆಡೆಯ ತಪಮುಱುವುದು" ಎಂಬುದಱಿಂ ನೀನಿಲ್ಲಿ ತಪಂಬಡವೇಡ; ಕೇಳೇಕಾಂತ ವಿಷಯದ ಧರಣೀಭೂಷಣಪರ್ವತದೊಳೆಮ್ಮ ಸಧರ್ಮಿಗಳ್ ಶ್ರೀವರ್ಮಭಟ್ಟಾರಕರಿರ್ಪರವರಲ್ಲಿಗೆ ಪೋಗಿ ದೀಕ್ಷೆಯಂ ಕೊಳ್ವೆಂಬುದುಮಂತೆಗೆಯ್ವೆನೆಂದು, ವಿಶ್ವಾನುಲೋಮನನೆನ್ನಲ್ಲಿಗಟ್ಟುವುದೆಂದು [1] ತಾಯ್ಗೆ ಪೇೞ್ದು ಬಂದು, ೨೧೧

ಆ ಗಿರಿಯನೆಯ್ದಿ ಬೇಗಂ
ಯೋಗೀಂದ್ರಂಗೆಱಗಿ ಕಾರ್ಯಮಂ ಪೇೞೆ ಮಹೋ ।
ದ್ಯೋಗಿಗೆ ಜಿನದೀಕ್ಷೆಯನಂ
ತಾಗಳ್ ದಯೆಗೆಯ್ದು ಕೊಂಡು ತಪದೊಳ್ನಿಂದಂ ॥ ೨೧೨

ಇತ್ತಲ್ ವಿಶ್ವಾನುಲೋಮಂ ಧನ್ವಂತರಿಯ ಪೋಗನಾರಯ್ದಱಿಯೆ ಪೇೞೆ ಕೇಳ್ದು ಮಱುಗಿ ನಿಲಲಾಱದೆ ಎನಗೆನ್ನ ಕೆಳೆಯನ ಗತಿಯೆ ಗತಿಯೆಂದು ಬಂದು ಸಹಸ್ರಜಟಿಯೆಂಬ ತಾಪಸಂ ತೋಱೆ, ಸೂರ್ಯಪ್ರತಿಮೆನಿಂದ ಧನ್ವಂತರಿಮುನಿಯುಂ ಮಾರ್ಗಮನಱಿಯದೆ ನುಡಿಸು

---

1 ಧರಣಿಭೂಷಣಗಿರಿಗಟ್ಟುಮೆಂದು (ಗ)

ವುದುಂ ನುಡಿಯುದಿರ, [1] ಎನ್ನೊಡನೆ ನುಡಿಯನೆಂದು ಮುನಿದು ಮಗುಳ್ದು ಬಂದಾ ತಾಪಸಂಗೆ ಶಿಷ್ಯನಾಗಿರೆ ಮಱುದಿವಸಂ ಧನ್ವಂತರಿಮುನಿ ವಿಶ್ವಾನು ಲೋಮನಲ್ಲಿಗೆ ಬಂದು ಸಂಭಾಷಣೆಯಂ ಮಾಡೆ ಮಿಥ್ಯಾತ್ವಕರ್ಮ ದುದಯದಿಂ ಮುನ್ನಮೆನ್ನೊಡನೆ ನುಡಿಯದಿರ್ದನೆಂಬ ಕೋಪದಿಂ ಮೋನಂಗೊಂಡಿರೆ ವಾತ್ಸಲ್ಯರತ್ನಾಕರನಿಂತೆಂದಂ :— ೨೧೩

ಸಲೆ ನಿನ್ನ ತಪದ ಫಲಮುಮ
ನೆಲೆ ಸಖ ಕೇಳೆನ್ನ ತಪದ ಫಲಮುಮನುರ್ವೀ ।
ವಲಯಂ ಬಣ್ಣಿಸೆ ಕಡೆಯೊಳ್
ಫಲದಲ್ಲಿಯೆ ಕಾಣಲಕ್ಕುಮೆಂದಲ್ಲಿಂದಂ ॥ ೨೧೪

ಬಂದುಗ್ರೋಗ್ರತಪಮಂ ಮಾಡಿ ಸಮಾಧಿಮರಣದಿಂ ಮುಡಿಪಿ ಧನ್ವಂತರಿಮುನಿನಾಥನಚ್ಯುತಕಲ್ಪದೊಳಮಿತಪ್ರಭ
ನಾಗಿ ಪುಟ್ಟಿದಂ ; ವಿಶ್ವಾನುಲೋಮನುಂ ಸ
ವಿದ್ಯುತ್ಪ್ರಭನೆಂಬ [2] ವಾಹನದೇವನಾಗಿ-
ದ್ವೀಪದೊಳಚ್ಯುತೇಂದ್ರಂ [ವಿಶ್ವಾ
ವಾಹನದೇವನಂ] ಕಂಡು,

ಕರೆವುದುಮಾತಂ ಭಯದಿ
ಪರಿತಂದತ್ಯಂತಭಕ್ತಿ
ಕ್ಕಿರೆ ನಕ್ಕು ದೇವ
ಚರಣದಿನಂದವ

ವಿಶ್ವಾನುಲೋ
ನದೇವನಱಿದು ಬೆಱಗಾ
ತ್ತ್ರಿಯ ಫಲಮನವಧಾರಿಸಿ

1 ಅನಿತರೊಳ ಮಗ
2 ವಿಜಯನೆಂಬ ವ್ಯ

DHARMAMRU'

ರೊಳರೆಂಬುದರ್ಲೆಮ್ಮಲ್ಲಿಯುಮೊಳ್ಳವರೊಳರೆನ್ನಂ ನೋಡವೇಡೆನೆ; ನಿಮ್ಮಲ್ಲಿಯೊಳ್ಳದರುಂಟಪ್ಪೊಡೆಮಗೆ ತೋಱಿಮೆಂಬುದುಂ ಕರಹಾಟದೇಶದ ಪಶ್ಚಿಮಭಾಗದೊಳಿರ್ಪ ಚಂದ್ರಿಕಾರಣ್ಯದೊಳಿರ್ದ ಜಮದಗ್ನಿ [ಯೆಂಬ ಜಟಾಧಾರಿ] ಯಂ ತೋಱಿ,[1] ೧೧೭

ಆಪಾದಮಸ್ತಕಂಬರ
ಮೇಂ ಪಡಿಮಾತೆಯ್ದೆ ಬಳ್ಳಿಯುಂ ಪುತ್ತುಗಳುಂ ।
ವ್ಯಾಪಿಸಿದುವು ಲೋಕದೊಳಿ
ನ್ನೀ ಪಾಂಗಿಂ ತಪದೊಳಸಗುವನ್ನರುಮೊಳರೇ ॥ ೧೧೮

ಎಂಬುದುಂ, ಕಡುಪೆರ್ಚಿನಿಂದಿಂದ್ರನಿಂತೆಂದಂ :— ೧೧೯

ಬಡವನ ಸುಖಮುಂ ಪಂದೆಯ
ಕಾಸುನುಡಿಗುಂ ಮುಗಿಲ ನೆೞಲುಮೋಪರ ಮುನಿಸುಂ ।
ಪಮುಂ ನೋ
ಪ್ಪವೆರಸು ನಿಲಲಱಿದಪ್ಪುವೇ ॥ ೧೨೦

ದ್ಯೆಗಳಿಂ ನಿನ್ನ ತಪಸ್ವಿಯ ನಚ್ಚಿನ
ಗೀಜಗಪಕ್ಕಿಗಳಂ ವಿಗುರ್ವಿಸೆಯಾ
ಪುರ್ದುಂ, ಮತ್ತೊಂದು ಗೀಜಗನಮ
ಕೇಯನ ಮದುವೆಗೆ ಬನ್ನಿಮೆನೆ,
ರೆನೆನ, ನೀಂ ಗರ್ಭಿಣಿ ಬರ
ಱಂದು ದ್ವಿಜಾಂಗನೆಯೊಳ್
ನೆನೆ, ನಿನ್ನ ಮೆಚ್ಚಿನ
ದು[2] ೧೨೧

ಜಮದಗ್ನಿರಾಮನೆಂಬ ಜಟಾ

ಬನೋಡೆಂದೆರಡುಗೀಜಗಂಗಳಿಂ
ಕ್ಷಿ ಬಂದಾಗೀಜಗನಂ ನಾಳೆ
ಾಡೆ, ಗರ್ಭಿಣಿಯಪ್ಪ ಗೀಜ
ತ್ತಿರ್ಪಳೊಳ್ ನೆರೆಮೆಯೆನೆ,
ದುಂ (ಗ).

ಆನಲ್ಲದೆ ಪೆಱಪೆಱರಂ
ನೀನಳಿಪಿಂ ಮದನತಾಪದಿಂ ನೆರೆದೊಡೆ ಮ।
ತ್ತೇನುಂ ಸೂರುಳನೊಲ್ಲೆಂ
ನೀನೀ ತಾಪಸನ ಪಡೆದ ಗತಿಯುಂ ಪಡೆವೈ ॥ ೨೨೨

ಎಂಬುವುಂ, ಕೃತಕಗೀಜಗನೆರಡೆಱಂಕೆಯಿಂದೆರಡುಂ ಕಿವಿಗಳಂ ಮುಚ್ಚಿ ಕೊಂಡು ಪೊಲ್ಲದಂ ನುಡಿದೈ, ತಡೆಯದೆ ಈ ತಪಸ್ವಿಯ ಗತಿಗೆ ನೀನುಂ ನಿನ್ನಳ್ಕರುಂ ಪೋಗಿಮೆನೆ, ಜಮದಗ್ನಿಮುನಿ ಮುನಿದು ಪಕ್ಕಿಗಳಂ ಕರತಳದೊಳ್ಪೊಸೆದು ಕೊಲಲುದ್ಯೋಗಿಸುವುದುಂ, ಅದೃಶ್ಯರೂಪದಿಂ ನೆಲಕ್ಕೆ ಪಾಯ್ದರೆ, ೨೨೩

[1] ಪಕ್ಕಿಗಳಲ್ಲಿವು ದೈವಂ
ನಿಕ್ಕುವಮೆಂದಿರ್ದು ಭಕ್ತಿಪೂರ್ವಕಮಾಗಳ್ ।
ಪಕ್ಕಿಗಳೆರಡಱ ಪಾದಯು
ಗಕ್ಕೆಱಗಿ ಪತಂಗ ನುಡಿದೆಯಾಂ ಪಾತಕನೇಂ ? ॥ ೨೨೪

ಕೊಲಲ್ಬಗೆದೆಂ, ಕ್ಷಮೆಯಿಂದುಳಿದೆಂ ; ಕೇಳ್ಯೈ ಪೂರ್ವದೊಳಾಂ ರಾಜರ್ಷಿಯೀಗಳಪ್ಪೊಡೆ ಮಹಾತಪಸ್ವಿಯಾಂ ಪೋಪ ಗತಿಗೆ ನೀವೇತಕ್ಕೆ ಪೋಗಲೊಲ್ಲಿರೆಂಬುದುಂ, ಮಾಯಾದ್ವಿಜಂಗಳಿಂತೆಂದರ್—ನೀನಪ್ಪೊಡೆ ಪುತ್ರಮುಖಮಂ ಕಾಣದೆ ತಪಮಂ ಕೈಕೊಂಡೈ ; "ಅಪುತ್ರಸ್ಯ ಗತಿರ್ನಾಸ್ತಿ" ಯೆಂಬುದಱಿಂ ನಿನ್ನ ಪೋಪ ಗತಿಯನೊಲ್ಲೆವೆನೆ, ನಿಶ್ಚಯಮೆಂದು ತನ್ನಂ ತಾನೆ ಬಯ್ದುಕೊಂಡು ಪಕ್ಕಿಗಳಂ ಬಲಗೊಂಡು ನಿಮ್ಮ ಧರ್ಮದಿಂ ಗತಿಗಂಡೆನೆಂದು ತಮ್ಮ ಮಾವನಪ್ಪಪೂತಿಮಹಾರಾಜನಲ್ಲಿಗೆ ಬಂದು, ಕೂಸಂ ಬೇಡುತುಂ ಮದುವೆನಿಂದನತ್ತಲಚ್ಯುತೇಂದ್ರಂ ವಾಹನದೇವನ ಮೊಗಮಂ ನೋಡಿ ಮುಗುಳ್ನಗೆನಗುತಿಂತೆಂದಂ.—

---

[1] ದೇವತೆಗಳಿಂದು ಪೊಡೆವಟ್ಟೆನ್ನ ಪೋಪ ಗತಿಗೆ ದೂಷಣೆಯುಂ ಮಾಡಿದಿರೆಂತೆನೆ ನೀಂ ಮಕ್ಕಳ್ವಡೆಯದೆ ತಪಂಬಟ್ಟೀ ನಿನ್ನ ಪೋಪೆಡೆಗೆ ಮಾರಿ ಪೋಕೆ-ಬುದುಂ ತನ್ನ ಮಾವನಪ್ಪ ಪೂತಿರಾಜನಲ್ಲಿಗೆ ಬಂದು, ಕೂಸಂಬೇಡಿದನಿತ್ತ (ಗ)

ಪಲಕಾಲಂ ತಪದಿಂದಂ
ಚಲದಿಂ ಸಂದಿರ್ದ ನಿನ್ನ ನಚ್ಚಿನ ಮುನಿಯುಂ ।
ತೊಲಗಿಸಿದೆನೊಂದು ವಚನದಿ
ನೆಲೆ ಕೇಳ್ಮಿಥ್ಯಾತ್ವದಲ್ಲಿ ಪುರುಳೇನುಂಟೇ ॥ ೧೧೬

ಎಱಗಲನಾಪೇೞಿದೊಡ
ಮೆಱಗುಗುಮೆಱಿಯಲ್ಕೆ ಮೋಲೆ ಮತ್ತೆಱಗದು ಸಂ ।
ದಱಿಕೆಯು ಕರ್ಪೂರಮಿದೊಡ
ಮೆಱಿವಿಲ್ಲದ ಜಡರುಮದಱ ಸಮನಾಗಿರ್ಪರ್ ॥ ೧೧೭

ಅದಱಿಂದಜ್ಞಾನಿಗಳಪ್ಪರ ತಪದೊಳ್ ಫಲಮಿಲ್ಲೆಂದು ಬಸಿಱಂ ಪೊಸೆದು ನಕ್ಕಿನ್ನಾಗಮಾಭ್ಯಾಸಿಗರಪ್ಪ ಮಹರ್ಷಿಯರಂತಿರ್ಕೆ, ಎಮ್ಮಲ್ಲಿ ಗೃಹಸ್ಥನಪ್ಪಾತನಂ[1] ಕೆಡಿಸಿದೆಯಪ್ಪೊಡೆ ಎಮ್ಮಂ ಬಿಟ್ಟಜ್ಞಾನಿಗಳಿಲ್ಲೆಂದು ನುಡಿದು ರಾತ್ರಿಪ್ರತಿಮಾಯೋಗದೊಳ್ನಿಂದೆನ್ನ ತೋಱಿದ ಗೃಹಸ್ಥನಪ್ಪೀತನಂ ಕೆಡಿಸಿದೆಯಪ್ಪೊಡೆ ನೀನೆ ಪಿರಿಯನೆಂದೆನೆ[2] ವಾಹನದೇವಂ ಮುನಿದು, ೧೧೮

ಪೊಡೆವ ಸಿಡಿಲಿಂ ಮಿಂಚಿಂ ಭೋರೆಂದು ಬೀಸುವ ಗಾಳಿಯಿಂ
ಕೆಡೆವ ಮರದಿಂ ಪಾವಿಂ ತೇೞಿಂದಿರುಂಪೆಗಳಿಂ ಮನಂ
ಗೆಡಿಪ ಪುಲಿಯಿಂ ರೌದ್ರಾಕಾರಂಗಳಿಂ ಬಿಡೆ ಪಾಯ್ವ ಬ
ಲ್ಡಿಗಮರುಳಿಂ ಕಿರ್ಚಿಂ ಕಾಡಾನೆಯಿಂದಳವಿಂಡಿನಿಂ ॥ ೧೧೯

ಜಡಿದು ಕರದಿಂ ಪೊ ಪೋ ಪೋಗೆಂದು ನೂಂಕುವ ಬೇಡರಿಂ
ಬಡಿಯಲಿಱಿಯಲ್ ಪೊಯ್ಯಲ್ ಮೇಲ್ವೀೞ್ವ ರಾಕ್ಷಸತಂಡದಿಂ
ದಡರ್ದು ತನುವಂ ಮತ್ತಂ ನುಗ್ಗಾಗೆ ತಿಂಬ ಕಡಂದುಱಿಂ
ಕೆಡೆವ ಮರದಿಂ ನೂಂಕುತ್ತೊತ್ತುತ್ತೆ ಬರ್ಪ ಪೊನಲ್ಗಳಿಂ ॥ ೧೨೦

---

[1] ಗೃಹಸ್ಥನಪ್ಪೀ ಜಿನದತ್ತನಂ (ಗ)

[2] ಕಿಡಿಸಿದೆಯಪ್ಪೊಡೆನ್ನಂಬಿಟ್ಟನ್ಯಾಯಿಗಳಿಲ್ಲೆಂದು ರಾತ್ರಿಪ್ರತಮನಿಂದನಂ ತೋಱುವುದುಂ (ಗ.)

ಇವು ಮೊದಲಾದನೇಕೋಪಸರ್ಗಂಗಳಂ ಮಾಡಿಯುಂ, ತೊಲಗಿಸಲಾಱದೆ ಧರ್ಮಮುಮಂ ದೇವರುಮಂ ತಿರಸ್ಕರಿಸಿಯುಂ, ಬಂಧುಗಳ ರೂಪುಮಂ ಕೈಕೊಂಡು ಬಂದು ಮನೆಯುನರಸಂ ಕವರ್ದಂ ಪಿರಿಯ ಮಗಂ ಸತ್ತನೆಂದುಮೇಗೆಯ್ದುಂ ತೊಲಗಿಸಲಾಱದೆ ಶ್ರಾವಕರ ಗುಣಮಿಂತುಟೆನಲ್ ಜ್ಞಾನಿಗಳಪ್ಪ ಮಹರ್ಷಿಯರ ಗುಣಮನಂತಿಂತೆಂದು ಬಣ್ಣಿಸಲ್ಬಾರದೆಂದು ಮೆಚ್ಚಿ ಮಿಥ್ಯಾತ್ವಮಂ ಬಿಟ್ಟು ಸದ್ದೃಷ್ಟಿಯಾದನಚ್ಯುತೇಂದ್ರನೀ ಗಗನಗಾಮಿನೀವಿದ್ಯೆಯಂ ಸಂತಸದಿಂದೆನಗೆ, ೨೩೧

ಶಿವದ ಶಾಶ್ವತಮಪ್ಪ ಸೌಖ್ಯಮನೀಯಲಾರ್ಪ ಜಿನೇಶ್ವರ
ಪ್ರವರಶಾಸನದೊಳಲ್ಲದರ್ತಿಯುಮೆಯ್ದೆ ಪತ್ತಿದ ಮೋಹಮುಂ
ನಿಮಗಿಹತ್ರದ ಸೌಖ್ಯಹೇತುಗಳಪ್ಪ ಮಂತ್ರ ಕುವಿದ್ಯೆ ಯಿಂ
ಬಿವಱೊಳಿಲ್ಲಣಮೆಂಬುದಂ ನೆಱೆ ಬಲ್ಲೆನಾದೊಡಮುಳ್ಕಱಿಂ ॥ ೨೩೨

ಅಕೃತ್ರಿಮಚೈತ್ಯಾಲಯಮಂ ಪರ್ವದಿನಂಗಳೊಳ್ ಪೋಗಿ ವಂದಿಸಲಕ್ಕುಮೆಂದು ಪೊಡೆಮಟ್ಟು ಪ್ರಾರ್ಥಿಸಿ ಕೊಟ್ಟು ತಾಂ ಬಂದ ವೃತ್ತಾಂತಮನಱಿಪಿ ಪೂಜಿಸಿ ದೇವಲೋಕಕ್ಕೆ ಪೋದನೆನಗೆ ಗಗನಗಾಮಿನೀವಿದ್ಯೆ ಬಂದುದಿಂತೀ ವಿದ್ಯೆಯನೆಮ್ಮ ದೇಹಾರದ ಮಾಣಿವರಸೇನಂಗೆ ವಾತ್ಸಲ್ಯದಿಂ ಕೊಟ್ಟೆನೆಂಬುದುಂ, ಲಲಿತಾಂಗಂ ಬೆಱಗಾಗಿ, ೨೩೩

ಆತಂ ದೇವಾಧೀಶ್ವರ
ನೀತಂ ಕಿಱುಕುಳಮನುಷ್ಯನೀತಂಗಾತಂ ।
ಪ್ರೀತಿಯೊಳೞಗಿದನೆಂದೊಡೆ
ಭೂತಳದೊಳ್ಧರ್ಮದಿಂದಮಗ್ಗಳಮುಂಟೇ ॥ ೨೩೪

ಜಿನದತ್ತಂ ಗುಣವಾರ್ಧಿ ತಪ್ಪೞಿಯುಂ ಜೀವಾದಿಗಳ್ಗಂಬ ಭಾವನೆಯಿಂಗಾನಿನಿತೊಂದು ಪೆಂಪುವಡೆದೆಂ ದೇವಾಧಿದೇವಂ ಜಗ

ಜ್ಞನಪೂಜ್ಯಂ ಜಿನನಂ ಜಿನಾಗಮಮುಮಂ ನಿಶ್ಶಂಕೆಯಿಂ ನಂಬುವಾ
ತನ ಸೌಖ್ಯೋನ್ನತಿಯುಂ ಮಹಾಮಹಿಮೆಯುಂ ಪೇೞ್ವಣ್ಣಿಸಲ್ಬಾರ್ಕುಮೇ॥

ಎಂದು ದರ್ಶನದೊಳ್ ನಿಶ್ಶಂಕನಾಗಿ ॥ ೬೩೬

ಕಡುದೊರ್ತಿರ ಮುಂ ದುಷ್ಟರ
ಗಡಣಂಗೊಂಡಳವೆ ಸೊಲ್ಗು ಮಿನ್ನಳಿಪಿಂದಂ ।
ಪಿಡಿಯಂ ಖಳಸಂಸ್ಕೃತಿಯುಂ
ಬಿಡುವೆಂ ಪಿಡಿವೆಂ ಜಿನೇಂದ್ರಪದಸರಸಿಜಮಂ ॥ ೬೩೭

ಎಂದು [ತನ್ನ ವೈರಾಗ್ಯಂ ಧನ್ವಂತರಿಯ ಕಥೆಯಿಂದಿರ್ಮಡಿ ಯಾಗೆ ಸಂಸಾರಭೋಗಕ್ಕೆ ಪೇಸಿ] ದೇವರ್ಷಿಯರೆಂಬ ಚಾರಣರ್ಷಿಯರಲ್ಲಿ ಜಿನದೀಕ್ಷೆಯುಂ ಕೈಕೊಂಡು ತತ ಣದೊಳ ಚಾರಣರ್ಧಿಯು ನೆಯ್ದಿ ಪನ್ನಿರ್ತರದ ತಪದೊಳುತ್ತರೋತ್ತರಂ ನೆಗೞ್ದು, ಅಷ್ಟಾಪದ ಗಿರಿಯೊಳಷ್ಟವಿಧ[1] ಕರ್ಮಂಗಳಂ ನಿರ್ಮೂಲಮಾಗೆ ಕೆಡಿಸಿ ತ್ರಿಲೋಕ ಶಿಖರಿಶೇಖರನಾದನಿಂತು, ೬೩೮

ಕೇಡಿಲ್ಲದೊಂದು ಸುಖಮಂ
ಮೊಡುವೊಡರ್ಹತ್ಪದಾಂಬುಜಾತಮ ಮೊೞ್ಕಂ ।
ಮಾಡವು ಪೆಱವೆಂಬೀ ಬಗೆ
ಕೂಡಿದೊಡಾತಂ ಕೃತಾರ್ಥನಾತನೆ ಧನ್ಯಂ ॥ ೬೩೯

ಎಂದು ಗೌತಮಸ್ವಾಮಿಗಳ್[2] ನಿಶ್ಶಂಕೆಯ ಕಥೆಯುಂ ಪೇೞ್ವುದುಂ, ಪಿರಿದೊಂದುತ್ಸಾಹದಿಂ ನಂಬುಗೆ ಮನದೊಳಗುರ್ವಾಗೆ ಕೈಗಣ್ಮಿ ಪೊಣ್ಮಿತ್ತಿರೆ ಮಿಥ್ಯಾತ್ವಂ ಸಡಿಲ್ವೋಮೆಯಿ ಪಱಿಪಡೆ ನಿರ್ವಾಣಸಾಮ್ರಾಜ್ಯ ಮಾಗಳ್

---

1 ಕೈಲಾಸಪರ್ವತದೊಳಷ್ಟವಿಧ (ಗ) 2 ಎಂದು ಮುನಿರಾಜಹಂಸಂ (ಗ)

ದೊರೆಕೊಂಡಂತಾಗೆ ರಾಗಂಬೆರಸು ನಲಿದನಂದೆಯ್ದೆ ತ್ರೈವಿದ್ಯಲಕ್ಷ್ಮೀ
ಶ್ವರಪಾದಾಂಭೋಜಭೃಂಗಂ [1] ಸುಕವಿಜನಮನಃಪದ್ಮಿನೀ ರಾಜಹಂಸಂ ॥
೬೪೧

2 ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿನಿಕರವಿಲುಳಿತ
ಕಿರಣಚುಂಬನೀಯಪರಮಜಿನಚರಣಯುಗಳಸರಸಿರುಹ
ಮತ್ತಮಧುಕರ ನಿರುಪಮಸಹಜಕವಿಜನಪಯಃ
ಪಯೋಧಿಹಿಮಕರನುತಭಾವಯುತ ದಿಗಂಬರ
ದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತ ಮಪ್ಪ
ಧರ್ಮಾಮೃತದೊಳ್
ದರ್ಶನಪ್ರಥಮಾಂಗವ್ಯಾವರ್ಣನಂ
ದ್ವಿತೀಯಾಶ್ವಾಸಂ

---

1 ಚಿತ್ತ್ರೋತ್ಸವಂ ಪುಟ್ಟಲತ್ಯಾ | ದರದಿಂ ತ್ರೈವಿದ್ಯಚೂಡಾಮಣಿವಿಮಳ ಪದಾಂಭೋಜಭೃಂಗಂ ಸರಾಗಂ | ಬೆರಸಿರ್ದಂ ಯೋಗಿವಂದ್ಯಂ ಸುಕವಿ(ಗ)

2 ಇದು ಸಮಸ್ತಸುರಕಿರೀಟಮಣಿಗಣಮಯೂಖಾಲಂಕೃತಪರಮಜಿನ (ಬ)

ತೃತೀಯಾಶ್ವಾಸಂ.

ಶ್ರೀಕಾಂತೆಯನೊಲಿಪ ಗುಣ
ಕ್ಕೇ ಕಮನೀಯಪ್ರಣೂತನಿಶ್ಶಂಕೆ ಲಸ ।
ತ್ಪ್ರಾಕಾರಮೆಂದು ಪೆರ್ಚಿಂ
ಕೈಕೊಂಡಂ ಸುಕವಿನಿಕರಪಿಕಮಾಕಂದಂ ॥ ೧

ಅಂತಾಪ್ತಾಗಮಪದಾರ್ಥಂಗಳೊಳ್ ನಿಶ್ಶಂಕಮನನಾಗಿ ಮುಂದಣ ನಿಷ್ಕಾಂಕ್ಷೆಯ ಕಥೆಯುಮಂ ಬೆಸಸಿಮೆಂದು ಗೌತಮಗಣಧರರ್ಗೆ ಪೊಡೆಮಟ್ಟು ಮುಕುಳಿತಕರಕಮಲನಾಗಿರ್ಪುದುಂ [1] ಗೌತಮಗಣಧರಸ್ವಾಮಿಗಳಿಂತೆಂದು ಪೇೞ್ದರ್:— ತಂಬುಲದಂತೆ ಸಂಗೀತದಂತೆ ದಿವಸದಂತೆ ಮುತ್ತುಗದಂತೆ ವಜ್ರದಂತೆ ಲೋಕದಂತೆ ವೀಣೆಯಂತೆ ಗಾಳಿಯಂತೆ ವಿಪ್ರರಂತೆ [2] ಸಿದ್ಧರಂತೆ ತ್ರಿಸರದಂತೆ ದರ್ಶನಮುಮಂ ನಿಶ್ಶಂಕೆಯುಮಂ ನಿಷ್ಕಾಂಕ್ಷೆಯುಮೆಂಬ ಮೂಱರೊಳಂ ಕೂಡಿ ಮಹೋತ್ಸಾಹದಿಂ ನಡೆವುದು. [3] [ಇನ್ನಾ ಕಥೆಯ ಮಹಿಮೆಯೆಂತಪ್ಪುದೆಂದೊಡೆ, ೨

---

1 ನಿಶ್ರೇಯಸಶ್ರೀಯ ಮನದ ಕಾಂಕ್ಷೆಯ ಕಥೆಯಂ ಶ್ರೇಣಿಕಂಗೆ ಗೌತಮಸ್ವಾಮಿಗಳಿಂತೆಂದು ಪೇಳಲೊಡಗಿದರ್ (ಕ) ; ಬೆಸಸಿಮೆಂಬುದುಮಿಂತೆಂದು ಪೇೞ್ದರ್ (ಗ)

2 ಲಂಕೆಯಂತೆ (ಗ)

3 ಕರಮೊಪ್ಪುವ ನಿಷ್ಕಾಂಕ್ಷೆಯೊಳೆರಡಿಲ್ಲದೆ ನೆರೆದು ಶುಭದೊಳಱಿಗುವ ಮನುಜಂ ।
ಗರಿದುಂಟೆ ಜಗತ್ತ್ರಯದೊಳ್ಪರಮಾರ್ಥಂ ಮುಕ್ತಿಗದು ತವವರ್ಣನೆಯಲ್ತೇ ॥

ಇನ್ನದಱೈಶ್ವರ್ಯಮೆಂತೆಂದೊಡಂ, ಅಂಗವಿಷಯದ ಚಂಪಾಪುರದೊಳ್ ಪ್ರಿಯದತ್ತನೆಂಬ ಪರದನಿರ್ಪನಾತನ ಮನೋಹರಿಯನಂಗಪತಿಯೆಂಬಳ್ ಮರ್ವರ್ಗಂ ಪ್ರಿಯನಂದನೆ ಗುಣರತ್ನಾಭರಣೆಯೆನಿಸಿಪನಂತಮತಿಯೆಂಬಳ್, ಮತಿವಂತೆ ಬಗೆಗೆ ಬಂದು (ಗ)

ಅಗಣಿತಮಪ್ಪ ಪೆರ್ಗೆಱೆಗಳಿಂ ನೆಱೆ ವಾರಿಜಷಂಡದೋಳಿಯಿಂ
ಸೊಗಯಿಸುತಿರ್ಪ ಕೆಯ್ವೊಲದಿನಾಡುವ ಗೋಕುಲದಿಂ ಕುಬೇರನಿಂ
ಮಿಗಿಲೆನಿಪ್ಪೊಕ್ಕಲಿಂ ವಿಬುಧಸಂಕುಳದಿಂ ತುಱುಗಿರ್ದ ನಂದನಾ
ಳಿಗಳಿನಳುಂಬಮುನ್ನತಿಯಿನಂಗಮಹೀವಳಯಂ ಧರಿತ್ರಿಯೊಳ್ ॥ ೩

ಅಂತೊಪ್ಪುವಂಗವಿಷಯದೊಳ್ ಧರಾಂಗನೆಯ ಕೈಯ ಮಣಿದರ್ಪ
ಣದಂತೆ, ೪

ಸುತ್ತಿದ ನಂದನವನದಿಂ
ಮುತ್ತಿದ ಕೆಯ್ವೊಲದಿನೆಸೆವ ಪದ್ಮಾಕರದಿಂ ।
ದುತ್ತುಂಗಜಿನಾಲಯದಿಂ
ದುತ್ತಮಪುರಮೆನಿಸಿ ನೆಗೞ್ದ ಚಂಪಾಪುರದೊಳ್ ॥ ೫

ಜಿನಸಮಯವಾರ್ಧಿಸೋಮನುಂ ವೈಶ್ಯವಂಶಲಲಾಮನುಮಪ್ಪ ಪ್ರಿಯದತ್ತನೆಂಬ ವಣಿಗ್ವಂಶಕುಲತಿಲಕನಪ್ಪನಾತನ ಮನೋಹರೆ ಯಂಗಮತಿಯೆಂಬಳಂತವರಿರ್ವರ್ಗಂ ಪ್ರಿಯನಂದನೆ ಗುಣಗಣಾಭರಣೆ ಯನಂತಮತಿಯೆಂಬಳ್,] ೬

ಅತಿಚೆಲ್ವೆ ಬಗೆಗೆವಂದುದ
ನತಿಶಯದಿಂ ಪಲವುಮಕ್ಕಳುಂ ತಾನುಂ ಸಂ ।
ತತಮುಂ ಮಹಿಮೆವೆರಸುತಾ
ಡುತುಮೀತೆಱದಿಂದೆ ಪೋಗೆ ಪಲವುಂ ದಿವಸಂ ॥ ೭

ಒಂದುದಿವಸಮನಂತಮತಿಯೊಡನಾಡುವ ಮಕ್ಕಳೆಲ್ಲಂ ರಾಗದಿಂ ಮದುವೆಮಾಡುವೆವೆಂಬುದ್ಯೋಗದಿಂ ತರಿಸಿ ಬೊಂಬೆಯನೊಂದಂ,

ಲೀಲೆಯಿಂದುಡಿಸಿ ದಿವ್ಯವಸ್ತ್ರಮಂ
ಸೋಲೆ ಕತ್ತುರಿಯ ಬೊಟ್ಟನಿಟ್ಟು ಪೊ
ನ್ನೋಲೆಯಂ ತೊಡಿಸಿ ಚೆಲ್ವನಪ್ಪ ಪೂ
ಮಾಲೆಯಂ ಮುಡಿಯಿಸುತ್ತುಮರ್ತಿಯಿಂ ॥ ೯

ಇಂತು ನೆಱೆಯೆ ಪಸದನಂಗೊಳಿಸಿ, ೧೦

ಮದವಣಿಗನೆಂದು ಪಂಕಜ
ವದನೆಯು ಸಾಱಿರಿಸಿ ರಾಗವೊದವಿರೆ ಮನದೊಳ್ ।
ಮುದದಿಂ ಕೈಪಱೆಗುಟ್ಟು
ತ್ತೊದವಿಂದಂ ಮಕ್ಕಳಾಡುತಿರ್ಪನ್ನೆವರಂ ॥ ೧೧

ಪ್ರಿಯದತ್ತಸೆಟ್ಟಿ ಬಸದಿಗೆ ದೇವರಂ ಕಾಣಲ್ಪೋಗುತ್ತೆ ಕಂಡು ಸಮೀಪಕ್ಕೆ ಬಂದು ಬೊಂಬೆಯ ಕೆಲದೊಳಿರ್ದ ಮಗಳನೆತ್ತಿಕೊಂಡು ಮುಂಡಾಡಿ ಕದಪಂ ಕರ್ಚಿ ಬೞಿಕಮಿಂತೆಂದಂ[1]:— ೧೨

ಸ್ನೇಹದಿಂ ಗುಡಿಗಟ್ಟದೆ ಪೇರರ್ಮೆಂಗಳತೂರ್ಯರವಂಗಳು
ತ್ಸಾಹದಿಂದಮದೊರ್ಪ್ಪದೆ ನಂಟರ್ ಬಾರದೆ ಪಾವನರತ್ನಸಂ
ದೋಹದಿಂದೆಸೆವಂತು ವಿವಾಹಮಂ ಕರಮೊಪ್ಪಿರೆ ಮಾಡದಾಂ
ಮೋಹದಿಂ ನೆಱೆ ನೋಡದೆ ನೀನಾತ್ಮೇಶನನಕ್ಕಱೊಳರ್ತಿಯಿಂ ॥ ೧೩

ಇಂತು ಕದ್ದು ಮದುವೆಯಪ್ಪುದುಚಿತಮಲ್ತೆಂದು ತ್ರಸ್ತರಿಯಾಡುತ್ತುಂ ಮುದ್ದಾಡಿ ಜಿನಾಲಯಕ್ಕೆ ಬಂದು ಸ್ವಾಮಿಯಂ ಕಂಡು ಭಟ್ಟಾರಕರಂ[2] ವಂದಿಸಿ ನಿತ್ಯವ್ರತಮಂ ಕೈಕೊಂಡು [3]ಕಿಱಿದುಬೇಗಂ ಧರ್ಮಶ್ರವಣಂಗೆಯ್ದು ಬೞಿಕ್ಕಮಿಂತೆಂದಂ :— ೧೪

ನೋಡಿರೆ ಚೋದ್ಯಮನಕ್ಕನ
ಮಾಡಿದುದಂ ನಂಟರಱಿಯದಾನಱಿಯದೆ ಮುಂ ।
ಮಾಡದೆ ಜಿನಪೂಜೆಯನೊಡ
ನಾಡುವ ಕೂಸುಗಳುಮೆಯ್ದೆ ತಾನುಂ ಕಳವಿಂ ॥ ೧೫

ಸಮಕಟ್ಟಂ ಮದುವೆಯಾದಳ್ ; ನಿಮ್ಮ ಗುಡ್ಡಿಗೆ ಬ್ರಹ್ಮಚರ್ಯವ್ರತಮಂ ಕುಡಿಮೆಂಬುದುಂ, ವರದತ್ತಭಟ್ಟಾರಕರ್ ನಗುತ್ತುಂ ನಿನ

---

1 ಮಕ್ಕಳೆಲ್ಲಮೊಂದುದಿವಸಮನಂತಮತಿಕುಮಾರಿಯ ಕೆಲದೊಳೊಂದು ಬೊಂಬೆಯನಿರಿಸಿ ಮದವಣಿಗನುಂ ಮದವಣಿಗೆಯುಮೆಂದು ಕೈಪಱೆಗುಟ್ಟುತ್ತೆ ನೆರೆದಾಡುತ್ತುಮಿರೆ ಪ್ರಿಯದತ್ತಸೆಟ್ಟಿಯುಂ ಕಂಡು ಬಂದೆತ್ತಿಕೊಂಡು ಕದಪಂ ಕರ್ಚಿ ಮುದ್ದಾಡಿಸಿ ಮಗಳ್ಗಿಂತೆಂದಂ (ಗ)

2 ವರದತ್ತಭಟ್ಟಾರಕರಂ (ಗ) 3 ಸಿದ ಶೇಷೆಯಂ ಕೊಂಡು ಕಿಱಿದು (ಕ)

ಗಿಂದು ಮೊದಲಾಗೆ ಬ್ರಹ್ಮಚರ್ಯವ್ರತಮಂ ಕೊಟ್ಟವೆಂಬುದುಂ ಮಹಾ
ಪ್ರಸಾದಮೆಂದು ಕೈಕೊಂಡು ತನ್ನ ಮನದೊಳಿಂತೆಂದಳ್:— ೧೬

ಬಡವೆಂಗೊಪ್ಪುವೆ ರಾಜ್ಯಲಕ್ಷ್ಮಿ ಕುರುಡಂಗಕ್ಷಿದ್ವಯಂ ಕೂಪದೊಳ್
ಕೆಡೆವಂಗಡ್ಡಯಿಪಡ್ಡಗೊಂಬು ರುಜೆಯೊಳ್ಬೇವಂಗೆ ದಿವ್ಯೌಷಧಂ
ಬಿಡದೀ ಸಂಸೃತಿಯೊಳ್ ದುರೌಘವಶದಿಂ ಬೇವರ್ಗೆ ತತ್ಸುವ್ರತಂ
ಗಡ ಕೈಸಾರ್ದೊಡೆ ಭಾವಿಪಂದವನೆ ಧನ್ಯಂ ಭೂರಿಭೂಚಕ್ರದೊಳ್ ॥೧೭

ತರುನಿಕರಂಗಳೊಳ್ಮಲಯಜಂ ಭಗಣಂಗಳೊಳಬ್ಜವೈರಿ ಭೂ
ಧರನಿಚಯಂಗಳೊಳ್ಸುರನಗಂ ದೃಷದಾವಳಿಯೊಳ್ಸುರತ್ನಮು
ರ್ವರೆಗಧಿನಾಥರೊಳ್ನೆಗಳ್ದ ಚಕ್ರಿಗಳಯ್ದೆ ನಿಳಿಂಪರೊಳ್ಸುರೇ
ಶ್ವರನಿರವೆಂತುಟಂತುಟೆ ಧರಿತ್ರಿಯು ದೇವರೊಳಂ ಜಿನೇಶ್ವರಂ ॥ ೧೮

[ಇಂತಾರ್ಗಮಪೂರ್ವಮೆನಿಸಿದ ಜಿನೇಶ್ವರಂ ಮುನ್ನಿನ ಪುಣ್ಯೋದಯದಿಂದೆನಗೆ ಕುಲಸ್ವಾಮಿಯಾದಂ ; ಮತ್ತಂ][1] ರೂಪುಂ ಸ್ನೇಹಮುಮುಳ್ಳ ಸ್ತ್ರೀಯುಂ, ಕಾರುಣ್ಯಮುಂ ಕೋಡುಮುಳ್ಳಾಳ್ದನುಂ ಬೆಳಸುಮಾಜ್ಞೆಯುಮುಳ್ಳ ದೇಶಮುಂ, ಪಾಲುಂ ಶೀಲಮುಮುಳ್ಳಾವುಂ ನಿರ್ವೇಗಮುಂ ವ್ರತಮುಮುಳ್ಳ ತಪಮುಂ, ಶ್ರೀಯುಮಾಯುವುಮುಳ್ಳ ಬಾಳುಂ, ಶಕ್ತಿಯುಂ ಭಕ್ತಿಯುಮುಳ್ಳ ದಾನಮುಂ, ಚೆನ್ನುಂ ಪೊನ್ನುಮುಳ್ಳ ಸೊಬಗುಂ, ಗೆಲ್ಲಮುಮುದಟುಮುಳ್ಳ ತೇಜಮುಂ, ತೀರ್ಚುವ ಬುದ್ಧಿಯುಂ ಸತ್ವಮುಂ, ಸಮ್ಯಗ್ದರ್ಶನಮುಂ ವ್ರತಮುಮುಳ್ಳ ಪುಣ್ಯಮುಂ ಪಡೆಯಲರಿದದು ಕಾರಣದಿಂ, ೧೯

ಬಾಲತೆಯೊಳ್ದರ್ಶನಮುಂ
ಮೇಲೆನಿಪೀ ವ್ರತಮುಮೊಪನೆ ಸಂಭವಿಸಿದುವಾ ।
ನಾಲಸ್ಯದಿನಿವನುಳಿದೊಡೆ
ಮೇಲೆನಗಿಂತಪ್ಪ ಪುಣ್ಯದೊದವಾದಪುದೇ ॥ ೨೦

---

1 ಮತ್ತಮೆನ್ನಭಾಗ್ಯದಿಂ ತವುಡಿಂಗಂ ಮಾಣಿಕಂ ದೊರೆಕೊಂಡುದೆಂಬಂತೆ ರೂಪುಂ (ಬ. ಕ.)

ಕೆಱೆಯನೊಡೆದು ತೊಱೆಯಂ ತೀವುವ, ಮನೆಯನೞಿದು ಬೇಲಿಯನಿಕ್ಕುವ, ಹಾಸನೞಿದು ಕಂಥೆಯಂ ಪೊಲಿಸುವ, ಮೆದೆಯಂ ಸುಟ್ಟುರಳಂ ಕುಱುಕುವ, ತುಪ್ಪಮನೊಕ್ಕು ಸಗಣಮಂ ಕೊಳ್ವ, ಕಸ್ತೂರಿಯಂ ಬಿಸುಟು ಕೆಸಱಂ ಕೊಳ್ವ, ಬಂಡಾರಮಂ ಈಡಾಡಿ ಕಾಚಂ ಸಂವರಿಸುವ, ಬಟ್ಟೆಯಂ ಬಿಟ್ಟು ಕಾಡಂ ಪುಗುವ, ಕೆಯ್ಯಂ ಬಿಟ್ಟು ಪುಲ್ಲಂ ಕೊಳ್ವ, ಪೊನ್ನಂ ಬಿಟ್ಟು ಮಸಿಯಂ ಕಟ್ಟುವೆಗ್ಗನಂ ಪೋಲ್ವೆನೀ ದರ್ಶನಮಂ ವ್ರತಮುಮಂ ಬಿಟ್ಟೆನಪ್ಪೊಡೆಂದು ಮನಮಂ ತಿಬ್ಬಂ ಮಾಡಿ, ೨೧

[ಎಂದು ಮನದೊಳ್ಮಹೋತ್ಸವ
ದಿಂದಂ ಮುನಿಪತಿಗೆ ಭಕ್ತಿಯಿಂ ವಂದಿಸಿ ಪೆ ।
ರ್ಚಿಂದಂ ಗೃಹಕ್ಕೆ ಬೇಗಂ
ಬಂದು ಮನೋಮುದದಿನಂಬುಜಾನನೆಯಿರ್ದಳ್ ॥ ೨೨

ಇರ್ಪುದುಂ ಮನೆಯವರೆಲ್ಲರ ಪ್ರಹಸನದಿಂದಂ ಬ್ರಹ್ಮಚಾರಿಯೆಂಬ ಪೆಸರೆ ಪ್ರಸಿದ್ಧಮಾಗೆ][1] ೨೩

ಸಿಸುವಂ ತಾಯೊಕ್ಕಲಿಗಂ
ಸಸಿಯಂ ನೆಲನಂ ಮಹೀಭುಜಂ ಕಡುಲೋಭಂ ।
ಕಸವರಮಂ ಭೀತಂ ತ
ನ್ನಸುವಂ ನೆಱೆ ಶೀಲಮಂ ಮಹಾಸತಿಯುಪ್ಪಳ್ ॥ ೨೪

ರಕ್ಷಿಸುವಂದದಿಂ,[2] ೨೫

ಸನ್ನುತಗುಣಗಣನಿಳಯೆ ಮ
ಹೋನ್ನತೆ ಬಿಡದೈದುವರ್ಷದಿಂ ತೊಡಗಿ ಕರಂ ।
ಪನ್ನೆರಡಬ್ದಂವರೆಗಂ
ಭಿನ್ನಾಂಬುಜವದನೆ ರಕ್ಷಿಸುತ್ತುಂ ವ್ರತಮಂ ॥ ೨೬

---

1 ಮನೆಗೆವೋಗಿ ಬ್ರಹ್ಮಚಾರಿಣಿಯೆಂಬ ಪೆಸರಸೆಯು (ಗ).

2 ತನ್ನಸುವಂ ರಕ್ಷಿಸುವ ತೆಱದಿಸೀಸುವ್ರತಮುಂ, ಸನ್ನುತ (ಗ)

ಇದರ್ೊಂದುದಿನಂ ಪೆಱಗಣ ನಂದನವನದೊಳ್ [ಪೊೞ್ತು ಪೋ
ಗಿಂಗೆ ಪರಿಚಾರಕಿಯರುಂ ತನ್ನೊಡನಾಡುವ ಕುವರಿಯರುಂ ಬೆರಸು
ಪೋಗಿ, ಮನಕ್ಕೆ ಬಂದ ಪೂವಿನಾಭರಣಮಂ ತೊಟ್ಟು ಚೂತಮಹೀ
ಜದ ಕೆಳಗಣ ಪೊನ್ನ] ಯ್ಯಲನೇಱಿ, ೨೭

ಅಳಿನಿನಾದಮುಮುಯ್ಯಲ ಧ್ವನಿಯುಂ ಮನೋಹರಮಪ್ಪಿನಂ
ಜಳಜನೇತ್ರೆಯರೊಯ್ಯನೊಯ್ಯನೆ ತೂಗುತುಂ ನೆರೆದೊಂದಿ ಕೋ
ಮಳನಿನಾದದಿನಾದಿದೇವರ[1] ವಸ್ತುರೂಪಗುಣಸ್ತವಂ
ಗಳನೆ ಪಾಡೆ ವಿನೋದದಿಂ ತರಳಾಕ್ಷಿಯಾಡುತುಮಿರ್ಪಿನಂ ‖ ೨೮

[ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಕಿನ್ನರಗೀತಮೆಂಬ
ಪೊೞಲನಾಳ್ವ] ಕುಂಡಲಮಂಡಿತನೆಂಬ ವಿದ್ಯಾಧರಂ ತನ್ನಗ್ರಮಹಿಷಿ
ಸುಕೇಶಿನಿವೆರಸು ಆಕಾಶಮಾರ್ಗದೊಳ್ ಕಾಮವಿಹಾರಾರ್ಥಂ ಬರು
ತ್ತುಂ [ಉಯ್ಯಲಾಡುತ್ತುಮಿರ್ಪನಂತಮತಿಕುಮಾರಿಯಂ] ತೊಟ್ಟನೆ
ಕಾಣ್ಬುದುಂ; ೨೯

ವಿರಹಾನಲನಳುಱೆ ವಿಯ
ಚ್ಚರರಾಜಂ ನಿಲಿಸಲಾಱದೊಪಲಂ ದಾಹ।
ಜ್ವರಮಾದರಂತೆ ಕಾಯ್ಪಿಂ
ದುರಿಯುತ್ತುಂ ಬೆಯ್ವ ಶೈಲಮಿರ್ಪಂತಿರ್ದಂ ‖ ೩೦

ಅರಲಸರಲ್ಲೆದೆಂಬಕರ್ಾಮಂಗೆ ಲೋಕದ ಮಾನಿಸರ್
ತೊಲಗದರಲಂಬಾತಂಗೈದಪ್ಪೊಡೆನ್ನನೆ ಪೋಗದ

---

[1] ನಿನಾದದೆ ದೇವವಂದ್ಯನ (ಬ, ಕ.)
ಬಡನೊಡನೆಕಾಮುಬಾಣಂ
ನಡುಕೊಳ್ವರಮೂರ್ಛೆಬೆಗಡುಗೊಂಡತ್ತಿತ್ತಲ್ ।
ಮಿಡುಕದೆನಿಲಿಸಿವಿಮಾನವು
ನಡಿಗಡಿಗಳ್ಕರ್ತನೋಡಿವಾಱಿಜವುಖಿಯುಂ ‖ ೩೧
ತನ್ನೊಳಿಂತೆಂದಂ:—(ಬ, ಕ) ೩೨

ಗ್ಗಲಿಸಿ ನಡುವೆಂಬೋವ್ರೊವತ್ಯದ್ಭುತಂ ಶತಕೋಟಿಗಂ
ಪಲವುಪಲವೆಂದಾಗಳ್ವಿದ್ಯಾಧರಂ ಮನವಿಕ್ಕಿದಂ ॥ ೩೩

ಇವಳ ಕಡೆಗಣ್ಣೆಂಬೀ ಲೇಸಪ್ಪ ಕೂರ್ಪಿನ ಬಾಣದಿಂ
ದಿವಳ ಮುಖಮೆಂಬಗ್ಗಂಬೆತ್ತಿರ್ದ ಪೆಂಪಿನ ಚಕ್ರದಿಂ
ದಿವಳ ನಳತೋಳೆಂಬೀ ತೀವ್ರಾಸಿಯಿಂ ಸ್ಮರನಂಜಿಪಂ
ಕುವಿಟನದಟಿಂದೆನ್ನಂ ತಾನೊರ್ವನಂಜಿಸಲಾರ್ಪನೇ ॥ ೩೪

ಎಂದು ಕಾಮಸಂತಾಪದಿಂ ಪಲುಂಬಿ ಪಂಬಲಿಸುತ್ತುಂ ಪೆಂಡತಿಯಪ್ಪ ಸುಕೇಶಿನಿ ತನ್ನೊಡನಿರ್ದಳಪ್ಪುದಱಿಂ ನೆಲಕ್ಕಿೞಿದು ಕುಮಾರಿಯಲ್ಲಿಗೆ ಪೋಗಲಣ್ಮದೆ, ಕುದಿವ ಕೂೞಂತೆ ಕುದಿದು ದಗೆಯೇಱಿದ ಕೋಡಗದಂತೆ ಬೆಱಗಾಗಿ ಬಾಣತಿಸೂಳೆಯಂತೆ ಸಿಡಿವಿಡಿಗೊಂಡು ತಳಾಱನಂ ಕಂಡ ಕಳ್ಳನಂತೆ ಕುಸಿದು ಪೇಳಗೆಯೊಳಗಣ ಪಾವಿನಂತುಮ್ಮಳಿಸಿ ಬೇಸಗೆಯ ಸೂರ್ಯನಂತೆ ಕಾಯ್ದು ಪಿರಿದಾಗಿ ತೆಱುವ ಒಕ್ಕಲಂತೆ ನೆಲನಂನೋಡಿ ನೀರ್ವಡೆಯದ ಗಿಡುವಿನಂತೆ ಮುಖಂಬಾಡಿ ಎಣ್ಣೆಮುಟ್ಟದ ಕುಂಬಳಕಾಯಂತೆ ಒಳಗೊಳಗೆ ಕೊಱಿತು ಕುದಿವ ನೀರಂತೆ ಮಱುಗಿ ದರಿಯಮರದಂತಲ್ಲಾಡಿ ಆನೆಯ ಪರಿಕಾಱನಂತೆ ಪಲವಂ ಚಿಂತಿಸಿ ಕಳನನೇಱಿದಂಕದವನಂತೆ ಬೆಱಗಂನೋಡಿ ಬಕವೇಸಿತನದಿಂದೊಡಲ ಸೂಡಿಂಗಿರಲಾಱದೆ ಪುಸಿಗೂರ್ಮೆಯಿಂದೋಪಳನಪ್ಪಿಕೊಂಡು
[ಮೆಲ್ಲನಿಂತೆಂದಂ :— ೩೫

ಇತ್ತಲಪ್ಪೊಡೆ ನಮ್ಮ ಕಾಣದ ನಾಡುಗಳ್ಪಲವಿಲ್ಲ ಕೇ
ಳತ್ತಲೇವುದೊ ಪೊಕ್ಕು ನಾಳೆ ವಿನೋದದಿಂದೊಡನಿರ್ವರುಂ
ಮುತ್ತಿನಾಭರಣಂಗಳಂ ನೆಱೆ ತೊಟ್ಟು ಚೀನಮನುಟ್ಟು ಕೇ
ಳುತ್ತರಾಶೆಗೆ ಪೋಗಿ ಭೋಗಿಸುವಂ ಸುರೇಂದ್ರಗಿರೀಂದ್ರದೊಳ್ ॥ ೩೬

ಎಂದು ಕೃತಕವಚನದಿಂ ನಂಬೆ ನುಡಿದು ಪೊೞಲ್ಗೆ ಪೋಗಿ ಮಂದಿರಮಂ ಪೊಕ್ಕು ನಲ್ಲಳಂ ವಂಚಿಸಿ ಪೋಪ ಬಗೆಯಂ ನೆನೆದು, ಸುಕೇಶಿನಿಗೆ ಮಣಿಕುಂಡಲಮಂಡಿತನಿಂತೆಂದಂ :—] [1] ೩೭

---

1 ಪುರಕ್ಕೆ ಮಗುಳ್ದು ಪೋಗಿ (ಗ)

ನೀನಿಲ್ಲಿರ್ ಮೇರುನಗ
ಕ್ಕಾನೊರ್ವನೆ[1] ಪೋಗಿ ಬಂದಪೆಂ ರಮಣೀಯ ।
ಸ್ಥಾನಂಗಳಡೆಯನಱಿದೆಂ
ದಾ ನೀರೆಗೆ ಕೂರ್ಪನಂತೆ ನುಡಿದಾ ಖಚರಂ[2] ॥ ೩೮

[ವಿಮಾನಮನೇಱಿ ಪುರಮಂ ಪೋಱಮಟ್ಟು ಬಡಗಣದೆಸೆಗೆ ತನ್ನ ಪೋಗಂ ತೋಱಿ ಕಿಱಿದೆಡೆಯಂ ಪೋಗಿ ಮಗುಳ್ದು ತೆಂಕಮುಖನಾಗಿ ಮರುಜ್ಜವದಿಂ] ಚಂಪಾಪುರಕ್ಕೆ ಬಂದುಯ್ಯಲನೇಱಿರ್ದನಂತಮತಿಯುಂ ತನ್ನ ವಿಮಾನದೊಳೇಱಿಸಿಕೊಂಡು ಆಕಾಶಕ್ಕೆ ನೆಗೆದು ಕನ್ನೆಯ ರೂಪಂ ನೋಡಿ, ೩೯

ಎಳಲತೆಯಿನೆ ಬಿದಿ ಲೋಕಮ
ನಳಲಿಸಲೆಂದರ್ತಿವೆಟ್ಟು ವನಿತಾರೂಪಂ ।
ಗಳಯಿಸಿದನಱಿದೆನಲ್ಲದೊ
ಡುಳದಂತಂಗನೆಯರಿಂತು ಚೆಲ್ವೆಯರೊಳರೇ ॥ ೪೦

ಕಂತುವಿನಾರಾಧಿಪ ದೈ
ವಂ ತಡೆಯದೆ ಕಾಮನಿಸುವ ಸರಲೆನಿಸಿರ್ದಾ ।
ಕಾಂತೆ ದೊರೆಕೊಂಡಳೆನಗೆ
ನ್ನಂತಾವಂ ಸ್ತ್ರೀಗೆ ನೋಂತವಂ ಖೇಚರರೊಳ್ ॥ ೪೧

[ಮತ್ತಂ, ಲೋಕದೊಳ್ನೋಡದ ಪೆಂಪರಿಲ್ಲ ಆಡು ಮುಟ್ಟದ ಗಿಡುವಿಲ್ಲ; ಈ ಕಾಂತೆಯಂತೆ ಚೆಲ್ವೆಯುಂ ಕನಸಿನೊಳಪ್ಪೊಡಂ ಕಂಡಱಿಯೆಂ ॥ ೪೨

ಸರಿಯೊಳೊಪ್ಪುವ ರೂಪನಿಂದ್ರನ ಕಾಂತೆಯೊಳ್ಕಡುಚೆಲ್ವನಂ
ಬುರುಹದೊಳ್ಮುಖಬಿಂಬಮಂ ಶಿಶುಚಂದ್ರನೊಳ್ ನೊಸಲಂ ಮೃಗೇ
ಶ್ವರನೊಳೊಳ್ನಡುವಂ ಮನೋಜನ ಬಾಣದೊಳ್ಬೆರಲಂ ಮನೋ
ಹರಿಯಿವಳ್ಸೆಱೆಗೊಂಡಳೋ ನೆಱೆ ಸೂಱೆಗೊಂಡಳೊ ಪೇೞಿದಂ ॥ ೪೩

1 ದಕ್ಷಿಣದೆಸೆಗಾನೊರ್ವನೆ (ಗ)

2 ಆ ನಾರಿಗೆ ನಂಬಿ ನುಡಿದು ಖಚರಾಧೀಶಂ (ಗ)

ಎಂದು ಕುಮಾರಿಯ ಹಾವಭಾವವಿಲಾಸವಿಭ್ರಮಂಗಳಂ ನೋಡಿ ತನ್ನೊಳ್ ಪೊಗೞುತ್ತುಂ, ಮನದೊಳ್ ಸಂತಸದಂತಮನೆಯ್ದಿ ನೋಡು ತ್ತುಮಿರ್ದನ್ನೆಗಮನಂತಮತಿಕುಮಾರಿ, ೪೪

ನಯದಿಂ ಜಿನೇಂದ್ರಚರಣ
ದ್ವಯಮಂ ಚಿತ್ತದೊಳ್ ನಿಲಿಸಿ ಶೌಚಕ್ಕನಗಿಂ ।
ನಿಯತಂ ವೇಳೆಯೆನುತ್ತುಂ [1]
ಭಯದಿಂದಂ ನೋಡಿ ನಾಡೆ ನಡುಗುತ್ತಿರ್ದಳ್ (?) ॥ ೪೫

ಅಂತು] [2] ಪೆಣನಂ ಕಂಡ ಪಂದೆಯಂತೆಯಂಜುತ್ತುಂ, ರೌದ್ರನಂ ಕಂಡ ಸಾಧುವಿನಂತೆ ಮಿಡುಕಲಮ್ಮದೆ ನೆಲನಂ ನೋಡತ್ತುಂ, ಬೆಟ್ಟದ ನಪ್ಪರಸಿನ ನಾಡಂತೆ ಬೆಬ್ಬಳಿಸುತ್ತುಂ, ಎಱೆಯ ಕೆಱೆಯಂತೆ ಮೊಗಂ ನೀರೋಡುತ್ತುಂ, ಮಕ್ಕಳಂತೆ [3] ವಿಮಾನಮಂ ಬಿಡದೆ ಪತ್ತುತ್ತುಂ, ಮಹಾ ಮಂತ್ರಿಯಂತೆ ವ್ರತರಕ್ಷಣೋಪಾಯಮಂ ಚಿಂತಿಸುತ್ತುಂ,ಬೊಹಂ ಗಂಗೆ ಬೇಸತ್ತ ಸೂಳೆಯಂತೆ ವಿಮಾನದೊಂದೆಸೆಯಂ ನೆಮ್ಮುತ್ತುಂ, ಮುಳ್ಮರದ ಕೆಳಗಿರ್ದ ಲತೆಯಂತೋಸರಿಸುತ್ತುಂ, ಸುಂಕಿಗನಂ ಕಂಡ ಭಂಡಮುಳ್ಳನಂತೆ ಸಂಕಿಸುತ್ತುಂ, ಆಜ್ಞಾಪರನಪ್ಪರಸಿನಂತೆ [4] ಮನಮಂ ಸಂತೈಸುತ್ತುಂ, [5] ಕೂರ್ಪರಂ ನೆನೆವಂತೆ ಜಿನಾಗಮಮಂ ಭಾವಿಸುತ್ತುಂ ಭಯಮುಳ್ಳ ಬಟ್ಟೆಯಂ ಪೋಪರಂತೆ ಇರ್ಕೆಲನಂ ನೋಡುತ್ತುಂ, ಕ್ಷಮಾನ್ವಿತೆಯುಂ ಸಾಗರದಂತೆ ಗಂಭೀರೆಯುಮಾಗಿರ್ಪುದುಮತ್ತಲ್, ೪೬

ಶತಪತ್ರಾನನೆ ಖಚರನ
ಸತಿ ಕೂರ್ಪುದಱಿಂದೆ ಖೇಚರೇಂದ್ರನೊಳಾದಾ ।
ಕೃತಕಮನಱಿಯದೆ ತಡೆದಂ
ಪತಿಯಿದನಾರಯ್ವೆನೆಂದು ಮನದಾದರದಿಂ ॥ ೪೭

---

1 ಚಿತ್ತದೊಳನಿಲಿಸಿ ಶೌಚಕ್ಕಾನಿಂನಿಯತಂವೇಳೆ (ಕ. ಖ.)

2 ಎಂದು ಮನದೊಳ್ ರಾಗಿಸುತಿರ್ಪನ್ನೆಗಂ ಅನಂತಮತಿ (ಗ)

3 ಸನ್ಯಾಸಿಯಂತೆ (ಕ) 4 ಅನ್ಯಾಯಮಿದನೂರಂತೆ (ಗ)

5 ಮಹರ್ಷಿಯಂತೆ ಶುಭಭಾವನೆಯುಂ ಭಾವಿಸುತ್ತುಂ, ಕೂರ್ಪರ ಖರವಂ ಪಾರ್ವರಂತೆ ವಿಮಾನದೊಂದೆಸೆಯುಂ ನೆಮ್ಮುತ್ತುಂ, ಜಿನಾಗಮಮಂ ನೆನೆಯುತ್ತುಂ, ಭಯಮುಳ್ಳ (ಕ.ಖ)

ಅವಲೋಕಿನೀವಿದ್ಯೆಯಂ [ನೆನೆದು ಬರಿಸಿ ಮದ್ವಲ್ಲಭನೇಂಕಾರಣಂ ತಡೆದನೋ ಬೇಗಮಾರಯ್ದು ಬರ್ಪುದೆಂದು ಪೇೞ್ವುದುಂ, ಪೋಗಿ ಖಚರನಿರ್ದೆಡೆಯನಱಿದು ಬಂದು ತದ್ವೃತ್ತಾಂತಮನೊಂದುಗುಂದದಂತೆ ಪೇೞ್ವುದುಂ,] [1] ಸುಕೇಶಿನಿ ಕೇಳ್ದು ತುಂಬುರುಗೊಳ್ಳಿಯಂ ಕಂಬದೊಳಳ್ಳೆಯದ್ದಂತ ಸಿಡಿಲ್ದು [ಕಿಡಿಕಿಡಿವೋಗಿ] ೪೮

ಕರವೆನ್ನನುಱದೆ ಪೋದಂ
ಬರಚರನುಮನವನ ಕೂರ್ಪ ವನಿತೆಯುಮಂ ಚ ।
ಚ್ಚರದಿಂ ಕೊಲ್ಲದೆ ಮಾಣ್ದೊಡೆ
ಧರೆಯೊಳ್ ಖೇಚರಿಯೆಯಲ್ಲ ನಾಂ ಗೀಚರಿಯೆ * ॥ ೪೯

[ಎಂದು ರೌದ್ರರೂಪೆಯುಂ ಪಾಪಿಯುಮಪ್ಪುದಱಿಂ ವಜ್ರದಂಡಮನುರದೊಳಮರ್ಚಿಕೊಂಡು ಕಿೞ್ತು ಬಾಳ್ವರಸು ಬರ್ಪಾಕೆಯಂ ದೂರದೊಳ್ ಕಂಡು ಬೆಗಡುಗೊಂಡು ಕುಂಡಲಮಂಡಿತಂ ಬೇಗದಿಂ ಪರ್ಣಲಘುವಿದ್ಯೆಯಂ ಬರಿಸಿ ನೀನೀಕನ್ನೆಯಂ ನೆಲಕ್ಕಿೞಿಪಿ ಬರ್ಪುದೆಂಬುದುಂ ತದ್ವಿದ್ಯಾದೇವತೆ, ೫೧

ವನಜಾನನೆಯಂ ಪಿಡಿದೊ
ಯ್ಯನೆ ವಸುಮತಿಗಿೞಿಪಿ ಭೀಮವನಮೆಂಬ ಮಹಾ ।
ವನದೊಳಗೆ ಸೊಗಯಿಸುವ ಮಾ
ವಿನ ವನದೊಳಗಿರಿಸಿ ಮರಳೆ ಪೋಪುದುಮಾಗಳ್] [2] ॥ ೫೨

---

1 ಅಟ್ಟುವುದುಮದಾತನವೃತ್ತಾಂತಮನಱಿದು ಪೇಳೆ ಸುಕೇಶಿನಿ (ಗ)

* ಎಲ್ಲೆಲ್ಲಿತೆಱದಿನೆನ್ನಂ ಮೆಲ್ಲನೆ ಠಕ್ಕಿಕ್ಕಿ ಪೋದ ಧೂರ್ತನುಮಂ ತ । (೫೦)
ದ್ವಲ್ಲಭೆಯುಮನಾದರದಿಂ ಕೊಲ್ಲದೊಡಿವು ಮೊಲೆಗಳಲ್ತು ಯಕ್ಕೆಯಕಾಯ್ಗಳ್ (ಕ)

2 ಎಂದು ಮಸಗಿ ಬರ್ಪಳಂ ಕಂಡು ಕುಂಡಲಮಂಡಿತನಂಜಿ ಪರ್ಣಲಘುವೆಂಬ ವಿದ್ಯೆಯನನಂತಮತಿಕುಮಾರಿಯನಪ್ಪಯಿಸಿ ಪೋಗಲಾವಿದ್ಯೆ ಭೀಮವನಮೆಂಬಾರಣ್ಯದೊಳಿರಿಸಿ ಪೋಪುದುಂ, ಪಾಪಿಯು (ಗ)

ಪಾಪಿಯ ಮುಖದಂತೆ ಕತ್ತಲಿಪ ಕೊಳಂಗಳಂ, ಕೋಪಿಯ ಹೃದಯದಂತುರಿವ ಕಾೞ್ಗಿಚ್ಚಿನಿಂ, ಕೊಂಡೆಯನಂತೆ ಪತ್ತುವ ಚಿಕ್ಕಡಿನಿಂ, ಕಡುಘಾತಕನಂತೆ ನೋಯಿಸುವ ಪೆರ್ನೊಣಂಗಳಂ, ಲಜ್ಜೆಗೆಟ್ಟ ಪೆಣ್ಗಳಂತೆ ಮೇಲ್ವಾಯ್ವ ಪೆರ್ಬುಲಿವಿಂಡಿಂ, [ಧೀರನ ಪೆಂಡಿರಂತೆ ಬಾಯ್ವಿಡುವ ಸೀರ್ನಾಯ್ಗಳಂ] ಬಡಸೂಳೆಯಂತೆ ಬಿಳಿಯದಂತಂಗಳಂ ದೊಪ್ಪವಾನೆಗಳಂ, ಮಹಾಪಾಪಿಯ ಕೋಡಿನಂತೆ ಪಲವುಕೋಡಿಸಿಂದೊಪ್ಪುವ ಸಾರಂಗವಿಂಡಿನಿಂ, ಬಲ್ಲಿದರೊತ್ತಿನಂತೆ ಮೊರ್ಮಲೆವ ಕಾಡೆಮ್ಮೆಗಳಂ, ಜಿನದ್ರೋಹರ ನರಕಗಮನಮಂ ತೋರ್ಪಂತೆ ಗಿರಿಶಿಖರದಿಂ ದಿೞಿವ ಸೀರ ಧಾರೆಗಳಂ, ಕ್ರೂರನ ಮನದಂತ ಪ್ರೊಗೆವ ದೆಸೆಗಳಂ, ಬಿಂಬಿವ್ಮೆಂಟ ಪೇರಡವಿಯುಂ ನೋಡಿ, ೫೩

ಜಳಜಮುಖಿ ನಾಡೆಯುಂ ತ
ಲ್ಲಳದಿಂ ಘೋರೆಂದು ಸುಯ್ದು ತನ್ನಂ ದುಃಖಾ ।
ನಳನಳುರೆ ತನ್ನೊಳಂದಳ್
ಫಲಮಾದುದು ಮುನ್ನಮೆನ್ನ ಮಾಡಿದ ಕರ್ಮಂ ॥ ೫೪

ನಡೆದೊಡೆ ಕಾಲ್ನೊಂದಪುದೆಂ
ದಡಿಗಡಿಗಾರಯ್ದು ತಡೆಯಿಮೆಂಡಾಳಿಯರಂ । [1]
ಜಡಿವಾ ಜನನಿಯುಮೆಯ್ದನು
ಕಡುಮೋಹೋದಯದಿನೀಗಳಲ್ಲಿರ್ದಪರೋ ॥ ೫೫

ಪರಿಚಾರಕಿಯರನೊಪ್ಪಿರೆ
ಕರಮಕ್ಕನ ಮನಮನಱಿದು ಬಸಗೆಯ್ವುದು ಚೆ ।
ಚ್ಚರಮೆಂದು ಪೇೞ್ವ ಮತ್ತೋ
ದರರಾನಿರಲಿತ್ತಲತ್ತಲಾರ್ಗೊಂದಪರೋ ॥ [2] ೫೬

---

[1] ನಡೆಯವೇಡೆಂದೆನ್ನಂ (ಕ)

[2] ಪೇೞ್ವತಾಯುಂ ಕರಪುಯ್ವನುಮೆನ್ನಗಲ್ಕಗೇಂ ಗೆಯ್ದಪರೋ (ಕ)

ತನಯತಾಯ್ತಂದೆ ಸುಹೃ
ಜ್ಜನವಿಷ್ಟಬಂಧುವರ್ಗಮೆಱ್ಱಂ ಪೆಱ್ಱಂ ।
ತನುಜಕಾಂತೆಯರೊಡವು
ಟ್ಟನವರ್ ಬೇೞೆಂಬ ಜಿನಮತಂ ತಪ್ಪುಗುಮೇ ॥ ೫೭

ತಂತ್ರಂ ಬಹುವಿಧಮಪ್ಪುಱು
ಮಂತ್ರಂ ನಾನಾಪ್ರಕಾರದಿಂದಿರ್ಪ ಮಹಾ ।
ಯಂತ್ರಂ ಕೇಡಱಸಿದೊಡವು
ಜಂತ್ರದ ಕೀಲ್ಕಳಚಿದಂತೆ ಕಳಕುಳಮಕ್ಕುಂ ॥ ೫೮

ಕರಿಸಂದೋಹಂಗಳಶ್ವಪ್ರತತಿಗಳದಟಿಂದಿರ್ದ ಬಲ್ಲಾಳ್ಗಳುರ್ವೀ
ಧರಮಂ ಪೊಕ್ಕಿರ್ದ ಬಲ್ಗೋಂಟೆಗಳಕಟಕಟಾ ತಮ್ಮ ರಕ್ಷಿಪ್ಪುವೇಂ ನಿ
ಷ್ಠುರಕೋಪಂ ಕಾಲರಾಜಂ ಮಸಗಿ ಕೊಲೆ ದಿಟಂ ಧರ್ಮವೊಂದಲ್ಲದನ್ಯರ್
ಶರಣಲ್ಲೆಂಬೀ ಜಿನೇಂದ್ರೋದಿತವಚನಮನಾಂ ನಿಶ್ಚಯಂ ಕಂಡೆನೀಗಳ್ ॥ ೫೯

ಕಡುಗೂರ್ಪೆಮ್ಮಿಚ್ಛ ತಾನೆಲ್ಲಿವಳೊವವಿವ ಮೋಹೋದಯಂ ಪೆರ್ಚೆ ಮುದ್ದಿಂ
ನಡಸುತ್ತಿರ್ಪಯ್ಯನೋವೆಲ್ಲಿದನನುನಯದಿಂದೊಂದಿ ಕೂಡಿರ್ಪ ನಂಟ
ರ್ಗಡೆಗೊಂಡಾನಂದದಿಂದಾಡುವ ಪರಿಜನಮಿನ್ನೆಲ್ಲಿದರ್ಭೂಮಿಪಂದೆ
ನ್ನೊಡನಾರುಂ ಬಾರರೀ ಪೇರಡವಿಗೆ ದುರಿತಾಟೋಪದಿಂದಾನೆ ವಂದೆಂ ॥ ೬೦

ದಿವದೊಳ್ ಭೋಗಿಪ್ಪೊಡಂ ಮಹಾನರಕದೊಳ್ ದುಃಖಾಗ್ನಿಯಿಂ ಬೆಯ್ವೊಡಂ
ನವೆಯುತ್ತಿರ್ಪೊಡಮೆನ್ನ ಕೂಡಿ ತಿರಿಕಪ್ರಾಂತಂಗಳೊಳ್ ನಾಡೆ ಸಂ

ಭವವಮಾಗಿರ್ಪೊಡೆ ಮೆತ್ತಮಾ ಮನುಜರೊಳ್ ಪುಟ್ಟಿರ್ಪೊಡಂ ಜೀವನು
ತ್ಸವದಿಂದೊರ್ವನೆ ಬೆಯ್ಗುವೆಂಬ ಜಿನರ ಶ್ರೀವಾಕ್ಯಮಂ ನಂಬಿದೆಂ
೬೧

ಧರೆ ರಾಜ್ಯಂ ರೂಪು ವೀರಂ ಮಹಿಮೆ ತನು ವಿಲಾಸಂ ಬಲಂ ಜೀವಿತತ್ವಂ
ಸಿರಿ ಸೌಭಾಗ್ಯಂ ಧನಂ ಯೌವನಮೆಳವು ಬಳಂ ಸೌಖ್ಯಮೆಂದಿಂತಿವೆಲ್ಲಂ
ಸುರಚಾಪಾಕಾರದಂದಂ ದರಿಯುಮಹಿಜದಂದಂ ಕರಂ ಕಷ್ಟಮೆಂದುಂ
ಸ್ಥಿರಮಲ್ಲೆಂಬೊಂದು ಜೈನೋಕ್ತಿಯ ಮಹಿಮೆಯನಿಂದಾನೆ [1] ಕಣ್ಣಾರೆ
ಕಂಡೆಂ ॥ ೬೨

[ಎಂದು ಧ್ರುವಮಂ ಭಾವಿಸಿ] ೬೩

ಸಿರಿವಂತನಾಗಿಯುಂ ಸಿರಿ
ಪರಿಹರಿಪುದುಮೊರ್ವಂ ಬಡವನಾಗಿಯು ಮತ್ತಾ ।
ದರದಿಂ ಕುಮಾರನಾಗಿಯು
ಮಿರದೊರ್ವಯೆ ವೃದ್ಧನಾಗಿಯುಂ ತಿರಿತರ್ಕುಂ ॥ ೬೪

ಕಡುಸುಖಿಯಾಗಿಯುಮೊರ್ವಯೆ
ಕಡುದುಃಖಿಯುಮಾಗಿ ವೀರನಾಗಿಯು ಮತ್ತಂ ।
ಕಡುಪಂದೆಯಾಗಿಯುಂ ಬಿಡ
ದೊಡನೊಡನಘವಶದಿನಿಂತು ಸುಳಿವಂ ಜೀವಂ ॥ ೬೫

[ಎಂದು ಸಂಸಾರದೊಳಾದ ನಾನಾಪ್ರಕಾರದ ದುಃಖಂಗಳಂ ಭಾವಿಸಿ,] ೬೬

ಬಡಲಿದಱಂದಮಂ ಬಗೆದು ನೋೞ್ಪೊಡೆ ಪೇಲ ಪಣಂಬೆ ಕುತ್ತಮಿ
ರ್ಪೆಡೆ ನರದಾಗರಂ ಮಿದುಳ ಪುತ್ತು ಕಷಾಯದ ರಾಶಿ ಮೂಳೆಯೊಂ

---

1 ಮಹಿಮೆಯನೋವಾರೆ (ಗ).

ದಡಗಿನ ಪುಂಜದಿಂ ತೊವೆನೆಲ್ವಿನಿಮಗ್ಗದ ನೆತ್ತುಱಿಂ ಮನಂ
ಬಿಡೆ ಸಮೆದಿರ್ದ ಪೆರ್ಮನೆ ಶರೀರಮಿದಂ ಪಿಡಿವೆಂದವೊಾವುದೋ [1] ॥ ೬೭

ಎಂದು ಶರೀರದೊಳಾದಶುಚಿತ್ವಮಂ ನೆನೆದು ಪ್ಯೈದೆಸೆಗೆ ನಾಡೆಯುಂ ಪೇಸಿ, ನರಕದೊಳ್ ಜೀವಂಗಳಿಪ್ಪ ದುಃಖಂಗಳನಿಂತೆಂದು ಬಗೆದಳ್ [2] ॥ ೬೮

ಕಿಱುಕಿಱಿದಾಗಿರೆ ಮೆಯ್ಯಂ
ಕೊಱಕೊಱದುಂ ಪುಳ್ಗಯಟ್ಟು ಕದಪಂ ಕೈಯಿಂ ।
ದಿಱದಿಱದು ನಿಷ್ಠುರರ್ವರ್
ಯ್ಮಱುಗುವಿನಂ ಪಿಡಿದು ಬಡಿದು ಕಿಚ್ಚಿನೊಳಿಡುವರ್ ॥ ೬೯

ಗರಗಸದಿಂದಂ ಮಿಗೆ ನಿ
ಷ್ಕರುಣಿಗಳೊಡಸಿಕ್ಕಿ ನೆತ್ತಿಯಿಂದಂ ಪಾದಂ ।
ಬರೆಗಂ ಸೀಳ್ದು ಭಾಗಮ
ನುರಿವೆಣ್ಣೆಯೊಳಿಕ್ಕಿ ತೆಗೆಸುವರ್ಮಱುಗುವಿನಂ ॥ ೭೦

ಉಪ್ಪಿಲ್ಲಣಿಂಗು ಸಾಸವೆ
ತಪ್ಪಿಲ್ಲದ ಮೆಣಸು ಸುಂಟಿ ಪೊಸಸುಣ್ಣಮಿವಂ ।
ಚಪ್ಪರಿಸಿ ಬಡಿದು ಮೆಯ್ಯಂ
ಸೊಪ್ಪಾಗಿರೆ ಮೋದಿ ಪೂಸುವರ್ ನಿರ್ದಯೆಯಿಂ ॥ ೭೧

ನಾರೆತ್ತುವ ತೆಱದಿಂ ಕೈ
ಯಾರೆ ಕುಕಿಲ್ದಾರ್ದು ಪೊಯ್ದು ಮೆಯ್ಗಳ ತೊವಲಂ ।
ಕ್ರೂರತನದಿಂದಮೆತ್ತುವೆ
ರೋರಂತೊಱಲುವಿನಮಂಜೆ ಬಾಯ್ವಿಡುವಿನೆಗಂ ॥ ೭೨

---

1 ಶುಚಿಯೆಂದು ನಂಬುವುದೋ (ಗ.)

2 ಎಂದು ಸಂಸಾರವಿಚಿತ್ರತೆಗಳಂ ಭಾವಿಸಿ ನರಕದೊಳಾದ ಮಹಾದುಃಖಗಳಂ ಇಂತೆಂದು ಚಿಂತಿಸಿದಳ್ (ಗ.)

ಮತ್ತಂ [ಬಾರಿಬಾರಿಗೆ ಗಾಣದೊಳಟ್ಟು ಪಿೞಿದುಂ, ನೋಡೆ ನೋಡೆ ಗಾಣದೊಳಕ್ಕಿ ತೆಗೆದುಂ, ಪುಟ್ಯಲಿಡೆ ಸುಡವೊತ್ತಿಸಿಯುಂ, ಸಂದುಸಂದುಗಳೊಳ್ ಸೂಜಿಯಂ ಪೆಟ್ಟಿಯುಂ, ಬೆತಲೊಳುಳಗಳಂ ಸೇರಿಸಿಯುಂ, ನಾಲಗೆಯಂ ಪೆಡತಲೆಯೊಳುರ್ಚಿಯುಂ, ಮೆಯ್ಯಂ ಕಿಱಿಕಿಱಿದಾಗಿ ಕತ್ತರಿಸಿ ಬಾಯೊಳ್ತುಱುಂಕಿಯುಂ, ದೆಸೆದೆಸೆಗೆ ಸೀಳ್ದೀಡಾಡಿಯುಂ, ಬಾಯೊಳಗೆ ದಸಿಯಂ ಪೆಟ್ಟಿಯುಂ, ಪೆಡಗಯ್ಯಂ ಕಟ್ಟಿ ಕಿಚ್ಚಿನೊಳ್ಪುರಳ್ಚಿಯುಂ, ಬಸಿಱನಿಬ್ಬಗಿಮಾಡಿ ಕುದಿದೆಣ್ಣೆಯಂ ಪೊಯ್ದುಂ, ಮಿಡಿಯೆರಡುಮಂ ಕುಂಟಾಗೆ ಕೊಯ್ದುಂ, ಬಳ್ಱುವಿನಂ ಗಂಟಲಂ ಮುಱಿದುಂ, ಪೆಳಱುವಿನಂ ಜಡಿದುಂ, ಬಾಳೊಳ್ಪೊಯ್ದುಂ, ಪುಣ್ಣೊಳ್ ಲೋಹರಸಮಂ ಪೊಯ್ದುಂ, ಕಣ್ಣೊಳ್ ಕೆಂಡಮನಿಟ್ಟುಂ, ಮೊಗುಂಬಾಯುಮುಸಿರ್ಮಿಡುಕಗುಡದೆ ಪಿಡಿದುಂ, ಬಾಚಿಯಿಂ ತಡಂಗಡಿದುಂ, ಕೊಂತದಿಂ ತಗುಳ್ದಿಱಿದುಂ, ಖಡ್ಗದಿಂ ಪೂಣಿಸಿ ಪೊಯ್ದುಂ, ಬೆಟ್ಟೀಱುಗಳಂ ಪರಿತಂದಿಟ್ಟುಂ, ಪರಸಿನೊಳೆರ್ದೆಯಂ ಸೀಳ್ದುಂ, ಗಜಂಗಳಿಂದಿಕ್ಕಿ ಮೆಟ್ಟಿಸಿಯುಂ, ಸೈಱಿಸಲಾಱದೆ, ಪುಲಿವಿಂಡುಗಳಂ ಬಿಟ್ಟುಂ, ಸೀನ್ನಾಯ್ಗಳಂ ದಂಡಿಸಿಯುಂ, ಪೆರ್ನೊಣಂಗಳಂ ತಗಳ್ದೂರಿಸಿಯುಂ, ಕಾವಲಿಯೊಳಕ್ಕಿ ವಾಱಿಸಿಯುಂ, ಇಂತನೇಕವಿಧದಂಡನೆಗಳಂ ದಂಡಿಸಿಯುಂ, ಸೈಱಿಸಲಾಱದೆ] ಅರಿಸಿನದಂತೆ ಮೆಯ್ವತ್ತಿ ಪಿಣಿವರ್, ಕಾಱಿಯಂತೆ ಕೊರಲಂ ಪತ್ತಿ ಕೊಯ್ವರ್, ಗರಗಸದಂತೆ ಮೆಯ್ಯಂ ಕೊಱೆವರ್, ಪಣಿಗೆಯಂತೆ ತಲೆಯಂ ಪತ್ತಿ ತೆಗೆವರ್, ಮೊಲೆಯಂ ತೆರ್ದೆಯಂ ಪತ್ತಿ ನೆತ್ತಱಂ ಕುಡಿವರ್, ಉಗುರಂತೆ ಬೆರಲಂ ಪತ್ತಿ ಕೀಳ್ವರ್, ನಿಱಿಯಂತೆ ತೊಡೆಯಂ ಪತ್ತಿಯುಡಿವರ್, ಪೊಱೆಯಂತೆ ಮೊಣಕಾಲಂ ಪತ್ತಿ ಮುಱಿವರ್, ಸೀರೆಯಂತೆ ನಡುವಂ ಪತ್ತಿ ನೆಲಕ್ಕಿಕ್ಕುವರ್, ಬಾಸೆಯಂತೆ ಬಸಿಱಂ ಪತ್ತಿ ಕರುಳನುಗಿವರ್, ಕೂಸಿನಂತೆ ಮೊಲೆಯಂ ಪತ್ತಿ ತಿಂಬರ್, ತಿಲಕದಂತ ನೊಸಲಂ ಪತ್ತಿ ಕಡಿವರ್, ಓಲೆಯಂತೆ ಕಿವಿಯಂ ಪತ್ತಿ ಪಱಿವರ್, ಕೇಶದಂತೆ ಬೆನ್ನಂ ಪತ್ತಿ ಬಾರನುರ್ಚುವರ್, ಮಲ್ಲರಂತೆ ಬಱಿಯಂ ಪತ್ತಿ ಕಳಲೆಗಟ್ಟುವರ್, ಪೇನಂತೆ ತಲೆಯಂ ಪತ್ತಿ ಪಲ್ಕಡಿವರ್, ತೇರ

ಣದಂತೆ ತಳನುಂ ಪತ್ತಿ ಕತ್ತರಿಸುವರ್, ಕಂಕಣದಂತೆ ಮುಂಗೈಯುಂ ಪತ್ತಿ ಕೊಱೆವರ್, ಕಾಡಿಗೆಯಂತೆ ಕಣ್ಣಂ ಪತ್ತಿ ಬೆರಲೊಳೞಿವರ್, ಕಂಪಿನಂತೆ ಮೂಗಂ ಪತ್ತಿ ಕೊಯ್ವರ್, ತಂಬುಲದಂತೆ ಪಲ್ಲಂ ಪತ್ತಿ ತಿವಿವರ್, ಸವಿಯಂತೆ ನಾಲಗೆಯುಂ ಪತ್ತಿ ಮೆಲ್ವರ್, ಕೆರ್ಪಿನಂತೆ ಕಾಲಂಪತ್ತಿ ಕಡಿವರ್ ಅಂದುಗೆಯಂತೆ ಮೇಗಾಲಂ ಪತ್ತಿ ಸೊಪ್ಪುಗುಟ್ಟುವರ್, ಕುಪ್ಪಸದಂತೆ ಬೆನ್ನಂ ಪತ್ತಿ ಕೆತ್ತುವರ್, ಸಿಪ್ಪಿಗನಂತೆ ಪೊಲಿವರ್, ಕಮ್ಮಾಱನಂತೆ ಕಾಸಿ ಬಡಿವರ್, ಮೇದನಂತೆ ಸೀಳ್ವರ್, ಬಡಗಿಯಂತೆ ಕೆತ್ತುವರ್, ಅಗಸನಂತೆ ಬೀಸಿ ಪೊಯ್ವರ್, ಒಕ್ಕಲಿಗನಂತೆ ಮೆಟ್ಟಿ ಪರಗುವರ್, ಅಂಕದಂತೆ ಕುತ್ತುವರ್, ಮಲ್ಲರಂತೆ ಪೋೞುವರ್, ಲೇಖಕನಂತೆ ಕೀಸುವರ್, ಮಾದೆಗನಂತೆ ಬಾರೆತ್ತುವರ್, ನಾಯಂತೆ ಕಚ್ಚಿ ತೆಗೆವರ್, ಗೂಳಿಯಂತೆ ತಗುೞ್ದುಱುವರ್, ಗಜದಂತಿಕ್ಕಿ ಮೆಟ್ಟುವರ್, ರಕ್ಕಸರಂತಡಸಿ ನುಂಗುವರ್, ಕಾಳಗದಂತೆ ತಳ್ತುಱುವರ್, ಬಿರುದಂಕದಂತೆ ಪೋಗದೆ ಕಾದುವರ್, ಜಿಗುಳೆಯಂತೆ ನೆತ್ತರಂ ಕುಡಿವರ್, ಮಾಂಸಾಹಾರಿಯಂತಡಗಂ ತಿಂಬರ್, ನಱಿಯಂತೆ ಕರುಳಂ ತೆಗೆವರ್, ತಗುಣಿಯಂತೆ ಮೆಯ್ಯಂ ತಿಂಬರ್, ಪುಲಿಯಂತೆ ಗಂಟಲಂ ತಿಂಬರ್, ಜಂತಿನಂತೆ ಬಸಿಱಂ ತಿಂಬರ್, ಪಂದಿಯಂ ತೆತ್ತುವರ್, ಗುಲ್ಮದಂತೊತ್ತುವರ್, ಪೋಱಿಕಾಱನಂತೆ ಬಿಗಿದುಕಟ್ಟುವರ್ ಗುಡಿಯನೆತ್ತುವರಂತೆ ಗೂಂಟಮಂ ಪೆಟ್ಟುವರ್, ಪರ್ದಿನಂತೆ ಕೀೞ್ವರ್, ತೇೞಿನಂತೆ ನೋಯಿಸುವರ್, ಕೋೞಿಯಂತೆ ಕೆದಕುವರ್, ಸಿಡಿಲಂತೆ ಪೊಡೆವರಂತುಮಲ್ಲದೆ, ೭೩

ಅಲ್ಲಲ್ಲಿಗೆ ತೇೞೊಳಗ
ಳಲ್ಲಲ್ಲಿಗೆ ಕೂರಿತಪ್ಪ ಕಂಟಕತತಿ ಮ |
ತ್ತಲ್ಲಲ್ಲಿಗೆ ತೀವ್ರಾಯುಧ
ಮಲ್ಲಲ್ಲಿಗೆ ಪರಿಯುತಿರ್ಪಱುಂಪೆಯ ತೊಂಡಲ್ ‖ ೭೪

ಅಲ್ಲಲ್ಲಿಗೆ ಕಾೞ್ಗಿಚ್ಚುಗ
ಳಲ್ಲಲ್ಲಿಗೆ ಪತ್ತಿ ಕಡಿವ ತುಂಬಿಗಳುಂ ಮ |

ತ್ತಲ್ಲಲ್ಲಿಗೆ ಮುಳ್ವಟ್ಟೆಗ
ಳಲ್ಲಲ್ಲಿಗೆ ಸುತ್ತಿ ಮುತ್ತಿ ತಿಂಬ ಕಡಂಪುೞು

ಅಲ್ಲಲ್ಲಿಗೆ ಸುಣ್ಣದ ಪೊನ
ಲಲ್ಲಲ್ಲಿಗೆ ರಾಸಿಗೆಯ್ವ ಕೆಂಡಂಗಳ್ಮ |
ತ್ತಲ್ಲಲ್ಲಿಗೆ ತೀವ್ರಾಯುಧ
ಮಲ್ಲಲ್ಲಿಗೆ ಪರಿವ ಲೋಹ ನರಕದೊಳೆಲ್ಲಂ ॥ ೭೬

ಮತ್ತಂ ಪಾತಕಜೀವಂಗಳ್ ಎಳ್ಳನಂತೆ ಗಾಣಕ್ಕೆವಂದು, ಕಳ್ಳರಂತೆ ಶೂಲಕ್ಕೆವಂದು, ಪುಳ್ಳಿಯಂತೆ ಕಿಚ್ಚಿಂಗೆವಂದು, ಕರ್ಬೊನ್ನದಂತೆ ಇರ್ಕುೞಿಗೆವಂದು, ಕಬ್ಬಿನಂತೆ ಕಡಿಹಕ್ಕೆವಂದು, ದ್ರೋಹಿಯಂತೆ ದಂಡನೆಗೆವಂದು, ಲೋಭಿಯಂತೆ ನಿಗ್ರಹಕ್ಕೆವಂದು, ಕುಸುಱಿಯಂತೆ ಕಟ್ಟಿಂಗೆವಂದು, ಪುಲ್ಲಂತೆ ಸೂಡಿಂಗೆವಂದು, ಕುಂಬಾರನ ಮಣ್ಣನಂತೆ ಮಿದಿಹಕ್ಕೆವಂದು, ಧಾನ್ಯದಂತೆ ಹಗೇವಕ್ಕೆವಂದು, ನಾರಂತೆ ಹೊಸೆಹಕ್ಕೆವಂದು, ನೊಲನಂತೆ ಬಡಿಹಕ್ಕೆವಂದು, ಮುಡಿಯಂತೆ ಮುರಿಹಕ್ಕೆವಂದು, ಎಲೆಯಂತರಿಹಕ್ಕೆವಂದು, ತಪ್ತಮಾಂಸದಂತೆ ಕುದಿವೆಣ್ಣೆಗೆವಂದು, ಸತ್ತರ ಮನೆಯಂತೆ ಅೞಲಿಂಗೆವಂದು, ಪರ್ದಿನಂತೆ ಕಂಡಕ್ಕೆವಂದು, ಮಡಿಸೀರೆಯಂತೆ ಗಟ್ಟಣೆಗೆವಂದು, ಮೈಲಗೆಯಂತೊಗೆಹಕ್ಕೆವಂದು, ಹಕ್ಕಲಂತೆ ಬಡಿಹಕ್ಕೆವಂದು, ಮುಯ್ಯಿಲ್ಲದೊಕ್ಕಲಂತೆ ಬಡುಗುಲಿಗೆವಂದು, ಬೇಡನಂತೀಡಿಂಗೆವಂದು, [ಬಿಲ್ಗಾಱನಂತೆ ಬೆಟ್ಟೇಱಿಂಗೆವಂದು] ತಿಱನೆ ತಿರಿವುವಿಂತು ೭೭

[ಕೆಲಕೆಲವು ನಾಯ್ಗಳುರ್ಕಿಂ
ತೊಲಗದೆ ಪಾಯ್ದುಗಿದು ತೆಗೆದು ತಿನೆಯುಂ ಮತ್ತಂ |
ಕೆಲಕೆಲವು ನಾಯ್ಗಳೂರ್ವೆಯು
ಮಲೆದಿಪ್ಪನೆ ಪೊಯ್ದು ಕಚ್ಚಿ ತಿನೆ ಪೆರ್ಗರುಳಂ ॥ ೭೮

ಪಿರಿದಪ್ಪರೆಯಂ ಕೊರಲೊಳ್
ಭರದಿಂದಂ ಕಟ್ಟಿ ಮೆಟ್ಟಿ ಕೊಳ್ಗಸರೊಳ್ ನಿ |

ಷ್ಠರದಿಕ್ಕಿ ಮೆಟ್ಟಿ ಪುೞುಗಳ್
ಕರಮೆಲ್ಲೆಡೆ ಪತ್ತಿ ಬಗಿದು ತಿನೆ ಮೆಯ್ವ್ಯಥೆಗಂ ॥ ೭೯

ಪೊಱಮೆಟ್ಟು ಸುೞಿಯೆ ಪಕ್ಕಿಗ
ಳೞಿಯಟ್ಟಿ ಮಿಗೆ ತಗುಳ್ದು ವಜ್ರತುಂಡದಿನೋರಂ ।
ತಿಱಿಯೆ ಬಿಡದಲ್ಲಿಗಲ್ಲಿಗೆ
ಮೆಱುಗುತ್ತುಂ ಬೆಂದು ನೊಂದು ಪೆಳಱುತ್ತಿರ್ಪರ್ ॥] ೮೦

ಮತ್ತಂ ಗ್ರಹದಂತೆ ಪುಯ್ಯಲಿಡುವರ್, ತುಂಬಿಯಂತಾಱುತಿಗೊಳ್ವರ್, ಕೊಳ್ಪಟ್ಟರಂತೊಳಱುವರ್, ನ್ಯಾಯಮಿಲ್ಲದನೂರಂತೆ ಮೊಱೆಯಿಡುವರ್, ತುಳುನಾಡ ಸತ್ತಮನೆಯಂತೆ ಪೞಿಯಿಸುವರ್, ಕುತ್ತಂಬಡೆದರಂತೆ ಬೀೞ್ವರ್, ಬಡಗೊಂದೆಯಂತೆ ದಡದಡಿಸುವರ್, ಪಾವಿನಂತೆ ಪೊರಳ್ವರ್, ನೊಂದ ಕರಡಿಯಂತೆ ಮೆಲ್ವಾಯ್ವರ್, ಪುಣ್ಸಡಿಸಿಕೊಳ್ವರಂತೆ ಮಿಡುಮಿಡುಮಿಡುಕುವರ್, ಬಡಿವೆತ್ತರಂತೆ ಸುಯ್ವರ್, ಕೆಟ್ಟೊಕ್ಕಲಂತೆ ನಿಲಲಾಱದೆ ನಡುಗುವರ್, [1]ಕಂಪವಾತರೋಗಿಗಳಂತೆ ಕಂಪಿಸುವರ್, ತೊನ್ನರಂತೆ ರಸಿಗೆಸುರಿವರ್, ಪೆಱವರಂತೇೞಲಾಱೆವೆಂಬರ್, ಇಂತು ನರಕದೊಳಾವೆಡೆಯೊಳ್ ನೋೞ್ಪೊಡಂ, ೮೧

ಎಂದವಧಿತೀರ್ಗುಮದುತೀ
ರ್ವಂದುವರಂ ಮೊಣದೆಲ್ಲಿಯುಂ ಪಾಪಿಗಳಂ ।
ಕುಂದದೆ ನಾರಕರೀವಿಧ
ದಿಂದಂ ಬಾಧಿಸುತುಮಿರ್ಪರಿರುಳುಂ ಪಗಲುಂ ॥ ೮೨

ತೊಱೆಯೆಂದು ಸಾರೆ ಮಾಯದ
ತೊಱೆಗಳ್ಕಾಯ್ದೆಣ್ಣೆಯಾಗಿ ಪತ್ತಿ ಸುಡಲ್ಕೆ ।

---

1 ಪಾದರಗನಂತೆ ಬೆಚ್ಚುವರ್, ಕಣ್ಣು ಬೇನೆಯುಳ್ಳವರಂತೆ ಕೂಗಿಡುವರ್, ರಾಳಿಬರ್ಪೂರಿನಂತೆ ಕಳವಳಿಸುವರ್, ಕಳ್ಳಂ ಪೊಕ್ಕ ಮನೆಯಂತೆ ತಲ್ಲಣಿಸುವರ್, ಕಾಳಗದೊಳ್ ಕೆಟ್ಟರಂತ ಕಾಲ್ ನಡುಗುವರ್, ಮುದುಕನಂತೆ ಕೈನಡುಗುವರ್, ಕಂಪವಾತವುಳ್ಳರಂತ ಮೈನಡುಗುವರ್, ತೊನ್ನರಂತೆ (ಕ)

ಯ್ಯೀಱಿಯದೆ ಕರ್ಬುನದಂತಿರೆ
ನೆಱೆ ಬೆಯ್ಯುತ್ತಿಂತು ಮಱುಗುವರ್ ನಲವುದಿನಂ ॥ ೮೩

ಬನವೆಂದು ಪೊರ್ದೆ ಮಾಯದ
ವನವೆಂತುಂ ಪೋಗಲೀಯದಂಬಿನ ಸರಿಯಂ ।
ಘನವಾಗಿ ಸುರಿಯೆ ದುಃಖದಿ
ನನಿತಾನುಂಕಾಲಮಿರ್ಪರೋವೋಯೆನುತುಂ ॥ ೮೪

ಮರನೆಂದು ಪೋಗಿ ಸಾರ್ವುದು
ಮುರಿಗಳ ನಾಲಗೆಗಳಂತೆ ಮರದೆಲೆಯೆಲ್ಲಂ ।
ಪಿರಿದಪ್ಪ ತೇಱ ರೂಪಿಂ
ದರೆಯುಟ್ಟ ಮುಟ್ಟ ಕಱವುವು ಮುಳಿಸಿಂ ॥ ೮೫

ಮತ್ತಂ ಇಲಿಯು ಬೆಕ್ಕಿನ, ಪುಲಿಯು ಪುಲ್ಲೆಯ, ತಳಾಱನ ಕಳ್ಳನ, ನವಿಲ ಪಾವಿನ, ಸಿಂಗದಾನೆಯ, ನಾಯ ಮೊಲದ, ಕುದುರೆಯ ಕೋಣನ, (ಮುಳಿಸಿಂ) ನಾಯ್ ನಾಯೊಳ್, ಕೋಣಂ ಕೋಣನೊಳ್ ಕೋೞಿ ಕೋೞಿಯೊಳ್, ಆನೆಯಾನೆಯೊಳ್, ಮೂರ್ಖಂ ಮೂರ್ಖ ನೊಳ್, ತಗರ್ ತಗರೊಳ್, ಮಲ್ಲರ್ ಮಲ್ಲರೊಳ್, ತಾಗುವಂತೆ ಕಿೞ್ತು ಕಿಡಿಯುವಾಗಿ [ತಂತಮ್ಮೊಳ್ ತಾಗಿ ದುಃಖಂಬಡುವರೆಂದು ನರಕದೊ ಳಾದ ಮಹಾದುಃಖಮಂ ಭಾವಿಸಿ], ೮೬

ಆ ದುಃಖದೆಡೆಗೆ ಭಾವಿಪೊ
ಡೀದುಃಖಂ ಪಿರಿದೆ ಕರ್ಮವಶದಿಂದಾಸಿಂ ।
ತಾದೆಂ ಕೇಳನಗಿಂ ಜಿನ
ಪಾದಮೆ ಶರಣೆಂದು ಕಣ್ಣ ಸಿಱಯಿಸುತ್ತುಂ ॥ ೮೭

[ಕರಿ ಬನಮಂ ಮದಾಳಿ ವನಜಾಕರಮಂ ಶಿಶು ತಾಯನೊಲ್ದು ಗಂ ಡರನಬಲಾಜನಂ ನೆನೆವ ಮಾರ್ಗದಿನಿಂದ್ರನರೇಂದ್ರವಂದ್ಯನಂ ಪರಮಜಿನೇಂದ್ರನಂ ನೆನೆಯುತುಂ ಜಿನಪೂಜೆಯನಾಗಳುಂ ಸವಿ ಸ್ವರದೊಳ ಕೇಳಿ ಭಾವಿಸುತೆ ಮಾಡುತ ಜೈನಗುಣಸ್ತವಂಗಳಂ॥] ೮೮

ಅಂತಿರ್ಪನ್ನೆಗಂ, ೮೯

ಕರಿಘಟೆಯುಂ ಮೃಗೇಂದ್ರತತಿಯುಂ ಪುಲಿವಿಂಡುಗಳುಂ ಮೃಗಂಗಳುಂ
ಶರಭಸಮೂಹಮುಂ ಹರಿವಿರೋಧಿಗಳುಂ ಫಣಿಯುಂ ನವಿಲ್ಗಳುಂ
ಪುರುಡಿಪ ಕಾಗೆಯುಂ ನಲಿವ ಕೋಗಿಲೆಯುಂ ತೊಱೆದೆಯ್ದೆ ವೈರಮಂ
ನೆರೆದೊಡಸಿರ್ದವೆಂಬುರುಹಲೋಚನೆಯಿರ್ದ ವನಾಂತರಾಳದೊಳ್ ॥೯೦

[ಅಂತು, ಪಗೆಕೆಳೆಯಿಲ್ಲದೆಲ್ಲಾ ಮೃಗಂಗಳುಂ ಮಿತ್ರತ್ವದೊಳಿರೆ, ವನದೊಳ್ ಶಾಂತಿರಸಮೆಸೆಯೆ, ಕುಮಾರಿಯಿರ್ಪುದುಂ, ಶಂಖಪುರದೊಳೊರ್ವ ವನಚರನುಂ ಬೇಡಿತಿಯುಂ, ೯೧

ಪೊಲಕಾಗಿ ಬರುತುಮೊರ್ವಳ್
ಲಲಿತಾಂಗಿಯನೊರ್ವ ಕಂಡು ದೇವತೆ ನಮ್ಮಂ ।
ತೊಲಗಿದೊಡೆ ಪಿಡಿದು ಕೊಲ್ಗುಂ
ದೆಲೆ ಮಿಡುಕದೆ ನಿಂದು ಪೊರ್ದಿ ಬಂದಾದರದಿಂ ॥ ೯೨

ತಮ್ಮ ಪೊತ್ತುತಂದಿಪ್ಪ ಪೂವುಮಂ ಬೇಳದ ಪಣ್ಣುಮಂ ಕನ್ನೆಯ ಮುಂದೆ ಪೊಯ್ದು ಪೊಡೆಮಟ್ಟು ಪೋಗಿ ತಮ್ಮಾಳ್ದನಪ್ಪ ಬೇಡರಸಂಗೆ ದೇವತೆ ಬಂದು ಭೀಮವನದೊಳಿರ್ದಳಲ್ಲಿಗೆ ಪೋಗಿ ನಿಮ್ಮ ಬೇಟ್ಪ ವರಮಂ ಬೇಡಿಕೊಳ್ಳಿಮೆಂದು ಬಿನ್ನಪಂಗೆಯ್ವುದುಂ, ೯೩

ಬೇಡರಸಂ ಕೇಳ್ದಾಗಳ
ನೀಡಿಲ್ಲದೆ ತದ್ವನಕ್ಕೆ ಬಂದಾ ಸತಿಯುಂ ।
ನೋಡಿಯೆಮೆಯಿಕ್ಕುವುದಱಿಂ
ನಾಡೆಯುಮಿಾವನಿತೆ ದೇವಕನ್ನಿಕೆಯಲ್ಲಂ ॥ ೯೪

ಎಂದೇೞಿಯುಮಿೞಿಯೆಯುಂ ನೋಡಿ ತಾನಾಕೆಗಾಸಕ್ತನಾಗಿ ಕನ್ನೆಯನರಮನೆಗೊಡಗೊಂಡು ಪೋಗಿ ತನ್ನ ಮಹಿಮೆಯುಂ ಸಿರಿಯುಮಂ ತೋಱಿ ಮೆಲ್ಲನೆ,][1] ೯೫

---

1 ಅಂತುಪಶಾಂತರಸಮೆಸೆಯೆ ಕನ್ನೆಯಿರ್ಪುದುಂ ಭೀಮನೆಂಬ ಕಿರಾತನಾಯಕಂ ಕಂಡು ತನ್ನ ಪುರಕ್ಕೆ ಕೊಂಡುಪೋಗಿ ತನ್ನ ಮಹಿಮೆಯುಂತೋಱಿ(ಗ)

ನಿನ್ನಂತೆ ನೋಂತ ಸತಿಯಾ
ರೆನ್ನಂತಪ್ಪ ಪ್ರತಾಪಿಯುಂ ಪಡೆದೈ ರೊ ।
ಪ್ರೋನ್ನತಿಯಿನೆನುತೆ ಮಾಣದೆ
ತನ್ನಲ್ಲಿಗೆ ಕರೆವುದುಂ ತಳೋದರಿ ಮನದೊಳ್ ॥ ೯೬

ಬೞಿಗಾಗಿ ಚಿಂತೆಯಿಂ ಬಾ
ಯ್ಬಿಱಿಱಿಬತ್ತುತ್ತುಮೋವ್ವೊ ಕೆಯ್ಕೊಂಡೀ ವ್ರತಮಂ ।
ತೊಱೆವುದಱಿಂ ಸಾವುದು ಕರ
ಮುಱುವುದು ಚಿಃ ಕಷ್ಟಮೆಂದು ನಿಶ್ಚಲಮತಿಯಿಂ ॥ ೯೭

ಮೋನಂಗೊಂಡು [ಪಂಚನಮಸ್ಕಾರಮಂ ಜಪಿಸುತ್ತುಮುಸಿರದಿರ್ಪುದುಂ, ಕಿರಾತರಾಜನೆನಿತಾನುಂ ತೆಱದಿಂದೊಡಂಬಡಿಸಲಾಱದೆ ಮುನಿದು ಕಿಡಿಕಿಡಿಯಾಗಿ ಮೀಸೆಯುಂ ಕಡಿದು,][1] ೯೮

ಕೂಸೆಂಬುದು ತಪ್ಪದು ನಿ
ನ್ನಾಸೆಯೊಳಾಂ ನಿನಗೆ ಸಕಲರಾಜ್ಯಶ್ರೀಯುಂ ।
ಲೇಸಾಗಿ ಮಾಡದಿರ್ದೊಡೆ
ದೇಸಿಗತನದಿಂದೆ ನಮೆವುದೊಂದನೆ ಬಗೆವಾ ॥ ೯೯

ಎಂದು ಮಸಗಿ ಬಱಿದೊಮ್ಮೆಯೆ ನಿನಗೆ ಮುನಿವೆನಲ್ಲಿಂದಿನಿರುಳನೊಳಗೆ ನಿನ್ನ ಮನಮಂ ಸ್ಥಿರಮಾಡು, ಮಾಡದೊಱಂಟುತನಮಂ ಮಾಡಿದೆಯಪ್ಪೊಡೆ ನಿನಗೆ ತಕ್ಕ ವಿಧಿಯುಂ ನಾಳೆ ಮಾೞ್ಪೆನೆಂದು ಬಲ್ಗಾಪಂ ಪೇೞ್ದು ಪೋದನನ್ನೆಗಮಿತ್ತಲ್ ಕುಮಾರಿ,[2] ೧೦೦

ಪಿಡಿದೀ ವ್ರತಮಂ ನಾಂ ಸಾ
ವೊಡೆ ಸಾವೆಂ ಬಿಡುವೆನಲ್ಲಮೆಂದೊಡೆ ಮೂರ್ಖಂ ।

---

1 ಇರ್ದೆಳೆರ್ಪುದುಂ (ಗ)

2 ಎಂದು ಪಲವುದಿವಸಮೊಡಂಬಡಿಸಲಾಱದೆ ಕಿನಿಸಿ ಮೀಸೆಯುಂ ಕಡಿದು ನಾಳೆ ನಿನ್ನಂ ದೆಸೆವಲಿಗೆಯ್ವಲ್ಲದೆ ಮಾಣೆನೆಂದು ಬಲ್ಗಾಪಂ ಪೇೞ್ದು ಪೋಪುದುಂ (ಗ)

ಮಡಿಪದ ಮಾಣಂ ಬಲ್ಪಿಂ
ಪಿಡಿವೆಂ ಜಿನಪದಮನಿದುವೆ ಕಜ್ಜಂ ಪೆಱತೇಂ ॥ ೧೦೧

ಎಂದಾಳೋಚಿಸಿ ಕಳೆಯಬಾರದುಪಸರ್ಗಮಿದು ಪಿಂಗುವಿನಮಾಹಾರಶರೀರನಿವೃತ್ತಿಯೆಂದು ಪರಿಚ್ಛೇದಿಸಿರ್ದುದಂ,[1] ಯಕ್ಷಿಗಾಸನಕಂಪವಾಗೆ ಬಂದು ಕನ್ನೆಯ ಮನಮಂ ನೋಡಲೆಂದು ಕಿರಾತರಾಜನ ರೂಪುಗೊಂಡು, ೧೦೨

[ವನರುಹಮುಖಿಯಲ್ಲಿಗೆ ತೊ
ಟ್ಟನೆ ಪಿರಿದಪ್ಪೊಂದುಲೀಲೆಯಿಂ ಬಂದೊಡನಿ ।
ರ್ದನಿಬರುಮೊಡನೆಸೆದಿರೆ ತ
ನ್ನನೆ ಪೊಗಳುತ್ತಿರ್ಪನಂ ಕಿರಾತಂ ನುಡಿದಂ ॥] ೧೦೩

ರತಿ ರಂಭೆ ತಿಲೋತ್ತಮೆ ಭಾ
ರತಿ ಯೆಂಬಿವರ ದೊರೆಗೆ ಮಿಗಿಲೆನಿಸಿದ ಪು ।
ತ್ಸತಿಯರ್ಪಲರಿರ್ದಪರು
ನ್ನತಿಯಿಂದಂ ನಂಬೆಯಪ್ಪೊಡಂ ನೀನಿವರಂ ॥ ೧೦೪

[2] [ನೋಡೆಂದು ತನ್ನ ಕೃತಕದಿಂ ಪಡೆದೊಳ್ಪಂಡಿರಂ ತೋಱಿ ಮತ್ತಂ] ೧೦೫

ರೂಪಿಲ್ಲನಗಿನ್ನೆಂಬೊಡೆ
ರೂಪಿಂ ಪ್ರತ್ಯಕ್ಷಕಾಮದೇವನೆ ನಾನಿಂ ।
ಚಾಪಳನಯನೆ ಮನೋಹರ
ರೂಪೆ ಮನೋಮುದದಿನೆನ್ನ ರೂಪಂ ನೋಡಾ ॥ ೧೦೬

---

1 ಕೈಸಿಟ್ಟುಕೊಂಡಿರ್ದುದಂ (ಗ)

2 ಆರೈದು ನೋಱಿಪ್ಪೆಯಪ್ಪೊಡೆ ವಾರಿಜಮುಖಿ ಖಚರಪತಿಸುಸುರರಾಜನ ಭಂ । ಡಾರಕ್ಕಮೆನ್ನ ಭಂಡಾರಕ್ಕಂ ಬಿಱಿದಿಂತು ನಂಬೆಯಪ್ಪೊಡೆ ನೋಡಾ ॥ (ಗ)

[ಎಂದು ತನ್ನ ವಿಗುರ್ವಿಸಿದ ಕಾಮರೂಪಂ ತೋಱಿ, ಸಿರಿ ಬರೆ ಮೊಣಕಾಲನೊಡ್ಡಿದರೆಂಬಂತಲೆ ಮರುಳ ಭಾವಿಪ್ಪೊಡೆನ್ನೊಳಾವ][1] ಕೊಱತೆಯಾಗಿರ್ದುದಂತಿಂತೆನ್ನದೆನಗೊಡಂಬಡುವುದೆಂಬುದುಮನಂತಮತಿ ತನ್ನೊಳ್, ೧೦೭

ಜಿನಪಾದಭಕ್ತಿಯಿಂ ನೆ
ಟ್ಟನೆ ಮೋಕ್ಷಶ್ರೀಲತಾಂಗಿ ದೊರೆಕೊಳ್ಗನೆ ಮ |
ತ್ತಿನ ಸಿರಿಯುಂ ಗಿರಿಯುಂ ನೆ
ಟ್ಟನೆ ಸುಖಮುಂ ಗಿಖಮುಮಪ್ಪುದಾವುದು ಗಹನಂ || ೧೦೮

ಎಂದು ಶುಭಭಾವನೆಯಿಂದವೞ ಮೇಲೆಳ್ಳನಿತುಮಪ್ಪ ಮನಮಿಲ್ಲದೆ ಪಂಚಪದಂಗಳಂ ನೆನೆಯುತ್ತುಂ ಮಱುಮಾತು ಗುಡದಿರ್ಪುದುಂ ಯಕ್ಷಿ[2] ಮೆಚ್ಚಿ ತನ್ನ ದಿವ್ಯಸ್ವರೂಪಮಂ ತೋಱಿ, ೧೦೯

ಜಿನನಾಥನಿಷ್ಟದೈವಂ
ನಿನಗಂ ಮತ್ತೆನಗಮೆಂಬ ಕತುಮೋಹದಿನೀ |
ವನಚರನಿಂದುಪಸರ್ಗಂ
ನಿನಗಾವುದನಱಿದು ಪಿಂಗಿಸಲ್ವೇಡಿ ಕರಂ[3] || ೧೧೦

---

1 ತುರಗಗವಳಂಗಳ ನಾಯ್ಗಳ ನೆರವಿಯುನಾಭರಣನಿಕರಮುಮಂ ಕರಿಘಟೆಯುಂ |
ವರವಸ್ತ್ರನಿಚಯಮುಮಂ ಪಂಕರುಹಾನನೆ ನೋಡು ನಿನ್ನ ಕಣ್ತಣಿವಿನೆಗಂ ||
ಗೋಪಿಂಡುಗಳಂ ಮೊಲೆತೊರೆದಾವುಗಳಂ ಪೇೞ್ಕೆಗೇಳ್ವ ತೊತ್ತಿರ್ಕಳ ಸ |
ದ್ಭಾವಮುಮನವ್ಕ್ರಯು ಪಿಂಡಂ ಭಾವಿಸಿ ನೋಡಂಬುಜಾಕ್ಷಿ ಚಿತ್ತೋತ್ಸವದಿಂ ||
ಸಿರಿಯೆನ್ನೊಳಾವ ಕೊಱತೆ (ಗ)

2 ಮನದೊಳೆಳ್ಳನಿತುಮಪ್ಪೊಡಮವೞ ಮೇಲೆ ಕಾಂಕ್ಷೆಯಿಲ್ಲೆಂದು ಮುಸಿರದಿರೆ ಯಕ್ಷಿ (ಗ)

3 ಅಱಿದು ಮಾಣಿಸಲ್ಕಾಂ ಬಂದೆಂ, ಅಂಜದಿರೆಂದು ಸಾಂತ್ವಿಸಿ ಮಱೆದ ಪಟ್ಟರ್ದ ಭೀಮನಲ್ಲಿಗೆ ಪೋಗಿ ರೌದ್ರರೂಪಂ ತೋಱಿ (ಗ)

ಬೇಗಂ ಬಂದೆನಿದಕ್ಕಂಜವೇಡೆಂದು ಸಂತೈಸಿ ಪೋಗಿ ಮೞಿದೊೞಗಿದ ಕಿರಾತರಾಜನ ತಲೆಯಂ ಪೊಯ್ದವನನಂಜೆಸಲ್ವೇಡಿ ರೌದ್ರರೂಪಂ ವಿಗುರ್ವಿಸಿ ತೋಱಿ, ೧೧೧

ಆನಪ್ಪೊಡೆ ದೇವತೆಯೆಂ
ನೀನಱಿಯದೆ ಕೊರ್ವಿ ಚಪಳತನದಿಂದೆನ್ನಂ ।
ಮಾನಿಸೆಯೆ ಗೆತ್ತು ನುಡಿದೈ
ನಾನಾವಿಧದಿಂದಮಾದೊಡೇನಾಯ್ತಿನ್ನುಂ ॥ ೧೧೨

ನಿನ್ನ ಪೊಲ್ಲಮೆಯಂ ಕೈಕೊಳ್ಳನೆನ್ನಂ ನಾಳೆ ಪೂಜಿಸಿ ಪೊಡೆಮಟ್ಟು ನೀನುಂ ನಿನ್ನ ಪರಿಜನಮುಂ ಕಾಂತಾರಮಂ ಪೊಱಮಡಿಸಿ ಬೇಗಮಯೋಧ್ಯಾಪುರದ ಬಟ್ಟೆಯಂ ತೋಱಿ ಮಗುೞ್ವುದಲ್ಲದಂದು ನಿನಗೆ ನೀನೆಯಱಿವೆಯೆಂದು ದೇವಿಯದೃಶ್ಯಮಪ್ಪುದುಂ ಬೆರ್ಚಿಯಾಗಳಚ್ಚರ್ತ್ತು,[1] ೧೧೩

[ಭಯದಿಂ ಕನಸಲ್ಲಿದು ನಿ
ಶ್ಚಯಮೆಂದಳ್ಕಳ್ಕಿ ನೋಡಿ ಮನೆಯೊಳ್ತಾಂ ಶಂ ।
ಕೆಯಿನಾಗಳ್ಪರಿಜನಮಂ
ನಯದಿಂ ಬರವೇೞ್ದು ಪೇೞ್ದು ಬೆಳಗಾದಾಗಳ್ ॥] ೧೧೪

ಬಂದು ಕಿರಾತರಾಜನಾ ಕನ್ನೆಯ ಪಾದಂಗಳಂ ಪಲತೆಱದಿಂದರ್ಚಿಸಿ ಬಿಜಯಂಗೆಯ್ವುದೆಂದು ಕೈಮುಗಿದು ಪುಲ್ವಟ್ಟೆಯಿಂ ಪೆರಡವಿಯಿಂ ಪೊಱಮಡಿಸಿ ಕಿಱಿದುಂ ದೂರಂ ಪೋಗಿ ಇದೆ ತೋರ್ಪುದಯೋಧ್ಯೆಯ ಬಟ್ಟೆಯೆಂದು ತೋಱಿ ಮಗುೞ್ದು ಪೋದನಿತ್ತಲನಂತಮತಿ ಬಂದೊಂದು ಬಸದಿಯೊಳ್ ದೇವರಂ ವಂದಿಸುತ್ತಿರ್ಪನ್ನೆಗಮಯೋಧ್ಯಾಪುರದಿಂ ಪುಷ್ಪಕನೆಂಬೊರ್ವಂ, ೧೧೫

ವರವೈಶ್ಯನಂದನಂ ವಿ
ಸ್ತರದಿಂದಂ ಪರದುವೋಪ ಸಮೆಕಟ್ಟಿಂ ಮಾ ।

---

1 ನಿನ್ನಂ ಸೀಳ್ದು ಪರಪುವನೆನ್ನೆ, ಭಯಂಗೊಂಡೆಪ್ಪ (ಗ)

ಣಿದ್ದರದೆ ಪಿರಿದಪ್ಪ ತಂತ್ರಂ
ಬೆರಸು ಮನೋಮುದದಿನಲ್ಲಿ ನಿಂದಾದರದಿಂ ॥ ೧೧೬

[1] ದೇವರಂ ಬಂದಿಸುತಿರ್ದನಂತಮತಿಯಂ ಕಂಡು ಧರ್ಮವಾತ್ಸಲ್ಯದಿಂ ಬೀಡಿಂಗೊಡಗೊಂಡುಪೋಗಿಯುಚಿತಪ್ರತಿಪತ್ತಿಯಂ ಮಾಡಿ ತದನಂತರಂ ನಿಮ್ಮ ದೇಶವಾವುದು ಊರಾವುದು ತಂದೆಯಾರೆಂದು ಬೆಸಗೊಳ್ವುದುಂ, ೧೧೭

ಕ್ಷಮೆಯ ಕೆಳೆಯಂ ಶೀಲಂ ಪುತ್ರಂ ಸದಾಚರಿತಂ ಧನಂ
ವಿಮಳದಯೆ ತಾಯ್ಸತ್ಯಂ ಪಕ್ಷಂ ಗುಣಂಗಳ ಸೋದರರ್
ಕ್ರಮದೆ ತನಯಳ್ ತತ್ತ್ವಂ ಸಮ್ಯಕ್ತ್ವವೊಪ್ಪುವ ತಂದೆ ಸಂ
ಯಮಮೆ ಭವನಂ ದೇಶಂ ಮೋಕ್ಷಂ ಜಿನೋಕ್ತಿಯೆ ಪಟ್ಟಣಂ ॥ ೧೧೮

ಎಂಬೀ ನುಡಿಯಿಂದೀಕನ್ನೆ ದರ್ಶನವಿಶುದ್ಧೆಯೆಂದು ಮೆಚ್ಚಿ ಮನೆಗೊಡಗೊಂಡು ಬಂದು ತನ್ನ ಭಾರ್ಯೆ ಗುಣವತಿಗೀಬಾಲೆಯಂ ನಿನ್ನ ಮಗಳೆಂದು ಭಾವಿಸಿಯಾಂ ಮಗುಳ್ದು ಬರ್ಪನ್ನಂ ಪ್ರಯತ್ನದಿಂ ನಡೆಪುವುದೆಂದೊಪ್ಪೈಸಿ ಪುಷ್ಪಕಂ ಮಗುಳ್ದು ಪೋಪುದುಂ ಗುಣವತಿ ಕನ್ನೆಯಂ ನೋಡಿ, ೧೧೯

ಸುರವನಿತೆಯಾನುಮೆಂಬರ
ಚರಿಯಾನುಂ ಕೃತಕದಿಂದವಿಾ ರೂಪಿಂ ಮೆ ।
ಯ್ಗರೆದಿರ್ದಳಲ್ಲದಿಂದಿನ
ನರವನಿತೆಯುರಿನ್ನರೊಳರೆ ರೂಪಿಂ ಚೆಲ್ವಿಂ ॥ ೧೨೦

---

1 ದೇವರಂ ಕಾಣಲೆಂದು ಬಂದು ಜಿನಾಲಯಮಂ ತ್ರಿಃಪ್ರದಕ್ಷಿಣಮಂ ಗೆಯ್ದು ನಿಷಿದ್ಧಿಯಿಂದೊಳಗಂ ಪೊಕ್ಕು ನಾನಾವಿಧದರ್ಚನೆಯಿಂ ಪರಮೇಶ್ವರನನರ್ಚಿಸಿ ಶತಸಹಸ್ರಂಗಳಿಂ ಪರಸಿ ಸ್ತುತಿಯಿಸಿ ಬಳಿಕಂ,

ಚಲಿಯಿಸದಾಸನಮಂ ಸಂಚಲಿಸದೆ ಪೆಱತೊಂದುಚಿತ್ತವಿಲ್ಲದೆ ಕರಮಂ ।
ಮ್ಮುಳಿಸದೆ ಜಿನಪದಪದ್ಮಂಗಳನರ್ತಿಯೊಳೊಲ್ದುನೋಡುತುಂ ಸುಸ್ವರದಿಂ ॥
ದೇವರಂ ಬಂದಿಸುತ್ತಿರ್ದ (ಕ).

[ಎಂದು, ಅಱಿಗಣ್ಣವರಾದಿತ್ಯನಂ ನೋೞ್ಪಂತೆ ಕನ್ನೆಯ ರೂಪ ನಗಿದು ನೋಡಿ ಮನದೊಳಂಜಿ,] ೧೨೧

ಎನಗಪ್ಪೊಡೆ ಮುನ್ನಿನ ಜ
ವ್ವನಮುಂ ಲಾವಣ್ಯಮುಂ ವಿಳಾಸಮುಮಿಲ್ಲೀ ।
ವನಿತೆಯಿರಲೋವೊ ಪೆರ್ಗಣ
ಮನಿಕ್ಕಿ ಮನೆಮಾಡುವೆಂದಮುಕ್ಕುಂ ಕಡೆಯೊಳ್ ‖ ೧೨೨

[ಎಂದು ತನ್ನ ಪುೞಿಕುಮನದಿಂ] ದಿರಿಸಿಕೊಳಲಣ್ಮದೆ ವ್ಯಾಳ ಯೆಂಬ ಕುಂಟಣಿಗೆ ಮಾಱುವುದುಮಾಕೆ [ಸಹಸ್ರಪೊನ್ನಂ ಕೊಟ್ಟು ಮನೆಗೊಡಗೊಂಡು ಪೋಪುದುಂ, ಕುಮಾರಿ ತನ್ನೊಳ್, ೧೨೩

ಖಳಕರ್ಮೋದಯದಿಂದಂ
ಗಳಯಿಸುವೀ ದುಃಖಮೆನ್ನನೆನಿತೊಂದಿದೊಡಂ ।
ಚಳಮಾಗೆನೆನ್ನ ಪಿಡಿದು
ಜ್ವಳಸುವ್ರತಕೋವೊ ಭಂಗಮಂ ಮಾಡುವೆನೇ ‖ ೧೨೪

ಎನುತ್ತುಂ ವ್ರತದೊಳ್ ದೃಢೆಯಾಗಿರ್ಪುದುಂ, ವ್ಯಾಳ ಪತ್ತೆಂಟು ದಿವಸಂ ಪೋದಿಂಬೞಿಯಂ ಮೆಲ್ಲನೆ ಕನ್ನೆಗಿಂತೆಂದಳ್ :— ೧೨೫

ಮರುಳಂತೆ ಮರುಳ ತಲೆಯಂ
ಪರಪಿರದೆ ಮನೋನುರಾಗದಿಂ ಮುಡಿ ಮುಡಿಯಂ ।
ಪರವಶಮಾದರ ತೞದಿಂ
ಬಿರದೆ ಸರೋಜಾಕ್ಷಿ ನಲ್ಮೆಯಿಂ ನುಡಿ ಪೆಱರೊಳ್ ‖ ೧೨೬

ಬಲ್ಲದಿರ್ದೊಡಮೊಲ್ವರಂತಿರೆ ನೋೞ್ಪುದನ್ಯರ ಚಿತ್ತಮಂ
ಮೆಲ್ಲಮೆಲ್ಲನೆ ನೋಟದಿಂ ನಗೆಯಿಂದಮಿರ್ಕುಳಗೊಳ್ವುದಂ
ತಲ್ಲಿಗಲ್ಲಿಗೆ ತಪ್ಪದಂ ನೆಱೆ ಮಾಡಿ ಮೆಲ್ವಚನಂಗಳಂ
ಚಲ್ಲವಾಡುವುದಾರೊಳಾದೊಡಮೊಲ್ವಳೀ ವಧುವೆಂಬಿನಂ ‖ ೧೨೭

ತರಳಲೋಚನೆ ಮುಂಗುಚಂಗಳೊಳಾದ ಚೆಲ್ವುಗಳಂ ಮುಖಾಂ
ಬುರುಹದೊಂದು ವಿಲಾಸಮಂ ನಳಿತೋಳ ಭಂಗಿಗಳಂ ಪದಾಂ
ಬುರುಹಪಲ್ಲವಮಂ ಕುರುಳ್ಗಳೊಳಾದದೊಂದುಬೆಡಂಗನೊ
ಪ್ಪಿರೆ ವಿಟರ್ಗನುರಾಗಮಾಗೆ ಸರೋರುಹಾನನೆ ತೋಱು ನೀಂ ॥ ೧೨೮

ಕುರುಳ ಪಂತಿಗಳಂ ಮನಂಬಿಡೆ ತಿರ್ದು ಚಂದನಪಂಕಮಂ
ಸರಸಿಜಾನನೆ ಪೂಸು ಮೆಚ್ಚುವ ಪೊನ್ನ ಮುತ್ತಿನನೇಕಮಾ
ಭರಣಮಂ ತುಡು ದಿವ್ಯವಸ್ತ್ರಮನರ್ತಿಯಿಂದುಡು ರಾಗದಿಂ
ಸುರಗಿಯುಂ ಮುಡಿ ರೂಪನೇತಕೆ ಕುಂದಿಪೌ ಮರುಳಂದದಿಂ ॥ ೧೨೯

ರೂಹಿಲ್ಲದೊಡಂ ಕೆಲಬರ
ಸಹಾಯದಿಂ ಬಱಿದೆ ತೊನೆದು ಕೆಮ್ಮನೆ ವಿಟಸಂ ।
ದೋಹಮನೊಲಿಸುವರೆಂದೊಡೆ
ರೂಹಂ ಪಡೆದೇಕೆ ಮರುಳ ನೀಂ ವೃಥೆಗಳ್ವೈ ॥ ೧೩೦

ಕರೆವುದು ಕೆಲಕೆಲಬರ ನೆಱೆ
ನೆರೆವುದು ಭಾವಿಪ್ಪೊಡೊಂದೆ ನರರೊಳ್ ಭಾಗ್ಯಂ ।
ಮರುಳ್ ಸುರಸೂಳ್ ಧರೆಯೊಳ್
ಪರರ್ಗುಂಟೆ ಮನಕ್ಕೆವಂದ ಭೋಗಮದಾರ್ಗಂ ॥ ೧೩೧

ಪೊಸದುಡುಗೆ ನಿಚ್ಚನಿಚ್ಚಂ
ಪೊಸಗಂಡರ್ ಚೆಲ್ವರಪ್ಪ ಪೊಸವಸ್ತ್ರಂ ಭಾ ।
ವಿಸುವಂದು ಮೆಯ್ಯುಸ್ಸುಖಂ ರಂ
ಜಿಸೆ ಬೆಲೆವೆಣ್ಗಕ್ಕುಮುೞಿದ ಸತಿಯರ್ಗುಂಟೇ ॥ ೧೩೨

ಅದುಕಾರಣದಿಂ ಮೀವುದುಣ್ಬುದುಡುವುದು ಮೋನದಿಂದಿರವೇ
ಡೆಂದು ಬುದ್ಧಿವೇೞೆ ಕನ್ನೆ ತನ್ನೊಳ್ ನಕ್ಕು, ೧೩೩

ಧರಣೀಚಕ್ರಮುಮಂ ವಿಯತ್ತಳಮುಮಂ ಗಂಟಿಕ್ಕುವರ್ಮಿಂಚಿನ
ಚ್ಚರಿಯಪ್ಪಂತಿರದೊಂದುಮಾಡಿ ಸಮೆವರ್ ಕಲ್ಲಲ್ಲಿ ನಾರೆತ್ತುವರ್

ತ್ವರಿತಂ ಬಿನ್ನಣದಿಂ ಬಿಸಿಲ್ಗುಮರೆಯುಂ ತಂದೇಱುವರ್ ಮೇರುವಂ
ಭರದಿಂದಂ ಪಿಡಿದೆತ್ತುವರ್ ಮುಗಿಲೊಳಂ ಸೀವರ್ಗಾಡುವರ್ ಜೋಡೆಯರ್ ॥ ೧೩೪

ಕುಂಟಣಿಯೆಂಬಳ್ ಸಾಮಾನ್ಯೆಯಲ್ಲದಱಿಂದಿವಳನ್ನನೇನೆಂದೊಡಮೆನಗೆ ಮೋನದಿಂದಿರ್ಪುದೆ ಬುದ್ಧಿಯೆಂದುಸಿರದಿರೆ, ಕೆಲವುದಿನಮೊಗೆಯುಂ ಬಾಯುಂ ಬಡಿದೊಡಂಬಡಿಸಲಾಱದೆ, ೧೩೫

ಹರಿಣಾಕ್ಷಿ ನುಡಿಯಳಂತುಂ
ಮರುಳಾಗದೆ ಬೇಗಮೊಯ್ದು ಕುಡುವೆಂ ಭೂಪಂ ।
ಗುರುಮುದದಿನರ್ಥಲಾಭಂ
ಪಿರಿದಕ್ಕುಂ ಭೂಮಿಪಾಲನುಂ ಕರಮೊಸೆಗುಂ ॥ ೧೩೬

ಎಂದಾ ಪುರಮನಾಳ್ವ ಸಿಂಹರಥನೆಂಬರಸನಲ್ಲಿಗೊಯ್ದು ಸ್ತ್ರೀರತ್ನಮಂ ದೇವರ್ಗೆ ಪಾಗುಡಂತಂದೆನೆಂದೊಪ್ಪಿಸುವುದುಮರಸಂ ವ್ಯಾಳಗೆ ಸಾಲ್ವನಿತು ಪೊನ್ನಂ ಕೊಟ್ಟು ಕನ್ನೆಯ ರೂಪಂ ಭಾವಿಸಿ ನೋೞ್ಪುದುಂ] [1] ೧೩೭

ಶತದಳಮುಖಿಯುಂ ಮೆಱೆಗೊಂ
ಡತನು ಕರಂ ಮುಳಿದು ಪೂವಿನಂಬುಗಳಿಂ ಸಂ ।
ತತಮಾದರ್ಪ ಪೋಗದಿಸುವುದು
ಮತಿಗೆಟ್ಟುೞ್ಕಿ ಸಡೆದು ನೊಂದು ಮಹೀಶಂ ॥ [2] ೧೩೮

---

1 ಆಕೆ ಕೊಂಡು ತನ್ನ ಮಾತಂ ಕೇಳ್ದುತ್ತೆಗೊಳಲೊಲ್ಲದೆ ಮೋನಂಗೊಂಡಿರೆ ಬೇಸತ್ತು ಪುರಮನಾಳ್ವ ಸಿಂಹರಥನೆಂಬರಸಂಗೆ ಕುಡುವುದುಮರಸಂ ನೋಡಿ (ಗ)

[ಮಿಸುಕದೆ ಮೆಯ್ಯಿಕ್ಕವೆ ವನಿತಾರತ್ನಮಂ ಮಪ್ರಲೇಪದೊಳ್ಪುತ್ತಿದಂತೆ ನಟ್ಟದಿಟ್ಟಿಯಂ ತೆಗೆಯಲಾಱದೆ ನೆಱೆನೋಡಿ ತನ್ನೊಳಿಂತೆಂದು ಭಾವಿಸಿದಂ :—

ಇವಳ ಪದಪಲ್ಲವಂಗಳನವಯವದಿಂ ಪೊರ್ದಿರ್ದ ಅಶೋಕೆಗೆ ಬಿದಿ ಕಾ।
ಪವನೀಯೆ ಕೇಳ ಫಲಮಾಗವು ಭಯದಿಂ ಬಿಗಡುಗೊಂಡಶೋಕೆಗಳಿನ್ನುಂ ॥ ೧೩೯

ಸೊಗಯಿಸುವೀ ಸತಿಯ ಮುಗುಳ್ದುಗುರ್ಗಂಗಜಸಿತ್ತನಂಗಕಿರಣದ ಚೆಲ್ವಂ।
ಬಗೆಯದಿನಿಸಂದೆ ಮುಳಿಸಿಂ ಪಗೆಯಂ ಕಂಡಂತೆ ಕಾಯ್ವನಿನ್ನುಂ ಸೂರ್ಯಂ ॥ ೧೪೦

ಈ ವನಿತೆಯ ಮೇಗಾಲ ಜನಾಮೆಯ ಚೆಲ್ವುಗೆಳಸೀಯೆ ಭಯದಿಂ ವನಮಂ |
ಕಾಮಂಜೆ ಪೊಕ್ಕು ವನೆ ಮಂ ಕಾಲಿಂ ಪೊಱಗಾಮೆಯೆಂಬವಡವಿಯೊಳೊಳವೇ ||೧೪೧

ರಂಭೆಯ ಮಡವಿನ ಶೋಭೆಯನಂಬುಜಭವನೀಕೆಗೀಯ ಸಾವಿರಕಣ್ಣಿಂ |
ರಂ ಬಿಡದೆ ನೋಡ್ಪನಬ್ಜಜನೆಂಬುದು ಪುಸಿಯಲ್ಲವಿನಿತುಕಣ್ಸುರರ್ಗೊಳವೇ || ೧೪೨

ಈ ವನಿತೆಯ ಗುಲ್ಫಂ ಪರಿಭಾವಿಸುವಂದೆನ್ನ ಸತಿಯ ಗುಲ್ಫಕ್ಕಂ ಕೇ |
ಳ್ತ್ತವಧಿಕಮೊಂದು ಮನದೊಳ್ ಗೋವಿಂದಂ ಮಱುಗಿ ಕಱಿಯನಾದಂ ನೋವಿಂ ||

ಎನ್ನ ದೊರೆಯೊಳ್ಪನಜನೀ ಕನ್ನೆಯ ಕಿಱುದೊಡೆಗೆ ಕೊಟ್ಟನೆಂಬೀ ಸಿಗ್ಗಿಂ |
ತನ್ನಂ ಪೆಱರ್ಗೆ ತೋಱಂ ಮುನ್ನಂ ಕಾಮಂಗೆ ದೇಹವಿರ್ದುದು ಪುಸಿಯೇ ||೧೪೪

ಕಂಡಱಿಯದಂತು ಪಱಿತಂದಂಡಲೆದಜಸಿವಳ ತೊಡೆಗೆ ಮದ್ವಲ್ಲಭೆಯಂ |
ಕೊಂಡಿತ್ತನೆಂಬ ನೋವಿಂ ಬೆಂಡಾದುದು ಬಾೞೆ ಬಾೞೆಗಂ ಬೆಂಡೊಳವೇ || ೧೪೫

ಈ ಕಮಳಮುಖಿಯ ಜಘನಕ್ಕಾ ಕಮಳಜನಿತ್ತನೆಮ್ಮ ಮಸ್ತಕದೆಸೆಯಂ |
ದಾಕಾಂತಮನೆಂದಿರದತಿಭೀಕರದಿಂ ವನಮನಿಭಸಮೂಹಂ ಪೊಕ್ಕುವು || ೧೪೬

ಈಕೆಯ ಪೊಕ್ಕುೞ ಚೆಲ್ವೀ ಲೋಕದೊಳತಿಸೇವ್ಯಮಿದಱ ಪೊರೆಯೊಳ್ ನಾಮಿ |
ನ್ನೇಕಿರ್ಪವೆಂದು ನೆಱೆ ನೀರಾಕರಮಂ ಪೊಕ್ಕುವೀವದಿಂ ಶಂಖಂಗಳ್ || ೧೪೭

ಈ ನಾರಿಯ ಬಾಸಗೆ ಚತುರಾನನನೆಱೆದೀಯೆ ತನ್ನ ಶೋಭೆಯನಾರ್ತ |
ಧ್ಯಾನದಿನೆಲೆ ಮರುಳಾದುವು ನೂನಂ ಮರುಳಿರುಪೆಯೆಂಬುವುಂ ಮುನ್ನೊಳವೇ||೧೪೮

ಈ ವನಿತೆಯ ನಡುವಿಂಗಜನಾಮಗಮೆಱೆದೀಯೆ ತನ್ನ ಮಾಧ್ಯದ ಸೊಬಗಂ|
ಕಾತಂಜೆ ಬಳ್ಳಿವೊದರಂ ನೋವಿಂದಂ ಪೊಕ್ಕಪಂದು ವಾರಣಂಪುಗಳ್ || ೧೪೯

ಈ ಸಸಿವದನೆಯ ತೆಳ್ಪಸಿಗರ್ಪ ಸರಸಿಜಗರ್ಭನೀಯೆ ತಮ್ಮೊಳ್ಪ್ಪಮನಿಂ |
ಬೇಸತ್ತು ಪುಯ್ಯಲಿಡುವುವು ದೇಸಿಗರಂತೀಗಳುಂ ಸುರಂಭಾದಳಗಳ್ ||[1] ೧೫೦

ಎಲೆ ಪೋಲ್ತಿರ್ನೀಪೀಕೆಯ ಮೊಲೆಯುಂದಮನೆಂದು ಚಕ್ಕವಕ್ಕಿಗೆ ಮುಳಿಸಿಂ |
ಜಲಜಭವನೀಯ ಶಾಪಮನೊಲವಿಲ್ಲದಗಲ್ದು ಪೋಪುವಿರುಳೊಳ್ ಮಿಥುನಂ|| ೧೫೧

ಕರಮೊಪ್ಪುವುದೀ ಕನ್ನೆಯ ಕೊರಲೆನ್ನದಗೇಂದು ನೋಡಿ ಬೆಱಗಾಗಿ ವಸುಂ |
ಧರೆಯೊಳ್ ಮೊಯ್ಯಱೆಯುದೆ ನಿಸ್ತರದಿಂ ಮತಿಗೆಟ್ಟು ಬಳೆದವಡಕೆಯ ಸಸಿಗಳ್||೧೫೨

1 ದೇಸಿಗರಂತಿನ್ನು ಪುರುಳಿಗಳ್ ಭಯಾವಶದಿಂ (ಕ).

ಎಱೆದೀವುದುಮಜನೀಕೆಯ ನಳಿತೋಳಿಂಗೊಲ್ದು ತಮ್ಮ ಚೆಲ್ವಿಕೆಯಂ ಕಂ |
ಡೆಳಲತೆಗಳ್ಪೂವುಗಳಂ ತಳೆದಿರ್ದುಂ ತಳೆಯದಿರ್ಪುವಾ ಫಲಿತತೆಯಂ ‖ ೧೫೩

ಜಳಜಭವನೊಲಿದು ಕನ್ನೆಯ ತಳಕಂ ತಂದೀಯೆ ವಾರಿಜಂಗಳ ಕೆಂಪಂ |
ಬಳಿಯುಸರಸಿಗುಹವಾದುವು ಬಿಳಿಯ ಸರೋಜಾತವೊಳವೆ ಮುನ್ನಿನ ಯುಗದೊಳ್

ಜವನೆನ್ನ ಸತಿಯ ಬೆರಲೊಪ್ಪಮನೀವಧು ಕೊಂಡಳೆಂದು ಕರಿವಾಜಿಗಳಂ |
ಬಿವನೇಱದೆ ಮುಳಿಸಿಂದೀಱುವನಿನ್ನುಂ ಕೋಣನಂ ಮಹಾವ್ರತದಿಂದಂ ‖ ೧೫೫

ಒಳ್ಳಿದಳೆಂದಜನೀಕೆಯ ಸೆಳ್ಳುಗುರಿಂಗೀಯೆ ತನ್ನ ಚೆಲ್ವಂ ಪಿರಿದಂ |
ತಲ್ಲಣದಿಂ ಕೇದಗೆಗಳ್ ಮುಳ್ಗಳ್ ಪೊಕ್ಕಿರ್ಪವಿನ್ನುಮತಿಭಯದಿಂದಂ ‖ ೧೫೬

ಬಿದಿ ತಮ್ಮ ಬೆನ್ನ ಚೆಲ್ವಂ ಪರಪಿಂದೀವನಜಮುಖಿಯ ಬೆಂಗೀವುದುಮು |
ಗ್ಗದ ನಾಗಕನ್ಯೆಯರ್ಸಂಪದಮಂ ಬಿಸುಟೋಡಿ ರಸೆಯೊಳಿರ್ದಪರಿನ್ನುಂ ‖ ೧೫೭

ಜಳರುಹಗರ್ಭನೀಕೆಯಧರಕ್ಕೆ ಮನೋಹರಮಪ್ಪ ತಮ್ಮ ಪ
ಣ್ಗಳ ಚೆಲುವಂ ಕರುತ್ತಿಱದು ಕೊಟ್ಟೊಡೆ ಬೆರ್ಚಿ ವಟೋರ್ವಿಜಂಗಳೀ
ಗಳುಮೊಡಗೂಡಿ ಕರ್ಪುವೆರಸಿರ್ಪುವು ಪೆರ್ಗಲದಿಂದಮಲ್ಲದಂ
ದುಱುಬಪುರಕ್ಕೆ ಬೀಳಲಿನಿತೇಕಣಮಾಗವು ನೋಡೆ ಲೋಕದೊಳ್ ‖ ೧೫೮

ಈ ಸತಿಯ ದಂತಪಂಕ್ತಿಗೆ ಭಾಸುರತರಮಪ್ಪ ತಮ್ಮ ಚೆಲ್ವುಗಳಂ ಸಂ |
ತೋಷದಿನಿತ್ತುದಱಿಂದಂ ಲೇಸಾಗಿರೆ ಮುತ್ತು ಪೂಜ್ಯಮಾದುವು ಧರೆಯೊಳ್ ‖ ೧೫೯

ವರುಣಾನಿಯ ಬಾಯ್ದೞೆಗೀ ತರುಣಿಯ ಬಾಯ್ದೞೆಯ ಚೆಲ್ವನೆಂಬೀ ಚೆಲ್ವಂ |
ನೆರೆದೀಶನುಡುಪನಾದಂ ಪರಿಕಿಸುವಂದಮರರೊಳಗೆ ಕುಂಟರುಮೊಳರೇ ‖ ೧೬೦

ಈಕೆಯ ಕದಪಿನ ಶೋಭೆಯನೇಕಂಜದೆ ಪೋಲ್ತಿರೆಂದು ಶಾಪಮನೀಯಲ್ |
ಕೋಕನದಸುತಂ ಪಲರುಂ ಪೋ ಕೆಮ್ಮನೆ ಚಲದಿನಱಿವರೆಲೆಗಳ ಮೂಗಂ ‖ ೧೬೧

ವಾರಿಜೋದ್ಭವನೀಸರೋಜದಳಾಯತಾಕ್ಷಿಯ ಮೂಗಿನಾ
ಕಾರಮಂ ನೆಱೆ ಪೋಲ್ತಿರೆಂದುಱೆ ನೋಡಿ ಸಂಪಗೆಗಳ್ಗೆ ನಿ
ಷ್ಕಾರಣಂ ಮುನಿಸಿರ್ದನಪ್ಪುದಱಿಂದದೇಂ ಮನದಕ್ಕಱಿಂ
ಸಾರಲಣ್ಮದೆ ಭಾವಿಪಂದವನೊಂದುಪೊರ್ದವು ತುಂಬಿಗಳ್ ‖ ೧೬೨

ಎಮ್ಮ ಕಣ್ಗಳ ಚೆಲ್ವನೀಕೆಯ ಕಣ್ಗೆ ಪದ್ಮಜನಿತ್ತನೆಂ
ಬುಮ್ಮಳಂ ಪಿರಿದಾಗೆ ಪುಲ್ಲೆಯ ವಿಂಡುಗಳ್ ಕಡುಚಿಂತೆಯಿಂ

ಸ್ಥಿರಿಸಲಾಱದೆ, ‖ ೧೬೨

ಸುವರ್ಣನಾಗಿ ಜಾತರೂಪದ ಕಟಿಯೆಂಬ ಚಿತ್ತದ ಬಲ್ಪುಗೆ
ವೆಚ್ಚನ್ನೆಯುಂ ಕಡುವಿೀರವಿಲ್ಲದೆ ಪಾದೆಯಾಗಿಯ ಧಾತ್ರಿಯೊಳ್ ‖ ೧೬೩

ಜಳಜಜನೀಕಾಯ ತುಱುಗವೆಗಳನು. . . . .
ವ್ಮಳಿಸಿ ಪೆಱಗಾಗಿ ಓರದುವ್ಮಳಿಸಿಂದವೆಯಿಕ್ಕರವರಕನ್ಯೆಯತಿನ್ನುಂ ‖ ೧೬೪

ವನರುಹಗರ್ಭನೀಕ್ಷಿಸಿ ಮೃಗಾಕ್ಷಿಯ ಕರ್ಣಯುಗಕ್ಕೆ ಕಣ್ತರ್ಪ ಮೆ
ಲ್ಲನೆ ಬಡಿದೀಯ ನಮ್ಮ ಚೆಲುವಂ ಭರದಿಂದಿರಲಣ್ಮದೊಯ್ಯನಿಂ
ತನವರತಂ ಕರಂ ಮುಗಿದು ನೀರೊಳಗಿರ್ದಿರಲೆಲ್ಲಮಬ್ಜಗ
ರ್ಭನನ ಮತೋತ್ಸವಂಬೆಸು ಭಾವಿಸುತಿರ್ಪುವು ನೆಯ್ದಿಲಾಗಳುಂ ‖ ೧೬೫

ಈ ವನಿತೆಯ ಪುರ್ಬುಗಳಂ ನೀವಂಜದೆ ಪೋಲ್ತಿರೆಂದು ಸರಸಿಜಗರ್ಭಂ ।
ಬೇವಿನ ಮರಕ್ಕೆ ಶಾಪಮನೀವುದುಮದು ಕೈಪೆಯಾದುದ ವನೀತಳದೊಳ್ ‖ ೧೬೬

ನಯದಿಂದೀಕೆಯ ಚೆಲ್ವನಪ್ಪ ನೊಸಲಂ ಪದ್ಮೋದ್ಭವಂ ತನ್ನ ಕೂ
ರ್ಮೆಯಿನೀರಂತಿರ ನೋಡಿನೋಡಿದನಲೇ ಲೋಕಕ್ಕಿದಾಶ್ಚರ್ಯಮು
ಪ್ರಿಯಮಲ್ಲಾನಿದಱಿಂದಮಂ ಧರಿಯಿಸಲ್ಕೇೞ್ಕೆಂದು ನೀಲೋತ್ಪಲ
ಪ್ರಿಯನಿನ್ನುಂ ನೆಱೆ ಪೆರ್ಚುತುಂ ಕುಸಿಯುತುಂ ತಾನಿರ್ಪನಭ್ಯಾಸದಿಂ ‖ ೧೬೭

ಸರಸಿಜಭವನೀಕಾಂತೆಯ ಕುರುಳೊಳಿಗೆ ತಮ್ಮ ಚೆಲ್ವನಿತ್ತಪರಿಂ ಪ ।
ಲೆಮ್ಮರೆವುವಳಿನಿಕರಮಿನ್ನುಂ ಸರಸಿಜಸಂಭವನನಱಿಸಿ ಕಡುಮುಳಿಸಿಂದಂ ‖ ೧೬೮

ಆ ಸರಸಿಜಭವನೀಕೆಯ ಕೇಶಕ್ಕೊಲಿದೀಯೆ ತಮ್ಮ ಚೆಲ್ವಂ ಮುನಿದೀ ।
ದೇಶದೊಳಿರಲೊಲ್ಲದೆ ಮಲೆದೇಶದೊಳಿಂತಪ್ಪವಂಚೆ ಸಿರೆಯ ತರುಗಳ್ ‖ ೧೬೯

ಮಾದದಿಂ ಬಗೆಯದೆ ನೀಪೀ ಸುವತಿಯ ಬಣ್ಣಮನೆ ಪೋಲ್ತಿರಂದತಿಮುದದಿಂ ।
ಬಿದಿ ಸಾಪಮನಿತ್ತುದಱಿಂ ಬಿದಿಗಳ್ ಫಲಮಾಗಲೊಡನೆ ಸಾವುವು ಧರೆಯೊಳ್‖೧೭೦

ಅತಿಶಯಮೀಕೆಯ ಮೊಗ್ಗಿಂದಡಿಕೆಯಂ ಪೋಲ್ತಿರೆಂದು ಮಲಯಾಪಕಕ್ಕೆ ।
ಧೃತಿಯಿಂ ಸಾಪಮನಿತ್ತೊಡೆ ಚತುರಾಸ್ಯಂ ತೆಯ್ದು ಬೊಟ್ಟನಿಡುವರ್ಪಲರುಂ‖೧೭೧

ಎಂದನಂತಮತಿಕುಮಾರಿಯ ರೂಪನಾಶ್ಚರ್ಯಂಬಟ್ಟಪಾದಮಸ್ತಕಂಬರೆಗಂ
ನೋಡಿ ನಾನಾವಿಧದಿಂ ಪೊಗೞ್ದು (ಬ.ಕ.)

ಧರೆಗಂ ಭಂಡಾರಕ್ಕಂ
ಪರಿಜನಕಂ ಭೃತ್ಯಸಂಕುಳಕ್ಕಂ ಮತ್ತೆ |
ನ್ನರಸಿಯುಗ್ಗಿಮಾಪುರಕ್ಕಂ
ನಿರುತಂ ನೀನೊಡೆಯುಳಾಗಿ ಸುಖಮಿರ್ ನಯದಿಂ ||೧೩೩

[ಲಲನೆಯರಿಕ್ಕೆ ಚಾಮರಮನಂದಣಮಂ ಪದಪಿಂದಮೇಱಿ ಭೂ
ತಳದೊಳಗುರ್ವು ಪರ್ವೆ ಕರಮೊಪ್ಪಿರೆ ಪಾಡುವ ಗೇಯದೊಂದು ಮೆ
ಲ್ಲುಲಿ ಕಿವಿಯಂ ಪಳಂಚಲೆಯೆ ಮಂತ್ರಿಗಳುಂ ನೃಪರುಂ ಕುಮಾರರುಂ
ಸಲೆ ಬಸಗೆಯ್ಯೆ ನೀನೆನಗೆ ವಲ್ಲಭೆಯಾಗಿರು ರಾಜ್ಯಲಕ್ಷ್ಮಿವೋಲ್] ||೧೩೪

ಎಂದು ನುಡಿದು ಕಯ್ಯಂ ಪಿಡಿದು ತಲೆಯ ಮೇಲಿಟ್ಟುಕೊಂಡು, ೧೩೫

ಉಸಿರದಿರವೇಡ ಕಾಮಂ
ಮಸಗಿ ಕನಲ್ದಾರ್ದು ಕುಸುಮಸಾಯಕದಿಂ ಸೈ |
ರಿಸದೆಚ್ಚಪನೆನ್ನಂ ಸಂ
ಕಿಸದಿನಿಸಂ ನುಡಿದು ಕಿಡಿಸು ನೀನವನೇಸಂ || ೧೩೬

ಎಂದನಂತಮತಿಯುಂ ತನ್ನಿರ್ದಾಸನಕ್ಕವರೆ ತೆಗೆದಪ್ಪಿಕೊಂಡು ಮೊಗಮಂ ನೋಡಿ [ಕಡುಮೋಹದಿಂ], ೧೩೭

ಅಯಂಗಿಡೆ ಕಾಮಂ ಕೈ
ಗಾಯದೆ ನಿಂದಾರ್ದು ಮುತ್ತಿ ಕೊಂದಪನೆಲೆ ನೀ |
ನೀಯವಸರದೊಳ್ ಕಾಯುತೆ
ಬಾಯೊಳ್ ತಂಬುಲಮನಿಕ್ಕು ಮದಗಜಗಮನೇ || ೧೩೮

ಎಂದನೇಕವಿಲ್ಲುನುಡಿಗಳಿಂದೊಡಂಬಡಿಸಲಾಱದೆ, ೧೩೯

ಎಳವಿದಿರಂದಮಂ ತನು ಸರೋರುಹದಂದಮನಾನನಂ ಮಹೋ
ಜ್ಜ್ವಳಲತೆಯಂದಮಂ ನಿಮಿರ್ದ ತೋಳ್ಮಸುಪಾಲದ ಪಣ್ಣಿನಂದಮಂ
ಪೊಳವಧರಂ ಕರಂ ನೆಱೆಯೆ ಪೋಲ್ವುದಱಿಂದರವಿಂದವಕ್ತ್ರೆ ಕೋ
ಮಳ ಕಡುಗಾಡಿಕಾರ್ತಿ ಮರವಾನಿಸೆಯೆಂಬುದನುಂಟುಮಾಡಿದಾ ||೧೪೦

ಎಂದೊದವಿದ ಕೂರ್ಮೆಯಿಂ ನೋಯೆ ನುಡಿಯಲಾಱದೆ ಸರಸದಿಂ ನುಡಿವುದುಂ ಅನಂತಮತಿ ತನ್ನೊಳಿಂತೆಂದಳ್:— ೧೮೧

ಚಂದನಂಗಳ ಪುಳ್ಳಿಯಿಂದಡುವಂತೆ ಜೋಳದ ಕೂಳನಾ
ನಂದದಿಂ ಕಡಿದೊಟ್ಟಿ ಸುಟ್ಟು ಸುರೇಂದ್ರಭೂಮಿರುಹಂಗಳಂ
ತಂದು ಸಾವೆಯನಲ್ಲಿ ಬಿತ್ತುವರಂತೆ ಮೋಕ್ಷದ ಸೌಖ್ಯಮಂ
ಕುಂದದೀವ ಮಹಾವ್ರತಂಗಳನೋವೊ ನಾಂ ಬಿಡಲಾರ್ಪೆನೇ ॥ ೧೮೨

ಪಾಲನೊಲ್ಲದೆ ನಾಯಿಗಳ್ಳಿಯ ಪಾಲನುಣ್ಬನುವೊಲ್ದು ಭೂ
ಪಾಲವರ್ಗಮನೊಲ್ಲದುದ್ಧತವೃತ್ತಿಯಿಂ ಕಡುರಾಗದಿಂ
ಕೀಳನೋಲಗಿಪಾತನುಂ ಜಿನಧರ್ಮಮಂ ಬಿಸುಟರ್ತಿಯಿಂ
ಪಾಳಪಾತನುಮಿಂದ್ರಿಯಂಗಳ ಭೋಗಮಂ ಮರುಳಲ್ಲನೇ ॥ ೧೮೩

ಸಿರಿಯ ಮಹಿಮೆಗೆ ರೂಪಿನೇಳ್ಗೆಗೆ ಮುಯ್ಯನಾಂತಱುಬುದ್ಧಿಯಿಂ
ಸ್ಥಿರಮಿದೆಂದು ಮನುಷ್ಯಜನ್ಮಮನಣ್ಣ ನಂಬಿ ಜಡರ್ ಕೆಲರ್
ಪರಮಧರ್ಮಮನುತ್ತಮವ್ರತಸಂಕುಳಂಗಳನೊಲ್ಲದೋ
ಸರಿಸಿ ಭೋಂಕನೆ ಸತ್ತು ನಾರಕದುಃಖಮಂ ನೆಱೆ ತಾಳ್ದುವರ್ ॥ ೧೮೪

ಬಿಸುಟು ಧರ್ಮಮನೊಲ್ಲದಗ್ಗಳಮಪ್ಪ ಸುವ್ರತಮಂ ಮನಂ
ಕುಸಿದು ಜೈನರ ಪೇಳ್ಕೆಗಂಜೆ ವಿಶೇಷಸಚ್ಚರಿತಕ್ಕೆ ಸಂ
ಕಿಸಿ ಜಿನೋಕ್ತಿಗೆ ಕಾಪಿಯಪ್ಪವರಿಂದ್ರಿಯಂಗಳನೆಯ್ದೆ ಪೆ
ರ್ಚಿಸಿ ವಿನೋದದಿನೆಯ್ದುವರ್ ನರಕಂಗಳಂ ಕಡೆಯೊಳ್ಪಲರ್ ॥ ೧೮೫

ಮುಗಿಲಂತಸ್ಥಿರಮಪ್ಪ, ಗಾಳಿಯಂತೆ ನಿರ್ನೆರಮಪ್ಪ, ಮಳಲೇರಿಯಂತೆ ಲಯಮಪ್ಪ, ಕಬ್ಬುನದ ಕಡಲೆಯಂತೆ ಬೆಟ್ಟಿತಪ್ಪ, ಸುಣ್ಣದಂತೆ ತೀವ್ರಮಪ್ಪ, ಕತ್ತರಿವಾಪೆಯಂತೆ ಸಾರಲರಿದಪ್ಪ, ರಾಜಕನ್ಯೆಯಂತೆ ಬಯಸಲರಿದಪ್ಪ, ಮುಳ್ಳುಳ್ಳ ಬಟ್ಟೆಯಂತೆ ನಡೆಯಲರಿದಪ್ಪ ರಕ್ಕಸಿಯಂತನುಭವಿಸಲರಿದಪ್ಪ, ನಡುವೆಗಲಾದಿತ್ಯನಂತೆನೋಡಲರಿದಪ್ಪ, ಸುರಚಾಪದಂತೆ ಕ್ಷಣಿಕಮಪ್ಪ. ಬಯಲ್ವೊನಲಂತೆ ಕಿಡುವೆಂತಪ್ಪ, ಪರಿವೆಂಬಿನಂತೆ ಕಡಿದಪ್ಪ, ಬಿದಿರಡವಿಯಂತೆ ಪುಗಲರಿದಪ್ಪ, ಸಮುದ್ರ

ದಂತೆ ದಾಂಟಲರಿದಪ್ಪ, ನಸುಗುನ್ನಿಯಂತೆ ಸಾರಲರಿದಪ್ಪ, ಮದದಾನೆ
ಯಂತೆ ಪಿಡಿಯಲರಿದಪ್ಪ, ಕಿಚ್ಚಿನಂತೊಳಗೊಳಲರಿದಪ್ಪ, ಬಲ್ಲಿದನಾಣೆ
ಯಂತೆ ಮೀಱಲರಿದಪ್ಪ, ಚಕ್ರದಂತೆ ತಪ್ಪಿಸಲರಿದಪ್ಪ, ಸೂಜಿಯಮೊನೆ
ಯಂತೆ ಕೂರಿತಪ್ಪ, ಕಾಳಗದಂತೆ ಪುಗಲರಿದಪ್ಪ, ಮಸಣದಂತಿರಲರಿದಪ್ಪ,
ಬಿಸಿಲ್ಗುದುರೆಯಂತೆ ಮಾಯಮಪ್ಪ, ಐಂದ್ರಜಾಳಿಕನಂತೆ ಬಹುಪ್ರಕಾರ
ಮಪ್ಪ, ಪೊಲಸಿನಂತಶುಚಿಯಪ್ಪ, ವಾತದಂತೆ ನಡುಕಮಪ್ಪ, ನೀರಿನಂತೆ
ಕಟ್ಟಲರಿದಪ್ಪ, ಮೋಕ್ಷದಂತಱಿಯಲರಿದಪ್ಪ, ಸಂಕ್ರಾಂತಿಯಂತೆ ನಿಟ್ಟಿಸ
ಲರಿದಪ್ಪ, ಮರುಳಂತೆ ಕೊಂಡಾಡಲರಿದಪ್ಪ[1], ಪಱವೆ ತೋಱಿಯಂತೆ ಮಾ
ಣಿಸಲರಿದಪ್ಪ, ರಾಜದ್ರವ್ಯದಂತೆ ಕುಂದಿಸಲರಿದಪ್ಪ, ಕೊಡದ ನೀರಂತೆ
ಪೆರ್ಚಿಸಲರಿದಪ್ಪ, ಸಂಸಾರಮಂ ನಂಬಿ ದರ್ಶನಮುಮಂ ವ್ರತಮುಮಂ
ಕೆಡಿಸುವುದೆಗ್ಗಿಕೆಯೆಂದು ವ್ರತಪರಿರಕ್ಷಣೋಪಾಯಮಂ ಚಿಂತಿಸು
ತ್ತಿರ್ದಳರ್ಪನ್ನೆಗಂ, ೧೮೬

ಕಡುಚಪಳತೆಯಂ ಬಿಟ್ಟ
ನ್ನೊಡಗೂಡೊಡಗೂಡದಂದು ದೆಸೆವಲಿಗೆಯ್ವಂ ।
ತಡೆಯದೆನೆ ಕನ್ನೆ ತಾಂ ನಡು
ನಡುಗುತ್ತುಂ ಜಿನರ ಪದಮನನುಱೆ ಸೆಱೆವಿಡಿದಳ್ ॥ ೧೮೭

ಅರಸನ ಕೋಪಂ ಪಿರಿದೋ
ಸರಿಸಿದೆ ಮಾಕೆರ್ಳ್ದದಾಗದೆನ್ನದೆ ಪಲವಂ ।
ಸ್ಮರಿಯಿಸದೆ ಕೂಡು ಕೂಡದೊ
ಡರವರಿಸುವೆನಲ್ಲನಕ್ಕ ಕೊಲ್ಲದೆ ಮಾಣಂ ॥ ೧೮೮

ಆರ ಮಗಳಂದು ಭೂಭುಜ
ನಾರಯ್ಯದೆ ನಿನ್ನನರಸಿಮಾಡಿದನೆಂಬೀ ।
ಕಾರುಣ್ಯಂ ಕೇವಳಮೋ
ಧಾರಿಣಿ ಬೆಸಗೆಯ್ವ ಬಾಳ್ವುದಿದು ಬೇವಸಮೋ ॥ ೧೮೯

ಎಂದು ಕಂಡಕಂಡವರೆಲ್ಲಂ ಗಲ್ಲಂಗುರಿಗೊಳ್,[2] ನವಿಲ್ ಕಾರ್ಗಾ

---

1 ಮಕ್ಕಳಂತೆ ಸಂತವಿಸಲರಿದಪ್ಪ (ಗ)   2 ಗಲ್ಲಗುಗ್ಗುರಿಗೊಳ್ (ಗ)

ಲಮುಂ, ಹಂಸೆ ಸರೋವರಮುಂ, ಮದದಾನೆ ಬನಮುಂ, ಪಸುಗೂಸು ಮೊಲೆ ಯುಂ, ಪೆಣ್ಗೂಸು ತವರ್ಮನೆಯುಂ, ತುಂಬಿ ತಾವರೆಯುಂ, ಕಱು ಕೆಚ್ಚಲುಂ, ನಲ್ಲಳ್ ನಲ್ಲನಂ, ವ್ಯವಹಾರಿ ಪಡಪಂ, ಕೊಡುಗೂಸು ಮದುವೆಯುಂ ಬೆಳಸುಳ್ಳಂ ಮೞೆಯುಂ, ನೆನೆವಂತು ಜಿನಪಾದಾಂಭೋಜಂಗಳಂ ನೆನೆಯುತ್ತುಂ ಪರಿಚ್ಛೇದಿಸಿರ್ದಳಪ್ಪುದುಂ, ಸಿಂಹರಥಮಹಾರಾಜಂ ಮುನಿದು ಅಚ್ಚುಳಾಯಿಲರಂ ಬರವೇೞ್ದು ಚಪಳೆಯುಂ ಸಾಯೆ ಮೋದಿಯೆಂಬುದುಂ, ೧೯೦

ಕಟ್ಟಿನೆ ಕಱಿಯುವರಾಗಳ
ಗಟ್ಟಿನೆ ಪರಿತಂದು ಮೂಣದಚ್ಚುಳಕೋಲಿಂ ।
ತಿಟ್ಟಿನೆ ತಿರಿಪಿ ದುರಾತ್ಮರ್
ಜಟ್ಟಿನೆ ಕನ್ನೆತ್ತರೊಗೆಯೆ ತೊಲಗದೆ ಬಡಿದರ್ ॥ ೧೯೧

ಮುಳಿಸಿಂದೊಡನೊಡನೆ ಘಳಿ
ಲ್ಘಳಿಲೆನೆ ಸೂಳಾಯ್ತುರಟ್ಟೆ ಪೊಯ್ಯುವುದುಮಾಗಳ್ ।
ಕಳವಳಿಸದೆ ಬೆಂಬೀೞದೆ
ಮುಳಿಸಿಲ್ಲದೆ ಕನ್ನೆ ಮಂದರಾದ್ರಿವೊಲಿರ್ದಳ್ ॥ ೧೯೨

ಕ್ಷೋಣೀಶನ ಬೆಸದಿಂ ಕ
ಶಾಗ್ರಣದೆ ಸೂಳಾಯ್ತುರಟ್ಟೆ ಮೋದುತ್ತಿರಲುಂ ।
ಮಾಣದೆ ಜಿನೇಂದ್ರಪದಮಂ
ಜಾಣೆ ಮಹೋತ್ಸಾಹದಿಂದೆ ನೆನೆಯುತ್ತಿರ್ದಳ್ ॥ ೧೯೩

ಶರಣೆನಗೀಂಟುವಸರದೊಳ್
ಪರಮಜಿನೇಶ್ವರಪದಾಂಬುಜಾತಮೆ ಪೆಱತಿಂ ।
ಶರಣಿಲ್ಲೆಂದುಱೆ ಪಿಡಿದಳ್
ಸುರುಳಿಲ್ಲದೆ ಬಂದಿವಿಡಿವವೊಲ್ಜಿನಪದಮಂ ॥ ೧೯೪

[ಅಂತು ತನ್ನೊಂದುನೋವಂ ಬಗೆಯದೆ ವ್ರತಂ ಕೆಟ್ಟಪುದೆಂಬ ನೋವೆ ಪಿರಿದಾಗೆ ವ್ರತಮಂ ರಕ್ಷಿಪ್ಪುದಱಿಂ ಸಾವಂ ನಿಶ್ಚಯಿಸಿ ದೀಕ್ಷಾ

ಭಿಲಾಷೆಯುಂ ಬಿಟ್ಟು[1] ಪಂಚನಮಸ್ಕಾರಮಂ ಜಪಿಸುತ್ತಿರ್ದಳನ್ನೆಗಂ ಆ ಪುರದ ನಗರದೇವತೆಗಳ್ಗನುಕಂಪಮಾಗೆ ಬೇಗಮೆಯ್ದು ನೆರೆದು ಬಂದನಂತಮತಿಯುಮಂ ಕಂಡು ದೃಢವ್ರತೆಯೆಂದಱಿದು ಕೈಮುಗಿದು
ನಾನಾಪ್ರಕಾರದಿಂ ಪೊಗೞ್ದು ಮತ್ತಮಿಂತೆಂದರ್ :—][2] ೧೯೫

ನಿಲ್ಲೋ ಕುಮಾರಿ ತಲ್ಲಣ
ಮಿಲ್ಲದೆ ಮುಳಿಸಿಲ್ಲದೊಂದೆಮನದಿಂದಂ ನೋ ।
ವಿಲ್ಲದೆ ಪದಪಿಂ ತ್ರಿಭುವನ
ವಲ್ಲಭನಂ ನೆನೆವ ಮಹಿಮೆಯಿದು ಕೇವಳಮೋ ॥ ೧೯೬

ಧನಮುಳ್ಳನುಮಂ ಬಿಡದೊ
ಯ್ಯನೆ ಸಾಯದೆ ಬಂದಿವಿಡಿದವಂ ಬಾೞ್ಗುಂ ।
ದನವರತಂ ಜಿನರಂ ಪಿಡಿ
ದ ನರಂಗೆರಪುಂಟೆ ಬಗೆವೊಡಿನ್ನೀ ಜಗದೊಳ್ ॥ ೧೯೭

ನರೆ ಬಂದನಿತಱೊಳ್ ನರರ್
ಪಿರಿಯರೆ ಜಿನನಾಥಸೇವೆಯುಳ್ಳ ಮನುಷ್ಯರ್ ।
ಧರೆಯೊಳ್ ಕೂಸಾದೊಡಮವ
ರೆರಡಿಲ್ಲದೆ ಪಿರಿಯರವರೆ ಧನ್ಯರ್ ಮಾನ್ಯರ್ ॥ ೧೯೮

ಪಿರಿದು ಕಿವಿ ಕೋಡಿನಂತಿರೆ
ಪಿರಿದಪ್ಪುದೆ ಬಲ್ಪಿನೆಡೆಗೆ ಜಿನಸೇವನೆಯು ।
ಳ್ಳರೆ ಕಿಱಿಯರಾದೊಡಂ ಕೇ
ಳ್ಪಿರಿಯರಿವರ್ ಕಿಱಿಯರೆಂತುಮದನೊಲ್ಲದವರ್ ॥ ೧೯೯

---

1 ವ್ರತಮುಂ ಕಿಡಿಸುವುದು ಕಜ್ಜಮಲ್ಲೆಂದು ಸಾವಂ ಪರಿಚ್ಛೇದಿಸಿ ತನ್ನ ದೇಹಾಭಿಲಾಷೆಯುಂ, ಬಿಟ್ಟು (ಕ).

2 ಆಗಳನಂತಮತಿಕನ್ನೆಗಾದುಪಸರ್ಗಮಂ ನಗರದೇವತೆಗಳಱಿದು ಬೆಚ್ಚರಂ ಬಂದು ನೋಡಿ (ಗ)

ಪೊಲಲ್ಲದೆ ಪಿರಿದಪ್ಪುದೆ
ಮೇಲಪ್ಪುದೆ ತುಪ್ಪುದೆಡೆಗೆ ಧರ್ಮಮೆನೊಲ್ವಾ ।
ಕೀೞುಂ ಮೇಲದನೊಲ್ಲದ
ಮೇಲುಂ ಕೀೞಕ್ಕುಮೆಲ್ಲಿ ಸಂದೆಯಮುಂಟೇ ॥ ೨೦೦

ಬಱಿಯ ಜಿನಭಕ್ತಿಯಲ್ಲಿದು
ತಱಿಸಲ್ವುವು ನೆಱೆಯೆ ಪೆಂಪುಮಾರ್ಪುಂ ಮನದೊಂ ।
ದಱಿವುಂ ವ್ರತದುನ್ನತಿಯುಂ
ಪೆಱತೇನೀ ಕನ್ನೆಯಧಿಕಗುಣಯುತೆಯಕ್ಕುಂ ॥ ೨೦೧

ಎಂದು ಪೊಗೞ್ದು ಕನ್ನೆಯ ನೋವೆಲ್ಲಮನರಸನ ಪಟ್ಟದರಸಿಯರ ಪರಿಜನದ ಕುಮಾರರ ಪ್ರಧಾನರ ಮೇಲಿಕ್ಕುವುದುಂ ॥ ೨೦೨

ಎಲ್ಲರ ಮೆಯ್ಗಳೊಳಂ ತಳು
ವಿಲ್ಲದೆ ಬಾಸುಳ್ಗಳಾಗೆಯ ಕಡುನೋವಿಂದಂ ।
ಪಲ್ಲಂ ಗಿಡಿಗಿರಿದಳುತುಂ
ನಿಲ್ಲದೆ ನೆತ್ತರನೆ ಕಾಱಿ ಕೆಡೆದರ್ ನೆಲದೊಳ್ ॥ ೨೦೩

ನೋವಿಂಗಿನಿಸಿರಲಾಱದೆ
ಸಾವಾಯ್ತೆಂದಳ್ಕಿ ಬೆಚ್ಚಿ ಗೋಳಟ್ಟಳುತೋ ।
ಪೋವೆಂದು ಧೈರ್ಯಮಿಲ್ಲದೆ
ಭೂವಳಯಾಧಿಪನ ಮುಂದೆ ಪೊರಳುತ್ತಿರ್ದರ್ ॥ ೨೦೪

ಧರಣೀಶಂ ತಾಂ ನೋವಿಂ
ಗಿರಲಾಱದೆ ನೊಂದು ನಡುಗಿ ತಲ್ಲಣದಿಂದಂ ।
ಸೊರೆಯೊಳಗಿಲಿ ಪೊಕ್ಕಂತಿರೆ
ಪರಿವೆರಿದಲ್ಲಲ್ಲಿಗುರುಳುತಿರ್ದಂ ಭಯದಿಂ ॥ ೨೦೫

ಅಂತು ಜ್ವರಮಾದರಂತೆ ಕುಂಬಿಕ್ಕುವರಸನುಮಂ ಮಗುವಿನಂತೆ ಪೊರಳ್ವರಸಿಯರುಮಂ ನರಡಾದೆತ್ತಿನಂತೆ ನಾಲಗೆಯನುೞ್ವ ಪರಿಜನ

ಮುಮಂ [ಕುಂದದಾವಿನಂತೆ ಕಾಲಂ ಬಡಿವ ಪುರಜನಮುಮಂ] ವೈಲಾ
ರದ ಗೊರವನಂತೆ ತಂತಮ್ಮನೆ ಬಡಿದುಕೊಳ್ವುಚ್ಚುಳಾಯಿಲರುಮಂ
ಕೊರಲ್ಬಿಗಿದ ಕಱುವಿನಂತೆ ಗೋಳಿಡುವ ವಿಳಾಸಿನಿಯರುಮಂ ಕಱು ಸತ್ತ
ಮ್ಮೆಯಂತೊಱಲುವ ಕುಮಾರರುಮಂ, ಜನ್ಮಾಭಿಷೇಕದಂದಿನ ಮಂದ
ರದಂತಿರ್ದ ಕುಮಾರಿಯುಮಂ ನಗರದೇವತೆಗಳ್ ಕಂಡು ಕಯ್ಯಂ
ಪೊಯ್ದು ಕಳಕಳಿಸಿ ನಕ್ಕು, ೨೦೬

ಆವಾವ ನೋವು ಬಂದೊಡ
ಮಾವಾವ ಪರೀಷಹಂಗಳಡಸಿದೊಡಂ ಮ।
ತ್ತೇವೋಯೆನ್ನದೆ ಜಿನಪದ
ಭಾವನೆಯಿಂದಿರ್ಪ ಜೈನರಿಂ ಮಿಗಿಲೊಳರೇ ॥ ೨೦೭

ಕೇಡಾದುದೆಂದು ಬೆಚ್ಚದೆ
ಬಾಡದೆ ಬೆಂಬೀೞದಂಜೆ ಚಿಂತಿಸದೆರಡಂ।
ಮಾಡದೆ ಮನಮಂ ಶುಭದೊಳ್
ಕೂಡಿರ್ಪ ಜಿನಾಗಮಜ್ಞರಿಂ ಮಿಗಿಲಾವಂ ॥ ೨೦೮

ಪಗೆಯ್ವುದೆಂದು ನೆಗೞದೆ
ರಾಗಮನೊಡರಿಸುವ ಬುದ್ಧಿಯಿಲ್ಲದೆ ಪಾಪೋ।
ದ್ಯೋಗಮನೆ ಬಿಸುಟು ಧರ್ಮೋ
ದ್ಯೋಗದೊಳಡರಿರ್ಪ ಜೈನರಣ್ಣ ವಿದಗ್ಧರ್ ॥ ೨೦೯

ಕಿಡುವೊಡಲಂ ಧನಮಂ ಬಿ
ಟ್ಟೊಡರಿಸಿ ಸದ್ಧರ್ಮಮಂ ಮಹಾದುಷ್ಕೃತಮಂ।
ಕೆಡಿಸಿ ನಿರಂತರಸುಖಮಂ
ಪಡೆವೊಡೆ ಕೇಳ್ ಜೈನರಲ್ಲದಾರ್ ಸುಮತಿಯೊಳ್ ॥ ೨೧೦

ಸುರಗತಿಯುಂ ನಿರ್ವೃತಿಯುಂ
ದೊರೆಕೊಳ್ವೊಡೆ ಧರ್ಮದಿಂದೆ ದೊರೆಕೊಳ್ಗುಂದಾ।

ದರದಿಂ ಧರ್ಮದೊಳಸಗುವ
ಪರಮಗುಣಂ ಜೈನರಲ್ಲಿ ನೆಲಸಿದುದಲ್ತೇ ॥ ೨೧೧

ಸಿರಿಯೊಂದೊದವಂ ಜವ್ವನ
ಭರಮಂ ನಚ್ಚಿರ್ದು ಕೆಡುವರೇ ಕನ್ನೆಯವೋಲ್ ।
ಸುರಗತಿಯಂ ನಿರ್ವೃತಿಯಂ
ಪರಮಾರ್ಥಂ ಪಡೆಯಲಱಿವರೇ ಜಡಮತಿಗಳ್ ॥ ೨೧೨

ಎಂದು ದೇವದುಂದುಭಿಗಳಸೆಯೆ ಜಯಜಯನಿನಾದದಿಂ ಪುಷ್ಪವೃಷ್ಟಿಯಂ ಸುರಿದು ತಮ್ಮ ರೂಪಂ ತೋಱಿ ಜನವೆಲ್ಲಮಾಶ್ಚರ್ಯಂಬಡೆ ಕುಮಾರಿಗೆ ಪೊಡೆವಟ್ಟುಪಸರ್ಗಮಂ ಪಿಂಗಿಸಿ ಪೋದರ್. ಇತ್ತಲ್ ಸಿಂಹರಥ ಮಹಾರಾಜನುಂ ಪುರಜನಂಗಳುಂ ಜಿನಭಕ್ತಿಯೊಳಾದ ಮಹಾಮಹಿಮೆಯಂ ಕಂಡು ಅನಂತಮತಿಕುಮಾರಿಯಂ ಪೂಜಿಸಿ ಪೊಡೆವಟ್ಟು ಸಕಲರುಂ ಶ್ರಾವಕವ್ರತಮಂ ಕೈಕೊಂಡು ಸಮ್ಯಕ್ತ್ವಸಮನ್ವಿತರಾದರ್. ಅನಂತಮತಿಯುಂ ರಾಜಶ್ರೇಷ್ಠಿಯಪ್ಪ [ಜಿನೇಂದ್ರದತ್ತನುಂ ಮನ್ನಣೆಯಿಂ ತನ್ನ ಮನೆಗೊಡಗೊಂಡು ಪೋಗಲೆಂದಿರ್ಪನ್ನೆಗಂ, ೨೧೩

ನಾನಾವಿಧದರ್ಚನೆಯಿಂ
ದಾನಾರಿಯ ಪಾದಪದ್ಮಮಂ ಪೂಜಿಸಿ ನೀ ।
ನಾನಂದಮೂರ್ತಿ ದಿವಿಜಾಂ
ಗನೆ ನೀಂ ಕೈಕೊಂಡು ರಕ್ಷಿಸೆಮ್ಮಂ ದಯೆಯಿಂ ॥ ೨೧೪

ಎಂದರಸನುಂ ಸಕಲಪರಿಜನಂಬೆರಸು ಪೂಜಿಸಿ ಬಂಡಾರದ ಪೊನ್ನೆಲ್ಲಮಂ ಮುಂದೆ ರಾಸಿಮಾಡುವುದುಂ ಒಂದುಮಂ ಕೈಕೊಳಲೊಲ್ಲದೆ ಮನದೊಳ ನಕ್ಕು ಧರ್ಮದೊಳಂ ದೃಢರಪ್ಪುದೆಂದರಮನೆಯಂ ಪೊಱಮಟ್ಟು ಬರ್ಪಳಂ ಧರ್ಮವಾತ್ಸಲ್ಯದಿಂ ರಾಜಶ್ರೇಷ್ಠಿಯಪ್ಪ] ಜಿನೇಂದ್ರದತ್ತಂ ಮನ್ನಣೆಯಿಂ ತನ್ನ ಮನೆಗೊಡಗೊಂಡು ಪೋಗಿ ನೀನೆನಗೆ ತಾಯು ಸಮಾನಳಾಗಿ ಸುಖವಿರ್ಪುದೆಂದು ಪ್ರಾರ್ಥಿಸುವುದುಂ ಅಂತೆ

ಗೆಯ್ವೆನೆಂದು ಮನೆಯೊಳಗಿರದೆ ಸೆಟ್ಟಿಯ ದೇಹಾರಮಂ ಪೊರ್ದಿ ಕಮಲ
ಶ್ರೀಗಂತಿಯರಂ ಸಾರ್ದು; ೧೧೫

ಪರತತ್ವವಿಚಾರದಿನ
ಚರಿಯಾಗೆ ಜಿನೇಂದ್ರಭಕ್ತಿಯಿಂ ಸಂದ ಮಹಾ |
ಪುರುಷರ ಕಥೆಗಳ ಕೇಳ್ವಾಯಿ
ನರವಿಂದದಳಾಕ್ಷಿ ಪಲವುಮೊಳ್ನೋಂಪಿಗಳಂ ‖ ೧೧೬

ಅಲಸದೆ ಮನದೊಳ್ ಚಿಂತಿಸಿ
ಪಲುಂಬಿ ಪಂಬಲಿಸದಿನಿಸನಪ್ಪೊಡಮೊಂದು |
ಮ್ಮಳಿಸದೆ ಭೋಗಂಗಳ ಪಂ
ಬಲನೊಲದೆ ಜಿನರನೆಯ್ದೆ ಪಂಬಲಿಸುತ್ತುಂ [1] ‖ ೧೧೭

ಇರೆ, ಜಿನೇಂದ್ರದತ್ತನುಮಾತನ ವಲ್ಲಭೆ ವಸುದೇವಿಯುಮರಸನು ಮರಸಿಯುರುಮೆಮ್ಮ ಗುರುವೆಂದು ಕೊಂಡಾಡುತ್ತಿರೆ ಕಾಲಮಂ ಕಳಯುತ್ತುಮಿರ್ಪುದುಮತ್ತಂ ಚಂಪಾಪುರದೊಳ್ ಪ್ರಿಯದತ್ತಸೆಟ್ಟಿಯುಮಂಗಮತಿಯುಂ ಬಂಧುವರ್ಗಮುಮನಂತಮತಿಯ ಪೋಗಿಂಗೆ ವಿಸ್ಮಯಂ ಬಟ್ಟು, ೧೧೮

ತರುಣಿಯ ರೂಪಿಂಗಾರುಂ
ಸರಿದೊರೆಯೆನಿಪನ್ನರಿಲ್ಲ ಧಾರಿಣಿಯೊಳ್ವಂ |
ಕರುಹಾನನೆಯುಂ ವಿದ್ಯಾ
ಧರನೊರ್ವಂ ಬೇಗಮುಯ್ದನಾಗಲೆವೇಳ್ಕುಂ ‖ ೧೧೯

ಅಲ್ಲದಂದಿಂತು ನೋಡೆನೋಡೆ ಅದೃಶ್ಯಮೆಂತಾದಳೆಂದು ಪ್ರಿಯದತ್ತಸೆಟ್ಟಿ ಸೈರಿಸಲಾಱದೆ, ೧೨೦

---

1 ಮೊಳ್ವಂ ಪಲವುಂತೆಱದುಪಭೋಗಮನೊಲವಿಂ ಬಯಸದೆ ಸರೋರುಹಾನನೆ ಭರದಿಂ (ಕ)

ನಿನ್ನ ರೂಪನೆ ನೋಡಿ ಬಾೞುವೆನಾಗಳುಂ ಮನದರ್ತಿಯಿಂ
ನಿನ್ನ ಮುದ್ದನೆ ನಚ್ಚಿ ಮೆಚ್ಚುವೆನಾಗಳುಂ ಪ್ರಿಯಚಿತ್ತದಿಂ
ನಿನ್ನ ಮೆಲ್ವಚನಂಗಳಂ ನೆಱೆ ಕೇಳ್ದು ಮುಯ್ಯನೆ ಮಾಡುವೆಂ
ನಿನ್ನಗಲ್ಕೆಯೊಳಂತು ಸೈರಿಸುವೆಂ ಸರೋಜದಳಾನನೇ ॥ ೨೨೧

ನಿನ್ನುಡುವ ವಸ್ತ್ರಚಯಮುಮಂ
ನಿನ್ನುನ್ನತಿವೆತ್ತ ಪಲವು ರನ್ನದ ತೊಡವಂ ।
ನಿನ್ನಾಡುವೆಡೆಗಳಂ ಮಾ
ನೋನ್ನತೆ ನೆನೆನೆನೆದು ದೇಹಮುರಿದಪುದಿನ್ನುಂ ॥ ೨೨೨

ಒಡನುಣಲಾರಂ ಕರೆವೆಂ
ತೊಡೆಗಳನನುನಯದಿನಾರನೇಱಿಸಿಕೊಳ್ವೆಂ ।
ಕಡುಗೂರ್ಮೆಯಿನಾರಂ ಮೆ
ಲ್ಲಡಿಯಿಂ ಮುದ್ದಾಡಿಪೆಂ ಸರೋರುಹವದನೇ ॥ ೨೨೩

ಜಿನಪೂಜೆಗಳಂ ಮಾಡದೆ
ಮುನಿಗಳ್ಗಾಹಾರದಾನಮಂ ಮಾಡದೆ ಭೋಂ ।
ಕನೆ ಪೋಗಲಾಗ ಮಗಳೇ
ಮನಕತಮಂ ಮಾಡಿ ಪೆತ್ತವರ್ಮಱುಗುವಿನಂ ॥ ೨೨೪

[ಸಿರಿಗೆನ್ನೊಡನಾರ್ದೊರೆಸರಿ
ಕರಮಿಂತಪ್ಪೆನಗೆ ಪುಟ್ಟಿಯುಂ ಮಗಳ್ ವೆಸುಂ ।
ಧರೆ ಪೊಗೞೆ ದಾನಮಂ ನೀಂ
ಜಿನಪೂಜೆಯುಮನೊಲ್ದು ಮಾಡದುಸಿರದೆ ಪೋಪಾ] ॥ ೨೨೫

ಎಂದು [ಪೊಳ್ಮರನಂ ಕಿಚ್ಚುಳುರ್ವಂತೆ ದುಃಖಾಗ್ನಿ ತನ್ನಂ ಸುಡೆ]
ಪ್ರಿಯದತ್ತಸೆಟ್ಟಿ ಪಱಿಯಿಸಿ ಮಾಣ್ಬುದುಮಂಗವತಿ, ೨೨೬

ಪರಮಜಿನೇಂದ್ರಪೂಜೆಗಳನಚ್ಚರಿಯಾಗಿರೆ ಮಾಡಿ ಬಂಧುಗ
ಳ್ನೆರೆದೊಡಗೂಡಿ ನೋಡೆ ಪಱೆ ಭೋರೆನೆ ಬಾರಿಸೆ ಪೊನ್ನತೋರಣಂ

ಕರಮೆಸೆದೊಪ್ಪೆ ಕಟ್ಟೆ ಗುಡಿಗಟ್ಟೆ ವಿವಾಹಮನರ್ತಿವೆಟ್ಟು ಪಂ
ಕರುಹದಳಾಕ್ಷಿಗಾಗಿಸುತೆ ನೋೞ್ಪನಿತಂ ನೆಱೆ ನೋಂತೆನಿಲ್ಲೆ ನಾಂ॥ ೨೭

ಬಸದಿಗೆ ಪೋಗಿ ದಿವ್ಯಮುನಿಪುಂಗವರಂ ಮನದರ್ತಿಯಿಂದೆ ಬಂ
ದಿಸಿ ಜಿನನಾಥನಂ ಸ್ತುತಿಶತಂಗಳಿನಾದರದಿಂದೆ ಕೂರ್ತು ಬ
ಣ್ಣಿಸಿ ಮನೆಗಾಗಳಂತೆ ಪರಿತಂದವರೆಂದುದನರ್ತಿವೆಟ್ಟು ರಾ
ಗಿಸಿ ಕೊರಲಪ್ಪಿ ಪೇೞ್ವಿವಿಮಳಾಂಗಿಯ ನಾನಿರದೆಲ್ಲಿ ಕಾಣ್ಬೆನೋ ॥ ೨೮

[ಎಂದು ಪೞಯಿಸಿ]

ಲತೆಯುಂ ತತ್ತರಳಾಕ್ಷಿಯಂಗಮೆನುತುಂ ನೀರೇಜಪತ್ರಂಗಳಂ
ಸತತಂ ಕನ್ನೆಯ ನೇತ್ರಯುಗ್ಮಮೆನುತುಂ ಮತ್ತಾಳಿಸಂದೋಹಮಂ
ಮತಿಗೆಟ್ಟಾಕೆಯ ಕುಂತಳಂಗಳೆನುತುಂ ನಾನಾ ಪ್ರಕಾರಂಗಳಿಂ
ಸುತೆಯೆಂದಾವನಮೆಲ್ಲಮಂ ಮನದ ನೋವಿಂ ನಾಡೆಯುಂ[1] ಸೋದಿದಳ್ ॥ ೨೯

ಅಂತು ದುಃಖಾಗ್ನಿಯಿಂ ಬೆಂದು ಪೋಗಿ ಪೞಯಿಸುವೆಂಗಮತಿಯುಮಂ ಪ್ರಿಯದತ್ತಸೆಟ್ಟಿಯುಮಂ[2] ವರದತ್ತಭಟ್ಟಾರಕರ್ ಬಂದು ಸಂತೈಸಿ[3] ಧರ್ಮಮನಿಂತೆಂದು ಪೇೞ್ದರ್:— ೩೦

ಸುರಗಜೇಂದ್ರಮೆ ವಾರಣಂ ಪಿಡಿವಾಯುಧಂ ಮೆರೆವಜ್ರಮು
ಚ್ಚರಿಸುರಾಳಿಯೆ ಸಂದ ಜೀವಿತದಾಳ್ಗಳಿಕೆಯ ಕೋಟಿಯೊ
ಪ್ಪಿರೆ ನಗಪ್ತಿಯ ಸ್ವರ್ಗವಿಾದೊರೆಯೂರ್ಧ್ವಲೋಕದ ಚಕ್ರಿಗಂ
ಮರಣವಾಗದೆ ಮಾಣ್ದೆಂದೊಡೆ ಗೆಲ್ವನಾವನೊ ಮೃತ್ಯುವಂ ॥ ೩೧

ನರರುಂ ಖೇಚರರುಂ ಸುರಪ್ರತತಿಯುಂ ಪೂಣ್ದಾಳ್ವಸಂಗೆಯ್ವರು
ರ್ವರೆ ಷಟ್ಖಂಡವಿಭೂಳಿಗಂ ಕುದುರೆಗಂ ಸ್ತ್ರೀಸಂಕುಳಕ್ಕಂ ನಿಜಾ
ದರದಿಂ ಮೇರೆಗಳಿಲ್ಲೆನಿಪ್ಪಧಿಕಲಕ್ಷ್ಮೀವಲ್ಲಭಂ ಚಕ್ರಿಗಂ
ಮರಣಂ ಬಾರದೆಮಾಣದೆ ದೊಡುತ್ತಿವರ್ಗೆಲ್ವನ್ನರಾರ್ ಮೃತ್ಯುವಂ ॥

1 ಮನದೊಳಗಳ್ಕಡೆಯುಂ(ಗ)

2 ನೋವಿಂ ಬಿಬ್ಬನೆ ಬಿರಿದ ಬಂಧುಗಳುಮಂ ವರದತ್ತ(ಗ)

3 ಸಂಬೋಧನಾರ್ಥಂ ಧರ್ಮ (ಕ)

ಎಂಬುದುಮವರ ವಚನವೆಂಬಮೃತದಿಂ ತಮ್ಮ ದುಃಖಾಗ್ನಿ[ನಂದೆ ಕೆಲವಾನುಂ ದಿವಸಂ ಪೋಗೆ ಪ್ರಿಯದತ್ತಸೆಟ್ಟಿ ಮಗಳಾಡುವೆಡೆಗಳಂ ನೋಡಿ ಕಡುನೋವಿಂ ಸೈರಿಸದುಮ್ಮಳಿಸಿ ನಂಟರ್ಗಱಿಪಲೊಲ್ಲದಾಪುರದಿಂ ಪೊಱಮಟ್ಟು ಕತಿಪಯದಿನಂಗಳಿಂದಯೋಧ್ಯೆಗೆ ಬಂದು ಜಿನೇಂದ್ರದತ್ತಸೆಟ್ಟಿಯ ಮನೆಯುಂ ಪೊಕ್ಕು ತನ್ನ ತಂಗೆಯಪ್ಪ ವಸುದೇವಿಗವನಂತಮತಿಯ ಪ್ರಪಂಚಮಂ ಪೇೞ್ವುದುಂ, ೧೩೩

ತೊಟ್ಟನೆ ಕೆೞಗ ಕೇಳ್ದು ಮನಂ
ಗೆಟ್ಟು ಮಹಾದುಃಖದಿಂದಮಿರಲಾಱದೆ ಬಾ ।
ಯ್ವಿಟ್ಟೊಳಱಿ ನೊಂದು ಸೈರಣೆ
ಗೆಟ್ಟೞ್ತಳ್ಕನೆದು ನೆನೆದು ಕನ್ನೆಯ ಗುಣಮಂ ॥ ೧೩೪

ಅಂತು ದುಃಖಾನಳಂ ಸುಡೆ ಕಡುನೋವಿಂದೞುತ್ತುಮಿರ್ಪ ತಂಗೆಯಂ ಧರ್ಮಶ್ರವಣದಿಂದೆಂತಾನುಂ ಮಾಣಿಸಿ] [1] ಮಱುದಿವಸಂ ದೇಹಾರಕ್ಕೆ ದೇವರಂ ಕಾಣಲೆಂದು ಬಂದು ದೇಹಾರದ ಮುಂದಣಾ ॥ ೧೩೫

ಸುರಮಹೀರುಹದೋಳಿಯಿಂ ಸಹಕಾರಭೂಜನಿಕಾಯದಿಂ
ಸರಸಿಜಾಕರದಿಂ ಲತಾಭವನಂಗಳಿಂ ಧ್ವಜದಿಂ ಫಲೋ
ತ್ಕರದಿನಿಂದ್ರವಿಮಾನದಿಂ ಹರಿಚಂದನಂಗಳ ಜೊಂಪದಿಂ
ಸುರನಗಂಗಳ [2] ಪಂಕ್ತಿಯಿಂದೆಸೆದಿರ್ದ ಪೂವಿನ ಮಾಲೆಯಿಂ ॥ ೧೩೬

ರಮಣೀಯಮಪ್ಪ ರಂಗವಲಿಯುಂ ಕಂಡೀ ಹಸ್ತಕೌಶಲಮನಂತಮತಿಗಕ್ಕುಮುೞಿದರ್ಗಾಗದ ಕಾರಣಮಿಲ್ಲಿರ್ಪಾಕೆಯೆ ನಿಕ್ಕುವಮನಂತಮತಿಯಕ್ಕುಮೆಂದು ನೋಡಲ್ಕೆ [3] ೧೩೭

---

[1] ದುಃಖಾಗ್ನಿ ಮಗ್ಗೆ ಕೆಲವಾನುಂ ದಿವಸಂ (ಗ)   [2] ಘನಂಗಳ ಪಙ್ಕ್ತಿ (ಕ)

[3] ರಂಗವಲ್ಲಿಯುಂ ಕಂಡು ವಿಸ್ಮಯಂ ಬಟ್ಟುವೆಲ್ಲಮಕ್ಕನ ಕೈದಾಗೆಂದು ಮನದೊಳ್ ಬಗೆಯುತ್ತುಮೊಳಗಣ್ಗೆ ಪೋಗಿ ದೇವರಂ ಕಂಡು ಬಂದಿಸಿ ಮನೆಗೆ ವಂದು ರಸಾಯನದಮೃತದ ದೊರೆಯೆಂಬಾಹಾರಮನುಂಡು ಕೈಗರ್ಚಿಕೊಂಡು ಪಾಸಿನ ಮೇಲೆ ಕುಳ್ಳಿರ್ದ ಕಣ್ಣನೀರ್ಗಳಂಗನೆಗೆ ಸುರಿದು ಘೋರೆಂದು (ಕ). ಈ ಹಸ್ತಕೌಶಲ್ಯಂ ತಪ್ಪದನಂತಮತಿಯದಾಗಲೆ ವೇಳ್ಕುಮೆಂದು ನೋಡಿ ನೋಡಿ (ಗ)

ಭೋರೆಂದು ಸುಯ್ದು ಮನದೊಳ್
ಮೂರಿಸಿ ಪಂಬಲಿಸಿ ಮಱುಗಿ ಚಿಂತಿಸಿ ನೆನೆದಂ ।
ಭೋರುಹಮುಖಿಯಂ ಮನ್ಮಥ
ವಾರಣಗಮನೆಯನನಂತಮತಿಯಂ ಸುತೆಯಂ ॥ ೨೩೮

[ಅೞುತಿರ್ಪಣ್ಣನಂ ವಸುದೇವಿ ಕಂಡು ನೀವಿದೇಕೞ್ತಪಿರೆಂದು ಬೆಸಗೊಳ್ವುದುಂ, ಪ್ರಿಯದತ್ತಸೆಟ್ಟಿಯೆಂದನಿಂದಾನುಂಡೂಟಮುಂ ನಿಮ್ಮ ದೇಹಾರದ ಮುಂದಣ ರಂಗವಲಿಯುಮನಂತಮತಿಯ ಹಸ್ತಕುಶಲತೆಯುಂ ಪೋಲ್ತುವಪ್ಪುದಱಿಂ ಮಗಳಂ ನೆನೆದೞಲಾಯ್ತೆಂಬುದುಂ ದೇಹಾರದೊಳಿರ್ದ ಕುಮಾರಿಯುಮನೊಡಗೊಂಡು ಬಂದು ತೋರ್ಪುದುಂ,] [1] ೨೩೯

ಸುತೆಯುಪ್ಪುದನಱಿದು ಮಹೋ
ನ್ನತಿಯಿಂ ದುಃಖಾಗ್ನಿ ಪೋಗೆ ಮನದೊಳ್ ಲೋಕ ।
ತ್ರಿತಯಮನಾಳ್ದಂತೆ ವಣಿ
ಕ್ಪತಿ ಬರೆತಗೆದಪ್ಪಿಕೊಂಡು ಮೋಹೋದಯದಿಂ ॥ ೨೪೦

[ತೊಡೆಯನೇಱಿಸಿಕೊಂಡು 'ಕದಪಂ ಕರ್ಚಿ ಬಡವಂಗೆ ಕಡಾರಂ ಕೈಸಾರ್ದಂತಾನುಂ, ತಿಱಿದುಂಬವಂಗೆ ರಾಜ್ಯಂ ದೊರೆಕೊಂಡಂತಾನುಂ ಮಗಳಂ ನೋಡಿ ಪಿರಿದಪ್ಪ ಸಂತೋಷದಿಂ, ೨೪೧

ವನಜಾನನೆ ನಿನ್ನಂ ಕಂ
ಡೆನಗೀಗಳ್ಮನದ ನೋವು ಪೋದುದು ಮುನ್ನಂ ।
ಮನಕತದಿಂ ಕಣ್ಗೆಟ್ಟವೊ
ಲನವರತಂ ಬೆಂದು ನೊಂದು ಮಱುಗುತ್ತಿರ್ದೆಂ ॥ ೨೪೨

ಮಗಳೇ ನೀಸಿಲ್ಲದೆ ಮನೆ
ಬಗೆವಂದೆನಗಟ್ಟ್ಯ ತಿಂಬ ಪೞುವಾದುದು ನೋ ।

---

1 ಒಳಗೆ ಪೊಕ್ಕು ಸುಚಿತ್ತದಿಂ ನೋಡುತ್ತುಮಿರ್ದು (ಗ)

ವಿಗಣಿತಮಪ್ಪುದಱಿಂದ
ಲ್ಲಿಗೆ ದುಃಖಕ್ಕಂಜಿ ಪೆಳ್ಳಬಂದಾನಿರ್ದೆಂ ॥ ೧೪೩

ಎಂದು ತನ್ನ ದುಃಖಮನಱಿಯೆಯುಂ ತೆಱೆಯೆಯುಂ ಪೇೞ್ವುದುಮನಂತಮತಿಯುಂ, ೧೪೪

ಮಾಣದೆ ಕಡುನೋವಿಂ ಕ
ಣ್ಣಾಣದೆ ಬಾಷ್ಪಾಂಬು ನೆಗೆಯೆ ಸ್ರೈಗಣೆಗೆಟ್ಟು ।
ಕ್ಷೂಣಗುಣೆ ಕುಟಿಲಕುಂತಳ
ಜಾಣೆ ಮನೋಭವಮದೇಭಗಾಮಿನಿ ಬೇಗಂ ॥ ೧೪೫

ತನ್ನಂ ಕುಂಡಲಮಂಡಿತಖೇಚರನೊಯ್ದುದು ಮೊದಲಾಗೆ ಜಿನೇಂದ್ರದತ್ತನ ದೇಹಾರಮಂ ಪೊರ್ದಿದುದುಮಂ ನಡುವೆಡೆಯೊಳಾದ ತತ್ಪ್ರಪಂಚಮೆಲ್ಲಮುಮಂ ಪೇೞೆ ಸವಿಸ್ತರಂ ಕೇಳ್ದು ಪ್ರಿಯದತ್ತಸೆಟ್ಟಿ ಬೆಱಗಾಗಿ, ೧೪೬

ಪಿರಿದಪ್ಪಪತ್ತಲ್ಲಮ
ನರವಿಂದದಳಾಕ್ಷಿ ಬಿದಿರ ಗಂಟುಂ ಕಡಿವಂ ।
ತಿರೆ ಕಡಿದು ಬರ್ದುಕಿ ಬಂದೈ
ದೊರೆ ನಿನಗಾಪುಣ್ಯದೇೞ್ಗೆಯೊಳ್ಪೇೞ್ಮಗಳೇ ॥ ೧೪೭

ಎಂದು ಮಗಳ ದುಃಖಮನಾಱೆನುಡಿದು ಪಿರಿದುಮುತ್ಸಾಹದಿಂ ಜಿನಾಭಿಷೇಕಪೂಜೆಯುಂ ಮಾಡಿ ಪತ್ತೆಂಟುದಿವಸಂ ಪೋದಿಂಬಳಿಕ್ಕಂ ಬಂದುದಿವಸಂ ಮಗಳಂ ನೋಡಿ, ೧೪೮

ಇನ್ನಿರಲಾಗದು ಜವ್ವನ
ಮುನ್ನೆಱೆದುದು ಮೃಗನಿಭಾಕ್ಷಿಗಂಬುಜಮುಖಿಗೆಂ ।
ದುನ್ನತಚಿತ್ತಂ ಮದುವೆಯ
ನಿನ್ನೀಕೆಗೆ ಮಾಡವೇೞ್ಕುಮೆಂದುತ್ಸವದಿಂ ॥ ೧೪೯

ತನ್ನ ಸೋದರಳಿಯಂ ಶ್ರುತಸಾಗರಂಗೆ ಕುಡಲ್ವೇಡಿ ಬಂಧುಗಳೆಲ್ಲರ ಬೞಿಗಟ್ಟಿ ವಿವಾಹಮಂಟಪಮಂ ತಳಿರ ತಾವಣಮುಮಂ ಮಾಡೆ, ೧೫೦

ಪೊಳೆವ ದುಕೂಲದ ಗುಡಿಯುಂ
ಮೊಳೆಯುಜದೆಳೆವಳೆಂ ತೋರಣಂಗಳ್ ಮುಕ್ತಾ ।
ವಳಿಯುಂ ಪೊಸರಂಗವಲಿಯು
ವಿಳಸಿತವಾಗಿರ್ದುವೆತ್ತಲುಂ ತದ್ಗೃಹದೊಳ್ ॥ ೨೪೧

ಮತ್ತಂ ಜಿನಾಭಿಷೇಕಕ್ಕೆ ಬಂದಿಕ್ಷುರಸ ಕ್ಷೀರ ದಧಿ ಘೃತಕುಂಭಕಾದಿ ಘಟಂಗಳುಮಂ ಬಳಗಜವಳಿಗೆಂದು ಬಂದ ಚೀನದುಕೂಲದ ಪಾರಾವೆಳಿಯ ಪಲವುದಿಂಪುಗಳುಮಂ ಯಾಚಕಕೋಟಿಗೆ ಬೇಡಿದುದ ನೀಯಲೆಂದು ಪೂಜಿಸಿದ ಪೊನ್ನರಾಶಿಯುಮನನಂತಮತಿ ನೋಡಿ ತಂದೆಯನಿದೇನೆಂದು ಬೆಸಗೊಳ್ವುದುಮಿಂತೆಂದಂ :— ೨೪೨

ಪಿರಿದುತ್ಸವದಿಂದುಱೆ ಜೇಂ
ಕರಿಸಿ ಬುಧರ್ನಚಿತ ಮಚಿಕ ಬಣಿತ ಸ್ಕರಮಾ ।
ದರದಿಂ ನಂಟರ್ಜಿಯೆಮೆ
ಸರಸಿಜಮುಖಿ ನಿನ್ನ ಮದುವೆಯಂ ಮಾಡಿದಪೆಂ ॥ ೨೪೩

ಎಂಬುದುಮನಂತಮತಿ ಮುಗುಳ್ನಗೆ ನಕ್ಕು ತಂದೆಗಿಂತೆಂದಳ್ :—] [1] ೨೪೪

ವಿಮಳಜಿನೇಂದ್ರಸಾಕ್ಷಿಯೊಳು ಸೀಮೆನಗಂ ಕಿಱಿಯಂದು ಮಿಕ್ಕ ಸಂ
ಯಮಿಜಲರಾಶಿಯಪ್ಪ ವರದತ್ತಮುನೀಶ್ವರರಿಂದೆ ಬ್ರಹ್ಮಚ
ರ್ಯಮನನುರಾಗದಿಂ ಕೊಡಿಸಿದಿರ್ಮಱೆಯಲ್ಮಿಮಗಾಗದಾನುಮ
ಕ್ರಮದೊಳ ತಾಳ್ದಿದೆಂ ಮುದದಿನೀಯೆಡೆಯೊಳ್ಕಿಡಿಸಲ್ಕೆ ತಕ್ಕುದೇ ॥

[ಎಂಬುದುಮಾಗಳ್ ಪ್ರೈಶ್ಯಕು
ಲಾಂಬರರವಿ ಮಗಳ ಮಾತಿನಂದಕ್ಕೆ ಕರಂ ।

1 ಸಂತೋಷಂಬಟ್ಟರ್ಪರಂ, ಕುಮಾರಿ ವಿದ್ಯಾಧರನು ಮಾಯ್ದುದು ಮೊದಲಾಗಿ ಜಿನೇಂದ್ರದತ್ತನಾಕಂಡಲ್ಲಿ ನಿರವಾದ ಪ್ರಪಂಚಮಲ್ಲವುಂ ಪೇಳ್ವುದುಮೆಲ್ಲರುಮಱಿದು ಪರಮಸ್ನೇಹಿತರಾಗಿ ಪತ್ತೆಂಟುದಿವಸಂ ಪೋದಿಂಬಳಿಯಮನಂತಮತಿಗಂ ವಸುದೇವಿಯ ಮಗನಪ್ಪ ಶ್ರುತಸಾಗರಂಗಂ ಮದುವೆಯಂ ಮಾಡಲೆಂದಿರ್ಪುದುಮನಂತಮತಿ ಕಂಡಿಂತೆಂದಳ್ (ಗ)

ತಾಂ ಬೆಱಗಾಗಿ ಮಹಾನೋ
ವಿಂ ಬೈದುಂ ಸುಯ್ದು ವಿಧಿಯು ಮನನಲಿಂದಂ ||[1] ೧೫೬

ನೋಡ ಮರುಳ್ಮಗಳ ದಿಟಂ
ಮಾಡುವುದೆಗ್ಗಲ್ತೆ ನಿನ್ನನಟ್ಟಿರೊಳಾಂ ಮು ।
ಪ್ಪಾಡಿಸೆ ಮುನಿಸನ್ನಿಧಿಯೊ
ಳ್ಕಾಡಿದುದಂ ಛಾಂದಸಿಕ್ಕೆಯೊಂದೊದವಿಂದಂ || ೧೫೭

ಎಂಬುದುಮನಂತಮತಿ ತಂದೆಗಿಂತೆಂದಳ್ :— ೧೫೮

ತಿರಿದುಂಬಂಗೆ ಸಿಧಾನಂ
ದೊರೆಕೊಳೆ ಕಡೆಗಣಿಸಿ ಪೋದೊಡಂ ಸಂಸೃತಿಯೊಳ್ ।
ತಿರಿವ ನರಂಗಂ ಧರ್ಮಂ
ದೊರೆಕೊಳೆ ಕಡೆಗಣಿಸಿ ಬಿಟ್ಟೊಡಂ ಸುಖಮುಂಟೇ || ೧೫೯

ಕುರುಡಂಗೆ ಪುಣ್ಯದಿಂ ಕ
ಣ್ದೊರೆಕೊಳ್ವವೊಲೀಮಹೋಗ್ರಸಂಸಾರದೊಳಂ ।
ಪರಧರ್ಮಮದೆಂತಾನುಂ
ದೊರೆಕೊಂಡೊಡೆ ನೆಗೞಲೊಲ್ಲದಾತನೆ ಗಾಂಪಂ || ೧೬೦

ಸನ್ನುತಜಿನಧರ್ಮಂ ನೆಱೆ
ತನ್ನಿಂದಂ ತಾನೆ ಬಂದೊಡೊಲ್ಲದೆ ಬಿಡುವಾ ।
ತಂ ನೆಱೆ ಪೋಲ್ಕುಂ ಜಗದೊಳ್
ಪೊನ್ನಂಬಂ ನೀರೊಳಚ್ಚು ಕಿಡಿಸುವ ಮರುಳಂ || ೧೬೧

ಸದಮಳಧರ್ಮಂ ದೊರೆಕೊಳ
ಲದನೊಲ್ಲದೆ ಮತ್ತೆ ಬಿಡುವ ಜಡಮತಿ ಪೋಲ್ಕುಂ ।
ಮುದದಿಂದೋಲಗದೊಳ್ಪಡೆ
ದುದನಿಂಬಿನೊಳರಿಸುವಲ್ಲಿ ಕಿಡಿಸುವ ಮರುಳಂ || ೧೬೨

---

1 ಎಂಬುದುಂ ಪ್ರಿಯದತ್ತಸಟ್ಟಿ ಬೆಱಗಾಗಿ ವಿಧಿಯುಂ ಬೈದು (ಗ)

ಅದುಕಾರಣದಿಂ ಧರ್ಮದಿನನಂತಸುಖಮಕ್ಕುಮೆಂಬುದಂ ಅಧರ್ಮದಿನನಂತದುಃಖಮಕ್ಕುಮೆಂಬುದಂ ಸಂಸಾರಸುಖಮಲ್ಪಮೆಂಬುದುಂ ನೀಮಿಂಬಾಗಿ ಬಲ್ಲಿರಿಂತುಬಲ್ಲೊಡಮೆನ್ನ ಮೇಲಣ ಮೋಹದಿಂದೀಮಾತಂ ನುಡಿವಿರಾದೊಡಂ ಧರ್ಮಾಭಿಪ್ರಾಯಮನಱಿವ ನೀವಮಗಿದಂ ನುಡಿಯಲಾಗದೆಂಬುವುಂ ಮಗಳೊಳಾದ ಕಡುಮೋಹದಿಂ ಪ್ರಿಯದತ್ತಸೆಟ್ಟಿ ಇಂತೆಂದಂ :— ೧೬೩

ಮದಗಜಗಾಮಿನಿ ಮಾಣಿ
ಕ್ಯದ ಮುತ್ತಿನ ಪೊನ್ನ ಪದ್ಮರಾಗದ ವೈಡೂ ।
ರ್ಯದ ಜಿನಚೈತ್ಯಾಲಯಮಂ
ಮುದದಿಂದಂ ಪಲವನರ್ತಿಯಿಂ ಮಾಡಿಸು ನೀಂ ॥ ೧೬೪

ಪೊಂಗಳಸದಿಂದೆ ಪಲವು ಜ
ಪಂಗಿನ ಪೂವಾರದಿಂದಮೊಪ್ಪುವ ಜಿನಗೇ ।
ಹಂಗಳನನೇಕಮಂ ಪಲ
ವಂ ಗೞಪದೆ ಮಾಡಿಸರ್ತಿಯಿಂ ವನಜಮುಖೀ ॥ ೧೬೫

ಪಾಲಿಂದಂ ಮೊಸರಿಂದಂ
ಮೇಲೆನಿಸುವ ತುಪ್ಪದಿಂದಮೆಡುಗೆಗಳಿಂದಂ ।
ಲೀಲೆಯೊಳ ಮುನಿಕದಂಬಮ
ನೋಲಾಡಿಸು ಮಗಳ ನಿನ್ನ ಕಣ್ತಣಿವಿನೆಗಂ ॥ ೧೬೬

ಮದುವೆಯಾಗಲೆ ವೇಡ್ಕುಮೆಂದು [ಮೇಲುದಂ ಪಾಸಿ] ಬೇಡುತ್ತಿದುಂ [ಅನಂತಮತಿ ನಕ್ಕು] ನೀಂ ಮುಂ ಪೇೞ್ದನಿತುಂ ಪುಣ್ಯಕ್ಕೆ ಕಾರಣಮಕ್ಕುಮಾದೊಡಂ ಎನ್ನ ಕೈಕೊಂಡ ವ್ರತಮನೇಗೆಯ್ದುಂ ಕಿಡಿಸುವೆನಲ್ಲೆಂದು ಮಱುಮಾತಿಂಗೆಡೆಯಿಲ್ಲದಂತು ನುಡಿವುದುಂ, ಪ್ರಿಯದತ್ತಸೆಟ್ಟಿ ಮಗಳ ಪರಿಚ್ಛೇದಮನಱಿದುಸಿರದಿರ್ದನನ್ನೆಗಂ ಮಾವನಪ್ಪ ಜಿನೇಂದ್ರದತ್ತಸೆಟ್ಟಿಯುಮತ್ತೆಯಪ್ಪ ಸುದತ್ತೆಯುಂ ಬಂದಿಂತೆಂದರ್ :-- ೧೬೭

ಬೇಡ ಕಡುಮೂರ್ಖತನಮಂ
ಮಾಡದೆ ಪಿಡಿಯುಱು ಪಿಡಿದು ಮುನ್ನಿನ ಮಾತಂ ।
ನೋಡದೆ ಫಲಮಂ ಕೈಕೊಂ
ಡಾಡದೆ ನೀಂ ಮಗಳ ಮದುವೆಯಾಗಲೆ ವೇೞ್ಕುಂ ॥ ೧೬೮

ಎಂಬುದುಮನಂತಮತಿ [ಮಾವಗಮತ್ತ್ತಗಂ] ಇಂತೆಂದಳ್ :— ೧೬೯

ಸಾರಮಸಾರಮಿದೆಂದು ವಿ
ಚಾರಿಸಿ ಕೈಕೊಂಡು ಕಿಡಿಸಲಾರ್ಪುದೆ ಚಿಃ ನಿ ।
ಷ್ಕಾರಣಮದಱಿಂದನ್ಯರ್
ಬಾರಿಸೆ ಮಾಣ್ಬುದು ಮಾವ ಕಂಚಿನ ದನಿಯೇ ॥ ೧೭೦

ಪಿಡಿದೀ ಸುವ್ರತಮಂ ಮ
ತ್ತೊಡೆಯೊಳ್ ಕಿಡಿಸುವೆನೆ ಕಿಡಿಸಲಱಿಯೆಂ ಬಗೆವಂ ।
ದುಡುವಿನ ನಾಲಗೆಯಂತಿರೆ
ದೃಢವ್ರತಗೊಂದಲ್ಲದೆಂಡುನಾಲಗೆಯೊಳವೇ [1] ॥ ೧೭೧

ಎಂಬುದುಮವರ್ ಮಾತುಗುಡದಿರೆ ಕುಮಾರಿ ಪ್ರಿಯದತ್ತಸೆಟ್ಟಿ ಮೊದಲಾಗೆ ಬಂಧುಗಳೆಲ್ಲರುಮನೊಡಂಬಡಿಸಿ [ಜಿನಪೂಜೆಯುಂಮಾಡಿ] ವರದತ್ತಭಟ್ಟಾರಕರೆ ಗುರುಗಳಾಗೆ ಕಮಳಶ್ರೀಗಂತಿಯರಲ್ಲಿ ಜಿನದೀಕ್ಷೆಯಂ ಕೈಕೊಂಡು, ೧೭೨

ಮನದೊಳರತ್ರಿಯ ಸುಖಮಂ
ನೆನೆಯದೆ ಜಿನಚರಣಕಮಲಮಂ ನಂಬುಗೆಯಿಂ ।
ದನವರತಂ ಮೆಱೆಯದೆ ಭೋಗಂ
ಕನೆ ಸೆಡೆಯದೆ ತಪದೊಳಾದ ನೋವಿಂಗಿನಿಸಂ ॥ ೧೭೩

ಪೆಱವೇೞಸುಖಮಂ ಮನದೊಳ್
ಮಱೆದುಂ ಚಿಂತಿಸದೆ ಶಂಕೆಯಿಂ ಮಿಥ್ಯಾತ್ವ ।

---

1 ದೃಢವ್ರತಂಗತ್ತ್ತಯರಡು (ಗ)

ಕ್ಕೆಱಗದೆ ಮುನಿಸೊಸಗೆಗಳಂ
ತೊಱೆದು ಕಷಾಯಂಗಳಂ ಮನಂಬಿಡೆ ಬಿಡುತುಂ ॥ ೧೭೪

ಪರಮಾಗಮಮಂ ಕರ್ಮದ
ಪರಿಣತಿಯಂ [1] ಮುನ್ನಮೊಳ್ಪನಿಂ ನೆಗೞ್ದ ಮಹಾ।
ಪುರುಷರ ಕಥೆಗಳುಮಂ ತಾಂ
ಸ್ಮರಿಸುತ್ತುಂ ಪೊೞ್ತುಗಳೆಯುತಿರೆ ತೆಱದಿಂದಂ ॥ ೧೭೫

ಖಳಕರ್ಮರಾಜನೊದವಿದ
ಬಳಮಂ ಕೆಡಿಸಲ್ಕೆವೇಡಿ ತೊಟ್ಟದಾ ಕ।
ತ್ತಳಮಂ ಪೋಲ್ತುದು ನೋಡಲ್
ಮಳಮೋರಂತಮರ್ದು ಕೂಡೆ [2] ಸರ್ವಾಂಗಮುಮಂ ॥ ೧೭೬

ಆಂ ಬೇಱೆ ದೇಹಮಪ್ಪುದೆ
ತಾಂ ಬೇಱೆಂದೆಂಬ ಸಿಕ್ಷೆಯಂ ಮಿಗೆ ಮೋಹಾ।
ಡಂಬರಮನುೞಿದು ತನುವಂ
ಪಂಬಲಿಸದೆ ಮೋಕ್ಷಸುಖಮನಾಪೇಕ್ಷಿಸುತುಂ ॥ ೧೭೭

ಅಱಿಯೊಡಲಂ ನಂಬದೆ ಮಿಗೆ
ಯಱಿಸೊಗಮಂ ಪಗೆಯ ಕಂಡ ತೆಱದಿಂ ಕಾಣು। [3]
ತ್ತುಱಿಲಿಂ ಪಲವುಪವಾಸಂ
ಗಳನೋವದೆ ದೇಹಮಂ ಕರಂ ಕುಸಿಯಿಸುತುಂ ॥ ೧೭೮

ಕ್ರಮದೊಳುತ್ತರೋತ್ತರಂ ನೆಗೞ್ದು ಕಡೆಯೊಳ್ ಸಮಾಧಿವಿಧಿಯಿಂ ಶರೀರಮಂ ಬಿಸುಟು ಪನ್ನೆರಡನೆಯ ಸಹಸ್ರಾರಕಲ್ಪದೊಳ್ ಪದಿನೆಂಟು

1 ಜಿನಪದ ಸರಸಿಜಮಂ (ಕ)

2 ಪತ್ತಿರ್ದಾತನ್ಮಳಮೋರಂತಮರ್ದು ಕೂಡೆ (ಖ)
ಪೊತ್ತಿರ್ದದು ತಾಂ ಮಳಮೋರಂತಮರ್ದು ಕೂಡೆ (ಕ)

3 ಅಳಿಯೊಡಲನಂಬಿಪುದುಂ ಪಿಡಿದಳಿವೆನೆತತ್ಸುಖಮನೆಂದು ಪಗೆಯಂ ಕಂಡಂ ತಳಲು (ಗ)

ಸಾಗರೋಪಮಾಯುಷ್ಯಕ್ಕೊಡೆಯಂ ಸುಕಾಂತನೆಂಬ ಮಹತ್ತರದೇವ
ನಾಗಿ ಪುಟ್ಟಿದಳಿಂತು, ೨೭೯

ದುರಿತವಿರೋಧಿಸೇನೆಯನಪತ್ರಿವರ್ಗದ ಮೋಕ್ಷಲಕ್ಷ್ಮಿಯೊ
ಳ್ನೆರೆವೆನಮೋಘಮೆಂಬ ಪುರುಷಂ ಮನದೊಳ್ಗ್ರಹರಿಲ್ಲವಾಗಳುಂ [1]
ಪರಮಜಿನೇಂದ್ರಪಾದದೊಳ್ ಕಾಂಕ್ಷಿತನಪ್ಪುದು ಮತ್ತಮಲ್ಲಿಯುಂ
ಪರಿಹರಿಸಿರ್ಕೆ ತತ್ವಮೆನೆ ಭಾವಿಸುತುಂ ಪರಮವ್ರತಂಗಳಂ ॥ ೨೮೦

[ಚತುರ್ಗತಿಗಳೊಳಾದ ಸುಖಮೆಂಬನಿತುಮಂ ಬಿಟ್ಟು ಮೋಕ್ಷ ಸುಖಮನೆ ಬಯಸುವುದೆಂದು ನಿಷ್ಕಾಂಕ್ಷೆಯ ಕಥೆಯಂ ಗಣಧರದೇವರ್ಪೇಳ್ದರ್] [2] ೨೮೧

ಪಿರಿದುಂ ಸಂತುಷ್ಟನಾದಂ ಮದನಶರಭಯಭೀರುಂಡನುದ್ಯದ್ಗುಣಂ ಮಂ
ದರಧೈರ್ಯಂ ವಾಗ್ವಧೂವಲ್ಲಭನಮಳಯಶೋರಾಶಿ ಸಮ್ಯಕ್ತ್ವರತ್ನಾ
ಭರಣಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ॥ ೨೮೨

ಇದು ನಿಖಿಳದಿವಿಜಪರಿವೃಢಮಕುಟತಟಘಟಿತಮಣಿನಿಕರವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಹೃದಯಪಯೋಧಿಹಿಮಕರ ನುತಭಾವ
ಯುತ ದಿಗಂಬರದಾಸ ನೂತ್ನಕವಿತಾವಿಲಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್

ದರ್ಶನದ್ವಿತೀಯಾಂಗವ್ಯಾವರ್ಣನಂ

ತೃತೀಯಾಶ್ವಾಸಂ.

---

1 ತೊಡರಿಲ್ಲದೇಗಳುಂ (ಕ)

2 ಎಂದು ನಿಷ್ಕಾಂಕ್ಷಿಯ ಕಥೆಯ ಫಲಮಂ ಮುನಿಕುಂಜರರ್ ಪೇಳೆ ಕೇಳ್ದು (ಗ)

ಚತುರ್ಥಾಶ್ವಾಸಂ

ಶ್ರೀನಿರ್ವಾಣಶ್ರೀಗಿದು
ತಾನಗ್ಗದ ತೊಡವೆನಿಪ್ಪ [1] ನಿಷ್ಕಾಂಕ್ಷೆಯನ ।
ತ್ಯಾನಂದದಿನಱಿದಂ ವಿಬು
ಧಾನಂದಂ ಸುಕವಿನಿಕರಪಿಕಮಾಕಂದಂ ॥ ೧

ಅಂತು [ನಿಷ್ಕಾಂಕ್ಷೆಯ ಕಥೆಯಂ ಲೇಸಾಗಱಿದು ಮತ್ತಂ ಗಣಧರಸ್ವಾಮಿಗಳ್ಗೆ ಮಗಧನಾಯಕಂ ಪೊಡೆವಟ್ಟು ಕೈಗಳಂ ಮುಗಿದು ಮುಂದಣ ನಿರ್ವಿಚಿಕಿತ್ಸೆಯ ಕಥೆಯನೆನಗೆ ನಿಮ್ಮಡಿಗಳಱಿವಂತಾಗೆ ಬೆಸಸುವುದೆಂಬುದುಂ ಮೋಕ್ಷಲಕ್ಷ್ಮಿಯ ಲಾವಣ್ಯೋತ್ಕರ್ಷಮೆನಿಪ ನಿರ್ವಿಚಿಕಿತ್ಸೆಯುಮಿಂತೆಂದು] [2] ಪೇೞ್ದರ್:—

ಪದ್ಯದಂತೆ, [ಮಂಟಪದಂತೆ ದ್ವಾರಬಂಧದಂತೆ] ಶ್ರುತಯಂತ್ರದಂತೆ [ವಸ್ತ್ರದಂತೆ] ಮಂದರದಂತೆ ಶ್ರೀಮಂಚದಂತೆ ರಾಜನೀತಿಯಂತೆ ಧರ್ಮದಂತೆ ದಾನದಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಮೆಂಬ ನಾಲ್ಕು ಗುಣಂಗಳಂ ಕೂಡಿ ಶುದ್ಧಚಿತ್ತದಿಂ ನಡೆವುದು. ೨

ನಿರ್ವಿಚಿಕಿತ್ಸೆಯೊಳಱಿದಾ
ತುರ್ವರೆ ಕೈಕೊಂಡು ಬಣ್ಣಿಸಲ್ಕೆಗೞ್ದ ನರಂ ।
ನಿರ್ವಾಣಪದದೊಳಿರಿಸುವ [3]
ಸರ್ವಜ್ಞಶ್ರೀಗೆ ಮೊತ್ತಮೊದಲಿಗನಕ್ಕುಂ ॥ ೩

---

1 ಸೊಬಗನಿಪ್ಪ (ಬ.ಕ)

2 ನಿಷ್ಕಾಂಕ್ಷೆಯುಂ ಕೇಳ್ದು ಮುಂದಣ ನಿರ್ವಿಚಿಕಿತ್ಸೆಯ ಕಥೆಯಂ ಬೆಸಸಿಮೆಂಬುದುಮಿಂತೆಂದು (ಗ)   3 ಪದದೊಳಿರಿಸುಗು (ಗ)

ಇನ್ನದಱ ಪೆಂಪಂ ಪೇೞ್ವೊಡೆ:— ೪

ಭರತಕ್ಷ್ಮಾವನಿತೆಗೆ ಪಂ
ಕರುಹಭವಂ ನಚ್ಚಿ ಮೆಚ್ಚಿ ಮಾಡಿದ ಮಣಿನೂ |
ಪುರಮೆನಿಸಿ ಶೋಭೆಯಿಂದಂ
ಕರಮೊಪ್ಪುವುದಿಂದ್ರಕಚ್ಛಿಯೆಂಬುದು ವಿಷಯಂ ॥ ೫

ಆವಿಷಯದೊಳ್, ೬

ಪೊಱವೊೞಲ ಶೋಭೆಯಿಂ ಸು
ತ್ತಿಱಿದಿರ್ದ ಜಿನೇಂದ್ರಭವನದೋಳಗಳಿಂ ಪೆ |
ರ್ಗಱಿಗಳ ಚೆಲ್ವಿಂ ಫಲದಿಂ
ತುಱುಗಿದ ತರುನಿಕರದಿಂದವೊಪ್ಪುವ ವನದಿಂ ॥ ೭

ಅಂತೊಪ್ಪುವುದು ರೌರವಪುರಮಾಪುರಮನಾಳ್ವನೊದ್ದಾಯನ ಮಹಾರಾಜನೆಂಬ ಮಹಾಮಂಡಳಿಕನಾತಂ ೮

ಶರಣೆಂದಂಗೆ ಪಯೋಧಿಯನ್ನನದಟಂ ಮಾಱಾಂತು ಕೈಕೊಳ್ಳದಿ
ರ್ದರಿಭೂಪರ್ಗೆ ಗಜಾರಿಯನ್ನನಳವಿಂ ಕಯ್ವಾಂತ ಮರ್ತ್ಯರ್ಗೆ ಭೂ
ಸುರಕಲ್ಪದ್ರುಮಮೆಂದನನ್ನನೂರ್ಜಿತಯಶಂ ಭೂಪೋನ್ನತಂ ಧೈರ್ಯಮಂ
ದರನುದ್ಯದ್ಗುಣವಂತರಾಜರ ಮನೋಜಂ ಭೂರಿಭೂಮೀಯುತಂ ॥ ೯

ಪರಮಜಿನಪೂಜೆಯಂ ನಿ
ರ್ಭರತರಭಕ್ತಿಯೊಳ್ ಮಾಡುವೆಡೆಗೀತನೊಳಾ |
ಭರತೇಶ್ವರನುಂ ದೊರೆಯೇಂ
ದೊರೆಯಾಗಿರಸೆಂದು ಪೊಗೞ್ದು ಕೊನೆವುದು ಲೋಕಂ ॥ ೧೦

ಸೊಗಯಿಪ ದರ್ಶನದೊಳ್ಸಲೆ
ಮಿಗಿಲೆನಿಪ ಸನತ್ಕುಮಾರಚಕ್ರಿಗಮಂತಾ |
ಸಗರಾಧಿಪಂಗಮೀತನೆ
ಮಿಗಿಲೆಂದೋರಂತೆ ಪೊಗೞುತಿರ್ಪುದು ಭುವನಂ ॥ ೧೧

ನೆಗಳ್ದ ಚತುರ್ವಿಧದಾನ
ಕ್ಕಗಣಿತಗುಣನೀತನಿಂದೆ ಶ್ರೇಯಾಂಸಂ ತಾಂ ।
ಮಿಗಿಲಿಲ್ಲವೆಂದು ಪೊಗೞ್ವುದು
ಜಗತೀಚಕ್ರಂ ನಿರಂತರಂ ಪದಪಿಂದಂ ॥ ೧೨

ಅಂತು ಪೊಗೞ್ಕೆವೆತ್ತ ಒಡ್ಡಾಯನಮಹಾರಾಜಂಗೆ ಪಟ್ಟದರಸಿ ಪ್ರಭಾವತಿಯೆಂಬಳ್ ॥ ೧೩

ವರಗುಣದೊಳ್ಸುರೇಂದ್ರವಧುವಿಂಗೆಸೆವಿರ್ಮಡಿ ಜೈನಭಕ್ತಿಯೊಳ್
ವರವಧುವಪ್ಪ ರೋಹಿಣಿಗೆ ಮುಮ್ಮಡಿ ರೂಪಿನೊಳಬ್ಜವಾಸೆಗಂ
ಪರಿಣತರಪ್ಪವರ್ಬಗೆದು ನೋೞ್ಪೊಡೆ ನಾಲ್ಮಡಿ ಶೀಲದೇೞ್ಗೆಯೊಳ್
ಧರಣಿಜೆಗಂ ಸಹಸ್ರಮಡಿ ಭಾವಿಪೊಡಗ್ಗಳಮೀಧರಿತ್ರಿಯೊಳ್ ॥ ೧೪

ಎನಿಸಿ ನೆಗೞ್ತೆವಡೆದ ಪ್ರಭಾವತೀದೇವಿ ಮೊದಲಾಗೆಣ್ಛಾಸಿರ್ವರರಸಿಯರೊಳ್ ಕೂಡಿ ಸುಖಸಂಕಥಾವಿನೋದದಿಂದೊಡ್ಡಾಯನಮಹೀವಲ್ಲಭಂ] [1] ರಾಜ್ಯಂಗೆಯ್ಯುತ್ತುಮಿರ್ಪುದುಮೊರ್ಮೆ ಸೌಧರ್ಮಕಲ್ಪದೊಳ್ ಸೌಧರ್ಮೇಂದ್ರಂ ಸುಧರ್ಮೆಯೆಂಬ ಸಭೆಯೊಳ್ [2] ೧೫

[ಸುರವಿಳಾಸಿನಿಯರ್ ಮನೋಹರರೂಪೆಯರ್ ಗಜಯಾನೆಯರ್
ತರಳಲೋಚನೆಯರ್ ವಿದಗ್ಧೆಯರಿಕ್ಕೆ ಚಾಮರಮಂ ಸುರರ್
ಸುರುಚಿರಾಭರಣಂಗಳೊಪ್ಪೆ ಮನೋಜಸನ್ನಿಭನರ್ತಿಯಿಂ
ನೆರೆದು ಕುಳ್ಳಿರೆ ಸುತ್ತಲುಂ ರಸಗೀತಮುಣ್ಮೆ ಪೊದೞ್ಕೆಯಿಂ ॥ ೧೬

ಅಂತೋಲಗಂಗೊಟ್ಟಿರ್ದ ಸುರರಾಜಂಗೆ ಸಮಸ್ತದಿವಿಜನಿಕಾಯಮುಂ [ವಿನಯವಿನಮಿತರಾಗಿ] [3] ಕೈಗಳಂ ಮುಗಿದು ಬಿನ್ನಪಮಿಂದಿಂತೆಂದರ್:— ೧೭

---

1 ಇಂದ್ರಗೞ್ಛೆಯೆಂಬುದು ವಿಷಯಮಾವಿಷಯದೊಳ್ ಸೌರಾಷ್ಟ್ರಪುರಮೆಂಬುದು ಪುರಮಾಪನಾಳ್ವರಸನೊಡ್ಡಯನ ಮಹಾರಾಜನೆಂಬ ಮಂಡಳಿಕನಾತನರಸಿ ಪ್ರಭಾವತಿಯೆಂಬಳಂತವಸುಖಸಂಕಥಾವಿನೋದದಿಂ ರಾಜ್ಯಂ (ಗ)

2 ಸಭೆಯೊಳಿರೆ ಸಮಸ್ತದಿವಿಜ (ಗ) 3 ಪೊಡೆಮಟ್ಟು (ಗ)

ನಿರುಪಮಮುಕ್ತಿಶ್ರೀಗಾ
ಭರಣಮಿದೆನಿಸಿರ್ದ ಜೀವಹಿತಮುಮಂ ನುತಮುಮಂ ।
ಪರಮಜಿನಾಗಮಮುಮಂ ದೇ
ವರೆ ಬಲ್ಲಿರಿ ಪೆಱರ್ಗಮಱಿಯಲೇಂ ಮೊಗ್ಗಾಯ್ತೇ ॥ ೧೮

ಅದುಕಾರಣಂ ದೇವರೆಮಗೆ ಸದ್ಧರ್ಮಮುಮಂ ತಿಳಿವಂತಾಗೆ ಬೆಸ
ಸಲ್ವೇಳ್ಕುಮೆಂಬುದುಂ, ಅಮರರಾಜಂ ಸುಖನಿಧಾನದೀಪವರ್ತಿಯೆನಿಪ
ಸದ್ಧರ್ಮಮನಿಂತೆಂದು ಪೇಳ್ದಂ :— ೧೯

ವರಸದ್ಧರ್ಮಮೆ ಜೀವೋ
ತ್ಕರಕ್ಕೆ ಶರಣನ್ಯವಸ್ತುಗಳ್ನಿಶ್ಚಯದಿಂ ।
ಶರಣಲ್ಲಮೆಂಬುದಂ ವಿ
ಸ್ತರದಿಂದಂ ತಿಳಿದು ಧರ್ಮಮಂ ಪಿಡಿಗೆ ಬುಧಂ ॥ ೨೦

ಪುಸಿವವರಂ ಕೊಲ್ವವರಂ
ಬೆಸನಿಗಳಂ ಕಳ್ವರಪ್ಪರಂ ಕಂಡೊಡೆ ಸಂ ।
ಕಿಸುವರ್ ಪುರುಷರ್ ಪಾಪಂ
ವೆಸುಮತಿಯೊಳ್ಕಷ್ಟಮೆಂದು ಸಾಱುವ ತಆದಿಂ ॥ ೨೧

ಪಿರಿದಪ್ಪ ತಪದೊಳುಡಲಂ
ವರಧರ್ಮದೊಳರ್ಥಮೆಲ್ಲಮುಮಂ ತವಿಸುವರಂ ।
ಧರೆ ನಚ್ಚಿ ಮೆಚ್ಚಿ ಬಣ್ಣಿಪು
ದೆರಡಿಲ್ಲದೆ ಧರ್ಮಮೊಳ್ಳಿತೆಂದಱಿಪುವವೋಲ್ ॥ ೨೨

ಅದುಕಾರಣದಿಂ ಸ್ವರ್ಗಾಪವರ್ಗಸುಖಕ್ಕೆ ಧರ್ಮಮೆ ಕಾರಣ
ಮೆಂಬುದುಮಂ [1] ನರಕತಿರ್ಯಗಾದಿಮಹಾದುಃಖಕ್ಕೆ ಪಾಪಮೆ ಕಾರಣ
ಮೆಂಬುದುಮಂ [1] ನೀಮಱಿದುಮಱಿಗೆ, ೨೩

ಪೊಲೆಯರ್ ಭಾವಿಸುವೊಡೆ ನು
ಷ್ಕುಲರನುಪಮ [2] ಶುದ್ಧವೃತ್ತಿಯೊಳ್ನಡೆವೊಡೆ ಭೂ ।

1 [illegible] 2 [illegible]

ತಲಮೆಲ್ಲಂ ಬಣ್ಣಿಸುವುದು
ಕುಲದಿಂದಂ ಧರ್ಮಮಧಿಕಮೆಂದಱಿಪುವವೋಲ್ ‖ ೨೪

ಕುಲಮುಳ್ಳಂ ಚಾರಿತ್ರ
ಕ್ಕಲಸಿ ಮಹಾವ್ಯಸನಿಯಾಗಿ ನಡೆವೊಡೆ ಧರಣೀ ।
ವಲಯಂ ಮುನಿವುದು ಧರ್ಮಂ
ಕುಲದಿಂದಂ ಪೂಜ್ಯಮೆಂದು [1] ಸಾಱುವ ತೆಱದಿಂ ‖ ೨೫

ಅದುಕಾರಣದಿಂ ಪೊಲ್ಲಮೆಯೊಳೊಂದದೆ ಚಾರಿತ್ರದೊಳ್ ಕೂಡಿ ನೆಗೞ್ದ ಧರ್ಮಮು ಸದ್ಧರ್ಮಂ ಪೊಲ್ಲಮೆಯೊಳೊಂದಿ ದುಶ್ಚಾರಿತ್ರದೊಳ್ಕೂಡಿ ಸಲ್ವ ಧರ್ಮಮೆ ಕುಧರ್ಮಮೆಂಬುದುಮನೀನುಡಿಗಳಿಂದಱಿಗೆ; ೨೬

ಪೆಸರುಂ ರೂಪುಂ ನುಡಿಯುಂ
ವಸುಮತಿಯೊಳ್ ಕೇಳ ಮಾನಿಸರ್ಗೆಲ್ಲಂ ಭಾ।
ವಿಸುವೊಡೆ ಸಮಾನಮೆಸಿತಱೊ
ಳ್ ಸಮಾನರೆ ಮನುಜರಣ್ಣ ಕೀೞ್ಮೇಲಿಲ್ಲಾ ‖ ೨೭

ಅನ್ವಯದಿಂದಪನೆಱಿಯದೆ ಬರುತ್ತಿರ್ಪ ಶುದ್ಧಚಾರಿತ್ರದಿಂದಿವರ್ ವಿಪ್ರಾದಿ[2] ಮೇಲ್ಜಾತಿಗಳ್ ದುರಾಚಾರದಿಂದಿವರ್ಕಿರಾತಾದಿಕೀೞ್ಜಾತಿಗಳೆಂದಱಿವಂತೆ ಸದಾಚಾರರಪ್ಪ ಮಹಾತಪೋಧನರ [ತದ್ಭಕ್ತರಪ್ಪ] ಗೃಹಸ್ಥರ ನಡೆವಳಿಗಳುಮಂ ದುರಾಚಾರರಪ್ಪ ತಪೋಧನಲಿಂಗಿಗಳ [3] [ತದ್ಭಕ್ತರಪ್ಪ] ಗೃಹಸ್ಥರ ನಡೆವಳಿಗಳುಮಂ ಕಂಡಿದು ಮೋಕ್ಷಕ್ಕೆ ಕಾರಣಮಪ್ಪ ಧರ್ಮಮೆಂದಱಿಗೆ. ೨೮

ಬಸಗೆಗಮುತ್ಸಾಹಕ್ಕಂ
ಸಸಿಯುದಯಂ ರಂಜಿಪಂತೆ ಕಳ್ಗಂಗಂ ಮ ।

---

1 ಸೞರಮೆಂದು (ಕ. ಖ.)

2 ಬ್ರಾಹ್ಮಣಾದಿ (ಗ.) 3 ದುಶ್ಚಾರಿತ್ರರಪ್ಪ, ಕುತ್ಸಿತರಪ್ಪ ತಪಸ್ವಿಗಳ (ಕ. ಖ.)

ಬೆರ್ಸನಿಗಮೂತೆಱದಿಂ ರಂ
ಜಿಸಲಕ್ಕುಮೆ ಬಗೆದು ನೋಡ್ಪೊಡವನೀತಳದೊಳ್[1] ॥ ೨೯

[ಸಕಲಸುಖಕ್ಕೆ ನೆಲೆಯಾದ ಸದ್ದೃಷ್ಟಿಗೆ ರಂಜಿಸುವ ಸದ್ಧರ್ಮಂ ಬಹುವಿಧಮಾಗಿರ್ಪ ನರಕದುಃಖಂಗಳನನುಭವಿಸಲ್ವೇಡಿರ್ಪ ಕುದೃಷ್ಟಿಗೆಂತಾನುಂ ರಂಜಿಸಲಾಱದು.][2] ೩೦

ಕನ್ನಡಿಯಂ ತೋಱಿದೊಡ
ತ್ಯುನ್ನತಸಲ್ಲಕ್ಷಣಂಗೆ ಮುನಿಸಾಗದು ಮ ।
ತ್ತೆನ್ನದೆ ಮೂಕೊಱೆಯಂಗಾ
ಕನ್ನಡಿಯಂ ತೋಱೆ ಬಡಿವನಿಱಿವಂ ಕೊಲ್ವಂ ॥ ೩೧

ಅಂತು ನಿಷ್ಪಾಪಂಗೆ ಸದ್ಧರ್ಮಂ ರುಚಿಯಾಗಿರ್ಕುಂ ಮಹಾಪಾತಕಿಗೆ ಕೈಪೆಯಾಗಿರ್ಕುಂ. ೩೨

ಜರಗನೊಯ್ಯನೆ ಕರ್ಚಿ ರಾಶಿಯ ಮಣ್ಣೊಳೂಪ್ಪುವ ಪೊನ್ನನ
ಚ್ಚರಿಯೆನಲ್ಕೆಱೆ ಕಾಣ್ಬವೊಲ್ಮತಿವಂತರುಂ ಮರುಳಾಗಿ ಮ
ಚ್ಚರಿಸದಾಪ್ತನನೈದಿ ತತ್ವಮನಂತೆ ಧರ್ಮಮನಾಗಳೊ
ಪ್ಪಿರೆ ವಿಚಾರಿಸಿ ನೋಡಿ ನಂಬುಗೆಯಿಂದೆ ಮಾಳ್ಪುದು ಧರ್ಮಮಂ ॥ ೩೩

ಶುದ್ಧಮಪ್ಪ ಪೊನ್ನೊಳ್ ದುಷ್ಟರಪ್ಪವರ್ ತಮ್ಮಲಾಭದಾಸೆಯಿಂ ಕಿಸು ಬೆಳ್ಳಿಯೆಂಬಿವಂ[3] ಬೆರೆಯಿಸಿ ಪೆಱರ ಕಣ್ಗಟ್ಟಿ ತಿರಿಪಿ ಮೇಲಪ್ಪ ಪೊನ್ನೆಂದು ತೋಱಿಸುವತೆಱದಿಂ[4]

---

[1] ಬಸಗೆಯೊಳೆಸಗುವ ಮನುಜಂ ಸಸಿಯಂದಯುಮನೊಲ್ಲನೊಲ್ಲನೇ ಪಾದರದ । ವ್ಯಸನಮನೆ ಪಿಡಿದು ಠಾಗರಿನೆಸಗುಗೆಮಸಂಗತಿಯು ನೋಡ ಬಯಸುವ ಖಳನುಂ॥ (ಗ)

[2] ಅಂತು ಮೋಕ್ಷಕಾರಣಮಪ್ಪ ಚಾರಿತ್ರಮಿದೆಂದು ಪುರುಷಂ ಸದ್ಧರ್ಮವನೊಲ್ವನಲ್ಲದೆ ನರಕದುಃಖಕ್ಕೆ ಭಾಜನನಪ್ಪ ಪುರುಷಂಸದ್ಧರ್ಮಮನೊಲ್ಲಂ (ಗ)

[3] ಕಿಸುವುಮಂ ಬೆಳ್ಳಿಯುಮಂ (ಗ) [4] ಪೊನ್ನೆಂಬಂತೆ (ಗ)

[ದಯಾಮೂಲಮಾದ] ಸದ್ಧರ್ಮದೊಳಾದ ನೆಗೞ್ತೆಗಾಱದಲಸರಪ್ಪವರ್ ತಮ್ಮ ಮೆಯ್ಯ ಸುಖಕ್ಕೆ [1] ಪಾಪಹೇತುಗಳಪ್ಪ ಕುಧರ್ಮಮಂ ಪೇೞ್ದ ಪೆಱರಂ ಮೆರುಳ್ಮಾಡಿ ಧರ್ಮಮೆಂದು ನೆಗೞ್ಸುವರದುಕಾರಣಮಾರಯ್ದು ನೋಡವೇೞ್ಕುಂ, [2] ೩೪

ಪಿತ್ತಳೆಯ ತೊಡವು ಪೊಲೆಯು
ಗರ್ತ್ತಮಮೆಸಿಸಿರ್ದ ಪೊನ್ನ ತೊಡವೆನಿಸುವವೋಲ್ ।
ಚಿತ್ತದೊಳುತ್ಸಾಹದಿನ
ತ್ಯುತ್ತಮಮಾಗಿರ್ಕುಮೆಘಯುತರ್ಗಂ ಪಾಪಂ ॥ ೩೫

ಅದಱಿಂ ಪಾಪಹೇತುವಪ್ಪ ದುರ್ಮಾರ್ಗಮಂ ಪಿಡಿಯಲುಂ ವಿಡಿಯದೆ, ಪರದರೆಂತು ಕಿಸುಗಟ್ಟುಮಂ ಕಳ್ಳಚ್ಚುಮಂ [ಕಂಚುಮಂ] ಮಾಣ್ದೊರೆಗಂ [3] ತೂಕಕ್ಕಂ ಬರ್ಪ ಪೊನ್ನಂ ಕೊಳ್ವರಂತೆ ಸುಖಹೇತುವಪ್ಪ ಸನ್ಮಾರ್ಗದೊಳ್ನೆಗೞ್ವುದು :— ೩೬

ನಡೆವೆಡೆಯೊಳ್ ಪಡುವಡೆಯೊಳ್
ಮಡಿಸೀರೆಯನೆಂತು ದೂಳಿ ದಿನದಿನದೊಳ್ [4] ನೋ ।
ಪ್ಪೊಡೆ ಪೊರ್ದುಗಂತೆ ಚಪಳರ
ನಡೆನುಡಿಯೆಂಬಿವೆಱೊಳ್ಗೊಂದುಗುಂ ಪಾಪಚಯಂ ॥ ೩೭

ಪೊದೆದಾತನಱಿಯದಂತೆ ಪೊದೆದ ಮಡಿ ಬಟ್ಟೆಯುಂ ಧೂಳಿಯೊಳ್ ಮಾಸಿಯುಸಗನ ಬಾರಿಯೊಳ್ಪಿರ್ದು ನಿಗ್ರಹಕ್ಕೊಳಗಪ್ಪಂತೆ ಚಪಳರ್ ಜಿನತಪಸ್ವಿಗಳಂ ಜಿನತತ್ವಮನಿಂತುಟೆಂತುಟೆಂದು ಬಾಯ್ಗೆವಂದಂತಣಕಚಣಕಂಗೆಡೆದು ನಗೆನಗೆಯೊಳ್ ಪಾಪಮಂ ಪೊರ್ದಿ ನಾರಕಬಾಧೆಗೊಳಗಾಗಿ ಪಲಕಾಲಂ ದುಃಖಂಬಡುವರ್. ೩೮

ಕಿಸುವೆಂ ಮೂಲಿಕೆಯುಂ ಪೊ
ರ್ದಿಸೆ ನಗೆಯೊಳ್ ಹೇಮಮಪ್ಪ ತೆಱದಿಂದಂ ಸಂ ।

---

[1] ಮನೆವಾೞ್ತೆಯುಸುಖಕ್ಕೆ (ಕ.) [2] ಅದುವನಾರೈದುನೋಡಾ (ಗ). [3] ಬಿಸುಟೊರೆಗಂ (ಗ) [4] ಮಿಗೆನುಡಿಯೊಳ್ (ಕ) ನಸೆನಗೆಯೊಳ್ (ಬ).

ಕಿಸಡೆ ವರಧರ್ಮದೊಳ್ ಕೂ
ರ್ತೆಸಗುವ ನರನುಂ ವಿಶೇಷಸುಖಿಯಾಗಿರ್ಕುಂ ॥ ೩೯

ಬಾೞೆಪಣ್ಗೆ ನಿದಪ್ಪುದೆಂತು ಸಹಜಂ, ಸಕ್ಕರೆಗೆ ಸಿಹಿಯಾಗಿರ್ಪುದೆಂತು ಸಹಜಂ, ಮಾವಿನಪಣ್ಗೆ ರುಚಿಯಪ್ಪುದೆಂತು ಸಹಜಂ ಅಂತೆ ಚಕ್ರವರ್ತಿಯು ದೇವೇಂದ್ರನ ಸರ್ವಜ್ಞನ ಪದವಿಯನೆಯ್ದುವ ಪುರುಷಂಗೆ ಸದ್ಧರ್ಮದೊಳಾದ ನಿರ್ದೋಷಿಯಪ್ಪ ದೇವನೊಳಾದ ದಿವ್ಯಮುನಿಗಳೊಳಾದ ಪ್ರೀತಿಯುಂ ಕೊಂಡಾಟಮುಂ, ಭಕ್ತಿಯುಂ ಸಹಜಮಾಗಿರ್ಕುಂ; ಬೇವಿಂಗೆ ಕೈಪೆಯೆಂತು ಸಹಜಂ ಅಣಿಲೆಗೆ ತೊಗರೆಂತು ಸಹಜಂ ಸುಂಟಿಗೆ ಕಾರಮೆಂತು ಸಹಜಂ ತಾನಂತೆ ಬಡತನದ ಪೀಡೆಯುಂ ಸದ್ಧರ್ಮದೊಳಾದ ಮುನಿಸುಂ ದೂಷಣಮುಂ ಔದಾಸೀನ್ಯಮುಂ ನರಕದುಃಖದೆಡೆಗೆ ಸಲ್ವ ಪುರುಷಂಗೆ ಸಹಜಮಾಗಿರ್ಕುಂ ॥ ೪೦

ಬೋಳಾದ ತಲೆಯ ರೋಮಂ
ಮೇಲೆನಿಸದ ಬೆರಲ ಮುಱಿದ ಸೆಳ್ಳುಗುರುಂ ಸ ।
ಲ್ಲೀಲೆಯೊಳ್ ಬಳವ ತೆಱದಿಂ
ಕೋಲಾಹಲಮಿಲ್ಲದೊದವುತಿರ್ಕುಂ ಪಾಪಂ ॥ ೪೧

ಬೋಳ ಮಂಡೆಯ ರೋಮಮುಂ ಮುಱಿದುಗುರುಂ ಮೆಲ್ಲನಾರುಮಱಿಯದಂತೆ ದಿವಸಕ್ರಮದಿಂ ಬಳೆದು ತುಱುಂಬುಂ ಸೆಳ್ಳುಗುರುಮಪ್ಪಂತೆ ದುರ್ಜನರುಂ ಪಾಪಿಗಳುಂ ಧರ್ಮದ್ರೋಹಿಗಳುಂ ತಮ್ಮನಱಿಯಲೀಯದೆ ದಿವಸಕ್ರಮದಿಂ ಬಳೆದ ಪಾಪದಿಂದಂ ಮಹಾನರಕದೊಳ್ಬರ್ದು ಬಹುದುಃಖಮನುಣ್ಬರ್ ॥ ೪೨

ಸಸಿಯುಂ ಕೌಂಗಿನ ತೆಂಗಿನ
ಸಸಿಯುಂ ನೆಱೆ ಬೆಳೆದು ಮೇಲೆ ಫಲಮಂ ಕುಡುವಂ ।
ತೆ ಸಮೆಂತು ಧರ್ಮಮುಂ ಸಂ
ತಸಮಂ ಮೇಲೆಯ್ದೆ ಮಾಡುಗುಂ ಕ್ರಮದಿಂದಂ ॥ [1] ೪೩

ದಿನದಿನಕ್ಕನಿತಿನಿತು ಬೆಳೆದುದೆಂದೊರ್ವರ್ಗಮಱಿಯಬಾರದುದಾಗಿಯುಂ ಬೆಳೆದು ಫಲವಮಂ ಕೊಡುವ ಕೆಯ್ಯ ಕೌಂಗಿನ ತೆಂಗಿನ ತೋಂಟದಂತೆ ದಾನಪೂಜೆಯೊಳ್ ಕೂಡಿದ ಸದ್ಧರ್ಮಂ ಪ್ರತ್ಯಕ್ಷಫಲಮಂ ತೋಱಿದುದಾಗಿಯುಂ ನಿಂದು ಮೇಲೆಮೇಲೆ ಫಲಮಂ ಕುಡುಗುಂ ॥ ೪೪

ಕೂರ್ಮೆಯೊಳಲಸದೆ ಜೀವ
ಕ್ಕಾರ್ಮಂ ಪೆಱತಿಲ್ಲ ದುಃಖದಿಂದೆತ್ತುವ ಸ ।
ದ್ಧರ್ಮವೆ ಹಿತಮೆಂದೇಳಿಸ
ದೊರ್ಮೊದಲಱಿದಾತ್ಮ ಧರ್ಮಮಂ ಪಿಡಿಗೆ ಬುಧಂ ॥ [1] ೪೫

ಆ ಧರ್ಮದೊಳ್ ನೆಗೞ್ದ ಭವ್ಯನೆಂತಪ್ಪನೆಂದೊಡೆ, ಕುದುರೆಯಂತೆ ಕೀಲಿಂ ಕೈಕೊಳ್ಳದೆ, ಗ್ರಹವಂತೆ ಮಂತ್ರಕ್ಕಱಗದೆ, ಕಟ್ಟರಸನಂತೆ ತಂತ್ರಕಾಸೆಗೆಯ್ಯದೆ, ಮೊಸದಂತೆ ಪಕ್ಷವಿಲ್ಲದೆ, ದೀಪವರ್ತಿಯಂತೆ ಪೊಂಗೆರಗದೆ [ಅಱುಟಾಗಿಯಂತೆ ಪೊಗಱ್ತೆಗಾಸೆಗೆಯ್ಯದೆ,] ಬೆಸದವರಂತೆ ಮುಯ್ಪಂ ನೋಡದೆ, ತೇರಂಟೆಯಂತೆ ಕುಮತಕ್ಕೆ ಸೂರುಳದೆ, ಬನಲಿಯಂತೆ ಪೊಲ್ಲಮೆಯಂ ಪಿಡಿಯದೆ, ತೊಱೆಯಂ ತೊರ್ಮೆ ಪೆರ್ಚೆ ಮತ್ತೊರ್ಮೆ ಕುಂದದೆ [2], ಚಂದ್ರನಂತೆ ಕಳಂಕನಾಗದೆ, ಮಕ್ಕಳಂತೆ ಕಂಡಕಂಡವಕ್ಕಱಗದೆ, [ಗಿಳಿಯಂತೆ ಪೆಱರ ಶಿಕ್ಷೆಯಂ ಕಲಿಯದೆ,] ಕೋಗಿಲೆಯಂತೊರ್ಮೆ ನುಡಿದೊರ್ಮೆ ಮೋಣದೆ, [3] ಬಹುರೂಪಿಯಂತೆ ಪೊತ್ತಿಂಗೊಂದಂದವಾಗದೆ, ಕಬ್ಬಿನ ತೋಂಟದಂತೆ ನಿಸ್ಸಾರನಾಗದೆ, ಪಾದರಿಗನಂತೆ ಪಲರ ಮುಂದೆ ನಾಣ್ಞದೆ, ಲೋಭಿಯಪ್ಪರಸಿನಂತವಿಚಾರಿಯಾಗದೆ, [4] ಶ್ರುತಮಿಲ್ಲದ ಲಿಂಗಿಯಂತೆ ಮೂರ್ಖನಾಗದೆ, ದೂರವಂದೆಯಂತೆ ತಲ್ಲಣಿಸದೆ, ತುಂಬಿಯಂತೆ ರಸಜ್ಞನುಂ ಭಂಡಾರದ ಪೊನ್ನಂತೆ ಶುದ್ಧನುಂ, ಬೆಟ್ಟನಂತೆ ಸ್ಥಿರನುಂ, ಮದದಾನೆಯಂತೆ ಮಹಾದಾನಿಯುಂ, ಸ್ಫಟಿಕದಂತೆ ನಿರ್ಮಳನುಂ, ಬಿಲ್ಲಂತೆ ಗುಣಧರನುಂ,

---

1 ದುಃಖದಿಂದೆತ್ತುಂಸ । ದ್ಧರ್ಮದಿನಗ್ಗಳವೆಂದೋಸೆ । ದೊರ್ಮೆಯುಮಱಿಯದೆಬಿಡದೆ ಪತ್ತುವುದಱಿಂ (ಗ) 2 ಮಾಗಿಯತೊಱೆಯಂತೆಕುಸಿಯದೆ (ಗ)
3 ಕೋಗಿಲೆಯಂತೆ ಬಾವಳಿಸದೆ (ಗ) 4 ಬಱುಬಾಗಿಯಂತೆ ಮುಯ್ಪಂನೋಡದೆ (ಗ)

ಸುಕವಿಯಂತೆ ಕುವರ್ಗದೂರನುಂ, ಮಾಣಿಕಭಟ್ಟನಂತೆ ಪರೀಕ್ಷಕನುಂ, [ಮಹಾಕ್ಷತ್ರಿಯನಂತೆ ವಿಚಾರಪರನುಂ,] ದೇವರಂತೆ ಸುಮನನುಂ, ಪಾರ್ಥನಂತೆ ಧರ್ಮಪ್ರಿಯನುಂ, ಸಂಯಮಿಯಂತೆ ದಯಾಪರನುಂ, ಕವಿಯಂತೆ ಯತಿಪ್ರಿಯನುಂ, ಸಾಗರದಂತೆ ನಿಸ್ಸಾರದೂರನುಂ ನಿಚ್ಚಗಲಿಯಂತೆ [ಧರ್ಮದೊಳ್]ನಿಶ್ಶಂಕನುಮಪ್ಪುದು. ೪೬

[ಇವರಿಂ ಸ್ತ್ರೀವಶ್ಯಮಕ್ಕಿನ್ನಿವರಿನೆನಗೆ ಮಂತ್ರೋಪದೇಶಂಗಳಕ್ಕಿ
ನ್ನಿವರಿಂ ದಿವ್ಯಂ ಫಲಿಕ್ಕಿನ್ನಿವರಿನೆನಗೆ ದಿವ್ಯೋಪದೇಶಂಗಳಕ್ಕಿ
ನ್ನಿವರಿಂದೀಕಾರ್ಯಮಕ್ಕಿನ್ನಿವರಿನೆನಗೆ ಪೊನ್ನಕ್ಕುಮೆಂದಕ್ಕಱಿಂ ಮಾ
ಡುವ ದಾನಂ ಪಾನಮೆಲ್ಲಂತದು ಬಗೆವೊಡೆ ಮುಯ್ಬಂಧುಗಳ್ಗೀವುದ
ಕ್ಕುಂ] ॥ ೪೭

ಕೂೞಿರ್ದಂತಱಗಂಜಿಯುಂ ಕುಡಿವ ಪೊನ್ನಿರ್ದಂತೆ ಕರ್ಗಲ್ಲನ
ತ್ಯಾಳಾಪಂ ಬಗೆಗೆಟ್ಟು ಕೊಳ್ವ ಧರಣೀಸಾಮ್ರಾಜ್ಯಮಿರ್ದಂತೆ ಬಂ
ದಾಳಾಗಿರ್ದ ವಿಭೂತಿಯುಂ ಬಿಸುಟು ಭೃಕ್ಷಂಗೊಂಡು ತಾನುಣ್ಬ ಬೆ
ಳ್ಳಾಳಂ ಪೋಲನೆ ಮಂತ್ರವೈದ್ಯವಳಪಿಂ ಕೇಡೆಯ್ದಿಪಂ ಧರ್ಮಮಂ ॥

ಮಱೆಯುಳ್ಳೊಡೆ ಕೆಱೆ ತೊಱೆಗ
ಳ್ವಳಾಸದಿಂ ತೀವಿ ಕೋಡಿವರಿವಂತವನೀ ।
ತಳದೊಳ್ ಪುಣ್ಯಂ ತನಗ
ಗ್ಗಳಮುಳ್ಳೊಡೆ ತನಗೆ ತಾನೆ ಬಾರದೆ ಸಿರಿಯುಂ ॥ ೪೯

[ಮತ್ತಂ] ಕಾಪಿಲ್ಲದೆ ಕೊಡೆವಿಡಿವೆನೆಂಬಂತೆ, ಬಂದಿಗೆಯಿಲ್ಲದೆ ಸುರಿಗಿ[2] ವಿಡಿವೆನೆಂಬಂತೆ, ನಾಡುವಿಡಿಯದರಸುಗೆಯ್ವೆನೆಂಬಂತೆ, ಘೃತವಿಲ್ಲದೂರನೂಡುವೆನೆಂಬಂತೆ, ಮದವಣಿಗನಿಲ್ಲದೆ ದಿಬ್ಬಣಂಬೋಪೆನೆಂಬಂತೆ, ಬಟ್ಟೆಯಱಿಯದೆ ಪೊಲಂಬಿಗನಪ್ಪೆನೆಂಬಂತೆ, ಮಾತಱಿಯದೆ ಬಿನ್ನಪಂಗೆಯ್ವೆನೆಂಬಂತೆ, ಸುರಿಗಿಯಿಲ್ಲದೆ ಕಳನೇಱುವೆನೆಂಬಂತೆ, ಮಡಕೆ

---

1 ಬಂಧುಗಳ್ ಕೂಲಿಯುಕ್ಕುಂ (ಬ. ತ)   2 ಹರಿಗೆ (ಗ).

ಯಿಲ್ಲದಡುವೆನೆಂಬಂತೆ, ಸೂಳೆಯಿಲ್ಲದೆ ಬೋಜಂಗರಂ ಕರೆವೆನೆಂಬಂತೆ, ಮುನ್ನಿನ ಭವದೊಳಾದ ಜಿನಪೂಜೆಯಿಂ ದಾನದಿಂ ವ್ರತದಿಂ ತಪದಿಂದಾದ ಪುಣ್ಯಮಿಲ್ಲದೆ ಸಿರಿಯುಮಂ ಪೊನ್ನುಮಂ ಸುಖಮುಮಂ ಆಯುಷ್ಯಮುಮಂ ಮಂತ್ರ [ತಂತ್ರ ವೈದ್ಯಂ] ಗಳಿಂ ಪಡೆವೆನೆಂದು ದೆಸೆಗಿಡಲ್ವೇಡ; ಮಱುಗಿದೊಡಂ ಫಲಮಿಲ್ಲಂ. ೫೦

ಆ ರಾಮನಾಧೀಶರುಂ ಪಾಂಡವರಖಿಳಮಹೀವಲ್ಲಭರ್ ಕರ್ಮದಿಂ ಸಂ
ದಾರಣ್ಯಮೊಕ್ಕು ಕಾಂತಾಪರಿಭವದಟಿಲಿಂ ಬೆಂದು ನೊಂದಿರ್ದರಂತಾ
ಘೋರಾಮೋಧೀಶ್ವರರ್ಕೇಳಱಿಯರೆ ನಯದಿಂ ಮಂತ್ರಮಂ ವೈದ್ಯಮಂ ನೀ
ನೋರಂತೇಕಣ್ಣ ಬಾಷ್ಪಾಸೆಯೊಳಱಿದಪೈ ಕರ್ಮದಿಂ ಬಲ್ಲಿತುಂಟೇ॥೫೧

ಆ ಸಗರೇಶನಾಭರತನಾದ್ರುಮಸೇನನುದಾರವೀರದಿಂ
ದೀಸಕಲೋರ್ವಿಯುಂ ತನಗೆ ಮಾಡಿದ ಪೆಂಪಿನ ಚಕ್ರವರ್ತಿ ಶಾಂ
ತೀಶರಿವರ್ಗೆ ದಿವ್ಯಸುಖಮಾದುದು ಮುನ್ನಿನ ಪುಣ್ಯದೇಳ್ಗೆಯಿಂ
ಭಾಸುರಪುಣ್ಯಮಂ ನೆರಪೆ [1] ಪುಣ್ಯಮೆ ತಾರದೆ ಸರ್ವಸೌಖ್ಯಮಂ ॥೫೨

[ಇಂತು ಮಂತ್ರೌಷಧಂಗಳಿಂ ಕಾವೊಡಮಾಯುಷ್ಯಮಿಲ್ಲದ ನರಂಗೆ ಸಫಲಮಾಗವಂತೆ ಮಂತ್ರದಿಂ ಗ್ರಹಂ ಪೋಪುದೆಂಬೀ ನುಡಿಯಂ ನಂಬದೆ ಪುಣ್ಯಮೊಂದೆ ಕಾರಣಂ ಪುಣ್ಯದಿಂ ಮಿಗಿಲಪ್ಪುದೊಂದುಮಿಲ್ಲೆಂದು ಶಾಶ್ವತಸುಖಮನೀವ ಸದ್ಧರ್ಮದೊಳ್ ಬುದ್ಧಿಯಂ ಸಿಕ್ಕಯಂಗೆಯ್ದಿ ಪುದು; ಮಣಿಮಂತ್ರೌಷಧಂಗಳೊಳಪ್ಪಾಸೆಯಂ ಬಿಡುವುದು]

ಏನಾನುಮನುದ್ದೇಶಿಸ
ದಾನಂದಂ [2] ಬೆರಸು ಭಕ್ತಿಪೂರ್ವಕದಿಂದಂ ।
ತಾನೊಸೆದು ಮಾಳ್ಪ ದಾನಂ
ತಾನದು ಮುಂವಣ್ಗೆ ಕುಡುವುದಕ್ಷಯಸುಖಮಂ ॥ ೫೪

---

[1] ಮಾಡುವ ಮಂತ್ರದಿನಕ್ಕೆ ವೈದ್ಯದೊಂದಾಸೆಯಿನಕ್ಕೆ ಪೇಳ್ದರುಳಪುಣ್ಯಮೆ (ಕ. ಖ.) [2] ಉಳ್ಳನಿತುಮನಾನಂದಂ (ಗ)

[ರಾಜ್ಯಕ್ಕೆ ಚತುರಂಗಮುಂ ಮಂತ್ರಕ್ಕೆ ಚತುರ್ವಿಧೋಪಾಯಮುಮೊಪ್ಪುವಂತಾದಾನಕ್ಕೆ ಶಾಸ್ತ್ರದಿದಾನಚತುಷ್ಟಯಮೊಪ್ಪುಗುಮಿಂತು, ೫೫

ಪರಮಾಗಮದಿಂದಲ್ಲದೆ
ಪರತ್ರಯುಂ ಪಡೆವುಪಾಯಮಿಲ್ಲದಱಿಂದಂ ।
ವರಶಾಸ್ತ್ರಂ ಮಿಗಿಲೆಂದಾ
ದರದಿಂ ಮಾಡುವುದು ಶಾಸ್ತ್ರದಾನಮನಳಪಿಂ ॥] ೫೬

ಶ್ರುತವನಿತೆಯೆ ಮುಕ್ತಿಶ್ರೀ
ಸತಿಯಲ್ಲಿಗೆ ಬೇಗಮುಯ್ವ ದೂದವಿಯೆಂಬೀ ।
ಮತಮನಱದೋತು ಮಾಡುವು
ದತಿಶಯದಿಂ ಶಾಸ್ತ್ರದಾನಮಂ ಪದಪಿಂದಂ ॥ ೫೭

[1] [ಶ್ರುತಭಾವನೆಯೊಳಮತಿಮನ
ದ್ರುತಿ ನಿರ್ಮಲಮನದಿನಘಹರಂ ತದ್ದುರಿತ ।
ಕ್ಷತಿಯಿಂ ಕೈವಲ್ಯಶ್ರೀ
ಸತಿ ಸಾರ್ಗುಂ ಶಾಸ್ತ್ರದಾನದುನ್ನತಿ ಕಿಱದೇ ॥] ೫೮

ಏಗೆಟ್ಟತ್ತಿನ್ನದೆ ಮನ
ಮೋಗಡಿಸದೆ ತೀರದಾಱನೆಂದುಡುಗದೆ ನಿ ।
ರ್ವೇಗಂ ಚಿತ್ತದೊಳಣಮಿನಿ
ಸಾಗದೆ ತಾಂ ಮಾಱ್ಪುದನ್ನದಾನಮನಱವಿಂ ॥ ೫೯

[ಕರಮಾದರದಿಂದನ್ನಮ
ನುರುಮುನಿಯೊರ್ವಂಗೆ ಕೊಟ್ಟ ತತ್ಫಲದಿಂದಂ ।

---

1 ನಾಲ್ಕುಂ ಮಹಾದಾನಮುಮನೆಯ್ದಿದ ಸಿರಿಷೇಣಮಹಾರಾಜ ರುಗುಮಿಣಿ ಮಹಾದೇವಿಯು ನಾರಾಯಣನ ಸ್ವಯಂಬುದ್ಧನ ಕಥೆಗಳಂ ಕೇಳ್ದು ನಂಬಿ ಮಾಡುವುದು· ಪರಮಾಯುಂ (ಗ)

ಶಿರಿಷೇಣನೃಪತಿ ಶಾಂತೀ
ಶ್ವರನಾದಂ ನೋೞ್ಪೊಡನ್ನದಾನಂ ಕಿಱಿದೇ ‖] ೬೦

ತನ್ನವರೆನ್ನವರೆನ್ನದೆ
ಸನ್ನುತವಮತಿಯಾಗಿ ಸಕಲಜೀವಂಗಳುಮಂ ।
ತನ್ನಂ ರಕ್ಷಿಸುವಂತಿರೆ
ಬಿನ್ನಣವಮೇನಱಿದು ರಕ್ಷಿಪುದು ಸತ್ಪುರುಷಂ ‖ ೬೧

[ನೆಗೞ್ದಭಯದಾನಫಲದಿಂ
ಮೃಗನಯನೆ ವಿದಗ್ಧ ಸಂದ ರುಕ್ಮಿಣಿ ಲೋಕಂ ।
ಪೊಗೞೆ ಕಡುಜಸವನಾಂತಳ್
ಜಗತೀವಳಯಕ್ಕೆ ಸೌಖ್ಯಭಾಜನೆಯಾದಳ್ ‖ ೬೨

ಉಕ್ಕವಮಿಲ್ಲದೆ ಮನದೊಳ್
ಕೊಕ್ಕರಿಸದೆ ಪೆಱರ ಮೇಲೆ ನೆವಮಿಕ್ಕದೆ ಕೈ ।
ಮಿಕ್ಕೊಳ್ಳದೆ ಚಾತುರ್ವ
ರ್ಣ್ಯಕ್ಕಂ ಮಾಡುವುದು ರುಜೆಗೆ ದಿವ್ಯೌಷಧಮಂ ‖ ೬೩

[ಫಲಮಿನೌಷಧದಾನದ
ಫಲದಿಂ ತೀರ್ಥಂಕರನಪ್ಪ ಪುಣ್ಯಂ ಬೇಗಂ ।
ಫಲಿಯಿಸಿತು ವಿಷ್ಣುಗದಱಿಂ
ದಲಸದೆ ಭೈಷಜ್ಯದಾನಮಂ ಮಾೞ್ಕುಱಿಮಂ ‖] ೬೪

ಪರಮಾಯುಂ ಶ್ರೀಯು ಪೆಂಪುಂ ವನಿತೆಯುರೊಲವುಂ ಕೀರ್ತಿಯುಂ ಧೈರ್ಯಮುಂ ಸುಂ
ದರರೂಪುಂ ವೀರಮುಂ ಭೋಗಮುಮೆಸೆವ ಮಹಾವೀರ್ಯಮುಂ ಚಾಗಮುಂ ವಿ
ಸ್ತರದಿಂ ಸದ್ಬುದ್ಧಿಯುಂ ತೇಜಮುಮಳವು ಮಪ್ಪೈಶ್ವರ್ಯಮುಂ ದಿವ್ಯಸೌಖ್ಯೋ
ತ್ಕರಮುಂ ಸದ್ಜ್ಞಾನದಿಂದಂ [1] ನರರ್ಗೆ ಸಮನಿಕುಂ ಸಂತತೋತ್ಸಾಹದಿಂದಂ ‖ ೬೫

[1] ಧರ್ಮದಿಂದಂ (ಗ)

ಹೀನಾಯುಸುಂ ಕಷ್ಟರೂಪುಂ ಬಡತನದೊದವುಂ ಕುತ್ತವುಂ ಪೀಡೆ
ಯುಂ ವಿ
ಜ್ಞಾನಂಗೆಟ್ಟಿರ್ಪುದುಂ ಕೂಟ್ಪಡೆಯದೆ ಮಱುಗುತ್ತಿರ್ಪುದುಂ ಲೋಗ
ರಿಂದೊಂ
ದಾನಂದಂಗೆಟ್ಟು ಚಿಂತಿಪ್ಪುದುಮನವರತಂ ಪೆಂಡರಿಂ ಮಕ್ಕಳಿಂ ಸ
ನ್ಮಾನಂಗೆಟ್ಟಿರ್ಪುದುಂ ಕೂಡುಗುವೊದವಿದ ಪೂರ್ವಾರ್ಜಿತಾಘೌಘ
ದಿಂದಂ ‖ ೬೬

ಎಂದಿಂತು ಕಿಱಿದಿನೊಳ್ ಧರ್ಮಮಂ ಪೇೞೆ ಕೇಳ್ದಱಿದು ಸಂತ
ಸಂಬಟ್ಟು ದೇವನಿಕುರುಂಬಂ ಸೌಧರ್ಮೇಂದ್ರಂಗೆ ಪೊಡೆಮಟ್ಟು ಬಿನ್ನ
ಪಮೆಂಧಿಂತೆಂದರ್:— ೬೭

ಅರಿದು ನೆಗೞ್ತೆಗೆ ಫಲದೊಳ್
ಪಿರಿದಕ್ಷಯಲಕ್ಷ್ಮಿಯಿರ್ಪ ನೆಲೆ ಯೆನಿಸಿರ್ದೀ ।
ನಿರುಪಮನಿರ್ವಿಚಿಕಿತ್ಸೆಯೆ
ಯರಿವು ಗುಣಂಗಳೊಳಗೆ ಬಗೆವೊಡೆ [1] ಜಗದೊಳ್ ‖ ೬೮

[ಅದುಕಾರಣದಿಂ] ಕಲಿಕಾಲಮಹೋರಗವಿಷಪೂರಿತಮುಂ ಸದ್ಧ
ರ್ಮನಿವಾರಿತಮುಮಪ್ಪ ಭರತಕ್ಷೇತ್ರದೊಳ್ ಗುಣಹೀನರೆಯಲ್ಲದೆ
ಗುಣವಂತರುಂ ಪಾಪಹರರುಂ ಪ್ರಚುರವಿಲ್ಲದೊಡಂ ನಿರ್ವಿಚಿಕಿತ್ಸೆಯೊಳ್
ನೆಗೞ್ವರಂ ದೇವರೆಮಗೆ ಬೆಸೆಸಿಮೆನೆ ದಿವಿಜರಾಜನಿಂತೆಂದಂ:— ೬೯

[ರೌರವಪುರೇಶನಮಳನು
ದಾರಂ ಜಿನಪಾದಪದ್ಮಮಧುಪಂ ಸತ್ಯಾ ।
ಧಾರಂ ಧರಣೀಸ್ತುತ್ಯಂ
ಚಾರುಚರಿತ್ರಂ ನೃಪಾನ್ವಯೈಕಪವಿತ್ರಂ ‖] ೭೦

---

[1] ಪರಿದವ್ಯತಶ್ರೀಯುಗೇಹಮೆನಿಸುವ ಪೆಂಪಂ । ಧರಿಸಿದ ನಿರ್ವಿಚಿಕಿತ್ಸೆಯು ಮರಿರುಗುಣಂಗಳಲಿನೋಡಬಗೆವೊಡೆ (ಗ)

ಉದ್ದಾಯನಮಹಾರಾಜನೀಗಳಾ ಭರತಕ್ಷೇತ್ರದೊಳ್ ಪ್ರಸಿದ್ಧನೆಂಬುದುಂ ಅಮರಸಮಿತಿ ಮೆಚ್ಚಿ ಕೈಗಳಂ ಮುಗಿದು ನಾನಾಪ್ರಕಾರದಿಂ ಪೊಗೞುತಿರ್ಪುದುಮವರೊಳ್ ವಾಸವನೆಂಬ ದೇವಂ ದೇವೇಂದ್ರನ ಮಾತಿಂಗೆ ಬೆಱಗಾಗಿ, ೨೧

ನಿಶ್ಚಯಗುಣರೊಳರೆಂಬುದಿ
ದಾಶ್ಚರ್ಯಂ ಭರತಭೂಮಿಯೊಳ್ ಸುರಪತಿ ತಾಂ |
ನಿಶ್ಚಲಗುಣಿಗಳನಲ್ಲದೆ
ದುಶ್ಚರಿತರನಘಸಮೇತರಂ ಪೊಗೞ್ವನೇ ॥ ೨೨

[ಪೊಗೞಲಱಿಯಂ ಭರತಕ್ಷೇತ್ರದೊಳೀಗಳಪ್ಪೊಡೆ ಕುದೃಷ್ಟಿಗಳನಲ್ಲದೆ ಸದ್ದೃಷ್ಟಿಗಳಂ ಕಾಣಲರಿದು, ಚಂಚಲಚಿತ್ತರನಲ್ಲದೆ ದೃಢಚಿತ್ತರಂ ಪಡೆಯಲರಿದು, ಕುಮಾರ್ಗಾನುರಾಗಿಗಳನಲ್ಲದೆ ಸನ್ಮಾರ್ಗಾನುರಾಗಿಗಳಂ ಕೇಳಲ್ಬಾರದು, ವಿಚಾರಿಸುವೊಡಿಂದ್ರನ ನುಡಿಗೆ ನಗೆ ವಿಸ್ಮಯಮಾದಪುದಿದನಾರಯ್ದು ನೋಡವೇೞ್ಕುಮೆಂದು ದೇವಲೋಕದಿಂ][1] ರೌರವಪುರಕ್ಕವತರಿಸಿ ಋಷಿರೂಪಂ ಕೈಕೊಂಡು, ೨೩

ಬಡವಾಗಿರ್ದೊಡಲೇೞ್ಗೆಟ್ಟು ನಡು ನೀರ್ ಘೋರೆಂದು ಪಾಯ್ವಕ್ಷಿ ನೋ
ೞ್ಪೊಡೆ ಕೀವಿಂ ಕೊೞೆಯಿಂ ಮಹಾರಸಿಗೆಯಿಂ ಪೊಂಗಿರ್ದ ಪುಣ್ಣುಗ್ಗಂ
ಟುಗಾ
ಲೊಡೆದೋರಂತಿರೆ ಸೋರ್ವ ರಕ್ತಮಧಿಕಂ ಕಂದಿರ್ದ ಮೆಯ್ಯೊನ್ನಿನಿಂ
ದುಡುಗಿರ್ದಂಘ್ರಿ ಕರದ್ವಯಾಂಗುಳಿಚಯಂ ಕುಂದಿರ್ದ ಹೀನಸ್ವರಂ ॥೨೪

ಮತ್ತಮೊಱತೆಯಂತೆ ಮೆಯ್ಯಿಂದೊಱೆವ ರಸಿಗೆಯುಂ, ದುರ್ಜನನ ನುಡಿಯಂತೆ ಕೊಂಕಿ ಪರಿದ ಜಡೆಗಳುಂ, ಕುಟಿಲನ ಚಿತ್ತದಂತೆ ಬಹುಪ್ರಕಾರಮಾದ ಮೆಯ್ಯ ಬಣ್ಣಮುಂ, ಒಂಟೆಯ ಕೊರಲಂತೆ ನೀಳ್ದ ಕೊರಲುಂ, ನೀತಿವಿದನಲ್ಲದರಸಿನ ನಾಡಂತೆ ಅಸಿಯಮಾದ

1 ಅದಂ ನೋಡುವೆನೆಂದುರೌರವಪುರ (ಗ)

ಕಾಲ್ಗಳುಂ, ಊದುವ ತಿದಿಯಂತೆ ಪೊಂಗಿರ್ದ ಪುಣ್ಗಳುಂ, ಮುಖರೋಗದವರಂತೆ ಬಿಡದೆ ಸುರಿವ ಶ್ಲೇಷ್ಮಮುಂ, ಅೞಿಗಣ್ಣವರಂತೆ ಕೊೞೆಗಣ್ಗಳುಂ, ಮಾಗಿಯ ದೇಸಿಗನಂತೆ ಬೂದಿವೆರಸಿರ್ದೊಡಲುಂ, ಎಱೆಯ ಕೆಱೆಯಂತೆ ಬತ್ತಿರ್ದ ಗಲ್ಲಮುಂ, ಆನೆ ಮೆಟ್ಟಿದ ಸಂಬಳಿಗೆಯಂತೆ ಬತ್ತಿದ ಮೂಗುಂ, ಪೂಲಿಯ ಪಣ್ಣಂತೆ ಪೊಱವಾಯ್ವ ಕೀವುಂ, ಮುದುಕರಂತೆ ಲೋಳಸುರಿವ ಬಾಯುಂ, ಕೀವುಗಿವಿಯವರಂತೆ ಕೀವು ಸುರಿವ ಕಿವಿಯುಂ, ಬೇತಾಳನಂತೊಳಸಾರ್ದ ಬಸಿಱುಂ, ಪಡಿಕೆಯಂತೆ ನಾಱುತಿರ್ಪ ಪೆರ್ಬುಣ್ಗಳುಂ, ಕೆಮ್ಮುಳ್ಳರಂತೆ ಮೇಲೆತ್ತುವ ಶ್ವಾಸಮುಂ, ಗುಡಿಲಂತೆ ಬಾಗಿದ ಬೆನ್ನುಂ, ಪುಟ್ಟನಂತೆ ಬೆರಲ್ಗಳಿಲ್ಲದ ತಳಮುಂ, ಅದ್ಭುತಮಾಗೆ ಮೂಱುಂಲೋಕದ ಭೀಭತ್ಸಮನೆಲ್ಲಮನೊಂದುಮಾಡಿ ವಿಧಾತ್ರಂ ರೂಪುಮಾಡಿದನೆಂಬಂತೆ ಹೀನರೂಪಂ ಕೈಕೊಂಡು ‖ ೩೫

ನೊಳಗಳ್ಮುಸುಂಕಿ ಮಾಣದೆ
ಬಳಸಿಯುಮೋರಂತೆ ಸುತ್ತಿ ನೆಱೆ ದುರ್ಗಂಧ ।
ಕ್ಕಳಸಿ ಮುನಿಪತಿಯನಗಲದೆ
ಸುೞಿವುವು ಜುಮ್ಮೆಂದು ಕಂಡವೆರ್ಪೇಸುವಿನಂ ‖ ೩೬

ಅಂತು ವಿಗುರ್ವಿಸಿದ ಕಿಸುಕುಳ ರೂಪಿಂ ಕೃತಕರ್ಷಿಯಾಗಿ ರೌರವಪುರದೊಳಗೆ ಚಂದ್ರಗತಿಯಿಂ ಚರಿಗೆವರ್ಪುದುಂ [1] ಕಂಡಕಂಡರೆಲ್ಲಂ, ಜಂತೆತ್ತಿದರಂತೋಕರಿಸುತ್ತುಂ, ಬಯಕೆವೆಂಡಿರಂತುಗುೞುತ್ತುಂ, ನೀರೊಳಗೆ ಮುೞುಂಗುವರಂತೆ ಮೂಗಂ ಮುಚ್ಚಿಕೊಳ್ಳುತ್ತುಂ, ಬೆಳದ ಕೆಯ್ಯಂತೆ ತಲೆಯಂ ತೂಗುತ್ತುಂ, ಅಳಯನಂ ಕಂಡತ್ತೆಯಂತೆ ತೊಲಗುತ್ತುಂ, [ಋಷಿಯರಂತೆ ಕೊಕ್ಕರಿಸುತ್ತುಂ,] ಓಡಿಬಂದ ಬಂಟನಂ ಕಂಡೊಡೆಯನಂತೆ ಚೀಃ ಎನುತ್ತುಂ, ದಾಳಿಯಂ ಕಂಡರಂತೆ ಮಗುೞ್ದೋಡುತ್ತುಂ, ಬಲ್ವಗೆಯಂ ಕಂಡಂತೆ ಮೊಗಂದಿರಿಪುತ್ತುಂ, ಮುದುಪಬೊಜಂಗನಂ ಕಂಡ ಬೆಲೆವೆಣ್ಣಿನಂತೊಳಸಾ

[1] ಚರಿಗೆಗುಡುವುದುಂ (ಗ)

ರುತ್ತುಂ, ಪೊಲ್ಲವೆನೆಯು ಸೆಱೆಯಂತುವಮ್ಮುಳಿಸುತ್ತುಂ, ವೃದ್ಧನ ಕುತ್ತ ಮನೋಽವುವ ತರುಣಿಯಂತೆ ಪೇಸುತ್ತುಂ, ಪೇಳಿಗೆಯೊಳರ್ದ ಪಾವಿನಂತೆ ದುರ್ಗಂಧಕ್ಕೆ ಮಿಡುಕುತ್ತುಂ, [ಪಗರಣಮಂ ನೋಡುವರಂತ ನಗುತ್ತುಮಿಂತೆಂದರ್ :— ॥ ೭೭

ಈ ತೊನ್ನಂಗೀಕಷ್ಟಂ
ಗೀತೊಡವಿದೇಕೆ ಬಗೆವೊಡೆ ಮೆಯ್ಗೆ ।
ಟ್ಪಾತಂಗೆ ಕೂೞಿನಾವಂ
ಪ್ರೀತಿಯೊಳಿಕ್ಕಿದಪನೆಂದು ತವೆಮ್ಮೊಳ್ ನಗುತುಂ ॥ ೭೮

ಇಂತಿರ್ಪಿನಂ ನೆರೆದ ನೆರವಿಯಂ ಕಳೆದು ಕಿಱಿದಂತರಮಂ ಬರಲೆಡೆಯೊಳೊರ್ವಂ ಜಾತಿಮೂಢನಿಂತೆಂದಂ :— ೭೯

ಬಡಲೆಲ್ಲಂ ಕೆಟ್ಟುದು ಮೆಯ್
ಬಡವಾದುದು ಕಾಲ ಕೈಯ ಬೆರಲೆಲ್ಲಂ ತ ।
ಮ್ಮೆಡೆಯಿಂ ಪೋದುವು ಪೇೞ್ಸ
ತ್ತೊಡೆ ಪುಟ್ಟರೆ ತನಗಿದೇಕೆ ಬಾೞ್ಕೆಯ ಮೋಹಂ ॥ ೮೦

ಎನುತ್ತುಮಿರ್ಪುದುಂ ದುರ್ಗತಿಸಮನ್ವಿತಂಗೆ ಯೀಮಾತು ತಕ್ಕುದೆಂದು ನಗುತ್ತುಂ ಬರೆ ಪಚ್ಚಪಸಿಯೆಗ್ಗರೆಲ್ಲಂ ನೆರೆದಿಂತೆಂದರ್:— ೮೧

ಈ ದುಃಖಂ ತನಗೇಕೆ ಪೇೞ ಮನಸಂ ಸೈತಿಟ್ಟು ಬಾೞ್ವಾಸೆಯಿಂ
ಬಂದಂಬಿಟ್ಟು ವಿಮೋಹಮಂ ಬಿಸುಟು ಕಣ್ಣಂ ಮುಚ್ಚಿ ವೀರರ್ಕಳಿ
ನ್ನಾದಂ ಬಣ್ಣಿಸೆ ಕಿಚ್ಚನಿಕ್ಕಿ ಜಲಮಂ ಮೇಣಕ್ಕೆ ಪಾಯ್ದುಣ್ಮು ಸ
ತ್ತೀದುಃಖಾಗ್ನಿಯನೋಮೊ ನೀಗದಿರಲಿಂದೀ ಬಾೞ್ಕೆ ಮೇಣ್ಪಟ್ಟಮೋ ॥

ಎಂಬ ಮಾತಂ ಕೇಳ್ದು ಸಂಸಾರಸಮುದ್ರದೊಳೋಲಾಡುವವರ್ಗೀ ವಚನಮೆ ಪೂಜ್ಯಮೆಂದು ಪೊಗುತ್ತಿರೆ ವಿಚಾರಪರರಪ್ಪವರಿಂತೆಂದರ್: — ೮೨

ಪಸಿವುಂ ನೀರಳ್ಕೆಯುಮುಂ ದುರ್ವ್ಯಸನವುಮುಮಧಿಕಂ ಬೆರ್ಚುಗುಂ ತೊನ್ನರಪ್ಪ
ಗೆ ಸಮಂತಿಚ್ಛಿನಮೂರ್ಗಂ ಕರಮೆರಿದದನಿಂತೀವ್ರೊ ತಾಳ್ದಿರ್ದಮತ್ತಂ
ಪಸಿವಂ ನೀರಳ್ಕೆಯುಂ ದುರ್ವ್ಯಸನವುಮನಣಂ ಧೈರ್ಯದಿಂನಾಡೆಯುಂಸೈ
ರಿಸಿ ಶುದ್ಧಾಚಾರದಿಂದಂ ನಡೆವ ಗುಣದೊಳೀ ಯೋಗಿನಾಥಂ ಕೃತಾರ್ಥಂ ॥ ೮೪

ಎಂದು ನುಡಿದ ಮಾತಂ ಕೇಳ್ದು ಕರ್ಮೋಪಶಮಮುಮುಳ್ಳವರ್ಗ ಚಿತವಿದು ಮೇಣಲ್ಲವೆಂದು ಮೆಲ್ಲಮೆಲ್ಲನೆ ನಡೆಯೆ ಜಾತಿಕರುಣಿಗಳಿಂತೆಂದರ್ :— ೮೫

ಕುರುವೊಂದೇಬಿಲ್ ಮೊದಲಾ
ಗಿರೆ ಸೈರಿಸಬಾರದೀ ಮಹಾಪುರುಷಂ ನಿ।
ಷ್ಠುರಮಪ್ಪೀ ಬೆರ್ಚುತ್ತದ
ನಿರೋಧಮಂ ತಾಳ್ದಿ ಮಣುಗದೆಂತಿರ್ದಪನೋ ॥ ೮೬

ಎಂದು ಕೈಮುಗಿದವರಂ ಕಂಡು ದೇವಗತಿಗೆ ಸಲ್ವಂತಪ್ಪೀ ಲಘು ಕರ್ಮಿಗಳ್ಗೀ ವಚನಮೆ ಬರ್ಕುಮೆಂದು ಪೋಗೆ ಶ್ರಾವಕರೊಡನಾಡುವರಿಂತೆಂದರ್ : — ೮೭

ಈ ಕುಚೆಯೊಂದುವೇದನೆಗೆ ಬೆಚ್ಚದೆ ಕಾಂಕ್ಷಿಸಿ ತನ್ನ ಮೆಚ್ಚಿದಾ
ಹಾರಮುಮಕ್ಕೆ ಬಂದೊಡರೆಪಲ್ದಿದೀವದೆ ಕಂಡಕಂಡರಂ
ಸೈರಣೆಗೆಟ್ಟು ಬೇಡದೆ ಜಿನಾಗಮದೊಳೆಯೊಳೋಚಿದಪ್ಪದೀ
ವೀರನ ವೀರವೃತ್ತಿಯೊಳವಂ ನೆಱೆ ಬಣ್ಣಿಸಲಾರ್ಪನಾವನೋ ॥ ೮೮

ಎಂದು ಬಣ್ಣಿಸುವವರಂ ಕಂಡು ನೇರಿದರ ನೀತಿ ಸುರಲೋಕಮಂ ಬುದು ತಪ್ಪದೆನುತ್ತುಂ ಪೋಗೆ ಮುಂದೆಡೆಯೊಳುರ್ವ ದುರ್ಜನರೊತ ನಾಡುವ ಚಪಳನಿಂತೆಂದಂ:— ೮೯

ಲೋಕದೊಳಾಂ ಕಾಣದರಿ
ಲ್ಲೀಕುತ್ತಂ ಪೊರ್ದಿ ನಮೆವ ಮೌನಿಸರಂ ಕೇ ।
ಳೀಕಷ್ಟನಂದದಿಂ ಮೆ
ಯ್ಯಾಕಾರಂಗೆಟ್ಟು ನಮೆವರಂ ಕಂಡಱಿಯೆಂ ॥ ೯೦

ಎಂಬುದುಂ ದುರ್ಜನಸಂಗತಿಯುಪ್ಪೀತಂಗೀ ನುಡಿಯೆ ಸೇವ್ಯಮೆಂದು ನುಡಿಯೆ, ಋಷಿಯರ ಮಾರ್ಗಮನಱಿದವರಿಂತೆಂದರ್ :— ೯೧

ಕರುಣಿಸಿ ಲೋಗರೀರುಜೆಗೆ ಮದ್ದುಗಳಂ ಮನಮೊತ್ತು ಮಾಱ್ಪುದಂ
ಕರಮರಿದಣ್ಣ ನಾಮಱಿವೆವೀಮುನಿಪುಂಗವರೊಂದುಮಾರ್ಗಮಂ
ಕರಮತಿಭಕ್ತಿಯಿಂ ನಿಲದೆಯುಣ್ಬುದು ನೂರ್ಮಯು ಮಂತೆಸಾವೊಡಂ
ಪರಿಹರಿಸಲ್ಕೆವೇೞ್ಕುಮಳಿಪಿಲ್ಲದೆ ನೋಡ ಸಮಸ್ತವಸ್ತುವಂ ॥೯೨

ಎಂದು ಪೇೞ್ವುದುಮವರಂ ಕೃತಕರ್ಷಿ ನೋಡಿ ನೀರ ತಡಿ ಕೆಸಱಕ್ಕುಮೆಂಬುದು ತಪ್ಪದೆಂದು ಪೊಗೞುತ್ತಿರೆ ಬುದ್ಧಿವಂತರ್ಕಂಡಿಂತೆಂದರ್ :— ೯೩

ಮಾತೇಂ ಕಡುದುಃಖಿತನ
ಪ್ಪೀತಂ ಮೊದಲಾದ ಜೈನಮಾರ್ಗಮನೆಂತುಂ ।
ಭೂತಳದೊಳ್ಬಡನೆನಲುಪ
ಮಾತೀತಂ ಜೈನರಿಂದಮಗ್ಗಳರೊಳರೇ ॥ ೯೪

ಮತ್ತೊಂದೆಡೆಯೊಳ್ ಜಡಮತಿಗಳಿಂತೆಂದರ್ :— ೯೫

ಆದರದಿಂದೀ ಮುನಿಪಂ
ಪೋದೊಡವಿೂಪುರದೊಳವರ ತನುವಿನ ಮುರ್ಗಂ ।
ಧೋದಯಮೞಿದಿಂಗಳ್ಗಂ
ಪೋದಪುದೆ ಪೋಗಲಱಿಯದೆನುತ್ತುಂ ನಕ್ಕರ್ ॥ ೯೬

[1] ನಿಲದಲುಣ್ಬುದು ನೋರ್ಮಯಿ ಮತ್ತೆಸಾವೊಡಂ (ಕ. ಖ.)

ಮತ್ತೊಂದೆಡೆಯೊಳ್ ಶೂನ್ಯಹೃದಯರಿಂತೆಂದರ್ :—] ೯೭

ವ್ಯಾಧಿಯೊಳೆಲ್ಲಂ ಕುಷ್ಠ
ವ್ಯಾಧಿಯೆ ಕಡುಕಷ್ಟಮಿದಱ ವೇದನೆಯೆಂಬಂ।
ಬೋಧಿಯೊಳಗಿರ್ದದೇನಂ
ಸಾಧಿಸಲಿರ್ದಪನೊ ಬಿಡದೆ ಜೀವವಮನೀತಂ ॥ ೯೮

ಮತ್ತೊಂದೆಡೆಯೊಳ್ ಬದ್ಧಮಿಥ್ಯಾದೃಷ್ಟಿಗಳಪ್ಪವರಿಂತೆಂ
ದರ್ :— ೯೯

ಶ್ರಾವಕರಪ್ಪವರ್ನೆರೆದು ನಿಶ್ಚಯದಿಂ ಮುನಿಗಳ್ [1] ಕೊಡುರ್ವ ನಾ
ನಾವಿಧಭಕ್ಷ್ಯದಿಂ ಪಲವುಬಾಡುಗಳಿಂ ತಿಳಿದುಪ್ಪದಿಂ ಸಮಂ
ತಾವಗಮಾವರೊಳ್ಗುಣಿಸನೆಂಬಖಿಲಾಷೆಯೊಳೀರುಜಾನ್ವಿತಂ
ಭಾವಿಸಿಕೊಂಡನೀತಪಮನೆಂದು ಜಡರ್ ನುಡಿಯುತ್ತುಮಿರ್ಪಿನಂ ॥೧೦೦

ಅನಂತಕಾಲಮುಂ ದುಃಖಭಾಜನರಪ್ಪವರ್ಗಮಾವುದು ಮಾರ್ಗ
ಮೆಂದು ಪೋಗುತ್ತುಮಿರ್ಪುದುಮೊರ್ವನಱಶ್ರಾವಕಂ ಕಂಡು, ೧೦೧

ಬಾಯೊಳ್ ತಂಬುಲಮಿರ್ದಪು
ದೀಯೆಡೆಯೊಳ್ ಕೆಪ್ಪುಗಾಲೊಳಿರ್ದಪನೆಂದಾ। [2]
ಮಾಯಾವಿ ನಿಲಿಸಲಾಱದು
ಪಾಯದಿನೊಳಸಾರ್ದು ಪೊಕ್ಕನೊಂದಂಗಡಿಯಂ ॥ ೧೦೨

ಮತ್ತೊರ್ವಂ ಸಂಶಯಶ್ರಾವಕಂ ಕಂಡು, ೧೦೩

ಕರವೆನ್ನ ಸತಿಯ ಮುಂದಾಂ
ಪರಮಶ್ರಾವಕನೆನೆಂದು ಬೀಱುವೆನಿವರಂ।
ಭರದಿಂ ನಿಲಿಸದೊಡೆನ್ನಂ
ಮರವಧು ನಗುಗೆಂದು ಕಾಣನೆಂಬಂತಿರ್ದಂ ॥ [3] ೧೦೪

ಮತ್ತೊರ್ವಂ ಮಿಶ್ರಶ್ರಾವಕಂ ಕಂಡು, ೧೦೫

---

1 ರುಷಿಯರ್ಗೆ (ಬ. ಕ.) ನಿಲಿಸೆನಿಲ್ಲರಣಮಿಲ್ಲೆಂದಾ (ಗ) 3 ನಿದ್ರೆಗೆಯ್ದುಂ
ತಿರ್ದಂ (ಬ. ಕ)

ಲಲನೆಗೆ ನೀನೀ ಮುನಿಯಂ
ನಿಲಿಸೆನೆ ನಾನಱಿಯೆನೋವೊ ನೀನೇ ಮುನಿಯಂ । [1]
ನಿಲಿಸೆಂದಿರ್ವರುಮೊಗಳ್
ಕಲಹಂಗೆಯ್ಯುತ್ತುಮಿರ್ಪುದುಂ ಮುನಿ ಪೋದಂ ॥ ೧೦೬

[ಮತ್ತೊಂದೆಡೆಯೊಳೊರ್ವಂ ಪೊಸಶ್ರಾವಕಂ ಕಂಡು, ೧೦೭

ಆಮನೆಯುವರಾಮನೆಯುವ
ರೀಮನೆಯುವರಟ್ಟ ನಾರ್ಪ ದುರ್ಗಂಧಕ್ಕಿಂ ।
ತೀ ಮುನಿಯಂ ನಿಲಿಸಿದರಿ
ಲ್ಲೀಮೊತೊ ನಾನುಮೊಣೆನೆಂದೊಳಗುಱಿದಂ ॥ ೧೦೮

ಮತ್ತೊರ್ವಂ ಕೇಳ್ಪಯಿಲ್ಲದ ಶ್ರಾವಕಂ ಕಂಡು, ೧೦೯

ಮುನಿಪನ ಬರವಂ ದೂರದೊ
ಳನುನಯದಿಂ ಕಂಡು ನಿಲಿಸಲಾಱದೆ ತಾಂ ತ ।
ನ್ನಿನಿಯಳನಿವರಂ ನಿಲಿಸೆನೆ
ವನಜಾನನೆ ಪಿತ್ತಲತ್ತಲೋಡಿದಳಾಗಳ್ ॥] ೧೧೦

ಮತ್ತೊರ್ವಂ ಯಶೋರ್ಥಿಶ್ರಾವಕಂ ಕಂಡು, ೧೧೧

ನೆರೆವನೆಯೂತನೆನ್ನೊಡನುದಾರಗುಣಕ್ಕೆ ಜಸಕ್ಕೆ ನಾಡೆ ಮ
ಚ್ಚರಿಸುತುಮಿರ್ಪನೀ ಮುನಿಯುನಾಂ ಕರಮಾದರದಿಂದೆ ತಾಂಗಲೋ [2]
ಸರಿಸದೊಡಟ್ಟಿದೂಱುಗುಮವಂ ಮನೆಗೀಗಳ ಬಾರನನ್ನೆಗಂ
ತ್ವರಿತದೆ [3] ಪೋಪೆನೆಂದುಣಿಸುಮಂ ಬಿಸುಟೋಡಿದನಾತ್ಮಗೇಹದಿಂ॥ ೧೧೨

ಮತ್ತೊರ್ವನಱಿತಕ್ಕೆ ಬೀಗುವ ವೃಥಾಶ್ರಾವಕಂ ಕಂಡು, ೧೧೩

ಯೂನಾಱೆನೊವೊಬಲ್ಲೊಡನೀನೇ (ಗ)

2 ಮುನಿಯುನಾದರದಿಂದಮೆತಾಂಗಲೊಲ್ಲದೋ (ಗ) 3 ಬಾರದಾಂಸವಿಸ್ತರ
ದೊಳಪೋಪೆ (ಬ. ಕ.)

ಅಱಿವವರೆನ್ನನೊಂದೆಕೊರಲಿಂ ಪೊಗೞ್ವರ್ ಧರೆಗೆಲ್ಲಮಾನುಮಿ
ನ್ನಱಿಕೆಯು ಜೈನನಂ ನಿಲಿಸಲೊಲ್ಲದೆ ಮಾಣ್ದಿಱಿದಿರ್ದನಪ್ಪೊಡಂ
ನಿಱಿಸದ ಕಷ್ಟನೆಂದುಲಿವರಿಲ್ಲಿಗುಪಾಯಮಿದೆಂದು ಬುದ್ಧಿಯಿಂ
ಪೊಱಮಡದಿರ್ದನಾತ್ಮಗೃಹದಿಂ ಕಳದಾಮುನಿ ಪಿಂಗಿ ಪೋಪಿನಂ ॥ ೧೧೪

[ಮತ್ತೊರ್ವಳ್ ಶ್ರಾವಕಿಯಿಂತೆಂದಳ್ :— ೧೧೫

ಶ್ರಾವಕನ ಸತಿಯೆ ನಾನುಂ
ಶ್ರಾವಕನಪ್ಪವನ ಮಗಳಯುಗ್ರೋಗ್ರತೆಯಿಂ ।
ದೇವರೆನಿಪಿವರ ಕಂಡೆಂ
ಭಾವಿಸುವೆಂದಿನಿಸುಪೇಸುತಪವುಂ ಕಾಣೆಂ ॥ ೧೧೬

ಮತ್ತಮೇನುಮಿಲ್ಲದ ನಿಱಿಶ್ರಾವಕಿ ಕಂಡು (ಇಂತೆಂದಳ್) :— ೧೧೭

ಓದಿನೊಳಂ ರೂಪಿನೊಳಂ
ಬಾದೇಂ ನಮ್ಮೊರ್ಕೊಳಿರ್ದ ಮುನಿಗಳವೋಲೀ [1] ।
ಮೇದಿನಿಯೊಳೊಳರೆ ಮುನಿವರ
ರೀದೀನನ ತೆಱದಿನಟ್ಟಕೊಳ ನಾರ್ತಪರೇ] ॥ ೧೧೮

ಮತ್ತೊರ್ವಂ [ಪ್ರವೀಣನಪ್ಪ] ಬಡಶ್ರಾವಕನಿಂತೆಂದಂ :— ೧೧೯

ಬಡಲೆಂತುಂ ಕಿಡಲಿರ್ದುದು
ಕಿಡುವೊಡಲಂ ತವಿಸಿ ಕಿಡದ ಮುಕ್ತಿಶ್ರೀಯುಂ ।
ಪಡೆಯಲ್ಕೀಜಿನರೂಪಂ
ದೃಢಮನದಿಂ ಪಿಡಿವೊಡಱಿವರಿವರೆ ಕೃತಾರ್ಥರ್ ॥ ೧೨೦

ಮತ್ತೊರ್ವಂ ಬರ್ದಿನ ಶ್ರಾವಕಂ ಕಂಡು (ಇಂತೆಂದಂ) :— ೧೨೧

ಈ ರೂಪಿಂದಲ್ಲದೆ ಸಂ
ಸಾರದೊಳೊದವಿರ್ದ ದುಃಖಮುಂ ಗೆಲಲರಿದೆಂ ।
ದಾರಯ್ದು ಜೈನರೂಪಂ
ಧೀರತೆಯಿಂ ಧರಿಸಿದಂ ಧರಾಧರಧೈರ್ಯಂ ॥ ೧೨೨

ಮತ್ತೊಂದೆಡೆಯೊಳ್ ನೆರೆದಿರ್ದ ನೀತಿವಿದರ್ಕಳಿಂತೆಂದರ್ [2] :— ೧೨೩

---

1 ರುಷಿಯರವೋಲೀ (ಬ.ಕ.)   2 ಮತ್ತಂವಿವೇಕಿಗಳ್ ಕಂಡು (ಗ)

ಅರಸರೊಳಪ್ಪ ಬಾಧೆಗಳನಿಷ್ಟರಗಲ್ಕೆಯಿನೊಲ್ಲನೆಂಬ ಪೆಂ
ಡಿರ ದೆಸೆಯಿಂ ದರಿದ್ರತೆಯಿನಾತ್ಮನ ಕುತ್ತದಿನೆಂತುಮಕ್ಕುಮ
ೞ ರಿಯ ಮಹೋಗ್ರದುಃಖತತಿ ಕರ್ಮಫಲೋದಯದಿಂದಮೀ ಮಹಾ
ಪುರುಷನೆ ಧನ್ಯಸೀರುಜೆಯೊಳೀ ತಪಮಂ ನೆಱೆ ತಾಳ್ದಿದೋಱೆಯಿಂ॥ ೧೨೪

ಎಂದು ನಾನಾಪ್ರಕಾರದಿಂ ನುಡಿವ ಬಹುಜನದ ಮಾತುಗಳುಮಂ ಪಲಪ್ರಂತೆಱದ ಪರಿಣಾಮಂಗಳುಮಂ ಕಂಡು ಕೇಳ್ದು [ಕೃತಕರ್ಷ ತನ್ನೊಳಿಂತೆಂದಂ :—] ೧೨೫

ಮರನೆಂಬೀಪೆಸರೆಲ್ಲಾ
ತರುಗಳ್ಗಂ ತಾಂ ಸಮಾನಮೆನಿಸಿತ್ತೊಳಲ್ಲಾ ।
ತರುಗಳ ಪಣ್ಣುಂ ಪೆಸರಂ
ತಿರೆ ನೋಡ ಸಮಾನಮಾಗಲಱಿಗುಮೆ ಸಪಿಯೊಳ್ ॥ ೧೨೬

ಬಾಳೆಯ ಪಣ್ಣದೊಂದು ರುಚಿ ನೇಱಿಲ ಪಣ್ಣೊಳಗುಂಟೆ ಭಾವಿಸಂ
ದೀಳೆಯ ಪಣ್ಣದೊಂದು ರುಚಿ ಮಾವಿನ ಪಣ್ಣೊಳಗುಂಟೆ ಸಂದ ಕಿ
ತ್ತೀಳೆಯ ಪಣ್ಣದೊಂದು ರುಚಿ ಬೇವಿನ ಪಣ್ಣೊಳಗುಂಟೆ ತಾನಣಂ
ತಾಳಫಲಂಗಳೊಂದು ರುಚಿ ತುಂಬುರ ಪಣ್ಣೊಳಗುಂಟೆ ಲೋಕ
ದೊಳ್ ॥ ೧೨೭

ಅಂತು ಮಾನಿಸರ್ಗೆ ಮಾನಿಸರೆಂಬ ಪೆಸರ್ ಸಮಾನಮಾದೊಡಂ ಮಾತುಗಳುಂ ಪರಿಣಾಮಮುಂ ಬೇಱೆವೇಱೆಯಕ್ಕುಮದಱಿಂ ॥ ೧೨೮

ಪಾದಱಿಯದೊಂದು ಕುಸುಮಾ
ಮೋದಂ ಪೊರ್ದಲ್ಕೆ ನೀರ್ ಸುಗಂಧಮದಕ್ಕುಂ ।
ಬಾದೇಂ ಬೇವಿನ ಕುಸುಮಾ
ಮೋದಂ ಪೊರ್ದಲ್ಕೆ ಕಯ್ಪೆಯಕ್ಕುಂ ತೋಯಂ ॥ ೧೨೯

[ಅಂತೆ ಲೋಕದ ಜೀವಂಗಳ್ಗಂ] ಶುಭಕರ್ಮದ ಪೊರ್ದುಗೆಯಿಂ ಸುಬುದ್ಧಿಯುಮಶುಭಕರ್ಮದ ಪೊರ್ದುಗೆಯಿಂ ದುರ್ಬುದ್ಧಿಯುಮಕ್ಕುಮೆಂದು ತನ್ನೊಳ ಭಾವಿಸುತ್ತುಂ ॥ ೧೩೦

ಪರಮಜಿನೇಶ್ವರಚರಣಾಂ
ಬುರುಹದ್ವಯಮತ್ತಮಧುಪನೊದ್ವಾಯನಭೂ ।
ವರವಲ್ಲಭನರಮನೆಗಾ
ಗಿರೆ ಕೃತಕಮುನೀಂದ್ರನೊಯ್ಯನೊಯ್ಯನೆ ನಡೆದಂ [1] ॥ ೧೩೧

ಅನ್ನೆಗಂ ॥ ೧೩೨

ವರರತ್ನದ ದೀವಿಗೆಗಳ್
ಕರಮಲ್ಲದೆ ತೊಳಗಿ ಬೆಳಗಿ ಮಿಂಚಂ ಸುತ್ತಂ ।
ಪರಪಿದವೊಲೆಸೆಯೆ ನಾನಾ
ವಿರಚನೆಯಿಂದೊಪ್ಪಿ ತೋರ್ಪ ಸಿಂಹಾಸನದೊಳ್ ॥ ೧೩೩

[ಇದು ಪೂರ್ವಾಚಲಮಲ್ಲದಿನ್ನಿದು ಸುರೇಂದ್ರಾಶಾದ್ರಿ ಭಾವಿಪ್ಪೊಡಿ
ನ್ನಿದು ನೋಡೊಪ್ಪುವ ಮೂಡಲಲ್ಲದಿದು ತಾಂ ಮೂಡಲ್ಕನೋರಾಗದಿಂ
ದಿದನೇಱಿರ್ದವನಲ್ಲನಂಬುಜಸಖಂ ಪ್ರತ್ಯಕ್ಷಶೀತಾಂಶು ಕೇ
ಳಿದನೇಱಿರ್ದವನರ್ಕನೆಂದೆನಿಸಿ ತಾಂ ಸೌಂದರ್ಯದಿಂ ಭೂಭುಜಂ ॥೧೩೪

ಅವಷ್ಟಂಭದೊಳ್] ಕುಳ್ಳಿರೆ, ೧೩೫

ತೊಳಗುವ ಶಶಿಮಂಡಲಮಂ
ಬಳಸಿದ ತಾರಾಳಿಯಂತೆ ಸುತ್ತಿರ್ದು ಭೂ ।
ತಳಪತಿಯುಂ ನೃಪಸುತರುಂ
ವಿಳಾಸದಿಂ ಮಕುಟಬದ್ಧರುಂ ಪಂಡಿತರುಂ ॥ ೧೩೬

ಮುತ್ತಿನಹಾರಮೊಪ್ಪೆ ಕುಚಮಂಡಲದೊಳ್ ಪೊಸಜಾದಿ ಚೆಲ್ವನೀ
ಯುತ್ತಿರೆ ದೇಸಿಯಿಂ ಸಿಮಿರ್ದ [2] ಸೋಮೆಯೆಡಿಯೊಳ್ ನೊಸಲಲ್ಲಿ
ಶೋಭನಂ
ಬೆತ್ತಿರೆ ಚಾರುಚಂದನದ ಬೊಟ್ಟು ದುಕೂಲಮವರ್ಕೆ ವೆತ್ತು ಚೆ
ಲ್ವಿತ್ತಿರ ಪೆಂಡವಾಸದೊಳವೆಂಡಿರಲಂಕೃತಿಯಿಂದಮಿರ್ಪಿನಂ ॥ ೧೩೭

---

[1] ವರನವ್ಯಪಾದಸರಸಿಜ । ನರವುನೆಗೆ ಮನೋನುರಾಗದಿಂ ಬರೆ ಮುನಿಪಂ
(ಬ. ಕ.)

[2] [illegible] (ಗ) [illegible] (ಗ)

ನಾರಂಗಸ್ತನೆಯರ್ ಮನೋಹರೆಯರಂಭೋಜಾಕ್ಷಿಯರ್ ಬಿಂಕದಿಂ
ದೋರಂತೊಪ್ಪಿ ವಿಳಾಸಮಂ ಮೆಱೆಯುತುಂ ಲಾವಣ್ಯಮಂ ಬೀಱುತುಂ
ಹಾರಾದ್ಯಾಭರಣಂಗಳಂ ವಿವಿಧವಸ್ತ್ರಾನೀಕದಿಂದಂ ಚಮ
ತ್ಕಾರಂ ಕೈಮಿಗೆ ಪೊನ್ನ ಚಾಮರಮನುರ್ವೀವಲ್ಲಭಂಗಿಕ್ಕಿದರ್ ॥ ೧೩೮

ಪಡೆವೞನಾಗೆ ಹಾರಮುಮದೊರ್ಪ್ಪುವ ಪೆರ್ಮೊಲೆ ತಂತ್ರಮಾಗೆ ಪೊಂ
ದೊಡವಿನೊಳಾದ ನಿಸ್ವನಮೆ [1] ದುಂದುಭಿಯಾಗೆ ವಿಳಾಸಲೋಚನಂ
ಕಡುಪಿನ ಬಾಣಮಾಗೆ ಧನುವಾಗೆ ನೆಗಟ್ತಯ ಪುರ್ವು ಮೇಲುದುಂ
ಗಡಗುಡಿಯಾಗೆ ಕಾಂತೆಯರನಂಗನ ಪೆರ್ವೊಲದಂತಿರೊಪ್ಪಿದರ್ ॥ ೧೩೯

ಕೊಸಗಿನ ಪೂವಿನೊಂದು ರುಚಿಯುಂ ತನು ತುಂಬಿಯ ಬಂಬಲಂ ಕುರು
ಳ್ಪೊಸದಳಿರಂದಮಂ ಕರತಳಂ ದನಿ ಕೋಗಿಲೆಯಂ ಮುಗುಳ್ಗಳಂ [2]
ಮಿಸುಗುವ ದಂತಪಂಕ್ತಿ ಲತೆಯಂ ನಳಿತೋಳ್ಗೞೆ ಪೋಲ್ತು ನಾಡೆ ರಂ
ಜಿಸುವ ವಿಳಾಸಿನೀನಿಕರದಿಂ ಪೊಸಸುಗ್ಗಿವೊಲಿರ್ದುದೋಲಗಂ ॥ ೧೪೦

ಚಾರುವಿಶಾಲಲೋಚನಯುಗಂ ಕಣೆಯಂ [3] ಪೊಲೆ ಚಕ್ರಮಂ ಕಚಂ
ಸಾರಮುನಿಸಿಪ್ಪ [4] ಚೆಂಬರಿಗೆಯುಂ ನಳಿತೋಳಸಿಯುಂ ಸಮಂತು ಪೋ
ಲ್ತಾರಮಣೀಸಿಕಾಯದಿನನಂಗನ ನಚ್ಚಿನ ದಿವ್ಯಶಸ್ತ್ರಭಂ
ಡಾರದ ಗೇಹಮಂ ನೆಱೆಯೆ ಪೋಲ್ತುದು ಭೂವನಿತೇಶನೋಲಗಂ॥೧೪೧

[ನಿಱಿದಲೆ ನೀಳ್ದ ಪುರ್ವು ನಳಿತೋಳ್ನಡುಗಣ್ ಸುಲಿಪಲ್ ಘನಸ್ತನಂ
ತುಱುಗೆಮೆ ಕೋಮಲಾಂಗನುಳವಟ್ಟ ಕುರುಳ್ಪವಳಾಧರಂ ಕರಂ
ಮಿಱುಗುವ ದಂತಪಂಕ್ತಿ ನೆಯನಂ ಗೆಡೆಗೊಂಡ ಮುಖಂ ನಖಂ ಕಚಂ
ನೆಱೆ ರಮಣೀಯಮಾಗೆ ರಮಣೀನಿಕರಂ ನೆರೆದಿರ್ದುದೊಪ್ಪದಿಂ ॥]೧೪೨

ಬೆರಲೊಳು ರತ್ನಮುದ್ರಿಕೆ ವಿರಾಜಿಸೆ ಕಂಠದೊಳೊಪ್ಪೆ ಮುತ್ತಿನೈ
ಸರಮುಳವಟ್ಟ ಹಸ್ತಯುಗದೊಳ್ ಮಣಿಕಂಕಣಮೆಯ್ದೆ ಶೋಭಿಸು

---

1 ಬೆಳ್ಪೊಡರಿಪನೂಪುರಸ್ವರಮು (ಗ). 2 ಕೋಗಿಲೆಮೌಕ್ತಿಕಂಗಳಂ (ಗ)
3 ವಿಳಾಸನೇತ್ರಯುಗಳಂ ಸರಲಂ (ಗ) 4 ನೇರಿದವಪ್ಪ (ಗ)

ತ್ತಿರೆ ಕಟಿಸೂತ್ರಪೂಪ್ಪೆ ಕಟಿಯೊಳ್ ತಲೆಯೊಳ್ ನೆಱೆ ಚೆಲ್ವ ಪೂಗಳೊ
ಪ್ಪಿರೆ ಗಣಿಕಾಜನಂ ಸ್ಮರನ ದೀಪದ ಪುಲ್ಲೆಯೊಲಿರ್ದುದೊಪ್ಪದಿಂ॥ ೧೪೩

[ಪೂಸಿದಗೊಂದು ಕುಂಕುಮಮಂ ತಾಂ ತಿಮಿರಾಗೆ ಲಲಾಟಪಟ್ಟದೊಳ್
ಭಾಸುರಮಪ್ಪದೊಂದು ತಿಲಕಂ ತಿಲಕಕ್ಕೆಣೆಯಾಗೆ ಸೆಳ್ಳುಗುರ್
ದೇಸಿಯಿನೊಪ್ಪುಪತ್ತ್ರಮಿರ್ದ ಕುರುಲಗಾಗೆ ವಿಳಾಸದಿಂದಮಿ
ರ್ದಾ ಶಶಿವಕ್ತ್ರೆಯರ್ನೆಗಱ್ದ ಕಾಮನ ಮಾಸಮೆಳಂಬೊಲೊಪ್ಪಿದರ್ ॥]

ಪೊಳೆವ ವಿಶಾಲಲೋಚನದ ಮುತ್ತಿನಹಾರದ ಬೆಳ್ಪು ನೀಲಕುಂ
ತಳದ ಪೊದಱ್ದ ಕಾಡಿಗೆಯ ಕಪ್ಪುಧರಂಗಳ ಪಾಣಿಪಲ್ಲವಂ
ಗಳ ಗಡೆಗೊಂಡ ಕೆಂಪು ಕರಮೊಪ್ಪಿರೆ ಶೋಭೆಯಿನೊಪ್ಪುದಾಳ್ದ[1] ಕೋ
ಮಳಯರನಂಗರಾಜನ ವಿನೋದದ ಚಿತ್ರಪಟಂಬೊಲೊಪ್ಪಿದರ್ ॥ ೧೪೪

[ಧರಣೀಧ್ರನೋಲಗಕ್ಕಂ
ಸುರಪತಿಯೊಡ್ಡೋಲಗಕ್ಕಮಿದು ಮಿಗಿಲೆಂಬೋಲ್ ।
ಕರಮೊಪ್ಪಿರ್ದುದು[2] ಸಭೆಯಾ
ತರಳಾಕ್ಷಿಯರಿಂ ಪೊದಱ್ದ ನೂರ್ಮಡಿಚೆಲ್ವಂ ॥] ೧೪೬

ರಸದ ಮಳೆ ಕರೆದಪುದು ಸಂ
ತಸದಿಂ ನೋಣದೆ ರಸಾಯನದ ಕೂಸದೊಳಂ ।
ಬೆಸಕದಿನಸದಳಮೆಸೆದುದು
ರಸಗೀತಂ ವಸುಮತೀಶನಾಸ್ಥಾಯಿಕೆಯೊಳ್ ॥ ೧೪೭

ಇವು ಮತ್ತೇಭಂಗಳುದ್ದಂನುಡಿಯದೆ ಭಯದಿಂದಟ್ಟಿದಂ ಮಾಳವಂ ಮ
ತ್ತಿವು ಜಾತ್ಯಶ್ವಂಗಳುರ್ಕಂ ಬಿಸುಟು ವಿನಯದಿಂದಟ್ಟಿದಂ ಪಲ್ಲವಂ ಮ
ತ್ತಿವು ನಾನಾರತ್ನಮಂ ಮುಂತೊಱೆದ ಮಹಿಮೆಯಿಂದಟ್ಟಿದಂ ಚೌಳಕಂ ತಾ
ನಿವು ಕಾಶ್ಮೀರೇಶನೊಲ್ದಟ್ಟಿದ ನಿರುಪಮವಸ್ತ್ರೋತ್ಕರಂ ದಿವ್ಯವಸ್ತ್ರಂ ॥

---

1 ಶೋಭಗ ಮುಖ್ಯಮಾದ (ಗ) 2 ಮಿಮರಗುಣಸಾ । ಗರಮೊಪ್ಪಿರ್ದುದು (ಬ. ಕ.)

ಎಂದು ಪರದೇಶಾಧೀಶ್ವರರಟ್ಟಿದ ಕಪ್ಪಮುಮಂ ಬಂದ ದೂತರುಮಂ ತೋಱಿ ಬಿನ್ನಪಂಗೆಯ್ಯೆ ದೌವಾರಿಕರಿಂ[ದಮಂಸೆದುದು; ಮತ್ತಂ. ೧೪೯

ಮನಸಿಜರಾಜಂ ನೋಟಕ
ಜನಕ್ಕೆ ಲೇಸಾಗಿ ಠಕ್ಕನಿಕ್ಕಿದನೆಂಬಂ ।
ತನವರತಂ ರಂಜಿಸಿದುವು
ಜನಪತಿಯೋಲಗದೊಳಾದ ಪಲವುಂ ನೃತ್ಯಂ ॥ ೧೫೦

ವಾರಸ್ತ್ರೀನಿಕುರಂಬದಿಂ ಮುಕುಟಬದ್ಧಾನೀಕದಿಂ ಭವ್ಯರಿಂ
ಭೂರಾಮಾಧಿಪರಿಂ ಬುಧವ್ರತತಿಯಿಂ ಸಾಮಂತರಿಂ ಜಾಣರಿಂ
ಶೂರರ್ಧೀರರುದಾರರಪ್ಪ ಪಲಬರ್ಚಾತುರ್ಯರಿಂ ವೀರರಿಂ
ದೋರಂತೊಪ್ಪಿದುದುನ್ನತಿಕ್ಕೆಯೊದವಿಂ ಭೂಪಾಲನೊಡ್ಡೋಲಗಂ ॥

ಅಂತಮರೇಂದ್ರಲೀಲೆಯಿಂದೊಡ್ಡೋಲಗಂಗೊಟ್ಟಿರ್ದೊದಾ[ಯುನ][1] ಮಹಾರಾಜಂ ತನಗೆ ಮುಕ್ತಿಶ್ರೀಯಟ್ಟಿದ ದೂತನಂತೆ ಬರ್ಪ ಕೃತಕರ್ಷಿಯಂ ಕಂಡು, ೧೫೧

ಮನದೊಳ್ ರಾಗಂ ಭೋಂಕನೆ
ತನಗಾಗಳ್ ಪುಟ್ಟೆ ಹಸ್ತಕಮಲದ್ವಯಮಂ ।
ಜನನಾಥಂ ಮುಗಿದು ಮುನೀಂ
ದ್ರನನಿದಿರ್ಗೊಳಲೆಂದು ಭಕ್ತಿಪೂರ್ವಕದಿಂದಂ ॥ ೧೫೨

ದುಕೂಲವಸ್ತ್ರದುತ್ತರಾಸನಂಬೆರಸಿ ಇದಿರಾಗಿ ಬಂದು, ೧೫೩

ವರಮುಕ್ತಿಶ್ರೀಯಲ್ಲಿಗೆ
ಭರವಶದಿಂದೇಱಲೆಂದು ನಿಚ್ಚಣಿಗೆಯನೂ ।
೭೮

1 ಮೇಲೆ ಬರ್ಪ ಪಾವನಋಷಿಯುದಯಿರ್ದ ಒಡ್ಡೋಲಗದ ಮಹಿಮೆಯಿಂದಿರ್ದ ಬದಾ ಯುನ (ಗ)
ವಸ್ತ್ರಮನುತ್ತರಾಸನಮನಿಕ್ಕಿಕೊಂಡು (ಬ.ಕ.)

ಪ್ಪಿರೆ ಪಿಡಿವ ಮೊಱಕ್ಕಯಿಂದಂ
ನರೇಶ್ವರಂ ಪಿಡಿದನಾ ಮುನೀಂದ್ರನ ಕಾಲಂ ॥ ೧೫೫

[ತಾಂ] ಗುಣನಿಧಾನದೀಪವರ್ತಿಯುಪ್ಪುದಱಿಂ ಗುಣನಿಳಯನ ಪಾದಕ್ಕೆಱಗಿ ಪೊಡೆಮಟ್ಟು ನಿಲಿಸಿ [ರಾಗದಿನೊಡ]ಗೊಂಡು ಬಂದುಚ್ಚಾಸನದೊಳ್ಕುಳ್ಳಿರಿಸುವುದುಂ, ೧೫೬

ನಿಲಲಾಱದೆ ದುರ್ಗಂಧ
ಕ್ಕಲಸಿ ಕೆಲರ್ಜಗುಱ್ದು ಪೋದರಪನಿಪನಲ್ಲಿಂ ।
ತೊಲಗಿದೊಡೆ ಕೊಲ್ಗು ಮೆಮ್ಮಂ
ಮುಳಿದೆಂದುಂ ಕೆಲಬರಂಜಿ ಪೋಗದೆ ನಿಂದರ್ ॥ ೧೫೭

ಮೂಗೊಡದಂತಿರೆ ತಲೆಯಂ
ಬಾಗಿ ಕೆಲನೊರ್ೋಡಲಾಱದಿರ್ದರ್ವರ್ನದೊಳ್ ।
ರಾಗಂಗೆಟ್ಟು ಕೆಲಂಬರ್
ಮೊಗಂ ಮುಚ್ಚಿದರ್ಗಾಱದುಮ್ಮಳಿಸುತ್ತುಂ ॥ ೧೫೮

ಮತ್ತಂ ದುರ್ಗಂಧಕ್ಕಿರಲಾಱದೆ ಲೆಂಕರ್ ದಂಡಂಗೊಂಡರಂತೆ ಶಂಕಿಸುತ್ತುಂ ಪೆಱಪಿಂಗೆ, ಪರಿಚಾರಕಿಯರಿರಲಾಱದೆ ನುಸುಳ್ದೊಡೆ, ಬಾಣಸಿಗರಿದೇನ್ನಾಣ ಪುತ್ತೆಂದು ಪೋಗೆ, ಕರವಳರರಿದಾಯ್ತೆಂದು ಪಿಂಗೆ, ಡವಕೆಯವರ್ ಶ್ರಮಂಗೊಂಡ ಪಾತ್ರದಂತುಮ್ಮಳಿಸೆ, ಚಾಮರಿಯು ದೂರಮಂಪೊಕ್ಕ ಕಣ್ಣಂತೆ ನೋಡಲಾಱದಿರೆ, ಅರಸಿಯರ್ ಪರವಶಮಾದರಂತೆ ಕೇರ್ಗಳಂ ನೆಮ್ಮಿ, ವಲ್ಲಭೆಯರ್ ಪೊಲ್ಲಗೆಯ್ದರಂತುಸಿರದೆ ಕುಳ್ಳಿರೆ, ವಿಳಾಸಿನಿಯರ್ ವಿಳಾಸಂಗೆಟ್ಟರಂತೆ ಕುಂದೆ, ನಾರಿಯರ್ ವಾರಿಸಲಾಱದಕ್ಕರಿಗರಂತೆ ಮಿನುಕೆ [1], ಸಂತೋಷದಾಳಿಯರ್ [2] ತೊಂತುವೋದ ಪರವಿಯಂತೆ ಬಿಟ್ಟು ಪರಿಯೆ, ಪ್ರಭಾವತೀಮಹಾದೇವಿ ತನ್ನೊಳಿಂತೆಂದಳ್:— ೧೫೯

1 ಪಾಡಿಸಲಱಿಯದಕ್ಕರಿಗರಂತೆ ಮಿಸುಕದಿರೆ (ಬ. ಕ.)
ಸಂತೋಷವಾರಿಯರ್ (ಬ, ಕ, ಗ.)

ವರರತ್ನಂ ಪೇಲೊಳ್ ಬಿ
ದ್ದಿರೆಯದು ಪೊಲ್ಲೆಂದು ಬಿಸುಡಲಪ್ಪುದೆ ತಪದೊಳ್ ।
ಪಿರಿಯರೆನಿಸಿದರ ರುಜೆಗೋ
ಸರಿಸುವುದೆ ಜಿನೇಂದ್ರಮಾರ್ಗದೊಳಗಂ ಬಲ್ಲಂ ॥ ೧೬೦

ಎಂದು ತನ್ನ ಮನದೊಳ್ ಕೊಕ್ಕರಿಕೆಯಿಲ್ಲದೆ ದರಿದ್ರಂ ನಿಧಾನಮಂ ಕಂಡಂತೆ ಸಂತೋಷದಿಂದೊರ್ವಳ ನಿಲ್ವುದುಂ [1], ಸಮ್ಯಕ್ತ್ವಚೂಡಾಮಣಿ ನವವಿಧಪುಣ್ಯದೊಳಂ ಸಪ್ತಗುಣಂಗಳೊಳಂ ನೆರೆದು ಮುನಿಗಾಹಾರದಾನಮಂ ಕುಡುವುದುಂ ಕಂತಪ್ರಮಾಣಮುಮಂತು, ೧೬೧

ಮಱುಗೆ ಶರೀರಂ ಕಣ್ಗಳ್
ಪೊಱಮಡೆ ಮೇಲ್ಶ್ವಾಸಮೆತ್ತೆ ಸಡೆದಳ್ಕೆ ಬಲಂ ।
ಪಱಿವಡೆ ಜೊಮ್ಮನೆ ಜೋಲ್ದಂ
ತೆಱಪಂ ಪಾರ್ದಿರದೆ ತಡೆಯದೊರ್ವಳಿ ಮುನಿಪಂ ॥ ೧೬೨

ಕರಮಲ್ಲದೆ ದುರ್ಗಂಧಂ
ಪಿರಿದಾಗೆ ನಗಾಗ್ರದಿಂದೆ ಧಾರಾಜಲಮು ।
ರ್ವರೆಗಿೞಿವಂತೊಲೆವೆಂದೋ
ಕರಿಸಿ ನರೇಶ್ವರನ ಮೇಲೆ ಕಾಱಿದನಾಗಳ್ ॥ ೧೬೩

ಅಂತು ಕಾಱುವುದುಂ, ೧೬೪

ಶಿರದಿಂದಂ ಮುಖದಿಂದಂ
ಕೊರಲಿಂದಂ ಕುಚಯುಗಂಗಳಿಂದಂ ಪಾದಂ ।
ಬರೆಗಂ ಪೆರ್ಪೊನಲಂತಿರೆ
ಪರಿತಂದುದು ಮುಚ್ಚಿ ಮುಸುಱಿಕೊಂಡವನಿಪನಂ ॥ ೧೬೫

ಕೊೞೆಯುಂ ಬಿಣ್ಪುಂ ಲೋಳೆಯು
ಮೞವಲ್ಲದ ವಜ್ರಲೇಪದಂತಿರೆ ಧಾತ್ರೀ ।
ತಳಪತಿಯ ಮೆಯ್ಯೊಳೆಲ್ಲಂ
ತಳಪಂ ತಳದಂತೆ ಕೂಡಿ ಪತ್ತಿತ್ತಾಗಳ್ ॥ ೧೬೬

1 ಕಂಡಂತೆರಾಗಿಸುತ್ತಿರೆ, (ಗ)

ಅಂತು ತನಗೆ ಸುಗತಿವನಿತೆ ಮೋಕ್ಷಪದಕ್ಕಡ್ಡವಾದ ಕರ್ಮರಾಜನೊಡ್ಡಂ ಕಿಡಿಸಿ ಬಂದೆನ್ನೊಳ್ ಬೇಗಂ ನೆರೆಗೆಂದು ತನ್ನ ಕೂರ್ಮೆಯಿಂದಟ್ಟಿದ ವಜ್ರಕತ್ತಳದಂತಿರ್ದ ಲೋಳೆಗೆ ಕೊಕ್ಕರಿಸದೆ, ಮುನಿಪತಿಗೆ ಛರ್ದಿಯಾದುದಕ್ಕೆ ನಾಡೆಯುಂ ಮನದೊಳ್ ನೊಂದು, ೧೬೭

ಕೆಟ್ಟೆಂ ಮುನೀಂದ್ರನಿಚ್ಛೆಯ
ನೋಟ್ಟಜೆಯಿಂದಱಿಯದೇಂ ಮಹಾಪಾತಕನೋ ।
ತೊಟ್ಟನೆ ಕೊಳಲನ್ನಿಚ್ಛೆಗೆ
ನೆಟ್ಟನೆ ಬಡ್ಡಿಸಿದೊಡಿನಿತುನೋವಾಯ್ತೀಗಳ್ ॥ ೧೬೮

ಎಂದು ತನ್ನಂ ತಾನೆ ನಿಂದಿಸಿಕೊಂಡು ತಡವರಿಸಿ ಬೀೞ್ವ ಮುನಿನಾಥನಂ ಬೀೞಲೀಯದೆ ತಕ್ಕೈಸಿಕೊಂಡು ಕಣ್ಗಳಂ ತಳಂಗಳಿಂದಂ ನೀವಿ ಮೆಯ್ಯೊಳಾದ ಲೋಳೆಯೆಲ್ಲಮಂ ತೊಳೆದು ಕಳೆದು ; ೧೬೯

ಪಿರಿದಪ್ಪ ಶ್ರಮದಿಂ ನಿ
ತ್ತರಿಸದೆ ತಲೆತಿರುಗಿ ಮಱುಗಿ ಮೇಲುಸಿರಿಟ್ಟು ।
ಧರೆಗೆ ಕೆಡೆದುರುಳ್ವ ಮುನಿಪನ
ನರಸಂ ತಾಳ್ದಿರ್ದನೊಂದುಜಾಮಂಬರೆಗಂ ॥ ೧೭೦

ಅಂತಿರ್ದು ಶ್ರಮಂ ಪೋದಿಂಬೞಿಕ್ಕ [ಮೊಯ್ಯನೆ ಮಾಯಾರುಷಿಯುಂ ತಾನುಂ ಪ್ರಭಾವತೀಮಹಾದೇವಿಯುಂ ಮಜ್ಜನದಮನೆಗೊಯ್ದು ಬಿಸಿನೀರಿಂ] ಮೆಯ್ಯೆಲ್ಲಮಂ ಕರ್ಚಿ [ಮೆಯ್ಯ ನೀರಂ ದುಕೂಲಾಂಬರದಿಂ ತೊಡೆದು ಕಳೆದು, ೧೭೧

ಪಿರಿದಪ್ಪದೊಂದು ಮಣೆಯೊಳ್
ವರಮುನಿಯುಂ ತಂದು ಕುಳ್ಳಿರಿಸಿ ನೃಪನೆಂದಂ ।
ಪಿರಿದಪ್ಪ ಕ್ಲೇಶಂ ನಿಮ
ಗಿರದೆನ್ನಿಂ ಪಾಪಕರ್ಮನಿಂದಾಯ್ತಿನಿಸುಂ ॥ ೧೭೨

ಎಂದು ವಿನಯದಿಂ ಪೊಡೆವಟ್ಟು ಪ್ರಭಾವತೀಮಹಾದೇವಿ ಮಜ್ಜನಂಬೊಕ್ಕು ದಿವ್ಯವಸ್ತ್ರಮನುಟ್ಟು ಮಗುೞ್ದು ಬಂದು ಕೃತಕರ್ಷಿಯ ಕಾಲನೊತ್ತುತ್ತುಮಿಂತೆಂದಳ್. -][1] ೧೭೩

ತನುವಂ ಭಾವಿಸುವೊಡಮ
ಪ್ಪನಿತುಂ ಶುಚಿಯಲ್ಲಮಶುಚಿದೇಹಮನಿದನಿ ।
ನ್ನನುಪಮಮೆಂದೆನಲಾಗದು
ಜಿನಮತದೊಳ್ಪೊಂದಿಯಱಿವಿನೊಳ್ನೆಗಟ್ಟಿ ನರಂ ॥ ೧೭೪

ಪುತ್ತ್ರಂಮಾಡುವ ಬಱಲೆಯಂತೆ ಪಾಪಮಂ ನೆರಪುವುದು, ಕಿರ್ಚಿನಂತೆ ಪೊರ್ದಿದರಂ ಕಿಡಿಸುವುದು, ಪಂದೆಯಂತೆ ಪೆಱಗುೞಿವುದು, ಬಡತನದಂತೆ ಬಗೆದುದನೀಯದು, ಪುಣ್ಣಿನಂತೆ ನೋವಂ ಮಾೞ್ಪುದು, ಗ್ರಹದಂತೆ ಪೀಡೆಯಂ ಮಾೞ್ಪುದು, ಬಸಿಱ ಕುತ್ತದಂತೆ ನವೆಯಿಸುವುದು, ಪಂದಿಯಂತೆ ಜೊಪ್ಪಂಗೊಳ್ವುದು, ಕೃಷ್ಣಪಕ್ಷದಂತೆ ಶುಭಮನೊಲ್ಲದು, ಪಗೆಯಂತೆ ಭಯಮಂ ಮಾೞ್ಪುದು, ಕೂಸಿನಂತೆ ಕೂಡದುದಂ ಬಯಸುವುದು, ಪುಲ್ಲ ಕಿಚ್ಚಿನಂತೆ ಸ್ಥಿರಮಲ್ಲದು, ಪೊೞ್ತಿನಂತೆ ನಿಲಿಸಲರಿದಪ್ಪುದು, ತೊಱೆಯಂತೆ ಪಾಯಲರಿದಪ್ಪುದು ಗಾಳಿಯಂತೆ ಪಿಡಿಯಲರಿದಪ್ಪುದು, ಪೊಲೆಗೇರಿಯಂತೆ ಮೂಳಯುಮಯುಮಪ್ಪುದು, ಕೆರ್ಪಿನಂತೆ ತೊಗಲನುಳ್ಳುದು, ಬೀಣೆಯಂತೆ ನರದೊಳ್ ಕೂಡಿದುದು, ತಿಪ್ಪೆಯಂತೆ ಪೇಸುಪತಮಪ್ಪುದು, [ಪಡಿಕೆಯಂತೆ ದುರ್ಗಂಧಮಪ್ಪುದು,] ಕೋೞಿಯಂತೆ ಕ್ರಿಮಿಪ್ರಿಯನಪ್ಪುದು, [ಜೆಗುೞೆಯಂತೆ ನೆತ್ತರಪ್ರಿಯನಪ್ಪುದು], ನೊಳವಿನಂತೆ ಶ್ಲೇಷ್ಮಪ್ರಿಯನಪ್ಪುದು, ಪಶುವಿನಂತೆ ಮೂತ್ರಪ್ರಿಯನಪ್ಪುದು, ತೊನ್ನಿನಂತೆ, ರಸಿಗೆಯನುಳ್ಳುದು ಸೊಂಬನಂತೆ ಅಲಸಮಪ್ಪುದು, ಮೂರ್ಖನಂತಪ್ಪುದಂ ಮಾಡದು, ಬೆಟ್ಟೇಱುಕಾಱನಂತೆ ಧರ್ಮಮನೊಲ್ಲದು, ಪಿಶಾಚಿಯಂತೊಳ್ಳಿತ್ತಂ ಮಾಡದು,

1 ಮಣೆಯುಮೇಲೆ ಕುಳ್ಳಿರಿಸಿ ತಾಮಿರ್ವರುಂ ಮಜ್ಜನಂ ಬೊಕ್ಕು ಬಂದು ಕೃತಕರುಷಿಯ ಕಾಲನೊತ್ತುತ್ತುಮಿಂತೆಂದಳ್ (ಗ).

ಪೆಣನಂತೆ ಬಾರ್ತೆಯಲ್ಲದು, ಮೊಳೆಯಂತೆ ಭಂಡಮಲ್ಲದು, ಪೊಲೆಯ
ನಂತೆ ವರ್ಣಕ್ಕೆ ಸಲ್ಲದು, ಕೆಡುವ ಭಂಡದಂತೆ ಮೊಱುವೋಗದು,
ಪೇನಂತೆ ಪತ್ತುವಿಡದು, ಬಣಗಿನಂತೆ ನೇರಿತಲ್ಲದು, ಬಗೆವಂದೀ ಶರೀರಂ
ಕಷ್ಟಮಿದಂ ಬಿಟ್ಟು ರತ್ನತ್ರಯಭಾವನೆಯಿಂ ಸ್ವಸ್ವರೂಪದೊಳ್
ಕೂಡುವುದೆಂದು ಧರ್ಮಮಂ ಪೇೞ್ದರಸಿನಂದಕ್ಕೆ ವಾಸವಂ ವಿಸ್ಮಯಂ
ಬಟ್ಟು ತನ್ನೊಳಂತೆಂದಂ : — ೧೭೫

ಸುರಪತಿಯ ಪೊಗೞ್ತೆಗವೀ
ನರನಾಥಂ ಸಚ್ಚರಿತ್ರದೊಳ್ [1] ಭಾವಿಪ್ಪೊಡು |
ಪೆಱೆಯೊಳ್ ನೂರ್ಮಡಿ ಪಿರಿಯಂ
ಧರಣೀಂದ್ರನುಮಿವನ ಗುಣಮನಾರ್ಪನೆ ಪೊಗೞಲ್ || ೧೭೬

ಎಂದು [ಪೊಗೞ್ದು,] ೧೭೭

ಪರಮಜಿನಚರಣಸೇವನೆ
ಪೆರಸಿರ್ದವನಂತ್ಯಕಾಲದೊಳ್ ಕಷ್ಟಕಳೇ |
ವರಮಂ ಬಿಸುಟ್ಟು ದಿವ್ಯ
ಸ್ವರೂಪನಪ್ಪಂತು ವಾಸವಂ ತತ್‌ಕ್ಷಣದೊಳ್ || ೧೭೮

ಕೃತಕರೂಪಮಂ ಬಿಟ್ಟು, ೧೭೯

ತನುರುಚಿ ಮಂದರಾಚಳದ ಪೊಂಗೆಣೆಯಾಗಿ ಪಳಂಚಿ ಮಿಂಚೆ ಸೂ
ರ್ಯನ ಕಿರಣಂಬೊಲೊಪ್ಪೆ ಪೊಳಪಾಭರಣಾವಳಿ ದಿವ್ಯವಸ್ತ್ರದಿಂ
ಬಿನೊಳಮರ್ದೊಪ್ಪಿ ಶೋಭಿಸೆ ಸುರೇಶ್ವರನಾಗಳ ದಿವ್ಯಮಪ್ಪ ಮು
ನ್ನಿನ ನಿಜದೇಹಮಂ ನೆಱೆಯೆ ತಾಳ್ದು ನರೇಂದ್ರನ ಮುಂದೆ ನಿಲ್ವುದುಂ ||

[ಉದ್ದಾಯನಮಹಾರಾಜಂ ಮುನ್ನಿನ ಋಷಿರೂಪಮಂ ಬೞಿ
ಕ್ಕನ ದಿವ್ಯಸ್ವರೂಪಮಂ ತೊಟ್ಟನೆ ಕಂಡು ವಿಸ್ಮಯಂಬಟ್ಟಪ್ಪುದುಂ
ತದ್ದೇವನಿಂತೆಂದಂ :—] [2] ೧೮೧

---

1 ಶುದ್ಧವೃತ್ತಿಯೊಳ್ (ಗ.)

2 ಅರಸನುಮರಸಿಯುಂ ನೋಡುತ್ತುಮಿರ್ಪುದುಮಿಂತೆಂದಂ (ಗ)

ಸುರರಾಜನ ಸಭೆಯೊಳ್ ಪೇ
ವರ ತಂಡಂ ದರ್ಶನದ ತೃತೀಯಾಂಗದೊಳಾರ್ ।
ಭರತಕ್ಷೇತ್ರದೊಳುಳ್ಳದ
ರೆರಡಿಲ್ಲದೆ ದೇವ ಪೇಳ್ವುದೆನೆ ದೇವೇಂದ್ರಂ ॥ ೧೮೩

ಉದ್ದಾಯನ ಮಹಾರಾಜನೊಳ್ಳದ [ನೆಂದು ಕೊಂತು ಕೊನೆದು,
ಪೊಗಳೆ ಸುರಸಮಿತಿ ನೆಱೆ ಕೈ
ಮುಗಿವುದುಮೆನಗಮರಪತಿಯ ಮಾತಿಂಗೆ ಕರಂ ।
ಜಗತೀವಿಸ್ಮಯಮುಮಂ ಕೈ
ಮಿಗೆ ನಿನ್ನಂ ನೋಡಲೆಂದು ಬಂದೆಂ ದಿವದಿಂ ॥][1] ೧೮೪

ಎನ್ನ ಪೆಸರ್ಮಾಸವನೆಂಬುದು [ಸಕಲಗುಣಂಗಳೊಳಂ ನೀನಾ ಸೌಧರ್ಮೇಂದ್ರನ ಪೊಗಳ್ತೆಗಂ ಸಾಸಿರ್ಮಡಿ ಮಿಗಿಲ್ ;]ನಿನ್ನ ಗುಣಮ ನಾರಯ್ವೆನೆಂಬಾತಂ [2] ಚಾಮೀಕರಶೈಲಮಂ ಗುದ್ದಲಿಯಿಂದಗುೞ್ದು [ಕೆಡೆಯೆ] ನೂಂಕುವೆನೆಂಬೆಗ್ಗನಂ ಪೋಲ್ಕುಮೆಂದು ಪಲತೆಱದಿಂ ಸ್ತುತಿಯಿಸಿ ಪ್ರಭಾವತೀಮಹಾದೇವಿಯ ಮೊಗಮಂ ನೋಡಿ, ೧೮೫

ಎನಿಸುಜ್ಜ್ವಳಮಾದೊಡೆ[3] ಚಂ
ದ್ರನ ತೇಜಂ ರವಿಯ ತೇಜಮಂ ಗೆಲ್ಗುಮೆ ಪೆ ।
ಣ್ಣೆನಿತೊಳ್ಳಿದಳಾದೊಡೆ[4] ಪುರು
ಷನೊಳಾದ ಮಹಾಗುಣಂಗಳಂ ಪೋಲ್ತಪಳೇ ॥ ೧೮೬

[ಅದುಕಾರಣದಿಂ ಪ್ರಭಾವತೀಮಹಾದೇವಿಯ ಗುಣಮಂ ಮತ್ತಿನ ವನಿತೆಯರೊಳ್ ಪೋಲಿಸಲ್ಬಾರದು ;] ೧೮೭

---

1 ನೊಳ್ಳಿದನೆನೆ ಕೇಳ್ದು ನೋಡಲ್ಬಂದೆಂ (ಗ)

2 ನಿನ್ನ ಸಮ್ಯಕ್ತ್ವಮಂ ಪರೀಕ್ಷಿಸುವೆನೆಂಬಾತಂ (ಗ)

3 ಮಾದೊಡ (ಗ),

ಮಾದೊಡಂ (ಗ)

ನರಪತಿ ಕೇಳೀ ವನಿತೆಯ
ಪರಮಗುಣಂಗಳನೆ ನೆಱೆಯೆ ಬಣ್ಣಿಪೆನೆಂಬಂ ।
ದುರಗಾಧಿಪತಿಗಮರಿದೆನೆ
ನರರಾರ್ಪರೆಂದು ನುಡಿವುದೊಂದೆಗ್ಗಲ್ತೇ ॥ ೧೮೮

[ಅದೆಂತೆಂದೊಡೆ, (ಈ) ಪುಣ್ಯಮೂರ್ತಿಗೆ ಶೀಲವತಿಯೆಂಬೀ ಪೆಸರ್ ಪ್ರಸಿದ್ಧವಾದ ಪ್ರಪಂಚಮೆಲ್ಲಮಂ ಲೇಸಾಗಿ ಪೇೞ್ದಪೆಂ] [1] ಕೇಳ್ವೆಂದಿಂತೆಂದಂ :— ೧೮೯

ಪರದೇಶಾಧೀಶ್ವರರಂ
ಧುರದೊಳ್ ತಳ್ತಿಱಿದು ಕಪ್ಪಮಂ ಕೊಳಲೆಂದೋ ।
ಸರಿಸದೆ ಸೆಡೆದಿರದೆ ಮಹೀ
ಶ್ವರ ನೀನದಟಿಂದಮೆತ್ತಿ [2] ಪೋಪುದುಮಿತ್ತಲ್ ॥ ೧೯೦

ನಾರಾಯಣವತ್ತಿಯೆಂಬಳ್ ಪ್ರಭಾವತೀಮಹಾದೇವಿಯ ಬಾಲ್ಯಕಾಲದ ಕೆಳದಿ ಕಿಱಿಯಂದೆ ರಂಡೆಯಾಗಿ ತರ್ಕಶಾಸ್ತ್ರಂಗಳನೋದಿ ಪಂಡಿತೆ [ಯೆಂದು ಪೆಸರನಿಟ್ಟುಕೊಂಡು ಬ್ರಹ್ಮಚಾರಿಯಾಗಿ ಶಾಪಾನುಗ್ರಹಸಮರ್ಥೆಯರೆನ್ನಂ ಬಿಟ್ಟು ಪೆಱರೊರ್ವರುಮಿಲ್ಲೆಂದು ತನ್ನಂ ತಾನೆ ಲೋಕದೊಳಗುರ್ವುವಮಾಡಿಕೊಂಡಿರೆ, ೧೯೧

ನಾಡವರೆಲ್ಲಂ ನೆರೆದುಂ
ನೀಡಿರದತ್ಯಾರ್ತ ಭಕ್ತಿಪೂರ್ವಕದಿಂ ಕೊಂ ।
ಡಾಡೆ ಗುರುವೆಂದು ಧರೆಯೊಳ್
ಕೂಡೆ ಮಹಾರೂಢಿಯಾಗೆ ಪೆಂಪೊದವುವಿನಂ ॥ ೧೯೨

ಸುತ್ತಲುಮಿರ್ದೊಂದುದಿವಸಂ ಪ್ರಭಾವತೀ ಮಹಾದೇವಿಯು ತನ್ನ ಕಿಱಿಯಂದಿನ ಕೆಳತನಮಂ ನೆನೆದು ತನ್ನೊಳಿಂತೆಂದಳ್:— ೧೯೩

1 ಈ ಮಹಾಸತಿಗೆ ಶೀಲವತಿಯೆಂಬ ಪೆಸರಾದ ವೃತ್ತಾಂತಮಂ. (ಗ)

2 ಶ್ವರನಾದರದಿಂದಮೆತ್ತಿ. (ಗ)

ವಿನಯದಿನವಳ ಶ್ರಾವಕ
ತನಮಂ ಲೇಸಾಗಿ ಕಿಡಿಸಿ ತಿಳಿಪಿ ಬಳಿಕ್ಕಾ ।
ವನಿತೆಯನೇಗೆಯ್ದುಂ ಮ
ಲ್ಲನೆ ನಯದಿಂದೆನ್ನ ಧರ್ಮದೊಳ್ಪತ್ತಿಸುವೆಂ ॥ ೧೯೪

ಎಂದು ಪೂಣ್ದು ರೌರವಪುರಕ್ಕೆವಂದರಮನೆಯ ಬಾಗಿಲೊಳ್ ನಿಂದು ಪಡಿಯರರಂ ಕರೆದು ನಿಮ್ಮ ಬಾಲಸಖಿಯಪ್ಪ ನಾರಾಯಣದತ್ತೆ ನಿಮ್ಮಂ ಕಾಣಲೆಂದು ಬಂದಳೆಂದು ಪ್ರಭಾವತೀಮಹಾದೇವಿಗೆ ಪೇೞಿಮೆಂಬುದುಂ, ಅವರ್ಪೋಗಿ ಪೊಡೆಮಟ್ಟು ಬಿನ್ನಪವೆಂದಿಂತೆಂದರ್:—

ಅಣುಗಿನ ಕೆಳದಿಯೆ ನಾಂ ಸ
ದ್ಗುಣಿಯೆನಿಸಿದ ನಿಮ್ಮ ರಾಜಪತ್ನಿಯ ನಾರಾ ।
ಯಣದತ್ತೆಯೆಂಬೆನೆನ್ನಂ
ಕ್ಷಣದಿಂದೊಯ್ದೆನ್ನ ನಿಮ್ಮ ಕಾಣಿಸವೇೞ್ಕುಂ ॥ ೧೯೫

ಎಂಬುದುಂ, ಮುನ್ನಮೆ ತಂದು ಕಾಣಿಸಲಣ್ಮದೆ ದೇವಿಯಲ್ಲಿಗೆ ವಂದೆಮಗೆ ಬೆಸನಾವುದು ಎನೆ ಪ್ರಭಾವತೀಮಹಾದೇವಿ ನಾರಾಯಣದತ್ತೆ ಮುನ್ನಿನಂತೆ ಶ್ರಾವಕಿಯೆಂದು ಧರ್ಮವಾತ್ಸಲ್ಯದಿಂ ತಂದು ಕಾಣಿಸಿಮೆಂಬುದುಂ, ಪಡಿಯರರ್ ತಂದು ಕಾಣಿಸುವುದುಂ, ಅರಸಿ][1] ನಾರಾಯಣದತ್ತೆಯ ಮಿಥ್ಯಾವೇಷಮಂ ಕಂಡು [ಮನ್ನಿಸದು]ದಾಸೀನಂಗೆಯ್ದಿರ್ಪುದುಂ [ನಾರಾಯಣದತ್ತೆ] ಮುನಿದು, ೧೯೬

ಉರಗನ ವಿಷಮೇಱಿದರುಂ
ಸಿರಿಯುಳ್ಳರು ಮದ್ದುಗುಣಿಕೆಯುಂ [2] ತಿಂದವರುಂ ।
ಪಿರಿದುಂ ಪಿತ್ತಾಧಿಕರುಂ
ಧರೆಯೊಳ್ ಮೆಯ್ಯಱಿಯರೆಂಬ ನುಡಿ ತಪ್ಪುಗುಮೇ ॥ ೧೯೭

---

1 ಯೆಂಬ ಪೆಸರೆಸೆಯೆ, ತೊಳಲುತ್ತಿರ್ಪಾಕೆ ರೌರವಪುರಕ್ಕೆ ವಂದರಸಿಯುಂ ಕಾಣ್ಬುದುಂ (ಗ)

2 ಮತ್ತುಕುಣಿಕೆಯುಂ (ಗ)

[ನೀನೆನಗಾಬಾಲ್ಯಕಾಲದೊಳ್ ಮಾಡುವ ಮನ್ನಣೆಯನೀಗಳ್ ಸಿರಿಯಿಂದುದಾಸೀನಂಗೆಯ್ದ ಯೆಂಬುದುಮರಸಿ ಮಱುಮಾತುಗುಡಲೊಲ್ಲದುಸಿರದಿರ್ಪುದುಂ] [1] ಕೆಲದೊಳಿರ್ದ ವಿದಗ್ಧಸೌಂದರಿಯೆಂಬ ವಿಳಾಸಿನಿ ಅರಸಿಯ ಮನಮನಱಿದು ಆಕೆಯ ಬಾಸೆಯೊಳಿಂತೆಂದಳ್ [2] :—

ವಾರಿಜಷಂಡಮಂ ಪದೆದು ಪೊರ್ದುವವೊಲ್ ಕಳಹಂಸೆ ತಿಪ್ಪೆಯಂ
ಸಾರಮಿದೆಂದು ಪೊರ್ದುಗುಮೆ ತಾರಗೆಗಳ್ಮಱವಿಂದುವಂ ಸವಿ
ಸ್ತಾರದೊಳೊಂದುವಂತೆ ಪದೆದೊಂದುಗುಮೇ ರವಿಯಂ ಸುಧರ್ಮದೊಳ್
ಧೀರರೆನಿಪ್ಪರುಂ [3] ಮರುಳ್ ಪೊರ್ದುವರೇ ಜಡರಂ [4] ದುರಾತ್ಮರಂ ॥೨೦೦

[ಎಂಬುದುಮಾಕೆಯ ಮಾತಿಂಗೆ ನಾಡೆಯುಂ ಸಿಗ್ಗಾಗಿ ತನ್ನ ನೆಲೆಗೆವೋಗಿ ಪ್ರಭಾವತೀಮಹಾದೇವಿಯ ಶ್ರಾವಕತ್ವಮಂ ಕಿಡಿಸುವ ಉಪಾಯಮಂ ಚಿಂತಿಸಿ ತನ್ನೊಳಿಂತೆಂದಳ್ :—] [5] ೨೦೧

ಕೇರಳಮಂಡಲಾಧಿಪತಿಯಪ್ಪೊಡೆ ಜೈನನುದಗ್ರನಪ್ಪ ಕಾ
ಶ್ಮೀರಮಹೀಶನಪ್ಪೊಡೆ ಜಿನೇಶ್ವರಧರ್ಮದೊಳೊಳ್ಳಿದಂ ಗುಣಾ
ಧಾರನುದಾರನಂಗಧರಣೀಶ್ವರನಪ್ಪೊಡೆ ಜೈನಮಾರ್ಗದೊಳ್
ಸಾರನಪೂತಿಪಾಂಡ್ಯಧರಣೀಶ್ವರನಪ್ಪೊಡೆ ಧರ್ಮತತ್ಪರಂ ॥ ೨೦೨

[ಮತ್ತಮುೞಿದ ದೇಶಾಧೀಶ್ವರರುಂ ಧರ್ಮಾನುರಾಗಿಗಳಲ್ಲದೆ ಪರಾಂಗನಾಪೇಕ್ಷಕರಲ್ಲರವರಲ್ಲಿಗೆ ಪೋದೊಡಮೆನ್ನೆತ್ತಿಕೊಂಡ] [6] ಕಾರ್ಯಂ ತೀರದು, [ಮಾಳವೇಶ್ವರನಪ್ಪ] ಚಂಡಪ್ರದ್ಯೋತನಿಂ ತೀರ್ಗುಮಾತಂ, ೨೦೩

---

1 ಎಂದೊಡರಸಿ ನುಡಿಯದಿರೆ (ಗ)

2 ಮನಮನಱಿದು ವಕ್ರೋಕ್ತಿಯಿಂದಮಿಂತೆಂದಳ್ (ಗ)

3 ನೇರಿದರಪ್ಪರುಂ (ಗ) 4 ಖಳರಂ (ಗ)

5 ಎಂಬುದುಂ ಮುನಿದು ಪೋಗಿ ಪ್ರಭಾವತಿದೇವಿಯಂ ಬ್ರತವಂ ಭಂಗ ಮಾಡುವೆನೆಂಬ ಬಗೆಯಿಂ (ಗ) 6 ಅವರೊಳಮೆನ್ನ (ಗ)

ಸ್ತ್ರೀಯೆಂಬೀಪೆಸರ್ಱಿಂ ಪೆಣ್
ನಾಯಾದೊಡಮೊಲ್ವ ಕಷ್ಟನೀಪ್ರತ್ಯಕ್ಷಂ ।
ಸ್ತ್ರೀಯಂ ಸುರವಧುವಂ ಪೋ
ಲ್ವೀಯುವತಿಯನಱಿದೊಡೊಲ್ಲೆನೆಂಬವನೆಲ್ಲಂ ॥ ೨೦೪

ಎಂದು ಪ್ರಭಾವತಿಯ ರೂಪಂ ಪಟದೊಳ್ ಸವಿಸ್ತರಂ ಬರೆದು ಕೊಂಡುಜ್ಜಯಿನಿಗೆ ಪೋಗಿ ಚಂಡಪ್ರದ್ಯೋತಂಗೆ ತೋಱುವುದುಮಾತಂ ಕಂಡು, ೨೦೫

ಮಸೆದಲರ ಪೊಳವ ಬಾಣದಿ
ನಸದಳಮೊಡನೊಡನೆ ಸೆರಗುವಾರ್ದೊರ್ಮೂರ್ಛೆಯೆ ಸೈ ।
ಏಸದಿಸೆ ಮನೋಜರಾಜಂ
ವಸುಧೀಶಂ ಗಂಡುಗೆಟ್ಟು ಬೆಂಡಾಗಿರ್ದಂ ॥ ೨೦೬

[ಇರ್ದಿದಾರ ರೂಪು ನೀವಿದನಿಲ್ಲಿಗೇಂ ಕಾರಣಂ ತಂದಿರೆನೆ, ನಾರಾಯಣದತ್ತೆ ನೃಪನೊಲವನಱಿದಿಂತೆಂದಳ್:—][1] ೨೦೭

ರೌರವಪುರಾಧಿನಾಥನ
ನಾರಿಯ ರೂಪಿದು ಮಹೀಶ ಭಾವಿಸುವೆಂದಾ ।
ನಾರಿ ಮನೋಜನ ಸತಿಗಂ
ಶ್ರೀರಮಣಿಗಮಿಂದ್ರವನಿತೆಗಂ ಮಿಗಿಲಪ್ಪಳ್ ॥ ೨೦೮

[ನಿನಗಾಕೆ ಪ್ರಾಣವಲ್ಲಭೆಯಾಗಲೆವೇೞ್ಕುಂ ನಿನಗೆ ತಕ್ಕಳೆಂಬುದನಕ್ಕರಿಂ ಪೇೞಲೆಂದು ಬಂದೆನೆಂಬುದುಂ, ನಾರಾಯಣದತ್ತೆಗಂಗ ಚಿತ್ರಮುಂ ಕೊಟ್ಟು ಸಂತಸಂಬಡಿಸುವುದುಂ ತನ್ನ ಬಗೆ ತೀರ್ದುದೆಂದು ರಾಗಿಸಿ ಶಕುನಮೆಂದು ಸೆಱಗಂ ಗಂಟಿಕ್ಕಿಕೊಂಡು ಮಾಳವೇಶ್ವರಂಗಿಂತೆಂದಳ್ :— ೨೦೯

1 ಇದಾರ ಪಟಮೆಂದು ಬೆಸಗೊಳ್ವುದುಂ (ಗ)

ಪಲವೇನೊದ್ದಾಯನಭೂ
ಲಲನೇಶನುಮೂರೊಳಲ್ಲ ಪಿರಿದುಂ ನೀಂ ಪೆ ।
ರ್ವಾಲದಿಂದಲ್ಲಿಗೆ ಪೋದೊಡೆ
ಲಲಿತಾಂಗಿ ಮನೋನುರಾಗದಿಂ ಕೈಸಾರ್ಗುಂ ॥ ೨೧೦

ಇಂದು ನಾಳೆಯೆಂದೆಣಿಸದೆಯಿರ್ದೆಯಪ್ಪೊಡೆ, ಒದ್ದಾಯನನು ಹಾರಾಯನನ್ನಗಂ ಬರ್ಪನಾತಂ ಬಂದನಪ್ಪೊಡೆ ನಿನಗಾಸ್ತ್ರೀರತ್ನಂ ದೊರೆಕೊಳ್ಳಳೆಂಬುದುಂ, ಆ ಮಾತಿಂಗೆ ಒಡಂಬಟ್ಟನ್ನೆಳಸಿರ್ಪುದು ಚಿತವೆಲ್ಲಂದು ಚತುರ್ಬಲಂವೆರಸೆತ್ತಿ ಕತಿಪಯಪ್ರಯಾಣಂಗಳಿಂ ಬಂದು ರೌರವಪುರಮಂ ಮೊಱಬುಸೂಳಾಗಿ ಮುತ್ತಿಕೊಂಡು ಸಾಳಂಕಾರನೆಂಬ ತನ್ನ ಪೆರ್ಗಡೆಯಂ ಬರಿಸಿ ಪ್ರಭಾವತಿಯಲ್ಲಿಗಟ್ಟುವುದುಂ ಅವಂ ಬಂದಿಂತೆಂದಂ :—][1] ೨೧೧

ಎಮ್ಮರಸಂ ಮಾಳವಪತಿ
ಸಮ್ಮತಮಪ್ಪಂತು ನಿಮಗೆ ಸುಖಮಪ್ಪಂತಿ ।
ನ್ನೆಮ್ಮಂ ನಿಮ್ಮಡಿಯಲ್ಲಿಗೆ
ತಾಂ ಮುದದಿಂದಟ್ಟಿದಂ ಮಹೋತ್ಸವದಿಂದಂ ॥ ೨೧೨

ಅಂತಿಂತೆನ್ನದೆ ಪಲವಂ
ಚಿಂತಿಸದೆ ಪೊಡರ್ಪನುಡುಗಿ ನಿಮಗಂ ತಮಗಂ ।
ಸಂತಸದಿಂದಂ ಸುಖಮ
ಪ್ಪಂತಿರೆ ಕೈಕೊಳ್ವುದೆಮ್ಮ ನುಡಿಯಂ ನಯದಿಂ ॥ ೨೧೩

[ಎಂದೊವರ್ದೆಯೆ ತಮ್ಮ ಕಾರ್ಯಮಂ ಪೇೞದೆ ವಿನಯದಿಂ ದುಃಚಿತವಚನಂಗಳಿಂ ನುಡಿದು ಬಱಿಯಂ ತಮ್ಮರಸನ ಮಹಿಮೆಯನಿಂತೆಂದು ಪೊಗೞ್ದಂ :—][2]

---

1 ನಿನಗರಸಿಯಾಗಲ್ತಕ್ಕಳಾಕೆಯು ಗಂಡನೂರೊಳಗಿಲ್ಲ; ನಿನಗಿದವಸರವೆನೆ ದಾಳಾದಾಳಿಯಿಂ ಬಂದು ಪುರವಂ ಮೂಱುಸುತ್ತಾಗಿ ಸುತ್ತಿಕೊಂಡು ಸಾಳಂಕಾಯನೆಂಬ ಪೆಗ್ಗಡೆಯನಟ್ಟುವುದುಮಾತಂ ಪ್ರಭಾವತಿದೇವಿಯಲ್ಲಿಗೆ ಬಂದಿತೆಂದಂ. (ಗ)

2 ಎಂದುಮತ್ತಮಿಂತೆಂದಂ (ಗ)

ಸಿರಿಗೆಮ್ಮರಸಂ ಮಘವನ
ದೊರೆಯರುಮಂ ಭರತರಾಜನನ್ನರುಮಂ ಖೇ।
ಚರಪತಿಯನ್ನರುಮಂ ದೇ
ವರಾಜ[1] ನನ್ನರುಮನೇಳಿದಂಗೆಯ್ದಿರ್ಪಂ ॥ ೨೧೫

ಅನುಪಮಭರತಾಧೀಶ್ವರ
ನನುಜನುಮಂ ಸಂದ ಕಾಮದೇವನುಮಂ ರೂ।
ಪಿನೊಳಾದಂ ಭಂಗಿಸಿ ತ
ಜ್ಜನಪಂ ಕೈಕೊಳ್ಳನಾವನಂ ಬಣ್ಣಿಪುದಂ[2] ॥ ೨೧೬

ಸುರಭೂರುಹಮುಮನಗ್ಗದ
ಸುರಭಿಯುಮಂ ಚಾಗಗುಣದೊಳಮ್ಮರಸಂ ತ್ರ।
ಸ್ತರಿಯಾಡುವನೆಂದೊಡೆ ಪೊ
ಲ್ವರಾರೊ ಮತ್ತಿನ ಮಹೀಭುಜರ್ಗೀಭಾತ್ಮರ್ ॥ ೨೧೭

ಪರದೇಶಾಧೀಶ್ವರರೆ
ಮ್ಮರಸನ ಪೆಸರ್ಗೊಂಡೊಡಳ್ಕಿ ಭಯದಿಂದಂ ಬೆ।
ಳ್ಳರಲೆವೊಲೋಡುವರಾತನ
ಬಿರುದಂ ಮಾರ್ಕೊಳ್ವ[3] ಗಂಡರಾರ್ ವಸುಮತಿಯೊಳ್ ॥ ೨೧೮

[ಎಂದು ಪೊಗಳ್ವುದುಂ, ಪ್ರಭಾವತೀಮಹಾದೇವಿ ನಕ್ಕು "ಬಹು ರತ್ನಾ ವಸುಂಧರಾ" ಎಂದು ಲೋಕದೊಳ್ ಕವಿಗಳುಂ ಚಾಗಿಗಳುಂ ಬರ್ಪರೊರ್ವರ್ಗೆ ನಿಡಿಯರ್ಗೆ ಸಿಡಿಯರೊಳರದೇನಪೂರ್ವಮೆನ್ನೆಗಂ ನಿಮ್ಮ ಬಂದ ಕಾರ್ಯಮಂ ಪೇೞಿಮೆನೆ, ಪೆರ್ಗಡೆಗಳಿಂತೆಂದರ್:—೨೧೯

ತರಳಾಕ್ಷಿ ನಿಮ್ಮ ರೂಪಂ
ಬರೆಯುತ್ತುಂ ಪಟದೊಳಮ್ಮ ಮಹಿಪತಿಗದನ।

1 ಖೇಚರಾಧಿಪತಿಯನ್ನರುಮಂ। ಸುರರಾಜನುಮಂ ಮಣ್ಣಭರತರಾಜ (ಗ)
2 ರೂ। ಪಿನೊಳಾವಭಂಗಿಗೆಮ್ಮ ಜ್ಜನಪತಿ ಕೈಕೊಳ್ಳನವರನಾರ್ಬಣ್ಣಿಪುದಂ(ಗ)
3 ಬೆಂಕೊಂಬ (ಬ. ಕ.)

ಚ್ಚರಿಯಾಗಿ ತೋಱುವುದುಮೆ
ಮ್ಮರಸನದಂ ಕಂಡು ಸೋಲ್ತು ವಿರಹಾನಳನಿಂ ॥ ೨೨೦

ಬೆಂದು ನೊಂದು ತಾಂ ಪ್ರತಾಪಿಯಪ್ಪುದಱಿಂದೆತ್ತಿ ಬಂದನಿಲ್ಲಿ ಸೆರಗಂ ಪಾರ್ವ ಗಂಡನಲ್ಲ; ನಿಮ್ಮಡಿ ಮೆತ್ತೊಂದಂ ಬಗೆಯದೆ ಬೇಗ ಮೆಮ್ಮರಸಂಗೆ ಮನೋನಯನವಲ್ಲಭೆಯಾಗಿರ್ಪುದೆನೆ ಪ್ರಭಾವತಿಯಿಂ ತೆಂದಳ್ :—][1] ೨೨೧

ಪರವನಿತೆಗೆಱಗಿದಾತಂ
ಗುರುಮುದದಿಂ [2] ನೋಡ ಕೈದು ಬೆಸಕೆಯ್ಯದು ನಿ।
ಷ್ಠುರತೆಯಿನೆಂದೊಡೆ ಛೀ ಸ
ತ್ಪುರುಷಂ ಪರವನಿತೆಗೆಱಗೆ ಪರವನಿತೆ ವೆಲಂ [3] ॥ ೨೨೨

[ಅದು ಕಾರಣದಿಂ ನಿಮ್ಮರಸನಪ್ಪೊಡೆ ಮಹಾಪುರುಷನಿಂತಪ್ಪುದಕ್ಕೆ ಬಯಸಲಾಗದು] ಎಂಬುದುಮವರಿಂತೆಂದರ್ :— ೨೨೩

ದಿವದೊಳ್ ಭೋಗಿಪೆನೆಂದೀ
ಭವದ ಮಹಾಸೌಖ್ಯಮೆಲ್ಲಮಂ ಕಿಡಿಸಿ ಶರೀ।
ರವನೊಕ್ಕು ಕುದಿದು ಕೆಮ್ಮನೆ
ಸವೆಣಮೆರುಳ್ಗೊಳ್ಳದರಸಿ ಸುಖಮನೆ ಬಗೆಯಾ ॥ ೨೨೪

---

1 ಎಂಬುದುಮರಸಿ 'ಬಹುರತ್ನಾ ವಸುಂಧರಾ' ಎಂದು ಲೋಕದೊಳ್ ನಿಡಿಯರ್ಗೆನಿಡಿಯರೊಳೆರದಚ್ಚರಿಯುಲ್ಲದನ್ನೆಗಂ ನಿಮ್ಮ ಬಂದ ಕಾರ್ಯಮಂ ಪೇಳಿಮೆನೆ, ಶಾಳಂಕಾಯನಿಂತೆಂದಂ :—ನಾರಾಯಣದತ್ತೆ ನಿಮ್ಮ ರೂಪಿನ ಪಟ ಮನೆಮ್ಮರಸಂಗೆ ತೋಱಿದೊಡೆಮ್ಮರಸನುಂ ನಿಮ್ಮ ಭಾಗ್ಯದಿಂ ನಿಮಗೆ ಸೋಲ್ತು ನಿಮ್ಮ ಮೋಹದಿಂ ಬಂದನಲ್ಲಿ ಸಂಗುಮಂ ಬೆರಗುಮಂ ಪಾರ್ವ ಗಂಡನಲ್ಲೆಂಬುದು ಮರಸಿಯಿಂತೆಂದಳ್ (ಗ)

2 ಪರವನಿತೆಗೆ ಸೋಲ್ತುತಂಗಿರತ್ರ್ಯಯೊಳ್ (ಬ. ಕ.)

3 ಪರವನಿತೆಗೆಱಗಲಪ್ಪುದೆಧರೆಯೊಳ್ (ಬ. ಕ.)

ಎಂಬುದುಂ, ಪ್ರಭಾವತಿಯಿಂತೆಂದಳ್ :— ೨೨೫

ಖಳರಂ ಪಾದರಿಗರನೀ
ಗಳ ನೋಡಿರೆ ಕಂಡೊಡಡಸಿ ಜಡಿವರ್ಬಡಿವರ್ |
ಮುಳಿಸಿಂ ಕೊಲ್ವರ್ ನರಕ
ಕ್ಕಿಳಿವುದನಿಂಬಾಗಿ ತೋಱಿ ಸಾಱುವ ತೆಱದಿಂ || ೨೨೬

[ಅದಱಿಂ ಪಾದರಂ ಕಷ್ಟಮೆನೆ ಪೆರ್ಗಡೆಗಳಿಂತೆಂದರ್ :–] [1] ೨೨೭

ತಡೆಯದೆ ನೀನಮ್ಮರಸನ
ನೊಡಗೂಡೊಡಗೂಡಲೊಲ್ಲದೊಂದಕ್ಕೊಂದಂ |
ನುಡಿಯುತ್ತಿರ್ದೊಡೆ ಕಡೆಯೊಳ್
ಕಡುಚಪಳನ ಗೋಣೆ ಬಱಿದೆಯಾದಂತಕ್ಕುಂ [2] || ೨೨೮

ಎನೆ ಪ್ರಭಾವತೀಮಹಾದೇವಿಯಿಂತೆಂದಳ್ :— ೨೨೯

ಮರಣಕ್ಕಂಜದೆ ಗುಣಮಂ
ಪರಿಹರಿಸದೆ ಶೀಲರತ್ನಮಂ ರಕ್ಷಿಸಿ ಸ |
ತ್ತರ ಸಾವು ಸಾವೆ ಶೀಲಮ
ನುರವಣೆಯಿಂ [3] ಬಿಟ್ಟ ಖಳರ ಬಾೞುಂ ಬಾೞೇ || ೨೩೦

ಎನೆ ಸಾಳಂಕಾರನಿಂತೆಂದಂ :— ೨೩೧

ಉಡುವುದು ದಿವ್ಯಾಂಬರಮಂ
ತುಡುವುದು ಭೂಷಣಮನುಣ್ಬುದೊಳ್ಳುಣಿಸಂ ತಾಂ |
ಪಡೆದೊಡೆ ದೊರೆಕೊಂಡೊಡಮಂ
ಬಿಡುವುದದೇಂ ಕೇಳ್ ಪರತ್ರೆಯುಂ [4] ಕಂಡವರಾರ್ || ೨೩೨

ಎನೆ ಸಮ್ಯಕ್ತ್ವರತ್ನಾಕರೆಯಿಂತೆಂದಳ್ -— ೨೩೩

---

1 ಎನೆಸಾಳಂಕಾರಯನಿತೆಂದಂ (ಬ. ಕ.)

2 ಬಱಿದೆಯಾದುದನಱಿಯಾ (ಗ)   3 ಉರಿವರಿಯಿಂ (ಗ)

4 ಬಿಡುವುದೆ ಮೇಲಣಪರತ್ರೆಯುಂ (ಗ)

ಕುರುಡಂ ಮುಂದಿರ್ದಿಭಮುಮ
ನೆರಡಿಲ್ಲದೆ ಕಾಣದಂತೆ ದುರಿತೋದಯದಿಂ ।
ನರಕಂಬೊಗಲಿರ್ದವರುಂ
ಪರತ್ರೆಯುಂ ಕಾಣರೆಂಬುದೇನಚ್ಚರಿಯೋ ॥ ೨೩೪

[ಅದುಕಾರಣದಿಂವಱಸಿಲ್ಲ, ಜೀವನಿಲ್ಲ, ಪರತ್ರೆಯಿಲ್ಲೆಂಬ ಜಡರ ನುಡಿ ಪ್ರಮಾಣಮಲ್ಲೆಂಬುದುಂ, ಪೆರ್ಗಡೆಗಳಿಂತೆಂದರ್ ;—] [1] ೨೩೫

ಜಳಜಮುಖಿ ಪಲವುಮಾತಂ
ಗೞಪದೆ ಮದ್ವಲ್ಲಭಂಗೆ ವಲ್ಲಭೆಯಾಗೀ ।
ಪೊೞಲಂ ನಾಡಂ ಕಿಡಿಸದೆ
ಕಳಕುಳಮಂ ಪ್ರಜೆಗೆ ಮಾಡದೀಗಳ ಬೇಗಂ ॥ ೨೩೬

ಪರಿಸುಗುಮಿಲ್ಲಿ ಭೋರ್ಗರೆವ ನೆತ್ತರ ಪೆರ್ಪೊನಲಂ ಧಗದ್ಧಗಂ
ದುರಿಸುಗುಮುಗ್ರಕೋಪಶಿಖಿಯಿಂ ಪುರಮೆಲ್ಲಮನಟ್ಟಿ ಮೆಟ್ಟಿ ಸಂ
ಗರದೊಳನೇಕರಂ ತಱಿದು ಖಂಡದೊಳಿಂಡೆಯನಾಡುಗುಂ ಮನೋ
ಹರೆ ಬಿಡು ನಿನ್ನ ದರ್ಪಮನವಂಗಿದಿರಾಗಿ ಬರ್ದುಂಕುವನ್ನರಾರ್ ॥ ೨೩೭

[ಎಂದು ಭಯಮುಮಂ ತೋಱಿ ನುಡಿಯೆ, ವನಿತಾರತ್ನೆ ಯಿಂತೆಂ ದಳ್:—] [2] ೨೩೮

ಧರಣಿಜೆಯನುಯ್ದು ಲಂಕಾ
ಪುರೇಶನೆಂತಪ್ಪ ಗಂಡರುಂ ಸತ್ತರ್ ನಿ ।
ತ್ತರಿಸದೆನೆ ಕೇಳ ಮತ್ತಿನ
ಧರೆಯರಸರ್ ಪರವಧೂಪ್ರಿಯರ್ ಬಜ್ದಿಪರೇ ॥ ೨೩೯

ಎಂಬುದುಂ, ಸಾಳಂಕಾರಂ ಮುನಿದು ಎನ್ನ ಮಾತಂ ಕೇಳ ಲೊಲ್ಲದ ಫಲಮಂ ತಡೆಯದೆ ಕಾಣ್ಬೈಯೆಂದು ಪೊಱಮಟ್ಟು ಪೋದನ

---

1 ಎನೆ ಸಾಳಂಕಾಯನಿಂತೆಂದಂ (ಗ) 2 ಎಂಬುದುಂ ಸಮ್ಯಕ್ತ್ವ ಚೂಡಾಮಣಿ ಯಿಂತೆಂದಳ್ (ಗ)

ನ್ನೆಗಮುಗ್ರಸೇನನೆಂಬ [1] ದಂಡಾಧಿಪಂ ಕೋಂಟೆಯಂ ಬಲಿದು ಕಾದುವ ಸಮಕಟ್ಟಿಂದಿರ್ಪುದುಂ ಪ್ರಭಾವತೀಮಹಾದೇವಿ, ೨೪೦

[ಪಿರಿದುಂ ಬಲಸ್ಥನಿವನೀ
ಧುರದೊಳ್ ಸಿಲ್ವನ್ನರಿಲ್ಲ ಮದ್ವಲ್ಲಭನುಂ ।
ಪರದೇಶದೊಳಿರ್ಪನಿಂ
ದರಿದಾಯ್ತೆಂದಳ್ಕಿ ಕಾಂತೆ ತಳರ್ವೆಗಾದಳ್ ॥ ೨೪೧

ಆನೀಗಳ್] ಜಿನಪೂಜೆಯಂ ಮಾಡಿ, ಘೋರೋಪಸರ್ಗಂಬಿದು ಪಿಂಗುವಿನಂ ಆಹಾರಶರೀರನಿವೃತ್ತಿಯೆಂದು ಕೈಯ್ಯಸಿಕ್ಕಿಕೊಂಡಿರ್ದಳನ್ನೆಗಂ, ೨೪೨

[ಪೊನ್ನ ವಿಮಾನಮನೇಱಿ ಮ
ಹೋನ್ನತಿಯಿಂ ದೇವಲೋಕದಿಂ ಮೇರುನಗ ।
ಕ್ಕನ್ನಯದಿಂದಂ ಪೋಗುತೆ
ಸನ್ನುತಜಿನಭವನಮೆಲ್ಲಮಂ ಪೂಜಿಸಿದೆಂ ॥ ೨೪೩

ಪೂಜಿಸಿ ಮತ್ತಂ ನಂದೀಶ್ವರದ್ವೀಪಮಂ ಕಾಣಲೆಂದು ಭಕ್ತಿಯಿಂ ಪೋಗುತ್ತಿರಲೆನ್ನ ವಿಮಾನಮೀಪುರದ ಮೇಲೆ ಪೋಗದೆ ಕೀಲಿಸಿ ನಿಲ್ವುದುಂ, ಅವಧಿಲೋಚನದಿನೀಸತಿಗಾದುಪಸರ್ಗಮನಱಿದು,] [2] ೨೪೪

ಮುಳಿಸಾಗೆ ಮಾಳವೇಶನ
ಬಳಮೆಲ್ಲಮನುಯ್ದು ಪುಡುಕುನಿರಳ್ದವೆನೆಂ (?)
ಬಳಮಾಗಿ ಮತ್ತೆ ಮಾಣ್ದೆಂ
ತಿಳಿದಾಂ ಸದ್ದೃಷ್ಟಿಯಪ್ಪ ಕಾರಣದಿಂದಂ [3] ॥ ೨೪೫

1 ಎನೆ ಶಾಳಂಕಾಯನುಂ ಮನಿದು ನೀನಿದಱ ಫಲಮಂ ಕಾಣ್ಬೆಯೆಂದು ಪೋದನಿತ್ತಲುಗ್ರಸೇನನೆಂಬ (ಗ)

2 ಆಸನ್ನಕಾಂಪರಿಂದದನಱಿದು ಬಂದು (ಗ)

3 ಬಳಲಾಗಿಮನೆವೆದಯೆಯುಂ । ಮುಳಿಸಂ ಮಾಣ್ದವನಬಲಮಾನವಯಾವಿಂಧಂ (ಗ)

[ಅಂತು ಕರುಣಿಸಿ ಚಂಡಪ್ರದ್ಯೋತನ ಬಲಮೆಲ್ಲಮಂ] ಮಹಾವಾಯು ತಱಗೆಲೆಯನೆತ್ತುವಂತೆತ್ತಿಕೊಂಡುಯ್ದುಜ್ಜಯಿನಿಯ ಮಹಾಕಾಳದೊಳಿರಿಸಿ, ೨೪೬

ಈರಮಣಿಯ ಶೀಲಮನಿದ
ನಾರಯ್ಯಲ್ವೇಟ್ಕುಮೆಂದು ತದ್ಭೂಮಿಪನಾ ।
ಕಾರಮನೆ ಕೊಂಡು ಪುರಮಂ
ವಾರಿಧಿಯೊಲ್ಸುತ್ತಿ ಮುತ್ತಿಕೊಂಡುಗ್ರತೆಯಿಂ ॥ ೨೪೭

ಪೊೞಲೆಲ್ಲಮಂ ಮಾಯಾನಿದ್ರೆಯೊಳಿಕ್ಕಿ [ಚತುರಂಗಬಲಮಂ ವಿಗುರ್ವಿಸಿ ಕೋಂಟೆಯುಂ ಕೊಂಡು,] ೨೪೮

ಉರಿವಂತೆ ಪುರವರಂ ಸಂ
ಗರದೊಳ್ ಕೆಡೆವಂತೆ ಪೆರ್ವೆಣಂ ಬೀದಿಗಳೊಳ್ ॥
ಪರಿವಂತೆ ರಕ್ತಮವನಿಪ
ನರಮನೆಯುಂ ಸುಟ್ಟು ಸೂಱೆಗೊಳ್ವಂತೆ ಭಟರ್ ॥ ೨೪೯

[ಚಮತ್ಕಾರಮಂ ಮಾಡಿ ಭಯಮುಮದ್ಭುತಮುಮಾಗೆ ಪ್ರಭಾವತೀಮಹಾದೇವಿಯಲ್ಲಿಗೆವಂದು ಮುಂದೆ ನಿಂದಿರ್ದು, ೨೫೦

ಎನಗಿದಿರಾಂಪವರಾರ್ಮೇ
ದಿನಿಯೊಳ್ ನಾಂ ಮುನಿದೊಡಂ ಜವಂ ಮುಳಿದೊಡಮು ।
ಬರ್ನೊಳಾಂತು ಸೆಣಸಿ ಕಾದುವ
ಜನಪಂಗೆಂಟೆರ್ದೆಯೆ ಮರುಳ್ ನೀನೆತ್ತಱಿವೈ ॥ ೨೫೧

ಮತ್ತಂ] ನಿನ್ನ ಪ್ರಾಣವಲ್ಲಭನಪ್ಪುದ್ರಾಯನಮಹಾರಾಜನ ಬಿಂಕಮಂ ಸುಂಕಂಗೊಂಡು ವೀರಮಂ ದೂರಂಮಾಡಿ [ಬೆಳ್ಗರಲೆಯುಂ ಬೆಂಗೊಂಬಂತೆ ತಗುಳ್ದು] ಪಿಡಿದುಕೊಂಡು ಕೋಡಗಗಟ್ಟುಗಟ್ಟಿ ತಂದೆಂ; ನಂಬೆಯಪ್ಪೊಡೆ [ಯಿವನಂ ನೋಡೆಂದೆನೆ ಕಾಂತೆ,] ॥ ೨೫೨

ಎನ್ನಾಣ್ಮನದಟನುಡುಗಿಸು
ವೆನ್ನರ್ಪಿಱರೊಳರೆ ಗಂಡರವನೀತಳದೊಳ್ |
ಪನ್ನಗನೀಕಡುದುರ್ಜನ
ನೆನ್ನಂ ನುಡಿಸಲ್ಕೆವೇಡಿ ಮಱುಗಿಪನಱಿವೆಂ [1] ‖ ೨೫೩

[ಈತನೊಡನೆ ಮಾರಿಯುಂ ಬಳಾರಿಯುಂ ನುಡಿಗೆ ಯಾನೇನಂ ಮಾಡಿದೊಡಮೆನ್ನ ಶೀಲಮನೇಗೆಯ್ದುಂ ಕಿಡಿಸುವೆನಲ್ಲೆಂದು ಪರಮಜಿನ ಚರಣಮನೆ ಮನದೊಳ್ ತಾಳ್ದು ಪಂಚನಮಸ್ಕಾರಮನೋದುತ್ತುಂ ಮುನ್ನಿನ ಮಹಾಪುರುಷರ ಕಥೆಗಳಂ ಭಾವಿಸುತ್ತುಮಿರೆ,] [2] ೨೫೪

ನಿನ್ನುರಿಪದಿಂದೆ ಪುರವರ
ಮೆನ್ನಾಡುಂ ಕೆಟ್ಟು ಪೊಟ್ಟನಾದದು ಮತ್ತಂ |
ನಿನ್ನಾಣ್ಮಂಗೀವಿಧಿಯಾ
ಯ್ತಿನ್ನಿರವೇಡೆನ್ನೊಳಕ್ಕಱಿಂದಂ ಕೂಡಾ ‖ ೨೫೫

ಆನಳಿಪುವೆನ್ನರೊಳರೇ
ಮಾನಿನಿಯರ್ನಿನ್ನ ಪುಣ್ಯದಿಂದಂ ನೀರೇ |
ಜಾನನೆಯಾಂ ದೊರೆಕೊಂಡೆಂ [3]
ಹೀನತೆಯಂ ಬಿಸುಡು ಮೋಹದಿಂ ಕೂಡೆನ್ನೊಳ್ ‖ ೨೫೬

ಪತಿ ಬಂದಪನೆಂಬಾಸೆಯೊ
ಳತಿಶಯದಿಂದಿರ್ಪೆಯಪ್ಪೊಡಂ ನಿನ್ನ ಮಹೀ |
ಪತಿಯುಮೆನಾಂ ಪಿಡಿದೆಂ ಸಿತ
ಮತವಂ ಬಿಟ್ಟೆನ್ನೊಳಕ್ಕಱಿಂದಂ ಕೂಡಾ ‖ ೨೫೭

---

1 ನುಡಿಯಿಸಲುವೇಡ ನುಡಿದಪನಱಿವೆಂ (ಗ)   2 ತನ್ನೊಡನೆಪೋದ ಪಡೆಮಾತಿನ ನುಡಿಗೆ ತಾನೇನಂ ಮಾಡಿದೊಡಮಾನೆನ್ನಶೀಲಮನೆಳೆವೆನಲ್ಲೆಂದುಸಿರದಿರ್ಪುದುಂ (ಗ)   3 ಪತಿಯಾದಪೆನಾಂ (ಗ)

ತರುಣವಯಸಿನೊಳ್ ಮೆಚ್ಚಿದ
ಪುರುಷರೊಳೊಡಗೂಡಿ ಕಾಲಮಂ ಕಳೆಯದೆ ಪಂ ।
ಕರುಹಾಕ್ಷಿ ಶೀಲಮಂ ಪಿಡಿ
ದುರವರಿಯಿಂ ಬಂದ ಸುಖಮನೆಡೆಯೊಳ್ ಕಿಡಿಪೌ [1] ॥ ೨೪೮

[ಎಂದು ನಾನಾಪ್ರಕಾರದಿಂ ನುಡಿದೊಡಂ ಮೌನಗುಡಿಯುದಿರೆ ಮೆಚ್ಚಿ ಮನದೊಳ್ ಪೊಡೆಮಟ್ಟೆನ್ನ ದಿವ್ಯಸ್ವರೂಪಮಂ ತೋಱಿ ನಿಮ್ಮ ಪಸರ್ಗಂ ಪೋಗುತ್ತುಕ್ಕೈಯನೆತ್ತಿಕೊಳ್ಳೆಂದು ಪುರದೊಳಗಣ ಮಾಯಾನಿದ್ರೆಯಂ ಮಾಣಿಸಿ ಪಗುವರ್ಣೆಯನುಡುಗಿಸಿ ಸುರತರುಕುಸುಮದಿಂ ಪೂಜಿಸಿ ಶೀಲವತಿಯೆಂಬ ಮಾಂಗಲ್ಯನಾಮಮನಿಟ್ಟು ದೇವಲೋಕಕ್ಕೆ ಪೋದೆನೀವಸಿತಾರತ್ನಂ ಕೇವಳಮಲ್ಲೆಂದು ಪೊಗೞ್ದು ತದನಂತರಂ,] [2] ೨೪೯

ವಿವಿಧರತುನಂಗಳಿಂದೊ
ಪ್ಪುವ ಸಿಂಹಾಸನಮನಾಗಳಾಕ್ಷಣದಿಂ ತ ।
ದ್ದಿವಿಜಂ ಮಾಡಿ ಧರಿತ್ರೀ
ರಮಣನನರಸಿಯುಮನಿರಿಸಿ ಪಿರಿದುತ್ಸವದಿಂ ॥ ೨೫೦

ಅರಲ ಮಳೆ ಕರೆಯೆ ಭೋರೆನೆ
ಸುರದುಂದುಭಿ ಮೊಱಗೆ ತೆಂಕಣೆಲರೆಸಗೆ ಮನೋ ।
ಹರಮಾಗೆ ಮೃದುನಿನಾದಂ
ಕರಮೆಸೆದಿರೆ ಪಾಡೆ ದೇವಿಯರ್ಮಂಗಳಮಂ ॥ ೨೫೧

ಸುರುಚಿರರತ್ನದಿನೊಪ್ಪುವ
ಸುರರ ವಿಮಾನಂಗಳೊಂದು ತಿಂತಿಣಿಯಿಂದಂ ।

---

1 ಶೀಲಮಂ ಬಿಟ್ಟರತ್ರೆಯೊಳ್ಬಂದ ಸುಖಮನೇಕೆಯೊ ಕಿಡಿಪೈ (ಬ.ಕ.)

2 ಅಂತನೇಕುಪಸರ್ಗಮಂ ಮಾಡಿದೊಡಮೊಡಂಬಡದಿರೆ ಮೆಚ್ಚಿ ಸ್ವರೂಪಂ ತೋಱಿ ಪಿರಿದಪ್ಪುಪಸರ್ಗಮಂ ಪಿಂಗಿಸಿ ಸುರತರುಪುಷ್ಪಂಗಳಿಂ ಪೂಜಿಸಿ ಪೊಡೆವಟ್ಟು ಶೀಲವತಿಯೆಂಬ ಪೆಸರನಿಟ್ಟು ಪೋದೆನದುಕಾರಣದಿಂದೀಸತಿ ಮಹಾಸತಿಯೆಂದು ಪೊಗೞ್ದು (ಗ)

ಬರವೆಲ್ಲಂ ತೀವಿರ್ದುದು
ನರನಾಥನ ಕೀರ್ತಿಲತೆಯ ಪೂಗಳ ತೆಱದಿಂ ॥ ೧೬೦

ಅಂತು ಜನವೆಲ್ಲಂ ಬೆಱಗಾಗೆ ಜಿನಭಕ್ತಿಯೆಂಬ ಬೆಳಸಿನ ರಾಶಿಯಂ ತೋರ್ಪಂತೆ ಪಾಲ ಸಮುದ್ರದ ಸೀರಿಂದಭಿಷೇಕಂಮಾಡಿ ಪೂಜಿಸಿ [1] ಸಮ್ಯಕ್ತ್ವಚೂಡಾಮಣಿಯುಂ ವಾತ್ಸಲ್ಯರತ್ನಾಕರನುಂ ಸುಕವಿನಿಕರಪಿಕಮಾಕಂದನುಂ ಸಹಜಕವಿಮನೋಹರೋದ್ಯಾನಕಳಹಂಸ ಕಳಕಂಠನುಮೆಂಬೀ [2] ಪ್ರಶಸ್ತನಾಮಂಗಳನಿಟ್ಟು ತಣಿಯುಂಡ ಭೂತವಂತೆ ಪಲತೆಱದ ಪೊಗಳ್ತೆಗಳಿಂ ಪೊಗೞ್ದು ವಾಸವಂ ದಿವಿಜನಿವಾಸಕ್ಕೆ ಪೋದನಿಂತು, ೧೬೧

ಪುರುಷರತ್ನಂ ಪುರಾತನ
ಚರಿತಂ ಜಿನಚರಣಕಮಲಭೃಂಗಂ ಸತ್ಯಾ ।
ಭರಣಂ ದಯಾಂಬುನಿಧಿ [3] ಮಂ
ದರಧೈರ್ಯಂ ನೃಪಕಿರೀಟಘಟ್ಟಿತಚರಣಂ ॥ ೧೬೨

ಧರೆ ಕೊಂಡುಕೊನೆದು ಬಣ್ಣಿಪು
ವರಿದೆ ಗುಣೋನ್ನತಿಯಿನೀ ಮಹಾತ್ಮಂ ಧರೆಗ ।
ಚ್ಚರಿಯಾಗೆ ಭಕ್ತಿಯಿಂದಂ
ಸುರರಿಂದಂ ಪೂಜೆವಡೆದನಿನ್ನರುಮೊಳರೇ ॥ ೧೬೩

ಎಂದೊದ್ದಯನಮಹಾರಾಜನಂ ಲೋಕವೆಲ್ಲಂ ಒಂದೆ ಕೊರಳೊಳ್ ಕೊಂಡಾಡೆ [4] [ಸದ್ಗುಣದೊಳ್ ಕೂಡಿ] ಪಲಕಾಲಂ ರಾಜ್ಯಂಗೆಯ್ದೊಂದುದಿವಸಂ [ತನ್ನೊಳಿಂತೆಂದಂ :—] ೧೬೪

---

1 ಅಂತಗುವರ್ಗೆ ವಿಗುರ್ವಿಸಿ ಕ್ಷೀರಜಲಧಿಯ ನೀರಂ ಪೊಂಗಳಸಂಗಳಿಂ ತಂದಭಿಷೇಕಂಗೆಯ್ದು ನರೇಶ್ವರಂಗೆ ಮೆಚ್ಚಿ ಸಮ್ಯಕ್ತ್ವ, (ಬ. ಕ.)

2 ಮಾಕಂದನುಂ, ಸುಕವಿಜನಮನಃಪಯಃಪಯೋಧಿಹಿಮಕರನುತಭಾವಯುತದಿಗಂಬರದಾಸಂ ಜಿನಶ್ರೀಚರಣಾಲಂಕಾರಶೀರ್ಷನುಮೆಂಬ (ಗ)

3 ಜಿನಸಮಯವಾರ್ಧಿವರ್ಧನಚಂದ್ರಂ । ಪರಮಗುಣಾಭರಣಂ (ಗ)

4 ಕೈವಾರದಿಂಪೊಗಟೆ (ಬ. ಕ.)

ಮತಿಗೆಟ್ಟನ್ನೆವರಂ ಸಂ
ಸೃತಿಯೊಳ್ ನಾಂ ತೊಡರ್ದು ಮುಟ್ಟುಗೆಟ್ಟರ್ದೆಂ ಸಂ ।
ಸೃತಿಯಂ ಬಿಟ್ಟಂ ನಾಂ ನಿ
ರ್ವೃತಿಯಂ ಸಾಧಿಸುವುಪಾಯಮಂ ಚಿಂತಿಸುವೆಂ ॥ ೨೬೭

[ತನುವಪ್ಪೊಡೆ ನಿಲ್ಲದು ಜ
ವ್ವನಮಪ್ಪೊಡೆ ನೀರ ಬೊಬ್ಬುಳಿಕೆ ಕಡುಗೂರ್ಪಂ ।
ಗನೆಯರ್ ನಂಟರ್ ತನುಭವ
ರನುಜಾದಿಗಳಪ್ಪರೇ ಶರಣ್ಯಾವೆಡೆಯೊಳ್] ॥ ೨೬೮

ಎಂದು ಬಗೆದು [1] ಸಂಸಾರಕ್ಕೆ ಪೇಸಿ [ವೈರಾಗ್ಯಂ ಪುಟ್ಟೆ ತನ್ನ] ಪಿರಿಯ ಮಗನಪ್ಪರಿಂಜಯಂಗೆ [ರಾಜ್ಯಾಭಿಷೇಕಂಮಾಡಿ] ಧರಾಭಾರಮ ನೊಪ್ಪಿಸಿ, ೨೬೯

ಧರೆಯಂ ನೋಯಿಸದಿಪ್ಪ ಜಿನೇಶ್ವರಪದಾಂಭೋಜಾತಮಂ ಭಾವಿಸು
ತ್ತಿರಲ್ ಜೈನಾಗಮದೋಜೆಯಿಂ ನಡೆ ಬುಧವ್ರಾತಕ್ಕೆ ಲೇಸಾಗು ಮಾ
ಣ್ದಿರದಿರ್ಧರ್ಮಮನುಗ್ರರಂ ಪಿಡಿಯದಿರ್ ಧೂರ್ತಾದಿದೋಷಂಗಳಂ
ಭರದಿಂ ಪೊರ್ದದಿರೊಲ್ದುಮಾಡು ಮುನಿಸಂದೋಹಕ್ಕೆ ನೀನರ್ತಿ
ಯಂ ॥ ೨೭೦

ಎಂದಪ್ಪೈಸಿ ರಾಜ್ಯಮಂ [ಕೊಳೆವ ದಕ್ಕಂ ತೊಱೆವಂತೆ] ತೊಱೆದು ವೀರಸ್ವಾಮಿಯ [2] ಪಾದಮೂಲದೊಳ್ ಜಿನದೀಕ್ಷೆಯಂ ಕೈಕೊಂಡು ಘೋರೋಗ್ರತಪಶ್ಚರಣದಿಂದಷ್ಟವಿಧಕರ್ಮಂಗಳಂ ನಿರ್ಮೂಲಂಮಾಡಿ [3] ನಿಶ್ರೇಯಸಶ್ರೀಯೊಳ್ ಕೂಡಿದಂ. ಶೀಲವತೀಮಹಾದೇವಿಯುಂ ಸುವ್ರತ ಗಂತಿಯರಲ್ಲಿ ದೀಕ್ಷೆಯಂ ಕೈಕೊಂಡು [ಕರಮರಿದೆನಿಸುವ ತಪದೊಳ್ ನೆಗೞ್ದು] [4] ಸನ್ಯಸನವಿಧಿಯಿಂ ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತುಸಾಗರೋಪಮಕಾಲಮಾಯುಷ್ಯಕಮೊಡೆಯ [ಮಹರ್ಧಿಕದೇವ] ನಾಗಿ ಪುಟ್ಟಿದಳ್. ೨೭೧

---

1 ಎಂದು ವೈರಾಗ್ಯದೊದವಿಂ (ಗ) 2 ವರ್ಧಮಾನಸ್ವಾಮಿಯ (ಗ)
3 ಕಿಡಿಸಿ (ಗ) 4 ಕಡೆಯೊಳ್ (ಗ)

ಅದಱಿಂ ನಿರ್ವಿಚಿಕಿತ್ಸೆಯೆ
ವಿದಿತಂ ಕೈವಲ್ಯಸತಿಗೆ ತಿಲಕಂ ಸೌಖ್ಯಾ |
ಭ್ಯುದಯಂ ಸಮಸ್ತದುಷ್ಕೃತ
ಮದೇಭಕೇಸರಿ ಗುಣಕ್ಕೆ ರತ್ನದ ಕಲಶಂ ‖ ೧೭೧

ಎಂದು ನಿರ್ವಿಚಿಕಿತ್ಸೆಯೊಳಾದ ಫಲಮಂ ಗಣಧರಸ್ವಾಮಿಗಳ್ ಪೇೞ್ವುದುಂ, ೧೭೨

ಧರಣೀಸ್ತುತ್ಯಂ ಗುಣಾಂಭೋನಿಧಿ ಜಿನಚರಣಾಂಭೋಜಮತ್ತಾಳಿ ಧಾತ್ರೀ
ಧರಧೈರ್ಯಂ ವಾಗ್ವಧೂವಲ್ಲಭನಮಳಯಶಂ ನಿರ್ಮಳಂ ನಿಷ್ಕಷಾಯಂ
ವರಭವ್ಯಾಂಭೋಜಸೂರ್ಯಂ ನಿರುಪಮನೊಸೆದಂ ಕೇಳ್ದು ತ್ರೈವಿದ್ಯಚಕ್ರೀ
ಶ್ವರಪಾದಾಂಭೋಜಭೃಂಗಂ ಸುಕವಿಜನಮನಃಪದ್ಮನೀರಾಜಹಂಸಂ [1] ‖

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಕಿರಣವಿಲುಳಿತ
ಚುಂಬಿಪೀಯುಪರಮಜಿನಚರಣಯುಗಳಸರಸಿರುಹಮತ್ತ
ಮಧುಕರ ನಿರುಪಮಸಹಜಕವಿಜನ ಮನಃಪಯಃ
ಪಯೋಧಿಹಿಮಕರ ನುತಭಾವಯುತ
ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ದರ್ಶನತೃತೀಯಾಂಗವ್ಯಾವರ್ಣನಂ
ಚತುರ್ಥಾಶ್ವಾಸಂ.

---

1 ಪರಮಶ್ರೀಜೈನತತ್ವಪ್ರಿಯನಮಳಯಶೋಭಾಜನಂ ಲೋಕಪೂಜ್ಯಂ
ಧರಣೀಸ್ತುತ್ಯಂ ಗುಣಾಂಭೋನಿಧಿ ಜಿನಸಮಯವ್ಯೋಮಶೀತಾಂಶು ಸತ್ಯಾ
ಭರಣಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಜಿನಶ್ರೀ
ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮನೀರಾಜಹಂಸಂ ‖ (ಗ)

ಪಂಚಮಾಶ್ವಾಸಮ್.

ಶ್ರೀಮನ್ನಿರ್ವಿಚಿಕಿತ್ಸೆಯ
ಮಾಮೈಮೆಯೆ ಮೋಕ್ಷದಲ್ಲಿಗುಯ್ಯಲ್ ಸಾಲ್ಗುಂ ।
ದೇವಾತ್ಮೊ ಮನದೊಳೂಸೆದಂ
ಶ್ರೀಮಹಿತಂ ಸುಕವಿನಿಕರಪಿಕಮಾಕಂದಂ ॥ ೧

ಅಂತು [ನಿರ್ವಿಚಿಕಿತ್ಸೆಯೊಳಾದ ಫಲಮಂ ಲೇಸಾಗಿ ಅಱಿದು ಮತ್ತಂ ಗೌತಮಸ್ವಾಮಿಗಳ್ಗೆ ಮಗಧನಾಯಕಂ ಪೊಡೆಮಟ್ಟು ಮುಂದಣಮೂಢದೃಷ್ಟಿಯ ಕಥೆಯುಮಂ ನಿಮ್ಮಡಿ ಬೆಸಸಲ್ವೇೞ್ಕುಮೆನೆ ಗಣಧರಸ್ವಾಮಿಗಳ್ ನಿರ್ವಾಣಶ್ರೀವನಿತೆಯ ಕುಚದೊಳಲಂಕರಿಸಿರ್ದ ಹಾರಯಷ್ಟಿಯಿದೆನಿಸುವ ಅಮೂಢದೃಷ್ಟಿಯ ಕಥೆಯನಿಂತೆಂದು] [1] ಪೇೞ್ದರ್:— ಜಿನರಂತೆ [ಸಿಂಹದಂತೆ] ಗರುಡನಂತೆ ಕಾಮನಂತೆ ಭೋಜನಂತೆ [2] ಕರ್ಮಭೂಮಿಯಂತೆ ಮನುಷ್ಯರಂತೆ [3] ಸಂಯುತನಂತೆ ಮಹಾವ್ರತಂಗಳಂತೆ ಪಾಂಡುಕಂಬಳದಂತೆ [4] ಜ್ಯೋತಿರ್ಲೋಕದಂತೆ ವ್ಯಾಕರಣದಂತೆ ಜೋಯಿಸದಂತೆ ಸಪ್ತಮತೀರ್ಥಕರಧರಣೇಂದ್ರನಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಮೆಂಬಯ್ದಱೊಳಂ ಕೂಡಿ ಶೋಭಿಸುವುದು ॥ ೨

ಮೂಢತೆಯಂ ಬಿಟ್ಟು ಪೆಱರ್
ಮಾಡುವ ಡೊಂಬಿಂಗೆ ಬೇಗಮೆಱಗದೆ ಮೂರ್ಖರ್ ।
ಮಾಡುವುದಂ ಲೇಸೆನ್ನದೆ
ಕೂಡುವುದಾರಯ್ದು ಮೂಢದೃಷ್ಟಿಯೊಳಱಿವಂ ॥ ೩

---

1 ನಿರ್ವಿಚಿಕಿತ್ಸೆಯುಂ ಕೇಳ್ದು ಮುಂದಣಮೂಢದೃಷ್ಟಿಯ ಕಥೆಯುಂ ಬೆಸಸುವುದೆಂಬುದುಮಿಂತೆಂದು (ಗ) 2 ಪ. ಗದಂತೆ ಸುಭೋಜನಂತೆ ಸಂಯಮಿಯಂತೆ (ಗ)
3 ಜೈನರಂತೆ ಸಂಯತ (ಗ) 4 ಪಂಚಶರದಂತೆ (ಗ)

ಇನ್ನದಱ ಮಹಿಮೆಯೆಂತೆಂದೊಡೆ:—

[ಧರಣೀವನಿತೆಯ ತೊಟ್ಟ
ಭರಣಮಿದೆನಿಪಾಮಹಂಬುರ್ವರದಿಂದಂ |
ಪುರದಿಂ ಖೇಡಾದಿಗಳಿಂ
ಕರಮೆಸೆವುದು ಶೂರಸೇನಮೆಂಬಾ ವಿಷಯಂ || ೪

ಆ ವಿಷಯದೊಳ್ || ೫

ಅನುಪಮದೇವವಿಮಾನಮಿ
ದೆನಿಸುವ ಜಿನಭವನದೋಳಿಯಿಂ ಸುತ್ತಿದ ನಂ |
ದನವನದ ಶೋಭೆಯಿಂದಿಂ
ದ್ರನ ಪುರದಂತೊಪ್ಪುತಿರ್ಕುಮತಿಶಯದಿಂದಂ || [1]] ೬

ಉತ್ತರಮಧುರೆಯೆಂಬುದು ಪುರಮದನಾಳ್ವಂ ವರುಣನೆಂಬ ಮಹಾಮಂಡಳಿಕನಾತನ ಪಟ್ಟದರಸಿ ರೇವತಿಯೆಂಬಳ್ || ೭

[ಜಿನಪದಭಕ್ತಿಯೊಳಿಂದ್ರನ
ವನಿತೆಯ ಪೋಸಟ ಪತಿವ್ರತಾಗುಣದೊಳ್ ರಾ |
ಮನ ಸತಿಯ ದೊರೆ ವಿಳಾಸದೊ
ಳನಂಗನಂಗನೆಗೆ ಬಗೆವೊಡೆಣೆ ಧಾರಿಣಿಯೊಳ್ || ೮

ಎನಿಸಿ ನೆಗೞ್ತೆವಡೆದ ಸದ್ಗುಣಾಭರಣೆಯುಂ ಅಪರಿಮಿತಜಿನಭಕ್ತಿಯುಮಪ್ಪಾಗಿ ರೇವತೀಮಹಾದೇವಿ ಸುಖಸಂಕಥಾವಿನೋದದಿಂ] [2] ರಾಜ್ಯಂಗೆಯ್ಯುತ್ತುಮಿರೆ, ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಮೇಘಕೂಟಮೆಂಬ [ಪುರಮಂ || ೯

ಧರಣೀಸಂಸ್ತುತ್ಯಂ ಖೇ
ಚರಪೂಜ್ಯಪದಂ ಜಿನೇಂದ್ರಪದಸರಸಿಜಷ |

---

1 ಸೂರಸೇನವೆಂಬುದು ವಿಷಯುವಮಾವಿಷಯದೊಳ್ (ಗ.)

2 ಅಂತವರ್ ಸುಖದಿಂ (ಗ)

ಟ್ರಣಂ ದಯಾಳು ಸದ್ಗುಣಾ
ಭರಣಂ ಚಂದ್ರಾಭನೆಂಬನದನಾಳ್ವರಸಂ ॥] [1] ೧೦

ಆತನ ಪಟ್ಟದರಸಿ ಸುಮತಿಮಹಾದೇವಿಯೆಂಬಳಾಯಿರ್ವರ್ಗಂ [ಚಂದ್ರಶೇಖರನೆಂಬ ಮಗನಾಗೆ, ಆತನ ವಿನೋದಮೆ ವಿನೋದ ಮಾಗೆ] [2] ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ದು ಚಂದ್ರಾಭಮಹೀರಾಜನೊಂದುದಿವಸಂ ॥ ೧೧

[ನೆರೆದ ವಿಯಚ್ಚರೇಶ್ವರರ ಖೇಚರಿಯರ್ಕಳ ಭಂಗಿ ಚೆಲ್ವುವೆ
ತ್ತಿರೆ ಬಳಸಿರ್ದ ನಾಯಕರ ವೀರರ ರೂಪು ಮಹೋನ್ನತಿಕ್ಕೆವ
ತ್ತಿರೆ ನಯದಿಂದಮಿರ್ದ ನುತನೃತ್ಯನಿಕಾಯದ ಗಾನದೊಳ್ಪು ಬಿ
ತ್ತರದಿನಗುರ್ವಿನಿಂ ಸೊಗಯಿಸುತ್ತಿರೆ ಶೋಭಿಸುತಿರ್ಪ ಮಾಡದೊಳ್॥೧೨

ಪಿರಿದನುರಾಗದಿಂ ಖೇಚರರಾಜಂ ದೆಸೆಗಳಂ ಮಹೋತ್ಸವದಿಂದಂ ಬರಚರರಂ ನೋಡುತ್ತುಂ ನಿರುತಂ ಸಂಗೀತವಿದ್ಯೆಯಂ ಕೇಳುತ್ತುಂ ಇರ್ದು ತನ್ನೋಲಗದ ಚೆಲ್ವಿಂಗೆ ತನ್ನ ಮೂವಿಷ್ಟಮಾಗಿ ರಾಗಿಸಿ ನೋಡಿ ಖಚರರಾಜನೆನ್ನಂಬಿಟ್ಟರಂದು ಮನದೊಳ್ ಪರ್ಚಿ ತೊಟ್ಟನೆ ಯಾಕಾಶಮಂ ನೋಡುವುದುಂ ॥] [3] ೧೩

ಕರಿಘಟೆಯೊಡ್ಡಿನಂತೆ ಮೃಗಸಂಕುಲದಂತೆ ಘಟಂಗಳಂತೆ ಕೇ
ಸರಿಗಳ ಪಿಂಡಿನಂತೆ ವನದಂತೆ ನವಿಲ್ಗಳ ತಂಪದಂತೆ ಕೇ
ಸುರಿಗಳ ಬಂಬಲಂತೆ ಶರಭಾವಳಿಯಂತೆ ಮನುಷ್ಯರಂತೆ ವಾ
ನರಚಯದಂತೆ ಗೋನಿವಹದಂತೆಸೆದೊಪ್ಪುವ ಮಾಡದಂದಮಂ ॥ ೧೪

[ನಾನಾಪ್ರಕಾರದ ಮುಗಿಲೊಡ್ಡಂ ಚಂದ್ರಾಭಮಹಾರಾಜಂ ಕಂಡು ಮಹಾವಿಸ್ಮಯಂಬಟ್ಟು ಕಣ್ಣಿಮೆಯಿಕ್ಕದೆ ನೋಡುತ್ತುಮಿರ್ಪನ್ನೆಗಂ ॥] ೧೫

---

1 ಪುರಮದನಾಳ್ವಂ ಚಂದ್ರಾಭನೆಂಬ ವಿದ್ಯಾಧರಂ (ಗ.)

2 ಪಟ್ಟದ ಮಗಂ ಚಂದ್ರಶೇಖರನೆಂಬವನಂತವರ್ (ಗ.)

3 ಮಾಡದಮೇಲೆ ಸಗಲೋಲಗಂಗೊಟ್ಟು ಚಂದ್ರಾಭಮಹಾರಾಜಂಯಿರ್ದಾಕಾಶದೊಳ್ (ಗ)

ಸ್ಥಿರಮಲ್ಲದು ಕೇಳಂಬರ
ಚರಪತಿ ಸಂಸಾರಸೌಖ್ಯಮಾಯುಂದದಿನಂ ।
ದರಸಂಗೆ ಪೇೞ್ವ ತೆಱದಿಂ
ಕರಗಿದವಾಕ್ಷಣವೆ ಮೇಘದೊಡ್ಡುಗಳನಿತುಂ ॥ ೧೭

[ಅಂತು ಮುಗಿಲೊಡ್ಡು ನೋಡೆ ನೋಡೆ ಕರಗುವುದುಂ ವಿ
ಚ್ಖರರಾಜಂ ಕಂಡು ಮನದೊಳ್ ವೈರಾಗ್ಯಂ ಪುಟ್ಟೆ। [1] ತನ್ನೊಳ
ತೆಂದಂ ॥ ೧

ಸಿರಿ ಸುರಚಾಪದಂತೆ ಪೊಸಜವ್ವನಮಿದ್ದಿಲ ಬೂದಿಯಂತೆ ಪೆಂ
ಡಿರ ಸುಖಮುಣ್ಮಿ ಪೋಣ್ಮುವ ಬಯಲ್ದೊಱೆಯಂತೆ ವಿಭೂತಿ ಮಂಜಿನ
ತರಸಿನೊಳಾದ ಪೆಂಪಿನ ಮಹೋನ್ನತಿಗಳ್ ಮಳಲೇರಿಯಂತೆ ಮುಪ್ಪ
ದರಿಯ ಮಹೀಜದಂತೆ ಕಿಡಲಲ್ಲದೆ ತಾಂ ಸ್ಥಿರಮಾಗಲಾರ್ಕುಮೇ ॥ ೧೮

ಅರಳೆಯ ಕಿಚ್ಚಿನಂತೆ ಧನಮಾಯುಂ ವಸಂತದ ಶೋಭೆಯಂತೆ ಪೆ
ರ್ದೆರೆಗಳ ಬಂಬಲಂತೆ ಸೊಬಗೊಡ್ಡಿದ ಮೇಘಸಮೂಹದಂತೆ ನಂ
ಟರ ಕಡುಗೂರ್ಮೆ ಪಣ್ತ ಮರನಂತೆ ವಿಳಾಸದಗುರ್ವ್ವುಮೆಯುಂ
ಬ್ಬರಮುಮ ಸೀರ ಬೊಬ್ಬುಳಿಕೆಯಂತೆ ನಿರಂತರಮಲ್ಲದೆಲ್ಲಿಯುಂ ॥ ೧೯

[ಎಂದು ಸಂಸಾರದನಿತ್ಯತೆಯಂ ಭಾವಿಸಿ ಭೋಗೋಪಭೋಗ
ಗಳ್ಗ ಪೊಲ್ಲದುಗೆಯ್ದಲ್ಲದ ಪೆಂಡತಿಗೆ ಪೇಸಿನಂತೆ-ಪೇಸಿ ॥ ೨

ಪರಮಾರ್ಥಂ ಭಾವಿಸುವೊಡೆ
ಕರಮಂತಾ ಸ್ಪರ್ಶನೇಂದ್ರಿಯೋನ್ನತಿಯಿಂದಂ ।
ಕರಿಪತಿಗಳ್ ಮೊದಲಾಗಿರೆ
ನರರ್ಗಂ ಬಸಮಾಗಿ ಕಟ್ಟುವಟ್ಟುವು ಜಗದೊಳ್ ॥ ೨೦

ನೆಱೆ ನಯನೇಂದ್ರಿಯದೆಱಕದಿ
ನೆಱಿಯದೆ ಮತಿಗೆಟ್ಟು ಬಿರ್ದ್ದು ಸಾವುವು ಸೊಡರೊಳ್ ।

1 ಅವಂ ಕಂಡು (ಗ)

ಪುೞುಗಿ ಪತಂಗಾವಳಿಯೆನೆ
ಕುಱಿಯಲ್ಲನೆ ಕಣ್ಣ ಸೋಲಮಂ ಸಲ್ಲಿಸುವಂ ॥ ೨೨

ಮುಂದಣ ಮೃಗಮಂ ಕಣ್ದೋ
ರ್ಕೆಂದು ಕೊರಲ್ನೋಡ ಗೀತರವದಿಂ ತಾವುಂ |
ಪೊಂದುವುವು ಸಾರ್ದ ಮೃಗಚಯ
ಮೆಂದೊಡೆ ಶ್ರೋತ್ರದ ಸುಖಕ್ಕೆ ಪದೆವನೆ ಗಾಂಪಂ ॥ ೨೩

ಮರನಂ ಭೇದಿಸುವುವು ಷ
ಟ್ಚರಣಂ ಗಂಧಕ್ಕೆ ಸೋಲ್ತು ತಾವರೆಯೆಸಳಂ |
ಭರದಿಂ ಭೇದಿಸಲಾಱದೆ
ಪಿರಿದಪ್ಪತಿಮೋಹದಿಂದಮಳಿವುವು ಧರೆಯೊಳ್ ॥ ೨೪

ರಸನೇಂದ್ರಿಯವಶದಿಂ ಸೈ
ರಿಸಲಾಱದೆ ಗಾಳದೆರೆಗೆ ಪಾಯ್ದಳಿವುವು ಮೀ |
ನಸಹಾಯಮೆಂದೊಡಕ್ಕಟ [1]
ವಸುಮತಿಯೊಳ್ ಜಿಹ್ವೆ ಕಿಡಿಸದಾರಂ ಪಡಪಿಂ ॥ ೨೫

ಒಂದೊಂದು ಜೀವಿಯಿಂದ್ರಿಯ
ಮೊಂದೊಂದಱಿನಳಿವುದೆಂದೊಡೈದಿಂದ್ರಿಯಮುಮಂ |
ಸಂದಿಸಿ ಕೂಡಿರ್ದ ನರಂ
ಸಂದೆಯಮೇಂ ಕಿಡುವುದೞಿವುದವನೀತಳದೊಳ್ ॥ ೨೬

ಎಂದಿಂದ್ರಿಯಂಗಳ ದೆಸೆಗೆ ನಾಡೆಯುಂ ಬಯಂಗೊಂಡು ॥ ೨೭

ಸಿಂಬುಳನಾಳಿ ಮೊಗುಗುಟಿಪೆರ್ದೋಱೆ ಬಾಯ್ ಮಲದಾಗರಂ ಬಸಿರ್
ತಾಂ ಬಗೆವಂದ ಕಿಳ್ಳೆ ಮಡು ಕಣ್ಕಿವಿ ಕೊಗ್ಗಿಯ ಪುತ್ತು ಚರ್ಮದಿಂ
ದಂ ಬಳಸಿರ್ದ ಕೋಂಟೆ ತನು ಕೀವಿನ ನೆತ್ತರ ತಿಪ್ಪೆ ಬೀವಿನಿಂ
ದಂ ಬಿಗಿದಿರ್ದ ಪೆರ್ನೆಣದ ಖಂಡದ ಮಾಂಸದ ತಾಣಮಲ್ಲವೇ ॥ ೨೮

1 ನಟ್ಟನೆ ಮೀಂಗಳೆಂದೊಡಕಷ್ಟ (ಬ.ಕ.)

ಎಂದು [ಶರೀರದೊಳಾದ ಅಶುಚಿತ್ವಮಂ ಭಾವಿಸಿ ಸಂಸಾರಕ್ಕೆ ಪಿರಿದುಂ ನಿರ್ವೇಗವಾಗೆ ॥ ೨೯

ಪಿರಿದುಂ ಕೋಪದಿನಟ್ಟೆ ತಿಂಬ ಪುಲಿಯುಂ ಬಾರ್ಬಟ್ಟೆಯೊಳ್ಕೊಂಡವೋಲ್
ಭರದಿಂದಟ್ಟೆ ತಗುಳ್ದು ಕೊಲ್ವ ಕರಿಯುಂ ಮಾರ್ವಟ್ಟೆಯೊಳ್ಕೊಂಡವೋಲ್
ಕರಮೆಂತೂರ್ವರೆಯೆ ಪಾಯ್ವ ಸೀಕರಡಿಯುಂ ತದ್ಗೇಹದೊಳ್ಕೊಂಡವೋಲ್
ಸಿರಿಗಂಪೆಮ್ಮೆಮಗನುನ್ನತಿಕ್ಕೆಗವಣಂ ಭೋಗಕ್ಕಮೇನಾಸೆಯೋ ॥ ೩೦

ಅಂತು ಸಂಸಾರದೊಳಾದ ಸುಖಕ್ಕೆ ನಾಡೆಯುಂ ಭಯಸ್ಥನಾಗಿ ಪಿರಿಯ ಮಗನಪ್ಪ ಚಂದ್ರಶೇಖರನಂ ಬರಿಸಿ ಮುಂದೆ ಕುಳ್ಳಿರಿಸಿ ಚಂದ್ರಾಭಮಹೀರಾಜನಿಂತೆಂದಂ ॥] [1] ೩೧

ಸಿರಿಯಿಂದಂ ಮೆಯ್ಯಱಿಯದೆ
ಪರತ್ರೆಯಂ ಕಿಡಿಸಿ ರಾಜ್ಯಮೋಹೋದಯದಿಂ । [2]
ಮರುಳಾಗಿ ಮಂದಬುದ್ಧಿಯಿ
ನೆರಡಿಲ್ಲದೆ ಕೆಟ್ಟೆನಿನ್ನೆವರೆಗಂ ಮಗನೇ ॥ ೩೨

ಇನ್ನೆನಗೆ ಮುಕ್ತಿಶ್ರೀಯುನೊಲಿಸುವ ಜಿನರೂಪಂ ಶರಣ್ಬುಗಲ್ವೇಟ್ಕು ವಿಶಾಖೇಚರ] ರಾಜ್ಯಭಾರಮಂ [ಕೈ] ಕೊಳ್ಳೆಂಬುದುಂ ಕುಮಾರನಿಂತೆಂದಂ ॥ ೩೩

ಕೇಡಿಲ್ಲದ ನಿರ್ವೃತಿಯೊಳ್
ಕೂಡುವುದಂ ದೇವರೆತ್ತಿಕೊಂಡೆನಗಱಿವಂ ।
ಮಾಡುವುದಂ ದುರ್ಗತಿಯೊಳ್ [3]
ಕೂಡುವುದಂ ರಾಜ್ಯಭಾರಮಂ ದಯೆಗೆಯ್ವಾ ॥ ೩೪

---

[1] ಎಂದು ಸಂಸಾರಕ್ಕಂ ಶರೀರಕ್ಕಂ ಪೇಸಿ ಪಿರಿಯ ಮಗನಪ್ಪ ಚಂದ್ರಶೇಖರಂಗಿಂತೆಂದಂ (ಗ) [2] ಮೆಯ್ಯಱಿಯದೆ ನಾನಿರತ್ರೆಯುಂ ಪಿಡಿದು ಪರವನಳಿದೇಂ ಪಿರಿದುಂ (ಕ.ಖ.) [3] ಮಾಡುವುದುಮನರ್ಥಿಯೊಳಂ (ಗ)

[ಬಗೆದು ನೋಡಿ ಲೇಸಪ್ಪ ವಸ್ತುವನೊಲ್ದೀವರಕ್ಕಱಿಂ ಕೂರ್ಪವರ್
ಜಗದ ಮಾನಿಸರ್ಪೊಲ್ಲದಂ ಕುಡುವರೆ ಕೂರ್ಪವರ್ಗೆ ಕುಡರೆಂದುಂ
ದೇವರ್
ಮಿಗಿಲೆನಿಸಿರ್ಪ ನಿರಂತರಸುಖಮನಾರ್ಜಿಸುವ ಕಜ್ಜಮನೆತ್ತಿಕೊಂಡೆ
ನಗೆ ತರಳರಾಜ್ಯಮಂ ದುರ್ಗತಿಗೊಯ್ವುದಂ ದುಷ್ಕರ್ಮಹೇತುವಂ
ಕುಡಲಪ್ಪುದೇ ॥ ೩೫

ಅದುಕಾರಣದಿಂ ದೇವರೆನ್ನಮೇಲೆ ಮೋಹಮುಂ ಸ್ನೇಹಮುಮುಳ್ಳೊಡೆ ಶಾಶ್ವತಸುಖಮನೀವ ತಪಶ್ರೀಯಂ ದಯೆಗೆಯ್ವುದಲ್ಲದೆ ನರಕಗತಿಗುಯ್ವ ರಾಜ್ಯಶ್ರೀಯಂ ದಯೆಗೆಯ್ಯವೇಡೆಂಬುಗಂ ವಿಯಚ್ಚರ]¹ ರಾಜಸಿಂತೆಂದಂ ॥ ೩೬

[ನಿನ್ನಿಂದುದೆ ಕಾರ್ಯಂ ಮ
ತ್ತಿನ್ನದೆ ಕೈವಲ್ಯಲಕ್ಷ್ಮಿಯುಂ ಬಯಸುವವಂ ।
ಗುನ್ನತಿಯಿಂದಾದೊಡೆ ಮೇ
ಣೇನೆಂಬುದನಂತುಟಂತುಟೆನ್ನದೆ ಕೇಳಂ ॥ ೩೭
ಎಂದು ಪ್ರಿಯಾತ್ಮಜಂಗೆ ಕರಕಮಳಮಂ ಮುಗಿದು—] ೩೮

ಈ ವಿಯಚ್ಚರರಾಜ್ಯಮಂ ಪ್ರತಿಪಾಲಿಸಲ್ಮಗನೊರ್ವನಂ
ಭೂವಧೂಪ್ರಿಯನಂ ಮನೋಹರರೂಪನಂ ಪಡೆದಿಂಬಳಿ
ಕ್ಕೀ ವಿಯಚ್ಚರರಾಜ್ಯಭಾರಮನಾಕುಮಾರವರಂಗೆ ಕೊ
ಟ್ಟಾವಗಂ ಬಳಿಕಾತರ್ ಮಾಳ್ಪುದು ಘೋರವೀರತಪಂಗಳಂ ॥ ೩೯

[ಎಂದಾಪ್ರಧಾನರುಂ ತಾನುಂ ಮೃದುವಚನಂಗಳಿಂ ಲಲ್ಲೆಗೆಯ್ದುಂ ತಾನುಮೊಡಂಬಡಿಸಿ ಕುಮಾರಂಗೆ ಪಟ್ಟಮಂ ಕಟ್ಟಿ ಧರಾಭಾರಮಂ ಕೊಟ್ಟು ಮಗನ ಮೊಗಮಂ ನೋಡಿ]² ೪೦

---

1 ಎಂಬುದುಂ ಚಂದ್ರಾಭಮಹಾ (ಗ)   2 ಎಂದೊಡಂಬಡಿಸಿ (ಗ)

ಚಾರುಚರಿತ್ರನಪ್ಪುದು ಗುಣಾನ್ವಿತನಪ್ಪುದು ಧರ್ಮದೊಳ್ಸದಾ
ಚಾರನೆನಿಪ್ಪುದುಜ್ಜ್ವಲಜಿನೇಂದ್ರಪದದ್ವಯಭಕ್ತನಪ್ಪುದಿ
ನ್ನಾರುಮೆನುರ್ಕಿ ಸೊರ್ಕಿ ಸಲೆ ನೋಯಿಸದಿರ್ಪುದು ಜೈನಯೋಗಿವೃಂ
ದಾರಕರಲ್ಲಿ ಭಕ್ತಿಭರದಿಂ ನೆಱೆ ತೋಱುವುದುತ್ತರೋತ್ತರಂ ‖ ೪೧

[ಮತ್ತಂ 'ದೇವ ನೀಂ ಕೊಟ್ಟ ಕುನ್ನಿ ಬಳೆವೆಳಯ ನಾಯಾಯ್ತಂ' ಬನಾಱ್ನುಡಿಯುಂ ನನ್ನಿವೊಡದೆ, ತಾವರೆಯೆಲೆಯ ಮೇಲಣ ನೀರಂತೆ ಸಂಸಾರದೊಳಪ್ಪ ದುಃಖಮಂ ಪಾಪಮಂ ಪೊರ್ದದೆ, ಸಿಪ್ಪಿನೊಳ್ ಪುಟ್ಟಿಯುಂ ಮುತ್ತಾಸಿಪ್ಪಿಂದಂ ತಾಂ ಭಿನ್ನನಂತಂತೆ ನೀನುಮೆನ್ನಿಂದಂ ಸಕಲಗುಣಂಗಳೊಳಂ ಧರ್ಮದೊಳಂ ರಾಜನೀತಿಯೊಳಂ ಜಿನಭಕ್ತಿಯೊಳಂ ಮಿಗಿಲಪ್ಪುದೆಂದು ಬೇಡಿಕೊಂಡು ಬುದ್ಧಿವೇೞ್ದು ‖][1] ೪೨

ತುಱಿಲಾಳ್ಕನ್ನಿ ಸದಾಳ್ದನಂ ಸುಚರಿತಂ ದುಷ್ಕರ್ಮಮಂ ಸಜ್ಜನರ್
ಪೞಿಯಂ ಜಾರೆಯನಾಯುಮುಳ್ಳ ಪುರುಷಂ ಸಿರ್ವ್ಯಸನಂ ಸೂಳೆಯರ್
ಖಳನಂ ಧರ್ಮಪರರ್ ವಿಶೇಷಮಱಿವಂ ಮಿಥ್ಯಾತ್ವಮಂ ಧಾರಿಣೀ
ತಳದೊಳ್ ಕೇಳ್ಬಿಡುವಂತೆ ರಾಜ್ಯದಳಿಪಂ ಬಿಟ್ಟಂ ಖಗಾಧೀಶ್ವರಂ ‖ ೪೩

ಅಂತು [ಸಕಲ] ರಾಜ್ಯಮುಮಂ ತೊಱೆದು ಪುರದಿಂ ಪೊಱ ಮೆಟ್ಟು ವಿಮಾನಾರೂಢನಾಗಿ ಪಾಂಡ್ಯದೇಶದ ದಕ್ಷಿಣಮಧುರೆಗೆ ಬಂದು [ಪೊಱಪೊೞಲೊಳ್ ನಿಂದು — ೪೪

ಮಿಳಿರ್ವ ಪತಾಕೆಯಿಂ ಕುಳಿರ್ವ ನಂದನದಿಂ ತಳರ್ವಂಚೆಯಿಂ ಬೆತಂ
ಗಳವಡೆ ರತ್ನದೀಧಿತಿಯೊಳೊಂದಿ ಪಳಂಚುವ ಬಳ್ಳಿಮಾಡದಿಂ
ಕಳಸದ ಮತ್ತವಾರಣದ ಶೋಭೆಗಳಿಂ ಕಡುರಯ್ಯಮಪ್ಪ ನಿ
ರ್ಮಳಜಿನಮಂದಿರಂಗಳ ವಿಳಾಸಮನಚ್ಚರಿವಟ್ಟು ನೋಡಿದಂ ‖ ೪೫

ಅಂತು ನೋಡುತ್ತುಂ ಭಕ್ತಿಭರತಯಿಂ ಕಯ್ಯಂ ಮುಗಿದು ಪೊೞಲೊಳಗೆ ಪೊಕ್ಕು ಮೆಲ್ಲಮೆಲ್ಲನೆ ಬರುತ್ತುಂ, ೪೬

1 ಎಂದುಬುದ್ಧಿಯುಂ ಪೇಳ್ದು (ಗ)

ಕಿವಿವರಮೆಯ್ದೆ ನೀಳ್ದ ಕಡೆಗಣ್ ಕರಮಕ್ಕಱನೀಯೆ ರಾಗಮಂ
ವಿವಶಿಸೆ ಪುರ್ವಿನುರ್ವು ಸುಲಿಪಲ್ ಮನಮಂ ಸೆರೆಗೆಯ್ಯೆ ಸೋಲಮಂ
ಸುವಿಟಜನಕ್ಕೆ ಮಾಡೆ ವದನಾಂಬುರುಹಂ ಜಿನನೋಲಗಕ್ಕೆ ಬ
ರ್ಪ ವನಜಪತ್ರನೇತ್ರೆಯರನಾಖಚರಂ ಮನವೊಲ್ದು ನೋಡಿದಂ ॥ ೪೭

ತರಳವಿಶಾಲಲೋಚನದ ಬೆಳ್ಪು ಕುರುಳ್ಗಳ ಚೆಲ್ವು ಭೂಷಣೋ
ತ್ಕರದ ಬೆಡಂಗು ತಳ್ವಸಿಱ ಭಂಗಿ ಕುಚಂಗಳ ತೋರ್ಪು ಕಣ್ಗೆವಂ
ದಿರೆ ವಿಟರಂ ಪಡಲ್ವಡಿಸಲೆಂದು ಮನೋಜನ ದಾಳಿ ಬರ್ಪವೊಲ್
ಪರಮಜಿನೇಂದ್ರನೋಲಗಕೆ ಬರ್ಪ ವಿದಗ್ಧೆಯರೊಪ್ಪಿ ತೋಱಿದರ್ ॥ ೪೮

ಅಂತು ಜಿನಾಧೀಶ್ವರನೋಲಗಕ್ಕೆ ಬರ್ಪ ವಿಲಾಸಿನಿಯರಂ ನೋಡುತ್ತುಂ ಸಂತೋಷದಿಂ ಬರುತ್ತುಂ, ೪೯

ಪೊನ್ನ ತೋರಣಮಿಂದ್ರನೀಲದ ರಂಗಮಾದನಯುಂಗುಡೀ (?)
……ನೀಲಮೇಘಮನೊಪ್ಪಿ ಮುತ್ತಿನ ಸೂಸಕಂ
ಚೆನ್ನಮಾಗಿರೆ ತಾರೆಯಂ ನೆಱೆ ಪೋಲೆ ಜೈನಗೃಹಂಗಳ
ತ್ಯನ್ನತಿಕ್ಕೆಯು ನಾಳ್ದಮಂಬರದಂತೆ ರಂಜಿಸಿ ನಾಡೆಯುಂ ॥ ೫೦

ಕನಕದ ತೋರಣಮುಂ ಮು
ತ್ತಿನ ತೊಳಗುವ ರಂಗವಲ್ಲಿಯುಂ ಪಂಚಮಹಾ ।
ಧ್ವನಿನಾದಮುಮೊಳ್ಪೆಜೆಯು
ಮನವರತಂ ಬಸದಿಯೋಳಯೊಳ್ ರಂಜಿಸುಗುಂ ॥ ೫೧

ಮತ್ತಮಮರಲೋಕದಿಂ ತತ್ಪುರಮಂ ನೋಡಲೆಂದು ಧರೆಗವತರಿಸಿ ತಂತಮ್ಮ ವಿಮಾನಂಬರಸಿರ್ದರೆನಿಸಿ ತರತರದಿಂದಿರ್ದ ಜಿನಾಲಯದೋಳಗಳಮವೆಱ ಮುಂದಣ ನಾನಾರತ್ನರಚಿತಮಪ್ಪ ಬಾಗಿಲ್ವಾಡಂಗಳಂ ಅವೆಱ ಮುಂದಣ ಚಂದ್ರಾದಿತ್ಯರ ಬೆಳಗಿನೊಳ್ ಮಚ್ಚರಿಸಿ ತೊಳಗುವ ಮಕರತೋರಣಂಗಳಂ ಚೀನಮಹಾಚೀನದ ಮಹಾರ್ಘ್ಯ

ಜಂಗಳಿಂ ಸಚಿತ್ರಯ ನಿಪಳದ ಶೋಭೆವೆತ್ತ ಸೋಪಾನಂಗಳಿಂ ಮೋಕ್ಷ
ಶ್ರೀಯ ಸಿಂಹಾಸನಮೆನಿಸಿದ ಪ್ರಾಕಾರಂಗಳಿಂ ನೋಡುತ್ತುಮಿರ್ಪ
ನ್ನೆಗಂ ॥] [1] ೫೦

ತುರಗದಳಂಗಳಕ್ಕಾಲದೊಳಿಂ ಬರೆ ಮುಂದೆ ಮಹಾವಿಭೂತಿಯಿಂ
ಪರಿಯೆ ಪತಾಕೆಗಳ್ ನೃಪಕುಮಾರಕರೋಜೆಯಿನೆಯ್ದೆ ಸುತ್ತಲುಂ
ಬರೆ ತಡೆ ತಳ್ತ ನಂದನವನಾಕೃತಿಯಂತಿರೆ ತೂರ್ಯನಾದಮೊ
ಪ್ಪಿರೆ ಗಣಿಕಾಳಿ ಚಾಮರಮನಿಕ್ಕೆ ಸುರಾಧಿಪನಂತೆ ಲೀಲೆಯಿಂ ॥ ೫೩

[ತತ್ಪುರಾಧೀಶ್ವರನಪ್ಪ ಚಿತ್ರವಾಹನಮಹಾರಾಜಂ ತನಗೆಲ್ಲ ಜಿನಾ
ಲಯಂಗಳಂ ಕಾಣ್ಬುದು ನಿತ್ಯವ್ರತಮಪ್ಪುದರಿಂ ಜಿನಭವನಂಗಳ
ಲ್ಲಮಂ ಪೂಜಿಸುತ್ತೆ ಬಂದು ಭೂತಹಿತಮೆಂಬ ತಮ್ಮನ್ವಯದ ಬಸದಿಯ
ನೆಯ್ದೆ ॥ ೫೪

ಕರಮೊಪ್ಪರದಿಂ ಬಹಮಂ
ಗುರುಮುದದಿಂ ಪೊನ್ನ ರಾಶಿ ಗೋರೆಕೊಂಡಂತಾ ।
ಧರಣೀನಾಥಂ ಭಕ್ತಿಯ
ಭರದಿಂ ಬಲವಂದು ಮೊಱಸೂಱ ಜಿನಗೃಹಮಂ ॥ ೫೫

ನಿಷಿದ್ಧಿಯಿಂದೊಳಗಂ ಪೊಕ್ಕು— ೫೬
ಇರುವಂತಿ ಜಾಜಿ ಪಾದರಿ
ಸರಸಿರುಹಂ ಸುರಗಿ ಮೊಲ್ಲೆ ಪೊಸಸಂಪಗೆಯಾ ।
ಅರಲಿಂ ಭಕ್ತಿಯಿನಾತಂ
ಪರಮಜಿನೇಶ್ವರನ ಪಾದಮಂ ಪೂಜಿಸಿದಂ ॥ ೫೭

ಮತ್ತಂ ಪಲವುರತುನದ ಮಣಿಹಾರಂಗಳಿಂದಂ ಚಾಮೀಕರಪು
ಷ್ಪಮಾಲೆಗಳಿಂದಂ ಮುತ್ತಿನ ಲಂಬಣಂಗಳಿಂದಂ ತಾನೆ ತನ್ನ ಕಯ್ಯಾ
ಪೂಜಿಸಿ ಬೞಿಕ್ಕಂ— ೫೮

---

1 ಪುರದ ಚಲ್ವುಮಂ ಸುತ್ತಿ ಬಳಸಿದ ಬಸದಿಗಳ ವಿಳಾಸಮುಮಂ ನೋಡು
ತ್ತುಮಿರ್ಪನ್ನೆಗಂ (ಗ)

ಸುರರಾಜಂ ಪರಮಜಿನೇ
ಶ್ವರನಂ ತನ್ನೊಂದು ಭಕ್ತಿಯಿಂದೋಲಗಿಸಲ್ ।
ತಿರೆ ಪಾಂಡ್ಯಾನ್ವಯಕುವಲಯ
ಶರನಿಧಿನಂದನನುಮಪ್ಪು ಚೆಲ್ವಪ್ಪಿನೆಗಂ ॥ ೫೯

ಸುರಿದಪುದು ರಸದ ಮಳೆ ಭೋ
ಗರೆದು ರಸಾಯನದ ಪೆರ್ವೊನಲ್ಪರಿದಪುದ ।
ಚ್ಚರಿಯಾಗಮೃತದ ತೊಱೆಯು
ಬ್ಬರಮಾಗಲ್ ತೀವಿ ಬಂದುದೆಸಿಪತಿಶಯದಿಂ ॥ ೬೦

ಕಿಱಿದುಬೇಗಮೋಲಗಂಗೊಟ್ಟಿರ್ದು ತದನಂತರಂ ತ್ರೈಲೋಕ್ಯಮಾಂಗಲ್ಯನಂ ಕಣ್ಣಾರ ನೋಡಿ ಮನದ ಪೆರ್ಚಿಂದಂ ಕರಕಮಳಂಗಳಂ ಮುಗಿದು ನಿಂದಿರ್ದು][1] ॥ ೬೧

ಶ್ರೀಯ ಸಿವಿಕರ್ಗಂ ಸುಖದಳುರ್ಕೆಗಮುನ್ನತಕೀರ್ತಿಗಂ ಯಶ
ಶ್ರೀಯೊದವಿಂಗಮೊಪ್ಪುವಳವಿಂಗೆ ಮಹಾಬಳಕಂತು ಸದ್ವಚ
ಶ್ರೀಯೊದವಿಂಗಮಾಟಪೊಡೆ ಪೂಜಿಸು ನಿರ್ಮಳನಾಗಿ ನಿರ್ವೃತಿ
ಶ್ರೀಯುವತೀಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೨

ಚಾರುವಿಲಾಸನೇತ್ರೆಯರನುತ್ಪಲಗಂಧಿಯರಂ ಮನೋಹರಾ
ಕಾರೆಯರಂ ವಿದಗ್ಧಸುರಸುಂದರಿಯರ್ಕಳನಾಗಳುಂ ಸಪಿ
ಸ್ತಾರದೊಳೊಂದ ಭೋಗಿಸುವೆನೆಂಬೊಡೆ ಪೂಜಿಸು ಕೂಡೆ ನಿರ್ವೃತಿ
ಶ್ರೀರಮಣೀಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೩

---

1 ಚಿತ್ರವಾಹನ ಮಹಾರಾಜನೆಂಬನಾ ಪುರಮನಾಳ್ವರಸಂ ಪಾಂಡ್ಯವಂಶತಿಳಕನೆಲ್ಲಾ ಬಸದಿಗಳುಮಂ ಮಾಡಿಸಿಯುರ್ಚಿಸುತ್ತುಂ ತಮ್ಮನ್ವಯದ ತ್ರಿಭುವನತಿಲಕಮೆಂಬ ಬಸದಿಗೆ ಬಂದು ಮಾಣಿಕ್ಯದ ಮಣಿಸರಂಗಳಿಂದಂ ಪೊನ್ನಪುಷ್ಪಮಾಲೆಗಳಿಂ ಮುತ್ತಿನ ಲಂಬಣದಿಂದಂ ತಾನೆ ತನ್ನ ಕಯ್ಯಾರ ಪೂಜಿಸಿ ಕಯ್ಗಳಂ ಮುಗಿದು ನಿಂದಿರ್ದು (ಗ)

ಚೋಳನ ಮೇಲೆ ನೀಡಿ ಕರಮಂ ಪದಪಲ್ಲವಮಂ ಕಳಿಂಗಭೂ
ಪಾಲನ ಮೇಲೆ ನೀಡಿ ಮಗಧಾವನಿಪಾಲಕನಂ ಮಲಂಗಿಸಲ್
ಲೀಲೆಯೊಳಿರ್ಪೆನೆಂಬ ಮನಮುಳ್ಳೊಡೆ ಪೂಜಿಸು ದೇವಪಾಲಭೂ
ಪಾಲಕವಂದ್ಯನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೪

ಆದರದಿಂದಮೆಯ್ದೆ ಪರಿಚಾರಕರಿತ್ತಮಧಾರಿಸೆಂದು ಹಾ
ರಾದಿದುಕೂಲಮಾದಿಪರಭೂಷಣಮಂ ನುತವಸ್ತ್ರಮಂ ಮಹಾ
ಹ್ಲಾದದಿನುಟ್ಟುತೊಟ್ಟು ಸುಖಮಿರ್ಪೊಡೆ ಪೂಜಿಸು ನಚ್ಚಿ ಮೆಚ್ಚಿ ಕೂ
ರ್ತಾದರದಿಂದಮೊಲ್ದು ದುರಿತಾರಿಚತುರ್ಮುಖಶಾಂತಿನಾಥನಂ ॥ ೬೫

ಭೋಗಕೆ ರೂಪಿನುನ್ನತಿಗಮಿಂದ್ರನರೇಂದ್ರಮಹಾವಿಭೂತಿಗಂ
ಚಾಗದ ವೀರದೇಳ್ಗೆಗಮನಂತಸುಖಕ್ಕಮಿಳಾತಳಕ್ಕಗು
ರ್ವಾಗೆ ಜಸಕ್ಕಮಾಟಪೊಡೆ ಪೂಜಿಸು ನಿಚ್ಚಲನಾಗಿ ನಿರ್ವೃತಿ
ಶ್ರೀಗಧಿನಾಥನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೬

ಧಾರಿಣಿಯೊಳ್ಸಮಸ್ತತಿರಿಕಂಗಳೊಳಂ ನೆಱೆ ಪುಟ್ಟಿ ಸತ್ತು ಸಂ
ಸಾರಸಮುದ್ರದೊಳ್ತಿರಿಯದಿಂದ್ರವಿಭೂತಿಯೊಳಿರ್ಪೆನೆಂಬೊಡಾ
ಚಾರದೊಳೊಂದಿ ಶುದ್ಧಮನದಿಂ ನೆಱೆ ಪೂಜಿಸು ಕೂರ್ತು ನಿರ್ವೃತಿ
ಶ್ರೀರಮಣೀಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೭

ನೋವಿನೊಳಿರ್ಪುದೊಳ್ಬಳವೆ[1] ಕಿರ್ಚಿನೊಳಿಕ್ಕುವ ಸೀಳ್ವ ಪೋೞ್ವ ಕೊ
ಯ್ದೋವದೆ ಬೈವ ಪೊಯ್ವ ನರಕಂಗಳ ದುಃಖದೊಳೊಂದದಾಗಳುಂ
ದೇವವಿಭೂತಿಯೊಳ್ನೆರೆವೆನೆಂಬೊಡೆ ಪೂಜಿಸು ಕೂರ್ತು ನಿರ್ವೃತಿ
ಶ್ರೀವನಿತೇಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ॥ ೬೮

ಆದಿಯನಾದಿಗೊಂಡು ಬಹುದುಃಖಮನೂಡುವ ಕರ್ಮವೃಕ್ಷಮಂ
ಛೇದಿಸಿ ವೈರಿಮೋಹಮನಡರ್ತಿಱಿದುನ್ನತಿವೆತ್ತು ಮೋಕ್ಷಲ

[1] ಮುಱಿವ (ಗ)

ಕ್ಷ್ಮೇದಯಿತೇಶನಾಗಿ ಸುಖಮಿರ್ಪೊಡೆ ಪೂಜಿಸು ಕೀರ್ತಿ ನಿರ್ವೃತಿ
ಶ್ರೀದಯಿತೇಶನಪ್ಪ ದುರಿತಾರಿಚತುರ್ಮುಖಶಾಂತಿನಾಥನಂ ‖ ೬೯

ಎಂದು ಸ್ತುತಿಶತಸಹಸ್ರಂಗಳಿಂ ಚತುರ್ಮುಖಶಾಂತಿನಾಥನಂ ಸ್ತುತಿಯಿಸಿ ಸಮಸ್ತಗುಣಭಟ್ಟಾರಕರಂ [1] ವಂದಿಸಿ ನಿತ್ಯವ್ರತಂಗಳಂ ಕೈಕೊಂಡು [ಸಿದ್ಧಸೇಸೆಯಂ ಕೊಂಡು] ಕಿಱಿದುಬೇಗಂ ಧರ್ಮಮಂ ಕೇಳ್ದು [ಚಿತ್ರವಾಹನಮಹಾರಾಜಂ ತನ್ನರಮನೆಗೆ ಪೋದನಿತ್ತಲ್ ಚಂದ್ರಾಭಮಹಾರಾಜಂ ಪಾಂಡ್ಯಕುಲಚೂಡಾಮಣಿಯ ಸವ್ಯಕ್ತ್ವಕ್ಕೆ ಮೆಚ್ಚಿ ತನ್ನೊಳಿಂತೆಂದಂ ‖ ೭೦

ಕುಲದೊಳ್ಪಾಂಡ್ಯಮಹೀಶರಲ್ತೆ ಪಿರಿಯರ್ಭೂಪಾಲರೊಳ್ಮತ್ತಮಾ
ಕುಲಜರ್ಗಗ್ಗದ ಪೊಂಗೆ ಕಂಪೆನಿಪವೊಲ್ ದೇವಂ ಜಿನಾಧೀಶ್ವರಂ
ಕುಲದೈವಂ ಗಡಮೆಂದೊಡಿಂನೆಱಿಯೆ ಭಾಪಮ್ಮಿಮ್ಮ ಬಣ್ಣಿಪ್ಪರಾ
ರೆಲೆ ಭಾವಿಪ್ಪೊಡೆ ಪಾಂಡ್ಯಗೇಶಜರೆ ಧನ್ಯರ್ ನೋಡೆ ಭೂಚಕ್ರದೊಳ್ ‖

ಎಂದು ಮತ್ತಂ,] ೭೧

ಈ ನರೇಶ್ವರಧರ್ಮಬುದ್ಧಿಯುಮಂ ವ್ರತಂಗಳ ಪೆಂಪುಮಂ
ಹೀನಮಪ್ಪ ನೆಗೞ್ತೆಯೊಳ್ ಖತಿಯುನ್ನತಿಕ್ಕೆಯ ಗುಪ್ಪುಮಂ
ತಾನೆ ಕೇಳಗೆ ಪೇೞ್ದು ಮೋಳಯೊಳೂಪ್ಪುವೀಜಿನಬಿಂಬಮಂ
ದಾನರೇಶ್ವರನಟ್ಕಱಿಂ ಪೊಗೞ್ದಂ ಮಹೀವಳಯೇಶನಂ ‖ ೭೨

ಎಂದು ಪೊಗೞ್ದು ಪುರದ ಮಹಿಮೆಗೆ ಆಶ್ಚರ್ಯಂ ಬಟ್ಟು, ೭೪

ನೋಡದಿರನ್ಯಕಾಂತೆಯುರುವಂ ಪದೆದಕ್ಕಱನಂತೆ ಪೆರ್ಚಿ ಮಾ
ತಾಡದಿರೊಂದುಮಂ ಮಱೆದು ಪೆರ್ಬುಸಿಯಂ ದುರಿತಾನ್ವಿತರ್ಕಳೊಳ್
ಕೂಡದಿರೆಂಬ ಮಾತುಗಳನಲ್ಲದೆ ಕೇಳ್ಕದೃಷ್ಟಿಯೆಂದು ಮಾ
ತಾಡಿಸಬಾರದೀ ಪುರದೊಳೆಂದೊಡೆ ಧರ್ಮಮನೇನನೆಂಬುದೋ ‖ ೭೫

---

1 ಮುನಿಗುಪ್ತ ಭಟ್ಟಾರಕರಂ (ಗ)

ಎಂದು ಪುರದೊಳಾದ ಸತ್ಪುರುಷರುಮಂ ಪೊಗೞ್ದು — ೭೬

ಜಿನಭಕ್ತಿಯೊಳುರ್ವಿಯೊಳೀ
ತನೆ ಬಗೆವೊಡೆ ದೇವನೆಂದು ಕೈಕೊಂಡು ಜಗ |
ಜ್ಜನವೊಲ್ದು ಪೊಗೞೆ ಪಡೆದಂ
ಜನಾಧಿಪಂ ಪಾಂಡ್ಯದೇವನೆಂಬೀ ಪೆಸರಂ ‖ ೭೭

ಎಂದು ಮನದಚ್ಚಱಿಂ ಚಿತ್ರವಾಹನಮಹಾರಾಜನಂ ಪೊಗೞ್ದು ಜಿನ
ಭವನಮಂ ತ್ರಿಃಪ್ರದಕ್ಷಿಣಂಗೆಯ್ದು ನಿಷಿದ್ಧಿಯಿಂದೊಳಗಂ ಪೊಕ್ಕು ದರ್ಶ
ನಸ್ತುತಿಯಂ ಪೇೞ್ದು ಮುನಿಗುಪ್ತಭಟ್ಟಾರಕರಂ ಬಂದಿಸಿ ಪರಿವಿಡಿಯಿಂ
ದುೞಿದ ಮುನಿವರರಂ ಬಂದಿಸಿ ಕುಳ್ಳಿರ್ದರ್ ‖ ೭೮

ಮುನಿಕುಲಸರೋಜತರಣಿಗೆ
ಜಿನಸಮಯಾಂಬರನಿಶಾಕರಂಗನುಪಮಸ |
ಜ್ಜನವಂದಿತಂಗೆ ದುರ್ಗುಣ
ವನನಿಧಿಬಡಬಾನಲಂಗೆ ಖಚರ[illegible]ಂ ‖ ೭೯

ವಿನಯವಿನಮ್ರಮುಖನಾಗಿ ಕೈಮುಗಿದಿರ್ದ ತನ್ನ ಬಂದ
ಕಾರ್ಯಮಂ ಪೇೞ್ವುದುಂ ಮುನಿಗುಪ್ತಭಟ್ಟಾರಕರಿಂತೆಂದರ್ ‖][1] ೮೦

ಮಗನೆ ತಪಂ ಪೊಗ್ಗಲ್ಲದು
ಜಗದೊಳ್ ವೈರಾಗ್ಯಮಿಲ್ಲದಂಗಾತಪಮು |
ಜ್ಜುಗಮಂ ಮಾಡುಗುಮಲ್ಲದೆ
ಖಗೇಶ ಪೆಱತೊಂದುಸೌಖ್ಯಮಂ ಮಾಡುಗುಮೇ ‖ ೮೧

---

1 ರಾಜಭವನಕ್ಕೆ ಪೋ[illegible]ಂ ಚಂದ್ರಾಭಮಹಾರಾಜಂ ಪಾಂಡ್ಯನಂ ಪಲತೆ
ಱದಿಂ ಪೊಗೞ್ದು ಜಿನಾಲಯಮಮಂ ತ್ರಿಃಪ್ರದಕ್ಷಿಣಂಗೆಯ್ದು ನಿಸಿದಿಯಿಂದೊಳಗಂ ಪೊ
ಕ್ಕು ದೇವರಂ ವಂದಿಸಿ ಮುನಿಗುಪ್ತಭಟ್ಟಾರಕರಂ ವಂದಿಸಿ ತನ್ನ ಬಂದ ಕಾರ್ಯ
ಮನಱಿಪುವುದುಮವರಿಂತೆಂದರ್ (ಗ)

ಪಿಂಡಿಯುಂ ಬಿಡಿಸಪ್ರೋದ [1] ಮರುಳ್ ಖಂಡುಗೆಣೆಯನಾಂತು ಬಂದುದೆಂಬನಾಱ್ನುಡಿಯಂತೆ ಮರ್ಕಟವೈರಾಗ್ಯದಿಂ [ಶ್ರುತಿವಿಹೀನರಪ್ಪವರ್ ಸ್ವರ್ಗಾಪವರ್ಗ] [2] ಸುಖಮಂ ಬಯಸಿ ಜಿನದೀಕ್ಷೆಯಂ ಕೈಕೊಂಡು ತಪದ ಬೇವಸಕ್ಕಾಱದೆ ಪ್ರಚ್ಛನ್ನ [3] ದೋಷಿಗಳಾಗಿ [ಮಱುಭವದೊಳ್ಪಿರಿದಪ್ಪ ದುಃಖಮಂ ಪೊರ್ದುವರದಱಿಂ ॥] [4] ೮೨

[ನೀರುಂ ಪುಳ್ಳಿಯುಂ ಕಿಚ್ಚುಮ
ದಾರಯ್ವಂದಡುವ ಲಲನೆಯುಂ ಮಡಕೆಯುಂ ವಿ ॥
ಸ್ತಾರದೊಳೊಲೆಯುಮಿವೆಲ್ಲಮ
ದೋರಂತೊಡಗೂಡೆ ಕೂೞನಡುವಂತೆ ವಲಂ ॥ ೮೩

ಅದೆಂತೆಂದೊಡಷ್ಟಾವಿಂಶತಿಮೂಲಗುಣಮುಂ ಪದಿಮೂಱು ತೆಱದ ಚಾರಿತ್ರಮುಂ ದರ್ಶನಮುಂಬೆರಸು ಮೋಕ್ಷಮಂ ಸಾಧಿಸುವುದು ॥ ೮೪

ಇವಱೊಳಗೊಂದು ಗುಣಂ ಹೀ
ನವಾಗೆ ಕೈವಲ್ಯಮಿಲ್ಲ ಕೇಳದಱಿಂ ಭೂ ।
ಭವನದೊಳದಕ್ಕೆ ತಪದೊಳ್
ವಿವೇಕಿಯೆನಿಸಿದನೆ ನೆಗೞ್ವುದನಿತುಂ ಗುಣದೊಳ್ ॥ ೮೫

ಅದೆಂತೆಂದೊಡೆ ನೀರನುಂ ಪುಳ್ಳಿಯುಮಂ ಅಕ್ಕಿಯುಮಂ ಅಡವನುಮಂ ಕಿಚ್ಚುಮನೊಲೆಯುಮಂ ಮಡಕೆಯುಮಂ ಕೂಡಿಸುವಲ್ಲಿ ಇವಱೊಳಪೊಂದಿಲ್ಲದೊಡಂ ಕೂೞಾಗದೆ ಕಿಡುವಂತೆ ಮೂಲಗುಣಂಗಳೊಳೊಂದುಗುಣಮಾದೊಡಂ ಹೀನಮಾದೊಡೆ ಕೈವಲ್ಯಸುಖಂ ಸಮಸಿಸಲಱಿಯದು ॥ ೮೬

ಮೂಲಗುಣಮಾದಿಸಕಲಗು
ಣಾಳಿಯೊಳಂ ಕಿಡದೆ ನೆಗೞ್ವುದೇಗೆಟ್ಟತ್ತುಂ ।

---

1 ಪಿಡಿಸಪೋದ (ಗ) 2 ಮೋಕ್ಷ (ಗ) 3 ಗುಪ್ತ (ಗ)
4 ಸಂಸಾರವೃದ್ಧಿಯುಂ ಮಾಡಿಕೊಳ್ವರದಱಿಂ (ಗ)

ದೇಳಿಸಿಯೊಂದಱೊಳಂ
ಕೀಳಾದೊಡೆ ತನಗೆ ಪರದ ಸುಖಮದು ಕಿಡುಗುಂ ॥ ೮೭

ಪಲವುಂ ಶಾಸ್ತ್ರಮನೋದಿದ
ಬಲದಿಂ ಮೆಯ್ವೆರ್ಚಿ ಗರ್ವದಿಂ ಧರ್ಮದ ಪಂ ।
ಬಲನುೞಿದು ಪಿರಿಯರಪ್ಪರ
ನೆಲೆಯಂ ಕೈಕೊಳ್ಳದುದ್ಧತಂ ಮುಸಿಯಲ್ಲಂ ॥ ೮೮

ತನಗೆ ಸೊಗಯಿಸದ ವಸ್ತುಗ
ಳನಿತುಮನಿಂಬಾಗೆ ತೊಱೆದು ಪುಱುಡಿಸಿ ಪೆಱನಾ ।
ವನೊ ಪೊಲ್ಲಮೆಂದೊಡಂತಾ
ತನುಮಂ ಕೈಕೊಳ್ಳದಾತನುಂ ಮುಸಿಯಲ್ಲಂ ॥ ೮೯

ಕೂಸುಗಳಂ ಮುದ್ದಾಡಿಸಿ
ದೇಸಿಯ ಮಾತುಗಳನಾಡಿ ಪೆರ್ಚಿಸಿ ಪೆಱರಂ ।
ಲೇಸಾಗಿ ತನಗೆ ಜೊತ್ತಿಸು
ವಾಶಾಪರನೈದಲಾಱನುರುನಿರ್ವೃತಿಯಂ ॥ ೯೦

ಒಡನೆಯ ಋಷಿಯಂ ಕಳದೋ
ಗಡಿಸದೆ ಗೃಹಪತಿಗಮವನ ಪೆಂಡತಿಗಂ ನೇ ।
ರ್ಪಡೆ ಪೆಱರನಟ್ಟಿ ದೂಷಿಸಿ
ನುಡಿಪ ದಿಗಂಬರನಮೋಘಮೆಯ್ದಂ ಸುಖಮಂ ॥ ೯೧

ತಡೆಯದೆ ಜಿನಪೂಜೆಗಳಂ
ಕಿಡಿಸಿ ಮನಂಪೆರ್ಚಿ ತನ್ನ ಪಕ್ಷದ ಮನೆಗ ।
ಳ್ಗಡಿಗಡಿಗಟ್ಟುವ ಮುನಿಪಂ
ಕಿಡುಗುಂ ಪೇೞಲ್ಪ ದೇವಸಿಳಯದ ಸುಖಮಂ ೯೨

ನೀನೆಮ್ಮ ಗುಡ್ಡನ್ನೆ ಪೆಱ
ತೇನೆಂಬುದು ಪೆಱರ್ಗೆ ಭಕ್ತಿಮಾಡಲ್ವೇಡಂ ।
ದೇನೊ ಬಿಡೆ ಜಡಿದು ಮೋಹಿಪ
ಹೀನಗುಣಂಗೆಱಗಲಾಗದಱವುಳ್ಳ ನರಂ ॥ ೯೩

ಉಗುರಂ ಮಸೆಯಿಸಿ ಗುರುವಂ
ಬಗೆಯದೆ ಜಿನವಚನರಚನೆಯಂ ಮಱೆಯಿಸಿ ಕೆ ।
ಮ್ಮಗೆ ತಮ್ಮಿಚ್ಛೆಗೆ ಕಥೆಯಂ
ಬಗೆಗೊಳ್ಗಂತಂತೆ ಪೇಳ್ವನುಂ ಮುನಿಯಲ್ಲಂ ॥ ೯೪

ತನ್ನಯ ಸಮುದಯಮಂ ಪೊಗ
ೞ್ವನ್ನೆಱೆ ಕೈಕೊಂಡು ಪೆಱರ ಸಮುದಾಯಮನ ।
ತ್ಯನ್ನತಿಗಿಡೆ ಪಳಿಯುತ್ತಿ
ರ್ಪನ್ನಂ ನರಕಕ್ಕಮಿೞುಗುವೆಂಬುದು ಸತ್ಯಂ ॥ ೯೫

ಪೆಱರೊಳ್ಳಿದರಾದೊಡಮೇ
ತಱ ತಪಸಿಗಳೆಂದು ಪೞವನುಂ ತನ್ನವರಂ ।
ಪೆಱತೇಂ ದುರ್ಜನರಾದೊಡ
ಮುಱಿ ಮನದೊಳ್ಕೂರ್ತು ಪೊಗೞ್ವನುಂ ಮುನಿಯಲ್ಲಂ ॥ ೯೬

ಮೆಲ್ಲನೆ ಚರ್ಚಿಸಿ ನೀನಿವ
ರ್ಗಲ್ಲದೆ ಬೆಸಗೆಯ್ಯವೇಡ ಪೆಱರಿವರಿಂ ಬಿ ।
ಟ್ಟೊಳ್ಳಿದರಾರೀಧರೆಯೊಳ
ಗಿಲ್ಲೆಂದುಱೆ ನಚ್ಚಿಪಾತನುಂ ಮುನಿಯಲ್ಲಂ ॥ ೯೭

ಬಗೆವಂದೀಬಾಡೀಕೂ
ಱಗಣಿತರುಚಿಯಾದುವಕ್ಕ ನಿನ್ನಂತಾರೀ ।
ಜಗದೊಳಡಬಲ್ಲರೆನ್ನುತೆ
ವಿಗೆ ಪೊಗೞ್ದಂಬವನೆ ರುಷಿಯರೊಳ್ ಬೂತನಿಕಂ ॥ ೯೮

ಮತ್ತಂ] ಋಷಿಯರ ಗುಣಮಂ ಪೇೞ್ವೆಡೆ:-ಪಾದರಿಗೆಯ ದೂದವಿಯಂತೆ ಪೆಱರಂ ಸಂಕೇತಂಗೊಳಿಸದೆ, ಮನ್ನೆಯರಾಳಂತೆ ಕೋಳಂಗಾಸೆಗೆಯ್ಯದೆ, ಬಯಲ ನೀರಂತೆ ಮಾರ್ಗಂಬಿಟ್ಟು ನಡೆಯದೆ, ಕೋಣನಂತೆ ಇರ್ದ ಸಮುದಾಯಮಂ ಕದಡದೆ, ಕರಡಿಯಂತೆ ಪಿರಿಯರ ನುಡಿಗೆಡೆಮಾಯದೆ, ಪುಲ್ಲಯಂತೆ ಗುಣವಂತರ ಕೂಟಕ್ಕೆ ಜದರದೆ, ಒಡೆದ ಪಾಲಂತೆ ಮೂಲಗುಣಂಕಿಡದೆ, ನೀರೊಳ್ಪೊಕ್ಕೆಣ್ಣೆಯಂತೆ ಪೆಱರ ದೋಷಮಂ ಪರಪದೆ, ಪುಲಿಯ ಬಾಲದಂತೆ ಗುರುವಚನಮಂ ಮೀಱದೆ, ಮುಗಿಲಂತೆ ಪೊತ್ತುಗೊಂಡು ಬಣ್ಣಮಾಗದೆ, ಕೋಡಗದಂತೆ ಕಂಡಕಂಡರನೇಳಿಸದೆ, ದೇಸಿಗನಂತೇಕಾಕಿಯಾಗದೆ, ತೂಱೆಯೊಳ್ಮಂದನಂತೆ ಪರೀಷಹಕ್ಕೆ ನಡುಗದೆ, ಬೂತಿನಂತೆ ಪೆಱರವಗುಣಮಂ ದೂಱದೆ, ಸೂಳೆಯಂತೆ ಚೆನ್ನಂ ಮೆಱೆಸದೆ, ಬಾಲಕನಂತೆ ಪೊಲ್ಲಮಂ ಪಿಡಿಯದೆ, ಹಜ್ಜೆಯ [1] ಕಟ್ಟಿಗೆಯಂತೆ ಖಳರ ನುಡಿಗಳ್ಕಡದೆ, ಇೞಿವೊಲದ ನೀರಂತೆ ಕುಪಥಕ್ಕೆಱಗದೆ, ಪುತ್ತಿನಂತೆ ತಪದೊಳ್ಮೆಲಸಿಯನಾಗದೆ, ತಱಿಯದ ಮರನಂತೆ ವಕ್ರನಾಗದೆ, ಬಾಳೆಯಂತೆ ತಪದ ಕ್ಲೇಶಕ್ಕೆ ಬೆಂಡಾಗದೆ ಸಂಜೆಯಂತೆ ಪೊಲ್ಲ ವಸ್ತುವಿನೊಳ್ ರಾಗಿಯಾಗದೆ, ಉಕ್ಕಿನಂತತಿನಿಷ್ಠುರನಾಗದೆ, [2] ಪಱಿಯ ಸೀರೆಯಂತೆ ಗುಣದೊಳ್ ನೂನಮಾಗದೆ, ಕಾಗೆಯಂತೆ ಪೆಱರ್ಗೆ ಪೀಡೆಯಂ ಮಾಡದೆ, ನಾಯಂತೆ ಗೋತ್ರಕಲಹಮಂ ಮಾಡದೆ, [3] ತೊೞ್ತಿನಂತೆ ಪೆಱರ ವಶಮಾಗದೆ, ಕೂಲಿಯ ಬಂಟನಂತೆ ಬೆಲೆಯಂ ಪಾರದೆ [4] ದಾಱಿಕಾಱನಂತಟ್ಟಿಟ್ಟಿ ಪೋಗದೆ, ರಾಜಪುತ್ರನಂತೆ ಲೀಲೆಯಂ ಮೆಱೆಯದೆ, [ಸೂಳೆಮಂಡತಿಯಂತೊಲ್ದೊಲಿಸದೆ, ಗ್ರಹದಂತೆ ಬೇಡಿಕೊಂಡುಣ್ಣದೆ, ಮಕ್ಕಳಂತೆ ಕಾಡಿಯುಣ್ಣದೆ, ಅರಸಾಳನಂತೆ ನೋಯಿಸಿಯುಣ್ಣದೆ ಸೂಱೆಗಾಱನಂತೆ ಪೆಱರಂ ಕ್ಲೇಶಂಗೊಳಿಸದೆ, ಬಟ್ಟಗುತ್ತನಂತೆ ಉಪವಾಸಮಂ ತೋಱಿ ಕಾಡದೆ, ಭಟ್ಟನಂತೊಂದೊಂದಂ ತೋಱಿ ಬಯ್ಯದೆ], ವೈದ್ಯನಂತೆ ಕುತ್ತಮಂ ತೋಱಿ ಮುನಿ

[1] ಹಪ್ಪೆಯ (ಗ). [2] ತರಗೆಲೆಯಂತೆ ಸೂಚ್ಛದನಾಗದೆ (ಗ)

[3] ಮರಕಟವಕ್ಕಿಯಂತೆ ಪೊಳ್ಳಸನ ಮಾಡುತ್ತಿರದೆ (ಗ).

[4] ಬೆಲೆಗೆ ಸಾಡದೆ (ಗ).

ಯುದೆ, ತೊಱೆಯಂತೆ ಮೞಲುಮಂ ತೋಱಿ ಬೆರ್ಚಿಸದೆ, ಕಿರ್ಚಿನಂತೆ [1] ಅಡಕಮಂ ತೋಱಿ ನಂಬಿಸದೆ, ದಾೞಿಯಂತೆ ಡಾಹಮಂ ಮಾಡಿ ಕಿಡಿಸದೆ, [ಪೊೞಲಂ ಪುಗುವುಡುವಿನಂತೆ ಜಿನೇಂದ್ರಮತಮಂ ಪತ್ತುವಿಕ್ಕದೆ,] ಬಡವನಂತೆ ಮನ್ನಣೆಗಾಸೆಗೆಯ್ಯದೆ, ವ್ಯಂತರನಂತೞಿವುೞಿಕೆಗೆಱಗದೆ, ದ್ರೋಹರಂತೆ [2] ಗುಜುಗುಜುಗೊಳ್ಳದೆ, ಪೆರ್ಗಣದಂತೆ [ಪೊಸಮುಷಿಗೆ] ಗುಱುಗುಱಿಸದೆ, [ಪುಲಿಯಂತೆ ಪೆಱಗುರ್ಪದ್ರವಮಂ ಮಾಡದೆ ಮರಕುಟುಕಕ್ಕಿಯಂತೆ ಬಾಯಂ ಬಡಿಯದೆ,] ತುಂಬಿಯಂತೆ ಕುಸುಮಪ್ರಿಯನಾಗದೆ, ತಱಗೆಲೆಯಂತೆ ಅಲ್ಲಲ್ಲಿಗೆ ಪಾರದೆ, [3] ತಳಾಱನಂತೆ [ಪೆಱರ] ಪೊಲ್ಲಮೆಯುಂ ಪಾರದೆ, [ಸೂಳೆಯ ಮನೆಯ ಗಿಳಿಯನಂತೆ ತನ್ನನೊಲ್ಲದರಂ ಪೞಿದು ಬಯ್ವರಂ ಪೊಗೞದೆ,] ಪಾವಿನಂತೆ ಗೀತಕ್ಕೆಱಗದೆ, ಪುಲುಬೂತಿನಂತೆ ಕಂಡರನೇನಾನುಮಂ ಬೇಡುತ್ತಿರದೆ [4], ಇಱುಂಪೆಯಂತೆ ಕಂಪಿಗೆಱಗದೆ, ಗಾಣದೆತ್ತಿನಂತೆ [ನಿಯಮಮಂಗೆಟ್ಟು ತೊೞಲುತ್ತಿರದೆ, ಆಲದ ಬಿೞಲಂತೆ ನೆಲಕ್ಕೆಱಗದೆ, ಮರದ ಬಿೞಲಂತೆ ಪೊಂಗೆಱಗದೆ, ಬಿಲಾಱನಂತೆ ನಾರಂಗಾಸೆಮಾಡದೆ; ಹಂಸೆಯಂತೆ ಸಾರಗ್ರಾಹಿಯುಂ, ಶರತ್ಕಾಲದ [5] ತೊಱೆಯಂತೆ ನಿರ್ಮಳನುಂ, ಸಹಸ್ರಕಿರಣನಂತೆಲ್ಲರ್ಗಮೇಕರೂಪನುಂ, [ತಂ] ಗಾಳಿಯಂತೆ ಮೃದುಗಮನನುಂ, ಸಮುದ್ರನಂತೆ ನಿಸ್ಸಾರದೂರನುಂ, ಕೌಂಗಿನಂತೆ ವಕ್ರಗುಣರಹಿತನುಂ, [6] ಭಯದ ಬಟ್ಟೆಯೊಳ್ ಪೋಪನಂತೆ ಸಂಸಾರಭೀತನುಂ, ತಂತ್ರಪಾಲನಂತೆ ಗುಣಪಾಲನುಂ, ಬಲ್ಗೊಂಟೆಯಂತೆ ಮಿಥ್ಯಾತ್ವಕ್ಕಭೇದ್ಯನುಂ, ಮುತ್ತಿನ ಸತ್ತಿಗೆಯಂತೆಲ್ಲಾದೆಸೆಯೊಳ್ ಸೇವ್ಯನುಂ, ಪಡೆವಳನಂತೆ ಸಂವರಣಕಾಱನುಂ, ಸತ್ಪುರುಷನಂತೆ ನಿರ್ಮತ್ಸರನುಂ, ಶರ್ಕರೆಯಂತೆ ನಿಷ್ಕಷಾಯನುಂ, ಕರುಣಾಳುವಪ್ಪರಸಿನಂತೆ ತ್ರಿದಂಡವರ್ಜಿತನುಂ, [ಮಱಿಯಂತೆ ಸಕಲ

---

1 ಚಕ್ಕಿನಂತೆ (ಗ). 2 ಪೊಲೆಸೂಳೆಸೋಲ್ತಂತೆ. (ಬ. ಕ.)

3 ಕಾವೇರಿಯ ನೀರಂತಲ್ಲಲ್ಲಿಗೆ ಪರಿಯದೆ (ಗ)
ಪೆಱರಾರುಮಂ ನೆನೆಯದೆ (ಬ. ಕ.)

5 ಮಾಗಿಯ (ಗ) 6 ನೇರಿದನುಂ (ಗ)

ಜೀವನನುಂ,] ಯುದ್ಧಸನ್ನದ್ಧನಂತೆ [1] ವೀರನುಂ, ಬುದ್ಧಿಶಾಲಿಯಂತಾ ರೈಕೆ [2] ಯುಳ್ಳನುಂ, ದೂರದರ್ಶಿಯಂತೆ ಮೇಲನಱಿವನುಂ, ಬಲ್ಮಂತ್ರಿಯಂತೆ ಪ್ರಮಾದರಹಿತನುಂ, [3] ಮಂದರದಂತೆ ಕ್ಷಮಾನ್ವಿತನುಂ, ಕುತ್ತಂಗುೞಿಯಂತೆ ಹಿತಾಹಾರನುಂ, ಚಂದ್ರನಂತೆ ಶಾಂತರೂಪನುಂ, ವಿವಾಹಕಾಲದಂತೆ ಶುಭೋದಯನುಂ, ಮಂಗಲಚರಿತನಂತೆ [4] ಕಲ್ಯಾಣವಚನನುಂ, ನೀತಿಪರನಂತೆ ಲೋಕ [ಸ್ವರೂಪ] ಜ್ಞನುಂ, ದಂಡಂ ನಡೆಯಿಸುವನಂತೆ, ದೇಶಜ್ಞನುಂ, ಅವಧಿಜ್ಞಾನಿಯಂತೆ ಸಕಲಾಂತರಂಗಜ್ಞನುಂ, [ಮನೆವರ್ಗಡೆಯಂತೆ ಬೇಸಱಂ ಮಾಡದನುಂ, ಬಾಣಸಿಗನಂತೆ ಪರಿಚ್ಛೆಯನಱಿವನುಂ, ಗಜವಾಹಕನಂತೆ ಮುಂದಱಿವನುಂ, ತುರಗಾರೂಢನಂತೆ ಬಟ್ಟೆಯನಱಿವನುಂ] ಪಡುಗೋಲನೇಱಿದನಂತಡಕಮುಳ್ಳನುಂ, ರಾಜಸೇವಕನಂತಡಕವೆಂತನುಮಪ್ಪುದು ॥ ೯೯

[ಮುನಿಯದಿರ್ಪುದು ಧರ್ಮದೊಳ್ ವೃಥನಪ್ಪುದಾಗಮಮಂದದಮಂ
ನೆನೆಯುತಿರ್ಪುದು ಪೊಲ್ಲರೊಳ್ಕೆಳಗೊಳ್ಳದಿರ್ಪುದು ಶಿಷ್ಟರೊಳ್
ವಿನಯಮಂ ಪ್ರತಿಪಾಲಿಸಿರ್ಪುದು ಜೀವರಕ್ಷಕನಪ್ಪುದಾ
ಗಮಮನೋವದೆ ಪುಚ್ಚಿ ಚರ್ಚಿಸದಿರ್ಪುದೊಯ್ಯನೆ ಪಾಪದೊಳ್ ॥ ೧೦೦

ಜಿನವಚನಮೆಂತುಟಂತುಟು
ಮನನನುನಯದಿಂ ಪೇೞದಂತೆ ತನ್ನಿಚ್ಛೆಗೆ ಕೇ ।
ಳ್ಮನೆ ತಟ್ಟಗಱಿಪಿ [5] ಪಿರಿರಂ
ತನಗೆ ವಶಂಮಾೞ್ಪನೆಯ್ದುಗುಂ ಸುಗತಿಯಂ ॥] ೧೦೧

ಪೆಱರವಗುಣಮಂ ಕಂಡೊಡೆ
ಯುಱೆಯುಟ್ಟು ತಗುಳ್ದು ದೂಱಪೇಡವರ[illegible]ವರ್ ।
ಪೆಱರೇಗೆಯ್ದೊಡಪೋಂ ತಾಂ
ಕಱೆಮಱೆಯುಣವಿಲ್ಲದಂತು ನೆಗೞ್ವುದು ಮುನಿಪಂ ॥ ೧೦೨

---

1 ನಿಚ್ಚಟಗಲಿಯಂತೆ (ಗ)   2 ಏಗೆಯುಳ್ಳನಂತಾರ್ಯ್ಕೆ (ಗ)
3 ಬಲ್ಮೈಕ್ಕಲಂತೆ ಭಯಸ್ಥಿತನುಂ (ಗ)   4 ಮಂಗಲವೃತ್ತರಂತೆ (ಗ)
5 ಕಟ್ಟಗೞಿಪಿ (ಬ. ಕ.)

[ಪೊಲೆಯರ್ಬಾಡಿದ ಪಣಿಯೊಳೆಣೆಗಾಡುವ ಪಗರಣಿಗರಂ ಕಂಡವೆ ರ್ನಗುವರಲ್ಲದೆಯವರಾಟಕ್ಕೆ ಲಕ್ಷಣವಂ ನೋಡರ್; ಕೃತ್ಯದೊಳ್ ಪರೀಕ್ಷೆಯುಂ ವೇೞ್ಪಂತೆ, ಮಿಥ್ಯಾಜ್ಞಾನಿಗಳ ಕುಹೇತುದೃಷ್ಟಾಂತಕ್ಕೞಗಿ ದುಶ್ಚಾರಿತ್ರದೊಳ್ನಗಬ್ಬರಲ್ಲಿಯು ದೋಷಮಂ ಪಾರರ್, ತತ್ವದೊಳ್ ದೃಢರಾಗಿ ಸದಾಚಾರದೊಳ್ನಗಬ್ಬರಲ್ಲಿ ಗುಣದೋಷಮನಱಿಸುವರದಱಿಂ ॥] ೧೦೩

ಭಾವಿಸುವೊಡಂತರಂಗಂ
ಕೇವಳವೇ ಸಾಲ್ಗುಮೊಂದೆ ಬಹಿರಂಗಮೆನಿ।
ನ್ನೇವುದಣಮೆಂದು ಬಿಡುವಾ
ಗಾವಿಲನಾರ್ತಪನೆ ಕಿಡಿಸಲಘಸಂತತಿಯಂ [1] ॥ ೧೦೪

ನೆಱೆ ಬಹಿರಂಗಮೆ ಸಾಲ್ಗುಂ
ದಱಿಯದೆ ಪೆರ್ಚಿಂದಮಂತರಂಗದ ದೆಸೆಯಂ ।
ಮಱೆದು ಮತಿಗೆಟ್ಟು ಮಾಡುವ [2]
ಕುಱಿ ತಾನಾರ್ತಪನೆ ಕಿಡಿಸಲಘಸಂತತಿಯಂ ॥ ೧೦೫

ಅದಱಿಂದಂತರಂಗದೊಳಂ ಬಹಿರಂಗದೊಳಂ ಕೂಡಿ ನೆಗಬ್ಬ [ಬುದ್ಧಿವೆಂತನೆ ಸಕಲಕರ್ಮವಂ ಕಿತ್ತಿಟ್ಟು ಶಾಶ್ವತಸುಖಮಂ ಪೊರ್ದುಗುಮೆಂತೆರಡಕ್ಕಮಾಱದೊಂದಱೊಳ್ ನೆಗಬ್ದು ನಿರಂತರಸುಖಮಂ ಪಡೆವೆನೆಂಬ ನಿರ್ಬುದ್ಧಿ] [3] ಯೊಂದೆಗಾಲಿಯೊಳ್ ರಥಮಂ ನಡೆಯಿಸುವೆನೆಂಬ, [4] [ನೀರಿಲ್ಲದೆ ಕೂೞನಡುವೆನೆಂಬ,] ಕಾವಿಲ್ಲದೆ ಕೊಡಲಿಯೊಳ್ ಮರನಂ ಕಡಿವೆನೆಂಬ [ಭಾರ್ಯೆಯಿಲ್ಲದೆ ಮಗನಂ ಪಡೆವೆನೆಂಬ ಕೈದುವಿಲ್ಲದಿಱಿವೆನೆಂಬ] ನಾರಿಲ್ಲದೆ ಪೂಗಟ್ಟುವೆನೆಂಬ, [5] ಪೆರ್ಗಾವಿಲನಂ ಪೋಲ್ಕುಮಂತು ॥ ೧೦೬

---

1 ಕರ್ಮವ್ರಯಕಿಡಿಸಲ್ (ಬ. ಕ.) 2 ಮತಿಗೆಟ್ಟುಕೇಳೀ (ಗ)

3 ಆತನೆ ಮೋಕ್ಷಲಕ್ಷ್ಮಿಗೆ ವಲ್ಲಭನಕ್ಕುಮೊಂದಱೊಳ್ ನೆಗಳ್ದು ಮುಕ್ತಿಯಂ ಪಡೆವೆನೆಂಬಾತಂ (ಗ) 4 ಒಂದೆ ಕಾಲೊಳ್ ಪರಿವೆನೆಂಬ, ಹೊಕ್ಕಿಲ್ಲದೆ ಸೀರೆಯ ನೆಯ್ವೆನೆಂಬ, ಮದವಳಿಗನಿಲ್ಲದೆ ಮದುವೆಯಂ ಮಾಡುವೆನೆಂಬ, ಸೂಜಿಯಿಲ್ಲದೆ ಪೊಲಿವೆನೆಂಬ, ಕತ್ತರಿಯಿಲ್ಲದೆ ಗಾಣವಾಡುವ ಎಗ್ಗನಂ (ಗ)

5 ಒಂದೆ ಕೈಯೊಳ್ ಪಾಲ್ಗಡೆವೆನೆಂಬ, ಒಡೆಯತ್ತಿನೊಳುಳುವೆನೆಂಬ (ಗ)

ಲೇಸು ಬಹಿರಂಗವಿಲ್ಲದೊ
ಡಾಸೆಯುದೇನಂತರಂಗಮುಂ ತನಗಿನಿಸುಂ ।
ಲೇಸಾಗಲಱಿಯದೆಂತೆನೆ
ತ್ರಾಸಿನ ಕೊಡನೊಂದು ಬಿರ್ದೊಡೊಂದುಱದಪುದೇ ॥ ೧೦೭

[ಎನಿಸುಬಲಮುಮುಳ್ಳನುಂ ಭೋಂ
ಕನೆ ಪರಿಯಲ್ಬಾರದೊಂದೆ ಕಾಲಿಂದಂ ತಾ ।
ನೆನಿತಱಿದೊಡಮೊಂದಂಗದೊ
ಳನಘಶ್ರೀಪಥುವನೆರೆಯಲೆಂತುಂ ನೆಱಿಯಂ ॥ ೧೦೮

ಅದಱಿಂದೊಂದನೆ ಪಿಡಿದು ಕರ್ಮಮುಂ ಗೆಲ್ವೆನೆಂದು ಗಾವಿಲತನದಿಂದಿರದೆ ಬಹಿರಂಗದೊಳಮಂತರಂಗದೊಳಂ ಕೂಡಿ ನೆಗೞ್ದು ದುರಿತಮಂ ಕಿಡಿಸಿ ನಿರ್ಮೂಳನಪ್ಪುದು ॥] ೧೦೯

ಕರಮೊಳ್ಳಿದನಿವನೆಂದೊ
ರ್ವರ ಶಿಷ್ಯನನೊಱತೋಱಿ ನುಡಿದೊಯ್ಯನೆ ಮೂ ।
ಢರದೊಯ್ದು ದೀಕ್ಷೆಗುಡುವಂ
ಪರಮಾರ್ಥಂ ಸುಱುಗುಮುಗ್ರಸಂಸೃತಿವನದೊಳ್ ॥ ೧೧೦

[ಏನುಮನಱಿಯದ ಮುನಿಪಂ
ಹೀನಗುಣಂ ಬಂದು ದೀಕ್ಷೆವೇಡಿದೊಡವನಂ ।
ತಾನಳಿಪಿಂ ಕೈಕೊಳ್ಳದೆ
ನೂನಂ ನಿಱಿಸುವುದು ಮುನ್ನಿನಂದದೊಳವನಂ ॥] ೧೧೧

ಮುನ್ನಿನ ಕುಲಮುಂ ಸಿರಿಯುಂ
ತನ್ನೂರಂ ತನ್ನ ಪೆಂಡಿರಂ ಮಕ್ಕಳುಮಂ ।
ತನ್ನ ಮಹಿಮೆಗಳನಳಿಪಿಂ
ದಂ ನೆನೆಯುತ್ತಿರ್ಪ ದುರ್ಜನಂ ಮುನಿಯಲ್ಲಂ ॥ ೧೧೨

ತಾಂ ಪೊಲ್ಲಮೆಯಲ್ಲದೊಡಂ
ಗಾಂಪರನುತ್ಸುಕರನಳಿಪರಂ ಕಂಡೊಡೆ ಕೇಳ್ |
ಪೆಂಪಿಂದಮಿರದೆ ಭಯದಿಂ
ಕಂಪಿಸಿ ಕ್ಷಮೆಗೊಂಡು ನೆಗೞ್ವುದಧಿಕನೆನಿಪ್ಪಂ ॥ ೧೧೩

ಎಮ್ಮರಿಸಿ ಯೆಮ್ಮ ಜಿನಗೃಹ
ವೆಮ್ಮೊಡವೆಗಳೆಮ್ಮ ಗುಡ್ಡರೆಮ್ಮರ್ಥಂ ಮ |
ತ್ತೆಮ್ಮ ನೆಲನೆಂದು ಪೂಣದೆ
ಕೆಮ್ಮನೆ ದೆಸೆಗೆಟ್ಟು ನುಡಿವ ಮುನಿ [1] ಮುನಿಯಲ್ಲಂ ॥ ೧೧೪

ಮುನ್ನಂ ವ್ರತಮಿತ್ತವರಂ
ತಮ್ಮಳಿಪಿಂ ಪೞಿದು ಕಿಡಿಸಿ ಪೂರ್ವವ್ರತಮಂ |
ಮನ್ನಣೆಯಿಂ ವ್ರತಮಂ ಕುಡು
ವಂ ನರಕಕ್ಕಿೞಿದು ಪೋಪುದೇನಚ್ಚರಿಯೋ ॥ ೧೧೫

ಜಿನಭವನಮೆಲ್ಲಮಂ ಸ
ಜ್ಜನಚೈತ್ಯಾವಳಿಗಳೆಲ್ಲಮಂ ದಿವ್ಯತಪೋ |
ಧನರೆಲ್ಲರುಮಂ ಸಮನಾ
ಗನವರತಂ ಕಾಣ್ಬ ಮುನಿಯೆ ಮುನಿವರನೆನಿಕುಂ ॥ ೧೧೬

[ರಾಗದ್ವೇಷಂ ತನಗುಂ
ಟಾಗೆ ತಪಂಬಟ್ಟು ನಮೆವನವನಿನಿಸಾನುಂ |
ರಾಗದ್ವೇಷಂ ತನ್ನಿಂ
ಪೋಗೆ ತಪಂಬಟ್ಟುನಮೆವನವನಿನಿಸಾನುಂ ॥ ೧೧೭

1 ನುಡಿವನುಂ (ಗ) 2 ಪೊಲೆಯರ್ವ್ವಡಿವಪೞಿಗಾಡುವರ್ವಗರಣದಾಟಕ್ಕೆನಗುವರಲ್ಲದೆ ಲಕ್ಷಣಮನಱಿವ ಸತ್ಪಾತ್ರದೊಳ್ ಲಕ್ಷಣಮಂ ನೋಡುವರಂತೆ ಮಿಥ್ಯಾದೃಷ್ಟಿಗಳ ಪೇಳ್ಕೆಯಿಂ ನಡೆವಲ್ಲಿ ದೋಷಮಂ ಮಾಡುವರದಱಿಂ ದೋಷಮಿಲ್ಲದಂತಾಗಿ ನಡೆವುದು. ಜಿನಭವನ....(ಗ).

ಬಿಡದ ಪರಿಗ್ರಹಭರದೊಳ್
ತೊಡರ್ದುಂ ನಿರ್ಗ್ರಂಥನಾಗಿಯುಂ ಸಗ್ರಂಥಂ ।
ತೊಡರ್ದ ಪರಿಗ್ರಹಭರಮಂ [1]
ಬಿಡುವಂ ಸಗ್ರಂಥನಾಗಿಯುಂ ನಿರ್ಗ್ರಂಥಂ ॥ ೧೧೮

[ಅದುಕಾರಣದಿಂದೆ ತಪವೆಂಬುದು ಸಾಮಾನ್ಯಮಲ್ಲದು; ನೀನುಂ ನಿನ್ನ ಮುನ್ನಿನ ವಿದ್ಯಾಧರರಾಜ್ಯಮಂ ಕೈಕೊಂಡು ಸುಖದಿನಿರೆಂಬುದುಂ, ಚಂದ್ರಾಭಮಹಾರಾಜಂ ಮುನಿಗುಪ್ತಭಟ್ಟಾರಕರ್ಗಿಂತೆಂದಂ॥] [2] ೧೧೯

ಎನಿತು ಪಸಿವಾದೊಡಂ ಮೇ
ದಿನಿಯೊಳ್ಕ್ಕುಳಿರ್ದ ಕೂಳನುಂಬರೆ ನರರಾಂ ।
ಮನವೊಸೆದು ಬಿಟ್ಟ ರಾಜ್ಯಾಂ
ಗನೆಯುಂ ಕೈಕೊಳ್ವನಲ್ಲನೆಂತುಂ ಮುನಿಪಾ ॥ ೧೨೦

ಎಂಬುದುಂ [ಮುನೀಂದ್ರೋತ್ತಮಂ ವಿಯಚ್ಚರರಾಜಂ ನುಡಿದ ಪರಿಚ್ಛೇದಕ್ಕಂ ಮನದ ವೈರಾಗ್ಯಕ್ಕಂ ಮೆಚ್ಚಿ ಮನಃಪೂರ್ವಕಂ ಪರಿಗ್ರಹವೆಲ್ಲಮಂ ತೊಱೆ ಬೇಗವೆಂಬುದುಂ ಗುರುಸನ್ನಿಧಿಯೊಳ್ ಪರಿಗ್ರಹವೆಲ್ಲಮಂ ತೊಱೆದು ಕೆಲವು ವಿದ್ಯೆಗಳಂ ತೊಱೆಯದಿರೆ ಮುನಿಗುಪ್ತಭಟ್ಟಾರಕರವೆಱೊಳಳವು ನಿನಗೇತಕ್ಕೆನೆ ಗಗನಚರಾಧೀಶನಿಂತೆಂದಂ ॥] [3] ೧೨೧

ಮನದರ್ತಿ ಪೋಪಿನಂ ಮೇ
ರುನಗದಕೃತ್ರಿಮ ಜಿನಾಲಯಂಗಳನಾನಿಂ ।
ತನವರತಂ ನೋಡುವ ಭಾ
ವನೆ ಪೋಗದು ತಿಬ್ಬ ಮಿನ್ನುಮದುಕಾರಣದಿಂ ॥ ೧೨೨

1 ಕಡೆಗಣಿಸಿ ಪರಿಗ್ರಹಮಂ (ಖ)

2 ಯೋಗೀ ಭಾವನೆಯಿಂ ತಪಮಂ ಭಾವಿಸುತ್ತಿರು ನಿನಗೆ ಮಹಾತಪದೊಳಾದ ತೋಟ ವೇಡನೆ ಚಂದ್ರಾಭಮಹಾರಾಜನಿಂತೆಂದಂ (ಗ)

3 ಎಂಬುದುತರಿತಾದೊಡಪರಿಗ್ರಹಮೆಲ್ಲಮಂ ಮನವಾರೆ ಬಿಟ್ಟು ಪರಿಚ್ಛೇದಿಸನೆ ವಿದ್ಯಾಧರಮಹಾರಾಜನಿಂತೆಂದಂ (ಗ)

[ಕೆಲವು ವಿದ್ಯೆಗಳಂ ಬಿಡಲಾಜಿನೆಂಬುದುಂ, ಮುನಿಪತಿ ನಕ್ಕು ನಿನಗನ್ನೆಗಂ ಮಹಾವ್ರತಂಗಳ ತೊಡರ್ಪುವೇಡಣುವ್ರತಧಾರಿಯಾಗಿರ್ಪು ದೆಂಬುದುಂ, ಅವೆಂತಪ್ಪುವವಱ ಸ್ವರೂಪಮಂ ಬೆಸಸಿಮನೆ, ಗುಣೋತ್ತಮ] [1] ರಿಂತೆಂದು ಪೇೞ್ದರ್ ॥ ೧೬೩

ಪರಮದರ್ಶನವಿಶುದತೆ
ನಿರುಪಮಮೆನಿಸಿರ್ದ ಪಂಚಗುರುಪದಯುಗಪಂ ।
ಕರುಹಪರಭಕ್ತಿ ಭಾವಿಪ್ರೊ
ಡುರುಸಂಸ್ಕೃತಿದೇಹಭೋಗಮಿವಱ ವಿರಾಗಂ ॥ ೧೬೪

ನೆಲದ ಬೆಟ್ಟನಂತೆ, ಸಮುದ್ರದ ಜಲದಂತೆ, ಪಗಲಾದಿತ್ಯನಂತೆ, ನಕ್ಷತ್ರದ ಚಂದ್ರನಂತೆ, ಮೇರುವಿನ ಕರ್ಮಭೂಮಿಯಂತೆ, ಸ್ತ್ರೀಯರ ನೋಲೆಯಂತೆ, ಪುರುಷರ ಮೀಸೆಯಂತೆ, ಆವಿನ ಕೆಚ್ಚಲಂತೆ, ಗಜದ ದಂತದಂತೆ, ಬೆಂಕಿಯುಷ್ಣದಂತೆ, ತಾವರೆಯ ಸೂರ್ಯನಂತೆ, ನಯ್ದಿಲ ಚಂದ್ರನಂತೆ, ಸ್ತ್ರೀರತ್ನದ ಚಕ್ರವರ್ತಿಯಂತೆ, ನೀರ ಪಾಲಂತೆ, ನಖದ ಮಾಂಸದಂತೆ [ಪೂವಿನ ಕಂಪಿನಂತೆ] ತುಪ್ಪುಟ ಬಣ್ಣದಂತೆ, ತಾಯ ಶಿಶುವಿನಂತೆ, ಕರುವಿನೆಳಗಂದಿನಂತೆ, ಲೋಭಿಯ ಪೊನ್ನಂತೆ, ಪಂಚಪರಮೇಷ್ಠಿಗಳೊಳಪ್ಪ ಪತ್ತುಗೆವೆರಸು; ಪಿರಿದು ತೆತ್ತೊಕ್ಕಲಂತೆ, ಗಂಡನೊಲ್ಲದ ಸ್ತ್ರೀಯಂತೆ, ಪಂದೆಯಂ ಕಂಡಾಳ್ದನಂತೆ, ಪಾದರಿಗೆಯಂ ಕಂಡ ಗಂಡನಂತೆ, ಬೇಸಗೆಯೊಳ್ಪ್ರಯಣಂಬೋಪರಂತೆ, ದೂರಕ್ಕೆ ಪೋಜಿವೆರಸು ಪೋಪರಂತೆ, ಪೊಗೆಯೊಳಿರ್ದರಂತೆ, ಬಡವನ ಮಗಳಂತೆ, ಪಡಪಾಳಿ ಸತ್ತ ಮನೆಯಂತೆ, ಪ್ರಭು ಕೆಟ್ಟ ನಾಡಂತೆ, ಸಂಸಾರದ ಶರೀರದ ಭೋಗದ ಮೇಲೆ ಬೇಸಱುಂ; ಬೆಕ್ಕಂ ಕಂಡಿಲಿಯಂತೆ, ಪಾವಂ ಕಂಡ ಕಪ್ಪೆಯಂತೆ, ಕಳ್ಳನಂ ಕಂಡ ಪಥಿಕನಂತೆ, ಪರ್ದಂ ಕಂಡ ಪಾವಿನಂತೆ, ತಳಾಱನಂ ಕಂಡ ದ್ರೋಹನಂತೆ, ಕೋಣನಂ ಕಂಡ ಕುದುರೆಯಂತೆ,

1 ಗಗನಗಾಮಿನೀವಿದ್ಯೆಯೊಂದು ಪೊಱಗಾಗಿ ಯಲ್ಲವುಂ ತೊಱೆವೆನೆನೆ ಮುನಿಗುಪ್ತಭಟ್ಟಾರಕರ್ನಕ್ಕು ನೀನೆಂತುಂದೊಡನ್ನೆವರಂ ಮೇಕಾದಶಶ್ರಾವಕಸ್ಥಾನದೊಳೊಂದಂ ಪಿಡಿದು ನಡೆಯನೆ ನಿಮ್ಮಡಿಗಳವಱ ವ್ರತಸ್ವರೂಪಮಂ ಬೆಸಸುವುದೆಂಬುದುಂ ಮುನಿಬ್ಳಂದಾರಕರಿಂತೆಂದು ಪೇಳ್ದರ್ (ಗ).

ನಾಯುಂ ಕಂಡ ಬೆಕ್ಕಿನಂತೆ, ಪುಲಿಯುಂ ಕಂಡ ಪುಲ್ಲೆಯಂತೆ, ಇಹಲೋಕದ ಪರಲೋಕದ ಮರಣದ ಕುತ್ತದ ಪಱಿರೆನಗಿಲ್ಲೆಂಬ ಮೆಯ್ಗ ಮೞಿಯಿಲ್ಲೆಂಬ ತೊಟ್ಟನಡಸುವ [1] ಸಪ್ತಭಯಂಗಳ್ಗ ನಡುಗದುದುಂ ; ರಕ್ಕಸಿಯುಂ ಮಾನಿಸಂ, ಸಿಂಹಮನಾನೆ, ಲೋಗರಂ ಶಿಶು, ಮರುಳನಂ ಬುದ್ಧಿಶಾಲಿ, ದುಶ್ಚರಿತ್ರನಂ ಸದಾಚಾರಂ, ಕಳ್ಳನಂ ಸದ್ಧರ್ಮಂ, ವ್ಯಸನಿಯುಂ ಜಿತೇಂದ್ರಿಯಂ ಪೊರ್ದದಂತೆ, ಜೂಜುಂ ಬೇಂಟೆಯುಂ ಕಳ್ಳುಂ ಮಾಂಸಮುಂ ಕುತ್ಸಿತವೇಶ್ಯೆಯುಂ ಪರದಾರಮುಂ ಕಳವುಮೆಂಬ ಸಪ್ತ ವ್ಯಸನಂಗಳಂ ಪೊರ್ದದಿರ್ಪುದುಂ ; ಕಾಡುವ ಬೋಜಂಗನಂ ಪಡೆದ ಕುಂಟಣಿಯಂತೆ, ಸಿರಿವಂತನ ಕಯ್ಯಂ ಪಿಡಿದ ಬಡವೆಯಂತೆ, ನಾಡುವಡೆದ ಪಸಾಯಿತನಂತೆ, ತೇಜಂಬಡೆದರಸಿನಂತೆ, [2] ಮನ್ನಣೆವಡೆದ ಕೀೞ್ಜಾತಿಯಂತೆ, ಪೂಜೆವಡೆದ ವ್ಯಂತರಿಯಂತೆ, ಗೆಲ್ಲಂಪಡೆದ ಪಂದೆಯಂತೆ, ಜವ್ವನಂಬಡೆದ ಮುದುಪನಂತೆ, ನಿಶ್ಶಂಕಾದ್ಯಷ್ಟಗುಣಂಗಳೊಳಾದ ಮಹಾಪ್ರೀತಿಯುಂ, ಮದ್ದುಗುಣಿಕೆಯುಂ ತಿಂದರಂತೆ, ಪಿತ್ತಂ ತಲೆಗೇಱಿದರಂತೆ, ಮರುಳ್ಗೊಂಡರಂತೆ, ಶಾಶ್ವತಂಬಡೆದರಂತೆ, ಜವನೊಳೋಲೆಯುಂಡಿಗೆಯುಂ ತಂದರಂತೆ, ಕಳ್ಗುಡಿದರಂತೆ, ಸ್ವೇಚ್ಛಾಮರಣಿಗಳಂತೆ, ಸಾವಿಲ್ಲದರ ಬಸಿಱೊಳ್ ಬಂದರಂತೆ, ಜ್ಞಾನೈಶ್ವರ್ಯಪೂಜಾಕುಲಬಲತಪರೂಪಜಾತಿಯೆಂಬೆಂಟುಮದಂಗಳೊಳ್ಪೊರ್ದಗೆಯಿಲ್ಲದುದುಂ ; ಕೊಲ್ವ ಪಾವಂ ಕಳ್ವ ಪೆಂಡಿರಂ ಪಿಸುಣನಪ್ಪೊಡವುಟ್ಟಿದನಂ ತಿಂಬ ನಾಯುಂ ಪೆಂಡಿರ್ಗಳಪುವ ಬಂಟನಂ ಕವರಿಸುವ ನಂಟನಂ ಗೆಂಟುಮಾಡುವಂತೆ, ಮಿಥ್ಯಾದೈವಂ ಮಿಥ್ಯಾಲಯುಂ ಮಿಥ್ಯಾತಪಂ ಮಿಥ್ಯಾತಪಸ್ವಿ ಮಿಥ್ಯಾಜ್ಞಾನಿ ಮಿಥ್ಯಾವ್ರತಮೆಂಬೀ ಷಡಾಯತನ ಸೇವೆಯುಂ ಗೆಂಟುಮಾಡುವುದುಂ ; ಅಡವಿಯ ಕೊಳನಂ ನೆಗಳ ಬಾವಿಯಂ ಬಡವಾಗ್ನಿಯುಂ ಪೋಲ್ವ ಮಿಥ್ಯಾತ್ವಮುಮಂ, ಜಾರೆಯ ಮಗನಂ ಗಡಿಯ ನಾಯಕನಂ ನಂಬಿಸಿ ಕೊಲ್ವವನಂ ಪೋಲ್ವ ಸಮ್ಯಙ್ಮಿಥ್ಯಾತ್ವಮುಮಂ ಬ್ರಾಹ್ಮಣನೊಡನಿರ್ದ ಸೂಳಪಂಡತಿ ನಡಪಿದ ಮಗನಂ

---

1 ತೊಟ್ಟನೆನಡಸುವ (ಬ. ಕ. ಗ.)   2 ಅರಸಿಯಂತೆ, (ಗ)

ಪ್ರಾಣಿಪರಿವಾರಂ ಪಿಡಿಯದರಸಂ ಪೋಲ್ವ ಸಮ್ಯಕ್ತ್ವ ಪ್ರಕೃತಿಯಂ ಪರಿಹರಿಪುದುಂ ; ಕೆಟ್ಟ ರಾಜ್ಯಂ ಕೈಸಾರ್ದನಂತೆ ಸಂವೇಗದೊಳಂ ಬಟ್ಟೆಯೊಳ್ ಬಂಡಮಂ ಕೊಳ್ಳಬಟ್ಟನಂತೆ ನಿರ್ವೇಗದೊಳಂ, ಪೊಲ್ಲದಂ ಮಾಡಿದ ಸೂಚಿಯಂತೆ ನಿಂದೆಯೊಳಂ ಬಡಿಹದ ಮಕ್ಕಳಂತೆ ಅಳಲ್ವೆಯೊಳಂ ನೀರ್ ಮುಟ್ಟದ ಕೆಂಡದಂತುಪಶಮದೊಳಂ, ಕೂರ್ಪ ಪೆಂಡಿರ ಕೂಟದಂತೆ ಪಂಚಪರಮೇಷ್ಠಿಗಳೊಳಪ್ಪ ಭಕ್ತಿಯೊಳಂ, [ಮಾಗಿಯೊಳ್ಕೊಂದರಂತನುಕಂಪೆಯೊಳಂ] ಅಳಿಯನಂ ಕಂಡ ಮಾವನಂತೆ ವಾತ್ಸಲ್ಯದೊಳಂ ನೆರೆದಿರ್ಪುದುಂ ; ದೇವರೊಳಾದ ಶಂಕೆಯುಂ, ಭೋಗದೊಳಪ್ಪಕಾಂಕ್ಷೆಯುಂ, ಶರೀರದೊಳಪ್ಪ ನಿರ್ವಿಚಿಕಿತ್ಸೆಯುಂ ನಿರ್ದೋಷಿಯುಪಾಪ್ತನಂ ಪೊಗೞ್ವಲ್ಲಿ ಅನ್ಯದೃಷ್ಟಿಪ್ರಶಂಸೆಯುಂ, ಸದೋಷಿಯಪ್ಪಾತನಂ ಪೊಗೞ್ವಲ್ಲಿ ಅನ್ಯದೃಷ್ಟಿಸಂಸ್ತವನಮುಮೆಂಬ ಪಂಚಾತಿಚಾರದೊಳಂ ಕೂಡದುದುಂ, ಒಂದನೆಯ ದಾರ್ಶನಿಕನೆಂಬ ಶ್ರಾವಕಂಗಕ್ಕುಂ [1] ॥ ೧೨೫

[ಪರಮಂ ಜಿನನಾಪ್ತನಂತಾ
ಪರಮಶ್ವರನೆಂದುದಾಗಮಂ ನಿರ್ಗ್ರಂಥಂ ।
ಪರಮೆ ತಪಂ ಧರ್ಮಂ ದಯೆ
ವೆರಸಿದುದೆಂದಿಂತು ನಂಬುವುದೆ ಸಮ್ಯಕ್ತ್ವಂ ॥] ೧೨೬

ತತ್ಸಮ್ಯಕ್ತ್ವಂಬೆರಸು ಮ
ಹೋತ್ಸವದಿಂ ಬೆಸನಮೇೞುಮಂ ಬಿಸುಟುೞಿ [2] ನಿ ।
ರ್ಮತ್ಸರದಿಂ ಸದ್ಗುಣದೊಳ್
ವಾತ್ಸಲ್ಯಮನುಂಟುಮಾಡಿ ಕರಮಾದರದಿಂ ॥ ೧೨೭

[ಕ್ರೂರತೆಯಿಂ ಪ್ರಾಣಿಗಳಂ
ಧಾರಿಣಿಯೊಳಕ್ಕೊಲ್ಲನೆಂತುಮುಗ್ರತೆಯಿಂ ನಿ ।
ಷ್ಕಾರಣಮೆೞಿಯದೆ ಕೊಂದೊಡ
ಮಾರಯ್ಯದೆ ಕೊಂದೆನೆಂದು ಮನದೊಳ್ನೋವಂ ॥ ೧೨೮

---

[1] ಶ್ರಾವಕನಕ್ಕುಂ (ಬ. ಕ. ಗ.) [2] ದೋಷವಿಲ್ಲದಧಿಕತೆಯಿಂ (ಗ)

ವ್ರತಮಂ ಕೊಳದಿರ್ದೊಡಮು
ವ್ರತಿಯಾಗಂ ಕ್ಷಿತಿಯೊಳಸೆವ ಕುಲಬಲಸಂಪ ।
ತ್ಪ್ರತತಿಯೊಳಮಿರ್ದು ಸಜ್ಜನ
ಮತದೊಳ್ದಾರ್ಶನಿಕನೆಂಬನೊಂದನೆಯಾತಂ ॥ ೧೨೯

ವರಸಮ್ಯಕ್ತ್ವಂಬೆರಸು
ವರೆಯೊಳ್ ಶಲ್ಯತ್ರಯಂಗಳಂ ತೊಱೆದು ಸದಾ ।
ಚರಿತನಿವನೆನಿಸಿ ಗುಣಾಪಂ
ಧರಿಯಿಸಿ ಪೆಱಗಿಕ್ಕಿ ಪಂಚವಿಂಶತಿಮಲಮಂ ॥] ೧೩೦

ಬಸಿಱೊಳಿರ್ದಂಬಿನಂತೆ, ಮನೆಯೊಳಿರ್ದ ಪಾವಿನಂತೆ ಕೂಟೊಳಗಿರ್ದ ನಂಜಿನಂತೆ, ಪೊಲ್ಲಮೆಯುಂ ಮಾಡುವ [1] ಮಿಥ್ಯಾಶಲ್ಯಂ ಮಾಯಾಶಲ್ಯಂ ನಿಧಾನಶಲ್ಯಮೆಂಬ ಮೂಱುಂ ಶಲ್ಯಂಗಳಂ ಪಿಂಗಿದಂ। ನಿಧಾನದಂತೆ ರಾಜ್ಯದಂತೆ ಕರ್ಪೂರದ ಕೂಟದಂತೆ ಪಗೆವರ ಕೇಡಿನಂತೆ ಸ್ಥಿರಮಪ್ಪ ಜವ್ವನದಂತೆ ಸೊಗಯಿಸುವ ಕೊಲ್ಲದ ಪುಸಿಯದ ಕಳವ ಪರಸ್ತ್ರೀಯರ್ಗೆಱಗದ ನಿಯಮಿತಪರಿಗ್ರಹಮೆಂಬ ಪಂಚಾಣುವ್ರತಂಗಳ ಕೂಟಮನುಳ್ಳ ದುಃಖಭಾಜನಮಲ್ಲದ [2] ಶೀಲಸಪ್ತಕದೊಳ್ಕೂಡಿದಂ; ಬಂಧವಧಚ್ಛೇದಾತಿಭಾರಾರೋಪಣಾನ್ನಪಾನನಿರೋಧಮೆಂಬೀ ಕೊಲ್ಲದ ವ್ರತದೈದತಿಚಾರದೊಳಂ, ಮಿಥ್ಯೋಪದೇಶ ರಹೋಭ್ಯಾಖ್ಯಾನ ಕೂಟಲೇಖನ ಕ್ರಿಯಾನ್ಯಾಸಾಪಹಾರ ಸಾಕಾರಮಂತ್ರಭೇದಮೆಂಬ ಪುಸಿಯದ ವ್ರತದೈದತಿಚಾರದೊಳಂ, ಸ್ತೇನಪ್ರಯೋಗ ತದಾಹೃತಾದಾನ ವಿರುದ್ಧರಾಜ್ಯಾತಿಕ್ರಮ ಹೀನಾಧಿಕಮಾನೋನ್ಮಾನ ಪ್ರತಿರೂಪಕವ್ಯವಹಾರಮೆಂಬ ಕಳದ ವ್ರತದೈದತಿಚಾರದೊಳಂ, ಪರವಿವಾಹಕರಣೇತ್ವರಿಕಾಪರಿಗ್ರಹಾಪರಿಗೃಹೀತಾಗಮನಾನಂಗಕ್ರೀಡಾಕಾಮತೀವ್ರಾಭಿನಿವೇಶಮೆಂಬ ಪರಸ್ತ್ರೀಗೆಱಗದ ವ್ರತದೈದತಿಚಾರದೊಳಂ, ಕ್ಷೇತ್ರವಾಸ್ತುಹಿರಣ್ಯಸುವರ್ಣಧನಧಾನ್ಯ ದಾಸೀದಾಸ ಕುಪ್ಯಭಾಂಡಾತಿಕ್ರಮಮೆಂಬ ಪರಿಮಿತಪರಿಗ್ರಹದೈದತಿಚಾರದೊಳಂ, ಊರ್ಧ್ವಾಧಸ್ತಿರ್ಯ

ಗ್ವ್ಯತಿಕ್ರಮ ಕ್ಷೇತ್ರವೃದ್ಧಿ ಸ್ಮೃತ್ಯಂತರಾದಾನವೆಂಬ [1] ದಿಗ್ವಿರತಿವ್ರತದೈದತಿಚಾರದೊಳಂ, ಆನಯನ ಪ್ರೇಷ್ಯಪ್ರಯೋಗ [2] ಶಬ್ದರೂಪಾನುಪಾತ ಪುದ್ಗಲಕ್ಷೇಪವೆಂಬ ದೇಶವಿರತಿವ್ರತದೈದತಿಚಾರದೊಳಂ, ಕಂದರ್ಪ ಕೌತ್ಕುಚ್ಯ ಮೌಖರ್ಯಾಸಮೀಕ್ಷ್ಯಾಧಿಕರಣೋಪಭೋಗಪರಿಭೋಗಾನರ್ಥತ್ವವೆಂಬನರ್ಥದಂಡವಿರತಿವ್ರತದೈದತಿಚಾರದೊಳಂ ; ಕಾಯದುಷ್ಪ್ರಣಿಧಾನ ವಾಗ್ದುಷ್ಪ್ರಣಿಧಾನ ಮನೋದುಷ್ಪ್ರಣಿಧಾನಾನಾದರಸ್ಮೃತ್ಯನುಪಸ್ಥಾನವೆಂಬ ಸಾಮಯಿಕಶಿಕ್ಷಾವ್ರತದಯ್ದತಿಚಾರದೊಳಂ, ಅಪ್ರತ್ಯವೇಕ್ಷಿತಾಪ್ರಮಾರ್ಜಿತೋತ್ಸರ್ಗಾಪ್ರಮಾರ್ಜಿತಾದಾನಾಪ್ರತ್ಯವೇಕ್ಷಿತಾಪ್ರಮಾರ್ಜಿತಸಂಸ್ತರೋಪಕ್ರಮಣಾನಾದರಸ್ಮೃತ್ಯನುಪಸ್ಥಾನವೆಂಬ ಪ್ರೋಷಧೋಪವಾಸವೆಂಬ ಶಿಕ್ಷಾವ್ರತದಯ್ದತಿಚಾರದೊಳಂ, ಸಚಿತ್ತಾಹಾರಸಚಿತ್ತಸಂಬಂಧಾಹಾರ ಸಚಿತ್ತಸಮ್ಮಿಶ್ರಾಹಾರಾಭಿಷವಾಹಾರ ದುಷ್ಪಕ್ವಾಹಾರವೆಂಬುಪಭೋಗಪರಿಭೋಗಪ್ರಮಾಣವೆಂಬ ಶಿಕ್ಷಾವ್ರತದಯ್ದತಿಚಾರದೊಳಂ, ಸಚಿತ್ತನಿಕ್ಷೇಪ ಸಚಿತ್ತಾಭಿಧಾನ ಪರವ್ಯಪದೇಶ ಮಾತ್ಸರ್ಯ ಕಾಲಾತಿಕ್ರಮವೆಂಬತಿಥಿಸಂವಿಭಾಗಶಿಕ್ಷಾವ್ರತದೈದತಿಚಾರದೊಳಂ ; ಭಂಡಾರದ ಸೇನಬೋವನಂತೆ ರಾಣಿವಾಸದ ಪೆರ್ಗಡೆಯಂತೆ, ಪೊನ್ನಧ್ಯಕ್ಷಮಾದನಂತೆ ಬೆಳಗೆಯ್ಯಂ ರಕ್ಷಿಸುವನಂತೆ, ಮದಗಜಮನೇಱುವನಂತೆ, ಬಿನ್ನಪಂಗೆಯ್ವನಂತೆ, ತೂಱಿಯನೀಸುವನಂತೆ, ಕಟ್ಟನಾಡಂ ಸಂತವಿಡುವನಂತೆ, ಮೂರ್ಖರ ಭರಮಂ ತಿರ್ದುವನಂತೆ, ರತ್ನಾಭರಣಮಂ ತೊಟ್ಟುಬಟ್ಟೆಪೋಪನಂತೆ, ಚಕ್ರವರ್ತಿಯ ಬಾಗಿಲಂ ಕಾವನಂತೆ, ನಯಮುಮಂ ಬುದ್ಧಿಯುಮಮೊಱ್ಕೆಯುಮಂ ಬೆರಸು ನಡೆವಾತಂ, ೧೩೧

ಅತ್ತಿಯ ಬಸುರಿಯ ಗೋಳಿಯ
ಪತ್ತರಿಳಿಯ ಮಟದ ಪಣ್ಣನಡಗಂ ಜೇನಂ ।
ಬಿತ್ತರಮದ್ಯಮನಾಗೆಂ
ಬುತ್ತಮಸಂಸೇವ್ಯಮೂಲಗುಣಮಿದಯೆಂಟುಂ ॥ ೧೩೨

1 ಸ್ಮೃತ್ಯಂತರಾಭಿಧಾನವೆಂಬ. (ಗ)   2 ಅಭಾಹಾರ. (ಗ)

ಸಂದೋಲ್ಪತ್ತಿಕೀರ್ತಿವೆಡ
ಗಂದಿಸ ತಾಂ ತೊಱೆದ ವೆಸ್ತು ಸತ್ತ ಕ್ರಿಪಿಗಳ್ ।
ಸಂದಸ್ಥಿಯೆಂಬಿವೇೞುಂ
ಕುಂದದೆ ಮುಟ್ಟುಪಡಮೆಕ್ಕುವೆರ್ಪನ ಮೆತದಿಂ ॥ ೧೩೩

[ಮೂಲಗುಣಪಂಚಕಮೊಳಂ ಕೂಡಿ ಸಪ್ತಾಂತರಾಯಂಗಳಂ ಪಿಂಗಿಸಿ ಪಂಚಾಣುವ್ರತದೊಳೊಳ್ಳಿದನೆನಿಸಿ ಗುಣವ್ರತತ್ರಯದೊಳಂ ನೆರೆದು ಶಿಕ್ಷಾವ್ರತಚತುಷ್ಟಯದೊಳವೆಸಗಿ ಧರ್ಮಶಾಲ್ಯಂಕುರಕ್ಕೆಡೆ ಯೆನಿಪ ಅಱುವತ್ತತೀಚಾರಮುಮಂ ಪಿಂಗಿಸಿ ನೆಗಱ್ವಾತ][1] ನೆರಡನೆಯ ವ್ರತಿಕನೆಂಬ ಶ್ರಾವಕನಕ್ಕುಂ. ೧೩೪

ಸ್ಥಿರನಾಗಿ ಶುದ್ಧವೃತ್ತಿಯೊ
ಳರವರಿಸದೆ ಪೆಱಗೆ ಪೇೞ್ದ ಸುವ್ರತಮೆನಿಸಿತಂ [2] ।
ಜರಸು ವಯೆಪರಸು ರಾಗಂ
ಜರಸು ಸದಾಚಾರನಾಗಿ ಸಿರ್ಮಳಮನದಿಂ ॥ ೧೩೫

ಸಮಂತವರೞು ಕರ್ಮರಾಜನಂ ಕಯ್ವಾರಂಗೊಂಡು ಮೋಹ ರಾಜನಟ್ಟಿದ ತಂತ್ರಮೆನಿಸುವ [ಮೂವತ್ತೆರಡುಂ ದೋಷಂಗಳಂ ಪತ್ತು ವಿಟ್ಟು] ಮಚ್ಚಿಲ್ಲದೆ ಜಡನಾಗಿ ದೇವಗುರುಗಳಂ ಪೂರ್ದದೆ, ಪೆಱರ್ಗೆ ಪೀಡೆ ಯುಂ ಮಾಡುತ್ತುಂ [ಮೆಯ್ಯಂ ತೂಗುತ್ತುಂ] ಉನ್ಮತ್ತಚೇಷ್ಟೆಯಿಂ ದೆರೆಯುಂ ತಿಂದ ವಿಷಾನಂತೆ ಪೊಡೆಯುತ್ತುಂ, ಪೊಲ್ಲಮನನಾಗಿ ಕಯ್ಯಂ ತಳ್ತಿಱಿದು ಪೆಱಗಂಜಿ ಪೆಱರ ನೆವದಿಂ ಪೆಂಪು ಕಾರಣಮಾಗ [3] ಗುರು ಗಳಂ ಕಳ್ದು ಗುರುಗಳ್ಗೆ ಪ್ರತಿಕೂಲನಾಗಿ ಗೃಹಂ ಮೊದಲಾಗೆ ಶಲ್ಯಂ ಬೆರಸು ನುಡಿಯುತ್ತುಂ ಪೆಱರನೇಡಿಸುತ್ತುಂ ನೊಸಲನೆತ್ತುತ್ತುಂ ಕಂಪಿ

---

1 ಇಂತೀಯನಿತಱೊಳೊಂದಿನಡೆವಾತ, (ಗ)

2 ಪೆಱರ್ಗೆಪೇೞ್ದಗುಣಮೆನಿತನಿತುಂ, (ಗ)

3 ಸುಖಮುಮಟಮುಂಕಾರಣವಾಗಿ, (ಗ) ; ಸುಖಂಕಾರಣವಾಗಿ, (ಖ)

ಸುತ್ತುಂ ಋಷಿಯರಂ ಕಂಡು ಕಾಣಲೀಯದೆ ಸಂಘನಿರೋಧದಿಂ ಕರ್ಮ್ಯಂ ಬಿಟ್ಟು ಪಡಪು ಕಾರಣವಾಗೆ, ಮೇಲ್ವಡೆವೆನೆಂದು ಕುಂದಿಸಿ ಪೆರ್ಚಿಸಿ ಸನ್ನೆಗೆಯ್ಯುತ್ತುಂ, ಪೊಲ್ಲದನಿಯಿಂ ಗೀತಂಮಾಡುತ್ತುಮಿರ್ಪ್ಪುದೆಂಬೀ ಮೂವತ್ತೆರಡು ದೋಷಂಗಳಂ ಪಿಂಗಿ, ಮೂಱುಂಪೊತ್ತುಂ ದೇವರಂ ಬಂದಿಸುವಂ; ಮತ್ತಂ ಕುದುರೆಗಾಲಿಕ್ಕುತ್ತುಂ, ಲತೆಯಂತೆ ಬಳ್ಕುತ್ತುಂ, ನೆಮ್ಮಿ ಕೇರಂ ಮಲಂಗಿ ಮೊಳಗೆಯಂ ಪೊತ್ತು ಗುಹ್ಯನಿರೋಧನಾಗಿ ಸಂಕಲೆಯೊಳಿರ್ದಂತೆ ನಿಲ್ದು [1] ಕೊರಲಸೆತ್ತಿ ಮೊಲೆಯಂ ನೋಡುತ್ತುಂ, ಕಾಗೆಯಂತೆ ಕಡೆಗಣ್ಣೊಳ್ ನೋಡುತ್ತುಂ, ಕೀಟಿಟ್ಟ ಕುದುರೆಯಂತೆ ಬಾಯಂ ಪೊಳಕಿಸುತ್ತುಂ, ಕೊರಲಂ ಸೀಡಿ ಕಯ್ಯಂ ಪಿಡಿದು ತಲೆಯಂ ತೂಗುತ್ತುಂ, ಸನ್ನೆದೋಱುತ್ತುಂ, ಬೆರಲನಾಡಿಸುತ್ತುಂ, ಪುರ್ವಿಕ್ಕುತ್ತುಂ, ಸೊಕ್ಕಿದವರಂತೆ ಮರುಳ್ಗೊಂಡವರಂತೆ ದೆಸೆಯಂ ನೋಡುತ್ತುಂ, ಕೊರಲಂ ಕುಸಿಯುತ್ತುಮುತ್ತರಿಸಿದ ಕುದುರೆಯಂತೆ ಮೋಱೆಯಂ ನೆಗಪುತ್ತುಂ, ಮೆಯ್ಯಂ ಮುಟ್ಟುತ್ತುಂ, ಕೊರಲಂ ತಿರಿಪುತ್ತುಂ, ಕೈಯನಾಡಿಸುತ್ತುಂ, ಪಲ್ಲಂ ಕಱುಕುತ್ತುಂ, ಮೆಯ್ಯಂ ತೂಗೆಯುತ್ತುಂ, ಭೋಗಂಗಳಂ ಚಿಂತಿಸುತ್ತುಂ, ಕಣ್ಸನ್ನೆಗೆಯ್ಯುತ್ತುಂ, ಪರವಶಮಾದರಂತೆ ಜಡನಾಗುತ್ತುಮಿರಲಾಗದೆಂಬೀ ಮೂವತ್ತೆರಡು ದೋಷಂಗಳಂ ಪಿಂಗಿ ಕಾಯೋತ್ಸರ್ಗಂ ಮಾಡುವ [ಶುದ್ಧಬುದ್ಧಿಯಿಂ ಮೂಱುಂಪೊತ್ತಿನೊಳಂ ದೇವತಾಸ್ತವನಿಧಿಯೊಳ್ ಸಗುವಾತಂ] ಮೂಱನೆಯ ಶ್ರಾವಕಂ ಸಾಮಯಿಕನೆಂಬಂ. ೧೩೬

ತಿಂಗಳ್ ನಾಲ್ಕುಂ ಪರ್ವದಿ
ನಂಗಳೊಳಂ ಪೆಱಗೆ ಪೇಳ್ದ ಗುಣಮನಿತಱೊಳಂ ।
ಪಿಂಗದುಪವಾಸಯುತನು [2]
ತ್ತುಂಗಂ ಬಾಪೆಂದು ಧಾತ್ರಿ ಕೈಮುಗಿಪನೆಗಂ [3] ॥ ೧೩೭

---

1 ಸಂಕಲೆಯುಸಿಕ್ಕಿದಂತೆನಿಲ್ದು, (ಬ. ೭.)

2 ಪಿಂಗದೆ ಗುಣನಿಳಯುದೊಳು, (ಬ. ಕ)

3 ಪೇಳ್ ಪ್ರೋಷದೋಪವಾಸಂ ಪೆಸರಿಂ, (ಗ)

ಉಪವಾಸದೊಳ್ನೆಗೞ್ದ ಪ್ರೋಷಧೋಪವಾಸನೆಂಬ ನಾಲ್ಕನೆಯ
ಶ್ರಾವಕನಕ್ಕುಂ ॥ ೧೩೮

ಪೆಱಗಣವುಸಹಿತವೊಳ್ಪಂ
ಮಱೆಯದೆ ದಯೆಪರಸು ಪಸಿಯ ವಸ್ತುಗಳಂ ತಾಂ ।
ಮೆಱೆದುಂ ಕೊಳಲೊಲ್ಲದವಂ
ಪೆಱತೇಂ ಸಚ್ಚಿತ್ತನೆಂದೈದನೆಯಾತಂ ॥ ೧೩೯

ಇರುಳಲ್ಲದೆ ಪಗಲೊಳ್ಪಂ
ಡಿರ ಸೇವೆಯನೆಯ್ದೆ ಬಿಟ್ಟು ಮುಂ ಪೇೞ್ದ ಗುಣಂ ।
ಬೆರಸಿದರ್ಗೆ ಶ್ರಾವಕನು
ವ್ವರೆಯೊಳ್ ತಾಂ ರಾತ್ರಿಭಕ್ತನಾಱನೆಯಾತಂ ॥ ೧೪೦

ಪರಿತಪ ಕಟ್ಟ ಮಾರ್ಗತಿಯ ಬಟ್ಟೆ ಕಳಂಕದ ಪುಟ್ಟಿ ಮೞಬುವಾ
ಗರಮಿವರೆಂದು ಕಾಮಿನಿಯರೊಂದುಪಭೋಗವನೆಯ್ದೆ ಬಿಟ್ಟು ಸ
ಚ್ಚರಿತದೊಳಾತರ್ಗೆ [ಕೂರ್ತೆಸಗುವ ವೃತ್ತಮಸದ್ಗುಣನಲ್ತೆ ಧಾತ್ರಿಗ
ಚ್ಚರಿ ಸಕಲೈಕಪುಣ್ಯಸಿದ್ಧಿ ದುರ್ಗುಣದೂರನುದಾರನುತ್ತಮಂ ॥ ೧೪೧

ಬ್ರಹ್ಮಚಾರಿಯೆಂಬೇೞನೆಯ ಶ್ರಾವಕಂ ॥][1] ೧೪೨

ಆರಂಭದ ದೆಸೆಯಂ ಬಿ
ಟ್ಟೋರಂತಿರೆ ಪೆಱಗೆ ಪೇೞ್ದ ಗುಣಮೆಸೆತಱೊಳಂ ।
ಸಾರವಿದನೆನಿಸಿ [2] ನಡೆವವ
ನಾರಂಭನಿವೃತ್ತನೆಂಟನೆಯಾತಂ ॥ ೧೪೩

ಭರದಿಂ ಮುಂಪೇೞ್ದ ಗುಣಂ
ಬೆರಸು ಪರಿಗ್ರಹದ ಚಿಂತೆಯಂ ಬಿಟ್ಟು ಸದಾ ।

---

1 ಕೂರ್ತು ನಡೆಯುತ್ತಮನಗ್ಗದ ಬ್ರಹ್ಮಚಾರಿ ವಿಸ್ತರದೊಳುಪಾಸಕಂ ನೆಗೞ್ದನೇೞನೆಯಾತನನಂಗಮರ್ದನಂ, (ಗ) 2 ಸಾರಮಿವನೆನಿಸಿ. (ಖ. ಕ.)

ಚರಿತನೆನಿಪಂ ಪರಿಗ್ರಹ
ವಿರತಂ ಪಾಪಾದ್ರಿವಜ್ರ [1] ನೊಂಬತ್ತನೆಯಂ ॥ ೧೪೪

ಅನುಮತಿಯೆಂಬಂ ತಾಂ ಪ
ತ್ತನೆಯಾತಂ ತನಗೆ ಪೇಳ್ದ ಮಾರ್ಗಮನೆಂದುಂ [2] ।
ಮನವೊಸೆದು ಸೇವಿಸದೆ ಮು
ನ್ನಿನ ಗುಣದೊಳ್ ತ್ಕಡಿ ನೆಗಳ್ವನುನ್ನತಿಯಿಂದಂ ॥ ೧೪೫

ಅನ್ನಂ ಕುಱುತ್ತು ಮಾಡಿ
ದನ್ನಮನೌಷಧಮನೊಲ್ಲನುತ್ಸವದಿಂದಂ ।
ಮುನ್ನಿನ ಗುಣದೊಳ್ ತ್ಕಡಿ
ಪನ್ನೆಱಿಯುದ್ದಿಷ್ಟವಿರತಪನ್ನೊಂದನೆಯಂ [3] ॥ ೧೪೬

ಇಂತು ದಾರ್ಶನಿಕಂ ವ್ರತಿಕಂ ಸಾಮಾಯಿಕಂ ಪ್ರೋಷಧೋಪವಾಸಂ ಸಚಿತ್ತವಿರತಂ ರಾತ್ರಿಭಕ್ತಂ ಬ್ರಹ್ಮಚಾರಿ ಆರಂಭನಿವೃತ್ತಂ ಪರಿಗ್ರಹವಿರತಂ ಅನುಮತಿವಿರತಂ ಉದ್ದಿಷ್ಟವಿರತಂ ಎಂದು ಶ್ರಾವಕಸ್ಥಾನಂ ಪನ್ನೊಂದಕ್ಕುಮೆಂದು [ಮುನೀಂದ್ರೋತ್ತಮರ್] ಪೇಳೆ ಖೇಚರರಾಜಂ ॥ ೧೪೭

[ಅನುಪಮಮೆನಿಸುವ ಪನ್ನೊಂ
ದನೆಯ ಮಹಾಶ್ರಾವಕತ್ವಮಂ ದಯೆಯಿಂದಂ ।
ಮುನಿಪತಿ ದಯೆಗೆಯ್ವುದು ಮ
ತ್ತೆನಗೆಂ ಖೇಚರನ ನುಡಿಗೆ ಮೆಚ್ಚಿ ಮುನೀಂದ್ರಂ ॥ ೧೪೮

ಕಾರುಣ್ಯಂಗೆಯ್ವುದುಂ ಪಿರಿದುಮಾದರದಿಂದುಪಾಸಕರ ನೆಗೞ್ತೆಯೊಳರಿದೆನಿಸುವ ಏಕಾದಶಸ್ಥಾನಮುಮಂ ಕೈಕೊಂಡು ಉತ್ತರೋತ್ತರ

1 ಕನಕಾಂವಜ್ರ, (ಗ)

2 ಅನುಮತಿಯುಂಬಂ ಪನ್ನೊಂದನೆಯಾತಂ ತನಗೆ ಪೇಳ್ದ ಮಾರ್ಗಮನೆಂದುಂ, (ಗ) 3 ಉದ್ದಿಷ್ಟವಿರತಪತ್ತನೆಯಾತಂ, (ಗ)

ಮೊಗೆ ನೆಗಳುತ್ತುಂ] [1] ಪಲಕಾಲಂ ಗುರುಪಾದಸೇವೆಯೊಳದೊಂದು ದಿವಸಂ ಶೂರಸೇನವಿಷಯದುತ್ತರಮಧುರೆಯ ಜಿನಾಲಯಂಗಳಂ ವಂದಿಸುವೆನೆಂಬ ಬಗೆ ಪುಟ್ಟೆ [ತನ್ನೊಳಿಂತೆಂದಂ :— ೧೪೯

ಗುರುವಚನಮನುಲ್ಲಂಘಿಸಿ
ಚರಿಯಿಸಲಾಗದಂತೆ ಪಿರಿದುಂ ಸುಖಮಂ ।
ಪರದೊಳ್ ಲೇಸಾಗಿರೆ ಚೆ
ಚ್ಚರದಿಂದಂ ಪಡೆವನೆಂಬ ಶಿಷ್ಯಂ ಜಗದೊಳ್ ॥ ೧೫೦

ಆದುಕಾರಣದಿಂ ಗುರುಗಳನೊಡಂಬಡಿಸಿದೊಡಲ್ಲದಾವಕಾರ್ಯಮುಮಂ ನೆಗಳಲ್ಬಾರದೆಂದು ಮುನಿಗುಪ್ತಭಟ್ಟಾರಕರ್ಗೆ ವಿನಯದಿಂ ವಂದಿಸಿ ಕೈಗಳಂ ಮುಗಿದು ಮಲ್ಲನೆ ನಿಜಸ್ಥಾನದೊಳಿರ್ದಭಿಪ್ರಾಯಮವರ್] [2] ತಮ್ಮೊಳಿಂತೆಂದರ್, — ೧೫೧

ಸ್ಥಿರನಾಗಿ ಗುಣದೊಳಸಗುವ
ನರನುಂ ವೈರಾಗ್ಯಮುಳ್ಳನುಂ ಲಜ್ಜಿತನುಂ ।
ಪಿರಿದಱಿವಾತನುಮುರ್ವರೆ
ಚರಿಯಿಸುವೊಡಮುಚಿತರಲ್ಲರುತ್ತಮಗುಣಮಂ ॥ ೧೫೨

[ಎಂದಾತನ ಗುಣಮನಱಿದರಪ್ಪುದಱಿಂ ಪೋಗಿ ತೀರ್ಥವಂದನೆಯಂ ಮಾಡಿ ಬನ್ನಿಮೆಂದಿಂತೆಂದರ್,] ೧೫೩

ಗುಣಿಗಳನಲ್ಲದೆ ನೀಂ ಮು
ಗರ್ಣರಂ ಪೊರ್ದದಿರ ಲೋಗರೇನಾನುಮನೆಂ ।

---

1 ಪನ್ನೊಂದನೆಯ ಶ್ರಾವಕವ್ರತಮಂ ಕೈಕೊಂಡು. (ಗ)

2 ತನ್ನ ಪೋಗಂ ಗುರುಗಳಿಗಱಿಪುವುದುಮವರಿಂತೆಂದರ್, (ಗ)

ದಣಿಕದಿನೆಂದೊಡೆ ಮನದೊಳ್
ಸೆಣೆಯದಿರೊಳ್ತಪದೊಳರ್ತಿ [1] ಗುಂದದಿರಿನಿಸುಂ ॥ ೧೫೪

ಎಂದು [ಪೋಗಲ್ವೇೞ್ದು] [2] ವರುಣಮಹಾರಾಜನರಸಿಯಪ್ಪ ರೇವತೀಮಹಾದೇವಿಗೆ ಪರಕೆಯಂ ಉಂಡುರುಳಿಭಟ್ಟಾರಕರ್ಗೆ ಪ್ರತಿವಂದನೆಯುಮಂ ಮಱೆಯದೆ ಪೇೞ್ವುದೆಂದು ಗುರುಗಳ ಮಾತಿಂಗೆ [ಬ್ರಹ್ಮಚಾರಿ] ನಕ್ಕು ನಿಮಗಾಪುರದ ಶ್ರಾವಕರುಂ ಭವಸೇನಾಚಾರ್ಯರ್ಮೊದಲಾದಯ್ನೂರ್ವರ್ಮುನಿಗಳುಮಿರ್ದಂತೆ [ಯಾ ರೇವತೀಮಹಾದೇವಿಯು ಬಡವಟ್ಟುದುರ್ಂಡುರುಳಿಭಟ್ಟಾರಕರ ಮೇಲೆ ಕಡುಮೋಹಮೋ ಕೆಂಬುದುಮವರ ಸಂಬಂಧಮೆಲ್ಲಮಂ ನಿಮಗೆ ಬೆಸಗೊಳ್ವ ಗಸಣಿ ಬೇಡೆನೆ ಮತ್ತಂ ಮಾಣದೆ ಕಿಱುಬೆಸಗೊಳ ಮುನೀಂದ್ರ] [3] ನಿಂತೆಂದಂ ॥ ೧೫೫

ಬೇವಿನ ಗಿಡುವಂ ತಂದು
ಟ್ಟ್ಯಸಿನ ನೀರೆಱೆದಾಲಸೆಱೆದು ನಡಪಿದೊಡಂ ಕೇಳ್ ।
ಬೇವಿಂಗೆ ಕೈಪೆ ಪಿಂಗದು
ಭೂವಳಯದೊಳೆಂಬ ತೆಱದಿನಾಪುರದವರುಂ ॥ ೧೫೬

[ಸತ್ಯವೆನಿಸುವ ಧರ್ಮಮಂ ಕೇಳ್ದೊಡಂ ಸಂಶಯತುಲಾರೂಢರಪ್ಪುದಱಿಂ ಪರಕೆಯುಮಂ ವಂದನೆಯುಮಂ ಪೇೞ್ದವಿಲ್ಲೆನೆ ಬ್ರಹ್ಮಚಾರಿ ಬೞಿಗಾಗಿ ॥] [4] ೧೫೭

ಕನಸಂತರಿಕ್ಷಮಂಗ
ಧ್ವನಿಕಾರೇಳಂಕಲಿಸ ಲಕ್ಷಣಂಮತ್ತಂಮೋ ।

---

[1] ಬಳ್ಳಿದದೊಳರ್ಥ, (ಬ. ಕ.)

[2] ಬ್ರಹ್ಮಚಾರಿಯು ಪೋಗಲುಂ ಸ ೞಿ. (ಗ)

[3] ಸಿದ್ಧ್ಯಾರ್ಥಾಳವರ್ಮರ ಮೇಲೆ ಮೋಹವಲ್ಲೆಕಾಯ್ತೆನೆ ನಿನಗದಱ ಘಸಣಿ ಬೇಡಸಿರದಿರೆನೆ ಮತ್ತಂ ಕಿಱಿಬೆಸಗೊಳ್ವುದುಂ ವಾತ್ಸಲ್ಯರತ್ನಾಕರ, (ಗ)

[4] ಭವಸೇನಾಚಾರ್ಯಪ್ರಭೃತಿ ರುಷಿಯರುಂ ಸಂಶಯಾರೂಢರಪ್ಪುದಱಿಂದುದಾಸೀನಂಮಾಗಿ ಪೇೞ್ದರಿಲ್ಲ. (ಗ

ದಿನಿಕಂಪಮೆಂಬಪೆಷ್ಟಾಂಗ
ಗನಿಮಿತ್ತಂಬಗವೊಡವೆಗ್ಗೆ ಶುದ್ಧಗೆಯಲ್ತು ॥ (?) ೧೫೮

[ಅದಱಿಂದವರಱಿಯದ ವಿಷಯಮಿಲ್ಲಪ್ಪುದಱಿಂದಿವರ ಮಾತೇ ಗೆಯ್ದುಂ ತಪ್ಪಲಱಿಯದೆಂದು ನಿಶ್ಚಯಿಸಿ ಗುರುಗಳಂ ಬಂದಿಸಿ ಬೀೞ್ಕೊಂಡು ವಿದ್ಯೆಯಿಂ ವಿಗುರ್ವಿಸಿದ ರತ್ನತ್ರಯವಿರಾಜಿತಮಪ್ಪ ಪೊನ್ನ ವಿಮಾನಮನೇಱಿ ಗಗನಮಾರ್ಗದಿಂದುತ್ತರಮಧುರೆಗೆ ಬಂದು ಧರೆಗವತರಿಸಿ ಬ್ರಹ್ಮಚಾರಿಯಾಗಿ ಭವಸೇನಾಚಾರ್ಯರಲ್ಲಿಗೆ ಬಂದು ॥][1] ೧೫೯

ಪಿರಿದಪ್ಪ ಖ್ಯಾತಿಗೆ ನೀ
ವಿರೆ ನೋಂತಪರಾರೊ ಜಗದೊಳದಱಿಂ ನಿಮ್ಮಂ ।
ಪಿರಿವರ್ತಿವರಸು ನೋಡುವ
ಭರವಸದಿಂ ಪಾಂಡ್ಯದೇಶದಿಂದಂ ಬಂದೆಂ ॥ ೧೬೦

[ಎಂಬುದುಂ ಭವಸೇನಾಚಾರ್ಯರ್ ಬ್ರಹ್ಮಚಾರಿಯ ವಚನಕ್ಕೆ ಸಂತೋಷಂಬಟ್ಟಿರ್ಪುದುಂ ಬ್ರಹ್ಮಚಾರಿ ಭವಸೇನಾಚಾರ್ಯರ ಸಮ್ಯಕ್ತ್ವಮಂ ನೋಡಲೆಂದು ಮೂಱುಂ ನಾಲ್ಕುಂ ದಿವಸಂ ಪೋದಿಂಬೞಿಕ್ಕೊಂದುದಿವಸಂ ॥][2] ೧೬೧

ಮರುಳಂಗಟ್ಟುವದನುಂಡರೋ ಬಗೆವೊಡಂ ತಾವುಂ ಮರುಳ್ಗೊಂಡರೋ
ಪೆರವುಂಟೆಂಬುದನಾರು ಬಲ್ಲರಱಿವಿಂ ನಿಷ್ಕಾರಣಂ ಶ್ರಾವಕ
ರ್ಕಳುಳ್ಳಂ ಕಟ್ಟಿ ವಿಶೇಷಮಪ್ಪ ಧನಮಂ ಸಂಕ್ಲೇಶದಿಂ ಪೆತ್ತು ವಿ
ಸ್ತಾರದಿಂ ಭೋಗಿಸಲೊಲ್ಲಗೇಕೆ ಕಿಡುವರ್ನಿರ್ಬುದ್ಧಿಯಿಂ ಧರ್ಮದೊಳ್[3] ॥

[1] ಇವರ ವಚನಮುಂ ತಪ್ಪದೆಂದು ನಂಬಿ ವಿಮಾನಾರೂಢನಾಗಿಯುಂ ತತ್ಕ್ಷಣದಿಂದುತ್ತರ ಮಧುರೆಗೆ ಬಂದು ಭವಸೇನಾಚಾರ್ಯರಂ ಕಂಡು, (ಗ)

[2] ಎಂದವರ್ಗೆ ಸಂತೋಷಂಬಡಿಸಿ ಸಂತೋಷವಾಗಿ ನುಡಿದು ನಾಲ್ಕನೆಯ ದಿವಸದಿಂದಿರ್ದ್ ಭವಸೇನ ಚಾರ್ಯರ ಸಮ್ಯಕ್ತ್ವಮಂ ನೋಡಲೆಂದು ಬ್ರಹ್ಮಚಾರಿ ಇಂತೆಂದಂ, (ಗ) [3] ಕಿಡಿಪರ್ ನಿರ್ಬುದ್ಧಿಯಿಂದಾನದೊಳ್, (ಗ)

[ಎಂದು ಭವಸೇನಾಚಾರ್ಯರಂ ಬೆಸಗೊಳ್ವುದುಂ ಮೆಲ್ಲನೆ ನಕ್ಕು ಧರ್ಮದಿಂ ಪರತ್ರೆಯೊಳ್ ಸುಖಮುಂಟೆಂಬುದಾಗಮದೊಳ್ ಕೇಳ್ದುದಲ್ಲದಾವಱಿಯೆವೆಂಬುದುಂ ಬ್ರಹ್ಮಚಾರಿ ನಕ್ಕು ತನ್ನೊಳ್ ಮತ್ತಂ ॥] [1] ೧೬೩

ತ್ರಸಮಂ ವಿದ್ಯೆಗಳಂ ವಿಗುರ್ವಿಸಿ ಬೞಿಕ್ಕಂ ತಾಂ ತ್ರಸಪಾತ್ರಮಂ
ಮಿಸುಕಲ್ಕೀಯದೆ ಮೆಟ್ಟಿ ನಿಷ್ಕರುಣದಿಂದಲ್ಲಿರ್ದವೆಪ್ರಾಣಿಗು
ಬ್ಬಸಮಂ ಮಾಡದಿರೆಂದೊಡಾವುಮುನಿಮುನೀ ಜೀವಂಗಳುಂ ಜೀವಮೋ
ಬೆಸೆಸಂ ನಿಶ್ಚಯಮೆಂದೊಡಾವೞಿಯೆವೆಂತೆಂಬವರ್ಮಾನೀಂದ್ರೋತ್ತ
ಮರ್ ॥ ೧೬೪

[ಮತ್ತಮಪ್ರಾಶ್ಯನೀರಮಂ ಗುಂಡಿಯೊಳ್ತೀವಿತಂದುಕುಡುವುದು ಮುಟ್ಟಿದಿರೆ ನಕ್ಕು ॥] [2] ೧೬೫

ನೀರೊಳ್ಗಾಳಿಯೊಳಗ್ನಿಯೊಳ್ಧರಣಿಯೊಳ್ಜೀವಂಗಳುಂಟೆಂಬರಾ
ನೀರೊಳ್ಗಾಳಿಯೊಳಗ್ನಿಯೊಳ್ಧರಣಿಯೊಳ್ಜೀವಂಗಳಂ ಕಂಡರಿ
ನ್ನಾರೀಲೋಕದೊಳಲ್ಲ ಜೀವನೊಳವೋ ಮಾಣಿಲ್ಲವೋ ಕೇಳು ನೀ
ವಾರಯ್ದಿನ್ನೆನಗೆಂದೊಡಾವೞಿಯೆವೋದಂತೆಂಬುದಾಶ್ಚರ್ಯದಿಂ ॥ ೧೬೬

ಎಂಬುದುಮವರ ಮಾತಿಂಗಮಾಗಮದೊಳಂದ ವಿಶ್ವಾಸಕ್ಕಂ ತಲೆಯಂ ತೂಗಿ, ॥ ೧೬೭

ರಸಗೀತಂ ಪೊಣ್ಮೆ ತೂರ್ಯಧ್ವನಿಗಳಸೆಯೆ ಸದ್ರಾಗದಿಂ ತುಪ್ಪದಿಂದಂ
ಮೊಸರಿಂದಂ ಕ್ಷೀರದಿಂದಂ ಮುದದಿನಭಿಷವಂ ಮಾಡುವರ್ಭಕ್ತಿಯಿಂ ಭ
ವ್ಯಸಮೂಹಂ ವೀತರಾಗ[3]ರ್ಗವರೊಳ ಫಲಮೇನೆಂದು ತತ್ಸಾಧುಮಂ ಸಂ
ತಸದಿಂದಂ ಕೇಳೆ ನಾಮೇನಱಿವವು ಮುನಿಪರ್ಪುಣ್ಯಮುಂಟೆಂದು
ಪೇಳ್ದರ್ ॥ ೧೬೮

---

[1] ಉಳ್ಳುದುಂ ಪೇಳಿಮೆನೆ ದಾನದಿಂ ಸುಖಮುಂಟೆಂಬುದಂ ಆಗಮದಲ್ಲಿ ಪೇಳ್ದುದಲ್ಲದಾವಱಿಯೆವೆಂಬುದು ನಕ್ಕು (ಗ) [2] ಏಕಾದಶಾಂಗಧರಿಯಾಗಿಯುಂ ಮಿಪ ಗ್ರಂತೀವಪಾತಕ್ಕಾಮೆ ಜಗದೊಳ್ ಭವ್ಯತ್ವಮೆ ಕಷ್ಟಮೆಂದು ಮನದೊಳ್ [illegible] (ಗ) [3] [illegible] (ಗ)

ಎಂದು, ತಾವರೆ ನೀರಂ ಪೊರ್ದದಂತೆ, ಪೊಲೆಯಕುಳಜರಂ ಪೊರ್ದದಂತೆ [ಪಲ ತಾಳುಗೆಯುಂ ಪೊರ್ದದಂತೆ, ಪುರ್ವು ಕಿವಿಯುಂ ಪೊರ್ದದಂತೆ] ಮುಗಿಲ್ನೆಲನಂ ಪೊರ್ದದಂತೆ, ನಕ್ಷತ್ರಂ ಮೇರುವಂ ಪೊರ್ದದಂತೆ, ಪತಂಗಂ ಸೂರ್ಯನಂ ಪೊರ್ದದಂತೆ, [1] ಆಪ್ತಾಗಮ ಪದಾರ್ಥಂಗಳೊಳ್ ಪೊರ್ದುಗೆಯಿಲ್ಲದಿರೆ [ಬ್ರಹ್ಮಚಾರಿ ತನ್ನೊಳಂ ತೆಂದಂ ‖] ೧೬೯

ಮನರುಹಮಂ ಸಱಿಯೊಳ್ ಬೇ
ವಿನ ಗೊಟ್ಟೆಯೊಳನಿದನರ್ಕನೊಳ್ ತಂಪಂ ಮೇ ।
ದಿನಿಯೊಳಭವ್ಯರೊಳೊಳ್ಪಂ
ಘನಮಾಗಿರಲಱಿಸಿ ತೊಳಲುವಾತನೆ [2] ಗಾಂಪಂ ‖ ೧೭೦

ಕಿಸುವಿಂ ಜಿನರೂಪಂ ಮಾ
ಡಿಸಿ ಪೂಜೆಸೆಯುಂ ಕಿಲುಂಬು ಮಾಣದ ತೆಱದಿಂ ।
ವಸುಧೆಯೊಳಭವ್ಯರುಂ ಭಾ
ವಿಸುವೊಡೆ ಜಿನರೂಪನೆಯ್ದಿಯುಂ ಪೊಲ್ಲನಿವರ್ [3] ‖ ೧೭೧

[ಅದಱಿಂ] "ಸಂಸ್ಕಾರಶತೇನಾಪಿ ನ ಗುಂಡಃ ಕುಂಕುಮಾಯತೇ" ಎಂಬ ವಾಕ್ಯಾರ್ಥದ [ಂತೆ ಮಿಥ್ಯಾದೃಷ್ಟಿಗಳುಮಭವ್ಯರುಂ ತಮ್ಮನೆನಿತು ಸಮಱಿದೊಡಂ ನಡೆದೊಡಂ ಪ್ರಸಿದ್ಧರಾದೊಡಂ ನಿರಂತರ ಸುಖಪ್ರಾಪ್ತರಲ್ಲೆಂಬುದಂ ತನ್ನೊಳ್ ಬಗೆಯುತ್ತುಂ ಉಂಡುರುಳ ಭಟ್ಟಾರಕರ ಸಮ್ಯಕ್ತ್ವಮೆನಿತರಯ್ಯಲೆಂದು ಅವರಲ್ಲಿಗೆ ಬಂದು ಅವ ರ್ನೋಡೆನೋಡೆ ‖ ೧೭೨

ತಡೆಯದೆ ವಿದ್ಯೆಗಳಿಂದಾ
ಗಡೆ ತಗುಣೆಯನಿಱುಪೆಯುಂ ನೋಣಂಗಳನೊಪ್ಪಂ ।

---

1 ಪೊನ್ನು ಮಾಣಿಕಮುಂ ಪೊರ್ದರಂತೆ (ಗ)

2 ತಡೆಯದಱಿಸುವಾತನೆ (ಗ) 3 ವಸುಮತಿಯೊಳ್ದುರ್ಜನರುಂ ಪಿಸರ್ಪಡೆದುಂ ತಮ್ಮ ಸಹಜಮಂ ಬಿಟ್ಟಪರೇ (ಜ. ಕ)

ಬಡೆದಿರ್ದ ಪಸಿಯ ಪುಲ್ಗಳ್
ನುಡುಗದೆ ತಾಂ ಪಡೆದು ಫಲವುಮಂ ತತ್ಕ್ಷಣದೊಳ್ ‖][1] ೧೩೩

ಇಱುಪೆಗಳಂ ಮೆಟ್ಟುತ್ತುಂ
ಪಱಿಯುತ್ತುಂ ಪಸಿಯ ಪುಲ್ಗಳಂ ತಗುಣೆಗಳಂ ।
ಪೆಱತೇನೊರಸುತ್ತುಂ ಮೆ
ಯ್ಯಱಿಯದೆ ಕೊಲುತುಂ ನೋಣಂಗಳಂ ನಿರ್ದಯೆಯಿಂ ‖ ೧೩೪

ಇರ್ಪುದುಮದನುಂಡುರುಳಿಭಟ್ಟಾರಕರ್ಕಂಡು [ತಮ್ಮೊಳಿಂತೆಂದರ್ ‖] ೧೩೫

ಇದು ಪೇೞಿದು ಮೆಯ್ನೀರಂ
ಬುದನಱಿಯದೆ ಮೆಯ್ಗೆ ಪೂಸಿಕೊಳ್ವುವು ಮಕ್ಕಳ್ ।
ಪದಪಿಂದೆ ಮತ್ತೆ ಮಿಥ್ಯಾ
ತ್ವದ ಪುದುವಿಂ ಬಳರುವಶುಭಕರ್ಮಂಗಳುಮಂ[2] ‖ ೧೩೬

ಶುಭಕರ್ಮಂಗಳೆಂದು ನೆಗೞ್ವುದಾವುದು ಚೋದ್ಯಮೆಂದು ಬಗೆದಾತನೊಳಾದ ನಿಷ್ಕರುಣತೆಗೆ [ನಾಡೆಯುಂ] ಕೊಕ್ಕರಿಸಿ [ಬ್ರಹ್ಮಚಾರಿಯಲ್ಲಿಗೆ ಮೆಲ್ಲನೆ ಪೋಗಿ ಮೃದುವಚನಗಳಿಂದಿಂತೆಂದರ್ ‖][3] ೧೩೭

ದಯೆಯಿಲ್ಲದ ಧರ್ಮಮು
ನಯಮಿಲ್ಲದ ಸತಿಯುಮಾತ್ಮನಿಲ್ಲದ ತನುವುಂ ।
ಜಯಮಿಲ್ಲದ ಕಾಳಗಮುಂ
ಪ್ರಿಯಮಿಲ್ಲದ ಬಿರ್ದುಮೊಪ್ಪಲಾಱವು ಜಗದೊಳ್ ‖ ೧೩೮

---

1 ಫಲದಂತೆ ಅಥವ್ಯರುಮನಿಸೋದಿದೊಡಂ ದರ್ಶನದೊಳ್ ದೃಢರಲ್ಲರೆಂದು, ಅಲ್ಲಿಂದಮುಂಡುರುಳಿಭಟ್ಟಾರಕರ ಸಮ್ಯಕ್ತ್ವಮನಾರಯ್ಯಲೆಂದುಮವರಿರ್ದ ಪೋವೞಗೆ ಬಂದು ನಿದ್ರೆಯುಂ ಪಡೆದು (ಗ)   2 ಪುದುವಿಂ ಕೊಲೆಯ, ಕೆಲರ್ಗೆ ಸುಖಮಾಗಿರ್ಕುಂ (ಗ)

3 ಬೇಗಮವರಲ್ಲಿಗೆ ಬಂದಿಂತೆಂದರ್ (ಗ)

[ಜಿನಧರ್ಮವೆಂಬುದಿದು ಜೀ
ವನಿಕಾಯಕ್ಕಾವರ್ಮಮಾತ್ಮಹಿತಮಘೌಘಕುಲಜೀ ।
ವನಿಧಿಬಡವಾನಲಂ ಸ
ಜ್ಜನವಂದ್ಯಂ ಸುವ್ರತೈಕನಿಧಿ ಗುಣನಿಳಯಂ ॥ ೧೭೯

ಜನನಿ ಸಹೋದರರಿಷ್ಟರ್
ವನಿತೆ ಸುತರ್ತಂದೆ ಕೆಳೆಯರೆಂಬಿನಿಬರುಮೇಂ ।
ಮನವೊಲ್ದು ಮಹಾಜನರೂ
ಪನೆ ಪೊರ್ದಿದೆಯೆಂದೊಡಖಿಲಭೂಮಂಡಲದೊಳ್ ॥ ೧೮೦

ಇನ್ನು ನಿನ್ನಂತು ಧನ್ಯರುಂ ಮಾನ್ಯರುಮಿಲ್ಲದಱಿಂದೆ ಕೇವಲ ವೀರದಿಂ ಜಿನರೂಪಂ ಪೊರ್ದಿದೆಯಿನ್ನಲಸನಾಗದೆ ಗುಣವಂತರಂ ಪೊರ್ದಿ ಪರಮಾಗಮಮನೋದುವುದು ॥ ೧೮೧

ಪರಮಾಗಮದಿಂದಲ್ಲದೆ
ನಿರುತಂ ಸದ್ಧರ್ಮಮಱಿಯಬಾರದು ಧರ್ಮಂ ।
ದೊರೆಕೊಂಡೊಡಲ್ಲದಕ್ಷಯ
ಸಿರಿಯುಂ ಕೈಸಾರಲಱಿಯದತಿಶಯದಿಂದಂ ॥ ೧೮೨

ಅದುಕಾರಣದಿಂದಾಗಮಮನೋದುವುದು; ಪರಮಾಗಮಮನೋದಿದೊಡಲ್ಲದೆ ದಯಾಮೂಲಮಪ್ಪ ಧರ್ಮಮನಱಿಯಲ್ಬಾರದು; ನೀಂ ನಿರ್ದಯರಂತೆ ಜೀವಂಗಳ್ಗೆ ಬಾಧೆಯಂ ಮಾಡವೇಡೆನೆ ಬ್ರಹ್ಮಚಾರಿಯಿಂತೆಂದಂ ॥][1] ೧೮೩

ತನುವಂ ತಪದೊಳ್ಕುಂದಿಸಿ
ವನಿತೆಯರಂ ತೊಱೆದಿಹತ್ರಯೊಳ್ಸುಖಮಂ ಕೆಂ ।

[1] ಜೀವದಯೆಯುವಿಲ್ಲದ ತಪವುಮವೊಪ್ಪದು ನೀಂ ಕರುಣಿಗಳಂತೆ ಪ್ರಾಣಿವಧೆಯಂ ಮಾಡಲಾಗದು ಜಿನಧರ್ಮವೆಂಬುದು ಜಿನಧರ್ಮಮುಂ ಜಿನಾಗಮಮುಂ ನೀಂ ಮನದೊಳ್ಭಾವಿಸಿ ಜಿನಕುಲತಮನ ತಿಬ್ಬಂ ಬಿಡಿದು ನಡೆವುದು ದಯೆಯಿಂದಂ (ಗ)

ಮನೆ ಕಿಡಿಸಿ ಮೇಲೆ ಸುಖಮಂ
ಮನದೊಳ್ಬಯಸುವನೆ ಗಾಂಪನದನಾರಱಿವರ್ ॥ ೧೮೪

ಎಂಬುದುಂ [ಉಂಡುರುಳಿಭಟ್ಟಾರಕರಿಂತೆಂದರ್ :–] ॥ ೧೮೫

ನೆಱೆ ನಿನ್ನ ಬೆನ್ನನೇನಂ
ದಱಿಯೈ ನೀನಿನಿತಱಿಂದೆ ಬೆನ್ನಿಲ್ಲೆಂಬಾ ।
ಪಱುವಾಯ್ತನದಿಂದೇನಂ
ದಱಿಯದೆ ಗಱಪುವರ ನುಡಿಗಳಂ ಕೈಕೊಳ್ವಾ ॥ ೧೮೬

ನೀಂ ನಿನ್ನ ಕಣ್ಣ ಪಾಪೆಯು
ನುನ್ನತಿಯಿಂದಱಿಯದನಿತಱಿಂ ಪಾಪೆಗಳ ।
ಲ್ಲೆನ್ನಲ್ಕಕ್ಕುಮೆ ಗುಣಮಂ [1]
ಭಿನ್ನಗುಣರ್ನಂಬದನಿತಱಿಂದಿಲ್ಲೆಂಬಾ ॥ ೧೮೭

ನೀಂ ನಿನ್ನ ತಾಯ ಬಸಿಱೊಳ್
ನೀನಿರ್ದುದನೀಗಳಱಿಯೆಯೆಂಬನಿತಱೊಳಂ ।
ಮಾನಿತಗುಣ ಪುಸಿಯೆಂಬಾ
ನೀನಱಿಯದೊಡನಿತಱಿಂ ಪರತ್ರೆಯುಮಿಲ್ಲಾ ॥ ೧೮೮

ಎಂಬುದುಂ ಬ್ರಹ್ಮಚಾರಿ [ಯಿಂತೆಂದಂ ॥] ೧೮೯

ಸುರಲೋಕಸುಖಂ ತಪದಿಂ
ದೊರೆಕೊಳ್ಗೆಂದೋದು ಪೇೞ್ವುದಲ್ಲದೆ ಸತ್ತರ್ ।
ಸುರಗತಿಯಿಂದಂ ಬಂದೊ
ಪ್ಪಿರೆ ಪೇೞ್ದಿರೆ ನೀಮಿದೇಕೆ ಪರಮುಂಟೆಂಬಿರ್ ॥ ೧೯೦

[ಎನೆ ಮುನೀಂದ್ರೋತ್ತಮ] [2] ರಿಂತೆಂದರ್ :— ೧೯೧

[ದೂರದೊಳಿಪ್ಪ ಗ್ರಹಣಮ
ನಾರಾನುಂ ಕಂಡರೊಳರೆ ಕೇಳ್ದೋದಿದೊಡಂ ।

---

1 ಪೇೞ ಪರಮಂ (ಗ) 2 ಎಂಬುದುಮುಂಡುರುಳಿಭಟ್ಟಾರಕ (ಗ)

ಧಾರಿಣಿಯೊಳಱಿದು ಪೇೞ್ವರ್
ಸಾರಗುಣರ್ಬಗೆವೊಡೋದಿನೊಳ್ ಪುಸಿಯುಂಟೇ ॥ ೧೯೨

ಅಮವಾಸೆಯಂದು ಲೋಕಂ
ಹಿಮಕರನಂ ಕಾಣದನಿತಱಿಂ ಸಸಿಯಿಲ್ಲಾ ।
ಭ್ರಮೆಯಿಂದಂ ನೀನತಿದು
ಷ್ಷಮದೊಳ್ಪೇೞ್ ಜಿನರನಱಿಯದಿರೆ ಜಿನರಿಲ್ಲಾ ॥ ೧೯೩

ಸಸಿಯಿರ್ದಪನಮವಾಸೆಯು
ಬಸದಿಂ ಕಾಣಲ್ಕೆ ಬಾರದಂತಿರೆ ಜಿನರುಂ ।
ವಸುಧೆಯೊಳಿರ್ದಪರಿರ್ದುಂ
ಮಿಸುಕುವ ಕಲಿಗಾಲದೆಸಕದಿಂ ತಲೆದೋಱರ್ ॥ ೧೯೪

[ಎಂಬುದುಮೆಂತಾದೊಡೆ] [1] ನಿಮ್ಮಾಗಮದೊಳ್ ಪೇೞ್ದ
ಮೂಱುಂಲೋಕಂಗಳನಾವಂ ಪೊತ್ತಿರ್ದಪಂ ಪೇೞುವೆನೆ ॥ ೧೯೫

ಅಂಬರದೊಳ್ ಶಶಿದಿನಕರ
ಬಿಂಬಮನಾತಾರ್ಗಳ್ದ ಪೊತ್ತುಕೊಂಡಿರ್ದರ್ ಪೇ ।
ಱುಂಬಿಲ್ಲದೆ ಲೋಕತ್ರಯ
ಬಿಂಬಂ ತನ್ನ ಸ್ವಭಾವದಿಂ ನೆಲಸಿರ್ಕುಂ [2] ॥ ೧೯೬

[ಮತ್ತಂ ಪರಮಾಗಮಂ ಪುಸಿಯೆಂಬೆಯಪ್ಪೊಡೀ ಸಿದ್ಧಾಂತದೊಳ್ ಪೇೞಪಟ್ಟ ಗಣಿತಜೋಯಿಸಂಗಳ್ಗೆ ತಪ್ಪುವದಱಿಂದೊಂದು ಪುಸಿಯನೆವೇಡೆಂಬುದುಮೆಂತಪ್ಪೊಡೆ ನಿಮ್ಮಾಗಮದೊಳ್ ಪೇೞಪಟ್ಟ ಷಡ್ದ್ರವ್ಯ ಸಪ್ತತತ್ತ್ವ ನವಪದಾರ್ಥ ಪಂಚಾಸ್ತಿಕಾಯಮೆಂಬಿವು ಮೊದಲಾದ ಪಲವುಂತತ್ತ್ವಂಗಳುಂ ದಿಟಮೆ ಪೇೞುವೆಂಬುದುಂ ಉಂಡುರುಳಭಟ್ಟಾರಕರಿಂತೆಂದರ್ ॥] [3] ೧೯೭

---

1 ಅಂತೆ ತಾಂ (ಗ) 2 ನೆಲಸಿರ್ದಪ್ಪೂ (ಬ, ಕ.)

3 ಎಂಬುದುಮಂತಾದೊಡೆ ನಿಮ್ಮ ದೇವನಪ್ಪ ವರ್ಧಮಾನಸ್ವಾಮಿಯುಂ ಪೇೞ್ದ ಪಂಚಾಸ್ತಿಕಾಯಾದಿ ಪದಾರ್ಥಂಗಳಂ ದಿಟಮೆ ಪೇೞ್ವೆಮೆನೆ (ಗ)

ಖರಕರನುಷ್ಣಮಂ ತೊಱೆದು ತಣ್ಣದನಪ್ಪೊಡವಿಂದು ತಣ್ಪನ
ಚ್ಚರಿಯೆನೆ ಬಿಟ್ಟು ತೀವ್ರಕರನಪ್ಪೊಡವೊಪ್ಪುವೆ ವಾರ್ಧಿಸಂಕುಲಂ
ಪರಿಹರಿಸಿರ್ದೊಡಂ ಜಲಮನಿಂದ್ರನಗಂ ನೆಲೆಯಿಂದಗಲ್ದೊಡಂ
ಪರಮಜಿನಾಗಮಂ ಮರುಳ ತಪ್ಪುಗುಮೇ ವಸುಧಾತಳಾಗ್ರದೊಳ್ ॥

ಎಂಬುದುಂ ಕಿವಿಯ ಶಾಲೆಯ, ಮಹಾನದಿಯ ಸಮುದ್ರದ, ಗಜದಂತಪರ್ವತದ ಮೇರುವಿನ, ಪಾಸಿನ ಪೊಕ್ಕಿನ, ಮಾಣಿಕದ ಕಾಂತಿಯ, ನಿಷಧದ ವಿದೇಹದ, ಚಿತ್ತೆಯ[1] ವಜ್ರೆಯ, ಮೊಲೆಯ ಕೆಚ್ಚಲ, ಮರನ ಕಿಚ್ಚಿನ, ಬೆಲ್ಲದ ಸವಿಯ, ಸಿಂಹದ ಕೇಸರದ, ಗಜದ ದಂತದ, ತಳದ ರೇಖೆಯ, ಪುರ್ವಿನ ನೊಸಲ, ಕಣ್ಣ ಪಾಪೆಯ, ಸ್ತನದ ಚೂಚುಕದ, ಬಸಿಱ ಬಾಸೆಯ, ಕೂಟದಂತೆ ಮಹಾಪುರುಷರ ಸಮ್ಯಕ್ತ್ವದೊಳಾದ ಕೂಟಮುಮತಿಶಯಮೆಂದು [ಂಡುರುಳಭಟ್ಟಾರಕರ ಸಮ್ಯಕ್ತ್ವಕ್ಕೆ ಮೆಚ್ಚಿ ಮನದೊಳ್ ಪೊಡೆಮಟ್ಟು ಮತ್ತಂ ಕ್ಷಮೆಯಿಂ ಪರೀಕ್ಷಿಸಲೆಂದು ॥ ೧೯೯

ಪಟ್ಟಿರ್ದರನಱಿಯದವೋಲ್
ಮೆಟ್ಟುವುದುಂ ಕಾಲೊಳಾದ ಕೆಸಱೆಲ್ಲಂ ಮೇ ।
ಲೊಟ್ಟಿದ ತೆಱದಿಂ ಪತ್ತಿದೊ
ಡೊಟ್ಟಜೆಯಿಂದಿರ್ದ ಗಜಱು ಗರ್ಜಿಸದಿನಿಸುಂ ॥ ೨೦೦

ಮೆಲ್ಲನೆ ಕುಳ್ಳಿರ್ದ ತಮ್ಮಂ ಪೆಱರಾರಾನುಂ ತಾಗಿ ಬಿರ್ದರೆಂದು ತಮ್ಮಂ ತಾಮೆ ನಿಂದಿಸಿಕೊಂಡು ಪ್ರಾಣಿಹಿತಮಪ್ಪುದಱಿಂದೇವೊಟ್ಟುಂ ಮೆಲ್ಲನೆ ನೋಡಿ ಪೋಗಿಮೆನೆ ಮನದೊಳಾದ ದಯೆಗೆ ಮೆಚ್ಚಿ ನುಱುದಿವೆಸಂ ॥ ೨೦೧

ಆನಿರ್ಪೆಡೆಯೊಳ್ದ್ರತಿರ್ಗಂ
ನೀನೆನ್ನಂ ಬಗೆಯದುದ್ಧತಿಕ್ಕೆಯೊಳಿರ್ದೈ ।
ನೀನೇಱಂದಲ್ಲಿಂದಭಿ
ಮಾನಂಗಿಡೆ ಜಡಿದು ಬಡಿದು ಕೆಡೆನೂಂಕುವುದುಂ ॥ ೨೦೨

1 ಚಿತ್ತೆಯ (ಗ)

ಮನದೊಳ್ಳನಿತಪ್ಪೊಡಂ ಮುನಿಸಿಲ್ಲದೆ ತಾಂ ಪಾಪಭೀರುಗಳಪ್ಪುದಱಿಂ ಬ್ರಹ್ಮಚಾರಿಗೆ ತಮ್ಮಿರ್ದೆಡೆಯನಿತ್ತು ಕ್ಷಮೆಗೊಂಡು ಮತ್ತೊಂದೆಡೆಗೆ ಪೋಪುದುಂ ಕರಮಾಶ್ಚರ್ಯಂಬಟ್ಟು ಕೃತಕರೋಷಮಂ ಬಿಟ್ಟು ತನ್ನೊಳಾದ ಕೃತಕಮೆಲ್ಲಮಂ ಪೇೞ್ದು ॥ ೨೦೩

ಕರಮಾದರದಿಂ ಭಕ್ತಿಯ
ಭರದಿಂ ಮೆಯ್ಯಱಿಯದಾಮುನೀಂದ್ರನ ಪಾದಾಂ |
ಬುರುಹಕ್ಕೆ ವಿನತನಾದಂ
ಸರಸಿರುಹಕ್ಕಳಿಗಳೞ್ಕರಿಂದೆಱಗುವವೋಲ್ ॥ ೨೦೪

ಅಂತು][1] ವಂದಿಸಿ ಮುನಿಗುಪ್ತಭಟ್ಟಾರಕರ ಪ್ರತಿವಂದನೆಯುಂ ಕೇೞ್ದು ಮಱುದಿವಸಂ ರೇವತೀಮಹಾದೇವಿಯೊಳಾದಮೂಢದೃಷ್ಟಿತ್ವಮನಾಱಯಲೆಂದು ತತ್ಪುರದ ಮೂಡಣ ದೆಸೆಗೆ ಬಂದು ವಿದ್ಯೆಗಳಂ ನೆನೆದು ಬರಿಸಿ ವಿಗುರ್ವಣೆಯಿಂ ॥ ೨೦೫

ವರಕಮಂಡಲಮೊಪ್ಪೆ ಹಸ್ತದೊಳೋಜೆವೆತ್ತಿರೆ ಬೆಳ್ಳಿಯು
ತ್ತರಿಗೆ ಜನ್ನಿವರಂ ಬೆಡಂಗಳವಟ್ಟು ಬಾಲದಿನೇಶನಂ
ತಿರೆ ತನುಚ್ಛವಿ ನಾಡೆ ಶೋಭಿಸೆ ಹಂಸೆ ರಂಜಿಸಿ ತೋಱೆ ಭೂ
ಸುರಚತುರ್ವದನಂ ವಿರಾಜಿಸೆ ಧಾತ್ರಿಗಚ್ಚರಿಯಪ್ಪಿನಂ ॥ ೨೦೬

ಬ್ರಹ್ಮನ ರೂಪಂ ಕೈಕೊಂಡು ಮಹಾವಿಭೂತಿಯಿಂದಿರ್ಪುದುಮಾಪೊೞಲೊಳಾದಱಿಶ್ರಾವಕರುಂ ಸಂಶಯಶ್ರಾವಕರುಂ[2] ಕೇಳ್ಪಯಿಲ್ಲದ ಶ್ರಾವಕರುಂ ನಾಮಶ್ರಾವಕರುಂ ಚರ್ಚಾಶ್ರಾವಕರುಂ ಯಶೋರ್ಥಿಶ್ರಾವಕರುಂ ಕುಮತಿಶ್ರಾವಕರುಂ ಕಾರ್ಯಾರ್ಥಿಶ್ರಾವಕರುಂ [ಘೋಷ (?) ಶ್ರಾವಕರುಂ][3] ಮೊದಲಾಗೆ ಕಲ್ಲೆಯುಂ ಕವಿಲೆಯುಮಾಗೆ ಡೊಂಬರ

---

1 ಮೆಚ್ಚಿ ತಾನವರಂ (ಗ) 2 ಪೊೞಲೊಳಗಣ ಶ್ರಾವಕರುಂ ಮಿಶ್ರಶ್ರಾವಕರುಂ (ಗ)

3 ಸಂಘಾತಶ್ರಾವಕರುಂ, ಚರ್ಚೆಶ್ರಾವಕರುಂ, ಕಾರ್ಯಾರ್ಥಿಶ್ರಾವಕರುಂ ಗುಪ್ತಶ್ರಾವಕರುಂ, ಮಂತ್ರಾರ್ಥಿಶ್ರಾವಕರುಂ (ಗ)

ಬೀಡಂ ತೊಱೆ ಪಾಯ್ವಂತೆ ಕಳಕಳರವಂ ಪೆರ್ಚೆಯೊರ್ವ ನೊರ್ವಸಂ ವಿಃಗೆ ಪರಿದೆಯ್ದಿ ಪೂಜಿಸಿ ಪೊಡೆವಡುತ್ತಿರ್ಪನ್ನೆಗಂ ಪೊೞಲೊಳಾದ ಜನದುಲಿಪುಮಂ ಪಱೆಯ ರವಮುಮಂ [ಮೂಡದೇಱಿ ನೆಯ ನೆಲೆಯೊಳ್] ರೇವತೀಮಹಾದೇವಿವೆರಸು ನಾಲ್ಕುಸಾಸಿರ ಮಕುಟ ಬದ್ಧರಿಂ ಪರಿವೃತನಾಗಿಯೊಡ್ಡೋಲಗಂಗೊಟ್ಟಿರ್ದ ವರುಣಮಹಾ ರಾಜಂ ಕೇಳ್ದಾಶ್ಚರ್ಯಂಬಟ್ಟದೇನೆನೆ [ಕೆಲದೊಳಿರ್ದವರ್ ಬಿನ್ನಪವೆಂ ದಿಂತೆಂದರ್ ॥] [1] ೨೦೭

ಸರಸಿಜಾಸನನಿಂದು ನಮ್ಮ ಪೊೞಲ್ಗೆ ದೇವ ಮಹೋತ್ಸವಂ
ಬೆರಸು ತನ್ನ ನಿವಾಸದಿಂ ಪೊಱಮಟ್ಟು ತನ್ನ ಪರಿಗ್ರಹಂ
ಬೆರಸು ದುಂದುಭಿನಾದಮೊಪ್ಪಿರೆ ರಾಗದಿಂ ಮನಮೊಲ್ದು ಭೂ
ಸುರರ ಪೆರ್ವಡೆ ಕೀರ್ತಿಸುತ್ತಿರೆ ಬಂದು ವ್ಯೋಮೆಯೊಳಿರ್ದಪಂ [2] ॥ ೨೦೮

ಎಂಬುದುಂ [ಅರಸನಾಶ್ಚರ್ಯಂಬಟ್ಟು] ರೇವತೀಮಹಾದೇವಿಯ ಮೊಗಮಂ ನೋಡಿ ॥ ೨೦೯

ಸರಸಿಜಗರ್ಭಂ ಗಡ ಮಿಾ
ಪುರಕ್ಕೆ ಬಂದಿರ್ದನೆಂದೊಡಿನ್ನಮ್ಮಿಂದಂ ।
ಪಿರಿಯರ್ಪೆಱರಾರ್ಬಗೆವೊಡೆ
ಧರೆಯೊಳ್ ನಮ್ಮಂತು ನೋಡ ನೋಂತವರೊಳರೇ ॥ ೨೧೦

[ನಾಮಾಪರಮೇಶ್ವರರಂ ಪೂಜಿಸಿ ಪೊಡೆಮಟ್ಟು ಬರ್ಪಮೇೞ ಮೆನೆ ರೇವತೀಮಹಾದೇವಿ ನೃಪನ ದೇವತಾಮೂಢಕ್ಕೆ ಕಳಕಳಿಸಿ ನಕ್ಕಿಂತೆಂದಳ್] [3] ೨೧೧

---

[1] ಬಿನ್ನಪವೆಂದೊರ್ವನಿಂತೆಂದಂ (ಗ)

[2] ಏಂ ಬ್ರಹ್ಮಲೋಕದಿಂದಂ ತಾಂ ಬ್ರಹ್ಮಂ ಬಂದು ದೇವ ಪುಣ್ಯೋದಯದಿಂ ॥ ದಂ ಬ್ರಹ್ಮವೆರಸು ಜನವೆಲ್ಲಂ ಭ್ರಾಂತಿಂ ನೆರೆದು ನೋಡೆ ಮೂಡಣ ದೆಸೆಯೊಳ್ ॥ ಇರ್ದಪಂ (ಗ)

ಈ ಜಗದ ನರಪರ್ಗೆಲ್ಲಂ
ಪೂಜೆಗೆ ಮಾಯಾವಿಯೊರ್ವನರ್ತಿಯೊಳಂ ನಿ ।
ರ್ವ್ಯಾಜದೊಳ್ ತೊಡರ್ದ[1] ಖೇಚರ
ರಾಜಂ ಮೇಣ್ ವ್ಯಂತರಾಧಿಪಂ ಮೇಣಿನಿಸಂ ॥ ೧೧೨

ಮಾಡಿಕೊಂಡಿರ್ದಪಂ [ದೇವರಿವನಾ ಬ್ರಹ್ಮನೆಂದು ನಿಶ್ಚಯಿಸಿ ನಂ
ಬಲ್ವೇಡೆಮ್ಮಾಗಮದೊಳೆಪ್ಪೊಡೆ ಕಾಲಮವಸರ್ಪಿಣಿಯೆಂಬುದೀಕಾಲದ
ಮೊದಲೊಳಾದಿಬ್ರಹ್ಮನೆಂಬ ಪ್ರಥಮತೀರ್ಥೇಶ್ವರನಾದನಾ ಪರಮಾತ್ಮನು
ಮಂದೇ ಮೋಕ್ಷಲಕ್ಷ್ಮಿ][2] ಯೊಳ್ಕೂಡಿದನೆಂಬುದುಮರಸಂ ಪೋಗದಿರ್ದ
ನನ್ನೆಗಮಿತ್ತಲ್ ಕೃತಕಬ್ರಹ್ಮಂ ॥ ೧೧೩

ಅವರಿವರೆನ್ನದೆ ಪಟ್ಟಣ
ದವರೆಲ್ಲಂ ಬಂದರೆನ್ನನರ್ಚಿಸಲತ್ಯು ।
ತ್ಸವದಿಂ ರೇವತಿದೇವಿಯು
ವಿವಿಧಗುಣಾಭರಣೆ ಬಂದಳಿಲ್ಲನುನಯದಿಂ ॥ ೧೧೪

[ಎಂದು ವಿಸ್ಮಯಂಬಟ್ಟು] ತದ್ರೂಪನುಪಸಂಹರಿಸಿ ಮಱುದಿನಂ
ದಕ್ಷಿಣಭಾಗಕ್ಕೆ ಬಂದು ಕೌತುಕಮೆಪ್ಪಿನಂ[3] ॥ ೧೧೫

ಕೊರಲೊಳ್ ಕೌಸ್ತುಭಹಾರಮೊಪ್ಪೆ ಗದೆಯುಂ ಕೋದಂಡಮುಂ ಶಂ
ಖಮುಂ
ವರಚಕ್ರಾಯುಧಮುಂ ಚತುರ್ಭುಜದೊಳಂ ಚೆಲ್ವಾಗೆ ನೀಲಾದ್ರಿಯಂ
ತಿರೆ ದೇಹಚ್ಛವಿ ಶೋಭಿಸುತ್ತಿರೆ ವಿಭೂಷವ್ರಾತಮೆತ್ತಂ ಮನೋ
ಹರಮಾಗಲ್ಗರುಡಂ ವಿರಾಜಿಸೆ ಮಹೀಚಕ್ರಂ ಮನಂಗೊಳ್ವಿನಂ ॥ ೧೧೬

ದೇಸಿಯಿನೊಪ್ಪಿರೆ ತೋಯರು
ಹಾಸನೆ ಮೊದಲಾಗೆ ತನ್ನ ಕಾಂತೆಯರೀರೆ ।

---

[1] ಮನನಚ್ಚಿ (ಖ. ಕ.)
[2] ಅವಸರ್ಪಿಣಿಕಾಲದೊಳ್ ಆದಿಬ್ರಹ್ಮನಾದಪರಮೇಶ್ವರನುಂಮುಕ್ತಿ (ಗ)
[3] ಮಱುದಿವಸಂ ತೆಂಕಣದೆಸೆಯೊಳ್ ಪುರಕ್ಕೆಗುರ್ವಪ್ಪಿನಂ (ಗ)

ಸ್ಥಾಪಿಸಿರ್ದರ್ಮೊತ್ತಿರೆ
ಸ್ಥಾಪಿಸಿರ್ದರ್ಮಕುಟಬದ್ಧರುಂ ನಿಳೆ ಕೆಲದೊಳ್ ‖ ೨೧೭

ನಾರಾಯಣರೂಪಂ ಕೈಕೊಂಡಿರ್ಪುದುಂ ಪುರದವರೆಲ್ಲಂ ವಿಷ್ಣು ಪ್ರತ್ಯಕ್ಷಮಾಗಿರ್ದನೆಂದು ಮುನ್ನಿನಂತೆ ಬಂದು [ಪೂಜಿಸಿ ಪೊಡೆಮಡು ತಿರ್ದರನ್ನೆಗಂ ಅದನರಸನಱಿದು ರೇವತೀಮಹಾದೇವಿಯ]¹ ಮೊಗಮಂ ನೋಡಿ ‖ ೨೧೮

ನಿನ್ನೆ ವಿರಿಂಚಂ ಬಂದೊಡ
ದಂ ನಂಬುಗೆಯಿಲ್ಲದೊಲ್ಲೆನೆಂದೈ ಕೇಳ ।
ತ್ಯುನ್ನತಿಯಿಂ ಧರೆ ಬಣ್ಣಿಸೆ
ಪನ್ನಗಪತಿಶಯನನಪ್ಪ ಸರಸಿಜನಾಭಂ ‖ ೨೧೯

[ಬಂದಿರ್ದನದುಮಂ ಪುಸಿಮಾಡದೆ ನಮ್ಮ ಪರಿಜನಂಬೆರಸು ಪೋಗಿ ವಿಷ್ಣುವನರ್ಚಿಸಿ ಪೊಡೆಮಟ್ಟು ಬರ್ಪಮೆನೆ ವನಿತಾರತ್ನ]² ಯಿಂತೆಂದಳ್ ‖ ೨೨೦

ಇವನುಂ ಮಾಯಾಪುಂಜಂ
ಭುವನದೊಳತಿಪೂಜೆಗೊಳಿಸುವ ಖಳನೇ ಮೇ ।
ಣವೆನಿಪ ನಿಶ್ಚಯದಿಂ ಕೇ
ಶವನಲ್ಲಂ ದೇವ ಬಗೆವೊಡೆಮ್ಮಾಗಮದೊಳ್ ‖ ೨೨೧

ನವಕೇಶವರುರ್ವರೆಯೊಳ
ಗವರುಂ ಮುನ್ನಾಗಿ ಪೋದರೀಗಳಿದೇನಾ ।
ನುವನೊರ್ವನಂತೆ ಮಾಡಿದೊ
ಡವಂಗೆ ನೀಂ ಭಕ್ತಿಯಿಂದಮೆಱಗುವೆನೆಂಬಾ ‖ ೨೨೨

ಎಂಬುದುಮರ [ಸನರ] ಸಿಯ ಮಾತಿಂಗೆ ಚೋದ್ಯಂಬಟ್ಟು ಪೋಗದಿ ರ್ದನನ್ನೆಗಮಿತ್ತಲ್ ಮಾಯಾವಿಷ್ಣು ರೇವತೀಮಹಾ [ದೇವಿ ಯೊರ್ವಳ

---

¹ ಪೂಜಿಸುತ್ತಿರೆ ವರುಣಮಹಾರಾಜನಱಿದರಸಿಯ (ಗ)

² ಇಂದು ಪುಸಿಯೆಯಾದೊಡಂ ಪೂಜಿಸಿ ಪೊಡೆಮಟ್ಟು ಬರ್ಪಮೇಳಿಮೆನೆ ರೇವತಿಮಹಾದೇವಿ (ಗ)

ಬಾರದುದಕ್ಕೆ ವಿಸ್ಮಯಂಬಟ್ಟು ವಿಗುರ್ವಣೆಯನದೃಶ್ಯಂಮಾಡಿ ಮತ್ತಂ ಮಱುದಿವಸಮಾಪುರದ] [1] ಪಡುವಣ ದೆಸೆಗೆ ಬಂದು ಮಹಾದ್ಭುತ ಮಪ್ಪಿನಂ ॥ ೨೩

ಶಿರದೊಳ್ ಗಂಗಾಜಲಮೊ
ಪ್ಪಿರೆ ಜಡೆಯೊಳ್ಶಶಶಾಂಕನೆಸೆದಿರೆ ನೊಸಲೊಳ್ ।
ಕರಮುರಿಗಣ್ಣೊಳಪಟ್ಟಿರೆ
ಗಿರಿಸುತೆ ವಾಮಾರ್ಧದೊಳ್ವಿರಾಜಿಸೆ ಮುದದಿಂ ॥ ೨೪

ಕರದೊಳ್ ಫಣಿಕಂಕಣಮೆಸೆ
ದಿರೆ ಶೂಲಂ ಡಮರುಗಂ ಕಪಾಲಂ ತಳದೊಳ್ ।
ಕರಮೊಪ್ಪೆ ಶಲ್ಯಭೂಷಾ
ತ್ಕರಮಂಗದೊಳಯ್ದೆ ಶೋಭೆವೆತ್ತಿರೆ ಚೆಲ್ವಿಂ ॥ ೨೫

ನಿರುಪಮತಾರಾಚಳದಂ
ತಿರೆ ದೇಹಚ್ಛಾಯೆಯಿರ್ಪ ವೃಷವಾಹನಮು ।
ಚ್ಚರಿಯಾಗೆ ಮರುಳ ಪೆರ್ವಡೆ
ಕರಮೆತ್ತಾಶ್ಚರ್ಯಮಾಗೆ ಬಂದಿರೆ ಕೆಲದೊಳ್ ॥ ೨೬

[ಈಶ್ವರನ ರೂಪಂ ವಿಗುರ್ವಿಸಿ ಬಂದಿರ್ಪುದುಂ ಪುರದವರೆಲ್ಲಮಚ್ಚರಿವಟ್ಟು ಕಿವಿಯೊಳ್ಕೇಳ್ವೀಶ್ವರನಂ ಕಣ್ಣಾರ ಕಂಡೆವಮ್ಮಂ ಬಿಟ್ಟು ನೋಂತವರಾರೆಂದು ಬಗೆದ ಬಣ್ಣಿಕೆಯ ಪೂಜೆಗಳಂ ಮಾಡಿ ಪೊಡೆಮಡುತಿರ್ಪನ್ನೆಗಮಿತ್ತಲೀಶ್ವರಂ ಬಂದನೆಂಬುದಂ ವರುಣಮಹಾರಾಜಂ ಕೇಳ್ದು ತನ್ನಗ್ರಮಹಿಷಿಯು] [2] ಮೊಗಮಂ ನೋಡಿ ನಗುತ್ತುಮಿಂತೆಂದಂ ॥ ೨೭

---

1 ದೇವಿಯ ಬರವಂ ಕಾಣದೆ ರೂಪವುಪಸಂಹರಿಸಿ ಮಱುದಿವಸಂ (ಗ)

2 ಆ ತ್ರೀಶ್ವರನ ರೂಪಂ ಕೈಕೊಂಡಿರ್ಪುದುಮಂ ಪುರವೆಲ್ಲಂ ಕಿವಿಯೊಳ್ ಕೇಳ್ವೀಶ್ವರನಂ ಕಣ್ಣಾರೆ ಕಂಡವು ನಮ್ಮಿಂ ಕೃತಾರ್ಥರಾರೆಂದು ಪೂಜಿಸಿ ಪೊಡೆವಟ್ಟು ಕೊಂಡಾಡುತ್ತಿರೆ ವರುಣಮಹಾರಾಜನಱಿದರಸಿಯು (ಗ)

ವನಜಮುಖಿ ಕೇಳ ನೀಂ ಮೊ
ನ್ನಿನ ಶೂನ್ಯವಚನಮಂ ನುಡಿಯುದೆ ನೆ ।
ಟ್ಟನೆ ಬರ್ಪುದಿಂದು ಗೌರೀ
ಶನ ಪದಮಂ ಕಾಣಲೆಂಬುದುಂ ಸತಿ ನುಡಿವಳ್ ॥ ೨೨೮

ದೇವ ಬಿನ್ನಪಮೆಮ್ಮಾಗಮದೊಳ್ ಭೀಮಾವಳಿ ಮೊದಲಾದೇಕಾದಶರುದ್ರರುಂ ಮುನ್ನಾಗಿ ಪೋದರಿವಂ ರುದ್ರನಲ್ಲನೆನೆ ಭೂಮೀಶ್ವರಂ ಬೆಱಗಾಗಿ ರೇವತೀಮಹಾದೇವಿ ಪೋಗದಿರ್ದೊಡೆ ತಾನುಂ ಪೋಗದಿರ್ದನ್ನೆಗಮಿತ್ತಲ್ಮಾಯಾಹರಂ[1] [ರೇವತೀಮಹಾದೇವಿಯ ಬರವಂ ಕಾಣದೆ ವಿಸ್ಮಯಂಬಟ್ಟು][2] ಮತ್ತಮಾ ಮಹಾನುಭಾವೆಯ ಸಮ್ಯಕ್ತ್ವಮನಾರಯಲೆಂದು ಮಱುದಿವಸಂ ಬಡಗಣ ದೆಸೆಗೆ ಬಂದು [ಜಗಕಾಶ್ಚರ್ಯಮಪ್ಪಿನಂ] ॥ ೨೨೯

ಮಿಳಿರ್ವಶೋಕೆಯ ವೃಕ್ಷದಿಂ ಹರಿಪೀಠದಿಂ ಸುರತೂರ್ಯದಿಂ
ಪೊಳೆವ ಚಾಮರದೋಳಿಯಿಂ ನೆಱೆ ದಿವ್ಯನಿಸ್ವನದಿಂ ಸುರರ್
ತಳೆವ ಪುಷ್ಪಸಮೂಹದಿಂದೊದವಿರ್ದ ಮುಕ್ಕೊಡೆಯಿಂ ಪ್ರಭಾ
ವಳಯದಿಂ ರಮಣೀಯಮಾಗಿರೆ ಧಾತ್ರಿಗಚ್ಚರಿಯಪ್ಪಿನಂ ॥ ೨೩೦

ಶ್ರೀವರ್ಧಮಾನಸ್ವಾಮಿಯ ರೂಪುಗೊಂಡಿರ್ಪುದುಂ ಮುನ್ನಿನಂತೆ ಎಲ್ಲರುಂ ಪರಿದು ॥ ೨೩೧

ಕೆಲರಂಭೋರುಹದಿಂ ಕೆಲರ್ ಸುರಗಿಯಿಂ ಚೆನ್ನೈದಿಲಿಂದಂ ಕೆಲರ್
ಕೆಲರೊಂದುತ್ಪಲದಿಂ ಕೆಲರ್ವಕುಳದಿಂ ತಾಂಬೂಲದಿಂದಂ ಕೆಲರ್
ಕೆಲರೊಪ್ಪಿರ್ದ ಸುವರ್ಣಪುಷ್ಪಚಯದಿಂ ಕರ್ಪೂರದೀಪಂಗಳಿಂ
ಕೆಲರಾನಂದದಿನಿಂತು ಪೂಜಿಸಿ ಜಿನಾಧೀಶಾಂಘ್ರಿಪದ್ಮಂಗಳಂ ॥ ೨೩೨

---

[1] ಈತನೀಶ್ವರನಲ್ಲನೆನೆ ವರುಣಮಹಾರಾಜಂ ಪೋಗಲೊಲ್ಲದಿರ್ದನತ್ತಲ್ ಮಾಯಾಹರಂ (ಗ)

[2] ಪರ್ವಿನಲಿಂಗಿವಿಸುವವನುರ್ವರೆಯೊಳ್ ಜೀಗಮುಂಬ ನಾಂಪನ ತೆಱದಿಂ ನಿರ್ವ್ಯಾಧಿಗಳೆನ್ನುನ್ನರ್ ಸರ್ವಗುಣಾಂಬುಧಿಯ ಚಿತ್ತಮಂ ಕವಡುವರೇ ॥ ೨೨೯ ಎಂದು ಕೆ.ಮುಗಿದು ಮತ್ತಂ (ಗ)

[ಅಂತು ಪೂಜೆಸಿ] ಪೊಡೆವಡುತಿರ್ಪನ್ನೆಗಂ ವರ್ಧಮಾನಸ್ವಾಮಿ ಮಹಾಮಹಿಮೆಯಿಂ ಬಂದಿರ್ದನೆಂದು ವರುಣಮಹಾರಾಜಂ ಕೇಳ್ದು ರೇವತೀಮಹಾದೇವಿಗಿಂತೆಂದಂ ‖ ೩೩೩

ವನಜಾತಾನನೆ ಮುನ್ನಿನ
ವನರುಹನಂದನನುಮಂ ವೃಷಾರೂಢನುಮಂ ।
ವನರುಹನಾಭನುಮಂ ನಂ
ಬಿ ನಿತಾಂತಂ ಕೇಳ ಪೋಗಿ ಪೊಡೆಮಡಸಿದೈ ‖ ೩೩೪

ಅದು ನಿನಗುಚಿತಮಪ್ಪುದೀಗಳ್ ನಿನ್ನ ಕುಲಸ್ವಾಮಿ [ಯಪ್ಪ ವರ್ಧಮಾನಸ್ವಾಮಿ ಬಂದಿರ್ದಪನಾ ಪರಮಾತ್ಮನಂ ಪೂಜೆಸಿ ಪೊಡೆಮಟ್ಟು ಬರ್ಪಮರ್ಕನೆವೆರಸು ಪೂಜಿಮಡುವುದೆನೆ ಸಮ್ಯಕ್ತ್ವರತ್ನಾಕರೆ ಯಿಂ ತೆಂದಳ್] [1] ‖ ೩೩೫

ಇವನುಂ ಕೈವಲ್ಯಶ್ರೀ
ಧವನಪ್ಪ ಜಿನೇಂದ್ರನಲ್ಲನೆಮ್ಮಾಗಮದೊಳ್ ।
ಭುವನೇಶ್ವರ ಜಿನನಾಥ
ರ್ಪಿವರಿಪೊಡಿಪ್ಪತ್ತನಾಲ್ವರಮರಸ್ತುತ್ಯರ್ ‖ ೩೩೬

ಅವರುಂ ನಿಶ್ರ್ರೇಯಸಶ್ರೀಯೊಳ್ ಕೂಡಿರ್ದ ಪರಮೇಷ್ಠಿಗಳಾಗಿ [ಪುದಱಿಂದೀತಂ ವರ್ಧಮಾನಸ್ವಾಮಿಯೆಂಬ ಮಾತುಂ ಘಟಯಿಸದೆಂ ಬುದುಂ ರೇವತೀಮಹಾದೇವಿಯ ಮಾತಿನಂದಕ್ಕೆ ವರುಣಮಹಾರಾಜಂ ವಿಸ್ಮಯಂಬಟ್ಟು ಮೆಲ್ಲಗಿಂತೆಂದಂ ‖ ೩೩೭

ಸರಸಿರುಹವದನೆ ನಿನ್ನಿಂ
ಮರುಳ್ಗಳೇಂ ಭಕ್ತಿವೆರಸು ಪರಿದೆಯ್ದಿ ಜಿನೇ ।

---

1 ಬಂದಿರ್ದಪಂ ಪೋಗಿ ಪೂಜಿಸಿಪಂದಿಸಿ ಖರ್ಪವರ್ಕನೆವೆರಸು ನಡೆಯಿಮೆನೆ ರೇವತೀಮಹಾದೇವಿ ನಕ್ಕು (ಗ)

ಶ್ವರನೆಂದೆಱಗುವ ನವಿಸ್ಮಾ
ಪುರದೊಳಗಣಪೌಸತಕ್ಕರೆಲ್ಲರುಮಿಾಗಳ್ ‖ ೨೩೮

ಎಂಬುದುಮವರಸಿ ಯಿಂತೆಂದಳ್] [1] ದೇವಾ ಪುಣಿಸೆಯ ಪೂವೆಲ್ಲಂ ಕಾಯುಪ್ಪುವೇ, ನೆಲನನಗುಬ್ಬರೆಲ್ಲಂ ನಿಧಾನಮಂ ಕಾಣ್ಬರೇ, ಕೈಕಾಲುಳ್ಳರೆಲ್ಲಂ ಚಕ್ರವರ್ತಿಗಳೇ, ಮರನಾದುವೆಲ್ಲಂ ಶ್ರೀಖಂಡಮೇ, ಮೊಲೆ ಮುಡಿಯುಳ್ಳರೆಲ್ಲಂ ಸ್ತ್ರೀಯರೇ, ಪಗಿನಾದುವೆಲ್ಲಂ ಕರ್ಪೂರಮೇ, ಕೋಡುಳ್ಳವೆಲ್ಲಂ ಕರೆಪವೇ, ಗಿರಿಯಾದುವೆಲ್ಲಂ ಪೊನ್ನೇ, ಶಿಲೆಯಾದುವೆಲ್ಲಂ ವಜ್ರಮೇ, ಸಮುದ್ರವಾದುವೆಲ್ಲಂ ಪಾಲೇ, ಧಾನ್ಯಮಾದುವೆಲ್ಲಂ ಕಳವೆಯೇ, ನುಡಿಯುಳ್ಳವರೆಲ್ಲಂ ಮಂತ್ರಿಗಳೇ, ಬಂಟರಾದವರೆಲ್ಲಂ ನಾಯಕರೇ, ಕಾದುವರೆಲ್ಲಂ ವೀರರೇ, ಪಡೆವರೆಲ್ಲಂ ಸೂಳೆಯರೇ, ಪಾಡುವರೆಲ್ಲಂ ಗಾಂಧರ್ವರೇ, ಮೊಱೆವುವೆಲ್ಲಂ ತುಂಬಿಯೇ [ನೀರಾವುವೆಲ್ಲಂ ರುಚಿಯೇ] ಪುಷ್ಪವಾದುವೆಲ್ಲಂ ಕಮ್ಮಿದುವೇ, ಸಜ್ಜನರಾದರೆಲ್ಲಂ ಪತಿವ್ರತೆಯರೇ, ಶ್ರಾವಕರಾದವರೆಲ್ಲಂ ಸಮ್ಯಗ್ದೃಷ್ಟಿಗಳೇ, ಮೂಢತ್ರಯಮಿಲ್ಲದರ್ ಜೈನರೇ, ಎನೆ ಮೂಢತ್ರಯಂಗಳಾವುವವಂ ಪೇೞಿಮೆನೆಯುರಸಿಯಿಂತೆಂದಳ್ :— ೨೩೯

ಅನಲನನರ್ಕನಂ ಶಶಿಯನಿಂದ್ರನನಂತಕನಂ ಮರಂಗಳಂ
ವನಧಿಯನುರ್ವಿಯಂ ಮಡಕೆಯುಂ ತೊಱೆಯುಂ ಕೆಱೆಯುಂ ಗೃಹಂಗಳಂ
ಜನನಿಯನಯ್ಯನಂ ಪಶುವನೆತ್ತುಗಳಂ ಕುಲದೈವವೆಂದು ಮ
ಲ್ಲನೆ ಪೊಡೆಮಟ್ಟು ಪೂಜಿಸುವ ಗಾಂಪನೆ ದೈವವಿಮೂಢನುರ್ವಿಯೊಳ್ ‖
ಧುರದೊಳ್ ಕಮ್ಮರಿಯೊಳ್ ಮದೋರ್ವಿರುಹದೊಳ್ ಸಪ್ತಾರ್ಚಿಯೊಳ್ ನೀರ್ಗಳೊಳ್
ಭರದಿಂ ದೇಹಮನಿಕ್ಕಿಯುಜ್ಜುಗದೆ ಮಿಥ್ಯಾತೀರ್ಥಮಂ ಮಿಂದುಮಾ
ದರದಿಂ ದುಷ್ಟರ ಪೇಟ್ಕೆಯೊಳ್ ನೆಗೞ್ದುಮತ್ಯಾನಂದದಿಂದೆಯ್ದುವೆಂ
ಸುರಲೋಕಂಗಳನೆಂಬ ಗಾವಿಲನವಂ ತಾಂ ಲೋಕಮೂಢಂ ನೃಪಾ ‖

[1] ಪ್ಪರನೆ ಮಹೀವಲ್ಲಭಾ ನಕ್ಕು ಪುರದೊಳಗಣ ಶ್ರಾವಕರುಂ ಋಷಿಯರುಂ ಜಿನೇಶ್ವರನೆಂದು ಪೋಗಿ ಪೊಡೆಮಡುತ್ತಿರ್ದಪರವರ್ನಿನ್ನುಂ ಮರುಳ್ಗಳ್ ಪೇಳೆನೆ ರೇವತಿಮಹಾದೇವಿ (ಗ) [3] ತನುಗುಣಲಿಕ್ತಿದೊಳೀಣಿಸ ಹೊತ್ತುಗಳಂ (ಬ. ಕ.)

[ಧರ್ಮೋಪದೇಶಮಿಲ್ಲದೆ
ಕರ್ಮವನುಪಶಮಿಪ ಚರಿತಮಿಲ್ಲದೆ ದುಃಖ ।
ಕ್ಕಾರ್ನುವೆನಿಸಿರ್ದ ಲೌಕಿಕ
ಧರ್ಮದೊಳಸಗುವನೆ ಸಮಯಮೂಢಂ ನೃಪತೀ] ॥ ೨೪೨

ವೆರವಿಪ್ಪುದೆಂದು ದೈವಮ
ನೆರೆವವನುಂ ದೈವಮಿಗಳೀವುದು ಪುಸಿಯೇ ।
ಪರಮಾರ್ಥಮೆಂದು ನಂಬುವ
ನರನುಂ ಭೂಪಾಲ ಸಮಯಮೂಢನೆನಿಕ್ಕುಂ ॥ ೨೪೩

[ಜಗದೊಳ್ ಮಹೇಂದ್ರಜಾಲಾ
ದಿಗಳಂ ತೋರ್ಪವರನಿವರೆ ದೇವರ್ದಿಂಡರ್ ।
ಬಗೆವೊಡೆ ಕೇಳನ್ನುತೆ ನಂ
ಬುಗೆಯಿಂದೆಱಗುವನೆ ಸಮಯಮೂಢಂ ನೃಪತೀ ॥ ೨೪೪

ಪುರುಷನಂ ವಧುವಾಗೆ ತದ್ವಧುವಂ ಮನೋಹರಮಪ್ಪಿನಂ
ಪುರುಷನಾಗೆ ವಿನೋದದಿಂ ಪಗಲಂ ದಿಟಕ್ಕಿರುಳಾಗೆ ತಾ
ನಿರುಳನುಂ ಪಗಲಾಗೆ ಮಾಡುವ ದೇವರುಳ್ಳೊಡೆ ಧಾರಿಣೀ
ಶ್ವರನ ಮುಂಗಡೆ ತೋಱಲಾಗದೆ [1] ತೋರ್ಪನೆಂಬವನುರ್ವಿ
ಯೊಳ್ [2] ॥ ೨೪೫

ಎಂದು ಧರ್ಮಶ್ರವಣಂಗೆಯ್ಯುತಿರ್ಪನಮತ್ತಲ್ ಕೃತಕಜಿನಂ ರೇವತೀಮಹಾದೇವಿಯ ಬರವಂ ಕಾಣದೆ ತನ್ನೊಳಿಂತೆಂದಂ ॥ ೨೪೬

ಸ್ಥಿರಮಪ್ಪೀಗುಣಮಾಸರ
ಸಿರುಹಾಕ್ಷಿಯ ಮೆಯ್ಯೊಳಿಲ್ಲದಿರೆ ಮುನಿಗುಪ್ತೇ ।

---

1 ಶ್ವರನುತೋರಗೆಲಾಗದೆ (ಬ. ಕ.) 2 ಪುರುಷರನೆಯ್ದೆ ಕಾಮಿನಿಯರಾಗಿ ಸಾಕಾಮಿನಿಯರ್ಕಳಂ । ಪುರುಷರ ಮಾಳ್ಪೊಡಂ ಪಗಲನಿಂ ನಿರುಳಮಾಗಿರೆ ರಾತ್ರಿಯುಂ ಸವಿ । ಸ್ತರಮುಮಾಗೆ ಮಾಳ್ಪಮರರ್ದವಮಾಡಿದರಿಂಗೆ ಪುಣ್ಯದಿಂ ಸಿಂಬರೆ । ಪಾಪದಿಂಬಡತನಂ ಬರೆ ಮಾಡುವರಾರ್ ಧರಿತ್ರಿಯೊಳ್ ॥ ಇದನಱಿದು (ಗ)

ಶ್ವರರೀಪರಕೆಯನೇಂ ವಿ
ಸ್ತರದಿಂ ಪೇಳ್ದಿಟ್ಟುವೆರ್ಮಹೋತ್ಸವದಿಂದಂ ॥ ೭೪೭

ಎಂದು ಕೃತಕಜಿನರೂಪನುಡುಗಿಸಿ ನೆರೆದ ನೆರವಿ ನೋಡೆನೋಡೆ ಪೂರ್ವಸ್ವರೂಪಮಂ ಕೈಕೊಂಡು ರೇವತೀಮಹಾದೇವಿಯಲ್ಲಿಗೆ ಪಂದು ನಿಂದಿರ್ದ ಪಲತೆಱದಿಂ ಪೊಗೞ್ದು ಪೆಱಗಾದ ಸಂಬಂಧಮೆಲ್ಲಮಂ ತಿಳಿಯೆ ಪೇೞ್ದು ಮುನಿಗುಪ್ತಭಟ್ಟಾರಕರ ಪರಕೆಯುಂ ಪೇೞ್ದು ತತ್ಪುರದೊಳಾದ ಜಿನಾಲಯಂಗಳಂ ಬಂದಿಸಿ ದಕ್ಷಿಣಮಧುರೆಗೆ ಬ್ರಹ್ಮಚಾರಿ] [1] ಪೋದ ನಿತ್ತಲ್ ॥ ೭೪೮

ಶ್ರಾವಕರೆಲ್ಲರುಮಿರ್ದಂ
ತಾವೆರಮುನಿ ನೋಡ ಕೂರ್ತು ಪರಕೆಯನಿಂತೀ ।
ದೇವಿಗೆ ಪೇಳ್ದಿಟ್ಟದನೆನ
ಲೀವೆಸಿತಾರತ್ನೆಯಂತು ನೋಂತವರೊಳರೇ ॥ ೭೪೯

[ಪರಮಗುಣನಿಳಯೆ ಜಿನಮತ
ಸರೋಜಿನೀರಾಜಹಂಸೆ ಶೀಲಾಂಬುಧಿ ಸ ।
ಚ್ಚರಿತವಿಭೂಷಣೆ ಭವ್ಯೋ
ತ್ಕರಪೂಜಿತೆ ನಿಷ್ಕಲಂಕನಿರ್ಮಳೆ ಜಗದೊಳ್ ॥ ೭೫೦

ಎಂದು ಪುರಜನಮುಂ ಪರಿಜನಮುಂ ಜಗಜ್ಜನಮುಂ ಪೊಗೞು ತ್ತುಂ ಪೊಡೆಮಡುತ್ತುಮಿರೆ ವರುಣಮಹಾರಾಜಂ ಸದ್ಧರ್ಮಮಂ ಲೇಸಾಗಿ ನಂಬಿ ಮೂಢತ್ರಯದಿಂ ಪಿಂಗಿ ತನ್ನ ಪಿರಿಯ ಮಗನಪ್ಪ ಶಿವಕೀರ್ತಿಗೆ ಪಟ್ಟಮಂ ಕಟ್ಟಿ ರಾಜ್ಯಮಂ ಕೊಟ್ಟರಿಂಜಯಭಟ್ಟಾರಕರ ಪಾದಮೂಲ ದೊಳ್ ದೀಕ್ಷೆಯುಂ ಕೈಕೊಂಡಂ. ರೇವತೀಮಹಾದೇವಿ ದಾನಪೂಜೆ ಶೀಲೋಪವಾಸಮೆಂಬಿವೞೊಳರ್ತಿ ತನಗುಂಟಪ್ಪುದಱಿಂ ಪಲವುಕಾಲಂ॥

1 ಎಂದು ತತ್ವಮಂ ಪೇಳುತ್ತಿರ್ಪನ್ನೆಗಂ ಕೃತಕಜಿನಂ ರೇವತೀಮಹಾದೇವಿಯಲ್ಲಿಗೆ ನೆರದ ನೆರವಿ ನೋಡೆ ವಿಗುರ್ವಣೆಯನುಡುಗಿ ಮುನ್ನಿನ ರೂಪಂ ಕೈಕೊಂಡುಬಂದು ತತ್ಪ್ರಪಂಚಮೆಲ್ಲಮಂ ಪೇಳ್ದು ನಾನಾವಿಧದಿಂ ಪೊಗಳ್ದು ಮುನಿಗುಪ್ತಭಟ್ಟಾರಕರ ಪರಕೆಯುಂ ಪೇಳ್ದು (ಗ)

ಜಿನಪೂಜೆಗಳಂ ಕಣ್ಣಾಣಿ
ವಿನೆಗಂ ಮುನಿಗನ್ನದಾನಮಂ ಮನಮಾರಲ್ ।
ವನಜಾಸ್ಯೆ ಮಾಡಿ ಧರೆ ಜೀ
ಯೆನೆ ಕಡೆಯೊಳ್ತಾಳಿದು ಸಕಲಸಾಮ್ರಾಜ್ಯಮುಮಂ॥[1] ೨೪೨

ಮುನಿಗುಪ್ತಭಟ್ಟಾರಕರೆ ಗುರುಗಳಾಗೆ ಸುವ್ರತಗಂತಿಯರಲ್ಲಿ ದೀಕ್ಷೆಯಂ ಕೈಕೊಂಡು ಏಕಾದಶಾಂಗಧಾರಿಯಾಗಿ ಪಲವುಂಕಾಲಂ ತಪದೊಳ್ ಚರಿಯಿಸಿ ದಕ್ಷಿಣಮಧುರೆಯ ಜಿನಭವನವೆಲ್ಲಮಂ ಬಂದಿಸು ವೆನೆಂಬಕ್ಕರ್ತಿಯಿಂದುತ್ತರಮಧುರೆಯಿಂ ಪೋಅಮಟ್ಟು ಅಜ್ಜಿಕಾಸಮುದಾಯಂಬೆರಸು ಬರುತ್ತುಂ ಕರಹಾಟನಗರದೊಳ್ ॥ ೨೪೩

ತೊಟ್ಟನೆ ಕೊಳಲಾಲಸ್ಯಂ
ಪುಟ್ಟ ಮಹಾರುಜೆ ಶರೀರವೇದನೆಗಿನಿಸಂ ।
ಕೆಟ್ಟುಂ ಪೋಗೆನ್ನದೆ ಬಾ
ಯ್ವಿಟ್ಟರದೆ ಶರೀರಮೋಹಮಿಲ್ಲದೆ ಮನದೊಳ್ ॥ ೨೪೪

[ಶುಭಭಾವನೆವೆರಸು] ಸಂನ್ಯಸನಂ [ಗೆಯ್ದು ಸಮಾಧಿ] ವಿಧಿಯಿಂ ಮುಡಿಪಿ ಪದಿನಾಱನೆಯ [ಅಚ್ಯುತ] ಕಲ್ಪದೊಳ್ ಇಪ್ಪತ್ತೆರಡು ಸಾಗರೋಪಮಕಾಲ[ಮಾಯುಷ್ಯ]ಕೊಡೆಯಂ ಮಹರ್ಧಿಕದೇವನಾಗಿ ಪುಟ್ಟಿದಳ್ ॥ ೨೪೫

ರೇವತಿಗಂತಿಯರುತ್ತಮ
ಭಾವನೆಯಿಂ ಮುಡಿಪಿದೆಡೆ ಮಹೀವಳಯಂ ಸ ।

---

1 ಎಂದರಸಂ ಪೊಗಳ್ದು ಅರಸುವೆ ನಿರ್ವೇಗವಾಗಿ ತ್ರಿಮಾಳದಿಂ ಪಿಂಗಿ ತನ್ನ ಹಿರಿಯ ಮಗನಪ್ಪ ಶಿವಕೀರ್ತಿಗೆ ರಾಜ್ಯಮಂ ಕೊಟ್ಟು ಅರಿಂಜಯಭಟ್ಟಾರಕರಲ್ಲಿ ಸಾಸಿರ್ವರ್ ಮಕುಟಬದ್ಧರ್ ವೆರಸು ದೀಕ್ಷೆಯಂ ಕೈಕೊಂಡಂ. ರೇವತಿಮಹಾದೇವಿಯುಂ (ಗ)

2 ಪಲವುಂ ಕಾಲಂ ತಪಂಗೆಯ್ದು ದಕ್ಷಿಣಮಧುರೆಯ ಚೈತ್ಯಾಲಯಂಗಳಂ ವಂದಿಸಿ ಪೋಗುತ್ತುಂ ಕರಹಾಟವಿಷಯದೊಳ್ (ಗ)

ದ್ಭಾವದ ನೆಲೆ ಸಲೆ ಬಣ್ಣಿಸೆ [1]
ರೇವತಿಸತ್ತೀರ್ಥಮೆಂಬುದಾದುದು ಪೆಸರಿಂ ॥ ೨೫೬

ಅದುಕಾರಣದಿಂ ಸೌಖ್ಯಾ
ಭ್ಯುದಯಕ್ಕಾಟಿಸುವೆನೆಂಬ ಮನುಜಂ [2] ಮನದೊಳ್ ।
ಬೆದೆಬೆದೆಬೇಯದೆ ತಾಂ ಬಿಡು
ವುದು ದುಷ್ಕೃತಬಂಧಮಪ್ಪ [3] ಮೂಢತ್ರಯಮಂ ॥ ೨೫೭

ಎಂದು [ಪೇೞ್ದುದಂ ರೇವತೀಮಹಾದೇವಿಯ] [4] ಕಥೆಯಂ ಲೇಸಾಗಿ ಕೇಳ್ದು ॥ ೨೫೮

ನೃಪವಂದ್ಯಂ ವಾಗ್ವಧೂವಲ್ಲಭನಮಳಯಶಂ ನಿರ್ಮಳಂ ಕಿಲ್ಬಿಷೈಕ
ದ್ವಿಪಪಂಚಾಸ್ಯಂ ಮನೋಜೋತ್ಪಲರವಿ ಸುಜನಾಂಭೋಧಿಶೀತಾಂಶು ವಾರಾ
ಶಿಪರೀತಖ್ಯಾತನುದ್ಯದ್ಗುಣನಿಧಿಯೊಸೆದಂಖ್ಯಾತತ್ರೈವಿದ್ಯಚಕ್ರಾ [5]
ಧಿಪಪಾದಾಂಭೋಜಭೃಂಗಂ ಸುಕವಿಜನಮನಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧು
ಕರನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ದರ್ಶನಚತುರ್ಥಾಂಗವ್ಯಾವರ್ಣನಂ
ಪಂಚಮಾಶ್ವಾಸಂ.

---

1 ಮುಂಡಿಚೇರಿಯಮಹಿತಳದೊಳ್ ಸದ್ಭಾವದೆ ಸಲೆ ನಿಲೆ ಬಣ್ಣಿಸಿ (ಗ)
2 ಆಟಿಸುತ್ತುಮಿರ್ಪ ಭವ್ಯರ್ (ಗ) 3 ಕಿಲ್ಬಿಷಬಂಧಮೆನಿಪ (ಗ)
4 ಅಮೂಢದೃಷ್ಟಿತ್ವದ (ಗ) 5 ಗುಣಗಣನಿಧಿತ್ರೈವಿದ್ಯ (ಕ. ಬ.)

ಷ ಷ್ಠಾ ಶ್ವಾ ಸಂ .

ಶ್ರೀವನಿತೆಗೆ ನಿರ್ವಾಣ
ಶ್ರೀವನಿತೆಗೆ ತೊಡವಮೂಢದೃಷ್ಟಿತ್ವಂ ಸ ।
ದ್ಭಾವದೊಳಂದಧಿಕಗುಣಂ
ಭಾವಿಸಿದಂ ಸುಕವಿನಿಕರಪಿಕಮಾಕಂದಂ ॥ ೧

[ಅಂತಮೂಢದೃಷ್ಟಿತ್ವದೊಳಾದ ಕಥೆಯಂ ತಿಳದು ಮತ್ತಂ ॥ ೨

ಭೂವಿಖ್ಯಾತಂ ಗಣಧರ
ದೇವರ ಪಾದದ್ವಯಕ್ಕೆ ಪೊಡೆಮಟ್ಟು ವಿಚ ।
ಶ್ರೀವನಿತೆಗೆ ನಿರ್ವಾಣ
ಶ್ರೀವನಿತೆಗೆ ತೊಡವಿದೆನಿಸುವುಪಗೂಹನವಂ ॥ ೩

[ಎನಗಱಿವಂತಾಗೆ ನಿಮ್ಮಡಿ ಕಾರುಣ್ಯದಿಂ ಬೆಸಸುವುದೆಂಬುದುಂ ನಿರ್ವಾಣಲಕ್ಷ್ಮಿಯನೊಲಿಸುವುದಕ್ಕಿದು ಮೋಹನಕರವೆನಿಸುವುಪಗೂಹನದ ಕಥೆಯನಿಂತೆಂದು ಪೇಳ್ದರ್] [1] ॥ ೪

ಚಕ್ರವರ್ತಿಯಂತೆ ಮಧುಕರಂಗಳಂತೆ [2] ವಶ್ಯಮಂತ್ರದಂತೆ ಪರ್ಯಾಪ್ತಿಸಮೇತನಂತೆ ಋತುವಿನಂತೆ ಉತ್ಸರ್ಪಿಣಿಯಂತೆ ಸಿದ್ಧಾಂತದಂತೆ [3] ಸಂಜ್ಞಿಜೀವದಂತೆ ಪೊತ್ತಗೆಯಂತೆ ಆವಶ್ಯಕದಂತೆ [4] ದರ್ಶನ

---

1 ಅಂತಮೂಢದೃಷ್ಟಿತ್ವದ ಕಥೆಯಂ ಕೇಳ್ದು ಮುಂದಣುಪಗೂಹನದ ಕಥೆಯಂ ಬೆಸಸಿಮೆಂಬುದುಮಿಂತೆಂದು ಪೇಳ್ದರ್ (ಗ)

2 ಷಟ್ಚರಣರಂತೆ ಷಟ್ಪದದಂತೆ (ಗ) 3 ಕಾರಕದಂತೆ (ಗ)

4 ನಯದಂತೆ (ಗ)

ಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢ ದೃಷ್ಟಿತ್ವಮುಂ ಉಪಗೂಹನಮುಮೆಂಬಾಱುಮೊಳಂ ಸಂಪೂರ್ಣನಾಗಿ ಶೋಭಿಸುವುದು ‖ ೫

ಪೆಱಪೆಱವೆಸದಾಳಾಪ
ಕ್ಕೆಱಗದೆ ಸಮ್ಯಕ್ತ್ವಮೆಂಬ ಖಡ್ಗಕ್ಕಿದು ಸಂ ।
ದೊಱೆಯೆನಿಪುಪಗೂಹನದೊಳ್
ಮೆಱೆವುದು ಸದ್ಗುಣಮೆನಱಿವಿನೊಳ್ ನೆರೆದ ನರರ್ ‖ ೬

ಇನ್ನದಱ ಮಹಿಮಾಸ್ಪದಮೆಂತಪ್ಪುದೆಂದೊಡೆ ‖ ೭

[ಕರಮೊಪ್ಪುವುದತಿಶಯದಿಂ
ಧರಿತ್ರಿಯೊಳ್ ಗೊಲ್ಲವಿಷಯಮೆಂಬುದು ವಿಷಯಂ ।
ಕರಮೊಪ್ಪುವುದಾವಿಷಯದೊ
ಳುರುಮುದದಿಂ ಕಾಮಲಿಪ್ತಿಯೆಂಬುದು ನಗರಂ ‖ ೮

ಅದನಾಳ್ವಂ ಮನೋಹರನೆಂಬರಸನಾತನ ರಾಜಶ್ರೇಷ್ಠಿ ‖ ೯

ಆಪುರದೊಳಗಖಿಲಗುಣಗ
ಣೋಪೇತಂ ವೈಶ್ಯವಂಶಗಗನಾರ್ಕಂ ಭೂ [1] ।
ವ್ಯಾಪಿತಯಶಂ ಮನೋಹರ
ರೂಪಂ ಜಿನಭಕ್ತನೆಂಬನನುಪಮನಿರ್ಪಂ ‖ ೧೦

ಆತನ ಸಿರಿಯಂ ಪೇಳ್ವೊಡೆ
ಭೂತಳದೊಳ್ ರೂಢಿವೆತ್ತ ಧನದಂಗಂ ಪೆ ।
ರ್ಮಾತಿನ ದೇವೇಂದ್ರಂಗಂ
ಮಾತೇಂ ಬಗೆವಂದು ನಾಲ್ವೆರಲ್ ತಾಂ ಪಿರಿಯಂ ‖ ೧೧

ಸುರರಾಜನೆ ದೊರೆ ಭೋಗ
ಕ್ಕೊರೆಯಲ್ಲಂ ಜೈನಭಕ್ತಿಯೊಳ್ ಶ್ರೇಯಾಂಸಂ ।

[1] ವೈಶಾನ್ವಯಾಂಬರಾರ್ಕಂಭುವನ (ಬ. ಕ.)

ದೊರೆ ಜಗದೊಳ್ ಪೆಱರಾರುಂ
ದೊರೆಯಲ್ಲರ್ದಾನದೆಡೆಗೆ ವೈಶ್ಯೋತ್ತಮನೊಳ್ ॥ ೧೨

ಎನಿಸಿ ನೆಗಪ್ತೆವೆತ್ತ ಜಿನೇಂದ್ರಭಕ್ತಸೆಟ್ಟಿ ಸುಖಸಂಕಥಾವಿನೋದದಿಂದಿರ್ಪುದುಂ ಅತ್ತ ಮಗಧವಿಷಯದ ಪಾಟಲಿಪುತ್ರಮೆಂಬ ಪೊೞಲ ನಾಳ್ವಂ ವೀರಧ್ವಜನೆಂಬರಸನಾತನರಸಿ ಸುಸೀಮೆಯೆಂಬಳಾಯಿರ್ವರ್ಗಂ ಪ್ರಿಯನಂದನಂ ವೀರಕುಮಾರನೆಂಬನಾತಂ ದುರ್ಜನಪ್ರಿಯನುಂ ವಿಟಜನಾನಂದನುಂ ತಸ್ಕರವಿನೋದನುಂ ದುಷ್ಟಪ್ರಸಂಗನುಮಾಗಿ ಪಲವುದಿವಸಂ ಸಮಸ್ತದುರಾಚಾರಜನಪರಿವೃತನಾಗಿ ಪೊಱವೊೞಲೊಳ್ ಕುಳ್ಳಿರ್ದು ಕಳವಿನೊಳಾದ ಮಾತುಗಳಂ ನುಡಿಯಿಸಿ ಕೇಳುತ್ತುಮಿರ್ಪುದುಂ ಅಲ್ಲಿ ಚೋರಪ್ರಧಾನನೆಂಬನೊರ್ವನಿಂತೆಂದಂ][1] ॥ ೧೩

ಚಪಳನಿವಂ ಕಡುಗೞಪಂ
ವಿಪರೀತಮನೆನ್ನ ಮುಂದೆ ನುಡಿದಪನೆಂದು ।
ರ್ನಿಪ ಮುನಿಯುವೆಡ ಕೇಳ್ಬ
ನ್ನಪಮಂ ನೀನೊಂದೆಚಿತ್ತದಿಂದಂ ನೃಪತೀ ॥ ೧೪

ಎಂದು ವೀರಕುಮಾರಂಗಭಿಮುಖನಾಗಿ ನಿಂದು, ದೇವಾ ನಾಂ ಪುಗದ ದೇಶಮುಂ ಕಳದ ವಸ್ತುಗಳುಮಿಲ್ಲ; ಗೊಲ್ಲವಿಷಯದೊಳ್ ತಾಮ್ರಲಿಪ್ತಿಯೆಂಬ ಪುರದೊಳೊರ್ವ ಜಿನೇಂದ್ರಭಕ್ತನೆಂಬ ಪರದನ ದೇಹಾರದ ದೇವರ ಮುಕ್ಕೊಡೆಯೊಳೊಂದು ವೈಡೂರ್ಯಮಾಣಿಕಂ ಕೀಲಿಸಿರ್ದುದಾರತ್ನಮುಮನರ್ಘ್ಯರತ್ನಮೆನಿಪ್ಪುದದಕ್ಕೆ ಮೂಱುಂಲೋಕಂ ಬೆಲೆಯಲ್ಲೀ ಲೋಕದೊಳಪೂರ್ವಮುಂ ಕಂಡೆನೆಂಬುದುಂ [ವೀರಕುಮಾರನಾ

---

[1] ಗೊಲ್ಲವಿಷಯದೊಳ್ ತಾಮ್ರಲಿಪ್ತಿಯೆಂಬುದು ಪುರಮದನಾಳ್ವಂ ಮನೋಹರನೆಂಬರಸನಾತನ ರಾಜಶ್ರೇಷ್ಠಿ ಜಿನೇಂದ್ರಭಕ್ತಸೆಟ್ಟಿಯುಂ ಸುಖಸಂಕಥಾವಿನೋದದಿಂದಿರ್ಪುದುಮತ್ತಲ್ ಮಗಧವಿಷಯದ ಪಾಟಳಿಪುರಮೆಂಬ ಪುರಮದನಾಳ್ವಂ ವೀರಕುಮಾರನೆಂಬರಸನೊಂದುದಿವಸಂ ತಸ್ಕರರ ಗೋಷ್ಠಿಯೊಳಿರ್ದು ಕಳ್ಳರಂ ಮಾತಾಡಿಸಿ ಕೇಳುತ್ತುಮಿರ್ಪುದುಮಲ್ಲಿ ಕಳ್ಳರಿಗೆ ಕಳ್ಳನೆಂಬನೆರ್ದು ಬಿನ್ನಪಮೊಂದಿಂತೆಂದಂ (ಗ)

ತನ ಮಾತಿಂಗೆ ವಿಸ್ಮಯಂಬಟ್ಟು ತನಗಾರತ್ನದ ಮೇಲೆ ಚಿತ್ತಮಾಗೆ ಚೋರಪ್ರಧಾನಂಗಿಂತೆಂದಂ ॥ ೧೫

ಸಂದ ಕಳ್ಳರೊಳಲ್ಲ ನೀನೆ ಮಹಾವಿವೇಕಿಯೆ ಲೋಕದೊಳ್
ಕುಂದದುರ್ವರೆಯೆಲ್ಲಮಂ ಕಡುಧೂರ್ತರಂ ಕವರ್ದಂದದಿಂ
ಸಂದ ವಸ್ತುಗಳೆಲ್ಲಮಂ ನೆಱೆ ನೀನೆ ಸಾಧಿಸಿಕೊಂಡೆಯಿ
ನ್ನೆಂದೊಡಾವರರತ್ನಮೇಂ ಗಡ ಸಾಧಿಸಲ್ಕರಿದಾದುದೇ ॥ ೧೬

ಎಂಬುದುಂ ಚೋರಪ್ರಧಾನನಿಂತೆಂದಂ ॥ ೧೭

ಕನ್ನಮನಿಕ್ಕುವೊಡವನೀ
ಶೋನ್ನತ ನೆಲಗಟ್ಟು ವಜ್ರಮಯಮೇಱುವರಾರ್ ।
ತನ್ನಣ್ಮಿಂದಂ ಪುಗುವೊಡೆ
ಪನ್ನೆರಡೆಡೆ ಕಾಪು ಪುಗುವವಂಗೆಂಟೆರ್ದೆಯೇ ॥ ೧೮

ಮತ್ತಮಾಪುರದೊಳಗೆ ಕೆಲವುದಿವಸಮಿರ್ದು ಕಾಪಿನವರಂ ವಂಚಿಸಿ ಪುಗುವೆನೆಂಬೊಡಮಣಮುಮಾಱದು ; ಜಿನೇಂದ್ರದತ್ತಸೆಟ್ಟಿ ಜಿನಾರ್ಚನವಿನೋದದೊಳಂ ಜಿನಸಮಯಮಹೋತ್ಸವದೊಳಂ ಜಿನಕಥಾಳಾಪದೊಳಂ ನೇಸರ್ಪಟ್ಟು ನೇಸರ್ಮೂಡುವಿನಮಲ್ಲಿಯೆ ನೆಲಸಿರ್ಪನನೆ ವೀರಕುಮಾರಂ ಬೆಱಗಾಗಿ ಸೂಜಿಯ ಪಿನ್ನೆಯೊಳಂ ಮಣಿಯ ದ್ವಾರದೊಳಂ ನುಸುಳ್ದುರ್ವರಿರ್ದೆಡೆಯೊಳೂರ್ವನಂ ಕಳ್ವಂತಪ್ಪ ಕಳ್ಳರ ಕಳ್ಳನಿವಂ ಮೊದಲಾಗೆ ಪುಗಲರಿದೆಂದಪನಿನ್ನಾ ಮಹಾರತ್ನಮಂ ಕಳ್ವಂತಪ್ಪ ಗಂಡರಾರೆಂದು ಚಿಂತಿಸ ನೆರೆದಿರ್ದ ಕಳ್ಳರುಮಂ ನೋಡಿ ಕುಮಾರನಿಂತೆಂದಂ ॥ ೧೯

ಆವಾವುಪಾಯದಿಂದೆನ
ಗಾವಸ್ತುವೆನದಟನಾಗಿ ಪೋಗುತ್ತುಂ ತಂ [1] ।

---

1 ಪೋಗಿಬೇಗಂತಂ (ಬ. ಕ.)

ದೀವವೆನುಳ್ಳೊಡೆ ಕುಡುವೆಂ
ಭಾವಿಸದೆನ್ನರ್ಧರಾಜ್ಯಮಮಂ ನಿಶ್ಚಯದಿಂ ॥ ೨೦

ಎಂಬುದುಮಾಮಾತಿಂಗೆ ಸೂರ್ಪನೆಂಬ ಕಳ್ಳನೆರ್ದು ಕುಮಾರಂಗಭಿಮುಖನಾಗಿ ದೇವ ನಾನಾವಸ್ತುವಂ ತಂದಪೆನೆಂಬುದುಂ ಕುಮಾರಂ ಪೆರ್ಚಿ ಕರಮೊಳ್ಳಿತೆಂದು ಕರ್ಪೂರವೀಳೆಯಮಮಂ ಕುಡುವುದುಂ ಪಿರಿದುಂ ಪೊಣ್ದು ವೀರಕುಮಾರನಂ ಬೀಳ್ಕೊಂಡು ತನ್ನ ಮನೆಗೆ ಬಂದು ರತ್ನಮಮಂ ಕಳ್ವ ಉಪಾಯಮಮಂ ತನ್ನ ಮನದೊಳಗೆ ಭಾವಿಸಿನೋಡಿ॥ ೨೧

ಆದೊರೆಯ ಮಹಾಕಲಿಯುಂ
ಭೇದಿಸಲಣಮಾಱನೆಂದೊಡಾರತ್ನಮನಾರ್ ।
ಭೇದಿಸುವರೆಂದು ತಸ್ಕರ [1]
ರಾದಿಯ ಕಳ್ಳಂಗೆ ಚಿಂತೆ ಪುಟ್ಟಿದುದಾಗಳ್ ॥ ೨೨

ಪಱಿಯಾಳ್ತನದಱುಗಂಡಿಂ
ದಱಿಯದೆ ಮೆಯ್ವೆರ್ಚಿ ಪೋಗಿ ಪರದನ ಮನೆಯುಂ ।
ತಱುವಲಿತನದಿಂ ಪೊಕ್ಕೊಡೆ
ಕುಱಿ ಸಾವಂತಲ್ಲಿ ಸಾವು ನಿಶ್ಚಯಮಕ್ಕುಂ ॥ ೨೩

ಭಾವಕನಿಧಿ ಜಿನಭಕ್ತಂ
ಶ್ರಾವಕನಱಿವಂದು ಕೊಲ್ವನಲ್ಲಂ ಪೆಱಿ ।
ನ್ನಾವಿಭುವನಱಿಯಲಾಱದೆ [2]
ತಾವದಯಂ ಕೊಲ್ವರಲ್ಲಿ ಸಂದೆಯಮುಂಟೇ ॥ ೨೪

ತಾಂ ಕನ್ನಮಿಕ್ಕಿ ಧನಮಂ
ಭ್ರಾಂತಿಂದಂ ಕಳ್ವನೆಂಬನುಂ ಕಳ್ಳನೆ ಕೇಳ್ ।

---

1 ಪರಾರೊಮಿಕ್ಕುವರ್ (ಬ. ಕ.)

2 ಶ್ರಾವಕನಱಿದಂದು ಕೊಲುವನಲ್ಲದೆ ಪೆಱಿದಿಂನಾವಿಭುವನಱಿಯಲೀಯದೆ (ಬ. ಕ.)

ಎಂತುಂ ನೋವುಂ ಸಾವುಂ
ಚಿಂತೆಯುಮೆಣಮಾಗದಂತು ಕಳ್ವನೆ ಕಳ್ಗಂ ‖ ೨೫

ಅದುಕಾರಣದಿಂದಱಚಟ್ಟಂ ತಲೆ ಬುಗುಂಟುವೋದುದೆಂಬ ನಾಣ್ನುಡಿಯುಂತೆಱಬಂಟಂ ಪೋಗಿ ಪೊಕ್ಕನಪ್ಪೊಡೆ ಕಾಪಿನವರ ಕಯ್ಯ ಸಾವು ನಿಶ್ಚಯಂ ಸಮೆನಿಸುಗುಮುತ್ಸುಕತನದಿಂ ಮೂರ್ಖನಾಗಿ ಪುಗುವುದು ಬುದ್ಧಿಯಲ್ಲದು, ಕೆಲವು ವರುಷಂ ತಡೆದೊಡಂ ಕಡೆಗಲ್ಲಿಗುಪಾಯಮಂ ಲೇಸಾಗಿ ಬಲ್ಲೆನಾತನೆರಡಿಲ್ಲದ ಶ್ರಾವಕಂ ಜಿನಧರ್ಮದೊಳ್ ಸ್ಥಿರಚಿತ್ತಂ ಋಷಿಯರ ಮೇಲೆ ಮಹಾಪ್ರೀತನದಱಿಂದೆ ಮಾಯಾ ಋಷಿಯ ರೂಪಂ ಕೈಕೊಂಡುಗ್ರೋಗ್ರತಪದೊಳನ್ನಂ ಲೋಕದೊಳ್ ಪ್ರಸಿದ್ಧನಂ ಮಾಡಿಕೊಂಡು ಕಾಮಲಿಪ್ತಿನಗರಮನೆಯ್ದಿ ಜಿನೇಂದ್ರಭಕ್ತ ಸೆಟ್ಟಿಯ ಮನೆಯಂ ಪೊಕ್ಕು ಮೆಲ್ಲನೆ ಮೇಲ್ಪಡಿಸಿ ರತ್ನಮನೆನ್ನ ಕಯ್ಗೆ ಮಾಡುವೆನೆಂಬ ಕಜ್ಜಮನೆತ್ತಿಕೊಂಡು ತನ್ನ ಪೆಂಡಿರುಮಂ ಪುತ್ರರುಮಂ ಬಂಧುಗಳುಮಂ ಕರೆದಿಂತೆಂದಂ ‖ ೨೬

ಪಿರಿದಪ್ಪ ಬೆಸನನೆನಗಿಂ
ದರಸಂ ಕಡುಗೂರ್ಮೆವೆತ್ತು ಬೆಸಸಿದನಾನುಂ ।
ಭರದಿಂದಂತಾಬೆಸನಂ
ಕರಮೆಲ್ಲದೆ ಪೂಣ್ದು ವೀರದಿಂ ಕೈಕೊಂಡೆಂ ‖ ೨೭

ಅದುವುಂ ಸಾಮಾನ್ಯದ ಬೆಸನಲ್ಲದಾಬೆಸನೆನ್ನ ಪುಣ್ಯೋದಯದಿಂ ದೊರೆಕೊಂಡುದಕ್ಕುಮಪ್ಪೊಡೆ ವೀರಕುಮಾರನರ್ಧರಾಜ್ಯಮಂ ಮತ್ತೆನಿಸದೆ ಕೈಸಾರ್ಗುಮದುಕಾರಣದಿಂ ಉಪಾಯದೊಳಮಾಬೆಸನಂ ಸಾಧಿಸಿಕೊಂಡಲ್ಲದೆ ಬಾರೆನೆನ್ನ ದೆಸೆಗಂಜವೇಡ; ನೀವೆಲ್ಲರೆನ್ನಬರ್ಪನೆಗಂ ಬುದ್ಧಿವಂತರಾಗಿರ್ಪುದೆಂದಪ್ಪೈಸಿ ತತ್ಪುರದಿಂ ಪೊಱಮಟ್ಟು ಪೂರ್ವದೇಶಮಂ ಪೊಕ್ಕೊಂದೂರೊಳ್ ಒಂದು ಬಸದಿಯಂ ಸಾರ್ದು ಋಷಿಯರ ಮಾರ್ಗಮಂ ಕಲಿಯಲೆಂದು ಕೃತಕವೈರಾಗ್ಯದಿಂ ಸಂಸಾರಕ್ಕೆ ಪೇಸುವರಂತೆಲ್ಲಾ ಋಷಿಯರ್ಗಂ ಚಾಟುಕಾಱಕವಿನಯದಿಂ ಪೊಡೆಮಡುವುದುಂ ಮುನಿವರರಿಂತೆಂದರ್ ‖ ೨೮

ಎಲ್ಲಿಂದಂ ಬಂದಿರ್ಪರ್
ನ್ನೆಲ್ಲಿರ್ಪರ್ನಿಮ್ಮ ದೇಶಮಾವುದು ನೀಮಿ ।
ನ್ನೆಲ್ಲಿಗೆ ಪೋದಪಿರೆನೆ ತಳು
ವಿಲ್ಲದೆ ಮುನಿಸಂಕುಲಕ್ಕೆ ತಸ್ಕರನೆಂದಂ ॥ ೨೯

ಪರದೇಸಿಯೆ ನಮ್ಮವರೆ
ಲ್ಲರುಮಂ ಮನಮಾರೆ ತೊಱೆದು ತಪಮಂ ಕೈಕೊಂ।
ಡರಪರಿಸದೆ ನೆಗೞ್ದಘಮಂ
ಪರಿಯಿಪೆನೆಂಬರ್ತಿಯಿಂದಮಿಲ್ಲಿಗೆ ವಂದೆಂ ॥ ೩೦

ಒಡವೆಯು ನೆಂಟರ ಮಕ್ಕಳ್
ಕಡುಗೂರ್ಪಂಗನೆಯು ತಾಯ ತಂದೆಯು ಕೂರ್ತಾಂ ।
ನಡಪಿದರ್ ಬಂಟನೆಂದೋ
ಗಡಿಸದೆ ಮೋಹಾಗ್ನಿಯಿಂದಮೞುವುದು ಜೀವಂ ॥ ೩೧

ಸಂಸಾರಂ ಶಾಶ್ವತಮ
ಲ್ಲಂ ಸೆಡೆಯದೆ ತಪದೊಳಾದ ಕಡುಚೆಲ್ವಿಂದಂ ।
ತಾಂ ಸಂದಘಮಂ ಹರಿಸಿ ದಿ
ಟಂ ಸುರಗತಿವಡೆದು ಭೋಗಿಪ್ಪುದು ತತ್ಫಲಮಂ ॥ ೩೨

ಎಂದು ಮೇಲ್ಪಡೆ ನುಡಿದು ಕೆಲವುದಿವಸಮಲ್ಲಿರ್ದು ನಡೆವ ನುಡಿವ ಉಣ್ಬ ಬಂದಿಸುವ ಪಟ್ಟಿರ್ಪ ಕುಳ್ಳಿರ್ಪ ನಿಂದಿರ್ಪ ಕ್ರಿಯೆಗಳಂ ಮಾಳ್ಪ ಭಂಗಿಗಳೆಲ್ಲಮಂ ಲೇಸಾಗಿ ಅಭ್ಯಾಸಂಮಾಡಿ ಲೋಚಿಂಗಾಱದೆ ತಪಮಂ ಕೊಳಲಂಜಿ ಮೆಲ್ಲನಲ್ಲಿಂ ಜಗುಳ್ದುಪೋಗಿ ತಲೆಯಂ ಬೋಳಿಸಿಕೊಂಡು ಬ್ರಹ್ಮಚಾರಿವೇಷಮಂ ಕೈಕೊಂಡು ॥ ೩೩

ವೀರಧ್ವಜಾತ್ಮಜಾತನ
ಧಾರಿಣಿಯರೆ ಸಾಗರ್ಮೆಂಬ ಕಡುಮೋಹದಿನಾ ।

ವೀರಭಟಂ ವೈಸುಖಮಮಂ
ಪಾರದೆ ತಾಳ್ದಿರ್ದನಧಿಕಮೆನಿಸುವ ಮಲಮಮಂ ॥] [1] ೩೪

ಆರತ್ನದಿನವನೀಶ
ಶ್ರೀರಮೆ ಕೈಸಾರ್ಗುಮೆಂದು ತಾಳ್ದಿದನಾಗಳ್ ।
ಚೋರಂ ಮಾಯಾತಪಮಂ
ಧಾರಿಣಿಯೊಳ್ ಮೋಹಮುಳ್ಳರೇನಂ ಮಾಡರ್ ॥ ೩೫

[ಧರೆ ಬೆಱಗಾಗಿರೆ ಪಲರುಂ
ಕರಮುಗಿಯೆ ಜಡರ್ಗೆ ಚೋದ್ಯಮಪ್ಪಂತಿರೆ ನಿ ।
ಷ್ಠುರಮಪ್ಪ ಬಾಹ್ಯತಪಮಂ
ಧರಿಯಿಸಿದಂ ಸೂರ್ಪನೆಂದು ಮಾಯಾತಪಮಂ ॥ ೩೬

ಒಡಲೆಲ್ಲಂ ಬಡತನದಿಂ
ಗಡ ಗಿಡಿಗಿಡಿಜಂತ್ರಮಾಗೆ ಕಣ್ಣೆಲ್ಲಂ ತ ।
ಮ್ಮೆಡೆಗಾಣಬಾರದೆನಿಸಿರೆ
ಕಡುಗಲಿ ನಿತ್ಯೋಪವಾಸದೊಳ್ನಱೆ ನೆಗೞ್ದಂ ॥] ೩೭

ಮತ್ತಮೇಕರಾತ್ರತ್ರಿರಾತ್ರಮಹಾರಾತ್ರಾಷ್ಟೋಪವಾಸಮಾಸೋಪವಾಸಂಗಳಂ ಕರ್ಬುನಮಂ ತಿಂದರಂತೆ ತನು ಕುಂದಲುಂ, ಬಂದ ಗುಳುಗುಳ್ತ್ರಿದಂತೊಡಲಸಿದಾಗಲುಂ, ಬೇತಾಳನ ಬಸಿಱಂತೆ ಬಸಿಱು ಬೆನ್ನಂ ಪತ್ತಲುಂ, ಪೞವಾವಿಯ ನೀರಂತೆ ಕಣ್ಣೊಳಗಡಂಗಲುಂ, ಪಾೞ್ಮನೆಯ ಗಳುವಿನಂತೆ ಬರಿಯ ಎಲ್ವುಗಳ್ ಪೊಱಮಡಲುಂ, [ಅಲ್ಪ

1 ಆ ಮಾತಿಂಗೆ ಸೂರ್ಪನೆಂಬ ಕಳ್ಳಮಾಕುಮಾರಂಗಭಿಮುಖನಾಗಿ ನಿಂದು ದೇವ ಜೀಗನಾಸಸ್ತುತಂ ತಂದಪೆನೆಂಬುದುಂ ಕುಮಾರಂ ಪೆೞ್ಚಿ ತಂದಡೆ ನಿನಗರ್ಧರಾಜ್ಯಮುಂ ಕೊಡುವೆನೆಂದು ವೀಳಯಮುಮಂ ಕೊಡುವುದುಂ ಪಿರಿದುಂ ಪೂಣ್ದು ವೀರಕುಮಾರನಂ ಬೀಳ್ಕೊಂಡು ಪೂರ್ವದೇಶಕ್ಕೆ ಪೋಗಿ ಋಷಿಯರ ನಡೆನುಡಿಯುನಭ್ಯಾಸಂ ಮಾಡಿ ಲೋಕಂಗಾಣದೆ ಮಾಯಾಬ್ರಹ್ಮಚಾರಿಯಾಗಿ (ಗ)

ಶ್ರೀವಂತನಂತೆ ನಡೆ ತಡವಾಗಲುಂ,] ಕಾಗೆದೊಂಡೆಹಣ್ಣಿನಂತೊಳಗ ಶುಭಮುಂ [1] ಪೊಱಗೆ ರಮಣೀಯಮುಮೆಪ್ಪಂತು ನೆಗೞ್ದು ॥ ೩೮

[ಬಂದೆಡೆ ಮನ್ನಣೆ ಪಿರಿದುಂ
ಬಂದಿರ್ದೊಡೆ ಕೀರ್ತಿ ಪರಿಯಲಱಿಯದು ನಯಮೊ ।
ದಂದಲ್ಲದೆ ಪುಗಬಾರದು
ಸಂದೊಪ್ಪುವ ಕಾಮಲಿಪ್ತಿಪುರಮಂ ಬೇಗಂ ॥ ೩೯

ಉಪವಾಸಕ್ಕಲಸಿ ಕರಂ
ತಪಮಂ ಬಿಸುಡಲ್ಕೆ ಬಾರದವನೀತಳದೊಳ್ ।
ವಿಪರೀತಮಾಗೆ ಪೆಱಗಣ
ತಪದಿಂದಲ್ಲದೆ ಪೊಗತ್ತೆಯಾಗದು ಬೇಗಂ ॥ ೪೦

ಆಡಂಬರದಿಂದಲ್ಲದೆ
ನಾಡವರಲ್ಕಿರ್ತು ಪೂಜಿಸಲ್ನೆಱೆ ಕೈಕೊಂ ।
ಡಾದರದಱಿಂದವಿಳೆಯೊಳ್
ಮಾಡುವೆನುಗ್ರೋಗ್ರಮಾಯಾತಪಮಂ ॥ ೪೧

ಎಂದೊಂದೆಡೆಯೊಳ್ನಿಲ್ಲದೆ ಗ್ರಾಮನಗರಖೇಡಖರ್ವಟಮಡಂಬ ಪಟ್ಟಣದ್ರೋಣಾಮುಖಂಗಳೆಂಬವೆಱೊಳೆಲ್ಲಂ ವಿಹಾರಿಸುತ್ತುಂ ಕೆಲವಾನುಂ ದಿವಸಂ ಪೋದಿಂಬೞಿಕ್ಕೆ ಗೊಲ್ಲವಿಷಯಮಂ ಪೊಕ್ಕು ಕಾಮಲಿಪ್ತಿಯುಂ ಪುಗದೆ ತತ್ಪುರಕ್ಕೆರಡುಮೂಱುಗಾವುದದಂತರದೊಳಿರ್ದು ಸುತ್ತಣ ಗ್ರಾಮಂಗಳೊಳ್ ತನ್ನಂ ಪ್ರಸಿದ್ಧಿಗೆ ಸಲಲ್ವೇಡಿ ಚರಿಯಿಸುತ್ತುಮಿರ್ದು ಕೆಲವಾನುಂದಿವಸಂ ಪೋದಿಂಬೞಿಕ್ಕೆ ॥] ೪೨

ಕರಮುಗ್ರಮಪ್ಪ ತಪದೊಳ್
ಚರಿಯಿಸುವವರಾರಿಳಾಗ್ರದೊಳ್ತನುವಂ ನಿ ।

1 ಕಾಗೆವೂಂಯು ಪಣ್ಣಿನಂತೊಳಗಶುದ್ಧನುಂ (ಗ)

ಷ್ಠುರವೆಪ್ಪುಪವಾಸಂಗಳ
ನಿರದಿಂತೋವ್ರೋವ್ರೊ [1] ತವಿಸುವ್ರನ್ನತನಾವಂ ॥ ೪೩

[ಎನ್ನೊಡಲಲ್ಲದಿದೆಂಬವ್ರೊ
ಲನ್ನಮ ನೆಱೆ ತೊಱೆದು ತನ್ನ ಸುಖಮಂ ಬಿಟ್ಟು ।
ಪರ್ವನ್ನಪರ್ವರಾರೀಗುಣಿ
ಯನ್ನರ್ಧರ್ಾರಿಣಿಯೊಳಱಿದು ಭಾವಿಸಿ ನೋಡಲ್ ॥] ೪೪

ಎಂದು ನಾಡೆಲ್ಲವೊಂದೆ ಕೊರಲೊಳ್ ಪೊಗಟೆ [ರೂಢಿಯಾಗಿ ಕಾಮ ಲಿಪ್ತಿನಗರಮಂ ಪುಗುವುದುಂ ಜಿನೇಂದ್ರಭಕ್ತಸೆಟ್ಟಿ ಮೊದಲಾಗೆ ತತ್ಪು ರಶ್ರಾವಕರೆಲ್ಲಂ ಕೇಳ್ದು ಮಹಾಸಂತೋಷದಿಂ ದೂರದೊಳ್ ಕೇಳ್ವ ಮಹಾಪುರುಷರಂ ಕಣ್ಣಾರೆ ಕಾಣಲ್ಪಡೆದೆವಿನ್ನೆಮ್ಮಂ ಬಿಟ್ಟು ಕೃತಾರ್ಥ ರಾರೆಂದು ಬಂದು ಪೊಡೆವಟ್ಟು ಪೂಜಿಸೆ] [2] ಜಿನೇಂದ್ರಭಕ್ತಸೆಟ್ಟಿ ಬೇಗ ಮಾಬ್ರಹ್ಮಚಾರಿಯ ತಾಱಿದೊಡಲುಮಂ ಬಳಗಡಂಗಿದ ಕಣ್ಣುಮಂ ಮಾಯಾಸಂಯಮಮುಮಂ ಮನದೊಳ್ ಮೆಚ್ಚಿ ॥ ೪೫

ಪಿರಿದುಂ ವೈರಾಗ್ಯಂ ತನ
ಗುರುಮುದದಿಂದುಂಟದಲ್ಲದಂದೀತಪಮಂ ।
ಧರಿಯಿಸಿ ತನುವಂ ತಪದಿಂ
ಕರಗಿಸುವೀನಿಸ್ಪೃಹತ್ವಮಂ ತಾಳ್ದುವನೇ ॥ ೪೬

ಎಂದಾತನೊಳಾದ ಮಾಯಾವೇಷಮನಱಿಯದೆ ನಿಶ್ಚಯ ವೈರಾಗ್ಯಮುಳ್ಳನೆಂದು ನಂಬಿ ಭಕ್ತಿಭರತೆಯಿಂದೊಡಗೊಂಡು ಬಂದು ತನ್ನ [ದೇಹಾರಮಂ ಪುಗಿಸುವುದುಂ ಮಾಯಾವಿ ಜಿನೇಂದ್ರಭಕ್ತನೊ ಳಾದ ಭಕ್ತಿಯುಮಂ ಪಿರಿದಪ್ಪಾದರಮುಮಂ ಕಂಡು ತನ್ನ ಬಯಕೆ ತೀರ್ದುದೆಂದು ಪೆರ್ಚಿ ಗುಡಿಗಟ್ಟಿಯುಲಿಗಿ ನಟ್ಟಂತೆ ವೈಶ್ಯೋತ್ತಮನ ಭಕ್ತಿಯುಂ ಸ್ಥಿರಂಮಾಳ್ಪೆನೆಂಬ ಬಗೆಯಿಂದಿಂತೆಂದಂ ॥ ೪೭

[1] ನಿರದಿಂತೊಪ್ಪುವತಪದಿಂ (ಗ) [2] ಕಾಮಲಿಪ್ತಿಗೆ ಬರ್ಪುದ್ದಂ (ಗ)

ಪೊನ್ನ ತೋರಣದಿಂ ದುಕೂಲದ ಸೂಸಕಂಗಳನೊಪ್ಪುವೆ
ತ್ತುನ್ನತಧ್ವಜದೊಳಯಿಂ ಬಿಡುಮುತ್ತಿನಿಂ ಕಡುಶೋಭೆವೆ
ತ್ತುನ್ನಯಂಬಡೆದಿರ್ದು ಚೆಲ್ವಿನ ರಂಗವಲ್ಲಿಯನೆಲ್ಲಿಯುಂ
ರನ್ನದಿಂ ಪಿರಿದುಣ್ಮಿ ತಿಕ್ಕಯಿನಿರ್ದುದೀ ಜಿನಮಂದಿರಂ ॥ ೪೮

ಮನನೊಲ್ದು ಪರತ್ರಿಯುಮೋ
ಲನವರತಂ ಮೋಹಮುಳ್ಳವಂಗೀಭವದೊಳ್ ।
ಕನಸಿನೊಳಂ ಪೊನ್ ತಾಂ ನೆ
ಟ್ಟನೆ ಕಂಡೊಡದಕ್ಕೆ ಬೆರ್ಚಿ ನಡುಗಲೆವೇೞ್ಕುಂ ॥ ೪೯

ನಿನ್ನ ದೇಹಾರಮೆಪ್ಪೊಡೆ ರತ್ನಮಯಮಪ್ಪುದಱೊಳಮಗಿಪ್ಪುದು ಚಿತಮಲ್ಲದು ನೀನೆಮ್ಮ ನಿರಿಸುವೆನೆಂಬೆಯಪ್ಪೊಡೆ ಬೇರೊಂದು ಶೂನ್ಯಾಲಯದೊಳರಿಸುವುದೆಂಬುದುಂ ಜಿನೇಂದ್ರಭಕ್ತಸೆಟ್ಟಿ ಪಿರಿದುಂ ಪ್ರಾರ್ಥಿಸಿ ಪೊಡೆಮಟ್ಟೊಡಂಬಡಿಸಿದೊಡಲ್ಲಿರ್ದ ॥ ೫೦

ಗಾವಿಲತನದಿಂ ಪೊಕ್ಕೊಡೆ
ಸಾವಪ್ಪುದು ಪುಸಿಯೆ ಬರ್ದುಕಿದೆಂ ಪುಣ್ಯದಿನಿಂ ।
ತೀ ವಿಭುವಿನ ಮನೆಯುಂ ಪುಗ
ಲಾವಮರರುಮಾಱರೆಂದೊಡುಳಿದವರಳವೇ ॥ ೫೧

ಎಂದು ಜಿನೇಂದ್ರಭಕ್ತಸೆಟ್ಟಿಯ ಮನೆಯ ಬಾಗಿಲ ಕಾಪಂ ಕಂಡು ಬೆರ್ಚಿ ಬೆಗಡುಗೊಂಡು ॥ ೫೨

ಏಳಿಸಿ ಪುಗಬಾರದು ಚೈ
ತ್ಯಾಲಯಮಂ ಕೃತಕದಿಂದೆ ಮಾಯಾತಪಮಂ ।
ಮೇಳಿಸಿ ಪೊಕ್ಕಂ ಮಿಕ್ಕಂ
ತಾಳಪಂಗೆಯ್ದು ಪುಗುವ ಗಂಡರುಮೊಳರೇ ॥ ೫೩

ಇಂತಪ್ಪ ಬಲ್ಗಾಪುಂಟಪ್ಪುದಱಿಂದಂತಪ್ಪ ಕಳ್ಳರಕಳ್ಳಂ ಮೊದಲಾಗೆ ಪುಗಲ್ಮಣಿದನಿಲ್ಲ, ಬುದ್ಧಿಬಲದಿಂ ಭೋಂಕನೆ ನಂಟರ ಮನೆಯಂ

ಪುಗುವಂತು ಪೊಕ್ಕನೆನ್ನಂತು ಸಂದ ಕಳ್ಳರಿಲ್ಲೆಂದು ಮುಯ್ವಂ ನೋಡಿ ಮತ್ತಂ ತನ್ನೊಳಿಂತೆಂದಾಳೋಚಿಸಿದನುತ್ಸುಕತನದಿಂ ಪೆಟ್ಟುವೆರ್ಚೆ ಕಡುವೆಸನಂ ಮಾಳ್ಪ ಸೊಸೆ ಮಾವನ ಮಂಡೆಯಂ ಬೋಳಿಸಿದಳೆಂ ಬಂತೆ ರಾಗದಿಂದವಿಾ ರತ್ನಮನೀಗಳ್ ನೆಗಟಿದೆನಪ್ಪೊಡೆ ಪೋಗಲ್ಬಾರದು ಉಪವಾಸಂಗಳಿಂದೆಲ್ಲರುಮಂ ನಂಬಿಸಿ ತಪದೊಳೊಳ್ಳಿದನೆನಿಸಿ ಮೆಲ್ಲನೆ ನಿಂದು ಕಾರ್ಯಮಂ ನೆಗಳ್ವೆನನ್ನೆಗಂ ॥][1] ೫೪

ಸಂದ ಮಹಾನಿಸ್ಪೃಹನಿವ
ನೆಂದೆನ್ನಂ ಕಾಪಿನಾಳ್ಗಳುಂ ಶ್ರಾವಕರುಂ ।
ಕುಂದದೆ ವೈಶ್ಯಾನ್ವಯವಿಕ
ಚೇಂದೀವರಶಶಿ ಜಿನೇಂದ್ರಭಕ್ತನುಮಾದಂ ॥ ೫೫

ಎನ್ನ ದೆಸೆಗೆ ಭಯಸ್ಥರಾಗದಂತು ಮೇಲ್ಪಡಿಸುವೆನೆಂಬ ಬಗೆಯಿಂದುಪವಾಸದಮೇಲುಪವಾಸಮುಮನಲಾಭದಮೇಲಲಾಭಮುಮಂ ಮಾಡುತ್ತುಂ ತಾನಾಗಮದೂರನಪ್ಪುದಱಿಂದೆನ್ನರೂಢಿಗಾರಾನುಮಱಿವರ್ಬೆಂದು ಏನಾನುಮಂ ಬೆಸಗೊಂಡೊಡಾಂ ಪೇೞದಿರ್ದೊಡೆ ಮಹಾಕಷ್ಟಮಕ್ಕುಂ ಸೆಟ್ಟಿಯ ಭಕ್ತಿಯುಂ ಕಿಡುಗುಮೆಂಬ ನೆವದಿಂ ಮೋನಿಯಾಗಿ ॥ ೫೬

ತರುಣಿಯರೊಳ್ ಮಾತಾಡಂ
ತರುಣಿಯರಂ ಕಂಡೊಡುಣ್ಣನಿದಿರೊಳ್ ನಿಲೆ ಪಂ ।
ಕರುಹಾಕ್ಷಿಯರಂ ನೋಡಿದೊ
ಡೆರಡಿಲ್ಲದೆ ತನಗಲಾಭಮೆಂದಿನ ದಿವಸಂ ॥ ೫೭

ಅಂತು ಮಾಯಾಕೃತಕದಿಂದವಿಮುಕ್ತನಾಗಿ[2] ॥ ೫೮

ಪೊನ್ನೆಂದೊಡೆ ಕಿವಿಯಂ ಮ
ತ್ತನ್ನದೆ ಮಾಯಾವಿ ಮುಚ್ಚಿಕೊಳ್ವಂ ತನ್ನಂ ।

---

1 ದೇಹಾರದೊಳಿರಿಸುವುದುಮಲ್ಲಿರ್ದು (ಗ)

2 ಕೃತಕಗಂಡವಿಮುಕ್ತನಾಗಿ (ಗ)

ಪೊನ್ನಾಭರಣಂ ತೊಟ್ಟವ
ರಿನ್ನಱಿಯದೆ ಮುಟ್ಟೆ ಬೇಗವೊಂದುಪವಾಸಂ ॥ ೫೯

ಇಂತು ಬಕವೇಸಿತನದಿಂ ಮಾಯಾನಿಸ್ಪೃಹನಾಗಿ[1] ॥ ೬೦

ಭೋಗಮನೊಲ್ದು ನೋಡನುಣಿಸಂದೊಡೆ ಬೆರ್ಚುತುಮಿರ್ಪನಾರೊಳಂ
ರಾಗಿಸಿ ಮಾತನಾಡನೆರೆಯಂ ಪೆಱತಂ ಪೆಱರೇನನೆಂದೊಡಂ
ಬೇಗಮದಕ್ಕೆ ಕೋಪಿಸನಣಂ ಪೆಱರೀವೊಡಮೊಲ್ಲನಲ್ಲಮಿಂ
ತಾಗಳುಮಾಳಂ ಪೆಱರ್ಗೆ ನಂಬುಗೆಯಾಗಿರೆ ತಕ್ಕವೃತ್ತಿಯಿಂ ॥ ೬೧

ಅಂತೆ ಕುಱಿಯಂತೆ ಕವಿದತಲೆಯುಂ ಬೆಕ್ಕಿನಂತೆ ದುಷ್ಟಬುದ್ಧಿಯುಂ ಬೆಳ್ಳಕ್ಕಿಯಂತೆ ಮಾಯಾಮಾರ್ಗನುಂ ಪುಲಿಯಂತೋಱಾಯಿಲನುಂ ಅತ್ತಿಯಪಣ್ಗಳಂತೊಳಗಶುದ್ಧನುಂ ವಟಫಲದಂತೆ ಪೊಱಗೆ ಸೇವ್ಯನುಂ ಬಂದತೊಱೆಯಂತೆ ಕದಡಿದ ಚಿತ್ತನುಂ ಮಯೂಖವ್ಯಾಘ್ರನಂತೆ[2] ಪೊಱಗೆ ಶಾಂತನುಮೊಳಗೆ ಕ್ರೂರನುಮಾಗಿ ಕೆಲವು ದಿವಸಮಿರ್ಪುದುಂ ॥ ೬೨

ಜಿನಪಾದಾಂಬುಜಮಧುಪಂ
ಜಿನಸಮಯಸಮುದ್ರಚಂದ್ರನನುಪಮಗುಣಿ ಸ ।
ಜ್ಜನವಂದ್ಯಂ ವಿನಯದ ಕಣಿ
ಜಿನತತ್ವಾಂಬುರುಹಷಂಡರಂಜಿತಹಂಸಂ ॥ ೬೩

ಅಂತಪ್ಪ ಜಿನೇಂದ್ರಭಕ್ತಸೆಟ್ಟಿಯೊಂದುದಿವಸಂ ಪರದುವೋಪೆನೆಂಬ ಬುದ್ಧಿಪುಟ್ಟೆ ತಡೆಯದಲ್ಲಿಗೆ ತಕ್ಕ ಬಂಡಮಂ ಕೊಂಡು ತನ್ನನಾಶ್ರಯಿಸಿ ಬರ್ಪರೆಲ್ಲರುಮಂ ಕೂಡಿಕೊಂಡು ಶುಭದಿನಸುಮುಹೂರ್ತದೊಳ್ ಜಿನೇಂದ್ರಾಭಿಷೇಕಮುಮಂ ಜಿನಮಹಾಪೂಜೆಗಳುಮಂ ಮಾಡಿಸಿ ಪೊಱವೀಡಂ ಬಿಟ್ಟು ತನ್ನ ದೇಹಾರದೊಳಿರ್ದ ಬ್ರಹ್ಮಚಾರಿಗೆವೆಂದು ತಾನವರ್ಗತಿಭಕ್ತನಪ್ಪುದಱಿಂದವನೊಳಾದ ಮಾಯಾಮಾರ್ಗಮನಱಿಯದೆ ಜಿನಮಾರ್ಗದೊಳ್ ದೃಢನೆಂದು ಕಯ್ಯಂ ಮುಗಿದಿಂತೆಂದಂ ॥ ೬೪

---

[1] ಮಾಯಾಪುಂಜನಾಗಿ (ಗ) [2] ಅಂಜಮುಖವ್ಯಾಪ್ತನಂತೆ (ಬ. ಕ.)

ಎಲ್ಲಿಯುಮೋರಂತೊಂದೆಡೆ
ನಿಲ್ಲದೆ ತೊೞಲುತ್ತುಮಿರ್ಪುದೆನ್ನಯ ಪುಣ್ಯಂ ।
ಬಲ್ಲಿತ್ತು ಪಲವುದಿವಸಂ
ಪಲ್ಲಟಿಸದೆ ನಿಂದಿರನ್ನೆಗಂ ಮದ್ಗೃಹದೊಳ್ । ೬೫

ನಿಮ್ಮನ್ನರಿನ್ನೆವರೆಗಂ
ಪೆರ್ಮೆಯಿನೊಸೆದಿರ್ದರೆಂದೊಡೆನ್ನಂ ಬಿಟ್ಟು ।
ರಿಮ್ಮಿಕ್ಕಭಾವಿಸುವೊಡೆ
ನಿಮ್ಮಡಿ ಪುಣ್ಯಕ್ಕೆ ತಾನೆ ನೋಂತೆಂ ಜಗದೊಳ್ ॥ ೬೬

ಅದುಕಾರಣದಿಂದೆನ್ನಂತು ಧನ್ಯರುಂ ಮಾನ್ಯರುಮಿಲ್ಲ; ಸ್ಥಳ ಯಾತ್ರೆಗೆ ಪೋಗಿ ಬರ್ಪನ್ನೆವರಂ ನೀವೆನ್ನಂ ಪರಸುತ್ತುಮಿರ್ಪುದೆಂದು [ಬೇಡಿಕೊಳ್ವುದುಂ ಮಾಯಾವಿ ತನ್ನ ಬಗೆಗೂಡಿದುದಕ್ಕೆ ಪೆಟ್ಟುವೆರ್ಚಿ ತನ್ನೊಳಿಂತೆಂದಂ :— ೬೭

ಬಲ್ಲಾಳ್ತನದಿಂದೆಱೆದುಕೊಳ್ವಂಗೆ ಕಡಂಗೊಟ್ಟರೆಂಬಂತೆ ಪ್ರಾಣ ಮನಿಕ್ಕಿಯುಂ ಸೆಱಗುಮಂ ಬೆಱಗುಮಂ ಬಗೆಯದೆ ಸದ್ರತ್ನಮಂ ಕೊಳ್ವೆನೆಂದಿರ್ದನಗೆ ಸೆಟ್ಟಿಯ ಪೋಗಿನೊಳಂಬಾದುದೆಂದು ತನ್ನ ಪುಣ್ಯಕ್ಕೆ ತಾನೇ ನಾದವೆಱೆಯಂತೆ ಪೊಂಗಿ ಪಾಲುಂ ಕೂರ್ಮೆಯುಂ ಮೆಱುಗಿದೊಡಲ್ಲದೆ ಲೇಸಾಗವೆಂದು ತನ್ನಂ ಪ್ರಿಯಂಮಾಡಲ್ವೇಡಿ ಜಿನೇಂದ್ರಭಕ್ತಂಗಿಂತೆಂದಂ ॥ ೬೮

ವನಿತೆಯುಮಂ ನಂಟರುಮಂ
ಜನಕನುಮಂ ಪೆತ್ತ ತಾಯುಮಂ ವೃತ್ತಿಯುಮಂ ।
ಮನಮುರಿದು ತೊಱೆದು ತಪಕಂ
ತನುವಂ ತಂದೊಡ್ಡಿ ಸೆಟ್ಟಿ ಮತ್ತಂ ಪದಪಿಂ ॥ ೬೯

ಬಂದೆಡೆಯೊಳ್ತ್ರೀಹೋದಯ
ದಿಂದಂ ಪತ್ತಿರ್ಪನೆಂಬನುಂ ಸುಖಮಂ ಪೊಂ ।

ದೆಂದುಂ ಪೊೞಸುತಿರ್ಪನು
ಮೆಂದುಂ ಸುರಲೋಕಮನೆಯ್ದಲಾಱನಮೋಘಂ ॥ ೭೦

ಅದಱಿಂದೆಮ್ಮಂತಪ್ಪ ನಿಸ್ಪೃಹರ್ಗೆ ಕೂೞಿಂಗಾೞಿಸಿ ವ್ಯಸುಖಮಂ ಪಾೞಸಿ ಮನ್ನಣೆಗಾಸೆಗೆಯ್ದೊಂದೆಡೆಯೊಳ್ ಪತ್ತಿಕೊಂಡಿರಲಾಗದು; ಕಡುಮೋಹದಿಂದಿರ್ದನಪ್ಪೊಡೆ ಮೇಲೆ ಗತಿವಡೆವುದರಿದು; ನೀವೆನಗೆ ಭಕ್ತರಪ್ಪುದಱಿಂ ಪುಣ್ಯವೃದ್ಧಿಯುಂ ಮಾಡಲೆಂದಿನ್ನೆವರೆಗಂ ಪರಸುತ್ತುಮಿರ್ದಪೆದಂ ಪುಸಿಯೆಂಬಿರಪ್ಪೊಡೆ ನಮ್ಮ ಮುನ್ನಿನ ನಡೆವಳಿಯುಮಂ ನೀವೆ ಬಲ್ಲಿರೆಮಗಿಸ್ತು ದಿಷ್ಟವಿಲ್ಲ; ದೇಶದೇಶದೊಳಂ ವಿಹಾರಿಸಿ ಕಾಲಮಂ ಕೞಿಪಿ ತಪೋವೃದ್ಧಿಯುಂ ಮಾಡುವುದೆ ಮನದೊಳರ್ತಿಯೆನೆ ವೈಶ್ಯಪ್ರಧಾನನಿಂತೆಂದಂ ॥ ೭೧

ಮೊಲೆಗಳ ಮೇಲಿರ್ದುಂ ಪೆ
ರ್ಮಲೆಗಳ ಮೇಲಿರ್ದರಧಿಕಗುಣಗಣಯುಕ್ತರ್ ।
ಮಲೆಗಳ ಮೇಲಿರ್ದುಂ ಪೆ
ರ್ಮೊಲೆಗಳ ಮೇಲಿರ್ದರಧಿಕದುಶ್ಚಾರಿತ್ರರ್ ॥ ೭೨

ಜಲದೊಳಗಿರ್ದುಂ ತಾವರೆ
ಜಲಮಂ ಪೊರ್ದುವುದೆ ಚಾರುಚಾರಿತ್ರಯುತರ್ ।
ಮಲರಹಿತನಿರ್ಮಳರು
ಜ್ಜ್ವಲರೆನಿಸುವರೆತ್ತ ಪೊಕ್ಕೊಡಂ ಕೆಟ್ಟಪರೇ ॥ ೭೩

ನೀವೊಳ್ಳಿದರೆಂಬುದನವ
ನೀವಳಯದೊಳುತ್ತರೋತ್ತರಂ ನಗೞ್ವೇನಿ ।
ಮ್ಮಾವರಕಾಯಕ್ಲೇಶಮ
ಭಾವಿಸಿ ನೋಳ್ಪಂತು ತಾನೆ ಪೇೞದೆ ನಯಮಂ ॥ ೭೪

1 ಮೊಲೆಗಳ (ಬ. ಕ.)

ಅದಱಿಂ ನಿಮ್ಮಂತಪ್ಪ ಮಹಾಪುರುಷರೆಲ್ಲಿರ್ದಪ್ಪೊಡೇಂ ಪುಣ್ಯೋಪಾರ್ಜಕರಲ್ಲದೆ ಪಾಪೋಪಾರ್ಜಕರ ನೆಗತ್ತೆಯಿಲ್ಲದು; ನೀವೆನಗೆ ಕಾರುಣ್ಯಂಗೆಯ್ದಿರಪ್ಪೊಡೆನ್ನ ಮಾತಂಸಲಿಸಿಮೆಂದು ಪಲವುಸೂೞ್ಪೊಡೆಮಟ್ಟು ವ್ರತವಿಶೇಷದಿಂ ಪ್ರಾರ್ಥಿಸುವುದುಮೊಡಂಬಟ್ಟಲ್ಲಿ ಸುಖದಿಂ ಸಂತೋಷದಿಂ ಮನೆಗೆ ಪೋಗಿ ಮಱುದಿವಸಂ ಪರಿಗ್ರಹಸಂಬಂಧಿಗಳ್ಗಂ ಪೆಂಡಿರ್ಗಂ ಧರ್ಮಕಾರ್ಯಮುಮಂ ದಾನಮುಮಂ ಪ್ರಯತ್ನದಿಂ ಮಾೞ್ಪುದೆಂದಪ್ಪೈಸಿ ಬಿಟ್ಟುಬೀಡಿಂಗೆ ಪೋಗಿರ್ಪುದುಮಿತ್ತಲ್ ಮಾಯಾಬ್ರಹ್ಮಚಾರಿ ತನ್ನೊಳಂತೆಂದಂ ॥][1] ೭೫

ಪಿರಿದಪ್ಪ ದುಃಖಮೆಂದೋ
ಸರಿಸದೆ ಸೆಡೆದಿರದೆ ಬಿಟ್ಟು ಮೈಸುಖಮಂ ಭಾ ।
ಸುರಮಪ್ಪ ರತ್ನಕಾಂಕ್ಷೆಯಿ
ನರಿದೆನಿಸುವ ತಪದೊಳೆನ್ನ ಮರೆಗಂ ನವೆದೆಂ ॥ ೭೬

ಇನ್ನಿರಲಾಗದಟ್ಟಿ ಬೇೞ್ಪುದವರೆಯು ಪಿಟ್ಟಂಬಂತೆನ್ನ ಬಗೆಗೊಡಂಬಟ್ಟಂತೆ ಪುಣ್ಯದಿಂ ಜಿನೇಂದ್ರಭಕ್ತಸೆಟ್ಟಿಯುಂ [ಪೋದನೊಳ್ಳಿತವಸರಮಾಯ್ತೆಂದು ನಡುವಿರುಳಪ್ಪಾಗಳ್ ಕಾಪಿನ ಕಡಿತಕಾರರ್ ಮಱದು ನಿದ್ರೆಗೆಯ್ದುದನಱಿದು ಮೆಲ್ಲನೆೞ್ದು ಗರ್ಭಗೃಹಮಂ ಪೊಕ್ಕು ಮುಕ್ಕೊಡೆಯೊಳಿರ್ದ ವೈಡೂರ್ಯಮಾಣಿಕಮಂ ನೋಡಿ ॥][2] ೭೭

ನಿನ್ನ ಕತದಿಂದೆ ನವೆದೆಂ
ನಿನ್ನಂ ನಡೆನೋಡಿ ಸುಖಮನಱಿದೆಂ ಮತ್ತಂ ।
ನಿನ್ನಿಂದಂ ಪಿರಿದಪ್ಪ ಮ
ಹೋನ್ನತಿಯಂ ಪಡೆವೆನೆಂದು ದುಃಖಂಬಟ್ಟಂ ॥ ೭೮

---

1 ಬೀಡಿಕೊಂಡು ಸೆಟ್ಟಿ ಪೊಱಮೀಡುವಿಟ್ಟಿರ್ಪುದುಂ ಮಾಯಾವಿ ತನ್ನಬಗೆದ ಬಯಕೆ ಕೈಗೂಡಿದುದಕ್ಕೆ ಪೆರ್ಚಿ (ಗ)

2 ಪೋದನೊಳ್ಳಿತ್ತಪ್ಪವಸರಮಂ ನೋಡಿ (ಗ)

ಕಡುತಪದಿಂದಂ ದೇಹಂ
ಬಡವಾದುದು ನಿನ್ನ ದೂಸಱಿಂ ಧರೆಯರೆಯುಂ ।
ಪಡೆವೆಂ ರಾಜ್ಯಶ್ರೀಯೊಳ್
ತಡೆಯದೆ ಕೂಡಿರ್ಪೆನೆಂಬ ಪರಮೋತ್ಸವದಿಂ ॥ ೭೯

ಎಂದು [ತ್ಸಾಹದಿಂ] ಮೆಯ್ಯಱಿಯದೆ ರತ್ನದೊಡನೆ ನುಡಿದು
ಪೆಱರ್ಕೇಳದಂತಾಟಿಸಿ ಕೀಲಂ ಕಳದು ನೆಲಕ್ಕೆ ಬೀೞಲೀಯದೆ ಪಿಡಿದು
ಕೊಂಡು ತಳದೊಳಿಕ್ಕಿಕೊಂಡು ನೋಡಿ ॥ ೮೦

ಉರದೊಳಮೆರ್ಚಿಕೊಂಡು ತಲೆಯೊಳ್ಪಿಡಿದೊಯ್ಯನೆ ಪೊತ್ತುಕೊಂ
ಡು ಮೂ
ಱ್ದರದತಿಮೋಹದಿಂ ನೊಸಲಮೇಲೆ ಮಹೋತ್ಸವದಿಂದಮಿಟ್ಟುಕೊಂ
ಡಿರದದನಟ್ಟಿರಿಂದಡರೆ ಭಾವಿಸಿ ಭಾವಿಸಿ ನೋಡಿ ನೋಡಿ ಚ
ಚ್ಚರಮವನೀತಳಂ ತನಗೆ ಸಾರ್ದಪ್ಪೊಲೊಮ್ದರ್ದಲುಣ್ಮಿ ಪೊಣ್ಮಿದಂ ॥ ೮೧

ಅಂತು ರಾಗರಸದಿಂ ಪೊಂಗಿ ತಡೆದು ತಿಳಿನೀರನುಂಡುದೆಂಬ
ನಾಣ್ಣುಡಿಯಂತೆ ತನ್ನ ಕೈಕೊಂಡು ನಮೆದ ಕಡುದುಃಖಂ ಸಫಲ
ಮಾಯ್ತೆಂದು ತನ್ನೊಳ್ ನುಡಿದು ॥ ೮೨

ಸುರರಾಜಂಗಂ ಭೇದಿಸ
ಲರಿದನಿಸುವ ದಿವ್ಯರತ್ನಮೆನಗವಯುವದಿಂ ।
ದೊರೆಕೊಂಡುದು ವೀರಮಹೀ
ಶ್ವರನಲ್ಲಿಗೆ ಪೋಗಿ ಪಡೆವೆನುರ್ವರೆಯರೆಯಂ ॥ ೮೩

ಸ್ಫುರಿಯಿಪ ಸದ್ರತ್ನಮೆನಿದ
ನರಸಂ ಕೇಳ್ಕಾಣಲೊಡನೆ ತಾಂ ತನ್ನಾಱ್ಬ ।
ರ್ವರೆಯರೆಯನೀವನಿತ್ತೊಡೆ
ಧರೆಯರೆಯಂ ಸುಖದೆ ಲೀಲೆಯಿಂ ಭೋಗಿಸುವೆಂ ॥ ೮೪

ಮನಕೆವೆಂದ ಹಯಂಗಳಂ ಮದಸಿಂಧುರಂಗಳನೇಱುವೆಂ
ಮನಕೆವೆಂದ ನವಾಂಬರಂಗಳನರ್ತಿಯಿಂದುಡುವೆಂ ಕರಂ
ಮನಕೆವೆಂದ ಸುಗಂಧವಸ್ತುವನೆಳ್ಚಱಿಂದಮೆ ಪೂಸುವೆಂ
ಮನಕೆವೆಂದೊಳುವೆಂಡಿರೊಳ್ನೆರೆವೆಂ ಮನಂಬಿಡೆ ನಿಚ್ಚಲುಂ ॥ ೮೫

ಎಂದು ತೊೞ್ಗಾಣದೆ ಕೆರ್ಪುಗಳದು ನಗಿಸುವೆಗ್ಗನಂತೆ ಮುಂದಣ ತನಗಪ್ಪ ರಾಜ್ಯವಿಭೂತಿಯನಾಳೋಚಿಸಿ ಸೊಡರಂ ಕಳದು ಪೊಱಮಟ್ಟು ಪೋಪುದುಂ ಕರ್ಮವಶದಿಂ ಖಲ್ವಬಿಲ್ವಸಂಯೋಗದಂತೆ ಪೊಱಲೊಳಗೆ ತೊೞಲ್ವರಸನ ತಳಾಱರೋಡುವ ಮಾಯಾವಿಯ ಕೈಯೊಳ್ಬಾಲಾರ್ಕನಂತೆ ಪ್ರಜ್ವಲಿಸುವ ರತ್ನದ ಬೆಳಗಂ ಕಂಡು ಕಳಕಳರವಮಂ ಮಾಡುವುದುಂ ॥ ೮೬

ಒಳಗಿರ್ದ ಬಂಟರಾಕಳ
ಕಳಕ್ಕೆ ಭಯದಿಂದಮೆರ್ದಿದೇನೆಂದಾಗಳ್ ।
ನೋೞ್ಪುದುಮೊಳಗು
ಜ್ಜ್ವಳಿಸುವ ಸೊಡರಿಲ್ಲದೆಯ್ದೆ ನಂದಿರೆ ಮನದೊಳ್ ॥ ೮೭

ನೊಂದು ದೇಹಾರದ ಮನೆಯಂ ಪೊಕ್ಕು ತಡವರಿಸಿ ನೋಡಿ ಮಾಯಾವಿಯುಂ ಪಡುವಡೆಯೊಳ್ಕಾಣದೆ ಠಕ್ಕನೆಂದಱಿದು ರತ್ನದ ದೆಸೆಗೆ ಭಯಸ್ಥರಾಗಿ ಸೊಡರಂ ತರಿಸಿ ನೋಡಿ ದೇವರ ಮುಂಕೆಯ್ಯೊಡೆಯೊಳಿರ್ದ ವೈಡೂರ್ಯಮಾಣಿಕಮುಮಂ ಕಾಣದೆ ಪೊಱಮಟ್ಟು ತಾಮುಂ ತತ್ಪುರದ ತಳಾಱರುಂ ಸುತ್ತಿ ಮುತ್ತಿಯಿನ್ನೆತ್ತ ಪೋದಪೆಯೆಂದು ಬೆನ್ನಟ್ಟಿ ತಗುಳ್ದುಡುವುದುಂ ಖಳಿಲ್ ಖಳಿಲ್ ತೊಪ್ಪುತೊಪ್ಪು ಛಳಿಲ್ ಛಳಿಲೆಂದು ಕೊಳ್ವ ಬಡಿಗಂ ಚಳಿತು ॥ ೮೮

ಒಟ್ಟೈಸಿ ಪೋಗಲರಿದೊಣದೊಣ
ಒಟ್ಟೆಯ ಕಿಱುಗಲ್ಲ ಬಡಿಯ ಕೋಳಿಂದಂ ಕಾಲ್ ।
ಕೆಟ್ಟುವು ಜವಜವನಾದುವು
ನೆಟ್ಟನೆ ನ್ನೆಸತ್ತೆನೆಂದು ಕಡುಭಯದಿಂದಂ ॥ ೮೯

ಅತ್ತಲುಮಿತ್ತಲುಮೋವೋ
ಯೆತ್ತಲುಮೊತಂಗೆ ಕೂಪಮಂ ತೆಱದಂತಾ ।
ಯೊತ್ತುತ್ತೆ ಮೊತ್ತಪ ತೆಱದಿಂ
ದತ್ತಿತ್ತಲ್ ಮಿಡುಕಬಾರದವೆಗುದ್ಧತೆಯಿಂ ॥ ೯೦

ತಡೆದಿಲ್ಲಿ ನಿಂದೆನಪ್ಪೊಡೆ
ಮಡಿವಾದಪುದುಱುವೆನಪ್ಪೊಡೆಲ್ಲೆಡೆ ಮುಂದೊಂ ।
ದಡಿಯುಂ ತೆಱಪಣಮಿಲ್ಲೇ
ಯೆಡೆಗಾವುದುಪಾಯಮೆಂದು ಮಾಯಾಪುಂಜಂ ॥ ೯೧

ಚಿಂತಾಕ್ರಾಂತನಾಗಿ ಮಹಾಪ್ರಳಯಂ ಕವಿದಂತೆ ದುಃಖಂಬಟ್ಟು ಪಲವು ನಾಯ್ಗಳ ನಡುವಣ ಪುಲ್ಲೆಯಂತೆ ನಡುನಡುಗಿ ॥ ೯೨

ಜಡಿದುಂ ಬೈದುಂ ಮೋಹದಿ
ನೊಡಗೊಂಡುಣ್ಬವರೆ ಲೇಸು ದಿಟಮೆಂಬೀ ನಾ ।
ಣ್ನುಡಿಯಂತೀ ಪ್ರಾಣಿಗಳಂ
ಮಡಿಪದುಪಾಸಕರೆ ಲೇಸು ಒಗೆವೊಡೆ ಜಗದೊಳ್ ॥ ೯೩

ಅದಱಿಂ ಸಮ್ಯಕ್ತ್ವಚೂಡಾಮಣಿಯಪ್ಪ ಜಿನಭಕ್ತಸೆಟ್ಟಿಯಪ್ಪೊಡೆ ಪರಮಶ್ರಾವಕನೊಂದಿಱುಂಪೆಯ ಪ್ರಾಣಕ್ಕಂ ಮೊದಲಾಗೆ ತಪ್ಪಲಱಿಯದಾತನೆನ್ನುಂ ಕಂಡೊಡೇಗೆಯ್ದುಂ ಕೊಲ್ವನಲ್ಲೀನಿಷ್ಠುರನಪ್ಪತಳಾಱನ ಕೈಯೊಳ್ ಕಡಿಗಂಡಮಾಗೆ ಜೇಱೇಱೆ ಪೊಯ್ಸಿಕೊಂಡು ಸಾಯದೆ ವಾತ್ಸಲ್ಯರತ್ನಾಕರನ ಮಱೆಯಂ ಪುಗುವೆನೆಂದು ಪೊಱಬೀಡು ಬಿಟ್ಟಿರ್ದ ಜಿನೇಂದ್ರಭಕ್ತನ ಬೀಡಂ ನೋಡಿ ಪೊಕ್ಕು ಜಿನಧರ್ಮನಿರ್ಮಳನ ಮಱೆಯಂ ಪುಗುವುದುಂ ಸೆಟ್ಟಿ ಮಾಯಾವಿಯ ಮುನ್ನಿನ ತಪದೊಳಾದ ಸಾಧುತ್ವಮುಮಂ ಬಱಿಕ್ಕಮಾದ ದುರ್ಜನತ್ವಮುಮಂ ಕಂಡು ಬೆಱಗಾಗಿ ತನ್ನೊಳಿಂತೆಂದಂ ॥ ೯೪

ನಾಡಾಡಿಯನಾಡುವರೊಳ್
ಕೂಡುವೊಡದು ದೋಷಮಲ್ಲಮದು ಕುಕ್ಕುಟಮಂ ।
ಮೂಡುವರೊಳ್ನಂಟುಗೆಯಿಂ
ಕೂಡಿದೊಡೇನಾನುಮೊಂದು ದೋಷಂ ಸಾರ್ಗುಂ । ೯೫

ಧರೆಯೊಳ್ ವಿವೇಕಿಯೆನಿಸುವ
ಪುರುಷಂ ಪೆಂಡಿರೊಳಮರ್ಥದೊಳಮಿನ್ನೆಂತ ।
ಪ್ಪುರುಮಂ ನಂಬಿರಲಾಗದು
ಪರವಶದಿಂದೆಂಬ ನೀತಿಯೊಳ್ ಪುಸಿಯುಂಟೇ ॥ ೯೬

ಪಿಸುನಿಯ ಸತ್ಯಮುಂ ಖಳನ ಧರ್ಮಮು ಮೂರ್ಖನ ಸಚ್ಚರಿತ್ರಮುಂ
ಪುಸಿವನ ಶೌಚಮುಂ ಬಡವನಪ್ಪನ ಭೋಗಮುಮಾಜಿರಂಗದೊಳ್
ಕುಸಿವನ ವೀರಮುಂ ಬಧಿರನಪ್ಪನ ಕೇಳ್ವಯುಮಾಯತಿಕ್ಕೆಯುಂ
ಬಿಸುಟನ ಕೀರ್ತಿಯುಂ ವಿಟನ ಶೀಲಮುಮುರ್ವಿಯೊಳೊಪ್ಪಲಾರ್ಪುವೇ॥

ಕುರುಡನ ಕಾಣ್ಕೆಯುಂ ವನಿತೆಯುಗ್ಗಳಿಸಿರ್ಪನ ರಾಜ್ಯಮುಂ ಮನಂ
ಮುರಿವನ ಧೈರ್ಯಮುಂ ಪತಿಗೆ ಮಾರ್ಮಲೆದಿರ್ಪನ ಸಜ್ಜನಿಕ್ಕೆಯುಂ
ಪರಮಜಿನಾಗಮೋಕ್ತಿಯನೆ ಮಾಣದೆ ಭಾವಿಸದಾತನೋದು ಭಾ
ಸುರತರಮುಂ ಮಹಾಗುಣಮುಮೊಪ್ಪವು ಧಾರಿಣಿಯೊಳ್ನಿರಂತರಂ ॥ ೯೮

[ಚರಿತಪುರಾಣಮನಱಿಯದೆ
ತುರಿಪದಿನಧ್ಯಾತ್ಮಿಯಾಗಿ ನೆಗಳ್ವನ ತಪಮುಂ ।
ಮರುಳನ ಸಿರಿಯುಂ ಪಂದೆಯ
ಬಿರುದುಂ ಸುಖಮಾಗಲಱಿವೆಂದುಂ ಕಡೆಯೊಳ್ ॥] ೯೯

ಸಿದ್ಧಾಂತಮನಱಿಯದೆ ಪಿರಿ
ದುದತೆಯಿಂ ಸೊಂಬತನದಿನಧ್ಯಾತ್ಮಮುಮಂ ।[1]

1 ಅನ್ಯಾಗಮುಮಂ (ಗ)

ಶ್ರದ್ಧೆಯಿನೋದುವ ಕಡುನಿ
ರ್ಬುದ್ಧಿ ಮಹಾಸುಖಮನೈದಲಾಱಿಂ ಕಡೆಯೊಳ್ ‖ ೧೦೦

ಮೊದಲೊಳೋದದೆ ರಾಗದಿಂ ಪ್ರಥಮಾನುಯೋಗಮನರ್ತಿಯಿಂ
ತುದಿಯ ಸೂಕ್ಷ್ಮಮನೋದುವಾತನುಮಾಜಿಯೊಳ್ ಸಲೆ ಕೈದುವಿ
ಲ್ಲದೆ ಕಡಂಗಿ ವಿನೋದದಿಂ ಪುಗುವಾತನುಂ ನೃಪಕಾಂತೆಯುಂ
ಪದೆದು ಕಾಮಿಸಿ ನೋಡಿ ಪೊರ್ದುವ ಗಾಂಪನುಂ ಮರುಳಲ್ಲನೇ ‖ ೧೦೧

ಆಗಮಮನಱಿಯದ ತಪಮುಂ
ರಾಗಿಯೆನಿಪ್ಪವನ ರಾಣಿವಾಸದ ಕಾಪುಂ ।
ವೇಗಿಯ ಕೆಳೆಯುಂ ಬಡವನ
ಭೋಗಮುಮತ್ಯಂತದುಃಖಮಂ ಪುಟ್ಟಿಸುಗುಂ ‖ ೧೦೨

ಲೋಭಿಯ ಕೋಡುಂ ಪದಪಿಂ
ದೀಭವದ ಸುಖಕ್ಕೆ ಮಱುಗಿ ಕುದಿವನ ತಪಮುಂ ।
ಲಾಭಮನಱಿಯದ ಪರದುಂ
ಶೋಭಿಸಲಾರ್ತಪುವೆ ಬಗೆವೊಡವನೀತಳದೊಳ್ ‖ ೧೦೩

ಎಂದು ಮನದೊಳ್ ಭಾವಿಸುತಿರ್ಪನ್ನೆಗಂ ಕಲ್ಲೆಯುಂ ಕವಿಲೆಯುಮಾಗಿ ನೆರವಿ ಪೆಱಗೆ ಬರೆ ಪುರದ ತಳಾಱರುಂ ತನ್ನ ದೇಹಾರದ ಕಾಪಿನ ಬಂಟರುಂ ಕಳ್ಳನಿಲ್ಲಿ ಪೊಕ್ಕನೆಂದು ಬೀಡಿನೊಳ್ ಪೊಕ್ಕು ಗುಡಿಗೂಡಾರಂಗಳೊಳಂ ಬೆಟ್ಟುಗೊಟ್ಟರ್ದ ಪೇಱನಿಟ್ಟೆಡೆಗಳೊಳಂ ಕೊಟ್ಟಗೆಯೆತ್ತಿನ ಪಟ್ಟಿಗಳೊಳಂ ಪುಂಜಿಸಿದ ಚೀನದ ದಿಂಡುಗಳೊಳಂ ಪಾಸಿನೆಡೆಗಳೊಳಂ ಕೈದೀವಿಗೆಯ ಬೆಳಕಿನೊಳ್ ನೋಡುತ್ತುಂ ಕಳಕಳರವದಿಂ ಬಿದಿರುಂ ಬತ್ತಿಯುಂ ಪಾಸುಂ ಪೊಕ್ಕುಂ ತಿಗುರಿಯುಂ ಬುಗುರಿಯುಮುಂ ಜಾತಿಯುಂ ಭೀತಿಯುಂ ಆಗೆ ಪರಿವಾಗಳವರಂ ವಣಿಗ್ವಂಶಲಲಾಮಂ ಕಂಡು ತನ್ನೊಳಿಂತೆಂದಂ ‖ ೧೦೪

ಈಪಾತಕನಪ್ಪೊಡೆ ಮು
ನ್ನೀಪುರದೊಳ್ ಪಿರಿದು ಕೀರ್ತಿಯಂ ತಪದಿಂದಂ ।
ವ್ಯಾಪಿಸಿದಂ ಪಲರಿಂದಂ
ಪಾಪಾಂತಕನೆನಿಸಿ ನೆಱೆಯೆ ಕೈಮುಗಿಯಿಸಿದಂ ॥ ೧೦೫

ಮೊದಲೊಳ್ ಮುಳ್ಳಿನ ಮೊನೆಗಳ್
ಮೃದುವಪ್ಪುವು ಬಳಿಕೆ ಬೆಟ್ಟಿತಪ್ಪುವು ಖಳರುಂ ।
ಮೊದಲೊಳ್ ಗುಣಿಯೆನಿಸಿರ್ಪರ್
ತುದಿಯೊಳ್ ತಂತಮ್ಮ ಮಾಯೆಯಂ ಪ್ರಕಟಿಸುವರ್ ॥ ೧೦೬

ಪೊಳ್ಳುಂ ಬಿತ್ತುಂ ಸಸಿಗಳು
ಮೊಳ್ಳಿದುವೆನಿಸಿರ್ಪುವೆಯ್ದೆ ಫಲದೊಳ್ ತೋರ್ಕುಂ ।
ಪೊಳ್ಳಪ್ಪುದು ಪೊಳ್ಳುಂ ಕರ
ಮೊಳ್ಳಿದುವೆನಿಸಿರ್ಪ ಬಿತ್ತು ಧಾನ್ಯಮುಮಕ್ಕುಂ ॥ ೧೦೭

ಎಲ್ಲರ ಪೊಱಗಣ ಚೇಷ್ಟೆಯು
ನಲ್ಲದೆ ಪೇಟೊಳಗನಱಿವನಾವನೊ ! ಮರನೇ ।
ಕಲ್ಲೇ ಬಿದಿರೇ ಸೀಳ್ದಂ
ಮೆಲ್ಲನೆ ನೋೞ್ಪಂತೆ ನೋಡೆ ಮಾನಿಸರೆರ್ದೆಯಂ ॥ ೧೦೮

ಇವನಪ್ಪೊಡೆ ತಾನೊರ್ಮೆರ
ತವುಡಿಂಗಂ ಪೋಗನಿವನ ಕೃತದಿಂದಂ ತ್ರೈ ।
ಭುವನಂಬಡೆವೀಧರ್ಮಮ
ನವಿವೇಕಿಗಳಘಸಮನ್ವಿತರ್ಕಿಡೆನುಡಿವರ್ ॥ ೧೦೯

ಅದು ಕಾರಣದಿಂದಿವನ ಪೋದ ಪೋಗಂ[1] ಮಾರಿಯಱಿಗೆ ಸದ್ಧರ್ಮಕ್ಕೆ ಪೞಿಯಾಗವಂತೆ ನೆಗೞ್ವೆನೆಂದು ಪಿರಿಯ ಮಣೆಯ ಮೇಲಾತನನಿರಿಸಿ ಮಹಾಭಕ್ತಿಯಿಂ ಪ್ರತ್ಯಕ್ಷಂ ಮಾಯಾವಿಯ ಕಾಲನೊತ್ತುತ್ತು

ಮಿರ್ಪುದುಮೆನ್ನೆಗಂ ತಳಾಱನಾಯಕಂ ಪರಿತಂದು ಜಿನೇಂದ್ರಭಕ್ತ ಸೆಟ್ಟಿಯಲ್ಲಿಗೆ ಭೋರನೆ ಪೊಗೆ ಸೆಟ್ಟಿಯ ಮೇಲೆ ಕಾಲನವಷ್ಟಂ ಭದಿಂ ನೀಡಿ ಮಹಾಮಹಿಮೆಯಿಂದಿರ್ದ ಕೃತಕವೇಷಧಾರಿಯಂ ಕಂಡು ॥ ೧೧೦

ನೀವೇನೆಂದೀತಸ್ಕರ
ಕೀವಿಲಚರಣದ್ವಯಂಗಳಂ ಮೆಲ್ಲನೆ ಸ ।
ಧ್ಭವದಿನೊತ್ತುತ್ತಿರ್ದಿರೊ
ನೀವಱಿಯಿರೆ ಚಪಳನಾಡಿದಾಟಮನಿನ್ನುಂ ॥ ೧೧೧

ಸಿತಗಂ ಮಾಯಾತಪಮಂ
ಕೃತಕದಿನಜಿಯುಟ್ಟು ಮಾಡಿ ಮೇಳಸಿ ಪೆಱರು ।
ನ್ನತರತ್ನಮನೊಯ್ದು ಪನು
ನ್ನತಿಯಿಂ ದುರ್ಜನರನಿನ್ನರಂ ಕಂಡಱಿಯೆಂ ॥ ೧೧೨

ಪೊಱಗೀ ಖಳನಂ ಕಂಡೊಡೆ
ಪೆಱದೆಗೆಯದೆ ಸಂದಿಸಂದಿಯಂ ಪರಿಸಿಂದಂ ।
ತಱಿಯೆನೆ ಗರಗಸದಿಂದಂ
ಕೊಱೆಯೆನೆ ಖಳನಿಲ್ಲಿ ಪೊಕ್ಕು ಬದುಕಿದನಿನ್ನುಂ ॥ ೧೧೩

ಆಶ್ವಾಸಂಗುಡದಿವನಂ
ನಿಸ್ವನಮಜ್ಞಾನಿಯಂ ಮಹಾಪಾತಕನಂ ।
ವಿಶ್ವಾಸಘಾತುಕನನಮ
ರೇಶ್ವಗನಿಭವಿಭವ ತಡೆಯದೊಪ್ಪಿಸು ಬೇಗಂ ॥ ೧೧೪

ಮಹಾಮಾಯಾವಿಯು ತುಡುಗುಗೊಂಡ ತೊಟ್ಟನಂತೆ ಬಾಯಂ ತೆಱೆದುಕೊಂಡು ತಾನಲ್ಲದಂತೆ ಬೆಣ್ಣೆಯಂ ತಿಂದ ಬೆಕ್ಕಿನಂತೆ ನಿಮ್ಮ ಮಱೆವೊಕ್ಕು ನುಣ್ಣನಿರ್ದಪನೆಂದು ನಾನಾಪ್ರಕಾರದಿಂ ತಿರಸ್ಕರಿಸಿ

ಸೆಟ್ಟಿಗಂಜಿ ಮೇಲ್ವಾಯ್ದು ತೆಗೆಯಲ್ಕಣದಿರ್ಪುದುಂ, ಜಿನೇಂದ್ರಭಕ್ತ ಸೆಟ್ಟಿ ತಳಾಱನಾಯಕನ ಮೊಗಮಂ ನೋಡಿ ನೆರವಿಯೆಲ್ಲಂ ಕೇಳ್ವಂತಾಗೆ ಗಂಭೀರನಾದದಿಂದಿಂತೆಂದಂ ॥ ೧೧೪

ಪುರದೊಳಗೆ ಕೆಟ್ಟುದೇಂ ತ
ಸ್ಕರನಾವಂ ಕಳ್ದು ತಂದ ಧನಮಾವುದು ನಿ ।
ಷ್ಠುರತನದಿಂದೀ ಪೆರ್ವಡೆ
ವೆರಸು ಮಹಾನೆರವಿವೆರಸು ಕಟ್ಟಾಳ್ತನದಿಂ ॥ ೧೧೫

ಪರಿತಂದು ಪೊಕ್ಕಱಸುವೊಡೆನ್ನ ಬೀಡು ಕೊಟ್ಟಮೆಲ್ಲದು ನೀನಿಂದು ಕಟ್ಟಿಲೆಯುಂ ತಿಂದ ಪಸುವಿನಂತಾನುಂ ಮೆದ್ದುಗುಣಿಕೆಯುಂ ತಿಂದ ಮಾನಿಸನಂತಾನುಂ ಮೆಯ್ಯೆಱಿಯದೆನ್ನೊಡಮೆಯನೆನ್ನಲ್ಲಿಗೆ ತರ್ಪ ಬಡಸಾದುರುಷಿಯುಂ ಕಳ್ಳನೆಂದು ಬೆನ್ನಟ್ಟಿದೆಯಿಂತೀ ಸಾಧು ತಪಸ್ವಿ ನಿಕ್ಷ್ಯಯುಂ ಕಳ್ಳನಪ್ಪೊಡೆ ಮತ್ತೊಂದು ದೆಸೆಗೆ ಪೋಗದೆನ್ನ ಬೀಡನೇಕೆ ಪುಗುವನದಱಿಂದಮೆಱಿಯಲ್ವೇಡಾ ॥ ೧೧೬

ಪಿರಿದುಂ ಕಾಲಂ ನೀನೀ
ಪುರಮಂ ಜೀಯೆನಿಸಿ ಬುದ್ಧಿಗಂ ತೇಜಕ್ಕಂ ।
ಬಿರುದಿಂಗಂ ಪೆಂಪಿಂಗಂ
ಕರಮೊಳ್ಳಿದನೆನಿಸಿ ರಕ್ಷಿಸಿದೆಯಿನ್ನೆವರಂ ॥ ೧೧೭

ಮುನ್ನಮಿಂತಪ್ಪ ನಿರ್ಬುದ್ಧಿತನಮಿಲ್ಲ ನಿನ್ನಂತಪ್ಪ ಬುದ್ಧಿವಂತರುಂ ಪೆರ್ವೆಯ್ತಂಗೊಂಡರಂತೆ ಬಡಸಾದುವಂ ಕಳ್ಳನೆಂದು ಬೆನ್ನಟ್ಟಿ ಬಂದುದಕ್ಕೆಮಗೆ ಪಿರಿದುಂ ವಿಸ್ಮಯಮಪ್ಪುದಪ್ಪುದೆಂಬುದುಂ ಸೆಟ್ಟಿಯ ಮಾತಿಂಗೆ ತಳಾಱನಾಯಕಂ ಬೆಱಗಾಗಿ ತನ್ನೊಳಿಂತೆಂದಂ ॥ ೧೧೮

ಈ ವೈಶ್ಯೋತ್ತಮನಪ್ಪೊಡೆ
ಕೇವಳಮೇ ಬುದ್ಧಿಯೆಡೆಗೆ ನೂರ್ಮಡಿ ಮಿಕ್ಕಂ ।

ದೇವೇಶನುಮಂ [1] ಬಗೆವೊಡೆ
ಭೂವಿನುತಂ ಕಳ್ಳನಪ್ಪವಂಗೆಱಗುವನೇ ॥ ೧೨೦

ಅನುಪಮಮೆಗುಣಿಯೆಂದಸ್ಮ
ಜ್ಜನಪಂ ಮೊದಲಾಗೆ ಕೂರ್ಮೆಯಿಂ ಕೈಮುಗಿವಂ ।
ಜಿನಭಕ್ತಸೆಟ್ಟಿಗೆಂದೊಡೆ
ಜಿನಭಕ್ತಂ ಕಳ್ಳನಪ್ಪವಂಗೆಱಗುವನೇ ॥ ೧೨೧

ಅಂತಲ್ಲದೊಡಂ ॥ ೧೨೨

ಈತಂ ತಸ್ಕರನಪ್ಪೊಡೆ
ಭೀತಿಯಿನತ್ತಿತ್ತಲೋಡುಗಲ್ಲದೆ ದಿಟಮಿಂ ।
ತೀತನ ಬೀಡಂ ಪುಗುವನೆ
ಮಾತೇನೀಸಾಧು ಕಳ್ಳನಲ್ಲಂ ಶುದ್ಧಂ ॥ ೧೨೩

ಎಂದಿದೆಲ್ಲಮೆನ್ನ ನಿರ್ಬುದ್ಧಿತನಮೆಂದು ತಳಾಱನಾಯಕಂ ಸಿಗ್ಗಾಗಿ ಬಂದ ಬಟ್ಟೆಯನೆ ಮಗುೞ್ದು ಸಿರದೆ ಪೋದಂ ; ಪೋಪುದುಂ ನೆರೆದ ನೆರವಿಯೆಲ್ಲಂ ತಮ್ಮೊಳಿಂತೆಂದರ್ ॥ ೧೨೪

ಸೆಟ್ಟಿಯ ಪೇಳ್ಕೆಯಿನೊಯ್ಯನೆ
ನೆಟ್ಟಗೆ ವೈಡೂರ್ಯರತ್ನಮಂ ತರ್ಪನನೆ ।
ಟಿಟ್ಟ ಖಳನೆಂದು ಕಲ್ಲಿಂ
ದಿಟ್ಟ ಈಕಿಲ್ಲದ್ದರ್ ಬಱಿದೆ ನೋಡ ತಳಾಱಂ ॥ ೧೨೫

ಕೊಂಡಂ ಮುನ್ನೆಂದು ತಳಾಱನಾಯಕನ ಪೊಲ್ಲಮೆಯನೆಲ್ಲಂ ಭೋರೆಂದುಲಿಯುತ್ತುಂ ಪೋದರಿತ್ತಲ್ ವಣಿಗ್ವಂಶತಿಲಕಂ ಮಾಯಾವಿಯ ನೇಕಾಂತಕ್ಕುಯ್ದು ಮೆಲ್ಲನಿಂತೆಂದಂ ॥ ೧೨೬

---

1 ದೇವೇಷ್ಯನುಮಂ (ಖ. ಕ.) ಸುಮೈಷ್ಯನುಮಂ (ಗ)

ಕರಮಲ್ಲದೆಯ್ದೆ ನಿನ್ನಂ
ಪುರಮೆಲ್ಲಂ ಕೊಂಡು ಕೊನೆದು ದೇವಂ ದಿಟದಿಂ ।
ನಿರುತಮಿವನೆಂದು ಬಣ್ಣಿಸು
ತಿರೆ ಗುಣಮಂ ಬಿಟ್ಟು ಕೆಟ್ಟು ಪುರಿಯೊಡಾದೈ ॥ ೧೬೭

ಬಿತ್ತಲ್ಲದುದು ಫಲದೊಳಱಿಪಿತ್ತೆಂಬ ನಾಣ್ನುಡಿಯಂತೆ ತಪದಿಂದಂ ಗುಣದಿಂದಂ ಪುರದೊಳ್ ಪಲವುದಿವಸಂ ಮೆಚ್ಚಾಗಿರ್ದಲ್ಲಿಯೆ ಬಂಡುವೋದೈ; ಆನೆಯುನೇಱಿರ್ದಲ್ಲಿಯೆ ಬೇರಂಟಿಯಾಯ್ದೈ; ನಿನ್ನಂ ಬಿಟ್ಟು ಪಾತಕರುಂ ವಿಶ್ವಾಸಘಾತಕರುಂ ಮಾಯಾವಿಗಳುಮಿಲ್ಲ; ಬೆಕ್ಕು ಪಾಲನಲ್ಲದೆ ಮೇಲಣ ಬಡಿಯಂ ಕಾಣದೆಂಬಂತಿಲ್ಲಿಯ ಸುಖಮನೆ ಬಗೆದೆಯಲ್ಲದೆ ಮುಂಭವದೊಳಾದ ಮಹಾದುಃಖಮಂ ಬಗೆದೆಯಿಲ್ಲಂ. ಅನ್ಯಾಯದೊಳ್ಪಡೆದರ್ಥಂ ನಡುನೀರೊಳಿಕ್ಕಿದೊಡಂ ಕಿಡುಗುಮೆನ್ನ ಮುನ್ನ ಮಾಡಿದ ಸುಪಾತ್ರದಾನದ ಫಲದಿಂ ದೊರೆಕೊಂಡುದೀ ಮಹಾನರ್ಘ್ಯರತ್ನಂ; ಕುತ್ಸಿತನಪ್ಪೀನಿನಗೆನಿತಾಪತ್ತುವಟ್ಟೊಡಂ ದುಃಖಮೆ ಕೈಸಾರ್ಗುಮಲ್ಲದೆ ರತ್ನಂ ಕೈಸಾರಲಱಿಯದು; ಎಲ್ಲೆಡೆಯೊಳಂ ಪಕ್ಷಮಿಲ್ಲದೊಂದೆ ಮಾರ್ಗದಿಂದೆಱಗಿ ಮೞೆ ಸುರಿದೊಡಂ ನೀರ್ ಪುಣ್ಯಮಿಲ್ಲದ ಸ್ಥಾನಮಂ ಪರಿಹರಿಸಿ ಬಂದು ತೊಱೆಕೆಱೆಭಾವಿಗಳೊಳ್ ತೀವುವಂತೆ ಸಕಲವಸ್ತುಗಳುಂ ತೆರಳ್ದು ನಿರ್ಭಾಗ್ಯರಂ ಬಿಟ್ಟು ಪುಣ್ಯಾಧಿಕರೊಳ್ ನೆರೆಗುಮಂತು ತೊಱೆಕೆಱೆಭಾವಿಯ ನೀರೆಲ್ಲಂ ಕಾಲಕ್ರಮದಿಂ ಸಾರ್ದು ಸಮುದ್ರದೊಳ್ಕೂಡುವಂತೆ ಅಲ್ಪಪುಣ್ಯರ ವಸ್ತುಗಳುಂ ತೆರಳ್ದು ಮಹಾಪುಣ್ಯಾಧಿಕರೊಳ್ನೆಲಸುಗುಮದು ಕಾರಣದಿಂ ॥ ೧೬೮

ಸಾವುದನೆ ಮಾಡಿಕೊಂಡೈ
ಕೇವಲಪರಮಾಣಿಯಲ್ಲಿ ಭಾವಿಸಿ ಕೇಡಾಂ [1] ।
ಶ್ರಾವಕನಪ್ಪುದಱಿಂದಂ
ಕೀವಿಲಿ ನಿನಗೊಂದು ಕಂಟಕಂ ಪೋಯಿತ್ತೀಗಳ್ ॥ ೧೬೯

---

1 ಕೇವಲದವಮಾಳಿಯುಲ್ಲಯಿ:ನಿಶಾನ್ನುಂನಾಂ (ಬ. ಕ.)

ಆನಱಿಯದೊಡಿಂತಕ್ಕಟ
ನೀನಾ ನಿಷ್ಠುರನ ಕೆಯ್ಯೊಳರಡಿಲ್ಲದೆ ಪೇ ।
ರಾನೆಯ ಬಾರಿಗೆ ಬಿರ್ದಾ
ಶ್ವಾನನ ತೆಱದಂತೆ ಬಾಧೆಗೊಳಗಾಗಿರ್ಪೈ ॥ ೧೩೦

ಈರೂಪಂ ಧರಿಯಿಸಿ ಸಂ
ಸಾರಮನದಟಲೆದು ಮುಕ್ತಿವಡೆಯದೆ ಮಾಯಾ ।
ಧಾರಿ ಗುಣಹಾರಿ ರೌರವ
ವಾರಿಧಿಯೊಳ್ನಲಸಿ ನಿಲ್ವ ಬಗೆಯನೆ ಬಗೆದೈ ॥ ೧೩೧

ಈರತ್ನಮೆಂಬುದೆಂತುಟು
ವೀರಜಿನಸ್ಮರಣೆಯಿಂದೆ ಮುಕ್ತಿಸುಖಂ ಕೈ ।
ಸಾರುಗು ಮೆಂದೊಡೆ ಗುಣದಿಂ
ಧಾರಿಣಿಯೊಳ್ ಗಹನಮುಂಟೆ ಮೆತ್ತಿನ ಸಿರಿಗಳ್ ॥ ೧೩೨

ಮತ್ತಂ "ಕಳ್ಳನೊಕ್ಕಲಾದುದಿಲ್ಲ ನಾಯಿ ಜಂಗುಳಿಯಾದುದಿಲ್ಲ" ಎಂಬ ನಾಣ್ಣುಡಿಯನಱಿದೆಯಿಲ್ಲಕ್ಕುಂ; ಪುಣ್ಯಮಿಲ್ಲದೆ ಬೆವಸಾಯದಿಂ [1] ಸಿರಿಯಕ್ಕುಮೆಂದೆಯಪ್ಪೊಡೆ ನೆತ್ತಿ ತಱಿಂಟಾಗೆ ಪುಳ್ಳಿಯನಡಕುವ ಬಡವರ್ಗಂ ಬಟ್ಟೆಗಟ್ಟಿ ಬಡಿವ ಬೇಡರ್ಗಂ ಸಿರಿಯೇಕಾಗದು ನಡೆದೊಡೆ ತಡತಡಿಸುವ ಕುಳ್ಳರ್ಪೋರೊರ್ಪರಂ ಮಲಂಗುವ ಕಟ್ಟಲ ಸರಪ್ಪರಸುಗಳ್ಗೆ ರಾಜ್ಯಶ್ರೀ ಕೈಗಣ್ಮಿ ಪೊಣ್ಮುವುದದುಕಾರಣದಿಂ ಸಿರಿಗಂ ಸೌಭಾಗ್ಯಕ್ಕಂ [ಶಾಶ್ವತಮಪ್ಪ ಸುಖಕ್ಕಂ] ಜಿನಪೂಜೆಯುಂ ಸುಪಾತ್ರದಾನಮುಂ ವಿಷಯಕಷಾಯನಿಗ್ರಹಮುಂ ಮಿಥ್ಯಾತ್ವಭೀತಿಯುಂ ಜೀವದಯೆಯುಂ ಮುಖ್ಯಂ ॥ ೧೩೩

ಶರಧಿಯ ನೀರಂ ನದಿಗಳ್
ಧರಿಯಿಸಲಾರ್ತಪುವೆ ತೊಱೆಯ ನೀರಂ ಕೆರೆಗಳ್ ।
ಧರಿಯಿಸಲಾರ್ಕುಮೆ ಭಾವಿಗ
ಳರಿದೆನಿಸುವ ತೊಱೆಯ ನೀರ್ಗಳಂ ತಾಳ್ದುಗುಮೋ ॥ ೧೩೪

---

1 ಅದರಿಂದಂ ಕಳವಿಂದಂ (ಬ. ಕ.)

ಅಂತೆ ಮಹಾಪುಣ್ಯಾಧಿಕರ್ ತಾಳ್ದುವ ಸಿರಿಯುಂ ಪುಣ್ಯಹೀನರಪ್ಪ ವರೇಸುವಮನಂಕುದಿದುಂ ಮಱುಗಿಯುಂ ತಾಳಲಾಱರರದುಕಾರಣಂ ॥

ಧರ್ಮವು ನೆರಪುವುದುಂ ತ
ದ್ಧರ್ಮದಿನೆಲ್ಲಾಸುಖಂಗಳುಂ ಸವೆನಿಸುಗುಂ ।
ಧರ್ಮವನೇಳಿಸಿ ಬಿಟ್ಟೊಡೆ
ಕರ್ಮದಿ ನೆವನೆವದಿನಡಸುಗುಂ ಕಡುದುಃಖಂ । ೧೩೬

[ಲಲನೆಯುರೊಲ್ಲದೊಡಂ ಸಿರಿ
ತೊಲಗಿದೊಡಂ ಪೋಗದಟ್ಟ ಕುತ್ತಂ ತನ್ನೊಳ್ ।
ನೆಲಸಿದೊಡವಂತು ಮುನ್ನಿನ
ಕೊಲೆಯುಲೆದಪುದೆಂದು ಮಱುಗುವವರಂ ಕಾಣಾ ॥ ೧೩೭

ವನಿತೆಯ ಮೋಹದಿಂ ಸುತರ ಮೋಹದಿನಿಷ್ಟರೊಳಾದ ಮೋಹದಿಂ
ಧನಮನುಪಾರ್ಜಿಸಲ್ಮಱುಗುವಂ ಕಳವಿಂ ಧನಲಾಭಮಾದೊಡಾ
ವನಿತೆಯುಮಿಷ್ಟರುಂ ಸುತರುಮುಣ್ಬೆಡೆಯೊಳ್ ಪುದುಗಳ್ವೆನೆಂದು ಭೋಂ
ಕನೆ ಕಡಿದಿಕ್ಕೆ ಪರ್ದೆಸೆಯೊಳಲ್ಲಿದವರ್ಪುದುವಾಗಳಾರ್ಪರೇ ॥ ೧೩೮

ಆದಱಿಂ ಪೆಱರ್ಗೆಱರೆ ತಾಂ ತನಗೆಂದು ನಡುಗಿ ಪಾಪಭೀರುವಪ್ಪುದುಂ ॥ ೧೩೯

ಕಡುಗಾಯ್ದ ಪಾರೆಯಂತುಂ
ಸುಡಲಱಿಯದು ಸತ್ಯಮುಳ್ಳನಂ ಪುಸಿಪವನಂ ।
ಸುಡುವುದದಱಿಂದೆ ಸತ್ಯಮ
ನುಡಿವನೆ ಸುಖಿ ಕೇಳ ದುಃಖಿ ತಾಂ ಪುಸಿವಾತಂ ॥ ೧೪೦

ಅದುಕಾರಣದಿಂ ಅಸತ್ಯವೆ ದುಃಖಕ್ಕೆ ಕಾರಣವೆಂದು ನಂಬಿ ಪುಸಿಯುಂ ಬಿಡುವುದು ॥ ೧೪೧

ಅರವರಿಸದೆ ಪಲರುಂ ಪಾ
ದರಿಗನಿವಂ ಕಷ್ಟನೆಂದು ಕುಱಿಯಂ ಕೊಲ್ವಂ ।
ತಿರೆ ಕೊಂದು ಪೊಲೆಯರಿಂ ಚಿ
ಚ್ಚರವೆಟೆಸುವರಟ್ಟು ದೂಱುವರ್ಪೆರ್ವಡಿಯೊಳ್ ॥ ೧೪೨

ಅದುಕಾರಣದಿಂದಂ ಮಹಾದುಃಖಕ್ಕೆ ಪಾರದಾರನೆ ಮೊದಲೆಂದು
ಬೆರ್ಚಿ ಪರಸ್ತ್ರೀಯರಂ ತಾಯಂ ಕಾಣ್ಬಂತೆ ಕಾಣ್ಬುದು ॥ ೧೪೩

ಜಿನಪತಿಯಂ ಪೂಜಿಸದೊ
ಯ್ವನ ಪಂಚಾಣುವ್ರತಂಗಳಂ ತಾಳ್ದದೆ ಕೆಂ ।
ಮನೆ ದೇವಲೋಕಸುಖಮಂ
ಮನದೊಳ್ ಪಂಬಲಿಸಿ ಮಱುಗಲೇಂ ಸಮನಿಕುಮೋ ॥ ೧೪೪

ಎನಗೆ ಸುಖಮಾಗವೇಳ್ಕುಂ
ದನವರತಂ ಬಯಸುತಿರ್ಪ ಮನುಜಂ ಜಿನನಾ ।
ಥನನರ್ಚಿಸುವುದು ಮನದೊಳ್
ಜಿನಪದಮಂ ನೆನೆಯುತಿರ್ಪುದಿರುಳುಂ ಪಗಲುಂ ॥ ೧೪೫

ಜಿನರಂ ಪೂಜಿಸಿದವರೇಂ
ದ್ರನ ಸುಖಮಂ ಖೇಚರೇಂದ್ರನತ್ಯುನ್ನತಿಯಂ ।
ಮನುಜೇಂದ್ರನ ವಿಭವಮನಾ
ವನಾದೊಡಂ ಬಯಸಿ ಮಱುಗಿದೊಡೆ ಕೊಂಡಪುದೇ ॥ ೧೪೬

ಮದದಾನೆಯನೇಱಿ ಮನೋ
ಮುದದಿಂ ಚಾಮರಮನಿಕ್ಕೆ ದಿವ್ಯಾಂಗನೆಯು ।
ರ್ವಿದಿತಂ ಬರ್ಪುದನೊಲ್ವೊಡೆ
ಮದನಾರಿಯ ಪಾದಪದ್ಮಮಂ ನೆನೆ ಮನದೊಳ್ ॥ ೧೪೭

ದಾನಚತುಷ್ಟಯಮಂ ಮನ
ದಾನಂದಂಬೆರಸು ಮಾಡದಳಿಪಿಂ ಸುಖಮಂ ।
ಹೀನಬಯಸುತುಮಿರ್ಪಂ
ತೇನಾಸುಖಮಿದಿರೊಳಿರ್ದ ಕೊಗ್ಗಿಯ ಜೇನೇಂ ॥ ೧೪೮

ಮನವೊಸೆದನ್ನಮನುತ್ತಮ
ನೆನಿಸುವ ಜಿನಮುನಿಗೆ ಕುಡದೆ ಬಯಸಿ ಜಿನೇಂದ್ರಾ ।
ರ್ಚನೆಯಂ ಮಾಡದೆ ಸುಖಮಂ
ಮನದೊಳ್ ಬಯಸಿದೊಡೆ ಕೂಡಲಱಿಗುಮೆ ಧರೆಯೊಳ್ ॥ ೧೪೯

ಶೀಲವ್ರತಮಂ ತಾಳ್ದದೆ
ಮೇಲೆನಿಸುವ ಪಾತ್ರದಾನಮಂ ಮಾಡದೆ ಸ ।
ಲ್ಲೀಲೆಯಿನಿಂದ್ರನ ಸಿರಿಯಂ
ಪಾಲಿಸಲೆಲೆ ಮರುಳ ಬಾರದವನೀತಳದೊಳ್ ॥ ೧೫೦

ಜಳನಿಧಿಪರಿವೃತಧಾತ್ರೀ
ತಳಮಂ ಬೆಸಕೈಸಿಕೊಳ್ವೊಡಂ ಕಪ್ಪುರದಂ ।
ಖುಲಮಂ ಮಾಣದೆ ಮೆಲ್ವೊಡ
ಮಳಿಪಿಲ್ಲದೆ ಪೂಜಿಸಿಂದ್ರವಂದ್ಯನ ಪದಮಂ ॥ ೧೫೧

ಸ್ಮರಸುಖಮಂ ಸಲಿಸುವ ಸೌಂ
ದರಿಯರೊಳೊಡಗೂಡಿ ಲೀಲೆಯಿಂದಿರ್ಪೊಡಮಂ ।
ಖಚರರಾಜ್ಯಶ್ರೀಯಂ
ಧರಿಯಿಸುವೊಡಮಲಸದರ್ಚಿಸರ್ಹತ್ಪದಮಂ ॥ ೧೫೨

ಎಂದುಂ ದುಃಖಮನಱಿಯದೆ
ನಂದನರೊಳ್ ಸಕಲಮಿತ್ರರೊಳ್ ಬಾಂಧವರೊಳ್ ।
ತಂದೆಯೊಳಬ್ಬೆಯೊಳೊಡನೋ
ತೊಂದಿರ್ಪೊಡೆ ಪೂಜಿಸಾಗಳುಂ ಜಿನಪದಮಂ ॥ ೧೫೩

ಮಲಯಜಮಂ ಪೂಸಿ ತಳ
ತ್ತಳಸುವ ಚೆಂಬೊನ್ನ ರತ್ನದಾಭರಣಮನು ।
ಜ್ಜ್ವಳಮಾಗೆ ತೊಟ್ಟು ಸುಖಮಿರ
ಲೆಳಸುವೊಡಂತನ್ನದಾನಮಂ ಮಾಡೊಳ್ವಂ ॥ ೧೫೪

ಚೀನಮಹಾಚೀನಂಗಳ
ನಾನಂದದಿನುಟ್ಟು ಪೂಸಿ ಪೊಸಕತ್ತುರಿಯಂ ।
ಮಾನವರೊಳಧಿಕಮೆನಿಸುವೊ
ಡಾನಂದದಿನೊಸೆದು ಪೂಜಿಸರ್ಹತ್ಪದಮಂ ॥ ೧೫೫

ತನ್ನಂ ತಪದಿಂ ನೋಯಿಸ
ದುನ್ನತಿಯಂ ದಿವ್ಯಭೋಗಮಂ ಬಯಸುವ ಗಾಂ ।
ಪಂ ನೆಱ ಪೋಲ್ಕಂ ಸಾಲಿಸ
ದಿನ್ನಳಪಿಂ ಬಡ್ಡಿವೇಡಿ ಮಱುಗುವ ಮರುಳಂ ॥ ೧೫೬

ಜಿನಮತಮಂ ಪೊರ್ದದೆ ಜಿನ
ಮುನಿಗನ್ನಮನಿಕ್ಕಿ ಧವಳಜೈನಾಗಮಮಂ ।
ಮನದೊಳ್ ನಂಬದೆ ದೇವೇ
ಶನ ಚಕ್ರೇಶ್ವರನ ಸಿರಿಗೆ ಮಱುಗಿದೊಡುಂಟೇ] ॥ ೧೫೭

ತರುಣಿಯರಿಕ್ಕೆ ಚಾಮರಮನಿರ್ಕೆಲದೊಳ್ ಕಡುಶೋಭೆವೆತ್ತು ಕು
ಳ್ಳಿರೆ ನೃಪರುಂ ಮನೋಹರೆಯರುಂ ಬುಧರುಂ ಭಟರುಂ ಕುಮಾರರುಂ
ಬಿರುದರುಮರ್ತಿಯಿಂ ಬಿಡದೆ ಕಟ್ಟೆಗಾಱರುಘೇಯುಘೇಯೆನು
ತ್ತಿರೆ ನೃಪಲೀಲೆಯಂ ಪಡೆವೆನೆಂಬೊಡೆ ಪೊರ್ದು ಜಿನೇಂದ್ರಧರ್ಮಮಂ ॥

ಸುರುಚಿರಮಪ್ಪ ರತ್ನಚಯದಿಂದೆಸೆದೊಪ್ಪುವ ದಿವ್ಯಸಿಂಹವಿ
ಷ್ಟರದೊಳಗುರ್ವಿನಿಂ ನೆಲೆಸಿ ರಾಜಕುಮಾರರ ಮೇಲೆ ನೀಡಿ ಕೈ

ಯೆರಡುಮೆನಸಳ್ಕಱಿಂ ಮೆನಕೆ ಬಂದ ವಿದಗ್ಧೆಯರೊಂದುರೂಪಿನ
ಚ್ಚರಿಯುಮಂ[1] ನೋಡುತಿರ್ಪ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೪೯

ಕರಿಸಿಕುರಂಬದಿಂ ಹಯನಿಕಾಯದಿನುದ್ಭಟಕೋಟಿಯಿಂ ನೆಲಂ
ಬಿರಿವಿನಮೆತ್ತಲುಂ ನೆರೆದು ನಂದನದಂತಿರೆ ಛತ್ರರಾಜಿ ತ
ಳ್ತಿರೆ ಲವಣಾಬ್ಧಿಯಂತೆ ಪಡೆ ಘೂರ್ಣಿಸೆ ವಾಸವನಂತೆ ರಾಗದಿಂ
ಸ್ಥಿರತರಮಪ್ಪೆನೆಂಬ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮಮಂ ॥

ಇನಿಯಳ ಮೇಳದ ಕಾಮಸುಖಮಂ ಕೊಳಲೆಂದು ಮಲಂಗಿ ಮೆಲ್ಲನಾ
ನನವನಜಾತಮಂ ಕುರುಳಪಂಕ್ತಿಗಳಂ ಪೊಳವಕ್ಷಿಯುಗ್ಮಮಂ
ಕನಕಘಟೋಪಮಸ್ತನಯುಗಂಗಳನೀಕ್ಷಿಸುತುಂ ವಿನೋದದಿಂ
ಮನಮೊಸೆದಿರ್ಪೆನೆಂಬ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೫೧

ಪವಪಿನೊಳೞುವೆಂ ಸುರಗಜೇಂದ್ರಮನಿರ್ಪನನಂತಸೌಖ್ಯದೊ
ಳ್ಪ್ಪಿದಿದಮರಾವಳೀಪುರದೊಳಾದರದಿಂ ಬೆಸಕೈಸಿಕೊಳ್ವೆನೊ
ಪ್ಪೊದಲೊಳ ದೇವಸಂಕುಲಮನುರ್ವಶಿಯೊಳ್ನರೆವೆಂ ದಿಸಕ್ಕೆ ನಾಂ
ಪೊವಲಿಗನಪ್ಪೆನೆಂಬ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮಮಂ ॥

ಒಡನೆ ಸುರಾಳಿ ದೇವ ಬೆಸನಾವುದು ಜೀಯ ಮಹಾಪ್ರಸಾದ ನಿ
ಮ್ಮಡಿ ಬೆಸಸೆಂದು ಮುಂದಿರೆ ಸುರಾಂಗನೆಯರ್ಚಪಳಾಕ್ಷಿಯರ್ಮನಂ
ಬಿಡೆ ಮೃದುವಪ್ಪ ಮುದ್ದುನುಡಿಯಿಂ ಸ್ಮರರಾಜನ ಬಯ್ಕೆಯರ್ಥಮಂ
ಕುಡೆ ಸುಖಮಿರ್ಪೆನೆಂಬ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೫೩

ಸುರಕುಜಮಾಗಳುಂ ಬಗೆದ ವಸ್ತುವನೀಯೆ ಮರುನ್ನಿಕಾಯಮೊ
ಪ್ಪಿರೆ ನಲಿದಾಗಳುಂ ಬಿಡದೆ ಪೊರ್ದೆ ಮರುಲ್ಲಲಿತಾಂಗಿಯರ್ನಿಜಾ
ದರದೊಳ ಮೆಚ್ಚುವಿಚ್ಚೆಗಳನಚ್ಚರಿಯಾಗಿರೆ ಕೂಡಿ ಭೋಗಿಪಂ
ನಿರುತಮುಮೋಕ್ಷಮೆಂಬ ಮನಮುಳ್ಳೊಡೆ ಪೊರ್ದು ಜಿನೇಂದ್ರಧರ್ಮ
ಮಂ ॥ ೧೫೪

---

1 ರೂಪನಚ್ಚರಿವಡೆ (ಕ. ಬ.)

ತನುಸೋಂಕಿಂ ಸೋಂಕಿ ಸೋಲಂಬೆರಸು ಮೆರಕಟಾಕ್ಷಂಗಳಿಂ ನೋಡಿ ಮೋಹಂ
ಮನದೊಳ್ಕೈಗಣ್ಮೆ ಕೈಯಂ ಪಿಡಿದು ನೊಸಲಮೇಲಿಟ್ಟುಕೊಂಡಚ್ಚರಿಂ ಚೊ
ಮ್ಮನೆ ಜೋಲ್ದಂತಪ್ಪಿಕೊಂಡೊಯ್ಯನೆ ಸುರತದೊಳಾಹ್ಲಾದಮಂ ಮಾಳ್ಪ ದೇವಾಂ
ಗನೆಯರ್ಗಿನ್ನಣ್ಣ ನೀನಾಟಿಸುವೊಡೆ ಜಿನನಂ ಪೂಜಿಸುತ್ಸಾಹದಿಂದಂ ||

ಮತ್ತಂ ಚಂದನಕಾಶ್ಮೀರಕರ್ಪೂರಾದಿಸುಗಂಧದ್ರವ್ಯಂಗಳಂ ಪೂಸುವೆನೆಂಬ ಚಿತ್ತಮುಳ್ಳೊಡಂ, ಚೀನಮಹಾಚೀನದುಕೂಲಾದಿವಸ್ತ್ರಂಗಳನುಡುವೆನೆಂಬ ಮನಮುಳ್ಳೊಡಂ, ಹಾರಕೇಯೂರಕಟಕಕಟಿಸೂತ್ರಕುಂಡಲರತ್ನಮುದ್ರಿಕಾಮಕುಟಾದ್ಯಾಭರಣಂಗಳಂ ತುಡುವೆನೆಂಬ ಮೋಹಮುಳ್ಳೊಡಂ, ಕಲ್ಯಾಣಕರಾಮೃತಾಹಾರಂಗಳನಾರೋಗಿಸುವೆನೆಂಬಬಯಕೆಯುಳ್ಳೊಡಂ, ಮೃದುಶಯ್ಯಾತಲದೊಳೊರಗುವೆನೆಂಬಿಚ್ಛೆಯುಳ್ಳೊಡಂ, ಭೋಗೋಪಭೋಗಂಗಳನನವರತಮನುಭವಿಸುವೆನೆಂಬಬಗೆಯುಳ್ಳೊಡಂ, ಅರ್ಹಚ್ಚರಣಂಗಳಂ ಮನದರ್ತಿಯಿಂ ಪೂಜಿಸಲುಂ ಸಕಲಶಾಸ್ತ್ರದಾನಮನುತ್ಸಾಹದಿಂ ಮಾಡಲುಂ ಸುಪಾತ್ರಕನ್ನಮನಲಸದೀಯಲುಂ ಚಾತುರ್ವರ್ಣ್ಯಕ್ಕೆ ರೋಗಾಪಹಾರಾರ್ಥಮೌಷಧದಾನಮಂ ಮಾಡಲುಂ ಸಮಸ್ತಜೀವರಾಶಿಗಳ್ಗಭಯದಾನಮನೇಳಿದಂಗೆಯ್ಯದೆ ಮಾಡಲುಂ ಸುಖಮನೆಯ್ದುಗುಮಲ್ಲದೆನಿಸು[1] ಕುದಿದೊಡಂ ಕಳ್ದೊಡಂ ನೆಲನಂ ಪೊಕ್ಕೊಡಂ[2] ಭೈರವಂ ಬೈದೊಡಂ [ಬಾಯಂ ಬಿಟ್ಟೊಡಂ] ಬಡಿದುಕೊಂಡೊಡಂ ದ್ರವ್ಯಮುಳ್ಳರಂ ಪೊರ್ದಿದೊಡಂ ಕಮ್ಮರಿಮಾಯ್ದೊಡಂ ಮೊಳೆಯಿಟ್ಟೊಡಂ[3] ದೊರೆಕೊಳ್ಳದು || ೧೬೬

1 ಕುಲುವುದಲುವುದಲ್ಲದಂತು ಸುಖಮನಿಸು (ಕ. ಖ.)

2 ಪಾಳ್ಕುಟ್ಟೊಡಂ, ಪಲವು ದೈವಕ್ಕೆ ಹರಸಿದೊಡಂ, ತನ್ನನಿಕ್ಕಿದೊಡಂ, ನಂಟರ [illegible] ತಿವಿದು ಕೊಂಡೊಡಂ ರಣವೆ [illegible] ಬಿ[illegible]ಯುಂ ಬಯ್ದೊಡಂ ತಲೆಯನೊಡೆಯಿಸಿದೊಡಂ ಬಾಯಂ ಬಿಟ್ಟೊಡಂ (ಗ)

3 ಬಂದಿವಿಡಿದಡಂ [illegible]ಕಟ್ಟಿದಂ ಬೇವ ಕಿಚ್ಚಿನೊಳುಬಿದ್ದೊಡಂ ಕೂಗಿಟ್ಟೊಡಮೆಂತುಂ (ಗ.

ಅದುಕಾರಣದಿಂ ಸುಖದೊಳ್
ಪದುಳಂ ನೆಲಸಿರ್ಪನೆಂಬ ಮನವುಳ್ಳೊಡೆ ಮಾ |
ಡ್ವುದು ದಾನಪೂಜೆಯೆಂಬುದ
ನೊದವಿದ ಮನದೞಕದಿಂದಮೋರಂತಱವಂ ‖ ೧೬೭

ಕೆಮ್ಮನೆ ಪಾಪಹೇತುಗಳೊಳ್ತೊಡರ್ದು ಪರತ್ರೆಯೊಳ್ ಸುಖಮಂ
ಬಯಸುವಾತಂ ಜೋಳಮಂ ಬಿತ್ತಿ ಕಳವೆಯಂ ಬಯಸುವೆಗ್ಗ
ನುಮಂ ಬೇವಿನಾರವೆಯನಿಟ್ಟು ಮಾವಿನ ಪಣ್ಣನಱಸುವ ಗಾವಿಲನುಮಂ
ಕೋಣನಂ ಪೊರೆದು ಪಾಲನಱಸುವ ಗಾಂಪನುಮಂ ಬಿಡದುಯ್ಯಂ
ಕುಟ್ಟಿ ಪದೆದಕ್ಕಿಯನಱಸುವ ಬೆಳ್ಪನುಮಂ ಮಳಲಂ ಪಿೞಿದೆಣ್ಣೆ
ಯನಱಸುವ ನಿರ್ಬುದ್ಧಿಯುಮಂ ಪೋಲ್ಕುಮಿಂತು ‖ ೧೬೮

ಪಡೆವಂ ಮೋಕ್ಷಮನೆಂಬೊಡೆ
ಕಡೆಗಣಿಸದೆ ಮಾಡು ಧರ್ಮಮಂ ದೂತಿರ್ಂದಂ |
ಬಡಿದುಂ ಬೈದುಂ ಕಳ್ದುಂ
ಪಡೆವಂತಿರೆ ಮುಕ್ತಿ ಮರುಳ ಬಡವನ ಧನಮೋ ‖ ೧೬೯

ಜಿನಪತಿಗೆಱಗದೆ ಬಲ್ಲಾ
ಳ್ತನದಿಂದಂ ಮಾಡಿಕೊಳ್ವೆನೆಂಬೊಡೆ ಸುಖಮಂ |
ತೆನಗದು ಮೊಗ್ಗಾದುದೆ ಮಾ
ವಿನ ಪಣ್ಣೞಿಂ ದೋಟಿಯಿಕ್ಕಿ ತೆಗೆವಂತೆ ಸುಖಂ ‖ ೧೭೦

ಒಲವಿಂ ಪಾತ್ರಕ್ಕನ್ನಮ
ನಲಸದೆ ಕುಡದದಟನಾಗಿ ಪಡೆವಂತೆ ಸುಖಂ |
ಸಲೆ ಮೊಗ್ಗಾದುದೆ ಭಾವಿಪೊ
ಡೆಲೆಗಳ ನುರ್ಚಿಂಗೆ ಕೊಳ್ವ ತುಂಬೆಯ [1] ಬಾಡೇ ‖ ೧೭೧

1 ತುಂಬಿಯ (ಗ)

ಜಿನಪತಿಗೆಱಗದೆ ಮುನಿಗ
ಳ್ಗನವರತಂ ಭಕ್ತಿವೆರಸು ಬೆಸಕೆಯ್ಯದೆ ಕಂ ।
ಪನೆ ತೊನೆದು ಮಾಣದರಸಾ
ಳ್ತನದಿಂ ಪುಗುವಂತು ದೇವಗತಿ ಪಾಣ್ಬನೆಯೇ ॥ ೧೩೨

ಎನಿತುತಾಳಮರನನೇಱಿದೊಡಂ ತಲೆಗೆ ಕಾಲ್ಕಳಗೆಂಬಂತೆ ಧರ್ಮದರಿದ್ರಂಗವೆನಿಸು ಕುದಿದೊಡಂ ದುಃಖಮೆಕ್ಕುಮಲ್ಲದೆ ಸುಖ ಮಾಗಲಱಿಯದು ॥ ೧೩೩

ಪರಮಜಿನೇಶ್ವರರಂ ಮುನಿ
ವರರಂ ಪೂಜಿಸದೆ ಬಿಟ್ಟು ಕಳನಂ ಪುಗುವಂ ।
ತಿರೆ ವೀರವೃತ್ತಿಯಿಂದಂ
ಸುರಲೋಕಮನಣ್ಣ ರಂಡೆಯಾಳ್ದಪಳಲ್ಲಳ್ ॥ ೧೩೪

ಮತ್ತಂ ಕರ್ಮಫಲಮಂ ಪೇಟ್ವೊಡೆ, ಕರಟದ ಕದಿರಂತೆ ತಿರ್ಯಗ್ಜಾತಿಯೊಳ್ ತಿಣ್ಣನೆ ತಿರಿದುಂ, ಕಡಗೋಲಂತೆ ಸುಖಾಸುಖಂ ಗಳಂ ಸೂಱೆಸೂಱೆತೊಳ್ಮನುಷ್ಯಭವದೊಳಂದುಂ, ಕೆರಕಂ ತುಱಿಸು ವಂತೆತ್ತಾನುಮೊರ್ಮೆ ರಾಜ್ಯಲೀಲೆಯೊಳೆರ್ಮಂ, ತಿರಿದುಂಬರಂತೆ ಪಲವುಭವಕೊಮ್ಮೆ ಕರ್ಮೋಪಶಮದಿಂ ದೇವಲೋಕದೊಳಾದ ಸುಖ ಮನನುಭವಿಸಿಯಮಂ, ಗಾಣದೊಳಿಕ್ಕಿದ ಕಬ್ಬಿನಂತೆ ನರಕದೊಳ್ ದುಃಖಂ ಬಟ್ಟುಂ, ಬೇಸಗೆಯ ಬಿಸಿಲ್ಗಂಜಿ ಬೆಯ್ವ ಮರನಂ ಪೊರ್ದುವಂತಾನುಂ ಕರಡಿಗಂಜಿ ಪುಲಿಯ ಗುಹೆಯಂ ಪುಗುವಂತಾನುಂ ಬೆಲ್ಲದ ಮೋಹಕ್ಕೆ ಸುರಗಿಯ ಬಾಯ ಧಾರೆಯಂ ನೆಕ್ಕುವಂತಾನುಂ ಕಳ್ಳಂಗಂಜಿ ಬೇಡವ ಳ್ಳಿಯಂ ಪುಗುವಂತಾನುಂ ತೇಟಿಂಗಂಜಿ ಕಡಂದುಱುಗೂಡುಂ ಪುಗುವಂ ತಾನು ಪುಲಿಗಂಜಿ ಪುತ್ತುವೇಱುವಂತಾನುಂ [ರಕ್ಕಸಿಗಂಜಿ ಸೆಗಟುಳ್ಳ ಮಡುವಂ ಪುಗುವಂತಾನುಂ] ಸಂಸಾರದೊಳಾದ ಬಡತನದ ಕುತ್ತದ ತಿರಿಗುತ್ತವ ರಾಜಬಾಧೆಯ ನಂಟಂಗಳ್ಕೆಯ [ತೆಱೆಯ ಪೊಱೆಯ] ಸೀತದ ವಾತದ ಬಿಸಿಲ ಕಳ್ಳರ ಬಂದಿಕಾಱರ ಪಿಸುಣರ ಧೂರ್ತರ ದೆಸೆ

ಯಿಂದಪ್ಪ ಪೀಡೆಯು ಸಾವಿನ ನೋವಿನ ಧನದಪಹರಣದ ಪೆಂಡಿರೊಳ್ಮೆಯು ಪುರುಡಿನ ಪಸಿವಿನ ಪೊಬ್ಬಿನ ಪಿರಿದಪ್ಪಪವಮಾನದ ಮಹಾದುಃಖವಮಂ ಕಂಡು, ಮತ್ತಂ ಮುಡಿಗೆ ಜೋಳಯ ತೆಲ್ಲಟಿಯೆಂಬ ನಾಲ್ಕು ದಿವಸಂ ಪಾಪವನೆ ಪೆರ್ಚಿಸಿ ಸತ್ತು ನರಕದೊಳಾದ ಮಹಾದುಃಖವನೆಂತುಮ್ಗೆ ತಮ್ಮ ಶರೀರಮೆಂಬ ಪುಳ್ಳಿಗಳನಿಕ್ಕುವರದೇಂ ಸಾಸಿಗರೋ ‖ ೧೭೫

ಪೊತ್ತಿದ ನತ್ತಿಗೆ ಕಾಣದೆ
ತುತ್ತಿಲ್ಲದೆ ಬಡಿಯೆ ಜಡಿಯೆ ಕಂಡವರೆಲ್ಲಂ ।
ಚಿತ್ತೋತ್ಸಾಹಂಗಿಡುವೆ
ಮರ್ತ್ತನಿಸದೆ ಜೈನಪೂಜೆಯಂ ಕಿಡಿಸಿದವರ್ ‖ ೧೭೬

ಕಯ್ಯೇಱದೆ ಕಾಲೇಱದೆ
ಮೆಯ್ಯೆಲ್ಲಂ ತೂನ್ನುಗೊಂಡು ದುಃಖಂಬಟ್ಟೋ ।
ವ್ರೊಯ್ಯೆಂದೊಳಱುತ್ತಿರ್ಪರ್
ಚರ್ಯಾದಿಜಿನೇಂದ್ರಧರ್ಮಮಂ ಪೞಿದವರ್ಗಳ್ ‖ ೧೭೭

ಉಣಲಿಲ್ಲದೆ ಪಸಿವಿಂ ಬಂ
ಬಲಬಾಡಿ ಮಹಾಕ್ಷುಧಾಗ್ನಿಯಿಂದಂ ಪೆಱರಂ ।
ಗಣದೊಳ್ ಕುಳ್ಳಿರ್ದ್ದಾ
ರಿಣಿಯೊಳ್ ಮುನ್ನನ್ನದಾನಮಂ ಕಿಡಿಸಿದವರ್ ‖ ೧೭೮

ಏಕಾಕ್ಷರಾಗಿ ಮೊಱದ
ನೇಕವ್ಯಾಧಿಗಳೊಳೊಂದಿತೊನ್ನಿಂದಂ ತ ।
ಮ್ಮಾಕಾರಂಗೆಟ್ಟು ಮಹಾ
ಶೋಕಾನ್ವಿತರಪ್ಪರಮಳಪೂಜೆಯುನಱದರ್ ‖ ೧೭೯

ಮೊಂಟಾಗಿ ಕೈಗಳರಡುಂ
ಗೆಂಟಾಗಿರೆ ತನಗೆ ಸಿರಿಯು ಕೂಱುಂ ಕೌಱುಂ ।
ಕುಂಟಾಗಿ ನವೆಯಯುತಿರ್ಪ
ರ್ಗಂಟೞಿಸಿ ಮಹಾತಪಂಗಳಂ ಕಿಡಿಸಿದವರ್ ‖ ೧೮೦

ಕುರುಡಾಗೆ ಕಣ್ಗಳೆರಡುಂ
ಚರಣಂಗಳ್ ಪಱಿದು ಪೋಪ ತೊನ್ನಿಂದಂ ಮೆಯ್ |
ಕರಗಿ ಕಡುದುಃಖದಿಂದಂ
ತಿರಿವರ್ದಾನಾಂತರಾಯಮಂ ಮಾಡಿದವರ್ ‖ ೧೮೧

ನುಡಿವೊಡೆ ನಾಲಗೆ ಪೊರಳದೆ
ಕಿಡುಗುಂ ನೆಱೆ ಮೂಗನಾಗಿ ನವೆಗುಂ ನಱುವಂ |
ನುಡಿದೊಡಮದು ಕೇಳ್ಕಕ್ಕಂ
ಜಡಿವರ್ಪರರೋದಿನಂತರಾಯದ ಫಲದಿಂ ‖ ೧೮೨

[ಬಗೆದದು ಕೂಡದು ಕೂಡಿದ
ಬಗೆಯುಂ ಕಿಡುಗೇನನೆಂದೊಡಂ ಕಡುಗೆಱಪಂ |
ಜಗದೊಳವನಂತು ನೂಂಕುವ
ರಗಣಿತಲಾಭಾಂತರಾಯಕರ್ಮದ ಫಲದಿಂ ‖ ೧೮೩

ಸಿರಿಯೆಲ್ಲಂ ಮಂಜಿನವೋಲ್
ಕರಗುಗು ಕಡುದುಃಖವೊರ್ಮೆಗೊರ್ಮೆಗೆ ಕರಮುಂ |
ಬ್ಬರಮಕ್ಕುಂ ತಿರಿದೊಡೆ ಕೂೞ್
ದೊರೆಕೊಳ್ಳದು ಪೂಜೆಯಂತರಾಯದ ಫಲದಿಂ ‖] ೧೮೪

ತರುವಲಿಯಾಗಿರ್ದನಿರ್
ಪ್ಪುರದುಃಖಮನೆಯ್ದುವರ್ ದರಿದ್ರತೆಯಿಂದಂ |
ಪಿರಿದಪ್ಪ ನೋವನೆಯ್ದುವ
ರೆರಡಿಲ್ಲದೆ ದಾನದರ್ಥಮಂ ಕಳ್ದವರ್ಗಳ್ ‖ ೧೮೫

ಸ್ಮರತಾಪಮೊದವೆ ಭೋಗಂ
ತಮಕ್ಕುಂ ನೋೞೆ ಕಂಡರೆಲ್ಲಂ ಕಾಯ್ವರ್ |
ತಿರಿದುಣ್ಬರ್ ಭವಭವದೊಳ್
ಕರಮಲ್ಲದೆ ಪೂಜೆಯರ್ಥಮಂ ಕಳ್ದವರ್ಗಳ್ ‖ ೧೮೬

ನಾಯಾಗಿ ಪುಟ್ಟುತು ಕಂಡ
ಪೋರ್ಗೆಯೆಂದಿಡೆ ಬೆಂದು ನೊಂದು ದುಃಖಾನಲನಿಂ ।
ಬಾಯಂ ಬಿಟ್ಟಿರದೆಲ್ಲಿಯು
ಮಾಯಾಸಂಬಡುವರಘಸಮನ್ವಿತರಪ್ಪರ್ ॥ ೧೮೭

ಮತ್ತಂ ಮಾಯಾವಿ ನಾಯಾಗಿಯುಂ ಮಹಾಮಾಯಾವಿ ಮೊಲನಾಗಿಯುಂ ಕೋಪಿ ಪುಲಿಯಾಗಿಯುಂ ಮಹಾಕೋಪಿ ಸಿಂಹನಾಗಿಯುಂ ಲೋಭಿಯೆಯ್ಯಾಗಿಯುಂ ಮಹಾಲೋಭಿ ಚಮರೀಮೃಗವಾಗಿಯುಂ ಮಾನಕಷಾಯಿ ಮಿಾನಾಗಿಯುಂ ಮಹಾಮಾನಕಷಾಯಿ ಪಾವಾಗಿಯುಂ [ರೌದ್ರಂ ಘೇರುಂಡನಾಗಿಯುಂ ಮಹಾರೌದ್ರಂ ಶರಭನಾಗಿಯುಂ ಗುಣದೂಷಕಂ ಪಂದಿಯಾಗಿಯುಂ ಕುಮಾರ್ಗಾನುರಾಗಿ ಕೋಣಯಾಗಿಯುಂ ಸದ್ಧರ್ಮದ್ವೇಷಿ ಪುಲ್ಲೆಯಾಗಿಯುಂ ಜಾತಿಮದಮುಳ್ಳಂ ಬೆಕ್ಕಾಗಿಯುಂ ವಿದ್ಯಾಮದಮುಳ್ಳಂ ಗೂಗೆಯಾಗಿಯುಂ] ತಪೋಮದಮುಳ್ಳಂ ನಾಯಾಗಿಯುಂ ಶ್ರೀಮದಮುಳ್ಳಂ ಮೊಸಳೆಯಾಗಿಯುಂ ರೂಪಮದಮುಳ್ಳಂ ಕತ್ತೆಯಾಗಿಯುಂ ಆಜ್ಞಾಮದಮುಳ್ಳಂ ತೇರಣೆಯಾಗಿಯುಂ ಪುಸಿಯುಳ್ಳಂ ಕರಡಿಯಾಗಿಯುಂ ಹಿಂಸಾನಂದಮುಳ್ಳಂ ಕುಱಿಯಾಗಿಯುಂ ಕಳವಿನೊಳ್ ವ್ಯಸನಮುಳ್ಳವನೆತ್ತಾಗಿಯುಂ ಪರವಧೂಪ್ರಿಯಚಿತ್ತಂ ಕುದುರೆಯಾಗಿಯುಂ ಸಪ್ತವ್ಯಸನೋಪೇತಂ ಸೀರ್ನಾಯಾಗಿಯುಂ ದುರ್ಗುಣಪಕ್ಷಪಾತಿ ಗಿಡುಗನಾಗಿಯುಂ ಪುಟ್ಟಿ ಪೇೞಿನ ಮೇಲೆ ಕಂಡೆಯೆಂಬಂತೆ ಪಿರಿದಪ್ಪ ಪಾಪಮಂ ನೆರಪಿ ನರಕದೊಳ್ ಪುಟ್ಟಿ ಪಲಕಾಲಂ ಸೈರಿಸಲ್ಬಾರದ ಮಹಾದುಃಖಕ್ಕೆ ಭಾಜನರಪ್ಪರ್ ॥ ೧೮೮

[ಭುಜ್ಜಿಂದೆಣ್ಣೆಯೊಳಿಕ್ಕಿಯುಂ ತ್ವರಿತದಿಂ ಕೈಗಾಯದೋರೆರೊರ್ವರಂ
ಗಿಜ್ಜಿಂದಾರ್ದಿದಿರಾಗಿ ಬಂದು ತಲೆ ಜೇಱೞಿ ಪೊಯ್ಯುಗ್ರದಿಂ
ಪಜ್ಜಿಂದೇಡಿಸಿ ರಕ್ತಮಂ ಕುಡಿದು ಪೆರ್ಗಂಡಂಗಳಂ ಸೂಸುತುಂ
ಗಜ್ಜಿಂದೋವದೆ ತೀಗಿಯುಂ ಪಿಡಿಗಳಂ ಕುಂಟಾಗೆ ಕೊಯ್ದುಂ ಖಳರ್॥

ಪೆರ್ಗಲ್ಲಿಂದದಪುತ್ತುಂ
ಕರ್ಗಲ್ಲಂ ನೆರಪಿ ತಂದು ಬಱಿಯೆಲ್ವೆಲ್ಲಂ ।

ನುರ್ಗಾಗಿ ಚಿಟಿಲ್ಚಿಟಿಲೆನೆ
ಕುರ್ಗುತ್ತುಂ ನೆಲದೊಳೊರಸಿ ಪೋಲ್ಕುತ್ತುತ್ತುಂ || ೧೯೦

ಕಿಱುಕಿಱಿದಾಗಿರೆ ಕ್ರೈರಂ
ತಱಿದವನರಿದರಿದು ಕೊಳ್ಳಯಿಂದಂ ಪೊಗವಂ |
ನೆಱೆ ಚುರ್ಚುತ್ತುಂ ಭನ್ನಂ
ದಱುಗುಱಿಗಳ ನೆರವನಱಿದು ಪೋಗದೆ ಪೆಣೆವರ್ || ೧೯೧

ಬಡಿಬಡಿ ತಿವಿತಿವಿ ಪೊಡೆಪೊಡೆ
ಕಡಿಕಡಿ ತಱಿತಱಿ ಕಡಂದುಱಿಂ ಪುಣ್ಣೊಳಗಿಂ |
ಬಿಡುಬಿಡು ತಲೆಯಂ ತೂಂತಾ
ಗಡೆಯುಡೆ ಕೊಯ್ ಕೊಯ್ ಮಗುಳ್ಕ್ರಗುಳ್ಸೀಳರ್ದೆಯಂ ||೧೯೨

ಅರಿಅರಿ ಪೊಯ್ ಪೊಯ್ ಸೀಳ್ಸೀಳ್
ಕರಿಘಟೆಯಿಂದಿಕ್ಕಿ ಮೆಟ್ಟಿಸವನೆರ್ದೆಯಂ ಸೀ |
ಳ್ದರಿಯೆಣ್ಣೆಯನೆಱೆಯೆಱೆ ತಲೆ
ಯರಿದೋವೆಂದೊಳಱಿ ಬೀಟೆ ಕಿಡೆನೂಂಕುರಿಯೊಳ್ || ೧೯೩

ಎಂದು ನಾನಾಪ್ರಕಾರದಿಂ ನಾರಕರ್ದಂಡಿಸುವರೆಂ| ದಿಂತು ಕಿಱುದರೊಳ್ ಧರ್ಮಾಧರ್ಮಂಗಳ ಫಲಮನಱಿಪುವುದುಂ ಮಾಯಾವಿಯುಪ್ಪಸೂರ್ಪಂ ಮುನ್ನಿನ ತನ್ನಾಡಿದಾಟಕ್ಕಂ ಬೞಿಕಿನ ಸೆಟ್ಟಿಯು ಮಾಡಿದ ಮಾಟಕ್ಕಂ ಮುನ್ನಿನ ಕರ್ಮದ ತೀವ್ರತೆಗಂ ಬೞಿಕಿನ ತನ್ನ ಮನದುಪಶಮಕ್ಕಂ ಮುನ್ನಿನ ತನ್ನ ಮನದ ಕಾಂಕ್ಷೆಗಂ ಬೞಿಕಿನ ತನ್ನ ನಿಷ್ಕಾಂಕ್ಷೆಗಂ ಮುನ್ನಿನ ತನ್ನ ಸಂಸಾರದೆಱಕಕ್ಕಂ ಬೞಿಕಿನ ತನ್ನ ಸಂಸಾರವಿರಕ್ತಿಗಂ ಬೆಱಗಾಗಿ || ೧೯೪

ಅಳಿಪಿಂದೀರತ್ನಮನೊ
ಯ್ದಿಳಗೀಶಂಗಿತ್ತು ಸತ್ತು ನರಕಾರ್ಣವದೊಳ್ |

ಸುೞಿಯದೆ ಬದುಕಿದೆನಿಂತಾಂ
ಕಳಬಂದುದು ಸಫಲಮಾಯ್ತು ಪುಣ್ಯೋದಯದಿಂ ॥ ೧೯೫

ನೋಂತರ್ಗೆ ಪುರಿದು ಬಿತ್ತಿದಪೊ
ಡಂ ತೞೆಯದೆ ಬೆಳಗುವೆಂಬ ನಾಣ್ಣುಡಿಯಂತೋಱ |
ರಂತೆ ಲಘುಕರ್ಮಿಯಪ್ಪಂ
ಗಂ ತತ್ಕ್ಷಣದಿಂ ಸುದರ್ಶನಂ ದೊಱಕೊಳ್ಗುಂ ॥ ೧೯೬

ಆನೇಕೆ, ವೀರಕುಮಾರನಂ ಕಳವಿನ ಮಾತನಾಡುವುದೇಕೆ, ಚೋರಪ್ರಧಾನನೀರತ್ನಮಂ ಪೊಗೞ್ವುದೇಕೆ, ಕುಮಾರನವಕ್ಕೆ ಬಯಸಿ ತದ್ರತ್ನಮಂ ತಂದಂಗರ್ಧರಾಜ್ಯಮಂ ಕುಡುವೆನೆಂಬುದೇಕೆ, ನೃಪಸುತನ ಮಾತನೆಲ್ಲರುಮಿರ್ದಂತಾಂ ಕೈಕೊಳ್ವುದೇಕೆ, ಮಾಯಾತಪಮಂ ಪೊಣ್ಮುವುದೇಕೆ, ಮೆಲ್ಲನೆ ಕಳ್ದುಕೊಂಡು ಪೋಪುದೇಕೆ, ಯಾತನಾಱಿಂ ಕಾಣ್ಬುದೇಕೆ, ನಾಂ ಭಯದಿಂದತ್ತಿತ್ತಲೋಡದೆ ಜಿನೇಂದ್ರಭಕ್ತನ ಬೀಡಂ ಬಂದು ಪುಗುವುದೇಕೆ, ಮತ್ತೀ ಮಹಾಪುರುಷನಿಂದಂ ಸದ್ಧರ್ಮಂ ದೊರೆಕೊಳ್ವುದೇಕೆ, ಪಾಪಿಪ್ಪೊಡಮಲ್ಲಂ ಜಿನೇಂದ್ರಭಕ್ತಸೆಟ್ಟಿಯ ಪ್ರಸಾದದಿಂ ದೊರೆಕೊಂಡುದೆಂತುಮುಪದೇಶಂಗೊಟ್ಟರ್ ಋಣಂಗೊಟ್ಟರೆಂಬ ನಾಣ್ಣುಡಿಯುಂಟದಱಿನೆನಗೆ ॥ ೧೯೭

ಈತನೆ ಮಿತ್ರನೀತನೆ ಸಹೋದರನೀತನೆ ಪೆತ್ತ ತಂದ ಮ
ತ್ತೀತನೆ ದೇವನೀತನೆ ಸುಬಾಂಧವನೀತನೆ ಕೂರ್ಮೆಯಾಣ್ಮನಿಂ
ತೀತನೆ ಸಜ್ಜನಜ್ಜನೆನಗೀತನೆ ತಾಯ್ ಪೞತೇನೊ ಭಾವಿಪಂ
ದೀತನೆ ನೋಂಪೊಡಾಪ್ತನೆನಗಿಷ್ಟನುಮೀತನೆ ಭೂತಳಾಗ್ರದೊಳ್ ॥ ೧೯೮

ಎನಗೆಂದುಂ ದೊರೆಕೊಳ್ಳದ
ಜಿನಧರ್ಮಂ ಸಾಧರ್ಮಿಮಹಾತ್ಮನಿನದಱಿಂ |
ದೆನಗೀತನೆ ಜೀವಂ ಮ
ತ್ತೆನಗೀವೈಶ್ಯಾತ್ಮಭವನೆ ಕಣ್ಣುಂ ಮತಿಯುಂ ॥ ೧೯೯

ಖರಕರನುದಯಂಗೆಯ್ಯದೆ
ಸಾಸಿರಪಾಸೆಳಗಳಲರಲ್ಚುಗುಮೆ ಜೀವೋ |
ತ್ಕರಮುಂ ಪೇಳ್ ಸದ್ಧರ್ಮಂ
ದೊರೆಕೊಳ್ಳದೆ ತನಗೆ ತಾನೆ ತಿಳಿವವೆ ಧರೆಯೊಳ್ ‖ ೨೦೦

ಹಿಮಕರನುದಯಂಗೆಯ್ಯದೆ
ತಮೋಂಧಕಾರಂ ತೆರಳ್ದು ಪೋಕುಮೆ ಜೈನಾ |
ಗಮಮುಂ ಭ್ರಾಂತಿಂದಱಿಪರ್
ಕ್ರಮದಿಂದಂ ಪೇಳದಘಕುಲಂ ಕೆಟ್ಟಪುದೇ ‖ ೨೦೧

ತನಗೋರಂತಿರೆ ಧರ್ಮಮ
ನನವರತಂ ಕೇಱಿ ತೋಱಿ ಪೇಳ್ವನೆ ನಂಟಂ |
ತನಗೋರಂತಿರೆ ಪಾಪಮ
ನನವರತಂ ಕೇಱಿ ತೋಱಿ ಪೇಳ್ವನೆ ಪಗೆವಂ ‖ ೨೦೨

ಎಂದು ಭಾವಿಸಿ ಸದ್ಧರ್ಮಂ ಕೈಸಾರ್ಮವಕ್ಕೆ ಮನದೊಳ್ ಗುಡಿಗಟ್ಟಿ ಮಹೋತ್ಸವದಿಂ ಪುಯ್ಯಲಿಯದೆ ಹರ್ಷಚಿತ್ತದಿಂ ವಾತ್ಸಲ್ಯರತ್ನಾಕರನ ಪಾದಪದ್ಮಂಗಳ್ಗೆಱಗಿ ತನ್ನ ಮುನ್ನಿನ ಮಾಯಾಪ್ರಪಂಚಮಂ ಪೇಳ್ದು ‖ ೨೦೩

ನಿನ್ನಿಂದಮೆನಗೆ ಸದ್ಧ
ರ್ಮಂ ನಯದಿಂ ಸಾರ್ದುದಱಿನೆನಗುರ್ವರೆಯೊಳ್ |
ನಿನ್ನನ್ನರಾರೆ ಮಿತ್ರರ್
ಸನ್ನುತಗುಣನಿಳಯಮಂಶ ವೈಶ್ಯಕುಲಲಾಮಾ ‖ ೨೦೪

ಕಣ್ಣಾಗಿಯುಂ ಮತಿಯಾಗಿಯುಂ ನೀನೆ ಶರಣೆನಗೆ ಪೆಱರೊರ್ವರುಮಿಲ್ಲೆನ್ನ ಮುನ್ನಿನ ಪೊಲ್ಲಮಗಳಂ ಕೈಕೊಳ್ಳದೆ ಕಾರುಣ್ಯದಿಂದಂ ನಿಮ್ಮ ಧರ್ಮಾಭಿಪ್ರಾಯಮನಿನ್ನುಂ ಲೇಸಾಗಿ ಪೇಳ್ದು ಶಾಶ್ವತಮಪ್ಪ ಸುಖಕ್ಕೆ ಕಾರಣಮಪ್ಪ ವ್ರತರತ್ನಮಂ ದಯೆಗೆಯ್ವುದೆಂದು ಕೈಗಳಂ ಮುಗಿದು ವಿನಯದಿಂದಪ್ರುದಮುಂ ಸಮ್ಯಕ್ತ್ವಚೂಡಾಮಣಿ ಸೂರ್ಪಾಂಗಿಂತೆಂದಂ ‖ ೨೦೫

ಚದುರನೆನಿಪ್ಪಂ ಮಿಥ್ಯಾ
ತ್ವದ ಬಾರಿಗೆ ಪೋಗಿ ಬಿರ್ದು ಸಂಸಾರಸಮು |
ದ್ರದೊಳರ್ದು ಕಿಡದೆ ಮುನ್ನಮೆ
ಪದುೞಿಗನಾಗಱಿದು ಪಿಡಿವುದೀದರ್ಶನಮಂ || ೨೦೬

ಅಂತು ಶುದ್ಧದರ್ಶನಮಂ ಸಂಶಯಂಗಿಡದೆ ತಿಳಿದು ನಂಬಿ ಬೞಿಕ್ಕಮತಿಶಯಸುಖನಿಳಯಮಪ್ಪ ನಿರ್ವೃತಿಶ್ರೀಯನೆಯ್ದಿಸುವ ಶ್ರಾವಕಧರ್ಮದೊಳಕ್ಕೆ ನಡೆವುದು || ೨೦೭

ಯತಿಧರ್ಮಮೆಂಬುದದು ನಿ
ರ್ವೃತಿವನಿತೆಯ ತೊಟ್ಟ ತೊಡವು ಜಯಲಕ್ಷ್ಮಿಯ ರಂ |
ಜಿತಮಪ್ಪ ಜವ್ವನಂ ಸಂ
ಸ್ತುತಿವನಿತೆಯ ಸೊಬಗು ಕೀರ್ತಿಲಕ್ಷ್ಮಿಯ ನಿಳಯಂ || ೨೦೮

ಎನಿಸಿ ಮಹಿಮೆವಡೆದ ಯತಿಧರ್ಮದೊಳ್ನಡೆವಾತಂ ಮೂಲೋತ್ತರಗುಣಂಗಳೊಡವೆರಸು ಸಕಲದೋಷಂಗಳುಂ ತನ್ನಂ ಪೊರ್ದದಂತಾಗೆ ನಡೆವುದು. ಪಾಲಂ ಕಾಯಿಸುವರಂತೆ ಮನಮಂ ಬೆದಱಲೀಯದೆ, ದುರ್ಭಾವಮಂ ಬಿಟ್ಟು ದುರ್ಜನರಂ ಸಾರದೆ ದುರಾಚಾರಂಗಳಂ ಪೊರ್ದದಾಗಮಮಂ ಪೊರ್ದಿ ನಡುಗಡಲೊಳ್ ಪಱುಗೋಲಂ ನಡೆಯಿಸುವಂಬಿಗನಂತೆ ದುರ್ಮಾರ್ಗಮೆಂಬ ತೆರೆಗಳಂ ವಂಚಿಸಿ ಮಿಥ್ಯಾತ್ವಮೆಂಬ ಸುೞಿಗಳಂ ತಪ್ಪಿಸಿ ವಿಷಯಂಗಳೆಂಬ ಪೊಯಲ್ಗಳಂ ಸಾರಲೀಯದೆ ಕ್ರಿಯೆಸಹಿತಂ ಶುಭಧ್ಯಾನದಿಂ ಸಂಸಾರಮೆಂಬ ಮಹಾನದಿಯಂ ದಾಂಟುವುದು || ೨೦೯

ಶ್ರಾವಕಧರ್ಮಂ ಕೀರ್ತಿ
ಶ್ರೀವನಿತೆಯ ಕುಚಯುಗಂ ಮಹೀವನಿತೆಯ ವಾಕ್ ||
ಶ್ರೀವನಿತೆಯ ಲಾವಣ್ಯಂ
ಶ್ರೀವನಿತೆಯ ಜಯಲತಾಂಗಿಯುಡುವ ದುಕೂಲಂ || ೨೧೦

ಎನಿಸಿ ಪೆಂಪುವಡೆದ ಶ್ರಾವಕಧರ್ಮದೊಳ್ನಡೆವಾತಂ ದಾನಪೂಜೆ ಶೀಲೋಪವಾಸಂಗಳಂ ಕುಂದಲೀಯದೆ ಸುವ್ರತವರ್ಧಮಾನನಾಗಿ ದೃಢಾ

ಚಾರದಿಂ ಸಮುದ್ರದೊಳ್ ಭೃತ್ರಮಂ ನಡೆಯಿಸುವಂತೆ ದುಶ್ಶಂಕಿತಮೆಂಬ ಕಳ್ಳರಂ ಪೊರ್ದಲೀಯದೆ ದುರಾಚಾರಮೆಂಬ ತೆರೆಗಳಂ ತಪ್ಪಿಸಿ ಅಱನೆಗೞ್ತೆಯೆಂಬ ಮೊಸಳೆಯಂ ತೊಲಗಿಸಿ ಸಂಶಯಮೆಂಬ ಮಹಾಮತ್ಸ್ಯಮನೋಸರಿಸಿ ಮಿಥ್ಯಾತ್ವಮೆಂಬ ನೆಗಳಿಂಗೊಳಗಾಗದೆ ತುಪ್ಪಮಂ ಕಾಸುವಳಂತೆ ಚಿತ್ತಮನಗಲಲೀಯದೆ ಜಿನಾಗಮದೋಜೆಯಿಂ ನಡೆದು ಸಂಸಾರಸಮುದ್ರಮನುಪಾಯದಿಂ ಕಱುಪುವುದು ॥ ೨೧೧

ಮೆಲ್ಲನೆ ಮೇಳಿಸಿ ಪರ್ಚುವ
ಲಲ್ಲಯಿಸುವ ಪೆಱರನಟ್ಟಿ ದೂಱುವ ಪಾಪುಂ ।
ಪೊಲ್ಲಮೆಯುಂ ಕಲಿಸುವ ಮುನಿ
ಯಲ್ಲಿ ಜಿನೋಕ್ತಿಯನೆ ಕೇಳಲಾಗದು ಚತುರಂ ॥ ೨೧೨

ಪೆಱರಂ ದೂಱುವರೊಳ್ ತೆಱ
ನಱಿಯದೆ ನುಡಿವವರೊಳಾಗಮಾರ್ಥಮನೇನಂ ।
ದಱಿಯದರೊಳ್ ಪುರುಡಿಗರೊಳ್
ಬಱುದಲೆಯೆಂದೆಳಸಿ ಕೇಳಲಾಗದು ಪುರುಷಂ ॥ ೨೧೩

ಅಲ್ಲಲ್ಲಿಗೆ ಭಾಷಿಸುವಂ
ದೆಲ್ಲರ್ಗಂ ನುಡಿವ ಬಲ್ಮೆಯಿಂ ತಪದಿಂದಂ ।
ಬೆಲ್ಲಂಪಚ್ಚಂತಿರೆ ಕರ
ಮೊಳ್ಳಿದರಪರೆನಿಪರಲ್ಲಿ ಕೇಳ್ವುದು ಕಥೆಯಂ ॥ ೨೧೪

ಪುರುಳಿಲ್ಲದರೊಳ್ ನುಡಿಯೊಳ್
ಪರಿಣತರೊಳ್ ಪಕ್ಷಮಿಲ್ಲದವರೊಳ್ ಗುಣದೊಳ್ ।
ಪಿರಿಯರೆನಿಪವರೊಳಘಕುಲ
ವಿರಹಿತರೊಳ್ ಕೇಳ್ವುದಾಗಮಾರ್ಥಮನಱಿವಿಂ ॥ ೨೧೫

ಜಿನಗೇಹಾಳಿಯೊಳುನ್ನತ
ಮುನಿವರರೊಳ್ ಭವ್ಯತತಿಯೊಳಾದರಮಂ ನೆ ।

ಟ್ಟನೆ ಪೊಟ್ಟಿ ತತ್ತ್ವವಿದರೊಳ್
ಜಿನಮತಮಂ ಕೇಳ್ಗೆ ಸೌಖ್ಯಮಂ ಬಯಸುವವಂ ॥ ೧೧೬

ಮತ್ತಂ ಜಿನಾಗಮಾರ್ಥಂಗಳಂ ಸಂಬಂಧಿಸಲಱಿಯದೆ ದುರಾಗ್ರಹದಿಂದಾನೆ ದೇವರೆಂದು ಡೊಳ್ಳುಮಂ ಪೊಱಗಣ ಕಾಯಕ್ಲೇಶಮುಮಂ ತೋಱಿ ಪಾಪಂ ಪೆತ್ತವರ್ಬೇಲಿಯುಂ ಪೊಕ್ಕರೆಂಬಂತೆ ತಮ್ಮ ನುಡಿದುದನೆ ತಲೆಮುಟ್ಟ ಸಾಧಿಸಿ[1] ಬಾಯುಂ ಬಡಿಪಾವಿನ ಕಱುವನಮ್ಮಗೆ ಬಿಟ್ಟಮ್ಮೆಯುಕಱುವನಾವಿಂಗೆ ಬಿಡುವಂತೆನಾನುಮನೇಕ್ಕಸಕ್ಕಮನೇಣಗೋಣಂಗಳಂ ಪೇೞ್ವರಲ್ಲಿ ಜಿನತತ್ತ್ವಮಂ ಸೂಕ್ಷ್ಮಮತಿಯಪ್ಪವಂ ಕೇಳವೇಡ ॥ ೧೧೭

ಇಲ್ಲಿಗಿದುಚಿತಂ ತಕ್ಕುದಿ
ದಿಲ್ಲಿಗೆದೆಂದಱಿದು ಸಂದ ಸೂತ್ರಾರ್ಥಮನಂ ।
ತಲ್ಲಲ್ಲಿಗೆ ವಿಪರೀತತೆ
ಯಿಲ್ಲದೆ ಪೇೞ್ವವರೊಳಾಲ್ದು ಕೇಳ್ಗಾಗಮಮಂ ॥ ೧೧೮

ಮತ್ತಂ ಕೇಳ್ವಾತನುಂ ಪರಿಣತನಾಗಿ ಕೇಳಲ್ವೇೞ್ಪುದದೆಂತೆಂದೊಡೆ, ಪಾತ್ರಮಂ ನೋಡಲೆಂದು ಪ್ರಾಸಾತಂ ಮುಂದೊಂದೆಡೆಯೊಳಗ ಪೋಪಾತನಾಡಳಯೊಂದೊಡೆ ಪೊಗಬ್ದ ಸಂಬಂತೆ[2] ಮಾಡದೆ ತಲೆಯೆಂದೊಡೆ ತಲೆಯೆಂದುಂ ಪುಲ್ಲೆಯೆಂದೊಡೆ ಪುಲಿಯೆಂದುಂ ವಿಪರೀತಮಂ ಕೈಕೊಳದೆ ಕೇಳ್ವುದು ॥ ೧೧೯

ಶ್ರಾವಕನಪ್ಪಂ ನೞಿಸ
ದ್ಭಾವದಿನೆಸಗುವುದು ನಾಲ್ಕುಧರ್ಮಂಗಳೊಳಂ ।
ಭಾವಕನೆನಿಸುವ ಮುನಿಯುಂ
ಸಾಪೇಕ್ಷ್ಯಂ ಸಾರದಂತು ನಡೆವುದು ದಯೆಯಿಂ ॥ ೧೨೦

1 ತಲೆಮುಟ್ಟುಸಾಱಿಸಿ (ಗ)   2 ನಾಡಳೆಯೆಂದೊಡಾತಳೆಗಡಂದುಮುರ ಳ್ವನೆಂಬಂತೆ (ಗ)

ವರಸಂಯಮಿಯೆನಿಪ್ಪುದು ದು
ರ್ಧರತಪದಿಂ ನಿಷ್ಕಷಾಯದಿಂ ಮುನಿಯೆನಿಪಂ ।
ಪರಮಶ್ರಾವಕನೆನಿಪಂ
ಕರಮೊಳ್ಳಿದನೆನಿಪ್ಪುದೆಸೆಪ ದಾನಾದಿಗಳೊಳ್ ॥ ೨೨೧

ಎಂತೀಗಳ್ ಸೂರ್ಯಂಗೋ
ರಂತಿರೆ ತೀವ್ರೋಷ್ಣಮೊಪ್ಪುಗುಂ ಭಾವಿಸುವಂ ।
ದಂತ ತಪಸ್ವಿಗಳ್ಗಮದೊರ್ೞೆ [1]
ರಂತೊಪ್ಪುಗುಂ ನಿಸ್ಪೃಹತ್ವಮುಂ ಸಂಯಮಮುಂ ॥ ೨೨೨

ಜಲಜಾತವಿರೋಧಿಗೆ ಶೀ
ತಳಮೊಪ್ಪುಗುಮಾಗಳಂತು ತಾನಂತೆ ಮಹೀ ।
ತಳದೊಳುಪಾಸಕನಪ್ಪಂ
ಗಳವಟ್ಟೊಪ್ಪುಗು ಮಹೋನ್ನತಿಕ್ಕೆಯ ದಾನಂ ॥ ೨೨೩

ದಾನದೊಳಂ ಪೂಜೆಯೊಳಂ
ತಾನೊಳ್ಳಿದನೆನಿಪುದವನಿಯೊಳುಪಾಸಕನಿಂ ।
ಧ್ಯಾನದೊಳಂ ಸಂಯಮದೊಳ
ಮೇನಿಸುವರುರ್ವರೆಯೊಳಧಿಕರೆನಿಪ್ಪುದು ಮುನಿಪರ್ ॥ ೨೨೪

ಎತ್ತಿಂಗೆ ಪಿಣಿಲೊಪ್ಪುಗುಮಲ್ಲದೆ ಕೆಚ್ಚಲೊಪ್ಪದಾವಿಂಗೆ ಕೆಚ್ಚಲೊ[2]ಪ್ಪುಗುಮಲ್ಲದೆ ಪಿಣಿಲೊಪ್ಪದು ಪುರುಷಂಗೆ ಗಡ್ಡಮೀಸೆಯೊಪ್ಪುಗುಮಲ್ಲದೆ ಪೆರ್ಮೊಲೆಗಳೊಪ್ಪವು ಸ್ತ್ರೀಯರ್ಗೆ ಪೆರ್ಮೊಲೆಗಳೊಪ್ಪುಗುಮಲ್ಲದೆ ಗಡ್ಡಮೀಸೆಯೊಪ್ಪವದಱಿಂ ಗೃಹಸ್ಥಂಗೆ ದಾನಾದಿ ಧರ್ಮಂಗಳೊಪ್ಪುಗುಮಲ್ಲದೆ ತಪದೊಳಾದಾಚರಣೆಯೊಪ್ಪದು ತಪಸ್ವಿಗಂ ದಾನಾಧ್ಯಯನ ಸಂಯಮಾದಿಗಳೊಪ್ಪುಗುಮಲ್ಲದೆ ಗೃಹಸ್ಥಾಚರಣೆಯೊಪ್ಪದದು ಕಾರಣದಿಂ ತಂತಮ್ಮ ಮೇರೆಯಂ ದಾಂಟವೇಡಾ ॥ ೨೨೫

---

೧ ಎಂತಪ್ಪತಪಸ್ವಿಗಮೊೞೆ (ಗ)

ಸೊಡರುಂ ಕಿರ್ಚ್ಚಾಕಿರ್ಚ್ಚುಂ
ಗಡ ಕಿರ್ಚ್ಚಂತೆರಡುಮೆಸೆವೆ ನಂಟರ್ತನಗಾ ।
ದೊಡೆ ಗಾಳಿ ಮಸಗಿ ಸೊಡರಂ
ಕಿಡಿಸುವವೊಲ್ ಕಿರ್ಚ್ಚನೇಕೆ ಕಿಡಿಸದೊ ಮುನಿಸಿಂ ॥ ೨೨೬

ಅಂತೆ ತಪಸ್ವಿಗಪ್ಪಾಚಾರಮಣುವ್ರತಿಗಳಪಡದು; ಅಣುವ್ರತಂಗಪ್ಪಾಚಾರಂ ತಪಸ್ವಿಗಳವಡದು; ಮುನ್ನಂ ದಾನದಿಂ ಪೂಜೆಯಿಂ ಶೀಲದಿಂದುಪವಾಸದಿಂದನಂತಸುಖಮನೆಯ್ದಿದ ಶ್ರೀಷೇಣಮಹಾರಾಜನ ಧನ್ಯಕುಮಾರನ ಕರಿಕಂತಮಹಾರಾಜನ [1] ಸೌಧರ್ಮೇಂದ್ರನ ಸೀತಾದೇವಿಯ ಮಹಾದೇವಿಯ [2] ನಾಗಕುಮಾರನ ಯೋಧನಮುಂಡನ [3] ಕಥೆಗಳಂ ಕೇಳ್ದು ನಂಬಿ ದಾನಾದಿಧರ್ಮದೊಳಸಗುವುದು ॥ ೨೨೭

ದಾನಾದಿಗಳೊಳ್ ನೆಗೞ್
ತಾನಾಱದೆ ಪೇನಿಯುಪ್ಪವಂ ಮುನಿವರನುಂ ।
ತಾನಪ್ಪೆನೆಂದು ದೂರ್ತಿಂ
ಮೋಸಂಗೊಂಡಿರ್ದೊಡಾಗದಕ್ಷಯಸೌಖ್ಯಂ ॥ ೨೨೮

ಪರಮಶ್ರೀಪತಿಶಾಂತಿತೀರ್ಥಕರನತ್ಯಾನಂದದಿಂ ದಾನಮಂ
ಸಿರಿಷೇಣಾವನಿಪಾಲನಾದ ಭವದೊಳ್ ತಾಂ ಮಾಡೆ ತದ್ದಾನದಿಂ
ಪಿರಿದಪ್ಪುನ್ನತಿವೆತ್ತು ನೋಡ ಕಡೆಯೊಳ್ ನಿರ್ವಾಣಲಕ್ಷ್ಮೀಮನೋ
ಹರನಾದಂ ದೃಢಚಿತ್ತದಿಂ ಸುಜನರುಂ ಮಾಳ್ಕಾರ್ತಿಯಿಂ ದಾನಮಂ ॥

ಅಂತೆ ದಾನಚತುಷ್ಟಯದಿಂ ಪುಣ್ಯಬಂಧಮಕ್ಕುಮಾಪುಣ್ಯಬಂಧದಿಂ ಕ್ರಮಕ್ರಮದಿಂ ನಿರ್ವಾಣಸಾಮ್ರಾಜ್ಯಂ ದೊರೆಕೊಳ್ಗುಮೆಂಬುದಂ ಶಾಂತಿತೀರ್ಥೇಶ್ವರನ ಕಥಾಂತರದಿಂದಱಿದು ಬೆಣಕಚಂಗೆಡೆವರ

---

1 ಕರಕಂಡುಮಹಾರಾಜನ (ಕ. ಖ.)

2 ಶೀಲವತಿಮಹಾದೇವಿಯು ಸೀತಾದೇವಿಯು (ಕ. ಖ.)

3 ಖದನಮುಂಡನ (ಕ. ಖ.); ಯೊದನಮುಂಡನ (ಗ)

ಮಾತಂ ಕೇಳ್ದು ದಾನಾದಿಗಳೊಳಪ್ಪರ್ಥವ್ಯಯಕ್ಕೆ ಮನದೊಳ್ ಮಱುಗಿ ಮಾಡವೇಡ ॥ ೬೩೦

ತಪದ ನೆಗಳ್ತೆಗೆ ಬೇಸ
ತ್ತುಪವಾಸಕ್ಕಳಸಿ ಮನದೊಳಾಗಮಮಂ ತಾಂ ।
ಚಪಳತೆಯಿಂದಮಹರ್ನಿಶ
ಮುಪಾಯದಿಂ [1] ಪಿಡಿಪ ಮುನಿಗೆ ನಿರ್ವೃತಿ ದೂರಂ ॥ ೬೩೧

ನಮ್ಮ ಸೆಟ್ಟಿಯ ಮಾತೊಳ್ಳಿದುವು ಬಳ್ಳಂ ಕಿಱಿದೆಂಬಂತೆ ಮಾಡದೆ ಪ್ರಥಮತೀರ್ಥೇಶ್ವರನಂತೆ ಮೆಯ್ಯ ಮೋಹಮಿಲ್ಲದೆ ಸನತ್ಕುಮಾರ ಮುನಿಯಂತೆ ಜಿಹ್ವಾಲಂಪಟತೆಯಿಲ್ಲದೆ ಬಾಹುಬಲಿಯಂತೆ ನಿಂದೆಡೆಯಿಂ ತಳರದೆ ಗುರುದತ್ತಮುನಿಯಂತೆ [2] ಘೋರೋಪಸರ್ಗಕ್ಕೆ ತಲ್ಲಣಿಸದೆ ಕುಮಾರಸ್ವಾಮಿಯಂತೆ ಚಿತ್ತದೊಳಳ್ಕದೆ ಧೈರ್ಯಸಮನ್ವಿತನಾಗಿ ಪೊರ್ಡೆ ಕೇವಲಧ್ಯಾನಮೊಪ್ಪುಗುಂ [3]. ಈ ಕಾಲದವರ್ಗಳ್ ದರ್ಶನಶುದ್ಧರಾಗಿ ತಪದೊಳೊಳ್ಳಿದರೆನಿಸಿ ನಡೆವುದು, ನಡೆಯೆ ಪುಣ್ಯಬಂಧಮಕ್ಕುಮಾಪುಣ್ಯಬಂಧದಿಂ ಅಷ್ಟವಿಧಕರ್ಮಂಗಳಂ ನಿರ್ಮೂಲಂ ಮಾಳ್ಪ ಶಕ್ತಿ ದೊರೆಕೊಳ್ಗುಮದು ದೊರೆಕೊಳೆ ಕೈವಲ್ಯಲಕ್ಷ್ಮಿ ಕೈಸಾರ್ಗುಮದಱಿಂ ಕ್ರಿಯೆಸಹಿತಂ ತಪೋಮಾರ್ಗದೊಳಸಗುವುದು ॥ ೬೩೨

ಪುರುದೇವಂ ದೇವದೇವಂ ಪರಹಿತಚರಿತಂ ವಿಶ್ವಲೋಕಾಧಿಪಂ ಖೇ
ಚರನಾದಾಕಾಲದೊಳ್ ಮಾಡಿದ ತಪದ ಮಹಾಪುಣ್ಯದಿಂ ಸ್ವರ್ಗಸೌಖ್ಯೋ
ತ್ಕರಮುಂ ಕೈಸಾರ್ದು ವಿಭ್ರಾಜಿಸುವ ಮಹಿಮೆಯುಳ್ಳಕ್ಷಯ [4] ಶ್ರೀಯೊ
ಳಾತಂ
ನೆರೆದಂ ಕೇಳ್ಮಾಯೆಯಿಂದಂ ಸುಱಿಯದ ತಪಮಂ ಮಾಳ್ಕೆ ನಿರ್ಮಾ
ಯೆಯಿಂದಂ ॥ ೬೩೩

1 ಮನದೊಳಧ್ಯಾತ್ಮಮನಿಂ ಚಪಳತೆಯಿಂದೀಕಾಲದೊಳುಪಾಯದಿಂ (ಕ. ಬ.)

2 ಗಣಧರಮುನೀಂದ್ರನಂತೆ (ಕ. ಬ.)

3 ಇರ್ಪೊಡಧ್ಯಾತ್ಮಮೊಪ್ಪುಗುಂ (ಕ. ಬ.); ಇರ್ಪೊಡಾತ್ಮಮೊಪ್ಪುಗುಂ (ಬ.)

4 ಮಾಳ್ಪೈಶ್ವರ್ಯದೊಳನುಭವಿಸಿದರ್ಕ್ಷಯ (ಕ. ಬ.)

ಅಂತೆ ತಪದಿಂ ಪುಣ್ಯಬಂಧಮಕ್ಕುಮಾಪುಣ್ಯದಿಂ ಮೆಲ್ಲಮೆಲ್ಲನೆ ನಿಶ್ಶ್ರೇಯಸಶ್ರೀಯೊಳಕ್ಕುಡಲಕ್ಕುಮೆಂಬುದನಾದಿತೀರ್ಥೇಶ್ವರನ ಕಥಾಂತರದೊಳ್ ತಿಳಿವುದು. ನೋಂಬರ ಮಾತಂ ಕೇಳ್ದು ತಪದೊಳಾದ ಬೇವಸಕ್ಕಳಸವೇಡ ॥ ೨೩೪

ಇರುಳೊಳ್ಚಂದ್ರನ ಪಗಲೊಳ್
ಖರಕರನುದಯಂಗಳಾಗದಭ್ಯುದಯಂ ಮಿ ।
ತ್ತಿರುಳೊಳ್ಸೂರ್ಯಂ ಪಗಲೊಳ್
ಸರಸಿಜರಿಪುವೊಗೆಯೆ ಜಗದೊಳದ್ಭುತಮಲ್ತೇ ॥ ೨೩೫

ಅದಱಿಂ ಕೇವಲಧ್ಯಾನಂ ² ಮುನ್ನಂ ಸಂದ ಮಹಾಪುರುಷರ್ಗಳ್ ಪಡೆಗುಮಲ್ಲದೆ ಈಗಳಿನವರ್ಗಳ್ ಪಡೆದು ॥ ೨೩೬

ಜಿನವಚನದೋಜೆಯಿಂದಂ
ಮನಮಂ ಸ್ಥಿತಿಟ್ಟು ಬಿಟ್ಟು ದುರ್ಮಾರ್ಗಮನಾ ॥
ರ್ಪನಿತಂ ಸುವ್ರತದೊಳ್ ನೆ
ಟ್ಟನೆ ಮಾಱ್ಪುದು ನೆಗೞ್ವ ತಪಮುಮಂ ದಾನಮುಮಂ ॥ ೨೩೭

ಎಂದು ಯತಿಧರ್ಮಮುಮಂ ಶ್ರಾವಕಧರ್ಮಮುಮನಿಂಬಾಗಿರೆ ಜಿನೇಂದ್ರಭಕ್ತಸೆಟ್ಟಿ ಸಂಕ್ಷೇಪದಿಂ ಪೇೞೆ ಸೂರ್ಪಂ ಕೇಳ್ದು ತಪದೊಳತಿಪ್ರೀತನಾಗಿ ಸಂಸಾರಕ್ಕೆ ಹೇಸಿ ಜಿನದೀಕ್ಷೆಯಂ ಕೈಕೊಂಡುಗ್ರೋಗ್ರ ತಪದಿಂ ನೆಗೞ್ದು ಕಡೆಯೊಳ್ ಸಮಾಧಿಮರಣದಿಂ ಮುಡಿಪಿ ದೇವಗತಿ ಪಡೆದಂ. ಸಮ್ಯಕ್ತ್ವಚೂಡಾಮಣಿಯುಮುಪಗೂಹನದ ಫಲದಿಂದಿಹತ್ರಯೊಳಾದ ಕೀರ್ತಿಗಂ ಪರತ್ರಯೊಳಾದ ಸೌಖ್ಯಕ್ಕಂ ಭಾಜನನಾದನಿಂತು ॥ ೨೩೮

ಪರಮಶ್ರಾವಕನೆನಿಸುವ
ಪುರುಷಂ ಕಪ್ಪಾರೆ ಮುನಿಯ ಪೊಲ್ಲಮೆಯಂ ಪಿ ।

---

1 ಇಳೆಯೊಳೆಱುದಯಂ (ಗ)   2 ಅದುಕಾರಣದಿಂ [illegible]

ಸ್ತ್ರರದಿಂದಂ ಕಂಡದನು
ಮರೆಯೊಳ್ ನೆಱೆ ದೂಱುದುಸಿರದಿರ್ಪುದು ನಯದಿಂ ‖ ೨೩೯

ಜಲಧಿಯೊಳು ಕಪ್ಪೆ ಸತ್ತೊಡೆ
ಜಲಧಿಯು ನೀರೆಲ್ಲಮಟ್ಟ ಕೊಳನಪ್ಪುದೆ ನಿ ।
ರ್ಮಲನಲ್ಲದೊರ್ವನಿಂದಂ
ಮಳನತೆ ಪೊರ್ದುವುದೆ ವಿಮಳಸದ್ಧರ್ಮಕ್ಕಂ ‖ ೨೪೦

ಉಪಗೂಹನಮಂ ಮಾೞ್ಪುದು
ವಿಪರೀತಮನುಳ್ಳ ಧರ್ಮಮಂ ಬಿಡುವುದು ಜೈ ।
ನಪದಾಂಬುಜಾತಮಂ ಮಿ
ಕ್ಕಪವರ್ಗದ ಬಟ್ಟೆಯೆಂದು ಪಿಡಿವುದು ಭವ್ಯಂ ‖ ೨೪೧

ಎಂದುಪಗೂಹನದೊಳಾದ ಕಥೆಯಂ ಗೌತಮಸ್ವಾಮಿಗಳ್ ಪೇ
ೞ್ದುದಂ ‖ ೨೪೨

ಭುವನಪ್ರಖ್ಯಾತಕೀರ್ತಿಧ್ವಜನಮಳಯಶಂ ಸತ್ಯವಾರಾಶಿಚಿತ್ತೋ
ದ್ಭವಮೋಘಾನೀಕತೀವ್ರಾನಳನಘಹರಣಂ ಕೂರ್ಮೆಯಿಂ ಪೇೞೆ ಚಿತ್ತೋ
ತ್ಸವದಿಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ವಿನೇಯ
ಪ್ರವರಂ ಸಾನಂದನಾದಂ [1] ಸುಕವಿಜನಮನಃಪದ್ಮಿನೀರಾಜಹಂಸಂ ‖ ೨೪೩

ಇದುನಿಖಿಳದಿವಿಜಪಸಂವೃಢಮುಕುಟತಟಘಟಿತಮಣಿಗಣನಿಕರವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಮನಃಪಯೋಧಿಹಿಮಕರನುತಭುವನಯತ
ದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ದರ್ಶನಪಂಚಮಾಂಗವ್ಯಾವರ್ಣನಂ
ಷಷ್ಠಾಶ್ವಾಸಂ

---

1. ಅಘಹರಣಾಭಾರತೀಕರ್ಣಪೂರಂ । ದಿವಿಜೇಂದ್ರಾದ್ರಿಷ್ಠಮಂಸಜ್ಜನಮನರಾಜ ಚಂಡಾಂಶುತ್ರೈವಿದ್ಯಲಕ್ಷ್ಮೀ । ರಮಣಪಾದಾಬ್ಜಭೃಂಗಂ (ಕ. ಬ.)

ಸಪ್ತಮಾಶ್ವಾಸಂ.

ಶ್ರೀನಿರ್ವೃತಿವನಿತೆಗೆ ಪೆಱ
ತೇನುಪಗೂಹನಗುಣಂ ಲಸನ್ಮಣಿಹಾರಂ [1] |
ತಾನೆಂದು ನಂಬಿದಂ ವಿಬು
ಧಾನಂವಂ ಸುಕವಿನಿಕರಪಿಕಮಾಕಂದಂ ॥ ೧

ಅಂತುಪಗೂಹನದೊಂದು ಕ
ಥಾಂತರಮಂ ಕೇಳ್ದು ನಂಬಿ ಮನದೊಳ್ ಪಿರಿದುಂ |
ಸಂತೋಷಮಾಗೆ ಧಾತ್ರೀ
ಕಾಂತಂ ಪಿರಿದುಂ ಮಹೋತ್ಸವಂಬೆರಸಾಗಳ್ ॥ ೨

[ಗಣಧರಸ್ವಾಮಿಗಳ ಪಾದಪಯೋರುಹಕ್ಕೆ ಮೆಱಿದುಂಬಿಯಂ ತೆಱಗಿ ಕೈಗಳಂ ಮುಗಿದು ತಲೆಯಂ ಬಾಗಿ ನಿಮ್ಮಡಿ ಕಾರುಣ್ಯದಿಂ] ಮುಂದಣ ಸ್ಥಿತಿಕರಣದ ಕಥೆಯಂ [ಎನಗಱಿವಂತಾಗೆ] ಬೆಸಸುವುದೆಂಬುದುಂ [ಗಣಧರಸ್ವಾಮಿಗಳ್ ಕೈವಲ್ಯಲಕ್ಷ್ಮಿಯ ನಟ್ಟು ವಾಭರಣಮಪ್ಪ [ಸ್ಥಿತಿಕರಣದ ಕಥೆಯಂ] ಇಂತೆಂದು ಪೇೞ್ದರ್ :— ಅಗ್ನಿಯಂತೆ ಮದದಾನೆಯಂತೆ ಪಾರದಂತೆ ಕುಲಶೈಲದಂತೆ ಜಂಬೂದ್ವೀಪದಂತೆ ಸಪ್ತಸ್ವರದಂತೆ ಮಾಳವದಂತೆ ದೇವೇಂದ್ರನ ಬರವಿನಂತೆ ರಾಜ್ಯದಂತೆ ಋದ್ಧಿಯಂತೆ ಕಮಠೋಪಸರ್ಗಕ್ಕೆ ಬಂದ ಧರಣೇಂದ್ರನಂತೆ ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಮೆಂಬೀೞರೊಳಂ ಶೋಭೆವಡೆವುದು ॥ ೩

ಸ್ಥಿತಿಕರಣಂ ವಾಗ್ವನಿತೆಯ
ಮತಿ ಕೀರ್ತಿ ಶ್ರೀಯ ನಿಳಯಮಪವರ್ಗಶ್ರೀ [2] |

---

1 ಉಪಗೂಹನಲಸನ್ಮಹಾಮಣಿನಿಕರಂ (ಕ. ಬ.)

2 ಸುತಕೀರ್ತಿ ಶ್ರೀಯುತಿಲಕಮಪವರ್ಗ ಶ್ರೀ (ಕ. ಬ.)

ಸತಿಯು ಮಣಿಹಾರವೆಂದಿಂ
ತತಿಮುದದಿಂ ಮೂಷ್ಕ ಭವ್ಯೆನಪ್ಪಂ ಮನದೊಳ್ ॥ ೪

ಇನ್ನದಱೊಳಾದ ವಿಭವವೆಂತೆಂದೊಡೆ ॥ ೫

[ಸರಸಿಜನೇತ್ರೆ ಸಲ್ಲಲಿತಗಾತ್ರೆ ಕುಲೈಕಪವಿತ್ರೆ ಗಂಧಸಿಂ
ಧುರನಿಭಯಾನ ಶೀಲಗುಣಧಾರೆ ಚರಿತ್ರನಿಧಾನೆ ಸಜ್ಜನೇ
ಶ್ವರಪದಭಕ್ತೆ ಸರ್ವಗುಣಯುಕ್ತೆ ಸುಧಾಕರವಕ್ತ್ರೆ ಮಾನವೋ
ತ್ಕರನುತಪಾದಪಂಕರುಹೆ ಚೇಳನಿದೇವಿ ಮಹೀತಳಾಗ್ರದೊಳ್ ॥ ೬

ಮನಸಿಜಕಾಂತೆಗಮಿಂತಿಂ
ದ್ರನ ಸತಿಗಂ ಚಂದ್ರಮನ ವನಿತೆ ರೋಹಿಣಿಗಂ ।
ತಾಂ ನೂರ್ಮಡಿ ರೂಪಕ್ಕಂ
ಜಿನಚರಣಸರೋಜಭಕ್ತಿಗಂ ವಿನಯಕ್ಕಂ ॥ ೭

ಜನಕಜೆಗೆ ಭಾರತಿಗೆ ಗೋ
ಪಿನಿಗೆ ತಿಲೋತ್ತಮೆಗೆ ನೋಡೆ ಸಾಸಿರ್ಮಡಿ ಚೇ ।
ಳನಿ ಶೀಲದೇಳ್ಗೆಗಂ ಮೇ
ದಿನಿಯೊಳಗೆ ಸುಬುದ್ಧಿಗಂ ವಿಳಾಸೋನ್ನತಿಗಂ ॥ ೮

ದಯೆಯು ತವರ್ಮನೆ ಭವ್ಯ
ಪ್ರಿಯೆ ಸಕಲಜನಾನುರಾಗೆ ಜಿನಪಾದಪದ ।
ದ್ವಯಪನಜಮತ್ತಮಧುಕರೆ
ನಯವಿದೆ ಭುವನೈಕಪೂಜ್ಯೆ ಚೇಳನಿ ಧರೆಯೊಳ್ ॥ ೯

ಎನಿಸಿ ನೆಗಟ್ತೆಗಂ ಪೊಗಟ್ತೆಗಂ ನೆಲೆಯಾದ ಚೇಳನಿಮಹಾದೇವಿಗಂ ನಿನಗಂ ॥] [1] ೧೦

---

[1] ನಿನಗಂನಿನ್ನಪಟ್ಟದರಸಿಯಪ್ಪಚೇಳನಿಮಹಾದೇವಿಗಂ (ಗ)

ಉದಯಗಿರಿಯೊಳ್ ದಿವಾಕರ
ನುದಯಂಗೆಯ್ವಂತೆ ಸಕಲಗುಣಗಣನಿಳಯಂ ।
ವಿದಿತಯಶಃಪುಂಜಂ ಪು
ಟ್ಟಿದನೊಪ್ಪಿರೆ ವಾರಿಷೇಣನೆಂಬ ಕುಮಾರಂ ॥ ೧೧

[ಅಂತಾಸದ್ಗುಣನಿಧಿ ವಿ
ಖ್ಯಾತಂ ಭೂಭುವನವಂದಿತಕ್ರಮಯುಗ್ಮಂ ।
ನೀತಿವಿದಂ ಭವ್ಯಜನ
ಪ್ರೀತಂ ಜಿನಸಮಯವಾರ್ಧಿವರ್ಧನಚಂದ್ರಂ ॥] ೧೨

ದೃಢಚಿತ್ತಂ ಗುಣನಿಳಯಂ
ಕಡುಗಲಿ ಕಿಱಿಯಂದು ದಿವ್ಯ ಜಿನಮುನಿಗಳ ವೆ ।
ಲ್ಲಡಿಯಂ ಪಿಡಿದು ತಳರ್ನಡೆ
ನಡೆಗಲ್ತಂ ಭವ್ಯವನಜವನಕಳಹಂಸಂ [1] ॥ ೧೩

[ಬಿಡು ಮಿಥ್ಯಾತ್ವಮನಂಜದೆ
ಪಿಡಿ ಸಮ್ಯಕ್ತ್ವಮನುದಾರಚಿತ್ತದಿನೆಂಬೀ ।
ನುಡಿಯನೆ ನುಡಿದು ಮನಂಬಿಡೆ
ನುಡಿಗಲ್ತಂ ಸುಕವಿನಿಕರಪಿಕಮಾಕಂದಂ ॥] ೧೪

ಉಡೆವೆಱಿದಂದಿಂಬೞಿಕೆಡೆ [2]
ಯುಡುಗದೆ ಜಿನಮುನಿಗಳಂ ಜಿನಾಗಮಮಂ ನೇ ।
ರ್ಪಡೆ ಕೇಳ್ದೋದುವ ಜಿನಮುನಿ
ಗಣದೊಳ್ ವಿವೇಕಿಯಾಗಿ ಪೊತ್ತಂ ಕಳೆವಂ । ೧೫

ಭವ್ಯರ ಗೋಷ್ಠಿಯ ತಪದೊಳ್
ದಿವ್ಯಮೆನಿಪ್ಪವರ ಪಾದಸೇವೆಯು ಜಿನಸ ।

1 ನಡೆಗಲ್ತಂಸುಕವಿನಿಕರಪಿಕಮಾಕಂದಂ (ಗ)

2 ಉಡೆವಣಿಪಱಿದಂ ಬಳಿಕಂತಡೆ (ಕ. ಬ.)

ಶಾಕ್ವ್ಯಂಗಳ ಭಾವನೆಯೆ ಮ
ಹಾವ್ಯಸನಂ ವಾರಿಷೇಣನೃಪತಿಗೆ ನಿಚ್ಚಂ ॥ ೧೬

[ಅಂತು ಗುಣಗಣನಿಳಯನುಂ ವಿನಯನಿಧಾನನುಂ ಜಿನಪಾದಪದ್ಮಮಧುಪನುಂ ಜಿನಾಗಮಘನಾಗಮಮಯೂರನುಂ ಪಾಪೇಭಪಂಚಾನನನುಮೆನಿಸಿ] ಆವಾರಿಷೇಣಕುಮಾರಂ ಸುಖಸಂಕಥಾವಿನೋದದಿಂ ಯುವರಾಜ್ಯಶ್ರೀಯನನುಭವಿಸುತ್ತಿರ್ಪನ್ನೆಗಂ ॥ ೧೭

[ವಿಮಲಗುಣಾಕ್ಷರಸಕಲಾ
ಗಮಯುಕ್ತರ್ಮುನಿಜನಾನುರಾಗದುರಿತ ।
ದ್ಯುಮಣಿಗಳಗಣಿತಚರಿತ
ರ್ಸಮಸ್ತಜೀವೋಪಕಾರಿಗಳ್ ದಯೆನಿದಿಗಳ್ ॥] ೧೮

ಮುಂಡಿಯಪುತ್ರಾಚಾರ್ಯರ್ [ಗ್ರಾಮೆಯೇಕರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬ ಪೂರ್ವಶಾಸ್ತ್ರೋಕ್ತಿಯಿಂ] ವಿಹಾರಿಸುತ್ತುಂ ನಿನ್ನ ಪುರಕ್ಕೆ [ವಂದು ತತ್ಪುರದ ಮೂಡಣ ದೆಸೆಯ ಬಾಳುಪಕವೆಂಬ ಪರ್ವತದೊಳಿರ್ಪುದುಮಾಮುನಿಯ ಬರವಂ ಋಷಿನಿವೇದಕಂ ನಿನಗಱಿಪುವುದುಂ ॥ ೧೯

ಕರಮೊಲ್ಲದೊಸೆದು ತನ್ಮುನಿ
ವರನಿರ್ದದೆಸೆಗೆ ನಡೆದು ಬಿಡದೇೞಡಿಯಂ ।
ಕರಮುಗಿದು ತುಷ್ಟಿದಾನಮ
ನೆರಡಿಲ್ಲದೆ ಋಷಿನಿವೇದಕಂಗಿತ್ತಾಗಳ್ ॥ ೨೦

ಆನಂದಭೇರಿಯುಂ ಪೊಯ್ಸಿ] [1] ಚೇಳನಿಮಹಾದೇವಿ ಮೊದಲಾಗೆಣ್ಬಾಸಿರ್ವರರಸಿಯರುಂ ವಾರಿಷೇಣಕುಮಾರಂ ಮೊದಲಾದ ಕುಮಾರರುಂ ಯೆಣ್ಬಾಸಿರ್ವರ್ಮಕುಟಬದ್ಧರುಂ [ಪುರದೊಳಗಣ ಶ್ರಾವಕರುಂ] ಬೆರಸು ॥ ೨೧

---

[1] ವಂದು ಬಹಿರುದ್ಯಾನದೊಳಿರ್ದಪಂ ಋಷಿನಿವೇದಕನಿಂದಱಿದು (ಗ)

ತುಂಬಿಗಳಚ್ಚಿನಿಗೆಳಸಿ ಪೆ
ನಂಬಿಡೆ ಬರ್ಪಂತೆ ನೀನುಮತ್ಯಾದರದಿಂ ।
ದಂ ಬಯಸಿ ದಿವ್ಯಮುನಿಚರ
ಣಾಂಬುಜಮಂ ಕಾಣಲೆಂದು ರಾಜಾಲಯದಿಂ ॥ ೨೦

ಪೊಱಮಟ್ಟು ಬಂದು [ಬಳಾಹಕಗಿರಿಯೊಳಿರ್ದ] ಮುಂಡಿಯ ಪುತ್ರಮುನೀಂದ್ರರ ಪಾದಸರಸಿಜಮಂ ಸರಸಿಜಾದಿಕುಸುಮಂಗಳಿಂದ ರ್ಚಿಸಿ ಬಂದಿಸಿ [1] ಕಿಱಿದುಬೇಗಂ ಧರ್ಮಶ್ರವಣಮಂ ಕೇಳ್ದು [ತನ್ಮುನಿ ಪುಂಗವಂಗೆ] ಪುನರ್ನಮಸ್ಕಾರಂಗೆಯ್ದು ರಾಜಮಂದಿರಕ್ಕೆ ನೀಂ ಮಗುಳ್ವುದುಂ ನಿನ್ನೊಡನೆ ಸಕಲಜನಂಗಳುಂ ಮಗುೞ್ವುದುಂ ವಾರಿಷೇಣಕುಮಾರನೊರ್ವನೆ ಮುನಿನಾಥನನಗಲ್ದು ಬರಲಾಱದೆ ಪೆಱಗಿರ್ದ [2] ॥ ೨೧

ಬಿಡದೆ ಕಡಾರದ ಪೊನ್ನಂ
ಕಡುಲೋಭಂ ಕಂಡು ಮೋಹದಿಂದಾ ಪೊನ್ನಂ ।
ತಡೆಯದೆ ನೋಡುತ್ತಿರ್ಪ ಪೊ
ಲಡಿಮಿಡುಕದೆ ನಿಂದು [ವಾರಿಷೇಣಂ ಮುನಿಯಂ ॥ ೨೨

ಮನದೆಱಕದಿಂದೇಱಲುಮಿೞಿಯಲುಂ ನೋಡಿ ತಂಗಾಳಿಯ ಪೊರ್ದುಗೆಯಿಂ ನಯಂ ಬಡೆದೆಳಲತೆಯಂತೆ ಪೆರ್ಚಿ ॥] [3] ೨೩

ಮನದೊಳ್ಕರಮುತ್ಸಾಹದಿ [4]
ನನವರತಂ ನಿಚ್ಚ ನಿಚ್ಚಮಿರುಳುಂ ಪಗಲುಂ ।
ಜಿನಪದಮಂ ಜಿನಮತಮಂ
ನೆನೆವ ಮಹಾತ್ಮನೆ ಕೃತಾರ್ಥನವನೀತಳದೊಳ್ [5] ॥ ೨೪

---

1 ಮುಂಡಿಯಪುತ್ರನಂ ವಂದಿಸಿ (ಗ) 2 ನೀಂ ಮಗುಳ್ದು ಬರ್ಪುದುಂ ವಾರಿಷೇಣಕುಮಾರಂ ನಿನ್ನೊಡನೆ ಬರಲೊಲ್ಲದೆ ಪೆಱಗಿರ್ದ (ಗ)

3 ತನ್ನ ಕಣ್ತಣಿವಿನೆಗಂ ॥ ನೋಡಿ (ಗ) 4 ವಚನದೊಳಂತಾ (ಗ)

5 ಕತಂ ಪೊಗಳ್ವ ನರನೆ ಧನ್ಯಂ ಜಗದೊಳ್ (ಗ)

[ಎಂದು ಮನದೊಳ್ ಭಾವಿಸಿ ವಾರಿಷೇಣಕುಮಾರಂ ಮುಂಡಿ ಪುತ್ರದಿಗಂಬರಾಧೀಶ್ವರನ ಪಾದೋಪಕಂಠದೊಳ್ ಕುಳ್ಳಿರ್ದು ಚರಣ ಯುಗಂಗಳಂ ಮೆಲ್ಲಮೆಲ್ಲನೊತ್ತುತ್ತಿರ್ಪುದುಂ ತನ್ಮುನೀಶ್ವರಂ ಜಿನ ಸಮಯವಾರ್ಧಿವರ್ಧನಚಂದ್ರನಂ ನೋಡಿ ತನ್ನಂತರಂಗದೊಳಿಂತೆಂದಂ ||] [1] ೭೭

ದೂರದೊಳಿರ್ದುಮರ್ತಿವೆರಸಂಬುರುಹಕ್ಕೆ ಮದಾಳಿಸಂಕುಳಂ
ಭೋರೆನೆ ಬಂದು ತೀವಿ ನೆಲಸಿರ್ಪವು ಕಪ್ಪೆಗಳಲ್ಲಿ ಪುಟ್ಟಿಯುಂ
ಸಾರವು ನೋಳ್ಪಡೊಳ್ಳಿಗರಸೊಳ್ಳದರಪ್ಪವರಂತು ಪೊರ್ದುವರ್
ದೂರದೊಳಿರ್ದೊಡಂ ಕೆಲದೊಳಿರ್ದೊಡಮೊಂದುವರಲ್ಲರುದ್ಧತರ್ || ೭೮

ಎಂದು ವಾರಿಷೇಣಕುಮಾರನೊಳಾದ [ಮಹಾಭಕ್ತಿಗಂ ತಮ್ಮಯ್ಯನೊಡನೆ ಪೋಗದ ಧರ್ಮಾನುರಾಗದಿಂದಿರವಿಂಗಂ ಚೋದ್ಯಂಬಟ್ಟಿರ್ಪುದುಂ ಚೇಳನೀಪ್ರಸೂತಾತ್ಮಜಂ ತನ್ಮುನೀಂದ್ರಂಗಭಿಮುಖನಾಗಿ ತಲೆಯಂ ಬಾಗಿ ಕೈಯಂ ಮುಗಿದಿರ್ದಿಂತೆಂದಂ ||] [2] ೭೯

ದಾನಮುಮಂ ಧರ್ಮಮುಮಂ
ನಾನಾಪೂಜೆಯುಮನೆಲ್ಲರುಂ ಕೈವಿಟ್ಟು ।
ಶ್ರೀನಾರಿಯನೆಯ್ದೆ ಪವಂ
ದಾನಂದಂಬೆರಸು ಮೋಹವರ್ಗಸುಮತಿಯೊಳ್ || ೮೦

ಅಲ್ಲಿ [ನಿರ್ವಾಣಲಕ್ಷ್ಮಿಯ] [3] ನೆಯ್ದಿಸಲಾರ್ಪ ದೇವನುಮಂ ತಪಮುಮಂ ಧರ್ಮಮುಮಾಗಮಮುಮಂ ದಾನಮುಮಂ ಪೂಜೆ

---

1 ಎಂದು ಭಾವಿಸಿ ತನ್ಮುನೀಶ್ವರನ ಪಾದೋಪಕಂಠದೊಳಿರ್ದು ಮೆಲ್ಲಮೆಲ್ಲನ ಕಾಲನೊತ್ತುತಮಿರ್ಪುದುಂ ಮುಂಡಿಯಪುತ್ರಾಚಾರ್ಯರ್ ವಾತ್ಸಲ್ಯರತ್ನಾಕರನಂ ನೋಡಿ (ಗ)

2 ಭಕ್ತಿಗೆ ಮೆಚ್ಚುತ್ತಮಿರ್ಪುದುಂ ಸುಕವಿನಿಕರಪಿಕಮಾಕಂದನಿಂತೆಂದು ಬೆಸಗೊಂಡಂ (ಗ)   3 ಮೋಕ್ಷಮು (ಗ)

ಯುಮಂ ನಿಮ್ಮಡಿ ಸೇವನಗೞಿಸಂತಾಗೆ [ಬೆಸಸುವುದೆಂಬುದುಂ ಮುನಿ ವೃಂದಾರಕ] [1] ಸಿಂತೆಂದಂ ॥ ೩೧

ವನಿತೆಯರಂ ವನಿತೆಯರೊಳ್
ಕನಕಮನೋರಂತೆ ಕನಕದೊಳ್ ರತ್ನಮನಿಂ ।
ಬೆನೆ ರತ್ನದೊಳ್ ವಿಚಾರಿಸಿ
ಮನದೊಳ್ ಕೀರ್ತ್ಮೆಲಿದೆಂದು ನಂಬುವ ತೆಱದಿಂ ॥ ೩೨

ಆಪ್ತನನಾಪ್ತನೊಳ್ ತಪಮಂ ತಪದೊಳ್ ಧರ್ಮಮಂ ಧರ್ಮದೊಳ್ ಆಗಮಮನಾಗಮದೊಳ್ ದಾನಮಂ ದಾನದೊಳ್ ಪೂಜೆಯಂ ಪೂಜೆಯೊಳ್ ಪರೀಕ್ಷಿಸಿ ಬೇಗಮಿವನಾಪ್ತನಿವನನಾಪ್ತನಿದು ಸತ್ತಪಮಿದು ದುಸ್ತಪಮಿದು ಸದ್ಧರ್ಮಮಿದು ಕುಧರ್ಮಮಿದಾಗಮಮಿದನಾಗಮಮಿದು ಸದ್ದಾನಮಿದು ಕುದಾನಮಿದು ಪೂಜೆಯಿದು ಕುಪೂಜೆಯಿದು ಸುಖಕ್ಕೆ ಕಾರಣಮಿದು ದುಃಖಕ್ಕೆ ಕಾರಣಮಿದು ಪುಣ್ಯಮಿದು ಪಾತಕಮೆಂಬುದಂ ಬುದ್ಧಿಯಿಂ [2] [ಸಂಚಲಚಿತ್ತನಾಗದೆ ತನ್ನೊಳರಿದು ನೋಡಿ] ಜಲಮಿಶ್ರಿತಮಪ್ಪ ಪಾಲಂ ಮುಂದಿಡಲ್ ಹಂಸೆಯೆಂತು ನೀರಂ ಬಿಟ್ಟು ಪಾಲಂ ಕುಡಿವುದಂತೆ ಕುಧರ್ಮಮಂ ಬಿಟ್ಟು ಸದ್ಧರ್ಮಮಂ ಕೈಕೊಳ್ವುದು ॥ ೩೩

ನಿರ್ದೋಷಿಯಲ್ಲದವನಂ
ಪೂರ್ದಲ್ವೇಡಾಪ್ತನೆಂದು ಮಲ್ಪಟ್ಟನಿಸಂ ।
ನಿರ್ದೋಷಿಯಪ್ಪ ಮನಸಿಜ
ಮರ್ದನನಂ ದೇವನೆಂದು ಪೂರ್ದುಗೆ ಭವ್ಯಂ ॥ ೩೪

ಕುರುಡನಪ್ಪ ಪೂಂಬಿಗನಂ ನಂಬಿ ಗಟ್ಟದಿಟ್ಟೆಡೆಯೊಳಿರುಳ್ ದೂರದೇಶಕ್ಕೆ ಪಯಣಂಬೋಪೆನೆಂಬಾತನುಂ ದೋಷಿಯಪ್ಪಾಪ್ತನಂ ನಂಬಿ ತಪಂಗೆಯ್ದು ಮುಕ್ತಿಯನೆಡೆವೆನೆಂಬಾತನುಂ ನಿರ್ಬುದ್ಧಿಗಳಲ್ಲದೆ ಬುದ್ಧಿವಂತರಲ್ಲರ್ ॥ ೩೫

1 ಬೆಸಸುವೆಂಬುದುಂ ಮುನೀಂದ್ರ ಸ್ತ್ರೀತ್ತಮ (ಗ)
2 ಪಾತಕಮಿದುವೆಂಬ ಬುದ್ಧಿಯಿಂ (ಗ)

ತಕ್ಕನಿವನಲ್ಲನಳಿಪಂ
ಟಕ್ಕಂ ಖಳನೆಂದು ಪೊರ್ದರತಿಧೂರ್ತನನೋ ।
ಪೆಕ್ಕಟ ಖಳರಂ ಕ್ರೂರರ
ನುಕ್ಕೆವದಿಂ ದೇವರೆಂದು ಪೇೞ್ ಪೊರ್ದುವುದೇ ॥ ೩೬

ಕಲ್ಲ ದೋಣಿಯನೇಱಿ, ಬಂದ ತೊಱೆಯೊಳ್ ಪೋಪನೆಂಬನುಂ ಕ್ರೂರನಪ್ಪಾಪ್ತನಂ ಪಿಡಿದು ಮೋಕ್ಷಕ್ಕೆ ಪೋಪನೆಂಬನುಂ ಕರಮೊಗ್ಗರಲ್ಲದೆ ಚತುರರಲ್ಲರ್ ॥ ೩೭

[ಇವನೀಧಾತ್ರಿಗೆ ತಾಂ ಮಹಾಪ್ರಭು ಗಡಾ ಪೋವಿಂತೆದೇಕಟ್ಟು ಕಾ
ಡುವನೆರ್ದೋಡುವನಟ್ಟಿ ಬೇಡುವನಣಂ ನಾಣಿಲ್ಲ ಬೂತೆಂದು ದೂ
ಱುವರಾರಾದೊಡಮಟ್ಟಿ ಮರ್ತ್ಯರುಮನಿಂತೇನೆಂಬೊಡಂ ಪೋಗಿ ನಂ
ಬುವನೆಗ್ಗಂ ನೆಱೆ ದೇವರೆಂದು ವಿಟರಂ ಚಾಪಲ್ಯರಂ ಧೂರ್ತರಂ ॥ ೩೮

ಬ್ರಹ್ಮಚರ್ಯಂಗೆಟ್ಟು ತಪಮಂ ಮೊದಲಾಗೆ ಕೈಕೊಳ್ಳರೆಂದೊಡೆ ಪರವಧೂಪ್ರಿಯರಪ್ಪರಂ ಸರ್ವಜ್ಞರೆಂದುತು ಕೈಕೊಂಡಾಡುವರೋ ॥

ಪುಸಿವನಿವಂ ಮಹಾವ್ಯಸನಿ ಕಳ್ಳನಿವಂ ಕಡುಧೂರ್ತನೆಂದು ಶಂ
ಕಿಸಿ ಭಯದಿಂದೆ ಬಚ್ಚಳಿಸಿ ಮಾನಿಸರಂ ಮೊದಲಾಗೆ ಪೊರ್ದಿರಂ
ಜಿಸುವ ಸುವಸ್ತ್ರಧಾರಿಗಳಸಿಷ್ಟವಿಘಾತರ ನಷ್ಟಶೌಚರಂ
ಪುಸಿವರನಾಪ್ತರೆಂದು ನೆಱೆ ಪೊರ್ದುವ ಮರ್ತ್ಯನೆ ಗಾಂಪನುರ್ವಿಯೊಳ್ ॥

ಅರಸಿನ ಮೇಲರಸಾದೊಡೆ ಮೊದಲಾಗೆ ನಾಡೆಲ್ಲಂ ಕೆಟ್ಟು ಪಾೞಿಪ್ಪುದೆಂದೊಡೆ ಜಗದೊಳಡಕಿಲ ದೈವಮಾದೊಡೆ ಕಿಡದಿರ್ಕುಮೆ, ನಾಡ ನಾಳ್ವರಸು ಮೊದಲಾಗೆ ಕ್ರೂರನಾದೊಡೆ ಲೋಕಮೆಲ್ಲಂ ಕಿಡದಿರ್ಕುಮೆ; ವಿಟನಪ್ಪ ಪ್ರಭುವಂ ಮೊದಲಾಗೆ ಬಗೆಯರೆಂದೊಡೆ ವಿಟನಪ್ಪ ದೇವನ ನೆಂತು ಬಗೆವರದಱಿಂ ದೇವರ್ಪಲರಿಲ್ಲ ನಿರ್ದೋಷಿಯಪ್ಪನೊರ್ವನೆ;

ಪರಮಾತ್ಮನುಂ ಶಾಂತರೂಪನಲ್ಲದೆ ಕ್ರೂರನಲ್ಲಂ ; ಮನೋಹವಿದ್ರಾವಣನಲ್ಲದೆ ವಿಟನಲ್ಲನೆಂದು ನಂಬುವುದು ॥] ೪೧

ಅರಸನ ನಡೆದೋಜೆಯು ವಿ
ಸ್ತರದಿಂದಂ ಪ್ರಜೆಗಮೋಜೆ ತಂತಮ್ಮಾಪ್ತರ ।
ಚರಿಸುವ ಮೋಜೆಯೊಳೇಕೆಯೊ
ಚರಿಯಿಸರನ್ಯರ್ವಿರುದ್ಧವಿದು ಧಾರಿಣಿಯೊಳ್ ॥ ೪೨

ಜಗದೊಳಪ್ಪಾದೊಡಂ ಸದಾಚಾರರಂ ಕೈಕೊಳ್ವಂತೆ ದುರಾಚಾರರನೇಕೆ ಕೈಕೊಳರನ್ಯವನಿತಾಪ್ರಿಯರಂ ದೂಷಿಪಂತೆ ಶುಚಿಗಳನೇಕೆ ದೂಷರ್ ಕಳ್ಳರಪ್ಪರಂ ಕೊಲ್ವಂತೆ ಕಳ್ಳರಲ್ಲದರನೇಕೆ ಕೊಲ್ಲರ್ [ಪುಸಿವವರಂ ದುಷ್ಟರೆಂಬಂತೆ ಸತ್ಯಮುಳ್ಳರನೇಕೆ ದುಷ್ಟರೆನ್ನರ್ ಕಳ್ಗುಡಿವವರಂ ಪೊಲ್ಲರೆಂಬಂತೆ ಪಾಲ್ಗುಡಿವವರನೇಕೆ ಪೊಲ್ಲರೆನ್ನರ್ ಅಡಗಟ್ಟ ಮಡಕೆಯಂ ಪೊಱಗಿಡುವಂತೆ ಕೂಳಟ್ಟ ಮಡಕೆಯನೇಕೆ ಪೊಱಗಿಡರ್ ಕೊಂದರಂ ಕೊಲ್ವರಂತೆ ಕೊಲ್ಲದವರನೇಕೆ ಕೊಲ್ಲರ್] ದ್ರೋಹರಪ್ಪವರಂ ಕವರ್ಪಂತೆ ತಕ್ಕರನೇಕೆ ಕವರರ್ ಸಾಧುಗಳ್ಗೆ ಕೈಮುಗಿವಂತೆ ದುಷ್ಟರ್ಗೇಕೆ ಕೈಮುಗಿಯರ್ ಬ್ರಹ್ಮಚರ್ಯಮುಳ್ಳವರ್ಗೆಱಗುವಂತೆ ಮಿಂಡರ್ಗೇಕೆಱಗರ್ ನಿಸ್ಪೃಹರ್ಗೆ ಕೂರ್ಪಂತೆ ಕಾಂಕ್ಷಿತರ್ಗೇಕೆ ಕೂರರ್ ತಪಂಗೆಯ್ವರ್ಗೆ ಕೈವಾರಂಗೊಳ್ವಂತೆ ದುಷ್ಟರ್ಗೇಕೆ ಕೈವಾರಂಗೊಳರ್ ಅನ್ಯಾಯಪರರಂ ಕಿಡಿಸುವಂತೆ ನ್ಯಾಯಪರರನೇಕೆ ಕಿಡಿಸರ್ ಚಾರಿತ್ರಂಗೆಟ್ಟರನಾಟ್ಕುಡಿಗಳವಂತೆ ಚಾರಿತ್ರಮುಳ್ಳರನೇಕಾಟ್ಕುಡಿಗಳೆಯರ್ ಅದು ಕಾರಣದಿಂದೆಳ್ಳನಿತು ಪೊಲ್ಲಮೆಯೊಳಂ ಪೊರ್ದದಂತಪ್ಪ ದೇವನೆ ದೇವಂ ಪೊಲ್ಲಮೆಯೊಳ್ಕೂಡಿದಾತಂ ದೇವನಲ್ಲನೆಂಬುದಂ ಲೋಕದೊಳಾದ ನಡೆವಳಿಯಿಂದಮೇ ಲೇಸಾಗಱಿವುದಿನ್ನು ತಪಮೆಂತಪ್ಪುದೆಂದೊಡೆ ॥ ೪೩

ಪೆಣ್ಣಿಂಗಂ ಪೊನ್ನಿಂಗಂ
ಮಣ್ಣಿಂಗಂ ಕಾಂಕ್ಷೆಯಿಂದಮೆಱಗದೆ ಲೋಕಂ ।

ಟಣ್ಣಿಸೆ ಚಂಚಲನಾಗದೆ
ತಿಣ್ಣಂ ನಡೆವವನೆ ತಾಂ ತಪೋಧನನಕ್ಕುಂ ॥ ೪೪

[ಕರ್ಗಲ್ಲನಿತು ಬಳ್ಪಿದೊಡಂ ಬೆಲೆಗೆಯ್ಯುಮೇ; ರತ್ನಮಾದೊಡೆ ಬೆಲೆಗೆಯ್ಗುಂ ; ಮಿಥ್ಯಾದೃಷ್ಟಿಯ ತಪಮನಿತೊಳ್ಳಿತಾದೊಡಂ ಶಾಶ್ವತಮಪ್ಪ ಸುಖಮಂ ಕುಡಲಾರ್ಕುಮೇ ? ಶುದ್ಧದರ್ಶನದೊಳ್ಕೂಡಿದೊಡೆ ನಿರಂತರಮಪ್ಪ ಸುಖಮಂ ಕುಡುಗುಂ ॥ ೪೫

ಪಾಲೊಳ್ ಮೊಕ್ಕಳಮಾಗೆ ಪೊಯ್ಯೆ ಜಲಮಂ ಬೆಳ್ಪಕ್ಕುಮೆಂತಲ್ಲದಾ
ಪಾಲೆಂತುಂ ರುಚಿಯಾಗದಂತೆ ಕೆಲಬರ್ಮಿಥ್ಯಾತ್ವದುಃಖಂಗಳೊಳ್
ಕಾಲಕ್ಷಿದ್ದರ್ಗೆ ತಪಂಗಳಂ ನೆಗಪೆದ್ದೊಡಂ ದುಷ್ಕರ್ಮರೆಂತಿರ್ದೊಡಂ
ಭೂಲೋಕಸ್ತುತಮಪ್ಪ ಸತ್ತ್ವಪದೊಳಂ ಪೊಂದಿರ್ದರಂ ಪೋಲ್ವರೇ ॥ ೪೬

ಕರ್ಬುನಮೆನಿಸು ಕಾಯ್ದು ಮೃದುವಾದೊಡಂ ಕಮ್ಮರಿಲ್ಲದೆ ಖಡ್ಗಾದಿಶಸ್ತ್ರಂಗಳಾಗದಂತೆ ಕುಮಾರ್ಗಾನುರಾಗಿಗಳನಿಸು ಕುದಿದು ತಪಂಮಾಡಿದೊಡಂ ನಿರ್ದೋಷಿಯಪ್ಪ ಪರಮಾತ್ಮನಂ ಪೊರ್ದಿದೊಡಲ್ಲದೆ ಸಕಲಸುಖಮನೆಯ್ದಲಾಱರಿಂತು ॥ ೪೭

ನೀರಿಲ್ಲದೆಡೆಯ ಬೆಳಸುಂ
ಕ್ರೂರರ ಕೆಳೆಯುಂ ವಿವೇಕಿಯಲ್ಲದನರಸುಂ ।
ಸಾರಗುಣಮಿಲ್ಲದಾತನ
ಚಾರಿತ್ರಮುಮೊಪ್ಪಲಾಱವೆಂತುಂ ಕಡೆಯೊಳ್ ॥ ೪೮

ರಂಡೆ ನಡಪಿದನ ಗುಣಮುಂ
ಗಂಡಿಲ್ಲದ ಭಟನ ಯುದ್ಧಮುಂ ಧರೆಯೊಳ್ ಕೈ ।
ಕೊಂಡುಱ ನೆಗಱದ ತಪಮುಂ
ಮಿಂಡನ ತಕ್ಕುಮೆಯುಮೊಪ್ಪಲಾಱವು ಜಗದೊಳ್ ॥ ೪೯

ಪಿರಿದಪ್ಪ ಶಕ್ತಿ ತನಗುಳ್ಳೊಡಂ ಸುರಂಗಿಯಲ್ಲದೆ ಪಣಿದಗುರ್ವು ಪೞಿಯದಂತೆ ದೋಷವಿರಹಿತನಪ್ಪ ಪರಮಾತ್ಮನ ಮತಮಂ ಪೊರ್ದಿದೊಡಲ್ಲದೆ ಸಮಸ್ತಕರ್ಮಂಗಳುಂ ನಿರ್ಮೂಲಮಾಗಲಱಿಯವು ॥ ೫೦

ಸಜ್ಜ್ಞಾನವಿಲ್ಲದನ್ನೆಗ
ಮಜ್ಞಾನಮದಿರ್ಕು ಬುದ್ಧಿವಂತರ್ ನಯದಿಂ ।
ದಜ್ಞಾನವೆನೆಱುವೊಡೆ ಕೇ
ಳ್ಸಜ್ಜ್ಞಾನಮನೆಯ್ದೆ ತಿಳಿಗೆ ಜೈನಾಗಮದೊಳ್ ॥ ೫೧

ಪಡಿಯಱನೆನಿತುಕೂರ್ಪೊಡಮರಸನೆಯನಂಸನನುಮತಮಲ್ಲದೆ ಪುಗಲ್ಬಾರದಂತೆ ಮಿಥ್ಯಾದೃಷ್ಟಿಗಳನಿತುತಪದಿಂ ಕಾಯಕ್ಲೇಶಂಬಟ್ಟೊಡಂ ದೇವರೆಂದಿರ್ದೊಡಂ ಕುತರ್ಕಗಳಿಂ ಬಾಯಾರ್ವೊಡಂ ಸಜ್ಜ್ಞಾನವಿಲ್ಲದೆ ದರ್ಶನಮಂ ಪೊರ್ದದೆ ಮೋಕ್ಷಮನೈದಲ್ಬಾರದು ॥] ೫೨

ನಾಯಕನಿಲ್ಲದ ರಣಮುಂ
ಮಾಯಾವಿಯ ಪರದುಮೆಳಿಪನಪ್ಪನ ಧನಮುಂ ।
ನ್ಯಾಯಮಣಮಿಲ್ಲದವನ
ಶ್ರೀಯುಂ ನಿರ್ದಯನ ತಪಮುಮೇನೆಸೆದಪುದೇ ॥ ೫೩

ದೇವನ ದೊರೆಯ ಬಂಟರುಂ ದಿವಿಜಗಜದ ದೊರೆಯ ಮದವಾರಣಂಗಳುಮುಳ್ಳೊಡಂ ಮುಖ್ಯನಾಯಕನಿಲ್ಲದೆ ಮಾರ್ಪಡೆಯಂ ಗೆಲ್ದು ಗೆಲ್ಲಂಗೊಳಲ್ಬಾರದಂತೆ ದಾನಪೂಜೆಶೀಲೋಪವಾಸಂಗಳಂ ಮಾಳ್ಪುದಾರ ಗುಣಮುಳ್ಳೊಡಮರಿದೆನಿಸುವ ತಪಮಂ ಮಾಳ್ಪ ದೇಹದ ಬಲಮುಳ್ಳೊಡಂ ಅಷ್ಟಾದಶದೋಷದೂರನಪ್ಪ ದೇವನಂ ಸಾರದೆ ಕರ್ಮಂಗಳಂ ಗೆಲ್ದು ನಿರ್ವಾಣಸಾಮ್ರಾಜ್ಯಮಂ ಪಡೆಯಲ್ಬಾರದು ॥ ೫೪

ದಿನಕರನಿಲ್ಲದಂಬರಮುಮುನ್ನತಿಯಿಲ್ಲದ ರಾಜ್ಯಲೀಲೆಯುಂ
ವನಿತೆಯರಿಲ್ಲದೋಲಗಮುಮಾತ್ಮಜರಿಲ್ಲದ ಗೇಹಮುಂ ಜಗ

ಜ್ಞನನುತಮಪ್ಪ ಪಾಪಹರಮಪ್ಪ ಸದಾಶುಚಿಯಪ್ಪ ಶುದ್ಧದ
ರ್ಶನಮೆಣ್ಣಮಿಲ್ಲದಾತನ ತಪೋಗ್ರತೆಯುಂ ನೆಱೆದೊಪ್ಪಲಾರ್ಕುಮೇ॥೫೫॥

[ಕೈದುವುಳ್ಳೊಡಂ ಭುಜಬಲಮುಳ್ಳೊಡಂ ಮನಮಿಲ್ಲದನಿತಱೊಳ ಪಗೆಯುಸಿಱಿಯಲ್ಬಾರದಂತೆ ತಪಮುಳ್ಳೊಡಂ ದರ್ಶನಮಿಲ್ಲದೆ ಸಕಲಕರ್ಮಂಗಳಂ ಕಿಡಿಸಲ್ಬಾರದಾಕರ್ಮಂ ಕೆಟ್ಟೊಡಲ್ಲದೆ ನಿಶ್ಶ್ರೇಯಸಶ್ರೀಯಂ ಪಡೆಯಲ್ಬಾರದ]ದಱಿಂ ಶುದ್ಧದರ್ಶನದೊಳ್ ಮುನ್ನಂ ದೃಢರಾಗಿ ಬೞಿಕ್ಕೊಳ್ಳತಪ್ಪ ತಪಮಂ ಮಾೞ್ಪುದೀಧರ್ಮಮೆಂತಪ್ಪುದೆಂದೊಡೆ ॥ ೫೬

ಕೊಲೆಯೆಂಬೀನುಡಿಗೆ ಮಹಾ
ಕಲಿಯುಂ ಮೊದಲಾಗ ನಾಡೆ ಬೆರ್ಚುವನೆಂದಂ ।
ದೆಲೆ ಗಳ ಬಗೆವೊಡೆ ಜಗದೊಳ್
ಕೊಲೆಯಿಂದಂ ಬಿಟ್ಟು ಪಾತಕಂ ಪೆಱತುಂಟೇ ॥ ೫೭

ಘಮ್ಮನೆ ಸಾವಾಯ್ತೀತನ
ಧರ್ಮದಿನಾನೆಂದು ಬಟ್ದೆನೆಂಬೀ ನುಡಿಯುಂ ।
ಕೂರ್ಮೆಯೊಳ್ ನುಡಿವೊಡೀತನ
ಧರ್ಮದೊಳಾನಱಿದೆನೆಂದು ನುಡಿವವರೊಳರೇ ॥ ೫೮

[ಬಲ್ಲಿದರಪ್ಪರಸುಗಳನ್ಯಾಯದಿಂದಿನಿತರ್ಥಮಂ ತೆಱಲ್ವೇೞ್ಕುಮೆಂಬರಿಂತಿರ್ಪವರೂರರೂರ್ದಪ್ಪದೋರೋರ್ವರ ಜೀವಮಂ ಕುಡಲ್ವೇೞ್ಕುಮೆಂದೊಡೆ ನಾಡೆಲ್ಲಮಾತನೊಳದಿರ್ಕೆ ಕಾದುವರಲ್ಲದೆ, ತೆಱುವವರಲ್ಲದಱಿಂ ಜೀವವಧೆಯೆ ಮಹಾಪಾಪಂ ॥ ೫೯

ಸುತರುಂ ನಂಟರುಮಯ್ಯನುಂ ಕೆಳೆಯನುಂ ಬಲ್ಲಾಳ್ಗಳುಂ ನೋಡೆ ನೋ
ಡೆ ತಗುಳ್ದಟ್ಟಿ ಪೊರಳ್ಚಿ ಕೊಂದ ಪಗೆಯುಂ ಕೊಟ್ಟರ್ಥಯಂಗೊಳ್ವನಂ

ಕ್ಷಿತಿಯಂ ಪೊರ್ಕುಳಿತಿರ್ದೊಡಂ ಭರದಿನಿನ್ನಿಂತಪ್ಪುದಂ ತಾನೆ ಕಾಣುತುಮಿರ್ದುಂ ಕೊಲೆ ಧರ್ಮಮೆಂದು ಪಿಡಿವಂ ಗಾಂಪಂ ಪೆಱಗಾರ್ಪರೇ ॥ ೬೦

ಈ ಬಟ್ಟೆಯೊಳ್ಸಂಕಂ ಪಿರಿದೆಂದೊಡೆ ಮೊದಲಾಗದೆಂಬಱಲ್ಲಿಗೆ ತಕ್ಕರ್ಥಮಂ ಕೊಟ್ಟು ಪೋಪಮೆಂಬರ್ದಾರಿಗಳೊಳಸಿ ಆ ಬಟ್ಟೆಯೊಳ್ ಕೊಂದಪರೆಂದೊಡೆ ಭಯದಿಂ ಪೋಗಲೊಲ್ಲರೆಂದೊಡೆ ಕೊಲೆಯಿಂದ ಮಗ್ಗಳಂ ಪಾಪಮಿಲ್ಲ ॥ ೬೧

ಪಗೆಯುದ್ದಂ ಕೊಲೆಯಿಂ ಸುಖ
ಮಾಗದು ಕಡುದುಃಖಮಕ್ಕುಮೆಂಬುದನಱದಿಂ ।
ಬಾಗಿ ತಿಳಿದೆಯ್ದೆ ಕೊಲೆಯುಂ
ದ್ಯೋಗಮನತಿಕಷ್ಟಮೆಂದು ಬಿಡುವುದು ಭವ್ಯಂ ॥] ೬೨

ದೂತನ ಪೊಗೆಯುಮಂ ಕಂಡು ಕಿಚ್ಚುಂಟೆಂದಱವಂತೆ ಮಹಾವಿಭೂತಿಯಂ ಬಿಟ್ಟೆಕ್ಕಡಮಂ ಪೆಟ್ಟು ಬಿಲ್ಗೊಂಡು, ಕರಿತುರಗಾದಿಗಳನೊಲ್ಲದೆ ನಾಯಿಗಳ್ವೆರಸು ಸಿವಿಗೆಯಸಿರಿಸಿ ನಡೆದು, ಗಣಿಕಾಜನಮುಮಂ ಮಂಡಳಿಕರುಮಂ ಸಾಮಂತರುಮಿಲ್ಲದೆ ಕ್ರೂರರಪ್ಪ ಬೇಂಟೆಗಾಱರೊಳ್ಕೂಡಿ, ಮಣಿಕಂಕಣಮನೊಲ್ಲದೆ ಕೈಪೊಡೆಯುಂ ಕಟ್ಟಿ, ದಿವ್ಯಾಂಬರಮನೀಡಾಡಿ ಕರಿಯ ಕುಪ್ಪಸಮಂ ತೊಟ್ಟು, ಹಾರಾದ್ಯಾಭರಣಂಗಳನೊಲ್ಲದೆ ತೋಳ್ಗಟ್ಟಿ, ಪಂಚಮಹಾಶಬ್ದಮನೊಲ್ಲದೆ ಬೇಂಟೆಪಱೆಯುಮಂ ಪೊಯ್ಸಿ, ಶಾಂತರೂಪಂ ಬಿಟ್ಟು ಕ್ರೂರರೂಪು ಕೈಕೊಂಡು ನಗೆಯುಂ ಬಿಟ್ಟು ಮುಳಿಸನೊಳಕೊಂಡು, ಬೇಂಟೆಗೆ ಪೋಪ ರೌದ್ರಾತ್ಮರ ನೆಗತ್ತೆಯೆ ನರಕಗಮನಮನಱಪುಗುಮದಂ ಕಂಡು ಕೊಲೆಯೆ ದುಃಖಹೇತುವೆಂದಱದು ಕೊಲೆಯುಮಂ ಮಾಣ್ಬುದು ॥ ೬೩

ಸೊಗಯಿಪ ಸುಖದೊಳ್ಕೂಡುವ
ಬಗೆಯುಳ್ಳೊಡೆ ಜೈನಮಾರ್ಗಮಂ ನಂಬುಗೆಯಿಂ ।
ಸುಗಮಮನೆ ಪಿಡಿದು ಬಿಡುವುದು
ಪಗೆಯಿಂದುಳ್ಳಕ್ಕ ಕೊಲೆಯೊಳೊಂದಿದ ಮತಮಂ ॥ ೬೪

ಇನ್ನಾಗಮಮೆಂತಪ್ಪುದೆಂದೊಡೆ, ವಿಚಾರಮಂ ತಿರ್ದುವ ಧರ್ಮಾಧಿಕರಣರೆಂತವರವರ್ನುಡಿವ ಪದ್ಧತಿಯಿಂದಿವರ್ಕಳರಿವರ್ಶುದ್ಧರೆಂದಱಿವರಂತೆ ಬುದ್ಧಿವಂತರ್ ಸಕಳಾಗಮಂಗಳೊಳಾದ ನುಡಿಗಳಂ ಪರೀಕ್ಷಿಸಿ ತಿಳಿದು ನರಕಕ್ಕೆ ಕಾರಣಮಪ್ಪ ಕುಮತಮಿದು ಮೋಕ್ಷಕ್ಕೆ ಕಾರಣಮಪ್ಪ ಸನ್ಮತಮಿದೆಂದು ನೋಡಿ ಪಿಡಿವುದು ॥ ೬೫

ಕುರುಡನೊರ್ವನೇಱಿದುಂ
ಸುರಗಿರಿ ಮುಂದಿರ್ದುದಾದೊಡಂ ಕಾಣ್ಬರೆ ಕಾ ।
ಪುರುಷರ್ಮಿಥ್ಯಾಜ್ಞಾನಿಗ
ಳುರುನಿರ್ವೃತಿಗುಯ್ವ ಧರ್ಮಮಂ ಕಂಡಪರೇ ॥ ೬೬

ಎನಿಸು ಶಕ್ತಿಯುಳ್ಳೌಷಧಂ ತಱಿಂಟುದಲೆಯೊಳ್ ರೋಮಮಂ ಪುಟ್ಟಿಸಲಾಱದು; ಎನಿತು [ಗಾರುಡಮಂತ್ರ] ಬೀಜಾಕ್ಷರಮಾದೊಡಂ ಕೊಡೆವಾವಂ ಕೇಳಿಸಲಾಱದು; ಎನಿತು ಶೃಂಗಾರವತಿಯಾದೊಡಂ ಸೂಳ್ ವಿರಕ್ತನನೊಲಿಸಲಾಱಳಂತೆ ಬದ್ಧಮಿಥ್ಯಾದೃಷ್ಟಿಯಪ್ಪ ಜೀವಮುಮಂ ಬೇಗಂ ನರಕಂಬುಗಲ್ವೇಡಿರ್ದ ಜೀವಮುಮಂ ಅಭವ್ಯನಪ್ಪ ಜೀವನುಮಂ ಪರಮಾಗಮಮೆನಿತುಲೇಸಾಗಿಯುಂ ಸೋಲಿಸಲಾಱದದು ಪ್ರಮಾಣಮಲ್ಲದು ಬುದ್ಧಿವಂತರಪ್ಪರಾರ್ಯರಿದು ತಿಳಿದು ನಂಬುವುದು ॥ ೬೭

ಪೇಲಿಂಗೆ ನೊಣಂಗಳ್ ಕಡು
ಸೋಲದಿನೆಱಗುವುವು ಕಪ್ಪುರಕ್ಕೇಗೆಯ್ದುಂ ।
ಸೋಲದಿನೆಱಗವು ಜಗದೊಳ್
ಪೇಲೇಂ ಮೇಲಾಯ್ತು ಕಪ್ಪುರಂ ಕೀಡಾಯ್ತೇ ॥ ೬೮

[ಪಿತ್ತಮುಳ್ಳವರ್ಗೆ ಪಾಲ್ ಕೈಪೆಯಕ್ಕುಮಲ್ಲದೆ ಪಿತ್ತಮಿಲ್ಲದಂಗೆ ಕೈಪೆಯಾಗದಂತೆ ತೀವ್ರಕರ್ಮಮುಳ್ಳವಂಗೆ ಪರಮಾಗಮಂ ರಂಜಿಸದಲ್ಲದೆ ಲಘುಕರ್ಮಗೆ ರಂಜಿಸುಗುಂ ॥ ೬೯

ಮೊದಲಿಂ ಕಡೆವರೆಗಂ ಪೇ
ೞ್ವುದು ಪೂರ್ವಾಪರವಿರುದ್ಧಮಪ್ಪಾಗಮದೊಳ್ ।
ವಿದಿತಂ ಕೇಳಲ್ಲದಱಿಂ
ಸುದೂರಮಾ ಮೋಕ್ಷಮೆಂದು ನಂಬುವುದು ಬುಧಂ ॥ ೩೦

ಪೂರ್ವಾಪರವಿರೋಧಮಂ ಕಂಡೊಡೆ ಮೊದಲಾಗೆ ಲೋಕದ ಜನಂಗಳಿವರ್ಕಳ್ಳನೆಂದು ನಂಬರೆಂದೊಡೆ ಪೂರ್ವಾಪರವಿರುದ್ಧಮಪ್ಪಾಗಮಮನೆಂತು ಕೆಲರ್ಜಡಮತಿಗಳ್ ನಂಬುವರೋ ॥] ೩೧

ಪೇೞ್ವರ್ತಮ್ಮಿಚ್ಛೆಗೆ ವರೆ
ಪೇೞ್ವರದೇಂ ದೋಷಮಾಯ್ತು ಬಳ್ತನದಿಂದಂ ।
ಕೇಳ್ವರ್ತಾವೆತ್ತಾಗದೆ
ಕೇಳ್ವುದು ಲೇಸಾಗಿ ಮನದೊಳಾರಯ್ಯುತ್ತುಂ ॥ ೩೨

ಪಂದಿ ಕೆಯ್ಯಂ ತಿಂದೊಡೆ ಕತ್ತೆಯ ಕಿವಿಯಂ ಕೊಯ್ದರೆಂಬಂತ ಸೂಳಬಂಟಂಗಾಱದೆ ಶಂಖದಗೊರವನಂ ಬಡಿದರೆಂಬಂತೆ ಪೆಂಡಿರ ದೋಷಕ್ಕೆ ಮಕ್ಕಳ ಮೂಗಂ ಕೊಯ್ದರೆಂಬಂತೆ ಅವಿಚಾರದಿಂ ಪಕ್ಷಪಾತಿಯಾಗದೆ ಮಾಣಿಕಬಟ್ಟಂ ಮಾಣಿಕಮಂ ಪರೀಕ್ಷಿಸುವಂತೆ ಪರದಂ ವಸ್ತುವಂ ಪರೀಕ್ಷಿಸುವಂತೆ ಸುಜನವಿದಗ್ಧರಂ ಪರೀಕ್ಷಿಸುವಂತೆ ಬಂಡಾರಿಗಪೊನ್ನಂ ಪರೀಕ್ಷಿಸುವಂತೆ ವಿಚಾರಪೂರ್ವಕಮಾಗಿ ಧರ್ಮಂಗಳಂ[1] ಪರೀಕ್ಷಿಸಿ ಪರಮಾಗಮಮಪ್ಪುದನೇಕಚಿತ್ತದಿಂ ನಂಬಿ ಸಂಶಯಮತಿಯಾಗದೆ ತದಾಗಮಕ್ರಮದೊಳ್ ನೆಗೞ್ವುದು; ಇಂತೀದಾನಮೆಂತಪ್ಪುದೆಂದೊಡೆ ॥ ೩೩

ಉರಗತತಿಗಂ ಗೋವೃಂದಕ್ಕಂ ಮನೋಹರಮಾಗೆ ಚೆ
ಚ್ಚರದಿನೆಱೆಯಲ್ಬೇಗಂ ಕೇಳೊಂದೆ ಬಾವಿಯ ಸೀರ್ನಾ

1 ವಿಚಾರಮಪ್ಪೀಪೂರ್ವಕ್ರಮಂಗಳಂ (ಗ)

ದರದಿನುರಗಂ ಪೀರ್ದಾನೀರ್ನಂಜು ಜೀವಧನಂ ಸವಿ
ಸ್ತರದೆ ಕುಡಿವಾ ತೋಯಂ ಪಾಲಂತೆ ಪಾತ್ರಮಪಾತ್ರಮುಂ [1] ॥ ೭೪

ಸೌಳಪ್ಪ ಭೂಮಿಯನುತ್ತು [ದಕಪಿನೆಱದು] ಕಸವಂ ಕಳೆದು ಬಿತ್ತಿ ಬೇಲಿಯನಿಕ್ಕಿ ಪಿರಿದುಂ ಪ್ರಯತ್ನಮಂ ಮಾಡಿದೊಡಂ ಕರಿಯ ಭೂಮಿಯ ಬೆಳಸಿನಂತಕ್ಕುಮಪ್ಪು, ಕುಪಾತ್ರಕ್ಕೆನಿತು ಕುದಿದು ಭಕ್ತಿಮಾಡಿದೊಡಂ ಸುಪಾತ್ರಕ್ಕೆ ಕೊಟ್ಟ ದಾನದ ಫಲದಂತಾಗಲಱಿಯದದಱಿಂ ಸುಪಾತ್ರದಾನಮೆ ಮಿಗಿಲೆಂದಱಿವುದು; ಇಂತೀ ಸತ್ಪೂಜೆಯೆಂತಪ್ಪುದೆಂದೊಡೆ ॥ ೭೫

ಎಲವದ ಪುಷ್ಪದೊಂದು ಕಮನೀಯತೆಯಂ ಗಿಳಿ ಕಂಡು ಸೋಲ್ತು ಕೋ
ಮಲಮಿದಱಿಂದಮಿಂತುಟು ಫಲಂ ಪಿರಿದಾಗದೆ ಪೋಣದೆಂದು ಸಂ
ಚಲಮತಿ ಕಾದುಕೊಂಡು ನಲಪಿರ್ದು ಬಳಿಕ್ಕದು ದೂರವಾಗೆ ಪೋ
ಯ್ತುಲಸಿ ಪೊಡರ್ಪುಗೆಟ್ಟನಿತವೋಲ್ ಫಲಮಾಗದು ಕೀಳ್ಕುಪೂಜೆಯೊಳ್ ॥

[ಬೊಬ್ಬುಲಿಯ ಪೆಸಕ್ಕೆ ಸಿಸುಕೂಮಾರಿಯಿಂ ಬೇಲಿಯನಿಕ್ಕಿ ನೀರ ನೆಱದೊಡಂ ಮಾವಿನ ಪನದಂತೆ ಫಲಮಾಗಲಾರ್ಕುಮೆ? ಕುದೈವಂಗಳ್ಗೆನಿತು ಭಕ್ತಿಯಿಂ ಪೂಜಿಸಿ ಪೊಡೆವಟ್ಟೊಡಂ ಸುದೈವಮನಾರಾಧಿಸಿ ಪಡೆವ ಫಲಮಂ ಪಡೆಯಬಾರದು] ೭೭

ಮೊಗಿಯೊಳಾದ ತಿಂತದೊವನಿಂಗಿರಲಾಱವೆ ಸೇದೆಗೆಟ್ಟು ಬೇ
ಳಾಗಿ ಸುಬುದ್ಧಿಗೆಟ್ಟು ಗುರುಗುಂಜೆಗಳಂ ಮುಸುಗಳ್ವನೋದದಿಂ
ಪೋಗದೆ ರಾಶಿಮಾಡಿ ಶಿಖಿಗೆತ್ತುಱ ಕಾಯ್ವವೊಲಲ್ಪಬುದ್ಧಿಗಳ್
ರಾಗಿಸಿ ಪೊರ್ದಲೇಂ ಗಳ ಕುದೈವದೊಳಂ ಫಲಮಾಗಲಪ್ಪುದೇ ॥ ೭೮

[ಪೂಗಿಡುವೆಂಬ ಪೆಸರಿಂಗೆ ಕೊಳವಳ್ಳಿಯ ಗಿಡಗಳಂ ನಟ್ಟು ನೀರೆಱದು ನಡೆಪೆ ಮಲ್ಲಿಗೆಯ ಪೂವಿನಂತಾಗಲಱಿಯುವಂತೆ ದೈವಮೆಂಬ

---

[1] ಅಂತೆಮಾಳ್ಪುದು ಪಾತ್ರಮಂ (ಗ)

ಪೆಸರಿಂಗೆ ಕುದೈವಮುಮನೞತರಾರಾಧಿಸಿದೊಡೆ ಸುದೈವಮನಾರಾಧಿಸಿ ಪಡೆದ ಲಾಭಮಂ ಪೋಲಲಱಿಯದು ॥] ೭೯

ಈ ವರಧರ್ಮದಿಂದಘಕುಲಂ ಕಿಡುಗುಂ ಸುಖಮಕ್ಕುಮಕ್ಷಯ
ಶ್ರೀವಧು ಸ್ವರ್ಗಮುನ್ನತಿಕೆಯಕ್ಕು ಮಳಂ ಕಿಡುಗುಂ ಕುಧರ್ಮದಿಂ
ಬೇವಸಮಕ್ಕುಮುಗ್ರನರಕಾರ್ಣವದೊಳ್ಗಡ ಬೀೞ್ವನೆಂಬುದಂ
ಭಾವಿಸಿ ನೋಡಿ ತನ್ನೊಳ್ ಪರೀಕ್ಷಿಸಿ ಮಾೞ್ಪುದು ಧರ್ಮಮೆಂಬುದಂ॥೮೦

ಲೋಚಂ ಮಾಡಿಸಿಕೊಂಬುದರಿದೋ ಬೋಳಿಸಿಕೊಂಬುದರಿದೋ ಬತ್ತಲೆಯಿರ್ಪುದರಿದೋ ಸೀರೆಯುಟ್ಟಿರ್ಪುದರಿದೋ, ಪೆಂಡಿರಂ ಬಿಟ್ಟಿರ್ಪುದರಿದೋ ಪೆಂಡಿರೊಳ್ ಕೂಡಿರ್ಪುದರಿದೋ, ಮೀಯದಿರ್ಪುದರಿದೋ ಮೀವುದರಿವೋ, ಮಣೆಯೊಳ್ ಪಡುವುದರಿದೋ ಪಾಸಿನೊಳ್ ಪಡುವುದರಿದೋ, ಕಯ್ಯಲುಂಬುದರಿದೋ ತಳಿಗೆಯಲುಂಬುದರಿದೋ, ಕುಳ್ಳಿರ್ದುಂಬುದರದೋ ನಿಂದಿರ್ದುಂಬುದರಿದೋ, ನೀರಂ ಕುಡಿವುದರಿದೋ ನೀರಂ ಕುಡಿಯದಿರ್ಪುದರಿದೋ, ಏಕಭುಕ್ತಮಂ ಮಾೞ್ಪುದರಿದೋ ಪಲವುಸೂೞುಂಬುದರಿದೋ, ತೊಲಗದೊಂದೆಡೆಯೊಳಿರ್ಪುದರಿದೋ ತೊೞಲುತ್ತಿರ್ಪುದರಿದೋ, ಪಲ್ಲಂ ಸುಲಿದುಕೊಂಡಿರ್ಪುದರಿದೋ ಪಲ್ಲಂ ಸುಲಿಯದಿರ್ಪುದರಿದೋ, ಮುಟ್ಟುಪಡವಾದೊಡೆ ಕೂೞನೀಡಾಡುವುದರಿದೋ ಮುಟ್ಟುಪಡಮಿಲ್ಲದುದರಿದೋ, ತನಗಲಾಭಮಾದೊಡುಣ್ಣದುದರಿದೋ ಪಡೆದೊಡೆ ಮತ್ತುಂಬುದರಿದೋ, ಸುಗಂಧದ್ರವ್ಯಮಂ ಪೂಸುವುದರಿದೋ ಮಲಮಂ ತೊಳ್ವುದರಿದೋ, ಬೇಡದುಂಬುದರಿದೋ ಬೇಡಿಕೊಂಡುಂಬುದರಿದೋ, ಪೆಱರ ಬೈಗುಳಂ ಸೈರಿಸುವುದರಿದೋ ಪೆಱರೊಡನೆ ಬಾಯಂಬಡಿವುದರಿದೋ, ಪಂಚೇಂದ್ರಿಯಸಿಗ್ರಹಮರಿದೋ ವಿಷಯಸೇವೆಯರಿದೋ, ಪೂಣ್ಕೆಯರಿದೋ ಮೆಚ್ಚಿದಂತೆ ನಡೆವುದರಿದೋ, ಗೋತ್ರದೊಳ್ ಕೂಡಿರ್ಪುದರಿದೋ ಗೋತ್ರಮಂ ಬಿಟ್ಟಿರ್ಪುದರಿದೋ, ಪೊನ್ನಂ ತೊಱೆದಿರ್ಪುದರಿದೋ ಪೊನ್ನಿಂಗೆಱಗುವುದರಿದೋ, ದಿವಸಕ್ಕೊರ್ಮೆಯಲ್ಲದೆ ಮತ್ತಮೌಷಧಮಂ ಸಾರ್ವೊಡಮೊಲ್ಲೆನೆಂಬ ನಿಯಮಮರಿದೋ,

ಮನಕ್ಕೆ ಬಂದಂತೆ ಆಡುವ ನಿಯಮಮರಿದೋ, ಬಗೆದಿನೆಡೆಯೊಳ್ ಮುನ್ನಂ ಮಾಡುವುದಾವುದು ಬಱಿಕ್ಕೆ ಮಾಡುವುದಾವುದು ಸೈರಿಸಿ ಪಡೆವುದಾವುದು ನೆಗೞಲರಿದಾವುದೆಂಬುದಂ ವಿಚಾರಿಸಿ, ॥ ೮೧

ಇತಿಗಳಾವುದೀಧ
ರ್ಮಂ ತೊಡಳಂ ಮುನ್ನಮಾವುದೀಧರ್ಮಂ ಕೇ ।
ಳಂತಿದಱಿಂ ಸುಖಮಿದಱಿಂ
ಸಂತತಕಡುದುಃಖಮಕ್ಕುಮೆಂಬುದನಱಿವಂ ೮೨

[ಎಂದು ಮುನಿವೃಂದಾರಕಂ ಕಿಱಿದಱೊಳ ಧರ್ಮಮಂ ತಿಳಿಪುವುದುಂ ಕೇಳ್ದು ಪಿರಿದುಂ ಸಂತೋಷಂಬಟ್ಟು ಅಂದು] [2] ಚತುರ್ದಶಿಯುಪ್ಪವದಱಿಂದುಪವಾಸಮಂ ಕೈಕೊಂಡು ಮುನಿವೃಷಭನಂ ಬಂದಿಸಿ [ರಾಜಮಂದಿರಕ್ಕೆ ಬಂದು ನೇಸರ್ಪಡುವಿನಮಿರ್ದೊಯ್ಯನೆ ಕಾಪಿನವರಂ ಬಂಚಿಸಿ ಪೊಱಲಿಂ ಪೊಱಮಟ್ಟು]ಪೋಗಿ ಶ್ಮಶಾನಭೂಮಿಯೊಳ್ ರಾತ್ರಿಪ್ರತಿಮೆಯನಿಂದನನ್ನೆಗ [ಮಿತ್ತಲ್ ಮಗಧಸೌಂದರಿಯೆಂಬ ಸೂಳೆಗೆ ಮೃಗವೇಗನೆಂಬ ಕಳ್ಳಂ ಕೂರ್ತು ಕರ್ಣಾಭರಣದಾಕೆಯ ಮತದಿಂ] [3] ರಾಜಶ್ರೇಷ್ಠಿಯ ಪೆಂಡತಿಯಪ್ಪ ಕೀರ್ತಿಮತಿಯ ಕೊರಳ ಹಾರಮಂ ಕಳದುಕೊಂಡು ಪೋಗುವನಂ ತೊಟ್ಟನ ತಳಾಱರ್ಕಂಡು ॥ ೮೩

---

1 ಮತ್ತಂ ಲೋಚಮುಂ ಪೀಯುಮರುಂ ಬ್ರಹ್ಮಚರ್ಯಮುಂ ನಿರ್ಗ್ರಂಥಮುಂ ನಿಂದು ಕೈಯೊಳುಣ್ಬುದುಂ ನಿಯಮದೊಳೊಂದೆಡೆಯೊಳಿರ್ಪುದುಂ ಏಕಭಕ್ತಮುಂ ಮೌನಮುಂ ಸೀರಳ್ಕೆಯುಂ ತಾಳ್ವುದುಂ ಅಲಾಭಮುಂ ಪಲ್ಲಂ ಸುಲಿಯದುದುಂ ಸುಗಂಧದ್ರವ್ಯಂಗಳಂ ಪೂಸುವುದುಂ ಇಂದ್ರಿಯಂಗಳಿಗಿಚ್ಛೆಯಂ ಸಲಿಸುವುದು ಸುಖಮೊ ಇಂದ್ರಿಯಂಗಳ ನಿಗ್ರಹಿಸುವುದು ಸುಖಮೋ ಎಂಬಿವೆಲ್ಲರೊಳ್ ಪ್ರವೃತ್ತಿನಿವೃತ್ತಿಗಳಂ ಭಾವಿಸಿ ಮುನ್ನಾದುದಾವುದು ಬಳಿಕಾದುದಾವುದಿವರ ತರಂಗಳಂ ನೆಗಳಲಾವುದಱಿದು ನೆಗಳಲಾವುದರಿಳಿದೆಂಬುದಂ ಭಾವಕರಪ್ಪವರ್ವಿಚಾರಿಸಿ ಮಹಾಪರಿಷಹಮಪ್ಪ ರಾವು ಮುನ್ನಮಾದ ಧರ್ಮವಕ್ಕೆ ನೊಂಬರಾರದೆ ತಂತಮ್ಮ ಯಿಚ್ಛೆಗೆಯ್ವಂ ಪಣ್ಣಿದರೆಂದಱಿದು ಕುಲಧರ್ಮಮಂ ಬಿಟ್ಟು ಸದ್ಧರ್ಮಮುಂ ಪೊರ್ದುವುದೆಂದು (ಬ. ಕ.)

2 ಱಱಿದು ನೆಗಳ್ವುದೆಂದು ಪೇಳ್ವುದುಂ ಕುಮಾರಂ (ಗ)

3 ಮೃಗಸೇನನೆಂಬ ಕಳ್ಳಂ ಮಗಧಸೌಂದರಿಯೆಂಬ ಸೂಳೆಯ ಪೇಳ್ಕೆಯಿಂ (ಗ)

ಬಡಿಯಿಂ ಗುಂಡಿಂ ಕಲ್ಲಿಂ
ದಿಡುತುಂ ಬೆನ್ನಟ್ಟೆ ಬೆರ್ಚಿ ಭಯವಶದಿಂ ಪೆರ್ಚಿ ।
ನಡುಗೆ ಮತಿಗೆಟ್ಟು ಕಾಲ್ಗಳ್
ತಡೆದೊಡೆ ಬಿಡದೋಡುವಾತನಾನ್ನೃಪಸುತನಂ ॥ ೮೪

ಘೋಂಕೆನೆ ಕಂಡು ಬೆರ್ಚಿ [ಕಳ್ಳಂ ಸತ್ತೊಡಮೆಕ್ಕುಂ ಪುಲಿ ಸತ್ತೊಡಮೆಕ್ಕುಮೆಂಬ ನಾಣ್ಣುಡಿಯುಂತೆ ತಳಾಱನ ಕೈಯೊಳೀತಂ ಸತ್ತೊಡಮೆಕ್ಕುಮೀತನ ಕೈಯೊಳ್ ತಳಾಱಂ ಸತ್ತೊಡಮೆಕ್ಕುಂ ನಗೆಗೆಟ್ಟುದಾನೊರ್ವಂಗೆನ್ನ ಪುಣ್ಯದಿಂ ಪುಲಿ ನಕ್ಕಿ ಬರ್ದುಂಕಿದೆನೆಂದು] ಹಾರಮಂ ವಾರಿಷೇಣಕುಮಾರನ ಮುಂದಿಡಾಡಿ ಪೋಪುದುಂ ತಳಾಱರೆಯ್ದೆವಂದು ॥ ೮೫

ನಿಂದಿರ್ದ ವಾರಿಷೇಣನ
ನಂದವರಡಹಡಿಸಿ ನೋಡಿ ಕಳ್ಳನಿವಂ ಪೋ ।
ಸಂದೆಯಮಿಲ್ಲೆರಡಿಲ್ಲದೆ
ಕೊಂದಪರೆಂದಂಜಿ ಸಡೆದು ಪೋಗದೆ ನಿಂದಂ ॥ ೮೬

ಎಂದು [ಕಟ್ಟಲೆಯೊಳವರಿವರೆಂದಱಿಯದೆ ತಡವರಿಸಿ ನೋಡಿ ಮುಂದಿರ್ದ ಹಾರಮಂ ಕಂಡು ಕಳ್ಳನೆಂದು ನಿಶ್ಚಯಿಸಿ] ದೀವಿಗೆಯ ಬೆಳಗಿಂ ನೋಡಿ ವಾರಿಷೇಣನಪ್ಪುದನಱಿದು ಬೆಱಗಾಗಿ ॥ ೮೭

[ತುರಗಕ್ಕಂ ಕರಿಗಂ ರಥಪ್ರತತಿಗಂ ದ್ರವ್ಯಕ್ಕಮಿಂ ಮೇರೆಯಿ
ಲ್ಲರಸಂಗಪ್ಪೊಡೆ ತಾನೆ ಮುಖ್ಯನವನೀನಾಥರ್ಗಂ ತನ್ನರಿ
ವರ್ಗರವೋಘಂ ನೃಪನೇಕೆ ಕಳ್ವ ಬಗೆಯಂ ತಾಂ ತಂದನೋ ನೋಪ್ಪೊಡ
ಚ್ಚರಿಯೆಂದಂದು ತಳಾಱರಂಜಿ ಧರಣೀಶಾರಾಧ್ಯನಂ ನೋಡಿದರ್ ॥ ೮೮

ತುಡಲಿಲ್ಲದೆ ಕಳ್ದನೊ ಮೇ
ಣುಡಲಿಲ್ಲದೆ ಪೋಗಿ ಕಳ್ಗನೋ ತನಗರಸಂ ।
ಕುಡದೊಡೆ ಕಳ್ದನೊ ಕಮ್ಮನೆ
ದೃಢಚಿತ್ತಂ [1] ಕಳ್ವ ಬಗೆಯನೇಕೆಯೊ ತಂದಂ ॥ ೮೯

1 ಕಡುಮೂರ್ಖಂ (ಗ)

ಎಂದು [ತನ್ನೊಳಾಶ್ಚರ್ಯಂಬಟ್ಟು] ನಿನ್ನಲ್ಲಿಗೆವೆಂದು ಹಾರಮಂ ತೋಱಿ ಜಿನಸಮಯವಾರ್ಧಿವರ್ಧನಸುಧಾಕರನಂ ನಿಷ್ಕಾರಣಂ ಕಳ್ಳನೆಂದು ಬಿನ್ನಪಂಗೆಯ್ವುದುಂ ಜಾತಿಕ್ಷತ್ರಿಯಂಗೆ ದುಷ್ಟನಿಗ್ರಹಶಿಷ್ಟಪರಿಪಾಲನಂ ಧರ್ಮಮಪ್ಪುದಱಿಂ। ಮಗನೆಂದು ಕಾರುಣ್ಯಂಗೆಯ್ಯದೆ ಕೊಲ್ಲಿಮೆಂದು ತಳಾಱಂಗೆ ನೀಂ ಬಸಸುವುದುಂ ತಳಾಱಂ ಕುಮಾರನಲ್ಲಿಗೆವೆಂದು ॥] [1] ೯೦

ಪಿಸುಣರ ಕಳ್ಳರ ಮಿಂಡರ
ಪಸರಂ ಮೊದಲಾಗೆ ನುಡಿದೊಡುರ್ವೀಶಂ ಸೈ ॥
ರಿಸನೆಂಬುದನಱಿದಿರ್ದುಂ
ಕಸವಾರಕ್ಕೇಕೆ ದೇವ ನೀಂ ಬಗೆದಂದೈ [2] ॥ ೯೧

[ನಿನ್ನಯ್ಯನ ಭಂಡಾರದ
ಪೊನ್ನೆಲ್ಲಮನಕ್ಕ ಪಿರಿದು ತದ್ಧನಮಿರ್ದುಂ ।
ತನ್ನ ದರಿದ್ರನ ತೆಱದಿಂ ಕೆ
ಮ್ಮನೆ ಕಳಪಿಂಗೆ ಬಗೆಯನೇಕೆಯೊ ತಂದ್ಯ ॥ ೯೨

ಅಂತೊಡೆದಕಲ್ಲ ಕೞೆಯಿಲ್ಲೆಂಬ ನಾಣ್ನುಡಿಯಂತೆ ನಾನರಸನ ಮಗನೆಂ ಬಲ್ಲಿದ ನೆನ್ನನರಸಂ ಕಳ್ದತಂ ಕೊಲ್ವನಲ್ಲೆಂದು ನೊಕ್ಕಿಯುಕ್ಕುಂದಲೆವಾಯ್ದು ಕೀರ್ತಿಮತಿಯ ಹಾರಮಂ ಕಳ್ದುಮಿಮ್ಮನೆ ಪೆಱರೇಡಿಸಲೆಂದು ಪೋಗಿ ದಸಿಯ ಮೇಲೆ ಬಿೞ್ದು ಸತ್ತ ಕೋಡಗದಂತೆ ನಿನಗೆ ಕಷ್ಟಮಪ್ಪ ಸಾವಂ ಮಾಡಿಕೊಂಡ್ಯೆ] ಎಂದು ತಳಾಱಮೂದಲಿಸಿ ನುಡಿಯುತ್ತಿರೆ ಸರ್ವೈಕ್ಯತ್ವಚೂಡಾಮಣಿ ತನ್ನೊಳಿಂತೆಂದಂ ॥ ೯೩

ಧರೆಯಂ ಪೊಕ್ಕಡಗಿರ್ದೊಡಂ ಜಲಧಿಯಂ ಪೊಕ್ಕಿರ್ದೊಡಂ ಪೋಗಿ ಮಂ
ದರಶೈಲಾಗ್ರದೊಳಿರ್ದೊಡಂ ಖಚರರಂ ಬೇಗಂ ಶರಣ್ಬೊಕ್ಕೊಡಂ

---

1 ಮಗನನ್ನದೆ ಕಳ್ಳಂಗೆ ತಕ್ಕ ವಿಧಿಯಂ ಮಾಡಿಮೆಂದು ಪೇೞ್ವುದುಮವರೆರಡುಗೆಲದೆ ಬಂದು (ಗ)

2 ಕಸವರದಾಟಕ್ಕೆ ದೇವ ನೀಂ ಮುನಿದಂದೈ (ಗ)

ಪಿರಿದುಂ ದ್ರವ್ಯಮನಿತ್ತೊಡಂ ನಡುಕದಿಂ ಚಕ್ರೇಶನಂ ಸಾರ್ದೊಡಂ
ಮರುಳೇ ಮೊಣ್ಬನೆ ಕಾಲಪುಯ್ದಿದವನಂ ಕ್ರೂರಾಂತಕಂ ಕೊಲ್ವುದಂ ॥

ಮತ್ತಂ ಜವನ ಬಿಲ್ಲಾಳ್ತನಮಂ ಪೇಳ್ವೊಡೆ, ದೇವೇಂದ್ರರಂ ತಾವರೆಗೊಳನಂ ಸೊಕ್ಕಿದಾನೆ ಪೊಕ್ಕಂತೆ ಮಾಡಿ, ವ್ಯಂತರದೇವರಂ ಸೌಂತೆಯ ಬಳ್ಳಿಯೊಳೆತ್ತು ಪೊಕ್ಕಂತೆ ಮಾಡಿ, ಜ್ಯೋತಿಷ್ಕದೇವರಂ ಸೀತಂ ಪತ್ತಿದ ವಾತಾಧಿಕರಂತೆ ಮಾಡಿ, [ಭವನವಾಸಿಗರಂ ಕರಂ ದವನದ ಮಡಿಯಂ ದಾೞಿ ಪೊಕ್ಕಂತೆ ಮಾಡಿ, ಚಕ್ರಧರನಂ ವಕ್ರಮಾದ ಪುಳ್ಳಿಗಳಂ ಮುಱಿವಂತೆ ಮುಱಿದು, ಮಾಂಡಲಿಕರಂ ಚಂಡಕರಸನ್ನಾಹಂ ನುಂಗುವಂತೆ ನುಂಗಿ, ಬಲ್ಲಿದರಂ ಕಲ್ಲಂ ತಾಗಿದ ಪುಳ್ಳಿಯಂತೆ ನುಚ್ಚುನುಱಿಮಾಡಿ] ರಾವಣನಂ ಕೋವಣಮಂ ಸೀಳ್ವಂತೆ ಸೀಳ್ದು, ಕುಂಭಕರ್ಣನಂ ಕಂಬಂ ಮುಱಿದ ಮಾಳಿಗೆಯಂತೆ ಮಾಡಿ, ವಿಭೀಷಣನಂ ಸಾಹಸಮಿಲ್ಲದವರಂ ನೂಂಕುವಂತೆ ನೂಂಕಿ, ಇಂದಗಿಯುಂ ಪಂದೆಯುಂ ಕಾಡುವಂತೆ ಕಾಡಿ, ರಾಮನಂ ಧೂಮಂ ಸುತ್ತಿದಂತೆ ಜೀವಂಗಿಡಿಸಿ, ಲಕ್ಷ್ಮಣನಂ ಮಕ್ಕಳ್ಗಟ್ಟರಂತೆ ಗೋಳುಂಡೆಗೊಳಿಸಿ, ಸುಗ್ರೀವನನುದ್ಗ್ರೀವನನಂಬು ತಾಗಿದಂತೆ ಮಾಡಿ, ಜಾಂಬವನಂ ಪಿಂಬಗಲಾದಿತ್ಯನಂತೆ ತೇಜಂಗಿಡಿಸಿ, ಹನುಮನನನುಮಾನಂ ಮಾಡದೆ ನೆಲಕಿಕ್ಕಿ, ಪಾಂಡವರಂ ದಂಡಿನೊಳ್ ಪೊಕ್ಕ ನರಿಯಂತೆ ಮನಂಗಿಡಿಸಿ, ಕೌರವರಂ ಭೈರವಂಬಾಯ್ದರಂತೆ ತಲೆಕೆಳಗುಮಾಡಿ, ಬಾಲಕರಂ ಬಾಲಕರೆಂದು ನಾಣ್ಚದೆ, ಮುದುಕರಂ ಮುದುಕರೆಂದು ಕರುಣಿಸದೆ, ವೀರರಂ ಸಾಮಣ್ಮನೆಂದು ಬೆರ್ಚದೆ, ಮೂರ್ಖರಂ ಮೂರ್ಖರೆಂದೋಸರಿಸದೆ, ಸ್ತ್ರೀಯರಂ ಸ್ತ್ರೀಯರೆಂದು ಕೈಗಾಯದೆ, ವಿಕಳೇಂದ್ರಿಯಂಗಳಂ ವಿಕಳೇಂದ್ರಿಯಂಗಳೆಂದು ತೊಲಗಿಸದೆ, ನಾರಕರಂ ನಾರಕರೆಂದು ಕೊಕ್ಕರಿಸದೆ, ಪಟ್ಟಂಗಟ್ಟಿದರ್ ಕಟ್ಟುಗ್ರರೆಂದೊಲ್ಲೆನೆನ್ನದೆ, ಬಡವರಂ ಬಡವರೆಂದಿರಿಸದೆ, ಮಾನ್ಯರಂ ಮಾನ್ಯಗಾವನೆನ್ನದೆ, ಮುಸು ಪಣ್ತ ಪುಣಿಸೆಯ ಮೇಲೆಱಿದಂತೆ, ಕೋೞಿ ತಿಪ್ಪೆಯಂ ಪೊರ್ದಿದಂತೆ, ಪಸಿದೆಮ್ಮೆ ಬಳದ ಕೆಯ್ಯಂ ಪೊಕ್ಕಂತೆ, ಬಡವರ್ ಕೂೞ ರಾಶಿಯಂ ಕವಿದಂತೆ, ಮುಲ್ದುಂ ನುಂಗಿಯುಂ ಸಪಿದುಂ ಕರ್ಚಿಯುಂ ಮೇಗೆಯ್ದುಂ ಮೆಚ್ಚಿದಂತೆ

ನರಿಯಾಟವಾಡುವಾತನನಗೆ ಪೀಡೆಯಂ ಮಾಡಿದಪ್ಪನೆಂಬುದಾವ ವಿಸ್ಮಯಂ [ಸುಡುವ ಕಿರ್ಚಿನೊಳ್ ತುಪ್ಪಮನನಿಸನಿಸೆಱೆದೊಡಮನಿಸನಿಸೆ ಪೆರ್ಚುಗುಂ ನೀರನನಿಸನಿಸೆಱೆದೊಡಮನಿಸನಿಸೆ ಕುಂದುಗುಂ; ಮತ್ತೆ ಪೂರ್ವಜನ್ಮದ ಕರ್ಮೋದಯದಿಂ ಬಂದಡಸುವ ಸಾವಿಂಗಂ ನೋವಿಂಗಮನಿಸನಿಸಂಜುವಮನಿಸನಿಸೆ ಭವಭವಂಗಳೊಳೆಲ್ಲಂ ಪೆರ್ಚುಗುಂ; ಧೈರ್ಯದಿಂ ಜಿನಪಾದಪದ್ಮಂಗಳನನಿಸನಿಸಂ ನೆನೆವನನಿಸನಿಸೆ ಕುಂದುಗುಂ] ॥ ೯೫

ದುರಿತಂ ಕಿಡದನ್ನೆವರಂ
ಪರಮಜಿನಾಗಮಮನಱಿಯದನ್ನೆವರಂ ನಿ।
ಷ್ಠುರಮಪ್ಪ ದುಃಖಚಯಮುಮಂ
ಮರಣಮುಮಾವಾವ ಭವದೊಳೇಂ ಪಿಂಗುಗುಮೇ ॥ ೯೬

ಜಿನಧರ್ಮ[1]ಮೆಂಬ ನೀರಿಂ ಕರ್ಮಮೆಂಬ ಕಿರ್ಚಂ ನಂದಿಸದೆ, ಜಿನಾಗಮಮೆಂಬ ಗ್ರಹವಾದಿಯಿಂ ದುಷ್ಕೃತಮೆಂಬ ಗ್ರಹಮಂ ಕಳೆಯದೆ, ಜಿನಸೇವನೆಯೆಂಬ ದಿವ್ಯೌಷಧದಿಂ ಕಿಲ್ಬಿಷಮೆಂಬ ಕುತ್ತಮಂ ಕಿಡಿಸದೆ, ಜಿನಾರ್ಚನೆಯೆಂಬ ಕೊಡಲಿಯಿಂ ಪಾಪಮೆಂಬ ದುರ್ಗಮಂ ತಱಿಯದೆ, ಜಿನಸ್ಮರಣೆಯೆಂಬ ಭೈತ್ರದಿಂ ದುರಿತಮೆಂಬ ಸಮುದ್ರಮಂ ಪಾಯದೆ, ಜಿನವ್ರತಮೆಂಬ ಪಱುಗೋಲಿಂದಶುಭಮೆಂಬ ತೊಱೆಯಂ ದಾಂಟದೆ, ಜಿನಪಕ್ಷಪಾತಮೆಂಬ ಸಿಡಿಲಿಂ ಪುಣ್ಯವಿರೋಧಿಯೆಂಬ ಮರನಂ ಮುಱಿಯದೆ, ಜಿನಭಾವನೆಯೆಂಬ ಬಡಬಾಗ್ನಿಯಿಂ ವಿಷಯಸಾಗರಮಂ ಪೀರದೆ, ಜಿನಾಭಿಷೇಕಮೆಂಬ ಕೂರಲಗಿಂ ಕರ್ಮವೈರಿಯೆಂಬ ಪಣಿದಮನಿಱಿಯದೆ, ಜಿನಕಥಾಪ್ರೀತಿಯೆಂಬ ಸಿಂಹದಿಂ ದೋಷ[2]ಮೆಂಬ ಗಜಮಂ ಸೀಳದೆ, ಜಿನಧರ್ಮಪ್ರೀತಿಯೆಂಬ ಭೇರುಂಡನಿಂ ಮೋಹಮೆಂಬ ಶರಭಮಂ ಕೊಲ್ಲದೆ, ಜಿನಮುನಿದಾನಮೆಂಬ ಗಾಳಿಯಿಂ ಲೋಭಮೆಂಬ ಮುಗಿಲಂ ಬೆದಱಿಸದೆ, ಜಿನಶ್ರೀಮುಖದರ್ಶನಮೆಂಬ ವಜ್ರದಿಂ ಮಾಯೆ

---

1 ಸ್ತವನ (ಗ) 2 ಕೋಪ (ಗ)

ಯೆಂಬ ಬೆಟ್ಟವನೊಡೆಯದೆ, ಜಿನಪೂಜಾನಂದವೆಂಬನಳನಿಂ ಮಾನವೆಂಬ ಕರಡಮಂ ಸುಡದೆ, ಜಿನರೂಪದರ್ಶನವೆಂಬ [1] ಬಿಸಿಲಿಂ ದೋಷವೆಂಬ ತಿಮಿರವಮಂ ತೆಗೆಯದೆ, ಜಿನಲಕ್ಷಣನಿರೀಕ್ಷಣವೆಂಬ ಚಂದ್ರನಿಂ ದಂತರಾಯುವೆಂಬ ತಾವರೆಯುಂ ಮುಗಿಯಿಸದೆ, ಜಿನಭಕ್ತಿಯೆಂಬ ಸೂಡರಿಂ ದರ್ಶನಾವರಣೀಯವೆಂಬ ಕತ್ತಲೆಯುಂ ಪಿಂಗಿಸದೆ, ಜಿನತತ್ವವಿಚಾರವೆಂಬರಸನಿಂ ಜ್ಞಾನಾವರಣೀಯವೆಂಬಾಟವಿಕರನೋಡಿಸದೆ, ಜಿನಪದಸ್ನೇಹವೆಂಬ ದಂಡಿಂ ವೇದನೀಯವೆಂಬ ಗಡಿಯ ನಾಯಕರ ನಡಂಗಿಸದೆ, [2] ಜಿನಚರಣಾವಲಂಬನವೆಂಬ ಬಲದಿಂ ವಿಷಯವೆಂಬ [3] ಸೂಜಿಗಾಱರಂ ಕಾದಿ ಗೆಲದೆ, ಜಿನಸ್ತವನರುಚಿಯೆಂಬ ಮೇಘಗರ್ಜನೆಯಿಂ ನರಕಗತಿಯೆಂಬ ಹಂಸೆಯನಂಜಿಸದೆ, ಜಿನತತ್ವಾಕಾಂಕ್ಷೆಯೆಂಬ ಬಾಣದಿಂ ತಿರಿಕಗತಿಯೆಂಬ ಗುಱಿಯುಂ ಪಾಱಲೀಯದೆ, ಜಿನರಾರಾಧನೆಯೆಂಬ ಹಿಮದಿಂ ಮನುಷ್ಯಗತಿಯೆಂಬ ಬಾಳ ಸಹಕಾರಮಂ ಕಿಡಿಸದೆ, ಜಿನರ ನೆರೆವಿಯೆಂಬ ಚೇಣದಿಂ ದೇವಗತಿಯೆಂಬ ನಿಗಳಮಂ ಛೇದಿಸದೆ, ನೆರೆಮನೆಯವರಂ ಪಾವಂ ಪಿಡಿಯಿಮೆಂಬಂತೆ, ನೆರೆಗೆಯ್ಯವರಂ ಬಿತ್ತಿಕೊಡಿಮೆಂಬಂತೆ, ಸವತಿಯ ಮಗನಂ ಬೇಡಿಕೊಳ್ವಂತೆ, ಬಟ್ಟೆವೋಪರಂ ಪುಲಿಯನಿಱಿಯಿಮೆಂಬಂತೆ, ತಿರಿಯಬ್ಬಂದವರಂ ಕೂಱಿನಡಿಮೆಂಬಂತೆ, ಬರ್ದು [4] ಬಂದವಳಂ ಪೆಂಡತಿಯಾಗಿರೆಂಬಂತೆ, ಲೋಗರಂ ಮನೆಯಂ ಕಾದಿರಿಮೆಂಬಂತೆ, ನಿರ್ಬುದ್ಧಿತನದಿಂ ಪೆಱರನಗೆಂದಿರ್ದೊಡೆ ಶಾಶ್ವತಸುಖಂ ದೊರೆಕೊಳ್ಳದು. [ಮುನ್ನ ತನ್ನ ಮಾಡಿದ ಕರ್ಮದುದಯದಿಂದೆಯ್ದುವ ಸಾವುಮಂ ನೋವುಮಂ ಪೆಱರ್ಗಚ್ಚಿಕೊಳ್ಳಿಮೆಂದೊಡೆ ಪಚ್ಚಿಕೊಳ್ವರೆ? ಸದ್ಧರ್ಮಮಂ ಪೊರ್ದಿ ಸುಖಮಿರ್ಪೊಡಂ ಕುಧರ್ಮಮಂ ಪೊರ್ದಿ ದುಃಖಂಬಡುವೊಡಂ ತಾನ ಪೆಱರೊರ್ವರುಂ ಸಖಾಯರಲ್ಲರ್] ॥ ೯೨

1 ದರ್ಶನಹರ್ಷಚಿತ್ತದನವೆಂಬ (ಕ. ಬ.)

2 ಜಿನವಿಶ್ವಾಸವೆಂಬ ಬಿದಿಯಿಂ ನಾಮಕಳ್ಳರಂ ತೆಗೆಯದೆ ಜಿನಮಂದಿರಪ್ರದಕ್ಷಿಣವೆಂಬ ಗರುಡನಿಂ ಗೋತ್ರವೆಂಬ ಹಾವುಗಳ ವಿಷಮಂ ತೊಲಗಿಸದೆ ಜಿನಮತಾನುಕೂಲವೆಂಬ ಮಾಗಿಯಿಂದಾಯುಷ್ಯವೆಂಬ ಕೋಗಿಲೆಯಂ ಮಡಿಯಿಸದೆ (ಗ)

3 ಎಂಬ ಕೋಟೆಯಿಂ ಮಿಥ್ಯಾತ್ವವೆಂಬ (ಕ.ಬ.)   4 ಪಿದ್ದು (ಕ.ಬ.)

ರುಜೆಗಳೊದವಿಂ ದುಃಖವ್ರಾತಂಗಳಿಂ ಪೆಱರೊತ್ತಿನಿಂ
ಪ್ರಜೆಯ ಭಯದಿಂ ಪೊಣ್ಣಿಂ ಶೀತೋಷ್ಣದಿಂ ಕೆಲವಾಱನಿಂ
ಕುಜನನೆರವಿಂ ಸ್ತ್ರೀಯಿಂದತ್ಯಂತಮಿತ್ರರಗಲ್ಕೆಯಿಂ
ವಿಜಯರಳವಿಂ ಸಾವಿಂ ನೋವಿಂ ಮಹೀಶರ ಬಾಧೆಯಿಂ ॥ [1] ೯೮

ಅರಿಯ ಭಯದಿಂ ಮುಳ್ಳಿಂ ಕಲ್ಲಿಂ ಪ್ರಯಾಣದ ಪೀಡೆಯಿಂ
ಪರದಿನಳಿಪಿಂ ಮುನ್ನಂ ಕೊಂಡುಂಡ ಸಾಲದ ಚಿಂತೆಯಿಂ
ಭರದ ತೆಱೆಯಿಂ ಕೇಡಿಂ ದಾರಿದ್ರ್ಯದಿಂ ಪರಮಾನದಿಂ
ದುರಿತದೊದವಿಂ ದುಃಖಂ ಸಾರ್ಗುಂ ಮನುಷ್ಯರನೆಲ್ಲಿಯುಂ ॥ ೯೯

[ಮತ್ತಮವನಿಯಂ ಪೊಯ್ದು ಕಯ್ತಪ್ಪಿದೊಡಂ ತಪ್ಪುಗು, ತೀವ್ರಕರ್ಮೋದಯದಿಂದಡಸುವ ಸಾವುಂ ನೋವುಂ ಏಗೆಯ್ದುಂ ತಪ್ಪಲಱಿಯದಿದನಱಿವ ಮಹಾಪುರುಷಂಗೆ ಸಾವಿಂಗಂ ನೋವಿಂಗಮಂಜಲಾಗದೆನಗಿಂ ಮಹಾವೀರಸ್ವಾಮಿಯ ಚರಣಪಯೋಜಾತಂಗಳಂ ನೆನಯುತಿರ್ಪುದು ಕಜ್ಜಮೆಂದು ॥] ೧೦೦

ವೀರಸ್ವಾಮಿಯ ಪಾದಪ
ಯೋರುಹಮಂ ಬಂದಿವಿಡಿದು ಬಂಟಂ ಸೆಱೆಯಂ ।
ಧೀರತೆಯಿಂ ಪಿಡಿವಂತ ಕು
ಮಾರಕನುಂ ಪಿಡಿದನೇಕಚಿತ್ತದಿನಾಗಳ್ ॥ ೧೦೧

ಜಿನಪದಮಂ ಜಿನಮತಮಂ
ಜಿನರ ಗುಣೋನ್ನತಿಯನೆಯ್ದೆ ಜಿನಗೃಹಮಂ ಸ ।
ಜ್ಜನಚೈತ್ಯಮನನವರತಂ
ಮನದೊಳ್ ನೆನೆಯುತ್ತುಮಿರ್ದನಂತಿರ್ಪನೆಗಂ ॥ ೧೦೨

[ಆ ಪುರದ ದೇವತೆಗಳ್ಗಾಸನಕಂಪಮಾಗೆ ಸಮ್ಯಕ್ತ್ವಚೂಡಾಮಣಿಗುಪಸರ್ಗಮಾದುದನಱಿದು ಘೋರೋಪಸರ್ಗಮಂ ಪಿಂಗಿಸಲೆಂದು

[1] ವೃಜನದೊದವಿಂದುಃಖಂ ಸಾರ್ಗುಂ ಮನುಷ್ಯರನೆಲ್ಲಿಯುಂ (ಕ, ಬ.)

[2] ಕರ್ಮೋದಯದಿಂದೆಂತುಂ ದುಖಮುಂ ಮನಃಪೀಡೆಯುಮಕ್ಕುಮಿದಾವುದಾಶ್ಚರ್ಯಮೆಂದು ಬಗೆದು (ಗ)

ಬಂದು ಮುಂದಚಳಿತಮಲ್ಲನಾಗಿ ನಿಂದ ವಾತ್ಸಲ್ಯರತ್ನಾಕರನ ಮನದೊಳಾದ ಧೈರ್ಯಕ್ಕಾಶ್ಚರ್ಯಂಬಟ್ಟು] [1] ॥ ೧೦೩

ದುರಿತಾರಿಯನದಟಳಿದೋ
ಪರಿಸದೆ ನಿರ್ವೃತಿಗೆ ಸಲ್ವೆನಾನೆಂಬ ಮಹಾ।
ಪುರುಷಂ ಮನದೊಳ್ ಕುಂದದೆ
ಜರಿಯದೆ ಕಲಿಯೆನಿಸಿ ನೆಡೆಯದಿಂತಿರವೇಡಾ ॥ ೧೦೪

ಎಂದು ಕೈಗಳಂ ಮುಗಿದು ಪಲವುಂತೆಱದ ಪೊಗೞ್ತೆಗಳಂ ಪೊಗೞುತ್ತುಮಿರ್ದರನ್ನೆಗಂ ಮನದೊಳ್ಳೆನಿಸಪ್ಪೊಡಂ ಕರುಣಮಿಲ್ಲದೆ ನಿಷ್ಠುರರಪ್ಪ ತಳಾಱರ್ಕುಮಾರನಂ ನೆಲಕಿಕ್ಕುವಂತೆ ನೆಲಕಿಕ್ಕಿ ಗಜಱಿ[2] ಗರ್ಜಿಸಿ ನಿಶಿತಾಸ್ತ್ರಂಗಳನೊಱೆಯಿಂದುರ್ಚಿಕೊಂಡು ತಲೆಯಂ ದಡಿಯಿಂ ಪೊಯ್ಯುಂ ಕಿವಿಯಂ ಬಾಳಿಂ ಪೊಯ್ಯುಂ ಕೊರಲಂ ಸುರಿಗಿಯಿಂದರಿದುಂ ಮುಯ್ಯಂ ಕೊಳ್ಳಿಯಿಂ ಕರಿದುಂ ನಡುವಂ ಕೊಡಲಿಯಿಂ ಕಡಿದುಂ ತೋಳಂ ಗದೆಯಿಂ ಬಡಿದುಂ ಬೆರಲನುಳಿಯಿಂ ಕಡಿದುಂ ನೊಸಲನಂ ಬಿನಿಂ ಕೊಱೆದುಂ ತಳವಂ ಬಾಚಿಯಿಂ ಕೆತ್ತಿ ಮೊಳಕೈಯಂ ಕೊಂತದಿಂ ಕುತ್ತಿ ಬೊಬ್ಬಿರಿದು ನಾನಾಪ್ರಕಾರಮಪ್ಪ ಘೋರೋಪಸರ್ಗಂಗಳಂ ಮಾಳ್ಪುದುಂ, ಅಪಕ್ಕೆ ಕಳ್ವರಂ ಕಂಡಂತಳ್ಕದೆ ಕಣ್ಣೊಳಗಣ ಕಸವಿನಂ ತುಳ್ಕದೆ ನಡುವಿನಂತು ಬಳ್ಕದೆ ಪುರ್ವಿನಂತೆ ಕೊಂಕದೆ ತೆಱೆಯಂತೆ ನೊಂಕದೆ ಬೆಂಡಿನಂತೆ ತೇಂಕದೆ ಕೊಳ್ಪಟ್ಟರಂತೊಳಱದೆ ಭಯ ಮಾದರಂತೆ ಬೆಳಱದೆ ತರಗೆಲೆಯಂತೆ ತಳಱದೆ ಪುಲ್ಲೆಯಂತೆ ಬೆಚ್ಚದೆ ಪೊಲ್ಲರಂತೆ ಪಚ್ಚದೆ ಶುಭಧ್ಯಾನಾರೂಢನಾಗಿರ್ಪುದುಂ, ಸಮ್ಯಕ್ತ್ವಚೂಡಾಮಣಿಯ ದರ್ಶನಶುದ್ಧಿಗಂ ಸುಕವಿನಿಕರಪಿಕಮಾಕಂದನ ಜಿನಾಗಮದ ಪರಿಣತಿಗಂ ವಾತ್ಸಲ್ಯರತ್ನಾಕರನ ಶುದ್ಧಭಾವನೆಗಂ ಸಹಜಕವಿಜನ ಪಯಃಪಯೋಧಿಹಿಮಕರನ ಮನದ ಸ್ಥಿರತೆಗಂ ಸುಕವಿಜನಮನಃ

1 ನಾಗೇಂದ್ರನಾಸನ್ನಕಂಪದಿಂದರಿದು ಬಂದು ಕೊಲಲೆಂದು ಮುತ್ತಿಕೊಂಡಿರ್ದ ತಳಾಱರುಮಂ ನಿಶ್ಚಳನಾಗಿರ್ದ ಕುಮಾರನುಮಂ ಕಂಡು (ಗ)

2 ಎಂದು ಕೈಗಳಂ ಮುಗಿದು ವಾರಿಷೇಣಕುಮಾರನ ಧೈರ್ಯಮಂ ನೋಡಲೆಂದು ತಳಾಱಂಗೆ ಮಾಯಾನಿದ್ರೆಯನಿಕ್ಕಿ ತಾಂ ತಳಾಱರೂಪಂ ಕೈಕೊಂಡು ಗಜಱಿ (ಗ)

ಪದ್ಮನೀರಾಜಹಂಸನ ಸಂಸಾರಭೀತಿಗಂ ಜಿನಶ್ರೀಚರಣಾಲಂಕಾರಶೀರ್ಷನ ಶುದ್ಧಭಾವನೆಗಂ ಭಾವಯುತದಿಗಂಬರದಾಸನ ಪಂಚಪರಮೇಷ್ಠಿಗಳೊಳಾದ ಭಕ್ತಿಗಂ ನಗರದೇವತೆಗಳ್ಮೆಚ್ಚಿ [1] ಜಿನೇಶ್ವರನೆಂಬ ವಜ್ರಪಂಜರಮಂ ಪೊಕ್ಕಿರ್ದಂಗೆ [ಜಿನನಾಥನೆಂಬ ಬಲ್ಗೋ]ಂಟೆಯುಂ ಪೊಕ್ಕಿರ್ದಂಗೆಂ ಜಿನನಾಥನೆಂಬ ವಜ್ರಕವಚಮಂ ತೊಟ್ಟಿರ್ದಂಗೆ ಜಿನಾಧಿಪನೆಂಬ ಮಹಾದ್ರಿಯನೇಱಿರ್ದಂಗೆ ಜಿನಸ್ವಾಮಿಯೆಂಬ ಚಕ್ರವರ್ತಿಯುಂ ನಮ್ಮಿರ್ದಂಗೆ ಜಿನವಲ್ಲಭನೆಂಬ ವನದುರ್ಗಮಂ ಕೈಕೊಂಡಂಗೆ ಜಿನಪರಿವೃಢನೆಂಬ ಜಲದುರ್ಗಮನಾಶ್ರಯಿಸಿದಂಗೆ ಜಿನದೇವನೆಂಬ ಚಂದ್ರಬಲಮಂಬೆತ್ತಂಗೆ ಜಿನಪ್ರಭಾವನೆಯೆಂಬ ಭೂಬಲಮಂ ಪಡೆದಂಗೆ ಜಿನಕುಂಜರನೆಂಬ ರಸಾಯನಮಂ ಸಾಧಿಸಿದಂಗೆ ಜಿನಾಗಮಮೆಂಬಮೃತಮಂ ಸೇವಿಸಿದಂಗೆ ಜಿನಧರ್ಮನಿಧಾನಮನೊಳಕೊಂಡಂಗೆ ಜಿನಸೇವನೆಯೆಂಬ ನಿಧಿಯುಂ ಕಂಡಂಗೆ ಜಿನವ್ರತಮೆಂಬ ಕೈದುವಿನೊಳ್ ಪರಿಣತನಾದಂಗೆ ಜವನುಂ ಗಿವನುಂ ಕರ್ಮಮುಂ ಗಿರ್ಮಮುಂ ಬಿದಿಯುಂ ಗಿದಿಯುಂ ಧಾತ್ರನುಂ ಗಿಧಾತ್ರನುಂ ದೈವಮುಂ ಗಿಯ್ವಮುಂ ಪಾಪಮುಂ ಗೀಪಮುಂ ಮುಪ್ಪುಂ ಗಿಪ್ಪುಂ ಕುತ್ತಮುಂ ಗಿತ್ತಮುಂ ಸಾವುಂ ಗೀವುಂ ಪೀಡೆಯುಂ ಗೀಡೆಯುಂ ನೋವುಂ ಗೀವುಂ ಪುಟ್ಟುಂ ಗಿಟ್ಟುಮೆಂಬಿವೆಲ್ಲಮುಮೇನಂ ಮಾಡಲಾರ್ಪುವೇಗೆಯ್ವವೇನನೊಡರ್ಚುವುವೆಂದು ಜೋಡಾಡಿ ತಳಾಱರಿಱಿದೇಱಿಲ್ಲಮಂ ಮಕುಟಮಂ ಮಣಿಕುಂಡಲಮಂ ಹಾರಮಂ ಕೇಯೂರಮಂ ತೋಳ ಮಣಿಯುಂ ಕಂಕಣಮಂ ಮುದ್ರಿಕೆಯುಂ ಬ್ರಹ್ಮಸೂತ್ರಮಂ ದೇವಾಂಗವಸ್ತ್ರಮುಮಂ ಮಾಡಿ ಮತ್ತಂ ॥ ೧೦೫

[ಛಲದಿಂ ಪೂಣಿಸಿ ತಲೆಯುಂ
ಸೆರಗಿಲ್ಲದೆ ಪೊಯ್ಯೆ ನಗರದೇವತೆಗಳ್ಪು ।
ಷ್ಪ ರಮುಪ್ಪೇಱಿಂ ಮುದದಿಂ
ಸ್ಫುರಿಯಿಪ ಸದ್ರತ್ನಹಾರಮಂ ಮಾಡುವುದುಂ ॥ ೧೦೬

1 ಧರಣೇಂದ್ರಂಮೆಚ್ಚೆ (ಗ)

ಎರಡುಂ ಕೈಗಳುಮಂ ನಿ
ಷ್ಕರುಣೆಗಳಡೆಯಿಟ್ಟು ಕಡಿಯೆ ದೇವತೆಗಳ್ಕಾ ।
ಣ್ದಿರದಾಗಳ ಕಂಕಣಮಾ
ಗಿರೆ ಮಾಡಿದ ತೆಱನದವನಿಗಚ್ಚರಿಯಾಗಳ್ ॥ ೧೦೭

ಬೇಗಂ ಮಂಡೆಯುನಿರ್ಪೋ
ಱಾಗಿರೆ ಕರ್ಬುನದ ಡಂಕೆಯಿಂ ಪೊಯ್ವುದುಮಂ ।
ತಾಗಳ್ಕನಿಸೇಱಿಂ ಸ
ದಾಗ್ರಗದಿನೊಡನೊಡನ ಮಕುಟಮಂ ಮಾಡುವುದುಂ ॥ ೧೦೮

ಪರಸಿಂದಂ ನಡುವಂ ನಿ
ಷ್ಠುರಕೋಪರ್ಪೊಯ್ದು ನಗರದೇವತೆಗಳ್ವಿ ।
ಸ್ತರದಿಂದೇಱಿಂ ದಿವ್ಯಾಂ
ಬರಮಾಗೆ ಮಹಾನುರಾಗದಿಂ ಮಾಡುವುದುಂ ॥ ೧೦೯

ಎರಡುಂ ಕಿವಿಯುಮನೊಡನೊಡ
ನರಿಯೆ ಕೆಲರ್ಸೊರ್ಕ್ಕಿ ನಗರದೇವತೆಗಳ್ ಭಾ ।
ಸುರಕುಂಡಳಂಗಳಾಗಿರೆ
ವಿರಚಿಸಿದರ್ಸೋರ್ವು ಪೊರ್ದದಂತಾಗೇಱಿಂ ॥ ೧೧೦

ಅಂತಿಱಿದೇಱುಗಳೆಲ್ಲಮಂ ಹಾರಾದ್ಯಾಭರಣಂಗಳಾಗಿ ವಿರಚಿಸಿ ಸುಕವಿನಿಕರಪಿಕಮಾಕಂದಂಗೆ ವೇದನೆಯನೆಂತುಂ ಪೊರ್ದದಂತಾಗೆ ಮಾಡುವುದುಂ ದಂಡಧರರ್ತಮ್ಮಿಱಿದೇಱುಗಳೆಲ್ಲಂ ವಾರಿಷೇಣಕುಮಾರಂಗಾಭರಣಂಗಳಾಗೆ ಕಂಡು ನಿಲಲಣ್ಮದೆ ನಿನ್ನಲ್ಲಿಗೆ ಪರಿತಂದು ಮಹಾವಿಸ್ಮಯಮಂ ಪೇೞುತ್ತುಮಿರ್ದರನ್ನೆಗಂ ವನದೇವತೆಗಳುಂ ಪುರದೇವತೆಗಳುಂ ನೆರೆದು ॥] ೧೧೧

ರುಂದ್ರಜಿನಸಮಯವಾರಿಧಿ
ಚಂದ್ರನನಭಿಮಾನಧವಳನಂ ಧೈರ್ಯಸುರಾ ।

ದ್ರೀಂದ್ರೋಪಮನಂ ವಿಭವವಸು
ರೇಂದ್ರನನಘತಿಮಿರಪನೆಜಸಖಸನ್ನಿಭನಂ ॥ ೧೧೨

[ತಮ್ಮ ವಿಗುರ್ವಿಸಿದ ನಾನಾರತ್ನಖಚಿತಮಪ್ಪ ಸಿಂಹಾಸನದ ಮೇಲಿರಿಸಿ ಕಲ್ಪವೃಕ್ಷದ ಪುಷ್ಪಂಗಳಿಂ ಮನಪಾರೆ ಪೂಜಿಸಿ ಪೊಗೞುತ್ತುಮಿರ್ದರನ್ನೆಗಂ] ॥ ೧೧೩

ಸುರದುಂದುಭಿ ಪಲವುಂ ಭೋ
ರ್ಗರೆಯೆ ವಿಯತ್ತಳದೊಳಿರ್ದು ಮೆಯ್ಯಱಿಯದೆ ದೇ ।
ವರ ತಂಡಂ ಪೂವಿನ ಬ
ಳ್ಸರಿಯಂ ನೃಪಸುತನ ಮೇಲೆ ಕರೆವುದುಮಾಗಳ್ ॥ ೧೧೪

ಪುರಕ್ಷೋಭಮಾಗೆ ನೀಂ ಸಕಲಜನಪರಿವೃತನಾಗಿ ಬಂದು ಕುಮಾರನಂ ಪೂಜಿಸುವ ನಗರದೇವತೆಯುರುಮಂ ಜಯಜಯನಿನಾದದಿಂ ದಂಬರದೊಳಿರ್ದು ಮೆಯ್ಯಱಿಯದೆ ಪೊಗೞ್ವ ದಿವಿಜಸಮೂಹಮುಮಂ ಕಂಡು ಹರ್ಷಚಿತ್ತನಾಗಿ ಸಮ್ಯಕ್ತ್ವಚೂಡಾಮಣಿಯ ಚರಣಯುಗಳಮಂ ಚಂಪಕಾದಿಕುಸುಮಂಗಳಿಂದರ್ಚಿಸಿ ಸಹಜಕವಿಜನಮನೋಹರೋದ್ಯಾನವನಕಳಕಂಠನ ಧೈರ್ಯಮಂ ಬಣ್ಣಿಸುತಿರ್ಪನ್ನೆಗಂ ॥

ಮಂದರಾದ್ರಿನಿಭಕ್ಷಮಾನ್ವಿತನಂ ದೃಢವ್ರತನಂ ಮಹಾ
ನಂದದಿಂ ಸುರಕೋಟಿ ಬಣ್ಣಿಸಿದಪ್ಪುದೀಗಳ ಪೋಗಿ ನಾ
ಮುಂ ದಯಾಂಬುಧಿವಾರಿಷೇಣಕುಮಾರನಂ ನೆಱೆ ನೋೞ್ಪೆನಂ
ಬಂದದಿಂದುದಯಾಚಲಾದ್ರಿಯನೇಱಿದಂ ದಿನವಲ್ಲಭಂ ॥ ೧೧೫

ಅಂತಾದಿತ್ಯನುದಯಗಿರಿಗಜಾರೂಢನಪ್ಪುದುಂ ಕುಮಾರಂ ಪ್ರತಿಜ್ಞೆ ತೀರ್ದು ಕೈಯನೆತ್ತಿಕೊಳ್ವುದುಂ ಭಯಸ್ಥನಾಗಿ ನೀಂ ಕರಕಮಲಯುಗಳಂಗಳಂ ಮುಗಿದು] [1] ॥ ೧೧೬

---

1 ಹರಿವಿಷ್ಟರದೊಳ್ ಲೇಸಾ
ಗಿರಿಸಿ ಸುರದ್ರುಮದ ಪಾರಿಜಾತದ ಕುಸುಮೋ ।
ತ್ಕರಮುಂ ದೇವಾನಕಮುಂ

ಆನಱಿಯದೆ ಪಿರಿದಪ್ಪಪ
ಮಾನಮನೆನರಡಿಲ್ಲದಿಂದು ಮಾಡಿದೆನದನ ।
ಜ್ಞಾನಿಯ ತೆಱದಿಂ ಮನದೊಳ್
ನೀನಿರಿಸದೆ ಬಿಡುವುದವೆಳಗುಣಗಣನಿಳಯಾ ॥ ೧೧೮

ಎಂದು ಪೇೞ್ವುದುಂ ವಾರಿಷೇಣಕುಮಾರಂ [ಕಳಕಳಿಸಿ] ನಕ್ಕು ಮುನ್ನಮೆನ್ನ ಮಾಡಿದ ಪಾಪಫಲಮೀನವದಿಂ ಫಲಮನೀಯಲೆಂದು ಬಂದುದಕ್ಕೆ ನೀವೇಗುಪಿರಿ ? ಎಚ್ಚ ಂಗಾಱದಂಬಿಂಗೆ ಇಟ್ಟಂಗಾಱದೆ ಗುಂಡಿಂಗೆ ಪೆಂಡತಿಗಾಱದೆ ತೊೞ್ತಿಂಗೆ ಗವುಂಡಂಗಾಱದೆ ಬಾರಿಕಂಗೆ ಕಳ್ಳಂಗಾಱದೆ ಬಟ್ಟೆವ್ರೋಪಂಗೆ ಮಾಱಂಕಕ್ಕಾಱದೆ ಸಂಕದ ಗೊರವಂಗೆ ಬಂದಿಕಾಱಂಗಾಱದೆ ತಿರಿದುಣ್ಬಂಗೆ ಮನ್ನೆಯಂಗಾಱದೆ ತಳಾಱಂಗೆ ನೆರೆಗಾಱದೆ ಮಗಂಗೆ ಮುನಿವರೆಂಬ ನಾೞ್ನುಡಿಯಂತೆ ಕರ್ಮವಿರ್ದಂತೆ[ನಿಮಗೇಕೆ ಮುನಿವೆಂ ಮುನಿವೊಡೆ ದುಷ್ಕರ್ಮಕ್ಕೆ ಮುನಿವೆಂ ನೀವೆನ್ನ ಪೆರ್ಗಂ ಬಯಸು ವಿರಲ್ಲದೆ ಕೇಡಂ ಬಯಿಸಿರಿದೆಲ್ಲಂ ಕರ್ಮರಾಜನ ಪರಿಣತಿಯೆಂದು ನಿಮ್ಮ ಕಟ್ಟುಕಡಪಮಂ ಕಳಪೆಂದು ಮಹಾವಿಭೂತಿಯಿಂದರಮನೆಗೆ ವಂದು ಕತಿಪಯದಿನವಿರ್ದು ತನ್ನೊಳಿಂತೆಂದು ಬಗೆದಂ] [1] ॥ ೧೧೯

ಭರದೊಳ್ ಭೋರ್ಗರೆಯೆ ಸುರಿದು ಪರಮೋತ್ಸವದಿಂ ॥
ನಾನಾವಿಧರಿಂ ಧರಣೀಂದ್ರಂಬೆರಸು ದೇವನಿಕಾಯಂ ಪೊಗಳುತ್ತಿರ್ಪುದುಂ ॥
ಜಯ ಜಯನಿನಾದಮುಂ ಸಂ
ಶಯಮಿಲ್ಲದೆ ದಿವಿಜಪಟಹದುಲಿವುಂ ಸುರಕಾಂ ।
ತೆಯರ ಮೃದುಗಾನಮುಂ ವಿ
ಸ್ಮಯದಿಂ ಪೂರಿಸಿತು ಆಗಳಾಪುರವರದೊಳ್ ॥

ಆಗಳಾ ಕೋಳಾಹಳಮುಂ ನೀಂ ಕೇಳ್ದು ಚೋದ್ಯಂಬಡುತಿಪ್ಪನ್ನೆಗಂ ಮಾಯಾನಿದ್ರೆಯಿಂದೆದ್ದು ತಳಾಱರುಂ ಪುರಜನಂಗಳುಂ ಬಂದು ತತ್ಪ್ರಪಂಚಮೆಲ್ಲಮಂ ತಿಳಿದು ಬಿನ್ನಪಂ ಗೆಯ್ವುದುಂ ಚೇಳಿನಿಮಹಾದೇವಿವೆರಸು ಧರ್ಮಾನುರಾಗದಿಂದಂ ಕುಮಾರನಲ್ಲಿಗೆ ಬಂದು ಬಣ್ಣಿಸುವ ದೇವರುಮಂ ಪೂಜಿಸುವ ದೇವಕಾಂತೆಯರುಮಂ ಕಂಡು ಚಂಪಕಾದಿಕುಸುಮಂಗಳಿಂದರ್ಚಿಸಿ ಕಾಲ ಮೇಲೆ ಬಿದ್ದು (ಗ).

1 ನಿಮಗೆ ಮುನಿವನಲ್ಲೆಂದು ತಂತಮ್ಮ ಮನದ ಕಟ್ಟುಕಡಹನುಮಂ ತಳೆಗದುವೆ ನಿರ್ವೇಗವಾಗಿ ಚೇಳಿನಿಮಹಾದೇವಿಯುಂ ನಿನ್ನ ಮೊಗಮಂ ನೋಡಿ (ಗ)

ಮುನ್ನನೇಕಭವಂಗಳೊಳ್ ತಿಗಟ್ಟ್ ಪಾಪದ ಬಿಣ್ಪಿನಿಂ
ದೆನ್ನ ನಂದನನೆನ್ನ ಪಂಕ್ತಿಯೆನ್ನ ಬಾಂಧವರೆನ್ನ ಪೈ ।
ಯೆನ್ನ ಗೋತ್ರಾಲಸ್ ಇವು ಧರ್ಮದ ಬಟ್ಟೆಗಾಣದೆ ಮೋಹದಿಂ
ದಿನ್ನಗಂ ಭವವಾರ್ಧಿಯೊಳ್ ತಿರಿದೇಂ ಮನಂ ಮುರಿಪನ್ನೆಗಂ ॥ ೧೨೦

ಎಲ್ಲಿಯುಂ ಜಿನಧರ್ಮಮಂ ಜಿನವಾಕ್ಯಮಂ ಜಿನತತ್ತ್ವಮಂ
ಕಲ್ಲದೆ ಕ್ಲಿಗೆ ಪೊರ್ದದೇಳಿಸಿ ತೃಪು ಯೊಡಿಸಿ ಪಾಪದಿಂ
ದೆಲ್ಲಿಯುಂ ನರಕ ದಮಃಖಮನುಂಡು ಕಂಡು ಬಳಲ್ದು
ಬಂದಿಲ್ಲ ತೊಟ್ಟನೆ ಪುಣ್ಯದಿಂ ಪಡೆ ಪೊರ್ದದೆಂ ಜಿನಧರ್ಮಮಂ ॥ ೧೨೧

ಇನಿತ್ತು ವನೇಳಿಸಿ ರಾಜ್ಯಾಭಿಲಾಷಯಿಂದಿರ್ದನಪ್ಪುಡೆ ಮದುಪಯ ರಾಗದಂತೆ ಸುಗ್ಗಿಯ ಮಪ್ಪಂತೆ ಕಬ್ಬಿನ ಗಾಣದಂತೆ ಪಾಡುವ ರಾಗದಂತೆ ಬಳೆಂಬವ ಪವನದಂತೆ ಜನ್ನೆಯ ಮೊಱೆಯಂತೆ ಬಾಂಟವ ಕೊಂಡಾಟದಂತೆ ಸಂಧ್ಯಾಭ್ರವರ್ಣದಂತೆ ಬಿರ್ಗನಿಕ್ಕೆಯಂತೆ ಮದನಳಿಗೆಯ ಪೊಳೆಯಂತೆ ಮೃಗತೃಷ್ಣೆಯಂತೆ ಬೆಳಗ ಕೆಸ್ಸ ರಂಜನಯಂತೆ ತಂಬುಲದ ರುಚಿಯಂತೆ ತಳೆಯ ಕಣ್ಣನಂತೆ ಕೇರ ಚಿತ್ರದಂತೆ ಪೂವಿನ ಬಣ್ಣದಂತೆ ತಳಿಪದ ಟಿಕ್ಕನಂತೆ ಮಿಂಚಿನ ಮನ್ನಣೆಯಂತೆ ಬಾಳಿನ ಡೊಳ್ಳಿನಂತೆ ಸೂಳೆಯ ಕರೆಪದಂತೆ ಕುಂಟಣಿಯ ಕುರ್ಮಯಂತೆ ಪಶುವಿನ ಕರಪದಂತೆ ದೀವಳಿಗೆಯುಂಬಿಸದಂತೆ ಬೂತಿನ ಪೂಗಸ್ತೆಯಂತೆ ಪಕ್ಷಿಂಗಳೊಪ್ಪದಂತೆ ತಪಸ್ವಿನಯಿರಪಿನಂತೆ ಸೋಂತೆಯ ತೋಂಬದಂತೆ ಕಡೆಯೊಳ್ ಪೇಸುವ ಪಥಮುಮನೊಳ್ಭಯಮುಮಾಗದೆ ಪೋಗದದು ಕಾರಣದಿಂ ರಾಜ್ಯಾಂಗನೆಯ ಮೋಹ [ದಿಂದುದಾಸೀನಂ ಮಾಡಿದನಪ್ಪುಡೆ ನಾಯ್ವಾಲವಂ ಪಿಡಿದು ತೊಱೆಯಂ ಪಾಯ್ವ ಜಡನಂ ಪೋಲ್ವೆನನಗೀ ಶಾಶ್ವತಮಪ್ಪ ಸುಖಮನೀವ ಜಿನದೀಕ್ಷೆ ಬಲ್ವಿಡಿವೆನೆಂಬ ಬಗೆಯುಂ ತಂದು ಚೇಳಿಸಿ ಮಹಾದೇವಿಯ][1] ನೊಡಂಬಡಿಸಿ ಪೋಗಿ ಪುಷ್ಪಗಿರಿಯೆಂಬ ಪರ್ವತಮೂರ್ಧದ ಸುಮದೇವರೆಂಬಾಚಾರ್ಯರಲ್ಲಿ ಜಿನದೀಕ್ಷೆಯಂ[ಕೈಕೊಂಡು ಉಗ್ರೋಗ್ರತಪದೊಳ್ ನೆಗಳುತ್ತುಮಿರ ॥][2] ೧೨೨

---

1 ... ಲ್ಲಿ ದಿವಸಂಬಮನೊಂಬಡಿಸಿ (ಗ)   2 ಕೈಕೊಳ್ವುದುಂ (ಗ)

ಆವಾರಿಷೇಣಮುನಿಗ ಮ
ಹಾವಿಭವದ ಜಂಘೆಚಾರಣತ್ವಂ ಪುಟ್ಟಿ ।
ತ್ತೇಪೇೞ್ವುದೊ ಜಗದೊಳ್ ಜಿನ
ಸೇವನೆಯಿಂದಿರ್ದವೆಂಗಿದಾವುದುಗಹನಂ ॥ ೧೩೩

ಅಂತು ಜಂಘೆಚಾರಣಬುದ್ಧಿ ಪ್ರಾಪ್ತನಾಗಿ [ದ್ವಾದಶತಪೋನುಷ್ಠಾನನಿರತನುಂ ತ್ರಿದಂಡರಹಿತನುಂ ತ್ರಿಶಲ್ಯದೂರನುಂ ತ್ರಯೋದಶವಿಧಚಾರಿತ್ರಸಂಪನ್ನನುಂ ಅಷ್ಟಾವಿಂಶತಿಮೂಲಗುಣಯುಕ್ತನುಂ ದಶಧರ್ಮಸಮೇತನುಂ ಚತುಃಕಷಾಯಾಂತಕನುಂ ರಾಗದ್ವೇಷಮೋಹವಿವರ್ಜಿತನುಮಾಗಿ ತಪದೊಳಿರ್ಪಾದ್ಯುತ್ತರಂ ನೆಗೞುತ್ತುಮಿರ್ದೊಂದು ದಿವಸಂ ಭಾಂಡಿಲನೆಂಬ ಪುರೋಹಿತಂಗಮಾತನ ಪೆಂಡತಿ ಪುಷ್ಪವತಿಯೆಂಬ ಪಾರ್ವತಿಗಂ ಪುಟ್ಟಿದ ಮಗಂ ವ್ಯಾಕರಣಾದಿ ಶಾಸ್ತ್ರಂಗಳೊಳ್ ಕುಶಲನಪ್ಪ ಪುಷ್ಪಡಾಡನೆಂಬ ಬಾಳಸಖಾಯುಂ ಸುದಂತಿಯೆಂಬ ಬ್ರಾಹ್ಮಣಿಯೊಳ್ ಮದುವೆಯಾಗಿರ್ದನೆಂಬುದಂ ಕೇಳ್ದು ತನ್ನೊಳಿಂತೆಂದಂ][1] ॥೧೩೪

ಕುರುಡಕರ್ದಳಿಯೊಳ್ ಕೆಡೆದೊಡೆ
ಕರುಣಿಸಿ ತೆಗೆವವನೆ ನಂಟನಘವಶದಿಂದಂ ।
ನರಕಗತಿಗಿೞಿವಜೀವೋ
ತ್ಕರಮುಮನೊಳ್ಗತಿಗೆ ತರ್ಪೊಡಾತನೆ ಕೆಳೆಯಂ ॥ ೧೩೫

ಅಂದಸಿಗಘವಶದಿಂದಂ
ತಿರಿಪ ಮನುಷ್ಯರನುಪಾಯದಿಂ ಸದ್ಧರ್ಮ ।
ಕ್ಕುರುಮುದದಿಂ ತರ್ಪ ಮಹಾ
ಪುರುಷನ ಕಲ್ಯಾಣಮಿತ್ರನವನೀತಳದೊಳ್ ॥ ೧೩೬

1 ತಪದೊಳುತ್ತರೋತ್ತರಂ ನೆಗೞುತ್ತುಮಿರ್ಪುದುಂ ಭಾಂಡಿಲನೆಂಬ ಪುರೋಹಿತನ ಮಗಂ ಪುಷ್ಪಡಾಳಂ ತರ್ಕವ್ಯಾಕರಣಾದಿಶಾಸ್ತ್ರಂಗಳೊಳತಿ ಕುಶಲನುಂ ಪೊಸಮದುವನಿಗನೆನ್ನ ಕಿರಿಯಂದಿನ ಕೆಳೆಯ ವಾರಿಷೇಣಕುಮಾರಂ ತಪಂಬಟ್ಟಿರ್ದಪನಾತನಂ ನೋೞ್ಪುವೆನೆಂದು ಬಂದು ವಾರಿಷೇಣಮುನಿಪನಂ ಕಂಡು ಪೊಡಮಟ್ಟು ಕುಳ್ಳಿರ್ಪುದುಂ ತನ್ನೊಳಿಂತೆಂದು ಬಗೆದಂ (ಗ)

ಎಂದು ಭಾವಿಸಿ ಪುಷ್ಪದಾಡನಂ ಚತುರ್ಗತಿಸಂಸಾರದಿಂ ಪೊಱಮಡಿಸಿ ಪಂಚಮಗತಿಯನೆಯ್ದಿಸುವನೆಂಬ ಸಮ್ಯಕ್ತ್ವಂಪಾತ್ರನ [ಮನೆಗೆ ವಂದು ಪೊಸಮದವಳಗೆಯ ಕೆಲದೊಳಿರ್ದ ಪುಷ್ಪದಾಡನಂ ಕಂಡು] ಕಯ್ಯಂ ಪಿಡಿದೊಡಗೊಂಡು ಬಂದು ತಮ್ಮ ಗುರುಗಳ್ಗೆ ಪೊಡೆವಡಿಸಿ ನಿಮ್ಮಡಿ ಚಿತ್ತೈಸಿ ಕೇಳಿಮೀತಂ ಸಂಸಾರ [ಭೀರುವಾಗಿ ಜಿನದೀಕ್ಷೆಯಂ ಬಯಸಿ] [1] ಬಂದನೀತಂಗೆ ದೀಕ್ಷೆಯಂ ಪ್ರಸಾದಗೆಯ್ವುದೆಂಬುದುಂ ॥ ೧೨೭

ಜಿನದೀಕ್ಷೆಯನಾತಂಗಾ
ಮುನಿಪಂ ಕಾರುಣ್ಯದಿಂದೆ ಕುಡೆ ಕೊಂಡಂ ನೆ ।
ಟ್ಟನೆ ವಾರಿಷೇಣಮುನಿಪಂ
ಮುನಿದೊಡೆ ಪೊಲ್ಲೆಂದು ಮನದೊಳಳ್ಳಿಕ್ಕುತ್ತುಂ ॥ ೧೨೮

ಅಂತು ಮನವಲ್ಲದ ಮನದೊಳ್ ಜಿನರೂಪಧಾರಿಯಾಗಿ ತನ್ನ ಮದವಳಗೆಯ ಮೇಲೆ ಚಿತ್ತಮಿಟ್ಟು ಬಸವನಗಲ್ಕಾನೆಯಂತೆ ದೂರಿಸುತ್ತುಮಿರ್ಪುದುಂ ವಾರಿಷೇಣಮುನಿ ಪುಷ್ಪದಾಡನ ಮನಮನಱಿದು ತನ್ನೊಳಿಂತೆಂದಂ [2] ॥ ೧೨೯

ಕುಡಿಯಲೊಲ್ಲದು ಪಾಲನೆಂದೊಡೆ ಕೂಸನೊಲ್ಲದೆ ನೊಂದು ತಾಯ್
ಬಿಡುವಳೇ ಮುನಿಸಿಂ ಧರಿತ್ರಿಯೊಳಿಂತ ಸೋಲದ ವಿವೇಕಿಯುಂ
ಜಡರನುಕ್ಕೆವರಂ ಮಹಾದುರಿತಾಸ್ರವಾತ್ಮಕಕಾಳನೊಳ್ ತಂ
ನುಡಿದು ಬೇಸಱದೆಯ್ದೆ ತಿರ್ದುಗು ಧರ್ಮಮಂ ತಿಳಿವನ್ನೆಗಂ ॥ ೧೩೦

[ಅದುಕಾರಣದಿಂದಘವಿಕಾರದಿಂ ವಿಭ್ರಾಂತ್ಯಯುಪ್ಪೀತನುಮನೇನೆಂದೇಳಿಸಿ ಬಿಡದೆ ಸದ್ಧರ್ಮದೊಳ್ ದೃಢನಪ್ಪಂತು ಜಿನಾಗಮೋಕ್ತಿಯನಱಿಯೆ ತಿಳಿಪಿ ನಿರಂತರಸುಖಮನೀವ ತಪದೊಳ್ ಸತ್ತುಸುವೆನೆಂದು ಪುಷ್ಪದಾಡಂಗಿಂತೆಂದಂ] [3] ॥ ೧೩೧

1 ಸಂಸಾರಕ್ಕೆಪೇಸಿ (ಗ)

2 ಜಿನರೂಪಧಾರಿಯಾಗಿ ತನ್ನ ಪೊಸಮದವಳಗೆಯಪ್ಪ ಸೌಂದರಿಯುಂ ನೆನೆಯುತ್ತುಮುತ್ತಲೆ ಚಿತ್ತವಗಿರ್ಪುದಂ ವಾರಿಷೇಣಮುನೀಶ್ವರನಱಿದು ತನ್ನಂತರ್ಗತದೊಳಿಂತೆಂದಂ (ಗ) 3 ಎಂದು ಪುಷ್ಪದಾಡನಂ ಜಿನಾಗಮೋಕ್ತಿಗಳಿಂ ತಿಳಿಪಿ ತಪದೊಳ್ ದೃಢಮಾಡುವೆನೆಂಬ ಬುದ್ಧಿಯಿಂದಿಂತೆಂದು ಪೇಳಲೊಡಗಿದಂ (ಗ)

ಸಿರಿಯಿಲ್ಲಾ ಬೆಸಕೆಯ್ವ ನಾಡು ಕಿಱಿದೇಂ ತಮ್ಮಿಂದಮುರ್ವೀಶ್ವರರ್
ಪಿರಿಯರ್ ಪೇೞೆಂ ಮಹಾಬಲಯುತರ್ ಭೋಗಾನ್ವಿತರ್ ಧಾರಿಣೀ
ಶ್ವರನಾಮಕ್ರಮರಪ್ಪ ಚಕ್ರಧರರುಂ ರಾಜ್ಯಂಗಳಂ ಬಿಟ್ಟು ಸಿ
ಷ್ಟಗನುಪ್ಪುಗ್ರತಪಕ್ಕೆ ತಂದರೊಳಂ ಸಾಮಾನ್ಯಮೇ ಕೇಳ್ ಸ್ವಸಂ ॥ ೧೩೨

ಭರತಂ ಷಟ್ಖಂಡವಸುಂ
ಧರೆಯುಮನೊರ್ವಂದಲೆ ಬಿಟ್ಟು ಜಿನಸದ್ರೂಪಂ ।
ಧರಿಯಿಸಿದನೆಂದೊಡುೞಿದರ
ಸಿರಿಯುಂ ಸಂಪತ್ತುಮೞವು ಬಳವುಂ ಪಿರಿದೇ ॥ ೧೩೩

[ಸ್ಮರರೂಪಂ ನೃಪವೆಂದಿತಂ ಸಕಳಷಟ್ಖಂಡಾವನೀವಲ್ಲಭಂ ಸ್ಥಿರಚಿತ್ತಂ ಪ್ರಭು ಚಕ್ರವರ್ತಿ ತಿಳಕಂ ಶಾಂತೀಶನುತ್ತುಂಗಂ ಡರುಮಿಂ ಸಂಸ್ಕೃತಿಗಳ್ಕಿ ಬಳ್ಕಿ ಸುಗತಿಶ್ರೀಕಾಂತೆಯೊಳ್ ನಲ್ಕಲಿಂ ದರಿದಪ್ಪುಗ್ರತಪಕ್ಕೆ ತಂದರೊಡಂ ಸಾಮಾನ್ಯಮೇ ಪೇೞ್ ಸ್ವಸಂ] ॥ ೧೩೪

ಬೇಸಱದಲಸದೆ ಕುದಿಯದೆ
ಸೋಸಪಯಂ ಕುಡಿದರಂತೆ ಮಱುಗದೆ ತಪದೊಳ್ ॥
ಸಾಸಿಗನಾಗಿರ್ದುಂ ಗುಣಾ
ಭ್ಯಾಸಂಮಾಡ್ತಂಗ ತಡೆಯುಂ ಮೆಯ್ಯದು ಮೋಕ್ಷಂ ॥ ೧೩೫

[ಪಱುಗೋಲ ಪನ್ನಿಕೋಲಿಂದಂ ದೋಣಿಯೊಕ್ಕೋಲ್ ಲೇಸೆಂಬಂತೆ ಮನುಷ್ಯಲೋಕದೊಳಪ್ಪ ಶತಸಹಸ್ರಲಕ್ಷಕಾಲಭವಂಗಳೊಳಾದ ಸುಖವೆಲ್ಲಂ ಸ್ವರ್ಗದೊಳಾದ ಮಹಾಪದವಿಗಳಿಗೆಯು ಸುಖಮಂ ಪೋಲವೆಂದೊಡೆ ಉತ್ತಮಮಪ್ಪ ಜಿನರೂಪಿಂದ ಸಂತತಮಪ್ಪ ಸುಖಂ ದೊರೆಕೊಳ್ಗುಮದಕ್ಕುಸುಮಾತನೆ ಗಾಮಿಲಂ] [1] ॥ ೧೩೬

1 ಪಱುಗೋಲ ಪನ್ನಿಕ್ಕೋಲಿಂದ ದೋಣಿಯೊಕ್ಕೋಲು ಲೇಸೆಂಬಂತೆ ಪೆಱರ ಶತಪ್ರಪಂಚಕೋಟಿಭವಂಗಳೊಳಾದ ತಪವೆಲ್ಲಂ ಜಿನರೂಪಿನರಥಳಿಗೆಯ ಫಲಮನಿತಕ್ಕಂ ಬರಲಾಱದಂತಪ್ಪ ಜಿನರೂಪಂ ಕೈಕೊಂಡುಮೇಳಿಸಲಾಗದು (ಗ)

ತಪಮನೆ ಪೊಱಪ್ಪುದು ಬೞಕ್ಕಾದೆ
ತಪದಿಂದಂ ಸಕಲರಾಜ್ಯಮುಂ ಕೈಸಾರ್ಗುಂ ।
ತಪದಿಂ ನಿರ್ವೃತಿಯಕ್ಕುಂ
ತಪದಿಂ ಪರಿಹರಿಸುಗುಂ ಸಮಸ್ತಾಘೌಘಂ ॥ ೧೩೭

[ದಿವ್ಯಾಹಾರಮುಮಂ ಕೂರ್ಪ ಪೆಂಡತಿಯುಮಂ ಸುಗಂಧದ್ರವ್ಯಂಗಳುಮಂ ಪೆಱರ ಮೇಲೆ ಬಿಟ್ಟನಗಾಗೆ ನೀಮುಣ್ಬುದು ನೀಮನುಭವಿಸುವುದು ನೀಮುಪಭೋಗಿಸುವುದೆಂಬನುಂ ಧರ್ಮಮುಮಂ ದಾನಮುಮನೋದುಮಂ ತಪಮುಮಂ ತಾನಲಸಿ ಪೆಱರಿಂ ಮಾಡಿಸುವನುಂ ಫಲಪ್ರಾಪ್ತಿಯನೆಯ್ದಲಾಱಂ] ॥ ೧೩೮

ಬಹಲಪ್ರೊಪ್ತಶುಚಿ ಸಿಲ್ಲದು
ಪಡಿಕೆ ಕರಂ ಜಂತಿನಾಗರಂ ಪರ್ವೇೞ ।
ಪೆರ್ಡೆ ಕ್ರಿಮಿಯ ರಾಶಿ ಮೂತ್ರದ
ಮಡಕೆಯುದಂ ನಂಬಿ ಚಪಳರೇಕೆಯೊ ಕಿಡುವರ್ ॥ ೧೩೯

ಪೆಱತೇನೊ ಪಲವುದಿವಸಂ
ಪೊಱಗಿರ್ದೊಡೆ ಕಿಡದ ವಸ್ತುಗಳ್ತನುವಿಸಿದಂ ।
ನೇಱೆ ಪೊರ್ದಿದಸಿತಱೊಳ್ ಪೊ
ಚ್ಚಱುಗೆಟ್ಟು ಮಲಂಗಳೆಂಬ ಪಸರಂ ಪಡೆಗುಂ ॥ ೧೪೦

[ಮಡಕೆಯೊಳನಿಸುಬೇಗಮಿದ್ದೊಡಂ ಕೂೞುಸೆಂಜಲೆನ್ನರ್ ಪೇಸದುಂಬರಂಜದೆ ಮುಟ್ಟುವರಾಕೂೞಂ ಮಾನಿಸರ್ಮುಟ್ಟಿದಸಿತಱೊಳ್ ಗುಣಂಗೆಟ್ಟೆಂಜಲಪ್ಪುದುಂ ಪೆಱಮುಟ್ಟಿನೋಪುದಱಿಂ ಶರೀರಂ ಪೊಲ್ಲದೆಂಬುದಲ್ಲದೆ ಶುಚಿಯೆನಲಾಗದು ॥ ೧೪೧

ಎರಡುಂಕೈಗಳನಾಗಳು
ಮೊರಸುತುಮುದ್ವರ್ತ್ತಮಿರದೆ ಲೇಸಲ್ಲದೊಡೀ ।
ಪುರುಳಿಲ್ಲದನಾಯೊಡಲಂ
ಮರುಳೇ ಕರಮೊಲ್ದು ಕೂರ್ಪ ಮಾನಿಸರೊಳರೇ ॥ [1] ೧೪೨

1 ಲೇಸೆಂದುಪೊರ್ದಾವನ್ನರುಮೊಳರೇ (ಗ)

ಎಳೆಯಿಂ ಬಾಯ್ ಮುಡಿಯಿಂದಂ
ತಲೆ ಸೀರೆಯಿನಂಗಮೆಸೆಗುಮಿಂತಿವು ಪಿಂಗಲ್ |
ಕೊಳೆವೊಡಲಂ ಕ್ರಿಮಿರಾಶಿಯು
ನೆಲೆ ಮೋಣದೆ ಸೋಲ್ತು ಪೊರ್ದುವನ್ನರುಮೊಳರೇ || ೧೪೩

ಉಗುಳುಂ ಪೇಲುಂ ಸಿಂಬುಳ
ಮಗಲಿರ್ದುವನೆಯ್ದೆ ನೋಡಿ ಪೇಸುವರಂತ |
ಪುಗುಳಿಂ ಪೇಲಂ ಸಿಂಬುಳ
ಮಗಲದೆ ಪೊತ್ತಿರ್ದ ತನುಗೆ ಪೇಸವರೊಳರೇ || ೧೪೪

ತನುವಪ್ಪೊಡೆ ಪೊಲ್ಲದು ಜೌ
ವನಮಪ್ಪೊಡೆ ಪಲವುಕಾಲಮಿರಲಱಿಯದು ಕಾಂ |
ಚನಮಪ್ಪೊಡೆ ದಾಯಿಗರಿಂ
ದನುನಯದಿಂ ತಕ್ಕರಿಂದಮೆಱುವುದು ಜೀಗಂ || ೧೪೫

ವನಿತೆಯರುಂ ತಾಯುಂ ಬಂ
ಧುನಿಕಾಯಮುಮಾತ್ಮಜಾತರುಂ ತಂತಮ್ಮಿಂ |
ಬನೆ ಬಗೆವರಲ್ಲದೆಂತುಂ
ತನಗಪ್ಪರೆ ನರಕಗತಿಗೆ ಪೋಪವಸರದೊಳ್ || ೧೪೬

ನೆರೆದಿರ್ದ ನಂಟರುಂ ಪೆಂ
ಡಿರುಮಯ್ಯನುಮಿರ್ದು ಪಚ್ಚುಕೊಳ್ವರೆ ನೋವಂ |
ಮರಣಮನೊತ್ತುವ ರುಜೆಯಂ
ಕರುಣಿಸಿ ಬೆಱಗೇಕೆ ಮುಯ್ವನಾಂಪರೊ ಕೆಳಬರ್ || ೧೪೭

ಕರವೊಪ್ಪೆ ಮೂಱುಕೋಟಿಯು
ಮರೆನಂಟರುಮಿರ್ದು ಕಾಯಲಾರ್ತರೆ ಚಕ್ರೇ |
ಶ್ವರನಿರವಿಂತುಟು ಕೆಳಬರ್
ಪರಮಾರ್ಥಂಕಂಡು ನಂಟರಂ ನಂಬಿರ್ಪರ್ || ೧೪೮

ಲಂಕೆಯ ದೊರೆಯ ಮಹಾನಗ
ರಂ ಕೋಂಟೆ ಸಮಸ್ತವಿದ್ಯೆಗಧಿಪತಿ ತಾನುಂ ।
ಪಂಕಲಿ ಯೆನಿಸಿದ ರಾವಣ
ನಂಕದೊಳೇನಣ್ಣ ರಾಮನಂ ಗೆಲ್ದಪನೇ [1] ॥ ೧೪೯

ತುಪ್ಪದ ಮೋಹಕ್ಕೆಯಮೇಧ್ಯಮಂ ಕೊಂಡಂತೆ [2] [ಪೊನ್ನ ಮೋಹಕ್ಕೆ ಬಾವಿಯೊಳ್ಕೈಯುಂ ನೀಡುವಂತೆ] ಪೆಂಡಿರ ಮೋಹಕ್ಕೆ ಸಾವಯುಂ ಪೊಯ್ವಂತೆ ಮಕ್ಕಳ ಮೋಹಕ್ಕೆ ಕಿರ್ಚುಂ ಪೊಯ್ವಂತೆ ನಂಟರ ಮೋಹಕ್ಕೆ ಪುಲಿಯುಂ ಪಿಡಿವಂತೆ ಮಾನಿಸವಾಳ ಮೋಹಕ್ಕೆ [ಸಂಸಾರದೊಳಾದ ಭೋಗಕ್ಕಳಪಿ ಪಿರಿದಪ್ಪ ಸುಖಮಂ ಮಾಳ್ಪ ತಪಮಂ ಕಿಡಿಸಿ ನರಕದೊಳಾದ ಮಹಾದುಃಖಕ್ಕೊಳಗಾಗವೇಡ[3] ॥೧೫೦

ಈಸಿರಿಯಿಾತನುವೀಧನ
ಮಾಸತಿ ಮತ್ತೀವಿಲಾಸಮತಿವಿಭವಂ ಕೇ ।
ಳೀಸುಖಮಿಾನೆಲನೀಮನೆ
ಯೀಸುತರೆಲೆ ಸಿತ್ಯಮೆಂದು ಪದೆವನೆ ಗಾಂಪಂ ॥ ೧೫೧

ಬಱುಮೞಲಂ ಪಿಡಿದೊಡೆ ನಿಲ
ಲಱಿಗುಮೆ ತಳದೊಳ್ವಿವೇಕಿಯಲ್ಲದ ನರನುಂ ।
ಮಱುಗಿದೊಡೆ ಮಱುಕಮಲ್ಲದ
ಪೆಱತೇಂ ಸಂಸಾರದಲ್ಪಸುಖಮಿರ್ದಪುದೇ ॥ ೧೫೨

[ಬಂದುಮೆರುಷದಾರಂಬಕಕ್ಕಾಱದೆ ಸಾವನ್ನೆ ಮರಮಂ ಜಲಗುಱಿನಾ ಯುದ್ಧಕ್ಕಾಬಿಕ್ಕಲಮೆಗನುಪೊಂದುಭಪದ ತಪಕ್ಕಾಱದೆ ಪಲವುಭವಂ ನರಕತಿರಿಕವೇದನೆಯನುಣ್ಬ ನರನುಂ ಬುದ್ಧಿವಂತರಲ್ಲರ್] ॥ ೧೫೩

---

1 ರಾವಣನುಂ ಕಾಲನ ಕೊಳನೇನೊ ಗೆಲ್ದನೊ ಮತ್ತಂ (ಕ. ಖ.)

2 ನಂಜಂ ತಿಂಬಂತೆ ಬಾಳ ಮೋಹಕ್ಕೆ ದಕ್ಕಸಿಯು ನೇವಂತೆ ಬೆಲ್ಲದ ಮೋಹಕ್ಕೆ ಸುರಗಿಯುಂ ನಕ್ಕುವಂತೆ ಪಶುವಿನ ಮೋಹಕ್ಕೆ ಕಳ್ಳರೊಡವೋವಂತ ನಿದಾನದ ಮೋಹಕ್ಕೆ ತಲೆಯುಂ ಕೊಡುವಂತೆ (ಗ)

3 ಧರ್ಮವುಂ ಬಿಟ್ಟು ನರಕಮುಂ ಪೋಗಲುವೇಡಾ (ಗ)

ತರುಣಿಯರೆಂಬ ಪೆರ್ಬುಲಿಗಳಂ ಹರಿಣಾಕ್ಷಿಯರೆಂಬ ಕ್ರೂರಸೀ
ರ್ಕರಡಿಗಳಂ ಲತಾಲಲಿತಗಾತ್ರೆಯರೆಂಬ ಮಹೋರಗಂಗಳಂ
ಸ್ಮರಶರದಿಂದೆ ಮೆಯ್ಯುೞಿಯದೊಯ್ಯನೆ ಪೊರ್ದಿದರಪ್ಪೊಡಟ್ಟಿ ಚೆ
ಚ್ಚರಮುಱಿದೊತ್ತಿ ಮುಟ್ಟಿ ಪುಡಿಯಾಗಿರೆ ತಿನ್ನದೆ ಪೋಗಲೀವರೇ॥೧೫೪

ಮತ್ತಂ ವನಿತೆಯರ ತೋಳಂ ಕಾಮನ ಮಸೆದ ಬಾಳನ್ನದೆ ಲತೆಯೆಂದೊಡಂ, ಲಲನೆಯರ ಕಡೆಗಣ್ಣ ನೋಟಮಂ ಮನಸಿಜನ ಕಯ್ಯ ಪಾಶಮನ್ನದೆ ನಗೆಗಣ್ಣೆಂದೊಡಂ, ಕಾಂತೆಯರ ಮೆಲ್ನುಡಿಯುಂ ನಂಜಿನುರುಳಿಯೆನ್ನದೆ ಮುದ್ದುನುಡಿಯೆಂದೊಡಂ, ತರುಣಿಯರ ಕುಚಯುಗಳಂಗಳಂ ಮೋಹರಾಜನ ಚಕ್ರಮೆನ್ನದೆ ಚಕ್ರವಾಕಮೆಂದೊಡಂ, ಲತಾಂಗಿಯರ ಮೇಲ್ಪೊದೆಪ ದುಕೂಲಮಂ ಮೋಹರಾಜನೆಂಬ ಬೇಂಟೆಗಾಱಂ ಪರೆಪಿದ ಬಲೆಯೆನ್ನದೆ ಕಾಮಧ್ವಜಮೆಂದೊಡಂ, ಕಾಮಿನಿಯರ ಕರ್ಣಯುಗಳಮಂ ಕಾಮರಾಜಂ ಪಿಡಿದಡ್ಡಣಮೆನ್ನದೆ ಕಮಲಮುಖಮೆಂದೊಡಂ, ಬಾಲೆಯರ ಬೆರಲುಗುರ್ಗಳಂ ಮಾಯಾಕಿರಾತನ ಕೂರಂಬುಗಳನ್ನದೆ ಕಾಮನ ಪಂಚಬಾಣಮೆಂದೊಡಂ, ರಮಣಿಯರ ಪುರ್ಬುಗಳಂ ಜವನ ಬಿಲ್ಲೆನ್ನದೆ ಕಬ್ಬಿನ ಬಿಲ್ಲೆಂದೊಡಂ, ನಿತಂಬಿನಿಯರಸಿಯ ಬಾಸೆಗಳಂ ಯಮರಾಜನ ಬಟರೆನ್ನದೆ ಶೋಭಾಕರಮೆಂದೊಡಂ, ನಾರಿಯರ ಮೂಗಂ ಕಾಮದೇವನೆಂಬ ಬೇಂಟೆಗಾಱಂ ಪೊಗೆದು [1] ಕೊಳ್ವ ತಿದಿಯೆನ್ನದೆ ಚಂಪಕಕುಟ್ಮಳಮೆಂದೊಡಂ, ಕನ್ನೆಯರ ಬಾಯ್ದೆರೆಯುಂ ನರಕದ ಬಿಲಮೆನ್ನದೆ ಕಡುಚೆಲ್ವೆಂದೊಡಂ, ದಯಿತೆಯರ ಕುರುಳ ಪಙ್ತಿಗಳನಂತಕನ ಕಣ್ಣಿವಲೆಯೆನ್ನದೆ ನುಱಿದುಂಬಿಯೆಂದೊಡಂ, ಅಬಲೆಯರ ಕೊರಲ ರೇಖೆಗಳುಮಂ ಮೃತ್ಯುರಾಜಂಗಿದು ಕೊಲ್ವ ನೇಣೆನ್ನದೆ ಕೋಮಲರೇಖೆಯೆಂದೊಡಂ, ಗಣಿಕೆಯರ ನೊಸಲಂ ಮಾಯಾನೃಪನ ಕವಲಂಬೆನ್ನದೆ ಬಾಲಶಶಿಯೆಂದೊಡಂ, ಕಪಟನಾಟಕಸೂತ್ರಧಾರೆಯರ ಶೃಂಗಾರಮಂ ನರಕದ ದಾರಿಯೆನ್ನದೆ ಲೇಸೆಂದೊಡಂ, ಮಾಯಾಕಿರಾತೆಯರ ವಿಲಾಸಮಂ ಕೇಸುರಿಯೆನ್ನದೆ

1 ಪೋಗದೆ (ಕ. ಖ.)

ರಮಣೀಯಮೆಂದೊಡಂ, ಕುಟಿಲಚಿತ್ತೆಯರ ಕೂಟಮಂ ಕಾಳಕೂಟ ಮೆನ್ನದೆ ನಲಿದೊಡಂ, ಪಾಪರೂಪೆಯರ ಮೇಳವಂ ಕೀನಾಶನ ಗಾಳ ಮೆನ್ನದೆ ಪೆರ್ಚುವೊಡಂ ತನ್ನ ಕೇಡಂ ಬಗೆವನಲ್ಲದೆ ಸುಖಮಂ ಬಗೆಯಂ ॥ ೧೫೫

ಮಾಯದ ಟಕ್ಕಿನ ಕಪಟದ
ವಾಯದ ಕೃತ್ರಿಮದ ಮುಳುಕದೆಳಕದ ಕಪಟೋ ।
ಪಾಯದ ಕಣಿಗಳ್ ಸುವ
ಸ್ತ್ರೀಯರ್ಕೇವಲಮೆ ಸರ್ವಜನವಂಚಕಿಯರ್ ॥ ೧೫೬

ನರಕದ ಬಟ್ಟೆಯನಱಿಸುದ
ನರರ್ಗಂ ತೋಱುವ ಪೊಲಂಬಿಗರ್ದುಷ್ಕೃತತ ।
ಸ್ಕರನ ಪಿಡಿದಿರ್ಪ ದಾಣೆಗ[1]
ಳರವಿಂದಾಕ್ಷಿಯರನಂಗಸೋಜೆಯ ಪಿಡಿಗಳ್ ॥ ೧೫೭

ಸುಗತಿಯ ಬಟ್ಟೆಯ ಮುಳ್ಗಳ್
ಸುಗತಿಯ ಬಟ್ಟೆಯ ಚಮೂರುತತಿಗಳ್ ಮತ್ತಂ ।
ಸುಗತಿಯ ಬಾಗಿಲ[2] ಪಡಿಗಳ್
ಮೃಗಾಕ್ಷಿಯರ್ಮೋಕ್ಷಪಥದ ಕಾಪನ ನಾಯ್ಗಳ್ ॥ ೧೫೮

ಸಿರಿಯುಪ್ಪೊಡೆ ಪುಲ್ಗಿಚ್ಚಿನ
ದೊರೆ ರಾಜ್ಯವಿಭೂತಿ ಮುಗಿಲ ನೆಳಲ ಸಮಾನಂ ।
ತರುಣತ್ವಮಪ್ಪೊಡಿಂದ್ರನ
ಪರಚಾಪದ ಸರಿ ಮನುಷ್ಯರೇಕೆಯೊ ಬೆಸೆವರ್ ॥ ೧೫೯

ದರಿಯ ಮರದಂತೆ ಜೀವಿತ
ಮರಲೆಯ ಮಸಿಯಂತೆ ಪೆಂಡಿರುಪಭೋಗಂ ಭೂ ।

1 ದಾಣೆಗಳ್ (ಗ) 2 ಬಟ್ಟೆಯ (ಗ)

ಧರನದಿಯಂತೆ ಕಳೇವರ
ಮರಿಸಿನದಂತಿರ್ಕುಮುದ್ಧತಿಕ್ಕೆಯುಮದಟುಂ ॥ ೧೬೦

ಬಲಮುಂ ಪೆಂಪುಂ ಕೊಪ್ಪುಂ
ಕಲಿತನಮುಂ ದರ್ಪಮುಂ ಪ್ರತಾಪಮುಮೆಳವುಂ ।
ಕುಲಮುಂ ಚಳಮುಂ ಜಳಬೊ
ಬ್ಬುಳಿಕೆಯುವ್ರೋಲ್ ಕಿಡುವುವೇಕೆ ತೊನೆವರ್ ಮೂರ್ಖರ್ ॥ ೧೬೧

ಒಡಲೊಳ್ಳಿತಾದೊಡಂ ಸಿರಿ
ಕಿಡದೊಡಮಾಯುಷ್ಯಮೊಪ್ಪೆಗೊರ್ಮೆಗೆ ಪಿರಿದ ॥
ಪ್ಪೊಡಮೇವೊ ಮನುಷ್ಯರ[1] ಸೈ
ತಿತುಪವರಾರ್ಮಾಣಿಪನ್ನರಾರ್ಪಸುಮತಿಯೊಳ್ ॥ ೧೬೨

ಚಿಕ್ಕನೆ ಸಾವುದುಮಂ ಸಿರಿ
ನೆಕ್ಕನೆ ಕಿಡುವುದುಮನರಿದು ಕಂಡುಂ ಕೇಳ್ದುಂ ।
ಸೊಕ್ಕುಮದುಕ್ಕುವರಂಜದ
ಯುಕ್ಕುಂದಲೆವಾಯ್ವರನ್ಯರೆನಗಿದು ಚೋದ್ಯಂ ॥ ೧೬೩

ತನುವಂ ತಪದೊಳ್ ಧನಮಂ
ಜನನುತಸದ್ಧರ್ಮದಲ್ಲಿಯುಂ ತವಿಸಿ ಕಲರ್ ।
ಮನದೊಳ್ಪಪಕ್ಕಂಜುವ
ರೆನಸುಂ ದುಃಖಕ್ಕೆಯುಂಜರೆನಗಿದು ಚೋದ್ಯಂ ॥ ೧೬೪

ಎಂದು ಶರೀರದೊಳಾದ ಪೊಲ್ಲಮೆಯುಮಂ ಸಂಸಾರದೊಳಾದ ದುಃಖಮುಮಂ ಭೋಗಂಗಳ ಕೇಡುಮಂ ಬಾಹ್ಯಯನಿತ್ಯತೆಯುಮಂ ವನಿತೆಯರ ಕಷ್ಟತೆಯುಮಂ ಸ್ಥಿತಿಕರಣಂ ಮಹಾಪುಣ್ಯಮೆಂಬುದುಮಂ ಬಗೆದು ಪನ್ನೆರಡುವರ್ಷಂಬರಂ ಮೂಣದೆ ಪೇಳ್ಬಪ್ಪಷ್ಟದಾಡನೊಡೆದ

---

1 ಪರಿದಾದೊಡಯುಕಟ ಮನುಜನಂ (ಗ)

ಕಲ್ಲ ದೋಣಿಯೊಳಱಿದ ನೀರಂತೆ ಕೈಕೊಳ್ಳದೆ ಸತಿಯರ ರೂಪನೆ ಭಾವಿ
ಸುತಿರ್ಪುದುಂ ವಾರಿಷೇಣಮುನಿನಾಥಂ ತನ್ನೊಳಿಂತೆಂದಂ ॥ ೧೬೫

ಆನೀಪೆಣ್ಗಳನೊಲ್ಲದಂದು ಕಿಡುವೆಂ ತಾಯುಂ ಮನಂಸೋಗುಮಂ
ದೀನತ್ವಕ್ಕೆ ತೆರಳ್ಗೂಸುಗಳ್ ಕುಡಿಗುಮೇ ಸಂತೋಷದಿಂ ಪಾಲ್ಗಳಂ
ಹೀನಾತ್ಮರ್ಕಳುಮೆಂತೆ ನಾಡೆ ಹಿತಮಂ ಸಂತಂ ಸುಖೋಪಾಯಮಂ
ಜ್ಞಾನಾತ್ಮಂ ನೆಱೆ ಪೇೞ್ದೊಡಂ ಪದೆಪಿಸಿಂ ಕೈಕೊಳ್ಳರಾನಂದದಿಂ ॥ ೧೬೬

ಕಳವೆಯ ಕಱುಬುಮಂ ತೊವೆಯುಮಂ ತಿಳಿದುಪ್ಪಮುಮಂ ವಿನೋ
ದದಿಂ
ಗಳಿಲನೆ ನಾಯ್ಗೆ ಬೇಗಮೊಸೆದಿಕ್ಕಿದೊಡಂ ಕಡುಗಯ್ದು ಮೆತ್ತಮು
ಮ್ಮಳಿಸಿ ಕನಲ್ದನಲ್ದು ಸಲೆ ಪೇಲಸ ಚಿಂತಿಸುತಿರ್ಪವೆಂತೆ ಸಂ
ಚಳಮನರುಂ ಸದುಕ್ತಿಗಳನೊಲ್ಲದೆ ಚಿಂತಿಸುವರ್ಕುಮಾರ್ಗಮಂ॥೧೬೭

ಎಂದು ಮುಗುಳ್ನಗೆನಕ್ಕು ಮತ್ತಮಾತನನಲಸಿ ಬಿಡುವುದು ಪುರು
ಷಾರ್ಥಮಲ್ಲೆಂದು ಗಿಳಿಯುಂ ಪಂಜರದೊಳಿಕ್ಕಿ ರಕ್ಷಿಸುಮಂತೆ ಪುಷ್ಪದಾಡ
ನನೆತ್ತಲುಂ ಪೋಗಲೀಯದೆ ಧರ್ಮಶ್ರವಣಮಂಗೆಯ್ಸುತ್ತುಮೊಂದುದಿ
ವಸಂ ವಿಪುಳಶೈಲದೊಳಿರ್ದ ವರ್ಧಮಾನಸ್ವಾಮಿಗಳ ಶ್ರೀಪಾದಮಂ
ಬಂದಿಸಲೆಂದು ವಾರಿಷೇಣಮುನಿಪರಿವೃಥಂ ಪೋಪುದುಮತ್ತಲ್ ದ್ರಷ್ಟಾಲಿಂ
ಗಿಯಾಗಿರ್ದ ಪುಷ್ಪದಾಡನಡೆವೆತ್ತು ರಾಗಿಸಿ ಬಲೆವಱಿದ ಕೊಂಕನಂತೆ
ಮನೆಯೆ ಗುಱಿಯಾಗಿರ್ಪುದುಮಾಗಳ್ ॥ ೧೬೮

ಉತ್ತಮಗುಣಗಣನಿಳಯಂ
ಚಿತ್ತಜಮದಭರಕರೀಂದ್ರಹರಿ ವಿಮಳಯಶೋ ।
ದಾತ್ತಂ ಶ್ರುತಾಂಬುನಿಧಿ ಜಗ
ದುತ್ತುಂಗಂ ನಿಷ್ಕಷಾಯನಪಗತದುರಿತಂ ॥ ೧೬೯

---

1 ಎಂದು ಪನ್ನೆರಡುವರುಷಂಬರ ಸ್ಥಿತಿಕರಣದ ವಿಶೇಷಫಲಮಂ ಱಿವನ
ಪ್ಪುದಱಿಂದಲಸದೆ ಧರ್ಮಶ್ರವಣಂಗೆಯ್ವೊಡಂ ಪುಷ್ಪದಾಡನೊಷತ ಮಡಕೆಯೊಳೆ
ಱಿದ ನೀರಂ ಕೊಳ್ಳದೆ ಸುದತಿಯರಂ ಭಾವಿಸುತಿಪ್ಪುದುಂ ವಾರಿಷೇಣಮುನೀಂದ್ರನಿಂ
ತೆಂದಂ (ಗ)

ವಾರಿಷೇಣಮುನಿವಲ್ಲಭನುಂ ಮಹಾವೀರಸ್ವಾಮಿಯಂ ಬಂದಿಸಿ ತಡೆಯದಲ್ಲಿಂದಂ ಬಂದು ಪುಷ್ಪದಾಡನೆನಿಪ ದ್ರವ್ಯತಪಸ್ವಿಯುನಲ್ಲಿ ಕಾಣದೆ ತನ್ನ ನಿವಾಸಕ್ಕೆ ಪೋದನೆಂದಱಿದು [1] ತಾಂ ಜಂಘಾಚಾರಣಋದ್ಧಿ ಪ್ರಾಪ್ತನಪ್ಪುದಱಿಂ ಮರುಜ್ಜವದಿಂದೆಯ್ದಿ ಪುಷ್ಪದಾಡನಡೆಯೊಳ್ ಕಂಡು ಪಿಡಿದುಕೊಂಡಾತಂಗೆ ವೈರಾಗ್ಯಮಂ ಪುಟ್ಟಿಸಲ್ವೇಡಿ ನಿನ್ನ ರಾಜ ಭವನಕ್ಕೆ ಬರ್ಪುದುಂ ಚೇಳನಿಮಹಾದೇವಿ ವಾರಿಷೇಣಮುನೀಂದ್ರೋ ತ್ತಮನ ಬರವಂ ದೂರದೊಳ್ ಕಂಡು [ಪೊತ್ತಿಲ್ಲದ ಪೊಱ್ತಿನೊಳ್ ಬಂದರಿದೇನಾನುಮೊಂದುಕಾರಣಮಾಗಲ್ವೇಱ್ಕುಮೆಂದು ವಿಸ್ಮಯಂ ಬಟ್ಟು] ತನ್ನೊಳಿಂತೆಂದಳ್ ॥ ೧೩೦

ಎಗ್ಗಂ ಮುನ್ನೀಮಾರ್ಗಂ
ಮೊಗ್ಗೆಂದುಱದುಕ್ಕೆ ಪೋಗಿ ಸಿಲಲಾಱದೆ ಚಿಃ ।
ಸಿಗ್ಗಿಲ್ಲದಲಸಿ ಬಂದಂ
ಗುಗ್ಗುರಿಯಂ ತಿಂಬ ಮೊಗ್ಗು [2] ಸುಣ್ಣದೊಳಂಟೇ ॥ ೧೩೧

ಅಱಮನದಂಗಂ ಸುಖವಿಂ
ಗೆಳಸುವೆವಂಗಂ ಗೃಹಕ್ಕೆ ಪೆಂಪಿಂಗೆ ಮಹೋ ।
ಜ್ಜ್ವಳಕೀರ್ತಿಗಾಟಿಪಂಗಂ
ಖಳಂಗಮಳವಡದು ಜೈನಮಾರ್ಗಂ ಜಗದೊಳ್ ॥ ೧೩೨

[ಈತನಪ್ಪೊಡೆ ಸುಖಿ ಕೂರಲ ಸತ್ವಮಿಲ್ಲದೊರಲಂ ನುಂಗಿದ ರೆಂಬ ನಾಣ್ಣುಡಿಯುಂತೆ ತನ್ನಳವಱಿಯದೆ ಜಿನಸ್ವಾಮಿಯ ಜಗನ್ಮಾಂಗ ಲ್ಯನ ರೂಪಂ ಧರಿಯಿಸಿ ತಪದೊಳಾದ ಕ್ಲೇಶಕ್ಕಿರಲಾಱದೆ] ರಾಜ್ಯಕಾಂ ಕ್ಷೆಯಿಂ ಬಂದನಾಗಲೆವೇಱ್ಕುಮಲ್ಲದೊಡಿಲ್ಲಿಗೇಕೆ ವಂದ [ನಿದನಾರಯ್ದು ನೋಡುವೆ] ನೆಂದು ಸರಾಗಾಸನಮುಮಂ ವಿರಾಗಾಸನಮುಮನಿಕ್ಕ

[1] ದ್ರವ್ಯಲಿಂಗಿಯಪ್ಪ ಪುಷ್ಪದಾಡನವೆತ್ತನೆಂದು ಬಲವಳಿದ ಶೋಕನಂತೆ ಪೆಂಡತಿಯಲ್ಲಿಗೆ ಪರಿತಪ್ಪವನಂ ವಾರಿಷೇಣಮುನಿವೃಂದಾರಕಂ ಕಂಡು (ಗ)

[2] ಸಿಗ್ಗಿಲ್ಲದೆನಿಸಿ ಪೋದಡೆ ಮೊಗ್ಗಂ ಸಕ್ಕರೆಯ ಮೆಲಹ (ಗ)

ವುದುಂ ಸುಕವಿಜನಮನಃಪದ್ಮಿನೀರಾಜಹಂಸಂ [1] ಬಂದು ವಿರಾಗಾಸನದೊಳಿರ್ಪುದುಂ ಜಿನಸಮಯಗಗನಚಂದ್ರಿಕೆ ವಾರಿಷೇಣಮುನೀಂದ್ರನ ಚರಣದ್ವಯಪಲ್ಲವಂಗಳಂ ಪ್ರಸೂನಾವಳಿಗಳಿನರ್ಚಿಸಿ ಮಹಾಭಕ್ತಿಯಿಂ ಬಂದಿಸಿ ಕೈಗಳಂ ಮುಗಿದು [ನಮ್ರಮಸ್ತಕೆಯಾಗಿರ್ದು] ಮುಂದೆ ಕುಳ್ಳಿರ್ದು ॥ ೧೩೩

ಮುದದಿಂ ನಿಮ್ಮಡಿ ನಿಮ್ಮಯ
ಪದಸರಸಿಜಯುಗಳಮಂ ಮಹೋತ್ಸವದಿಂದಂ ।
ವಿದಿತಂ ಕಂಡೆನಮೋಘಂ
ಸದಮಳರೆನ್ನಿಂದಮಿಂ ಕೃತಾರ್ಥರುಮೊಳರೇ [3] ॥ ೧೩೪

ಎನಗೆ ಬೆಸನಾವುದೆಂದೊಡೆ ನಿಮ್ಮ ಸೊಸೆಯರಯ್ನೂರ್ವರುಮಂ ಶೃಂಗಾರಂಗೆಯ್ಸಿ ಬೇಗಮೊಡಗೊಂಡು ಬನ್ನಿಮೆನೆ ಚೇಳಿನೀಮಹಾದೇವಿ ತನ್ನ ಮಣಿಮಾಡಕ್ಕೆ ಪೋಗಿ ಪರಿಚಾರಕಿಯರಂ ಬರಿಸಿ ತಡೆಯದೆ ಶೃಂಗಾರಂಗೆಯ್ದು ಬರ್ಪುದು ತಮ್ಮ ವಲ್ಲಭಂ ಬಂದಿರ್ದನೆಂದು ಪೇಳುಮೆಂದಯ್ನೂರ್ವರ್ಕುಮಾರಿಯರಲ್ಲಿಗಟ್ಟುವುದುಂ ಅವರ್ಕೇಳ್ದು ತೆಂಕಣೆಲರ ತೀಟದಿಂ ನಯಂಬಡೆದ ಮಾಧವೀಲತೆ ಪರ್ಚಿ ಬಗೆಗೆ ಬಂದ ಶೃಂಗಾರಮಂ ಪೊಟ್ಟಳ್ಳಿಯೊರ್ವಳ್ [4] ॥ ೧೩೫

---

1 ವಾತ್ಸಲ್ಯರತ್ನಾಕರಂ (ಗ)

2 ಇರ್ಪುದುಂ ಚೇಳಿನೀಮಹಾದೇವಿ ಭಾವಯುತದಿಗಂಬರನ ಚರಣಕಮಳಮಂ ನಿರ್ಮಳೋದಕದಿಂ ಕರ್ಚಿ ತಜ್ಜಳಮಂ ತಲೆಯೊಳಾಂತುಕೊಂಡು ಕಮಳಾದಿ ಕುಸುಮದಿಂದರ್ಚಿಸಿ (ಗ)

3 ಮುನಿನಾಥ ನಿಮ್ಮ ಪದಕೋಕನದಮಂ ಮನದರ್ಥಿವೆರಸು ಕಂಡುದರಿಂ ನೆಟ್ಟನೆ ಸುಖಮನೀವ ಪುಣ್ಯಂ ಜನಿಯಿಸಿತೆನ್ನಿಂ ಕೃತಾರ್ಥರಾರ್ಮನವರೊಳ್ (ಗ)

4 ಎನಗೆ ಬೆಸನಾವುದೆನೆ ನಿಮ್ಮಯ್ನೂರ್ವರ್ ಸೊಸೆವಿರುಮನೊಡಗೊಂಡು ಬನ್ನಿಮೆನೆ ಮಹಾಪ್ರಸಾದಮೆಂತೆಗೆಯ್ವೆನೆಂದು ಸೊಸೆವಿರೆಲ್ಲರುಮಂ ಬರವೇಳ್ದಟ್ಟುವುದುಮವರ್ಲಾವಣ್ಯಸಮುದ್ರಂ ಮೇರೆದಪ್ಪಿದಂತೆ ಬಂದು ಸುತ್ತಲುಮಿರೆ (ಗ)

[ಅನುರಾಗವೊದವೆ ಬಟ್ಟಂ
ಸ್ತನದೊಳ್ ಕಟಿಸೂತ್ರಮಂ ಪದದ್ವಯದೊಳ್ ಪೆಂ |
ಪಿನ ಹಾರಮಂ ಕರಂಗಳೊ
ಳನುನಯದಿಂ ಕಟ್ಟಿ ತುರಿಪದಿಂದಂ ಬಂದಳ್ ‖ ೧೩೬

ಲೀಲೆಯಿನೊಳ್ಪುವೆತ್ತ ಪೊಸಚೀನಮನುಟ್ಟು ಬೆಡಂಗುವೆತ್ತ ಪ
ಚ್ಚೊಲೆಯನಿಕ್ಕಿ ಕಣ್ಗೆವರೆ ರೂಪು ವಿಳಾಸಮುಳಂಬಮಾಗೆ ಭೂ
ಪಾಲಕಚಿತ್ತಮಂ ಪಡೆಯಲೆಂದು ಮಹೋತ್ಸವದಿಂದೆ ಪೂಣ್ಕೆಯಿಂ
ಬಾಲಿಕೆ ಬಂದಳೊರ್ವಳತಿರಾಗದೆ ಕಿನ್ನರಕಾಂತೆಯಂದದಿಂ ‖ ೧೩೭

ಹಾರಮನಿಕ್ಕಿ ಪೊಚ್ಚ ಪೊಸಮಲ್ಲಿಗೆಯಂ ಮುದದಿಂ ತುರುಂಬಿ ವಿ
ಸ್ತಾರದಿನಿಟ್ಟು ಚಂದನದ ಬಟ್ಟನಳಂಕೃತಿಯಿಂದಮುಟ್ಟು ಧಾ
ತ್ರೀರಮಣೀಯಮಪ್ಪ ಮೃದುವಪ್ಪ ದುಕೂಲಮನರ್ತಿವೆಟ್ಟು ವಾಕ್
ಶ್ರೀರಮಣಂತೆ ಬಂದಳಱದೊರ್ವಳಪೂರ್ವಮನೋನುರಾಗದಿಂ ‖ ೧೩೮

ಸುಳಿಗುರುಳೊಳ್ ಕಣ್ಗೆವರೆ ನೀಳ್ದಲಗಣ್ಕಡುರಯ್ಯಮಾಗೆ ಕೋ
ಮಳತನು ಭಂಗಿವೆತ್ತೆಸೆಯೆ ಪರ್ವಿದ ಪುರ್ವಿಸಿಗಂಪು ಸೋಂಪಮಂ
ಘಳಿಲನೆ ಮಾಡೆ ಭೂಭುಜನ ಚಿತ್ತಮನೀಗಳ ಸೂಱೆಗೊಳ್ವೆನಂ
ಬಳಪಿನದೊರ್ವಳುರ್ವಶಿವೊಲೊಪ್ಪಿರೆ ಬಂದಳುದಾತ್ತಲೀಲೆಯಿಂ ‖ ೧೩೯

ಸುಲಿಪಲ್ ವಿಭ್ರಮಮಂ ಮುಖಂ ಕಮಳಮಂ ಪಾಠೀನಮಂ ಕಣ್ಗಳು
ಜ್ಜ್ವಳಭಾಳೇಂದುಮನೊಪ್ಪುವೆತ್ತ ನಿಟಿಳಂ ಕರ್ಣದ್ವಯಂ ನೆಯ್ದಿಲಂ
ನಳಿತೋಳ್ ಸಲ್ಲತೆಯಂದಮಂ ನಡೆಯೆ ಪೋಲ್ತೋರ್ಪಂತೆ ಚೆಲ್ವಾಗೆ ಕೋ
ಮಳೆಯೊರ್ವಳ್ ನಡೆತಂದಳಂದು ಮದನೇಭೇಂದ್ರಂಬೊಲಾಶ್ಚರ್ಯದಿಂ ‖

ಉಡಿಯದೆ ಮಾಣದೀಮುಡಿಯ ಭಾರದೊಳೀಕೊರಲಾದ ಪಾಂಗಿನಿಂ
ದುಡಿಯದೆ ಮಾಣದೀಕುಚದ ಭಾರದಿನೊಳ್ನಡುವಕ್ಕಟಕ್ಕಟಿ
ನ್ನುಡಿಯದೆ ಮಾಣದೀಕಟಿಯ ಭಾರದಿನೀಕಣಕಾಲ್ಗಳೆಂದು ನೇ
ರ್ವಡೆ ಪಲರ್ಗೊರ್ವಳದ್ಭುತಮನೊರ್ಮೆಯೆ ಪುಟ್ಟಿಸಿ ಬಂದಳರ್ತಿಯಿಂ ‖

ಮದನನ ಮಂತ್ರದೇವತೆಯೊ ಕಾಮನ ನಚ್ಚುವ ಪುಷ್ಪಬಾಣಮೋ
ಮದನನ ಗಂಧಸಿಂಧುರಮೊ ಮನ್ಮಥರಾಜನ ರಾಜ್ಯಲಕ್ಷ್ಮಿಯೋ
ವಿದಿತಮಿವಳ್ಗಗತ್ರಯಮಿದೆಂಬಭಿಶಂಕೆಯನುಂಟುಮಾಡಿ ಸಂ
ಪದದಿನಪೂರ್ವರೂಪೆ ನಡೆತಂದಳನಂಗನ ಶಸ್ತ್ರಗಂದದಿಂ ॥ ೧೯೩

ಜಿನನೊರ್ವಂ ಪೆಱಗಾಗೆ ಮತ್ತಮುದರಂ ಜೀಯೆಂಬಿನಂ ಕೊಂದು ಕೂ
ಗೆನೆ ತಾನೆಂದು ಮಹಾಪ್ರತಾಪದೊದವಿಂ ಮುಯ್ವೇರ್ಚಿ ವೀರಕ್ಕೆ ತೂ
ಟ್ಟನೆ ಮುಯ್ಯಾಂತು ಮನೋಜರಾಜನದಟಿಂದೆತ್ತಿರ್ದ ಮಾಡೀನಕೇ
ತನಮಂ ಪೋಲ್ತುದು ಕಾಂತೆಯೊರ್ವಳ ಕಟಾಕ್ಷದ್ವಂದ್ವವಿಕ್ಷೇಪಣಂ ॥

ಸುಳಿಗುರುಳ ಪಜ್ಜೆ ತುಂಬಿಯ
ಬಳಗದವೊಲ್ ಶೋಭೆವೆತ್ತು ರಂಜಿಸೆ ಮೊಲೆಗಳ್ ।
ಕಳಶದವೊಲೆಸೆಯೆ ಬಂದಳ್
ವಿಳಾಸದಿಂದೊರ್ವಳಂಗಜಾತನ ಸತಿವೊಲ್ ॥ ೧೯೪

ಸರಸಿರುಹವದನೆ ಮದಸಿಂ
ಧುರಗಾಮಿನಿ ನೀಲಕುಟಿಲಕುಂತಳೆಯೊರ್ವಳ್ ।
ತರುಣಿ ಮನಸಿಜನ ನಚ್ಚಿನ
ಸರಲೆನಿಸಿ ವಿಳಾಸಮಾಮರೆ ನಯದಿಂ ಬಂದಳ್ ॥ ೧೯೫

ಅಲುಗೆ ಕುರುಳ್ ತೊಡವು ಪಳಂ
ಚಲೆಯೆ ತಳತ್ತಳಿಸಿ ಪೊಳೆಯೆ ತನುರುಚಿಯೊರ್ವಳ್ ।
ಕಳಹಂಸಗಮನೆ ಕಾಮನ
ತೊಳಗುವ ಕೂರಂಬಿನಂತೆ ಪದೆಪಿಂ ಬಂದಳ್ ॥ ೧೯೬

ತರಳಾಕ್ಷಿ ವಟಫಲಾಧರೆ
ಸುರುಚಿರನಾನಾವಿಭೂಷಣಾನ್ವಿತೆಯೊರ್ವಳ್ ।
ಸುರವನಿತೆಯೆ ವಸುಮತಿಗವ
ತರಿಸಿದಳೆಂಬಂತೆ ವಿಭವದಿಂದಂ ಬಂದಳ್ ॥ ೧೯೭

ತರುಣಹರಿಣಾಕ್ಷಿ ಬಿಂಕಂ
ಬರಸೊರ್ವಳ್ನೂಡ ಗಳಗೆಗೋರಡಿಯುಂ ವಿ |
ಸ್ತರದಿಂದಿಡುತುಂ ಬಂದಳ್
ನೆರೆವಿಯು ನೋಟಕರ ಮನಮನಲ್ಲಾಡಿಸುತುಂ || ೧೮೮

ಸಲ್ಲಲಿತಗಾತ್ರೆಯೊರ್ವಳ್
ಮಲ್ಲಿಗೆಯುಂ ಮುಡಿದು ಮುತ್ತಿನ್ನೈಸರಮಂ ತ |
ಳ್ವಲ್ಲದೆ ಕಟ್ಟ ಮನೋಜನ
ಬಿಲ್ಲಿಂ ಬಿದುರ್ಕಿದ ಶರಾಳಿಯಂತಿರೆ ಬಂದಳ್ || ೧೮೯

ತರಣಿಯುಮಂ ಚಂದ್ರನುಮಂ
ಸಿರಿಕಂಡವ ಜೊಟ್ಟುಮೆಸೆವ ಕುಂಕುಮಮುಮುಂ ಪೋ |
ಲ್ತಿರಲಮವಾಸೆವೊಲೊರ್ವಳ್
ಸರೋಜಮುಖಿ ಬಂದಳಂದು ವಿಭ್ರಮದಿಂದಂ || ೧೯೦

ನಸುಗೆಂಪುವಡೆದ ವಶನದ
ಮಿಸುಪಧರದ ಕೆಂಪುಮಿನಸುಧಾಕರರಂ ಪೋ |
ಲ್ತೆಸದಿರೆ ಪೂರ್ಣ್ಣಿಮೆಯಂತಿರೆ
ಶಶಿಮುಖಿ ನಡೆತಂದಳೊರ್ವಳತಿಶಯದಿಂದಂ || ೧೯೧

ಅಂತು ಶೃಂಗಾರರಸಂಗಳ್ ಮೇರೆವಪ್ಪಿದಂತೆ ಲಾವಣ್ಯಯುಕ್ತೆಯರಪ್ಪ ಯುವ್ನೂಅಸೊಸೆದಿರಂ ಚೋಳನೀಮಹಾದೇವಿಯಲ್ಲಿಗೆ ವರ್ಪುದುಂ ಅವರ್ಬೆರಸು ಸಮ್ಯಕ್ತ್ವಚೂಡಾಮಣಿಯಲ್ಲಿಗೆ ಚೋಳನೀಮಹಾದೇವಿ ಬಂದು ಪೊಡೆಮಟ್ಟಿರ್ಪುದುಂ || ೧೯೨

ಒದವಿದ ಬಿರುದಿಂ ಪೆಜರ
ಗ್ಗದ ಗಂಡರ ಬೆಂಡುಮಾಡಿ ಗೆಲ್ಲಂ ಗೊಂಡಾ |
ಮದನನ ವಿಜಯಗಜೇಂದ್ರನ
ರದನಿಗಳಂ ಪೋಲ್ತುವೊರ್ವಳ ಸ್ತನಯುಗಳಂ || ೧೯೩

ಅಪಹರಿಸೆ ಪೆಱಂ ಬಿರುದಂ
ಕಿಡಿಸುವೆನೆಂಬೊಂದು ಪೂಣ್ಕೆಯಿಂದಂ ಕಾಮಂ ।
ಪಿಡಿದಿರ್ದಡ್ಡಣಮೆನಿಸಿದು
ದೊಡಂಬಡಿಂದೊರ್ವ ವಾರಿಜಾನನೆಯ ಕುಚಂ ॥ ೧೯೪

ಮಸಗಿ ಕಡುಗೋಪದಿಂದಂ
ಸಸಿಯಂ ಪಿಡಿಯಲ್ಕೆ ರಾಹು ಸಡೆಯದೆ ನೆಱೆ ಸಂ ।
ಕಿಸದೆಯ್ತಂದಪುದೆಂಬವೊ
ಲೆಸೆದಿರ್ದುವು ಮಿಸುಪ ಫಾಳಮುಂ ಸೋರ್ಮುಡಿಯುಂ ॥೧೯೫

ಮುನಿದು ಮನೋಜಂ ಲೋಕದ
ಜನಮಂ ತನಗೆಱಗಿಸಲ್ಕೆ ಕೂರ್ಪಿಂದಂ ಭೋಂ ।
ಕನೆ ತೊಟ್ಟು ಪೊಳೆವ ಕಪಲಂ
ಬೆನೆ ಪೋಲ್ತುವು ಕಾಂತೆಯೊರ್ವಳಕ್ಷಿದ್ವಂದ್ವಂ ॥ ೧೯೬

ಲಲಿತತೆವೆತ್ತು ಕೊಂಕಿ ಪರಿದೊಪ್ಪುದೊಳೊಂದಿರೆ ಪುರ್ವು ಚಾಪಮಂ
ಸುಲಲಿತಮಾಗಿ ಸೀಳ್ದು ತುಱುಗಿರ್ದಮುಗಳ್ ತಮಮಂ ಬೆಳರ್ಪ ಕ
ಣ್ತಲರ್ಗಣೆಯಂದಮಂ ನೆಱೆಯೆ ಪೋಲ್ತಿರೆ ಕಾಮುಕರೊಳ್ ಪಳಂ
ಚಲಿವ ಮನೋಜನೇಱಿಸಿದ ಬಿಲ್ಲವೊಲಿರ್ದುದು ವಕ್ತ್ರಮೊರ್ವಳಾ ॥

ಅರುಣತೆಯಿಂದಮೊಪ್ಪುವಧರಚ್ಛವಿಯುಂ ರವಿಯೆಂದು ವಕ್ತ್ರಪಂ
ಕರುಹಮಮರ್ಕೆಯಿಂದಲರೆ ರಾಗಿಸಿ ಪೋಪುದು ರಾತ್ರಿಯೆಂದು ಬಿ
ಚ್ಛಿರಿಬಿರಿದೊಂದಿನಿಂದಮೊಡಮಿಂ ಪೊಣರ್ವಕ್ಕಿಗಳೆಂಬ ದೇಸಿಯಿಂ
ಕರಮಮರ್ದೊಪ್ಪುಗುಂ ನಿಬಿಡವೃತ್ತಕುಚಂ ವರಕಾಂತೆಯೊರ್ವಳಾ ॥

ಮತ್ತೊರ್ವಳ್ ॥ ೧೯೯

ಇವಳ ಲಲಾಟಮೆಂಬ ಸಸಿಯಂ ನೆಱೆ ನೋಡುವೆವೆಂದೊಡೀ ಮನೋ
ಭವನಮುಗಡ್ಡಮಾಗಿ ನಿಡುಪುರ್ವುಗಳೆಂಬ ಪೊದಳ್ದ ಚಾಪಮಂ

ಸುವಿಟಜನೋಪದಾನಮುಮನುದಗ್ರದಿನಿಕ್ಕಿದನೆಂದು ನೋವಿನೊಳ್
ಕಿವಿಗೆ ಮನೋಜನಂ ಪರಿದು ಸಾಱುವವೊಲ್ನಿಡುಗಣ್ಗಳೊಪ್ಪುಗುಂ ॥

ಗಾಂಪಿನೊಳನ್ಯಪುಷ್ಪದೊಳು ಮೋಳಿಸಿ ನೀಳ್ದಿದೇಕೆ ಕಂಪಿನೊಳ್
ಪೊಂಪುಱುವೋಗುತಿರ್ದಮಳವಕ್ತ್ರಸರೋಜಮೆ ಸಾಲ್ಗುಮೆಂದು ತ
ಣ್ಗಂಪನುಣಲ್ಕೆ ಬಂದೆಱಗಿ ಕಂಡಿದಿರೊಳ್ ಮಱಿದುಂಬಿ ಮೂಗಿನಿಂ
ಸಂಪಗೆಯೆಂದು ಪೊರ್ದದವೊಲಿರ್ದುವು ತುಂಬಿಗಳಂತೆ ಕುಂತಳಂ ॥ ೨೦೧

ಕುವಲಯಮಿತ್ರನೆಂದು ನೊಸಲಂ ಪಿಡಿಯಲ್ಗಡ ಬಂದು ಚಿತ್ತಸಂ
ಭವನಿಡಲಿರ್ದನೆಂದಸಿಯ ಬಾಸೆಯನಿಟ್ಟಸಿಯಿಂದೆ ಮೆಯ್ಗಳುಂ
ಜವೆಜವನಾಗಿ ಪೋಗಲೆಡೆಯಿಲ್ಲದೆ ಶಂಕಿಸಿ ರಾಹು ತೆಕ್ಕೆಗೊಂ
ಡವೊಲಳವಟ್ಟು ರಂಜಿಪುದು ಕೇಳ್ ಮುಡಿ ಪಂಕರುಹಾಕ್ಷಿಯೊರ್ವಳಾ ॥

ಪೆಱೆಯಂಬಂ ಕವಲಂಬನೆಯ್ದೆ ಸರಲಂ ತೀವ್ರಾಸಿಯಂ ಚಕ್ರಮಂ
ನೇಱೆ ಭಾಳಂ ದಿಗು ದಂತಪಂಕ್ತಿ ನಳಿತೋಳುದ್ಯತ್ಕುಚಂ ಪೋಲೆ ತ
ಳ್ತೆಱೆಯಲ್ಕಾಮುಕರೊಳ್ ಮನೋಭವನೃಪಂ ಮೇಲೆತ್ತಿದಂ ನಾಡೆ ಪೊ
ಚ್ಚಱು ಬೇಡೆಂಬವೊಲೊರ್ವಕಾಮಿನಿ ಲಸಚ್ಛೃಂಗಾರದಿಂದೊಪ್ಪಿದಳ್ ॥

ಮತ್ತೊರ್ವಳ್ ॥ ೨೦೪

ಪಳುಕಿನ ರಂಗದೊಳ್ ವನಿತೆ ತನ್ನ ಲಲಾಟಮುಮಂ ಸ್ವಕೀಯಕುಂ
ಡಲಮುಮನೆಯ್ದೆ ಕಂಡು ಬೆರಲಂ ಮಿಡಿದಾಗಸದಿಂದಮಿಂದುಮಂ
ಡಲಮವನೀತಳಕ್ಕಲಸಿ ಬಿಱ್ದುದೊ ನೋಡ ಮರಾಳಿಯಿಂದು ಸಂ
ಚಳಿಸದೆ ಮುತ್ತಿಯಿರ್ದಪುವೆನುತ್ತೆ ಮಹೋತ್ಸವದಿಂದೆ ನೋಡಿದಳ್ ॥

ಅಲ್ಲಿ ಮತ್ತೊರ್ವಳ್ ॥ ೨೦೫

ನಗೆಗಣ್ ನೀಳಸಹಸ್ರಪತ್ರದೆಸಳಂ ನಾಸಾಪುಟಂ ಮಿಕ್ಕ ಸಂ
ಪಗೆಯಂ ಪೊಕ್ಕುಱು ನಂದಿನಟ್ಟದರಲಂ ಚೆಲ್ವಿಂದುಗುಕರ್ಣಡೆ ಕೇ
ದಗೆಯಂ ಮೊಲ್ಲೆಯ ಭಂಗಿವೆತ್ತ ಮುಗುಳಂ ದಂತಾಳಿಗಳ್ಪೋಲೆ ಕೈ
ಮಿಗೆ ಪುಷ್ಪಾಸ್ತ್ರನ ಪಂಚಬಾಣಮಿವಳೆಂಬಾಶಂಕೆಯಂ ಮಾಡಿದಳ್ ॥

ಮತ್ತೊರ್ವಳ್ ॥ ೨೦೮

ಬಿಂಬಫಲಾಧರಂ ಪವಳಮಂ ಕ್ರಮದಿಂ ತೆರೆಯಂ ವಳಿತ್ರಯಂ
ಮೀಂಬೊಣರಂ ವಿಲೋಲನಯನಂ ಪಲು ಮುತ್ತುಗಳಂ ಕುಚಂಗಳೊ
ಪ್ಪಂಬಡೆದಿರ್ದ ದೀಪಮನಸುಂಗೊಳೆ ಪೊೞ್ತಿರೆ ಕಾಮುಕರ್ಗೆ ಹೇ
ಮಾಂಬುಜವಕ್ತ್ರೆ ಕಾಮರಸವಾರಿಧಿಯಂದದಿನೊಪ್ಪಿ ತೋಱಿದಳ್॥೨೦೯

ಸ್ತನಯುಗಳಂಗಳಂ ತುರಿಪದಿಂ ಪೊಳೆವಗ್ಗದ ಭಿತ್ತಿಯಲ್ಲಿ ಭೋಂ
ಕನೆ ಕೊಳೆ ಕಂಡು ಪೂರ್ಣಘಟಮೊಂದೊಳಗಂ ನೆಱೆ ನೋಡಲೆಂದು ಮೆ
ಲ್ಲನೆ ತೆಱೆಯಲ್ಕೆ ತತ್ಕಚದ ಚೂಚುಕಮಂ ಗಡ ಮುಚ್ಚಳೆಂದು ನ
ಟ್ಟನೆ ಪಿಡಿದೊರ್ವೆಮುಗ್ಧೆ ಪಿರಿದುಂ ನಗೆಯಂ ಸಭೆಗೆಯ್ದೆ ಮಾಡಿದಳ್ ॥

ಮತ್ತೊರ್ವಳ್ ॥ ೨೧೧

ಇನಿಯಸನಲ್ಕಱಿಂ ಬಿಡದೆ ನೋಡುತುಮಿರ್ದ ಲತಾಂಗಿ ತನ್ನ ರೂ
ಪನೆ ತಡವಿಲ್ಲದಾತ್ಮಪತಿ ನೆಮ್ಮಿದ ಕಂಬದೊಳಂದು ಕಂಡು ತೊ
ಟ್ಟನೆ ಮುನಿಸಾಗಿ ಹುಃ ಸವತಿಯಂ ನೆಱೆ ತೋಱಿಪನೆಂದು ತನ್ನ ಕಾ
ಮಿನಿಯ ವಿದಗ್ಧವೃತ್ತಿಗಳನಕ್ಕಟ ನಾಳಯ ತಾನೆ ಕಾಣನೇ ॥ ೨೧೨

ಪರಿವೆ ಪೊಡರ್ಪುಗೆಟ್ಟು ರವಿ ಮುಂದಿರೆ ಲಜ್ಜಿಸಿ ಕಣ್ಣ ಬೆಳ್ಪುಗಳ್
ಕರವೊಳಗುರ್ಚೆ ಬಂದು ಕೊರಲೊಳ್ ಪೊಱಮಟ್ಟು ಕುಚಾಚಳಾಗ್ರದೊಳ್
ಪರಿದಪುವೆಂಬ ಶಂಕೆಯನೆ ಪುಟ್ಟಿಸುತಿರ್ದುದು ನೋಟಕರ್ಗೆ ಪಂ
ಕರುಹದಳಾಯತಾಕ್ಷಿಯ ಮನೋಹರಮೌಕ್ತಿಕಹಾರಮೌಕ್ತಿಕಂ॥೨೧೩

ಪೊಳೆವುಂಗುಟದೊಳ್ ದಶನಾ
ವಳಿಯಂ ಕಂಡೊರ್ವಳಂಜೆ ಮುತ್ತಿನ ಹಾರಂ ।
ನೆಲಕೆ ಪಱಿದೊಕ್ಕುದೆಂದು
ವಿಹ್ವಳದಿಂ ತಡವರಿಸಿ ನೋಡುತಿರ್ದಳ್ ಕೊರಲಂ ॥ ೨೧೪

ಇನಿಯನ ಪೆಱಗಣ ಕೇರಿನೊ
ಳನಿಬರ ರೂಪುಗಳನೊರ್ವಕಾಮಿನಿ ಕಂಡೊ ।
ಯ್ಯನೆ ನಕ್ಕು ನಲ್ಲನೆನಗೀ
ಯಿನಿಬರುಮಂ ಮೋಲುದೋಱಿ ಕಾಡಿಪನಱಿದೆಂ ॥ ೨೧೫

ತೊಳಗುವ ಕೆಂದಳದೆಸೆವಂ
ಗುಳಿಯೊಳ್ ಶೋಭಿಸುವ ನೀಲದುಂಗುರಮೊರ್ವ ।
ಳ್ಗಳವಟ್ಟುದಶೋಕೆಯ ಕೆಂ
ದಳಿರೊಳ್ ಪತ್ತಿರ್ದ ಕಱುಪು ತುಂಬಿಯ ತೆಱದಿಂ ॥ ೨೧೬

ಕೊಸಗಿನ ರಜಮಂ ಪೀರ್ದ
ಉಕ್ಕಸಲಾಱದೆ ಮಗುಟೆ ತುಂಬಿಗಳ್ ಕಾಱುವುವೆಂ ।
ಬೆಸಕದಿನೊರ್ವಳ ಕುರುಳೊ
ಳ್ಪುಶೋಭೆಯಿಂ ಚೆನ್ನ ಪೂಗಳೇನೊಪ್ಪಿದುವೋ ॥ ೨೧೭

ಸಲೆ ಸೋಲ್ತು ಪಾಱುಬಾವಿಯ
ಜಲಮಂ ತೆಗೆಯಲ್ಕೆ ಮಕರಕೇತನನಿಂದಂ ।
ಕುರಿಸಿಕ್ಕಿದ ನೀಲದ ಬ
ಟ್ಟಲನನುಕರಿಸಿತ್ತು ಕಾಂತೆಯೊರ್ವಳ ನಯನಂ ॥ ೨೧೮

ಘಟಕುಚಯುಗೆ ವಲ್ಲಭನಂ
ಗುಟದೊಳ್ ತನ್ನಕ್ಷಿಯುಗಳಮಂ ಕಂಡೊರ್ಬಳ್ ।
ಜಟಮೀನ್ಗಳಿಲ್ಲಿಗೇಕ
ಕ್ಕಟ ಱಕ್ಕಟ ಬಂದುವೆಂದು ನೋಡುತ್ತಿರ್ದಳ್ ॥ ೨೧೯

ಅಂತೊಪ್ಪುವೆತ್ತಿರ್ಪುದುಂ ವಾತ್ಸಲ್ಯರತ್ನಾಕರಂ ಚೇಳನೀಮಹಾದೇವಿಗೆ ಪುಷ್ಪದಾಡನ ಭಾರ್ಯೆಯಪ್ಪ ಸುದಂತಿಯುಮಂ ಬರಿಸುವುದೆನೆ ಪರಿಚಾರಕಿಯರನಟ್ಟುವುದುಂ ಸುದಂತಿ ತಡೆಯದೆ ಬಂದು ಕುಮಾರಿಯರೊಡನಿರ್ಪುದುಂ [1] ॥ ೨೨೦

[1] ಅಂತು ಕಾಮದೇವನ ಸಾಮ್ರಾಜ್ಯಮೆಲ್ಲಮುಂ ವಿಧಾತ್ರಂ ಕವರ್ತೆಗೊಂಡು ಬಂದನೆಂಬಂತೆ ಇರ್ಪುದುಂ ಪುಷ್ಪದಾಡನ ಪೆಂಡತಿಯಪ್ಪ ಸುದತಿಯುಂ ಬರಿಸುವುದು ಮಾಕೆಯುಂ ಬಂದವರ ಕೆಲದೊಳ್ ಕುಳ್ಳಿರ್ಪುದುಂ ॥

ಕರಿಣೀವೃಂದದೊಳಾಡು ಕರ್ಪೂರತರುವ್ರಾತಂಗಳೊಳ್ಮತ್ತಿ ಷಂ
ಕರುಹಾನೀಕದೊಳಕ್ಕೆ ಗೋನಿವಹದೊಳ್ಕೆಬ್ಬಕ್ಕ ಕಂಠೀರವೋ
ತ್ಕರದೊಳ್ ಕೋಡಗ ಷಾಥವೀಲತೆಯೊಳಂ ಕರ್ಬಳ್ಳಿ ಚೆಂಬೊಂಗಳೊ
ಳ್ನೆರೆದಿರ್ಪಂತಿರೆ ಕರ್ಬುನಂ ಸಕಲಭೂವಾರೀಶರೊಳ್ಗೀಲಿಗಳ್ ॥ ೨೨೧

ಇರ್ಪಂತಿರ್ದು ॥ ೨೨೨

ಎವೆಯಿಲ್ಲದ ಕೊಡೆಗಣ್ಣ ವಿ
ಭ್ರಮಮಿಲ್ಲದ ರೂಪು ಪತ್ತಿಪತ್ತಿದ ಮೊಲೆ ಸೋ ।
ಲಮೆನೀಯದಿರವು ಕರ್ಪಿಂ
ಸಮೆಸಂದೊಡಲಲರ್ದ ಮೊಗಡಂಗಿದ ಗಲ್ಲಂ ॥ ೨೨೩

ತೆರಳ್ದ ಮೊಗಂ ಕರ್ಗಿದ ಬಾಯ್
ಪುರುಳಿಲ್ಲದ ಮಿಳ್ಳಗಾಲ್ಬೆಡಂಗಿಲ್ಲದ ಮೈ ।
ಕೆರಕಿಂ ತುಱಿಯಿಂ ತೀವಿದ
ಕರಚರಣಂ ಬೋೞಮಂಡೆ ಕುಗ್ಗಿದ ದೇಹಂ ॥ ೨೨೪

ಮತ್ತಂ ಮೂಳಗಿವಿಯುಂ ಪೊಱವಾಯ್ದ [ಪಲ್ಲುಂ ಮೊರದಂತಪ್ಪ ಕಾಲುಗುರುಂ ಬಳಗಟ್ಟಿ] ಬಸಿಱುಂ ಬರಳಂತಪ್ಪ ಕಾಲ್ಗಳುಂ ಬಾಗಿದ ಬೆನ್ನುಂ [ಕೊಡೆಗಣ್ಣುಂ] ಬಿಟ್ಟ ಬಾಯುಂ ಕೂಡಿದ ಪುರ್ಬುಂ ತೊಟ್ಟ ಕಾಸಿಯುಂಬೆರಸು [ಹಂಸೆಯೊಳಗೆ ಹೊಱಸು ಬಂದಿರ್ಪಂತೆ ಬರ್ಪುದುಂ] ವಾರಿಷೇಣಮುನಿ ಪುಷ್ಪದಾಡನ ಮೊಗಮಂ ನೋಡಿ [ನಗುತ್ತುಮಿಂ ತೆಂದಂ ॥ ೨೨೫

ನರಲೋಕದಲ್ಪಸೌಖ್ಯಂ
ಸ್ಥಿರಮಲ್ಲದು ವೀರನಾಥಪದಸೇವನೆಯಿಂ ।
ಸ್ಥಿರಮಪ್ಪ ಮೋಕ್ಷಸೌಖ್ಯಂ
ದೊರೆಕೊಳ್ಗುಂದರ್ತಿವಟ್ಟು ತಪದೊಳ್ ನಿನ್ನಂ ॥ ೨೨೬

ನಿಲಿಸಿ ಪನ್ನೆರಡುವರುಷಂಬರಮುನ್ನಾತ್ಮಕಾರ್ಯಮಂ ಬಗೆಯದೆ ಲೋಕೋತ್ತರಮಪ್ಪ ಜಿನೋಕ್ತಿಯನಿನ್ನೆವರಂ ಮಾಣದೆ ಪೇೞ್ದೊಡೆ

ನಾಯ್ಗೆ ನೆಱುನೆಯ್ಯಕ್ಕುದೆಂಬಂತೆನ್ನ ಪೇೞ್ವ ಧರ್ಮಶ್ರವಣಮನೊಲ್ಲದೆ
ಸುದಂತಿಯನೆ ಮನದೊಳ್ನೆನೆಯುತಿರ್ಪೆಯಿಂತು] ॥ ೨೨೭

ರತಿಯುಂ ವಿಭ್ರಮದೊಳ್ಸುರೇಂದ್ರಸತಿಯುಂ ಲಾವಣ್ಯದೊಳ್ನೋಡೆ ಭಾ
ರತಿಯುಂ ಹಾವದೊಳೀವೆಳಂದುಱದೆ ಸಱ್ಛೃಂಗಾರದಿಂ ರೂಪಿನು
ನ್ನತಿಯಿಂದಿರ್ದ ಮಹೀಶ್ವರಾತ್ಮಜೆಯರಂ ಕೈಕೊಳ್ಳದಾಂ ಬಿಟ್ಟು ನಿ
ರ್ವೃತಿಯಂ ಸಾಧಿಸಲೆಂದು ಪೋಗಿ ತಪಮಂ ಕೈಕೊಂಡೆನುತ್ಸಾಹದಿಂ ॥

ಅಱಿಲ ಪಡಪು ಬಸುರಿಯ ಪಣ್ಣೆಂಬಂತೆ ಸುದಂತಿಯನೇಗೆಯ್ದುಂ
ಬಿಡಲಾಱದೆ ನೀಂ ಬೆಳಬೆಂಜನನಾಗಿ ಭೋಗಿಸುವೆನೆಂದು ಕೊಕ್ಕಱಿ
ಗುದಿಪ್ಪೆ; ಉಂಡಱಿಯದಗುರ್ಂಡುದೆಲ್ಲಮಚ್ಚರಿಯೆಂಬಂತೆ, ಕಾಲೂರ್ಗೆ
ಮೆಱಿಸು ಬೆಲ್ಲಮೆಂಬಂತೆ, ಬೇಡವೆಳ್ಳಗೆ ಪಂದಿ ಮದ್ದಾನೆಯೆಂಬಂತೆ,
ನುಗ್ಗಿಯ ಬನಕ್ಕೆ ಗುಬ್ಬಿ ಕೋಗಿಲೆಯೆಂಬಂತೆ, [ಅಗಸೆಯ ಮರಕ್ಕೆ
ತೊನಸೆ ಮಱಿದುಂಬಿಯೆಂಬಂತೆ] ಸಂಸಾರದಲ್ಪಸುಖಕ್ಕೆ ಮುಯ್ವಾಂತು
ಶಾಶ್ವತಸುಖಮನುದಾಸೀನಂಮಾಡಿ ಜಿನರೂಪಿಂಗೆ ಬೇಸಱುವೆಯಿನ್ನು
ನಿನ್ನಿಂ ಬಿಟ್ಟು ಗಾವಿಲರುಂ ಕುಮತಿಗಳುಂ ಲೋಕದೊಳಿಲ್ಲೆಂದು
ಮೊದಲಿಸಿ ತೋಱಿ ಹಾಸ್ಯಂಮಾಡಿ ನಕ್ಕು ಸುದಂತಿಯ ಮೊಗಮಂ
ನೋಡಿ ವಾತ್ಸಲ್ಯರತ್ನಾಕರನಿಂತೆಂದಂ ॥ ೨೨೯

ಪರಮಜಿನೇಶ್ವರರೂಪಂ
ಧರಿಯಿಸಿ ಮತ್ತಿಳಿಪಿ ಬಂದು ತನ್ನಂಗನೆಯೊಳ್ ।
ನೆರೆಯಲ್ಕಱುಗುವನೆರನುಂ
ಪುರುಷನೆ ಪೇೞಿಬ್ಬೆ ಬೇಗಮೆಂಬುದುಮಾಗಳ್ ॥ ೨೩೦

ಸುದಂತಿಯಿಂತೆಂದಳ್ [1] ॥ ೨೩೧

---

1 ಶಾಶ್ವತ ಸುಖವಿಾವ ಜಿನರೂಪಿಂಗೆ ಅಲಸುವ ನಿನ್ನಂತಪ್ಪ ನಿರ್ಬುದ್ಧಿ
ಗಳುಂ ನಿರ್ಭಾಗ್ಯರುಂ ಲೋಕದೊಳಿಲ್ಲೆಂದು ಚೇಳಿನಿಮಹಾದೇವಿಯು ಸುದತಿಯುರ
ತನ್ನರಸಿಯರ ಮೊಗವುಂ ನೋಡಿ ತೋಱಿದ ವಸ್ತುಗಳಂ ಮಹಾಪುರುಷರಪ್ಪರ್ಗೆ
ಮತ್ತೆ ಕೈಕೊಳಲಪ್ಪುದೆ ನೀವೆ ವಿಚಾರಿಸಿ ಪೇಳಿವುನೆ ಚೇಳಿನಿಮಹಾದೇವಿಯುಂ
ಸುಧತಿಯು ವಲ್ಲಭೆಯರುಮಿಂತೆಂದರ್ (ಗ)

ನೆಟ್ಟನೆ ಕಾಱಿದ ಕೂೞಿಂ
ಮುಟ್ಟದು ನಾಯುಂ ಧರಾತಳಾಗ್ರದೊಳನೆ ಮುಂ ।
ಬಿಟ್ಟ ಬೞಿಕ್ಕಱಿಪವೆನುಂ
ನಿಟ್ಟಿಸುವೊಡೆ ಪಂದೆ ಕಷ್ಟನಾನಾಯಿಂದಂ ॥ ೨೩೨

ಎಂಬುದುಂ ಸುದಂತಿಯು ಪೆಾತಿಂಗೆ ಪುಷ್ಪದಾಸಂ ಲಜ್ಜಿಸಿ ತನ್ನೊಳಿಂತೆಂದಂ ॥ ೨೩೩

ಈದಿವ್ಯಸ್ತ್ರೀಯುಗನಿನಿ
ಸಾದರಿಸದೆ ತೊಱೆದು ವಾರಿಷೇಣಕುಮಾರಂ ।
ಪೋದನನೆ ನೋೞ್ಪೊಡೆನಗೇ
ನಾದುದು ಕೇಳನ್ನ ಪೆಂಡಿರುನ್ನತಿಪಿರಿದೇ ॥ ೨೩೪

ವರತಪಮಂ ಕೈಕೊಳಲೊಡ
ಮರಿದೆನಿಸುವ ಜಂಘಚಾರಣತ್ವಂ ಕೇಳೇ ।
ವರಮುನಿಗಾಯ್ತೆನೆ ತಪದಿಂ
ಪಿರಿದಪ್ಪೈಶ್ವರ್ಯಮಪ್ಪುದಾವುದು ಗಹನಂ [1] ॥ ೨೩೫

[ಎಂದು ಮನದೊಳ್ ವಾರಿಷೇಣಮುನಿಕುಂಜರನ ಮುಂಪೇಳ್ದ ಧರ್ಮಶ್ರವಣಮನನಿತುಮಂ ನಂಬಿ ಸಂಸೃತಿಲತಾಂಕುರಮಂ ಕಿೞ್ತೀಡಾಡಲುಂ ಮೋಹಮಹೀರುಹಮಂ ಕಡಿಯಲುಂ ಕರ್ಮೇಂಧನಂಗಳಂ ಸುಡಲುಂ ಜಿನಚರಣಮಂ ಬಲ್ವಿಡಿಯಲುಂ ಸನ್ಮಾರ್ಗಮಂ ಪೊರ್ದಲುಂ ಮನಂದಂದು ಜಿನಸಮಯವಾರ್ಧಿವರ್ಧನಸುಧಾಕರನ ಪಾದಕ್ಕೆಱಗಿ ಪೊಡೆಮಟ್ಟು ಪುನರ್ದೀಕ್ಷೆಯಂ ಪ್ರಸಾದಂಗೆಯ್ವುದೆಂಬುದುಮಾತನುಂ ಗುರುಗಳಲ್ಲಿಗೊಡಗೊಂಡು ಬಂದು ದೀಕ್ಷೆಯಂ ಕುಡಿಸುವುದುಂ ಭಾವ ತಪಸ್ವಿಯಾಗಿ ತನ್ನೊಳಿತೆಂದಂ ॥ ೨೩೬

ಸಂಸಾರದಲ್ಪಸೌಖ್ಯಮಿ
ದಂ ಶಾಶ್ವತಮೆಂದು ಜೈನಧರ್ಮಮನೆಂತುಂ ।

---

[1] ದೊರಕೊಳ್ಳದ ವಸ್ತುವೊಳವೆ ಮೂಜಗದೊಳ್ (ಗ)

ನಾಂ ಸಲೆ ಕೈಕೊಳ್ಳದೆ ಕೆ
ಟ್ಟಂ ಸತಿಯುಂ ನೆನೆದಶುದ್ಧಭಾವನೆಯಿಂದಂ ॥ ೧೩೭

ಶ್ರೀವಾರಿಷೇಣಮುನಿಯಿಂ
ದೀವೆರದನ ಧರ್ಮಮೆನಗೆ ದೊರೆಕೊಂಡುದು ಸ।
ದ್ಭಾವದಿನೆನಗದಱಿಂದಂ
ಭಾವಿಸುವೊಡೆ ವಾರಿಷೇಣಮುನಿಪನೆ ದೇವಂ ॥ ೧೩೮

ಎಂದು ತನ್ನ ಮುನ್ನಿನ ನಿರ್ಬುದ್ಧಿಯುಮಂ ಮಿಥ್ಯಾತ್ವದ ತೀವ್ರತೆಯುಮಂ ವಾತ್ಸಲ್ಯರತ್ನಾಕರನ ಮಾಡಿದುಪಕಾರಮುಮಂ ನೆನೆದು ವಿಸ್ಮಯಂಬಟ್ಟು ಶುದ್ಧಹೃದಯನುಮಾಗಿ ಸಕಲಾಗಮಂಗಳಂ ನೋಡಿ ತಪದೊಳುತ್ತರೋತ್ತರಂ ನೆಗೞ್ದು ಸಮಾಧಿವಿಧಿಯಿಂ ಮುಡಿಪಿ ದೇವಗತಿವಡೆದನಿತ್ತಲ್ ವಾರಿಷೇಣಮುನೀಂದ್ರನುಂ ಪುಷ್ಪದಾಡನ ಮುನ್ನಿನ ಹೀನಬುದ್ಧಿಗಂ ಬೞಿಕವಾದ ಸುಬುದ್ಧಿಗಂ ಚೋದ್ಯಂಬಟ್ಟು ತನ್ನೊಳಂತೆಂದಂ] [1] ॥ ೧೩೯

ಪಿರಿದಪ್ಪ ಮುಗಿಲ ಮಱೆಯೊಳ್
ಖರಕರನುಂ ಬೆಳಗಲಾಱನೆಂತಂತೆ ಮಹಾ।
ದುರಿತೋದಯದಿಂದಱಿಯು
ರ್ನರರುಂ ಸದ್ಧರ್ಮಮಪ್ಪುದಂ ಧಾರಿಣಿಯೊಳ್ ॥ ೧೪೦

ಮೆಕ್ಕೆಯ ಕಾಯ್ಗಳ್ ಮೊದಲೊಳ್ ಕೈಪೆಯಪ್ಪುವು ಕಡೆಯೊಳ್ ರುಚಿಯಪ್ಪುವಂತೆ ಕೆಲಂಬರ್ ಮೊದಲೊಳ್ ಪೊಲ್ಲರ್ ಕಡೆಯೊಳೊಳ್ಳಿದರಪ್ಪರ್ ಕಬ್ಬು ಮೊದಲಿಂದಂ ಕಡೆವರಮಿನಿದಂತೆ ಕೆಲಂಬರಾದ್ಯಂತಮೊಳ್ಳಿದರ್ ಅಶೋಕೆ ಮೊದಲಾದ ವೃಕ್ಷದೆಲೆಗಳ್ ಮೊದಲೊಳ್ ಮೃದು

---

[1] ಎಂದು ಭಾವಿಸಿ ಮುನ್ನಿನ ದುರ್ಭಾವಮಂ ಬಿಟ್ಟು ನಿರ್ವೇಗಮುಂದುತ್ತರಮಾಗೆ ಭಾವಯುತದಿಗಂಬರದಾಸಂಗೆ ಪೊಡೆವಟ್ಟು ಪುನರ್ದೀಕ್ಷೆಯುಂ ಕೈಕೊಂಡು ಆಗಮಂಗಳನೋದಿ ಭಾವತಪಸ್ವಿಯಾಗಿ ಸಮಾಧಿಮರಣದಿಂ ದೇವಲೋಕದೊಳ್ ಪುಟ್ಟಿದನಿತ್ತಲ್ ವಾತ್ಸಲ್ಯರತ್ನಾಕರಂ ಪುಷ್ಪದಾಡನ ಮುನ್ನಿನ ಸಂಸಾರಲಂಪಟತೆಗಂ ಬಳಿಕಿನ ವೈರಾಗ್ಯಕ್ಕಂ ಬೆಱಗಾಗಿ ತನ್ನೊಳಿಂತೆಂದಂ (ಗ)

ರ್ವ್ವು ಕಡೆಯೊಳ್ತ್ತುಅಗೆಲೆಗಳಪ್ಪವಂತೆ ಕೆಲಂಬರ್ಮೊದಲೊಳ್ಳದರಪ್ಪರ್ಕಡೆಯೊಳ್ ಪೊಲ್ಲರಪ್ಪರೆಂದು ಮನುಷ್ಯರ ಪರಿಣಾಮವುಮಂ ಭಾವಿಸಿ ಗುರುಗಳಾಜ್ಞೆಯಿಂದೇಕವಿಹಾರಿಯಾಗಿ ಪನ್ನಿರ್ತಱದ ತಪದೊಳಂ ನೆಗೞ್ದು ಕಡೆಯೊಳ್ಸಂನ್ಯಸನಸಮಾಧಿಯಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱುಸಾಗರೋಪಮಾಯುಷ್ಯಮನೊಡೆಯನಾಗಿ ಪುಟ್ಟಿದನದಱಿಂ ಸ್ಥಿತೀಕರಣದ [ಫಲಂ ಕೇವಲಮಲ್ಲೆಂದು ಗಣಧರಸ್ವಾಮಿಗಳ್ ಪೇೞ್ದುದುಂ] [1] ॥ ೨೪೧

ಕ್ಷಿತಿಪೂಜ್ಯಂ ವಾಗ್ವಿಳಾಸಂ ಸುಕವಿಜನಮನೋರಂಜನಂ ಜೈನವಾಕ್ಯಾ
ಮೃತತೃಪ್ತಂ ವಾಗ್ವಧೂವಲ್ಲಭನಘಕುಳವಿದ್ರಾವಣಂ ಕೇಳ್ದು ಚಿತ್ತೋ
ನ್ನತಿಯಿಂ ತ್ರೈವಿದ್ಯಚಕ್ರೇಶ್ವರವಿಮಳಪದಾಂಭೋಜಭೃಂಗಂ ಕವೀಂದ್ರ
ಸ್ತುತನಿರ್ದಂ ಲೀಲೆಯಿಂದಂ [2] ಸುಕವಿಜನಮನಃಪದ್ಮನೀರಾಜಹಂಸಂ॥

ಇದು ನಿಖಿಲದಿವಿಜಪರಿವೃಢಮುಕುಟತಟಘಟಿತಮಣಿಗಣಪಲ್ಲಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ದರ್ಶನಷಷ್ಠಾಂಗವ್ಯಾವರ್ಣನಂ
ಸಪ್ತಮಾಶ್ವಾಸಂ.

---

[1] ಪುಟ್ಟಿದನೆಂದಿಂತು ಸ್ಥಿತೀಕರಣದ ಕಥೆಯಂ ಮುನಿರಾಜಹಂಸಂ ಪೇೞ್ದಂ (ಗ)

[2] ವಿದ್ರಾವಣಂ ಸರ್ವಶಾಸ್ತ್ರಾನ್ವಿತತಂ ಘೋರದುರ್ವ್ಯಾದ್ವಿರದರಿಪುಗಣಾಂಬೋಧಿ ತ್ರೈವಿದ್ಯ ಲಕ್ಷ್ಮೀಪತಿಪಾದಾಂಭೋಜಭೃಂಗಂ (ಕ. ಬ.)

ಅಷ್ಟಮಾಶ್ವಾಸಂ.

ಶ್ರೀಸತಿಗೀಸ್ಥಿತಿಕರಣಂ
ಭಾಸುರಭೂಷಾಳಿಯೆಂದು ಕರಮಲ್ಲದೆ ಸಂ ।
ತೋಷಂಬಟ್ಟಂ ಮನದೊಳ್
ಲೇಸಾಗಿರೆ ಸುಕವಿನಿಕರಪಿಕಮಾಕಂದಂ ॥ ೧

ಸ್ಥಿತಿಕರಣದ ಕಥೆಯಂ ಭೂ
ಪತಿ ಬೇಗಂ ಕೇಳ್ದು ನಂಬಿ ಪೆತ್ತಂ ಮುನಿಪಂ ।
ದಿತರಂ ಸದ್ವಾತ್ಸಲ್ಯದ
ಕಥೆಯಂ ಬೆಸಗೊಳ್ವುದುಂ ಮಹೋತ್ಸವದಿಂದಂ ॥ ೨

[ಯತಿತಿಲಕರ್ ಸಕಲಗುಣಾ
ನ್ವಿತರಮಳಚರಿತ್ರರಂಗಭವಮದಹರಣರ್ ।
ನುತವಾಕ್ಯರ್ಭುವನತ್ರಯ
ನತಕರ್ಮದುರಿತಗಂಧಗಜಸಿಂಹನಿಭರ್ ॥ ೩

ನಿರ್ವೃತಿಶ್ರೀಯ ಭಂಡಾರದಮೂಲ್ಯವಸ್ತುವೆನಿಪ ವಾತ್ಸಲ್ಯದ ಕಥೆಯಂ] ಇಂತೆಂದು ಪೇೞ್ದರ್:—

ಪ್ರಾತಿಹಾರ್ಯದಂತೆ ಸ್ವರ್ಗಯುಗಳದಂತೆ ದೆಸೆಗಳಂತೆ ದಿಕ್ಪಾಲಕರಂತೆ ಸೀತಾನದಿಯ ತಡಿಯಂತೆ[1] ನಾಗಕುಲದಂತೆ ಶೋಭೆಯಂತೆ ಶ್ರಾವಕರ ಮೂಲಗುಣದಂತೆ ಪೃಥ್ವಿಯಂತೆ [ದರ್ಶನಾಂಗದಂತೆ ದೇವರಷ್ಟಗುಣದಂತೆ] ದರ್ಶನಮುಂ ನಿಶ್ಶಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಗೂಹನಮುಂ ಸ್ಥಿತಿಕರಣಮುಂ ವಾತ್ಸಲ್ಯಮುಮೆಂಬೆಂಟುಂಗುಣಂಗಳೊಳ್ನೆರೆದು ನಡೆವುದು ॥ ೪

[1] ಸೀತೋದಾನದಿಯಂತೆ (ಬ. ಕ.)

ಕಲ್ಯಾಣವಿದು ಜಗನ್ಮಾಂ
ಗಲ್ಯಂ ಸಮ್ಯಕ್ತ್ವರತ್ನದಧಿದೇವತೆ ವಾ ।
ತ್ಸಲ್ಯಂ ಭಾವಿಸುವೊಡೆ ಕೈ
ವಲ್ಯಶ್ರೀವನಿತೆ ತುಡುವ ದಿವ್ಯಾಭರಣಂ ॥ ೫

ಇನ್ನದಱ ಪರಮೈಶ್ವರ್ಯಮಂ ಪೇೞ್ವೊಡೆ ಜಂಬೂದ್ವೀಪದ ಭರತಕ್ಷೇತ್ರದ ಪಾಂಚಾಲವಿಷಯದೊಳ್ ರಮಣೀಯಮಪ್ಪಹಿಚ್ಛತ್ರಮೆಂಬ ಪುರಮುಂಟಾಪುರಮನಾಳ್ವಂ ಸಂತಪನೆಂಬರಸನಾತನ ಪುರೋಹಿತಂ ಸಕಲಶಾಸ್ತ್ರಪರಿಣತಂ ಸೋಮದತ್ತನೆಂಬನಾತನ ಭರ್ತಾರೆ ಯಜ್ಞದತ್ತೆಯೆಂಬಳಾಯಿರ್ವರುಂ ಸಕಲಜನಕ್ಕಂ ನಂಟರ್ಗಮೊಳ್ಳಿದರಾಗಿ ಸುಖದಿಂದಿರ್ಪುದುಂ ॥ ೬

ಹರಿಣಾಕ್ಷಿಗೆ ವಿಪ್ರಕುಲಾಂ
ಬರತರಣಿಗೆ ಸತಿಗೆ ಯಜ್ಞದತ್ತೆಗೆ ನಂಟ ।
ರ್ಗುರುಮುದದಿಂದಂ ರಾಗಂ
ಕರಮಲ್ಲದೆ ಪೆರ್ಚೆ ಗರ್ಭಮಪ್ಪುದುಮಾಗಳ್ [1] ॥ ೭

ಆಗರ್ಭಾರ್ಭಕನೊಂದು
ದ್ಯೋಗಮುಮಂ ಮುಂದಣೊಂದು ರಾಜ್ಯಮುಮಂ ಜೈ ।
ನಾಗಮಕುಶಲತೆಯುಮನಿಂ
ಬಾಗಿರೆ ತೋರ್ಪಂತೆ ಸಾಱುವಂತವಯವದಿಂ [2] ॥ ೮

ಗರ್ಭಮಾದಯ್ದು ತಿಂಗಳ್ಗ ಜಿನಮಂದಿರಂಗಳಂ ಪೋಗಿ ಬಲಗೊಳಲುಂ ಜಿನಬಿಂಬಂಗಳನಷ್ಟವಿಧಾರ್ಚನೆಯಿಂದರ್ಚಿಸಲುಂ ತ್ರಿಭುವನಮಾಂಗಲ್ಯಂಗೆ ಮಹಾಭಿಷೇಕಮಂ ಮಾಡಲುಂ ಶ್ರೀಮದರ್ಹತ್ಪರಮೇಶ್ವರ

---

1 ಪೇೞ್ವೊಡೆ ಪಾಂಚಾಳವಿಷಯದೊಳಹಿಚ್ಛತ್ರಮೆಂಬುದು ಪುರಮದನಾಳ್ವಂ ರಿಪಂತನೆಂಬರಸನ ಪುರೋಹಿತಂ ಸೋಮದತ್ತನೆಂಬನಾತನ ಬ್ರಾಹ್ಮಣಿ ಯಜ್ಞದತ್ತೆಯೆಂಬಳಾಕೆಗೆ ಗರ್ಭಮಾಗಿರ್ಪುದುಂ (ಗ)

2 ಆಗಮಪರಿಣತೆಯುಮನಿಂಬಾಗಿರೆ ಲೋಕಕ್ಕೆ ನೆಱೆಯೆ ಸಾಱುವ ತೆಱದಿಂ (ಗ)

ರೂಪನನೆಮೆಯಿಕ್ಕದೆ ನೋಡಲುಂ ಮೋಕ್ಷಲಕ್ಷ್ಮೀವಿಲಾಸನನಾಗಳುಂ ಪತ್ತುವಿಡದಿರಲುಂ ಜಿನಾಗಮಮನಾಗಳುಂ ಕೇಳಲುಂ ಸಿದ್ಧಾಂತವಚನಮನಾಲಿಸಲುಂ ಚರಿತಪುರಾಣಂಗಳಂ ಪೆಱರ್ಗೆ ಪೇೞಲುಂ ಜಿನಮುನಿಗಳಂ ಸಾರಲುಂ ಜೀವಂಗಳನೋವಲುಂ ಕುಮಾರ್ಗಾನುರಾಗಿಗಳನಗಲಲುಂ ಆಹಾರಾಭಯಭೈಷಜ್ಯದಾನಮಂ ಮಾಡಲುಂ ಸದ್ದೃಷ್ಟಿಗಳಪ್ಪರಾಳ್ತ್ರಡಲುಂ ವಿದ್ಯಾಧರಾಧಿರಾಜರಿಂ ಬಸಕೆಯ್ಸಿಕೊಳಲುಂ ಚಾತುರ್ವರ್ಣ್ಯಕವಿದಿರೆದ್ದು ಕೈಗಳಂ ಮುಗಿಯಲುಂ ಸರ್ವಸ್ವಮನೀಯಲುಂ [1] ಬಯಕೆ ತೀರ್ಣ್ವಮಾಗೆ ॥ ೯

ಪೆಱಗಿಲ್ಬಯಕೆಗಳಂ ತಾ
ನಱಿಪದೊಡಂ ತೀರದೆಂದು ಕಾಮಿನಿ ಮನದೊಳ್ ।
ಮಱುಗಿ ಬಿಸಿದಪ್ಪ ತುಪ್ಪಮ
ನಱಿಯದೆ ಶಿಶು ನುಂಗಿದಂತೆ ಚಿಂತಿಸಿ ಮನದೊಳ್ [2] ॥ ೧೦

[ನೆರೆಯಲ್ಲದು ಪೊರೆಯಲ್ಲದು
ಗೊರವನನಲೆ ಮಗವು ಪೋಲ್ತುದೆಂಬೀನುಡಿಯಂ ।
ತಿರೆ ಚೋದ್ಯಮಾದುದೀತಂ
ಪುರುಳಿಲ್ಲದ ಬಯಕೆ ಬಗೆವೊಡವನೀತಳದೊಳ್] ॥ ೧೧

ಎನ್ನ ಕುಲದವರಕ್ಕೆ ಮೊತ್ತಮಿಯನ್ವಯದವರಕ್ಕೆ ಜಿನಧರ್ಮಮುಂಟುದಂ ಕನಸಿನೊಳಪ್ಪೊಡಂ ಕಂಡಱಿಯರೆನಗೀಗಳನ ಬಯಕೆಗಾಶ್ಚರ್ಯಮಾದುದಿದನೆನ್ನ ಬಂಧುಗಳ್ಗಕ್ಕೆ ಗಂಡಂಗಕ್ಕೆ ಪೇೞ್ವೊಡಮವರೀ ಬಯಕೆಯಂ ತೀರ್ಚುವರಲ್ಲವೆಂದು ಕೊಕ್ಕಳಗುದಿದು ಮೊಗರ್ ಕಂಡ

---

1 ಜಿನೇಶ್ವರರೂಪಂ ನೋಡುವ ವೀತರಾಗನೆಳ್ಗೆಯುಂ ಪಾಡುವ ತ್ರಿಭುವನಪೂಜ್ಯಂಗೆ ಪೂಜೆಯಂ ಮಾಡುವ ಶ್ರಾವಕರೊಡನಾಡುವ ಧರೆಯನಾಳುವ ಪೆಱರ್ಗೆ ಧರ್ಮಮಂ ಪೇಳ್ವ ಜಿನಮುನಿಗಳ ಕಾಲಮೇಲೆ ಬೀಳ್ವ ಚತುರ್ವಿಧದಾನಮಂ ಮಾಳ್ಪ ಸಮ್ಯಗ್ದೃಷ್ಟಿಗಳಿಗೆ ಕೂರ್ಪ ಯುಕ್ತಿಯುತ ಕೆಲದೊಳಿರ್ಪ ಸುವ್ರತಂಗಳಂ ಬೆಸರ್ವ ಮಿಥ್ಯಾತ್ವಮನುಳಿವ ಕುತ್ಸಿತಲಿಂಗಿಗಳ್ಗೆ ಮಾರ್ಮಲೆವ ಬಸದಿಗಳಂ ಕಂಡೊಡೆ ನಲಿವ ಪಾತಕೇತುಗಳ್ಗೆ ಬಲಿವ (ಗ)

2 ಕೊಕ್ಕಳಗುದಿದಳ್ (ಗ)

ಕನಸಿನಂತೆ ಪೆಱರ್ಗೆ ಪೇೞಲಱಿಯದೆ ನಾಡೆಯುಂ ಬಡವಾಗಿರ್ಪುದುಂ ತಾಯುಂ ತಂದೆಯುಂ ಸೋಮದತ್ತನುಂ ಬಂಧುಗಳುಂ ಯಜ್ಞದತ್ತೆ ಬಡವಾಗಿರ್ದುದಕ್ಕೆ ಚೋದ್ಯಂಬಟ್ಟು ॥ ೧೨

ಮುನ್ನಿನೂಟದ ಮಾರ್ಗಮಲ್ಲದು ಬುದ್ಧಿಯುಂ ನಡೆವೋಜೆಯುಂ
ಮುನ್ನಿನಂದಮನೇನೊ ಪೋಲವು ಚಿತ್ತದೊಳ್ ಪೆಱತೊಂದನಾಂ
ತುನ್ನತಿಕ್ಕೆಯನಾಗಳುಂ ನೆನೆಯುತ್ತುಮಿರ್ಪುದಿದೇಕೆ ಪೇೞ್
ಕೆನ್ನನೆನ್ನೊಡನೆಂದಿನಂದದೊಳೊಂದಲೊಲ್ಲದೆ ರಾಗದಿಂ ॥ ೧೩

ಪವನಮಾರ್ಗಮನೇನೊ ನೋಡುತುಮಿರ್ಪಳರ್ತಿಯೊಳಾಗಳುಂ
ಪ್ರವರಮಪ್ಪ ಜಿನಾಲಯಂಗಳನಕ್ಕಱಿಂದಮೆ ನೋಡುವಳ್
ಸವಣರೆಂದೊಡೆ ಪೆರ್ಚುವಳ್ ಜಿನಪೂಜೆಯೆಂದೊಡೆ ನೋಡುವಳ್
ಧವಳಲೋಚನೆ ಜೈನರೆಂದೊಡೆ ಪೊಂಗುವಳ್ಕಡುಗೂರ್ಮೆಯಿಂ ॥ ೧೪

ಇದಾಶ್ಚರ್ಯಮೆಂದು ವಿಸ್ಮಯಂಬಟ್ಟು ಯಜ್ಞದತ್ತೆಯಲ್ಲಿಗೆ ಬಂದು ನಿನ್ನ ಬಯಕೆಯನೆಮಗಱಿಯೆ ಪೇೞ್ವುದಾಬಯಕೆ ತೀರ್ದೊಡಲ್ಲದೆ ನಿನ್ನ ಮೆಯ್ಯ ಬಡತನಂ ಪೋಗದೆಂದು ಕಿಱಿವೆಸಗೊಳ್ವುದುಂ ಯಜ್ಞದತ್ತೆ ಪೇೞಲಣ್ಮದುಸಿರದಿರ್ಪುದುಂ ನಂಟರುಂ ಸೋಮದತ್ತನುಂ ತಾಯುಂ ತಂದೆಯುಂ ಯಜ್ಞದತ್ತೆಯುಂ ನಿಚ್ಚಲಡಸಿ ಬೆಸಗೊಳ್ವುದುಮವರನಿಷ್ಟಕಾಱದೊಂದುದಿವಸಂ ತನ್ನ ಮನದ ಬಯಕೆಯಂ ಪೇೞದೆ ಪುಸಿದಿಂತೆಂದಳ್[1] ॥ ೧೫

---

1 ಕಂಡಱಿಯಾಱಬಯಕೆಯುಂ ತೊಟ್ಟನೆ ಎನಗತ್ತಣಿಂ ಬಂದು ಪುಟ್ಟಿತ್ತೆಂದು ಚಿಂತಿಸಿ ಬಡವಪ್ಪುದುಂ ಸೋಮದತ್ತನುಂ ತಾಯುಂ ಮಾವನುಮತ್ತೆಯುಂ ಬಂಧುಗಳುಂ ಯಜ್ಞದತ್ತೆಯ ಬಡವಪ್ಪುದನಱಿದು ಚೋದ್ಯಂಬಟ್ಟು,

ಸವಣರೆಂದೊಡೆ ಭಕ್ತಿಯಿಂ ಪಂದೆಯ್ದಿ ನೋಡುವಳರ್ತಿಯಿಂ
ಪ್ರವರಮಪ್ಪ ಜಿನಾಲಯಂಗಳನಕ್ಕಱಿಂದಮೆ ನೋಡುವಳ್ ।
ದಿವಿಜಪೂಜಿತಜೈನಪೂಜೆಗೆ ಕೈಗಳಂ ಮುಗಿದಾಲಿಪಳ್
ಧವಳಲೋಚನೆ ಜೈನರೆಂದೊಡೆ ಪೆರ್ಚುವಳ್ಕಡುಗೂರ್ಮೆಯಿಂ ॥

ತನಿರಸದಿಂದಮೃತದ ದೊರೆ
ಯೆನಿಸುವ ಕುಂಕುಮದ ರುಚಿಯನನುಕರಿಸುವ ಮಾ ।
ವಿನ ಪಣ್ಣನೆನಗೆ ನೀವಿಂ
ಬಿನೆ ತಂದಿಕ್ಕುವುದಮೋಘಮೆಂಬುದುಮಾಗಳ್ ॥ ೧೬

ನಂಟರುಂ ಸೋಮದತ್ತನುಂ ಯಜ್ಞದತ್ತೆಯ ಬಯಕೆಗೆ [1] ಬೞಿಗಾಗಿ ಪುಲಿಯ ಗಿಣ್ಣುಮಂ ನೆಲನ ಕೋಡುಮಂ ಕಬ್ಬಿನ ಪಣ್ಣುಮಂ ಪಲಸಿನ ಪೂವುಮಂ ಪಡೆವೊಡಂ ಪಡೆಯಲಕ್ಕುಮಾದಿವಸಂ ಮಾವಿನ ಪಣ್ಣಂ ಪಡೆಯಲ್ಬಾರದಿದಕ್ಕೇಗೆಯ್ವುದೆಂದು ಚಿಂತಿಸಿ ॥ ೧೭

[ತರುಣಿಗೆ ಮಾವಿನ ಪಣ್ಗಳ್
ದೊರೆಕೊಳ್ವವಮೋಘಮೆಂತು ಪೇೞ್ವುದಮಿದನೋ ।
ಸರಿಸಿ ಕರಮೇಳಿಸಿದೊಡ
ಮೆಱಡಿಲ್ಲದೆ ಕೇಳ ಸಾವು ತಾಂ ಸಮನಿಸುಗುಂ ॥ ೧೮

ನಾವಿದನುಪೇಕ್ಷಿಸಿರ್ದೆಮಪ್ಪೊಡೆ ಬೞಿಕ್ಕಮೊಕ್ಕತುಪ್ಪಮನುಡಗಲ್ ಬಾರದು ಮಾವಿನಪಣ್ಣನೆಲ್ಲಿ ಪೊಕ್ಕಪ್ಪೊಡಂ ತರವೇೞ್ಕುಮೆಂದು ಸೋಮದತ್ತನುಂ ಬಂಧುಗಳುಂ ತಾಯ್ತಂದೆಯುಂ ಯಜ್ಞದತ್ತೆಗೆ ಸಂತೋಷಮಪ್ಪಂತಾಗೆ ನುಡಿದು ದೆಸೆದೆಸೆಗೆ ಪೋಗಿ] ॥ ೧೯

ತೊಱೆಗಳ ತೀರದೊಳ್ಗಿರಿಯ ತಪ್ಪಲೊಳಗ್ಗಳಮಪ್ಪ ಕೊಳ್ಳದೊಳ್
ಕೆಱೆಗಳ ನೀರ ಪಳ್ಳದ ತಟಂಗಳೊಳೊಪ್ಪುವ ಪುಷ್ಪವಾಟದೊಳ್
ತುಱುಗಿದ ವೃಕ್ಷಸಂಕುಲದೊಳಾರವೆಯೊಳ್ ಬಳಸಿರ್ದ ತೋಂಟದೊಳ್
ಮಱುಗಿ ತೊೞಲ್ದು ಮಾವಿನ ಫಲಂಗಳನಂದಱಸುತ್ತುಮೆಲ್ಲಿಯುಂ ॥ ೨೦

ಯಿದಾಶ್ಚರ್ಯವೆಂದು ಸೋಮದತ್ತಾದಿಗಳು ಯಜ್ಞದತ್ತೆಯೇನ ಬಯಸಿ ಬಸವಾದಪೆ ಬಯಸಿದ ಬಯಕೆಯಂ ಪೇಳೆಂದು ನಿಚ್ಚ ನಿಚ್ಚಲಡಸಿ ಕೆಱಿಬೆಸಗೊಳ್ವುದುಂ ಅವರಿನಕ್ಕಿಯಿರಲಾಱದೆ ತನ್ನ ಮನದ ಬಯಕೆಯಂ ಪೇಳಲುಮಾದೆ ಪುಸಿರ್ದುತಂದಳ್ (ಗ)

1 ಎಂಬುದುಂ (ಗ)

[ಪಗಲ್ ಪಸಿವುಮನಿರುಳ್ ನಿದ್ರೆಯುಮನಱಿಯದೆ ಗ್ರಾಮನಗರ ಖೇಡಖರ್ವಡಮಡಂಬಪಟ್ಟಣದ್ರೋಣಾಮುಖಂಗಳೊಳೆಲ್ಲಂ ತೊಳಲ್ದು ನೋಡಿ ॥ ೨೧

ಆವನಾದೊಡಮಕ್ಕೆ ಮಾವಿನ ಪಣ್ಣನೀಗಳ ನೋಡಿ ತಂ
ದೀವನುಳ್ಳೊಡೆ ಬೇಗಮಾತನ ಬೇಡಿದರ್ಥಮನೀವೆವೆಂ
ದೋವದೆಲ್ಲಿಯುಮಲ್ಲಿಗಲ್ಲಿಗೆ ಸಾಱುತುಂ ಬಿಡದೆಯ್ದೆ ಸ
ದ್ಭಾವದಿಂ ನೆಱ ಕೇಳುತುಂ ತಿರಿದರ್ಮಹೀತಳಮೆಲ್ಲಮಂ] ॥ ೨೨

ತುಱುಗಾವ ಗೋವರಂ ಮ
ತ್ತೆಱಕೆಯ ಕಬ್ಬಿಲರನೆಯ್ದೆ ಬೆಸಗೊಳುತುಂ ಬಾಯ್ ।
ಬಱಬಱತ್ತುತ್ತುಂ ಮೈ
ಮಱುಗಿ ಮಹಾಭರದಿನರಸುತಿರ್ದವಸರದೊಳ್ [1] ॥ ೨೩

[ಬಲವಾಹಿನಿಯೆಂಬ ತೊಱೆಯ ತಡಿಯೊಳಿರ್ದ ಬೇಡವಳ್ಳಿಗೆ ಸೋಮದತ್ತಂ ಛಾತ್ರವೆರಸು ಪೋಗಿ ಮಾವಿನ ಪಣ್ಣಡೆಯಂ ಪುಳಿಂದರಿಂ ಬೆಸಗೊಳ್ವುದುಮೊರ್ವ ಬೇಡಂ ಸೋಮದತ್ತನಲ್ಲಿಗೆ ಬಂದು ನಿಮ್ಮರಸುವ ಮಾವಿನಪಣ್ಣಡೆಯನಾನಱಿವೆನೆಂಬುದುಂ ಆತನ ಮಾತಿಂಗೆ ಪ್ರಾಣಬಂದಂತಾಗೆ ಸಂತೋಷಂಬಟ್ಟು ॥ ೨೪

ತಡೆಯದೆ ಮಾವಿನ ಪಣ್ಣ
ಡೆಯಂ ನೀನೆಮಗೆ ತೋರ್ಪೆಯಪ್ಪೊಡೆ ನಿನಗಾಂ ।
ಕುತುಕಂ ಬೇಡಿದ ವಸ್ತುವ
ನಡಿಮಡಗದೆ ಮನೆಗೆ ಬೇಗಮೆಂಬುದುಮಾಗಳ್ ॥ ೨೫

ಕಿರಾತಂ ತನ್ನ ಬೇಟ್ಪ ವಸ್ತುವಂ ಬೇಡಿಕೊಂಡು ಸೋಮದತ್ತಂಗಿಂತೆಂದಂ:—ಅಬ್ಜಷಂಡಮೆಂಬುದೊಂದುಮಾವಿನವನಮಿಾನದೀತೀರದೊಳ್ ಪುರ್ದು ತದಾಮ್ರವನದೊಳೊರ್ವಂ ಮೈಯೊಳೆಲ್ಲಂ ಕೆಸಱನೊಟ್ಟ

---

[1] ಮೆಯ್ಯಱಿಯದೆ ಪಂಬರಿದು ಪಲರುಮಂ ಬೆಸಗೊಳುತಂ (ಗ)

ಕೊಂಡು ಬತ್ತಲೆಮರುಳಂತೆ ತನ್ನೊಳ್ ಮಿಸುಕುತ್ತುಂ ಮೋನದೊಳಿರ್ದನಾತಂ ಕುಳ್ಳಿರ್ದೆಡೆಯ ಚೂತಮಹೀಜಾತಂ ಪಣ್ಫಲಂಗಳಿಂ ದೊಱಗಿದರ್ದಪುದಲ್ಲಿಗೆ ಪೋಗಿ ನೀಮಾರ್ಪನಿತು ಪಣ್ಗಳಂ ಕೊಳ್ಳಿಮೆಂದು ಕಿಱಿದೆಡೆಯುಂ ಬಂದು ಬಟ್ಟೆಯುಂ ತೋಱಿ ವ್ಯಾಧಂ ಮಗುಳ್ದು ಪೋಪುದುಂ ಸೋಮದತ್ತಂ ॥ ೨೬

ತೋಱಿಯ ತಡಿವಿಡಿದು ಬರುತುಂ
ತುಱುಗಿದ ಸಹಕಾರವನಮನೊರ್ಮೆಗೆ ಕಂಡ ।
ಱ್ಕಱಿನೊಳ್ ರಾಗಿಸಿ ನಲಿದಂ
ಮಱುಕಂ ಪೆಱಪಿಂಗಿ ಪೋಗೆ ಮನದಿಂದಾಗಳ್ ॥ ೨೭

ವನಮಂ ಪೊಕ್ಕು ನೋಡುತುಂ ಬರ್ಪಾತಂ ಫಲಭಾರದಿಂ ಸೊಗಯಿಸುವ ಮಾಕಂದಮಹೀರುಹಮಂ ತದ್ವೃಕ್ಷದ ಕೆಳಗಿರ್ದ ಸುಮತಿಭಟ್ಟಾರಕರೆಂಬ ಮಹರ್ಷಿಯರುಮಂ ಕಂಡು ತನ್ನೊಳಿಂತೆಂದಂ ॥ ೨೮

ಈವನದ ಚೂತಭೂಜಾ
ತಾವಳಿಯೊಳ್ ಫಲಮುವಿಲ್ಲಮಿರ್ದಂತಾಗೀ ।
ಮಾಪಿನೊಳ ಪಣ್ಗಳಾದುವು
ಭಾವಿಸುವಂತಿದುವೆ ಚೋದ್ಯಮುರ್ವೀತಳದೊಳ್ ॥ ೨೯

ಈಮುನಿಯ ತಪೋನ್ನತಿಯಿಂ
ದೀಮಾವೊಂದಱೊಳ್ ಪಣ್ಗಳಾದುವು ಬಗೆವಂ ।
ದೀಮುನಿಯ ತಪೋನ್ನತಿಯಂ
ಸಾಮಾನ್ಯಮನುಷ್ಯರೆಯ್ದೆ ನೆಱೆವರೆ ಪೊಗೞಲ್] [1] ॥ ೩೦

1 ಬಲವಾಹಿನಿಯೆಂಬ ತೋಱಿಯ ತಡಿವಿಡಿದು ಬರುತ್ತಂ ಪಂಣಿಂ ತುಱುಗಿದ ಮಾವುಮನಾಮಾವಿನ ಕೆಳಗಿರ್ದ ಸುಮತಿಭಟ್ಟಾರಕರೆಂಬರುಮಂ ಕಂಡು ಹರುಷಚಿತ್ತನಾಗಿ (ಗ)

ಈವರಮುನಿಪನೆ ಸಾಕ್ಷಾ
ದ್ದೇವಂ ಧರಣೀತಳಕ್ಕೆ ಪೆತ್ತುಱದವೆರಂ ।
ದೇವರೆನವೇಡ ಧರೆಯೊಳ್
ದೇವರೆ ನಟ್ಟಿರ್ದ ಕಲ್ಲುಪೊಟ್ಟಿದ ಮಣ್ಣುಂ ॥ ೩೧

[ಈ ಮಹಾತ್ಮನ ತಪದ ಸಾಮರ್ಥ್ಯದಿಂದೀಪಾಪ್ರೊಂದಱೊಳ್ ಫಲಮಾದುದಲ್ಲದಂದು ನಾಡೊಳಗಣ ಮಾವುಗಳೇಕೆ ಪಣ್ಣಾಗಪಂದು ಯತಿವೃಷಭನಂ ಪರಮಾಪಧಿಲೋಚನನಂ ಪೊಗೞುತ್ತುಂ ಮನದೊಳಾದರದಿಂ ಪೊಡೆಮಡುತುಮಿರ್ದ್ದವೆಂದು ಛಾತ್ರರುಂ ತಾನಂ ಮುಂದೆ ನಿಲ್ವುದುಂ ಅವರ್ ತ್ರಿಲೋಕಪ್ರಜ್ಞಪ್ತಿಯೆಂಬಾಗಮಮಂ ಪಱಿಪೆಡಿಗೆಯ್ಯುತ್ತುಮಿಲ್ಲಿ ನರಲೋಕದೊಳಾದ ವೃತ್ತಾಂತಮೆಲ್ಲಮಂ ನೋಡಿ ಸ್ವರ್ಗಲೋಕದ ವ್ಯಾವರ್ಣನೆಯುಂ ಮಾಡುವಲ್ಲಿ ಪನ್ನೆರಡನೆಯ ಸಹಸ್ರಾರಕಲ್ಪಮಂ ನೋಡುತುಮಿರ್಩ರ್ದುಂ] [1] ॥ ೩೨

ಪರಿಣತನಪ್ಪುದಱಿಂ ವ್ಯಾ
ಕರಣದೊಳಮಯುಪಟಿನಪಱ ಶಬ್ದಾರ್ಥಮನ ।
ಚ್ಚರಿಪಟ್ಟು ಭಾವಿಸುತ್ತುಂ
ಧರಾಮರಂ ಸೋಮದತ್ತನಿರ್ದನ್ನೆವರಂ ॥ ೩೩

ಸೂರ್ಯಾಭಪೆಂಬ ವಿಮಾನಮಂ ವ್ಯಾವರ್ಣಿಸುವುದುಂ ತಾನಾ ವಿಮಾನದೊಳ್ ಮುನ್ನಿನ ಭವದೊಳ್ ಸೂರ್ಯವರನೆಂಬ [ಮಹರ್ಧಿಕ] ದೇವನಾಗಿ ಪುಟ್ಟಿ ಬಂದನಪ್ಪುದಱಿಂ [ತದ್ವಿಮಾನದೊಳಾದ ವೃತ್ತಾಂತಮಂ ಕೇಳ್ದು] ॥ ೩೪

ಜಾತಿಸ್ಮರನಾಗಿ ಮಹಾ
ಖ್ಯಾತಿಯು ವಿಪ್ರಾಂಬರಾರ್ಕನಾಕ್ಷಣದೊಳ್ ಧಾ ।

---

1 ಯಿಂನವರ ಸಾಮರ್ಥ್ಯಮಪೂರ್ವಮೆಂದು ಯತಿವೃಷಭನ ಮುಂದೆ ಛಾತ್ರರುಂ ತಾನುಂ ಕುಳ್ಳಿರ್ದುದುಂ ತ್ರಿಳೋಕಪ್ರಜ್ಞಪ್ತಿಯೆಂಬಾಗಮಮನೋದುತ್ತಲ್ಲಿ ಸಹಸ್ರಾರಕಲ್ಪದ ವ್ಯಾವರ್ಣನೆಯುಂ (ಗ)

ಶ್ರೀತಳಕೆ ನೆರೆದ ಶಿಷ್ಯ
ವ್ರಾತಂ ಬೆಱಗಾಗೆ ಮೂರ್ಛೆಯಿಂದಂ ಬಿರ್ದಂ ॥ ೩೬

[ಅಂತು ಮೂರ್ಛೆವೋಗಿ ಬಿರ್ದುದಕ್ಕೆ ಛಾತ್ರರೆಲ್ಲಂ ಬೆರ್ಚಿ ತವೆಕ್ಕೊಳ್ ॥ ೩೭

ಮನೆಯಿಂದಂ ಪಿಡುಕಂ ಮಹಾಸುಖಿ ಕರಂ ವ್ಯಾಳಂ ಮಹಾಭೋಗಿ ದೇ
ವನಿಭಂ ಶ್ರೀನಿಳಯಂ ಸಮಸ್ತನುತಶಾಸ್ತ್ರಾಂಭೋಧಿ ತಾಂ ತನ್ನ ಕಾ
ಮಿನಿಗತ್ಯುತ್ಸವಮಾಗೆ ಮಾವಿನ ಫಲವ್ರಾತಂಗಳಂ ತರ್ಪೆನೆಂ
ದಿನಿತಂ ಪೊಣ್ದು ಧರಿತ್ರಿಯಂ ತಿರಿದು ತಾಂ ಬೇಸತ್ತು ನಿಶ್ಶಕ್ತಿಯಿಂ ॥

ಬಿರ್ದನೆಂತು ದುಃಖಂಬಟ್ಟಳಾತೆ ತಮ್ಮ ಮೇಲುದಂ ತಿಳಿಗೊಳದೊಳ್ ಕೋಡುವಾಲಿನೀರೊಳದ್ದಿ ತಂಪಾಮೊಗದೊಳೊತ್ತಿ ಕಾಲನೊತ್ತುತ್ತುಮಿರ್ಪನಂ ಸೋಮದತ್ತಂ ಮೂರ್ಛೆಯಿಂದೆಚ್ಚತ್ತು][1] ॥ ೩೮

ಸುರಲೋಕಭೋಗಮಂ ಭೂ
ಸುರವಂದ್ಯಂ ನೆನೆದು ಮರ್ತ್ಯಲೋಕದ ಸುಖಮಂ ।
ಪರಿಹರಿಸಲೆಂದು ಬಗೆದಂ
ಪರಮಾರ್ಥಂ ಕಾಲಲಬ್ಧಿಯಾದುದು ಕೇವಲಮೋ[2] ॥ ೩೯

ಜಿನಧರ್ಮಮೆಂಬುದಂ ಕನ
ಸಿನೊಳಂ ಕಂಡಱಿಯನಘಸಮೇತಂ ತಾಂ ತೊ ।
ಟ್ಟನೆ ಭವಮನಱಿದು ಸಂಸೃತಿ
ವನಮಂ ತಱಿದೊಟ್ಟಿ ಸುಡುವ ಬಗೆಯಂ ತಂದಂ ॥ ೪೦

ಸತ್ತವರನಾರೊ ಕಂಡರ್
ಚಿತ್ತಂ ಪರಿದಂತೆ ಮಾಳ್ಪುದೆಂಬರ್ ಕುಱಿಗಳ್ ।
ಸತ್ತವರೆ ಪುಟ್ಟದಿರ್ದೊಡೆ
ಮತ್ತಾನಿಂದೀಗಳತ್ತಣಿಂದಂ ಬಂದೆಂ ॥ ೪೧

---

1 ಬಿರ್ದಂಗೆ ಶಿಷ್ಯವರ್ಗಮಾಡುವ ಶೀತಳಕ್ರಿಯೆಯಿಂದೆಚ್ಚತ್ತು (ಗ)

2 ಲಬ್ಧಿಯುಳವದು ಕಿಱಿದೇ (ಗ)

[ಎಂದು ಬಗೆದು ತನ್ನ ಮುನ್ನಿನ ಭವಮನಱಿದು ಜೀವವಿಲ್ಲೆಂದು ನುಡಿವ ಕುಮತಮಂ ಬಿಟ್ಟು ಜೀವನುಂಟೆಂಬ ಜಿನಾಗಮಾಭಿಪ್ರಾಯಮಂ ಮನದೊಳ್ ನಂಬಿ ಸುಮತಿಭಟ್ಟಾರಕರಱಿವಂ ನೋಡಲೆಂದು ತನ್ನ ಭವಮಂ ಬೆಸಗೊಳಲ್ವೇಡಿ ಸಮೀಪಕ್ಕೆ ಬಂದು ಕುಳ್ಳಿರ್ದುಮವರೀತನಾಸನ್ನಭವ್ಯನೆಂದಱಿದು ಬೇಗಮವನಿಂ ಮುನ್ನಂ ಮನದಭಿಪ್ರಾಯಮನಿಂತೆಂದರ್ ॥ ೪೨

ಮುನ್ನಿನ ಭವಮಂ ನೀಂ ವಿ
ಪ್ರೋನ್ನತ ಜಾತಿಸ್ಮರತ್ವದಿಂದಱಿದೀಗಳ್ ।
ನಿನ್ನ ಕುಬುದ್ಧಿಯಿನಿವರುಮ
ನಾಂ ನೆಱೆ ಬೆಸಗೊಳ್ವನೆಂದು ಮೆಲ್ಲನೆ ಬಂದೈ ॥ ೪೩

ನಿನ್ನ ಬೆಸಗೊಳ್ವವಿತಂ ಬೆಸಗೊಳ್ಳೆಂಬುದುಂ ಸೋಮದತ್ತನವರಱಿತಕ್ಕೆ ಬೆಱಗಾಗಿ ಬೇಱನಱಿವರ್ಗೆಳೆಯುಂ ತೋಱಿವರೆಂಬಂತೆ ಜಾತಿಸ್ಮರತ್ವಮನಱಿವೀಮಹಾಪುರುಷಂಗೆ ಲೋಕದೊಳಾವ ವಸ್ತುಗಳನಱಿವುದಾವುದು ಚೋದ್ಯಮೆಂದು ನಂಬಿ ತನ್ಮುನಿಯ ಚರಣಯುಗಳಕ್ಕೆ ಸಾಷ್ಟಾಂಗವೆಱಗಿ ಪೊಡೆಮಟ್ಟು ಕೈಗಳಂ ಮುಗಿದು ॥ ೪೪

ಮುನಿಯುಂ ಬೆಸಗೊಂಡಂ ಮೆ
ಲ್ಲನೆ ನಿಮ್ಮಡಿ ಬೆಸಸಿಮೆನ್ನ ಭರ್ತಾರಿಯು ಮಾ ॥
ವಿನ ಪಣ್ಣನೇಕೆ ಬಯಸಿದ
ಳನಿತಾನುಂ ವಸ್ತುನಿಕರಮಿರ್ದುಂ ತಿನಿಸಂ ॥ ೪೫

ಎಂದು ಬೆಸಗೊಳ್ವುದುಂ ಸುಮತಿಭಟ್ಟಾರಕರಾಕೆಯ ಗರ್ಭದ ಕೂಸು ಜಿನಸಮಯಪ್ರಕಾಶನುಂ ವಾತ್ಸಲ್ಯರತ್ನಾಕರನುಂ ಕರ್ಮಾಚಲವಜ್ರನುಂ ಮುನಿಜನಹೃದಯಾನಂದನುಂ ದಿಗಂಬರಸರೋಜರಾಜಹಂಸನುಂ ಸುಕವಿನಿಕರಪಿಕಮಾಕಂದನುಂ ಸಹಜಕವಿಜನ ಮನೋಹರೋದ್ಯಾನವನಕಲಕಂಠನುಂ ಆಸನ್ನಭವ್ಯನುಂ ಸುಜನಮನೋರಂಜನನುಂ ಸಮ್ಯಕ್ತ್ವಚೂಡಾಮಣಿಯುಂ ವಿದ್ಯಾಧರಾನತಪಾದಪಲ್ಲವನುಮಪ್ಪುದಱಿಂದವನ ಬಯಕೆ ನಿನ್ನ ಪೆಂಡತಿಯಪ್ಪ ಯಜ್ಞದತ್ತೆಗೆ ಬಯಕೆಯಾಗೆ ಜಿನೇಂದ್ರಾಭಿಷೇಕಮಂ ಮಾಡಲುಂ ಜಿನಮಹಾಮಹಿಮೆ

ಗಳಂ ನೋಡಲುಂ ಚರಿತಪುರಾಣಂಗಳಂ ಪೆಱಗೆ ಪೇೞಲುಂ ಜಿನಾಗಮ ಮನಾಗಳುಂ ಕೇಳಲುಂ ಶ್ರಾವಕರೊಡನಾಡಲುಂ ಶ್ರಾವಕರ್ಗುಡಲುಂ ತೊಡಲುಂ ಕುಡಲುಂ ಚಾತುರ್ವರ್ಣ್ಯಕ್ಕಂ ವಿನಯದಿಂ ಬೆಸಕೆಯ್ಯಲುಂ ಚತುರ್ವಿಧಮಪ್ಪ ಮಹಾದಾನಮಂ ಮಾಡಲುಂ ಮುನಿವೃಂದಾರಕರ ಸಮೀಪದೊಳಿರಲುಂ ಮನಮಪ್ಪಾಗೆ ನಿಮಗಾ ಬಯಕೆಯುಂ ಪೇೞಲಣ್ಮದೆ ನಿಮ್ಮನಿಷ್ಟಕ್ಕೆ ಮಾವಿನ ಪಣ್ಣಂ ಬಯಸಿದೆನೆಂದು ಪೇೞ್ವಳೆಂದು ಪೇೞ್ವುದುಂ ಸೋಮದತ್ತಂ ಬೆಱಗಾಗಿ ॥ ೪೬

ವರಮುನಿ ಪೇೞ್ವನಿತುಂ ತಾಂ
ತರುಣಿಯ ಮೇಲಣವು ನಿಶ್ಚಯಂ ನಂಬಿದೆನಂ ।
ದರವಿಂದೋದ್ಭವವಂತಾಂ
ಬುಧಹಾರ್ಕಂ ಮುನಿವರಂಗೆ ಪೊಡೆಮಟ್ಟಾಗಳ್] [1] ॥ ೪೭

---

1 ಎಂದು ಜೀವನಿಲ್ಲ ಪರತ್ರೆಯಿಲ್ಲೆಂಬ ತನ್ನ ಮುನ್ನಿನ ಶೂನ್ಯವಾದಮಂ ಬಿಟ್ಟು ಜೀವನುಂಟು ಪರತ್ರೆಯುಂಟು ಎಂಬ ಜೈನಮತಾಗಮಮುಮಂ ನಂಬಿ ಸುಮತಿಭಟ್ಟಾರಕರ ಮೊಗಮಂ ನೋಡುವುದುಂ ಅವರೀತನಾಸನ್ನಭವ್ಯನೆಂದಱಿದು ಶೂನ್ಯಮತಂಗಳುಮಂ ಮಿಥ್ಯಾತ್ವಮುಮಂ ಬಿಟ್ಟು ಜಿನದೀಕ್ಷೆಗೆ ಮನಂಗೊಂಡು ಲೇಸಾಗಿಯಿರ್ದಿಂಸಿಂಮ ಬೆಸಗೊಳ್ವುದುಂ ಬೆಸಗೊಳ್ಳಮೆಂಬುದುಮವರಾತನ ಮನದ ಬಯಕೆ ತೀರ್ದಂತೆ ಪೇಳ್ವುದುಂ ಅವನಱಿತಕ್ಕೆ ವಿಸ್ಮಯಂಬಟ್ಟು ಬೇರನಱಿವರ್ಗೆಲ್ಲಮಂ ಪೇಳ್ದರೆಂಬಂತೆ ಸರ್ವಜ್ಞನಱಿವಂ ಪೇಳ್ದರೆಂಬಂತೆ ಮತ್ತಮಸವಣಂಗೆ ಸುಬಟ್ಟಕ್ಷರಮಂ ತೋಱಿದರೆಂಬಂತೆನ ಚಾರಿತ್ರರಮನಱಿದೀ ಮಹಾಪುರುಷಂಗೆ ಮೂಱುಂ ಲೋಕದ ವಸ್ತುಗಳನಱಿವುದು ಗಹನಮಲ್ಲದಿಂನೆಂನಂ ಬೆಸಗೊಳ್ವೆನಾದು ಭಾವಶ್ರುತದಿಗಂಬರದಾಸನ ಕಾಲ ಮೇಲೆ ಬಿರ್ದ್ದು ನಿಮ್ಮಡಿ ಬೆಸಸಿ ಮೆಂನ ಪೆಂಡತಿಗೀ ಕಾಲದೊಳು ಪಡೆಯಲು ಬಾರದಪೂರ್ವಮಪ್ಪ ಮಾವಿನ ಪಣ್ಣ ಬಯಕೆ ತೊಟ್ಟನೇಕಾದುದೆಂಬುದು ಮವರವಧಿಜ್ಞಾನದಿಂದಱಿದು,

ಅಸತಿಯು ಗರ್ಭದೊಳಗಿರ್ದ್ದಾಸುತನತ್ಪ್ರದಾಂಬುಜದ್ವಯಮಧುಪಂ।
ಶ್ರೀಸತಿಪತಿ ಸಕಲಗುಣಾವಾಸಂ ಸದ್ವೃತ್ತ್ವತತ್ವದಿವ್ಯಾಭರಣಂ ॥

ಆತನ ಬಯಕೆ ತನಗೆ ಬಯಕೆಯಾಗೆ ಯುದಱಿಂದಾ ಬಯಕೆಯುಂ ನಿಮಗಱಿಪಲುಮದೆ ನಿಂಮನಿವಕ್ಕೆ ಪುಸಿದು ಮಾವಿನ ಪಣ್ಣಂ ಬಯಸಿದೆನೆಂದು ಪೇಳ್ದಳೆಂಬುದುಂ ನೋಡುದತ್ತಂ ಬೆಱಗಾಗಿ (ಗ)

ಸುಡು ಸಂಸಾರಮನೊಲೆಯೊಳ
ಗಿಡು ಸಂಸೃತಿಸುಖಮನೀಮಹಾಪುರುಷನ ಮ |
ಲ್ಲಡಿಯುಂ ನೋಡುತ್ತುಂ ಮೃದು
ನುಡಿಯಂ ಕೇಳುತ್ತುಮಿರ್ಪುದೊಂದರಸತ್ತೇ ‖ ೪೮

ಎಂದು ಮಾವಿನ ಪಣ್ಗಳಂ ಛಾತ್ರರ ಕೈಯೊಳ್ ಅಹಿಚ್ಛತ್ರದ ಪುರಕಟ್ಟಿ ತಾಂ ಪೋಗಲೊಲ್ಲದಿರ್ದು ‖ ೪೯

ಜಿನವಾಕ್ಯಂ ಪೊಱಗಾಗೆ ಮತ್ತಿನ ವೃಥಾಳಾಪೋಕ್ತಿಗಳ್ಗಾನೆ ದೇ
ವನನುರ್ವೀತಳದೊಳ್ ಸಮಸ್ತವಿಷಯ [1] ವ್ಯಾಪಾರಮಂ ಬಲ್ಲನೊ
ಯ್ಯನೆ ಜೈನಾಗಮಮಂ ಸಮಸ್ತದುರಿತಪ್ರಧ್ವಂಸಿಯಂ [2] ಕೇಳ್ವನೀ
ಮುನಿಪಾಂಘ್ರಿದ್ವಯಪದ್ಮದೊಳ್ ನೆಱೆಯೆ ಪೊರ್ದಿರ್ದಲ್ಲಿ ನಾನರ್ತಿಯಿಂ [3]

ಎಂದು ಉತ್ಸಾಹಮನನಾಗಿ, ಬೀದಿಯ ರತ್ನದಂತೆ, ಪೊಸಂತಿಲ ನಿಧಿಯಂತೆ, ಮನೆಗೆ ವಂದ ನಿಕ್ಷೇಪದಂತೆ, ಕುಡದೆ ಬಂದ ಭಂಡಾರದಂತೆ, ಮಾಡದೆ ಬಂದ ಮನೆಯಂತೆ, ಬೇಡದೆ ಬಂದ ಸಾಲದಂತೆ, ಪಡೆಯದೆ ಬಂದ ದೇಶದಂತೆ, ವರಿಸದೆ ಬಂದ ನಲ್ಲಳಂತೆ, ಕಾಡದೆ ಬಂದ ರಾಜ್ಯದಂತೆ, ಬಿತ್ತದೆ ಬಂದ ಧಾನ್ಯದಂತೆ, ಚಿಂತಿಸದೆ ಬಂದ ಕಸವರದಂತೆ, ಪ್ರಾರ್ಥಿಸದೆ ಬಂದ ಮದುವೆಯಂತೆ, ಸಾಧಿಸದೆ ಪಡೆದ ವಿದ್ಯೆಯಂತೆ, ಕಾದದೆ ಗೆಲ್ದ ಗೆಲ್ಲದಂತೆ, ಕೇಳದೆ ಬಂದ ಶಾಸ್ತ್ರದಂತೆ, ನುಡಿಯದೆ ತಿರ್ದಿದ ಕಾರ್ಯದಂತೆ, ಮಱೆಯಿಲ್ಲದೆ ತೀವಿದ ಕೆಱೆಯಂತೆ, ನೀರೆತ್ತದೆ ಫಲವಾದ ತೋಂಟದಂತೆ, ಮದ್ದಿಲ್ಲದೆ ಪೋದ ಕುತ್ತದಂತೆ, ತನಗೆ ತಾನೆ ಬಂದ ಸಿರಿಯಂತೆ, ಪುಣ್ಯದಿಂ ದೊರೆಕೊಂಡ ಜೈನಧರ್ಮಮನೊಲ್ಲದೆ ಬಿಟ್ಟೊಡೆ ; ಮುಗಿಲ ನೀರಂ ನಂಬಿ ದೋಣಿಯ ನೀರಂ ತುಳುಂಕುವ ಕೋಡಗಮುಮಂ, ಪೆಱರ ಬೆಳಸಂ ನಂಬಿ ಕೆಲಸಂಗೆಯ್ಯದ ಇಕ್ಕಲಿಗನುಮಂ, ನಂಟರ ಮಕ್ಕಳಂ ನಂಬಿ ತನ್ನ ಮಕ್ಕಳಂ ಕಳೆವ ನಿರ್ಬು

---

[1] ಸಮಯ (ಗ)   [2] ಜರಾಮರಣ ಜಾತಿಚ್ಛೇದಮಂ (ಗ)
[3] ಮುನಿನಾಥೋತ್ತಮ ನಿಲ್ಲಿ ಬೇಗಮೆನುತ್ತುಂ ಸದ್ರಾಗಮಂ ತೋಱಿದಂ (ಗ)

ದ್ಧಿಯುಮಂ, ಜಾರೆಯ ಮಾತಂ ನಂಬಿ ತನ್ನ ಪೆಂಡತಿಯಂ ಬಿಡುವ ಬೇಂಟಗಾಱನುಮಂ, ಕಳ್ಳನ ನುಡಿಯುಂ ನಂಬಿ ತಳಾಱನಂ ಕೊಲ್ವ ಗ್ರಾಮಣಿಯುಮಂ, ಮದುವೆಯ ಕೂೞಂ ನಂಬಿ ಮನೆಯ ಧಾನ್ಯಮಂ ಸೂಱೆಗೊಡುವ ಬೆಳ್ಪನುಮಂ, ಸಾಲದ ಪೊನ್ನಂ ನಂಬಿ ಪೂಳ್ದ ಪೊನ್ನ ನೀಡಾಡುವ ಮರುಳನುಮಂ, ಕೈಯುದಂ ಬಿಟ್ಟು ಕಾಲದಕ್ಕೆಱಗುವ ಲೋಭಿಯುಮಂ, ಧಾತುವಾದಮಂ ನಂಬಿ ಕೈಯೊಡಮೆಯುಂ ಬೀಯಂ ಮಾೞ್ಪ ಹೀನಿಯುಮಂ, ಗುಡಿಚಂ ನಂಬಿ ಮನೆಯುಂ ಸುಡುವ ನಿರ್ಬುದ್ಧಿಯುಮಂ, ಹಿಂಡಿಯುಂ ನಂಬಿ ಯೆಣ್ಣೆಯನುಗುವ ತೆಲ್ಲಿಗನುಮಂ, ಬೀಯಕಾಱನಂ ಬಿಟ್ಟು ಬೇಂಟಗಾಱನಂ ಕರೆವ ಸೂಳೆಯುಮಂ, ಮಣ್ಣ ಕೋಂಟೆಯುಂ ನಂಬಿ ಕಲ್ಲ ಕೋಂಟೆಯನೊಡೆವ ಮನ್ನೆಯನುಮಂ, ಬಿನುಗಂ ನಂಬಿ ತೆಱುವೊಕ್ಕಲಂ ಕಳೆವ ಪ್ರಭುವುಮಂ, ಮಾತಾಳಿಯುಂ ನಂಬಿ ವೀರನಂ ಬಿಡುವ ನಾಯಕನುಮಂ, ಸೀರೆಯ ಬಟ್ಟಲಂ ನಂಬಿ ಕಂಚಿನ ಬಟ್ಟಲನೊಡೆವ ಗೊರವನುಮಂ, ಪಾಱು ನಾಡಂ ನಂಬಿ ತೀವಿದ ನಾಡಂ ಕಿಡಿಸುವ ಭೂಪನುಮಂ, ಕಳ್ಳಿಯುಂ ನಂಬಿ ಕೌಂಗಿನ ತೋಂಟಮಂ ಕಡಿವ ತೋಂಟಿಗನುಮಂ, ಪುಲ್ಬಂಟನಂ ನಂಬಿ ಬಲ್ಬಂಟನಂ ಬಿಡುವ ಪಗೆಗಾಱನುಮಂ, ಕಿಚ್ಚಂ ಬಿಟ್ಟು ನೀರಂ ಪುಗುವ ವಾತಾಧಿಕನುಮಂ, ತಣ್ಪಂ ಬಿಟ್ಟು ಬಿಸಿಲಂ ಕಾಯ್ವ ಪಿತ್ತಾಧಿಕನುವಂ ಪೋಲ್ವೆನೆಂದು ಪರಿಚ್ಛೇದಿಸಿ [ಜಿನೇಂದ್ರಧರ್ಮಮಂ ಸುಮತಿಭಟ್ಟಾರಕರೊಳ್ ಲೇಸಾಗಿ ಕೇಳ್ದು ತನ್ನ ಮುನ್ನಿನ ಸಂಕಲ್ಪಜಾಲಂಗಳಂ ನಱೆ ತೊಱೆದು ಸಂಸಾರಕ್ಕೆ ಪೇಸಿ ವೈರಾಗ್ಯಂ ಪುಟ್ಟೆ ಪಂಚೇಂದ್ರಿಯಂಗಳೊಳಾದಲ್ಪಸುಖಮಂ ಬಿಟ್ಟತೀಂದ್ರಿಯಸುಖಮಂ ಕೈಕೊಳಲೆಂದು ॥ ೫೧

ಕರಮುಗಿದು ಬಾಗಿ ತಲೆಯಂ
ದುರಿತಮನಿದಟಲೆಯಲೆಂದು ಜಿನದೀಕ್ಷೆಯನಾ ॥
ದರದಿಂ ಮುನೀಂದ್ರವಂದಿತ
ಚರಣಾಂಭೋಜಾತಯುಗಳನಂ ಬೇಡುವುದುಂ ॥ ೫೨

ಸುಮತಿಭಟ್ಟಾರಕರಾತನ ವಿನಯಕ್ಕಂ ಮನದ ವೈರಾಗ್ಯಕ್ಕಂ ಮೆಚ್ಚಿ ದೀಕ್ಷೆಯಂ ಕಾರುಣ್ಯಂಗೆಯ್ವುದುಂ ಜಾತರೂಪಧರನಾಗಿ ಚತುರನುಯೋಗಮುಮಂ ನೋಡಿ ದಶಧರ್ಮಕುಶಲನುಂ ಅಷ್ಟಾವಿಂಶತಿಮೂಲಗುಣಸಮನ್ವಿತನುಂ ದರ್ಶನಸಂಶುದ್ಧನುಮಾಗಿ] [1] ಕೆಲವುದಿವಸಂ ಗುರುಪಾದಸೇವೆಯೊಳಿರ್ದು ಗುರುಗಳಾಜ್ಞೆಯಿಂ ದೇಶವಿಹಾರಿಯಾಗಿ [ವಿಹಾರಿಸುತ್ತುಂ ಬಂದು ಮಗಧವಿಷಯದ ಕೌಪಾಳವೆಂಬ ಪುರದ ಪಡುವಣದೆಸೆಯ] [2] ನಾಭಿಗಿರಿಯೆಂಬ ಪರ್ವತದೊಳಾತಪಯೋಗದಿಂದಿರ್ದನನ್ನೆಗಮಿತ್ತಲ್ ॥ ೫೩

ಸೋಮದತ್ತನ ಕೊಟ್ಟ ಮಾವಿನ ಪಣ್ಗಳಂ ಪಿರಿದಚ್ಚಿಱಿಂ
ಸೋಮದತ್ತನ ಭ್ರಾತೃಸಂಕುಲಮೆಂದು ತಂದತಿರಾಗದಿಂ
ಸೋಮದತ್ತನ ಭಾರ್ಯೆಗಿತ್ತು ಸಮಸ್ತಬಂಧುಜನಾಳಿಗಂ
ಸೋಮದತ್ತನೊಳಾದ ವಾರ್ತೆಯನೆಲ್ಲಮಂ ನೆಱೆ ಪೇೞ್ವುದುಂ ॥ ೫೪

[ಕೇಳ್ದು ಬೆಱಗಾಗಿ ಋಷಿಯರಂ ಪೊರ್ದಿದನಪ್ಪೊಡೆ ನಮಗಲ್ಲನೆಂದು ಮನದೊಳ್ ಮಲಮಱುಗಿ ॥ ೫೫

ಎರಡಿಲ್ಲದೆ ಜಿನರೂಪಂ
ಧರಿಯಿಸದಿರಲಱಿಯನೋವೊ ಋಷಿಯರ ಕೆಲದೊಳ್ ।
ವರಧರ್ಮಶ್ರವಣಮನೊ
ಪ್ಪಿರೆ ಕೇಳ್ವಂ ಬೞಿಕೆ ವಿಪ್ರವಂಶಲಲಾಮಂ ॥ ೫೬

ಎಂಬುದುಂ ಸಕಲಬಂಧುಜನಕ್ಕಂ ಯಜ್ಞದತ್ತೆ ಯಿಂತೆಂದಳ್ ॥

ಧರೆಯೊಳಗಗ್ಗಳಮಪ್ಪ ವಿಪ್ರಕುಲಕ್ಕೆ ಭಾವಿಸಿ ನೋೞ್ಪೊಡಂ
ಪಿರಿಯನಗ್ಗದ ವೇದಶಾಸ್ತ್ರಪುರಾಣತರ್ಕಪರಾಯಣಂ
ಸರಸಿಜೋದ್ಭವನನ್ನನಲ್ಲನೆ ಮಿಕ್ಕ ಚಾರುಚರಿತ್ರದೊಳ್
ಮಂಳ ಮತ್ತತಿ ಜೈನದೀಕ್ಷೆಯನೊಲ್ಲನಲ್ಲನವೋಘದಿಂ ॥ ೫೭

ಎಂಬುದುಮಲ್ಲಿ ಕೆಲರ್ವಿವೇಕಿಗಳಿಂತೆಂದರ್ ॥ ೫೮

ವಾರಿಜೋದ್ಭವನನ್ನರಪ್ಪ ಧರಾಮರರ್ಪಲರುಂ ಸದಾ
ಚಾರರಪ್ಪರೆ ನೋಡ ಕೂರ್ತುಜಿನೇಂದ್ರದೀಕ್ಷೆಯನಾಂತರಿ

1 ಜಿನದೀಕ್ಷೆಯುಂ ಕೈಕೊಂಡು ಆಗಮಂಗಳನೋದಿ (ಗ) 2 ಪೋಗಿ (ಗ)

ನ್ನಾರೊ ಬರ್ಪರನಂತಸೌಖ್ಯಮನೀವ ದಿವ್ಯತಪಸ್ಯೆ ವಿ
ಸ್ತಾರದಿಂ ದೊರೆಕೊಂಡೊಡಲ್ಲದೆ ಬುದ್ಧಿವಂತರಿಳಾಗ್ರದೊಳ್ ॥ ೬೦

ಎಂದು ಯಜ್ಞದತ್ತೆಯ ಬಂಧುಗಳುಂ ಮಿತ್ರರುಂ ತಂತಮ್ಮ ಕಂಡ ಮಾತುಗಳಂ ನುಡಿದು ಸೋಮದತ್ತನಪ್ಪೊಡೆ ಮಹಾವಿವೇಕಿ ಬ್ರಾಹ್ಮಣಂ ಜಿನದೀಕ್ಷೆಯನೆಂತುಂ ಕೈಕೊಳಲಱಿಯಂ ಪುತ್ತ್ರಂ ಬತ್ತಲೆಯುಂ ಬಱಿದಿಲ್ಲೆಂಬೀನಾಣ್ಣುಡಿಯುಂಟಪ್ಪುದಱಿಂದಾಋಷಿಯುಂ ನಂಬಿಸಿ ಪುಸಿ ಭಕ್ತಿಯುಂ ಮಾಡಿ ಯೇನಾನುಮೊಂದು ಸದ್ವಿದ್ಯೆಯುಂ ಸಾಧಿಸಲ್ವೇಡಿ ನಿಂದಂ ತಡೆಯದೆ ಬರ್ಕುಂ ಬಾರದಿರನೆಂದು ಮನದೊಳ್ ಸಂತೋಷಂ ಬಟ್ಟು ಸುಖದಿಂದಿರ್ಪುದುಂ ॥ ೬೧

ಪೆಱಮುಖಿ ಸಮಸ್ತದುಃಖಂ
ಪಱಿವೊಡೆ ನೆಱೆ ಯಜ್ಞದತ್ತೆ ನವಮಾಸಂಗಳ್ ।
ನೆಱೆಯೆ ಸುರರಾಜನಿಭನಂ
ನೆಱೆ ಪೆತ್ತಳ್ ಸಕಲಜೀವನುತನಂ ಸುತನಂ ॥ ೬೨

ಅಂತು ಪೆತ್ತು ಪುತ್ರೋತ್ಸಾಹಮಂ ಮಾಡಿ ಕೂಸಿಂಗೆ ಶ್ರೀದತ್ತನೆಂದು ಪೆಸರನಿಟ್ಟು ಸುಖಮಿರ್ಪನ್ನೆಗಂ ಸೋಮದತ್ತಂ ರುಷಿಯಾಗಿ ಮಗಧವಿಷಯದ ಸೌಪಾಳಪುರದ ಕೆಲದ ನಾಭಿಗಿರಿಯೆಂಬ ಪರ್ವತದೊಳಿರ್ದನೆಂಬುದಂ ಲೋಗರಿಂ ಕೇಳ್ದು ಮೂಲಶುದ್ಧಿಯಿಂದಱಿದು ಬಸಿರಂ ಪೊಸೆದುಕೊಂಡು ಯಜ್ಞದತ್ತೆಯುಂ ಬಂಧುಗಳುಂ ದುಃಖಿತೆಯರಾಗಿ ಸೋಮದತ್ತನ ತಪನನಾವಾವ ತೆಱದೊಳಾದೊಡಂ ಕಿಡಿಸಿ ಬರ್ಪವೆಂಬುದ್ಯೋಗಸನತ್ತಿಕೊಂಡು ಛಲಮಂ ಪೂಣ್ದು] [1] ॥ ೬೩

---

[1] ಪುತ್ತ್ರಂ ಬತ್ತಲೆಯುಂ ಮುಂಬಱಿದಿಲ್ಲೆಂಬ ನಾಣ್ಣುಡಿಯುಂಟಪ್ಪುದಱಿಂದಾಋಷಿಯುಮಂ ನಂಬಿಸಿ ಪತಿಭಕ್ತಿಯುಂ ಮಾಡಿ ವಿದ್ಯೆಯುಮೇನಾನುಮಂ ಕಲಿಯಲ್ಕೆಂದು ನಿಂದನಕ್ಕುಂ ಬಾರದಿರಲಱಿಯನೆಂದು ಸಂತೋಷಂ ಬಟ್ಟಿರ್ದನನ್ನೆಗಂ ನವಮಾಸಂ ನೆಱೆದು ಯಜ್ಞದತ್ತೆ ಗಂಡುಗೂಸಂ ಪಡೆದು ಕೂಸಿಂಗೆ ಶ್ರೀದತ್ತನೆಂದು ಪೆಸರನಿಟ್ಟು ಸುಖಮಿರ್ದೊಂದುದಿವಸಂ ಸೋಮದತ್ತಂ ಋಷಿಯಾಗಿ ನಾಭಿಗಿರಿಪರ್ವತದೊಳಿರ್ದನೆಂಬುದಂ ಕೇಳ್ದು ಮೂಲಶುದ್ಧಿಯಿಂದಱಿದು ನಂಟರೆಲ್ಲರುಂ ಮಸಗಿ ಪುರದಿಂ (ಗ)

ಪೊಱಮಟ್ಟು ಕೋಪದಿಂ ಮ
ಯ್ಯಱಿಯದೆ ತನ್ಮುನಿಯ ತಪಮನೇಗೆಯ್ದುಂ ಪೊ ।
ಚ್ಚಱುಗಿಡಿಸಿ ತರ್ಪೆವೆಂಬೊಂ
ದಱಿಕೆಯಿನವರೆಯ್ದವೆಂದರಾಗಿರಿವರಮಂ ॥ ೬೪

[ಅಂತೆಯ್ದುವೆಂದು ನಾಭಿಗಿರಿಪರ್ವತದೊಳಿರ್ದ ಮಂದರಾದ್ರಿಯಂತಚಳಿತನಾಗಿ ನಿಂದಿರ್ದ ಸೋಮದತ್ತಮುನಿಯುಂ ಕಂಡು ಸಾರೆವಂದು ನಂಟರೆಲ್ಲಮಿಂತೆಂದರ್ ॥ ೬೫

ಪಡೆಯಬಾರದ ದಿವ್ಯಮಪ್ಪ ಧರಾಮರತ್ವಮನಂಮ ನೀಂ
ಪಡೆದು ಮತ್ತದನೊಲ್ಲದಿಲ್ಲಿಗೆವಂದು ಗಾವಿಲನಾಗಿ ಚಿಃ
ಕಿಡಿಸಿ ಚಾರುಚರಿತ್ರಮಂ ತೊಱೆದೆಮ್ಮನಾಱಡಿಗೊಂಡು ಕೈ
ಮಡಗದೇಳದರಂತೆ ಘಮ್ಮನೆ ಪೊರ್ದಿದೈ ಜಿನದೀಕ್ಷೆಯಂ] ॥ ೬೬

ಸುಬ್ರಾಹ್ಮಣನಾಗಿರ್ದುಂ
ಸುಬ್ರಾಹ್ಮಣರಿಂದೆ ಪೊಗೞೆಪಟ್ಟುಂ ಮತ್ತಂ ।
ಸುಬ್ರಾಹ್ಮಣತ್ವಮಂ ನೀಂ
ನಿರ್ಬ್ರಹ್ಮಂ ಕಿಡಿಸಿ ಸವಣನಾದೈ ಮರುಳೇ ॥ ೬೭

[ನಿನ್ನೋದಿನಿವಿಪರೋದುಗ
ಳುನ್ನತಮೆಂದಿವರ್ಗೆ ಸೋಲ್ತು ಪೊರ್ದಿದೆಯೋ ಮೋಣ ।
ನಿನ್ನ ಕುಲಕ್ಕಿವರನ್ವಯ
ಮಿನ್ನಧಿಕಂ ದಿವ್ಯಮೆಂದು ಮೋಣ್ಪೊರ್ದಿದೆಯೋ ॥ ೬೮

ಕೆಮ್ಮನೆ ಸವಣರ ಗೋರಿಗೆ
ನೀಂ ಮತಿಗೆಟ್ಟಱತವಿಲ್ಲದರಿವರೊಳನಿಸುಂ ।
ಸಮ್ಮತವಿಲ್ಲದೆ ಮರುಳಂ
ತಮ್ಮ ಪಾತ್ರೆಯನೆ ಪಿಡಿಸಿಕೊಂಡೈ ಕಂದಾ ॥ ೬೯

ಮತ್ತಂ ಜಗದೊಳಿಂಗಂ ನಿನ್ನನ್ನರಿಲ್ಲ; ಸಕಳಶಾಸ್ತ್ರಪಾರಗನ್ನೆ ಸಮಸ್ತಕಳಾಧರನ್ನೆ ನೃಪಪೂಜಿತನ್ನೆ ಧರಾಮರಾರಾಧ್ಯನ್ನೆ ನೀತಿಪರಿಣತನ್ನೆ ಶ್ರುತಿಸ್ಮೃತಿಗಳೊಳತಿಜಾಣನ್ನೆ ಕೆಮ್ಮನಪ್ಪೊಡಂ ವಿಚಾರಿಸದವಿಚಾರಿಯಾಗಿ ನೀರುಮಂ ನೇಣುಮಂ ತೊಱೆದು ಕುಲಮಂ ನೀರೊಳಗರ್ದಿನಂಟರಿಷ್ಟರಿಂದಂ ಛೀ ಎನಿಸಿ ಪರತ್ರೆಯುಂ ಕಿಡಿಸಿ ವೇದಾಭಿಪ್ರಾಯಮನುದಾಸೀನಂಮಾಡಿ ಜಿನರೂಪಧಾರಿಯಾದ್ದೆ ಯೆಂದು ನಂಟರೆಲ್ಲಂ ನುಡಿದು ಕಾಲಮೇಲೆ ಬಿದ್ದಿಂತೆಂದರ್] [1] ॥ ೭೦

ಬಿಡುವುದು ನೀನೀತಪಮಂ
ಕಿಡಿಸದೆ ಸದ್ಬ್ರಾಹ್ಮಣತ್ವಮಂ ಪೆಱತೊಂದಂ ।
ನುಡಿಯುದೆ ತಡೆಯದೆ ನೀನೆ
ನ್ನೊಡವಪ್ಪುದು ಪುರವರಕ್ಕೆ ವಿಪ್ರಕುಲಾಕಾ ॥ ೭೧

[ಮುನ್ನ ಮೇಸೆಂದಱಿಯದೆ ಸವಣರ ಗೋಳಗೊಳಗಾಗಿ ಜಿನನ ರೂಪಂ ಧರಿಯಿಸಿದ್ದೆ; ನೀನೆನ್ನ ಬಂಧುಗಳುಂ ಬ್ರಾಹ್ಮಣರುಂ ಕೈಕೊಳರೆಂದು ಲಜ್ಜಿತನಾಗಿ ಬಡತ್ವದಿಂದಿರವೇಡಿಲ್ಲಿಗೆ ತಕ್ಕ ಪ್ರಾಯಶ್ಚಿತ್ತಮಂ ಹೋಮಾದಿಗಳಂ ಮಾಡಿಕೊಳಲಪ್ಪುದು, ನೀಂ ಮಹಾಶ್ರೀಯುಮಂ ವೃತ್ತಿಯುಮಂ ಪೆಂಡಿರ್ ಮಕ್ಕಳುಮಂ ಬಂಧುಗಳುಮಂ ಕಿಡಿಸದೆ ಬನ್ನಿಮೆನೆ ಸೋಮದತ್ತಋಷಿ ತನ್ನಂತರಂಗದೊಳಿಂತೆಂದಂ ॥ ೭೨

ಜಿನವಚನಾಮೃತಮಂ ಬೆ
ಳ್ವನದಿಂ ಮಿಥ್ಯಾತ್ವದೊದವಿಸಿಂದಿನ್ನವರಂ ।
ಮನದೊಳ್ ಭಾವಿಸಲೊಲ್ಲದೆ
ಕುನಯಾಭಿಪ್ರಾಯದೊಂದುರುಚಿಯಿಂ ಕೆಟ್ಟಂ] ॥ ೭೩

ಜಿನವಚನಮುಮಂ ಮತ್ತಿನ
ಕುನಯಂಗಳುಮಂ ಸಮಾನಮೆಂಬುದೆ ಕೇಳ ।

1 ಮಂದರದಂತಚಲಿತಧೈರ್ಯರ್ನಾಗಿರ್ದ ವಾತ್ಸಲ್ಯರತ್ನಾಕರನ ಸಾರ್ಗ ವಂಧು ಸುತ್ತಿ ವಾತ್ತಿ ನಿಂದು (ಗ)

ಕ್ಕನ ಬೆಳಗಿನೊಳ್ ಸಮಾನಮಿ
ದೆನಲಕ್ಕುಮೆ ಪಕ್ಷದಿಂದೆ ಮಿಂಬುಳುಗಳುಮಂ ॥ ೭೪

[ತನಗಿಲ್ಲದ ಬತಸೂಳ್ ಬೊಜುಗನ ಸಾರೆ ಪೊಂಪುಗಸಗವುಂ ಬಯ್ದುಳಂಬಂತೆ ಜಿನಾಗಮದುಡುಗೆಗೆ ಮೊದ್ಯಾಬದೆ ಕುಬುದಿಗಳುಂ ಸೋಲಂಬರುಂ ಸಪ್ತವ್ಯಸನಾಪೇಕ್ಷಿತರುಂ ಪರಸ್ತ್ರೀಯುಮುಂ ಹಿಂಸಾನಂದರುಂ ಧೂರ್ತಾಳಾಪರುಂ ಜಿನಧರ್ಮಂ ಪೊಲ್ಲವೆಂಬರದು ಪ್ರಮಾಣಮಲ್ಲದು ॥ ೭೫

ಕೊಲಲಾಗೆಂಬ ಜಡತ್ವದಿಂ ಪುಸಿಯಲಾಗಿನ್ನೆಂಬ ಚಾಪಲ್ಯದಿಂ
ಕಳಲಾಗೆಂಬ ಪರಾಂಗನಾವ್ಯಸನಮಂ ಪಾಣೆಂಬ ಲೋಭತ್ವದಿಂ
ದಿಳೆಯೊಳ್ ಸಂದ ಪರಿಗ್ರಹಕ್ಕೆಅಗಲಿನ್ನಾಗೆಂಬ ಜೈನೋಕ್ತಿಗಳ್
ಸಲೆ ಲೇಸಲ್ಲದೆ ಪೊಲ್ಲನೇ ಕುಮತಿಗಳ್ ತಾವೆಂತಿನಂ ದೂಱುವರ್ ॥ ೭೬

ಅಗ್ನಾಯತಿಯುಪ್ಪ ಸೂಳಗಂ ಕುಡಲಿಲ್ಲದೆ ಬತಬೊಜಂಗಂ ಪೞಿದು ಸಾಮಾನ್ಯದ ಭೇದವಾರಿಗಳಂ ಪೊಗೞ್ವಂತೆ ಮಹಾಪರೀಷಹದೊಳ್ಕುಡಿ ಸುವ್ರತಂಗಳನೊಡೆಯು ಜ್ಞಿನಮಾರ್ಗಮುಮಂ ದುಷ್ಕರಪ್ಪವರ್ ಕೈಕೊಳಲಾಱದೆ ಸೆಡೆದು ಪೞಿದು ತಮ್ಮಿಚ್ಛೆಗೆ ಬರ್ಪ ಅಧರ್ಮಂಗಳಂ ಮಹಾಧರ್ಮವೆಂದು ಕೈಕೊಂಡು ಪೊಗೞ್ವರಿದು ಚೋದ್ಯಮೆಲ್ಲಂದುಸಿರದಿರ್ಪುದುಂ ಯಜ್ಞದತ್ತೆ ಬಂದು ಕಾಲವೇಲೆ ಬಿರ್ದಿಂತೆಂದಳ್ [1] ॥ ೭೭

---

1 ಈ ಸಂದರ್ಭದಲ್ಲಿ (ಗ) ಪುಸ್ತಕದಲ್ಲಿ ಮುಂದಿನ ಭಾಗವು ಹೆಚ್ಚಾಗಿದೆ:—
ಸಿರಿಪಿಂದು ಸಿರಿಗೆ ತಕ್ಕಂತಿರಲನುಂ ಕೂರ್ಪೆನೆನ್ನ ಕೂರ್ಮೆಗೆ ತಕ್ಕಂ ।
ತಿರೆ ನಿಮಗೆಮೆನಗಮಿಾಗಳ್ ತರುಣತ್ವಂ ಪುರುಳ್ ನಿನ್ನೊಳವಧಾರಿಸಿತಂ ॥ ೧
ಎನಗಂ ನಿನಗಂ ಮೊದಲೀತನೆ ಪುತ್ರಂ ಪ್ರಾಯಮುಮುಪ್ಪೆಡೆಳೆದಿಂನುಂ ಕೇಂ ।
ಮನೆ ಕಾಮಸುಖಮನಳಿನೇಕೆ ನಿತಾಂತಂ ಬಂದ ಸುಖಮನೊಲೆಯೊಳಗಿಸುವೈ ॥ ೨
ಪೆಂಡಿರ ಕೂರ್ಮೆಯಿನಾವಂ ಕಂಡುಂ ಪಡೆಯಲ್ಕೆ ಬಾರದೆನ್ನೊಲವಂ ನೀಂ ।
ಕಂಡುಂ ಭೋಗಿಸಲೊಲ್ಲದೆ ದಂಡಿಸುವೈ ತಪದೊಳಗ್ಗರಾಗ ನಿನ್ನಿಂದಂ ॥ ೩
ಬಡವರ ಮೊದಲಾಗಿರೆ ಕೈವಿಡಿದಾಕೆಯನಾಪತೆಱದೊಳಂ ಪೊರೆವರ್ ಪೊ ।
ನ್ನೊಡೆಯನೆಯಾಗಿಯು ನೀ ಕೈವಿಡಿದೆನ್ನಂ ಬಿಟ್ಟು ಪೋಪುದಾವುದುಧರ್ಮಂ ॥ ೪

ಎನ್ನಂ ಕಿಡಿಸದೆ ಪಿರಿದ
ಪ್ಪುನ್ನತಿಯುಂ ಕಿಡಿಸದಿನ್ನುಮೇನಾದುದು ಮಿ ।
ಪ್ರೋನ್ನತ ಬಿಸುಡೀತಪಮಂ
ನಿನ್ನಂ ಪೆಱರಿಂದೆ ನಗಿಸಿಕೊಳ್ಳದೆ ಬೇಗಂ ॥ ೭೮

ನೀನಪ್ಪೊಡೆ ವಿಪ್ರಸಮೂ
ಹಾನತನ್ಯೆ ವಿಪ್ರವಂಶಶೇಖರನ್ಯೆ ವಿ ।
ದ್ಯಾನಿಧಿಯ್ಯೆ ನಿನಗಲ್ಲದ
ಹೀನತೆಯುಂ ಮಾಡಿ ನಗಿಸಿದ್ಯೈ ಪರರಿಂದಂ ॥ ೭೯

ಆರುಮಿಲ್ಲದ ದೇಸಿಗರಂತೆ ಕಾಡಂ ಪೊಕ್ಕು, ಕೂಳ್ಪಡೆಯದ ತಿರಿಕರಂತೆ ಗಿಡಿಗಿಡಿಜಂತ್ರಮಾಗಿ, ತರುವಲಿಗಳಂತೆ ಸಿರಿಯಂ ಬಿಟ್ಟು ಪಂದಿಯಂತೆ ಕೆಸಱನೊಟ್ಟಿಕೊಂಡು, ಬೆಂದ ಕಗ್ಗೊರಡಿನಂತೆ ಬಿಸಿಲೊಳ್ ನಿಂದು, ಕಡಂಬಡೆಯದ ಬಡವನಂತೆ ಪಸಿದು ಪಟ್ಟು, ಬಱಿದಿದೇ ಕೊಡಲಂ ತಪಿಸಿ ಗಾವಿಲನಾದಪ್ಪೆಯೆಂದು ನಾನಾಪ್ರಕಾರದಿಂ ತನುವುಮಂ ಸಿರಿಯುಮಂ ಸಂಪತ್ತುಮಂ ಭೋಗಮುಮಂ ತೋಱಿ ನುಡಿಯಿಸಲಾ ಅದೆ ಯಜ್ಞದತ್ತೆ ಮೆಲ್ಲನೊಳಸೋರ್ದುಸಿರ್ದಿರ್ಪುದುಂ ಸೋಮದತ್ತಋಷಿ ತನ್ನೊಳಿಂತೆಂದಂ :— ಓಲಗಂ ಲೇಸು ಕಾಳಗಮರಿದೆಂಬಂತೆ, ಮದುವೆ ಲೇಸು ಪೊರೆವುದರಿದೆಂಬಂತೆ, ಮಾನ್ಯಂ ಲೇಸು ಮುಂದಣ ಮಾನ್ಯದೆಱೆ ಅರಿಯದೆಂಬಂತೆ, ಪಾದರಂ ಲೇಸು ಸಾವುದರಿದೆಂಬಂತೆ, ಪೂಣ್ಕೆ ಲೇಸು

ಅರಸನ ಕೂರ್ಮೆ ಪೆಂಡಿರೊಲವಗ್ಗದ ಲಕ್ಷ್ಮಿ ವಿಶೇಷವಿದ್ಯೆ ನಂ
ಟರ ಬಲವೊಪ್ಪುವುನ್ನತಿಮಹಾಪರಿದೆಯ್ದಿದಜವ್ವನಂ ನಿರಂ
ತರಸುಖಮೆಂಬಿವಂ ಪಡೆದು ಮೆಚ್ಚಿದ ಲೀಲೆಗಳಿಂ ಸವಿಸ್ತರಂ
ಬಱಯಿಸಲೊಲ್ಲದೀಸವಣವಾರಿಗೆ ಬಿಳ್ಪುದು ಸೌಖ್ಯ ಹೇತುವೇ ॥ ೫

ಎಂಬುದು ಯಜ್ಞದತ್ತೆಯ ಮಾತಿಂಗೆ ಸೋಮದತ್ತ ಮುನಿಪುಂಗವಂ ತನ್ನಂ ತರ್ಗತದೊಳಿಂತೆಂದಂ ॥ ೬

ಮೇಲಣ ಸುಖದುಃಖಂಗಳ ನಾಳೋಚಿಸಿ ನೋಡಲೊಲ್ಲರಿಲ್ಲಿಯ ಸುಖಮಂ ।
ಪಾಳಿಸಲೆಮಱಿಗುತಿರ್ಪರ್ಬೆಳ್ಳಲ್ಲದೆ ಜನನದಾಳಿಗಿದು ಬಳ್ಳಿತ್ತೇ ॥ ೭

ಓಲಗಂ ಲೇಸು ....

ಮಾಟವರಿದೆಂಬಂತೆ, ಬೇಟಂ ಲೇಸು ಕುಡುವುದರಿದೆಂಬಂತೆ, [ತೋಟಿ ಲೇಸು ದಂಡವರಿದೆಂಬಂತೆ, ಬೀಯಂ ಲೇಸು ಪಡೆವುದರಿದೆಂಬಂತೆ, ಬಲ್ಪು ಲೇಸು ಗೆಲವರಿದೆಂಬಂತೆ, ಬಿಗುಪು ಲೇಸು ಕಳನವೋಗರಿದೆಂಬಂತೆ, ಆಳ್ವು ಲೇಸು ಶೂಲವೇರಿದೆಂಬಂತೆ, ತೊನೆಪಂ ಲೇಸು ಸಖಿಗೆಯರಿದೆಂಬಂತೆ,] ಕೃಷಿ ಲೇಸು ತೆಱುವುದರಿದೆಂಬಂತೆ, ಸೂಜಿ ಲೇಸು ಪೊಜೆಯರಿದೆಂಬಂತೆ, ಪ್ರತಾಪಂ ಲೇಸು ನಿತ್ತರಿಸಲರಿದೆಂಬಂತೆ, [ಕೊಲೆ ಲೇಸು ಕಾವುದರಿದೆಂಬಂತೆ,] ಸಂಸಾರದ ಸುಖಂ ಲೇಸು ವೋಗಣ ನರಕ ದುಃಖಂಗಳರಿಯವು ಅದುಕಾರಣದಿಂ [1] ॥ ೮೦

ಜಿನಪದದ್ವಯಸೇವೆಯಿಂ ಭುವನತ್ರಯಾಧಿಪತಿತ್ವಮುಂ
ತನಗೆ ತಾನೆ ಮಹೋತ್ಸವಂಬೆರಸೊಪ್ಪದಿಂ ದೊರೆಕೊಳ್ಗುಮೊ
ಯ್ಯನೆ ಮನೋಮುದದಿಂದಮೆಂದೊಡೆ ದೇವಲೋಕಪತಿತ್ವಮುಂ
ಮನುಜರಾಜ್ಯವಿಭೂತಿಯುಂ ದೊರೆಕೊಳ್ವುದಾವುದು ವಿಸ್ಮಯಂ [2] ॥ ೮೧

ತನಗೆ ಹಿತಮಪ್ಪುದಂ ಪೇ
ಳ್ವನ ಮಾತಂ ಚಿತ್ತಮಿತ್ತು ನೆಱೆ ಕೇಳ್ವುದು ಕೆಂ ।
ಮನೆ ನರಕಹೇತುವಂ ನುಡಿ
ವನ ಮಾತಂ ಕೇಳದುಸಿರದಿರ್ಪುದು ಚದುರಂ ॥ ೮೨

1 ಅದು ಕಾರಣದಿಂದಳಿಸುಖಕ್ಕೆಱಗದೆಂದು ಭಾವಿಸಿ ಮೋನದಿನಿರೆ ಯಜ್ಞಾದತ್ತೆ ಬೇಸತ್ತಗಲಿಪೋಪುದುಂ ತಾಯುಂ ತಂದೆಯುಂ ಮಾವನುಮತ್ತೆಯುಂ ಬಂದಿಂತೆಂದರ್ (ಗ)

2 ತಪಂಬಟ್ಟೆನೆನ್ನಂ ಸಬ್ರಾಹ್ಮಣರ್ಕೈಕೊಳ್ಳರೆಂದು ಲಜ್ಜಿತನಾಗಿರಲ್ವೇಡ ಪ್ರಾಯಶ್ಚಿತ್ತದಿಂ ಹೋಮಾದಿಗಳಂ ಮಾಡಿಕೊಳಲಪ್ಪುದೆಂಬುದುಂ ಸೋಮದತ್ತಂ ತನ್ನೊಳಿಂತೆಂದಂ :—

ಕಾಯಮುಮಂ ಧನಮುಮನಿನಿಸುಂ ಯಾಮಂಬಡದೆ ತಪದೊಳಂ ದಾನದೊಳಂ ।
ಬಾಯಳಿಯದೆ ತವಿಪುದು ತಾಂ ಪ್ರಾಯಶ್ಚಿತ್ತಂ ವಿವೇಕವುಳ್ಳರ ಚಿತ್ತಂ ॥
ಮಿಗಿಲೆನಿಸುವ ತಪಮೆಂಬಗ್ನಿಗೆ ತನ್ನೊಡಲೆಂಬ ದಿವ್ಯಹವಿಯಂ ಕುಡುವಾ ।
ರ್ಪುಗಿಡದೆ ಹೋಮಸಜ್ಜನರಗಲದೆ ಕೈಕೊಂಡು ನಲಿವ ಕೀರ್ತಿಯ ದಾಮಂ (ಗ)

ಮುತ್ತು ಸಮುದ್ರದೊಳ್ ಸೀರ್ಮುಗಿಲೊಳ್ ಮಣಿ ಭೂಮಿಯೊಳ್ ತೈಲಮೆಳ್ಳೊಳ್ ತುಪ್ಪಂ ಪಾಲೊಳ್ ಮಕ್ಕಳ್ವನಿತೆಯರೊಳ್ ಪಾಲ್ ಕೆಚ್ಚಲೊಳ್ ತಣಿಪು ಊಟದೊಳ್ ಸೀರೆ ನೂಲೊಳ್ ಪಗಲ್ ಸೂರ್ಯನೊಳ್ ತಣ್ಪು ಗಾಳಿಯೊಳ್ ಬೆಂಕಿ ಕಿಚ್ಚಿನೊಳ್ ಕಾಣ್ಕೆ ಕಣ್ಣೊಳ್ ಸಿರಿ ಪೊನ್ನೊಳ್ ಬಲಂ ಜವ್ವನದೊಳ್ ಪಡಪು ಸೌಭಾಗ್ಯದೊಳ್ ರಾಗಂ ಸಂತೋಷದೊಳ್ ಮದುವೆ ಕೊಡುಗೂಸಿನೊಳ್ ಪುಟ್ಟುವಂತೆ ಸ್ವರ್ಗಮೋಕ್ಷಂಗಳುಂ ಕುಡುವ ಗುಣಂಗಳುಂ ಸದಾಚಾರಮುಂ ಮಹಾವ್ರತಂಗಳುಂ ಜಿನಮತದೊಳ್ ಪುಟ್ಟುಗುಮಲ್ಲದೆ ಪೆಱವು ಕುಮತಂಗಳೊಳ್ ಪುಟ್ಟವು [ಅದಱಿಂದಜ್ಞಾನಿಗಳ ಮಾತನಾಲಿಸಲಾಗದು ॥ ೮೩

ಎನಿತೊಳ್ಳಿತಾದೊಡಂ ಕಾ
ಜಿನ ಮಣಿಗಳ್ ಪೊನ್ನ ತೊಡವನಿಱುಕೆಯ್ಗುಮು ತಾ ।
ನೆನಿತೊಳ್ಳಿತಾದೊಡಂ ಮ
ತ್ತಿನ ನುಡಿಗಳ್ ಜೈನನುಡಿಗಳಂ ಪೋಲ್ತಪುವೇ] ॥ ೮೪

ಜಿನವಚನಮನಱಿಯದೆ ಕೆ
ಮ್ಮನೆ ಪೆಱವೆರ್ದುರ್ಜನದುರಾಚಾರರ್ ಸ ।
ಜ್ಜನವಚನವನಱಿವೊಡೆ ಮೋ
ದಿನಿಯೊಳ್ ಸನ್ಮತಿಗಳಪ್ಪವರ್ಪಱುದಪರೇ ॥ ೮೫

ಉಱುವ ಜಿನಮತಮನೇನಂ
ದಱಿಯದೆ ಮುಂ ಕೆಟ್ಟ ಕೇಡೆ ಸಾಲ್ಗುಂ ಮತ್ತ ।
ನ್ನಱಿದು ಮತಿಗೆಟ್ಟು ಬಿಟ್ಟೊಡೆ
ಮೆಱುಕಂ ಕೈಸಾರ್ಗುಮುಗ್ರಸಂಸೃತಿವನದೊಳ್ ॥ ೮೬
ಎಂದುಸಿರದಿರ್ಪುದುಂ [ನೆಂಟರೆಲ್ಲಂ] ಮುನಿದು ॥ ೮೭

ನಡೆ ನಡೆ ಡೊಂಬು ವೇಡ ನಿನಗೇಕೆ ತಪಸ್ಸಿನ ಕುತ್ತಮೆಂದು ನೇ
ರ್ಪಡೆ ಜಡಿದಟ್ಟಿ ಬೈದು ಬಿಸುಸುಯ್ದುಲೆ ಗಾಂಪ ಸಮಸ್ತನಂಟರಂ

ಮಡದಿಯುನಿಷ್ಠುರಂ ಕಿಡಿಸಿ ದುರ್ಗತಿವ್ರೋಗದೆ ಬರ್ಪುದೆಂದು ನಿ
ಗ್ಗಡಿತನದಿಂ ಸಬಾಂಧವಜನಂ ತೆಗೆದಪ್ಪಿದರಾಮುನೀಂದ್ರನಂ ॥ ೮೮

[ಅಂತು ನಿಷ್ಠುರಕೋಪದಿಂ ಕೈಯುಮಂ ಕಾಲುಮಂ ನಡುವುಮಂ ಪತ್ತಿ ತೆಗೆವುದುಂ ಸೋಮದತ್ತಮುನಿನಾಥನಿಂತೆಂದು ಮನದೊಳ್ ಭಾವಿಸಿದಂ ॥ ೮೯

ಗುರುದತ್ತಮುನೀಶ್ವರನಂ
ಕರಮಲ್ಲದೆ ಮುನಿದು ಸೂಡಿ ಪೊತ್ತಿಸಿ ಸುಟ್ಟಂ ।
ಭರದಿಂ ಮೆಳಮುಖನೆಂದೊಡೆ
ಕರಮುಗ್ರಮುರ್ಗಿಳಸುಬಂದರೇನಂ ಮಾಡರ್ ॥ ೯೦

ಬಂಡಿಯುಂ ತೀವಿದ ಜೋಳವುಂ ತೆಗೆವ ಕೋಣಂ ಮೊರಂ ತೀವಿದ ಧಾನ್ಯಮಂ ತೆಗೆಯಲಾಱದೆ ? ನರಕದೊಳನಿತಾನುಂ ಕಾಲಂ ನವೆವೆಂತಪ್ಪ ಮಹಾಪಾಪಮನುಪಾರ್ಜಿಸುವಂತಪ್ಪ ಪಾಪಕರೆನಗುಪಸರ್ಗಂ ಮಾಡಿದರೆಂಬುದಿದಾವವಿಸ್ಮಯಮೆಂದು ಮನದೊಳ್ ಮುನ್ನಂ ಮಹೋಪಸರ್ಗಂಗಳಂ ಸ್ಮರಿಸಿ ದಿವ್ಯಸುಖಂಗಳಂ ಪಡೆದ ಮಹಾಪುರುಷರ ಕಥೆಗಳಂ ಚಿಂತಿಸುತ್ತುಂ ಮನುಷ್ಯೋಪಸರ್ಗಮಿದು ಪಿಂಗುವಿನಮಾಹಾರಶರೀರನಿವೃತ್ತಿಯೆಂದಿರ್ದನನ್ನೆಗಂ ಸಗೋತ್ರರೆಲ್ಲಂ ತೆಗೆದು ತೆಗೆಯಲಾಱದೆ ಬೇಸತ್ತು ಪಿಂಗಿ ಸೋಮದತ್ತಮುನಿಯುಂ ಬಳಸಿಕೊಂಡಿರ್ದಂತೆಂದರ್]॥

ಎಲೆ ಪಾತಕ ನೀನೀಕುಲ
ಲಲನೆಯರಂ ಜ್ಯೇಷ್ಠಸುತನುಮಂ ಬಿಸುಟು ತಪ ।
ಕ್ಕೆಳಸಿರ್ದೊಡಮಿಾತಪದೊಳ್
ಫಲಮುಂಟೇ ಪುಣ್ಯಮುಂಟೆ ಪೇಟ್ ಗತಿಯುಂಟೇ ॥ ೯೧

[ಬತ್ತಲಿಗರ ಮಾತಂ ಕೇ
ಳ್ದುತ್ತಮಮೆನಿಸಿರ್ದ ಕುಲಮನಳಿದೈ ನಿನಗಿ ।
ನ್ನೆತ್ತಣ ಪರತ್ರೆ ನೀನುಂ
ಸತ್ತೊಡಮಾಕಷ್ಟವೃತ್ತಿಯಂ ನೀಗಿದಪಾ ॥ ೯೨

ಎಂದು ಬಾಯ್ ವಂದಂತೆ ನುಡಿವುದುಂ] ವಾತ್ಸಲ್ಯರತ್ನಾಕರಂ ಆವರ ಮಾತಿಂಗೆ ನಕ್ಕು ಕೇೞ ಚಿತ್ರದಂತೆ, ಬಸುೞಿಯ ಪಣ್ಣಂತೆ, ಕತ್ತಿಯ ಲದ್ದಿಯಂತೆ, [ಕಳ್ಳನ ನನ್ನಿಯಂತೆ,] ಪಱುಣಿಯ [1] ಶೋಭೆಯಂತೆ, ಪಾವುಮೆಕ್ಕೆಯ ಕಂಪಿನಂತೆ, ತಿಪ್ಪೆಯ ನೀರಂತೆ, ಬಡವನ ಮಹಿಮೆಯಂತೆ, ಪಗರಣದಾನೆಯಂತೆ, ರಂಗವಲಿಯ ಪಿಟ್ಟನಂತೆ, ಪಂದೆಯ ವೞಾತಿನಂತೆ, ಡೊಂಬರ ತೋಟಿಯಂತೆ, ದೂರದ ಬೆಟ್ಟನಂತೆ, ಮಾಟದ ಮುಡಿಯಂತೆ, ಕಟ್ಟದ ಪಲ್ಲಂತೆ, ಓಲಿಯ ಕಣ್ಣಂತೆ, ಬಟ್ಟೆಯ ಪುಲ್ಲಂತೆ, ತಾಳಕಯ್ಯಂತೆ, [2] ಮರುಳ ಕೋಡಿನಂತೆ, ಪೊಱಗಣ್ಗೆ ರಂಜಿಸುವ ಬಹಿರಾಳಾಪದ ಡೊಂಬನೊಲ್ಲದೆ, ಮಾಸಿದ ಹೇಮಕುಂಭದಂತೆ, ಸಾಧಕನ ಮರುಳಾಟದಂತೆ, ವೀರನಂಜಮೆಯಂತೆ, ತೆಂಗಿನ ಕಾಯಂತೆ, ಕೇದಗೆಯ ಪುಷ್ಪದಂತೆ, ಬಾೞೆಯ ಪಣ್ಣಂತೆ, ಕರ್ಪೂರರೊಲ್ಲಮೆಯಂತೆ, ನಿದಿಗಂಡ ಬಡವನಂತೆ, ಬೂದಿ ಪತ್ತಿದ ಕೆಂಡದಂತೆ, ಮಲಮೇೞಿದ ರಕ್ತದಂತೆ, ಸೊಬಗಿಯ ಗಾಂಪಿನಂತೆ, ನುಡಿಜಾಣನ ಮೋನದಂತೆ, ಬಲ್ಲಿದನ ನೋಟದಂತೆ, ಸಮುದ್ರದ ಕಯ್ಪೆಯಂತೆ, ತೋಂಟದ ಬೇಲಿಯಂತೆ, ತುಪ್ಪದ ಕೊಡದಂತೆ, ನಿಶ್ಚಯಕ್ಕೊಳಗೆ ಕಡುಲೇಸಪ್ಪ ಸನ್ಮಾರ್ಗಮಂ ಬಿಟ್ಟು ನರಕದೊಳ್ ತಿಱ್ಱನೆ ತಿರಿವಂತಪ್ಪ ಪಾಪಮಂ ನೆರಪಿದ ಮಾನಿಸರಂ ಕೈಕೊಳರೆಂದು [ಜಿನಮಾರ್ಗಮಂ ಬಿಡುವುದು ಕಜ್ಜಮಲ್ಲದೆಂದು] [3] ಜಿನಾಗಮೋಕ್ತಿಗಳಂ ಭಾವಿಸುತಿರ್ದನನ್ನೆಗಂ ಬಂಧುಗಳುಂ ಯಜ್ಞದತ್ತೆಯುಂ ಮಸಗಿ ಕೂಸಂ ಸೋಮದತ್ತಮುನಿಯ ಮುಂದಿಕ್ಕಿ ಬ್ರಹ್ಮೇತಿಯಾಗೆ ಪೊಲಲೊಳಗೆ ಪುಯ್ಯಲಿಟ್ಟು ಬಂದು ಸಾವೆವೆಂದು ಪೂಣ್ದು ಪರ್ವತದಿಂದಿೞಿದು ಸೌಪಾಳಪುರಕ್ಕೆ ಪೋದರಿತ್ತಲ್ ಬಾಲಕಂ ಸೋಮದತ್ತಮುನಿಯ ಪಾದಮಂ ಮೋಕ್ಷಬಟ್ಟೆಯಂ ನೋಡುವಂತೆ ಮುನಿಯ ಮೊಗಮಂ

---

1 ಪುರಾಣಿಯ (ಕ) ಪರಾಣಿಯ (ಬ)   2 ತಾಳ ಕಾಯಂತೆ (ಕ. ಬ.)

3 ಎಂದು ಮಂದರದಂತಿರ್ಪುದುಂ, ಎಲ್ಲರುಂ ಬೇಸತ್ತು ಕೂಸನವರ ಮುಂದಿಕ್ಕಿ ನಿನಗೆ ಬ್ರಹ್ಮೇತಿಯಾಗಿ ಪುರದೊಳಗೆ ಪುಯ್ಯಲಿಟ್ಟು ಬಂದು ಸತ್ತಪೆನೆಂದು ನಾಭಿಗಿರಿಯ ಕೆಳಗಿರ್ದ ಸಿಂಹಪುರಕ್ಕೆ ಪೋದರನ್ನೆಗಮಿತ್ತಲ್ (ಗ)

ನೋಡುತ್ತುಂ ಮುಂದಪ್ಪ ವಿದ್ಯಾಧರರಾಜ್ಯಲಕ್ಷ್ಮಿಯ ಬರವಿಂಗೆ ರಾಗಿಸಿ ನಗುವಂತೆ ನಗುತಿರ್ದನನ್ನೆಗಂ ॥ ೯೪

[ನೆಗಳ್ದೀಭರತಕ್ಷೇತ್ರದ
ಸೊಗಯಿಪ ವಿಜಯಾರ್ಧಗಿರಿಯ ತೆಂಕಣದೆಸೆಯೊಳ್ ।
ಮಿಗಿಲೆನಿಪುದು ನಾನಾಶೋ
ಭೆಗಳಿಂದಂ ನೆಗಳ್ದ ದಕ್ಷಿಣಶ್ರೇಣಿ ಕರಂ ॥ ೯೫

ಆ ದಕ್ಷಿಣಶ್ರೇಣಿಯೊಳಮರಾವತಿಯೆಂಬುದು ಪುರಮುಂಟಾ ಪುರಮನಾಳ್ವಂ ವಿದ್ಯಾಧರರಾಜಂ ಶಂಭುವೆಂಬನಾತನ ಮಹಾದೇವಿ ಮಂಗಳೆಯೆಂಬಳಾಯಿರ್ವರ್ಗಂ ॥ ೯೬

ಸ್ಮರಸನ್ನಿಭನೆನಿಸುವ ಭಾ
ಸ್ಕರದೇವನುಮಮರರಾಜನಿಭನೆನಿಸುವ ಮಂ ।
ದರರಾಜದೇವನೆಂಬಿ
ರ್ವರುಂ ಸುವಿಕ್ರಮರುದಾತ್ತರಗ್ಗದ ತನಯರ್ ॥ ೯೭

ಸಿರಿಗಂ ಭಾರತಿಗಂ ಸೌಂ
ದರರೂಪಿಂಗೀಕೆ ಪಿರಿಯಳೆನಿಸುವ ರೂಪಿಂ ।
ಕರಮೊಪ್ಪುವಳಂಬುಜಮುಖಿ
ತರಳಾಕ್ಷಿ ಸುದೇವಿಯೆಂಬಳವರಿಂ ಕಿಱಿಯಳ್ ॥ ೯೮

ಅಂತವರ್ಬೆರಸು ಶಂಭುವಿಯಚ್ಚರರಾಜಂ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಂ ಸುದೇವಿಕುಮಾರಿಯಂ ಕನಕಪುರಾಧೀಶ್ವರನಪ್ಪ ವಿಮಳವಾಹನನೆಂಬ ಭೂಚರಮಹೀವಲ್ಲಭಂಗೆ ಕೊಟ್ಟು ಪಿರಿದಪ್ಪುತ್ಸಾಹಂಬೆರಸು ಪಲಕಾಲಂ ವಿದ್ಯಾಧರಶ್ರೀಯನನುಭವಿಸಿ ಕಡೆಯೊಳ್ ಸಂಸಾರವೈರಾಗ್ಯಂ ಪುಟ್ಟಿ ಸುಗತಿಶ್ರೀಯೊಳ್ ಕೂಡುವೆನೆಂಬ ಬಗೆಯಂ ತಂದು ಪಿರಿಯ ಮಗನಪ್ಪ ಭಾಸ್ಕರದೇವಂಗೆ ಯೌವರಾಜ್ಯಮುಮಂ ವಿದ್ಯೆಗಳುಮಂ ಕೊಟ್ಟು ॥ ೯೯

ಎಳಸದೆ ವೈಸುಖಕ್ಕೆ ಪೆಱತೊಂದಱಮೋಹಮನುಂಟುಮಾಡಿ ಸಂ
ಚಳಿಸಿ ವಿಭೂತಿಯಂ ನೆನೆಯದೊರ್ಮೆಯೆ ಭರ್ಮ್ಮನೆ ರಾಜ್ಯಲಕ್ಷ್ಮಿಯಂ
ಘಳಿಲನೆ ಬಿಟ್ಟು ಸುಪ್ರಭಸುಚಾರಣರಲ್ಲಿ ಜಿನೇಂದ್ರದೀಕ್ಷೆಯಂ
ಕಲಿ ಪೆಱಪಿಂಗೆ ವೈದೆಗೆಯದಣ್ಮಿಳವಟ್ಟರೆ ಕೊಂಡನರ್ತಿಯಿಂ ‖ ೧೦೦

ಅಂತು ನಿಶ್ಶಂಕೆಯಿಂ ಶಂಭು ಜಿನರೂಪಂ ಕೈಕೊಂಡು ತಪದೊಳಿರ್ದನಿತ್ತಲ್ ಮಂದರದೇವಂ ಸಮಸ್ತವಿದ್ಯಾಸಮನ್ವಿತನಪ್ಪುದಱಿಂ ಪ್ರತಾಪದಿಂ ಭಾಸ್ಕರದೇವನನೋಡಿಸಿ ಖೇಚರರಾಜ್ಯಕ್ಕೆ ಮೊತ್ತಮೊದಲಿಗನಾಗಿ ನೆಗಳ್ದಮರಾವತೀಪುರದೊಳಿರ್ದ ಭಾಸ್ಕರದೇವಂ ವಿದ್ಯಾಧರರಾಜ್ಯಂ ಪೋದುದಕ್ಕೆ ಚಿಂತಾಕ್ರಾಂತನಾಗಿ ಮಂದರದೇವಂಗಿದಿರ್ಚಲಣ್ಮದೆ ತನ್ನಗ್ರಮಹಾದೇವಿ ಮಣಿಮಾಲೆ ಮೊದಲಾಗೊಡೆಯ ಪಲಂಬರರಸಿಯರ್ವೆರಸು ಕನಕಪುರಕ್ಕೆಮೆಂದು ತನ್ನ ಮೈದುನನಪ್ಪ ವಿಮಳಮಹಾರಾಜನಂ ಪೊರ್ದಿರ್ದು ‖ ೧೦೧

ಧರ್ಮವಿಚಾರದೊಳಂ ಜಿನ
ಧರ್ಮಮೆ ಮಿಗಿಲೆಂದು ನಂಬಿ ಭಾಸ್ಕರದೇವಂ ।
ನಿರ್ಮಲಮನದಿಂದಂ ಸ
ದ್ಧರ್ಮಕಥಾಳಾಪದಿಂದಮಿರ್ದೊಂದುದಿನಂ ‖ ೧೦೨

ಪರ್ವೋಪವಾಸಂಗೆಯ್ದು ಭರತಕ್ಷೇತ್ರದೊಳಾದ ಜಿನಭವನಂಗಳುಮಂ ಮಹಾಮುನೀಂದ್ರರ್ಕಳುಮಂ ಬಂದಿಸಲುಂ ಪೂಜಿಸಲುಮೆಂದು ಮಣಿಮಾಲೆಯುಂ ತಾನುಂ ವಿಮಾನಾರೂಢರಾಗಿ ಪೋಗಿ ಸಮಸ್ತಚೈತ್ಯಾಲಯಂಗಳಂ ಸಕಲಮುನಿವರರುಮಂ ವಂದಿಸಿ ನಾಭಿಗಿರಿಯೊಳಿರ್ದ ಸೋಮದತ್ತಮುನಿಯುಂ ಬಂದಿಸಲೆಂದು ಬಂದು][1] ‖ ೧೦೩

ದಿನಕೃನ್ಮಂಡಲಮುರ್ವಿಯೊಳ್ ನೆಲೆಸಿತೋ ಮೇಣ್ದೇವಸಂದೋಹಮೀ
ಮುನಿಯಂ ಪೊಂಗಳನೊಲ್ದು ಪೂಜಿಸಿದರೋ ಪಾತಾಳದಿಂ ನಿಕ್ಕಿಸ

1 ಭಾಸ್ಕರದೇವನೆಂಬ ವಿದ್ಯಾಧರಂ ತನ್ನ ವಲ್ಲಭೆ ಮಣಿಮಾಲೆವೆರಸು ಸೋಮದತ್ತಭಟ್ಟಾರಕರಂ ವಂದಿಸಲು ಬರುತ್ತಂ ದೂರದೊಳಿರ್ದ ಶಿಖಮಂ ಕಂಡು (ಗ)

ಲ್ಕುನಿಶಾಂಘ್ರಿದ್ವಯಮಮಂ ಫಣೀಂದ್ರನೊಲವಿಂ ಸದ್ಭಕ್ತಿಯಿಂದೊಲ್ದು ಮೆ
ಲ್ಲನೆ ಮೋಕ್ಷ್ಯಾವಿಸಿ ಕೂರ್ತು ನೋಡಿದಪನೋ ಪೇಳೆಂಬತಿಭ್ರಾಂತಿಯಂ ॥

[ಪುಟ್ಟಿಸಿ ತೊಳತೊಳಗುವ ಬಾಲಾರ್ಕನಂತಪ್ಪ ಶಿಶುವಂ ಕಂಡು ಸಂತೋಷಂಬಟ್ಟು ಸೋಮದತ್ತಮುನಿವೃಂದಾರಕನ ಪ್ರಸಾದದಿಂ ಸುಪುತ್ರಂ ದೊರೆಕೊಂಡನೆಂದು ಮುನಿಪತಿಯ ಚರಣಸರೋಜಾತಂಗಳಂ ಪೂಜಿಸಿ ಬಂದಿಸಿ ಮಗನಂ ನಿಧಾನಮನೆತ್ತುವಂತೆತ್ತಿಕೊಂಡು ನಿನಗೆ ಜಿನಧರ್ಮಪ್ರಸಾದದಿಂ ಸ್ಮರಸಮಾನನಪ್ಪ ಸುಪುತ್ರಂ ದೊರೆಕೊಂಡನೆಂದು ನಲ್ಲಳ ಕೈಯೊಳ್ ಕೊಟ್ಟು ಕನಕಪುರಕ್ಕೆ ಪೋಗಿ ಪೊಱಲೊಳಗಿರ್ದ ವಿಮಳವಾಹನಮಹಾರಾಜಂಗಂ ಸುದೇವಿಮಹಾದೇವಿಗಂ ಮಣಿಮಾಲೆಮಹಾದೇವಿ ಗೂಢಗರ್ಭದೊಳ್ ಮಗನಂ ಪಡೆದಳೆಂದು ಪೇೞ್ದಿಟ್ಟುವುದುಂ][1] ॥ ೧೦೫

ಬಿರಿದಪ್ಪುತ್ಸಾಹದಿಂ ಬಂದಿದಿರ್ಗೊಳ ಪುರಮಂ ಪೊಕ್ಕು ಸಂತೋಷದಿಂ ಭಾ
ಸ್ಕರದೇವಂ ಕೂರ್ಮೆಯಿಂದಂ ಸುರಪತಿವಿಭವಂಗರ್ಕತೇಜಂಗೆ ಧಾತ್ರೀ
ಧರಧೈರ್ಯಂಗಂಗಜಾಲಂಕೃತವಿಮಳಪದಾಂಭೋಜಭೃಂಗಂಗೆ ಭವ್ಯಾಂ
ಬುಜಚಂದ್ರಂಗುಗ್ರವೈರಿದ್ವಿರದಹರಿಗೆ ಕೀರ್ತ್ಯಂಗನೇಶಂಗೆ ಪೇೞ್ದಂ ॥

ವಜ್ರಕುಮಾರನೆಂದು ಪೆಸರನಿಟ್ಟು [ಕೊಂಡಾಡಿ ನಡೆಪಿ ಬೞಿಕ್ಕ ಮಯುಲ್ದವರುಷದಂದು ಜೈನೋಪಾಧ್ಯಾಯರ ಸಮೀಪದೊಳೋದಿಗಿಡುವುದುಂ ಅಕ್ಷರಗಣಿತಗಾಂಧರ್ವಚಿತ್ರಕರ್ಮಪತ್ರಚ್ಛೇದಾದಿ ಸಪ್ತತಿಕಳಗಳೊಳಂ ಚತುಷ್ಷಷ್ಟಿಕಳಾಗುಣಂಗಳೊಳಂ ಪರಿಣತನಾಗಿ ಮುಂಬ

---

1 ನೋಡುತ್ತಂ ಬಂದು ಸುಕವಿನಿಕರಪಿಕವಸಂತನ ಪ್ರಸಾದದಿಂ ಬಾಲಾರ್ಕನಂತಪ್ಪ ಬಾಲಕನುಂ ದೊರೆಕೊಂಡನೆಂದು ಜಿನಚಕ್ರಾಲಂಕಾರಕೀರ್ಷನ ಚರಣಯುಗಳಮನರ್ಚಿಸಿ ವಂದಿಸಿ ಕೂಸನೆತ್ತಿಕೊಂಡು ಕನಕಪುರಕ್ಕೆ ಪೋಗಿ ತನ್ನ ಮೈದುನನಪ್ಪ ವಿಮಳವಾಹನರಾಜನುಂ ತನ್ನ ತಂಗಿ ಸುದೇವಿಯುಮಂ (ಗ)

2 ವಾತ್ಸಲ್ಯವಾರಾಸಿಗೊಳ್ಪಿಂ (ಕ, ಖ)

ಗಲ ಸೂರ್ಯನಂತೆ ತೇಜಮುಂ ಪ್ರತಾಪಮುಮೊಡನೆ ಬಳೆಯೆ, ಜವನೆನಾಗಿ ಕುಲಜಾತಿಸಾಧಿತವಿದ್ಯೆಯೆಂಬ ಮೂಱುವಿದ್ಯೆಗಳೊಳಂ ಸಂಪೂರ್ಣನಾಗಿ ಸುಖದಿಂದಿರ್ಪುದುಂ ॥ ೧೦೭

ಸ್ಮರರೂಪನಂ ಜಿನೇಶ್ವರ
ಚರಣಾಂಭೋಜಾತಭೃಂಗನಂ ಜಿನಧರ್ಮಾಂ ।
ಬರಚಕ್ರಚಂದ್ರನಂ ಭಾ
ಸ್ಕರದೇವಂ ನೋಡೆ ತನ್ನ ಕಣ್ತಣಿವಿನೆಗಂ] [1] ॥ ೧೦೮

ಮೂಪನುಮತ್ತಿಯುಮುಚ್ಚೆಯು
ಮಾವಿಭುವಿನ ತೇಜಮಂ ಪ್ರತಾಪಮನದಟಂ ।
ಭಾವಿಸಿ ನೋಡಿದರಾಗ ಮ
ಹಾವಿಭವದಿನಿರ್ದರೆರ್ದೆ ಕುಳಿರ್ಕೊಳ್ವುವಿನಂ ॥ ೧೦೯

[ಅಂತು ಭಾಸ್ಕರದೇವನುಂ ಮಣಿಮಾಲಾಮಹಾದೇವಿಯುಂ ವಿಮಳವಾಹನಮಹಾರಾಜನುಂ ಸುದೇವಿಯುಂ ವಜ್ರಕುಮಾರಂ ಮಾಡುವ ಜಿನಪೂಜೆಯುಮನಾಹಾರಾಭಯಭೈಷಜ್ಯಶಾಸ್ತ್ರದಾನಮುಮಂ ಚಾತುರ್ವರ್ಣ್ಯದೊಳಾದ ವಾತ್ಸಲ್ಯಮುಮಂ ಕಣ್ಣಾರೆ ನೋಡುತುಂ ಮನವಾರೆ ಬಣ್ಣಿಸುತ್ತುಂ ವಾತ್ಸಲ್ಯವಾರಾಶಿಯ ಮಾತೆ ಮಾತಾಗಿ ಸಂತೋಷದಿಂದಿರ್ದೊಂದು ದಿವಸಂ ಕುಮಾರಂಗೆ ಮದುವೆಯಂ ಮಾಡಲೆಂದಾಲೋಚಿಸಿ ಸುದೇವಿಯ ಮಗಳಪ್ಪಿಂದುಮತಿಯಂ ಬೇಡಿ] [2] ॥ ೧೧೦

ಪಸುರ್ವಂದರ್ಪಸೆಯೆಂಬಿವೊಪ್ಪೆ ಖಚರಸ್ತ್ರೀಸಂಕುಳಂ ಪಾಡೆ ಸಂ
ತಸದಿಂ ಮಂಗಳಮಂ ವಿವಾಹಭವನಂ ಸದ್ರತ್ನದಿಂದೆಯ್ದೆ ರಂ

---

1 ಕೊಂಡಾಡುತ್ತಿರೆ ದ್ವಾಸಪ್ತತಿಕಳೆಗಳೊಳಂ ಚತುಃಷಷ್ಟಿಕಳೆಗಳೊಳಂ ಪರಿಣತನಾಗಿಯು ಮುಂಬಗಲ ಸೂರ್ಯನಂತೆ ಬೆಳೆವುದು ಭಾಸ್ಕರದೇವನುಂ (ಗ)

ಅಂತಿರ್ಪರುಂ ವಿಮಳವಾಹನಮಹಾರಾಜನ ಮಗಳಪ್ಪ ಇಂದುಮತಿಗಂ ವಜ್ರಕುಮಾರಂಗಂ ವಿವಾಹೋದ್ಯೋಗಮುಮಾಗೆ (ಗ)

ಜಿಸೆ ತೂರ್ಯಧ್ವನಿ ಪೊಣ್ಮೆ ಕಟ್ಟೆ ಗುಡಿಯುಂ ಪೌರರ್ ಮನಂಗೊಂಡು ರಾ
ಗಿಸೆ ಪುತ್ರಂಗೆ ವಿವಾಹಮಂ ಖಚರಲಕ್ಷ್ಮೀವಲ್ಲಭಂ ಮಾಡಿದಂ ॥ ೧೧೧

ಅಂತು [ಮದುವೆಯಂ] ಮಾಡುವುದುಂ ವಜ್ರಕುಮಾರನುಮಿಂ ದುಮತಿಯುಂ ಪ್ರಾಣವಲ್ಲಭರಾಗಿ ಸುವಿಷಯಸುಖಮನನುಭವಿಸುತಿ ರ್ದೊಂದುದಿವಸಂ [ಮಣಿಕುಂಡಲಪ್ರಭೃತಿಕುಮಾರರ ತಂಡಂವೆರಸು ವಾತ್ಸಲ್ಯವಾರಾಶಿ] ವಿಜಯಾರ್ಧಪರ್ವತದ ಸಿದ್ಧಕೂಟ ಚೈತ್ಯಾಲ ಯುಮಂ ಬಂದಿಸಲೆಂದು [ವಿಮಾನಾರೂಢನಾಗಿ ಪೋಗುತ್ತುಂ ಹೇಮಗಿರಿಯೊಳೊರ್ವ ವಿದ್ಯಾಧರಿಯಂ ತಲೆ ಪೊಱಗಾಗೆ ಪೆರ್ಮಾವು ನುಂಗಿರ್ದುದಂ ಕಂಡು ಸಮ್ಯಕ್ತ್ವಚೂಡಾಮಣಿ ಪ್ರತಿವಿದ್ಯೆಯಿಂ ಕಿಡಿಸಿ ವಿಘ್ನವಿನಾಶವಂ ಮಾಡುವುದುಂ ॥ ೧೧೨

ಕರಕಮಲದೆ ತದ್ವಿದ್ಯಾ
ಧರಿ ರಾಗಿಸಿ ಪೆರ್ಚೆ ನೋಡಿ ಮೆಯ್ಯುಱಿಯದೆ ಭಾ ।
ಸ್ಕರದೇವನಗ್ರತನಯನ
ಚರಣಾಂಭೋಜದ್ವಯಕ್ಕೆ ಕೈಮುಗಿದಾಗಳ್ ॥ ೧೧೩

ಪೊಡೆಮಡೆ, ಅಂತು ಪೊಡೆಮಟ್ಟ ವಿದ್ಯಾಧರಿಯಂ ನೀನಾರ್ಗೆನಿನ್ನ ಪೆಸರೇನೆಂಬುದೇನಂ ಸಾಧಿಸಲೆಂದು ಬಂದೆಯೆಂದು ಬೆಸಗೊಳ್ವುದುಂ, ವಿದ್ಯಾಧರಿ ಯಿಂತೆಂದಳ್:—ವರಚಂದ್ರಪುರಮನಾಳ್ವಂ ಸುರಸದೃಶಂ ಗರುಡನೆಂಬ ವಿದ್ಯಾಧರರಾಜನಾತನ ಮಹಾದೇವಿ ವಿಭ್ರಮಾನ್ವಿತೆ ಪೆಸರಿಂ ಅನಂತ ಮತಿಯೆಂಬಳಾಯಿರ್ವರ್ಗಂ ಪುಟ್ಟಿದೆಂ ಪವನವೇಗೆಯೆಂಬೆಂ; ಬಹುರೂಪಿಣೀವಿದ್ಯೆಯಂ ಸಾಧಿಸಲೆಂದು ಬಂದಿಲ್ಲಿ ಸಾಧಿಸುವುದುಮೆನಗಾ ವಿದ್ಯೆ ಸಾಧ್ಯಮಲ್ಲದೆ ವಿಘ್ನಂಮಾಡಲೆಂದು ಪೆರ್ಮಾವಾಗಿ ನುಂಗಿರ್ದುದು; ನಿನ್ನಪ್ರಸಾದದಿಂದೊರ್ವೆಗೆ ಬರ್ದುಕಿದೆನಲ್ಲದೆಂದುಂ ಈ ವಿಘ್ನಮನಾ ವಂಗಂ ಕಿಡಿಸಲ್ಬಾರದೆಂದು ತನ್ನ ವೃತ್ತಾಂತಮೆಲ್ಲಮಂ ಪೇೞ್ದು ಪ್ರಜ್ಞ ಪ್ತಿಯೆಂಬ ವಿದ್ಯೆಯಂ ವಾತ್ಸಲ್ಯರತ್ನಾಕರಂಗೆ ಪ್ರಾರ್ಥಿಸಿ ಕೊಟ್ಟು ಮುಂದೆ ನಿಂದಿರ್ಪುದುಮಂ ಕುಮಾರನಿಂತೆಂದಂ ॥ ೧೧೪

ಎನಿತೊಳವು ವಿದ್ಯೆ ಕೇಳ
ನ್ನನಿತುಂ ಖಚರರ್ಗಮುಂಟು ಕೊಳ್ಪೇಗವು ಕಾ ।
ಮಿನಿಯರ್ಗಲ್ಲದೆ ಜಗದೊಳ್
ನಿನಗೀಸದ್ವಿದ್ಯೆ ಯಾವ ಕಾರಣದಿಂದಂ ॥ ೧೧೫

ಸಾಧ್ಯಮಾಗದೆಂದು ಬೆಸಗೊಳ್ವುದುಂ ಪವನವೇಗೆಯಿಂತೆಂದಳ್:— ಸಂಜಯಂತ ಭಟ್ಟಾರಕರೆಂಬ ಮುನಿವರರ್ ವಿದೇಹದೊಳುಗ್ರಮಪ್ಪ ತಪಮಂ ಮಾಡುತುಮಿರ್ಪುದುಮವರ ಮುನ್ನಿನ ಭವದ ವೈರಿ ವಿದ್ಯುದ್ವೇಗನೆಂಬ ವಿದ್ಯಾಧರಂ ವಿದ್ಯಾವಿನೋದಾರ್ಥಂ ತೊಳಲುತ್ತೆ ವಿದೇಹದೊಳಿರ್ದ ಸಂಜಯಂತ ಯೋಗೀಶ್ವರನಂ ಕಂಡು ಕೋಪಂ ಪುಟ್ಟೆ॥೧೧೬

ಘನಮಪ್ಪಾಸರೆಮೇಲೀ
ಮುನಿಯುಂ ಕೊಂಡುಯ್ದು ನೆಟ್ಟನಪ್ಪಳಿಸುವೆನೋ ।
ತನು ನೆಱೆ ತಗ್ಗಿಯುಂ ನುರ್ಗ
ಪ್ಪಿನೆಗಂ ಮೇಗಣ್ಗೆ ನೆಗಪಿ ನೆಲಕಿಕ್ಕುವೆನೋ ॥ ೧೧೭

ಎಂದು ಬಗೆದೊಲ್ಲದೆ ಹರಿವತಿ ಗಜಾವತಿ ಕಮಳಾವತಿ ಪುಷ್ಪಾವತಿ ಚಂಡವೇಗೆ ಯೆಂಬ ಪಂಚನದೀಸಂಗಮದೊಳ್ ತಂದಿಕ್ಕುವುದುಂ ಸಂಜಯಂತಮುನೀಶ್ವರಂ ಕ್ಷಮೆಯೆಂಬ ಪೆರ್ಗೋಡಲಿಯಿಂ ದುರಿತಾಟವಿಯಂ ತಱಿದು ಶುಕ್ಲಧ್ಯಾನಮೆಂಬ ಕಿರ್ಚಿಂ ಕರ್ಮೇಂಧನಮಂ ಸುಟ್ಟು ಕೇವಲಜ್ಞಾನಿಯಾಗಿರ್ಪುದುಂ, ಸಕಲದೇವಸಮೂಹಂ ಬಂದು ಕೇವಲ ಪೂಜೆಯಂ ಮಾಡಿ ಪಲತೆಱದಿಂ ಪರಮೇಶ್ವರನಂ ಬಣ್ಣಿಸುತ್ತುಮಿರ್ಪುದುಂ] [1] ॥ ೧೧೮

ಧರಣೇಂದ್ರಂ ಕೋಪದಿಂದಂ ಮಸಗಿ ಗಜಱಿ ನಿರ್ದೋಷಿಯಂ ಧೈರ್ಯಚಾಮೀ
ಕರಶೈಲೇಂದ್ರಾಭನಂ ಕೆಮ್ಮನೆ ಕಲುಷದಿನೀಬಾಧೆಯಂ ಮಾಡಿದೀಖೇ ।

---

[1] ಪೋಗುತ್ತುಂ, ಹಿಮವದ್ಗಿರಿಯೊಳೊರ್ವ ವಿದ್ಯಾಧರಿಯಾ ಪೆರ್ಮಾವು ನುಂಗೆ, ತಲೆ ಪೊಱಗಾಗಿರ್ದದಂ ಕಂಡು ಪ್ರತಿವಿಷ್ಯೆಯಿಂ ಕಿಡಿಸುವುದುಮವಾವಿದ್ಯಾಧರಕುಮಾರಿ ಕಾಲ ಮೇಲೆ ಬಿರ್ದು,

ಚರನಂ ನಿರ್ವಂಶಮಪ್ಪಂತಿರೆ ತಱಿದು ಮಹಾವಾರ್ಧಿಗುಯಿಕ್ಕುವೆಂ ಚೆ
ಚ್ಚರವೆಂಬುದುದ್ಯೋಗದಿಂದಂ ಕೆಳರ್ದು ನಡೆವ ದೇವೇಂದ್ರನಂ ನಾಗ
ರಾಜಂ [1] ॥ ೧೧೯

ಮೋಣಿಸಿ ನಿನಗಿವರ್ ಸಮಾನರಲ್ಲರೆಂದು [ಬೇಡಿಕೊಳ್ವುದುಂ, ಕೋಪಮನುಡುಗಿಸಿ ಸಂಜಯಂತ ಸ್ವಾಮಿಗಳ ಪ್ರತಿಬಿಂಬಮನಾನದೀ ತೀರದೊಳ್ ಮಾಡಿ ಮಣಿಕನಕಮಯಮಪ್ಪ ಚೈತ್ಯಾಲಯಮನೆತ್ತಿಸಿ ಖೇಚರರಿಂದು ಮೊದಲಾಗೆ ಸಮಸ್ತವಿದ್ಯೆಗಳುಮನಿಲ್ಲಿ ಸಾಧಿಸುವುದು ಪೆಱವೆಡೆಗಳೊಳ್ ಸಾಧಿಸಿದರಪ್ಪೊಡೆ ಸಾಧ್ಯಮಾಗದೆ ಪೋಕೆಂದು ಪ್ರತಿಜ್ಞೆಯಂ ಮಾಡಿ ಪೋದನಪ್ಪುದಱಿಂದೆನಗಿಲ್ಲಿ ವಿದ್ಯೆಗೆ ವಿಘ್ನಮಾದುದೆಂದು ಪೇೞ್ದು ಸಂಜಯಂತ ಭಟ್ಟಾರಕರಲ್ಲಿಗೆ ವಂದು ಪವನವೇಗೆ ಕೊಟ್ಟ ಪ್ರಜ್ಞಪ್ತಿ ಮೊದಲಾಗೆ ಪಲವು ವಿದ್ಯೆಗಳುಮಂ ಸಾಧಿಸಿ ಕನಕಪುರಕ್ಕೆ ವಂದು

ವರಚಕ್ರಪುರವನಾಳ್ವಂ ಸ್ಮರಸದೃಶಂ ಗರುಡವೇಗನೆಂಬಂ ವಿದ್ಯಾ ।
ಧರರಾಜನೆನ್ನ ಜನಕಂಗನುರಾಗದಿ ಪವನವೇಗೆ ಎಂಬೆಂ ಪೆಸರಿಂ ॥

ಬಹುರೂಪಿಣಿವಿದ್ಯೆಯುಂ ಸಾಧಿಸುತ್ತಮಿರಲಾವಿದ್ಯೆ ಸಾಧ್ಯಮಲ್ಲದೆನ್ನಂ ಪೆರ್ಮಾವಾಗಿ ನುಂಗಿದುದು ನಿನ್ನ ಪ್ರಸಾದದಿಂ ಬರ್ದೆನೆಂದು ಪೊಗೞ್ದು ಪ್ರಜ್ಞಪ್ತಿ ವಿದ್ಯೆಯುಂ ಕೊಟ್ಟು ಹರಿವತಿ ಗಜಾವತಿ ಕಮಳಾವತಿ ಪುಷ್ಪಾವತಿ ಚಂಡವೇಗಿ ಯೆಂಬ ಪಂಚನದೀ ಸಂಗಮದಲ್ಲಿ ಪೋಗಿ ಸಂಜಯಂತ ಭಟ್ಟಾರಕರ ಪಾದೋಪ ಕಂಠದೊಳ್ ಸಾಧಿಸುವುದೆಂಬುದುಂ ಅಲ್ಲಿಯಲ್ಲದೆ ಪೆಱವೆಡೆಯೊಳೇಕೆ ಸಾಧಿಸಲಾಗ ದೆಂಬುದುಂ ಪವನವೇಗೆಯಿಂತೆಂದಳ್. ಸಂಜಯಂತ ಭಟ್ಟಾರಕ ರೆಂಬ ಋಷಿಯರು ವಿದೇಹದೊಳಾತಪಯೋಗದೊಳಿರ್ಪುದುಂ ಅವರ ಮುನ್ನಿನ ಭವದ ವೈರಿ ವಿದ್ಯುದ್ದಂಷ್ಟ್ರನೆಂಬ ವಿದ್ಯಾಧರಂ ಕಂಡು ಮುನಿದೆತ್ತಿ ತಂದು ಪಂಚನದಿಗಳೊಳಿಕ್ಕೆ ಕ್ಷಮೆ ಯೆಂಬ ಕಿಚ್ಚಿಂ ಕರ್ಮವೆಂಬ ಯಿಂಧನಂಗಳಂ ಸುಟ್ಟು ಕೇವಳಿಯಾಗಿರ್ಪುದುಂ ಕೇವಳಪೂಜೆಯಂ ಮಾಡಲೆಂದು ಸಮಸ್ತದೇವರ್ಕಳ್ ನೆರೆದು. (ಗ)

1 ನಾಗೇಂದ್ರನಂ ದೇವರಾಜಂ. (ಗ)

ರಾಜ್ಯಲೀಲೆಯಿಂದಿರ್ದೊಂದು ದಿವಸಂ ತಮ್ಮಯ್ಯನಪ್ಪ ಭಾಸ್ಕರ ದೇವನಂ]·[1] ॥ ೧೨೦

ನೀನಪ್ಪೊಡೆ ಖೇಚರನ್ಯ
ಹೀನರ ತೆಱದಿಂದೆ ಭೂಚರಾಶ್ರಯಮಂ ಮೆ ।
ತ್ತೇನೆಂದು ಪೊರ್ದಿ ನಿಂದ್ಯೆ
ಯಾನಂದಂಬೆರಸು ದೇವ ಬೆಸಸಲ್ವೇೞ್ಕುಂ ॥ ೧೨೧

[ಎನೆ ಭಾಸ್ಕರದೇವಂ ನಂದನನಂ ತೆಗೆದಪ್ಪಿಕೊಂಡು ಭರವಶದಿಂ ಮುನ್ನಿನ ತನ್ನ ಕಥೆಯನೆಲ್ಲಮನತಿಶಯಮಮಂ ಮಾಡಿ ತಿಳಿಪಿ ಪೇೞ್ವುದು ಮಾಗಳ್] [2] ॥ ೧೨೨

---

1 ಮಾಣಿಸಿ ಕೋಪಮನಡಂಗಿಸಿ ಸಂಜಯಂತ ಭಟ್ಟಾರಕರ ಪ್ರತಿಮೆಯು ನಲ್ಲಿ ಮಾಡಿ ಮಣಿಕನಕಮಪ್ಪ ಚೈತ್ಯಾಲಯಮಂ ಮಾಡಿಸಿ ವಿದ್ಯಾಧರರ್ಗಿಂದುಮೊದಲಾಗಿಲ್ಲಿ ವಿದ್ಯೆಗಳುಂ ಸಾಧ್ಯಮಕ್ಕೆ ಪೆಱವೆಡೆಯೊಳ್ ಸಾಧ್ಯಮಾಗದೆ ಪೋಕೆಂದು ಪ್ರತಿಜ್ಞೆಯುಂ ಮಾಡಿವನಪ್ಪುದಱಿಂದಲ್ಲಿಗೆ ಪೋಗಿ ಸಾಧಿಸೆಂದವಱ ವೃತ್ತಾಂತಮೆಲ್ಲಮಂ ಪೇಳ್ದು,

ಎನಗೀ ಜಿನಸಮಯಾಂಬರದಿನಕರನಲ್ಲದೆ ಪೆಱರ್ತುನಾಬ್ರಯರಲ್ಲರ್ ।
ಪಿನಯದಿನೆಂದಾ ಕನ್ನಿಕೆ ಮಾನದೊಳ್ ಲೇಸಾಗಿ ಪೂಣ್ದು ಪೋಪುದುಮಿತ್ತಂ॥

ವಜ್ರಕುಮಾರಂ ಸಿದ್ಧಕೂಟಚೈತ್ಯಾಲಯಮಂ ವಂದಿಸಿ ಸಂಜಯಂತ ಭಟ್ಟಾರಕರಲ್ಲಿಗೆ ಬಂದು ಪ್ರಜ್ಞಪ್ತಿವಿದ್ಯೆ ಮೊದಲಾದ ಪಲವು ವಿದ್ಯೆಗಳಂ ಸಾಧಿಸಿ ಜಾತಿವಿದ್ಯೆ ಕುಲವಿದ್ಯೆ ಸಾಧಿತವಿದ್ಯೆ ಯೆಂಬ ಮೂಱುಂವಿದ್ಯೆಗಳೊಳಂ ನೆಱೆದು ಕನಕಪುರಕ್ಕೆ ಬಂದು ಪಲದಿವಸಲೀಲೆಯೊಳಿರ್ದೊಂದುದಿವಸಂ ತಮ್ಮಯ್ಯನ ಮೊಗಮಂ ನೋಡಿ. (ಗ)

2 ಎಂದು ಬೆಸಗೊಳ್ವುದುಂ, ಭಾಸ್ಕರದೇವಂ ಪೇಳಲೊಲ್ಲದೆ ಲಜ್ಜೆಸಿರ್ಪುದುಂ, ಕೆಲದೊಳಿರ್ದ ಮಹೀಪಾಲಪೆರ್ಗಡೆ ಯಿಂತೆಂದು ಪೇಳ್ದಂ. ವಿಜಯಾರ್ಧಪರ್ವತದ ದಕ್ಷಿಣಶ್ರೇಢಿಯೊಳಮರಾವತಿಯೆಂಬ ಪುರಮನಾಳ್ವಂ ಶಂಭುವೆಂಬ ವಿದ್ಯಾಧರರಾಜನಾತಂಗೆ ನಿಮ್ಮಯ್ಯನಪ್ಪೀ ಭಾಸ್ಕರದೇವಂ ನಿಮ್ಮತ್ತೆಯಪ್ಪೀ ವಸುದೇವಿಯುಂ ಮಂದರದೇವನೆಂಬ ಮೂವರ್ಮಕ್ಕಳಾತಂ ವೈರಾಗ್ಯಪರಾಯಣನಾಗಿ ನಿಮ್ಮಯ್ಯಂಗೆ ವಿದ್ಯಾಧರರಾಜ್ಯಮುಮಂ ಮಂದರದೇವಂಗೆ ಯುವರಾಜ್ಯಮುಮಂ ವಿದ್ಯೆಗಳುಮಂ ಕೊಟ್ಟು,

ಎಮ್ಮಚ್ಚಂ ಕೊಟ್ಟ ವಿದ್ಯಾಬಲದಿನುಂದೆ ವೀರಕ್ಕೆ ಮುಯ್ಯಾಂತು ಬೇಗಂ
ನಿಮ್ಮಂ ತದ್ದೇಶದಿಂದಂ ಪೊಱಮಡಿಸಿ ಬೃಹತ್ತೇಜದಿಂ ರಾಜ್ಯಮಂ ಕೊಂ
ಡೆಮ್ಮಂ ಬಾಯ್ವಿಟ್ಟು ತದ್ರಾಜ್ಯಮನೆ ಬಿಸುಟು ಪೋಡಾಗಿ ಬಾಯ್ಬುತ್ತಿ
ಮೆತ್ತಂ
ತಾಮ್ಮೆಚ್ಚಿಂ ನೋಡೆ ಬೆಂಕೊಳ್ಳದೊಡೆ ನಿನಗೆ ನಾಂ ಸಿಕ್ಷೆಯಂ ಪುತ್ರ
ನಲ್ಲಂ ॥ ೧೨೩

ಎಂದು ತಂದೆಯ ಮುಂದೆ ಪೂಣ್ದು ಮುಸಗಿದ ಸಿಂಹದಂತೆ ಪೊಡೆವೆತ್ತ ಪಾವಿನಂತೆ ನೊಂದ ಶರಭದಂತೆ ಸಿಕ್ಕಿದ ಪುಲಿಯಂತೆ ಕೋಪಾವಿಷ್ಟನಾಗಿ [ಪರಿದು ಅಮರಾವತೀಪುರಮಂ ಮೂವಳಸಾಗೆ ಮುತ್ತಿಕೊಳ್ವುದುಂ ಮಂದರದೇವನಿದಿರ್ಚಿ ಕಾದಿ ತನ್ನ ಬಲಮೆಲ್ಲಂ ಕಲ್ಲಮೇಲೆ ಬಿರ್ದ ಕಾಜಿನ ಪೇಱನಂತೆ ನುಗ್ಗುಪ್ಪುದುಂ ಮುನಿದು ಸಮುದ್ರಬಾಣಮಂ ಬಿಡುವುದುಂ ॥ ೧೨೪

ಶರನಿಧಿಬಾಣಂ ಬರೆ ಖೇ
ಚರರಾಜಂ ಬಾಡಬಾಗ್ನಿ ಶರಮಂ ಬಿಡೆ ಚ ।
ಕ್ಷರಮಾಜಲಮಂ ಪೀರ್ವುದು
ಮುರಿದೆೞ್ದು ಕನಲ್ದುನಲ್ದು ಮಂದರದೇವಂ ॥ ೧೨೫

ಉರಗಬಾಣಮಂ ಬಿಡುವುದುಮದು ವಿಷಮನುಗುಳುತ್ತುಂ ಬರೆ
ವರೆ ॥ ೧೨೬

ಉರಗಶರಕ್ಕಿದಿರಂ ” ಖ
ಸ್ಕರದೇವಸುತಂ ಮಹೋಗ್ರಕೋಪಾನಲನಿಂ ।

ಎಳಸದೆ ಪ್ರಸುಖಕ್ಕೆ ಪೆಱತೊಂದಳಿವೇ ಹವಾನುಂಟುಮಾಡಿ ಸಂ
ಚಳಿಸ ವಿಭೂತಿಯುಂ ನೆನೆಸುದೊರ್ವ್ಯೆಯ ಧರ್ಮನ ರಾಜ್ಯಲಕ್ಷ್ಮಿಯುಂ ।
ಧಳಿಲನೆ ಬಿಟ್ಟ ಸುಪ್ರಭಸುಚಾರಣರಲ್ಲಿ ಜಿನೇಂದ್ರದೀಕ್ಷೆಯಿಂ
ಪಳಿ ಪೆಱಟಂಗೆ ಮುಯ್ದ್ಗೆಯು ಙ್ಗಳವಟ್ಟಿರ ಕೊಂಡನರ್ಥಿಯಿಂ ॥

ಇತ್ತಲ್ ರಾಜ್ಯಂಗೆಯ್ವ ಭಾಸ್ಕರದೇವನಂ ವಿದ್ಯಾಬಲದಿಂ ಮಂದರದೇವಂ ಕಾದಿ ರಾಜ್ಯಮಂ ಕೈಕೊಂಡದುವೆ ಬಂಗವಾಗಿ ಎಂದಿರ್ದಪನೆಂಬುದುಂ. (ಗ)

ಗರುಡಾಸ್ತ್ರಮನೆಸೆವುದುಮೋ
ಸರಿಸದೆ ಕಡಿಖಂಡಮಾಗಲದ ನುಂಗುವುದುಂ ‖ ೧೭೭

ಮತ್ತಂ ಕನಲ್ದು ಮಂದರದೇವನಿಸುವ ಮೇಘಬಾಣಮಂ ವಾಯು
ಬಾಣದಿಂ ಪರ್ವತಾಸ್ತ್ರಮಂ ವಜ್ರಶರದಿಂ ತಮೋಂಧಶರಮಂ ಸೂರ್ಯ
ಸಾಯಕದಿಂ ನಿರ್ಬುದ್ಧಿ ಬಾಣಮಂ ಮತಿಶರಾಳಿಯಿಂ ಗೆಲ್ವುದುಂ ಮಂದರ
ದೇವಂ ನಿಲಲಾರದೀತಂ ಸಾಮಾನ್ಯಪುರುಷನಲ್ಲೆಂದು ಬೆರ್ಚಿ ಪ್ರಾಣಭ
ಯದಿಂದೋಡುವುದುಂ ಅಮರಾವತೀಪುರಮಂ ಮಹಾವಿಭೂತಿಯಿಂ
ಪೊಕ್ಕು ತಮ್ಮಯ್ಯನ ರಾಜ್ಯಪದವಿಯೊಳ್ ನಿಂದು ಮಹಾಮಹಿಮೆ
ಯುಮಂ ತಾಳ್ದಿ ತಂದೆಯುಮಂ ತಾಯುಮಂ ಪೆಂಡಿರುಮಂ ಬರಿ
ಖೇಚರರಾಜ್ಯಲಕ್ಷ್ಮೀವಲ್ಲಭನಾಗಿ ‖ ೧೭೮

ಜಿನನಾಥಾರ್ಚನೆಯಿಂ ಜಿನಾಭಿಷವದಿಂದಾಹಾರಭೈಷಜ್ಯಶಾ
ಸ್ತ್ರನಯೋಪಾರ್ಜಿತಮಪ್ಪ ಸಂದಭಯಮೆಂಬೀನಾಲ್ಕುಮೊಳ್ದಾನದಿಂ
ಮುನಿಪಾಂಘ್ರಿದ್ವಯಸೇವೆಯಿಂ ಜಿನಕಥಾಳಾಪಂಗಳಿಂ ಕಾಮಿನೀ
ಜನಕಂದರ್ಪನುದಾತ್ತನಿರ್ಮಲಯಶಂ ವಾತ್ಸಲ್ಯರತ್ನಾಕರಂ ‖ ೧೭೯

ಅಂತು ರಾಜ್ಯಂಗೆಯ್ಯುತ್ತುಮಿರ್ಪನ್ನೆಗಂ ಚಂದ್ರಪುರಾಧಿಪತಿ
ಯಪ್ಪ ಗರುಡವೇಗವಿದ್ಯಾಧರರಾಜಂ ತನ್ನ ಮಗಳಪ್ಪ ಪವನವೇಗೆ
ಮದುವೆಯಂ ಮಾಡಲೆಂದು ಸ್ವಯಂವರಶಾಲೆಯುಂ ಮಾಡಿಸಿ ತಡೆಯದ
ಭಯಶ್ರೇಢಿಯ ವಿದ್ಯಾಧರರ್ಗೆಲ್ಲಂ ಬಱಿಯಟ್ಟಿ ವಜ್ರಕುಮಾರಂಗೆ
ಬಱಿಯಟ್ಟುವುದುಂ, ಗರುಡವೇಗನ ದೂತರ್ಬಂದು ಕಂಡು ಪೊ
ಮಟ್ಟು ತಮ್ಮ ಬಂದ ಕಾರ್ಯಮಂ ಬಿನ್ನಪಂಗೆಯ್ವುದುಂ ‖ ೧೮೦

ಬೇಗಂ ವಜ್ರಕುಮಾರಂ
ರಾಗಿಸೆ ದೂತರ್ಗೆ ಸಂತಸಂ ಪಿರಿದಪ್ಪಂ ।
ತಾಗೆ ಕರಮುತ್ಸವಂಬೆರ
ಸಾಗಳ್ ಕೊಟ್ಟಂಗಚಿತ್ತಮಂ ತತ್ಕ್ಷಣದಿಂ ‖ ೧೮೧

ಅಂತಮರಾವತೀಪುರಮಂ ಪೊೞಮಟ್ಟು ಚಂದ್ರಪುರಮನೆಯ್ದಿ ನೆರೆದ ವಿದ್ಯಾಧರವಲ್ಲಭರೊಡನೆ ಬಿಟ್ಟರೆ ಗರುಡವೇಗಂ ಮಱುದಿವಸಂ ಸಮಸ್ತವಿದ್ಯಾಧರನಾಯಕರು ಮೆಯ್ದಿರಿಮೆಂದು ಸಾಱುವುದುಂ॥ ೧೩೨

ತನ್ನ ಗಾತ್ರತ್ತೆ ಚೆಯಂ ನವ
ಭಿನ್ನಾಂಬುಜಮುಖಿಯನಮಲಗುಣಗಣಯುತೆಯಂ ।
ಕನ್ನೆಯನಭಿನವಮೆನಿಸುವ
ಚೆನ್ನೆಯನಗ್ಗಳದ ಪವನವೇಗೆಯನಾಗಳ್ ॥ ೧೩೩

ಕಡಗಕಂಕಣಹಾರನೂಪುರಮಾದಿಭೂಷಣರಾಜಿಯಂ
ತುಡಿಸಿ ಚೀನಮನರ್ಘ್ಯಮಿಂ ಮೃದುವಪ್ಪುದಂ ಮುದದಿಂದೆ ತಂ ।
ದುಡಿಸಿ ಕುಂಕುಮಚಂದನಾದಿ ಸುಗಂಧವಸ್ತುಗಳಂ ಮನಂ
ಬಿಡೆ ಮನೋಹರಮಾಗಿ ಪೂಸಿ ವಿಲಾಸದಿಂ ಕಡುರಾಗದಿಂ॥ ೧೩೪

ನೆಱೆಯೆ ಪಸದನಂಗೊಳಿಸಿ ಪೊನ್ನ ವಿಮಾನಮನೇಱಿಸಿ ಮಂಗಳ ತೂರ್ಯರವಮೆಸೆಯೆ ಖೇಚರರ ಸೈನ್ಯಂ ಸುತ್ತಂ ಬರೆ ವಿದ್ಯಾಧರ ಕುಮಾರಿಯರಿರ್ಕೆಲದೊಳಮಿರ್ದು ಪೊನ್ನ ಚಾಮರಮನಿಕ್ಕೆ ಮಹೋತ್ಸವಂ ಬೆರಸು ಸ್ವಯಂವರಭೂಮಿಗೆ ವರ್ಪುದುಂ ಪವನವೇಗೆ ಮುನ್ನಿನ ಪ್ರತಿಜ್ಞೆಯಂ ನೆನೆದು ತರತಂದೊಳಿರ್ದ ವಿದ್ಯಾಧರಕುಮಾರರಂ ನೋಡುತ್ತಂ ಬಂದು][1] ವಜ್ರಕುಮಾರನಂ ಕಂಡು ॥ ೧೩೫

ಮಾರನ ಶರದಳ್ಳಿಱಿಂ
ದೋರಂತಿರೆ ನೊಂದು ಸೋಲದಿಂದಂತಾಗಳ್ ।
ವಾರಿರುಹಾನನೆ ವಜ್ರಕು
ಮಾರಂಗಂ ಕೂರ್ತು ಮಾಲೆಸೂಡಿದಳಾಗಳ್ ॥ ೧೩೬

---

[1] ಬಂದು ಬಲಸಹಿತಂ ಪೋಗಿ ಮಂದರದೇವನನೋಡಿಸಿ ಭಾಸ್ಕರದೇವನುಂ ಮಣಿಮಾಲೆಯುಂ ಬೆರಸು ರಾಜ್ಯಂಗೆಯ್ಯುತ್ತುಮಿರ್ದು ಚಕ್ರಪುರಕ್ಕೆ ಗರುಡ ವೇಗನುಂ ತನ್ನ ಮಗಳ ಸ್ವಯಂವರಕ್ಕೆ ವಿದ್ಯಾಧರಕುಮಾರರಂ ಬರವೇಳ್ದಟ್ಟ ಬರ್ಪುದುಂ ಮುಂಪೊಣ್ದು ಪೋದ ಪವನವೇಗೆ ವಜ್ರಕುಮಾರನಂ ಕಂಡು (ಗ)

ಸರಸಿರುಹಾನನೆ ವಿದ್ಯಾ
ಧರರಂ ಕೈಕೊಳ್ಳದುೞದೆ ವಜ್ರಕುಮಾರಂ ।
ಗೆರಡಿಲ್ಲದೋತಳದಱಿಂ
ಧರೆಯೊಳ್ ಭಾಗ್ಯಾಧಿಕಂಗದಾವುದು ಗಹನಂ ॥ ೧೩೭

[ಅಂತು ನೆರೆದ ಖೇಚರರೆಲ್ಲಂ ಸಿಗ್ಗಾಗಿ ಪರಿದುಪೋಗೆಯುಂ ಸಮ್ಯಕ್ತ್ವಚೂಡಾಮಣಿ ಮದುವೆನಿಂದು ಮಹೋತ್ಸಾಹದಿಂದಮರಾವತೀಪುರಕ್ಕೆವಂದು ಮಹಾವಿಭೂತಿಯಿಂದರಮನೆಯಂ ಪೊಕ್ಕು ಸುಖದಿಂದಿರ್ಪುದುಂ] ॥ ೧೩೮

ಸ್ಮರರೂಪಂ ವಿಭವಪುರಂ
ದರನಗ್ರವಿರೋಧಿದರ್ಪದಳನಂ ವಿದ್ಯಾ ।
ಧರವಂದ್ಯನೆಂದು ವಿದ್ಯಾ
ಧರರೆಲ್ಲಂ ಕೂರ್ಮೆಯಿಂದಮತ್ಯಾದರದಿಂ [1] ॥ ೧೩೯

[ತಂತಮ್ಮ ಮಕ್ಕಳಂ ತಂದು] ಕುಡುವುದುಂ, ಸೌಂದರಿ ಅನಂಗಮಾಲೆ ವಿಜಯೆ ಅನಂಗಸೌಂದರಿ ಸುಪ್ರಭೆ ವಿದ್ಯುದ್ವೇಗೆ ವಿಜಯಾವತಿ ರತ್ನಸೌಂದರಿ ಯೆಂಬಿವೆಮೊದಲಾಗೆ ಪಲರುಂ ವಿದ್ಯಾಧರಕುಮಾರಿಯರೊಳ್ ಕೂಡಿ [2] ಸಂತೋಷದಂತಮನೆಯ್ದಿ ರಾಜ್ಯಲೀಲೆಯಿಂ ಪಲಕಾಲಮಿರ್ದೊಂದುದಿವಸಂ ॥ ೧೪೦

ಕರಿಘಟೆಯುಂ ಹಯಪ್ರತತಿಯುಂ ಭಟಕೋಟಿಯುಮೊಪ್ಪೆ ಸುತ್ತಲುಂ
ಬರೆ ಲಲಿತಾಂಗಿಯರ್ ಪದೆದು ಮೆಲ್ಲನೆ ಚಾಮರಮಿಕ್ಕೆ ಮೇಘಡಂ ।
ಬರಮೆಳಪಟ್ಟು ಶೋಭಿಸೆ ಮಯೂಖರನಾಯಕರತ್ನಲಿತ್ತಲೋ
ಸರಿಸದೆ ಕೂರ್ತು ಪೊರ್ದಿ ಬರೆ ಗಂಧಗಜೇಂದ್ರಮನೇಱಿ ಲೀಲೆಯಿಂ ॥

---

[1] ಧರರೆಲ್ಲಂ ತನ್ನತಮ್ಮ ಮಕ್ಕಳನಾಗಳ್. (ಗ)

[2] (ಗ) ಪುಸ್ತಕದಲ್ಲಿ "ಜಿನನಾಥಾರ್ಚನೆಯಿಂ" ಎಂಬ ೧೫೯ನೆಯ ಪದ್ಯವು ಇಲ್ಲಿ ಬಂದಿದೆ. (ಗ)

ಬಳಿಕ್ಕ ವಜ್ರಕುಮಾರನಂ ರತ್ನಮಯಮಪ್ಪ ಕಱುಮಾಡದ ಮೇಲೆ [ವಿಳಾಸಿನೀ ಜನಮುಂ ಸೊಸೆದಿರುಂಬೆರಸು] ಕುಳ್ಳಿರ್ದು ಮಣಿ ಮಾಳೆ ಮಹಾದೇವಿ ಕಂಡು [ಮುಯ್ಯಂ ನೋಡಿ ರಾಗದಿಂ ವಿಳಾಸಿನಿ ಯರ್ಗಿಂತೆಂದಳ್ ॥][1] ೧೪೩

ಶರಧಿಯೊಳಗಿರ್ದ ರತ್ನೋ
ತ್ಕರಮುಂ ತಮ್ಮಿಂದೆ ತಾಮೆ ಬಾರದೆ ಪುಣ್ಯಂ ।
ದೊರೆಕೊಳ ಕೇಳವು ತಾವ
ಚ್ಚರಿಯಾದುವೆ ಪುಣ್ಯದಿಂದಮಾಗದದುಂಟೇ ॥ ೧೪೩

ಅಪುಷ್ಪಿತಫಲಭಾಗಿನಿಯಾದೆನೆನ್ನಿಂದಂ ಬಟ್ಟು ಕೃತಾರ್ಥರಿಲ್ಲೆಂದು ನಲಿದು ಮಾತಾಡುವುದುಮಾಮಾತಂ ಪವನವೇಗ [ಕೇಳ್ದು ವಿಸ್ಮಯಂ ಬಟ್ಟು] ವಜ್ರಕುಮಾರಂಗೆ [ರಾತ್ರಿಸಮಯದೊಳ್] ಅಱಿಪುವುದುಂ ಸಮ್ಯಕ್ತ್ವಚೂಡಾಮಣಿ ಕೇಳ್ದು ಮಱುದಿವಸಂ ತಮ್ಮಬ್ಬೆಯಲ್ಲಿಗೆ ವಂದು ಕಿಱಿಬೆಸಗೊಂಡು ತನ್ನ ವೃತ್ತಾಂತಮೆಲ್ಲಮಂ ಲೇಸಾಗಱಿದು ತನ್ನೊಳಿಂತೆಂದಂ[2] ॥ ೧೪೪

ನೀರ ಬೊಬ್ಬುಳಿಕೆ ಭಾವಿಪಂದು ಸಂ
ಸಾರಮಿಂದ್ರ ಧನುವೆಂತುಟಂತೆ ಸ ।
ಚ್ಛ್ರೀರಂವಾಗೆ ತನು ಬೀೞಲಿರ್ದ ಧಾ
ತ್ರೀರುಹಂಬೊಲಗುಂ ನಿರಂತರಂ ॥ ೧೪೫

ಸ್ತ್ರೀಯುರೊಂದು ಕಡುಗೂರ್ಮೆ ಸೋಂಕೆಪ್ಪಡಂ
ಮಾಯಮಿಂದ್ರಿಯ ಸುಖಂಗಳಂಬೊಡಿಂ ।
ನಾಯುಬಾಲಮಳಪಿಂದಮೇಕ ಕೇಳ್
ವಾಯುಪಂ ಸ್ಥಿರಮಿದೆಂದು ನಂಬುವರ್ ॥ ೧೪೬

---

1 ಸೊಸೆದಿರ ಮೊಗಮಂ ನೋಡಿ. (ಗ)

2 ತನ್ನ ವೃತ್ತಾಂತಮೆಲ್ಲಮನಱಿದು ಸಂಸಾರಕ್ಕೆ ಹೇಸಿ. (ಗ)

ಮುನ್ನ ಮಿನ್ನವರೆಗಂ ಜಡತ್ವದಿಂ
ದೆನ್ನ ಕರ್ಮವಶದಿಂದಮಿರ್ದೆನಿ ।
ನ್ನೆನ್ನನಾನಱಿದು ರಾಜ್ಯಮೋಹದೊಂ
ದುನ್ನತಿಕ್ಕೆಮೆರಸಿರ್ಪುದೊಪ್ಪವೇ ॥ [1] ೧೪೬

ದೇಹಮಂ ಧನಮನಿಂದ್ರಿಯಂಗಳಂ
ನೇಹಮಂ ವನಿತೆಯರ್ಕಳಂ ಮಹಾ ।
ಮೋಹದಿಂ ಪಿಡಿದು ಧರ್ಮದೊಂದುಸತ್
ಸ್ನೇಹಮಂ ಬಿಡುವುದೇನದೊಳ್ಳಿತೇ ॥ ೧೪೭

[ಎಂದು ಸಂಸಾರದೊಳಾದ ಭೋಗೋಪಭೋಗಂಗಳ್ಗೆ ಪೇಸಿ
ನ್ಮಾಂಗಲ್ಯಮಪ್ಪ ಜಿನರೂಪಂ ಧರಿಯಿಸುವೆನೆಂಬ ಕಜ್ಜಮನೆತ್ತಿ
ಂಡು ಭಾಸ್ಕರದೇವಂಗಂ ಮಣಿಮಾಲೆಗಮಱಿಪುವುದುಮವರಿಂತೆಂ
೬ ॥ ೧೪೮

ಬೇಡ ಮರುಳ್ತನಮಂ ನೀಂ
ಮಾಡದೆ ಪೆತ್ತನಗೆ ಕಱುವೆ ಮಱುಕಮನೋವಿಂ ।
ಮಾಡದೆ ಕೇಳ್ಸಂತಸಮಂ
ಮೊಡುವ್ರೋಡೀಮಾತನೆಯ್ದೆ ಮೊಣ್ಬುದು ಮಗನೇ ॥ ೧೫೦

ಜಿನಪೂಜೆಗಳಂ ನಿನ್ನಾ
ಪ್ತನಿತಂ ಮಾಡರ್ತಿಯಿಂದಕೃತ್ರಿಮಜಿನಚೈ ।
ತ್ಯಾವಾಸಂಗಳನೆಱ್ಕಿ
ರ್ತನವರತಂ ಪೋಗಿ ಬಿಡದೆ ವಂದಿಸು ಮಗನೇ ॥ ೧೫೧

---

[1] ಎಡಗಯ್ಯೊಳ್ ಕೊಟ್ಟರ್ಥದಂತೆ ತಳಿಗೆಯು ಕೂಳಿನಂತೆ ಮುಡಿದ ಚವುರಿ
ಂತೆ ನೆಲಹಿನ ಮೊಸರಂತೆ ಬೆನ್ನೇಱಿದ ಮಗವಿನಂತೆ ಮಣಿಗಡಗದ ಕೀಲಿನಂತೆ
ಂಹದ ಜೋಳದಂತೆ ಕಿತ್ತ ಪಡಿಯಂತೆ ಬಿಲದಲಿಕ್ಕಿದ ಪೊನ್ನಿನಂತೆ ಕಿವಿಯಲಿಕ್ಕಿ
ೀಲಿಯಂತೆ ಸೂಳೆಯರ ಕರಹದಂತೆ ಕುದುರೆ ಯೇಱಿದರಂತೆ ಬಂಡಿನ ಗುಡಿ
ಂತೆ ಕಾವಲಿಯುಡುಗೆಯಂತೆ ನಿದ್ದೆಯಿಲ್ಲದ ಮಾನಸವಾಳ ನಂಬಿ. (ಗ)

ಎಂದಳಿಪಂ ತೋಱಿ ತಮ್ಮ ಮೋಹದಿಂ ಬಿಡಲಾಱದೆ ನುಡಿವುದುಂ ಕುಮಾರನೇಗೆಯ್ದುಂ ತಮ್ಮ ಮಾತಿಂಗೊಡಂಬಡದಿರೆ, ಮಗನ ಮನದ ದೃಢತೆಯುಮಂ ಪರಿಚ್ಛೇದಮುಮನಱಿದು ದಕ್ಷಿಣಮಧುರಾಪುರದ ಸಹಸ್ರಕೂಟಚೈತ್ಯಾಲಯದೊಳಿರ್ದ ಸೋಮದತ್ತ ಭಟ್ಟಾರಕರನವಳೋಕಿನೀವಿದ್ಯೆಯಿಂದಱಿದು ವಜ್ರಕುಮಾರನಂಬೆರಸು ಮಣಿಮಾಲೆಯುಂ ಮಹಾವಿಭೂತಿಯಿಂದವರಲ್ಲಿಗೆವಂದು ಸೋಮದತ್ತಭಟ್ಟಾರಕರಂ ಬಂದಿಸಿ ವಾತ್ಸಲ್ಯರತ್ನಾಕರನ ಸಂಸಾರದ ವೈರಾಗ್ಯಮಂ ಪೇೞ್ವುದುಂ ॥ ೧೫೨

ನಯದಿಂ ಮುನಿಪತಿ ಜಿನದೀ
ಕ್ಷೆಯನಂಬರಚರತನೂಭವಂಗನುನಯದಿಂ ।
ದಯೆಗೆಯ್ಯೆ ತಪಶ್ರೀಯುಂ
ಪ್ರಿಯದಿಂ ತಾಳ್ದಿದನನಂತಗುಣಗಣನಿಲಯಂ ॥ ೧೫೩

ಅಂತು ವಜ್ರಕುಮಾರಂ ಜಿನರೂಪಂ ತಾಳ್ವುದುಂ, ಭಾಸ್ಕರದೇವನುಂ ಮಣಿಮಾಲೆಯುಂ ತಮ್ಮ ವಂಶಜರೆಲ್ಲರುಮಣುವ್ರತಂಮಾಡಿ ಸೋಮದತ್ತಮುನೀಶ್ವರನುಮಂ ವಜ್ರಕುಮಾರಮುನಿಯುಮಂ ಬಂದಿಸಿ ವಿದ್ಯಾಧರಲೋಕಕ್ಕೆ ಪೋದರಿತ್ತಲ್, ವಜ್ರಕುಮಾರಮುನಿ ನಿಯಮಿತವಚನನುಂ ಸಕಲಾಗಮಕುಶಲನುಂ ಸಂಯಮಜಲನಿಧಿಯುಂ ಗುರುಪಾದಭಕ್ತನುಂ ಚತುಷ್ಕಷಾಯಾಂತಕನುಂ ದಶಧರ್ಮಸಮೇತನುಂ ವಾತ್ಸಲ್ಯನಿಳಯನುಂ ಸಮಸ್ತದೋಷರಹಿತನುಂ ಸಂಸಾರಭಯಸ್ಥನುಂ ಬಾಹ್ಯಾಭ್ಯಂತರತಪೋನಿರತನುಂ ಸಮ್ಯಕ್ತ್ವಚೂಡಾಮಣಿಯುಮಾಗಿ ತಪದೊಳೊಂದುತ್ತರೋತ್ತರಮಾಗಿ ನೆಗೞುತ್ತುಮಿರ್ಪುದುಂ ॥

ಚಾರಣಋದ್ಧಿ ಗುಣಾಳಂ
ಕಾರಂಗುನ್ನತಮಹಾವ್ರತಂಗಳ್ ಗಜಸಂ ।
ಹಾರಂಗೊಗೆದುದು ಜಿನಚರ
ಣಾರಾಧನವಿರಾಯುದಿರ್ಪ ವಸ್ತುಗಳೊಳವೇ] [1] ॥ ೧೫೫

1 ಎಂದು ಭಾಸ್ಕರದೇವನುಮಂ ಮಣಿಮಾಲೆಮಹಾದೇವಿಯುಮನೊಡಂಬಡಿಸಿ ರಾಜ್ಯಮಂ ಕೊಡುವುದುಂ ದಕ್ಷಿಣಮಧುರೆಗವರಿರ್ವರುಂ ಮುಂದಿಟ್ಟೊಡ

ಅಂತು ಚಾರಣಋದ್ಧಿಪ್ರಾಪ್ತನಾಗಿ [ಸುಕವಿನಿಕರಪಿಕಮಾಕಂದನಿ]ರ್ಪ್ಪುದುಮಾಪುರಮನಾಳ್ವ ಪ್ರೀತಿವಾಹನಮಹಾರಾಜನ ಪಟ್ಟದ ಮಹಾದೇವಿ [ಸಮ್ಯಕ್ತ್ವನಿಳಯೆಯುಂ ಮೂಢತ್ರಯನಿವಾರಿತೆಯುಂ ಷಡಾಯತನದೂರಿತೆಯುಂ ಅಷ್ಟಮದವರ್ಜಿತೆಯುಂ ನಿಶ್ಶಂಕಾದ್ಯಷ್ಟಗುಣಸಂಪನ್ನೆಯುಂ ಅಣುವ್ರತೋಪೇತೆಯುಮೆನಿಸಿದೋಹಿಲೆಯೆಂಬಳ್ ॥ ೧೫೬

ಸಕಲಗುಣಾಢ್ಯೆ ಸತ್ಯದ ತವರ್ಮನೆ ವಾರ್ಧಿಪರೀತಧಾರಿಣೀ
ಪ್ರಕಟಿತಚಂದ್ರಸನ್ನಿಭಯಶೋನ್ನತೆ ನಿರ್ಮಳಸಚ್ಚರಿತ್ರೆ ಚಂ
ಪಕನುತಗಂಧೆ ಜೈನಪದಭಕ್ತೆ ಮನೋಹರರೂಪೆ ಕಾಮಿನೀ
ನಿಕರಕಮೋಘರತ್ನೆ ನೆಗಳ್ದೋಹಿಲೆಯೆಂಬುದು ಭವ್ಯಸಂಕುಳಂ] [1] ॥

ಅಂತು ನೆಗಪ್ತೆಗಂ [ಪೊಗಳ್ತೆಗಂ] ನೆಲೆಯಾದೋಹಿಲೆಮಹಾದೇವಿ ಸುಖಸಂಕಥಾವಿನೋದದಿಂದಿರೆ, [ಮತ್ತಮಾಪುರದೊಳ್ ಸಮುದ್ರದತ್ತನೆಂಬ ಪರದನಾತನ ಪೆಂಡತಿ ಧನದೆಯೆಂಬಳಾಯಿರ್ವರುಂ ಪಲಕಾಲಂ ಸುಖಮನನುಭವಿಸುತ್ತಿರ್ಪುದುಂ ಸಮುದ್ರದತ್ತಸೆಟ್ಟಿ ತೊಟ್ಟನೆ ಕೊಳ, ಜವನ ದೂತರ್ ಬರ್ಪನ್ನೆತಾನುಂ ಸಮುದ್ರದತ್ತಸೆಟ್ಟಿಯು ಮಹಾಶ್ರೀಗೆ ಕರ್ಮರಾಜನ ನಾಟು ಬರ್ಪಂತಾನುಂ ಧನದೆಗೆ ಗರ್ಭಮಪ್ಪುದುಂ ॥

ಸಿರಿಯೆಲ್ಲಂ ನೆವೆನವದಿಂ
ದುರಿಯೊಳ್ ಬಿಳ್ದರಗಿನಂತೆ ಕರಗುವುದುಂ ನಿ।

ಗೊಂಡು ಬಂದು ಸೋಮದತ್ತಭಟ್ಟಾರಕರ್ಗೆ ವಜ್ರಕುಮಾರನೊಳಾದವೃತ್ತಾಂತಮೆಲ್ಲಮಂ ಪೇಳ್ದುದೀಕ್ಷೆಯುಂ ಕೊಡಿಸಿ ಮುನಿಗಳ್ದು ಪೋಪರತ್ತಲ್ ॥

ಪದ್ಧತಿಯಿಂದಂ ಚಾರಣವೃದ್ಧಿ ದಿಟಂ ಸುಕವಿನಿಕರಪಿಕಮಾಕಂದಂ ।
ಗುದ್ಧತಿಯಿಂದಂ ಮನಸಿನ ಸಂಶುದ್ಧತೆಯುಂ ತೋರ್ಪ ತೆಱದಿನೊಗೆಯಿತ್ತಾಗಳ್ ॥ (ಗ)

[1] ಒಹಿಲೆಯೆಂಬಳ್ ಧರ್ಮದೆಶ್ಯೆಗರಿನಾವನಿತ ಸೀತೆಗಂ ಜಿನಪೂಜೋ।
ತ್ಸಿಹದಿನಾವಧು ಶಚಿಗಂ ಕಾನಗ್ಗಳಮೆಂದು ಧರಣಿ ತಾಂ ಕೈಮುಗಿಗುಂ॥(ಗ)

ಷ್ಠುರಮಪ್ಪ ದರಿದ್ರತೆ ಪೊ
ರ್ದಿರೆ ಕಟ್ಟಿಗಂ ಸಿರಿಗಮೆಂದು ತಾಂ ಗೆಂಟಾದರ್ ‖ ೧೪೯

ಮುನ್ನಿನ ಸಿರಿಯಂ ನನೆನನೆ
ದುನ್ನತಿಗೆಟ್ಟಳವುಗೆಟ್ಟು ಬಡತನದೊದವಿಂ ।
ದನ್ನಂಬಡೆಯದೆ ಮಱುಗಿ ಕ
ರನ್ನೋವಿಂ ಪೆಂಪುಗೆಟ್ಟು ನವೆಯುತ್ತಿರ್ದರ್ ‖ ೧೫೦

ಅಂತು ಬಡತನವೊದವೆ ಸಮುದ್ರದತ್ತಸೆಟ್ಟಿಯುಂ ಧನದೆಯುಂ ದುಃಖಮೆಂಬ ಸುೞಿಯೊಳ್ ಬಿದ್ದು ಮೂಡಿ ಮುೞುಂಗುತ್ತಿರೆ, ಕವ ರ್ತೆಯ ಮೇಲೆ ಕೊಲೆಯೆಂಬಂತೆ, ಬಡತನದ ಮೇಲೆ ಮಾರಿಗುತ್ತ ಮಾಗೆ ಪಿರಿದಪ್ಪಾಪತ್ತಂ ಮಾಡಿದ ಮಗವಿನ ಮೊಗಮನೇಗೆಯ್ದುಂ ನೋಡಲೊಲ್ಲನೆಂಬಂತೆ ಸಮುದ್ರದತ್ತಸೆಟ್ಟಿ ಯಮನಿವಾಸಮನೆಯ್ದು ವುದುಂ ಧನದೆಗೆ ದುಃಖಮಿಮ್ಮಡಿಸಿ ಚಿಂತಾಸಮುದ್ರದೊಳೋಲಾಡುತ್ತಿ ರ್ದು ನವಮಾಸಂ ನೆಱೆದು ಪೆಣ್ಗೂಸಂ ಪೆತ್ತು ‖ ೧೫೧

ತಂದೆಯನವೆಯವದಿಂದಂ
ಕೊಂದೀಶಿಶು ಬೇಗಮೆನ್ನುಮಂ ಕೊಲ್ಗುಂ ಪೋ ।
ಸಂದೆಯಮಿಲ್ಲೆನ್ನಾಣ್ಮನೊ
ಳೊಂದುವೆನಾಂ ಮುನ್ನಮೆಂಬ ತೆಱದಿಂದಾಗಳ್ ‖ ೧೫೨

ಧನದೆಯುಮನದೆಯಾಗಿ ಕೆಲವುದಿವಸಕ್ಕೆ ಕ್ರೂರಾಂತಕನ ದಾಡೆ ಗೊಳಗಪ್ಪುದುಂ, ಕೂಸನಾಥೆಯಾಗಿ ಪೂರ್ವಕೃತಕರ್ಮಫಲಮನನು ಭವಿಸುತ್ತುಂ ಕಟ್ಟಿಡೆಯದೆ ಪೊಱಲೊಳಗೆಂಜಲಗುಱಿನಾಯ್ದು ಲಸಿ ಕುಱುಕುತ್ತುಂ ಬೀದಿಯೊಳ್ ಪೆಱರ್ಮೆಲೀಡಾಡಿದ ಪಣ್ಪಲಂಗಳಂ ಮೆಲುತುಂ ಕಾಲಮಂ ಕಳೆಯುತ್ತುಮಿರ್ಪುದುಮನೊರ್ಮೆ ‖ ೧೫೩

ಜಿನತತ್ವಾಂಭೋನಿಧಿವ
ರ್ಧನಚಂದ್ರರ್ ದುರಿತವಾರ್ಧಿಬಡಬಾನಳರಿಂ ।

ದ್ರನಗಕ್ಷಮೆರಂತಭಿನಂ
ದನರುಂ ನಂದನರುಮೆಂಬರಿರ್ವರ್ಮುನಿಗಳ್ ॥

ಚರಿಗೆಯಂ ಮಾಡಿ ಪೋಗುತ್ತುಂ ಕಸಗುಪ್ಪೆಯೊಳಂಜಲಗ ನಾಪ್ಪುಲಸಿ ತಿಂಬ ಮಗುವಂ ಕಂಡು ನಂದನಮುನೀಂದ್ರರ್ ವಿಸ್ಮಯ ಬಿಟ್ಟು ಸಂಸಾರದಿಂ ಬಿಟ್ಟು ಕಷ್ಟವಿಲ್ಲೆಂಬುದುಮಭಿನಂದನಭಟ್ಟಾ ಕರಿಂತೆಂದರಿಂತುನಮೀಮಗವೀ ಪುರಮನಾಳ್ವ ಪೂತಿವಾಹನಮಹಾ ಜಂಗೆ ಪ್ರಾಣವಲ್ಲಭೆಯಪ್ಪಳೆಂಬುದುಮಾಮಾತಂ ಪೆಱಗೆ ಬರು ಮಿರ್ದ ಬುದ್ಧಾತ್ಮನೆಂಬ ರಕ್ತಾಂಬರಧರಂ ಕೇಳ್ದು ಋಷಿವಾಕ್ಯಂ ತ ದೆಂದು ಮಗವಂ ತನ್ನ ದೇಹಾರಕ್ಕೊಯ್ದು ಬುದ್ಧದಾಸಿಯೆಂದು ಪೆ ನಿಟ್ಟು ನಡೆಪುವುದುಂ ॥ ೧೬

ಪುರುಡಿಸುವಳ್ ವಿಳಾಸದ ಪೊದಳ್ಕೆಗೆ ವಿಭ್ರಮದೇಳ್ಗೆಗಂಬರ
ಚರಿಯರೊಳಿಂದ್ರಲೋಕಲಲಿತಾಂಗಿಯರೊಳ್ ಕಡುಗಾಯ್ದುದರ್ತು ಮ
ಚ್ಚರಿಸುವಳುನ್ನತಿಕ್ಕೆಗೆ ಬೆಡಂಗಿನ ತೋಳ್ಕೆಗೆ ನೋಡ ನಾಡ ಸೌಂ
ದರಿಯರೊಳಾವಗಂ ಸೆಣಸುವಳ್ ಸಲೆ ಗಾಡಿಗಮುನ್ನತಿಕ್ಕೆಗಂ ॥ ೧೬

ಅಂತು ಮಹಾಹಾವಭಾವವಿಲಾಸವಿಭ್ರಮಂಗಳ್ಗೆ ನೆಲೆಯಾಗಿ ಬು ದಾಸಿ ಶೃಂಗಾರದುಳಿಯಾಗಿರ್ದೊಂದುದಿವಸಂ ದೇಹಾರದ ಪೆಱಗಣ ನಂ ವನದೊಳುಯ್ಯಲಾಡುತ್ತುಮಿರ್ಪುದುಂ, ಪೂತಿವಾಹನಮಹಾರಾಜಂ ಗ ಸಿಂಧುರಾರೂಢನಾಗಿ ಬೀದಿಯೊಳ್ ಪೋಗುತ್ತುಂ ತೊಟ್ಟನೆ ಕಂಡು॥೧

ಸ್ಮರನ ಸರಲ್ಗಳ್ ನಡುಕೋ
ಲ್ವೆರ್ಗಂ ನಡೆ ಪೂತಿವಾಹನಂ ಪೋಗದೆ ನಿಂ ॥
ದರವಿಂಪಾಕ್ಷಿಯ ರೂಪಂ
ಪರಿಭಾವಿಸಿ ನೋಡಿ ತೂಗಿ ತಲೆಯಂ ಬೇಗಂ ॥ ೧

ಅತಮನೆಗೆ ಪೋಗಿ ವಿರಹಸಂತಾಪದಿಂ ನಿಲಲಾಱದೆ ಬುದ್ಧ ಸಿಯುಮಂ ಬೇಡಿ ಪೆರ್ಗಡೆಗಳಂ ಬುದ್ಧರಕ್ತಾಂಬರನಲ್ಲಿಗಟ್ಟುವುದ

ಬುದ್ಧಾತ್ಮಂ ತಿರಿವಂಗೆ ಸಿರಿ ದೊರೆಕೊಂಡಂತೆ ಪೆರ್ಚಿ ಋಷಿವಾಕ್ಯಮೇಕೆ ತಪ್ಪುಗುಮೆಂದು ಮನದೊಳ್ ಬಗೆದು ಸಿರಿ ಬರೆ ಮೋಣಕಾಲನಾಂತರೆಂಬಂತೆ ನಿಮ್ಮರಸಂಗಂ ಪ್ರಾಣಮುಮನರ್ಥಮುಮನೀವೆಂ ಕೂಸಾವ ಪಿರಿದೆಂದು ಕುಡುವುದುಂ, ಪೂತಿವಾಹನಮಹಾರಾಜಂ ಬುದ್ಧದಾಸಿಯೊಳ್ ಪ್ರಾಣವಲ್ಲಭನಾಗಿ] [1] ॥ ೧೬೯

ರತಿಪತಿಯ ಟಕ್ಕು ಕೊಳ ಭೂ
ಪತಿ ಮತ್ತಿನ ಕಾಂತೆಯರ್ಕಳಂ ನೋಡದೆ ಸ।
ನ್ನುತಮಪ್ಪ ಪೆಱವುಕಾರ್ಯಮ
ನತಿಶಯದಿಂ ಬಿಟ್ಟು ಕೇಳದನ್ಯರ ಮಾತಂ ॥ ೧೭೦

[ಬುದ್ಧದಾಸಿಯುಸಿ ಪತ್ತು ಕಣ್ಣ ಮಯಿಕ್ಕುವನಿತುಪ್ರೊತ್ತುಪ್ಪೊಡಮಗಲದೆ ಕೂರ್ಮೆಯಿಂದಿರ್ಪುದುಂ ಸಕಲಗುಣನಿಳಯೆಯೆನಿಪ್ಪೋಹಿಲೆ ಮಹಾದೇವಿ ಫಾಲ್ಗುನದ ನಂದೀಶ್ವರದಂದು ಮಹಾಮಹಿಮೆಯಿಂ ಜಿನಪೂಜೆಯುಂ ಪೊಜಿಮಡಿಸುವುದುಂ ಬುದ್ಧದಾಸಿ ತನಗೆ ಪೂತಿವಾಹನಮಹಾರಾಜನೆರಡಿಲ್ಲದೆ ಸ್ನೇಹಂಗೆಯ್ವನಪ್ಪುದಱಿಂ ಜಿನಪೂಜೆಗೆ ವಿಘ್ನಮಂ ಮಾಡಿ ತಮ್ಮಾಚಾರ್ಯನಪ್ಪ ಬುದ್ಧಾತ್ಮನ ಮತದಿಂ ಮುನ್ನಂ ಬುದ್ಧನ ಪೂಜೆಯುಂ] [2] ॥ ೧೭೧

---

1 ಆಪುರಕ್ಕೆ ಯಭಿನಂದನಭಟ್ಟಾರಕರೆಂಬ ಋಷಿಯರ್ ತಮ್ಮ ಶಿಷ್ಯರ್ ನಂದನರೆಂಬ ಋಷಿಯರ್ವೆರಸು ವಿಹಾರಿಸುತ್ತಂ ಬಂದು ಪೊಱವೊಳಲೊಳಗಿರ್ಪುದುಮೊಂದು ಪೆಣ್ಗೂಸನಾಥೆ ಕಾಯಿಕಸವನೆಂಜಲುಗೊಳನಾಯಸ್ತಾಯ್ದು ತಿನ್ನುತ್ತಿರ್ಪುದುಂ, ನಂದನಮುನಿಗುರುಗಳ್ಗೆ ತೋಱಿ ಸಂಸಾರದಿಂದಂ ಬಿಟ್ಟು ಪಗರಣಮಿಲ್ಲೆಂಬುದುಮವರ ವಧಿಜ್ಞಾನಿಗಳಪ್ಪುದಱಿಂ ಸಿಂ ಪೇಳ್ದಂತುಟೆ ಸಂಸಾರಂ ಬಿಟುಂ ಪಗರಣಮಿಲ್ಲೀಮಗವೆ ಪೂತಿವಾಹನಮಹಾರಾಜಂಗೆ ಪ್ರಾಣವಲ್ಲಭೆಯಾದಪಳೆಂಬುದುಂ ಬುದ್ಧಾತ್ಮನೆಂಬ ಬೌದ್ಧಂ ಕೇಳ್ದು ಸಮಣೋ ಅಮೋಘನಯಣೋ ಎಂಬುದು ತಪ್ಪದೆಂದು ಮಗಮಂ ವಿಹಾರಕ್ಕೊಯ್ದು ಬುದ್ಧದಾಸಿಯೆಂದು ಪೆಸರನಿಟ್ಟು ನಡಪುವುದುಂ ಪೂತಿವಾಹನಮಹಾರಾಜಂ ಕಂಡು ಕಣ್ಬೇಟಂಗೊಂಡು ತನಗರಸಿಮಾಡಿ (ಗ)

2 ಇರ್ಪುದುಂ ಬಹಿಲೆಮಹಾದೇವಿ ಫಾಲ್ಗುಣನಂದೀಶ್ವರದೊಳ್ ಜಿನಪೂಜೆಯುಂ ಮಾಡಲೆಂದೊಡರಿಸೆ ಬುದ್ಧದಾಸಿ ತಾನರಸನ ಕೂರ್ಮೆಯುನಱಿವಳಪ್ಪುದಱಿಂ ಬುದ್ಧಾತ್ಮನ ಮತದಿಂ ಜಿನಪೂಜೆಯಂ ಮಾಣಿಸಿ ಬುದ್ಧಪೂಜೆಯುಮಂ ಮುನ್ನಂ (ಗ)

ಅವೆಯುಪದಿಂದಂ ಪೂಜೆಮಡಿ
ಸುವ ಬಗೆಯಿಂ ರತಮನೊಪ್ಪಮಾಗಿರೆಕಗಮು ।
ತ್ಸವದಿಂ ಮಾಡಿಸಿ ವಾರಣ
ನಿವಹಂ ಹಯನಿಕರವಾರವನಿತಾನಿಚಯಂ ॥ ೧೭೨

ಬೆರಸಗುವರ್ಗೆ [ಬುದ್ಧದಾಸಿ ಘರ್ಜಿಂದಂ] ಇರ್ಪುದುಂ ಓಹಿಲೆ ಮಹಾದೇವಿ ಬುದ್ಧದಾಸಿ ಜಿನಪೂಜೆಯಂ ಮಾಡಿಸಿ ಸುಗತನ ರಥಮಂ ಪೂಜಿಮಡಿಸಿದಳೆಂದು [1] ಸಭಾಕ್ಷೋಭಮಾಗೆ ಗರ್ಜಿಸಿ ॥ ೧೭೩

ಜಿನಪನ ಕೂರ್ಮೆಯನಾಕಾ
ಮಿನಿ ನಂಬಿ ಮಹಾಪ್ರತಾಪದಿಂ ಪೆಱರಂ ದು ।
ರ್ಮನದಿಂ ಕೈಕೊಳ್ಳದೆ ಕೆ
ಮ್ಮನೆ ತನ್ನನೆ ಕೊಂಡು ಕೊನೆದು ಪೊಗೞುಸುತಿರ್ಪಳ್ ॥ ೧೭೪

ಆದಿಯ ತಿರಿಕಂಗೊರ್ಮೆಯೆ
ಮೇದಿನಿ ದೊರೆಕೊಂಡುದಪ್ಪೊಡೇಂ ಮುನ್ನಂ ತಾ ।
ನೋದಿಲ್ಲದವನ ನಂದನ
ನೋದಿದೊಡಂ ಬಗೆಪನಲ್ಲನನ್ಯರನೆಂದುಂ ॥ ೧೭೫

ಶಾಂತಿಯ ಪೆಸರ್ ಮೈಲಾರಮೆಂಬಂತೆ, ಪೊಲೆಯರಾಡಿನ ಪೆಸರ್ ಮಾಣಿಕದೇವಿಯೆಂಬಂತೆ, ತೊತ್ತ್ರನ ಪೆಸರ್ ಸಿರಿಯ ದೇವಿ ಯೆಂಬಂತೆ, ಎಮ್ಮೆಯ ಪೆಸರ್ ಮಹಾದೇವಿ ಯೆಂಬಂತೆ, ಓಡಿನ ಪೆಸರ್ ಮಂಗಳ ಮೆಂಬಂತೆ ತಾನುಮರಸಿಯಾಗಿ [ಮುಯ್ಯಾಂತು ಸೊಕ್ಕಿ] ತಮ್ಮಯ್ಯನಪ್ಪ ತಂಗುಟ'ದಿರಿಕನ ಮಾತಂ ಕೇಳ್ದು ದಕ್ಷಿಣಮಧುರಾಪುರದೊಳಂ ದುಂಪೂಜಿಮಡದ ಸುಗತನ ರಥಮಂ [2] ಪೂಜಿಮಡಿಸಿ [ಸದಾಕಾಲಂ ಪೂಜಿ ಮಡುವ] ಪಾಂಡ್ಯಾನ್ವಯಸ್ವಾಮಿಯಪ್ಪ ಜಿನಸ್ವಾಮಿಯ ಪೂಜೆಯಂ [ಪೂಜಿಮಡಲೀಯದೆ ಕೊರ್ವಿದೊಡೇನಾಯ್ತು, ಪೂತಿವಾಹನ ಮಹಾ

1 ಇರ್ಪುದುಂ ಅದನೋಹಿಲೆಮಹಾದೇವಿ ಕೇಳ್ದು (ಗ)

2 ಬುದ್ಧಪೂಜೆಯಂ (ಗ)

ರಾಜನ ಕೂರ್ಮೆಯ ಪೆಂಡತಿಯಪ್ಪ ತನ್ನ ದಲಮುಮನ್ನ ದಲಮುಂ ಕಾದಲಕ್ಕವೆಂದು ಪೂಣ್ದು ಸೋಮದತ್ತ ಮುನಿಪತಿಯಲ್ಲಿಗೆ ವಂದು ಭಕ್ತಿಯಿಂ ಬಂದಿಸಿ ತನಗಾದಪಮಾನಮಂ ಪೇೞ್ದು][1] ॥ ೧೭೬

ಪರಮಜಿನೇಶನ ರಥಮಿೀ
ಪುರದೊಳ್ ಮುನ್ನಂತು ನಡೆವುದಾಮಾರ್ಗದೊಳೀ ।
ಪ್ಪರೆ ನಡೆದೊಡುಣ್ಬೆನಲ್ಲದೊ
ಡರವರಿಸುವೆಳಲ್ಲನೆನಗೆ ಯಾವಜ್ಜೀವಂ ॥ ೧೭೭

ಆಹಾರಶರೀರನಿವೃತ್ತಿ ಯೆಂಬುದುಂ [ಸೋಮದತ್ತಭಟ್ಟಾರಕರಿಂ ತೆಂದರ್: — ವಜ್ರಕುಮಾರಮುನಿಕುಂಜರಸಿಂ ನಿಮ್ಮ ಕಾರ್ಯಂ ತೀರ್ಗುಂ ನೀವಿದಕ್ಕುಮ್ಮಳಿಸದೆ ಅಲ್ಲಿಗೆ ಪೋಗಿಮೆನೆ ವಾತ್ಸಲ್ಯರತ್ನಾಕರನಲ್ಲಿಗೆ ಪೋಗಿ ವಿಧಿಪೂರ್ವಕಂ ಬಂದಿಸಿ ತನ್ನ ಮನದ ಕಾರ್ಯಮಂ ನೆಱೆಯೆ ಪೇೞ್ದು, ಸೋಮದತ್ತ ಮುನಿಪತಿಯು ಮುಂದೆ ನುಡಿದ ಪ್ರತಿಜ್ಞೆಯಂ ಮಾಡುವುದುಂ ಸಮ್ಯಕ್ತ್ವಚೂಡಾಮಣಿ ತನ್ನೊಳಿಂತೆಂದಂ ॥

ಕಲ್ಯಾಣಮುಮೆನಿಸುವ ವಾ
ತ್ಸಲ್ಯಂ ಕೇವಳಮೆ ಸರ್ವಸೌಖ್ಯಕ್ಕಂ ಮಾಂ ।
ಗಲ್ಯಂ ಮುಕ್ತಿಶ್ರೀಗಿದು
ಮೌಲ್ಯದ ತೊಡವುಗ್ರಕರ್ಮಭಯಸಂಹರಣಂ][2] । ೧೭೯

ತತ್ಸೌಖ್ಯಮನೊಲ್ವ ನರಂ
ಮಾತ್ಸರ್ಯಮನೆಯ್ದೆ ಬಿಟ್ಟು ಚಾತುರ್ವರ್ಣ್ಯ ।
ಕ್ಕತ್ಸವದಿಂದಂ ಮಾೞ್ಪುದು
ವಾತ್ಸಲ್ಯಮನಱಿದು ಜೈನವಚನಾಂಬುಧಿಯೊಳ್ ॥ ೧೮೦

---

1 ಮಾಣಿಸಿದಳ್ತನ್ನರಸಿತನವಂ ಕಾಣಲಕ್ಕುವೆಂದು ಸೋಮದತ್ತಭಟ್ಟಾರಕರಲ್ಲಿಗೆ ಬಂದು (ಗ)

2 ಸಹಜಕವಿಜನಪಯಃಪಯೋಧಿಹಿಮಕರಂ ಕೇಳ್ದು (ಗ)

ಪಡಿಯಿಲ್ಲದ ಮನೆಯುಂ ಪೆ
ರ್ಗಡೆಯಿಲ್ಲದ ರಾಜ್ಯಮುಂ ಮಹಾ [1] ವಾತ್ಸಲ್ಯಂ ।
ಗಡಮಿಲ್ಲದ ಗುಣಗಣಮುಂ [2]
ಬಡವನ ಯೌವನಮು [3] ಮೊಪ್ಪಲಾಱವು ಜಗದೊಳ್ ॥ ೧೮೧

ಅದಱಿಂ ವಾತ್ಸಲ್ಯಮೆಂಬುದು ಸಾಮಾನ್ಯಮಲ್ಲದಿದನುದಾಸೀನಂಗೆ ಯ್ಯಲಾಗದೆಂದು ಸಹಜಕವಿಜನಮನೋಹರೋದ್ಯಾನಕಳಕಂಠನೋ ಹಿಲೆಮಹಾದೇವಿಗಿಂತೆಂದಂ ॥ ೧೮೨

ವಾರಿಜನೇತ್ರೆ ದಿವ್ಯಗುಣಭೂಷಣೆ ಭವ್ಯಜನಾನುರಾಗೆ ನಿ
ಷ್ಕಾರಣಮೇಕೆ ಪೂಣ್ಕೆ ನಿನಗುರ್ವಿಯೊಳಾವಗಮಾವೆಕಾರ್ಯಮುಂ
ತೀರದದುಂಟೆ ನಾಳೆ ಜಿನಪೂಜೆಯನಚ್ಚರಿಯಾಗೆ ಖೇಚರ
ಶ್ರೀರಮಣೀಶರಿಂ ನಡೆಸುವೆಂ ನಿನಗುತ್ಸವಮಾಗಲರ್ತಿಯಿಂ [4] ॥ ೧೮೩

[ಎಂಬುದುಂ, ಓಹಿಲೆಮಹಾದೇವಿ ಸುಕವಿನಿಕರ ಪಿಕಮಾಕಂದನ ವಚನದಿಂ ಚಂದ್ರೋದಯದ ಸಮುದ್ರದಂತೆ ಪೆರ್ಚಿಂದಮಿರ್ಪುದುಂ ವಾತ್ಸಲ್ಯರತ್ನಾಕರಂ ಚಾರಣಋದ್ಧಿಪ್ರಾಪ್ತನಪ್ಪುದಱಿಂ ಪವನವೇಗದಿಂ ದಮರಾವತೀಪುರಮನೆಯ್ದಿ ರಾಜಮಂದಿರಮಂ ಪೊಗುವುದುಂ ॥ ೧೮೪

ಶ್ರೀಮದ್ವಜ್ರಕುಮಾರಮ
ಹಾಮುನಿಪನ ಬರವನಱಿದು ಭಾಸ್ಕರದೇವಂ ।
ಶ್ರೀಮಹಿತನೊಸೆದು ಪಡೆದು ಮ
ಹಾಮುದದಿಂದೆೞ್ದು ಸಿಂಹವಿಷ್ಟರದಿಂದಂ ॥ ೧೮೫

ಅಂತು ಮಣಿಮಾಲೆಮಹಾದೇವಿಗಿದಿರೆೞ್ದು ಬಂದು ಬಲಗೊಂಡು ಬಂದಿಸಿ ಭಕ್ತಿಯಿಂದಿದಿರ್ಗೊಂಡು ಪೊಗೞ್ದು ವಿಸ್ತೀರ್ಣಮಪ್ಪ ವಿಷ್ಟರ ಮನೇಱಲಿಕ್ಕಿ ಕಾಲಂ ಕರ್ಚಿ ತಳೋದಕಮಂ ತಲೆಯ ಮೇಲೆ ತಳಿದು ಕೊಂಡು ॥ ೧೮೬

---

1 ರಾಜ್ಯಲಕ್ಷ್ಮಿಯುಂ (ಗ)   2 ಗುಣಮುಂ ಮೇಣ್ (ಗ)

3 ಪೆರ್ಮಾತು (ಗ)

4 ಶ್ರೀರಮಣೀಶರಿಂ ನಡಸುತಮರ್ಳ್ವೆವರ್ಗಚರಾತಮಪ್ಪಿನಂ (ಗ)

ಸುರತರುವಿನ ವೊಲ್ಲೆಯ ಪಾ
ದರಿಯ ನವೇರುವಿನ ಪಾರಿಜಾತದ ಪುಷ್ಪೋ ।
ತ್ಕರದಿಂ ವಜ್ರಮುನೀಂದ್ರನ
ಚರಣಮನಾನಂದಚಿತ್ತದಿಂ ಪೂಜಿಸಿದರ್ ॥ ೧೪೭

ಅಂತು ಪೂಜಿಸಿ ಮುನಿಕುಂಜರನ ಬಳಿಗೆ ಪೆರ್ಚಿ ಕಿಱಿದು ಬೇಗಂ ಭಾಸ್ಕರದೇವನುಂ ಮಣಿಮಾಲೆಯುಂ ಸಮ್ಯಕ್ತ್ವಚೂಡಾಮಣಿಯ ಕಾಲ್ಗಳಂ ತಮ್ಮ ತೊಡೆಯಮೇಲಿರಿಸಿ ಮೆಲ್ಲಮೆಲ್ಲನೊತ್ತುತ್ತುಂ ಧರ್ಮಮಂ ಕೇಳ್ದು ತದನಂತರಂ ಮುನೀಂದ್ರೋತ್ತಮರ ಮೊಗಮಂ ನೋಡಿ ಕರಕಮಳಮುಕುಳಿತರಾಗಿರ್ದಿಂತೆಂದರ್][1] ॥ ೧೪೮

ಉಮ್ಮಳಿಕೆ ಪೋಯ್ತು ನಯದಿಂ
ದೆಮ್ಮ ಘನಿಕುರಂಬಮಿಂದು ನೆಟ್ಟನೆ ಪೋದುವು ।
ನಿಮ್ಮಡಿ ಸಂತಸದಿಂದಂ
ನಿಮ್ಮ ಶ್ರೀಪಾದಪದ್ಮಮಂ ಕಂಡೀಗಳ್ ॥ ೧೪೯

[ಎಂದು ತಮ್ಮ ಭಕ್ತಿಯಂ ಪೊಱಗಣ ಜನಕ್ಕೆ ತೋರ್ಪಂತೆ ನುಡಿದವರ್ನಿಮ್ಮಡಿ ಬೆಸನಾವುದು ಬೆಸಸಿಮೆನೆ ಭಾಸ್ಕರದೇವಂಗೆ ವಾತ್ಸಲ್ಯರತ್ನಾಕರನಿಂತೆಂದಂ. ನೀಂ ನಿಮ್ಮ ಸಮಸ್ತವಿದ್ಯಾಧರಬಲಂಬೆರಸು ಎಮ್ಮೊಡನೆ ದಕ್ಷಿಣಮಧುರಾಪುರಕ್ಕೆ ವೆಂದು ಪೂತಿವಾಹನಮಹಾರಾಜನ ಪಿರಿಯರಸಿಯಪ್ಪೋಹಿಲೆಮಹಾದೇವಿಯ ಜಿನಪೂಜೆಯಂ ಪೊಱಮಡಿಪುದೆಂಬುದುಂ, ಮಹಾಪ್ರಸಾದಮಂತೆಗೆಯ್ವೆಮದಾವ ಗಹನಮೆಂದುಭಯಶ್ರೇಢಿಯ ವಿದ್ಯಾಧರರ್ಗೆಲ್ಲಂ ಬೞಿಯನಟ್ಟುವುದುಮೆರಡುಗೇಳದೆ ತಂತಮ್ಮ ಮಹಾವಿಭೂತಿಯಿಂದೊದವಿ ವಿದ್ಯಾಧರಮಹೀವಲ್ಲಭರಮರಾವತೀಪುರಕ್ಕೆ ವರ್ಪುದುಂ ॥ ೧೫೦

[1] ಎಂದು ಸಂತೋಷಂಬಡೆ ನುಡಿದು ಚಾರಣವೃದ್ಧಿಪ್ರಾಪ್ತನಪ್ಪುದಱಿಂದ ಮರಾವತಿಪುರಕ್ಕೆ ತತ್ಕ್ಷಣದಿಂ ಪೋಪುದುಂ ಭಾಸ್ಕರದೇವನುಂ ಮಣಿಮಾಲೆಯುಮಹಾದೇವಿಯುಮಿದಿರ್ಗೊಂಡು ಉಚ್ಚಾಸನದೊಳಿರಿಸಿ ಕಾಲಂ ಕರ್ಚಿ ಪಾದೋದಕಮಂ ತಲೆಯ ಮೇಲೆ ತಳಿದುಕೊಂಡು ಪೂಜಿಸಿ (ಗ)

ಅರಮನೆಯಿಂದಂ ವಿಬುಧೇ
ಶ್ವರನಿಕರಂ ರಾಜಲೀಲೆಯಿಂ ಪೊಱಮಟ್ಟು ।
ದರದಿಂ ಸಮಸ್ತವಿದ್ಯಾ
ಧರರಾಜವರ್ಗರಸು ವಜ್ರಮುನಿಪನ ಬೆಸನಿಂ] [1] ॥ ೧೯೧

ದೆಸೆ ಮಾರ್ದನಿಯಿಡೆ ಪಟಹ ಘೋ
ಷಿಸೆ ದುಗ್ಧಾಂಬುಧಿಯ ತೆರೆಗಳಂ ಪೋಲ್ತುತ್ತುಂ ।
ಪಸರಿಸೆ ಗಗನದ ತಳದೊ
ಳ್ಮಸುಗುವ ಬೆಳ್ಗೊಡೆಯುಮೊಸೆವ ಮುತ್ತಿನ ಕೊಡೆಯುಂ ॥ ೧೯೨

ನೆರೆದು ಮಹೀಧರತತಿಗಳ್ [2]
ಧರೆಯಂ ಬಿಟ್ಟಂತರಿಕ್ಷದೊಳ್ ತಮ್ಮನಿತುಂ ।
ಕರವೊಪ್ಪಿರ್ದಪ್ಪುವೆಂಬಂ
ತಿರೆ ರಂಜಿಸಿದುವು ಮದಾಂಧಸಿಂಧುರಘಟೆಗಳ್ ॥ ೧೯೩

ತಾರಾವಳಿಗಳ್ ವಜ್ರಕು
ಮಾರಮುನೀ [3] ಶ್ವರನನಿದಿರ್ಗೊಳಲ್ ಬಂದು ಸವಿ ।

---

1 ಬೆಸನಾವುದು ಮುನಿವಲ್ಲಭ ಬೆಸಸೆಂಬುದು ಸುಕವಿನಿಕರಪಿಕಮಾಕಂದಂ ।
ಬೆಸಸಿದನಂಬರಚರಗತಿಗಸಹಾಯಃಪರಾಕ್ರಮಂಗೆ ತನ್ನೊಲವಿಂದಂ ॥

ನಿನ್ನ ಸಕಲವಿದ್ಯಾಧರಬಲಂಬೆರಸು ದಕ್ಷಿಣಮಧುರೆಗೆ ಬಂದು ಪೂತಿವಾಹನ ಮಹಾರಾಜನಾತನ ಪಿರಿಯರಸಿ ಪೋಹಿಲಮಹಾದೇವಿಯು ಪೇಳ್ದ ಪನೆ ಗೆಯ್ದು ನಂದೀಶ್ವರದಷ್ಟಾಹ್ನಿಕಮಂ ಮಾಡುವುದೆಂಬುದು ಮಹಾಪ್ರಸಾದ ಬೆಸನಂ ಕೈಕೊಂಡೆನೆಂದುಭಯವಿದ್ಯಾಧರಶ್ರೇಢಿಯನಾಯ್ಕರೆಲ್ಲರುಮಂ ಬರಿಸಿ,

ಅರಮನೆಯಿಂದಾಗಳ್ ಭಾಸ್ಕರದೇವವಿಯಚ್ಚರೇಶ್ವರಂ ಪೊಱಮಟ್ಟಂ
ಕರನಿಧಿ ಪಲವುಂ ಘೋಷಿಸೆ ಮೊಱೆವಂತಿರೆ ಪಱೆಯ ದನಿಗಳೊಡನೆಸೆವಿನೆಗಂ ॥
ಕರನಿಧಿ ನೋಡಲ್ಕೆಳ್ಗಂಬರಚಕ್ರಮನೆಂದು ನೆಲದಿ ನೆಗಳ್ದಪರಂಬಂ
ತಿರೆ ಗಗನತಳದೊಳೊಪ್ಪಂ ಬೆರಸಿರ್ದುದು ನಡೆದ ಖೇಚರೇಶ್ವರಸೈನ್ಯಂ ॥
ಪನ್ನೆರಡುಗಾವುದಗಲಂ ಕುಱುನ್ನಂ ಮೂವತ್ತುನಾಲ್ಕುಗಾವುದ ನೀಳಂ
ತನ್ನೊಡನೆ ನಡೆದುದೆಂದತ್ಯುನ್ನತಿಯಿಂ ಖೇಚರಾಧಿನಾಥನ ಕಟಕಂ ॥ (ಗ)

2 ಪಂದಲ್ಗಾ ಪರ್ವತಮುಂ (ಗ)   3 ಖಚರಶ್ರಿರಮಣೀ (ಗ)

ಸ್ಫಾರದಿನಿರ್ದಿಷ್ಟುವೆನಿಸಿದ
ವ್ರೋರಂತಿರೆ ತುಱುಗಿದವೆಳ ತುರಗಚಯಂಗಳ್ ॥ ೧೯೪

ಮುನಿದಿಂದ್ರಂಗೆ ಸುರಾಂಗನಾತತಿ ಸುರೇಂದ್ರಾವಾಸದಿಂ ಪಳ್ಳವಂ
ದು ನಿತಾಂತಂ ನೆರೆದಿರ್ದರಂಬರದೊಳಂಬಂತೊಪ್ಪಿ ವಿದ್ಯಾಧರಾಂ
ಗನೆಯರ್ ಕೋಮಲಗಾತ್ರೆಯರ್ ವಿಕಸಿತಾಂಭೋಜಾಕ್ಷಿಯರ್ ಖೇಚರಾ
ವನಿಪಾಲರ್ಕಳ ಚಿತ್ತಮಂ ಕದಡುತುಂ ಬಂದರ್ ಮಹೋತ್ಸಾಹದಿಂ॥೧೯೫

[ಮೆತ್ತಂ ಬಟಲ್ಮುಡಿಯ ಸೋರ್ಮುಡಿಯ ಪೂಮುಡಿಯ ನಿಱುದಲೆಯ ಸುಱುಗುರುಳ ತುಂಬುನೊಸಲ ಅಸಿಯ ಬೊಟ್ಟಿನ ನೀಳ್ದ ಪುರ್ವಿನ ಚಲ್ಲಗಣ್ಣ ತುಱುಗೆವೆಯ ವಿಶಾಲಗಂಡಸ್ಥಳದ ರಮಣೀಯ ಕರ್ಣಯುಗಳದ ಪವಳದ ಬಾಯ್ದೆರೆಯ ಚೆಲ್ವುವಡೆದ ಮೂಗಿನ ರೇಕೆಗೊರಲ ಘನಕುಚದ ನಳತೋಳ ಕೋಮಲಾಂಗುಲಿಯ ಕೆಂದಳದ ಬಡನಡುವಿನ ತೋರಜಘನದ ನೇರಿದಪ್ಪ ಬಾಸೆಯ ನುಣ್ಪುವಡೆದೂರುದ್ವಯದ ಮೃದುತಳದ ಮಂದಗಮನದ ಮುದ್ದುನುಡಿಯ ಕೋಮಲಾಂಗದ ವಿದ್ಯಾಧರವಾರನಾರೀಕದಂಬಂ ಕಾಮದೇವನ ರಾಜ್ಯಕ್ಕೆ ನಾವು ಮೊದಲಿಗರೆಂಬಂತೆ ಪೊಂಕಂಬೆರಸು ತರತರದಿಂದಿರಲುಂ, ಸ್ವರ್ಣದೀಪವನನುಕರಿಸುವ ಕನಕಮಯಮಪ್ಪ ಪೊನ್ನ ವಿಮಾನದಿಂ ಚಂದ್ರಮಂಡಲಮೆ ಪಲವುರೂಪಿಂ ನಭಸ್ಥಳದೊಳಿರ್ದುದೆನಿಸುವ ಬೆಳ್ಳಿಯ ವಿಮಾನಂಗಳಿಂ ಗಗನಶ್ರೀ ವಿದ್ಯಾಧರಸೈನ್ಯಮನರ್ತಿಯಿಂ ಶತಸಹಸ್ರವದನಂಗಳಿಂ ನೋಡಿದಪಳೆನಿಸುವ ಪದ್ಮರಾಗಮಯವಿಮಾನಂಗಳಿಂ ಮೌಕ್ತಿಕಾವಳಿಯಿಂ ಮುತ್ತಿನಾಗರಮನಿಳಿಸುವ ವಿಮಾನಂಗಳಿಂ ಖೇಚರಸೈನ್ಯದಗುರ್ವಿಗೆ ಕಣ್ಣೞಗದಂತೆ ವಿಧಾತ್ರಂ ಚೀನದ ವಸ್ತ್ರದಿಂ ಬಾಸಣಿಸಿದನೆಂಬಂತೆಸೆದು ಸುತ್ತಿದ ಪಚ್ಚೆಯ ವಿಮಾನಂಗಳಿಂ ವಿದ್ಯಾಧರತಂತ್ರಕ್ಕೆ ವಿಧಿ ಮಂತ್ರಿಸಿ ಕಾಡಿಗೆಯುಂ ಸುಂಚಿಸಿವನೆಂಬಂತಿಂದ್ರನೀಲದ ವಿಮಾನಂಗಳಿಂ ಕಾಮನ ಮೀನಪತಾಕೆಯೊಡನೆಕ್ಕತುಳಕ್ಕಮುಚ್ಚಳಿಸ ಪೊಱಮಟ್ಟವೆನಿಸಿ ಚೆಲ್ವುವಡೆದ ಮಹಾಧ್ವಜಂಗಳಿಂ ದಿನಕರಕಾಂ

ತಿಯುಮಮಂ ನೀಮಿಂ ಪರಿಕಿಸಿ ನೋಡಿಮೆಂದು ಸೂರ್ಯನೊಡನೆ ಕಯ್ವಾಯ್ದು ಮಧ್ಯಸ್ಥರಲ್ಲಿಗೆ ಬರ್ಪಂತೆ ಪೊಳೆವ ಪೊಂಗಾಲಿಗಳಿಂದೊಪ್ಪುವರದಂಗಳಿಂ, ಹಸ್ತ್ಯಶ್ವರಥಪದಾತಿಗಳೊಂದಱೊಂದು ಪೊರ್ದಲೀಯದೆ ನಿಯಮಿಸುವ ಕಟ್ಟಿಗೆಕಾಱರಿಂ, ಕಾಮದೇವನ ರೂಪಿಂಗೆಪ್ಮರೂಪೆ ಮಿಗಿಲೆಂಬಂತೆ ಕಟಕಕಂಕಣಹಾರಕೇಯೂರ ಮಕುಟಾದ್ಯಾಭರಣಂಗಳಿಂ ತೊಳಗಿ ಬೆಳಗುವಂಬರಚರಕುಮಾರರಿಂದೆಸೆದು,|[1] ॥ ೧೯೬

ಅಮರೇಂದ್ರಂಗಮಹೀಶ್ವರಂಗಮಮರೇಂದ್ರಾವಾಸಮುಂ ನಾಗಲೋ
ಕಮುಮೊಪ್ಪಿದುರ್ವಪರ್ಗೆ ಕುಂದೆ ಸಿರಿಗಂ ತಾನೆಂದು ಮಯ್ವೆರ್ಚೆ ವಿ
ಕ್ರಮದಿಂ ಭಾಸ್ಕರದೇವನಂಬರದೊಳತ್ಯಾನಂದದಿಂ ಮಾಡಿದಂ
ಕ್ರಮದಿಂ ಖೇಚರಲೋಕಮಂ ಮಹಿಮೆಯಿಂದೆಂಬಂತದೇನೊಪ್ಪಿತೋ॥

[ಎಲವೆದ ಶಂಖದ ಕಹಳೆಯ
ಸಲೆ ಪಲವುಂ ಪೆಂಪುವೆತ್ತ ಕರಡೆಯ ಪೊಸಮ |
ದ್ದಲೆಯ ತ್ರಿವಳಿಯ ಭೇರಿಗ
ಳುಲಿಯಿಂದರ್ಣವಮನೆಯ್ದೆ ಪೋಲ್ತುದು ಸೈನ್ಯಂ ॥ ೧೯೭

ತಳಗಳ್ ಬೆಳ್ಗೊಡೆಗಳ ಮಂ
ಡಳಿಯಿಂ ಸತ್ತಿಗೆಯ ಮೇಘಡಂಬರದ ನೆಳ |
ಲ್ಗಳನೊಪ್ಪುವೆತ್ತುದಾಜಿಗ
ಬಲಮಾರಮೆಯಂತೆ ನಾಡೆ ಕತುಚೆಳ್ವಿಂದಂ] ॥ ೧೯೮

ಸುರಲೋಕಂ ಮರ್ತ್ಯಲೋಕಂ ಫಣಿಪತಿಭುವನಂ ಪೂಜ್ಯಮೆಪ್ಪೊಂದ
ಮೆಂಬಂ
ತಿರೆ ; ಯನ್ನಾನಿರ್ಗ್ಗೆಂತರೆಂದುಬ್ಬರಿಸಿ ಕೊನೆದು ಕಾಮೋಸ್ತ್ರದಂತೊಪ್ಪಿ
ನಾನಾ

(೧) ಪುಸ್ತಕದ ಪ್ರಕಾರ ಈ ಗದ್ಯದಲ್ಲಿ ಉದ್ದಕ್ಕೂ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ.

ಭರಣವ್ರಾತಂಗಳಿಂದಂ ನೆಱೆದು ಮೆಱೆಯುತಂ ಸೌಂದರಾಕಾರವೆಂಭಾ
ಸುರಲಾವಣ್ಯಾಬ್ಧಿ ಬೆಳ್ಳಂಗೆಡೆದವೊಲೆಸೆದರ್ ಖೇಚರಸ್ತ್ರೀಸಮೂಹಂ[1] ||
[ತ್ರಿದಶೇಂದ್ರಸ್ತ್ರೀಯರಿಂದಲ್ಲದೆ ಫಣಿಪತಿಯುಂ ನೋೞ್ಪೊಡಿಂ ಸ್ತ್ರೀಯರಿಂದ
ಲ್ಲದೆ ಚಕ್ರಾಧೀಶರುಂ ಭಾವಿಸುವೊಡೆ ಧರೆಯೊಳ್ ಪೆಂಪಿನಿಂ ಸ್ತ್ರೀಯರಿಂದ
ಲ್ಲದೆ ಮೇಣ್ಮತ್ತಮಿಂದೆ ತಾವಿನ್ನೆಸೆಯುರದಱಿನೆಮ್ಮಂತು ಮಾಂಗಲ್ಯರಾರೆಂ
ದೊದವಿಂ ಬಂದಿರ್ದುವೊಪ್ಪಂಬೆರಸು ಸಕಲವಿದ್ಯಾಧರಸ್ತ್ರೀಸಮೂಹಂ ||
ಅಂಗರ್ಗಂಗಳ್ ಸೋಲವಂ ಪುಟ್ಟಿಸುತಿರೆ ನಳಿತೋಳ್ ಗಾಡಿಯುಂ ಕೂಡೆ ಮಾಡು
ತ್ತಿರೆ ಧಮ್ಮಿಲ್ಲಂಗಳೆತ್ತಂ ಖಚರರ ಮನಮಂ ಮಾಣದೋರಂತೆ ಚೆಚ್ಚು
ತ್ತಿರೆ ಲಾವಣ್ಯಂ ತುಳುಂಕುತ್ತಿರೆ ಮೃದುಗಮನಂ ಚಿತ್ತಮಂ ಪತ್ತಿನೊಂಕು
ತ್ತಿರೆ ಬಂದರ್ ಚೆನ್ನೆಯರ್ ಚೆನ್ನಳವಡೆ ಮುದದಿಂ ಖೇಚರಸ್ತ್ರೀಸಮೂಹಂ] || ೨೦೨

ಸ್ಮರನಿನ್ನಾನಿಲ್ಲದಂದೀಜನಮನೆಱಗಿಸಲೊಕ್ಕೀಡಿಸಲ್ ಮೋಡಿಸಲ್ ಮ
ಚ್ಚರದಿಂದಲ್ಲಾಡಿಸಲ್ ಪೋಲಿಸಲವಯವದಿಂ ತೂಳ್ದು ಬೆನ್ನಟ್ಟಿ ಮುಟ್ಟಲ್
ಪುರುಡಿಂ ತಾಗಲ್ಕದೇನೊರ್ವನೆ ನೆಱವನೆ ಪೇೞೆಂದು ಲೋಕಕ್ಕೆ ಪೇೞ್ವಂ
ತಿರೆ ಬಂದರ್ ಬಿಂಕದಿಂ ಸಂಕಿಸದೆ ಸಕಲವಿದ್ಯಾಧರಸ್ತ್ರೀಸಮೂಹಂ ||

---

1 ತರಳಾಕ್ಷ್ಯರ್ ಸೋಲವಂ ಪುಟ್ಟಿಸುತ್ತಿರೆ ನಳಿತೋಳ್ಕ್ವರ್ಗಯುಂ ಕೂಡೆಮಾಡು
ತ್ತಿರೆ ಧಮ್ಮಿಲ್ಲಂಗಳೆತ್ತಂ ಖಚರರ ಮನಮಂ ಮಾಣದೋರಂತೆ ಚೆಚ್ಚು
ತ್ತಿರೆ ಲಾವಣ್ಯಂ ಬರಂಟುತ್ತಿರೆ ಮೃದುಗಮನಂ ಚಿತ್ತಮಂ ಕೂಡೆ ಪತ್ತು
ತ್ತಿರೆ ಬಂದರ್ ಚೆನ್ನೆಯರ್ ಚೆನ್ನಳವಡೆ ಭರದಿಂ ಖೇಚರಸ್ತ್ರೀಸಮೂಹಂ ||
ಸ್ಮರರಾಜಾಗರಲಂಬು ಬೇೞೊಳವೆ ಬೇೞೊಂದಿಕ್ಷುಕೋದಂಡಮುಂ
ಟೆ ರತಿಸ್ವಾಮಿಗೆ ಮೀನಕೇತನಮನಂಗಂಗುಂಟೆ ಬೇೞೊಂದು ವಿ
ಸ್ತರದಿಂ ಮಾನಪತಾಕೆ ಕಟ್ಟಿನೆಳವಿಲ್ ಪುಷ್ಪೇಷುಗಳ್ ಭಾವಿಸಲ್
ಭರದಿಂದಾದವೊಲೆಂಬ ಪೊಂಕತದೆಸಕಂ ಮೆಯ್ವೆತ್ತುದಾಸ್ತ್ರೀಯರೊಳ್ (ಗ)

[ಅಂತು ಗಗನಚಕ್ರಕ್ಕೆ ಬೇರೊಂದು ಗಗನಚಕ್ರಂ ಬಿರ್ದುವೆಂದುದೆಂಬಂತಾನುಂ ಮೂಱದೊಂದೆಡೆಯೊಳ್ ಪಲಕಾಲವಿರ್ದಲಸಿ ಕ್ಷೀರಸಾಗರಮುಸಿರ್ವಂತಾಗೆ ಮೇಗೆ ನೆಗೆದುದೆಂಬಂತಾನುಂ ವಾತ್ಸಲ್ಯರತ್ನಾಕರನ ಕೀರ್ತಿಲತೆಯ ದಾಂಗುಡಿಯುಂತಾನುಂ ಕರಮೊಪ್ಪಿ ದಕ್ಷಿಣಮಧುರೆಗೆ ವಿದ್ಯಾಧರಸಾಧನಂ ಬರ್ಪುದುಂ ಪೌರವರರ್ಕಂಡು ಬೆಱಗಾಗಿ ದೇವಲೋಕಂ ಮೇಲೆ ಬಿರ್ದುದೆಂದು ತಲ್ಲಣಿಸಿ ಬೆಬ್ಬಳಿಸಿ ನೋಡುತಿರ್ಪುದುಂ, ಬುದ್ಧದಾಸಿಯ ಪಕ್ಷಮುಳ್ಳರುಂ ಸುಗತಂಗೆ ಭಕ್ತರಪ್ಪರುಮಿಂತೆಂದರ್ ॥ ೧೦೪

ಬುದ್ಧನ ರಥಮಂ ಪೊಱಮಡಿ
ಪುದ್ಧತೆಯಿಂ ದೇವಲೋಕದಿಂ ದೇವರ್ ಸ !
ನ್ನದ್ಧಪರರಾಗಿ ಪಲವುಂ
ಪದ್ಧತಿಯಿಂ ಬಂದರಲ್ಲಿ ಸಂದೆಯಮುಂಟೇ ॥ ೧೦೫

ಎಂದು ರಾಗಿಸುತ್ತಿರ್ಪನ್ನೆಗಂ ಕಣ್ಣೊಳ್ ಮೞಲಂ ಪೊಯ್ದುಟ್ಟಿದಂ ಕೊಂಡರೆಂಬಂತಾಗಿ ಬುದ್ಧದಾಸಿಯ ಪಕ್ಷದವರ ಮೊಗಂಗಳ್ ಕಱಂಕುವರಿದಂತೆ ಕರ್ಗಿಯುಂ, ಕೂರ್ಪಡೆಯದ ಪೈತ್ಯಾಧಿಕನಂತೊಡಲುರಿಯೆಯುಂ, ತಾಯ್ಸತ್ತ ಶಿಶುವಿನಂತೆ ಮಱುಗೆಯುಂ, ಸಕಲಗುಣಗಣನಿಳಯೆಯುಪ್ಪೋಹಿಲೆಮಹಾದೇವಿಯ ರಾಜಭವನಕ್ಕೆವಂದು ವಿದ್ಯಾಧರರ ಗುರ್ವಿಯಿಂ ನಿಲೆ, ಪುರದೊಳಗಣ ಭವ್ಯಜನರುಂ ಪಡೆಯರುಂ ಪ್ರಧಾನರುಂ ಪರಿಚಾರಕರುಂ ಪೆರ್ಗಡೆಗಳುಂ ಲೆಂಕದಂಡರುಂ ಸಾಮಂತರುಂ ಪೌರರುಂ ಲೆಂಕಿಯರುಂ ರಾಜಕುಮಾರರುಂ ಮತ್ತಿನರಸಿಯರುಂ ದಂಡನಾಥೆಯರುಂ ಪೆರ್ಚಿ ಮೇಗುಮೆಯ್ಯಱಿಯದಂತೆ ರಾಗಿಸಿ ತಮ್ಮೊಳಿಂತೆಂದರ್] [1] ॥ ೧೦೬

---

1 ಅಂತೊಪ್ಪಂಬಡೆವ ಗಗನಚಕ್ರಕ್ಕೆ ಬಿರ್ದುವೆಂಬಂತಾನುಂ ಸುಕವಿಜನಮನಃ ಪದ್ಮಿನೀರಾಜಹಂಸನ ಕೀರ್ತಿಲತೆಯ ಕಂಗುಡಿಯೆಂಬಂತಾನುಂ, ದಕ್ಷಿಣಮಧುರೆಗೆ ಬರ್ಪ ವಿದ್ಯಾಧರರ ಬರವ ನಗರಜನಂಗಳ್ ಕಂಡು ಸ್ವರ್ಗಲೋಕಮುಂ ಮೇಲೆಬಿರ್ದಪುದೆಂದು ತಲ್ಲಣಿಸಿ ಬೆಚ್ಚಳಿಸಿ ನೋಡುತ್ತುಮಿರ್ಪುದುಮೋಹಿಲೆಮಹಾದೇವಿಯ ರಾಜಭವನಕ್ಕೆ ಬಂದು ನಿಲ್ವುದುಂ ಪರಜನಮುಂ ಪುರಜನಮುಂ ಪಳೆಯರುಂ ಪೆರ್ಚಿ ಮುಯ್ಪುಂ ನೋಡಿ (ಗ)

ಅರಸಂ ಮರುಳಲ್ಲನೆ ಪಿರಿ
ಯರಸಿಯು ಸಾಹಸಮನಱಿದುಮೞಿಯದವೋಲ್ ಮ ।
ಚ್ಚರಮಂ ಮಾಡಿದನೀಶ್ವರ
ವರದೊಳ್ ಬೆಱಗಗ್ಗಳಿಕ್ಕೆಗಳ್ ನಡೆದವುವೇ ॥ ೨೦೭

ಜಿನಪೂಜೆಯಲ್ಲದೀಮ
ತ್ತಿನ ಪೂಜೆಗಳನ್ನೆವರೆಗಮಾಪುರದೊಳ್ ಪೇ ।
ೞನಿತುಂ ಕಾಲಂ ನಡೆದುವೆ
ಜಿನನಾಥನುಮೞಿವನಱಿವೊಡಿಂತಿಮ ಪೊಸದೇ ॥ ೨೦೮

ಭಾವಿಸುವೆಂದೋಹಿಲೆಮಾ
ದೇವಿಯೆ ಪಾಂಡ್ಯಂಗೆ ಪಟ್ಟಮಾದೇವಿಯಿದಂ ।
ಭಾವಿಸದೆ ಬುದ್ಧದಾಸಿಗೆ
ದೇವಿತನಂಗೊಟ್ಟನಿಂತುಕಷ್ಟನುಮೊಳವೇ ॥ ೨೦೯

ಕೆರಪಂ ತಲೆಗೇಱಿಸಿಕೊ
ಳ್ವರೆ ಕೂರ್ತೊಡೆ ಬುದ್ಧದಾಸಿಯಂ ಕೆಮ್ಮನೆ ನ ।
ಮ್ಮರಸಂ ತಲೆಗೇಱಿಸಿ ಪಿರಿ
ಯರಸಿಯುರಂ ಬಗೆದನಿಲ್ಲ ಭೂಪರೆ ಕಷ್ಟರ್ ॥ ೨೧೦

ಅರಸಿಯ ಕೈಕೊಂಡ ಜಿನೇ
ಶ್ವರಪೂಜೆ ಮಹಾವಿಭೂತಿಯಿಂ ನಡೆವಂತಾ ।
ಯ್ತರಡಿಲ್ಲದೆಮಗಮದಱಿಂ
ಪಿರಿದಪ್ಪಪಮಾನವೃತ್ತಿ ಪಿಂಗಿದುದೀಗಳ್ ॥ ೨೧೧

ಅರಸಿಯ ಸಮ್ಯಕ್ತ್ವಕ್ಕಂ
ಸರಸಿರುಹಾನನೆಯ ಜೈನಭಕ್ತಿಗಮಿದು ತಾಂ ।
ಪಿರಿದಾಯ್ತು ಫಣೀಶ್ವರನುಂ
ಸುರೇಶನುಂ ಬರ್ಣಿಸಱಿದರಪ್ಪೊಡೆ ಬೇಗಂ ॥ ೨೧೨

[ಎಂದು ತಂತಮ್ಮೊಳ್ ನುಡಿಯುತ್ತುಂ ರಾಗಿಸಿ ಮಂಗಳತೂರ್ಯ ಮೆಸೆಯೆ ಪಲವರ್ಣನೆವೆರಸು ಸಕಲಗುಣಗಣನಿಳಯೆಯಪ್ಪೋಹಿಲೆ ಮಹಾದೇವಿಯು ಮನೆಗೆವಂದು ಸಾಷ್ಟಾಂಗವೆಱಗಿ ಪೊಡೆವಟ್ಟು ಸಮುದ್ರಂ ಘೂರ್ಣಿಸುವಂತೆ ಪಲವುಂತೆಱದಿಂ ಪೊಗೞ್ವುದುಂ][1] ॥ ೧೧೩

ಒಸೆದುಂ ಸ್ತುತಿಯಿಪ[2] ಪೌರರ
ಮಿಸುಗುವ ನಾಲಗೆಗಳೆಂಬ ಕೆಂದಳಿರಿಂದಂ ।
ಶಶಿಮುಖಿ ಪೊಲ್ತಿರ್ದಳ್ ಭಾ
ವಿಸುವೊಡೆ ಕರಮೊಪ್ಪಿ ತೋರ್ಪಶೋಕೆಯ ಮರನಂ ॥ ೧೧೪

ಅಂತು ಜನಮೆಲ್ಲಂ ಪಗಲ ತಾವರೆಯಂತೆ ಬಿಚ್ಚತರಾಗಿ ಕಾರ್ಗಾಲದ ನವಿಲಂತಾನಂದಿತ ಚಿತ್ತರಾಗಿ ಗೆಲ್ಲಂಕದಂತೆ ಮೆಯ್ವೆರ್ಚಿ ಮದುವೆಯ ಮನೆಯಂತೊಸಗೆಗೆ ಮರುಳ್ಗೊಂಡು ಪಟ್ಟಂಗಟ್ಟಿದರಸನಂತೆ ಮಹಾವಿಭೂತಿವೆರಸು ಜೀವಿತಂಬಡೆದ ಬಂಟನಂತೆ ರಾಗಿಸಿ, ಪಸಾಯತಂಬಡೆದ ದಾಳಿಕಾಱನಂತೆ ನಲಿದು, ಕೆಟ್ಟ ಸಾಲಂ ಬಂದ ಪರದನಂತೆ ಮುಯ್ವಂ ನೋಡಿ, [ಪಿರಿದುಂ] ಲಾಭಮಾದ ಪೊಸಪರದನಂತೆ ಬಿಂಕಂ ಬೆರಸು, ಪುಟ್ಟಿಗೆಯ ಬಡಸೂಳೆಯಂತೆ ಪೊಂಗಿ, ಮನೆಮನೆದಪ್ಪದೆ ಗುಡಿಗಟ್ಟಿ, ಬೀದಿಬೀದಿತಪ್ಪದೆ [ಚಂದನದೆಳದಳಿರ್ಗಳಿಂ] ತೋರಣಂಗಟ್ಟಿ [ಬಸದಿಗಳೆಲ್ಲಮಲಂಕಾರಮಾಗೆ ದುಕೂಲದ ಸೂಸಕಂಗಳಿಂ] ಮುತ್ತಿನ ರಂಗವಲಿಗಳಿಂ ಚಿನ್ನದ ಕಂಭಗಟ್ಟನಿಂ[3] ಶೃಂಗಾರಂಮಾಡುವುದುಂ; ಮಱುದಿವಸಂ ॥ ೧೧೫

ಅಲ್ಲಲ್ಲಿಗೊಸಗೆವೆಱಿ ಮ
ತ್ತಲ್ಲಲ್ಲಿಗೆ ಶಂಖಪಟಹಭೇರೀರವಮು ।

---

1 ಎಂದು ನುಡಿಯುತ್ತುಂ ಪಲವರ್ಣನೆಗಳ್ವೆರಸು ಬಾದೋಹಿಲೆಮಹಾದೇವಿಯುಂ ಕಂಡು ಪೊಡವಟ್ಟು (ಗ)   2 ದೆಸೆದೆಸೆಯ ಪೊಗಳ್ವ (ಕ. ಬ.)

3 ರತ್ನದ ಮಂದವಮಾಲೆಗಳಿಂ ಬಳ್ಳಿಗಾವಣಂಗಳಿಂ ನಕ್ಷತ್ರಮಾಲೆಗಳಿಂ ಮಣಿ ವಿತಾನಂಗಳಿಂ ಚಿತ್ರಪಟಗಳಿಂ ಪೊಂಗಳಶಂಗಳಿಂ ಫಳಾವಳಿಗಳಿಂ ಬಸದಿವಸದಿ ತಪ್ಪದೆ (ಗ)

ತ್ತಲ್ಲಲ್ಲಿಗೆ ಗಾಂಧರ್ವರ
ಸಲ್ಲಲಿತದನಿಗಳೆಸೆಯೆ ಪುರದೊಳಗೆಲ್ಲಂ ॥ ೨೧೬

ಎಲ್ಲೆಲ್ಲಿ ನೋೞ್ಪೊಡಂ ಮ
ತ್ತಲ್ಲಲ್ಲಿಗೆ ಕರಡೆ ಡಕ್ಕೆ ಪಱಿಡಕ್ಕೆಗಳಂ ।
ತಲ್ಲಲ್ಲಿಗೆ ಕಹಳೆಯ ದನಿ
ಯೆಲ್ಲೆಡೆಯೊಳಮೊಪ್ಪೆ ಪುರದ ನಾಲ್ಕುಂದೆಸೆಯೊಳ್ [1] ॥ ೨೧೭

ಅಲ್ಲಲ್ಲಿಗೆ ನೃಪನಂದನ
ರಲ್ಲಲ್ಲಿಗೆ ಪಣ್ಣಿ ಬಂದ ಮದದಾನೆಗಳಂ ।
ತಲ್ಲಲ್ಲಿಗೆ ಹಯಸಂಕುಳ
ಮಲ್ಲಲ್ಲಿಗೆ ಬರ್ಪ ವಾರವನಿತಾನಿಕರಂ ॥ ೨೧೮

ಅಲ್ಲಲ್ಲಿಗೆ ಕೈದೀವಿಗೆ
ಯಲ್ಲಲ್ಲಿಗೆ ನೆರೆದು ನೋೞ್ಪ ನೋಟಕಜನ ಮ ।
ತ್ತಲ್ಲಲ್ಲಿಗೆ ರಥಸಂಕುಳ
ಮಲ್ಲಲ್ಲಿಗೆ ನೆರೆದು ಬರ್ಪ ಪಲವರ್ತನೆಗಳ್ ॥ ೨೧೯

ಅಂತು ಪುರದೊಳಲ್ಲೆಡೆಯೊಳಮಲ್ಲಲ್ಲಿಗೆ ಪುಣ್ಯಾಂಗನೆಯರುಂ ಮಂಗಳವಱಿಗಳುಂ ಮಹಾಧ್ವಜಂಗಳುಂ ಮಣಿವಿತಾನಂಗಳುಂ ಜಯಜಯಧ್ವನಿಗಳುಮೆಸೆಯೆ [2] ॥ ೨೨೦

ಪದಿನಾಱು ನೆಲೆಯ ಮಣಿಮಾ
ಡದಿನೊಪ್ಪುವ ಪೊನ್ನ ರಥದಮೇಲೆಸೆದಿರೆ ರಾ ।
ಗದಿನಿರಿಸಿ ಖೇಚರರ್ ಸಂ
ಪದದಿಂದಂ ನಲಿದು ಜೈನಚೈತ್ಯಾವಳಿಯಂ ॥ ೨೨೧

1 ತಲ್ಲಲ್ಲಿಗೆ ರಥಸಂಕುಳ । ಮಲ್ಲಲ್ಲಿಗೆ ನೆರೆದು ಬರ್ಪ ಪಲವರ್ತನೆಗಳ್ (ಗ)

2 ಧ್ವಜಂಗಳುಂ ಪಂಚಮಹಾಶಬ್ದಮುಂ ಜನಸಂದಣಿಯುಂ ನೆರವಿಯು ಕೋಲಾಹಳಮುಂ ಜಯಜಯನಿನಾದಮೆಸೆಯೆ (ಗ)

ಆರಥದ ನಾಲ್ಕುದೆಸೆಯೊಳ್
ನೇರಿದವಾಗಿರಿಸಿ ರತ್ನಮಯಮೆನಿಸುವ ವಿ।
ಸ್ತಾರದ ಪೊನ್ನ ರಥಂಗಳ
ನಾರ್ಯದೋರಂತೆ ಮೆಚ್ಚಿನಚ್ಚಿ ಖಗೇಶರ್ ॥ ೨೨೨

ಸುರಭೂಧರಮಂ ಬೆಳ್ಳಿಯ
ಗಿರಿಗಳ್ ಬಳಸಿರ್ದುವೆನಿಸಿ ಚೆಂಬೊನ್ನ ರಥೋ।
ತ್ಕರಮಂ ಸುತ್ತಿರ್ದುವು
ಕರವೊಪ್ಪಿರೆ ಖಚರರಾಜರೆಸೆವ ವಿಮಾನಂ ॥ ೨೨೩

ಪರಿವೇಷಂ ಸುತ್ತಿರ್ದುದು
ಖರಕಿರಣನನೆನಿಸಿ ಮೊದಲ ಕನಕದ ರಥಮಂ।
ಕರವೊಪ್ಪಿರೆ ಸುತ್ತಿರ್ದರ್
ನೆರೆದು ಮಹಾವಿಭವದಿಂ ವಿಯಚ್ಚರಸತಿಯರ್ ॥ ೨೨೪

ಕೆಂದಾವರೆ ತಾನುರ್ವರೆ
ಯಿಂದಂ ಗಗನಕ್ಕೆ ನೆಗೆದುದೆನಿಸಿ ಮಹೀಶ।
ಸ್ಯಂದನದ ಮೇಲೆ ನಿಂದಿ
ರ್ದಂದು ಕರಂಗಳನೆ ಮುಗಿದು ಪೊಡೆಮಡುತಿರ್ದರ್ [1] ॥ ೨೨೫

---

1 ಸರಸಿರುಹಾವಳಿಗಳ್ ಭಾಸ್ಕರನಂ ನೋಡಲ್ಕೆವರಸು ಪೋದಪವೆಂಬಂ।
ತಿರೆ ಗಗನದೊಳ್ ಖಗೇಶರ್ ಪರಮಜಿನೇಶ್ವರಗೆ ಮುಗಿದ ಕೈವೆರಸಿರ್ದರ್ ॥
ಇಳೆಯನಿತನಿತಱ ತಾವರೆಗೊಳನೆಲ್ಲಂ ನೆರೆದು ಬಂದವೆಂಬಂತಿರೆ ಭೂ।
ತಳನಾಥನರಸಿಯರ್ನಿರ್ಮಲಾಂಗಿಯರ್ ಪರಮ ಜಿನನ ಪದದೊಳಗೆಱಗಲ್ ॥

ನೆರೆದಂಬರಚರನಾಯಕರರಸಿಯರಚ್ಚರ್ತು ನೋಡುತಿರೆ ತಧ್ವನಿತೋ।
ತ್ಕರದಲರ್ಗಳ್ನೀರಾಂಬುರುಹಂ ಸುತ್ತಿರ್ದವೊಲಾಯ್ತು ಪರಮನ ರಥಮಂ ॥
ಕ್ಷಿತಿಪರ ಖಚರಾಧೀಶರ ಸತಿಯರ್ ಸೂಸುತ್ತುಮಿರ್ಪ ನಿರ್ಮಲಕಲಮಾ।
ಕ್ಷತೆ ಪೋಲ್ತವು ಕಾವುಂ ಜಿನಪತಿಗಂಜ ನೆಲಕ್ಕೆ ಬಿಸುಡುವಲರಂಬುಗಳಂ ॥ (ಗ)

ಮೆತ್ತಂ ಸುತ್ತಿ ಮುತ್ತಿರ್ದ ವಿದ್ಯಾಧರವಿಮಾನದಿಂದವಱಿಂ ಪೊಱಗೆ ನಂದನವನಕ್ಕೆ ಕವಿದು ಮೊಱೆವ ಮುಱಿಮುಂಬಿಗಳನಿಸುವ ಗಾಂಧರ್ವರಿಂದಂ ಅವರಿಂ ಪೊಱಗೆ ಪೊನ್ನ ಬೆಳ್ಳಿಯ ಪಚ್ಚೆಯ ನೀಲದ ರಥಂಗಳಿಂದಂ ಅವಱಿಂ ಪೊಱಗೆ ಗಿರಿದುರ್ಗದಂತೆ ಸುತ್ತಿ ಮುತ್ತಿರ್ದ ವಾರಣಘಟೆಗಳಿಂದಂ ಅವಱಿಂ ಪೊಱಗೆ ಕಾಮದೇವನ ಕಯ್ಯ ಸೆಂಡಿನಂತೆ ಪರಿವ ತುರಗಂಗಳಿಂದಂ ಅವಱಿಂ ಪೊಱಗೆ ಸುಕುಮಾರರೆನಿಸುವ ರಾಜಕುಮಾರರಿಂದಂ ಅವರಿಂ ಪೊಱಗೆ ದೆವಕನ್ನೆಯರೆನಿಪ ಪೆಂಡವಾಸದೊಳ್ವೆಂಡಿರಿಂದಂ ಅವರಿಂ ಪೊಱಗೆ ಕ್ಷಿತಿಜಲಧಿಸುತ್ತಿತ್ತನಿಸುವ ಮೇಘಡಂಬರದಿಂದಂ ಅವಱಿಂ ಪೊಱಗೆ ಮಿಂಚಿನ ಬಳ್ಳಿಯನನುಕರಿಸುವ ಕಡಿತಲೆಗಾಱರಿಂದಂ ಅವರಿಂ ಪೊಱಗೆ ಪೆರ್ಗಂಡಿನ ತಂಡಂಗಳಿಂದಂ ಅವಱಿಂ ಪೊಱಗೆ ಮಹಾಧ್ವಜಂಗಳಿಂದಂ ಅವಱಿಂ ಪೊಱಗೆ ಮಣಿವಿತಾನಂಗಳಿಂದಂ ಅವಱಿಂ ಪೊಱಗೆ ನಂದನವನದಂತೆ ತುಱುಗಿದ ಪೀಲಿಯ ತಳಗಳಿಂದಂ ಅವಱಿಂ ಪೊಱಗೆ ವಜ್ರವೇದಿಕೆಯಂತಿರ್ದ ಪೊನ್ನ ಪರಿಗೆಯಿಂದಂ ವನದುರ್ಗಮಂ ಪೋಲ್ವ ಬಿಲ್ವಡೆಯಿಂದಂ ಘರವಟ್ಟಿಗೆಯ ಕಟ್ಟಿಗೆಕಾಱರಿಂದಂ ಅವರಿಂ ಪೊಱಗೆ[1] ॥ ೨೧೬

ಮಿಸುಕದೆ ಭಾಸ್ಕರದೇವನ
ಬೆಸದಿಂದಂ ರೌದ್ರರೂಪನತ್ಯಂತಂ ಪೆ ।
ರ್ಚಿಸಿ ಖೇಚರಾಧಿನಾಥರ್
ದೆಸೆಗಳನವ್ವಳಿಸಿ ನಿಂದರಡಿರದೆ ನೆಲೆಯಿಂ ॥ ೨೧೭

ಜಿನಪೂಜೆಗೆ ಬಾಧೆಗಳಂ
ಮುನಿಪವರಂಜಲಿಂದೆ ಮಾಡದಂತಾಗೆ ಮಹಾ ।
ತನುವಿಂ ವಿದ್ಯಾದೇವಿಗ
ಳನುನಯದಿಂ ಸುತ್ತಿ ಮುತ್ತಿ ನಿಂದರ್ ಚಲದಿಂ ॥ ೨೧೮

ಬೇಗಂ ವ್ಯೋಮಕ್ಕಂ ಭೂ
ಭಾಗಕ್ಕಂ ಧಾತ್ರನೊಸೆದು ಕೇಳ್ ಕೂಡಿಟ್ಟಂ ।

---

1 ಘರವಟ್ಟಿಗೆಯ ಬಲುನಾಯಕರಿಂದವೆಡೆಗೆಡೆಗೆ ಕಿಕ್ಕಿಱಿಗಱಿದಿರ್ದ ಕೈದೀವಿಗೆಗಳಿಂದಂ (ಗ)

ತಾಗೆ ಬಳಸಿರ್ದರೊಡನಿಂ
ಬಾಗಿರೆ ಸನ್ಮಂತ್ರದೇವಿಯರ್ ನಿರ್ಭಯದಿಂ ॥ ೬೯

ಅಂತು [ಜಂಬೂದ್ವೀಪದ ಖಚರಮಹೀವಲ್ಲಭಂ] [1] ಭವ್ಯರ್ಗೆ ಜಿನಮತದೊಳ್ಪಿಯಂ ಬರೆದು ತೋಱಿದಪನೆನಿಸಿ ಪಲವುಕೋಟಿಗಳಿಂದೆ ರಮಣೀಯಮಾಗೆ ಗಗನತಳಮೆಲ್ಲಂ ವಿಮಾನಮಯಮಾಗಿಯುಂ ಧರಾತಳಮೆಲ್ಲಂ ರಥಮಯಮಾಗಿಯುಂ ಅಂತರಿಕ್ಷಮೆಲ್ಲಂ ಧ್ವಜಮಯಮಾಗಿಯುಂ ದಿಗ್ಭಿತ್ತಿಗಳೆಲ್ಲಂ ಜಯಜಯನಿನಾದಮಯಮಾಗಿಯುಂ, ವಿದ್ಯಾಧರಕುಮಾರರಿಂ ದೇವಲೋಕಮಂ ರಾಜಕುಮಾರರಿಂ ಖೇಚರಲೋಕಮಂ ವಿದ್ಯಾದೇವತೆಗಳಿಂ ವ್ಯಂತರಲೋಕಮಂ ಮಕುಟಬದ್ಧರಿಂ ಜ್ಯೋತಿರ್ಲೋಕಮಂ ಚಾತುರ್ವರ್ಣ್ಯಸಂಘದಿಂ ಸಮವಸರಣಮಂ ಪೋಲ್ತೆಸೆಯೆ ಭಾಸ್ಕರದೇವಂ [ಜಿನಮಹಾಪೂಜೆಯನೆಂಟುದಿವಸಂಬರಮಿಮಾರ್ಗದಿಂ ॥ ೭೦

ಒಸೆದು ಖಚರೇಶ್ವರಂ ಸಂ
ತಸದಿಂದಂ ಸೋಮದತ್ತಮುನಿಯುಮನಘನಂ ।
ಘನಮಹಿಮನುಂ ವಾತ್ಸ
ಲ್ಯಸಮುದ್ರಂ ವಜ್ರಮುನಿಯುಮಂ ಮುದದಿಂದಂ ॥ ೭೧

ಬಂದಿಸೆ ನಿರ್ಮ್ಮಡಿಯ ಪ್ರಸಾದದಿಂ ಜಿನಪೂಜೆಯೊಳಾದ ಮಹಾಪುಣ್ಯಂ ದೊರೆಕೊಂಡುದೆಂದು ಸಕಲಗುಣಗಣನಿಳಯೆಯಪ್ಪ ಪೋಹಿಲೆ ಮಹಾದೇವಿಯುಂ ಪೊಗಳ್ವುದುಂ] [2] ॥ ೭೨

---

1 ಮಧ್ಯಮಲೋಕದ (ಗ)

2 ಬುದ್ಧದಾಸಿಯ ಪಕ್ಷದವರ್ಗೆ ಕಣ್ಣೊಳ್ ಪಾಳಲಂ ಪೊಯ್ದುಟ್ಟಿದಂ ಕೊಂಡರೆಂಬಂತೆಯಾಗೆ ಮೊಗಮೆಲ್ಲಂ ಶಂಕುವರಿದಂತೆ ಕಗ್ಗಿಯುಂ ಕುಸಿಯ ತೆಗೆದ ತಲೆಯಂತೆ ಕುಂದೆಯುಂ ಕೊಳುವಡೆಯದ ಪೈತ್ಯವ್ಯಾಧಿಕನಂತೆ ಉರಿಯುಯುಂ ತಾಯಿ ಸತ್ತ ಮಗುವಿನಂತೆ ಮಬ್ಬಾಗಿಯುಂ ಜಿನಪೂಜೆಯನೆಂಟುದಿವಸಂಬರಂ ಪೋಹಿಲೆಮಹಾದೇವಿಯುಂ ತಾನುಂ ಮಾಡಿಸಿ ಸ್ವಸ್ನೇಹದಿಂ ಪೇಳ್ದೊಜೆಯೊಳ್ ಜಿನಪೂಜೆಯುಂ ಮಾಡಿ ಸೋಮದತ್ತಭಟ್ಟಾರಕರುಮಂ ಭಾವಯುತದಿಗಂಬರದಾಸನುಂ ಮಣಿಮಾಲೆಮಹಾದೇವಿಯುಂ ತಾನುಂ ವಂದಿಸಿ ಸ್ವಸ್ನೇಹದಿಂದೆ ಪೋಹಿಲೆಮಹಾದೇವಿಯುಂ ಪೊಗಳ್ವುದುಂ (ಗ)

ನೀರೇಜಾನನೆ ವಜ್ರಕು
ಮಾರಮುನೀಶ್ವರನ ಸಾರೆ ಖಚರೇಶ್ವರನಂ ।
ಸಾರಮಿದೆನಿಸುವ ಸೂರ್ಯಾ
ಕಾರಜಿನಸ್ತೂಪೆಯಂ ಸವಿಸ್ತರದಿಂದಂ ॥ ೨೩೩

ಬೇಡುವುದುಮೋಹಿಳೆಮಹಾದೇವಿಯು ಮಾತನರಡುಗೇಳದೆ ವಜ್ರಮಯುಮಪ್ಪ ಜಿನಪ್ರತಿಮಾವಳಿಗಳಿಂ ತುಱುಗಿದ ಸ್ತೂಪೆಯಂ ದಕ್ಷಿಣಮಧುರಾಪುರದೊಳಿರಿಸಿ [1] ಮಾನಿಸರ್ ಪುಗಬಾರದಂತದಱ ಸುತ್ತಲುಮೊಂದು ಕೋಶಾಂತರಂ ವಿಗುರ್ವಣೆಯಂ ಮಾಡಿ [2] ಭಾಸ್ಕರದೇವನಮರಾವತೀಪುರಕ್ಕೆ ಮಗುಳ್ದು ಪೋದನಿತ್ತಲೋಹಿಳೆಮಹಾದೇವಿಯುಂ ಸೋಮದತ್ತಭಟ್ಟಾರಕರುಮಂ ವಾತ್ಸಲ್ಯರತ್ನಾಕನುಮಂ ವಂದಿಸಿ ಪೂಣ್ಕೆಯುಮಂ ನೆಱಪಿ ತನ್ನ ಮನೆಗೆ ಪೋದಳಿನ್ನುಮಾಭಾಸ್ಕರದೇವನಿರಿಸಿ ಪೋದ ಸ್ತೂಪೆಯಂ ದೇವರ್ [3] ಅಷ್ಟಮಿ ಚತುರ್ದಶಿಗಳೊಳ್] ದೇವರುಂ ದುಭಿಮೆಂಸು ಬಂದು ಪೂಜಿಸುವರದುಕಾರಣದಿಂ ॥ ೨೩೪

ನುತವಾತ್ಸಲ್ಯಮ ಭವ್ಯ
ಪ್ರತತಿಗೆ ಗುಣರತ್ನನಿಚಯುಮಂ ಮಡಗಿರಲು ।
ನ್ನತಮಪ್ಪ ಮಂದಿರಂ ಶಾ
ಶ್ವತಸುಖಮುಂ ಕುಡುವ ಕಲ್ಪವೃಕ್ಷಂ ಧರೆಯೊಳ್ [4] ॥ ೨೩೫

ಎಂದು [ಗಣಧರಸ್ವಾಮಿಗಳ್] ವಾತ್ಸಲ್ಯದ ಕಥೆಯಂ [ಪೇಳೆ] ಕೇಳ್ದು ॥ ೨೩೬

ಗುಣದುಗ್ಧಾಂಭೋಧಿ ಪಾಪಾಚಲರಿಪು ಮದನೇಭೇಂದ್ರಕಂಠೀರವಂ ದುರ್ಗುಣದೂರಂ ವಾಗ್ವಧೂವಲ್ಲಭನುದಿತಯಶಂ ನಿರ್ಮಳಂ ಮರ್ತ್ಯಲೋಕಾ

1 ದಕ್ಷಿಣಮಧುರಾಪುರದ ತೆಂಕಣದೆಸಯು ಬೆಟ್ಟದೊಳು ನಿಲಿಸ (ಗ)
2 ಅಗಿಲಂ ಮಾಡಿ (ಗ) 3 ವಿದ್ಯಾಧರರ್ (ಗ)
3 ದೇವರಾಜಮಹೀಜಂ (ಗ)

ಗ್ರಣಿ ತನ್ನೊಳ್ ನಾಡೆಯುಂ ಸಂತಸದಿನೊಸೆದನೋರಂತೆ ತ್ರೈವಿದ್ಯಚೂಡಾ
ಮಣಿಪಾದಾಂಭೋಜಭೃಂಗಂ[1] ಸುಕವಿಜನಮನಃಪದ್ಮಿನೀರಾಜಹಂಸಂ ||

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ದರ್ಶನಸಪ್ತಮಾಂಗವ್ಯಾವರ್ಣನಂ
ಅಷ್ಟಮಾಶ್ವಾಸಂ.

---

1 ಉದಿತಯಶೋವಾರ್ಧಿಶಶ್ಚಂಗ್ರನುದ್ಯ । ದ್ಗುಣವಿತ್ತ್ರೈವಿದ್ಯಚಕ್ರೇಶ್ವರಮಲಪದಾಂಭೋಜಭೃಂಗಂವಿಶಿಷ್ಟ । ಗ್ರಣಿ ಪೆರ್ಚಂ ತಾಳ್ದಿ ನಿಂದಂ ಸುಕವಿಜನಮನಃಪದ್ಮಿನೀರಾಜಹಂಸಂ (ಗ)

ನವಮಾಶ್ವಾಸಂ.

ಶ್ರೀವಾತ್ಸಲ್ಯಂ ಮುಕ್ತಿ
ಶ್ರೀವನಿತೆಯನೊಲಿಸುವೌಷಧಂ ನಿಶ್ಚಯಮೆಂ |
ದಾವೆಗಮಾವಿಭು ಮನದೊಳ್
ಭಾವಿಸಿದಂ ಸುಕವಿನಿಕರಪಿಕಮಾಕಂದಂ || ೧

[ಮಗಧಾವನೀಶ್ವರಂ ಮ
ತ್ತಗಣಿತಗುಣಗಣರನಮಳರಂ ಗೌತಮರಂ |
ಜಗತೀಪೂಜಿತಪದರಂ
ನಗೇಂದ್ರಧೈರ್ಯರನನಂಗಮದಸಂಹರರಂ || ೨

ಅಮೃತಶ್ರೀಯ ಕ್ರೀಡಾವನಮೆನಿಸುವ ಪ್ರಭಾವನೆಯ ಕಥೆಯ ನೆನಗೆ ಬೆಸಸುವುದೆಂದು ನಮ್ರಮಸ್ತಕನಾಗಿ ಕೈಗಳಂ ಮುಗಿದು ಬೆಸಗೊಳ್ವುದುಂ ಗಣಧರಸ್ವಾಮಿಗಳಿಂತೆಂದು ಪೇಳ್ದರ್:—] [1] ಮೂಗಿಲ್ಲದ ಮೂಕೊಱೆಯನೆಂತು ಕಣ್ಣಿಲ್ಲದ ಕುರುಡನೆಂತು [ಕಿವಿ ಕೆಟ್ಟ ಕಿವುಡನೆಂತು] ಕೈಯಿಲ್ಲದ ಮೋಟನೆಂತು ಕಾಲಿಲ್ಲದ ಪೆಳವನೆಂತು ಶುಭಕಾರ್ಯಕ್ಕಂ ರಾಜಸಭೆಗಂ ಒಸಗೆಗಂ ಉತ್ಸಾಹಕ್ಕಂ ಒಳ್ಪಿಂಗಂ ಸಲ್ಲನಂತೆ ದರ್ಶನದೊಳಂ ದರ್ಶನದೆಂಟಂಗದೊಳಂ ಹೀನನಾಗಿ ಚಕ್ರವರ್ತಿಪದವಿಯುಮಂ ದೇವೇಂದ್ರಪದವಿಯುಮಂ ಮಹರ್ಧಿಕಪದವಿಯುಮಂ [2] ಪಡೆವ ಪಡೆಪಂ ಕಿಡಿಸದೆ, ನವನಿಧಿಯುಳ್ಳನಂತೆ ನವಗ್ರಹಬಲಮಂ ಪೆತ್ತನಂತೆ ದರ್ಶನಂ ಮೊದಲ್ಗೊಂಡೊಂಬತ್ತು ಗುಣಂಗಳೊಳ್ ನೆಱೆದು ಶುಭದ ತುತ್ತತುದಿಯನೆಯ್ದಿ ಕಳಸವಿಟ್ಟ ಬೆಸದಂತೆ ಸಂಪೂರ್ಣಾಂಗಮುಳ್ಳನಂತೆ ತೀವಿದ ಕೆಱೆಯಂತೆ ಪಗವಕ್ಕೆ [3] ಬಂದ

---

[1] ಅಂತು ವಾತ್ಸಲ್ಯದ ಕಥೆಯನಱಿದು ಮುಂದಣ ಪ್ರಭಾವನೆಯ ಕಥೆಯ ಬೆಸಗೊಳ್ವುದುಮಿಂತೆಂದರ್. ತಲೆಯಿಲ್ಲದೊಡಲಂತೆ (ಗ)

[2] ಮೋಕ್ಷಪದವಿಯುಮಂ (ಗ)   [3] ಹಗಹಕ್ಕೆ (ಗ)

ಧಾನ್ಯದಂತೆ ಗಂಡುಗೂಸುವೆತ್ತ ಸಜ್ಜನದಂತೆ ಪೊಂಬಡೆದ[1] ಸೂಳೆಯಂತೆ ಸೇವೆಗಾದುವೊಕ್ಕ ಬಂದಿಗಾಱನಂತೆ ಒಲ್ಲಿದಂ ಕೈಕೊಂಡ ಸತಿಯಂತೆ ಲಂಚವೊಕ್ಕಿರ್ದ ಪ್ರಧಾನನಂತೆ ಪಗೆ ನಿರ್ಮೂಲವಾದ ಪಂದೆಯಂತೆ ಚಿತ್ತದೊಳಾನಂದಂಬೆಱಸಿರ್ಪುದು ॥ ೩

ಮುನಿಯೆನಲುವೇಡ ಶ್ರಾವಕ
ನೆನವೇಡ ಮನೋಜ್ಞೆಯಂ ಪ್ರಭಾವನೆಯಂ ನೆ ।
ಟ್ಟನೆ ಮಾಡವೇೞ್ಪುದಲ್ಲದೊ
ಡನಂತಸುಖನಿಳಯನಾಗಲಾಱಂ ಕಡೆಯೊಳ್ ॥ ೪

ಇನ್ನಾ ಪ್ರಭಾವನೆಯ ಮಹಿಮೆಯೆಂತಪ್ಪುದೆಂದೊಡೆ ॥ ೫

[ವಿದಿತಂ ಕುರುಜಾಂಗಣಮೆಂ
ಬುದು ವಿಷಯಂ ಭೂತಳಾಗ್ರದೊಳ್ ಕಡುಚೆಲ್ವಿಂ ।
ದೊದವಿರ್ದುದು ತದ್ಧರಣೀ
ಸುದತಿಯ ಮುಖಮುಕುರಮೆನಿಪುದತಿಶಯದಿಂದಂ ॥ ೬

ಹಸ್ತಿನಾಪುರಮೆಂಬ ಪೊೞಲದನಾಳ್ವಂ] [2] ಮಹಾಪದ್ಮನೆಂಬ ಮಾಂಡಳಿಕನಾತನರಸಿ ಲಕ್ಷ್ಮೀಮತಿಮಹಾದೇವಿಯೆಂಬಳಾಯಿರ್ವರ್ಗಂ [ಪ್ರಿಯತನೂಜರ್] ಪದ್ಮನುಂ ವಿಷ್ಣುಕುಮಾರನುಮೆಂಬ [ವರ್ ॥ ೭

ಸ್ಮರನಿಭರ್ ದಿವಿಜೇಂದ್ರಸನ್ನಿಭಭೋಗಿಗಳ್ ಜಿನಪಾದಪಂ
ಕೇರುಹಭೃಂಗರುದಾತ್ತಕೀರ್ತಿಗಳುಗ್ರವೈರಿಬಲೇಭಕುಂ
ಜರವಿರೋಧಿಗಳುನ್ನತರ್ ದೃಢಚಿತ್ತರದ್ರಿನಿಭಕ್ಷಮರ್
ಪರಿಣತರ್ ವರಶಾಸ್ತ್ರವಿದ್ಯೆಗಳೊಳ್ ನೃಪಾಲನಸುಕ್ಷಮರ್ ॥ ೮

---

1 ಪೋೞಿಗೆ ಬಂದ (ಕ. ಖ.)

2 ಕುರುಜಾಂಗಣವಿಷಯದೊಳು ಹಸ್ತಿನಾಪುರಮೆಂಬುದು ಪುರಮದನಾಳ್ವಂ (ಗ)

ಎನಿಸಿ ಪೆಂಪುವೆತ್ತ ಕುಮಾರರ ಗಾಡಿಯುಮಂ ನೋಡುತ್ತುಂ ಪರಮಂಡಳಿಕರುಮಂ ಪ್ರತಾಪಪರರುಮನಲ್ಲಾಡಿಸುತ್ತುಂ ಚರಿತ ಪುರಾಣಂಗಳುಮಂ ರಸಗೀತಮುಮನಾಲಿಸುತ್ತುಂ ಪರನೃಪರುಮಂ ಕುದೃಷ್ಟಿಗಳುಮಂ ಸೋಲಿಸುತ್ತುಂ ಸದ್ಧರ್ಮಮುಮಂ ಭವ್ಯರುಮಂ ಪರಿಪಾಲಿಸುತ್ತುಂ ॥ ೯

ಸಕಲಗುಣೋಪೇತಂ ಭಾ
ವಕತಿಲಕಂ ಜಿನಮತಾಬ್ಧಿಚಂದ್ರಂ ಧಾತ್ರೀ ।
ಶಕದಂಬನಮ್ರಚರಣಂ
ಪ್ರಕಟಯಶಂ ಭೂರಿಭೂತಳಪ್ರಸ್ತುತ್ಯಂ ॥ ೧೦

ಮಹಾಪದ್ಮಮಹಾರಾಜಂ ರಾಜ್ಯಲಕ್ಷ್ಮಿಯ ಮನೋಹರನಾಗಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ಪನಂ, ಶ್ರುತಸಾಗರ ರೆಂಬಾಚಾರ್ಯರಯ್ನೂರ್ವರ್ಮುನಿಗಳ್ವೆರಸು ಕ್ರಮಕ್ರಮದಿಂ ವಿಹಾ ರಿಸುತ್ತುಂ ಹಸ್ತಿನಾಪುರಕ್ಕೆವಂದು ಬಹಿರುದ್ಯಾನವನದೊಳಗಿರ್ಪುದುಂ ॥

ಮುನಿಮುಖ್ಯರ ಬರವಂ ಭೋಂ
ಕನೆ ಕಂಡು ಮಹಾನುರಾಗದಿಂದಂ ರಾಜ್ಯಂ ।
ತನಗೆ ದೊರೆಕೊಂಡ ತೆಱದಿಂ
ಮನದೊಳ್ ಕಡುವೊಂಗಿ ಋಷಿನಿವೇದಕನಾಗಳ್ ॥ ೧೨

ಅರಮನೆಗೆ ಬಂದು ರಾಜಕುಮಾರಕರ ನಡುವೆ ತಾರಾಗಣದ ನಡುವೆ ಚಂದ್ರನಂತಿರ್ದ ಮಹಾಪದ್ಮಮಹಾರಾಜಂಗೆ ಕೈಮುಗಿದು ಪೊಡೆಮಟ್ಟು ॥ ೧೩

ಎರ್ದಸಂಗಭಿಮುಖಮಾ
ಗಿರ್ದು ಕರಾಂಬುರುಹಯುಗಳಮಂ ಮುಗಿದು ಕರಂ ।
ಪೊರ್ದದೆ ಮೆಲ್ಲನೆ ದೂರದೊ
ಳಿರ್ದವಧಾರಿಸುವುದೇಕಚಿತ್ತದಿನಿತ್ತಲ್ ॥ ೧೪

ದ್ವಾದಶಶತಪಟಂಗಳಂ ಕರ
ಮಾದರದಿಂ ಮೂರ್ತಿಗೊಂಡು ನಮ್ರಿಯ ಪುಳಕ ।
ತ್ವಾದರದಿಂ ಬಂದುವು ಪು
ಣ್ಯೋದಯದಿಂದೆನಿಸಿ ನೆಗಳ್ದ ದಿವ್ಯಮುನೀಂದ್ರರ್ ॥ ೧೫

ಶ್ರುತಸಾಗರರೆಂಬಾಚಾರ್ಯರೈನೂರ್ವರ್ ಮುನಿವರರ್ವೆರಸು ಬಂದಿರ್ದಪರೆಂದು ಬಿನ್ನಪಂಗೆಯ್ವುದುಂ ಮಹಾಪದ್ಮಮಹೀವಲ್ಲಭನುಂ ಕರಮೊಸೆದು ಋಷಿನಿವೇದಕಂಗಂಗಚಿತ್ತಮನಿತ್ತು ಋಷಿಯರಿರ್ದೆಡೆಗೇಳಡಿಯಂ ನಡೆದು ಪೊಡೆಮಟ್ಟಾನಂದಭೇರಿಯುಂ ಪೊಯ್ಸುವುದುಂ ತದ್ಭೇರಿನಾದಮಂ ಕೇಳ್ದು ॥ ೧೬

ಶ್ರಾವಕರುಂ ಸಮಸ್ತಪರಿವಾರಮುಮುತ್ಸವದಿಂ ನರೇಂದ್ರರುಂ
ತಾವಿರದರ್ತಿಯಿಂ ನೆರೆದು ತತ್ಕ್ಷಣದಿಂ ನೃಪಮಂದಿರಕ್ಕೆ ನಾ
ನಾವಿಧದರ್ಚನೋಪಕರಣಂಬೆರಸುನ್ನತಿಯಿಂದೆ ಬಂದು ಸ
ದ್ಭಾವದಿನಿರ್ದರಂಬುಧಿರವಕ್ಕೆಣೆಯಾಗಿರೆ ತೂರ್ಯನಿಸ್ವನಂ ॥ ೧೭

ಅರಮನೆಗೆ ಸಕಲಭವ್ಯೋ
ತ್ಕರಮುಂ ಸಾಮಂತರುಂ ಮಹಾಮಾತ್ಯರುಮ ।
ಚ್ಚರಿಯಾಗಿರೆ ಬಂದಿರ್ದರ್
ಸರಾಗದಿಂ ದೇವರವನಿಗವತರಿಸಿದವೋಲ್ ॥ ೧೮

ಅರಮನೆಯ ಮುಂದಿರ್ಪುದುಂ, ಮಹಾಪದ್ಮಮಹಾರಾಜಂ ಸಮಸ್ತಾಂತಃಪುರಪುರಂಧ್ರಿಯರುಂ ಪದ್ಮನುಂ ವಿಷ್ಣುಕುಮಾರನುಂಬೆರಸು ಪೊಱಮಟ್ಟು ಪಾದಮಾರ್ಗದಿಂ ಹಂಸೆಗಳ್ ಶತಪತ್ರಷಂಡಕ್ಕೆ ಬರ್ಪಂತೆ ಮುನಿವೃಂದಾರಕನನಯ್ದೆವಂದು ಮೇರುಗಿರಿಯಂ ಪ್ರದಕ್ಷಿಣಂಗೆಯ್ವ ಚಂದ್ರಾದಿತ್ಯರ್ಕಳಂತೆ ಮುನಿನಿಕರಮಂ ತ್ರಿಃಪ್ರದಕ್ಷಿಣಂಮಾಡಿ ಭಕ್ತಿಪೂರ್ವಕಂ ಗುಣಾಕರರೆನಿಸುವ ಶ್ರುತಸಾಗರಮುನೀಂದ್ರರ ಪಾದಪದ್ಮಂ

ಗಳನರ್ಚಿಸಿ ವಂದಿಸಿ ಮತ್ತಮೞದ ಮುನಿವರರ್ಗಂ ಗುರುಪರಿವಿಡಿಯಿಂದರ್ಚಿಸಿ ವಂದಿಸಿ ಕೈಯಂ ಮುಗಿದು ಮುಂದೆ ಕುಳ್ಳಿರ್ದು] [1] ॥೧೯

ಕೊಲೆಯೊಳ್ ಪೊರ್ದದ ನಿವೃತ್ತಿ
ಲಲನೆಯ ಸೊಬಗೆನಿಪ ಪಾಪಹೇತುಗಳಂ ಪಂ ।
ಬಲಿಸದ ಮಿಥ್ಯಾವಚನ
ಕ್ಕಲಸುವ ಜಿನಧರ್ಮಮಂ ಮನಂಬಿಡೆ ಕೇಳ್ದಂ । ೨೦

ಅಂತು [ಧರ್ಮಮಂ] ಕೇಳ್ದು ಸಂಸಾರಕ್ಕೆ ಪೇಸಿ [ಪಂಚೇಂದ್ರಿಯಂಗಳೆಂಬ ಗಂಧಸಿಂಧುರಂಗಳಂ ಮನಂಗಿಡೆ ನುಗ್ಗೊತ್ತಲುಂ, ಮೋಹವೃಕ್ಷದ ಬೇರಂ ಕಿತ್ತಾಕಾಶಕೆತ್ತಲುಂ ಕಷಾಯಭಟರಂ ಪಡಲ್ವಡಿಸಲುಂ ಬಗೆದಂದು ತನ್ನೊಳಂತೆಂದಂ] [2] ॥ ೨೧

ನೋಡ ಮಂಜಿನ ನೀರಸಕ್ಕಟ ನಂಬಿ ಬಿತ್ತುವೆನೆಂಬನುಂ
ನಾಡೆಯುಂ ಪಿಡಿದೇಱುವೆಂ ದ್ವಿರದೇಂದ್ರವೈರಿಯನೆಂಬನುಂ
ಕೂಡೆ ಪೆರ್ವೊನಲಂ ತರಂಗಳನೊತ್ತಿ ತಾಳ್ದುವೆ [3] ನೆಂಬನುಂ
ಕೇಡಿನೊಳ್ಕಳಗೊಂತ ರಾಜ್ಯಮನೊಲ್ವನುಂ ಮರುಳಲ್ಲನೇ [4] ॥ ೨೨

---

[1] ಪ್ರಿಯನಂದನರಂತವರ್ಗರಸು ರಾಜ್ಯಂಗೆಯ್ಯುತ್ತಮಿರ್ದೊಂದುದಿವಂ ಶ್ರುತಸಾಗರರೆಂಬ ಋಷಿಯರಲ್ಲಿ (ಗ)

[2] ಬಳಿಯ ಮಗನಪ್ಪ ಪದ್ಮಂಗೆ ಧರಾಭಾರಮನೊಪ್ಪಿಸಿ ವಿಷ್ಣುಕುಮಾರಂಗೆ ಯುವರಾಜಪದವಿಯುಮಂ ಕೊಡುವುದುಂ ಶ್ರೀಜಿನಚರಣಾಲಂಕಾರ ಶೀರ್ಷನಿಂತೆಂದಂ (ಗ)

[3] ನೊಗ್ಗಿ ತಾಂಗುವೆ (ಗ)

[4] ಧನದ ಪೆರ್ಚಿನೊಳುರ್ಕಿ ನಂಬಿತ ಕೂಟದೊಳ್ ಕಡುಪೊಂಗಿ ಜ
ವ್ವನದ ಕೊರ್ವಿನೊಳುರ್ವಿ ಮೈಮಗ ಮುಯ್ಯನಾಂತಳಿಸೌಖ್ಯಮುಂ
ಮನದೆಗೊಂಡು ಶರೀರಮುಂ ಬಿಡಿದಲ್ಲಿಯುಂ ಮತಿಗೆಟ್ಟು ಕೆ
ಮ್ಮನೆ ಮರುಳ್ತನದಿಂ ಮಹೇಶ್ವರಲೀಲೆಯೊಳ್ತೊಡರ್ದಾಡಿದೆಂ ॥ (ಗ)

ಬೂದಿಯಾದ ಪುಳ್ಳಿಯಂತೆ ಬಂಡಿಯಾದ ಎಳನಂತೆ ಬಸಿಱಂ ಪೊಕ್ಕ ಕೂಸಿನಂತೆ [ರಸಂಬೋದ ಕಬ್ಬಿನಂತೆ ಪೇಡಿಯುಪ್ಪರಿಸಿನ ಮಾತಿನಂತೆ ಬೇಸಗೆಯ ಮುಗಿಲಂತೆ ಬೞಗಾಲದ ಬೆಳಸಿನಂತೆ ಮೞೆಗಾಲದ ಬಿಸಿಲಂತೆ ಬಲ್ಲಿದರಲ್ಲದರ ಪೊರ್ಮೆಯಂತೆ ಮೂರ್ಖರ ನಗೆಮೊಗದಂತೆ ದೂರದ ಬರವಿನಂತೆ ಕೆಟ್ಟೊಕ್ಕಲ ಸಾಲದಂತೆ ಸಂಶಯಕ್ಕೆಡೆಯಾದರ್ಥಮುಮಂ, ಸಿಕ್ಕಿದೆರಲೆಯಂತೆ ಪಲ್ಲ ಸಂದಿಯುಡಕೆಯಂತೆ][1] ಬಾಯ ತುತ್ತಿನಂತೆ ಬೇರಿಲ್ಲದ ಮರನಂತೆ ತೊಱೆಯ ತೀರದೂರಿನಂತೆ ಪಳ್ಳದೊಳಗಣ ಬಳಂಬೆಯಂತೆ ದ್ರೋಹನ ನಿತ್ತರಣೆಯಂತೆ ಕಳ್ಳನ ಸಿರಿಯಂತೆ ಗಾಳಿಯ ಸೊಡರಂತೆ ಬಡವನ ದರ್ಪದಂತೆ ಸಂಚಲಮಪ್ಪ ದೇಹಮುಮಂ, ಮುಗಿಲಂತೆ[ಸಂಜೆಯ ಕೆಂಪಿನಂತೆ]ನೀರ ರೇಖೆಯಂತೆ[2] ಪೊರೆದಂಕದಾಳನಂತೆ ಪತ್ತಿಸಿ ನೋಂಪ್ಪ ಸೂಳೆಯಂತೆ ಕಾವುವ ಕೋಟೆಯೊಡೆಯನಂತೆ ಕಾಳಗಕ್ಕೆ ಬಂದ ಬೂತಿನಂತೆ ಕೂಪ್ವೇೞ್ಪ ಬಾರಿಕನಂತೆ ದಂಡುವೇೞ್ವರಸಿನಂತೆ ತೂಗಿ ಬಿಡುವ ನಾಯಕನಂತೆ ಕಲಹಂ ಮೊಟ್ಟಿ ಕೊಂಡೆಯನಂತೆ ಲೇಸಲ್ಲದ ಸುಖಕ್ಕೆ ಪಾಯಿಸಿ ನೋಯಿಸುವಿಂದ್ರಿಯಂಗಳುಮಂ, ಮದ್ದುಕುಣಿಕೆಯಂತೆ ಪಿತ್ತದಂತೆ ನಾಯಪಾಲಂತೆ ಮತಿಗಿಡಿಸುವ ಪೆಂಡಿರುಮಂ, ಕಾಪಿನಾಳಂತೆ ಬೇಲಿಯಂತೆ ಪೊಳೆಯಿಲ್ಲದ ತೊಱೆಯಂತೆ ಬಬ್ಬಂಟನಾಸೆಯಂತೆ ಧರ್ಮಕ್ಕೆ ಸಲಲೀಯದಡ್ಡಂಬರ್ದ ತಾಯ್ತಂದೆಯುಮಂ, ತೊಱೆಯೊಳ್ ಪೋಪರಂ ಬೆಟ್ಟೇಱ

---

[1] ಹಿಪ್ಪೆಯಾದ ತಂಬುಲದಂತೆ ಧಾನ್ಯಂ ಪೋದ ಕಳಗಾಡಿನಂತೆ ಜೀವಂ ಪೋದೊಡಲಿನಂತೆ ಪಾಳು ಮನೆಯಂತೆ ಪಾಲ್ಬತ್ತಿದಾಕಳಂತೆ ಮಕ್ಕಳಿಲ್ಲದ ಸತಿಯಂತೆ ಕಡೆಯೊಳ್ ಸಿಪ್ಪಲಮಪ್ಪ ರಾಜ್ಯಮುಮಂ ತಱಗೆಲೆಯ ಪೂರದಂತೆ ತುದಿಗೋದ ಪಣ್ಣಿನಂತೆ ಲೋಭಿಯುಪ್ಪರಿಸಿನ ಮಾತಿನಂತೆ ಬೇಸಗೆಯ ಮುಗಿಲಂತೆ ಬೞಗಾಲದ ಬೆಳಸಿನಂತೆ (ಗ)

[2] ದೂಳಿಯ ಪಚ್ಚೆಯಂತೆ ಬಯಲ ಕಾಳಗದಂತೆ ಮೆಯ್ನೀರ ಹಱಹದಂತೆ ತಿಱಿದೆಲೆಯ ನುಣ್ಪಿನಂತೆ ಪೊಸಮಾವಿನ ಕೆಂಪಿನಂತೆ ಬೂರಿಯ ಬೊಟ್ಟನಂತೆ ಮಾಗೆಯ ಪೊತ್ತಿನಂತೆ ತೋಱು ಪಾಱುವಾಯುಷ್ಯಮಂ ಪಾದರದ ಕುಂಟಣಿಯಂತೆ ಮಿಂಚಿನ ಪೊಳ್ಪುಡಿಯಂತೆ (ಗ)

ಬೀೞ್ವರಂ ಪೆಟ್ಟುಮೞಸಿಕೊಳ್ವರಂ ಕುತ್ತದೊಳ್ ಪೊರಳ್ವರಂ ಬೇಗೆಯೊಳ್ ನರಳ್ವರಂ ಬಯಲೊಳ್ ಕಾದುವರಂ ಕಳದೊಳಱುವರಂ ಕಿರ್ಚಿನೊಳ್ ಬೆಯ್ವರಂ ಸೋಲ್ತೋಡುವರಂ [ಗಾಳದೊಳ್ನೇಲುವರಂ] ನೆರೆದು ನೋಡುವರಂತೆ ನೋೞ್ಪುಂ ಸಾವುಮಡಸಿದಾಗಳ್ ನೆರೆದು ಗುಱುಗುಮ್ಮನೆ ನೋಡುತಿರ್ಪ ನಂಟರುಮಂ, ಸೂಜಿಗೊಂಡ ಪುಣ್ಣನಂತೆ ಕಣ್ಣ ಶೂಲೆಯಂತೆ ನಾಲಗೆಯ ಪುಗುಳಂತೆ ಮೂಗಿನ ರಸಿಗೆಯಂತೆ ಶೂಲೆಯಂತೆ ಕೆಮ್ಮಿನಂತೆ ತೇಳಿ ವಿಷದಂತೆ ನಂಜೂಡಿವಂಬಿನಂತೆ ಬಸಿಱೊಳಿರ್ದಲಗಿನಂತೆ ಮಮ್ಮಲಮಱುಗಿಸುವ ಮಕ್ಕಳುಮಂ, ಸುೞಿಯೊಳ್ ಬಿರ್ದ ಪಱುಗೋಲಂತೆ ಬೆಟ್ಟಂ ತಾಗಿದ ಪೊನಲಂತೆ ಕುಂಬಾಱನ ಚಕ್ರದಂತೆ ಮಕ್ಕಳಟ್ಟ ಬವರಿಯಂತೆ [1] ಅಱಟಣದ ಪೊಗಪೆಯಂತೆ ಕಡೆವ ಕಡೆಗೋಲಂತೆ ಮಸೆವ ಸಾಣೆಯಂತೆ ಪೃಹಾಳಯ ಕುದುರೆಯಂತೆ ಪೂಣಾದೆ ತಿರುಗುವ ಬಾೞುಮಂ, ನಂಬಿ ಮೆಯ್ಯಱಿಯದೆ ಭೋಗಕಾಂಕ್ಷೆಯಿಂದಿರ್ದನಪ್ಪೊಡೆ, ನೆರಮನೆಯ ಕಿರ್ಚುಮಂ ಪತ್ತಿದ ಪಗೆಯುಮಂ ಬರ್ಪ ಪುಲಿಯುಮಂ ತಿಂಬ ನಾಯುಮಂ ಕೊಲ್ವಾನೆಯುಮಂ ಮುನಿವರಸನುಮಂ ಬಡಿವ ಕಳ್ಳನುಮಂ [ನಿದ್ರಿಸುವ ಬಂಟನುಮಂ] ಪೆಱಗಕೂರ್ಪ ಸ್ತ್ರೀಯುಮಂ ಪೊಂಗಳಪುವ ಮಗನುಮನಳಪುವಂತಕ್ಕುಮೆಂದು ಕಳಕಳಸಿ ನಕ್ಕು [ಮನದೊಳ್ ರಾಜ್ಯಕ್ಕೆ ಪೇಸಿ ಪದ್ಮನುಮಂ ವಿಷ್ಣುಕುಮಾರನುಮಂ ಪರಿವಾರಮುಮಂ ಪ್ರಧಾನರುಮಂ ಬರಿಸಿ ಮಹೀನಾಥನಿಂತೆಂದಂ ॥ ೬೩

ಸನ್ನುತಧರ್ಮದ ಫಲದಿಂ
ದಿನ್ನೆವರಂ ರಾಜ್ಯಲಕ್ಷ್ಮಿಯೊಳ್ ನೆರೆದೆಂ ಮ ।
ತ್ತಿನ್ನಳಪಿಂ ನಿಲ್ವೊಡೆ ಬಿ
ನ್ನಣಮೇಂ ಬಿತ್ತನುಂಡ ತೆಱನಂತಕ್ಕುಂ ॥ ೬೪

ಬಿತ್ತಿಂಗಂ ಬೆಳೆದೊಕ್ಕಲ್
ಬಿತ್ತಂ ಮುಂದಣ್ಗೆ ಕಟ್ಟುವಂತಿರೆ ಮುನ್ನಿನ ।

1 ಹರಿಯುಟ್ಟಿಯನೂಲಿನಂತೆ (ಗ)

ಸತ್ತಪದ ಫಲಮನಱುತುಂ
ಮತ್ತೀಳಸಿ ಬಿಡದೆ ಮಾಡವೇೞ್ಪುದು ತಪಮಂ ‖ ೨೪

ಅದುಕಾರಣದಿನಿನ್ನವರೆಗಂ ಪರತ್ರಿಯಂ ಕಿಡಿಸಿ ಸಂಸಾರದಲ್ಪಸುಖಮಂ ಮಹಾಸುಖಮೆಂದು ನಂಬಿ ಕೆಟ್ಟನೀಗಳ್ ಶಾಶ್ವತಸುಖಮಂ ಮಾೞ್ಪ ಜಿನರೂಪಮಂ ತಾಳ್ದುವೆ ಪುಣ್ಯಮಿಂದು ಸಮನಿಸಿತೆಂದು ತನ್ನ ಮನದ ಕಜ್ಜಮನಱಿಯೆ ಪೇೞ್ದು ಪದ್ಮಂಗೆ ಪಟ್ಟಮಂ ಕಟ್ಟಿ ಧರಾಭಾರಮನೊಪ್ಪಿಸಿ ಸಮ್ಯಕ್ತ್ವಚೂಡಾಮಣಿಗೆ ಯುವರಾಜಪದವಿಯಂ ಕುಡುವುದುಂ ವಿಷ್ಣುಕುಮಾರನಿಂತೆಂದಂ ‖] ೨೫

ಒಪ್ಪುವ ರಾಜ್ಯಶ್ರೀ ಲೇ
ಸಪ್ಪೊಡೆ ನೀನೇಕೆ ದೇವ ಬಿಡುವೈ ಕೇಳಂ ।
ತಪ್ಪ ನುಡಿ ಬೇಡ ನೃಪನೀ
ನಪ್ಪುದನಾನಪ್ಪೆನಱಿಸುಖಂಗಳ್ಗೆಱಗೆಂ ‖ ೨೬

[ತನು ಲೇಸಪ್ಪೊಡೆ ದೇವರೇಕೆ ತಪಮಂ ಕೈಕೊಳ್ವರಿಂತೀ ಸುಹೃಜ್ಜನಮಂ ಕಾಂತೆಯರಂ ಮಹಾಮಹಿಮೆಯಂ ಶ್ರೀಯಂ ಗಜಾನೀಕಮಂ।
ಧನಮಂ ಧಾತ್ರಿಯನೊಲ್ಲದೋಸರಿಸಿ ಪೇೞಾಂ ಗಾಂಪನೇಂ ಪುಟ್ಟನೇಂ
ನಿನಗಾಂ ಬೇಳನೆನಲ್ಲನೀನುಡಿಗಳಂ ಮಾತಾಡವೇಡೆನ್ನೊಳಂ ‖ ೨೭

ಅರಸರೋಲಗಂ ಲೇಸು ಕಾಳಗಂ ಬಟ್ಟೆತೆಂಬಂತೆ ಸಂಚಲಚಿತ್ತಂಗಂ ದೂರದರ್ಶಿಯಲ್ಲದಂಗಂ ಮಿಥ್ಯಾತ್ವಮಿಶ್ರಿತಂಗಂ ಸಂಸಾರದೊಳಾದ ಸುಖಂ ಪಿರಿದಪ್ಪ ಸುಖಮಾಗಿ ತೋಱುಗುಂ ಬಱಿಕ್ಕಾದ ನರಕದುಃಖಕ್ಕೆ ಮೆಯ್ಯನೊಡ್ಡಬಾರದದಱಿಂ ದೇವರ್ಗೆಂದೊಡಮೆನಗೆ ರಾಜ್ಯದ ಮೇಲೆಳ್ಳನಿತಪ್ಪೊಡಂ ಮೋಹಮಿಲ್ಲೆಂದು ಪಲವಂ ನುಡಿಯುದೊಂದನೆ ಪರಿಚ್ಛೇದಮಾಗೆ ನುಡಿದುಸಿರದಿರ್ಪುದುಂ ಮಹಾಪದ್ಮಮಹಾರಾಜಂ ಮಗನ ಮಾತಿಂಗೆ ಬೆಱಗಾಗಿ ತನ್ನೊಳಿಂತೆಂದಂ ‖ ೨೮

ಸಂದ ತಿರಿಕಂಗೆ ತೊವೆತು
ಪ್ಪಂ ದೊರೆಕೊಳಲುಣ್ಮಿ ನಲಿವ ತೆಱದಿಂ ಸೌಖ್ಯ ।

ಕ್ಕೆಂದುಂ ಬಾರದೆ ರೌರವ
ದಿಂದಂ ಬಂದಂಗೆ ಮೋಹಮುಕ್ಕುಂ ಸಿರಿಯೊಳ್ ॥ ೩೦

ಶರಧಿಪರೀವೃತಧಾತ್ರೀ
ಭರಮಂ ಕಾಲ್ದಂತೆ ಪಳವು ಸಮನಿಸೆ ಪೆರ್ಚಂ ।
ಪಿರಿದಾಗದಂತೆ ಸುಖಮಂ
ಸುರಲೋಕದೊಳುಂಡು ಬಂದವಂಗಿದು ಪಿರಿದೇ ॥ ೩೧

ಅದು ಕಾರಣದಿಂದೀತನಪ್ಪೊಡೆ ಸಾಮಾನ್ಯಮನುಷ್ಯನಲ್ಲೆಂದು ಪೆರ್ಚಿ ರಾಜ್ಯಭಾರಮಂ ಬಿಟ್ಟಮೊತ್ತಮೆಂ ಕಲ್ಲಭಾರವನೀಡಾಡುವಂತೀಡಾಡಿ ಪಂಚೇಂದ್ರಿಯಂಗಳ ಸುಖಮಂ ಪಗೆಯಂ ಕಾಣ್ಬಂತೆ ಕಂಡು ಮಹಾಶ್ರೀಯಂ ಕೊಳದ ಪುಲ್ಲ ಕಡ್ಡಿಯುಂ ತೊರೆವಂತೆ ತೊರೆದು ಸಮ್ಯಕ್ತ್ವಚೂಡಾಮಣಿವೆರಸು ಶ್ರುತಸಾಗರಮುನೀಶ್ವರರಲ್ಲಿ ಜಿನದೀಕ್ಷೆಯಂ ಕೈಕೊಂಡು ಮುಕ್ತಿಶ್ರೀ ಕಂಠಾಭರಣಮೆನಿಪ ಪರಮಾಗಮಮನೋದಿ ಪಲಕಾಲಂ ಗುರುಪಾದಸೇವೆಯೊಳಿರ್ದು ಗುರುಗಳಾಜ್ಞೆಯಿಂ ಬೇರೆವೇರೆ ಪೋಗಿ ಘೋರವೀರತಪದೊಳ್ ನೆಗೞುತ್ತುಮಿರ್ದು ಮಹಾಪದ್ಮಮುನಿನಾಥಂ ಅಷ್ಟಾಪದಗಿರಿಯೊಳ್ ಕರ್ಮಕ್ಷಯಂಗೆಯ್ದು ಸುಗತಿಲಕ್ಷ್ಮಿಯೊಳ್ ಕೂಡಿದಂ; ವಿಷ್ಣುಕುಮಾರಮುನೀಶ್ವರನುಂ ತಪಶ್ರೀವಧೂಪ್ರಿಯನಾಗಿರ್ದನಿತ್ತಲ್ ॥।[1] ೩೨

ಧರೆಯಂ ಜೇಯೆನೆ ಮಾಡುತುಂ ವಿಬುಧರಂ ಶಿಷ್ಟೇಷ್ಟರಂ ಮನ್ನಿಸು
ತ್ತರಿಭೂಪಾಲರ ದರ್ಪಮಂ ಕಿಡಿಸುತುಂ ಸದ್ಧರ್ಮಮಂ ಪಾಲಿಸು
ತ್ತುರುಭೂಚಕ್ರಮನಾಜ್ಞೆಯಿಂ ನಡೆಸುತುಂ ಸದ್ರಾಜನೀತಿತ್ವದೊಳ್
ದೊರೆಯಿಲ್ಲೀತನೊಳೆಂಬಿನಂ ಪದುಮಭೂನಾರೀಶನಿರ್ದನ್ನೆಗಂ ॥ ೩೩

---

1 ಎಂದು ಪಂಚ್ಛೇದಿಸಿ ಯುವರಾಜಪದವಿಯುಂ ಬಿಟ್ಟು ತಂದೆಯೊಡನೆ ಶ್ರುತಸಾಗರಭಟ್ಟಾರಕರಲ್ಲಿ ಜಿನದೀಕ್ಷೆಯುಂ ಕೈಕೊಂಡು ಪರಮಾಗಮಮನೋದಿ ಗುರುಗಳಾಜ್ಞೆಯಿಂದೇಕವಿಹಾರಿಗಳಾಗಿ ಪೋದಲ್ಲಿ ಮುನಿನಾಥನಷ್ಟಾಪದಪರ್ವತದೊಳ್ ಕರ್ಮಕ್ಷಯಂಗೆಯ್ದಂ. ವಿಷ್ಣುಕುಮಾರಮುನಿ ವಿಹಾರಿಸುತ್ತುಮಿರ್ದನಿತ್ತಲ್ ॥ (ಗ)

ಅನ್ನೆಗಮಿತ್ತಲವಂತಿವಿಷಯದುಜ್ಜಯಿನಿಯೆಂಬ ಪುರಮನಾಳ್ವಂ ಜಯವರ್ಮಮಹಾರಾಜನೆಂಬರಸನಾತನ ಮಂತ್ರಿ ಬಲಿಯೆಂಬನಂತಾಬಲಿಯೊತವುಟ್ಟಿದರುಂ ಶುಕ್ರನುಂ ಬೃಹಸ್ಪತಿಯುಂ ಪ್ರಹ್ಲಾದನುಮೆಂಬರತಿಪ್ರವೀಣರ್ ವೇದಶಾಸ್ತ್ರಪ್ರವೀಣರವರೊಳ್ ಕೂಡಿ ಬಲಿ ಸುಖಮಿರ್ಪನ್ನೆಗಂ ॥ ೩೪

[ಪರಮತಪೋನಿಲಯರ್ ದು
ರ್ಧರಚರಿತರ್ ಕಾಲಜಲಧಿಬಡವಾನಳರು ।
ರ್ವರೆಪೂಜ್ಯರ್ ಸಕಳಾಗಮ
ಪರಿಣತರಮಳರ್ ಸಮಸ್ತಮುನಿಗಣವಂದ್ಯರ್ ॥] ೩೫

ಅಕಂಪನಾಚಾರ್ಯರಯ್ನೂರ್ವರ್ ಮುನೀಶ್ವರರ್ವೆರಸು [ವಿಹಾರಿಸುತ್ತುಮುಜ್ಜಯಿನಿಗೆ ವಂದು ಪೊ[illegible]ಪೊಱಲೊಳರ್ಪುದುಂ ಪೊಱಲೊಳಗಣ ಶ್ರಾವಕರೆಲ್ಲಂ ॥ ೩೬

ಪೆರ್ಚೆಯುಮುತ್ಸವಂಬೆರಸು ಭೂವಳಯಂ ತಮಗಾದ ಮಾರ್ಗದಿಂ
ದರ್ಶನೆಗೊಂಡು ದಿವ್ಯಮುನಿವಾಗ್ಝರಿಯಿಂದಘಮೆಂಬ ಪಂಕಮಂ
ಕರ್ಚುವೆನೆಂಬವೋಲ್ಕರೆದು ತನ್ಮುನಿಪಾದಪಯೋಜಮಂ ಸಮಂ
ತರ್ಚಿಸಲೆಂದು ಪೋಪ ಜನದೊಂದುಲಿಪಂ ಜಯವರ್ಮಭೂಭುಜಂ ॥ ೩೭

ಕೇಳ್ದು ಮಾಡದಮೇಲಿರ್ದು ದಿಶಾವಲೋಕನಂಗೆಯ್ಯುತ್ತುಮೀನೆರೆದ ನೆರವಿನಾನಾವಿಧಾರ್ಚನೆವೆರಸಲ್ಲಿಗೆ ಪೋದಪ್ಪರೆಂದು.. ಮಾಪ್ರಸ್ತಾವದೊಳ್ ಋಷಿನಿವೇದಕನುಂ ಬಂದು ಮಹೀವಲ್ಲಭಂಗೆ ಪೊಡೆಮಟ್ಟು ದೇವ ನಮ್ಮ ಪುರಕ್ಕೆಂದು ಶ್ರುತವಾರಾಶಿಗಳುಂ ಪರಮಾವಧಿಲೋಚನರುಂ ಚಾರಿತ್ರಮಯರುಮಪ್ಪ ಅಕಂಪನಾಚಾರ್ಯರಯ್ನೂರ್ವರ್ ಮುನೀಶ್ವರರ್ ವೆರಸು ಬಂದಿರ್ದಾರೆಂದು ಬಿನ್ನಪಂಗೆಯ್ವುದುಂ ನರೇಂದ್ರನವರಿರ್ದ, ದೆಸೆಗೇಳಡಿಯುಂ ನಡೆದು ಪೊಡೆಮಟ್ಟು ಋಷಿನಿವೇದಕಂಗೆ ಮೆಚ್ಚುಗೊಟ್ಟು ಕೆಲದೊಳಿರ್ದ ಬಲಿಯ ಮೊಗಮಂ ನೋಡಿ ॥ ೩೮

ಮನದೊಳನಿತೊಳವು ಸಂಶಯ
ಮನಿತುಮನೋರಂತೆ ದಿವ್ಯಮುನಿಪುಂಗವನೊಳ್ ।
ಮನಸಿಜಹರನೊಳ್ ತ್ರಿಭುವನ
ವಿನಮಿತನೊಳ್ ಕೇಳ್ವವೆಂಬುದುಂ ಬಲಿ ನುಡಿದಂ ॥ ೩೯

ಜೀವವನೇಕಕರ್ಮಮನುಪಾರ್ಜಿಸಿ ಮಾಣದೆ ತತ್ಫಲಂಗಳಂ
ಜೀವನೆ ಮತ್ತಮನ್ಯಭವದೊಳ್ ಗಡ ತಾನಿರದುಣ್ಬನೆಂಬುದುಂ
ಭೂವರ ನಂಬಿ ಬೀಳನಿಸಬೇಡ ಪರತ್ರಯನಾರು ಕಂಡರೆ
.... ಲೆ ಪೇೞ್ವಡೆ ಸತ್ತರನಾರು ಕಂಡವರ್ ॥ ೪೦

ಬಱುವೆಳಿಯರ ಮಾತಂ ಕೇ
ಳ್ದಱಿಯದೆ ದೆಸೆಗೆಟ್ಟು ಜೀವಮುಂ ಗತಿಯುಂ ಕೇ ।
ಳಱನುಂ ತಾವೊಳವೆಂಬೀ
ತೆಱವಱಿತನವೇಕೆ ನಿನಗೆ ಭುವನಾಧಿಪತೀ ॥ ೪೧

ಅದಱಿಂ ಜೀವಮುಂಟೆಂಬುದಕ್ಕಂ ಶುಭಾಶುಭಕರ್ಮಮೊಳವೆಂಬುದಕ್ಕಂ ತತ್ಫಲಮುಂಟೆಂಬುದಕ್ಕಂ ಮಱುಭವದೊಳ್ ತಾವೆ ಮಗುೞ್ದುಂಬರೆಂಬುದಕ್ಕಂ ಸ್ವರ್ಗನರಕಂಗಳೊಳವೆಂಬುದಕ್ಕಂ ಸಾಕ್ಷಿಯಾರಿದೆಲ್ಲಂ ಗಾಳಿಯುಂ ಗಂಟಿಕ್ಕುವಂತೆ ಮಾಯಾವ್ಯವಹಾರಮಿದನರಸ ನೀಂ ಕೆಮ್ಮನೆ ನಂಬಿ ಮರುಳಾಗಿ ತಪದಿಂದೊಡಲಂ ನಿಷ್ಕಾರಣಂ ಪರತ್ರಯುಂಟೆಂದು ತವಿಸುವ ಕಷ್ಟಿಗರಪ್ಪ ಋಷಿಯರ ಮಾತಂ ಕೇಳ್ದು ರಾಜ್ಯದೊಳಾದ ಭೋಗೋಪಭೋಗಂಗಳಂ ಕಿಡಿಸಿಕೊಳವೇಡೆಂಬುದುಮರಸನಿಂತೆಂದಂ ॥ ೪೨

ಒಯ್ಯನೆ ದಿನಕರನುದಯಂ
ಗೆಯ್ಯದ ಮುನ್ನೊಪ್ಪುಗುಂ ನಿಶಾಕರಬಿಂಬಂ ।
ರಯ್ಯಮೆನೆ ಸೂರ್ಯನುದಯಂ
ಗೆಯ್ಯೆ ಬಱಿಕ್ಕೊಪ್ಪೆ ಬೆಳಗಲಾರ್ಪನೆ ಚಂದ್ರಂ ॥ ೪೩

ಅಂತು ಕುವಾದಿಯೆನಿಪ ನಿನ್ನಂತಪ್ಪತಿಧೂರ್ತರ್ ಮಹಾವಾದಿಗಳಿಲ್ಲದನ್ನೆವರಮುಕ್ಕಿ ಸೊಕ್ಕಿ ತೇಜಮಂ ಪೊಟಿಸುವರಲ್ಲದೆ ಮಹಾವಾದಿಗಳಾಸ್ಥಾನದೊಳ್ ಕುಂದಿಕುಸಿದೊಳಸೋರ್ದು ಕೇದಗೆಯೇಱಿದ ಕೋಡಗನಂತೆ ಸಿಡಿಮಿಡಿಗೊಂಡು ಮಿಡುಕದಿರ್ಪರದಲ್ಲದೆ ತಲೆಯೆತ್ತರದಱಿಂ ಬಾಯ್ಗೆ ಬಂದಂತೆ ಕೊನೆದುದ್ದವೇಱಿ ಪಲವನೆನ್ನ ಮುಂದೆ ಗೞಪದುಸಿರದಿರೆಂಬುದುಂ ಬಲಿಯಿಂತೆಂದಂ ॥ ೪೪

ವಸುಧೇಶ್ವರ ನೀನಪಥಾ
ರಿಸು ಪ್ರೋದಿನೊಳನಗೆ ನಿನ್ನ ನಚ್ಚಿನ ಋಷಿಯರ್ ।
ವಸುಮತಿಯೊಳ್ ತಲೆಯುಂ ಸಂ
ಕಿಸದೆತ್ತಿರದಿರ್ಪುದವರೆ ದೇವರ್ ಧರೆಯೊಳ್ ॥ ೪೫

ಎಂಬುದು ಸುರಸನವನನಾಚಾರಕ್ಕೆ ಸೈರಿಸದೀತನ ವಿದ್ಯಾಗರ್ವಮಂ ಕಿಡಿಸಲ್ವೇೞ್ಕುಮೆಂದು ಕಯ್ಯಂ ಪಿಡಿದೊಡಗೊಂಡು ಸಮಸ್ತನೃಪಕುಮಾರರುಮಂತಃಪುರಪುರಂಧ್ರಿಯರುಂಬೆರಸು ಪಾದಮಾರ್ಗದಿಂದಕಂಪನಾಚಾರ್ಯರಲ್ಲಿಗೆವಂದು ಮೂಱುಸೂೞ್ ಬಲಗೊಂಡು ಮುನಿವೃಂದಾರಕರ ಚರಣಯುಗಳಮಂ ಬಹುವಿಧಾರ್ಚನೆಯಿಂದರ್ಚಿಸಿ ವಂದಿಸಿ ಋಷಿಯರುಮಂ ಪರಿವಿಡಿಯಿಂದರ್ಚಿಸಿ ವಂದಿಸಿ ಮುಂದೆ ಕುಳ್ಳಿರ್ದು ಮೋಕ್ಷದ ನಿಚ್ಚಣಿಕೆಯೆನಿಪ ಜಿನೇಂದ್ರಧರ್ಮಮಂ ಕೇಳ್ದಂತೆಂದಂ॥ ೪೬

ಮೋಱೆಯಿಲ್ಲಘಮಿಲ್ಲೊಳ್ಪ
ಲ್ಲಱನಿಲ್ಲ ಪರತ್ರೆಯಿಲ್ಲ ಜೀವನುಮಿಲ್ಲಂ ।
ದಱೆಯದೆ ಕೆಮ್ಮನೆ ಕುದಿವರ್
ತೞಿವಲಿತನದಿಂದೆ ಬಾಯ್ಗೆವಂದಂತೆ ಕೆಲರ ॥ ೪೭

ಇದಕ್ಕೆಮಗೆ ಸಂಶಯಂ ಮನದೊಳಂಟು ಜೈನೋಕ್ತಿಯಂ
ವಿದಗ್ಧಜನವಂದ್ಯ ನೀಂ ತಿಳಿಪಿ ಮೆನ್ಮನಶ್ಶಂಕೆಯಂ ।
ಸದಾ ಕಿಡಿಸವೇೞ್ಪುದೆಂದು ನರಪಾಲಕಂ ತಾನುಪಾ
ಯದಿಂದೆ ಬೆಸಗೊಳ್ವುದುಂ......ಮುನೀಂದ್ರೋತ್ತಮಂ ॥ ೪೮

ಗಂಭೀರವಚನರಂಜನೆಗ
ಳಂಬುಧಿಯ ನಿನಾದದಂತೆ ಕರವೊಪ್ಪೆ ಮುನೀಂ ।
ದ್ರಂ ಭೂಮಿಪತಿಗೆ ನುಡಿದಂ
ಶುಂಭಜ್ಜೈನಾಗಮೋಕ್ತಿಯಂ ಸಭೆ ಮೆಚ್ಚಲ್ ॥ ೪೯

ಮೊಱೆಯಿಲ್ಲಪ್ಪೊಡೆ ಸತಿಗಾ
ದೆಱಕಂ ಮೇಣ್ ಕೂರ್ಪ ತಂಗಿಗೇಕಾಗದು ಮ ।
ತ್ತಱಿಕೆಯ ತಾಯ್ಗೇಕಾಗದು
ಮೊಱೆಯುಂಟಲ್ಲೆಂಬುದಕ್ಕಿದಲ್ಲವೆ ದಿವ್ಯಂ ॥ ೫೦

ಮತ್ತಂ ಭಾವಕರ್ಭಾವಿಸಿ ನೋೞ್ಪಂದು ಲೋಕದೊಳಾದ ಪ್ರಸಿದಮಪ್ಪಿದುವೆ ಪೇೞ್ಗುಮದಾವುದೆಂದೊಡೆ, ಸೂಳೆಯೊಡನೆನಿತು ಕಾಲಮಿರ್ದೊಡಂ ಮಿಂಡರೆಂಬರಲ್ಲದೆ ಪೆಱತಿಲ್ಲ ; ಕರ್ಮಾವೇಶದಿಂ ತಾಯೊಡನಕ್ಕೆ ತಂದೆಯೊಡನಕ್ಕೆ ಕರಮೞಿಪಿಂ ಕೂಡಿದೊಡೆ ಕೋಲೆಗಂ ಕವರ್ತೆಗಂ ಭಾಜನನಪ್ಪನದಱಿಂ ಮೊಱೆಯುಂಟಲ್ಲೆಂಬುದನಿಂಬಾಗಿ ನಂಬುವುದು [1] ॥ ೫೧

ಅಂದಣಮನೇಱಿ ಭೃತ್ಯರ
ಸಂದಣಿಯಿಂ ಬರ್ಪ ಮನುಜರಂ ಕಂಡು ಸದಾ ।
ನಂದದಿನೀತನ ಮುನ್ನಿನ
ದೊಂದು ಮಹಾಪುಣ್ಯಫಲಮಿದೆಂಬರ್ ನುಡಿಯಿಂ ॥ ೫೨

ತರುಣಿಯರಿಕ್ಕೆ ಚಾಮರಮನಿರ್ಕೆಲದೊಳ್ ಬರೆ ವಾಜಿಸಿಂಧುರೋ
ತ್ಕರಮಮರೇಂದ್ರಲೀಲೆಯೊಳ್ ಬರ್ಪ ಮಹಾತ್ಮನನೆಯ್ದೆ ಕಂಡವರ್ ।

---

1 ಧರೆಭವವರಾದೊಡವರಾನೀಪಂಭವವಾಂ ನೋಡ ಸತ್ತೊಡಂ ಭವಭವದೊಳ್।
ಕರೆವುಱಿದುನೀಗಲೆಂಬೀನರವಾಕ್ಯದಿನಮ್ಮ ನಂಬುನೀಂ ಮಱುಭವಮಂ ॥

ಮತ್ತಂ ಪರಿಣತರಪ್ಪರ್ ಪರೀಕ್ಷಿಸಿ ನೋೞ್ಪಂದು ಜಗದೊಳ್ ಕಲೆವೆರಸಿ ಮುನ್ನಿನ ರೂಪುವೆರಸಿ ಪುಟ್ಟುವ ಮಕ್ಕಳುಮಂ ಮೋಹದಿಂ ಕನಸುದೋಱಿಬಂದು ಪುಟ್ಟುವ ಮಕ್ಕಳುಮಂ ಕಂಡು ಮಱುಭವಮುಂಟೆಂದು ನಂಬುವುದು. (ಕ)

ಪುರುಡಿಸಲರ್ತಿಯಿಂದಿವರ ಮುನ್ನಿನ ಮಾಡಿದ ಪುಣ್ಯದಿಂದಮಿಾ
ಸಿರಿ ದೊರೆಕೊಂಡುದೆಂಬ ಜನದೊಂದುಲಿಯಿಂದಱಿ ಪುಣ್ಯದೊಳ್ಮೆಯಂ॥

ಮತ್ತಂ ರೂಪಿನೊಳ್ ಚೆಲ್ವರಪ್ಪರುಮಂ ಸಿರಿಯೊಳ್ ಪಿರಿಯರಪ್ಪರುಮಂ ವಿಳಾಸಸಮೇತರುಮಂ ಸುಭಗರುಮಂ ಸರ್ವಾಭರಣಭೂಷಿತರುಮಂ ನೀರುಜರುಮಂ ದಿವ್ಯಾಹಾರಮನುಣ್ಬರುಮಂ ದಿವ್ಯವಸ್ತ್ರಮನುಡುವರುಮಂ ಸುಖಿಗಳುಮಂ ಕಂಡೊಡಿವರ ಮುನ್ನಿನ ದಾನಪೂಜೆಯ ತಪದ ಫಲದಿನಾದುವೆಂದು ನುಡಿವ ಲೋಕದ ಜನದುಲಿವಿಂ ಧರ್ಮಮುಂಟೆಂದಱಿವುದು ॥ ೫೪

ಕುರುಡರುಮಂ ಕುಂಟರುಮಂ
ತಿರಿಕರುಮಂ ಕಂಡೊಡಿವರ್ಗೆ ಮುನ್ನಿನ ಪಾಪೋ।
ತ್ಕರದಿನಿನಿತಾದುದೆಂಬೀ
ನರವಾಕ್ಯದಿನಮ್ಮ ಪಾಪಮುಂಟೆಂದಱಿ ನೀಂ ॥ ೫೫

ಕರಮರಿದಪ್ಪ ಬಾಧೆಗಳನೋವನೆ ಕೂಗಿರೆ ಬೆರ್ಚಿ ಕಂಪಿಸು
ತ್ತಿರೆ ಪಿಡಿದೊತ್ತಿ ಕಟ್ಟಿ ಬಿಡದೊಯ್ಯನೆ ಕೊಲ್ವರನೆಯ್ದೆ ಕಂಡೊಡೋ।
ಸರಿಸದೆ ಕಷ್ಟನೀಖಳನ ಮುನ್ನಿನ ಸಂಚಿತಪಾಪಮೆಂದು ಕೊ
ಕ್ಕರಿಸುವ ಲೋಕದೊಂದುಲಿಪಿನಿಂದಱಿ ಭೂಪತಿ ಪಾಪದುಣ್ಮೆಯಂ॥೫೬

ಮತ್ತಂ ಕೊಳ್ಪಟ್ಟು ಪುಯ್ಯಲಿಡುವರುಮಂ ಕೂಳ್ಪಡೆಯದಿರ್ಪರುಮಂ ನಿರ್ಭಾಗ್ಯರುಮಂ ಕುರೂಪಿಗಳುಮಂ ಪಂದೆಗಳುಮಂ ಕಂಡೊಡಿವರ ಮುನ್ನಿನ ಕರ್ಮದ ಫಲಮೆಂಬರದಱಿಂ ಪಾಪಮುಂಟೆಂಬುದಂ ಜಲಕ್ಕನಱಿವುದು ॥ ೫೭

ಅಳಪಂ ಪಾತಕನುಗ್ರನನ್ಯವನಿತಾಸಕ್ತಂ ಮೃಥಾಳಾಪಿ ನಿ
ರ್ಮಳನಲ್ಲಂ ಗುಣಹೀನನೂನನದಯಂ ಸತ್ತೊತ್ತಿಳ್ಳತಾಯ್ತಾಖಳಂ।
ಫಳಲೆಂದೊರ್ಮೆಯೆ ಬೀಱ್ಬುಮುಗ್ರನರಕಾಂಭೋರಾಶಿಯೊಳ್ತಪ್ಪದೆಂ
ದಿಳ ಕೈಕೊಳ್ಳದೆ ಪೊಲ್ಲರಂ ಸಿತಗರಂ ನಿರ್ಧರ್ಮರಂ ಭೂಪತೀ॥ ೫೮

ನುಡಿವುದಱಿಂದವಗುಣಮುಂ ಪಾಪಮುಂ ಪೊಲ್ಲೆಂಬುದುಮಂ ಅವಗುಣಿಗಳುಂ ಸದ್ಧರ್ಮದೂಷಕರುಂ ಪಾಪಿಗಳುಂ ನಿರ್ಧರ್ಮರುಂ ನರಕಕ್ಕಿೞಿವುದುಮಂ ನರಕಮುಂಟೆಂಬುದುಮಂ ಲೇಸಾಗಱಿವುದು ॥೫೯

ಪರಹಿತಂ ಗುಣಿ ನಿರ್ಮಳಂ ಶಠನಲ್ಲನುತ್ತಮದಾನಿ ಸ
ತ್ಪುರುಷನುನ್ನತಧಾರ್ಮಿಕಂ ಪ್ರಭು ಸಾಯಲಾಗದು ಸತ್ತೊಡಂ
ಸುರನಿವಾಸಮಮೋಕ್ಷಮಕ್ಕುಮವಂಗೆ ನಿಶ್ಚಯಮೆಂದು ಭೂ
ಧರಜನಂ ಗುಣವಂತರಂ ದಯೆಯುಕ್ತರಂ ಸುಜನರ್ಕಳಂ ॥ ೬೦

ನುಡಿವುದಱಿಂ ಧರ್ಮಮೊಳ್ಳಿತ್ತೆಂಬುದುಮಂ ತದ್ಧರ್ಮಮಂ ತಾಳ್ದಿರ್ದ ಮಹಾಪುರುಷರ್ಗೆ ಸ್ವರ್ಗಾಪವರ್ಗಮುಂಟೆಂಬುದುಮಂ ನಂಬುವುದು ॥ ೬೧

ಅವನೀವಲ್ಲಭ ಮುಂಪೇ
ೞ್ದವಱಿಂದಂ ನಂಬು ಜೀವನುಂಟೆಂಬುದನು ।
ತ್ಸವದಿಂದೆ ಬಱಿದೆ ಗೞಿಪುವ
ಕುವಾದಿಗಳ ಮಾತನಣಮು ನಂಬದಿರಿನಿಸಂ ॥ ೬೨

ಎಂಬುದುಂ ಬಲಿ ತನ್ಮುನೀಂದ್ರರ ವಚನಕ್ಕೆ ತುಂಬುರುಗೊಳ್ಳಿಯಂತೆ ಸಿಡಿಲ್ದು ಮುನಿರಾಜಹಂಸಂಗಭಿಮುಖನಾಗಿ ॥ ೬೩

ಶರನಿಧಿಯೊಡನೊರ್ಮೆಗೆ ಮು
ಚ್ಚರಿಸಿ ಕೊಳಂ ಪೊಣರ್ವ ತೆಱದಿನಂಗಜಮದಸಂ ।
ಹರನೊಳ್ ತನ್ನಳವಱಿಯದೆ
ಗುರುಲಘುವೆಂದಱಿಯದುಕ್ಕಿ ಸಱಿ ಬಲಿ ನುಡಿದಂ ॥ ೬೪

ಏನೆಂದಱಿಯದೆ ಮಸಗಿದ
ಮಾನಕಷಾಯದಿನುದಗ್ರಚಿತ್ತಂ ಬಲಿ ಮ ।
ತ್ತಾನಿವರೊಳ್ ನುಡಿದು ಬಱಿ
ಕ್ಕೀನರಪನ ಸಭೆಯಿನೆಯ್ದೆ ಪೊಗೞಿಸಿಕೊಳ್ವಂ ॥ ೬೫

ಎಂದು ತನ್ನ ಮುನ್ನ ಪಿಡಿದ ಜೀವಭಾವಮನೆ ಬಲ್ವಿಡಿದಿಂತೆಂದಂ ||] ೬೬

ಅರಹಂತನೆಂಬನೆಲ್ಲಿದ
ನರಹಂತನೊಡರ್ಚವೇೞ್ದ ತಪದೊಳ್ ಫಲಮೇ |
ನರಹಂತಂ ಕೊಲಲಾಗಂ
ಬರಿದಪ್ಪು ಧರ್ಮಮದಱೊಳೇಂ ಗಳ ಲಾಭಂ || ೬೭

ಅದೆಂತೆಂದೊಡಮರಸನುಂ ಸಭಾಜನಮುಮವಧರಿಸಿ ! ನೆಲ್ಲುಂ ಪುಲ್ಲುಂ ಕಾಡೆಮ್ಮೆಯುಮೂರೆಮ್ಮೆಯುಂ ಕಾಡ್ಪುಲಸುಂ ಊರ ಪಲಸುಂ ಕಾಡಾವುಮೂರಾವುಂ ಕಾಡ್ಪತ್ತಿಯುಂ ಪತ್ತಿಯುಂ ಕಟ್ಟಿಲೆಯುಂ ಬೆಳಗುಂ ಕುಲಹೀನನುಂ ಕುಲಜನುಂ ಸೂಳೆಯುಂ ಸಜ್ಜನಮುಂ ಕಾಡೆಳ್ಳುಮೂರೆಳ್ಳುಮೆಂತು ಲೋಕದೊಳುಳವೆಂತು ಪೊಲ್ಲರುಮೊಳ್ಳಿದರುಮೊಳರಂತು ತಿರಿಕರುಂ ಸಿರಿವಂತರುಮೊಳರಪ್ಪುದಱಿಂ [ಅರಸನುಂ ಬಡವರುಮೊಳರೆಂತಂತೆ] ಧರ್ಮಮುಂ ಪಾಪಮುಮುಂಟಪ್ಪುದಱಿಂದ ವಱಿ ಫಲಮನೀವಂತಪ್ಪ ಸರ್ವಜ್ಞರುಮೊಳರಾ ಜಿನಸ್ವಾಮಿಯುಮಂ ಪೊಗೆಯಿಂ ಕಿಚ್ಚಂ ಮೊೞಗಿಂ ಮೞೆಯುಂ ಗಾಳಿಯಿಂ ಕತ್ತುರಿಯಂ ಬಣ್ಣದಿಂ ಮದುವೆಯುಂ ದಾಱಿಕಾಱರಿಂದರಸುಗಳಂ ಭೃತ್ಯಕಾಱರಿಂ ದ್ವೀಪಗಳಂ ಜೋಯಿಸರಿಂ ಗ್ರಹಣಮನಱಿವಂತೆ, ಕೊಂದೊಡೆ ಪುಸಿದೊಡೆ ಕಳ್ದೊಡೆ ಪರಸ್ತ್ರೀಗೆಱಗಿದೊಡೆ ಪಿರಿದಂ ಬಯಸಿದೊಡೆ ಪೊಲ್ಲದೆಂದು ಪೇೞ್ವ ಜಿನೇಶ್ವರನಾಜ್ಞೆಯುಂ ಮೀಱಿದೊಡಾಪರಮೇಶ್ವರನ ಸಾಮಂತರಂತೆ ದಂಡನಾಯಕರಂತೆ ಕೊಂದೊಡೆ ಕೊಲ್ವ ಪುಸಿದೊಡೆ ನಾಲಗೆಯಂ ಸೀಳ್ವ ಕಳ್ದೊಡೆ ಸೂಳದೊಳಿಕ್ಕುವ ಬೆಱರ

1 ಪುರಕ್ಕೆ ಬಾರಿರ್ಪುದುಂ ಜಯವರ್ಮಮಹಾರಾಜನವರಲ್ಲಿಗೆ ಬಲಿ ಮೊದಲಾಗೆಲ್ಲಾ ಮಂತ್ರಿಗಳುಂ ವಲ್ಲಭೆಯರುಂ ಮಕುಟಬದ್ಧರುಂ ಬೆರಸು ಬಂದು ಬಲಗೊಂಡು ಪೂಜಿಸಿ ವಂದಿಸಿ ಕುಳ್ಳಿರ್ದು ಧರ್ಮಮಂ ಕೇಳ್ವಲ್ಲಿ ಬಲಿ ಮಾಕೋರ್ಮಂಡಿಂತೆಂದಂ || (ಗ)

ಪೆಂಡಿರ್ಗಳಿಪಿದೊಡೆ ತಲೆಯುನರಿಪೆ ತಂತಮ್ಮ ಮೇಱೆಯುಂ ತಪ್ಪಿದೊಡೆ ದಂಡಮುಂ ಕೊಳ್ವ ಭೂಪಾಲರ ನಾಡವರ ಮಾಟದಿಂದೆ ಮುಂಬಟ್ಟೆಗಳೂರಂ ಪೊರ್ದಿ ಪೋಪಂತೆ ಕೊಲೆ ಪುಸಿ ಕಳವು ಪಾರದಾರಂ ಬಹುಕಾಂಕ್ಷೆ ಧರ್ಮಮಲ್ಲದೆನೆ ಜಿನವಲ್ಲಭನ ಮಾತನೆ ಪೊರ್ದಿ ನಡೆವವರ ಸಮಯಂಗಳಿಂದಮುಂ ಕೊಲ್ವ ಪುಸಿವ ಕಳ್ವ ಪಾದರವಾಡುವ ಮೇಱೆಯಂ ತಪ್ಪುವ ಮಾನಿಸರ್ಗಂ ಕಂಡೊಡೆ ಪಂಚಮಹಾಪಾತಕರೆಂದು ಬೈವ ನಾಡವರ ಬೈಗುಳ್ಗಳಿಂದಮುಂ, ಕೊಲ್ಲಂ ಪುಸಿಯೆಂ ಕಳಂ ಪಾದರಿಗನಲ್ಲಂ ಪೆಱರರ್ಥಮಂ ಕೊಳ್ಳನೆಂದು ಕೀರ್ತಿಮೊದಲಾಗೊಡೆಯ ದಿವ್ಯಂಗಳಿಂ ಶುದ್ಧರಾಗಿ ಪೋಪರಿಂದಮುಂ, ಕೊಲ್ಲದ ಧರ್ಮದೊಳ್ ಧರ್ಮಪುತ್ರನಂ ಸತ್ಯದೊಳ್ ಕರ್ಣನಂ ಕಳವಿಲ್ಲೆಂಬುದಱೊಳ್ ಅರ್ಜುನನಂ ಶೌಚದೊಳ್ ಗಾಂಗೇಯನಂ ನಿಷ್ಪರಿಗ್ರಹದೊಳ್ ರಾಮನಂ ಕೊಂಡು ಕೊನೆದು ಪೊಗೞ್ವ ಪುರಾಣಂಗಳಿಂದಮುಮಱಿವುದು ॥ ೬೮

ಮೋನದೊಳಿರ್ಪ ಜಿನೇಶ್ವರ
ನೇನಂ ಪೆಱರ್ಗೀತ್ತನೆಂದು ನುಡಿವುದು ಲೋಕಂ ।
ಭೂನಾರೀಶ್ವರ ಕುಡುವೊಡೆ
ಮೋನದೊಳಿರ್ದರ್ಹನೀಗುಮೆಂದು ಸಂದೆಯಮೇ ॥ ೬೯

ಅದೆಂತೆಂದೊಡೆ ನೆಲನುಂ ಬಟ್ಟೆಯುಂ ಸೊಡರುಂ ಮನೆಯುಂ ಮೋನಿಗಳಾಗಿದರ್ಗಂ ಬಿಡದೆ ತಮ್ಮಂ ಪತ್ತಿ ನಡೆವೊಕ್ಕಲಿಗಂಗಂ ನಡೆವಂಗಂ ಅಱಸುವಂಗಂ ಪೊಕ್ಕಿರ್ಪಂಗಂ ಧಾನ್ಯಮುಮಂ ಬಯಸಿದೆಡೆಯುಮಂ ಕುಸುಕಱೊಳಿರ್ದ ಮುಟ್ಟುಮಂ ನಿರ್ಬಾಧೆಯುಮಂ ಕುಡುಗಂತೆ ವೀತರಾಗನಪ್ಪ ಜಿನಸ್ವಾಮಿಯುಂ ಸ್ವರ್ಗಮೋಕ್ಷಸುಖಮಂ ತನ್ನನೆ ಬಿಡದೆ ಪತ್ತಿರ್ದ ಮೋನಿಸಂಗಂ ಕುಡುಗುಂ ॥ ೭೦

ತೊಱೆಯುಂ ಶಾಸ್ತ್ರಮುಮೆಮ್ಮೆಯುಂ ಪಶುಗಳುಂ ಬೀಜಂಗಳುಂ ಕೆಯ್ಗಳುಂ
ಕೆಱೆಯುಂ ಪಳ್ಳಮುಮೆಯ್ದೆ ಪಣ್ತ ಮರನುಂ ತೋಂಟಂಗಳುಂ ವೆಳ್ಳಿಯುಂ

ಮೆಱೆವಾ ವಸ್ತುಗಳಂ ಜಿನೇಶ್ವರಸರ್ವ್ವೋಲತ್ಯಂತದಿಂ ದುಃಖಮಂ
ಮೆಱೆದಂಗೀವುವು [1] ವೀತರಾಗಮತಮಂ ಬಿಟ್ಟೀವ್ರವೇ ಲೋಕದೊಳ್ ॥

ಅದುಕಾರಣದಿಂ ಸಕಲವೆಲ್ಲಂ ಜಿನೇಶ್ವರನೊಡಗೂಡಿ ಮೋನಿಗಳಾಗಿ ಫಲಮಂ ಕುಡುವುವಲ್ಲದೆ ತಮಗೆ ತಾವೆ ಕುಡುವುವಲ್ಲಂ ॥ ೭೦

ವಿದಿತಂ ಜಿನೇಂದ್ರರೂಪ
ಪ್ಪುದು ನಿರ್ಗ್ರಂಥಂ ಸಮಂತದಂ ನೆಱೆ ತಾಳ್ದ ।
ರ್ಪುದು ದಿವ್ಯಮಪ್ಪ ತಪಮಂ
ತದಱಿಂದಂ ಸಕಲಸೌಖ್ಯಮುಂ ಕೈಸಾರ್ಗುಂ ॥ ೭೧

ನೆಲಂ ನಿರ್ಗ್ರಂಥಮಾದೊಡೆ ಬಿತ್ತುವಂಗೆ ರಾಗಂ, ಗಗನಂ ನಿರ್ಗ್ರಂಥಮಾದೊಡೆ ಮದುವೆಗುತ್ಸವಂ, ನೀರ್ ನಿರ್ಗ್ರಂಥಮಾದೊಡೆ ಕುತ್ತರ ಕೇಡು, ಕಿಚ್ಚುರ್ ನಿರ್ಗ್ರಂಥಮಾದೊಡೆ ಅಡುಗೆಯ ಕಾರ್ಯಂ, ಅಕ್ಕಿ ನಿರ್ಗ್ರಂಥಮಾದೊಡೂಟದ ರುಚಿ, ಪಾಲ್ ನಿರ್ಗ್ರಂಥಮಾದೊಡಳೆಯ ಸವಿ, ಸೂರ್ಯಂ ನಿರ್ಗ್ರಂಥಮಾದೊಡೆ ದಿವಸಶುದ್ಧಿ, ಚಂದ್ರಂ ನಿರ್ಗ್ರಂಥಮಾದೊಡೆ ರಾತ್ರಿಶುದ್ಧಿ, ಮನಂ ನಿರ್ಗ್ರಂಥಮಾದೊಡೆ ಕಾರ್ಯದೊದವು, ರತ್ನಂ ನಿರ್ಗ್ರಂಥಮಾದೊಡೆ ಬೆಲೆಯ ಪೆರ್ಚು, ಪೊನ್ ನಿರ್ಗ್ರಂಥಮಾದೊಡೆ ಮನ್ನಣೆಯುಕ್ಕುಂ; ಅಂತೆ ಜಿನೇಶ್ವರನ [2] ತಪದ ನಿರ್ಗ್ರಂಥದಿಂದಮೆ ಲೋಕದ ಕಾರ್ಯಂಗಳೆಲ್ಲಂ ಸಿದ್ಧಿಯಕ್ಕುಂ॥ ೭೨

ಧರೆಯುಂ ಪುಟ್ಟಿದ ಮಕ್ಕಳುಂ ದಿನಪನುಂ ಗೋವೃಂದಮುಂ ವಾರಣೋ
ತ್ಕರಮುಂ ವ್ಯೋಮಮುಮಬ್ಧಿಯುಂ ತುಗಗಮುಂ ಕಿಚ್ಚುಂ ತರುವ್ರಾತಮುಂ
ಗಿರಿಯುಂ ಲೋಕದೊಳಾದ ವಸ್ತುವನಿತುಂ ನಿರ್ಗ್ರಂಥಮಪ್ಪಾಜಿನೇ
ಶ್ವರಮುದ್ರಾಂಕಿತಮಲ್ಲದುಂಟೆ ಜಗದೊಳ್ ಮತ್ತನ್ಯಸಲ್ಲಾಂಛನಂ ॥೭೩

1 ದುಃಖಮಂದಱಿದಂಗೀವುವು (ಕ. ಖ.)

2 ಜಿನೇಶ್ವರಂ ಪೇಳ್ದ ಮುನಿನಿರ್ಗ್ರಂಥದಿಂದಂ ಮೇಲಾದ ಲೋಕದ ಕಾರ್ಯಂ(ಗ)

ಬತ್ತಲೆ ಪೂಜ್ಯಮಲ್ಲದೊಡೆ ಬತ್ತಲೆಯಪ್ಪ ದಿನೇಶಬಿಂಬಮಂ
ಬತ್ತಲೆಯಿರ್ಪ ಮಕ್ಕಳುಗಳಂ ರತಿಯಿಂ ನೆರೆವಲ್ಲಿ ರಾಗದಿಂ
ಬತ್ತಲೆಯಿರ್ಪ ಪೆಂಡತಿಯನೋವಣಿಕಂ ನೆಱೆ ಕಂಡು ಮಾನಿಸರ್
ಸತ್ತವರಂತಿರೆ ಭಾವಿಪೊಡೆ ಬತ್ತಲೆಯಿಲ್ಲದ ವಸ್ತುವಾವುದೋ ॥ ೭೬

ಸವಣರನಣ್ಣ ಕಂಡೊಡತಿದೋಷಮೆ ಪುಟ್ಟುಗುಮೆಪ್ಪೊಡುರ್ವಿಯೊಳ್
ಬವರಮದೇಕೆ ಬೇಡವಡೆಯುಂ ಕೊಲುವಗ್ಗದ ಕಳ್ಳರಪ್ಪರಂ
ವಿವರಿಸೆ ನಾಯ್ಗಳಂ ಪೊಲೆಯರಂ ಕುಲಹೀನರನುಗ್ರರಂ ಮಹೋ
ತ್ಸವದೊಳ್ ಕಂಡೊಡಲ್ಲಿ ಪರಿಪೂರ್ಣತೆಯಕ್ಕುಮೆ ಪುಣ್ಯಬಂಧದಾ ॥ ೭೭

ಋಷಿಯರನಾಗಳುಂ ಕಾಣ್ಬವರ ಮನೆಯ ಪಶುಗಳುಮೆಮ್ಮೆ ಗಳುಂ ಕಱೆಯುವೆ, ಬಾಡುಮಕ್ಕಳುಂ ಬೇಯುವೆ, ಪುಳ್ಳಿಯುಳ್ಳೊಡಂ ಕಿಚ್ಚುರಿಯುವೆ, ಮಕ್ಕಳುಂ ಮೊಮ್ಮಗಳುಂ ಸಾವುವೆ, ಉಂಡೊಡಂ ಪಸಿವು ಪೋಗದೆ, ನೀರುಂ ಕೂೞುಂ ರುಚಿಯಾಗವೆ? ಅದಱಿಂ ಕಾಣದೊಡೆ [1] ಲೇಸೆಂಬುದುಮನೇತಱಿಂದಱಿಯಲಕ್ಕುಂ ॥ ೭೮

ಸಿರಿಯಿಂ ಮೆಯ್ಯ್ಱಿಯದ ಮ
ರ್ತ್ಯರೆಲ್ಲರುಂ ನೂರ್ವರುಷಮುಂ ಬಾೞ್ಪವರುಂ ।
ಪರಮಾರ್ಥಂ ಕಾಣದೆ ಋಷಿ
ಯರ ರೂಪಂ ಶ್ರೀಯುಮಾಯುಮಂ ತಾಳ್ದದರೇ ॥ ೭೯

ಕೂೞಿಲ್ಲದೆ ತಿರಿವವರುಂ
ಬಾೞಿಮೆಯೊಳ ಸತ್ತ ಮನುಜರುಂ ಋಷಿರೂಪಂ ।
ಕೇಳ ಗಳ ಕಂಡು ತಿರಿವರೆ
ಪೇೞಿವರೋರಂತೆ ಸತ್ತರೇ ಭೂತಳದೊಳ್ ॥ ೮೦

1 ಅವರೇಂ ಸಾವರೆ ಋಷಿಯರ ಕಾಣದರ ಮನೆಯ ಪಶುಗಳ್ ಮೊಕ್ಕಳಂ ಕಱೆವುವೆ, ಬಾಡುಮಕ್ಕಳುಂ ಬೇವುವೆ ಪುಳಿಯಿಲ್ಲದೊಡಂ ಕಿಚ್ಚುರಿವುವೆ ಮಕ್ಕಳು ಮೊಮ್ಮಗಳುಂ ಸಾಯುವ ಉಣ್ಣದೊಡಂ ಪಸಿವಾಗದೇ ನೀರುಂ ಕೂೞುಂ ರುಚಿಯ ಪ್ಪುವೆ ಯೆಂದಿಂಗಂ ಬಾಳ್ವರೆ ಋಷಿಯರಂ ಕಂಡೊಡೆ ಪೊಲ್ಲೆಂಬುದುಮಂ ಕಾಣ ದೊಡೆ (ಗ)

ಪೆಂಡಿರ ಪರಿಭವದಿಂದಂ
ಪಾಂಡವರುಂ ರಾಮಚಂದ್ರನುಂ ವನದೊಳ್ ಗೋ ।
ಳುಂಡೆ ಗೊಳುತಿರ್ದರವರೇಂ
ಕಂಡರೆ ಮೆಂ ದಿವ್ಯಮಪ್ಪ ಋಷಿಯರ ರೂಪಂ ॥ ೮೧

ಭರತನುಮಾಶತ್ರುಘ್ನನು
ಮೆರವರಿಸದೆ ಗಂಡನಪ್ಪ ದುರ್ಯೋಧನನುಂ ।
ಧರೆಯುಂ ಪಲಕಾಲಂ ಋಷಿ
ಯರ ರೂಪಂ ಕಾಣದಾಳ್ದರೇ ಪೇೞಿಮಿದಂ ॥ ೮೨

ಪುರದೊಳಗಣ ಪಾರುವರೆ
ಲ್ಲರುಮಂ ಮತ್ತನ್ಯಸಮಯಿಗಳುಮಂ ಕಕ್ಕರ ।
ಭರದಿಂದಂ ಕಂಡುಂ ಸಾ
ವರಮೋಘಂ ಸೀಳ್ದು ಕೊಳೆ ತಳಾಱರ ಕೈಯೊಳ್ ॥ ೮೩

ಎಂದುಂ ಋಷಿಯರ ಕಾಣದ
ಸಂದೂರೊಳಗಣ್ಣ ವಿಪ್ರರಂ ಪೊರ್ದಿರ್ದರ್ ।
ಸಂದ ತಿರಿಕರ್ಗೆ ಬಡತನ
ಮೆಂದುಂ ಪಱಿಪಟ್ಟುದಿಲ್ಲದೇನಚ್ಚರಿಯೋ ॥ ೮೪

ಬಸದಿಗಳ ಋಷಿಯರೆಂಬರ
ದೆಸೆಯಿಲ್ಲೆಂಬಗ್ರಹಾರದೊಳಗಿರ್ದರ್ ಚಿಂ ।
ತಿಸುವುದುಮಂ ಸಾವುದುಮಂ
ವಸುಮತಿಯೊಳ್ ತಿರಿಯುತಿರ್ಪುದುಮನೇಕುಱಿಯರ್ ॥ ೮೫

ಕಾಳಗದೊಳಂಬುಗಳ್ಕಳ
ಗೋಳಟ್ಟೊಳಱುತ್ತುಮಿರ್ಪ ಪೆರ್ಮೆಣವನಾ ।
ಕಾಳಗದೊಳೇನೊ ಕಂಡು ವೃ
ಥಾಳಾಪಿಗಳಣ್ಣ ಸತ್ತರೇ ಪೇೞಿಮಿದಂ ॥ ೮೬

ಜ್ವರದಿಂ ವಾತದಿನುಷ್ಣದಿಂ ಮೞುಕದಿಂ ಕಣ್ಬೇನೆಯಿಂ ಖಾಸದಿಂ
ಕುರುವಿಂ ಗೋಳಿಡುತಿರ್ಪವರ್ ಸವಣರಂ ಮುಂ ಕಂಡರೇ ಕುತ್ತದೊಳ್
ಪೊರಳುತ್ತಿರ್ಪವರನ್ಯಲಿಂಗಿಗಳ ರೂಪಂ ಕಂಡು ತದ್ಬಾಧೆಯು
ಬ್ಬರದಿಂ ಪಿಂಗಿ ಪೊಡರ್ಪುಗುಂದದೆ ಮಹಾಸಂತೋಷದಿಂದಿರ್ದರೇ ||೪೭

ಸವಣರುಮಂ ಸಚ್ಛ್ರಾವಕ
ನಿವಹಮುಮಂ ನೋವು ಸಾವು ಕುತ್ತಂ ಬಂದಾಂ |
ಕುವುವನ್ಯಸಮಯಿಗಳನೊ
ತ್ತವನೆಂಬುದು ಪಿರಿದುತನಮವರ್ಗಳಗಕ್ಕುಂ || ೪೮

ಕುಂಚಮುಂ ದೋಷಮೆಂಬೊಡೆ ಕುಂಚಮಪ್ಪುದು ಪೀಲಿ, ಪೀಲಿಯುಮಂ ದೋಷಮೆಂಬೊಡೆ ತಪೆಯುಂ ಸತ್ತಿಗೆಯುಂ ಪಿಡಿದು ಬರ್ಪರೆಲ್ಲರುಮಂ ಕಾಣಲಾಗದು; ನಿರ್ಗ್ರಂಥಮುಂ ದೋಷಮೆಂಬೊಡೆ ಮಕ್ಕಳುಂ ಮರಂಗಳುಂ ಪಶುಗಳುಂ ನಿರ್ಗ್ರಂಥಮಮಂ ಕಾಣಲಾಗದು; ತಟ್ಟು ದೋಷಮೆಂಬೊಡೆ ತಟ್ಟೆಂಬುದು ಪಸೆ: ಪಸೆಯುಂ ದೋಷಮೆಂಬೊಡೆ ಚೋಳದೇಶಮೆಲ್ಲಮುಪಱ ಮೇಲೆ ಪಟ್ಟಿರ್ಪುದು; ತಿಪ್ರುಳದೇಶದವರೆಲ್ಲರುಮಂ ಕಾಣಲಾಗದು; ಗುಂಡಿಗೆ ದೋಷಮೆಂಬೊಡೆ ಗುಂಡಿಗೆಯಪ್ಪುದು ತೆಂಗಿನಕಾಯ್, ತೆಂಗಿನಕಾಯುಂ ದೋಷಮೆಂಬೊಡೆ ತೆಂಗಿನಕಾಯುಂ ತಿಂಬರುಮಂ [ಮೂಱುಮ ಪರದರುಮಂ] ಕಾಣಲಾಗದು; ಮೀಯದುದು ದೋಷಮೆಂಬೊಡೆ ಚಂದ್ರಾದಿತ್ಯರ್ಕಳೆಂದುಂ ಮೀಯರವರಂ ಕಾಣಲಾಗದು; ಮಲಮಂ ತೊಳ್ದುವುದು ದೋಷಮೆಂಬೊಡೆ ತಿಪ್ಪೆಯುಂ ತೊಳ್ದದ ನೆಲನುಮಂ ಗೊಬ್ಬರಮನೊಳಕೊಂಡ ಕೆಯ್ಗಳುಮಂ ಕಾಣಲಾಗದು; ವಮನಂಗೆಯ್ದು ನೀರಂ ಕುಡಿಯದುದೆ ದೋಷಮಪ್ಪೊಡೆ ಪ್ರತಿಜ್ಞೆಯಿಂ ಕುಡುವರಸುಗಳುಮನಂಕಂಗಳುಮಂ ಕಾಣಲಾಗದು; ನಿಂದುಣಿಸು ದೋಷಮೆಂಬೊಡೆ ಜೀವಧನಂಗಳುಮಂ ಮರಂಗಳುಮಂ ಕಾಣಲಾಗದು; ಕಯ್ಯೊಳುಂಬುದು ದೋಷಮೆಂಬೊಡೆ ಆನೆಯುಮಂ ಕಾಣಲಾಗದು; ಲೋಚು ದೋಷಮೆಂಬೊಡೆ ತಿರ್ದದ

ಪುರ್ವಿನವರಂ ತಿರ್ದಿದ ಮೀಸೆಯವರಂ ಕಾಣಲಾಗದು; ಪಂಚಮಹಾವ್ರತಂಗಳಂ ತಾಳ್ದುವುದು ದೋಷಮೆಂಬೊಡೆ ಪಾಂಡವರಂ ಭೀಷ್ಮರಂ ಕರ್ಣನಂ ಪೊಗೞ್ವ ಮನುಷ್ಯರಂ ಕಾಣಲಾಗದು; ಪಲ್ಲಂ ಸುಲಿಯುದುದು ದೋಷಮೆಂಬೊಡೆ ಕೊಡುಗೂಸುಗಳುಮಂ ಕುಮಾರರುಮಂ ಕಾಣಲಾಗದು; ಮೋಕ್ಷಸಾಧಕರಪ್ಪ ಋಷಿಯರಂ ಕಂಡೊಡೆ ಲೇಸಲ್ಲದೆ ಪೊಲ್ಲೆಂಬುದಕ್ಕೆ ಕಾರಣಮಿಲ್ಲ ॥ ೮೯

ಪಶುವಿನ ಜಿಹ್ವೆಯೊಳ್ ಪೊಲೆಯರಿರ್ಪೆಡೆಯೊಳ್ ಸುಧೆ ದೇವಿ ಪದ್ಮದೊಳ್
ಮಿಸುಗುವ ಲಕ್ಷ್ಮಿ ಪೊರ್ದಿ ನೆಲಸಿರ್ಪಳೆಂಬ ಮಹಾತ್ಮರೊಂದಿ[1] ಗ
ರ್ಜಿಸಿ ಋಷಿಯರ್ಕಳಂ ಮುನಿಸಿನಿಂದಱಿಯಲ್ಕೆ ತಗುಳ್ದು ಕಂಡೊಡು
ಬ್ಬಸಮವಕಾರ್ಯಮೆಂದು ಬಿಡೆ ದೂಱುವರೆಂಬುದಿದಾವ ವಿಸ್ಮಯಂ ॥

ಮತ್ತಂ ಪೊಗದ ಕೋಂಟೆಯುಂ ಸಾಯದ ಪಗೆಯುಮುಳ್ಳವರ್ ಕೋಂಟೆ ಪೋಪನ್ನೆಗಂ ಪಗೆ ಸಾವನ್ನೆಗಂ ಕಯ್ಯಲುಂಬೆಂ ಪಲ್ಲಂ ಸುಲಿಯೆಂ ಮೀಯೆಂ ಪೆಂಡಿರೊಳ್ ಕೂಡೆಂ ತಲೆಯುಂ ಕಟ್ಟೆಂ ವಿನೋದಮಂ ನೋಡೆಂ ಆಭರಣಂಗಳನೊಲ್ಲೆಂ ಒರ್ಮೆಯುಂಬೆನೆಂದು ಜಿನೇಶ್ವರನ ಪೇೞ್ದ ತಪದೋಜೆಯಂ ಪೂಣ್ದು ಕೋಂಟೆಯುಂ ಕೊಳ್ವರ್ ಪಗೆಯಂ ಕೊಲ್ವರದುಕಾರಣದಿಂ ಸ್ವರ್ಗಾಪವರ್ಗದುರ್ಗಮಂ ಸಾಧಿಸುವುದಕ್ಕಂ ಕರ್ಮವೈರಿಗಳಂ ಗೆಲ್ವುದಕ್ಕಂ ಜಿನರ ಪೇೞ್ದ ತಪಮೆ ಮುಖ್ಯಂ ॥ ೯೧

ಜಿನರಂದಮೆ ಜಿನರೋಜೆಯೆ
ಜಿನರೆಂದುದೆ ಜಿನರ ನಡೆವ ನಡೆವಳಿಯೆ ಜಗಂ ।
ಜಿನರ ವಶಮಾಗಿ ನಡೆವುದು
ಜಿನರಾಜ್ಞೆಯನೊಲ್ಲದದಟನೊರ್ವನುಮೊಳನೇ ॥ ೯೨

ಕೊಲೆ ಪುಸಿ ಪರವಧುಸಂಗಂ
ಕಳವೆಂಬಿವು ಬೇಡ ಬೇಡ ಬೇಡೆಂಬೀನಿ ।

1 ಪೊರ್ದಿದ ಮಹಾತ್ಮರೊಳೊಂದಿಯೆ ಪತ್ತಮಲ್ಲಿ (ಗ)

ಮೆರ್ಗಳ್ವೀತರಾಗನಾಜ್ಞೆಯು
ನುಱಿದಣ್ಣ ಪೊತಪುರ್ಗೆಯ್ವ ಗಂಡರುಮೊಳರೇ ॥ ೯೩

ಕಳ್ಗೊಂದನೆ ಶೈವಾದಿಗ[1]
ಳೆಲ್ಲಂ ಜಿನಮತಮನುಱಿದೆ ಲೇಸೆಂದಾದರ್ಮ |
ಕಳ್ಳಂ ಕುಡಿವರನೆಲ್ಲಂ
ಪೊಲ್ಲೆಂಬಿದನಣ್ಣ ಮೋಹಿಸಲ್ಕೆ ಜಿವರೆ ಪೇಟ ॥ ೯೪

ಅಡಗೊಂದನೆ ಜಿನರಾಜ್ಞೆಯು
ನಡೞಿ ಮಹೀತಳದೊಳಕ್ಕಱಿಂ ತಿಂದುಂ ತಾ |
ಮಡಗಟ್ಟ ಮಡಕೆಗಳನೊಳ
ಗಿಡಲಾರ್ಪರೆ ಪಾಲ ಕೆಲದೊಳಂ ಬೋನದೊಳಂ ॥ ೯೫

ಕೊಲೆವೇಡೆಂಬೀ ಜಿನರು
ಜ್ಜ್ವಳರಾಜ್ಞೆಗೆ ತಪ್ಪಿ ಸೈಂಧವಂ ಕೊಂದು ಮಹಾ |
ಬಲನರ್ಜುನನಿಂದಱಿದಂ
ನೆಲದೊಳ್ ಜಿನರಾಜ್ಞೆಗೆಱಗದಂಗದು ಪಿರಿದೇ ॥ ೯೬

ಪುಸಿ ಬೇಡೆಂಬೀ ಜಿನಪತಿ
ಯೆಸೆವಾಜ್ಞೆಯುನೊಕ್ಕು ಧರ್ಮಜಂ ಲೋಕಕ್ಕಂ |
ಪುಸಿದಣ್ಣದೊಂದು[2] ಕಷ್ಟಂ
ಪೆಸರ್ವಡೆದಂ ಪೊಲ್ಲನೆಂದು ಧರೆ ದೂಱುವಿನಂ ॥ ೯೭

ಪರವನಿತೆಯಾಗದೆಂಬೀ
ಯರುಹತ್ಪರಮೇಶ್ವರಾಜ್ಞೆಯಂ ಮೀಱಿ ಸುರೇ |
ಶ್ವರವೈರಿ ರಾವಣಂ ರಾ
ಮರ ಕೈಯೊಳ್ ಸತ್ತನಾಱಳಂಗದು ಪಿರಿದೇ ॥ ೯೮

---

1 ವೈಶ್ಯಾದಿಗ (ಗ)   2 ಕುಂಭಕನಾ ಪುಸಿದಣ್ಣ ಕೊಂಡು (ಕ)

ಮೇರೆಯೊಳ್ ನಿಲ್ವಿನಂಬೀ
ವೀರಜಿನಾಧೀಶನಾಜ್ಞೆಯಂ ಮೀಱಿ ಕರಂ ।
ಕೌರವಪತಿ ದುರ್ಯೋಧನ
ನಾರಯ್ಯದೆ ಸತ್ತನೆಂಬುದಂ ಕೇಳ್ದಱಿಯಾ ॥ ೯೯

ಜಿನನಾಥನ ಮುದ್ರೆಯಿ ಲೋ
ಕಂ ನಡೆವುದು ನಡೆವ ಲೋಕದ ಕ್ರಮಮುಂ ನೆ ।
ಟ್ಟನೆ ಜಿನರ ನುಡಿಯೆ ಭಾವಿಪೊ
ಡಿನಿತಱೊಳೊಂದೂನಮುಂಟೆ ವಸುಧಾಧಿಪತೀ ॥ ೧೦೦

ನಾಡವರೆಲ್ಲಂ ಚಕ್ರವರ್ತಿಯನಱಿಯದನಿತಱಿಂ ಚಕ್ರವರ್ತಿಯಿಲ್ಲೆನಲ್ಬಾರದು, ಗೌಂಡಗಳುಂ ಪಲ್ಲೊಕ್ಕಲ್ಗಳುಮಱಿವೊಡೆ ಸಾಲ್ಗುಂ; ಜಗಮೆಲ್ಲಂ ಪೊನ್ನಂ ಪರೀಕ್ಷಿಸಲಱಿಯದನಿತಱಿಂ ಪೊನ್ನಂ ಪೊಲ್ಲೆನಲ್ಬಾರದು, ಪರದರುಮಕ್ಕಸಾಲಿಗರುಮಱಿವೊಡೆ ಸಾಲ್ಗುಂ, ಲೋಕಮೆಲ್ಲಂ ಮರ್ದಿನ ಶಕ್ತಿಯನಱಿಯದನಿತಱಿಂ ಮರ್ದಿಂಗೆ ಶಕ್ತಿಯಿಲ್ಲೆನಲ್ಬಾರದು, ವೈದ್ಯರುಂ ಶಾಸ್ತ್ರಜ್ಞರುಮಱಿವೊಡೆ ಸಾಲ್ಗುಂ; ದೇಶಮೆಲ್ಲಮಕ್ಕರಮನಱಿಯದನಿತಱಿಂದಕ್ಕರಮಿಲ್ಲೆನಲ್ಬಾರದು, ಸೇನಬೋವರುಮಕ್ಕರಿಗರುಮಱಿವೊಡೆ ಸಾಲ್ಗುಂ; ಅಂತೆ ಕಿಱುಕುಳ ವ್ಯಂತರಂಗಳ ಪೊಲ್ಲ ಗ್ರಹಂಗಳ್ ಶೈವಾದಿಗಳ ನೆಗೞ್ವ ಪ್ರಮಾಣಮಲ್ಲದು; ನೆಲನೆಲ್ಲಂ ಕೊಂಡಾಡುವೆಕ್ಕಲವಿರಿಯುಂ ಬನದಬ್ಬೆಯುಂ ಮಹಾಲಕ್ಷ್ಮಿಯುಂ ಕಂಚಿಯ ಕಾಮಕೋಟಿಯುಂ ಕೊಳ್ಳಪಾಕೆಯ ಭೂತಕೋಟಿಯುಂ ಪಿಟ್ಟಾಪುರದ ಮಾರಿಕಬ್ಬೆ ಶಾಕಿನಿಯುಂ [1] ಪೊಣಮಾರ್ಲೆಯ ಮಂಗಳಾದೇವಿಯುಂ ಮೈಲಾಪುರದ ಕಾಮಾಕ್ಷಿಯುಮೆಂಬಿವರ್ಮೊದಲಾದ ಮಹಾವ್ಯಂತರಂಗಳ್ ಮೋನದಿಂ ಮುಟ್ಟಪಡಂ ಬೆರಸಿರ್ಪೊಡಂ ಪೊಲೆಯರ ದನಿಯಪ್ಪೊಡಂ ಕೇಳದಂತು ಕಂಚುವಱಿವೆರಸು ಲೇಸುನುಡಿ ಲೇಸುನುಡಿಯೆಂಬ ಮಹಿಮೆಯಿಂದುೞ್ಬರ್: ಚಂದ್ರಾದಿತ್ಯಗ್ರಹಂಗಳ್

1 ಮಾಕವ್ವೆಯುಸಾನಿಯುಂ (ಕ. ಖ.)

ಕಳ್ಳೆಡಗುಂ ಜೇನುಂ ಗಿಣ್ಣುಣಂಬೆ ಮೊದಲಾದುವಲ್ಲದೆ ಶುದ್ಧಮಪ್ಪಾಹುತಿಯುಂ ಕೊಳ್ಳವು; ದೇವೇಂದ್ರನುಮಗ್ನಿಯುಂ (ಮೊದಲಾದ) ದಿಕ್ಪಾಲಕರೆಲ್ಲರುಂ ಮದ್ಯಮಾಂಸವರ್ಜಿತಮಪ್ಪ ಪೂಜೆಗಳಂ ಕೊಳ್ವರ್; ಮೋನದಿಂ ಮುಟ್ಟುಪಡದಿಂದನ್ನಶುದ್ಧಿಯಿಂ ಪಾತ್ರಶುದ್ಧಿಯಿಂದುಣ್ಬುದು; ತೊವಲ್ ಮೊದಲಾದವಂ ಮುಟ್ಟದೆ ನೋಡದೆ ಕಾಳಾಮುಖರುಂಬರ್; ಕೊಲಲುಂ ಪುಸಿಯಲುಂ ಕಳಲುಂ ಪೆಱರ ಪೆಂಡಿರ್ಗೆಳಸಲುಮಾಗದು, ಜೇನಂ ಗಿಣ್ಣಂ ತಿನವೇಡ, ಮಱಿದುಂ ಯಜ್ಞಶಾಲೆಯೊಳುಣವೇಡ, ನಾಯ್ಮೊದಲಾದ ಪ್ರಾಣಿಗಳಂ ನೋಯಿಸವೇಡೆಂದು ವ್ರತಂಗಟ್ಟುವಲ್ಲಿ ಮಾಣಿಗಳಂ ಬ್ರಾಹ್ಮಣರ್ ನಿಯಮಿಸುವರಪ್ಪುದಱಿಂ ಲೋಕಮೆಲ್ಲಂ ಜಿನರಾಜ್ಞೆಯಿಂ ನಡೆದಪುದೆಂದಱಿಗೆ ॥ ೧೦೧

[ಮನೆದೈವಮುಣ್ಮೆಂದೊ
ಯ್ಯನೆ ಪೊಲಸಂ ತಿಂಬ ಮನುಜರುಂ ಪೊಲಸಿನ ಭಾ।
ಜನಮುಂ ಪೊಱಗಿರಿಸುವರೆನೆ
ಜಿನಪತಿ ಬೇಡೆಂಬ ವಸ್ತುಮಂ ಮನ್ನಿಪರಾರ್ ॥ ೧೦೨

ನಿನ್ನೊಳ್ ಧರ್ಮದ ಪೆಂಪುಂ
ನಿನ್ನೊಳ್ ವಿಸ್ತರಮುಮೆಸೆವುವೆಂದೊಡೆ ನಲಿವರ್।
ಮುನ್ನಂ ಪಾತಕರಾದೊಡ
ಮಿನ್ನದಱಿಂ ಜಿನರ ನುಡಿಗೆ ಸೋಲದರೊಳರೇ ॥] ೧೦೩

ಪರವನಿತೆಗೆಱಗದುದುಮ
ನ್ಯರ್ಥಮಂ ಬಯಸಲೊಲ್ಲದದು ನಿನಗೆಸೆಗುಂ।
ಕರಮೆನೆ ದುಷ್ಟನುಮೊಸಗೆನೆ
ಪರಮಜಿನಾಧೀಶರಾಜ್ಞೆಗೊಸೆಯದರೊಳರೇ ॥ ೧೦೪

ಕೊಲೆಯುಮಸತ್ಯಮುಮಿವನೊಳ್
ನೆಲಸಿರ್ದುವೆನೆ ಕೊಲ್ವ ಪುಸಿವ ಕಷ್ಟಂ ಬಿಡದು।

ವ್ಮ್ರಳಿಸಿ ಕಡುನೋವನೆನೆ ಭೂ
ತಳದೊಳ್ ಜಿನರಾಗದೆಂಬುದಂ ಮನ್ನಿಪರಾರ್ ॥ ೧೦೫

ಕಳ್ಳನುಮಂ ಪರಪನಿತೆಗೆ
ನಲ್ಲನುಮಂ ಕಂಡು ನೀನೆ ಪಾರ್ದಿಗಂ ನೀಂ ।
ಕಳ್ಳನೆನೆ ಮುನಿವರೆನೆ ಜಿನ
ವಲ್ಲಭನಾಗೆಂಬುದಕ್ಕೆ ನಲಿವರುಮೊಳರೇ ॥ ೧೦೬

ನೆಱೆ ಕಳ್ಗಡುಹಿಗಳಂ ಕಂ
ಡಱಿಯದೆ ಕಳ್ಗಡುಹಿಯೆಂದೊಡಾನುಡಿಗೆ ಕರಂ ।
ಮಱುಗುವರೆನೆ ಜಿನರಾಗಂ
ಬೞಿಕೆಯು ಕಳ್ಳಂಗೆ ಮುನಿಯದಿರ್ಪವರೊಳರೇ ॥ ೧೦೭

ಸೊಪ್ಪಾದ ಪೊನ್ನುಮಂ ಕಪ್ಪಾದ ರತ್ನಮುಮಂ ಪೆಸರ್ವೋದ ಪೆಂಡತಿಯುಮುಂ ಮುಕ್ಕುರ್ವೋದ ಸುರಿಗಿಯುಮಂ ತೂಂತುವೋದ ಮಡಕೆಯುಮಂ ಲೋಕಂ ಕೈಕೊಳ್ಳರೆಂದೊಡೆ ಮೆಯ್ಯೆಲ್ಲಂ ದೋಷಿಯಪ್ಪ ದೇವನನೆಂತುಂ ಕೈಕೊಳರ್, ವ್ಯಸನಿಗಳಪ್ಪರೆ ಕೊಂಡಾಡುವರ್; [1] ಜಗದೊಳ್ ಕೊಲ್ಲದರುಂ ಕೊಲ್ವರುಂ ಕಳದವರುಂ ಕಳ್ವರುಂ ಪರಸ್ತ್ರೀಗೆಱಗದರುಂ ಪಾರ್ದಿಗರುಂ ಮೇರೆಯಿಂ ನಡೆವರುಂ ಮೀಱಿ ನಡೆವರುಂ ಕಳ್ಳಂ ಕುಡಿಯದರುಂ ಕಳ್ಳಂ ಕುಡಿವವರುಮುಳ್ಳೊಡಂ ಪೊಲ್ಲದಂ ಬಿಟ್ಟು ಜಿನರಾಜ್ಞೆಯಿಂ ನಡೆವ ಮೊದಲವರ್ಗಳುಂ ಪೆಸರ್ಗೊಳ್ವರಪ್ಪುದಱಿಂದಮುಂ, ಧಾನ್ಯದೊಳಕ್ಕಿ ಪಾಲೊಳ್ ತನಿವಾಲ್ ತುಪ್ಪದೊಳ್ ಬೆರಸದುದು ಬಂಟರೊಳ್ ನಿಚ್ಚಟಗಲಿ ತೊಡವಿನೊಳುಜ್ಜಳಿಕೆ ಸಿರಿಯೊಳ್ಕ್ರಡಿ ಕಾಲದೊಳಗ್ಗಳಿಕೆ ರಾಜ್ಯದೊಳಸಹಾಯತನಮು

[1] ವ್ಯಸನಿಗಳಲ್ಲದವರ್ ನಿರ್ದೋಷಿಯಪ್ಪ ದೇವನನೆ ಕೈಕೊಳ್ವರಪ್ಪುದಱಿಂದಮುಂ ತೆಂಗಿನಕಾಯು ತಿರುಳುಂ ನಾರುಂ ಊರೊಳ್ ಶುದ್ಧರುಂ ಕಳ್ಳರುಂ ಮನೆಯೊಳಿರ್ಪೆಂಡಿರುಂ ತೊತ್ತಿರುಂ ಕೆಯ್ಯೊಳು ಸಸಿಯುಂ ಪುಲ್ಲುಂ ಬೆರಸಿರ್ಪುದಂ ಮುಖ್ಯಮಪ್ಪುದನೆ ಪೆಸರ್ಗೊಳುವಂತೆ. (ಗ)

ಮಪ್ಪ ನಿರ್ಗ್ರಂಥಮೆನೆ ಜನಂ ಬಯಸುವುದಱಿಂದಮುಂ ಲೋಕಮೆಲ್ಲಂ ಜಿನರೋಜೆಯೆ ಜಗಮೆಲ್ಲಂ ಜಿನರ ನಡೆವಳಿಯೆ ಸಕಲಮೆಲ್ಲಂ ಜಿನರಾಜ್ಞೆಯೆ ಮತ್ತೊರ್ವರ ಮಹಿಮೆಗೆಡೆಯಿಲ್ಲ; ಬಾೞ್ತೆಯುಪ್ಪುವದಱಿಂದಿವೆಲ್ಲಂ [1] ದೈವಮೆಂಬೊಡೆ ಕಾಲ್ಗೆ ಕೆರಪು ಪಸಿವಿಂಗೆ ಕೂೞ್ ತೃಷೆಗೆ ನೀರ್ ತಲೆಗೆಣ್ಣೆ ಬಾಯ್ಗಲೆ ಕೆಯ್ಗೆ ಬೇಲಿ ಶಿಶುವಿಂಗೆ ಪಾಲ್ ಪಶುವಿಂಗೆ ಪುಲ್ ಕುದುರೆಗೆ ಖಾಣಂ ಕಱುವಿಂಗೆ ಪಿಟ್ಟು ಮಡಿಗಸಗಂ ಸೀರೆಗೆ ಪೊಳೆಯು [2] ನಿಂತಿವೆಲ್ಲಂ ದೈವಮಕ್ಕುಂ; ಕೋಪಪ್ರಸಾದಮುಳ್ಳವರೆ ದೈವಮೆಂಬೊಡೆ ಮನ್ನೆಯರುಮರಸರುಂ ತಳಾಱರುಂ ದಂಡಾಧಿಪರುಂ ಪೆರ್ಚಾಳ್ಗಳುಂ ದೈವಮಪ್ಪರ್; ಸಾಮರ್ಥ್ಯಮೆ ದೈವಮೆಂಬೊಡೆ ಸುಣ್ಣದಿಂದರಿಸಿನದಿಂ ಕೆಂಪಪ್ಪುದು [ಎಲೆಯಡಿಕೆಸುಣ್ಣದಿಂ ಪಲ್ ಕಱುಯಪ್ಪುದು] ಅಣಿಲೆತಿಗಡೆಯಿಂ ಬಸಿಱೊಡೆವುದು; ಅಮೇಧ್ಯದ ಮೇಲುಗುಪ್ಪ್ವಡೆ ಗಂಟಲ್ ನೋವುದು; ತ್ರಿಫಲೆಯ ಸೇವೆಯಿಂ ಮಲಶುದ್ಧಿಯಕ್ಕುಂ; ಪುಣಿಸೆಯ ಕೊನರುಮುಪ್ಪುಂ ಕಣ್ಬೇನೆಯುಂ ಕಳವುದು; ಸುಂಟಿಯುಮಮರ್ದುವಳ್ಳಿಯುಂ ಪುಷ್ಕರಮೂಲಮುಂ ಬರಿವದನೆಯುಂ ಜ್ವರದ ಕೇಡು, ತೊಟ್ಟಿಯಲೆಯ ಕಷಾಯಮುಟ್ಕಮೆಯುಂ ಕಳವುದು; ಅಂತಾದೊಡಿವೆಲ್ಲಂ ದೈವಮಕ್ಕುಂ [ಎಂಬುದುಂ ಬಲಿ ಜೀವಸಲ್ಲೆಂದು ನುಡಿವುದುಂ ಅಕಂಪನಾಚಾರ್ಯರಿಂತೆಂದರ್ ‖ ೧೦೭

ಪೆಱಗಣ ಮಾತುಗಳಂ ಮು
ನ್ನಱಿವವರಂ ಮುಂದೆ ಬರ್ಪ ಕಾರ್ಯಮನಿಂತೆಂ ।
ದಱಿಯದು ಜೀವಂ ಜೀವಂ
ಪಱಿದೊಡೆ ಧಾರಿಣಿಯೊಳಱಿಯಲಾರ್ಕುಂ ದೇಹಂ ‖ (?) ೧೦೮

---

1 ಬಾೞ್ತೆಗೆಟ್ಟವೆಲ್ಲಂ (ಕ. ಬ.)

2 ಕುಳ್ಳಿರ್ಪುದಕ್ಕೆ ವ ಣೆ ಪಡುವುದಕ್ಕೆ ಹೊರಟು ತೊಳಸುವುದಕ್ಕೆ ಸಟ್ಟಗಯೆಂಬಿವು ಮೊದಲಾಗೊಂದಕ್ಕೊಂದು ಬಾರ್ತೆಯಾದವಿನಿತಱೊಳ್ ದೈವವಲ್ಲವು; ಕ್ರೂರತ್ವಮೆ ದೈವಮಪ್ಪೊಡೆ ಪುಲಿಯುಂ ಪಂದಿಯುಂ ನಾಯುಂ ತೋಳನುಂ. (ಗ)

ಜಾತಿಸ್ಮರತ್ವದಿಂದಂ
ಭೂತಳದೊಳ್ ತಮ್ಮ ಭವಮನಱಿವರ್ ಕೆಲರುಂ ।
ಪ್ರೀತಿಯೊಳಸುವಿಲ್ಲದೊಡಂ
ತಾತಂಗಾಭವಮನಱಿಯಲೆಂತಾದಪುದೋ ॥ ೧೧೦

ಹಮ್ಮಯ್ಸಿ ಕಿಱಿದುಬೇಟ
ಕ್ಕೊಮ್ಮೆಯೆ ಪೋಪಂದು ಪುಗುವುದಸು ಬೇಗಂ ಜೀ ।
ವಮ್ಮತ್ತಿಲ್ಲಪ್ಪೊಡೆ ತನು
ವಮ್ಮದದಿಂದಂ ಬಱಿಕ್ಕೆ ಪುಗದದದೇನೋ ॥ ೧೧೧

ಪೆಣನಂ ಕಡಿವೊಡೆ ಮಿಡುಕದೆ
ಪೆಣಿಸುದು ಜೀವಮಿರದೆ ದೇಹಮುಳ್ಳೊಡವುದಿಂ ।
ಸ್ನಾಣಕಮಸುವಿಲ್ಲದೊಡೆ ವಾ
ರುಣಿಯೊಳ್ ಸುಡೆ ಕಲಿಯುಲಿಡುಕದಿರ್ಪುದದೇನೋ ॥ (?) ೧೧೨

ಆವಿವರಬ್ಬೆಯೆಯುಯ್ಯನೆ
ಯೀವಿಧಿಯಿಂ ಸತ್ತಪಂದು ಪಿಡಿದುಂಬುವು ತ ।
ದ್ಭಾವದಿಸನೆ ಭೂತಪಿಶಾ
ಚಾವಳಿಗಳ್ ಮರುಳ ಧರೆಯೊಳಸುವಿಲ್ಲೆಂಬಾ ॥ ೧೧೩

ಭರದಿಂದಂ ಗ್ರಹಮಾದಿ ಬಂದು ನುಡಿಸಲ್ ಕೇಳ್ ತದ್ಗ್ರಹಂ ಬಂದು ನಿಷ್ಠುರನೀತಂ ಕಡುಗೋಪದಿಂ ಮುನಿದು ಮುನ್ನೆನ್ನಂ ಕರಂ ಕಾಡಿದಂ ಪಿರಿದುಂ ದರ್ಪದಿನೆಂದು ಪೇೞ್ವುದು ಮಹಾಕ್ರೂರಗ್ರಹಂ ಜೀವನು ರ್ವರೆಯೊಳ್ ತಾನಣಮಿಲ್ಲದಿರ್ದೊಡದನಿನ್ನೇಕೆಂಬುದಂತಾಗ್ರಹಂ ॥ ೧೧೪

ಮತ್ತಂ ಮುನ್ನಿನ ಭವದ ಗಂಡನೀಕೆಗೆ ಮಕ್ಕಳಾಗಲೀಯನೆಂಬ ಪೂರ್ವಭವದ ಪಗೆವಂ ನಿನ್ನನುಣಲೀಯದೆ ಪಲಕಾಲಂ ಗ್ರಹಮಾಗಿ ಪಿಡಿದಿರ್ದಪನೆಂಬ ನಾಡವರ ನುಡಿಯಿಂದಿವರಿಂತಪ್ಪೆಡೆಯೊಳಂತಪ್ಪರಾಗಿ

ಪುಟ್ಟಿದರೆಂದು ಗ್ರಹವಾದಿಗಳ್ ಪೇೞ್ವ ವ್ಯಂತರನ ವಚನಂಗಳಿಂ, ಜಾತಕ ಫಲಮಂ ನೋಡಿ ಪತ್ತೀತಂ ಮುನ್ನಿಂತಪ್ಪಾತನೆಂದು ಪೇೞ್ವ ದೈವಜ್ಞರ ಮಾತುಗಳಿಂ, ಕಲೆವೆರಸಿ ಪುಟ್ಟುವ ಮಕ್ಕಳಂ ಕಂಡುಂ, ಜೀವನೊಳ ವೆಂದಱಿವುದು; ಕೆಮ್ಮನಾನೆಗಂಡತ್ತಿಯುನರಸುವ ಮುಂಗ್ಯೆಯ ಕಂಕಣಮಂ ಕನ್ನಡಿಯಿಂ ನೋೞ್ಪ ಗಾಂಪರಂತೆ ಗಾಪಿಲನಾಗನೆಂದು ಪಲವುದೃಷ್ಟಾಂತಂಗಳಿಂ ಜೀವಸಿದ್ಧಿಯುಂ ಮಾಳ್ಪುದುಂ ಬಳಿ ಪತ್ತಿಂತೆಂದಂ ‖ ೧೧೫

ಭೂವನಿತೇಶ್ವರನಱಿಯದೆ
ಭಾವಿಸದೆ ತಗುಳ್ದು ನಿನ್ನನತ್ಯಾದರದಿಂ ।
ದೇವನೆ ಪಿಂಡನೆ ಯೆಂದೊಡೆ
ದೇಹಂ ನಿನ್ನಂತದೆಂತು ದೊಡ್ಡಿಪನಪ್ಪೈ ‖ ೧೧೬

ಪಲವುಮಾತಂ ಪೆಟ್ಟುವೇೞ್ಕಿ ಗಱಿಪದೆ ಜೀವನುಂಟಕ್ಕುಮಪ್ಪೊಡೆ ನಿನ್ನ ದೇಹಮಂ ಪೊಱಮಟಿಸಿ ಜೀಗಮೊಸರೆಪ ನೆರವಿಗಮರಸಂಗಂ ತೋಱು ಬಱಿದೆ ಮಾತಂ ಬಲ್ಲೆನೆಂದು ನುಡಿಯಲ್ವೇಡೆಂಬುದುಮಕಂ ಪನಾಚಾರ್ಯರಿಂತೆಂದರ್ ‖ ೧೧೭

ಮರುಳ್ ಮರುಳ್ತನದಿಂದು
ರ್ವರೀಶನಾಸ್ಥಾನರಂಗದೊಳ್ ನೀಂ ಪಿತ್ತ ।
ಜ್ವರಮೊದರಂತೆ ಗಱಿವುವ
ಸಿರಿನಿಲ್ಲಪ[1] ನುಡಿವ ಬಡತನಂ ಚದುರಿಕೆಯೋ ‖ ೧೧೮

ಸೊಗಯಿಪ ಪೋಗಿಯೊಳಂ ಜೀ
ನಗೆಗಾಲಮನಣ್ಣ ತೋಱಲಕ್ಕುಮೆ ಪೇೞ್ವೇ ।
ನಗೆಯೊಳ್ ಮಱೆಗೊಂಡನೀಂ
ಬಗೆದಂತಿರೆ ಪೇೞು ತೋಱಲಕ್ಕುಮೆ ಜೀಗಂ ‖ ೧೧೯

[1] ಸರಗಿಲ್ಲದೆ (ಕ.) ಸಿರನಿಲ್ಲದ (ಖ.)

ಅದುಕಾರಣದಿಂ ನೀಂ ನುಡಿಯಲಱಿಯದಂಕಕಾಱನಾಕಾಶಮಂ ನೋಡಿದನೆಂಬಂತೆ, ಎಮ್ಮ ನುಡಿಗುತ್ತರಮಂ ಕಾಣದೇನಾನುಮೊಕ್ಕ ಸಕ್ಕಂ ಗಱಿಪಿದೆಯಾದೊಡಮೇಂ ಪಾಲೊಳಗೆ ತುಪ್ಪಮುಂಟೆಂಬುದುಮಂ ಮರದೊಳಗೆ ಕಿರ್ಚುಂಟೆಂಬುದುಮನೆಲ್ಲರುಂ ಬಲ್ಲನಿತರೊಳ್ ಬಱಿವಪ್ಪರದಕ್ಕೆ ತಕ್ಕ ಕ್ರಿಯೆಯುಮಂ ಮಾಡದೊರ್ಮೆಯೆ ಗಮ್ಮನೆ ತೋಱಬಾರದು ; ಕ್ರಮದಿಂ ಪಾಲಂ ಕಾಸಿ ಹೆಪ್ಪುಸಿಟ್ಟು ಕಡೆದು ಬೆಣ್ಣೆಗೊಂಡು ಪದನಱಿದು ಕಾಸಿದಾಗಳ್ ತುಪ್ಪಮಕ್ಕುಂ ; ಮರನುಮನೋಜಾಯಿಲನಾಗಿ ಪೊಸೆಯೆ ಕಿರ್ಚಕ್ಕುಂ, ಎಳ್ಳಂ ಗಾಣದೊಳಿಕ್ಕಿ ಪಿೞಿಯೆ ಬೞಿಕ್ಕೆಣ್ಣೆಯಕ್ಕುಂ ; ಅಂತೆ ಕರ್ಮವಶದಿಂ ಶರೀರಿಯಪ್ಪ ಜೀವಮನೊರ್ಮೆಯೆ ನಿನಗೆ ತೋಱಲ್ಬಾರದು ; ದಾನಾದಿಧರ್ಮದೊಳ್ ಕೂಡಿ ಏಕಾದಶನಿಲೆಯೊಳ್ ಕೂಡಿದ ಧರ್ಮದೊಳಕ್ಕೆ ದಶಧರ್ಮದೊಳ್ ಕೂಡಿದನಗಾರಧರ್ಮದೊಳಕ್ಕೆ ನೆಗೞ್ದು ಪಾಪಾಂಕುರಂಗಳಂ ಕಿಡೆಸುಟ್ಟು ಮೆಲ್ಲನೆ ಸ್ವಸ್ವರೂಪನಾಗಿ ಶಾಶ್ವತಸುಖದೊಳ್ ಕೂಡಿದಂದು ಬೇಱಕ್ಕುಮಲ್ಲದಂದು ಮನೆಯ ಬಡತನಕ್ಕೆ ಪೊಡೆಯುಂ ಕೊಯ್ದರೆಂಬಂತೆ ಮಾಡಿದೊಡೆ ನಿನಗೆ ಕರ್ಮಬಂಧಮಪ್ಪ ಜೀವಮಂತು ಬೇರ್ಕೆಯ್ದು ತೋಱಲ್ಬಪ್ಪುದು ॥ ೧೭೦

ಸೊರೆಯೊಳಗೆ ತೀವಿ ಮಣ್ಣಂ
ಸರದಿಯೊಳಿಕ್ಕಿದೊಡೆ ನೆಗೆಯಲಾರ್ಪುದೆ ಪಾಪೋ |
ತ್ಕರದೊಳ್ ಬೆರೆಸಿದ ಜೀವೋ
ತ್ಕರಮುಂ ನಿರ್ವೃತಿಗೆ ನೆಗೆಯಲಾರ್ಕುಮೆ ಬೇಗಂ ॥ ೧೭೧

ತಾರಗೆ ಪಗಲೊಳ್ ಪುದುಮಾ
ಕಾರಂ ಮೇಲ್ಕವಿದ ಮುಗಿಲ ಮಱೆಯೊಳ್ ತಮ್ಮಾ |
ಕಾರಂಗೆಟ್ಟಿರ್ಪವೊಲಘ
ಭಾರದಿನಂತಿಂತು ಮಿಡುಕಲಾಱವು ಜೀವಂ ॥ ೧೭೨

ಜಾಂಡಲಕೆಯ ಬೀಜಂ ಭೂ
ಮಂಡಲದೊಳ್ ಪಸುರಡಂಗಿ ಪಾಱುವ ತೆಱದಿಂ |

ಖಂಡಿಸೆ ಪಾಪಸಮೂಹಂ
ಮಂಡಿತಮೋಕ್ಷಕ್ಕೆ ಸಾರ್ಗಮೆಸುಗಿದು ಸಹಜಂ ॥ ೧೬೩

ಎಂದಿಂತು ದೃಷ್ಟಶ್ರುತಾನುಭೂತಂಗಳಿಂದಱಿವುದೆಂದು ಸರ್ವಜ್ಞನುಮಂ ನಿರ್ಗ್ರಂಥಮಪ್ಪ ತಪಮುಮಂ ಮೋಕ್ಷಮುಮಂ ಜೀವಮುಮನುಂಟೆಂಬುದುಂ] ॥ ೧೬೪

ಪಲವುಪೊಗಟ್ತೆಗಳಿಂ ಭೂ
ತಲನಾಥಂಬೆರಸು ಸಭೆಯ ಜನಮೆಲ್ಲಂ ಕೈ ।
ಕೊಳೆಧಿಕಮೆಚನರಚನೆಗೆ
ನೆಲೆಯಾದಂ ಸುಕವಿನಿಕರಪಿಮಾಕಂದಂ ॥ ೧೬೫

ಅಱಿವೆಸರುಂ ಮತ್ತೇನೆಂ
ದಱಿಯದರುಂ ತಿಳಿಯೆ ನುಡಿದನಮೃತದ ಮಳೆಗಳ್ ।
ಕಱೆವಂತೆ ನಚ್ಚೆ ಪಲವುಂ
ತೆಱದಿಂದಂ ಸುಕವಿನಿಕರಪಿಕಮಾಕಂದಂ ॥ ೧೬೬

ಎಂದು ಜಯಮರ್ಮಮಹಾರಾಜಂ ಜಿನಶ್ರೀಚರಣಾಳಂಕಾರಶೀರ್ಷನ ವಾಗ್ಮಿತ್ವಕ್ಕಂ ಭಾವಿಯುತದಿಗಂಬರದಾಸನ ಜಿನಾಗಮಪರಿಣತಿಗಂ ಸುಕವಿಜನಮನಃಪದ್ಮಿನೀರಾಜಹಂಸನ ಕೊಂಕಿಲ್ಲದ ಜಿನಭಕ್ತಿಗಂ ಸಹಜಕವಿಜನಮನಃಪದ್ಮಿನೀರಾಜಹಂಸನ ಕೊಂಕಿಲ್ಲದ ಜಿನಭಕ್ತಿಗಂ ಸಹಜಕವಿಜನಮನಃಪಯೋಧಿಹಿಮಕರನ ಕುಡುವೃತ್ತರಕ್ಕಂ [ಮುಯ್ಮ್ಮದಮಾಗೆ ಕಾಲ ಮೇಲೆ ಬಿಟ್ಟು ಮತ್ತೆ ಕಾಲಂ ತಲೆಯ ಮೇಲಿಟ್ಟುಕೊಂಡು ಜೀಯ ಬಾಪೆಂದು ಮತ್ತೆ ಪೊಗಟ್ಟೆ, ನುಡಿದು ಗೆಲ್ವುದು ತೊಱೆಯನೀಸಾಡಲಾಱದ ನಿಶ್ಶಕ್ತನ ಕಾಲಂ ಪಿಡಿದಂತಾಗ ಕಾಳಗದೊಳ್ಸೋಲ್ತು ಪಂದೆ ಪೆಱಗೆ ಲಜ್ಜಿಸಿ ಕೆಱೆಯುಂ ಪಾಯ್ದನೆಂಬಂತೆ ಬಲಿಜಯಮರ್ಮ ಮಹಾರಾಯನ ಮೊಗಮಂ ನೋಡಲ್ ಲಜ್ಜಿಸಿ ತನ್ನ

ಸೋಲ್ವುದಕ್ಕೆ ಲಜ್ಜಿಸಿ ಪೆಯ್ಯಱಿಯದೆ ಮುನಿಸರೋಜಿನೀರಾಜ ಹಂಸನನಿಂತೆಂದಂ][1] ॥ ೧೨೭

ಪೆಱರಿಂತಲ್ಲದೆ ಬಂದೆನ
ಗೆಱಗರ್ ಕಡುಭಕ್ತಿಯಿಂದಮೆಂದುಕ್ಕೆಪದಿಂ
ಬೞಿದೇಂ ಮಾಣಿಸಿ ನೀನೊಳ
ಗೞಿಯದರಂ ವಚನರಚನೆಯಿಂ ಸೋಲಿಸುವೈ ॥ ೧೨೮

[ಮಾಯೆ ತಪಮಂ ಪೊಣರ್ಕೆಯೆ
ಗಾಯದಿನುಣ್ಣಲೆಂದು ವಶ್ಯಮಂತ್ರಂಗಳನ ।
ನ್ಯಾಯಪರನಾಗಿ ಸಾಧಿಸಿ
ಮಾಯಾವಿ ಧರಿತ್ರಿಯಂ ಮರುಳ್ಮಾಡಿದಪೈ ॥ ೧೨೯

ಪಲವುಮುದ್ರೆಗಳಿಂ ಮುಖವಶ್ಯಮಂ ಮಾಡಿಕೊಂಡು ಜನವಶ್ಯ ರಾಜವಶ್ಯಮಂತ್ರಂಗಳನುಣ್ಣದಟ್ಟಿದು ಕುದಿದು ಮಱುಗಿ ಸಾಧಿಸಿ ತನ್ಮಂತ್ರಬಲದಿಂದೆನ್ನ ನಾಲಗೆಯುಂ ಸ್ತಂಭಿಸಿ ಗೆಲ್ವೆಯಂತಲ್ಲದೆನ್ನಂ ಗೆಲಲ್ ನಿನ್ನಳವಲ್ಲದೆಂದು ಮುನಿಸಿಂ ಕಣ್ಗಾಣದೆ ಬಾಯ್ಗೆವಂದಂತೆ ನುಡಿವುದುಂ ನೆರದ ನೆರವಿಯೆಲ್ಲಮಿಂತೆಂದರ್ ॥ ೧೩೦

ಜಯವರ್ಮಮಹಾರಾಜಂ
ನಯದೆ ಮುನೀಶ್ವರನೊಳಾದವಿ ನುಡಿದಾಂ ಗೆಲ್ವಂ ।
ನಯದಿಂದಮೆಂದು ಬಂದಂ
ಭಯಮಿಂದುಳ್ಳೆಕ್ಕ ನುಡಿಯಲಾಱದೆ ಕಷ್ಟಂ ॥ ೧೩೧

ಮಾತನಱಿಯದ ಸೂಳ ಕುಂಟಣಿಯುಂ ಬೈದಳೆಂಬ ನಾಣ್ಣುಡಿಯಂತೆ ಪರಮಾವಧಿಲೋಚನನಪ್ಪ ಮಹಾತ್ಮನ ವಚನಕ್ಕುತ್ತರಮಂ ಕುಡಲಾಱದೆ ಬಾಯ್ಗೆವಂದಂತೆ ನುಡಿದಪನತಿಧೂರ್ತನೆಂದು ಕಂಡರೆಲ್ಲಂ

1. ಮುಯ್ಪುವಾಗೆ ಬಿದ್ದು ಕಾಲಂ ತಲೆಯ ಮೇಲಿಟ್ಟುಕೊಂಡು ಮತ್ತೆ ಮತ್ತೆ ಪೊಗಳ್ವುದುಂ ಬಳಿ ಲಜ್ಜಿಸಿ ಕ್ರೋಧದಿಂ ಕಣ್ಗಾಣದೆ ಬೈಯ್ದು (ಗ)

ಜಱೆಯೆ ಜಯವರ್ಮಮಹಾರಾಜಂ ಬಲಿಯ ಮಾತಿಂಗೆ ಮುನಿದು ಸಭಾ ಸದರ್ಗಿಂತೆಂದಂ][1] ಕರಗಸದ ಬರವುಂ ಪೋಗುಂ, ಕಿಚ್ಚಿನುರಿಯುಂ ಪೊಗೆಯುಂ ದುಷ್ಟಾಶ್ವದ ಮುಂತುಂ ಪಿಂತುಂ ಬೆಟ್ಟಮನೇಱುವುದು ಮಿೞು ವುದುಂ ಪುಲಿಯ ಕೂರ್ಮೆಯುಂ ಪಗೆಯುಂ ಸುರಿಗಿಯ ಮೊನೆಯುಂ ಬಾಯಧಾರೆಯುಂ ವಿಷದ ಕಯ್ಪುಯುಂ ಸೀಪುಂ ಮೂರ್ಖನ ನಗೆಯುಂ ಮುನಿಸುಂ ಪೇಲ ನುಣ್ಪುಂ ಪೆಂಪುಂ ಕಯ್ಪೆಸೋರೆಯ ಮಿಡಿಯುಂ ಕುಡಿಯುಂ ನಾಯ್ವೇಳದ ಕಾಯುಂ ಪಣ್ಣುಂ ಲೋಭಿಯ ಮನಮುಂ ಧನಮುಂ ಕಳ್ಳನ ಚೆನ್ನುಂ ಪೊನ್ನುಂ ಭಯದ ಬಟ್ಟೆಯ ನೀಱುಂ ನೆಳಲುಂ ಪೊಲೆಯರ ಮನೆಯ ಕೂೞುಂ ಬಾಡುಂ ಬೆಸನಿಯ ನುಡಿಯುಂ ನಡೆ ಯುಂ ಪೊಲ್ಲಂತಂತೆ ಮಿಥ್ಯಾದೃಷ್ಟಿಯ ನೆಗೞ್ತೆಯುಮೊಂದು ಪೊಲ್ಲೆಂದು [ಮುನಿದು ಬಲಿಯನಿಂತೆಂದಂ ॥ ೧೩೨

ಪಿರಿಯರಿವರ್ ಸರ್ವಜ್ಞರ
ದೊರೆಯೆನ್ನದೆ ಸೊಕ್ಕಿ ಮೂರ್ಖತನದಿಂ ಕಾಣಂ ।
ಪೊರಸೇಱಿದಂತೆ ನುಡಿವೈ
ಮರುಳಂ ಪಱಿರೊಳರೆ ಲೋಕದೊಳ್ ನಿನ್ನಿಂದಂ ॥ ೧೩೩

ನೀನತಿಧೂರ್ತನೆ ದುಷ್ಟಂ
ದೀನಾನುಮನೆನ್ನ ಮುಂದೆ ಮುನಿಪುಂಗವನಂ ।
ಹೀನವಚನಂಗಳಿಂದಭಿ
ಮಾನಂಗಿಡೆ ನುಡಿದೆಯಾದೊಡೇನಾಯ್ತೆನ್ನಂ ॥ ೧೩೪

ಬರ್ಮಗೆ ಪ್ರಾಣಕ್ಕೆ ತಪ್ಪಲಾಗದು ನಿನ್ನ ಮಾಡಿದ ದುಷ್ಟತನ ಮಪ್ಪೊಡೆ ಕೊಲೆಗೆ ಪ್ರಾಪ್ತಿಯೆಂದು ಜಡಿದು ನುಡಿದರಸಂ ಬಲಿಗೆ ವಿರಸ ನಾಗಿ ಕೋಪದಿಂ ಬಡಿದು ಪಿರಿದಪ್ಪಪಮಾನಮಂ ಮಾಡಿ ತನ್ನ ಪುರದಿಂ

1 ಎಂದು ಬಾಯ್ಗೆ ಬಂದಂತೆ ನುಡಿವುದುಂ ಜಯವರ್ಮಮಹಾರಾಜಂ ಮುನಿದು ನಿನಗಂಜುವನೆಮ್ಮಾಳ್ವ ದೇಶದಿಂ ಪೋಮಟ್ಟು ಪೋಗೆಂದು ಜಡಿದರಸಂ ಪ್ರಧಾನರ ಮೊಗಮಂ ನೋಡಿ (ಗ)

ಪೊಱಮಡಿಸಿ ಕಳೆವುದು ಬಲಿಯವಂಶದವರೆಲ್ಲಂ ಪೊಱಲೊಳಿರಲಾಗ ದೆಂದು ಗೋಸಣೆಗೊಳಿಸೆ ಬಲಿ ಜಯವರ್ಮಮಹಾರಾಜಮುನಿಪತಿಗೆ ಪುನರ್ನಮಸ್ಕಾರಂಗೆಯ್ದು ಮನೆಗೆ ಪೋದನಿತ್ತಲ್ ಬಲಿಯೊಡವುಟ್ಟಿ ದರ್ ಶುಕ್ಲ ಬೃಹಸ್ಪತಿ ಪ್ರಹ್ಲಾದರ್ ಮೊದಲಾಗೊಡೆಯ ಬಂಧುಗಳೆಲ್ಲಂ ಪೊಱಮಟ್ಟು ಬಲಿಗೂಡಿ ಚಿಂತಾಕ್ರಾಂತರಾಗಿ ನೆರೆದು ಪೋಗುತ್ತುಂ ಬಲಿಯನಿಂತೆಂದರ್ ॥ ೧೩೫

ಅಣ್ಣ ಸುಖೋನ್ನತಿಯಿಂದಂ
ತಣ್ಣನೆ ಲೇಸಾಗಿ ಮುದದಿನುಣ್ಬರ ಬಾಯೊಳ್ ।
ತಿಣ್ಣನೆ ಕಿರ್ಚಂಪುಡಿಯಂ
ಮಣ್ಣಂ ಪೊಯ್ದಂತು ಮಾಡಿದೈ ದೂರ್ತಿಂದಂ ॥ ೧೩೬

ಎಂದು ಬಲಿಯಂ ಮೂದಲಿಸಿ ಬಯ್ವುದುಂ, ನೃಪನೊಳಾದ ಪರಿಭವಾನಳನುಂ ನಂಟರೊಳಾದ ದುಃಖಾನಳನುಂ ತಿಣ್ಣಮಾಗೆ ಮುನೀಂದ್ರೋತ್ತಮನಮೇಲೆ ಕೋಪಂ ಪುಟ್ಟೆ ಬಲಿಯಿಂತೆಂದಂ ॥ ೧೩೭

ಜಯವರ್ಮಾಧೀಶನಾಸ್ಥಾನದೊಳಮೆಯ್ವದಿಂದೆನ್ನನಂದೋಜಮಾತ್ರ
ರ್ದ ಯತೀಶಾಂಭೋಜಸೂರ್ಯಂಗಳನಳವಡೆ ನಾನಾಪ್ರಕಾರಂಗಳಿಂ ಸಂ
ಶಯಮೇಕಿನ್ನಣ್ಣನಾಂ ಕೊಲ್ಲದೊಡೆ ಮನುಜನೇ ಮಂತ್ರಿಯೇ ನೋಡಿಮೆಂದ
ಪ್ರಿಯವಾಕ್ಯಾಳಾಪನಾಗಳ್ ಮನದ ಮುಳಿಸಿನುದ್ರೇಕದಿಂ ನೊಂದು ಪೂಣ್ದಂ ॥ ೧೩೮

ಅಂತು ಪೂಣ್ದು ಹಸ್ತಿನಾಪುರಕ್ಕೆವಂದು ಪದ್ಮಂಗಾಳಾಗಿರ್ಪುದು ಮೊಂದುದಿವಸಂ] ॥ [1] ೧೩೯

---

[1] ನಕ್ಕು ಪುನರ್ನಮಸ್ಕಾರಂಗೆಯ್ದು ಮನೆಗೆ ಪೋದನಿತ್ತಲ್ ಬಲಿಯುಂ ತನ್ನೊಡವುಟ್ಟಿದವರ್ಗರಸುಜ್ಜಯಿನಿಯುಂ ಪೊಱಮಟ್ಟು ಹಸ್ತಿನಾಪುರಕ್ಕೆ ವಂದುಮಹಾ ಪದ್ಮರಾಜನಂ ಕಾಣ್ಬುದುಂ ಪಿಂತನೆ (ಗ)

ಪರಿತಂದೊರ್ವಂ ಧಾತ್ರೀ
ಶ್ವರಂಗೆ ಪೊಡೆಮಟ್ಟು ದೇವ ನಮ್ಮ ಬಲಂ ಭಾ ।
ಸುರಸಿಂಹಕೀರ್ತಿಧರಣೀ
ಶ್ವರನಿಂ ಪರಿಭವಮೆನಾಂತುದಾಹವದೆಡೆಯೊಳ್ ॥ ೧೪೦

[ಎಂದು ಬಿನ್ನಪಂಗೆಯ್ವುದುಮರಸಂ ವಿರಸಮಾದ ಸೂಳೆಯಂತೆ ಲಜ್ಜಿಸೆ ಮುನ್ನನೇಕಸೂಳ್ ತನ್ನಟ್ಟಿದ ದಂಡಾತಂಗಮೂಸದುದಱಿಂ ಪಿರಿದಪ್ಪ ಲಜ್ಜೆ ಪುಟ್ಟೆ ಕೊಕ್ಕಳಗುದಿವರಸನ ಮನದ ಹೇವಮನಱಿದು ಬಲಿ ಮನದೊಳೊಳ್ಳಿತಪ್ಪ ಪ್ರಸ್ತಾವಮಾಯ್ತೆಂದು ಪೆರ್ಗೆ ಪದ್ಮಮಹೀ ಶ್ವರರಂಗೆ ಪೊಡೆಮಟ್ಟು ದೇವರೆನಗಾಬೆಸನಂ ದಯೆಗೆಯ್ವುದೆಂದು] [1] ॥

ಭರವಸದಿಂ ಬೇಡುವುದುಂ
ನರಪಂ ದಯೆಗೆಯ್ಯೆ ಬೆಸನನಾಗಳ್ ಕೈಕೊಂ ।
ಡರವರಿಸದೆ ಪಿರಿದುಬಲಂ
ಬೆರಸರಿಯುಂ ಗೆಲ್ವ ಬುದ್ಧಿಯಿಂ ಬಲಿನಡೆದಂ ॥ ೧೪೨

ನಡೆದು [ಕತಿಪಯಪ್ರಯಾಣಂಗಳಂ] ಕುಂಭಪುರಮನೆಯ್ದಿ [ಮೂವಳಸಾಗಿ ಸುತ್ತಿ ಮುತ್ತಿ ಚಲದಿಂ ತನ್ನಂ ಬಿಟ್ಟು ಕಾದಿ] ಕೋಂಟೆಯುಂ ಕೊಂಡು ಸಿಂಹಕೀರ್ತಿಯುಂ [ಗ್ರಾಮಸಿಂಹಮಂ ಕಟ್ಟುವಂತೆ ಕೋಡಗಗಟ್ಟಂ] ಕಟ್ಟಿ ತಂದು ಪದ್ಮಮಹೀಪವಲ್ಲಭಂಗೊಪ್ಪಿಸುವುದುಂ ಪದ್ಮಮಹಾರಾಜಂ ಮೆಚ್ಚಿ ಮಹಾಮಂತ್ರಿಪದವಿಯಂ ಕೊಟ್ಟು ಮತ್ತಮಿಂ ಮಾಡಿದ ಕೆಲಸಕ್ಕೆ ಸಂತೋಷಂಬಟ್ಟು ಮೆಚ್ಚಿದೆಂ ಬೇಡಿಕೊಳ್ಳೆಂಬುದುಂ ॥ ೧೪೩

ಬಲಿ ಪಿರಿದುಂ ಪೆರ್ಚೆ ಮಹೀ
ತಳಪತಿ ನಿನ್ನೀವ ಮೆಚ್ಚನನ್ನವರಂ ನಿ ।

---

1 ಎಂಬುದುಮುವರಸನ ಖಿನ್ನಮಾದ ಮೊಗಮಂ ಕಂಡೆನಗಿದವಸರನೆಂದಾಬೆಸನಂ ಮುಂದಣ್ಗೆವಂದು (ಗ)

ಕ್ಷ ಲನಾಗಿ ದಿವ್ಯಚಿತ್ತದೊ
ಳನಿಸುಂ ತಾಳ್ದನ್ನ ಮನಕೆ ಬಂದವಸರದೊಳ್ ॥ ೧೪೪

ಬೇಡಿಕೊಂಡಪೆನೆಂಬುದುಮರಸನುಂ 'ತಥಾಸ್ತು' ಎಂದೊಡಂಬಡುವುದುಂ ಬಲಿ ಪರಮವಿಶ್ವಾಸಿಯಾಗಿ ಪಲವುಕಾಲಮಿರ್ಪುದುಮಕಂಪನಾಚಾರ್ಯರ್ ರಯ್ಯೂರ್ವರ್ ಮುನೀಶ್ವರರ್ ವೆರಸು ಧರಾತಳಮೆಂ ಕ್ರಮಕ್ರಮದಿಂ ವಿಹಾರಿಸುತ್ತುಂ ಹಸ್ತಿನಾಪುರಕ್ಕೆವಂದಾಪುರದ ಬಡಗಣ ದೆಸೆಯ ಪಿರಿದಪ್ಪ ಸಿತಗಿರಿಯೊಳ್ [ಚಾತುರ್ಮಾಸಮಪ್ಪುದಱಿಂ ಯೋಗಂ ಕೈಕೊಂಡಿರ್ದರ್.] ಇರ್ಪುದುಂ ॥ ೧೪೫

ವರಮುನಿವೆಲ್ಲಭರಿರ್ದ ದ
ನರಸಂ ಕೇಳ್ದರ್ತಿವೆಟ್ಟು ರಾಜಕುಮಾರರ್ ।
ವೆರಸು ಮಹೋತ್ಸವದಿಂ ಭೂ
ಸುರತೇಜಂ ಪೋಗಿ ಭಕ್ತಿಪೂರ್ವಕದಿಂದಂ ॥ ೧೪೬

ವಂದಿಸಿ ಕಿಱಿದುಬೇಗಂ ಧರ್ಮಮಂ ಕೇಳ್ದು ಪುನರ್ನಮಸ್ಕಾರಂಗೆಯ್ದು ರಾಜಭವನಕ್ಕೆ ಬಂದಿರ್ಪುದುಂ ಬಲಿ ರಾಗದಿಂ ಮೆಯ್ಯಱಿಯದರಸುವ ಬಳ್ಳಿ ಕಾಲ್ಗೊಳ್ ತೊಡರ್ದುದೆಂಬಂತೆ ಅಱಿಸಿ ಕೊಳ್ವ ಪಗೆ ಮನೆಗೆ ವಂದಂ ಪುಣ್ಯಂಗೆಯ್ದನೆಂದು ಪದ್ಮ ಮಹಾರಾಜನಲ್ಲಿಗೆ ವಂದು ಭಂಡಾರದೊಳಿರ್ದ ವೆಚ್ಚಂ ಕಾರುಣ್ಯಂಗಯ್ವುದೆನೆ ಪದ್ಮಮಹೀನಾಥಂ ಕೊಟ್ಟೆಂ ಬೇಡಿಕೊಳ್ಳೆಂಬುದುಂ ಮಹಾಪ್ರಸಾದಮೆಂದಿಂತೆಂದಂ ॥ ೧೪೭

ನಿನಗಂ ನಾಡಿಂಗಂ ಶಾಂ
ತಿನಿಮಿತ್ತಂ ಯಜ್ಞಮಂ ಮಹೋತ್ಸವದಿಂ ನೆ ।
ಟ್ಟನೆ ಧಾತ್ರಿ ಪೊಗಳೆ ಮಾಡುವ
ಮನಮಾಗಿರ್ಪುದು ದೇವ ಪುಣ್ಯೋದಯದಿಂ ॥ ೧೪೮

ನರನಾಥ ಯಜ್ಞಮೆಂಬುದು
ಪಿರಿದಪ್ಪ ಫಲಕ್ಕೆ ಕಾರಣಂ ಸಕಲಸುರಾ ।

ಸುರರೆಲ್ಲಂ ಮನದೊಳ್
ಸ್ಥಿರದಿಂದಂ ತೃಪ್ತರಾಗಿ ನಲಿವುದಱಿಂದಂ ॥ ೧೪೯

ದೇವ ನಿನ್ನ ರಾಜ್ಯಮಂ ಪದಿನೈದು ದಿವಸಂಬರಮೀವುದೆಂದು ಬೇಡುವುದುಂ ಪದ್ಮನವನ ಬೇಡಿದನಾಚಾರಕ್ಕಂ ತಾಂ ಬೇಡಿಕೊಳ್ಳಂದು ದಕ್ಕಂ ವಿಸ್ಮಯಂಬಟ್ಟು ದೇವವರ್ಗಂ ಕ್ಷತ್ರಿಯವರ್ಗಂ ಪುನರ್ವಚನಮಂ ನುಡಿಯಲಾಗದೆಂಬ ನೀತಿಯುಮಂ ಭಾವಿಸಿ ಬಲಿಯ ಮನದ ಕಪಟಮನೇ ನೆಂದಱಿಯದೆ [ಸೀಸೇನಂ ಮಾಡಿದೊಡಮಕ್ಕು ಮದನೆನಗೆ ಪೇಳಲ್ವೇಡ] ಆನೆನ್ನ ಮುನ್ನಿನ ನುಡಿದ ಕಾರಣಮಾಗೆ ಪದಿನೈದುದಿವಸದ ರಾಜ್ಯಮಂ ಕೊಟ್ಟೆನೆಂದು ಕೊಟ್ಟು ತನ್ನಂತಃಪುರಪುರಂಧ್ರಿಯರೊಳ್ ಕೂಡಿರ್ದ ನನ್ನೆಗಮಿತ್ತಲ್ ॥ ೧೫೦

ಅಂದೆನ್ನಂ ಜಯವರ್ಮನ
ಮುಂದೆ ಮಹಾಭಂಗಮಾಗೆ ಸೋಲಿಸಿದವನಂ ।
ಕುಂದದೆ ಕೇಳ್ ನಾನಾವಿಧ
ದಿಂದಂ ಚಿತ್ತಕ್ಕೆ ಬಂದ ಕೊಲೆಯಿಂ ಕೊಲ್ವೆಂ ॥ ೧೫೧

ಎಂದು ಮನದೊಳಾಲೋಚಿಸಿ [ಕುಟಿಲಬುದ್ಧಿಯಿಂ ತನ್ನೊಳಗ ನಾರ್ಗಮಱಿಸಲೊಲ್ಲದೆ ಪದ್ಮನುಮಂ ಪುರಮುಮಂ ನಂಬಿಸಲ್ವೇಡಿ ಯಜ್ಞಂಮಾಡಿವಪೆ ನೆಂಬಿವನೆ ಪ್ರಕಟಂಮಾಡಿ ಮನಗೆ ವಂದು][1] ॥ ೧೫೨

ಈ ನರವಲ್ಲಭನಪ್ಪೊಡೆ
ತಾನಧಿಕಂ ಜೈನಧರ್ಮದೊಳ್ ಋಷಿವಧೆಯಂ ।

---

[1] ಕುಟಿಲಮನಂ ತನ್ನ ಮನದ ಕಾರ್ಯಮನಾರ್ಗಂಗಱಿಪದೆ ನಾಲ್ಕುಯ್ದು ದಿವಸದೊಳಗೆ ಪುರಮುಮಂ ಪರಿಗ್ರಹಮುಮನಳವಡಿಸಿ; ಪದಿನೈದು ದಿವಸದರಸಂ ಮದದಿಂ ಮೈಯರಿಯದಕ್ಕೆ ಪರದೇಶಗಳ್ । ಗದಗಂಪಗೊಂಡುಮೋಕ್ಷದವಳಿ ದುದು ಬಲಿಯ ರಾಜ್ಯದುನ್ನತಿಯಿಂಬಂ ॥ ಮತ್ತಮೆನ್ನ ಕಾರ್ಯಂ ಪ್ರಜೆಗೆ ತುಷ್ಟಿ ಯಾದಲ್ಲದೆ ತೀರದೆಂದು ತಪ್ಪಜ್ಜರ ಪಜ್ಜರ ಗೊಜ್ಜರ ಪಡೆದ ಪೊನ್ನೆಲ್ಲಮಂ ಪುರಜನ ಕ್ಕೆಲ್ಲಂ ಮಹಾದಾನಂಗೊಟ್ಟು (ಗ)

ತಾನಱಿದನಪ್ಪೊಡೆನ್ನಂ
ನಾನಾವಿಧದಿಂದೆ ಕೊಂದು ತೂಗದೆ ಮಾಣಂ ॥ ೧೫೩

[ಅದಱಿಂದೆನ್ನ ದ್ರೋಹಮರಸನ ಕಿವಿಯಂ ಮುಟ್ಟದಂತಾಗೆ ಮಾೞ್ಪೆನೆಂದುಪಾಯದಿಂ ಜೋಗಂಕೈಕೊಂಡು ಋಷಿಯರ್ ಪೋಗರೆಂಬುದನಱಿವೆನಪ್ಪುದಱಿಂದೆನ್ನ ಯಜ್ಞಂ ತೀರ್ವನ್ನೆಗಂ ಋಷಿಯರೀ ಪೊೞಲೊಳಿರವೇಡವೆಂದು ಘೋಷಣೆಗೆಯ್ವುದುಮಕಂಪನಾಚಾರ್ಯರಱಿದು ಸಮಸ್ತಋಷಿಯರ್ಗಿಂತೆಂದರ್] ॥ ೧೫೪

ಅವರವರ ಪುಣ್ಯಪಾಪಂ
ನವನವದಿಂ ಫಲವನೀಗುಮವರ್ಗಂ ಪೆಱಪಂ ।
ಭುವನದೊಳಾಂ ಮಾೞ್ಪೆನೆಂಬಿ
ತವರಧಿಕರೆ ಪುಣ್ಯಪಾಪನಿಚಯಕ್ಕಳಿಯೊಳ್ ॥ ೧೫೫

ನಿಷ್ಕಾರಣಮುಱಿಪುದೆ ಜಡ
ರುಕ್ಕವದಿಂ ಪೆಱರನಳಿವೆವೆಂಬೀಮನದಿಂ ।
ದಿಕ್ಕನೆ ಬೀೞ್ವರ್ ನರಕದೊ
ಳಕ್ಕಟ ದುಃಖಕ್ಕೆ ಮೂರ್ಖರಪ್ಪರೆ ನೋಂತರ್ ॥ ೧೫೬

ಬಱಿದೆ ಜಡಮತಿಗಳೇನೆಂ
ದಱಿಯದೆ ಮುನಿಸೊವವೆ ಕೊಲ್ವೆವೆಂಬರ್ ಮನದಿಂ ।
ಪೆಱರಂ ತಮ್ಮಳವಲ್ಲದು
ಮಱುಕಂ ಕೈಸಾರ್ಗುಮೆ ಮತ್ತಮಪರಳದಪರೇ ॥ ೧೫೭

ನರಕಗತಿಗಿಳಿವೊಡಂ ಸಿ
ರ್ಜರನಿಳಯಮನೆಯ್ದಿ ಸುಖಮನುಣ್ಬೊಡಮನ್ಯರ್ ।
ನೆರಪಲ್ಲರದಱಿನನ್ಯರ್
ಭರವಶದಿಂ ಮುಸಿದುಮೊಸೆದುಮೇಗೆಯ್ದಪರೋ ॥ ೧೫೮

ಎಮ್ಮ ಕತದಿಂದಮೀತಂ
ಕೆಮ್ಮನೆ ದುಃಖಕ್ಕೆ ನೋಡ ಗುಱಿಯಾದಪನೆಂ ।

ಬುಮ್ಮ್ರಳಮಲ್ಲದೆ ಕೊಂದಪ
ನಮ್ಮಂ ಖಳನೆಂಬ ನೋವು ಕೇಳಮಗುಂಟೇ ॥ ೧೫೯

[ಬೇಸಗೆಯು ಬಿಸಿಲ ತಾಮ
ತ್ಯಾಸುರಮಾಗೊದವಿ ಕಾಯ್ದೊಡಂ ತಾವರೆಗಳ್ ।
ಬೇಸಱವದಱಿಂ ಪುಣ್ಯನಿ
ವಾಸಿಗಳಂ ಕಿಡಿಪವೆಂಬವರ್ಗೆಂಟೆರ್ದೆಯೋ ॥ ೧೬೦

ಶಶಿ ಮಿತ್ರನಾಗಿಯುಂ ಸಂ
ತಸದಿಂ ನೆಯ್ದಿಲನಲರ್ಚಲಾಱಂ ಪಗಲೊಳ್ ।
ಪುಸಿಯಲ್ಲದಱಿಂದಂ ರ
ಕ್ಷಿಸಲಾರ್ಪರೆ ಪುಣ್ಯಹೀನರಂ ಪೆಱರೊಲವಿಂ ॥ ೧೬೧

ಮತ್ತಂ,] ಪಡೆಯದೈಸಿರಿಗಿಱಿದು ಬೀೞ್ವ, ಪೆಱರ ಪೆಂಡಿರ್ಗೆ ಬಳದೊಡಿಸುವ, ಪೆಂಡಿರಂ ಕೊಟ್ಟು ಪಾನ್ಯಂಬಡೆವ, ಮಗಳಂ ಮಾಱಿ ಮದುವೆಯಪ್ಪ, ಪಡಿಯನೊಡೆದು ಪಣೆಯಂ ಮಾಡುವ, ಮೊಳಗೆಯಂ ಸುಟ್ಟು ಸೀತನೆಯಂ ತಿಂಬ, [1] ಮಗನಂ ಕೊಂದು ಗಂತುದೋಱುವ, [ನೆಲೆವಾಡಂ ಮಾಱಿ ಸೂಳೆಗೆಯ್ವ, ಬೆಳದ ಕೆಯ್ಯಂ ಕೊಟ್ಟು ಕಡಗಮಂ ಕೊಳ್ವ, ಕವಿಲೆಯಂ ಕೞಿದು ನಾಯನೂಡುವ, ಕಂಕಣಮಂ ಕೊಟ್ಟು ಪಿಂಡಿಯಂ ತಿಂಬ, ಲೋಗರ ಕಾರ್ಯಕ್ಕೆ ಬಡಿದು ಕೊಳ್ವ, ಬಾಡಿಗೆಯ ಮನೆಗೆ ತಿವಿದು ಕೊಳ್ವ, ಚತ್ರದ ಕೂಟಗೆ ಮೆಯ್ಯಾಂಪ, ನಡುಮನೆಯೊಳ್ ಬಾವಿಯನಗೆವ, ತೊಱೆಗೆ ನೀರನಡಕುವ,] [2] ಕನಸಿನ ಪೊನ್ನನಗೆಂಬ, ಬೋನಸಮನೊಡೆದು ಹಲ್ಲೆಯ ಮಾಡುವ,| ಪಟ್ಟೆಯಂ ಪಱಿದು ಚಂಡಂ ಮಾಡುವ] ಕಟ್ಟಗ್ಗರಂತ, ಶಾಶ್ವತಮಲ್ಲದ ಶರೀರಮಂ ಪಿಡಿದು ರತ್ನತ್ರಯಂಗಳಂ ಕಿಡಿಸುವುದು [ಬುದ್ಧಿಯಲ್ಲದಱಿಂ, ತಂತಮ್ಮ ಮಾಡಿದ ಪಾಪಫಲೋದಯದಿಂ ಸಾವುಂ ನೋವುಮಡಸುಗುಂ, ತಂತಮ್ಮ ಮಾಡಿದ ತಪದ ದಾನದ ಫಲದಿಂ ಸುಖಮುಂ ದೀರ್ಘಾಯುಷ್ಯಮುಂ ನಿರ್ವಿಘ್ನಮುಮಕ್ಕುಂ, ಪೆಱರೇಗೆಯ್ದುಂ ಮುನಿದುಂ ಶ್ರೀಯು

1 ಸುಟ್ಟು ಹುಲುಗುಡಿಸಲಂಕಟ್ಟುವ (ಗ) 2 ಮನೆಯಪೊನ್ನ ಕೊಟ್ಟು (ಗ)

ಮನಾಯುಷ್ಯಮುಮಂ ನೋವ್ರುಮಂ ಮಾಡಲ್ ಸಮರ್ಥರಲ್ಲೆಂದು ದರಮಾಗಮೆಭಾವನೆಯಿಂ ನಿರ್ಮಳಚಿತ್ತರುಂ ಮಂದರಧೈರ್ಯರುಂ ನಿರ್ಭಯರುಮಾಗಿರಮೆಂದೆಲ್ಲರ್ಗಮೆಱಪಿ ಸಕಲಋಷಿಯರ್ವೆರಸು ಬಲಿ ಮಾಡುವ ಉಪಸರ್ಗಂ ಪಿಂಗುವನ್ನೆಗಂ ಆಹಾರಶರೀರನಿವೃತ್ತಿಯೆಂದು ಕೈಯ್ಯನಿಕ್ಕಿಕೊಂಡು ಜಿನಪಾದಾಂಭೋಜಂಗಳಂ ಮನದೊಳ್ ತಾಳ್ದಿದರನ್ನೆಗಮಿತ್ತಲ್] 1 ||

[ಮುನಿಯರುಮೆಲ್ಲರುಮೀಗೋ
ಸನೆಯಂ ಕೇಳ್ದಾಗಳಂತೆ ಪೊಱಲಿಂದಂ ಭೋಂ |
ಕನೆ ಪೋದರೆಂಬ ಮಾತನೆ
ಘನಮಾಗಿರೆ ಮಾಡಿ ಕುಟಿಲಚಿತ್ತಂ ಪುರದೊಳ್ || ೧೬೩

ಪದಿನ್ನೈದುದಿವಸಮೆರಸಂ
ಮದದಿಂ ಮೆಯ್ಯಱಿಯದುಕ್ಕಿ ಪುರಜನಮೆಲ್ಲಂ |
ಗದಗದಗಂಪಂ ಗೊಂಡುದು
ಮದಮೆಱಿದುದು ಬಲಿಯ ರಾಜ್ಯದುಗ್ರತೆಯಿಂದಂ || ೧೬೪

ಅಂತುಗ್ರನುಂ ಸಂಚಿತಪಾಪ ಚಿತ್ತನುಮುರ್ವೀಶ್ವರೈಶ್ವರ್ಯನುಮಾಗಿ ಪುರಜನಮುಮಂ ನಾಡುಮಂ ಪರಿಗ್ರಹಮುಮನೊಂದೆರಡು ದಿವಸದೊಳ್ ತನಗೆ ವಶಗತಮ್ಮಾಡಿ ರಾಜ್ಯಶ್ರೀಯುಮಂ ಮೆಯ್ಯಱಿಯದೆ] 2 ||

---

1 ಎಂದು ಬಗೆದು ಜೋಗಿನೊಳ್ ಋಷಿಯರ್ ಪೋಗದುವನಱಿದು ಋಷಿಯರೆಲ್ಲರುಂ ಪುರದಿಂ ಪೊಱಮಟ್ಟು ಪೋಪುದುಂ, ಪುರದೊಳೊಡೆಯರ್ವಡವರೆನ್ನದೆ ನಿಲ್ವಡೆನ್ನ ಯುಷ್ಣಂ ತೀರ್ವನ್ನೆಗಂ ತೊಡುವುದುಡುವುದುಣ್ಬುದು ರಾಜ್ಯಲೀಲೆಯೊಳಿರ್ಪುದೆಂದು ಘೋಷಣೆಗೆಯ್ಸಿ (ಗ)

2 ಬುದ್ಧಿಯಲ್ಲದೆಂದೆಲ್ಲರ್ಗಮಱಿಪಿ ಸಕಲಋಷಿಯರ್ವೆರಸು ಬಲಿಮಾಡುವೀಯುಪಸರ್ಗಂ ಪಿಂಗುವಿನಮಹಾರಶರೀರ ನಿವೃತ್ತಿಯೆಂದಿರ್ಪುದುಂ ವಿದೇಹವಿಷಯದ ವಿಂಥಲಪುರದೊಳ್ ಸಮುದಾಯಂ ಬೆಸಿದರ್ ವಿಷ್ಣುಗಳೆಂಬಾಚಾರ್ಯರಾಕಾಶದೊಳ್, ಪರಮತಪೋಧನರ್ಗೆ.... (ಗ)

ಎನಗೆ ಸಮಾನಮಪ್ಪರಣಮಿಲ್ಲ ಧರಿತ್ರಿಯೊಳಂದು ಸಾಗರೇ
ಶನ ಸಿರಿಯಂ ಫಣೀಶ್ವರನ ವೈಭವಮಂ[1] ನರ್ಕನ ತೇಜಮಂ ಮನೋ ।
ಜನ ಸೊಬಗಂ ವಿಯಚ್ಚರನ ವೀರಮನಾದಿಯ ಭೂಪರೊಪ್ಪನಿಂ
ದ್ರನ ವಿಭುತ್ವಮಂ ಪಡೆದು ಮಾಡಿಸುವಂ ಬಲಿ ಕೊರ್ವಿ ನಿಚ್ಚಲುಂ ॥

ಅಂತು ಪುಲ್ಲ ಕೀರ್ತಿನಂತುರಿದು [ಪಿರಿದಪ್ಪ ಕೀರ್ತಿಯಿಂದಾನೀ ಪೊಟಲೊಳಿನಂ ಮಾಡಿದೊಡಂ ಬೇಡೆಂದು ಮಾರ್ಕೊಂಡು ಮಾಣಿಸುವ ಗಂಡರಾರೆಂದು] ನಾಂದವರೆಯುಂತೆ ಪೊಟ್ಟೀಳಿಸಿ [ಮುಯ್ಯಂ ನೋಡಿ] ಪಾಪಿಯು ಬಲ್ಲಾಳಂಬ ಮಾತಂ ನಸ್ಸಿಮಾಡಿ [ಮುನೀಂದ್ರೋತ್ತಮರಪ್ಪ ಕಂಪನಾಚಾರ್ಯರಿರ್ದ ಸಿತಗಿರಿಯ ಸಮೀಪಕ್ಕೆ ಬಂದು][2] ॥ ೧೬೭

ಪಿರಿದಪ್ಪ ಯಜ್ಞಶಾಲೆಗೆ
ಧರೆ ಬಯಲಿದು ಬೇಗಮಿಲ್ಲಿ ಚೆಲ್ವಾಗಿರೆ ಚ ।
ಪ್ಪರಮನಳವಡಿಸಿ ಮಾಡುವು
ದಿರವೇಡೆಂದೆಯ್ದೆ ಪೆರ್ಗಡೆಗೆ ಬೆಸಸುವುದುಂ ॥ ೧೬೮

ಆರೆಗಾವುದಂತರಂಬರ
ಮರಸಿನ ಬೆಸದಿಂದೆ ಭೂಮಿಶೋಧನೆಯಂ ಪಿ ।
ಸ್ತರಮಾಗೆ ಮಾಡಿ ಚೆಲ್ವಾ
ಗಿರೆ ಸಮೆದರ್ ಚೆಲ್ವು ಕಣ್ಗೆವರೆ ಕಾವಣಮಂ ॥ ೧೬೯

[ಆಗಳಲ್ಲಿಗುಚಿತಮಪ್ಪುವೆಲ್ಲಮಂ ಮಾಡಿ ಬಂದು ಬಲಿಗೆ ತನ್ನ ಮಾಡಿದ ಬೆಸನಂ ಬಿನ್ನಪಂಗೆಯ್ವುದುಂ ಪ್ರಸನ್ನಮನನಾಗಿ ಪೆರ್ಗಡೆಗೆ ಪಸಾಯದಾನಮಂ ಕೊಟ್ಟು ಯಜ್ಞಶಾಲೆಯಂ ನೋಳ್ಪುತ್ತಿರ್ಪಯಿ, ಗಂಧ ಗಜಾರೂಢನಾಗಿ ಬಂದು ಚಪ್ಪರಂಗಳ ಚೆಲ್ವುಮಂ ಮಂಟಪಂಗಳ

[1] ಭೋಗವು (ಗ) [2] ತಡೆಯದೆ ಸಿತಗಿರಿಗೆ ಬಂದು (ಗ)

ವಿಳಾಸಮುಮಂ ಜಗಲಿಗಳ ಭಂಗಿಗಳುಮಂ ಹೋಮಕುಂಡಂಗಳುಮಂ ನೋಡುತ್ತುಂ ಗುಹೆಯ ಬಾಗಿಲ್ಗೆ ಪಂದು ಸಿಕ್ಕಿದರೆಂದು ಮನದೊಳ್ ಕಳಕಳಿಸಿ ನಕ್ಕು ಪೆಱರಂ ವಂಚಿಸಲ್ವೇಡಿ ಕೆಲದೊಳಿರ್ದರ ಮೊಗಮಂ ನೋಡಿ ಕೇಳಮೀಗುಹೆಯೊಳೇನಾನುಂ ಕ್ರೂರಮೃಗಂಗಳಿರ್ದು ಪೋಪ ಬರ್ಪ ಪ್ರಜೆಗೆ ಪೀಡೆಯಂ ಮಾಡುಗುಮದಱಿಂದೊಳಗಣ ಪ್ರಾಣಿಗಳಂ ಪೊಱಮಟ್ಟು ಪೋಪಂತು ಮಾಡುವಮೀಗುಹೆಯ ಬಾಗಿಲೊಳ್ ಪಿರಿದಪ್ಪ ಪುಳ್ಳಿಗಳನೊಟ್ಟಿ ಕಿಚ್ಚನಿಡೆಂಬುದುಂ ॥ ೧೩೦

ಕರಮೆನಲ್ಪೊಸತಪ್ಪ ಸಾಮೆಯ ಪುಲ್ಲನುಜ್ಜ್ವಲಮಾಗಿ ತಾ
ನುರಿವ ತಾೞಿಯ ತೆಂಗಿನೆಕ್ಕೆಯ ಮಾವಿನಿಂಧನಮಂ ವಸುಂ
ಧರೆಯೊಳೊಪ್ಪುವ ನಲ್ಲ ಪುಲ್ಲನಮರ್ಕೆಯಿಂ ಕಿಱುವಳ್ಳಿಯಂ
ತರಿಸಿ ಮೆಲ್ಲನೆ ತೀವಿದರ್ ಗುಹೆಯಲ್ಲಿ ತತ್ಕ್ಷಣದಿಂ ಭಟರ್ ॥ ೧೩೧

ಕಟ್ಟುರಿದ ಪುಳ್ಳಿಗಳಂ
ನಟ್ಟನೆ ಕೊದಳಿಗಳನೆಯ್ದೆ ಕಾಷ್ಠರಣಿಗಳಂ ।
ತೊಟ್ಟನೆ ಮಱಿಸೀರೆಗಳಂ
ಬೆಟ್ಟಾಗಿರೆ ಗುಹೆಯ ಬಾಗಿಲೊಳ್ ತೀವಿಸಿದಂ ॥ ೧೩೨

ಅಂತು ತೀವಿಸಿ ಗುಹೆಯ ಬಾಗಿಲಂ ನಿಶ್ಛಿದ್ರಮಾಗೆ ಮಾಡಿ ತುಪ್ಪದೆಣ್ಣೆಯ ಕೊಡಂಗಳಂ ತರಿಸಿ ನಾನಾವಿಧದಿಂದೆನ್ನ ಮುನಿಸು ಪೋಷಿನಂ ಮನಮಾರೆ ನಾಳ್ ಕಿಚ್ಚಂ ತಗುಳ್ಚ ಪೋಗದಂತು ಕೊಳ್ವೆನೆಂದಿರ್ಪನ್ನೆಗಂ ವಿದೇಹವಿಷಯದ ಮಿಥಿಳಾಪುರದೊಳ್ ॥ ೧೩೩

ಪರಮಗುಣಾಢ್ಯರ್ ನಿಸರ್ಗಳ
ಚರಿತರ್ ದುರಿತಾಪಹಾರಿಗಳ್ ಸಶ್ರುತಸೂ ।
ಗರರವಧಿಲೋಚನರ್ ಮಂ
ದರಧೈರ್ಯರ್ ಸಕಳಭವ್ಯನಂದಿತಪಾದರ್ ॥ ೧೩೪

ವಿಷ್ಣುಗಳೆಂಬಾಚಾರ್ಯರ್ ಸಮುದಾಯಂಬೆರಸಲ್ಲಿ ಜೋಗುಗೊಂಡಿರ್ಪುದುಂ ಧರ್ಮರುಚಿಗಳೆಂಬ ಋಷಿಯರ್ ಇರುಳ್ ಕಾಯಶುದ್ಧಿಗೆಂದು ಪೊಱಮಟ್ಟಾಕಾಶಮಂ ನೋಡುವುದುಂ][1] ‖ ೧೩೫

ಪರಮತಪೋಧನರ್ಗೆ ಬೆಸಕೆಯ್ವ ಮಹಾತ್ಮರೆ ಸೌಖ್ಯಭಾಜನರ್
ಧರಣಿಯೊಳಂತುಟಂ ಬಗೆಯನೀಖಳನುತ್ತಮಯೋಗಿಸಂಕುಳ
ಕ್ಕಿರದುಪಸರ್ಗಮಂ ಮುನಿದು ಮಾಡಿ ಮಹಾನರಕಕ್ಕೆ ಸಂದಪಂ
ದುರಿತದಿನಕ್ಕಟಾ ಕುಟಿಲನೆಂದು ದಯೋನ್ನತಿಯಿಂ ಧರಿತ್ರಿಯೊಳ್[2] ‖

[ನಡುಗುವಂತೆ] ನಡುಗುವ ಶ್ರವಣನಕ್ಷತ್ರಮಂ [ತೊಟ್ಟನೆ ಕಂಡು ಮಹಾತಪೋಧನರ್ಗಲ್ಲಿಯಾನುಂ ಘೋರೋಪಸರ್ಗಮಾಗಲೆವೇಟ್ಕುಮಲ್ಲದಂದೀ ನಕ್ಷತ್ರಮಿಂತು ನಡುಗದೆಂದು ತಮ್ಮೊಳ್ ನುಡಿಯುತ್ತುಮೊಳಗಣ್ಗೆವಂದು ‖ ೧೩೬

ಗುರುಗಳ್ಗಱಿಪುವುದುಂ ಸ
ಚ್ಚರಿತರ್ ಲೇಸಾಗಿ ಕೇಳ್ದು ತದ್ವಚನಮನ ।
ಚ್ಚರಿವಟ್ಟು ನೋಡಿ ಕಂಡರ್
ಪರಮಾವಧಿಯಿಂ ಮುನೀಂದ್ರರುಪಸರ್ಗಮುಮಂ ‖ ೧೩೭

---

1 ಮತ್ತಮಲ್ಲಿಗೆ ತಕ್ಕ ಹೋಮಕುಂಡಂ ಮೊದಲಾಗಲ್ಲದಂ ಮಾಡುವುದುಂ ಬಂದು ನೋಡಿ ಪರ್ಗಡೆಗೆ ಮುಚ್ಚುಕೊಟ್ಟು ಬಹುಜನಮಂ ನಡೆಸಲ್ವೇಡಿ ಗುಹೆಯೊಳಗೇನಾನುಮೊಂದು ದುಷ್ಟಮೃಗಂಗಳಿರ್ದೊಡೆ ಬಪ್ಪ ಪ್ರಜೆಗಳಿಗೆ ಬಾಧೆಯಂ ಮಾಡದಂತಾಗೆ ಬಾಗಿಲೊಳ್ ಪುಳ್ಳಿಯನೊಟ್ಟಿ ಕಿಚ್ಚುನಿಡುವನೆಂದು ನೆಲ್ಲ ಸಾಸವೆಯ ಬರಗಿನ ನವಣೆಯ ಹಾರಕಿನ ಪುಲ್ಲುಮಂ ತಾರಯ ಕೇಗಿನ ಅತ್ತಿಯ ಪುಣಿಸೆಯ ತಟ್ಟುಱಿದ ಪುಳ್ಳಿಗಳುಂ ಕಾಳಬೆರಣಿಗಳುಮಂ ಇಱಿವರಣಿಗಳುಮಂ ಪಱಿದ ಸೀರೆಗಳುಮಂ ಕಿಱುಗುಣಿಗಳುಮಂ ಕೊರಪುಗಳುಮಂ ತೆಕ್ಕನೆ ತೀವಿದ ತುಪ್ಪದೆಣ್ಣೆಯ ಕೊಡಂಗಳುಮಂ ತರಿಸಿ ನಾಳೆ ಸುಡುವಮೆಂದಿರ್ಪುದುಮನ್ನೆಗಮಾಕಂಪನಾಚಾರ್ಯರಱಿದು ಋಷಿಯರ ಯೋಗಮಂ ನೋಡಿ. — ಅಪರಮ ಪುಣ್ಯಾಪಂ .... ಪರಮತಪೋಧನರ್ಗೆ (೧೨೫ ರಿಂದ ೧೩೫ ರ ವರೆಗೆ ಇರುವ ಪದ್ಯಗದ್ಯಗಳನ್ನೂ ಟಿಪ್ಪಣಿಗಳನ್ನೂ ನೋಡಿ).

2 ತುರಿತ ಮಿದೆಂದು ನಾಡೆಯಾದೆ ಕೈಬಿಗೆ ಕಂಪಿಸುವಂತೆ ಭೀತಿಯಿಂ (ಗ)

ಅಂತು ಪರಮಾವಧಿಲೋಚನದಿನಱಿದಕ್ಕಟಾ ಕುರುಜಾಂಗಣವಿಷಯದ ಹಸ್ತಿನಾಪುರದೊಳ್ ಯೋಗುಗೊಂಡಿರ್ದ ಕಂಪನಾಚಾರ್ಯರ್ಗಮವರೊಡನಿರ್ದ್ದೆನೂರ್ವರ್ ಸಾಧುಗಳ್ಗಂ ಬಲಿಯೆಂಬ ರೌದ್ರಾತ್ಮನ ದೆಸೆಯಿಂ ಪಿರಿದಪ್ಪುಪಸರ್ಗಮಾಗಿರ್ದುದೆಂಬುದಂ ಸಿದ್ಧವಿದ್ಯೆಗಳೊಳ್ ಪರಿಣತನುಂ ವಾತ್ಸಲ್ಯರತ್ನಾಕರನುಮಪ್ಪ][1] ಪುಷ್ಪದೇವನೆಂಬ ಬ್ರಹ್ಮಚಾರಿ ಮುನಿದಿಂತೆಂದಂ ॥ ೧೬೯

ಕೋಡಗಗಟ್ಟುಗಟ್ಟುಸೆನೆ ವಾರಿಧಿಯೊಳ್ ಪಿಡಿದೊತ್ತಿ ಜೀವಮ
ಲ್ಲಾಡೆ ತೊಡಂಕಿ ನೂಂಕಿಸೆನೆ ಮೇರುನಗಕ್ಕೆಳದುಯ್ದು ಮೇಗಣಿಂ
ಕೂಡಿ ಸಮಂತುರುಳ್ಚಿಸೆನೆ ಪನ್ನಗಸಂಕುಳದಿಂ ಭಯಂಕರಂ
ಮಾಡಿ ತಗುಳ್ಚಿ[2] ಬೆರ್ಚಿಸೆನೆ ಲೋಕಮಗುರ್ವಿಸಲೆನ್ನ ವಿದ್ಯೆಯಿಂ ॥

[ಕಾಲನಪುಂಕಿ ಪತ್ತಿ ಪಿಡಿದೋವದೆ ಭೋರೆನೆ ಬೀಸಿ ಕಂಬದೊಳ್
ಲೀಲೆಯಿನಟ್ಟಿ ಮೋದಿಸೆನೆ ಕೆಚ್ಚನೆ ಕಾಯ್ದು ಕನಲ್ದು ಕೊಳ್ಳಿಯೊಳ್
ಸೋಲೆ ತಗುಳ್ದು ಚುಚ್ಚಿಸೆನೆ ಪೆರ್ಬುಲಿಯಿಂ ಗಜದಿಂ ಬಿಗುಳ್ದು ಕ
ಣ್ಣಾಲಿ ತುಳುಂಕೆ ಮುಟ್ಟಿಸೆನೆ ಕೊರ್ವಿದ ಗಾಂಪನನೆನ್ನ ವಿದ್ಯೆಯಿಂ॥ ೧೭೧

ಶರನಿಧಿವಾರಿಯಂ ತಳದೊಳಾಂಪೆನೊ ದೇವನಗೇಂದ್ರಮಂ ಮನಂ
ಮುರಿಯದೆ ಕಿೞ್ತು ತರ್ಪೆನೊ ದಿನೇಶನ ಬಿಂಬಮನುದ್ಧತಿಕ್ಕೆಯಿಂ
ಕರದೊಳಡರ್ತು ನೂಂಕುವೆನೊ ಪನ್ನಗರಾಜನನೊತ್ತಿ ಕಟ್ಟೆಚೆ
ಚ್ಚರಿಸಿ ಕರಾಗ್ರದೊಳ್ ನಿಮಿರ್ಪೆನೋ ಪಿಡಿದೇಱುವೆನೋ ಸುರೇಭಮಂ ॥

ಲವಣಾಂಭೋರಾಶಿಯಂದಾಂಟುವೆನೊ ಕುಳನಗಾನೀಕಮಂ ಪಾದದಿಂ ಭೂ
ಭುವನಕ್ಕಾಶ್ಚರ್ಯಮಪ್ಪಂತೊದೆವೆನೊ ನೆಱೆಯಿಂ ಪಾಱಿ ದಿಕ್ಪಾಲರಂಮ

---

1 ಅಂತು ಪರಮಾವಧಿಯಿಂದಕಂಪನಾಚಾರ್ಯರ್ಗೊಂದುಪಸರ್ಗಮಾದುದನಱಿದು ಋಷಿಯರ್ಗೆ ಪೇಳ್ವುದುಂ ಸಿದ್ಧವಿದ್ಯೆಗಳೊಳ್ ಪರಿಣತನಪ್ಪ (ಗ)

2 ಮುಗುಳ್ಚಿ (ಗ)

ಜ್ಞವದಿಂ ಜೇಯೆಂಬಿನಂ ಕಟ್ಟುವನೊ ಶರಭಮಂ ನೂರನಿನ್ನೂರನತ್ತು
ತ್ಸವದಿಂ ಕೀಳಿಟ್ಟು ಪೇಪೇಱುವೆನೊ ಧರಣಿಯುಂ ಪ್ರಾಯ್ವೆನೋ ತೂಂ
ತುಪ್ರೋಗಲಿ ॥೧೯೩

ಎಂದು ತಾಂ ವಿದ್ಯಾಸರಮೇಶ್ವರನಪ್ಪುದಱಿಂ ವಿಷ್ಣುಮುನೀಶ್ವರನ ಮುಂದೆ ತನ್ನ ಪ್ರತಾಪಮಂ ನುಡಿದು ಬಲಿಯುನವಯುವದಿಂದೆನ್ನ ವಿದ್ಯೆಗಳಿಂದಡಸಿ ಕಟ್ಟಿ ಸಮುದ್ರದೊಳಿಟ್ಟು ಕೊಂದಪನೆಂದು ಮಸಗಿ ಗರ್ಜಿಸುವುದುಂ ವಿಷ್ಣುಮುನೀಶ್ವರಂ ಪುಷ್ಪದೇವನನಿಂತೆಂದಂ] [1] ॥

ಕಡುಮೊಱರ್ಗಿ ಮಾಡಿದುದಂ
ತಡೆಯದೆ ನಾಂ ಮಾಱ್ಪೆನೆಂದು ಮಸಗುವ ಪುರುಷಂ ।
ಕಡುಕಷ್ಟಂ ನಾಯ್ಮೆ ಕಚ್ಚಿದೊ
ಡೊಡಗಚ್ಚಲ್ ಜೂಗುಱೆ ಬೊಗುೞೇಂ ಬಂದಪುದೇ ॥ ೧೯೪

[ಮುನಿಸಿಂ ತನಗಿದಿರಲ್ಲದ
ಮನುಜಂಗಿದಿರಾಗವೇಡದೆಂತೆನೆ ಗಜಗ ।
ರ್ಜನೆಗೆ ಮುನಿವಂತೆ ಪಂಚಾ
ನನನಡವಿಯೊಳಿರ್ದ ನರಿಗೆ ಮುನಿಗುಮೆ ಜಗದೊಳ್] ॥ ೧೯೫

ಎಂದು ಪುಷ್ಪದೇವನಂ [ಮೆಲ್ಲನೆ ಮೃದುವಚನಂಗಳಿಂ] ಸಮಾಣಿಸಿ ವಿಷ್ಣುಕುಮಾರಮುನಿತಿಲಕನ ಮೊಗಮಂ ನೋಡಿ ತಪೋಧನರ್ಕ್ಕೆ ತಾಪಕರಕ್ಕೆ ಪ್ರಭಾವಮುಮಂ ಮಾತದಂತು ಪೊಸಬಸುಯುಂ ಮಾಡಿ ತೂಂತುಪೋದ ಕಳಶಮನಿಡುವಂತೆ, ಮಗಳ ಮದುವೆಯುಂ ಮಾಡಿ ರಂಡೆಯಾಗೆಂದು ಪರಸುವಂತೆ, ಪಟ್ಟಮಂ ಕಟ್ಟಿ ಸಾಯೆಂದು ಸೇಸೆಯನಿಕ್ಕುವಂತೆ, ಉಯ್ಯಲನಿಕ್ಕಿ ಗೋಮೂತ್ರದಿಂ ಕೈಗರ್ಚಲೆಱೆವಂತೆ, ಬಿದಿರ್ಕ್ಕೆ ಕಲ್ಲಳಿಡುವಂತೆ, ತೋಂಟಮಂ ಮಾಡಿ ಕಡಿವಂತೆ, ಕೆಯ್ಯಂ ಮಾಡಿ ಕಿಚ್ಚಿಡುವಂತೆ, ಮಗನಂ ನಡೆಪಿ ಬಾವಿಯೊಳ್ ನೂಂಕುವಂತೆ, ಕುಮರಿಯುಂ ಪೊರೆದು ಕಳ್ಳರ್ಗೆ ಕುಡುವಂತೆ, ಸಿಂಹಾಸನಮನೇಱಿ ಮಸಿಯುಂ ಪೂಸು

1 ಬೆಸಸಿಮೆಂಬುದುಂ ವಿಷ್ಣುಮುನೀಂದ್ರನಿಂತೆಂದಂ (ಗ).

ವಂತೆ, ಮಹಾವ್ರತಮುಮಣುವ್ರತಮುಮಂ ನಿಷ್ಫಲಮಕ್ಕುಮದುಕಾರಣದಿಂ ॥ ೧೮೭

[ಮುನಿವರರುಪಸರ್ಗಂ ನೆ
ಟ್ಟನೆ ಕಿಡುವೊಡೆ ಸರಳಭವ್ಯಪಂದಿತಪದ ಮೇ ।
ದಿನಿಪೂಜ್ಯ ದಿವಿಜಶೇಖರ
ವಿನಮಿತದುರಿತಾಪಹಾರಿ ನಿನ್ನಿಂ ಕಿಡುಗುಂ ॥ ೧೮೮

ಎಂಬುದುಂ ಸುಕವಿನಿಕರಪಿಕಮಾಕಂದಂ ಮುಗುಳ್ನಗೆನಕ್ಕುಮನದೊಳಾಮಾತಿಂಗೆ ಕರಮಲ್ಲದೆ ಲಜ್ಜಿಸಿ ಜಿಷ್ಣುಮುನಿಪತಿಗೆ ಪೊಡೆಮಟ್ಟು ವಿನಯದಿಂ ತಲೆಯುಂ ಬಾಗಿ ಕರಕಮಲಂಗಳಂ ಮುಗಿದು॥ ೧೮೯

ಸನ್ನುತಮುನಿವರರಿರ್ದಂ
ತೆನ್ನನೆ ನಿಮ್ಮಡಿಗಳಕ್ಕರಿಂದೇಱಿಸಿ ಸಂ ।
ಪನ್ನತೆಯಿಂದುಪಸರ್ಗಮ
ದನ್ನಱಿ ಪಿಂಗಿಸುವಯೆಂಬುದನುಚಿತಮಲ್ತೇ ॥ ೧೯೦

ನಿಮ್ಮಡಿಗಳಮ್ಮ ಮಯ್ಯೊಳಾದ ಗುಣಮುಂ ಕಂಡೀಮಾತಂ ಬೆಸಸದಿರೆಂಬುದಂ ಜಿಷ್ಣುಮುನೀಶ್ವರರಿಂತೆಂದರ್ ॥ ೧೯೧

ನೆಱೆಯೆ ಧರಿತ್ರಿ ಕೈಮುಗಿವಿನಂ ಪದೆಪಿಲ್ಲದೆ ರಾಜ್ಯಲಕ್ಷ್ಮಿಯುಂ
ತೊಱೆದು ಮನುಷ್ಯಲೋಕಸುಖಮುಸ್ಥಿರಮಂದಳಿಪಿಂದೆ ಸೋಲ್ತು ಪೊ
ಱಱುಗಿಡದಮ್ಮ ಜೀಯೆನಿಸಿ ಯಾವೊತಲಂ ಜಿನದೀಕ್ಷೆಗೊಡ್ಡಿ ಮ
ತ್ತೞಿಕೆಯ ಮೂಱುಮೂಢಮುಮನೊರ್ಮೆಯೆ ಬಿಟ್ಟು ಮಹಾನು
ರಾಗದಿಂ ॥ ೧೯೨

ಪಗೆಯುಳ್ಳನಂತೆ ಪರಸಮಯಮುಮಂ ಸಾರದೆ, ದೂರದ ನಂಟರಂ ಕಂಡರಂತೆ ಸಂಶಯಮಾಗದೆ, ಕಳ್ಳೋಡುವನಂತೆ ಸುಮಾರ್ಗಕ್ಕಂಜದೆ, ಸಾಲಗೊಂಡ ಬಡವನಂತೆ ತಪಕ್ಕೆನಡುಗದೆ, ಕಿರ್ಚಿನಂತೆ ಸದ್ಧರ್ಮಕ್ಕೆ ಕಾಯದೆ, ನಿರ್ಮಲಚಿತ್ತದಿಂದುತ್ತಮಮಪ್ಪ ತಪಮಂ ಮನಮಿಕ್ಕದೆ ಬೆಱದೆಗೆಯದೆ ಪೆಱಿನ ನವಕ್ಕಮಾಡದೆ ಮೋಕ್ಷಾಪೇಕ್ಷೆಯಿಂ ನಿಜಬುದಿ

ಯಿಂದರ್ತಿವೆರಸು ನೆಗೞ್ದಯುಪ್ಪುದಱಿಂ ನಿನಗೆ ತಪದ ಮಾಹಾತ್ಮ್ಯ ದಿಂದಣಿಮಾ ಮಹಿಮಾ ಗರಿಮಾ ಲಘಿಮಾ ಪ್ರಾಪ್ತಿ ಪ್ರಾಗಲ್ಭ್ಯಂ ಈಶತ್ವಂ ವಶಿತ್ವಂ ಕಾಮರೂಪಿತ್ವಂ ಎಂಬಷ್ಟಗುಣೈಶ್ವರ್ಯಮುಂ ಪುಟ್ಟಿದುವಪ್ಪುದಱಿಂ ನಿನ್ನಿಂದಕಂಪನಾಚಾರ್ಯರುಪಸರ್ಗಂ ಪೋಕು ಮೆಂದು ಪೇೞ್ದಪದಱಿಂ ||

ಜೀವವಧೆಯಾಗದಂತಱಿ
ಳಾವನಿತಳಪೂಜ್ಯಪೋಗಿ ಪಿಂಗಿಸುವುದು ಸ |
ದ್ಭಾವದಿನೆನೆ ದುಷ್ಕೃತವಿ
ದ್ರಾವಣನಪರಿಮಿತಧೈರ್ಯನನುಪಮವಾಕ್ಯಂ || ೧೯೪

ಮುನಿಪನ ಮಾತಂ ಭಾವಿಸಿ
ಮನದೊಳ್ ಬೆಱಗಾಗಿ ವಿಷ್ಣುಮುನಿವಲ್ಲಭನೊ |
ಯ್ಯನೆ ಜಿಷ್ಣುಮುನಿಗೆ ಪೊಡೆಮ
ಟ್ಟನುನಯದಿಂ ಪೋಪೆನೆಂಬ ಬಗೆಯಂ ತಂದಂ || ೧೯೫

ಬೇೞನಿಸಿ ನೆಗೞ್ತೆಗೆ ಬೆಂ
ಬೀೞದೆ ತಲ್ಲಣಿಸದಾರ್ತರ್ ಕೂರ್ತವಯುವದಿಂ |
ಕೇೞ ಪ್ರಭಾವನಾಂಗಮ
ನೇೞಸದಱ್ಕತರ್ ತಾಳ್ದವೇೞ್ಪುದು ಭವ್ಯಂ || ೧೯೬

ಅಕ್ಷಯಲಕ್ಷ್ಮಿಯನೆಯ್ದುವ
ಪೇಕ್ಷೆಯನುಳ್ಳಂ ಪ್ರಭಾವನಾಂಗಮದಂ ಮಾ |
ಪಕ್ಷಯಮಂ ಮಾಡುವುದನು
ಪೇಕ್ಷಿಸದೆ ಮನೋನುರಾಗಮಂ ತಳೆದಂ || ೧೯೭

ಬಡವನೆನವೇಡ ಪೊನ್ನು
ಳ್ಳೊಡೆಯನುಮೆನವೇಡ ಕೇಳ್ ಪ್ರಭಾವನೆಯಂ ನೇ |
ರ್ಪಡೆ ಮಾೞ್ಪುದು ಮಾಡದಮಂ
ಪಡೆಯಲ್ಕಾರ್ತಪನ ದೇವನಿಳಯದ ಸುಖಮಂ || ೧೯೮

ಮುನಿಯೆನವೇಡ ಶ್ರಾವಕ
ನೆನವೇಡ ಮನೋಜ್ಞೆಯಿಂ ಪ್ರಭಾವನೆಯಿಂ ನೆ ।
ಟ್ಟನೆ ಪಾಪವೇಱುವುದಲ್ಲದೊ
ಡನಂತಸುಖನಿಳಯನಾಗಲಾಱಂ ಕಡೆಯೊಳ್ ॥ ೧೯೯

ಅನುಪಮನಿರ್ವಾಣಶ್ರೀ
ವನಿತೆಯ ಪೊಸಜವ್ವನಂ ಪ್ರಭಾವನೆಯೆಂದೆಂ ।
ದನವರತಂ ಬಣ್ಣಿಪೆನಿ
ನ್ನೇನೆಂದಾಂ ಬಣ್ಣಿಪೆಂ ಪ್ರಭಾವನೆಯೊಳ್ಪಂ ॥ ೨೦೦

ಎಂದು ಪ್ರಭಾವನೆಯೊಳಾದ ಪರಮೈಶ್ವರ್ಯಮಂ ಬಗೆದಿದನೇಳಿಸಱಿಪುರ್ದು ಸದ್ದೃಷ್ಟಿಯುಪ್ಪಂಗಂ ಪಾಪಭೀರುವಪ್ಪಂಗಂ ಧರ್ಮಾನುರಾಗಿಯುಪ್ಪಂಗಂ ಸಜ್ಜಜ್ಞಾನಿಯುಪ್ಪಂಗಂ ಮರ್ಗತಿಗಮನಭಯಮುಳ್ಳಂಗಂ ಉಚಿತಮಲ್ಲೆಂದು ಬೆಳಗಾದಾಗಳ್ ಗುರುವಂದನೆಯಂ ಮಾಡಿ ಜಿಷ್ಣುಮುನೀಶ್ವರನಾಜ್ಞೆಯಿಂ ಮಿಥಿಲಾಪುರಮಂ ಪೊಱಮಟ್ಟು ಋದ್ಧಿಪ್ರಾಪ್ತನಪ್ಪುದಱಿಂ ಮನದಿಂ ಮುನ್ನಂ ಹಸ್ತಿನಾಪುರಮನೆಯ್ದಿ ಪದ್ಮಮಹಾರಾಜನರಮನೆಯಂ ಪುಗುವುದುಂ ॥ ೨೦೧

ಪಿರಿದಪ್ಪ ಭಕ್ತಿಯಿಂ ವಿ
ಷ್ಟರದಿಂದೆರ್ದಾರ್ಬಿಱಿಂ ಪುರಂಧ್ರೀನಿಕರಂ ।
ಬೆರಸಿದಿರ್ವಂದು ಮುನೀಶ್ವರ
ಚರಣದ್ವಯಪಲ್ಲವಕ್ಕೆ ಮುಱಿದುಂಬಿಯವೋಲ್ । ೨೦೨

ನಮ್ರಮಸ್ತಕನಾಗಿ ರಾಜಭವನದೊಳಗಣ್ಗೊಡಗೊಂಡು ಬಂದು ಬ್ರಾಹ್ಮಸನದೊಳ್ ಕುಳ್ಳಿರಿಸಿ ಕಾಲಂ ಕರ್ಚಿ ತಳ್ಗೋದಕಮಂ ತಲೆಯೊಳ್ ತಳಿದುಕೊಂಡು][1] ॥ ೨೦೩

---

[1] ಅಣಿಮಾದ್ಯಷ್ಟಗುಣಸಮೇತನಪ್ಪ ನೀನೆ ಪೋಗಿ ಜೀವವಧೆಯಾಗದಂತುಪಸರ್ಗಮಂ ಪಿಂಗಿಸಿ ಬಪ್ಪುದೆನೆ ಮಹಾಪ್ರಸಾದಂ ಕೈಕೊಂಡನೆಂದು ವಂದಿಸಿ ವೃದ್ಧಿಪ್ರಾಪ್ತನಪ್ಪುದಱಿಂ ಹಸ್ತಿನಾಪುರಕ್ಕೆ ವಂದರಮನೆಯಂ ಪುಗುವುದುಂ ಪದ್ಮಮಹಾರಾಜನಿದಿರ್ಗೊಂಡು ಪೋಗಿ ಪಿರಿದುಮಣೆಯೊಳಿರಿಸಿ ಕಾಲಂ ಕರ್ಚಿ ಪಾದೋದಕಮಂ ತಲೆಯೊಳ್ತಳಿದುಕೊಂಡು ಕಾಲಮಾಳೆ ಬಿದ್ದರ್. (ಗ)

ವರವಿಮಾಯುಲೆಂದು ವಾಸವ
ಪುರದಿಂ ಸುರಭೂಜವಿಾಯುದು ಬಂದುದು ಮತ್ತೆ ।
ನ್ನರವಮನೆಗೆಂದಾಮುನಿಯುಂ
ಪರಮೋತ್ಸವದಿಂದೆ ನೋಡಿ ಕಣ್ಣ್ಣಾಣಿವಿನೆಗಂ ॥ ೨೦೪

[ಕೈಗಳಂ ಮುಗಿದು] ನಿಮ್ಮಡಿ ಬಿಜಯಂಗೆಯ್ದ ಕಾರಣಮಾವುದು
ಬೆಸಸಿಮೆಂಬುದುಂ ವಾತ್ಸಲ್ಯರತ್ನಾಕರನಿಂತೆಂದಂ[1] ॥ ೨೦೫

ದುರಿತದ ಪುಂಗಾಲ್ಪಾಪದ[2]
ನೆರೆಮನೆ ಬ್ರಹ್ಮೇತಿಕಾಬರಣುಗಿನ[3] ಗಿಳಿ ಸಿ ।
ಷ್ಕರುಣದ ನೆಲೆ ದುರ್ಗುಣದಾ
ಗರಮೆನಿಸುವ ನಿನ್ನ ಮಂತ್ರಿ ಬಲಿಯೆಂಬ ಖಳಂ ॥ ೨೦೬

[ನಿನ್ನರಸಂ ಮಾಣಿಸಿ ಯಜ್ಞದ ನೆವದಿಂ ಕಣ್ಗಟ್ಟಿ ತಿರಿಪಿ ಮಾಸಾ
ರ್ಧರಾಜ್ಯಮಂ ಬೇಡಿಕೊಂಡು ಮುನ್ನಿನ ಕೋಪದಿಂದೆ ಸಿತಗಿರಿಯೊಳ
ರ್ದಕಂಪನಾಚಾರ್ಯರ್ ಮೊದಲಾದಯ್ನೂರ್ವರ್ ಮುನಿವರರ್ಗಂ
ಘೋರೋಪಸರ್ಗಮಂ ಮಾಡಿದಪನದನೀನುಪೇಕ್ಷಿಸಿ ಮಿಥ್ಯಾದೃಷ್ಟಿಗಳಂ
ತುಸಿರದಿರ್ಪುದುಚಿತಮಲ್ತು ॥ ೨೦೭

ತೊಡರದೆ ನಮ್ಮಾಮ್ನಾಯದೊ
ಳಡೆಯುಡುಗದೆ ಬಂದ ಜೈನಧರ್ಮಮನೆಡೆಯೊಳ್ ।
ಕಿಡಿಸಿ ಮುನಿಸಂಕುಳಕ್ಕಾ
ದೆಡರಂ ಕಡೆಗಣಿಸಿ ನೋಡುತಿರ್ಪುದೆ ನೃಪತೀ ॥ ೨೦೮

ಅಂತಲ್ಲದೊಡಂ 'ರಾಜ್ಞಾ ಹಿ ರಕ್ಷಿತೋ ಧರ್ಮಃ' ಎಂಬ ಮಾತುಮಂ 'ದುರ್ಬಲಸ್ಯ ಬಲೋ ರಾಜಾ' ಎಂಬ ರಾಜನೀತಿಯುಮಂ 'ಸರ್ವೇಷಾಂ ಪಾರ್ಥಿವೋ ಗುರುಃ' ಎಂಬ ನೀತಿವಾಕ್ಯಮುಮಂ

1 ವಿಷ್ಣುಕುಮಾರ ಮುನಿಯಿಂತೆಂದಂ (ಗ) 2 ಪುಂಜಂ ಪಾಪದ (ಗ)
3 ಪಾಪಿಷ್ಠರಪ್ಪರಣುಗಿನ (ಗ)

'ಭೃತ್ಯಾಪರಾಧಸ್ಯ ಸ್ವಾಮಿನೋ ದಂಡ' ಮೆಂಬ ಪುರಾಣಮುಮಂ ನೆನೆದಪ್ಪೊಡಂ ಮುನಿವರರುಪಸರ್ಗಮಂ ಮಾಣಿಸುವುದೆಂಬುದುಂ][1] ||

ಬೆಱಗಾಗಿ ಕೇಳ್ದು ಕೋಪಂ
ಪೊಱಮಡೆ ಕಣ್ಗಟ್ಟಿ ಪುಸಿದು[2] ಯಜ್ಞದ ನೆವದಿಂ |
ನೆಱೆ ಮುನಿಚಯಕ್ಕೆ ತಪ್ಪುವೆ
ಕುಱಿಯಂ ತಱಿದೊಟ್ಟಿ ಕೊಲ್ಲದೆಂತುಂ ಮಾಣೆಂ || ೭೧೦

ಇಱುಂಪೆಗೆಱಂಕೆ ಮೂಡಿದಂತೆ ಕೊರ್ವಿ ಕೊಱೆದು ಪಾಯ್ದು ರಕ್ಕಸಿಯ ನಿಱಿಯನುರ್ಚಿದರೆಂಬಂತೆ [ಸಿಂಹದ ಕೇಸರಮಂ ಕಿತ್ತಿರೆಂಬಂತೆ,] ಎನ್ನನೇಳದಂಮಾಡಿ [ಮೂಗನರಿದು ಕನ್ನಡಿಯಂ ತೋಱು ವಂತೆ] ಕಣ್ಣಂ ಕುತ್ತುವ ಚೆಲ್ಲಮನಾಡಿ [ಧೂರ್ತನೆನ್ನ ಕೈಯಂ ಕೊಂಡೆನ್ನ ಕಣ್ಣಂ ಕುತ್ತುವಂತೆ ಸೊಕ್ಕಿ ಎನ್ನ ಗುರುಗಳನೆನ್ನ ಪೊಱಲ ನೆನ್ನಂ ಬಗೆಯದೆ ನಾನಾವಿಧೋಪಸರ್ಗಂಮಾಡಿದಪಂ ಗಡಮೆಂದು] ||

ಬಲಿ ಮಾಡಿದ ದೂರ್ತಿಂಗು
ಮ್ಮಳಮಾಗಿ ಕನಲ್ದು ನೊಂದು ಸಿಂಹಾಸನಮಂ |
ತಳದೊಳ್ ಪೊಯ್ದು ನರೇಶಂ
ಮುಳಿಸಿಂ ಮೆಯ್ಯಱಿಯದೆಟ್ದು ಪರಿಷವೆಸರದೊಳ್ || ೭೧೨

[ಕಂಡು ವಿಷ್ಣುಕುಮಾರಮುನಿಪಂ ಧರಣೀಶ್ವರನ ಮನದ ಭಕ್ತಿಯುಮಂ ಸದ್ಧರ್ಮದೊಳಾದ ಪಕ್ಷಮುಮಂ ಸ್ವಸಮಯದೊಳಾದ ವಾತ್ಸಲ್ಯಮುಮಂ ನೋಡಿ ಮೆಚ್ಚಿ ಬೇಡೆಂದು ಮಾಣಿಸಿ ಧರ್ಮದೊಳಾದ ನಿನ್ನ ತಾತ್ಪರ್ಯಮಂ ನೋಡಲೆಂದು ಬಂದೆವಿಂದು ನಿನ್ನ ಮನದ

---

[1] ಯಜ್ಞದ ನೆವದಿಂ ನಿನ್ನ ರಾಜ್ಯಮಂ ಪಕ್ಷಂಬರಂ ಬೇಡಿಕೊಂಡು ಮುನ್ನಂ ಮುನಿಕುಂಟಾಗಿರ್ಪ ದಱಿಂದಕಂಪನಾಚಾರ್ಯರ್ಮೊದಲಾದೈನೂರ್ವರ್ ಮಹಾತನಪೋಧನರಂ ಕಿಚ್ಚಿನೆ ಱಳಿಟ್ಟು ಕೊಂದಪನಿದನುಪೇಕ್ಷಿಸಿ ನೋಡುತ್ತಿರ ಲಾಗದೆಂಬುದುಂ (ಗ)

[2] ಕೋಪದಿಂಮೆಯ್ಯಱಿಯದೆ ಕಣ್ಗಟ್ಟುತಿರಪಿ (ಗ)

ನಿರ್ಮಳಿಕೆಯುಮಂ ಧರ್ಮದೊಳಾದಱಕೆಯುಮಂ ಸನ್ಮುನಿಗಳೊಳಾದ ಪಕ್ಷಪಾತಮುಮಂ ಕಂಡು ಪಿರಿದು ಸಂತೋಷಮಾಯ್ತೆಂದು ಮತ್ತಮಿಂತೆಂದಂ ॥ ೨೧೩

ನರಪ ನೀಂ ಮುನಿದಂದು ಕೊಂದಪೆಯೆಲ್ಲರಂ ಕೊಲೆಯಾಗೆ ನಿ
ಷ್ಠುರಮಹಾದುರಿತಾಳಿ ಸಾರುಗು ಕರ್ಮ ಸಾರ್ದೊಡೆ ಪೊಲ್ಲಮೀ
ಯರಿಬಲೀಂದ್ರನ ಮಾಡುವೊಂದತಿಬಾಧೆಯಂ ಕ್ಷಣದಿಂದಮು
ಚ್ಚರಿಯೆನಲ್ಗಡ ಜೀವಬಾಧೆಯನಾಗದಂತಿರ ಬುದ್ಧಿಯಿಂ ॥ ೨೧೪

ಮಾಣಿಸಲಾವೆ ಸಾಲ್ವೆವೆಂದು ಜನಪತಿಯ ಕೋಪಾವೇಶಮಂ ಪಿಂಗೆ ನುಡಿದು ರಾಜಭವನದಿಂ ಪೊಱಮಟ್ಟು ಲೀಲೆಯಿಂದಣಿಮಾದ್ಯಷ್ಟಗುಣೈಶ್ವರ್ಯನಪ್ಪುದಱಂ ತನ್ನ ರೂಪಂ ಕಿಱಿದುಮಾಡಿ ॥ ೨೧೫

ಕೊರಳ ಜನ್ನಿವರಂ ಪೊಸತ್ಕಯನೆಯ್ದೆ ಮಿಂಚುವ ಬೆಳ್ಳಿಯು
ತ್ತರಿಗೆ ಭಾಸುರಮಪ್ಪ ತೇಜಮಾಗುಮುರ್ವ ಪವಿರ್ರೆ ಚೆಲ್ವಿನಿಂ
ಬೆರಲೊಳೊಪ್ಪುವ ದರ್ಭೆ ಪಿಂಗಳನೇತ್ರಮುಟ್ಟದುಕೂಲಮೊ
ಪ್ಪಿರೆ ಧರಾಮರವೇಷಮಂ ಮುನಿಕುಂಜರಂ ನೆಱೆ ತಾಳ್ದಿದಂ ॥ ೨೧೬

ಉರದೊಳಂ ನೆಱೆ ಬಾಹುಮೂಲದೊಳಂ ಲಲಾಟದೊಳಂ ಮನೋ
ಹರಮೆನಲ್ ನಿಡುಬೊಟ್ಟು ಶೋಭಿಸೆ ಪೊಂಗಿ ಬಾಗಿದ ಕುಬ್ಜಕಾ
ಲ್ಕರಮೆ ಕುಗ್ಗಿದ ಹಸ್ತಮೊಪ್ಪುವ ಹೇಮವರ್ಣಮಗಲ್ದುರಂ
ನಿರುಪಮಾಕೃತಿ ಕಚ್ಚನಪ್ಪ ಶಿರೋರುಹಂ ಪೊಚೆವಾನನಂ ॥ ೨೧೭

ಅಂತು ವಾಮನರೂಪಂ ಕೈಕೊಂಡು ಪುರಮಲ್ಲಮುಚ್ಚರಿವಡೆ ಪೊಱಲೊಳಗಣಿಂ ಪೊಱಮಟ್ಟು ಮಲ್ಲನೆ ಸಿತಗಿರಿಗೆ ವರ್ಪುದುಂ, ನೆರೆದ ನೆರವಿ ಪರಮೇಶ್ವರನೆಂದು ರೂಪಿಂಗಂ ತೇಜಕ್ಕಂ ಸೋಲ್ತು ಬೆನ್ನನೆ ಜಯಜಯನಿನಾದದಿಂ ಪೊಗೞುತ್ತುಂ ಪೊಡೆಮಡುತ್ತುಂ ಕವಿದುವರೆ ಯಜ್ಞಶಾಲೆಯು ಪೊಱಗಿರ್ದ ಬಲಿಯುಂ ಶುಕ್ಲನುಂ ಪ್ರಹ್ಲಾದನುಂ ಕಂಡು ಸಾಕ್ಷಾದ್ವಿಷ್ಣುವೆಂದು ॥ ೨೧೮

ಮನದೊಳುತ್ಸವಮಾಗೆ ಪೆರ್ಚಿ ಕಡಂಗಿ ನಿಲ್ಲದೆ ಭಕ್ತಿಯಿಂ
ಜನಸಮೇತಮುದಾತ್ತವೃತ್ತಿಯಿನಾದರಂಬೆರಸಕ್ಕಱಿಂ ॥
ತನಗೆ ಸಂತಸಮೆಂದು ಪುಟ್ಟಿರೆ ರಾಗದಿಂದಿದಿರ್ವಂದು ಕೋ
ಕನದನಾಭನ ಗೆತ್ತು ಪಾದಯುಗಕ್ಕೆ ಮಗ್ಗಿದನಾಬಳಂ ॥ ೧೦೯

ಎನ್ನ ಮಾಡುವ ಮಾಟಮಂ ನೆಱೆ ಕೇಳ್ದು ವೈಷ್ಣವಲೋಕದಿಂ
ಪನ್ನಗಾಶಯನಕ್ಕಱಿಂದಮೆ ನೋಡಲೆಂದನುರಾಗದಿಂ
ತನ್ನ ಕೂರ್ಮೆಯಿನಿಲ್ಲಿಗೋವದೆ ಬಂದನೆಂದೊಡೆ ಭೂತಳ
ಕ್ಕೆನ್ನ ನೋಂತುದನಾರು ನೋಂತರೊ ಭಾವಿಪಂದು ಧರಿತ್ರಿಯೊಳ್ ॥

ಎಂದು ಪೆರ್ಚಿ ಮೇಗುಮೆಯ್ಯಱಿಯದೆ ಕೃತಕಧರಾಮರನನಿದಿ
ರ್ಗೊಂಡು ಪೋಗಿ ಯಜ್ಞಶಾಲೆಯುಮಂ ಮಂಟಪಂಗಳುಮಂ ತೋಱಿ
ಪಿರಿದಪ್ಪಾಸನದೊಳ್ ಕುಳ್ಳಿರಿಸಿ ಕಾಲಂ ಕರ್ಚಿ ಪಾದೋದಕಮಂ
ತಲೆಯಮೇಲೆ ತಳಿದುಕೊಂಡು ಮಗುಳ ಮಗುಳ ಪೊಡೆಮಟ್ಟು ಕೈಗಳಂ
ಮುಗಿದು ಮುಂದೆ ನಿಂದಿರ್ದಿಂತೆಂದಂ ॥ ೧೧೦

ದೇವಮಾನವರಾಜವಂದಿತಪಾದಪಂಕಜ ದೈತ್ಯವಿ
ದ್ರಾವಣಾಚ್ಯುತ ವಿಷ್ಣುಲೋಕದಿನೆನ್ನ ಮಾಡಿದ ಪುಣ್ಯದಿಂ
ದೇವ ನೀನವನೀತಳಕ್ಕಿಳಿದಿಲ್ಲಿಗುನ್ನತಿಯಿಂದೆ ಸ
ದ್ಭಾವದಿಂದಮೆ ಬಂದೆಯೆಂದೊಡೆ ನಾನೆ ಧನ್ಯನುರ್ವಿಯೊಳ್ ॥ ೧೧೧

ಪಲವು ಕಾಲಮನೇಕಪುಷ್ಪನಿಕಾಯದಿಂ ಹರಿ ನಿನ್ನನ
ಗ್ಗಳದ ಭಕ್ತಿಯಿನೆಯ್ದೆ ಪೂಜಿಸಿಯುಂ ಮಹಾತಪದಿಂದಮು
ಮ್ತಳಸದಾತ್ಮ ಶರೀರಮಂ ನೆಲಕಿಕ್ಕಿಯುಂ ನೆಱೆ ಕಾಣದಾಂ
ಜಲರುಹೋದರ ಕಂಡೆ ನಿನ್ನ ಪದಾಬ್ಜಮಂ ಕೃತಕೃತ್ಯನೆಂ ॥ ೧೧೨

ಎನ್ನಂತೆ ಪುಣ್ಯದಿಂದಧಿಕರಿಲ್ಲೆಂದು ತನ್ನ ಪುಣ್ಯಕ್ಕೆ ತಾನೆ ಪೊಂ
ವಿಸ್ಮಯಂಬಟ್ಟು ಕೃತಕವಿಪ್ರನ ಮೊಗಮಂ ನೋಡಿ ಭಕ್ತಿಯಿಂ ವಿನ
ಮಸ್ತಕನಾಗಿ ದೇವರೀಯಜ್ಞಕಾಲದೊಳೆನಗೆ ಸಂತೋಷಮುತ್ಸಾ

ಪುಮಪ್ಪಂತಾಗೆ ಮನಕ್ಕೆ ಬಂದ ವಸ್ತುವಂ ಕೈಕೊಳ್ವುದೆಂದು ಪೇಳ್ದೆ
ಪಟ್ಟು ಬೇಡಿಕೊಳ್ವುದುಂ, ಮಹಾಮಹಿಮಾನ್ವಿತೆಂದು ॥ ೬೬೪

ನಿನ್ನ ಯಾಜ್ಞದ ಪೆಂಪನಚ್ಚರಿವಟ್ಟು ನೋಡಲುವೇಳ್ತಿ ಬು
ದ್ದಿನ್ನಿರಂ ಕಾಳಮಿಲ್ಲಿ ಸಂತಸನಾಗಿ ಕಂಡೆನಪೂರ್ವಮಂ
ಎನ್ನ ಚಿತ್ತದೊಳೊಂದುಮಿಲ್ಲತಿಕಾಂಕ್ಷೆ ಬಾಹುಬಲೀಶನಂ
ನಿನ್ನನಂಬುಮಹೋಗಳಾಬಲಿ ಮಾಣ್ದಪುದ್ದಿಹಮುಖ್ಯನಂ ॥ ೬೬೫

ಎನಗೆ ಸಂತಸವಾಗೆ ನಿನ್ನ [illegible] ದು
ಜ್ಞರಿಯೆಸಪ್ಪ ಕಲಿಂದ್ರಾಜಿಮನಕ್ಕ [illegible] ಗಳಿಳ್
ವ ಸಕಲಂ [illegible] ಧೈಸುವೆನಕ್ಕ [illegible]
ಪ [illegible] ಪುಗಿಲಪ್ಪ ಕನ್ನದನಕ್ಕ ಕೈ [illegible] ॥

[illegible] ಪ್ರಾರ್ಥನಾಪ್ರಮಂ [illegible] ತಿಂಗ
ತಳಿದಂ [illegible] ಪ್ರಾಪ್ತಿ
ಧನಧಾನ್ಯ [illegible] ಕಾಂಕ್ಷೆ [illegible]
[illegible] ಪೂಂ [illegible]
ಪರಿ [illegible] ಜೊತ್ತ [illegible] ಧರ್ಮ [illegible]
ಪ್ರಸಿದ್ಧಿಗಂ [illegible] ಮನೆಯ [illegible]
ನೀರಂ [illegible] ಜೊಗಳಸೆಯ ಧಾರೆಯಂ [illegible]
ಪಿಪ್ಪ [illegible] ಸಿಸ್ತ್ರಂಗವನ [illegible]
ತೋರಣಾದಿ ಲಕ್ಷಣಂ [illegible] ॥ ೬೬೬

ಸೊಲ್ಲಿನ [illegible] ಸನತ್ತಿ ಬಗ್ಗಿ [illegible]
ಬಕ್ಷಿನ ಶುಭಲಕ್ಷಣಾಂಕಿತಂ [illegible] ತ್ರಿಯಂ
ನಿಲ್ಲಿಪತ್ತೊಡೆ ಮುಂದೆ ನಿಸ್ಸ [illegible]
ಪೊಲ್ಲನಕ್ಕದಱಿಂದೆ ಧಾರೆಯನಿಕ್ಕಿ ಪ್ರಾಪ್ಯವಿ [illegible] ॥ ೬೬೭

ಬಲಿ ತನ್ನನ ಪೂತಂ ಪಿಡಿದು ಸತ್ಪುರುಷಂಗೊನೆ [illegible] ಮುವಂ
ಕೊಡಲಾಗದೆಂದು ಶುಕ್ರನಾದ ಶುಕ್ರನ ಮಾತಂ [illegible]

ಮನದನುರಾಗದಿಂ ಕೃತಕಧರಾಮರಂಗೆ ಮೂಱಡಿನೆಲನಂ ಕೊಟ್ಟೆನೆಂದು ಧಾರೆಯನೆಱೆವುದುಂ ವಿಷ್ಣುಕುಮಾರಮುನಿ ರಾಜ್ಯಂಕೈಕೊಂಡು ಬಲಿಯುಮಂ ನೆರೆದ ನೆರವಿಯುಮಂ ನೋಡೆ ನೋಡೆ ಮೂಱಡಿಗೊಟ್ಟಂಗಾಱಡಿಯಾಗಿ ಮಾಡುವೆನೆಂಬಂತೆ ಕುಳ್ಳಿರ್ದೆಡೆಯಿಂದದಿಂ ತೊಟ್ಟನೆ ಭಯಂಕರವಾಗೆ ||][1]

೭೯

ದಿವಿಜೇಂದ್ರಾದೀಂದ್ರರೊಳ್ ಮಚ್ಚರಿಸೆ ನೆಣಸಿ ಪೂಕೆರ್ರಂದು ಕೈವ್ರೊಯ್ದು ಕೋಪ್ರೋ
ದ್ಭವದಿಂದೆಕ್ಕೆಕ್ಕೆಯಿಂ ಮೊದಲಿಸಿ ಬಳೆದನೆಂಬಂದದಿಂ ವ್ಯೋಮವೆಂ ಮು
ಟ್ಟುವಿನಂ ಗಾತ್ರಂ ವಿಯನ್ಮಂಡಲಕೆ ತಡೆಯೆ ತೂಂತಿಟ್ಟನೆಂಬಂತೆ ಸಿಂದಂ
ಭುವನಕ್ಕಾಶ್ಚರ್ಯಮಾಗಲ್ ದಿವಿಜಮನುಜವಿದ್ಯಾಧರಾರಾಧ್ಯಪಾದಂ ||

ಮಕುಟಂ ಸೌಧರ್ಮಕಲ್ಪಂ ರವಿ ಹಿಮಕಿರಣಂ ಕುಂಡಲಂ ನೀಲಮೇಘ
ಪ್ರಕರಂ ತೊಂಗಲ್ ಗ್ರಹಂಗಳ್ ಬೆಮರಿನೊಗೆದ ಬಿಂದೂತ್ಕರಂ ಕೂಡೆ ತಾರಾ

---

[1] ಭಾವಯುತ ದಿಗಂಬರದ ಸಂವರ್ಣಿಸಿ ಬಳ್ಳಿಯ ಕಟಕಮಂ ಪ್ರಮಾಣ ಎವೆರ್ಣಘಣಿಯ ಕೋವಣಮುಮಂ ಬೆಳ್ಳಿಯ ಮುತ್ತುರಿಗೆಯುಮಂ ಮುತ್ತಿನ ಶರದ ಯಜ್ಞೋಪವೀತಮುಮಂ ರಕ್ತಕಂಬಳವಂ ದುಕೂಲಾಂಬರಮುಮಂ ಕೈಯೊಳ್ ವಾಮನರೂಪಂ ಕೈಕೊಂಡು ಆಕಾಶದಿಂ ಸರಿದ ನೆರವಿಯೆಲ್ಲಂ ವಿಸ್ಮಯಂಬಡೆ ಬಂದು ನಿಂದಿರ್ಪುದುಂ ಮುಂದೆ ವಿಷ್ಣು ಪ್ರತ್ಯಕ್ಷಮಾದನೆಂದು ಬಲಿ ತನ್ನೊಡವುಟ್ಟಿದರ್ವೆರಸು ಸಾಷ್ಟಾಂಗಪ್ರಣುತನಾಗಿ ಎಱಗಿ ಪೊಡಮಟ್ಟು ಪೊನ್ನ ಮುತ್ತಿನ ಮಾಣಿಕ್ಯದ ರತ್ನದ ರಾಶಿಯುಂ ಮುಂದೆ ಪೂಜಿಸಿ ನಿಮ್ಮಡಿ ಕೈಕೊಳಲ್ವೇಳ್ಕುಮೆಂದು ಪ್ರಾರ್ಥಿಸುವುದುಂ, ಎಮಗೆ ಅವಱಿನೇರೆ ಪೋಪವಿಲ್ಲಮೆಮಗೆ ಯಮ ಮಾತ್ರಗಂ ಹೋಮಕುಂಡಕ್ಕೆ ತಕ್ಕಂತಾಗಿ ಮೂಱಡಿ ನೆಲನಂ ಕುಡುವೊಡೆ ಕುಡಿಮೆನೆ ಶುಕ್ರನುಂ ಬೃಹಸ್ಪತಿಯುಂ ಪ್ರಹ್ಲಾದನುಮಿವಂ ಬ್ರಾಹ್ಮಣನಲ್ಲ ನಿನ್ನ ಕೊಲುವ ರುಷಿವಧೆಯನಱಿದು ನಾನು ಕ್ಷ್ಯಮುಳ್ಳ ಮಹಾರುಷಿ ನಿನ್ನ ಕಿಡಿಸಲ್ಬಂದನಿಲ್ಲಿ ಸಂಶಯಮಿಲ್ಲ ; ನೀನೀಪರಮೇಶ್ವರನ ಕಾರುಣ್ಯಮಂ ಪಡೆಯಲ್ವೇಳ್ಪುಡೆ ಪೊಡೆಮಟ್ಟು ಅಱಿಯದೆ ಗೆಯ್ದೆನೆಂದು ರುಷಿವಧೆಯುಮಂ ಮಾಣ್ಬುದೆನೆ, ಮಾಣದೆಂದು ಕೊಡುವೆ ಮೂಱಡಿ ನೆಲನುಮನೀಱಡಿಗೆ ಕಾರಣಮುಕ್ಕುಮೆಂದೊಡಂ ಮಾಣದೆ ಮೂಱಡಿ ನೆಲನಂ ಕೊಟ್ಟೆನೆಂದು ಪೆಯ್ಯರ್ಚಿ ಧಾರೆಯನೆಱೆವುದುಂ || (ಗ)

ನಿಕರಂ ದೇವೇಂದ್ರಶೈಲಂ ತನು ಕುಲಗಿರಿಗಳ್ ಲೀಲೆಯಿಂ ತೋಂಗಲೆಂಬಂ
ತೆ ಕರಂ ಪೆಂಪಿಂವಗುರ್ವಾಪರಿಸೆ ಗಗನಮಂ ಮುಟ್ಟಿ ನಿಂದಂ ಮುನೀಂದ್ರಂ॥

ಅಂತು [ದಿಶಾವಲಯಮೆಲ್ಲಂ ತನುಜ್ಯೋತಿರ್ಮಯಮುಮಂ ಗಗನ ತಳಮೆಲ್ಲಂ ಜಯಜಯನಿನಾದಮಯಮುಮಂ ಧರಾವಲಯಮೆಲ್ಲಂ ದೇಹಮಯಮುಮಾಗೆ] ಮಂದರಕ್ಕೆ ಪ್ರತಿಸ್ಪಂದಮಪ್ಪಂತೆಯುಂ ಧರಣಿಯು ಗಗನದಡೆಯುನಳೆಯಲೆಂದೆತ್ತಿದ [1] ವಿಧಾತ್ರನ ಕಯ್ಯ ದಂಡಮೆಂಬಂತೆ ಷೋಡಶಾಭರಣಭೂಷಿತನುಂ ದೇವಾಂಗವಸ್ತ್ರಪರಿವೇಷ್ಟಿತನುಮಾಗಿ[2] [ಜಗತ್ಕಾಶ್ಚರ್ಯಮುಮದ್ಭುತಮುಮಾಗೆ ವಿಗುರ್ವಿಸಿ ನಿಂದು ॥೬೩೨

ಪರಮಗುಣಾಂಬುರಾಶಿ ಜಿನಧರ್ಮಸಮುತ್ಪಥಶೀತರಶ್ಮಿ ಮಾ
ಣ್ಡಿರಿಸದೆ ವಜ್ರವೇದಿಕೆಯೊಳೊಂದೆಡೆಯುಂ ಭರದಿಂದೆ ಮಾನುಷೋ
ತ್ತರಧರಣೀಂದ್ರದೊಳ್ ತಡೆಯದೊಂದಡಿಯಂ ನಯದಿಂದಮಿಟ್ಟು ನಿ
ರ್ಜರಪತಿಸಂದ್ಯಸೊಂದಡಿಗೆ ಭೂತಳಮಿಲ್ಲದುದಗ್ರತೇಜದಿಂ ॥ ೬೩೩

ಕಾಲನಾಕಾಶಕ್ಕೆತ್ತಿ ಜಿನಪಾದಭಕ್ತನಪ್ಪಂತಂಗೆ ಮೂಱುಂಲೋಕಮೇಕಚ್ಛತ್ರಮೆಂಬಂತಾನುಂ ತದ್ಗಿರೀಂದ್ರದಳವಿಯುಮಂ ಮನುಷ್ಯಕ್ಷೇತ್ರಪ್ರಮಾಣಮುಮಂ ಕಾಲಿಂದಾಣೆಯುಗ್ಗ ನೋಡುವಂತಾನುಂ ಸುತ್ತಿದ ದ್ವೀಪಸಮುದ್ರಂಗಳಂ ಭವ್ಯರ್ಗೆ ಕವಡುರಂಬರೆನು ತೋಱುವಂತಾನುಂ ಮಾನವರ್ಗೆ ಮೇರೆಯೆಂದಱಿಪ್ಪವೆಂತಾನುಂ ತಿರಿಪುತ್ತುಮಿರ್ಪುದುಂ ಸಮಸ್ತದೇವಸಮೂಹಕ್ಕಾಸನಕಂಪಮಂ ಧಯಮುಮಾಗೆ ಬೇಗಮಱಿದು ಚತುರ್ವಿಧದೇವನಿಕಾಯಮುಂ ತಂತಮ್ಮ ಮಹಾವಿಭೂತಿಗಳ್ವೆರಸು ದೇವದುಂದುಭಿಗಳಸೆಯೆ ಭೋರೆನೆ ಬಂದು][3] ॥ ೬೩೪

---

1 ಕಾಲನಾಕಾಶದಂತರಮನಳೆಯಲೆಂದೆತ್ತಿದ (ಗ). 2 ದೇವಾಂಗನಾಪರಿವೇಷ್ಟಿತನುಮಾಗಿ.

3 ವಜ್ರವೇದಿಕೆಯೊಳೊಂದಡಿಯುಂ ಮಾನುಷೋತ್ತರದೆ ಳೊಂದಡಿಯನಿಟ್ಟು ಮುತ್ತೊಂದಡಿಗೆ ನೆಲನಿಲ್ಲದೆ ಕಾಲನೆತ್ತಿ ಜಿನಭಕ್ತನಪ್ಪಂಗೆ ಮೂಱುಂಲೋಕಮುಮೇಕಚ್ಛತ್ರಮೊಂದು ತೋಱುವಂತಾನುಂ ತದ್ಗಿರೀಂದ್ರವಳಿಯುಂ ಕಾಲಿಂದಾಣೆಯ್ಯವಂತಾನುಂ ದ್ವೀಪಸಮುದ್ರಮುಂ ಭವ್ಯರ್ಗೆ ಕವಡುರಂ ಬೆಟ್ಟ ತೋಱುವಂತಾನುಂ

ಸುರತರುನವೋತುವರಮಂ
ದನಸುಮನಂ ವಿಷ್ಣುಮುನಿಯುಮೊಲ್ದುತ್ಸಾಹಂ ।
ಬೆಸಸು ನಲಿನಲಿದು ಚಿತ್ತ್ರಿಯ
ಸರಿಯುಂತಿರೆ ಸುರಿವರಂಗಳಮಮಳಗುಣಾಢ್ಯರ್ ॥ ೧೩೫

ಪೊಸಮುತ್ತಿನ ಪೊಸವಜ್ರದ
ಪೊಸಪಚ್ಚೆಯ ಪೊಸಕೆನಿಪ್ಪ ವೈಡೂರ್ಯದ ರಂ ।
ಜಿಸುವ ಪೊಸಸೂರ್ಯಕಾಂತದ
ಶಶಿಕಾಂತದ ರತ್ನರಾಶಿಯಿಂ ಪೂಜಿಸಿದರ್ ॥ ೧೩೬

ಸುರಿದಪ್ಪುದಸೃತವ ಬಸ್ಸರಿ
ಧರಣಿಯೊಳಂಬುತೆ ವಿಷ್ಣುಮುನಿಪನ ಕೆಂದೊಳ್ ।
ತರತರದಿಸಿದರ್ ಪಾಡಿದ
ಶರವಿಂದಾಸನಿಯುಸುರಿಯರ್ ಬಹುವಿಧದಿಂ ॥ ೧೩೭

ಸುಂಗಳನಿ ಪು ರವಂ ಗಿ
ತಂಗಳ ನಿಸ್ವನವನೇಕಜಯಜಯನಾದಂ ।
ಪೊ ವಡೆದೆ ಪ್ಪೆ[1] ಸುರರ ಸ
ರಂ ಗಗನದೊಳಾದ ಮೂಸುಮುಸೆದುವು ಪಲವ್ರಂ ॥ ೧೩೮

ಶರಣಾಗೆಂಬರ್ಥಾರಿಕೆಂಬ ಮುದದಿಂ ಜೀಯೆಂಬ ದೇವೆಂಬ ಭಾ
ಸುರತೇಜೋಂಬಿ ಮಹಾಪ್ರಸಾದ ನುಡಿಯೆಂಬಾಶ್ಚರ್ಯಮೆಂಬಿಚ್ಚೆಯಿಂ
ಸ್ಥಿರನಾಗೆಂಬ ಮಹುಬ್ಬ ಭಾಪು ಮರ್ಭುಭಾಪಯ್ಯಯ್ಯ ನೋಡೆಂಬ ದೇ
ವರ ನಾನಾವಿಧಘುಸ್ವರಂ ನೆಗೆದುದಾಕಾಂತಂಬರಂ ವ್ಯೋಮದೊಳ್ ॥

ಜಿನಧರ್ಮದ ಪೆಂಪಂ ಪೋ
ಡಿವಿಗಱಿಪುವ ತೆಱದಿನಮರಾವಳಿನಿಸವಕ್ಷೋ ।

ಮಾವವರ್ಗ [illegible] ಮಾರಿಯು [illegible] ಅಗವೃತ್ತ [illegible]
ಬೇವನಿಕಾಯುಮಂ [illegible] ಮಹಾವಿಭೂತಿಯಿಂ ದೇವದುಂದುಭಿಗಳಸೆವ. (ಗ)

1 ಪೊಂಗುವ ವಸ್ವರಂ (ಗ)

ಕನದೊಡನೊಡನೆ ತಗುಳ್ದು
ಬ್ಯನೆ ರಾಗಂಬೆರಸು ಧಾತ್ರಿಯುಂ ಬಲವೆಂದರ್ ॥ ೭೪೦

ಅಂತಗುರ್ವೆಪ್ಪಿನಂ ಧೀರತೆಯೊಳಿರ್ಪಿನಂ [1]
ಮುನಿಸಿಕರಪೂಜ್ಯನಂ ಸಕಳಸಾಮ್ರಾಜ್ಯನಂ
ಕಾಶ್ಮೀರದವರೆಲ್ಲ ಗೊಲ್ಲದೇಶದರೆಲ್ಲ
ಚೋಳದೇಶದರೆಲ್ಲ ಚೇರಮಂಡಲದವರೆಲ್ಲ [2]
ಸೌರಾಷ್ಟ್ರದವರೆಲ್ಲ ಗೌಳದೇಶವರೆಲ್ಲ
ವೆಂಗಿನಾಡವರೆಲ್ಲ ಅಂಗದೇಶದರೆಲ್ಲ
ಕಾಮಾಕ್ಷಿಯವರೆಲ್ಲ ಸೌವೀರದವರೆಲ್ಲ
ಪಾರಿಯಾತ್ರಿಯರೆಲ್ಲ ನಾಳವಾವಸಿಯೆಲ್ಲ
ಕುಂತಳಾವಸಿಯೆಲ್ಲ ಗುರ್ಜರಾವನಿಯೆಲ್ಲ
ಪಾಂಡ್ಯನಾಡವರೆಲ್ಲ ಮಲಯವಿಷಯದರೆಲ್ಲ
ಸುರಪಟಹನಿನದಮಂ ದಿವಿಜರನಿನಾದಮಂ
ಶಂಖಸ್ವನಿಗಳಂ ಘಂಟಾಧ್ವನಿಗಳಂ
ಕಹಳಾರವಗಳಂ ಗಾನದ ರವಂಗಳಂ
ಘೋಂಕನೊರ್ಮೆಯೆ ಕೇಳ್ದು ಸಂತೋಷದಿಂದೆಬ್ಬು
ಗಗನತಳಮಂ ನೋಡಿ ನೆರೆದೆಲ್ಲನೊಡಗೂಡಿ
ಕಾರ್ಯಮೆಲ್ಲಮನರಿದು ರಾಗದೊದವಿಂ ನಲಿದು
ನಲಿನಲಿದು ಪರಿಪರಿದು ಕೂರ್ಪರಿಂ ಕರೆಕರೆದು
ಪಲವುಮರ್ಘ್ಯಂಗಳಿಂ ಸಲವುಮರ್ಚನೆಗಳಿಂ
ಪಲವುಪದಂಗಳ್ವೆರಸಿ ಪಲವ್ರತೆಯಿದಿಂ ಪರಂ
ಪೂಜಿಸಿ ಮುನೀಂದ್ರನಂ ಬಣ್ಣಿಸಿ ಯತೀಂದ್ರನಂ
ಪರಮ ದೇವರ್ಕಳಂ ಸುಚಿಪ ದೇವರ್ಕಳಂ
ಪೊಡೆಮಡುವ ದಿವಿಜರಂ ಬಣ್ಣಿಸುವ ದಿವಿಜರಂ
ಜೀಯೆಂಬ ದಿವಿಜರಂ ದೇವೆಂಬ ವಿಬುಧರಂ

---

1 ಸ್ಥಿರತಮೋಳಗಿರ್ಪನಂ ( ). 2 ಲಾಳದೇಶದವರೆಲ್ಲ ಚೋಳನಾಡವರೆಲ್ಲ (ಗ).

...................ಸುತ್ತಿದಮರೇಶರಂ
ಕಣ್ತಣಿವಿನಂ ಕಂಡು [ಪಿರಿದುಂ ಮನಂಗೊಂಡು]
ಕೊಲಲಾಗದೆಂಬ ನುಡಿ ಪುಸಿಯಾಗದೆಂಬ ನುಡಿ
ಕಳಲಾಗದೆಂಬ ನುಡಿ ಜಾರೆ ವೇಡೆಂಬ ನುಡಿ
ಕಾಂಕ್ಷೆ ವೇಡೆಂಬ ನುಡಿ ಕಳ್ಳಾಗದೆಂಬ ನುಡಿ
[ಅಡಗಾಗದೆಂಬ ನುಡಿ ಮಧುವಾಗದೆಂಬ ನುಡಿ]
ಪೆಱವು ಧರ್ಮದೊಳುಂಟೆ ಪೆಱವು ವಾಕ್ಯದೊಳುಂಟೆ
ಬುದ್ಧಿಯಿಂ [1] ನೋಡುವೊಡೆ ಚರ್ಚೆಯಿಂ [2] ಮಾಡುವೊಡೆ
ಜಿನನಾಥನಿಂ ಬಿಟ್ಟು ಜಿನಮುನಿಗಳಿಂ ಬಿಟ್ಟು
ಜಿನಧರ್ಮದಿಂ ಬಿಟ್ಟು ಜಿನಸಮಯದಿಂ ಬಿಟ್ಟು
ಮತ್ತೆ ಪೂಜ್ಯರುಮೊಳರೆ ಮತ್ತೆ ನಿಸ್ಪೃಹರೊಳರೆ
ಮತ್ತೊಂದು ಲೇಸುಂಟೆ ಮತ್ತೊಂದು ಶುಭಮುಂಟೆ
ವೈಲಾಪದೊಳ್ [3] ನಿಂದ ನೆ ವಿಜಿನಪತಿ ನಿಂದ
ವಾರಿನಿಧಿಯೊಳ್ ನಿಂದ ನೇಮಿಜಿನಪತಿಯಿಂದ [4]
ಚೋಳಮಹಿಯೊಳ್ ನಿಂದ ದಿವಿಜವಲ್ಲಭನಿಂದ [5]
ಲಲಿತಪುರದೊಳ್ ನಿಂದ ಶಾಂತಿಜಿನಪತಿಯಿಂದ
ಬಂದಣಿಕೆಯೊಳ್ ನಿಂದ ಶಾಂತಿಜಿನಪತಿಯಿಂದ
[ಶಾರಿಯೂರೊಳ್ ನಿಂದ ಶಾಂತಿಜಿನಪತಿಯಿಂದ]
ಹಾನುಗಲ್ಲೊಳ್ ನಿಂದ ಮಲ್ಲಿನಾಥ [6] ಜಿನನಿಂದ [7]
ಎಳವತ್ತಿಯೊಳ್ ನಿಂದ ಚಂದ್ರಜಿನಪತಿಯಿಂದ
ಮೊಳವದೆ ನೆಲೆನಿಂದ ಸಕ್ಷೀರಜಿನನಿಂದ

---

1 ಬುದ್ಧಿಯಿಂ (ಗ). 2 ಚರ್ಚೆಯಿಂ ( ). 3 ಪುರದ (ಗ).
4 ಪುರುಜಿನಾಧಿಪನಿಂದ (ಗ). 5 ವಿಜಯುವಲ್ಲಭನಿಂದ (ಗ).
6 ಪುರುದೇವ (ಗ) 7 ಪಟವಳಿಯೊಳು ನಿಂದ ಪುರುದೇವ ಜಿನನಿಂದ, ಹುಲಿಗೆಱೆಯೊಳು ನಿಂದ ಶಂಭುಜಿನಪತಿಯಿಂದ ಶ್ರೀ ಕೊಪಣದೊಳುನಿಂದ ಶಶಿನಾಥಜಿನನಿಂದ, ಮುಳುಗುಂದದೊಳು ನಿಂದ ಚಂದ್ರಪ್ರಭಜಿನನಿಂದ, ಪಟ್ಟಗೆಱೆಯೊಳು ನಿಂದ ಕಲಿದೇವ ಜಿನನಿಂದ, ಎಳವತ್ತಿಯೊಳ್ (ಗ)

ಆಶ್ರಮದೊಳೊಪ್ಪಿರ್ದ ಸುವ್ರತೇಶ್ವರನಿಂದ
ಗೌಳವಮುಖಿಯೊಳ್ ನಿಂದ ಶಂಭವ ಜಿನಪತಿಯಿಂದ
ತೇರೆಯೊಳ್ ನೆಲಸಿಂದ ಪಾರ್ಶ್ವಜಿನಪತಿಯಿಂದ
[ತವನಿಧಿಯೊಳ್ ನಿಂದ ಪಾರ್ಶ್ವಜಿನಪತಿಯಿಂದ]
ಕೌಶಾಂಬಿಯೊಳ್ ನಿಂದ ಪದ್ಮಪರಿವೃಢನಿಂದ
ಅಹಿಚ್ಛತ್ರದೊಳ್ ನಿಂದ ಪಾರ್ಶ್ವಜಿನಪತಿಯಿಂದ
ಸಾಮರ್ಥ್ಯಮುಂಟೆಂದು ತಾವರಿವುದಿದನೆಂದು
ಕೊಲ್ಲದೊಡೆ ಕೊಲೆಯಿಲ್ಲ ಪುಸಿಯದೊಡೆ ಪಗೆಯಿಲ್ಲ
ಕಳ್ಳದೊಡೆ ಸಾವಿಲ್ಲ ಶೌಚದಿಂ ನೋವಿಲ್ಲ
ಮೋಹಿಯಿಂ ಕೇಡಿಲ್ಲ ....
ಭಾವಿಸುವೊಡೀವ್ರತಂ ಲೋಕದೊಳ್ ಸುವ್ರತಂ
ಜಿನನಿಗದಿತವ್ರತಂ ಅರ್ತಿಯಿಂದಾವ್ರತಮ
ನಾಚರಿಸೆ [1] ಕೇಡಿಲ್ಲ ನರಕಕ್ಕೆ ಪೋಗಿಲ್ಲ
ಜಿನರ ಸಚ್ಚರಣಮಂ ದುರಿತಕುಲಹರಣಮಂ
ಪೊರ್ದಿದಂಗರಿದಲ್ಲ ನರಕಗತಿ ಮುನ್ನಿಲ್ಲ
ಸಾಮರ್ಥ್ಯಮುಂಟೆಂದು ತಾವರಿವುದಿದನೆಂದು
ಜಿನರ ಸುರೂಪಮಂ ಪಾಪಸಂತಾಪಮಂ
ತಾಳ್ದಿದಂಗೆಡರಿಲ್ಲ ದುಃಖಕ್ಕೆ ನೆಲೆಯಿಲ್ಲ
ಜಿನಪತಿಯನರ್ಚಿಸುಗೆ ಋಷಿವರರಂ ಪೂಜಿಸುಗೆ
ಸನ್ಮಾರ್ಗಮಂ ಪಿಡಿಗೆ ದುಷ್ಕರ್ಮಮಂ ಬಿಡುಗೆ
ಸಮ್ಯಕ್ತ್ವಮಂ ಪಿಡಿಗೆ ಮಿಥ್ಯಾತ್ವಮಂ ಬಿಡುಗೆ
ಸಕಲಸುಖಮೆಲ್ಲಮಂ ಪಡೆವಮನನು ಕ್ಷಣಂ [2] ॥ ೨೪೧

ಎಂದು ಜನಮೆಲ್ಲಂ ಸಚ್ಚಿ ಮೆಚ್ಚಿ ಬಿಚ್ಚಳಿಸುತ್ತುಮಿರೆಯಿರೆ ॥

ಜಿನಪಾದಭಕ್ತನೆನಿಸುವ
ಮುನಿಗೀತ್ರೈಲೋಕ್ಯಮೆಲ್ಲಮುಂ ಗಹನಮೆ ಪೇ ।

---

1 ಮನವತಿಯಿಂ ವ್ರತಮನಾದರಿಸಿ (ಗ). 2 ಮನಮುಳ್ಳೊಂ (ಗ).

ಋನಿಸೇಕೆ ದೇವ ಪಾದಮ
ನನಂತಗುಣರಾಶಿ [1] ತಡೆಯದುಡುಗಳ ಪೇೞ್ಕುಂ ॥ ೭೪೩

ಅಣಿಮಾದ್ಯಷ್ಟಗುಣಂಗಳ್
ಕ್ಷಣದಿಂದಂ ನಿಮಗೆ ಜೈನಪದಭಕ್ತಿಯಿನೊ ।
ಳ್ಗುಣಮುಮಂ ಪುಟ್ಟಿದುವೆನೆ ಧಾ
ರಿಣಿಯೊಳ್ ನಿಮ್ಮಂತು ದೇವ ನಿರ್ಮಳನಾವಂ ॥ ೭೪೪

ದಯೆಯಿಂ ಭಾವಿಸುವುದು ಸಂ
ಶಯಮಿಲ್ಲದೆ ಜೈನತತ್ತ್ವಮಂ ನೆನೆವುದು ದು ।
ರ್ನಯಮಂ ಬಿಡುವುದು ಧರ್ಮ
ಪ್ರಿಯನಪ್ಪುದು ಸಕವಿನಿಕರಪಿಕಮಾಕಂದಂ ॥ ೭೪೫

[ಎಂದು ಸಮಸ್ತದಿವಿಜನಿಕುರುಂಬಂ ಸ್ತೋತ್ರಂಗೆಯ್ಯುತ್ತುಂ ಸಾವದೊಡನೊಡನೆ ತೊಳಲುತ್ತುಂ ಪೂಜಿಸುತ್ತಿರ್ದನ್ನೆಗಮಿತ್ತಲಿಂದ್ರನ ಬೆಸದಿಂ ದೇವಕುಮಾರರ್ ಬಲಿಯನಂಬಲಿಯ ಮೊಟ್ಟೆಯುಮಂ ಕಟ್ಟುವಂತೆ ಕೋಡಗಗಟ್ಟುಗಟ್ಟಿ ಹಸ್ತಿನಾಪುರದಿಂ ಪೊರಮಡಿಸಿ ಕಳೆವುದುಂ, ಬಳಿಕ ಋಷಿಯರುಂ ಸೌಧರ್ಮೇಂದ್ರಾದಿ ಸುರೇಂದ್ರರುಂ ನಿಂತಗಿರಿಯ ಗುಹೆಯ ಬಾಗಿಲೊಳಿರ್ದ ಕಸಮಂ ಕಿಚ್ಚಂ ಪಿಂಗಿಸಿ ಜಗದುತ್ತುಂಗರುಂ ಕರ್ಮವೇದಿಭವಿಂಪರುಮೆನಿಪಕಂಪನಾಚಾರ್ಯರ ಧ್ಯಾನಧರ್ಮೋದ್ಧಾರರೆನಿಸುವಮುನ್ನೂರ್ವರ್ ಮುನಿವರರ ಘೋರೋಪಸರ್ಗಮಂ ಪಿಂಗಿಸಿ ಪಾತ್ರಸ್ಥ್ಯ ರತ್ನಾಕರಂವಳ್ಳಿಗೆವೆಂದು ॥] [2] ೭೪೬

---

[1] ಗುಣಾಸಲಯು (ಗ), [2] ಎನುತಂ ದೇವರ್ ನೆರಪಿ ಪೊಗಳುತ್ತುಂ ಪಾದ ದೊಡನೆ ತೊಳಲುತ್ತುಂ ಅರ್ಚಿಸುತ್ತಮಿರ್ದರನ್ನೆಗಂ ಸೌಧರ್ಮೇಂದ್ರನ ಬೆಸದಿಂ ಪ್ರಕೀರ್ಣಕದೇವರ್ಗಳಿರು ಬಲಿಯನಂಬಲಿಯ ಮೊಟ್ಟೆಯುಂ ಕಟ್ಟುವಂತೆ ಕಟ್ಟಿ ಸಾಯಬಡಿದು ತನ್ನ ಮುಂದಿಕ್ಕುವುದುಮಾ ಇಂದ್ರನನೇಕವಿಧಂದರವರ ಬಯ್ದು ಸಿನ್ನಿಂದಂ ಬಿಟ್ಟು ಸಿಗೋದರಾಶಿಗಳ ಲೋಕದೊಳಿಲ್ಲೆಂದು ಪೂಜಿಮಾಡಿಸಿ ಕಳೆದು ಪುರ ಮೆಲ್ಲಂ ಬ್ರಹ್ಮೇತಿಕಾ ನೆಂದು ಕೊಂಡಕಾಂದ ಮಮಾರ್ಗಬದಿಂ [illegible] ಟ್ಟಿದು ಕಳೆವುದುಂ, ಸಿಗ್ಗಾಗಿ ಜಗ್ಗನೆ ಜರಿದು ಪಾಂಡಭೇದಿಂ ಪೇಳ್ವಂತೆ ನರಕಕ್ಕೆ ಪೋದನಿತ್ತಲಿಂದ್ರಾ ಶೀತಗಿರಿಯ ಬಾಗಿಲೊಳಿರ್ದ ಪುಳ್ಳಿಯೆಲ್ಲಮಂ ಕಳೆಯಿಸಿ ರುಷಿಯರನರ್ಚಿಸಿ ಘೋರೋಪಸರ್ಗಂ ಬಂಗಿದುದು ಕೃತ್ಯಂತಿತ್ತಿಕಾಳ್ವಿಮೆಂದು ಘೋರೋಪಸರ್ಗಮಂ ಮಾಣಿಸಿ ವಿಷ್ಣುಮುನೀಂದ್ರನಲ್ಲಿಗೆ ಪೋಗಿ (ಗ).

ಮುನಿನಿಕರಕ್ಕೆ ಪಿಂಗಿದುದು ದುಶ್ಚರಿತಾನ್ವಿತನುಗ್ರಮೂರ್ತಿ ದು
ರ್ಮನನೆನಿಸಿರ್ದ ಪಾಪಿ ಬಲಿ ಮಾಡಿದದೊಂದುಪಸರ್ಗಮಿಂದು ಸ ।
ಜ್ಜನನುತ ಸಚ್ಚರಿತ್ರ ಗುಣಬೋಧಸುಧಾರ್ಣವ ಭವ್ಯಬಂಧು ನಿ
ರ್ಮಲನಿಜತತ್ವ [1] ನೀನುಡುಗು ಪಾವಮನೆಂಬುದುಮಾ ಮುನೀಶ್ವರಂ ॥

[ವಿಗುರ್ವಣೆಯನುಪಸಂಹರಿಸಿ ತನ್ನ ಮುನ್ನಿನ ರೂಪಂ ಕೈಕೊಂಡು ಸಂತೋಷದಿಂದಿರ್ಪುದುಂ ದೇವನಿಕಾಯಮೆಲ್ಲಂ ಸಹಜಕವಿಜನಮನೋಹರೋದ್ಯಾನಪನಕಳಕಂಠರೂಪನಂ ಕಣ್ಣಾರೆ ನೋಡಿ ಮನದೊಳ್ ಭಕ್ತಿ ಕೈಗಣ್ಮೆ ಪಲವರ್ಚನೆಯಿಂದರ್ಚಿಸಿ ಕರಕಮಲಂಗಳಂ ಮುಗಿದು] [2] ॥ ೬೪೮

ಜಿನಪದಭಕ್ತಿಯೊಳ್ ಗುಣದೊಳುನ್ನತಿಯೊಳ್ ಸಕಲಾಗಮಾರ್ಥದೊಳ್
ವಿನಯದೊಳುನ್ನತವ್ರತದೊಳೀಜೆಯೊಳೊಪ್ಪುವ ಸಚ್ಚರಿತ್ರದೊಳ್
ಮುನಿಪದಭಕ್ತಿಯೊಳ್ವಿಮಲಧೈರ್ಯದೊಳೂರ್ಜಿತಮಪ್ಪಕೀರ್ತಿಯೊಳ್
ನಿನಗೆ ಸಮಾನರಾರ್ ಸದೃಶರಾರ್ ದೊರೆಯಾರೆಣೆಯಾರ್ ಮುನೀಶ್ವರಾ [3] ॥

ಜನವಿನುತಮೆನಿಸು ಮೀಯೆಂ
ಟನೆಯಂಗಂ ನಿನ್ನ ಮೆಯ್ಯೊಳಿರ್ದುದಱಿಂ ದೇ ।
ವನಿಕಾಯಪೂಜ್ಯನಾದೈ
ಮುನೀಂದ್ರ ನಿನ್ನಂತು ಧನ್ಯರಾರ್ ಭೂತಲದೊಳ್ [4] ॥ ೬೫೦

[ಮೋಕ್ಷಶ್ರೀಕಾಮಿನಿಗಿದು
ನಿಕ್ಷೇಪದ ನಿಧಿ ಸುಖಕ್ಕಿದಕ್ಷಯನಿಧಿ ಪಾ ।

ದಯೆವಾರಿಧಿ ಸಿರ್ಮಳಚಿತ್ತ ಕೀರ್ತಿಕಾಮಿನಿಕುಚಹಾರ (ಕ. ಖ.).

2 ವಿಗುರ್ವಣೆಯನುಡುಗಿ ಕುಳ್ಳಿರ್ಪುದುಮಿಂದ್ರಾದಿದೇವರ್ಕಳೆಲ್ಲಂ ಪೂಜಿಸಿ ಭಾವಯುತದಿಗಂಬರಪಾಸಂಗ ಕೈಗಳಂ ಮುಗಿದು (ಗ).

3 ಜನನುತಧರ್ಮದೊಳ್ ವಿನಯದೊಳ್ ವ್ರತಮಾಗಮದೊಳ್ ನೆಗಳ್ತೆಯೊಳ್
ಮುನಿಪದಭಕ್ತಿಯೊಳ್ ವಿಮಲಧೈರ್ಯದೊಳುನ್ನತಮಪ್ಪ ಕೀರ್ತಿಯೊಳ್ ।
ಜಿನಮತವಾ ಜಗಕ್ಕೆಸೆಯೆ ಭೋಂಕನೆ ಸಿನ್ನೊಲು ತೋಱಿ ಬಲ್ಲರಾರ್
ನಿನಗೆ ಸಮಾನಮಾರುಮಣೆಯಾರ್ ದೊರೆಯಾರ್ ಧರೆಯೊಳ್ ಮುನೀಶ್ವರಾ (ಗ).

4 ಮನೋಜಪರ ಸುಕವಿನಿಕರ ಪಿಕಮಾಕಂದಾ (ಗ)

ಪಕ್ಷಯುಪೊಂದಿದನಱಿಕೆಯೊ
ಈಕ್ಷಿತಿಯೊಳ್ ತಾಳ್ದಿ ನಿಂದಪಂಗೆಡರುಂಟೇ ॥ ೨೪೧

ಎಂದು ನಾನಾವಿಧದಿಂ ಪ್ರಭಾವನಾಂಗಮುಮಂ ವಾತ್ಸಲ್ಯರತ್ನಾಕರನುಮಂ ಪೊಗೞ್ದು ಚತುರ್ವಿಧದೇವಸಮೂಹಮುಂ ತಂತಮ್ಮ ನಿವಾಸಂಗಳ್ಗೆ ಪೋದರ್. ಪದ್ಮಮಹಾರಾಜಂ ಧರ್ಮದೊಳಾದೈಶ್ವರ್ಯಮುಮಂ ಪ್ರಭಾವನಾಂಗದೊಳಾದ ಮಹಿಮೆಯುಮಂ ಕಂಡು ಮಹಾಭಕ್ತಿಯಿಂ ಸಮ್ಯಕ್ತ್ವಚೂಡಾಮಣಿಯ ಪಾದಪದ್ಮಂಗಳಂ ಮನಮಾರೆ ಪೂಜಿಸಿ ಪೊಡೆವಟ್ಟು ಪಲವುಂ ಸದ್ವ್ರತಂಗಳಂ ತಾಳ್ದಿ ಧರ್ಮದೊಳ್ ದೃಢಚಿತ್ತನಾಗಿ ಪೋದಂ ॥][1] ೨೪೨

ಬಲಿ ಮುನ್ನಂ ಜಯವರ್ಮಭೂಧರನ ಮುಂದಾರಯ್ಯದುರ್ಕಿಂದೆ ಸಂ
ಚಲಚಿತ್ತಂ ನುಡಿದಾಱದಿರ್ದೊಡೆ ನೃಪಂ ಚಿಃ ಸೋಲ್ತೆಯಿನ್ನೆಂದೊಡು[2]
ಮ್ಮಳದಿಂದಿಲ್ಲಿಗೆ ವಂದು ಕೊರ್ವಿ ಮುಳಿಸಿಂ[3] ಯೋಗೀಂದ್ರನಂ ಕೊಲ್ವೆನೆಂ
ದಱಿದಂ ಕರ್ಮಮೆ ಕಷ್ಟಮೊರ್ವರಱಿಪಂ ಪಾರ್ವಂಗೆ ಲೇಸಕ್ಕುಮೇ ॥

[ಪರರ ಮನೆಯ ಸೂಜಿಯ ಕೇಡಂ ಬಯಸುವ ಕಳ್ಳಂಗೆ ತನ್ನ ಮನೆಯ ಕುಟಿಂ ಕೆಟ್ಟುದೆಂಬಂತೆ ನಿರ್ದೋಷಿಗಳಪ್ಪಕಂಪನಾಚಾರ್ಯರ್ಗುಪಸರ್ಗಂಮಾಡಿದ ಬಲಿ ಪಾಪದ ಫಲದಿಂ ಬೋಂಡಾಗಿ ಕಟ್ಟುವೆತ್ತನೆಂದು ಪಾಪದೊಳಾದ ಪ್ರತ್ಯಕ್ಷಫಲಮಂ ಕಂಡು ವಿಸ್ಮಯಂಬಟ್ಟರದಱಿಂ ॥

ಕುಸಿಯದೆ ಪೆಱರಱಿವಂ ಚಿಂ
ತಿಸುವಂ ತಾನಱಿಗುಮಂತೆ ತೊದಱಿಲ್ಲದೆ ಚಿಂ ॥
ತಿಸುವಾತಂ ಪೆಱರ್ಗೊಪ್ಪಂ
ವಸುಮತಿಯೊಳ್ ತಾನೆ ಸಿರಿಗೆ ನೆಲೆಯಾಗಿರ್ಕುಂ ॥ ೨೪೪

---

1 ಎಂದು ಪೊಗಳ್ದು ಪೊಡವಟ್ಟು ದೇವಸಿಕಾಯುಂ ತಂಸಿವಾಸಕ್ಕೆ ಪೋದರ್ ಪದ್ಮಮಹಾರಾಜನುಂ ಪ್ರಧಾನರ ಮೊಗಮಂ ನೋಡಿ (ಗ)

2 ನುಡಿದುಱದಲ್ಲಿ ಪಿರಿದುಂ ಬೋಡಾಗಿ ಪೊಪಿಲ್ಲದು (ಗ),

3 ಬಂದು ನೋಡ ಮುನಿಸಿಂ (ಗ)

ಮಗಧಾವನೀಶ ಪಾಪಂ
ಪುಗದಂತೆ ನೆಗೞ್ತೆಯ ಪ್ರಭಾವನೆಯಂ ಕೈ ।
ಮಿಗೆ ಕೂರ್ತು ಪದಪಿನಿಂ ಮಾ
ಡುಗೆ ಪಾಪಂ ಕಿಡುಗುಮದಱ ಕೇಡಿಂ ಮೋಕ್ಷಂ ॥ ೨೫೬

ಮತ್ತನ್ನದೆ ದೊರೆಕೊಳ್ಳ
ಚಿತ್ತಂ ತಲ್ಲಣಿಸದೊಂದೆ ಮನದಿಂ ಗುಣಮಂ ।
ಪತ್ತುಗೆ ಕಡೆಯುಂಗಮದ
ತ್ಯುತ್ತಮಮೆಂದೊಲ್ದು ನಂಬಿ ಪೊರ್ದುಗೆ ಭವ್ಯಂ ॥ ೨೫೭

ಎಂದು ಪ್ರಭಾವನೆಯೊಳಾದ ಪ್ರತ್ಯಕ್ಷಫಲಮಂ ಗಣಧರ ಸ್ವಾಮಿಗಳ್ ಪೇೞೆ ಕೇಳ್ದು ॥][1] ೨೫೮

ವಿಪುಳಪ್ರಖ್ಯಾತಕೀರ್ತಿಧ್ವಜನಮಳಗುಣಂ ವಾಗ್ವಧೂವಲ್ಲಭಂ ಕಾ
ಮಮದೇಭೇಂದ್ರಪ್ರತಾಪಕ್ಷಯಹರಿ ಗಜಮತ್ತುಂಗನತ್ಯೂರ್ಜಿತಂ ರ ।
ಪ್ಯಮನಂತ್ರೈವಿದ್ಯಚಕ್ರೇಶ್ವರನಮಲಪದಾಂಭೋಜಭೃಂಗಂ ಯಶಶ್ರೀ
ರಮಣಂ ಸೋತ್ಸಾಹನಾದಂ[2] ಸುಕವಿಜನಮನಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ದರ್ಶನಾಷ್ಟಮಾಂಗವ್ಯಾವರ್ಣನಂ
ನವಮಾಶ್ವಾಸಂ.

---

1 ಎಂದು ಮುಗುಳ್ನಗೆಯಂ ನಕ್ಕು ಸುಕವಿಜನಮನಃಪದ್ಮಿನೀರಾಜಹಂಸನಂ ಬಂದಿಸಿ ಸಮ್ಯಕ್ತ್ವದೃಢನಾಗಿ ಪೋದನದುಕಾರಣದಿಂ ಪ್ರಭಾವನೆಯು ಸಮಸ್ತ ಕರ್ಮನಿರ್ಮೂಲಕರಮೆಂದು ಪೇಳ್ ಕೇಳ್ದು (ಗ).

2 ಧೈರ್ಯಮಹಾಮೇರುಕ್ಷಿತೀಂದ್ರಂ ಜಿನಸಮಯಮಹಾವಾರ್ಧಿ ತ್ರೈವಿದ್ಯಲಕ್ಷ್ಮೀ ರಮಣಂ ಶ್ರೀಪಾದಭೃಂಗಂ (ಕ. ಖ.)

755 Rare Bk Rare

ಗ್ರಂಥಾಲಯ

ಸೇ.ನಂ: 011342

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

1926

1926

University of Mysore.

Oriental Library Publications

KANNADA SERIES No. 16

ನಯಸೇನವಿರಚಿತಂ

ಧರ್ಮಾಮೃತಂ

ಉತ್ತರಭಾಗ—ಅಧ್ಯಾಯಗಳು ೧೦-೧೪

DHARMAMRITAM

BY

NAYASENA

PART II—CHAPTERS 10—14

EDITED BY

ARTHASASTHRA-VISARADA, VIDYALANKARA
DR. R. SHAMA SASTRY, B.A., PH.D., M.R.A.S.,
Curator, Government Oriental Library, Mysore; Director of Archæological Researches in Mysore; Periodical Lecturer to the Post-Graduates' Classes of the Calcutta University, and B.B.R.A.S. Campbell Memorial Medalist

MYSORE
PRINTED AT THE GOVERNMENT BRANCH PRESS
1926

(*All Rights Reserved*)

Price Rs. 1-4-0

11 శా.సం.17.

ಕನ್ನಡ ವಿಶ್ವವಿದ್ಯಾಲಯದ ಪುಸ್ತಕ ಭಂಡಾರಕ್ಕೆ
ಲಕ್ಷ್ಮೀನಾರಾಯಣ
ಭಂಡಾರ

168

University of Mysore.

Oriental Library Publications

KANNADA SERIES No. 16

ನಯಸೇನವಿರಚಿತಂ

ಧರ್ಮಾಮೃತಂ

ಉತ್ತರಭಾಗ—ಅಧ್ಯಾಯಗಳು ೧೦–೧೪

DHARMAMRITAM

BY

NAYASENA

PART II—CHAPTERS 10—14

EDITED BY

ARTHASASTHRA-VISARADA, VIDYALANKARA

DR. R. SHAMA SASTRY, B.A., PH.D., M.R.A.S.,

Curator, Government Oriental Library, Mysore; Director of Archæological Researches in Mysore; Periodical Lecturer to the Post-Graduates' Classes of the Calcutta University, and B.B.R.A.S. Campbell Memorial Medalist

MYSORE

PRINTED AT THE GOVERNMENT BRANCH PRESS

1926

(*All Rights Reserved*)

C11342

ವಿಷಯಾನುಕ್ರಮಣಿಕೆ.

ಉಪೋದ್ಘಾತ .... v.

೧೦. ದಶಮಾಶ್ವಾಸಂ—ಅಹಿಂಸಾವ್ರತದ ಕಥೆ ೧

೧೧. ಏಕಾದಶಾಶ್ವಾಸಂ—ಸತ್ಯವ್ರತದ ಕಥೆ ೬೨

೧೨. ದ್ವಾದಶಾಶ್ವಾಸಂ—ಅಸ್ತೇಯವ್ರತದ ಕಥೆ ೧೧೨

೧೩. ತ್ರಯೋದಶಾಶ್ವಾಸಂ—ಬ್ರಹ್ಮವ್ರತದ ಕಥೆ ೧೬೩

೧೪. ಚತುರ್ದಶಾಶ್ವಾಸಂ—ಅಪರಿಗ್ರಹ ವ್ರತದ ಕಥೆ ೨೦೯

ಕನ್ನಡ ವಿಶ್ವವಿದ್ಯಾಲಯ
ಗ್ರಂಥಾಲಯ
ಹಂಪಿ-583221

ಕನ್ನಡ ವಿಶ್ವವಿದ್ಯಾಲಯ
ಗ್ರಂಥಾಲಯ
ಹಂಪಿ - 583221

ಉಪೋದ್ಘಾತ

ನಯಸೇನ

ಈ ಗ್ರಂಥದ ಕರ್ತೃವು ತನ್ನ ಹೆಸರನ್ನು "ನಯಸೇನ ಮುನೀಂದ್ರ" ನೆಂದೂ (I ೮, ೨೧) "ನಯಸೇನ ಬುಧ" ನೆಂದೂ (I, ೫೮), ಆಶ್ವಾಸಾಂತ್ಯ ಗದ್ಯದಲ್ಲಿ "ನಯಸೇನದೇವ" ನೆಂದೂ ಹೇಳಿಕೊಂಡಿದ್ದಾನೆ. ಆಶ್ವಾಸಾಂತ್ಯ ಗದ್ಯಪದ್ಯಾದಿಗಳಿಂದ ಈತನಿಗೆ ಸುಕವಿನಿಕರಪಿಕಮಾಕಂದ, ವಾತ್ಸಲ್ಯರತ್ನಾಕರ, ಸುಕವಿಜನಮನಃಪದ್ಮಿನೀರಾಜಹಂಸ ನೂತ್ನಕವಿತಾವಿಳಾಸ ಮುಂತಾದ ಬಿರುದುಗಳು ಇದ್ದಂತೆ ಕಾಣುತ್ತದೆ (I ೫೩). ಇವುಗಳನ್ನು ಅವನಿಗಿಂತ ಹಿಂದೆ ಇದ್ದ ಜೈನ ಕವಿಗಳ ಸಂಪ್ರದಾಯವನ್ನು ಅನುಸರಿಸಿ ಆಯಾ ಕಥಾನಾಯಕನಿಗೂ ಸಂದರ್ಭಾನುಸಾರವಾಗಿ ಉಪಯೋಗಿಸಿದ್ದಾನೆ. ಈತನಿಗೆ ತರ್ಕಶಾಸ್ತ್ರದಲ್ಲಿ ಪೂರ್ಣಪಾಂಡಿತ್ಯವಿದ್ದಿತಂತೆ. (I ೨೧). ತನಗೆ

ಗುರು ವಿದ್ಯಾಬ್ಧಿ ನರೇಂದ್ರಸೇನಮುನಿಪಂ ತ್ರೈಲೋಕ್ಯಚಕ್ರೇಶ್ವರಂ
ಪರಮಶ್ರೀಜಿನನಿಷ್ಟದೈವನಮಳಂ ಶ್ರೀ ಜೈನಯೋಗೀಶ್ವರರ್
ಪರಮಾರ್ಥಂ ತನಗಾಳ್ದರುತ್ತಮವಿನೇಯರ್ ಬಂಧುವರ್ಗಂ...(I ೫೬)

ಎಂದು ಹೇಳಿಕೊಂಡಿದ್ದಾನೆ. ಆದ್ದರಿಂದ, ಈ ಗ್ರಂಥವನ್ನು ಬರೆದಾಗ ಪ್ರಾಯಶಃ ಆತನು ಸಂನ್ಯಾಸಿಯಾಗಿದ್ದನೆಂದು ತೋರುತ್ತದೆ. ನರೇಂದ್ರಸೇನ ಮುನಿಯು ತಪಸ್ಸು ಶ್ರುತ ಇವೆರಡನ್ನೂ ಉಳ್ಳವನೆಂದೂ (I, ೨೦), ತನ್ನ ಶಿಷ್ಯನಾದ ನಯಸೇನನಿಗೆ ತರ್ಕಶಾಸ್ತ್ರವನ್ನು

ಸಮಗ್ರವಾಗಿ ಹೇಳಿಕೊಟ್ಟು ಪ್ರಸಿದ್ಧನಾಗಿದ್ದನೆಂದೂ, ಸಿದ್ಧಾಂತದಲ್ಲಿ ಜಿನಸೇನಾಚಾರ್ಯರನ್ನೂ, ಶಾಸ್ತ್ರಪಾಂಡಿತ್ಯದಲ್ಲಿ ಪೂಜ್ಯಪಾದಮುನಿಗಳನ್ನೂ, ಷಟ್ತರ್ಕದಲ್ಲಿ ಪ್ರಸಿದ್ಧರಾದ ಸಮಂತಭದ್ರಮುನಿಗಳನ್ನೂ ಮೀರಿಸಿದ್ದನೆಂದೂ (I ೨೪), ಆತನಿಗೆ 'ಭುವನೈಕಮಲ್ಲನುತಪಾದಾಂಭೋಜ' ರಾದ ಗುಣಚಂದ್ರ ಪಂಡಿತರು 'ತ್ರೈವಿದ್ಯಮಹಾಭಿಧಾನ' ವನ್ನು 'ಕೀರ್ತಿಯ್ಕುಱಿಂ' ಕೊಟ್ಟರೆಂದೂ, ನರೇಂದ್ರಸೇನ ಮುನಿಯಂಥ 'ವಾಗ್ಮೀಶ' ರೇ ಮತ್ತೊಬ್ಬರಿಲ್ಲವೆಂದೂ ಹೊಗಳಿದ್ದಾನೆ. ಈ ಗ್ರಂಥದ ಕೊನೆಯಲ್ಲಿ (XIV ೧೬೪)

ಮುಳುಗುಂದದೊಳಿರ್ದು ಮಹೋ
ಜ್ಜ್ವಳಧರ್ಮಾಮೃತಮನರ್ತಿಯಿಂದಂ ಭವ್ಯಾ ।
ವಳಿಗಱಿಪಿದಂ ಧರಿತ್ರೀ
ತಳಪೂಜ್ಯಂ ಸುಕವಿನಿಕರಪಿಕಮಾಕಂದಂ ॥

ಎಂದು ಹೇಳಿರುವುದರಿಂದ ನಯಸೇನನ ಸ್ಥಳವು ಧಾರವಾಡ ಡಿಸ್ಟ್ರಿಕ್ಟಿನಲ್ಲಿರುವ ಮುಳುಗುಂದವೆಂದು ತೋರುತ್ತದೆ. ಈತನ ಕಾಲವು ಹನ್ನೆರಡನೆಯ ಶತಮಾನದ ಆದಿಭಾಗವೆಂದು 'ಧರ್ಮಾಮೃತ' ದಿಂದಲೇ ಸುಲಭವಾಗಿ ನಿಶ್ಚಯಿಸಬಹುದು. ಹೇಗೆಂದರೆ, ಅವನು ತನ್ನ ಈ ಗ್ರಂಥವು

ಗಿರಿಶಿಖಿವಾಯುಮಾರ್ಗಶಶಿಸಂಖ್ಯೆಯೊಳಾವಗಮೊಂದಿ ವರ್ತಿಸು
ತ್ತಿರೆ ಶಕಕಾಲಮುನ್ನತಿಯ ನಂದನವತ್ಸರದೊಳ್ ಮಹೋತ್ಸವಂ
ಬೆರಸೆಸೆದಿರ್ದ ಭಾದ್ರಪದಮಾಸದೊಳಗ್ಗದ ಶುಕ್ಲಪಕ್ಷದೊಳ್
ನಿರುಪಮಮಪ್ಪ ಪಾಡಿವದೊಳೊಪ್ಪುವ ಹಸ್ತಯುತಾರ್ಕವಾರದೊಳ್ ॥

ಮುಗಿಯಿತೆಂದು ಹೇಳಿದ್ದಾನೆ. ಇದರ ಪ್ರಕಾರ ಧರ್ಮಾಮೃತದ ಕಾಲವು ಶಾಲೀವಾಹನ ಶಕ ೧೦೩೭ ಆಗುತ್ತದೆ. ಡಾ॥ ಸ್ವಾಮಿ ಕಣ್ಣುಪಿಳ್ಳೆಯವರ ಇಂಡಿಯನ್ ಎಫೆಮೆರಿಸ್ಸಿನ ಪ್ರಕಾರ ಈ ಪದ್ಯದಲ್ಲಿ ಉಕ್ತವಾಗಿರುವ ನಂದನಸಂವತ್ಸರ ಮುಂತಾದವುಗಳು ಕ್ರಿ. ಶ. ೧೧೧೨ ರಲ್ಲಿ

ಬರುತ್ತವೆ. ಆದರೆ ೧೦೩೭ ಕ್ಕೆ ೭೮ ನ್ನು ಸೇರಿಸಿದರೆ ಕ್ರಿ. ಶ. ೧೧೧೫ ಆಗುತ್ತದೆ. ಕ್ರಿ. ಶ. ೧೧೧೪ ನೆಯ ವರ್ಷದಲ್ಲಿ ನಂದನ ಸಂವತ್ಸರಾದಿಗಳು ಬರುವುದಿಲ್ಲ. ಇದನ್ನು ನೋಡಿದರೆ ಮೇಲಣ ಪದ್ಯದಲ್ಲಿ ಮೊದಲನೆಯ ಪದವು ತಪ್ಪು ಬಿದ್ದಿರಬಹುದೋ ಏನೋ ಎಂಬ ಸಂದೇಹವು ಬರುತ್ತದೆ. ಆದರೆ ನಮಗೆ ದೊರೆತಿರುವ ಪ್ರತಿಗಳಲ್ಲೆಲ್ಲಾ ಇರುವುದು ಇದೊಂದೇ ಪಾಠ; ಅದೂ ಸ್ಪಷ್ಟವಾಗಿದೆ. ಇಂತಹ ಸಂದರ್ಭಗಳಲ್ಲಿ ಮಾತೃಕೆಯ ಪ್ರಮಾಣವಿಲ್ಲದೆ ಸ್ವೇಚ್ಛೆಯಾಗಿ ಮೂಲವನ್ನು ತಿದ್ದುವುದು ಸರಿಯಲ್ಲವೆಂದು ಭಾವಿಸಿ 'ಗಿರಿ' ಎಂಬ ಶಬ್ದವನ್ನೇ ಉಳಿಸಿದೆ. 'ಗಿರಿ' ಶಬ್ದಕ್ಕೆ 'ಏಳು' ಎಂದೇ ಅರ್ಥ. ಜೈನರಲ್ಲಿಯೂ ಅದಕ್ಕೆ 'ನಾಲ್ಕು' ಎಂದು ಅರ್ಥ ಎಲ್ಲಿಯೂ ಬಂದಿಲ್ಲ.

ಧರ್ಮಾಮೃತ

ಈ ಗ್ರಂಥದಲ್ಲಿ, ಸಾಗಾರರು ಅಥವಾ ಗೃಹಸ್ಥರು ಆಚರಿಸಬೇಕಾದ ಸಮ್ಯಗ್ದರ್ಶನ ಮತ್ತು ಆದರ ಎಂಟು ಅಂಗಗಳನ್ನೂ [1] 'ಅಣುವ್ರತ'ಗಳಾದ ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹಗಳನ್ನೂ ಅನುಷ್ಠಾನ ಮಾಡಿ, ಹಿಂದೆ ಸದ್ಗತಿಯನ್ನು ಪಡೆದವರ ಕಥೆಗಳು—ಒಂದೊಂದು ಅಧ್ಯಾಯದಲ್ಲಿ ಒಂದೊಂದರಂತೆ—ಹದಿನಾಲ್ಕು ಅಧ್ಯಾಯಗಳಲ್ಲಿ ಉಕ್ತವಾಗಿವೆ. 'ಜಿನ ಮತದೊಳಸಿತು ಸಾರಮದ ನಿತ್ತುಂ ಲೇಸಾಗಿ ತೋರ್ಪುದೀ ಕೃತಿಯೊಳ್' ಎಂದು ಕವಿಯು ಹೇಳಿಕೊಂಡಿದ್ದಾನೆ. ಮಗಧರಾಜನಾದ ಶ್ರೇಣಿಕಮಹಾರಾಜನು [2] ವಿಪುಲಾದ್ರಿಗೆ ಬಂದಿದ್ದ ವರ್ಧಮಾನ ಸ್ವಾಮಿಯ ಮುಂದೆ ಗೌತಮರನ್ನು ಕುರಿತು "ದರ್ಶನ ನಿಶ್ಶಂಕಾದ್ಯಷ್ಟಗುಣಗಳು ಪಂಚಾಣು ವ್ರತಗಳು ಈ

1 ನಿಶ್ಯಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆ.

2 ಇವನು ಧರ್ಮಾಸಕ್ತನಾದ ಒಬ್ಬ ವೃದ್ಧಮಗಧರಾಜನೆಂದು ಉತ್ತರಾಧ್ಯಯನ ಸೂತ್ರದಲ್ಲಿ (ಅಧ್ಯಾಯ ೨೦) ಉಕ್ತವಾಗಿದೆ. ಇವನನ್ನೇ ಬೌದ್ಧರು ಬಿಂಬಿಸಾರನೆಂದು ಕರೆದಿದ್ದಾರೆ.

ಹದಿನಾಲ್ಕು ಮಹಾರತ್ನಗಳೊಂದೊಂದರಲ್ಲಿಯೂ ಚರಿಸಿ ನಿರ್ವೃತಿಯನ್ನು ಪಡೆದ ಮಹಾ ಪುರುಷರ ಕಥೆಗಳನ್ನು ತನಗೆ ತಿಳಿಯುವಂತೆ ಹೇಳಬೇಕೆಂದು ಕೇಳಿಕೊಂಡಂತೆಯೂ ಆಗ ಗೌತಮರು ಈ ಕಥೆಗಳನ್ನು ಹೇಳಿದಂತೆಯೂ ತಿಳಿಸುತ್ತಾನೆ (I ೮-೪.)

ಗ್ರಂಥಾದಿಯಲ್ಲಿ, ಮಹಾವೀರ ಸಿದ್ಧರು ಆಚಾರ್ಯರು ಉಪಾಧ್ಯಾಯರು ಸಾಧುಗಳು ಯಕ್ಷಿ (ಗಜಮುಖ) ಯಕ್ಷ 'ವಾಕ್ಸುಂದರಿ' ಸರಸ್ವತಿ (?) ಇವರನ್ನು ಪ್ರಾರ್ಥಿಸಿ (I ೧-೮) ಅನಂತರ ಅರ್ಹದ್ಬಲ್ಯಾಚಾರ್ಯರಿಂದ ಅಕಳಂಕದೇವರ ವರೆಗಿನ ಗುರುಪರಂಪರೆಯನ್ನು ವಂದಿಸುತ್ತಾನೆ (I ೯-೩೮). ಇವರ ಪರಿಗಣನೆಯಲ್ಲಿ ಕಾಲಕ್ರಮವನ್ನು ಅನುಸರಿಸಿದಂತಿಲ್ಲ. ಆಮೇಲೆ, ತನ್ನ ಹಿಂದೆ ಇದ್ದ ಪ್ರಸಿದ್ಧ ಕವಿಗಳನ್ನೂ ಅವರ ಕಾವ್ಯಗಳ ವಿಶೇಷ ಗುಣಗಳನ್ನೂ

ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸವ್ಯಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ ನಿರಂತರಂ ॥

ಎಂಬ ಪದ್ಯದಲ್ಲಿ (I, ೩೯) ಹೇಳಿ

ರಸಭಾವಂ ಗಮಕಂ ಕಾ
ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ ।
ಕುಸುಜಿಯ ಬಗೆ ....

ಇವಿಷ್ಟರಿಂದಲೂ ಶೋಭಿಸತಕ್ಕದ್ದೇ ಸತ್ಕಾವ್ಯವೆಂಬದಾಗಿಯೂ ಹೊಸಗನ್ನಡ ಬರೆಯುತ್ತೇವೆಂದು ಕನ್ನಡ ಮಾತಿನಲ್ಲಿ ಸಂಸ್ಕೃತವನ್ನು ತಂದು ಗಿಡಿಯಬಾರದೆಂದೂ ತನ್ನ ಅಭಿಪ್ರಾಯವನ್ನು ಸೂಚಿಸಿ (I ೪೦-೪೩) ದೋಷದರ್ಶಿಗಳಾದ ಜಡರನ್ನೂ, ಕುಕವಿಗಳನ್ನೂ ನಿಂದಿಸಿ (I ೪೩-೪೮),

ಕಾವ್ಯದಲ್ಲಿ ' ಸಹಜ ' ವಿಲ್ಲದಿದ್ದರೆ ಅದು ಶೋಭಿಸದೆಂದು

ಮೆಱೆಯಿಲ್ಲದೆ ಪೊಯ್ಮ್ನಾರಿಂ
ಬೆಳಗುವೆ ಧರೆ ಮೆಱುಗಿ ಕುದಿದು ಶಾಸ್ತ್ರದ ಬಲದಿಂ ।
ದಳಿಪಿಂ ಪೇೞ್ವೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ॥

ಉಪ್ಪಿಲ್ಲದೆ ಕೇಳೊಕ್ಕಳ
ತುಪ್ಪಮನೆಱೆದುಣ್ಬೆನೆಂಬೊಡುಂಬುಣಿಸೇಂ ಸ್ವಾ ।
ದಪ್ಪುದೆ ಸಹಜಂ ತನಗಿನಿ
ಸಪ್ಪೊಡಮಿಲ್ಲದನ ಕವಿತೆ ರುಚಿವಡೆದಪುದೇ ? ॥

ಎಂಬ ಪದ್ಯಗಳಲ್ಲಿ ಹೇಳಿ, ಕಾಳಿದಾಸನು ರಘುವಂಶದ ಆದಿಯಲ್ಲಿ ಹೇಳಿಕೊಂಡಿರುವಂತೆ

ಪಱುಗೋಲೊಳ್ ವಾರ್ಧಿಯು ತಡಿ
ಗುಱದೆ ಭರಂಗೆಯ್ದು ಪೋಪೆನೆಂಬೆಗ್ಗನವೋಲ್ ।
ನೆಱೆ ಜಿನವಾಕ್ಯಾಂಬುಧಿಯುಮ
ನುಱದೀಸುವೆನೆಂಬ ದಿಟ್ಟರೆಮ್ಮಿಂ ಪೆಱರಾರ್ ॥

ಎಂದು ಸ್ವಾಹಂಕಾರಖಂಡನೆಯನ್ನು ಮಾಡಿಕೊಂಡು, ಪುಣ್ಯ ಚರಿತ್ರೆಯನ್ನು ಕಾವ್ಯದಲ್ಲಿ ಗ್ರಥಿಸುವುದರಿಂದ ಉಂಟಾಗುವ " ಕರ್ಮ ನಿರ್ಜರೆಯನಂತಿಂತುಂತೆನಲ್ ಬರ್ಕುಮೆ " ? ಎಂದು ಕೇಳಿ, ನರೇಂದ್ರ ಸೇನ ಮುನಿಯೇ ತನ್ನ ಗುರು, ಜಿನನೇ ಇಷ್ಟ ದೇವತೆ, ಜೈನಯೋಗೀಶ್ವರರೇ ಒಡೆಯರು, ಉತ್ತಮ ವಿನೇಯರೇ ನಂಟರು, ಎಂದು ಹೇಳಿ, ತನ್ನ ಬಿರುದುಗಳನ್ನು ತಿಳಿಸಿ, ಧರ್ಮಾಮೃತವನ್ನು ' ಅಱಿಯೆ ' ಪೇೞ್ವೆನೆಂದು ಪ್ರತಿಜ್ಞೆ ಮಾಡುತ್ತಾನೆ (I ೩೯). ಅನಂತರ ಶ್ರೇಣಿಕನಿಗೆ ಗೌತಮಮುನಿಗಳು ಈ ಕಥೆಗಳನ್ನು ಹೇಳಿದ ಸಂದರ್ಭವನ್ನು ವಿವರಿಸಿ ಕಥೆಹೇಳುವುದಕ್ಕೆ ಆರಂಭಿಸುತ್ತಾನೆ.

ಇದಕ್ಕೆ ಹಿಂದೆಯೇ ಆದಿಪಂಪನಿಂದ ಮೊದಲುಮಾಡಿಕೊಂಡು ಆದಿಪುರಾಣ, ಶಾಂತಿಪುರಾಣ, ಅಜಿತನಾಥಪುರಾಣ ಮುಂತಾದ ಚಂಪೂ ರೂಪವಾದ ಜೈನಪುರಾಣ ಗ್ರಂಥಗಳು ಹುಟ್ಟಿದ್ದುವು. ಆದರೆ ಇವು ಪುರಾಣಗಳೆನಿಸಿಕೊಂಡಿದ್ದರೂ ಪುರಾಣಶೈಲಿಯಲ್ಲಿಲ್ಲ; ಪ್ರೌಢವಾದ ಸಂಸ್ಕೃತ ಚಂಪೂಕಾವ್ಯಶೈಲಿಯಲ್ಲಿವೆ. ಗದ್ಯದಲ್ಲಿ ಬರೆದ "ಭವ್ಯಕೋಟಿಗೆ ಅಱಿಪಿದ" ಚಾವುಂಡರಾಯನನ್ನು ಬಿಟ್ಟರೆ ಮಿಕ್ಕ ಪುರಾಣಕರ್ತೃಗಳೆಲ್ಲರೂ ವಿದ್ವಾಂಸರ ಮೆಚ್ಚಿಗೆಗೋಸ್ಕರ ಬರೆದರು. ಆದರೆ ಹನ್ನೆರಡನೆಯ ಶತಮಾನದ ಆರಂಭದಲ್ಲಿ ತಮ್ಮ ತಮ್ಮ ಧರ್ಮದ ತತ್ವಗಳನ್ನೂ, ಶ್ರೇಷ್ಠತೆಯನ್ನೂ ಜನಸಾಮಾನ್ಯಕ್ಕೆ ಸುಲಭವಾದ ಭಾಷೆಯಿಂದ ತಿಳಿಸಬೇಕೆಂಬ ಒಂದು ಸಂಕಲ್ಪವು ಕನ್ನಡ ವೀರಶೈವ ಕವಿಗಳಲ್ಲಿ ಬಂದಂತೆ ಜೈನಕವಿಗಳಲ್ಲಿಯೂ ಬಂದಂತೆ ತೋರುತ್ತದೆ. ನಯಸೇನನ ಧರ್ಮಾಮೃತವೂ ಬ್ರಹ್ಮಶಿವನ (ಕ್ರಿ. ಶ. 1125) ಸಮಯಪರೀಕ್ಷೆಯೂ, ವೃತ್ತವಿಲಾಸನ (ಕ್ರಿ. ಶ. 1160) ಧರ್ಮಪರೀಕ್ಷೆಯೂ ಇದಕ್ಕೆ ನಿದರ್ಶನಗಳಾಗಿವೆ. ಸಾಮಾನ್ಯ ಜನರಿಗೆ ಅರ್ಥವಾಗುವಂತೆಯೂ, ರುಚಿಸುವಂತೆಯೂ ಗ್ರಂಥವನ್ನು ಬರೆಯಬೇಕೆಂಬ ಉದ್ದೇಶವಿದ್ದಿರಬಹುದಾದುದರಿಂದಲೇ

ಪೊಸಕನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡವುಂ ಚಿಂ।
ತಿಸಿ ಕೂಡಲಾಱದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ॥ (I. ೪೧)

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ದಗನ್ನಡದೊಳ್ ತಂ।
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ॥ (I. ೪೨)

ಎಂದು ತನ್ನ ಕಾಲದಲ್ಲಿ ಸಂಸ್ಕೃತಭೂಯಿಷ್ಠವಾಗಿ ಬರೆಯುತ್ತಿದ್ದವರ ಶೈಲಿಯನ್ನು ಹಳಿದು ತಾನು "ಸುದ್ದಗನ್ನಡ" ದಲ್ಲಿ ಬರೆಯುವ

ನೆಂದು ಸೂಚಿಸಿದ್ದಾನೆ. ಇದರಿಂದ ಸಂಸ್ಕೃತಶಬ್ದವನ್ನೇ ಪ್ರಯೋಗಿಸುವುದಿಲ್ಲವೆಂದು ಆಂಡಯ್ಯನಂತೆ ಹಟಮಾಡಿಕೊಂಡು ನಯಸೇನನೂ ಬರೆಯುವುದಕ್ಕೆ ಹೊರಟನೆಂದು ಹೇಳುವುದಕ್ಕಾಗುವುದಿಲ್ಲ. ಆಂಡಯ್ಯನು ತನ್ನ ಉದ್ದೇಶ್ಯವನ್ನು ಬಹುಶ್ರಮಪಟ್ಟು ಸಾಧಿಸಿದನು. ಆದರೂ ಸಂಸ್ಕೃತಶಬ್ದಪೂರ್ಣವಾದ ಗ್ರಂಥವು ಎಷ್ಟು ದುರವಗಾಹವೋ ಅವನ ತದ್ಭವಪೂರ್ಣವಾದ ಕಾವ್ಯವೂ ಅಷ್ಟೇ, ದುರವಗಾಹವಲ್ಲದಿದ್ದರೂ, ಕ್ಲಿಷ್ಟವೂ ವಿಚಿತ್ರವೂ ಆಯಿತು. ನಯಸೇನನು ಹೀಗೆ ಸಂಸ್ಕೃತ ಶಬ್ದಗಳನ್ನೇ ಉಪಯೋಗಿಸುವುದಿಲ್ಲವೆಂದು ಹೊರಟವನಾಗಿ ಕಾಣುವುದಿಲ್ಲ. ವ್ಯವಹಾರದಲ್ಲಿರುವ ಸಂಸ್ಕೃತಶಬ್ದಗಳನ್ನು ಉಪಯೋಗಿಸುತ್ತ, ಕೋಶಸಹಾಯವಿಲ್ಲದೆ ಅರ್ಥವಾಗದ ಉದ್ಗ್ರಂಥಮಾತ್ರದೃಷ್ಟವಾದ ಕ್ಲಿಷ್ಟ ಶಬ್ದಗಳನ್ನು ತ್ಯಜಿಸಿ, ಸಂಸ್ಕೃತಕಾವ್ಯ ಸರಣಿಯನ್ನು ಬಿಟ್ಟು ಕನ್ನಡನುಡಿಯ ಮಾರ್ಗವನ್ನೇ ಅನುಸರಿಸಿ ಬರೆಯಬೇಕೆಂಬುದು ಇವನ ಆಶಯವಾಗಿ ಕಾಣುತ್ತದೆ. ಆದ್ದರಿಂದಲೇ ಪ್ರಥಮಾಶ್ವಾಸದ ಪೀಠಿಕಾ ಭಾಗವನ್ನು ಬಿಟ್ಟರೆ ಮುಂದೆ ಬಹುಮಟ್ಟಿಗೆ ಸುಲಭವಾದ ಸಂಸ್ಕೃತ ಶಬ್ದಗಳನ್ನೇ ಬೆರೆಸಿಕೊಂಡು ಸಾಮಾನ್ಯ ಜನರಿಗೆ ಅರ್ಥವಾಗುವಂಥ ಕನ್ನಡ ಶೈಲಿಯಲ್ಲಿ ತನ್ನ ಗ್ರಂಥವನ್ನು ಬರೆದಿದ್ದಾನೆ. ಕಂದಗಳೂ ಪ್ರಸಿದ್ಧ ವೃತ್ತಗಳೂ ಹೆಚ್ಚು. ಅಪ್ರಸಿದ್ಧ ವೃತ್ತಗಳು ಅಪೂರ್ವ. ಇವೆಲ್ಲಕ್ಕಿಂತಲೂ ಸ್ಪಷ್ಟವಾಗಿ ನಯಸೇನನ ಶೈಲಿಯ ವೈಲಕ್ಷಣ್ಯವು ಕಂಡುಬರುವುದು ಅವನ ಗದ್ಯದಲ್ಲಿ. ಕನ್ನಡ ಚಂಪೂಗ್ರಂಥಗಳಲ್ಲಿ ಬರುವ ಗದ್ಯವೆಂದರೆ ಕಾದಂಬರೀ ಹರ್ಷಚರಿತೆಗಳ ಶೈಲಿಯ ಛಾಯೆಯೇ ಹೆಚ್ಚು; ಈ ವಿಧವಾದ ಶೈಲಿಗೂ ನಯಸೇನನ ಗದ್ಯ ಶೈಲಿಗೂ ಅಜಗಜಾಂತರವಿರುವುದು. ಅದರಲ್ಲಿ ಹುಡುಕಿದರೂ ಪ್ರಾಚೀನ ಕವಿಪ್ರಿಯಗಳಾದ ಪರಿಸಂಖ್ಯೆ, ವಿರೋಧಾಭಾಸ, ಶ್ಲೇಷೆ, ಅತ್ಯುಕ್ತಿ ಇವು ಸಿಕ್ಕುವುದಿಲ್ಲ. ಎಲ್ಲೆಲ್ಲಿ ನೋಡಿದರೂ ಉಪಮೆ; ಸರಪಣಿಯಂತೆ ಸಾಲು ಹಿಡಿದು ಬರುವ ಉಪಮೆ; ಪ್ರತಿಯೊಬ್ಬನೂ ತನ್ನ ಸುತ್ತುಮುತ್ತಿನ ದೈನಂದಿನ ಪ್ರಪಂಚದಲ್ಲಿ ನೋಡಿರಬಹುದಾದ ಸಂಗತಿಗಳ ಸಾದೃಶ್ಯ; ಎಲ್ಲರ

ಬಾಯಲ್ಲಿಯೂ ಇದ್ದಿರಬಹುದಾದ ಗಾದೆಗಳು, ಸಾಮತಿಗಳು. ಇವು ಹೇಚ್ಛಾಗಿಯೇ ಇರುವುದರಿಂದ ಬಂದುವಿಧವಾದ ಚಮತ್ಕಾರರಾಹಿತ್ಯವೂ, ನೀರಸತೆಯೂ, ಅನವೀಕ್ಷ್ಯತತ್ವವೂ ಪಂಡಿತರಾದವರಿಗೆ ತೋರಬಹುದು. ಆದರೆ ಸಾಮಾನ್ಯಜನರಿಗೆ ಇವು ಮನಸ್ಸಿಗೆ ಹಿಡಿಯುವಷ್ಟು ಕಾವ್ಯದ ಚಮತ್ಕಾರ ವಿಶೇಷಗಳೂ, ಅಲಂಕಾರ ವೈಚಿತ್ರ್ಯಗಳೂ ಹಿಡಿಯುವುದಿಲ್ಲ; ಆದ್ದರಿಂದಲೇ ಈ ಗ್ರಂಥವು ಕುಮಾರವ್ಯಾಸ ಭಾರತ, ತೊರವೆಯ ರಾಮಾಯಣ ಮುಂತಾದ ಗ್ರಂಥಗಳಂತೆ ಜನಸಾಮಾನ್ಯ ರಂಜಕವಾಗಿದ್ದಂತೆ ತೋರುತ್ತದೆ. ಇವುಗಳಲ್ಲಿ ಕಂಡುಬರುವ ಪಾಠ ಭೇದಗಳೂ, ಅಧಿಕ ಪಾಠಗಳೂ, ಪ್ರಕ್ಷೇಪಗಳೂ ಈ ಗ್ರಂಥಗಳು ಜನರಲ್ಲಿ ಬಹಳವಾಗಿ ಬಳಕೆಯಲ್ಲಿದ್ದಿರಬೇಕೆಂಬುದಕ್ಕೆ ಸಾಕ್ಷಿಗಳಾಗಿವೆ.

ಕನ್ನಡದ ಶಬ್ದರೂಪಗಳನ್ನು ಉಪಯೋಗಿಸುವುದರಲ್ಲಿಯೂ ನಯಸೇನನು ವ್ಯಾಕರಣಗಳನ್ನೂ ಪೂರ್ವಕವಿಪ್ರಯೋಗಗಳನ್ನೂ ಇಟ್ಟುಕೊಂಡು ಶುದ್ಧ ಹಳಗನ್ನಡ ಮಾತ್ರವನ್ನೇ ಅಂಗೀಕರಿಸಿಲ್ಲ. ಅವನು (ತನ್ನ ಕಾಲದ) ಹೊಸಕನ್ನಡದಲ್ಲಿ ಕಾವ್ಯವನ್ನು ಬರೆಯುವನೆಂದು ಸೂಚಿಸಿದ್ದಾನೆ; ಆದ್ದರಿಂದಲೇ ಇವನ ಗ್ರಂಥದಲ್ಲಿ ಐಟುಕಾಳಕ್ಷಳಘಟಿತವಾದ ಶಬ್ದಗಳು ಪ್ರಾಸಸ್ಥಾನಗಳಲ್ಲಿ ಮಿಳಿತವಾಗಿ ಕಂಡುಬರುತ್ತವೆ. ಅರಿಸಮಾಸಗಳು ದೊರೆಯುತ್ತವೆ. 'ಅರ್ತಿ' 'ಬಿರ್ದು' 'ಎರ್ದು' 'ಚೆಲುವು' (I. 2.) ಮುಂತಾದ ಕೆಲವು ಮಧ್ಯಕನ್ನಡದ ರೂಪಗಳು ಸಿಕ್ಕುತ್ತವೆ. ಇಲ್ಲಿ 'ಅರ್ತಿ' 'ಬಿರ್ದು' 'ಎರ್ದು' ಎಂಬ ಈ ರೂಪಗಳನ್ನು ಕುರಿತು ಸ್ವಲ್ಪ ವಿಚಾರಮಾಡಬೇಕು.

ರೇಫಕ್ಕೂ ಳಕಾರಕ್ಕೂ ಮಧ್ಯಸ್ಥವಾಗಿ ಉಚ್ಚಾರವಾಗುವ ಱಕಾರವು ಕನ್ನಡದಲ್ಲಿ ಸುಮಾರು ಕ್ರಿ. ಶ. ೯೦೦ರವರೆಗೆ ಸ್ವಸ್ವರೂಪದಲ್ಲಿದ್ದು ಅಲ್ಲಿಂದ ಮುಂದೆ ಕೆಲವು ಕಡೆ ರೇಫವೂ ಮತ್ತೆ ಕೆಲವು ಕಡೆ ಳಕಾರವೂ ಆದಂತೆ ಕಂಡುಬರುತ್ತದೆ. ಆದ್ದರಿಂದ 'ಅರ್ದಿದುದು', 'ಬಿರ್ದು,' 'ಏಳು,' 'ಏಳ್ಗೆ,' 'ಗರ್ದೆ' ಎಂಬ ರೂಪಗಳು ಕ್ರಿ. ಶ. ೧೦೯೯ನೆಯ

ಒಂದು ಶಾಸನದಲ್ಲಿ ದೊರೆಯುತ್ತವೆ. (ಇವಕ್ಕೆ ಅೞ್ದುದು, ಬೞ್ದು, ಏೞು, ಪೞ್ಗು, ಗೞ್ದ ಎಂಬಿವು ಪ್ರಾಚೀನ ರೂಪಗಳು.) ಇದರಂತೆ ಬೞಿ, ಗೞಿ, ಗೞ್ ಎಂಬಿವು ಕ್ರಿ. ಶ. ೧೦೪೮ ನೆಯ ಒಂದು ಶಾಸನದಲ್ಲಿಯೂ, ನೆಗೞ್, ನೆಗೞ್, ಬೞಿ, ಕೞ್ದು, ಎಂಬಿವು ಕ್ರಿ. ಶ. ೧೦೬೫ ನೆಯ ಒಂದು ಶಾಸನದಲ್ಲಿಯೂ, ಪೊಗೞ್, ನೆಗೞ್ತೆ, ಪಾೞ್, ಅೞ್, ಎಂಬಿವು ಕ್ರಿ. ಶ. ೧೦೮೪ ನೆಯ ಒಂದು ಶಾಸದಲ್ಲಿಯೂ, ಕೞ್ದ, ಅೞ್ ಪೊಗೞ್ತೆ, ನೆಗೞ್ತೆ ಇವು ೧೧೮೧ ನೆಯ ಒಂದು ಶಾಸನದಲ್ಲಿಯೂ, ‘ಎೞ್ ಪಗಲ್ ನಾಡೆೞ್ವತ್ತು’ ಎಂಬುದು ಕ್ರಿ. ಶ. ೮೯೦ ನೆಯ ಒಂದು ಶಾಸನದಲ್ಲಿಯೂ, (ಬೌರಿಂಗ್ ಪೇಟೆ ೧೩), ‘ಎಡವಲೆಯೆೞ್ವತ್ತುಂ’ ಎಂಬುದು ಕ್ರಿ. ಶ. ೧೧೧೫ ನೆಯ ಒಂದು ಶಾಸನದಲ್ಲಿಯೂ, (ಚಿಕ್ಕಮಗಳೂರು ೭೮) ದೊರೆಯುತ್ತವೆ.

ಕೇಶಿರಾಜನ ಶಬ್ದಮಣಿದರ್ಪಣದಿಂದಲೂ ಇದನ್ನು ಊಹಿಸಬಹುದು. ಅವನ ಕಾಲಕ್ಕೆ ಆಗಲೇ (ಸುಮಾರು ೧೨೬೦) ೞಕಾರವು (ಉಚ್ಚಾರಣೆಯಲ್ಲಿ) ನಷ್ಟವಾಗಿ ಹೋಗಿತ್ತು. ಇದನ್ನು ಅವನಿಗಿಂತ ಸುಮಾರು ೧೫೦ ವರ್ಷಗಳ ಹಿಂದೆ ನಯಸೇನನಿಗೆ ಸಮಕಾಲಿಕನಾಗಿ ಇದ್ದ ಹರಿಹರನು

ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಣೆಗಂದು ಮೊೞಂ ತೆೞನಂ ।
ಕೂಡೆ ಕವಿತತಿ ವಿಚಾರಿಸ
ಬೇಡದೞಿಂ ೞಕಾೞಕ್ಷಳಂಗಳನಿದೞೊಳ್ ॥ (ಗಿರಿಜಾ ಕಲ್ಯಾಣ)

ಎಂದು ಹೇಳಿದ್ದಾನೆ. ಕೇಶಿರಾಜನು ಈ ಸಂಗತಿಯನ್ನು ಇಷ್ಟು ಸ್ಪಷ್ಟವಾಗಿ ಹೇಳಿಲ್ಲ. ಆದರೂ ಅವನು ೞಕಾರ ಶುದ್ಧಿಗಾಗಿ ಶ್ರಮಪಟ್ಟಿರುವುದರಿಂದ ಅವನ ಕಾಲಕ್ಕೆ ೞಕಾರಘಟಿತವಾದ ಶಬ್ದಗಳು ಯಾವ ರೂಪದಲ್ಲಿದ್ದುವು ಎಂಬುದನ್ನು ತಿಳಿಯಬಹುದು. (೧) ಱಕಾರವನ್ನು ‘ಱ’ ಕಾರವೆಂದೇ ವ್ಯವಹಾರ ಮಾಡುವಾಗ ೞಕಾರವನ್ನು

ಮಾತ್ರ ಱೞ (ಱಕಾರದಂತೆ ಇರುವ ೞಕಾರ) ಎಂದು ವ್ಯವಹರಿಸುತ್ತಾನಷ್ಟೆ (ಸೂತ್ರ ೧೯ ಇತ್ಯಾದಿ). ಅದನ್ನು ಆಗಲೂ ಈಗಿನಂತೆಯೇ 'ರಳ' ಎಂದು ಕರೆಯುತ್ತಿದ್ದಿರಬಹುದು. (೨) ಜನರು ೞಕಾರಕ್ಕೂ ಳಕಾರಕ್ಕೂ ಭೇದ ಮಾಡದೆ ೞಕಾರವನ್ನು ಳಕಾರದಂತೆ ಉಚ್ಚರಿಸುತ್ತಿದ್ದುದರಿಂದ ಯಾವ ಯಾವ ಶಬ್ದಗಳಲ್ಲಿ ೞಕಾರವಿರಬೇಕೆಂಬುದನ್ನೂ, ಯಾವ ಯಾವ ಶಬ್ದಗಳಲ್ಲಿ ಳಕಾರವಿತ್ತೆಂಬುದನ್ನೂ ತೋರಿಸಿ ಒಂದು ಪಟ್ಟಿಯನ್ನು ಕೊಟ್ಟಿದ್ದಾನೆ. (೩) ಕೆಲವು ಕಡೆಗಳಲ್ಲಿ ಳಕಾರವಿರಬೇಕೋ ೞಕಾರವಿರಬೇಕೋ ಅವನಿಗೇ ಸಂದೇಹ (ಸೂತ್ರ ೨೨-೨೫). (೪) ೞಕಾರವು ಸೇರಿದ ಸಂಯುಕ್ತಾಕ್ಷರಗಳನ್ನೂ ರೇಫ ಸೇರಿ ಆದ ಸಂಯುಕ್ತಾಕ್ಷರವನ್ನೂ ಪ್ರಾಸಸ್ಥಾನದಲ್ಲಿ "ಪಿರಿಯರು" ಉಪಯೋಗಿಸುತ್ತಿದ್ದರು.[1] (ಸೂತ್ರ ೨೪). ಪ್ರಾಸಸ್ಥಾನದಲ್ಲಿ ಸಮಾನಾಕ್ಷರಗಳು ಇರಬೇಕಾದದ್ದನ್ನು ನೋಡಿದರೆ, ಮೇಲಣ ಸಂದರ್ಭದಲ್ಲಿ ಕವಿಗಳು ೞಕಾರ ಘಟಿತವಾದ ಸಂಯುಕ್ತಾಕ್ಷರಗಳಲ್ಲಿಯೂ ೞಕಾರಕ್ಕೆ ಬದಲಾಗಿ ರೇಫವನ್ನೇ ಉಪಯೋಗಿಸುತ್ತಿದ್ದಂತೆ ಊಹಿಸಬಹುದಾಗಿದೆ. (೫) ಉರ್ದು, ಬಿರ್ದು, ನುರ್ಗಿದುದು, ತರ್ಗಿದುದು ಮುಂತಾದ ಶಬ್ದಗಳು ಸರೇಫ ಪದಗಳು (ಉದ್ದು, ಬಿದ್ದು, ನುಗ್ಗಿದುದು, ತಗ್ಗಿದುದು ಇತ್ಯಾದಿಯಾಗಿ ದಕಾರದ್ವಯ ಅಥವಾ ಗಕಾರದ್ವಯ ಘಟಿತವಾದವುಗಳಲ್ಲ) ಎಂದು ಸೂಚಿಸಿದ್ದಾನೆ (ಸೂತ್ರ ೩೩-೩೯). ಇದರಿಂದ ಅವನ ಕಾಲಕ್ಕೆ ಉರ್ದು ಮುಂತಾದ ಶಬ್ದಗಳಲ್ಲಿ ೞಕಾರವು ರೇಫವಾಗಿ ಪರಸವರ್ಣತೆಯನ್ನು (ಉದ್ದು ಇತ್ಯಾದಿಯಾಗಿ) ಪಡೆದಿತ್ತೆಂದು ಸೂಚಿಸಿ ಕೇಶಿರಾಜನು ('ಉೞ್ದು' ಮುಂತಾದ ಪ್ರಾಚೀನರೂಪವನ್ನು ಎತ್ತದೆ,) ತನ್ನ ಕಾಲದಲ್ಲಿ ಬಳಕೆಯಲ್ಲಿದ್ದ 'ಉದ್ದು' ಇತ್ಯಾದಿಗಳನ್ನು ತಪ್ಪೆಂದು ಖಂಡಿಸಿ, 'ಉರ್ದು' ಮುಂತಾದ ಮಧ್ಯಮ ರೂಪಗಳೇ ಸರಿಯೆಂದು ಹೇಳಿದ ಹಾಗಾಯಿತು. ಆದರೆ ಅವನೇ 'ಅೞ್ತಿ ಎಂದು ಪ್ರೀತಿ; ಅದನ್ನರ್ತಿಯೆಂದು ಪೇೞ್ವುದಬದ್ಧಂ' ಎನ್ನುತ್ತಾನೆ,

[1] ನೇಮಿಚಂದ್ರನು ಕೞ್ತಲೆ, ಮಾರ್ತಂಡ, ಸಾರ್ತಂದರ್, ಪೊೞ್ತುಜೊಳ್ ಎಂಬ ಶಬ್ದಗಳನ್ನು ಪ್ರಾಸಸ್ಥಾನಗಳಲ್ಲಿ ಪ್ರಯೋಗಿಸಿದ್ದಾನೆ; ಲೀಲಾವತಿ V ೧೧೧.

(ಸೂತ್ರ ೨೩ ; ಪಟ್ಟಿ). ಉರ್ದು, ಬಿರ್ದು ಇತ್ಯಾದಿಯಾದ ರೇಫಘಟಿತ ರೂಪಗಳು ಸಾಧುವೆಂದು ಹೇಳಿ ಅದರಂತೆಯೇ ಇರುವ 'ಅರ್ತಿ' ಎಂಬ ರೂಪವು ಅಶುದ್ಧವೆಂದು ಹೇಳಿರುವುದಕ್ಕೆ ಕಾರಣವು ಸ್ಪಷ್ಟವಾಗಿಲ್ಲ. ಪ್ರಾಯಶಃ ಅವನಿಗಿಂತ ಹಿಂದೆ ಇದ್ದ ಕವಿಗಳಲ್ಲಿ ಅವನಿಗೆ ಆ ರೂಪ ಸಿಕ್ಕಲಿಲ್ಲವೆಂದು ತೋರುತ್ತದೆ. ಆದರೆ ಅವನ ಪ್ರಮಾಣದ ಮೇಲೆ, ಈ ರೂಪ ಸಿಕ್ಕುವ ಕಡೆ ಅದನ್ನು ಅತ್ತಿ ಎಂದು ತಿದ್ದುವುದು ಸರಿಯಾಗಿ ತೋರಲಿಲ್ಲ. ಧರ್ಮಾಮೃತದ ಲಿಖಿತ ಪ್ರತಿಗಳಲ್ಲಿ ಈ ಶಬ್ದವು ಅರ್ತಿ, ಅರ್ತ್ಥಿ, ಅರ್ಥಿ, ಇತ್ಯಾದಿಯಾಗಿ ರೇಫದೊಡನೆಯೇ ದೊರೆತದ್ದರಿಂದ, ನಯಸೇನನು ತನ್ನ ಕಾಲಕ್ಕೆ ವ್ಯವಹಾರದಲ್ಲಿ ಇದ್ದಿರಬಹುದಾದ ರೇಫಘಟಿತವಾದ 'ಅರ್ತಿ' ಮುಂತಾದ ರೂಪಗಳನ್ನೇ ಉಪಯೋಗಿಸಿರಬೇಕೆಂದು ನಿಷ್ಕರ್ಷಿಸಿ ಇಂಥ ರೂಪಗಳನ್ನೇ ಈ ಗ್ರಂಥದಲ್ಲಿ ಉಪಯೋಗಿಸಿದೆ.

ವಿಶ್ವವಿದ್ಯಾಲಯ
ಗ್ರಂಥಾಲಯ
13221

ಕಥಾ ಸಾರಾಂಶ

ಹತ್ತನೆಯ ಆಶ್ವಾಸ.

ಅಹಿಂಸಾವ್ರತದ ಕಥೆ.

ಮಾಳವದೇಶದ ಉಜ್ಜೈನೀ ಪಟ್ಟಣದಲ್ಲಿ ವಿಶ್ವಂಧರ ಮಹಾರಾಜನೆಂಬ ದೊರೆಯು ಆಳುತ್ತಿದ್ದನು. ಅಲ್ಲಿ ಗುಣಪಾಲನೆಂಬ ರಾಜಶ್ರೇಷ್ಠಿ ಇದ್ದನು. ಅವನಿಗೆ ಧನಶ್ರೀಯೆಂಬ ಹೆಂಡತಿಯೂ ಸುಬಂಧುಶ್ರೀಯೆಂಬ ಮಗಳೂ ಇದ್ದರು. ಒಂದು ದಿನ ವಿಶ್ವಂಧರ ಮಹಾರಾಜನು ಆನೆಯ ಮೇಲೆ ಹೋಗುತ್ತ, ಉದ್ಯಾನವನದಲ್ಲಿ ಉಯ್ಯಾಲೆಯಾಡುತ್ತಿದ್ದ ಸುಬಂಧುಶ್ರೀಯನ್ನು ಕಂಡು ಮೋಹಿಸಿ ಅವಳನ್ನು ಮದುವೆ ಮಾಡಿಕೊಡಬೇಕೆಂದು ಗುಣಪಾಲನಿಗೆ ಹೇಳಿ ಕಳುಹಿಸಿದನು. 'ದೊರೆಯು ಅಪೇಕ್ಷಿಸಿ ಹೇಳಿಕಳುಹಿಸಿದ ಮೇಲೆ ಪ್ರತಿ ಹೇಳುವುದಕ್ಕಾದೀತೇ ?' ಎಂದು ಸೆಟ್ಟಿಯು ಹೆಗ್ಗಡೆಗಳೊಡನೆ ಲೋಕಾಭಿರಾಮವಾಗಿ ಮಾತನಾಡಿ ಈ ವಿಚಾರದಲ್ಲಿ ತನ್ನ ಹೆಂಡತಿಯ ಮತ್ತು ಮಗಳ ಅಭಿಪ್ರಾಯವೇನೆಂದು ವಿಚಾರಮಾಡಿದನು. ಅವರು ಐಶ್ವರ್ಯಕ್ಕೋಸ್ಕರ ಮಿಥ್ಯಾದೃಷ್ಟಿಯೊಡನೆಮದುವೆಯನ್ನು ಸ್ವಲ್ಪವೂ ಒಪ್ಪಲಿಲ್ಲ. ತನ್ನ ಅಭಿಪ್ರಾಯವೂ ಅದೇ ಆಗಿದ್ದುದರಿಂದ ರಾಜನನ್ನು ಪ್ರತಿಭಟಿಸಿ ನಿಲ್ಲಲಾರದೆ, ತನ್ನ ಧನ ಕನಕ ವಸ್ತು ವಾಹನಗಳನ್ನೆಲ್ಲಾ ಬಿಸಾಟು ಮಗಳನ್ನೂ ಗರ್ಭಿಣಿಯಾಗಿದ್ದ ಹೆಂಡತಿಯನ್ನೂ ತನ್ನ ಪ್ರಾಣಮಿತ್ರನಾದ ಶ್ರೀದತ್ತನೆಂಬವನಲ್ಲಿ ಗೋಪ್ಯವಾಗಿರಿಸಿ ಯಾರಿಗೂ ತಿಳಿಯದಂತೆ ಆ ಊರನ್ನೇ ಬಿಟ್ಟು ಹೋದನು. ಮಹಾರಾಜನು ಈ ವರ್ತಮಾನವನ್ನರಿತು, ಧರ್ಮರಕ್ಷಣೆಗೋಸ್ಕರ ಆಸ್ತಿಯನ್ನೆಲ್ಲಾ ತೊರೆದು ಹೋಗಬೇಕಾದರೆ ಆ ಧರ್ಮವೇ ಶ್ರೇಷ್ಠ

ವಾದದ್ದಾಗಿರಬೇಕೆಂದು ಅದರಲ್ಲಿ ನಂಬಿಕೆ ಹುಟ್ಟಿ ಗುಣಪಾಲನನ್ನು ಹೇಗಾದರೂ ಮಾಡಿ ಹುಡುಕಿ ತರಬೇಕೆಂದು ತನ್ನ ಭಟರಿಗೆ ಅಪ್ಪಣೆ ಮಾಡಿದನು.

ಒಂದು ದಿವಸ ಶಿವಗುಪ್ತರೆಂಬಾಚಾರ್ಯರು ತ್ರಿಗುಪ್ತರೆಂಬ ತಮ್ಮ ಶಿಷ್ಯರೊಡನೆ ಚರಿಗೆ ಮಾಡಿಕೊಂಡು ಬಂದು ಶ್ರೀದತ್ತನ ಮನೆಯಲ್ಲಿ ಉಳಿದರು. ಅವರನ್ನು ಧನಶ್ರೀಯು ನಮಸ್ಕರಿಸಿ ಹೋಗಲು ಅವಳ ಸಲ್ಲಕ್ಷಣಗಳನ್ನೂ ಕಂದಿದ ಮುಖವನ್ನೂ ನೋಡಿ ತ್ರಿಗುಪ್ತರು ತಮ್ಮ ಗುರುಗಳನ್ನು 'ಈಕೆ ಯಾರು ? ಇವಳು ಏಕೆ ಈ ಹೀನಸ್ಥಿತಿಯಲ್ಲಿದ್ದಾಳೆ ?' ಎಂದು ಕೇಳಲು ಶಿವಗುಪ್ತರು ಅವಳ ವೃತ್ತಾಂತವನ್ನು ತಿಳಿಸಿ ಆಕೆಯ ಹೊಟ್ಟೆಯಲ್ಲಿ ಹುಟ್ಟತಕ್ಕ ಮಗನು ಮುಂದೆ ರಾಜನಾಗುವನೆಂದು ಹೇಳಿದರು. ಅವರ ಕಾಲೊತ್ತುತ್ತ ಅಲ್ಲಿಯೇ ಕುಳಿತಿದ್ದ ಶ್ರೀದತ್ತನು ಇದನ್ನು ಕೇಳಿ 'ಇವಳ ಹೊಟ್ಟೆಯಲ್ಲಿ ಹುಟ್ಟುವ ಮಗನು ಈ ಭೂಮಂಡಲಕ್ಕೆ ಅಧಿಪತಿಯಾಗುತ್ತಾನೆಯೇ ! ಹಾಗಾದರೆ ಅವನನ್ನು ಹೇಗಾದರೂ ನಾಶಮಾಡಿಬಿಡಬೇಕು' ಎಂದು, ಪೂರ್ವವೈರದಿಂದ ದ್ವೇಷವನ್ನು ತಂದುಕೊಂಡು, ಧನಶ್ರೀಗೆ ಪ್ರಸವವಾಗಲು ಆಕೆಗೆ ಗರ್ಭಸ್ರಾವವಾಯ್ತೆಂದು ವರ್ತಮಾನವನ್ನು ಹುಟ್ಟಿಸಿ ಮಗುವನ್ನು ಕದ್ದು ಅದನ್ನು ಕೊಲ್ಲುವಂತೆ ಒಬ್ಬ ಹೊಲೆಯನಿಗೆ ಒಪ್ಪಿಸಿದನು. ಆದರೆ ಆ ಹೊಲೆಯನಿಗೆ ಸುಂದರವಾದ ಮಗುವನ್ನು ಕೊಲ್ಲಲು ಮನಸ್ಸು ಬಾರದೆ ನಿರ್ಜನವಾದ ಕಾಡಿಗೆ ತೆಗೆದುಕೊಂಡು ಹೋಗಿ ಅಲ್ಲಿ 'ತೀಕ್ಷ್ಣವಾದ ಈ ಬಿಸಿಲಿನಲ್ಲಿ ಅದೇ ಸತ್ತು ಹೋಗುತ್ತದೆ. ನಾನೇಕೆ ಕೈಯಾರ ಕೊಂದು ಪಾಪ ಕಟ್ಟಿಕೊಳ್ಳಲಿ !' ಎಂದು ಅದನ್ನು ಮಲಗಿಸಿ ಹೋದನು. ಆ ಕಾಡಿನಲ್ಲಿಯೇ ಶ್ರೀದತ್ತನ ಮೈದುನನಾದ ಇಂದ್ರದತ್ತ ಸೆಟ್ಟಿಯು ವ್ಯಾಪಾರಕ್ಕೆ ಹೋಗುತ್ತಾ ಬೀಡುಬಿಟ್ಟಿರಲು, ಅವನ ಕಡೆಯವರು ಸೌದೆ ಆರಿಸಿಕೊಳ್ಳುವುದಕ್ಕಾಗಿ ಬಂದು ಈ ಮಗುವನ್ನು ಕಂಡು ಅದನ್ನು ತೆಗೆದುಕೊಂಡು ಹೋಗಿ ತಮ್ಮ ಒಡೆಯನಿಗೆ ಕೊಟ್ಟರು. ಇಂದ್ರದತ್ತನು ಅದನ್ನು ಸಂತೋಷದಿಂದ ಮನೆಗೆ ತಂದು ತನ್ನ ಹೆಂಡತಿ

ಯಾದ ರಾಧೆಯೇ ಆ ಮಗುವನ್ನು ಹೆತ್ತಳೆಂದು ವರ್ತಮಾನವನ್ನು ಹುಟ್ಟಿಸಿ ಆ ಮಗುವನ್ನು ಸಾಕುತ್ತ ಬಂದನು.

ಗುಣಪಾಲಸೆಟ್ಟಿಯು ಈ ವರ್ತಮಾನವನ್ನು ಕೇಳಿ ತನ್ನ ತಂಗಿಯಾದ ರಾಧೆಗೆ ಇಷ್ಟು ದಿವಸವೂ ಮಕ್ಕಳಿಲ್ಲದೆ ಈಗ ಮಕ್ಕಳಾದದ್ದಕ್ಕೆ ಆಶ್ಚರ್ಯಪಡುತ್ತ ಧನಶ್ರೀಯ ಮಗುವು ಇವರಿಗೆ ಸಿಕ್ಕಿರಬಹುದೇ ಎಂದು ಸಂದೇಹಪಟ್ಟು ತಂಗಿಯ ಮನೆಗೆ ಬಂದು ನೋಡಲು, ಮಗುವು ಗುಣಪಾಲಸೆಟ್ಟಿಯ ಅಚ್ಚೊತ್ತಿದಂತಿತ್ತು. ಆದ್ದರಿಂದ ಅದನ್ನು ಕೊಲ್ಲಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ತಂಗಿಗೆ ಬಹುದಿವಸದ ಮೇಲೆ ಗಂಡು ಮಗುವಾದದ್ದಕ್ಕಾಗಿ ಸಂತೋಷವನ್ನು ನಟಿಸುತ್ತ ಅವರಿಂದ ಮಗು ಸಿಕ್ಕಿದ ಬಗೆಯನ್ನು ತಿಳಿದುಕೊಂಡನು. ಅನಂತರ ತಂಗಿಯನ್ನೂ ಅಳಿಯನನ್ನೂ ತನ್ನ ಊರಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ದಾದಿಯ ಸಹಾಯದಿಂದ ಮಗುವನ್ನು ಕದ್ದು, ಅದು ಸತ್ತಿತೆಂಬ ವರ್ತಮಾನವನ್ನು ಹರಡಿ, ಅದನ್ನು ಕೊಲ್ಲುವಂತೆ ಒಬ್ಬ ಮಾದಿಗನ ಕೈಗೆ ಕೊಟ್ಟನು. ಅವನು ಕರೆದುಕೊಂಡು ಹೋಗುತ್ತ ಅದರ ಆಟ ಪಾಟಗಳಿಗೆ ಮನ ಸೋತು ಅದನ್ನು ಒಂದು ಹೊಳೆಯ ದಡದಲ್ಲಿದ್ದ ಮರಳ ದಿಣ್ಣೆಯ ಮೇಲೆ ಮಲಗಿಸಿ ಹೋದನು. ಅಲ್ಲಿ ನೀರು ಕುಡಿಯುವುದಕ್ಕೆಂದು ಬಂದ ಹಸುಗಳು ಆ ಮಗುವನ್ನು ಕಂಡು ಅದರ ಸುತ್ತಮುತ್ತಲೂ ಮುತ್ತಿಕೊಂಡು ಕೆನೆಯುತ್ತ ಅದನ್ನು ಬಿಟ್ಟು ಹೋಗದಿರಲು ದನಕಾಯುವವರು ಹಸುಗಳನ್ನು ಹುಡುಕಿಕೊಂಡು ಬಂದು, ಮಗುವನ್ನು ಕಂಡು ಅದನ್ನು ತಮ್ಮ ಒಡೆಯನಾದ ಗೋವಿಂದನೆಂಬ ತುರುಗಾಹನಿಗೆ ಕೊಟ್ಟರು. ಅವನು ಅದನ್ನು ತನ್ನ ಹೆಂಡತಿಯಾದ ನಂದೆಯ ಕೈಗೆ ಕೊಟ್ಟು ಮಗುವಿಗೆ ಧನಕೀರ್ತಿಯೆಂದು ಹೆಸರಿಟ್ಟು ಸಾಕುತ್ತ ಬಂದನು.

ಕೆಲವು ಕಾಲ ಕಳೆಯಿತು. ಆಮೇಲೆ ಒಂದು ದಿನ ಶ್ರೀದತ್ತನು ತನ್ನ ಮಗಳ ಮದುವೆಗಾಗಿ ತುಪ್ಪವನ್ನು ಕೊಳ್ಳಲೆಂದು ತುರುಪಟ್ಟಿಗೆ ಬಂದು ಅಲ್ಲಿದ್ದ ಧನಕೀರ್ತಿಕುಮಾರನನ್ನು ನೋಡಿದನು. ಕೂಡಲೆ, ಅವನು ಗುಣಪಾಲಸೆಟ್ಟಿಯ ಮಗನೆಂದು ನಿಶ್ಚಯಿಸಿ, ಅವನೊಡನೆ ತನ್ನ

ಮಗನಿಗೆ ಒಂದು ಕಾಗದವನ್ನು ಬರೆದುಕೊಟ್ಟು ಕಳುಹಿಸಿ ಅದರಲ್ಲಿ, ಧನಕೀರ್ತಿಯನ್ನು ಕಂಡಕೂಡಲೆ ಅವನನ್ನು ಕೊಂದು ಮನೆಯ ಹಿತ್ತಿಲ್ಲಿ ಹೂಳಬೇಕೆಂದು ತಿಳಿಸಿದನು. ಅವನು ಉಜ್ಜಯಿನಿಗೆ ಬಂದು ಅಲ್ಲಿ ಸಿಂಪಾನದಿಯ ತಡಿಯಲ್ಲಿ ಮಲಗಿರಲು, ಅಲ್ಲಿ ಮೃಗಸೇನೆಯೆಂಬ ಸೂಳೆ ತಿರುಗಾಡುತ್ತ ಬಂದು ಅವನಲ್ಲಿದ್ದ ಓಲೆಯನ್ನು ನೋಡಿ ವ್ಯಸನಪಟ್ಟು, ಅದಕ್ಕೆ ಬದಲಾಗಿ 'ಇವನನ್ನು ಕಂಡ ಕೂಡಲೆ ನಿನ್ನ ತಂಗಿಯನ್ನು ಕೊಟ್ಟು ಮದುವೆ ಮಾಡಿಬಿಡು' ಎಂದು ಬೇರೊಂದು ಓಲೆಯನ್ನು ಬರೆದಿಟ್ಟಳು. ಅದರಂತೆ ಶ್ರೀದತ್ತನ ಮಗನಾದ ಮಹಾಬಲನು ತನ್ನತಂಗಿ ಶ್ರೀಮತಿಯನ್ನು ಧನಕೀರ್ತಿಗೆ ಕೊಟ್ಟು ಮದುವೆ ಮಾಡಿದನು.

ಶ್ರೀದತ್ತನು ಹಿಂತಿರುಗಿಬಂದು ತನ್ನ ಪ್ರಯತ್ನವು ವ್ಯರ್ಥವಾದದ್ದನ್ನು ನೋಡಿ, ಒಬ್ಬ ಕ್ರೂರಪುರುಷನನ್ನು ನಾಗಾಲಯದಲ್ಲಿಟ್ಟು 'ಇಲ್ಲಿಗೆ ಬಂದವನನ್ನು ಹಿಂದುಮುಂದೆ ನೋಡದೆ ತಲೆಕತ್ತರಿಸು' ಎಂದು ಗೊತ್ತುಮಾಡಿ ಅಲ್ಲಿಗೆ ಧನಕೀರ್ತಿಯೊಡನೆ ನೈವೇದ್ಯವನ್ನು ಕಳುಹಿಸಿಕೊಟ್ಟನು. ಅವನು ಹೋಗುತ್ತಿದ್ದುದನ್ನು ಮಹಾಬಲನು ಕಂಡು 'ಮದವಣಿಗನ ಕೈಯಲ್ಲಿ ಕೆಲಸಮಾಡಿಸುತ್ತಾರೆಯೇ? ನಾನು ಹೋಗುತ್ತೇನೆ' ಎಂದು ಅದನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋಗಿ ಅಲ್ಲಿ ಘಾತುಕನಿಂದ ಹತನಾದನು. ಇಷ್ಟಾದರೂ ಶ್ರೀದತ್ತನು ಹಿಂತೆಗೆಯದೆ ತನ್ನ ಹೆಂಡತಿಯನ್ನು ಕರೆದು ಅವಳಿಗೆ ನಡೆದ ಸಂಗತಿಯನ್ನೆಲ್ಲಾ ತಿಳಿಸಿ ಧನಕೀರ್ತಿಯನ್ನು ವಿಷಪ್ರಯೋಗದಿಂದ ಕೊಲ್ಲಬೇಕೆಂದು ಹೇಳಿದನು. ಅವಳು ಲಡ್ಡುಗೆಗಳನ್ನುಮಾಡಿ ದೊಡ್ಡವುಗಳಿಗೆ ವಿಷವನ್ನು ಹಾಕಿ ಚಿಕ್ಕವುಗಳನ್ನು ಹಾಗೆಯೇ ಬಿಟ್ಟದ್ದು, ಮಗಳನ್ನು ಕರೆದು ಅವಳ ಗಂಡನಿಗೆ ಬಡಿಸಬೇಕೆಂದು ಹೇಳಿ ಯಾವುದನ್ನೂ ಅರಿಯದಂತೆ ನೆರೆಮನೆಗೆ ಹೋಗಿದ್ದುಬಿಟ್ಟಳು. ಗಂಡನೆಂದು ದೊಡ್ಡಲಡ್ಡುಗೆಗಳನ್ನು ಕೊಟ್ಟು ಅವನನ್ನು ಕೊಲ್ಲುವಳೆಂದು ತಾಯಿಯ ಯೋಚನೆ. ಅಷ್ಟುಹೊತ್ತಿಗೆ ಸರಿಯಾಗಿ ತಂದೆಯೂ ಹಸಿದು ಬರಲು

ಇಬ್ಬರಿಗೂ ಬಡಿಸುತ್ತ, ಗಂಡನಿಗೆ ದೊಡ್ಡದನ್ನು ಬಡಿಸಿ ತಂದೆಗೆ ಚಿಕ್ಕದನ್ನು ಬಡಿಸಿದರೆ 'ತಂದೆಗಿಂತ ಇವಳಿಗೆ ಗಂಡನೇ ಹೆಚ್ಚಾದನಲ್ಲಾ' ಎಂದು ಯಾರಾದರೂ ಆಕ್ಷೇಪಿಸ ಬಹುದೆಂಬ ಶಂಕೆಯಿಂದ ಗಂಡನಿಗೆ ಚಿಕ್ಕ ಲಡ್ಡುಗೆಯನ್ನೂ ತಂದೆಗೆ ದೊಡ್ಡ ಲಡ್ಡುಗೆಯನ್ನೂ ಬಡಿಸಿದಳು. ಅದನ್ನು ತಿಂದು ಶ್ರೀದತ್ತನು ಮೃತನಾದನು. ಇದನ್ನು ನೋಡಿ ಅವನ ಹೆಂಡತಿಯಾದ ವಿಶಾಖೆಯು ನಡೆದ ಸಂಗತಿಯನ್ನೆಲ್ಲಾ ಹೇಳಿ, ಧನ ಕೀರ್ತಿಯು ಗುಣಪಾಲನ ಮಗನೆಂದು ತಿಳಿಸಿ ತಾನೂ ನಂಜಿನ ಲಡ್ಡುಗೆಗಳನ್ನು ತಿಂದು ಸತ್ತುಹೋದಳು.

ಇದೆಲ್ಲಾ ಮಹಾರಾಜನ ಕಿವಿಗೆ ಬೀಳಲು, ಅವನು ಬಂದು ಧನ ಕೀರ್ತಿಯ ತೇಜಸ್ಸನ್ನು ನೋಡಿ ಮೆಚ್ಚಿ ಅವನನ್ನು ಅರಮನೆಗೆ ಕರೆದು ಕೊಂಡುಹೋಗಿ ಉಪಚರಿಸುತ್ತ ಅವನಿಗೆ ತನ್ನ ಮಗಳಾದ ವಿಶ್ವಾವತಿಯನ್ನೂ ಅರ್ಧರಾಜ್ಯವನ್ನೂ ಕೊಡಬೇಕೆಂದು ಯೋಚಿಸುತ್ತಿದ್ದನು. ಅಷ್ಟು ಹೊತ್ತಿಗೆ ಗುಣಪಾಲನು ಕೌಶಾಂಬಿಯಲ್ಲಿ ಇರುವುದಾಗಿ ವರ್ತಮಾನ ಬಂತು. ಅವನನ್ನು ಕರೆಸಿ ಅವನ ಅನುಮತಿಯಿಂದ ಮದುವೆಯನ್ನು ನೆರವೇರಿಸಿ ಅರ್ಧರಾಜ್ಯವನ್ನು ಅಳಿಯನಿಗೆ ಬಳುವಳಿಯಾಗಿ ಕೊಟ್ಟನು.

ಕೆಲವು ದಿವಸದಮೇಲೆ ಯಶೋಧರರೆಂಬ ಋಷಿಗಳು ಆವೂರಿಗೆ ಬರಲು, ಗುಣಪಾಲನು 'ಧನಕೀರ್ತಿಗೆ ಶ್ರೀದತ್ತನು ತಂದೊಡ್ಡಿದ ಐದು ಕಂಟಕಗಳೂ ಪರಿಹಾರವಾಗಿ ರಾಜ್ಯಪ್ರಾಪ್ತಿಯಾದದ್ದು ಯಾವಪುಣ್ಯದಿಂದ?' ಎಂದು ಕೇಳಿದನು. ಅದಕ್ಕೆ ಅವರು ಹಿಂದಿನ ಜನ್ಮದ ಕಥೆಯನ್ನು ಹೇಳಿದರು :—

"ಹಿಂದೆ ಮೃಗಸೇನನೆಂಬ ಬೆಸ್ತರವನಿದ್ದನು. ಅವನು ಒಂದುದಿನ ಧರ್ಮಶ್ರವಣಮಾಡಿ ಯಾವುದಾದರೂ ಒಂದು ವ್ರತ ಬೇಕೆಂದು ಗುರುಗಳನ್ನು ಕೇಳಿದನು. ಅದಕ್ಕೆ ಗುರುಗಳು 'ನೀನು ಮೊದಲು ಸಿಕ್ಕಿದ ಮೀನನ್ನು ಬಿಟ್ಟುಬಿಡು; ಇದೇ ವ್ರತ' ಎಂದು ಹೇಳಿದರು. ಅನಂತರ

ಅವನು ಬಲೆ ಬೀಸುತ್ತಾ ಹೋಗಲು, ಎಲ್ಲೆಲ್ಲಿ ಬಲೆಹಾಕಿದರೂ ಮೊದಲು ಸಿಕ್ಕಿದ ಮೀನೇ ಸಿಕ್ಕುತ್ತ ಇತ್ತು. ಐದುಸಾರಿ ಪ್ರಯತ್ನಮಾಡಿ, ಐದು ಸಾರಿಯೂ ಅದೇ ಮೀನೇ ಬಂದುದರಿಂದ ಅದನ್ನು ಐದುಸಾರಿಯೂ ಬಿಟ್ಟು, ಬರಿಯ ಬಲೆಯನ್ನು ಬೆನ್ನಿಗೆ ಹಾಕಿಕೊಂಡು ಹೋದನು. ಅದನ್ನು ಕಂಡು ಅವನ ಹೆಂಡತಿ ಘಂಟೆ ಯೆಂಬವಳು ಆಕ್ಷೇಪಿಸಲು ಶ್ರಾವಕನಾಗುತ್ತೇನೆಂದು ಮನೆಬಿಟ್ಟು ಬರುತ್ತ ಕತ್ತಲೆಯಲ್ಲಿ ಹಾವು ಕಡಿದು ಸತ್ತುಹೋದನು ; ಘಂಟೆಯೂ ಅವನ ವ್ರತವನ್ನು ಹಿಡಿದೆನೆಂದು ಕೊಂಡು ಅವನೊಡನೆಯೇ ಸತ್ತುಹೋದಳು. ಆಮೇಲೆ ಆ ಮೃಗ ಸೇನನೆಂಬ ಬೆಸ್ತನು ಧನಕೀರ್ತಿಯಾಗಿ ಹುಟ್ಟಿ ಮೀನನ್ನು ಐದುಸಾರಿ ಬಿಟ್ಟ ಫಲದಿಂದ ಶ್ರೀದತ್ತನ ಐದು ಕಂಟಕಗಳಿಂದ ಪಾರಾಗಿ ರಾಜ್ಯ ವನ್ನು ಪಡೆದನು. ಘಂಟೆಯು ಶ್ರೀಮತಿಯಾದಳು. ಆ ಮೀನು ಮೃಗಸೇನೆಯೆಂಬ ಸೂಳೆಯಾಗಿ ಹುಟ್ಟಿತು."

ಇದನ್ನು ಕೇಳಿ ವಿಶ್ವಂಧರ ಗುಣಪಾಲರೂ, ಅವರ ಹೆಂಡಿರೂ ದೀಕ್ಷೆಯನ್ನು ಕೈಕೊಂಡರು. ಧನಕೀರ್ತಿಯು ಬಹುಕಾಲ ರಾಜ್ಯ ವಾಳುತ್ತಿದ್ದು ಒಂದುದಿನ ತನ್ನ ಕೆನ್ನೆಯ ಮೇಲಣ ನರೆಯನ್ನು ನೋಡಿ ವೈರಾಗ್ಯಹುಟ್ಟಲು, ಸುಕೀರ್ತಿಯೆಂಬ ತನ್ನ ಮಗನಿಗೆ ರಾಜ್ಯವನ್ನು ಒಪ್ಪಿಸಿ ತಾನು ಸಂನ್ಯಾಸವನ್ನು ವಹಿಸಿದನು. ಶ್ರೀಮತಿಯೂ ದೀಕ್ಷೆ ಯನ್ನು ತೆಗೆದುಕೊಂಡಳು. ಇವರೆಲ್ಲರಿಗೂ ಒಳ್ಳೊಳ್ಳೆಯ ಲೋಕ ಗಳು ಪ್ರಾಪ್ತವಾದುವು.

———

ಹನ್ನೊಂದನೆಯ ಆಶ್ವಾಸ

ಸತ್ಯವ್ರತದ ಕಥೆ

ವೆಂಗಿದೇಶದಲ್ಲಿ ಪ್ರತಿಷ್ಠಾಪುರವೆಂಬುದೊಂದು ಪಟ್ಟಣ. ಅಲ್ಲಿ ಧನದಮಹಾರಾಜನೆಂಬ ರಾಜನು ಆಳುತ್ತಿದ್ದನು. ಅವನು ಆ ಪೂರಿನಲ್ಲಿದ್ದ ಸಂಘಶ್ರೀ ಎಂಬ ಬೌದ್ಧನ ಮಗಳಾದ ಕಮಲಶ್ರೀ ಎಂಬಾಕೆಯ ರೂಪನ್ನು ಕೇಳಿ ಮೋಹಗೊಂಡು ಅವಳನ್ನು ಮದುವೆಯಾಗಿ ಸುಖದಿಂದಿರುತ್ತ ಕೆಲವುಕಾಲದ ಮೇಲೆ ತನ್ನ ಧರ್ಮವನ್ನು ಅಲಕ್ಷ್ಯ ಮಾಡಿದ್ದಕ್ಕಾಗಿ ವ್ಯಥೆಪಟ್ಟು ಕಮಲಶ್ರೀಗೆ ಉಪದೇಶಮಾಡಿ ಅವಳನ್ನು ಜೈನಧರ್ಮದ ಕಡೆಗೆ ತಿರುಗಿಸಿದನು. ಅದರಂತೆ ಸಂಘಶ್ರೀಯನ್ನೂ ಬೌದ್ಧಧರ್ಮದಿಂದ ಬಿಡಿಸಿ ಜಿನಧರ್ಮವನ್ನು ಅವಲಂಬಿಸುವಂತೆ ಮಾಡಬೇಕೆಂದು ಅವನಿಗೆ ತನ್ನ ಧರ್ಮವನ್ನು ಪರಿಪರಿಯಾಗಿ ಬೋಧಿಸಿದನು; ಆದರೂ ಅವನು ತನ್ನ ಮಾರ್ಗಕ್ಕೆ ಬರಲಿಲ್ಲ.

ಒಂದುದಿನ ಚಾರಣ ಋಷಿಗಳು ಅಂತರಿಕ್ಷದಲ್ಲಿ ಪ್ರಯಾಣ ಮಾಡುತ್ತಿದ್ದರು. 'ಇದು ಜಿನಧರ್ಮದ ಮಹಿಮೆ, ನೋಡು!' ಎಂದು ಸಂಘಶ್ರೀಗೆ ಅದನ್ನು ತೋರಿಸಿದನು. ಸಂಘಶ್ರೀಯೂ ಅದನ್ನು ನೋಡಿ ಮನಸ್ಸಿನಲ್ಲಿದ್ದ ಶಂಕೆಯನ್ನು ತೊರೆದು ಜಿನಮತವನ್ನು ನಂಬಿ ಶ್ರಾವಕ ವ್ರತಗಳನ್ನು ಕೈಕೊಂಡು ಸುಖದಿಂದಿದ್ದನು.

ಒಂದುದಿನ ಅವನ ಗುರುವಾದ ಬುದ್ಧಶ್ರೀಯೆಂಬ ಭಿಕ್ಷುವು ಬಂದು ಅವನಿಗೆ ದುರ್ಬೋಧನೆಮಾಡಿ ಪುನಃ ಬೌದ್ಧಮತಕ್ಕೆ ತಿರುಗಿಸಿದನು. ಅದನ್ನು ತಿಳಿದು ಧನದ ಮಹಾರಾಜನು ಪುನಃ ಅವನಿಗೆ ಜೈನಧರ್ಮವನ್ನು ಬೋಧಿಸಲು ಮೊದಲುಮಾಡಿದನು. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಒಂದುದಿನ ನೆರೆದ ಸಭೆಯಲ್ಲಿ ಅವನಿಗೆ ಬೋಧಿಸುತ್ತ 'ನೀನು ಅಂದು ಅಂತರಿಕ್ಷದಲ್ಲಿ ಹೋಗುತ್ತಿದ್ದ ಚಾರಣಋಷಿಯ

ರನ್ನು ನೋಡಿದುದು ಉಂಟೇ ಇಲ್ಲವೇ ?' ಎಂದು ಕೇಳಲು ಅವನು 'ಇಲ್ಲ' ವೆಂದು ಸುಳ್ಳುಹೇಳಿದನು. ಕೂಡಲೇ ಅಲ್ಲಿಯ ಪುರದೇವತೆಗಳೆಲ್ಲಾ ಬಂದು ಕೋಪದಿಂದ ಅವನ ಎರಡು ಕಣ್ಣುಗಳನ್ನೂ ಕಿತ್ತುಹಾಕಿದರು. ಸಭಿಕರೆಲ್ಲರೂ ಬಾಯಿಗೆ ಬಂದಹಾಗೆ ಬೈದರು. ಹೀಗೆ ಸಂಘಶ್ರೀಯು ಕಣ್ಣು ಕಳೆದುಕೊಂಡು ಅವಮಾನಪಟ್ಟು ಆ ಕೊರಗಿನಲ್ಲಿಯೇ ಸತ್ತುಹೋದನು. ಅವನಿಗೆ ರೌರವನರಕ ಪ್ರಾಪ್ತಿಯಾದದ್ದಲ್ಲದೆ ಅವನ ವಂಶದಲ್ಲಿ ಏಳು ತಲೆಯವರೆಗೂ ಹುಟ್ಟಿದ ಮಕ್ಕಳೆಲ್ಲವೂ ಕುರುಡಾಗಿದ್ದುವು. ಆ ದೇಶಕ್ಕೆ ಅಂಧಕವಿಷಯವೆಂದು ಹೆಸರು ಬಂತು.

ಧನದ ಮಹಾರಾಜನು ತನ್ನ ಮಗನಾದ ಇಂದ್ರಗುಪ್ತನಿಗೆ ರಾಜ್ಯವನ್ನು ಒಪ್ಪಿಸಿ ತಪಸ್ಸಿನಿಂದ ಕೈವಲ್ಯವನ್ನು ಪಡೆದನು.

ಹನ್ನೆರಡನೆಯ ಆಶ್ವಾಸ

ಅಸ್ತೇಯವ್ರತದ ಕಥೆ

ಅವಂತೀದೇಶದ ಉಜ್ಜಯಿನೀ ಪಟ್ಟಣದಲ್ಲಿ ಧರ್ಮಧರ ಮಹಾರಾಜನೆಂಬ ದೊರೆಯು ಆಳುತ್ತಿದ್ದನು. ಅಲ್ಲಿ ಜಿನದತ್ತನೆಂಬ ರಾಜಶ್ರೇಷ್ಠಿಯಿದ್ದನು. ಅವನ ಹೆಂಡತಿ ಜಿನೇಂದ್ರದಾಸಿ. ಅವರ ಮಗ ಜಿನದಾಸ. ಇವರು ಸುಖದಿಂದ ಜೀವಿಸುತ್ತಿರಲು ಒಂದುದಿನ ಜಿನಪಾಲಿತರೆಂಬ ಋಷಿಗಳು ಆ ಊರಹತ್ತಿರಕ್ಕೆ ಬಂದು ಕತ್ತಲೆಯಾದ್ದರಿಂದ ಮುಂದಕ್ಕೆ ಹೋಗದೆ ಗಂಧವತಿಯೆಂಬ ನದಿಯ ತಡಿಯಲ್ಲಿ ಸ್ಮಶಾನದೊಳಗೆ ಮಲಗಿದರು. ಇತ್ತಲಾಗಿ ಉಜ್ಜಯಿನಿಯಿಂದ ಅದೇ ರಾತ್ರಿ ವಿಡಂಬನೆಂಬ ಸಾಧಕನು ನಿಧಿನಿಕ್ಷೇಪವನ್ನು ಸಾಧಿಸುವುದಕ್ಕೋಸ್ಕರ ಅಲ್ಲಿಗೆ ಬಂದು ಜಿನಪಾಲಿತ ಮುನಿಯನ್ನು ಹೆಣವೆಂದು ಭಾವಿಸಿ ಅವರ ದೇಹದ ಹತ್ತಿರಕ್ಕೆ ಮತ್ತೆರಡು ಹೆಣಗಳನ್ನು ಎಳೆದು ತಂದುಹಾಕಿ ಆ ತಲೆಗಳನ್ನು ಒಲೆಯ ಗುಪ್ಪುಗಳಾಗಿ ಮಾಡಿಕೊಂಡು ಅಲ್ಲಿ ಬೆಂಕಿಯನ್ನು ಹೊತ್ತಿಸಿ ಚರುವನ್ನು ಮಾಡುತ್ತಿದ್ದನು. ಆದರೆ ಜಿನಪಾಲಿತಮುನಿ ಮಾತ್ರ ಅಲ್ಲಾಡದೆ ಸ್ಥಿರವಾಗಿ ಮಲಗಿದ್ದನು. ಸ್ವಲ್ಪಹೊತ್ತಿಗೆ ತೋಳಿನ ಬುಡವು ಹತ್ತಿಕೊಂಡು ಅಲ್ಲಿದ್ದ ನರಗಳು ಕಿತ್ತುಹೋಗಲು ತೋಳು ತನ್ನಷ್ಟಕ್ಕೆ ತಾನೇ ನೆಗೆಯಿತು. ಅದನ್ನು ಕಂಡು ವಿಡಂಬನು ಹೆದರಿ, ಬಿಟ್ಟದ್ದನ್ನು ಬಿಟ್ಟು ಹಿಂದುಮುಂದು ನೋಡದೆ ಓಡಿಹೋದನು. ಜಿನಪಾಲಿತಮುನಿಯು ಅವನು ಓಡಿದುದರಿಂದ ಆದ ಪ್ರಾಣಹಿಂಸೆಯನ್ನು ನೆನೆದು ವ್ಯಥೆಪಡುತ್ತಿರಲು ನಗರದೇವತೆಗಳು ಆತನ ಮನಸ್ಸಿನ ಧೈರ್ಯಕ್ಕೂ ಜೀವದಯೆಗೂ ಮೆಚ್ಚಿ ಆತನನ್ನು ಪೂಜಿಸಿ ಸ್ತುತಿಸಿದರು. ಮಾರನೆಯದಿನ ಬೆಳಗ್ಗೆ ಜಿನದತ್ತನು ಆತನನ್ನು ತನ್ನಮನೆಗೆ ಕರೆದುಕೊಂಡು ಹೋಗಿ

ದೇಹಾರದಲ್ಲಿ ಇಳಿಸಿ ತಾನೇ ಔಷಧಿ ಪಥ್ಯಪಾನಗಳನ್ನು ಕೊಡುತ್ತಾ ಸೇವಿಸುತ್ತಿದ್ದನು. ಹುಣ್ಣೆಲ್ಲವೂ ವಾಯಲು, ಮುನಿಯು ಸಂಚಾರಕ್ಕೆ ಹೊರಟನು. ಜಿನದತ್ತನೂ ಅವನನ್ನು ಅಗಲಲಾರದೆ ಸ್ವಲ್ಪದೂರ ಹಿಂಬಾಲಿಸುತ್ತ ಹೋದನು. ಇದನ್ನು ನೋಡಿದ ಅವನ ಮಗನು ತನಗೆ ಅವಕಾಶ ಸಿಕ್ಕಿತೆಂದು ಬಂಗಾರವನ್ನಿಟ್ಟದ್ದ ಕೊಟಡಿಯ ಬಾಗಿಲನ್ನು ತೆಗೆದು ಬಂಗಾರಕ್ಕೆ ಕೈಹಾಕುತ್ತಿರಲು, ಅಷ್ಟುಹೊತ್ತಿಗೆ ಸರಿಯಾಗಿ ಜಿನದತ್ತನು ಬಾಗಿಲಿಗೆ ಬಂದನು. ಜಿನದಾಸನು ತಂದೆ ಬಂದುದನ್ನು ತಿಳಿದು ಚಿನ್ನದ ಹಿಂದೆಯೇ ಅವಿತುಕೊಂಡನು. ತಂದೆಯು ಚಿನ್ನ ಕಡಿಮೆಯಾಗಿದ್ದುದನ್ನು ನೋಡಿ ಕೋಣೆಯನ್ನೆಲ್ಲಾ ಹುಡುಕಿ ಕಳ್ಳರಾರನ್ನೂ ಕಾಣದೆ ಜಿನಪಾಲಿತಮುನಿಯೇ ಕದ್ದುಕೊಂಡಿರಬೇಕೆಂದು ನಿಶ್ಚಯಿಸಿ ಅವನನ್ನು ಒಳ್ಳೆಯಮಾತಿನಿಂದ ಪುನಃ ತನ್ನ ಮನೆಗೆ ಕರೆದುಕೊಂಡು ಬಂದು ದುರ್ಜನನಾಗದಂತೆ ಉಪಾಯದಿಂದ ತನ್ನ ಬಂಗಾರವನ್ನು ಬರಮಾಡಿ ಕೊಳ್ಳುವೆನೆಂದು ಆತನಿಗೆ ಈ ಕಥೆಯನ್ನು ಹೇಳಲುಪಕ್ರಮಿಸಿದನು—

ವ್ಯಾಘ್ರಖೇಡವೆಂಬುದೊಂದು ಪಟ್ಟಣ. ಅಲ್ಲಿ ದಿನಕರನೆಂಬವನೊಬ್ಬನಿದ್ದನು. ಕರಾಳನೆಂಬ ಅವನ ಮಗನು ಕೆಟ್ಟವರ ಸಹವಾಸಕ್ಕೆ ಬಿದ್ದು ಬಂದುದಿವಸ ಅರಮನೆಗೆ ಕನ್ನವಿಕ್ಕಿ ಹೊನ್ನನ್ನು ಕದ್ದುಕೊಂಡುಹೋಗುತ್ತಿರುವಾಗ, ತಳಾರರು ಅಟ್ಟಿಕೊಂಡು ಬರಲು ಒಬ್ಬ ವರ್ತಕನ ಮರೆಹೊಕ್ಕನು. ಆ ವರ್ತಕನು ಕರುಣೆಯಿಂದ ಅವನನ್ನು ತನ್ನ ಹೊದಿಕೆಯೊಳಗೆ ಸೇರಿಸಿಕೊಂಡು ತಳಾರರಿಗೆ ಅಲ್ಲಿ ಯಾರೂ ಇಲ್ಲವೆಂದು ಹೇಳಿ ಕಳುಹಿಸಿದನು. ಆದರೂ ಈ ಉಪಕಾರವನ್ನು ನೆನೆಯದೆ ಕರಾಳನು ಒಳಗಿದ್ದ ಹಣದ ಚೀಲವನ್ನು ನೋಡಿ ಅದರ ಆಸೆಗೆ ಆ ವರ್ತಕನನ್ನು ಕೊಂದು ಆ ಹಣವನ್ನು ಕದ್ದುಕೊಂಡುಹೋದನು. ಹೀಗೆ ಕೆಲವರು ತಮ್ಮ ದೌರ್ಜನ್ಯವನ್ನೇ ತೋರಿಸುತ್ತಾರೆಯಲ್ಲದೆ ಉಪಕಾರವನ್ನು ಸ್ಮರಿಸುವುದಿಲ್ಲ.

ಜಿನಪಾಲಿತ ಮುನಿಯು ಈ ಕಥೆಯನ್ನು ಕೇಳಿ ಆಶ್ಚರ್ಯಪಟ್ಟು ಬಹುಶಃ ಇವನ ಮನೆಯಲ್ಲಿ ಯಾವುದೋ ಕಳುವಾಗಿದೆ;

ಅದನ್ನು ನಾನು ಕದ್ದಿರಬೇಕೆಂಬ ಭ್ರಾಂತಿಯಿಂದ ಹೀಗೆ ಹೇಳುತ್ತಿರಬಹುದು. ಪಾಪ! ಇವನೇನು ಮಾಡಿಯಾನು ? ಇದೆಲ್ಲಾ ದುಷ್ಕರ್ಮದ ಫಲ ಎಂದು ನಿರ್ಧರಿಸಿ ಉತ್ತರವಾಗಿ ತಾನೂ ಒಂದು ಕಥೆಯನ್ನು ಹೇಳಿದನು.—

ದ್ವಾರಾವತಿಯೆಂಬ ಪಟ್ಟಣದಲ್ಲಿ ನಾರಾಯಣನೆಂಬ ರಾಜನು ಆಳುತ್ತಿದ್ದನು. ಅಲ್ಲಿಗೆ ದಂಡಕರೆಂಬ ಋಷಿಗಳು ಬರಲು, ಅವರ ದೇಹಸ್ಥಿತಿ ಸರಿಯಾಗಿಲ್ಲದಿದ್ದುದರಿಂದ, ನಾರಾಯಣನು ಅವರನ್ನು ಕರೆದುಕೊಂಡುಹೋಗಿ ಚಾತುರ್ಮಾಸ್ಯವನ್ನು ಅಲ್ಲಿಯೇ ಕಳೆಯಬೇಕೆಂದು ಹೇಳಿ ಒಪ್ಪಿಸಿ, ಔಷಧಿ ಪಥ್ಯಪಾನಾದಿಗಳಿಂದ ಉಪಚರಿಸುತ್ತಿದ್ದನು. ರೋಗ ವಾಸಿಯಾದನಂತರ ವೈದ್ಯನು ಬಂದು ರಾಜನಿಂದ ಸನ್ಮಾನಪಡೆಯಲು 'ತಮ್ಮ ದೇಹಸ್ಥಿತಿ ಈಗ ಅನುಕೂಲವಾದುದಕ್ಕೆ ಸಂತೋಷ' ಎಂದು ಋಷಿಗಳನ್ನು ಕುರಿತು ಹೇಳಿದನು. ಅದಕ್ಕೆ ಅವರು 'ಕರ್ಮದಿಂದ ದುಃಖ ಬರುತ್ತದೆ; ಅದರ ಉಪಶಮದಿಂದ ಇದೂ ಶಾಂತವಾಗುತ್ತದೆ' ಎಂದರು. ಆದರೆ ವೈದ್ಯನಿಗೆ ತನ್ನ ಔಷಧದ ಮಾಹಾತ್ಮ್ಯವನ್ನು ಹೊಗಳದೆ ಹೋದರಲ್ಲಾ ಎಂದು ಕೋಪಹುಟ್ಟಿ ಕೆಲವು ಕಾಲಕ್ಕೆ ಸತ್ತು ಒಂದು ಕೋಡಗದ ಜನ್ಮವನ್ನು ಪಡೆದನು. ದಂಡಕರೂ ಒಂದುದಿವಸ ಆ ಕಪಿಯಿದ್ದ ಕಾಡಿಗೆ ಹೋಗಿ ಒಂದು ಮಾವಿನ ಮರದ ಕೆಳಗಿದ್ದಾಗ ಪೂರ್ವವೈರದಿಂದ ಆ ಕಪಿಯು ಒಂದು ಬಣಗಿದ ಮಾವಿನ ಕೊಂಬೆಯನ್ನು ಕಿತ್ತು ಋಷಿಯ ತೊಡೆಯನ್ನು ಇಬ್ಭಾಗವಾಗುವಂತೆ ಚುಚ್ಚಿತು. ಆದರೆ ಋಷಿಯೇನೋ ಕದಲಲಿಲ್ಲ. ಆ ಧೈರ್ಯವನ್ನು ಕಪಿಯು ನೋಡಿ ಆಶ್ಚರ್ಯಪಟ್ಟು ಮರುಗಿ ಇತರ ಕೋತಿಗಳ ಸಹಾಯದಿಂದ ಆ ಕೊಂಬೆಯನ್ನು ಕಿತ್ತು, ತನಗೆ ವೈದ್ಯಜ್ಞಾನವಿದ್ದುದರಿಂದ ತಕ್ಕ ಚಿಕಿತ್ಸೆಮಾಡಿ, ವ್ರಣವನ್ನು ವಾಸಿಮಾಡಿತು. ಹೀಗೆ ಕೆಲವು ಮೂರ್ಖರು ಅವಿಚಾರಿಗಳಾಗಿ ಸಾಧುಗಳನ್ನು ಸುಮ್ಮನೆ ಕಾಡುವರು.

ಈ ಕಥೆಯನ್ನು ಕೇಳಿ ಜಿನದತ್ತನು ಸ್ವಲ್ಪಹೊತ್ತು ಸುಮ್ಮನಿದ್ದು ಮತ್ತೊಂದು ಕಥೆಯನ್ನು ಹೇಳಿದನು.—

ಭಾನುಪುರವೆಂಬುದೊಂದು ಊರು. ಅಲ್ಲಿ ಕಪಿಲನೆಂಬ ಹಾರುವ ನಿದ್ದನು. ಆತನು ಗಾರುಡವಿದ್ಯೆಯನ್ನು ಕಲಿಯದೆ ಲಾಭವೂ ಕೀರ್ತಿಯೂ ಬರುವುದಿಲ್ಲವೆಂದುಕೊಂಡು ಪೂರ್ವದೇಶಕ್ಕೆ ಹೋಗಿ ಅಲ್ಲಿ ಪ್ರಸಿದ್ಧನಾದ ಒಬ್ಬ ಮಂತ್ರವಾದಿಯಿಂದ ಅದನ್ನು ಕಲಿತು ಬರುತ್ತ ದಾರಿಯಲ್ಲಿ ಒಂದು ಹುಲಿ ಸತ್ತು ಬಿದ್ದಿದ್ದುದನ್ನು ನೋಡಿದನು. ಅದು ಹಾವುಕಚ್ಚಿ ಸತ್ತುಹೋಗಿತ್ತೆಂದು ತಿಳಿದು ಮಂತ್ರಹಾಕಿ ಅದನ್ನು ಎಬ್ಬಿಸಿದನು. ಆ ಹುಲಿಯು ಎದ್ದು ತನ್ನ ಪ್ರಾಣವನ್ನು ಕೊಟ್ಟವನೆಂಬ ಉಪಕಾರವನ್ನು ನೆನೆಯದೆ ಅವನನ್ನು ಹಿಡಿದು ಸೀಳಿ ತಿಂದುಹಾಕಿತು. ಇದು ಯಾವ ಧರ್ಮ !

ಈಗ ಜಿನದತ್ತನ ಮನೋವೃತ್ತಿಯು ಸ್ಪಷ್ಟವಾಗಿ ತಿಳಿದು ಮುನಿಯು ಮತ್ತೊಂದು ಕಥೆಯನ್ನು ಹೇಳಿದನು:—

ಕೇಸರೀಪುರವೆಂಬುದೊಂದು ಊರು; ಅಲ್ಲಿ ವಾಸವನೆಂಬ ರಾಜನು ಆಳುತ್ತಿದ್ದನು. ಆ ಊರಿನ ರಾಜಶ್ರೇಷ್ಠಿಯಾದ ಅಮಲನೆಂಬವನ ಮಗನಾದ ವಿಮಲನೆಂಬ ಹುಡುಗನು ಒಡವೆವಸ್ತುಗಳನ್ನು ಹಾಕಿಕೊಂಡು ತನ್ನ ಮನೆಯ ಅಂಗಳದಲ್ಲಿ ಆಡುತ್ತಿರಲು ನೆರೆಮನೆಯಾಕೆ ಕಂಡು ಒಡವೆಯಾಸೆಗೆ ಆ ಮಗುವನ್ನು ಕೊಂದು ಅದರ ಹೆಣವನ್ನು ಬೀದಿಯಲ್ಲಿ ತಿರುಗುವ ಬಸವನ ಕೊಂಬಿಗೆ ಸಿಕ್ಕಿಸಿದಳು. ಸೆಟ್ಟಿಯು ಮಗನನ್ನು ಕಾಣದೆ ಹುಡುಕುತ್ತ ಬಂದು ಬಸವನ ಕೋಡಿನಲ್ಲಿ ಅವನ ಹೆಣವನ್ನು ಕಾಣಲು ಬಹುದುಃಖವಾಯಿತು. ಅದೇ ಕೊಂದುಹಾಕಿತೆಂಬ ಭ್ರಾಂತಿಯಿಂದ ಊರವರೆಲ್ಲರೂ ಅದನ್ನು ನಾನಾವಿಧವಾಗಿ ಹಿಂಸೆ ಮಾಡುವುದಕ್ಕೆ ಮೊದಲುಮಾಡಿದರು. ಅದು ಅವರ ಹಿಂಸೆಯನ್ನು ತಡೆಯಲಾರದೆ ಓಡಾಡುತ್ತ ಹೋಗಿ ತನ್ನ ಶುದ್ಧಗುಣವನ್ನು ತೋರಿಸುವುದಕ್ಕೋ ಎಂಬಂತೆ ಕಮ್ಮಾರನ ಮನೆಗೆಹೋಗಿ ಅವನು ಕಾಯಿಸುತ್ತಿದ್ದ ಕಬ್ಬಿಣವನ್ನು ಕಚ್ಚಿ ಗುಂಪಿಗೆ ಇದಿರಾಗಿ ಬಂತು. ಅದನ್ನು ನೋಡಿ ಅವರು ಬೆರಗಾಗಿ 'ಇದು ಎಂದಿಗೂ ಮಗುವನ್ನು ಕೊಂದಿರಲಾರದು. ಯಾರೋ ದುರಾತ್ಮರು ಒಡವೆಯ ಆಸೆಗಾಗಿ ಹೀಗೆ ಮಾಡಿ ತಮ್ಮ

ತಪ್ಪನ್ನು ಬಡ ಬಸವನ ಮೇಲೆ ಹಾಕಿದ್ದಾರೆ. ನಿಜವಾದ ಕಳ್ಳರನ್ನು ಕಂಡುಹಿಡಿಯಬೇಕು' ಎಂದು ತಳಾರನಿಗೆ ನೇಮಿಸಲು ಅವನು ಉಪಾಯದಿಂದ ಆ ಕಳ್ಳಹೆಂಗಸನ್ನು ಕಂಡು ಹಿಡಿದನು. ಪ್ರಜೆಗಳೆಲ್ಲರೂ ಆ ಮೇಲೆ 'ಆ ಬಡ ಪ್ರಾಣಿಯನ್ನು ಅನ್ಯಾಯವಾಗಿ ಹೊಡೆದು ಗೋಳಾಡಿಸಿದೆವಲ್ಲಾ' ಎಂದು ವ್ಯಸನಪಟ್ಟರು. ಆದ್ದರಿಂದ ಅವಿಚಾರಿಗಳಾಗಬಾರದು. ಯಾವುದನ್ನೂ ಸರಿಯಾಗಿ ವಿಚಾರಿಸಿ ಮಾಡಬೇಕು.

ಸೆಟ್ಟಿಯು ಉತ್ತರವಾಗಿ ಮತ್ತೊಂದು ಕಥೆಯನ್ನು ಹೇಳಿದನು :—

ಭಾರತಿ ಎಂಬ ನದಿಯ ತೀರದಲ್ಲಿ ಕಪಾಲಿ ಎಂಬ ಒಬ್ಬ ತಪಸ್ವಿಯಿದ್ದನು. ಒಂದುದಿನ ಆ ಹೊಳೆಯಲ್ಲಿ ಪ್ರವಾಹ ಬಂದು ಅದರಲ್ಲಿ ಒಂದು ಆನೆಯ ಮರಿಯು ಕೊಚ್ಚಿಕೊಂಡು ಬರುತ್ತಿರಲು ಅದನ್ನು ಹಿಡಿದು ಕಟ್ಟಿಹಾಕಿ ಕಾಪಾಡುತ್ತ ಬಂದನು. ಕೆಲವು ದಿವಸಕ್ಕೆ ಅದು ಪಟ್ಟದಾನೆಗಿಂತಲೂ ಚೆನ್ನಾಗಲು ಆ ವರ್ತಮಾನವು ರಾಜನ ಕಿವಿಗೆ ಮುಟ್ಟಿ ಅವನು ಅದನ್ನು ತನಗೆ ಕೊಡಬೇಕೆಂದು ಹೇಳಿಕಳುಹಿಸಿದನು. ತಪಸ್ವಿಯು ಹೆದರಿಕೊಂಡು ಕಳುಹಿಸಿಕೊಟ್ಟನು. ಆದರೆ ಅದು ಅರಮನೆಯಲ್ಲಿರದೆ ಕಾಪಿಸವರನ್ನು ಕೊಂದು ತನ್ನ ಮೊದಲಿನ ಸ್ಥಳಕ್ಕೇ ಓಡಿಹೋಯಿತು. ಮತ್ತೆ ತರಿಸಿಕೊಂಡನು; ಮತ್ತೆ ಓಡಿಹೋಯಿತು. ಹೀಗೆ ಹಲವುಸಾರಿ ನಡೆಯಲು ರಾಜನು ಕೋಪಿಸಿಕೊಂಡು 'ನನಗೆ ಕೊಟ್ಟುಬಿಟ್ಟ ಆನೆಯನ್ನು ಕೊಡಲಾರದೆ ತನ್ನ ಮಠದಮೇಲೆ ಅದಕ್ಕೆ ಅಭಿಮಾನವನ್ನು ಹತ್ತಿಸಿದ್ದಾನೆ. ಆದ್ದರಿಂದ ಅವನು ನನ್ನದೇಶವನ್ನೇ ಬಿಟ್ಟು ಹೋಗಲಿ!' ಎಂದು ಆಜ್ಞೆಮಾಡಿದನು. ಅದರಂತೆ ಕಪಾಲಿಯು ತನ್ನಮೇಲಣ ಅಪವಾದವನ್ನು ಕಳೆದುಕೊಳ್ಳುವುದಕ್ಕೋಸ್ಕರ ಪುನಃ ಆನೆಯನ್ನು ತಂದು ಒಪ್ಪಿಸಿ ಹಿಂತಿರುಗಿ ಬರಲು ಆನೆಯು ಕೋಪದಿಂದ ಒಂದು ಉಪಕಾರಸ್ಮರಣೆ ಇಲ್ಲದೆ ಅವನನ್ನು ಕೊಂದುಹಾಕಿತು. ಪ್ರಪಂಚದಲ್ಲಿ ನಿರ್ದಯರಾದ ದುರ್ಜನರು ಒಳ್ಳೆಯದನ್ನು ಮಾಡುತ್ತಾರೆಯೇ ?

ಇದನ್ನು ಕೇಳಿ ಜಿನಪಾಲಿತಮುನಿಯು ನಕ್ಕು ಪ್ರತ್ಯುತ್ತರವಾಗಿ ಇನ್ನೊಂದು ಕಥೆಯನ್ನು ಹೇಳಿದನು :—

ದಂತಿಪುರವೆಂಬ ಊರಿನಲ್ಲಿ ಅನಂತಶ್ರೀಯೆಂಬ ಸೂಳೆಯೊಬ್ಬ ಳಿದ್ದಳು. ಅವಳಿಗೆ ಅವಳ ಸ್ನೇಹಿತಳಾದ ವಾಸವದತ್ತೆ ಯೆಂಬವಳು ಒಂದು ಗಿಣಿಯನ್ನು ತಂದುಕೊಡಲು ಅದನ್ನು ಚಿನ್ನದ ಪಂಜರದಲ್ಲಿಟ್ಟು ಸಾಕುತ್ತಿದ್ದಳು. ಆವೂರಿನ ಮಿಕ್ಕಸೂಳೆಯರು ಹೊಟ್ಟೆಯ ಕಿಚ್ಚಿ ನಿಂದ ವಾಸವದತ್ತೆಗೆ ಹಣದಾಸೆಯನ್ನು ತೋರಿಸಿ ಅನಂತಶ್ರೀಯನ್ನು ಕೊಲ್ಲಲು ಏರ್ಪಡಿಸಿದರು. ವಾಸವದತ್ತೆಯು ವಿಷಬೆರಸಿದ ಮದ್ಯವನ್ನು ಬಹು ಸ್ನೇಹದಿಂದ ತಂದು ಕೊಡಲು ಅನಂತಶ್ರೀಯು 'ಇಲ್ಲಿಟ್ಟು ಹೋಗು. ಸಾಯಂಕಾಲಕ್ಕೆ ಇಬ್ಬರೂ ಪಾನಮಾಡೋಣ' ಎಂದು ಹೇಳಿ ಮಂಚದ ಮೇಲೆ ಮಲಗಿದಳು. ವಾಸವದತ್ತೆಯು ಅದರಂತೆ ಮದ್ಯದ ಬಟ್ಟಲನ್ನು ಮಂಚದ ಕೆಳಗಿಟ್ಟು ಹೊರಟುಹೋದಳು. ಪಂಜರದ ಗಿಳಿಯು ಮದ್ಯವನ್ನು ನೋಡುತ್ತಿದ್ದು ಅದರ ವಾಸನೆಗೆ ಮುತ್ತಿದ ನೊಣಗಳು ಸಾಯುತ್ತಿರಲು ಅದು ವಿಷವೆಂದು ತಿಳಿದು ಆ ಮದ್ಯ ವನ್ನು ಉರುಟಿಸಿತು. ಕೂಡಲೆ ಅನಂತಶ್ರೀಯು ಮಹಾಕೋಪದಿಂದ ಆ ಗಿಣಿಯನ್ನು ಕೊಂದು ಚೆಲ್ಲಿಹೋದ ಮದ್ಯವನ್ನು ನೋಡುತ್ತಿರಲು ಅದಕ್ಕೆ ಮುತ್ತಿ ಸಾಯುತ್ತಿದ್ದ ನೊಣಗಳು ಕಣ್ಣಿಗೆ ಬಿದ್ದುವು. ಆಗ ಅವಳಿಗೆ ಜ್ಞಾನೋದಯವಾಗಿ 'ಈ ಗಿಣಿಯಿಂದ ನಾನು ಬದುಕಿ ಕೊಂಡೆ. ಇದನ್ನು ಅನ್ಯಾಯವಾಗಿ ಕೊಂದೆನಲ್ಲಾ!' ಎಂದು ವ್ಯಥೆ ಪಟ್ಟಳು. ಆದ್ದರಿಂದ ಬುದ್ಧಿವಂತರು ಅವಳಹಾಗೆ ಅವಿವೇಕಿಗಳಾಗದೆ ಯಾವುದನ್ನೂ ವಿಚಾರದಿಂದ ಮಾಡಬೇಕು.

ಇದಕ್ಕೆ ಬದಲಾಗಿ ವೈಶ್ಯನು ಮತ್ತೊಂದು ಕಥೆಯನ್ನು ಹೇಳಿದನು :—

ಅವನಿಭೂಷಣವೆಂಬ ಪಟ್ಟಣದಲ್ಲಿ ಒಬ್ಬ ಕುಶಲನಾದ ಬಡಗಿಯಿ ದ್ದನು. ಅವನು ಒಂದುದಿನ ವಿಂಧ್ಯಪರ್ವತಕ್ಕೆ ಮರ ಕಡಿಯುವುದಕ್ಕೆ ಹೋಗಿ ಮರಗಳನ್ನು ನೋಡುತ್ತಿರುವಾಗ ಒಂದು ಮದದಾನೆಯು ಓಡಿ

ಬರಲು ಒಂದು ದೊಡ್ಡ ಮರವನ್ನು ಹತ್ತಿ ಕುಳಿತುಕೊಂಡನು. ಆನೆಯು ಅವನನ್ನು ಏನೂ ಮಾಡಲಾರದೆ ಅಲ್ಲಿ ಸ್ವಲ್ಪಹೊತ್ತು ಇದ್ದು ಹೊರಟು ಹೋಯಿತು. ಅನಂತರ ಆ ಮರದಿಂದ ಇಳಿದುಬಂದು ಅದು ತನಗೆ ಆಶ್ರಯಕೊಟ್ಟಿತೆಂಬ ಪರಿಜ್ಞಾನವಿಲ್ಲದೆ ಆ ಮರವನ್ನೇ ಕಡಿದುಹಾಕಿ ಬಿಟ್ಟನು. ದುರ್ಜನರು ಸಜ್ಜನರನ್ನು ತೊಂದರೆಗೀಡುಮಾಡುತ್ತಾರೆಂಬು ದೇನಾಶ್ಚರ್ಯ ?

ಇದನ್ನು ಕೇಳಿ ಮುನಿಗಳು 'ಸಂದೇಹಕ್ಕೆ ಸಿಕ್ಕಿರುವ ಇವನಿಗೆ ಹೇಗೆ ನಂಬುಗೆಯುಂಟುಮಾಡುವುದು' ಎಂದು ನಕ್ಕು ಇನ್ನೊಂದು ಕಥೆಯನ್ನು ಹೇಳಿದರು :—

ಅಮರಖೇಟವೆಂಬ ಊರಿನಲ್ಲಿ ಚಂದ್ರದತ್ತನೆಂಬ ಬ್ರಾಹ್ಮಣ ನಿದ್ದನು. ಅವನ ಹೆಂಡತಿ ಯಜ್ಞದತ್ತೆಯೆಂಬಾಕೆ ಒಂದು ಮುಂಗುಸಿ ಯನ್ನು ಸಾಕುತ್ತಿದ್ದಳು. ಒಂದುದಿವಸ ಆಕೆಯು ತನ್ನ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಎಲ್ಲಿಯೋ ಹೋಗಿರಲು ಒಂದು ಹಾವು ಅ ಮಗು ವನ್ನು ಕಚ್ಚುವುದಕ್ಕೆ ಬರುತ್ತಿತ್ತು. ಅದನ್ನು ಕಂಡು ಮುಂಗುಸಿಯು ಹಾರಿ ಬಂದು ಆ ಹಾವನ್ನು ಕೊಂದು ಸಂತೋಷದಿಂದ ತನ್ನ ಒಡತಿಯ ಕಾಲಮೇಲೆ ಬಿದ್ದು ಹೊರಳಾಡುತ್ತಿರಲು ಆಕೆಯು ಮುಂಗುಸಿಯ ಬಾಯ ನೆತ್ತರವನ್ನು ನೋಡಿ ಅದು ಮಗುವನ್ನು ಕೊಂದಿರಬೇಕೆಂದು ಯೋಚಿಸಿ ತನ್ನ ಕೈಲಿದ್ದ ಒನಕೆಯಿಂದ ಅದರ ತಲೆಯನ್ನು ಎರಡು ಪಾಲಾಗುವಂತೆ ಒಡೆದಳು. ಆಮೇಲೆ ಮಗು ಸತ್ತಿತಲ್ಲಾ ಎಂದು ಗೋಳಾಡುತ್ತ ಮನೆಗೆ ಬಂದು ನೋಡಲು ಮಗು ಸುಖವಾಗಿ ನಿದ್ರಿಸು ತ್ತಿತ್ತು. ಅದರ ಹತ್ತಿರ ಹಾವು ಎರಡು ತುಂಡಾಗಿ ಬಿದ್ದಿತ್ತು. ಅದನ್ನು ಕಂಡು 'ನನ್ನ ಮಗುವನ್ನು ಕಾಪಾಡಿದ ಮುಂಗುಸಿಯನ್ನು ಕೊಂಡಾ ಡದೆ ಕೊಂದುಹಾಕಿದೆನಲ್ಲಾ' ಎಂದು ವ್ಯಥೆಪಟ್ಟಳು. ಆದ್ದರಿಂದ ಸತ್ಪು ರುಷರು ಆಕೆಯಹಾಗೆ ಅವಿಚಾರಿಗಳಾಗದೆ ಯಾವುದನ್ನೂ ವಿಚಾರ ಮಾಡಿ ಮಾಡಬೇಕು.

ಅದಕ್ಕೆ ಪ್ರತ್ಯುತ್ತರವಾಗಿ ಸೆಟ್ಟಿಯು ಈ ಕಥೆಯನ್ನು ಹೇಳಿದನು :—

ಕಾಮುಕವನವೆಂಬ ಒಂದು ಕಾಡಿನಲ್ಲಿ ಒಂದು ದೊಡ್ಡ ಹಾಳು ಭಾವಿಯಿತ್ತು. ಅದರೊಳಗೆ ಒಂದು ಹಾವು, ಒಂದು ಹುಲಿ, ಒಂದು ಕೋತಿ ಮತ್ತು ಒಬ್ಬ ಅಕ್ಕಸಾಲೆ ಇವರೆಲ್ಲರೂ ಬಿದ್ದಿರಲು, ಆ ದಾರಿಯಲ್ಲಿ ಕಾಶಿಗೆಂದು ಹೋಗುತ್ತಿದ್ದ ಕೌಶಿಕನೆಂಬ ಬ್ರಾಹ್ಮಣನು ಆ ಭಾವಿಯೊಳಗೆ ನೀರು ಸೇದಬೇಕೆಂದು ಒಂದು ಪಾತ್ರೆಗೆ ಹಗ್ಗಕಟ್ಟಿ ಬಿಟ್ಟನು. ಆ ಹಗ್ಗವನ್ನು ಹಿಡಿದುಕೊಂಡು ಒಂದುಸಾರಿ ಹುಲಿಯೂ, ಆಮೇಲೆ ಹಾವೂ, ಆಮೇಲೆ ಕೋತಿಯೂ ಕೊನೆಗೆ ಅಕ್ಕಸಾಲೆಯೂ ಮೇಲಕ್ಕೆ ಬಂದರು. ಆ ಮೂರು ಪ್ರಾಣಿಗಳೂ ಬ್ರಾಹ್ಮಣನ ಉಪಕಾರಕ್ಕೆ ಕೃತಜ್ಞತೆಯನ್ನು ತೋರ್ಪಡಿಸಿ ಏನಾದರೂ ಕಷ್ಟ ಪ್ರಾಪ್ತವಾದರೆ ಆಗ ತಮ್ಮನ್ನು ಜ್ಞಾಪಿಸಿಕೊಳ್ಳಬೇಕೆಂದು ಹೇಳಿದುವು. ಅಕ್ಕಸಾಲೆಯೂ 'ಈ ಕಾಡಿನ ಹತ್ತಿರವೇ ತಾಮ್ರಕೂಟವೆಂಬ ನಮ್ಮೂರು ಇದೆ. ಅಲ್ಲಿಗೆ ಬರಬೇಕು' ಎಂದು ಕೈಮುಗಿದು ಬೇಡಿಕೊಂಡನು. ಅದಕ್ಕೆ ಬ್ರಾಹ್ಮಣನು 'ನಾನು ಹಿಂತಿರುಗಿ ಹೋಗುವಾಗ ಅವಶ್ಯವಾಗಿ ಬರುತ್ತೇನೆ' ಎಂದು ಉತ್ತರಕೊಟ್ಟು ಹೊರಟುಹೋದನು. ಹಿಂತಿರುಗಿ ಬರುತ್ತ ಮೊದಲು ಕಪಿಯಿದ್ದ ಸ್ಥಳಕ್ಕೆ ಬರಲು ಅದು ಹಣ್ಣು ಹಂಪಲುಗಳನ್ನು ಕೊಟ್ಟು ಉಪಚರಿಸಿತು. ಹುಲಿಯಿರುವ ಕಡೆಗೆ ಬರಲು ಅದು ರತ್ನದ ಆಭರಣಗಳನ್ನು ಕೊಟ್ಟಿತು. ಬ್ರಾಹ್ಮಣನು ಅದನ್ನು ಬಹು ಸಂತೋಷದಿಂದ ಸ್ವೀಕರಿಸಿ ಅಕ್ಕಸಾಲೆಯ ಮನೆಗೆ ಬಂದನು. ಅಲ್ಲಿ ಅವನ ಸತ್ಕಾರವನ್ನು ಕೈಕೊಂಡು ಮರುದಿವಸ ಹುಲಿಯಿಂದ ಬಂದ ಆಭರಣಗಳನ್ನು ಮುಂದಿಟ್ಟು ಅವುಗಳನ್ನು ಕರಗಿಸಿ ಗಟ್ಟಿಮಾಡಿ ಕೊಡಬೇಕೆಂದು ಅವನ ಕೈಯಲ್ಲಿ ಕೊಟ್ಟನು. ಆದರೆ ಆ ದುರಾತ್ಮನು ಅವುಗಳನ್ನು ತೆಗೆದುಕೊಂಡುಹೋಗಿ ರಾಜನಿಗೆ ಒಪ್ಪಿಸಲು ರಾಜನು ಭಟರನ್ನು ಕರೆಸಿ ಬ್ರಾಹ್ಮಣನನ್ನು ಕೋಳಕ್ಕೆ ಹಾಕಿಸಿದನು. ಆಗ ಬ್ರಾಹ್ಮಣನು ಹಾವನ್ನು ನೆನೆಯಲು ಅದು ಬಂದು ರಾಜನ ಮಗನನ್ನು

ಕಚ್ಚಿತು. ಯಾರು ಏನುಮಾಡಿದರೂ ವಿಷವಿಳಿಯಲಿಲ್ಲ; ಆಗ ಕೌಶಿಕನು ಮಂತ್ರಹಾಕಿ ಆ ವಿಷವನ್ನು ಇಳಿಸಿ ಸನ್ಮಾನಿತನಾಗಿ ನಡೆದ ವೃತ್ತಾಂತವನ್ನೆಲ್ಲಾ ಹೇಳಿದನು. ಅರಸನು ಆಶ್ಚರ್‍ಯಪಟ್ಟು 'ಈ ಅಕ್ಕಸಾಲೆ ವಿಶ್ವಾಸಘಾತಕ; ಇವನನ್ನು ದೋಚಿಕೊಂಡರೆ ದೋಷವಿಲ್ಲ' ಎಂದು ಅವನ ಆಸ್ತಿಯನ್ನೆಲ್ಲಾ ಕಿತ್ತುಕೊಂಡುಬಿಟ್ಟನು. ಹೀಗೆ ಉಪಕಾರಸ್ಮರಣೆಯಿಲ್ಲದವರು ಕೆಲವರು ಇರುತ್ತಾರೆ.

ಅದಕ್ಕೆ ಪ್ರತಿಯಾಗಿ ಮುನಿಗಳು ಮತ್ತೊಂದು ಕಥೆಯನ್ನು ಹೇಳಿದರು :—

ಅವಂತಿ ದೇಶದ ಉಜ್ಜೈನಿ ಪಟ್ಟದಲ್ಲಿ ಮಹೇಂದ್ರನೆಂಬ ರಾಜನು ಆಳುತ್ತಿದ್ದನು. ಅವನಲ್ಲಿ ಕುಬೇರನೆಂಬುವನು ರಾಜಶ್ರೇಷ್ಠಿಯಾಗಿದ್ದನು. ಅವನಿಗೆ ಯಾರೋ ಒಬ್ಬರು ಬಂದು ಅಪೂರ್ವವಾದ ಮಾವಿನ ಹಣ್ಣನ್ನು ತಂದುಕೊಡಲು ಅದನ್ನು ತಂದು ತನ್ನ ರಾಜನಿಗೆ ಸಮರ್ಪಿಸಿ 'ದೊರೆಯೇ, ಇದನ್ನು ಮುದುಕರು ತಿಂದರೆ ಹುಡುಗರಾಗುವರು, ರೋಗಿಗಳು ತಿಂದರೆ ಅವರ ರೋಗ ವಾಸಿಯಾಗುವುದು' ಎಂದು ಹೇಳಿದನು. ರಾಜನು ಆಶ್ಚರ್‍ಯಪಟ್ಟು, ಕುಬೇರನಿಗೆ ಸನ್ಮಾನಮಾಡಿ, ಆ ಬೀಜವನ್ನು ತನ್ನ ಉದ್ಯಾನವನದಲ್ಲಿ ನೆಡಿಸಿದನು. ಕೆಲವು ಕಾಲಕ್ಕೆ ಅದು ದೊಡ್ಡಮರವಾಗಿ ಹಣ್ಣು ಬಿಟ್ಟಿತು. ಆಗ ಒಂದು ಹದ್ದು ಒಂದು ಹಾವನ್ನು ಕೊಂದು ಕಚ್ಚಿಕೊಂಡು ಅದರಮೇಲೆ ಹಾರಿ ಹೋಗುತ್ತಿರಲು ಒಂದೆರಡು ವಿಷದ ತೊಟ್ಟುಗಳು ಒಂದು ಹಣ್ಣಿನ ಮೇಲೆ ಬಿದ್ದು ಅದು ವಿಷಪೂರಿತವಾಗಿ ತೊಟ್ಟು ಕಳಚಿ ಕೆಳಗೆ ಬಿತ್ತು. ಅದನ್ನು ರಾಜಕುಮಾರನು ತಿಂದು ಪ್ರಾಣಬಿಡಲು, ರಾಜನು ಮಹಾ ದುಃಖದಿಂದಲೂ ಕೋಪದಿಂದಲೂ ಆ ಮರವನ್ನು ಕಡಿಯಿಸಿ ಕುಬೇರನನ್ನು ಸಾಯಬಡಿಸಿ ಅವನ ಸರ್ವಸ್ವವನ್ನೂ ಕಿತ್ತುಕೊಂಡನು. ಇಷ್ಟರೊಳಗೆ ಆ ಊರಿನ ಕುಂಟರು, ಕುರುಡರು, ರೋಗಿಗಳು ಮುಂತಾದವರು ಸತ್ತರೆ ಸಾಕೆಂದು ಆ ಮರದ ಹಣ್ಣುಗಳನ್ನು

ತಿನ್ನಲು ಅವರ ದೇಹಗಳು ಬಂಗಾರದಂತಾದುವು. ದೊರೆಯು ಇದನ್ನು ನೋಡಿ ಆಶ್ಚರ್ಯಪಟ್ಟು ಕುಬೇರನ ಆಸ್ತಿಯನ್ನು ಹಿಂದಕ್ಕೆ ಕೊಟ್ಟು ಅವನ ಕ್ಷಮೆಯನ್ನು ಬೇಡಿಕೊಂಡನು. ಹೀಗೆ ಕೆಲವರು ಅವಿಚಾರತೆಯಿಂದ ಕೆಲಸ ಮಾಡುವರು, ಸಜ್ಜನರಾದವರು ಹಾಗಲ್ಲದೆ ಯಾವುದನ್ನೂ ವಿಚಾರಿಸಿ ಮಾಡಬೇಕು.

ಇದನ್ನು ಕೇಳಿ ವೈಶ್ಯನು ಮತ್ತೊಂದು ಕಥೆಯನ್ನು ಹೇಳಿದನು:—

ಸಾನಂದಗಿರಿಯೆಂಬ ಪಟ್ಟಣದಲ್ಲಿ ಅಮಿತನೆಂಬ ಬೇಡರವನಿದ್ದನು. ಅವನು ಒಂದು ದಿನ ದೈತ್ಯವನವೆಂಬ ಅಡವಿಯಲ್ಲಿ ಬಾಯಾರಿಕೆಯಾಗಿ ಮುಂದೆ ಹೋಗಲಾರದೆ ಕುಳ್ಳಿರಲು ಅವನನ್ನು ಒಂದು ಕೋತಿಯು ಕಂಡು ಅವನಿಗೆ ನೀರಿದ್ದ ಸ್ಥಳವನ್ನು ತೋರಿಸಿತು. ಅಲ್ಲಿ ಅವನು ನೀರು ಕುಡಿದು ಬಾಯಾರಿಕೆಯನ್ನು ತೀರಿಸಿಕೊಂಡು 'ನಾನು ಇನ್ನೂ ಬಹು ದೂರ ಹೋಗಬೇಕಾಗಿದೆ. ಆದ್ದರಿಂದ ನೀರಿದ್ದ ಕಡೆಯಲ್ಲಿಯೇ ಅದನ್ನು ಸ್ವಲ್ಪ ಶೇಖರಿಸಿಕೊಂಡು ಹೋಗಬೇಕು. ಇಲ್ಲದೆ ಮುಂದೆ ಬಾಯಾರಿಕೆಯಿಂದ ಸಾಯಬಾರದು' ಎಂದುಕೊಂಡು ಆ ಕೋತಿಯನ್ನು ಕೊಂದು ಅದರ ತೊಗಲಿನಲ್ಲಿ ನೀರನ್ನು ತುಂಬಿಕೊಂಡು ಹೋದನು. ಹೀಗೆ ಕೆಲವರು ಉಪಕಾರಸ್ಮರಣೆಯಿಲ್ಲದವರುಂಟು.

ಅದನ್ನು ಕೇಳಿ ಮುನಿಗಳು ಈ ಕಥೆಯನ್ನು ಹೇಳಿದರು :—

ಕೌಶಾಂಬಿಯೆಂಬ ಪಟ್ಟಣದಲ್ಲಿ ವಿಶಾಖನಂದನನೆಂಬ ವರ್ತಕನಿದ್ದನು. ಅವನ ಮಗನಾದ ಅಂಗಾರಕನೆಂಬವನು ಮನೆಯ ಹೊರಗಡೆ ಒಂದು ಮಣೆಯ ಮೇಲೆ ಬಟ್ಟೆಯನ್ನು ಹಾಸಿ ಅದರ ಮೇಲೆ ಒಂದು ಪದ್ಮರಾಗಮಣಿಯನ್ನಿಟ್ಟು ನೋಡುತ್ತಿರಲು, ಆ ಮಾರ್ಗವಾಗಿ ಮೇಧಾವಿ ಮುನೀಶ್ವರರೆಂಬ ಒಬ್ಬರು ಮುನಿಗಳು ಬಂದರು. ಅವರನ್ನು ಕಂಡು ನಮಸ್ಕರಿಸಿ ಒಳಗೆ ಕರೆದುಕೊಂಡು ಹೋಗಿ ಬರುವಷ್ಟರೊಳಗೆ ಒಂದು ನವಿಲು ಆ ರತ್ನವನ್ನು ಮಾಂಸವೆಂಬ ಭ್ರಾಂತಿಯಿಂದ ನುಂಗಿ ಹೋಯಿತು. ಹೀಗೆ ಅಂಗಾರಕನು ಮತ್ತೆ ಅಲ್ಲಿಗೆ ಬಂದಾಗ ರತ್ನವಿಲ್ಲದುದನ್ನು ಕಂಡು

ಮೇಧಾವಿಮುನಿಗಳೇ ತೆಗೆದುಕೊಂಡಿರಬೇಕೆಂದು ಯೋಚಿಸಿ ಹಿಂತಿರುಗಿ ಬಂದು ಅವರನ್ನು ಕುರಿತು 'ಸಕಲವಸ್ತುವನ್ನೂ ತೊರೆದ ನಿಮಗೆ ಈ ರತ್ನದ ಮೇಲೇಕೆ ಮೋಹ ? ಕೊಟ್ಟುಬಿಡಿ' ಎಂದು ಅವರನ್ನು ಪೀಡಿಸಿದನು. ಮುನಿಗಳಿಗೆ ಈ ಮಾತನ್ನು ಕೇಳಿ ಆಶ್ಚರ್ಯವಾಯಿತು. ಏನೇನು ಹೇಳಿದರೂ ವರ್ತಕನು ನಂಬಲಿಲ್ಲ. ಆದ್ದರಿಂದ ಅವರು 'ಸುಮ್ಮನಿರುವುದೆ ಲೇಸೆಂದು' ಮೌನದಿಂದಿದ್ದರು. ಮಾತನಾಡಿಸಿದರೂ ಆಡುವುದಿಲ್ಲವೇ ಎಂದು ವೈಶ್ಯನು ಅವರನ್ನು ಸೊಪ್ಪು ಸೊವಡಾಗುವವರೆಗೂ ಹೊಡೆದನು. ಆದರೂ ಅವರು ಅಲ್ಲಾಡದೆ ಶುಕ್ಲಧ್ಯಾನದಲ್ಲಿದ್ದರು. ಆಗ ಕೇವಲಿಪೂಜೆಮಾಡುವುದಕ್ಕೆಂದು ಚತುರ್ವಿಧದೇವತೆಗಳೂ ನೆರೆಯಲು ಅಂಗಾರಕನು ಸುಮ್ಮನಾದನು. ಈ ಮಧ್ಯೆ ಹೊಡೆಯುತ್ತಿರುವಾಗ ಬಂದು ಕೋಲಿನ ತುದಿ ಮುರಿದು ಹಾರಿಹೋಗಿ ಆ ನವಿಲಿನ ಕತ್ತನ್ನು ಕತ್ತರಿಸಿತು. ಅದರೊಳಗಿಂದ ಕೂಡಲೆ ಆ ಮಣಿಯು ಹೊರಕ್ಕೆ ಬಿತ್ತು. ಅವನ್ನು ಕಂಡು ಅಂಗಾರಕನಿಗೆ ಪಶ್ಚಾತ್ತಾಪ ಹುಟ್ಟಿ ವೈರಾಗ್ಯವುಂಟಾಗಲು ಜಿನದೀಕ್ಷೆಯನ್ನು ಪಡೆದನು. ಹೀಗೆ ಅಜ್ಞಾನಿಯಾಗಿ ಕಳ್ಳರಲ್ಲವರನ್ನು ಕಳ್ಳರೆನ್ನುವುದು ಧರ್ಮವಲ್ಲ.

ಇಷ್ಟಾದರೂ ವೈಶ್ಯನಿಗೆ ನಂಬುಗೆ ಬರಲಿಲ್ಲ. ಆದ್ದರಿಂದ ಸುಮ್ಮನೆ ಬಾಯಿ ನೋಯಿಸಿಕೊಳ್ಳುವುದೇಕೆಂದು ಅವರು ಮೌನವಾಗಿದ್ದುಬಿಟ್ಟರು. ಸೆಟ್ಟಿಗೆ ಅದನ್ನು ನೋಡಿ ಮತ್ತೂ ರೇಗಿತು. ಇದೆಲ್ಲವನ್ನೂ ಕೊಠಡಿಯ ಬಾಗಿಲ ಹಿಂದೆ ನಿಂತು ಕೇಳುತ್ತಿದ್ದ ಜಿನದಾಸನು ತಮ್ಮ ತಂದೆಯ ಲೋಭಕ್ಕೂ ಅವಿವೇಕಕ್ಕೂ ಬೇಸರಗೊಂಡು ಬಾಗಿಲನ್ನು ತೆರೆಯಿಸಿ 'ತಗೊ ನಿನ್ನ ಚಿನ್ನವನ್ನು' ಎಂದು ಅವನ್ನು ತಂದೆಯ ಮುಖದ ಮೇಲೆ ಎಸೆದು ಮುನಿಗಳಿಂದ ಜೈನದೀಕ್ಷೆಯನ್ನು ಕೈಕೊಂಡನು. ಮಗನು ಸಂನ್ಯಾಸ ತೆಗೆದುಕೊಂಡುದನ್ನು ನೋಡಿ ಜಿನದತ್ತಸೆಟ್ಟಿಗೂ ವೈರಾಗ್ಯ ಹುಟ್ಟಲು ಅವನೂ ದೀಕ್ಷೆಯನ್ನು ಪಡೆದು ಮುಂದೆ ಸದ್ಗತಿಯನ್ನು ಹೊಂದಿದನು.

ಹದಿಮೂರನೆಯ ಆಶ್ವಾಸ

ಬ್ರಹ್ಮ (ಚರ್ಯ)ದ ಕಥೆ

ವತ್ಸಕಾವತೀ ದೇಶದ ಕೌಶಾಂಬಿಯೆಂಬ ನಗರದಲ್ಲಿ ದಂತಿಬಲನೆಂಬ ರಾಜನು ಧಾರಿಣೀದೇವಿಯೆಂಬ ಹೆಂಡತಿಯಿಂದಲೂ ಪ್ರಮಾಥಿನಂದನನೆಂಬ ಮಗನಿಂದಲೂ ಕೂಡಿ ರಾಜ್ಯವಾಳುತ್ತಿದ್ದನು. ಒಂದು ದಿನ ವಸಂತಕಾಲದಲ್ಲಿ ಇವರೆಲ್ಲರೂ ವನವಿಹಾರ ಮಾಡುತ್ತಿದ್ದಾಗ ವಸಂತನೆಂಬ ರಾಜಪುತ್ರನು ತನ್ನ ಹೆಂಡತಿಯಾದ ವಸಂತತಿಲಕೆಗೆ ಮಾವಿನ ಹಣ್ಣುಗಳನ್ನು ನೆಲಕ್ಕೆ ಬೀಳದಂತೆ ಬಾಣ ಪ್ರಯೋಗ ಮಾಡಿ ಕುಯ್ದುಕೊಡುತ್ತಿರಲು ಅದನ್ನು ಪ್ರಮಾಥಿಕುಮಾರನು ತಾನೂ ಧನುರ್ವಿದ್ಯೆಯಲ್ಲಿ ನೈಪುಣ್ಯವನ್ನು ಪಡೆಯಬೇಕೆಂದು ಸಂಕಲ್ಪಿಸಿ ಪಾಟಲಿಪುತ್ರನಗರಕ್ಕೆ ಹೋಗಿ ಅಲ್ಲಿ ದ್ರೋಣಾಚಾರ್ಯರನ್ನು ಪ್ರಾರ್ಥಿಸಿಕೊಂಡನು. ಅವರು ಅನುಗ್ರಹಿಸಲು ಕ್ಷಿಪ್ರದಲ್ಲಿಯೇ ಅವನು ಧನುರ್ವಿದ್ಯೆಯಲ್ಲಿ ಬಹು ಕುಶಲನಾದನು.

ಒಂದು ದಿನ ಆ ಊರಿನ ದೊರೆಯಾದ ಸಿಂಹಸೇನಮಹಾರಾಜನ ಮಗಳಾದ ಚಂದ್ರಲೇಖೆಯು ಊರಹೊರಗಿದ್ದ ಚೈತ್ಯಾಲಯಕ್ಕೆ ಹೋಗುತ್ತಿರಲು ಆಗ ಒಂದು ಮದದಾನೆಯು ಬಂಧನವನ್ನು ಕಿತ್ತುಕೊಂಡು ಎದುರಾಗಿ ಬಂದಿತು. ಎಲ್ಲರೂ ದಿಕ್ಕಾಪಾಲಾಗಿ ಓಡಿ ಹೋಗುತ್ತಿರಲು ಪ್ರಮಾಥಿಕುಮಾರನು ಅದನ್ನು ಹಿಡಿದು ನಿಲ್ಲಿಸಿ ಅದರ ಸ್ಥಳದಲ್ಲಿ ಕಟ್ಟಿಹಾಕಿದನು. ಈ ಧೈರ್ಯ ಶೌರ್ಯಾದಿಗಳನ್ನು ನೋಡಿ ರಾಜಪುತ್ರಿಯು ಅವನನ್ನೆ ಮನಸ್ಸಿನಲ್ಲಿ ವರಿಸಿದಳು; ಊರಿನವರೆಲ್ಲರೂ ಹೊಗಳಿದರು. ಇದನ್ನು ಕಂಡು ದ್ರೋಣಾಚಾರ್ಯರ ಮಿಕ್ಕ ಶಿಷ್ಯರಿಗೆ ಸೈರಣೆ ಹುಟ್ಟಲಿಲ್ಲ. ಅದು ದ್ರೋಣಾಚಾರ್ಯರಿಗೆ ತಿಳಿದು ಅವರ ಯೋಗ್ಯತೆಯನ್ನು ಅವರಿಗೆ ತಿಳಿಸುವ ಉದ್ದೇಶದಿಂದ, ಭೂಮಿಗೆ ಬೀಳದಂತೆ ಬಾಣ

ಹೊಡೆದು ತೆಂಗಿನಕಾಯನ್ನು ಇದ್ದ ಕಡೆಗೇ ತರಿಸಬಲ್ಲವರಾರು ನೋಡೋ ಣವೆಂದು ಒಂದು ಪಂತವನ್ನು ಹೂಡಿದರು. ಅದರಲ್ಲಿ ಮಿಕ್ಕವರೆಲ್ಲರೂ ಸೋತು ಪ್ರಮಾಥಿಕುಮಾರನೊಬ್ಬನೇ ಜಯಶೀಲನಾದನು. ಇದರಿಂದ ಇತರ ಶಿಷ್ಯರಿಗೆ ಹೊಟ್ಟೆಯಕಿಚ್ಚು ಇನ್ನೂ ಹೆಚ್ಚಾಯಿತು. ಆದುದ ರಿಂದ ಒಂದು ದಿನ ಮದದಾನೆಯೊಂದು ಎದುರಿಗೆ ಬರುತ್ತಿರಲು ಎಲ್ಲರೂ ಅವನನ್ನು ಉಬ್ಬಿಸಿ ಅದನ್ನು ತಡೆಯುವಂತೆ ಹೇಳಿದರು. ಅದರ ಕಾಲಿಗೆ ಸಿಕ್ಕಿ ಸಾಯುವನೆಂದು ಅವರ ಆಸೆ. ಆದರೆ ಅವನು ಲಕ್ಷ್ಯವಿಲ್ಲದೆ ಹೊಡೆದು ಅಟ್ಟಿದನು. ಅಲ್ಲಿಂದ ಅವರು ತಮ್ಮ ಕೀಳುತನವನ್ನು ಬಿಟ್ಟು ಅವನಲ್ಲಿ ಗೌರವವನ್ನು ಇಟ್ಟರು.

ಕೆಲವು ಕಾಲಾನಂತರ ಸಿಂಹಸೇನಮಹಾರಾಜನ ಪ್ರಕಟನೆ ಯಂತೆ ಚಂದ್ರಕವೇಧವೆಂಬ ಬಾಣಪ್ರಯೋಗವನ್ನು ತೋರಿಸಿ ಅವನ ಮಗಳಾದ ಚಂದ್ರಲೇಖೆಯನ್ನೂ, ಜೊತೆಯಲ್ಲಿ ಅರ್ಧರಾಜ್ಯವನ್ನೂ ಸಂಪಾ ದಿಸಿ ಸುಖವಾಗಿರುತ್ತಿದ್ದು, ಒಂದು ದಿನ, ಕೌಶಾಂಬೀಪುರವನ್ನು ಶತ್ರು ಗಳು ಮುತ್ತಿರುವರೆಂದು ಕೇಳಿ ತಾನೂ ತನ್ನ ಹೆಂಡತಿಯೂ ರಥಾರೂಢ ರಾಗಿ ಹೊರಟರು. ದಾರಿಯಲ್ಲಿ ಒಂದು ಕಾಡು ಸಿಕ್ಕಲು ಅದರೊಳಗೆ ಸುವೇಗನೆಂಬೊಬ್ಬನ ಕೈಗೆಸಿಕ್ಕಿದರು. ಅವನು ಹಿಂದೆ ರಾಜನಾಗಿದ್ದು ದಾಯಾದರು ರಾಜ್ಯವನ್ನು ಕಿತ್ತುಕೊಳ್ಳಲು ಕಾಡಿಗೆ ಬಂದು ಅಲ್ಲಿ ಕಳ್ಳ ರನ್ನು ಕಟ್ಟಿಕೊಂಡು ಅವರಿಗೆ ಯಜಮಾನನಾಗಿರುತ್ತಾ ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿಟ್ಟುಕೊಂಡು ಅದರ ಮುಂದೆ ಧನುರ್ವಿದ್ಯೆಯನ್ನು ನಿತ್ಯವೂ ಅಭ್ಯಾಸಮಾಡುತ್ತಿದ್ದನು. ಈಗ ಅವನು ಚಂದ್ರಲೇಖೆ ಯನ್ನು ನೋಡಿ ಮೋಹಗೊಂಡು ಪ್ರಮಾಥಿಕುಮಾರನನ್ನು ಅಡ್ಡಗಟ್ಟಿ ದನು. ಏಟುತಿಂದುಬಂದ ಅವರ ಪರಿವಾರದವರು ಬೇಡವೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಪ್ರಮಾಥಿಕುಮಾರನಿಗೂ ಸುವೇಗನಿಗೂ ಘೋರವಾದ ಯುದ್ಧವಾಗಿ ಕೊನೆಗೆ ಪ್ರಮಾಥಿಕುಮಾರನ ಬಾಣಗಳೆ ಲ್ಲವೂ ಮುಗಿದುಹೋಗಿ ಎರಡು ಮಾತ್ರ ಉಳಿದುಕೊಂಡುವು. ಆಗ ಚಂದ್ರಲೇಖೆಯು ತನ್ನ ಪತಿಯ ಸಾವು ನಿಶ್ಚಯವೆಂದು ಭಾವಿಸಿ ಶತ್ರು

ವಿನ ಕೈಗೆ ಸಿಕ್ಕುವುದಕ್ಕಿಂತ ಸಾಯುವುದೇ ಮೇಲೆಂದು ತಾನು ತನ್ನ ಗಂಡನಿಗೂ ಸುವೇಗನಿಗೂ ಮಧ್ಯೆ ಬಂದು ನಿಂತಳು. ಸುವೇಗನು ಅವಳ ಸೌಂದರ್ಯವನ್ನು ನೋಡಿ ತಬ್ಬಿಬ್ಬಾಗಲು ಆಗ ಪ್ರಮಾಥಿಕುಮಾರನು ಗುರಿನೋಡಿ ಬಾಣಪ್ರಯೋಗ ಮಾಡಿದನು. ಶತ್ರುವಿನ ತಲೆಯು ನೆಲಕ್ಕೆ ಉರುಳಿತು. ಅವನಿಗೆ ನರಕ ಪ್ರಾಪ್ತಿಯಾಯಿತು.

ಅನಂತರ ಕೌಶಾಂಬಿಗೆ ಬಂದು ಮುತ್ತಿಗೆ ಹಾಕಿದ್ದ ಶತ್ರುಗಳನ್ನು ಓಡಿಸಿ ತಾಯಿತಂದೆಗಳ ಕಣ್ಣಿಗೆ ಆನಂದವನ್ನು ಬೀರುತ್ತ ಸೌಂದರ ಮಹಾದೇವಿ ಚಂದ್ರಲೇಖೆಯುವರೊಡನೆ ಸುಖವಾಗಿದ್ದನು.

ಹಲವು ಕಾಲ ರಾಜ್ಯವಾಳಿದ ಮೇಲೆ ಒಂದು ದಿನ ತಲೆ ನರೆತುದನ್ನು ನೋಡಿಕೊಂಡು ವೈರಾಗ್ಯ ಹುಟ್ಟಿ ರಾಜ್ಯವನ್ನು ತನ್ನ ಮಗನಾದ ವಿಮಲಕೀರ್ತಿಗೆ ಕೊಟ್ಟು ಸಮಾಧಿಮರಣದಿಂದ ಮುಡಿಪಿ ದೇವಗತಿಯನ್ನು ಪಡೆದನು.

ಹದಿನಾಲ್ಕನೆಯ ಆಶ್ವಾಸ

ಅಪರಿಗ್ರಹದ ಕಥೆ

ಕುರುಜಾಂಗಣದೇಶದ ಶ್ರಾವಂತಿಯೆಂಬ ಪಟ್ಟಣದಲ್ಲಿ ಉಪರಿಚರನೆಂಬ ರಾಜನು ಪದ್ಮಾವತಿ, ಪ್ರಭಾವತಿ, ಸುಪ್ರಭೆ, ಕನಕಪ್ರಭೆಯೆಂಬ ನಾಲ್ಕು ಜನ ಪಟ್ಟದರಸಿಯರೊಡನೆ ಸುಖದಿಂದ ರಾಜ್ಯವಾಳುತ್ತಿದ್ದನು. ಪದ್ಮಾವತಿಯ ಹೊಟ್ಟೆಯಲ್ಲಿ ಅನಂತವೀರ್ಯನೆಂಬ ಮಗನು ಹುಟ್ಟಿದನು.

ಒಂದು ದಿನ ರಾಜನು ತನ್ನ ಹೆಂಡತಿಯರೊಡನೆ ಜಲಕ್ರೀಡೆಯಾಡುತ್ತಿರಲು ವಿಮಾನದಲ್ಲಿ ಹೋಗುತ್ತಿದ್ದ ಮದನವೇಗೆಯೆಂಬ ಖೇಚರಸ್ತ್ರೀಯು ತನ್ನ ಗಂಡನಾದ ವಜ್ರದಾಡನಿಗೆ ಅದನ್ನು ತೋರಿಸಿ 'ಇವರೇ ಪುಣ್ಯವಂತರು! ನಾವು ಹೆಸರುಮಟ್ಟಿಗೆ ಖೇಚರರು' ಎಂದಳು. ವಜ್ರದಾಡನಿಗೆ ಮಾತ್ಸರ್ಯಹುಟ್ಟಿ ಹೆಂಡತಿಯನ್ನು ಅಲಕಾಪಟ್ಟಣದಲ್ಲಿ ಬಿಟ್ಟು ಬರುತ್ತ, ಒಂದು ದೊಡ್ಡ ಅರೆಯಬಂಡೆಯನ್ನು ಕಂಡು ರಾಜನು ಜಲಕ್ರೀಡೆಯಾಡುತ್ತಿದ್ದ ಕೊಳವು ಕಾಣದಂತೆ ಮುಚ್ಚಿಬಿಟ್ಟನು. ಯಾರು ಏನು ಮಾಡಿದರೂ ಅಷ್ಟು ದೊಡ್ಡ ಬಂಡೆಯನ್ನು ಅಲ್ಲಾಡಿಸುವುದಕ್ಕೂ ಆಗದೆ ಹೋಗಲು ಅರಸಿಯರು ಅದು ಕರ್ಮಫಲವೆಂದು ಶಾಂತರಾದರು. ಆದರೆ ರಾಜನಿಗೆ ಮಾತ್ರ ಆ ವೈರಾಗ್ಯಬುದ್ಧಿಯುಂಟಾಗಲಿಲ್ಲ. ಹೆಂಡಿರು ಎಷ್ಟು ಉಪದೇಶಮಾಡಿದರೂ ಈ ಪ್ರಪಂಚದ ವೈಭವದಮೇಲೇ ಜ್ಞಾನವು ಎಳೆಯುತ್ತ ಸರ್ಪಾಶ್ರಯವೆಂಬ ಗುಹೆಯಲ್ಲಿ ಒಂದು ಹಾವಾಗಿ ಹುಟ್ಟಿದನು. ಅವನ ಹೆಂಡತಿಯರು ಆನಂದ, ಕಾಂತ, ಅಮಿತಕಾಂತ, ಸುಕಾಂತ ಎಂಬ ಸಾಮಾನಿತದೇವರಾಗಿ ಹುಟ್ಟಿದರು.

ಇತ್ತ ಅನಂತವೀರ್ಯನು ಪಟ್ಟಾಭಿಷಿಕ್ತನಾಗಿ ರಾಜ್ಯವಾಳುತ್ತಿರಲು ಶ್ರೀಪಂತಿಗೆ ಸಾರಸ್ವತರೆಂಬ ಮುನಿಗಳು ಬಂದರು. ಅವರಿಂದ ತಮ್ಮ ತಾಯಿತಂದೆಗಳ ವಿಚಾರವನ್ನು ತಿಳಿದು ಅವರು ಹೇಳಿದಂತೆ ಹಾವಾಗಿದ್ದ ತಮ್ಮ ತಂದೆಗೆ ಧರ್ಮವನ್ನು ಉಪದೇಶಿಸಿದನು. ಅಷ್ಟು ಹೊತ್ತಿಗೆ ಅವನ ತಾಯಿಯರೂ ದೇವಲೋಕದಿಂದಿಳಿದುಬಂದು ಅಪರಿಗ್ರಹದ ಮಹತ್ವವನ್ನು ಬೋಧಿಸಿದರು. ಅನಂತರ ಸಾರಸ್ವತರು ಬಂದು ಆ ಹಾವಿಗೆ ಅಣುವ್ರತಗಳನ್ನು ಕೊಟ್ಟು ಸಂನ್ಯಾಸನದ ಮಹಿಮೆಯನ್ನು ತಿಳಿಸಿದರು. ಅನಂತವೀರ್ಯನೂ ತಂದೆಗೆ ಸದ್ಗತಿಯಾಗಲೆಂದು ಆ ಹಾವಿನ ಆಯುಸ್ಸಿನಲ್ಲಿ ಇನ್ನೂ ಮಿಕ್ಕಿದ್ದ ಹದಿನೈದುದಿನವೂ ಜಿನಪೂಜಾದಿಗಳನ್ನು ಮಾಡಿಸುತ್ತಿದ್ದನು. ಆದರೂ ಆ ಹಾವು ಸಾಯುವಾಗ ವಜ್ರದಾಡನು ಮಾಡಿದ ಸಾಹಸವನ್ನೇ ನೆನೆಯುತ್ತ ಸತ್ತುದರಿಂದ ಭವನವಾಸಿಗಲೋಕದಲ್ಲಿ ವಿಮಲನೆಂಬ ದೇವನಾಗಿ ಹುಟ್ಟಿತು. ಇದನ್ನು ತಿಳಿದು ಆಶ್ಚರ್ಯಪಟ್ಟು ‘ಇದೆಲ್ಲಾ ಅಪರಿಗ್ರಹದ ಫಲ’ ಎಂದುಕೊಂಡು ಅನಂತವೀರ್ಯನು ರಾಜ್ಯವನ್ನು ತನ್ನ ಮಗನಾದ ಸುಬಾಹು ಕುಮಾರನಿಗೆ ಕೊಟ್ಟು ತಾನು ದೀಕ್ಷೆಯನ್ನು ಕೈಕೊಂಡು ತಪಸ್ಸಿಗೆ ಹೊರಟುಹೋದನು.

ಇತ್ತಲಾಗಿ ವಿಮಲನು ಭವನವಾಸಿಯಾದ ವಜ್ರದಾಡನನ್ನು ಕಂಡು ಪೂರ್ವ ವೈರದಿಂದ, ಆ ಖಚರನನ್ನು ಹಿಡಿದು ಅವನ ವಿದ್ಯೆಯನ್ನೆಲ್ಲಾ ನಾಶಗೊಳಿಸಿ ಅವನನ್ನು ಅವನ ಹೆಂಡತಿಯರನ್ನು ನೀರಲ್ಲಿ ಮುಳುಗಿಸಿ ಅದ್ದಿ ತೆಗೆದು ತನ್ನ ಹೊಟ್ಟೆಯುಕಿಚ್ಚನ್ನು ತೀರಿಸಿಕೊಂಡನು. ವಜ್ರದಾಡನು ಹೀಗೆ ಹಗೆಯ ಕೈಯಲ್ಲಿ ಸತ್ತು ರೌದ್ರಧ್ಯಾನದಿಂದ ಮೊದಲ ನರಕದಲ್ಲಿ ಹುಟ್ಟಿದನು. ವಿಮಲದೇವನು ಹಸ್ತಿನಾಪುರದ ರಾಜನಾದ ಜಯದತ್ತಮಹಾರಾಜನ ಹೆಂಡತಿ ವಿಜಯಮಹಾದೇವಿಯ ಹೊಟ್ಟೆಯಲ್ಲಿ ಗುರುದತ್ತನೆಂಬ ಮಗನಾಗಿ ಹುಟ್ಟಿ ಕಾಲಕ್ರಮದಲ್ಲಿ ತಂದೆಯ ರಾಜ್ಯಕ್ಕೆ ಬಂದು ಚಂಪಾಪುರದ ಧಾತ್ರೀವಾಹನ ಮಹಾರಾಜನ ಮಗಳಾದ ಅಭಯಮತಿಯನ್ನು ಮದುವೆಯಾಗಿ ಸುಖದಿಂದಿದ್ದನು.

ಇತ್ತ ವಜ್ರದಾಡನು ನರಕದಿಂದ ಬಂದು ನೀಲಗಿರಿಯೆಂಬ ಪರ್ವತದ ಹುಲಿಯಾಗಿ ಹುಟ್ಟಿ ಅದರ ತಪ್ಪಲಲ್ಲಿದ್ದ ಜನರನ್ನೆಲ್ಲಾ ಕಾಡುತ್ತಿದ್ದನು. ಅಲ್ಲಿಯ ಪ್ರಜೆಗಳು ಅದರ ಕಾಟವನ್ನು ತಡೆಯಲಾರದೆ ಗೋಳಿಡಲು ರಾಜನು ಹೋಗಿ ಪೂರ್ವವೈರದಿಂದ ಹುಲಿಯ ಗುಹೆಯತುಂಬ ಪುಳ್ಳೆಗಳನ್ನು ಒಟ್ಟಿಸಿ ಬೆಂಕಿ ಹೊತ್ತಿಸಿದನು. ಹುಲಿಯು ಒಳಗೇ ಬೆಂದು ಸತ್ತು ಪಳ್ಳಿಖೇಟವೆಂಬ ಊರಿನಲ್ಲಿದ್ದ ಇಳಾಭರಣನೆಂಬವನ ಹೆಂಡತಿ ಕಂಟಕಿಯೆಂಬಾಕೆಯ ಹೊಟ್ಟೆಯಲ್ಲಿ ಹಲಮುಖನೆಂಬ ಮಗನಾಗಿ ಹುಟ್ಟಿತು.

ಗುರುದತ್ತ ಮಹಾರಾಜನು ಅಮೃತಾಶ್ರಯಭಟ್ಟಾರಕರಿಂದ ತನ್ನ ಪೂರ್ವಜನ್ಮ ವೃತ್ತಾಂತವನ್ನು ತಿಳಿದು ವೈರಾಗ್ಯಹುಟ್ಟಿ ತಪಸ್ವಿಯಾಗಿ ತಿರುಗುತ್ತ ಪಳ್ಳಿಖೇಟಪುರದಲ್ಲಿ ಬಂದು ನಿಂತನು. ಅಲ್ಲಿ ಹಲಮುಖನು ತನ್ನ ಗದ್ದೆಗೆ ಉಳಲೆಂದು ಹೋಗುತ್ತ ದಾರಿಯಲ್ಲಿ ನಿಂತಿದ್ದ ಗುರುದತ್ತಭಟ್ಟಾರಕರನ್ನು ಕುರಿತು 'ಇಲ್ಲಿಗೆ ನನ್ನ ಹೆಂಡತಿ ಅನ್ನವನ್ನು ತೆಗೆದುಕೊಂಡು ಬರುತ್ತಾಳೆ; ಇಲ್ಲಿ ಕೆಸರಾಗಿದ್ದದ್ದರಿಂದ ಪಶ್ಚಿಮದಿಕ್ಕಿನ ಗದ್ದೆಗೆ ಹೋದನೆಂದು ತಿಳಿಸಿ' ಎಂದು ಹೇಳಿಹೋದನು. ಆದರೆ ಹೆಂಡತಿ ಸಾಯಂಕಾಲದವರೆಗೂ ಅನ್ನವನ್ನು ತರಲಿಲ್ಲ; ಅಲ್ಲಿದ್ದ ಋಷಿಗಳು ನನಗೇನೂ ಹೇಳಲಿಲ್ಲವೆಂದು ಸುಳ್ಳುನುಡಿದಳು. ಅವಳ ಮಾತನ್ನು ಕೇಳಿ ಹಲಮುಖನು ಕೋಪಗೊಂಡು ಗುರುದತ್ತನ ಬಟ್ಟೆಗೆ ಎಣ್ಣೆಯನ್ನು ಹುಯ್ದು ಹೊತ್ತಿಸಿದನು. ಆದರೆ ಆತನು ಎಲ್ಲವನ್ನೂ ತೊರೆದು ಕೇವಲ ಜ್ಞಾನಿಯಾಗಿ ನಿಲ್ಲಲು ಚತುರ್ವಿಧ ದೇವತೆಗಳೂ ಕೇವಲಿಪೂಜೆಯನ್ನು ಮಾಡಿ ನಾನಾವಿಧದಿಂದ ಸ್ತುತಿಸಿದರು. ಇದನ್ನು ನೋಡಿ ಹಲಮುಖನು ಹೆದರಿ ತನ್ನ ಹಿಂದಿನ ವೃತ್ತಾಂತವನ್ನೆಲ್ಲ ತಿಳಿದು ವಿರಕ್ತನಾಗಿ ದೀಕ್ಷೆಯನ್ನು ಪಡೆದನು.

ಧರ್ಮಾಮೃತಂ

ದಶಮಾಶ್ವಾಸಂ

ಶ್ರೀದಯಿತೆಗೆ ನಿರ್ವಾಣ
ಶ್ರೀದಯಿತೆಗೆ ದರ್ಶನಾಂಗಮೆಂಟುಂ ಚಿತ್ತಾ ।
ಹ್ಲಾದಕರಮೆಂದು ನಂಬಿದ [1]
ನಾದರದಿಂ ಸುಕವಿನಿಕರಪಿಕಮಾಕಂದಂ ॥ ೧

[ಅಂತು ಮುಕ್ತಿಶ್ರೀಶೀಘ್ರಾಕರ್ಷಣವಾಗಿಸುವ ದರ್ಶನಾಂಗಮುಮಂ ಲೇಸಾಗಿ ಕೇಳ್ದು ಶ್ರೇಣಿಕಮಹಾರಾಜಂ ವಿಶ್ವಲೋಕೈಕವಂದ್ಯರೆನಿಸಿದ ಗೌತಮಸ್ವಾಮಿಗಳ್ಗೆ ಪೊಡೆಮಟ್ಟು ಸುಗತಿವನಿತೆಯ ಕಡೆಗಣ್ಣ ಚೆಲ್ಲಮೆನಿಸುವ ಕೊಲ್ಲದ ವ್ರತಮನೆನಗಱಿಪುವುದೆಂದು ಕೈಗಳಂ ಮುಗಿದು ಬೆಸಗೊಳ್ವುದುಂ ॥ ೨

ಮುನಿರತ್ನಂ ಪರಮಜಿನೇ
ಶನ ಮತಮಂ ಸಕಲಜೀವಹಿತಮಂ ಗಂಭೀ ।
ರನಿನಾದದಿಂದೆ.... ...
ಮನದೊಳ್ ಕಡುರಾಗಮೊದವೆ ನಲಿಯೆ ನರೇಂದ್ರಂ] [2] ॥ ೩

ಇಂತೆಂದು ಪೇೞ್ದರ್ ॥ ೪

ಕರೆಗೊಯ್ದ ಸೀರೆಯಂತೆ ರಾಶಿಗೆ ಬಂದಾರಂಬದಂತೆ ಪತ್ರಂಸೀಳ್ದ ಸಾಲದಂತೆ ಕೈನೀರೆಱೆದ ಮದುವೆಯಂತೆ ಫಲಮಾದ ತೋಂಟದಂತೆ

---

[1] ಕರನೆನಿಸಿ ಮೆರೆದಿಪ (ಕ. ಬ.) [2] ಅಂತು ದರ್ಶನಮುಮನೆಂಟಂಗಮುಮಂ ಮನದೆಱಕದಿಂ ಕೈಕೊಂಡು ಮುಂದಣ ಮುಕ್ತಿವನಿತೆಯ ಚಲ್ಲೆಗಂಗಳೆನಿಸುವ ಕೊಲ್ಲದವ್ರತದ ಕಥೆಯುಂ ಬೆಸಸಿಮೆಂಬುದುಂ (ಗ)

ಕೈಗರ್ಚಿದೂಟದಂತೆ ಗೆಲ್ಲಂಗೊಂಡ ಕಾಳಗದಂತೆ ಕಾಲ್ವಿಡಿದ ನಲ್ಲಳಂತೆ ಮಿಾಸೆಬಂದ ಜವ್ವನದಂತೆ ಪೊತ್ತಿಸಿದ ಸೊಡರಂತೆ ದರ್ಶನದೆಂಟಂಗದೊಳಂ [1] ಮುನ್ನಂ ಸಂಪೂರ್ಣನಾಗಿ ನೆರೆದು, ಮಾಡಿದ ಮನೆಯುಂ ಪುಗುವಂತೆ ಪಣ್ಣಿದಾನೆಯನೇಱುವಂತೆ ಮಡಿಯನುಡುವಂತೆ ಸಮೆದಾಭರಣಮಂ ತುಡುವಂತೆ ಪರಿದಾಡುವ ಮಗನಂ ಮುದ್ದಾಡುವಂತೆ ಸಜ್ಜನಳಾದ ಸೂಳೆಯಂ ಸಿಂಗಾರಂಗೆಯ್ದಂತೆ ತನಗಾದೂರಂ ಸೇರುವಂತೆ [2] ಹಿತವಂಗೆ ಕಾರ್ಯಮನಱಿಪುವಂತೆ ಬುದ್ಧಿವಂತನಪ್ಪ ಮಗಂಗೆ ಬಯ್ಕೆಯಂ ತೋಱುವಂತೆ ಕೇಡಿಂಗ[ಂ ಬಡತನಕ್ಕಮ]ಪ್ಪ ಪೆಂಡತಿಗೆ ಮನೆವಾರ್ತೆಯಂ ನುಡಿವಂತೆ ಕೊಲ್ಲದ ವ್ರತಮಂ ಕೈಕೊಂಡು ॥ ೫

ಮನಮೊಸೆದು ನಡೆದನಪ್ಪೊಡೆ
ಮನಕತಮಂ ನೋವನೆಲ್ಲಿಯುಂ ಪೊರ್ದದೆ ಮೇ ।
ದಿನಿಪೂಜ್ಯನಾಗಿ ಮುಕ್ತ್ಯಂ
ಗನೆಗಾತನೆ ಕಾಮನೆನಿಸಿ ಸೊಗಯಿಸಿ ತೋರ್ಕುಂ ॥ ೬

ಇನ್ನೀಸುವ್ರತದೊಳಾದ ಫಲಮೆಂತಪ್ಪುದೆಂದೊಡೆ ॥ ೭

[ಭರತಕ್ಷ್ಮಾವನಿತೆ ಮನೋ
ಹರಮಾಗುಟ್ಟಿರ್ದ (ಪೊಚ್ಚ) ಪೊಸಚೆನ್ನದವೋಲ್ ।
ಕರಮೊಪ್ಪುವುದೊದವಿದ ತ
ತ್ಪುರಂಗಳಿಂ ಶೋಭೆವೆತ್ತು ಮಾಳವದೇಶಂ] ॥ ೮

ನೆಗೞ್ದರ್ದಾಮಾಳವೋರ್ವೀವಳಯದೊಳಮರಾಧೀಶನಂತಪ್ಪ ಸದ್ಭೋಗಿಗಳಿಂ ದೇವೇಂದ್ರಧಾತ್ರೀರುಹಮನಿಱಿಸಿ ಕಯ್ವಾರದಿಂದೀವ ಸತ್ತ್ಯಾಗಿಗಳಿಂ ಶ್ರೇಯಾಂಸನೊಳ್ ಮಚ್ಚರಿಸಿ ಬಿಡದೆ ನಿರ್ಲೋಭದಿಂದೀವ ಸದ್ದಾನಿಗಳಿಂದುಜ್ಜೈನಿಯೆಂಬಾಪುರವರಮೆಸೆಗುಂ ನಾಡೆಯುಂ ಶೋಭೆಯಿಂದಂ ॥ ೯

---

[1] ಮುನ್ನಂ ದರ್ಶನದೊಳ್ (ಗ) [2] ಊರನೆಱಿವಂತೆ (ಗ)

ಆ ಪುರಮನಾಳ್ವಂ ವಿಶ್ವಂಧರಮಹಾರಾಜನಾತನ ರಾಜಶ್ರೇಷ್ಠಿ ಗುಣಪಾಲನೆಂಬನಾತನ ಭಾರ್ಯೆ ಧನಶ್ರೀಯೆಂಬಳ್ ॥ ೧೦

[ಸುರರಾಜನ ಸತಿಗೆ ವಿಯ
ಚ್ಚರರಾಜನ ಸತಿಗೆ ಕಾಮದೇವನ ಸತಿಗ ।
ಚ್ಚರಿ ಜಿನಭಕ್ತಿಯೊಳಂ ಸುಂ
ದರರೂಪಿನೊಳಂ ಸಹಸ್ರಮಡಿ ಮಿಗಿಲೆನಿಪಳ್ ॥ ೧೧

ಸುರರಾಜಂಗಂ ಖಚರೇ
ಶ್ವರಂಗಮಾರಯ್ದು ನೋೞ್ಪೊಡಿಮ್ಮಡಿ ಮಿಗಿಲು ।
ವೆಱರೆಯೊಳ್ ಜಿನಭಕ್ತಿಯೊಳಂ
ಸಿರಿಯೊಳಮೈಶ್ವರ್ಯದೊದವಿನೊಳಮಾಪರದಂ ॥ ೧೨

ನೆಗೞ್ದ ಗುಣಪಾಲಂಗಂ
ಮೃಗನಯನೆಯೆನಿಪ್ಪ ತದ್ಧನಶ್ರೀಗಂ ಕೈ ।
ಮಿಗೆ ರಾಗಂ ಪುಟ್ಟಿದಳು
ರ್ವಿಗೆ ಲಕ್ಷ್ಮಿಯೆ ಪುಟ್ಟುವಂತೆ ಕನ್ಯಾರತ್ನಂ] [1] ॥ ೧೩

ಸುಬಂಧುಶ್ರೀಯೆಂಬಳಂತವರ ಸುಖ [ಸಂಕಥಾವಿನೋದ] ದಿಂದಿರ್ಪುದುಂ ಬಂದುದಿವಸಂ [ಧನಶ್ರೀ ಬೆಳಗಪ್ಪ ಜಾವದೊಳ್ ಸುರಗಜಮುಂ ಚಂದ್ರನುಮಾದಿತ್ಯನುಂ ತನ್ನಲ್ಲಿಗೆ ಬಂದುದಂ ಕನಸುಗಂಡು ನೇಸಱ್ ಮೂಡುವುದುಮೆೞ್ಚರ್ತು ಗುಣಪಾಲ ಸೆಟ್ಟಿಗಱಿಪುವುದುಂ ಸೆಟ್ಟಿ ತತ್ಸ್ವಪ್ನಫಲಂಗಳಂ ಋಷಿಯರಲ್ಲಿ ಬೆಸಗೊಳ್ವಮೆಂದು ಪಲವುತೆಱದರ್ಚನೆವೆರಸು ಬಸದಿಗೆ ವಂದು ಜಿನಭವನಮಂ ಮೂಱುಸೂೞ್ಬಲಗೊಂಡು ಒಳಗಂ ಪೊಕ್ಕು ದೇವರನರ್ಚಿಸಿ ಪೊಡೆಮಟ್ಟು ಶ್ರುತಮುಮಂ ಋಷಿಯರುಮಂ ಪೂಜಿಸಿ ಭಕ್ತಿಯಿಂ ವಂದಿಸಿ ವಿನಯದಿಂದಿರ್ವರುಂ ಕೈಮುಗಿದು ಕನಸುಗಳ ಫಲಮಂ ಬೆಸಗೊಳ್ವುದುಂ ಅವರಿಂತೆಂದರ್ ॥ ೧೪

---

1 ಆ ಇರ್ವರ್ಗಂ ಪುಟ್ಟಿದ ಮ.ಗಳ್ (ಗ)

ಸರಸಿರುಹನೇತ್ರೆ ಸುರಸಿಂ
ಧುರವಂ ಕಂಡುದಱಿನಧಿಕಜಿನಭಕ್ತನಮು |
ರ್ವರೆಪೂಜ್ಯನಂ ಮುನೀಶ್ವರ
ಚರಣಾಂಭೋಜಾತಭೃಂಗನಂ ನೀಂ ಪಡೆವೈ ‖ ೧೫

ಶಶಿಯಂ ಕಂಡುದಱಿಂದಂ
ಶಶಿಮುಖಿ ತತ್ವಜ್ಞನಂ ಮಹಾಪ್ರಭುವಂ ಸಂ |
ತಸದಿಂದೆ ಪಡೆವೆ ಮಗನಂ
ಕುಸುಮಾಯುಧನಿಭನನುದಿತಧರ್ಮಾನ್ವಿತನಂ ‖ ೧೬

ರವಿಯಂ ಕಂಡುದಱಿಂದಂ
ಧವಳಾಕ್ಷಿ ಜಿನೇಂದ್ರಸಮಯವರ್ಧನನಂ ಮಾ |
ನವರತ್ನನಂ ಧರಿತ್ರೀ
ಧವನಂ ಪಡೆವೈ ಮನೋಜನಿಭನಂ ಮಗನಂ ‖ ೧೭

ಎಂಬುದುಮವರಿರ್ವರುಂ ಸಂತಸದಂತಮನೆಯ್ದಿ "ಸವಣೋ ಅಮೋಘವಅಣೋ" ಎಂಬ ಋಷಿವಾಕ್ಯಮೆಂತುಂ ತಪ್ಪಲಱಿಯದೆಂದು ನಿಶ್ಚಯಿಸಿ ನಂಬಿ ದೇವರ್ಗಂ ಪುನರ್ನಮಸ್ಕಾರಂಗೆಯ್ದು ಮನೆಗೆವಂದು ಮನಮೊಸೆದಿರ್ಪುದುಂ ಕೆಲವುದಿವಸಕ್ಕೆ ಧನಶ್ರೀಗೆ ಗರ್ಭಮಾಗಿ ಜಿನೇಂದ್ರಪೂಜೆಯಂ ಮಾಡಲುಂ ಜಿನೇಂದ್ರ ಪೂಜೆಗಳಂ ನೋಡಲುಂ ಜಿನಾಗಮಮನೋದಲುಂ ಜಿನಮುನಿವರರಂ ಬಂದಿಸಲುಂ ಮಿಥ್ಯಾದೃಷ್ಟಿಗಳ್ಗಂಜಲುಂ ದಿವ್ಯಾಹಾರಮನುಣಲುಂ ಬಸದಿಗೆ ಪೋಗಲುಂ ಪಲರಂ ಪೊಡೆಮಡಿಸಿಕೊಳಲುಂ ಸಿಂಹಾಸನಮನೇಱಲುಂ ಭವ್ಯರಂ ಸದ್ಧರ್ಮಮಂ ಪಕ್ಷಪಾತದಿಂ ರಕ್ಷಿಸಲುಂ ಪ್ರಜೆಗೆಡೆಯಾಗದಂತುಪಕಾರಂ ಮಾಡಲುಂ ಶ್ರಾವಕಗೋಷ್ಠಿಯೊಳಿರಲುಂ ಜಿನಸನ್ನಿವಾಸದೊಳೋಲಗಂಗುಡಲುಂ ಜಿನಸ್ತವನಂಗಳನೆ ಮಾಣದೆ ಪಾಡಲುಂ ತ್ರಿಷಷ್ಟಿಶಲಾಕಾಪುರುಷರ ಕಥೆಗಳಂ ಕೇಳಲುಂ ಬಯಕೆ ತಿಣ್ಣಮಾಗೆ ‖ ೧೮

ತರುಣಿಗೆ ಸಂತಸಮಪ್ಪಂ
ತಿರೆ ಗೀತಾತೋದ್ಯವಾದ್ಯನೃತ್ಯಮನರ್ಹ |

ತ್ಪರಮೇಶ್ವರನಾಸ್ಥಾನದೊ
ಳಿರುಳುಂ ಪಗಲುಂ ಸುಭೋಗಮಂ ಮಾಡಿಸುವರ್ ॥ ೧೯

ಪಲವುಪಜೀವಿರಸು ಕೆಲದೊಳ್
ಲಲನೆಯರೋಲಗಿಸೆ ಗೀತವಾದ್ಯಂ ಪದೆದೆ ।
ತ್ತಲುಮೆಸೆಯೆ ಜಿನರ ಪೂಜೆಯ
ನಲಂಘ್ಯಗುಣನರ್ತಿಯಾಗೆ ಪೊಱಮಡಿಸುತ್ತುಂ ॥ ೨೦

ಮೊಸರಿಂ ಪಾಲಿಂ ಘೃತದಿಂ
ಪೊಸಕಬ್ಬಿನ ರಸದಿನಾಗಳುಂ ಜಿನನಾಥಂ ।
ಗೊಸೆದಭಿಷೇಕಮನೊಪ್ಪಿರೆ
ಬಿಸರುಹಮುಖಿಗರ್ತಿಯಪ್ಪಿನಂ ಮಾಡಿಸುವಂ ॥ ೨೧

ಇರವಂತಿಯು ಜಾಜಿಯು ಪಾ
ದರಿಯು ಸರೋರುಹದ ಪೂಗಳಿಂದಾದಿಜಿನೇ ।
ಶ್ವರನಾದಿಯಾದ ತೀರ್ಥಂ
ಕರರಂ ತರಳಾಕ್ಷಿಯು ಬಯಕೆ ಪೋಪಿನಂ ಪೂಜಿಸುವಂ ॥ ೨೨

ಅರಲಿಂ ಕುಂಕುಮದಿಂ ಕ
ರ್ಪುರದಿಂ ತೀರ್ಥಕರದಿವ್ಯಚೈತ್ಯಾವಳಿಯುಂ ।
ಸರಸಿಜನೇತ್ರೆಯು ಮುಂದಾ
ದರದಿಂ ಲೇಸಾಗಿ ಮಾಡುವಂ ಪೂರಣೆಯುಂ ॥ ೨೩

ಪಸಿಯುಡಕೆಯು ನಾರಂಗದ
ಮಿಸುಗುವ ಸನ್ಮಾದುಫಲದ ಫಲನಿಕರದಿನ ।
ರ್ಚಿಸುತುಂ ಮೃಗೇಂದ್ರಮಧ್ಯೆಯು
ಪೊಸಬಯಕೆಯುಲಂಪು ಪೋಪಿನಂ ಜಿನಪತಿಯುಂ ॥ ೨೪

ಸರಸಕರಣವೆಳರುಣಂಬಡೆ (?)
ಕರಮೊಪ್ಪುವ ಬಂಧಕರಣವೆಂಬಿವಱಿಂದ ।

ಚರಿಯಾಗೆ ಜಿನರ ಕೀರ್ತಿಯು
ನರವಿಂದಾನನೆಯು ಮುಂದೆ ನೆಱೆ ಪಾಡಿಸುತುಂ ॥ ೨೫

ಭರತೇಶ್ವರನಷ್ಟಾಪದ
ಗಿರಿಯೊಳ್ ಲೇಸಾಗಿ ಸಮೆದ ಚೈತ್ಯಾವಳಿಯಂ ।
ತರಳಾಕ್ಷಿಗೆ ಬಣ್ಣಿಸುತುಂ
ಪುರುಪರಮೇಶ್ವರನ ಚರಿತೆಯಂ ಕೇಳಿಸುತುಂ ॥ ೨೬

ಜಿನರ ಪ್ರತಿಮೆಗಳಂ ನೆ
ಟ್ಟನೆ ಪೊನ್ನಿಂ ಮಾಡಿ ಪಲವ್ರತೆಱದರ್ಚನೆಯಿಂ ।
ದನವರತಂ ಪೂಜಿಸುತುಂ
ವನಜಾಸ್ಯೆಗೆ ಪಿರಿದು ಸಂತಸಂ ಪುಟ್ಟುವಿನಂ ॥ ೨೭

ಮತ್ತಂ ಜಿನಭವನಂಗಳೊಳ್ ನಾನಾವಿಧರಂಗವಲ್ಲಿಯನಿಕ್ಕಿಸುತ್ತುಂ ಪೊನ್ನಿಂ ಸಮೆದ ವಂಶಮಾಲೆಗಳಂ ಕಟ್ಟಿಸುತ್ತುಂ ನಾನಾಧ್ವಜಂಗಳನೆತ್ತಿಸುತ್ತುಂ ಆಹಾರಾಭಯಭೈಷಜ್ಯಶಾಸ್ತ್ರದಾನಮಂ ಮಾಡಿಸುತ್ತುಂ ಧನಶ್ರೀಯು ಬಯಕೆಯನೀಮಾರ್ಗದಿಂ ಸಲಿಸುತ್ತುಮಿರ್ಪುದುಮೊಂದುದಿವಸಂ ವಿಶ್ವಂಧರಮಹಾರಾಜಂ ಮಹಾವಿಭೂತಿಯಿಂ ಗಂಧಗಜಾರೂಢನಾಗಿ ವನಕ್ರೀಡೆಗೆ ಪೋಗುತ್ತುಂ ತನ್ನ ಮನೆಯ ಪೆಱಗಣ ನಂದನವನದೊಳ್ ಶೃಂಗಾರಂಗೆಯ್ದು ವಿರಾಜಿಸಿ ವಿಳಾಸಿನೀಜನಪರಿವೃತೆಯಾಗಿ ಪೊನ್ನುಯ್ಯಲನಾಡುವ ಸುಬಂಧುಶ್ರೀಯಂ ತೊಟ್ಟನೆ ಕಾಣ್ಬದುಂ ॥ ೨೮

ನನೆಯಂಬಂ ತೊಟ್ಟು ಕಾಮಂ ಮುಳಿದು ನರಪನಂ ನೋಡಿ ಲೇಸಾಗಿ ಭೋಭೋ-
ರೆನೆ ಕಾಯ್ಪಿಂದಾರ್ದು ಬಾಣಂ ನಡೆ ಗಱಿಯನಗುರ್ವಪ್ಪಿನಂ ಕಚ್ಚಿ ಬೇಗಂ
ಮನದಿಂ ಮೆಯ್ಯಂ ಪಾಯ್ದು ಮತ್ತಂ ತುಱುಗಿ ನಡುವಿನಂ ದೇಹಮಂ ನಾಡೆಯುಂ ಕಾ
ಮಿನಿಯಂ ಶ್ಯಾಮಾಂಗಿಯಂ ಮತ್ತೆನಿಸದೆ ಮಱೆಗೊಂಡಿರ್ದು ತೊಳ್ದಿಚ್ಚನಾಗಳ್ ॥ ೨೯

ಅಂತಾಪೊಸನನೆಯ ಬಿರಿಮುಗುಳ ಕುಸುಮಬಾಣಂಗಳಿಂ ತೋಡುಂ ಬೀಡುಂ ಕಾಣಬಾರದೆನಿಸಿ ಕಿವಿವರಂ ತೆಗೆದು ನೇರನಱಿದೆಸೆವುದುಂ ವಿಶ್ವಂಧರಮಹಾರಾಜಂ ಝುರ್ಝುರಿತಗಾತ್ರನಾಗಿ ಚಿತ್ರದ ರೂಪಿನಂತೆ ಮಿಟ್ಟನೆ ಮಿಡುಕದೆ ನಿಂದು ವಿರಹಾನಳನಿಂ ಬೆಂದು ಸೈರಿಸಲಾಱದೆ ॥ ೩೦

ತಡೆಯದೀವನಜಾತನೇತ್ರೆಯೊಳಂಗಜಾತನ ಕೈಯ ಕೈ
ಪೊಡೆಯೆನಿಪ್ಪ ವಿದಗ್ಧೆಯೊಳ್ ನೆರೆದಂದು ಕಾಯ್ದುಱಿ ಚುಚ್ಚುವೆ
ನ್ನೊಡಲ ಮನ್ಮಥತಾಪವೋಡುಗುಮಲ್ಲದಂದು ಮನೋಭವಂ
ಗೊಡಲನೊಪ್ಪಿಸಿ ಪೋಗಲೊಲ್ಲದೆ ಬಾಱಬಾರದು ನೋವಿನಿಂ ॥ ೩೧

ಕನ್ನೆಯನೊಯ್ಯನೆ ಮಱೆಗೊಂ
ಡೆನ್ನಂ ಕಯ್ಗಾಯದೆಚ್ಚಪಂ ಮನಸಿಜನೀ ।
ಕನ್ನೆಯನಗಲ್ದು ಬಿರುದಿಂ
ದೆನ್ನಂ ಮೂದಲಿಸಿ ಕಾದಲಾರ್ಪನೆ ಕಾಮಂ ॥ ೩೨

ಅರಲಂಬಂ ಪಿಡಿದೀತಂ
ಸ್ಮರನುರ್ವಿಯ ಜನಮನೆಚ್ಚು ನೋಯಿಸಿ ತವಿಪಂ ।
ಸರಲಂಬಂ ಪಿಡಿದಿಸುವೊಡೆ
ನರರಂ ಝುಷಕೇತು ಕೊಂದು ಕೂಗದೆ ಮಾಣಂ ॥ ೩೩

ತನುವಿಲ್ಲದೆಯುಂ ಲೋಕದ
ಜನಮಂ ಕಯ್ಗಾಯದೆಚ್ಚಪಂ ಕೂಗಿಡಲಿಂ ।
ತನುವುಂಟಪ್ಪೊಡೆ ರತಿನಾ
ಥನ ಕಯ್ಯೊಳ್ ಮಿಡುಕಿ ಪೋಪ ಗಂಡರುಮೊಳರೇ ॥ ೩೪

ಬಿಲ್ಲೊಳ್ ಕೋವಿದರೆನಿಸಿದ
ಬಿಲ್ಲಾಳಪ್ಪವರನಱಿವೆನತನುವ ತೆಱದಿಂ ।
ನಿಲ್ಲದೆ ಮೆಯ್ಯೊಳ್ ಪುಣ್ಣಿನಿ
ಸಿಲ್ಲದೆ ವೇದನೆಯ ಮಾಳ್ಪ ಗಂಡರುಮೊಳರೇ ॥ ೩೫

ಎಂದು ಮನದೊಳ್ ಗುಜುಗುಜುಗೊಂಡು ದಿವಿಜರಂತೆ ಮೆಯ್ಯಿಕ್ಕದೆ ನಿರ್ಜಿತರಾದರಂತೆ ಮಿಡುಕದೆ ಕಣ್ಣುಳ್ಳ ದೈವದಂತೆ ಕಣ್ಣಂ ಬಿಟ್ಟು ಮರನಂ ನಟ್ಟಂಬಿನಂತೆ ದಿಟ್ಟಿಯುಂ ತೆಗೆಯಲಾಱದೆ ಬೇಗೆವೋದ ಬೆಟ್ಟದಂತೆ ಮೆಯ್ಯಬಿಸುಪನಾಗೆ, ಕಾಳಗದ ನಡುವಾದ ಪಂದೆಯಂತೆ ನಡನಡನಡುಗಿ, ಉದ್ದಮೇಱಿದ ಪಸುಗೂಸಿನಂತೆ ಪೋಗಲಱಿಯದೆ, ಒಡೆಯರ ಮನೆಗೆ ಬಂದ ಬಂಟರಂತೆ ಕನ್ನೆಯನೆ ನೋಡಿ, ಕೋಣಂ ಪೊಕ್ಕ ಮಡುವಿನಂತೆ ಮನದೊಳ್ ಕದಡಿ, ಕಿಱಿದಾನುಂ ಬೇಗಮಿರ್ದು, ವನಕ್ರೀಡೆಗೆ ಪೋಗಲೊಲ್ಲದರಮನೆಗರಸಂ ಮಗುಳ್ದು ಬಂದು ಕಣ್ಣೊಳಂ ಮನದೊಳಂ ಸುಬಂಧುಶ್ರೀಯ ರೂಪೆ ತೋಱೆ ಮತಿಗೆಟ್ಟು ವಿಹ್ವಲೀಭೂತನಾಗಿ ಸೈರಿಸಲಾಱದೆ ॥ ೩೬

ಪೊಸನೀರೇಜದ ನಾಳದಿಂ ನಿಮಿರ್ದ ನೀಳಾಂಭೋಜಪುಷ್ಪಂಗಳಿಂ
ಪೊಸತಪ್ಪಾಮ್ರಮಹೀಜದಾತಳಿರ್ಗಳಿಂ [1] ಚೆನ್ನೆಯ್ದಿಲಿಂ ಬಾಳೆಯಿಂ
ದೊಸೆದುಂ ಮಾಡಿದ ಪಾಸಿನೊಳ್ ಪೊರಳುತುಂ ಜೊಂಪಂಗಳೊಳ್ ಪೋಗಿ ಸೇ
ವಿಸುತುಂ ಚಂದನಪಂಕದೊಳ್ ಮುೞುಗುತುಂ ಶೀತಾಂಬುವಂ ಮೀಯುತುಂ ॥ ೩೭

ಕಾಮಸಂತಾಪಮನೆಂತುಂ ಮಾಣಿಸಲಾಱದೆ ಪೆರ್ಗಡೆಗಳಂ ಕರೆದು ತನ್ನ ಮನದ ಕಾರ್ಯಮನೆಲ್ಲಮನಿಂಬಾಗೆ ಪೇೞ್ದು ॥ ೩೮

ಆವಾವುಪಾಯದಿಂದಂ
ನೀವಿಂದು ಸುಬಂಧುವಂ ಮನೋಹರಮಪ್ಪಂ ।
ತಾವೆಗಮೆನ್ನೊಳ್ ನೆರೆಪುವು
ದಾವೆಗಮಿಂ ನೆರೆಪದಂದು ನೋವೆಂ ತಿಬ್ಬಂ ॥ ೩೯

ಎಂದು] [2] ಪೆರ್ಗಡೆಗಳಂ ಗುಣಪಾಲಸೆಟ್ಟಿಯಲ್ಲಿಗೆ ಸುಬಂಧುಶ್ರೀಯಂ ಬೇಡಿಯಟ್ಟುವುದುಂ [ಅವರ್ ಗುಣಪಾಲಸೆಟ್ಟಿಯ ಮನೆಗೆ

1 ಪಂದುತಳಿರಿಂ (ಕ. ಖ.)

2 ವಿಶ್ವಂಧರಮಹಾರಾಜಂ ಸುಬಂಧುಶ್ರೀಯ ರೂಪಂ ಕಂಡು ಸೋಲ್ತು (ಗ)

ಮೆರ್ವುದುಂ ಸೆಟ್ಟಿ ಪೆರ್ಗಡೆಗಳಂ ವಸ್ತ್ರತಾಂಬೂಲಾದಿಗಳಿಂ ಮನ್ನಿಸಿ ನಿಮ್ಮ ಬಂದ ಕಾರ್ಯಮನೆಮಗಱಿಯೆ ಪೇೞಿಮೆಂಬುದುಮವರಿಂತೆಂದರ್ ‖ ೪೦

ಮದಗಜಗಮನೆಯನಂಬುಜ
ವದನೆಯನಳಿನೀಲಕುಟಿಲಕುಂತಳೆಯೆಂದಂ ।
ಬಳ ಹಾವಭಾವಲಾವ
ಣ್ಯದ ನೆಲೆಯಂ ಜಿನಪದಾಬ್ಜಮದಮಧುಕರೆಯಂ ‖ ೪೧

ನಿಮ್ಮ ಮಗಳಪ್ಪ ಸುಬಂಧುಶ್ರೀಯಂ ನಂದನವನದೊಳುಯ್ಯಲಾಡುವಳಂ ವಿಶ್ವಂಧರಮಹಾರಾಜಂ ವನಕ್ರೀಡೆಗೆ ನೃಪಕುಮಾರಪರಿವೃಢನಾಗಿ ಪೋಗುತ್ತುಂ ಕಂಡು ಕಣ್ಬೇಟಂಗೊಂಡು ಕಾಮಸಂತಾಪದಿಂ ಕರಮಲ್ಲದೆ ನೊಂದು ರಾಜಮಂದಿರಕ್ಕೆ ಬಂದು ಕುಸುಮಾಸ್ತ್ರನ ಕುಸುಮಶರದ ಕೋೞಂಗಿರಲಾಱದೆಮ್ಮನಿಲ್ಲಿಗೆ ಸುಬಂಧುಶ್ರೀಯಂ ಬೇಡಿಯಟ್ಟಿದಂ; ನೀವುಂ ತಲೆಯೊಡೆಯರ್ಗೆ ತಲೆಸುತ್ತಂ ಮಾರ್ಕೊಂಡರೆನಿಸಿ ನಗೆಯಂ ಮಾಡಿಕೊಳ್ಳದೆ ಸರ್ವಸ್ವಕ್ಕವೊಡೆಯನಪ್ಪ ಕುಲಸ್ವಾಮಿಗೆ ಮಾರ್ಕೊಳ್ಳದೆ ಕೂಸಂ ಕುಡುವುದೆಂಬುದುಂ ಪೆರ್ಗಡೆಗಳ ಮಾತಂ ಕೇಳ್ದು ಗುಣಪಾಲಸೆಟ್ಟಿ ಬೆಱಗಾಗಿ ಪೆರ್ಗಡೆಗಳಂ ಚಾಟುಕಾರಿಸಲೆಂದು ಕೃತಕವಚನಗಳಿಂ ನಂಬೆ ನುಡಿದು ಮತ್ತಮಿಂತೆಂದಂ ‖ ೪೨

ಅರಸಂ ಗಡ ಪಿರಿದಪ್ಪಾ
ದರದಿಂ ಗಡ ಮತ್ತನೂಜೆಯಂ ಬೇಡಿ ಪುರಂ ।
ದರವಿಭವನಟ್ಟುವಂ ಗಡ
ನರರೆನ್ನಿಂ ಬಿಟ್ಟು ಧನ್ಯರಾರುರ್ವರೆಯೊಳ್ ‖ ೪೩

ಸ್ಮರತಾಪದಿಂದಮುರ್ವೀ
ಶ್ವರನೆನ್ನ ಪ್ರಿಯತನೂಜೆಯಂ ಕಂಡು ಸವಿ ।
ಸ್ತರದಿಂ ಸೋಲ್ತಂ ಗಡ ಮು
ರ್ವರೆಯೊಳ್ ಮತ್ತನಯೆಯಂತು ನೋಂತವರೊಳರೇ ‖ ೪೪

ಪರದರಮೆಗವೇಕುರ್ವೀ
ಮರನೊಲವಿಂ ಬೇಡಿ ನಿಮ್ಮನಟ್ಟುವುದೇಕಾ ।
ದರದಿಂ ಸ್ತ್ರೀಯರ ಸೊಬಗಂ
ನಿರಂತರಂ ಬೇಗಮೆಱಿಯುರೆಂಬರುಮೊಳರೇ ॥ ೪೫

ಎನಗಂ ಮತ್ತೆನ್ನೊಡಮೆಗ
ಮನುನಯದಿಂದೊಡೆಯನೆಂದೊಡೆನ್ನಾತ್ಮಜೆಯಂ ।
ಜನಪತಿ ಕುಡವೇಷ್ಕೆಂದೆಲೆ
ವನಿತೆಗೆಕಣ್ಣು ಬುದ್ಧಿಯಱಿಯಂಭೂಪಂ ॥ ? ೪೬

ತಾನೆನ್ನಲ್ಲಿಗೆ ಕೂಸಂ ಬೇಡಿಯಟ್ಟಿದನೆಂದೊಡೆನ್ನಿಂ ಬಿಟ್ಟು ಧನ್ಯರುಂ ಪುಣ್ಯವಂತರುಮಿಲ್ಲೆಂದು ಮೆಳ್ಪಡೆ ನುಡಿದು ಪೆರ್ಗಡೆಗಳನ ರಮನೆಗೆ] [1] ಕಟಿಪಿ ಸೆಟ್ಟಿ ತನ್ನೊಳಿಂತೆಂದಂ ॥ ೪೭

ಜಿನಪದಸೇವೆಯಿಲ್ಲದನ ರೂಪು ವಿಳಾಸ ಮಹೋನ್ನತಿಕ್ಕೆ ಮೇ
ದಿನಿ ಸೊಬಗೊಳ್ಪು ತೇಜ ಮಹಿಮಾಸ್ಪದಮುದ್ಧತಿ ವಿದ್ಯೆ ಶೌಚಮಾ
ತನ ವಿಭವಂ ಕುಲಂ ದಲಮುಮಾರ್ಪು ಗುಣಾಳಿ ಗಾಡಿ ಯೌ
ವನಮಿನಿತುಂ ಕುಱುಂಬನರಸಗ್ನಿಯ ತಣ್ಪು ವಿಷಾನ್ನ ಭೋಜನಂ ॥ ೪೮

ಗಿರಿಶಿಖರಾಗ್ರದಿಂ ಕೆಡೆಯೆ ನೂಂಕುವುದೊರ್ಮೆಯೆ ಕಟ್ಟಿ ತಂದು ನಿ
ಷ್ಠುರಗಜರಾಜೆಯಿಂ ತುಳಿಸಿ ಕೊಲ್ವುದು ಪೆರ್ಗಡಲಲ್ಲಿ ಗಂಟಲಂ
ಮುರಿದು ತಳರ್ಚಿದಿಕ್ಕುವುದು ಲೇಸು ಕುದೃಷ್ಟಿಗೆ ಸೋಲ್ತು ಕೂಸನಾ
ದರದೊಳ್ ಬೇಗವಿಾವುದಱಿನೆಯ್ದೆ ವಿಚಾರಿಸಿ ನೋಡೆ ಪೃಡುರ್ವಿಯೊಳ್ ॥

ಮತ್ತಂ ಮಿಥ್ಯಾದೃಷ್ಟಿಯ ಸಿರಿಯನುರಿಯೆಂದು ಬೆಚ್ಚಲುಂ, ಕುದೃಷ್ಟಿಯ ರೂಪು ಸಂತಾಪಮೆಂದು ನಡುಗಲುಂ, ಸದ್ಧರ್ಮದೂಷಕನ ಮುಖಮಂ ಯಮಗೆಜಾರಿ ಪೊಯ್ದು ಕೊಲ್ವ ನಖಮೆಂದಂಜಲುಂ, ಕುದ ರ್ಶನಪ್ರೀತನ ಭೋಗಮಂ ನಾಗವಿಷಮೆಂದು ತಲ್ಲಣಿಸಲುಂ, ಕುಮಾ

[1] ಸಂತೋಷಮಾನೆ ಪೆರ್ಗಡೆಗಳ್ಗೆ ನುಡಿದು (ಗ)

ರ್ಗಾನುರಾಗಿಯಪ್ಪರಸನಂ ವಿರಸನೆಂದು ಬಗೆಯಲುಂ, ದರ್ಶನದೂರನ ಶೃಂಗಾರಮಂ ಸಂಹಾರಮೆಂದು ಭಯಂಗೊಳಲುಂ, ನಿಶ್ಶ್ರೇಯಸಶ್ರೀ ಯನೆಯ್ದುವೆನೆಂಬ ಶ್ರಾವಕಂಗೆ ಬೇೞ್ಪುದಿನಿತಲ್ಲದೆ [1] ದುರ್ಮೋಹದಿಂ ಮನದೊೞ್ಕಿತುರ್ ಮಿಥ್ಯಾದೃಷ್ಟಿಯಪ್ಪನ ರೂಪುಮಂ ವಿಳಾಸ ಮುಮಂ ಪ್ರತಾಪಮುಮಂ ಸಂಪತ್ತುಮಂ ಕಂಡು ರಾಗಿಸಿ ಪೊರ್ದಿ ಕೂಸುಗುಡುವನುಂ ಕೆಳೆಗೊಳ್ವನುಂ ನರಕಕ್ಕೆ ಭಾಜನನಕ್ಕುಮಲ್ಲದೆ ಶ್ರಾವಕನಪ್ಪ [2] ನೇಗೆಯ್ದುಂ ಸುಗತಿಯನೆಯ್ದಲಾಱನೆಂದು ಪರಮಾಗ ಮಮಂ ಭಾವಿಸಿ ಧನಶ್ರೀಯ ಮನದ [ನಿರ್ಮಳಿಕೆಯುಮಂ ಸಮ್ಯಕ್ತ್ವ ಮುಮನಾರಯಲೆಂದು ಗುಣಪಾಲಸೆಟ್ಟಿ ಯಿಂತೆಂದಂ ॥ ೫೦

ಧರಣೀವಲ್ಲಭನುಗ್ರವೈರಿಹರಣಂ ಬಾಲಾರ್ಕತೇಜಂ ಮಹೀ
ಶ್ವರವಂದ್ಯಂ ಮನಮೊಲ್ದು ಸೋಲ್ತು ಪದಪಿಂ ಸದ್ರಾಗದಿಂದಟ್ಟಿದಂ
ಪಿರಿದುಂ ಸ್ನೇಹದಿನಿಂದು ಕೇಳ ಕನಕಾಂಭೋಜಾಕ್ಷಿಯುಂ ಬೇಡಿ ಸ
ಮ್ಮರಸಂ ನೋಡ ಸುಬಂಧುವಂ ಧರಣಿಯೊಳ್ ನಮ್ಮಂತು ಮುಂ ನೋಂ
ತರಾರ್ ॥ ೫೧

ಪರದರ ಸಿರಿಯಿಂದರಸರ
ಸಿರಿ ಸರಿಯಲ್ಲದೊಡೆ ಕೂಸನಿತ್ತೊಡಾತನ ದೆಸೆಯಿಂ ।
ಪಿರಿದಪ್ಪೊದವಿದ ಶೌರ್ಯಂ
ದೊರೆಕೊಳ್ಗುಂ ಮೇಲೆ ರಾಜ್ಯಮುಂ ಕೈಸಾರ್ಗುಂ ॥ ೫೨

ಕುಲಮಂ ಪೇಳ್ವೊಡೆ ರಾಜಪುತ್ರನದಟಂ ತಾನಲ್ಲನಿನ್ನೆಂಬೊಡು
ಜ್ಜ್ವಲಚಂಡಾಂಶುನಿಭಂ ವಿಭೂರ್ಜಿತಯಶಂ ತಾನಲ್ಲನೆಂಬಂದಿಳಾ
ವಲಯಾಧೀಶ್ವರವಂದಿತಕ್ರಮಯುಗಂ ಶ್ರೀಮಂತನಲ್ಲೆಂಬೊಡ
ಗ್ಗಳಮಪ್ಪಿಂದ್ರಸಮಾನನೂರ್ಜಿತಯಶಂ ಗೀರ್ವಾಣಶೈಲಕ್ಷಮಂ] [3] ॥

---

[1] ನಿಶ್ಶ್ರೇಯಸಶ್ರೀಯನೆಯ್ದಿಸುವ ಗತಿಯನೇಗೆಯ್ದುಂ ಬಿಸಲಾಱನೆಂಬುದಿನಿತಲ್ಲದೆ (ಗ) [2] ಶ್ರಾವಕನೆಯ್ದುವ ಸುಗತಿಯು (ಗ)

[3] ನಿರ್ಮಳಿಕೆಯನಾರಯಲೆಂದು (ಗ)

ಸುಬಂಧುಶ್ರೀಯುನರಸಂಗೆ ಕುಡುವೆಮೆಂಬುದುಂ ಧನಶ್ರೀ ಸೆಟ್ಟಿಯ ಮಾತಿಂಗೆ ವಿಸ್ಮಯಂಬಟ್ಟು ನೀರೊಳಗಿರ್ದ ನಲ್ಲಳ ನೆೞಲಂ ಕಂಡು ನಲ್ಲಳೆಂದು ಮತಿಗೆಟ್ಟು ಪಾಯ್ದು ಸಾವ ಸಾಧುವಿಟನಂತೆ ನಿತ್ಯಮಲ್ಲದ ಸಂಸಾರಸುಖಕ್ಕಮಲ್ಪಶ್ರೀಗಮಾಸೆಗೆಯ್ದು ಮಿಥ್ಯಾದೃಷ್ಟಿಗೆ ಕೂಸಂ ಕೊಟ್ಟು ಮಗವಿಂಗಂ ತನಗಂ ಪಿರಿದಪ್ಪ ನರಕದುಃಖಮಂ ಮಾಡಿ ಕೊಂಡಪನೆಂದು ತನ್ನೊಳ್ ಮಱುಗಿ ಸೆಟ್ಟಿಗಿಂತೆಂದಳ್ ॥ ೫೪

[ಪಲಕಾಲಂ ಸಂಸೃತಿಯೊಳ್
ನೆಲೆಗೊಳ್ಳದೆ ಪಿರಿದುಪುಣ್ಯದಿಂದಂ ಪಾಪಂ ।
ತೊಲಗಿದೊಡೆ ನಿನಗೆ ಪುಟ್ಟಿದ
ಳಲಂಘ್ಯಗುಣೆ ರಿಪುಗೆ ಬೆರ್ಚಿ ಮರೆವುಗುವವೊಲುಂ] ॥ ೫೫

ಜಿನಧರ್ಮಮೆಂಬುದಂ ಮು
ನ್ನನಂತಭವಭವದೊಳಲ್ಲಿಯುಂ ಪೊರ್ದದೆ ತಿ ।
ಱನೆ ತಿರಿದು ಪುಣ್ಯವಶದಿಂ
ವನರುಹಮುಖಿ ತನ್ನ ಕರ್ಮದೊಂದುಪಶಮದಿಂ ॥ ೫೬

ಕಾಕತಾಳನ್ಯಾಯದಿಂ ನಿನ್ನಂತಪ್ಪ ಮಹಾಪುರುಷನ ಬಸಿಱೊಳ್ ಬಂದು ಜಿನಧರ್ಮಮಂ ಪೊರ್ದಿದಳಂತು ಪೊರ್ದಿದ ಮಗಳಂ ಕಳ್ಳಂ ಗಂಜಿ[ದರಂ ಪುಸಿಗೊಪ್ಪಿಸಿದರೆಂಬಂತಾನುಂ ಸಿಂಹದ ಬಾರಿಯೊಳ್ ಬರ್ದುಂಕಿದವನಂ ಪಿಟ್ಟಮೆಳಸಿದಂತಾನುಂ ಪಗೆವರ ಕೊಲೆಯಂ ಬಂಚಿಸಿ ಪೋಪನಂ ಕರಡಿಯು ಮುಂತಿಕ್ಕಿದರೆಂಬಂತಾನುಂ] [1] ಮಿಥ್ಯಾದೃಷ್ಟಿಯಪ್ಪನ ರಾಜ್ಯಶ್ರೀಯುಮಂ ಸಂಪತ್ತುಮಮುನ್ನತಿಕ್ಕೆಯುಮಂ ಕಂಡು ಶೂನ್ಯಹೃದಯರಂತೆ ಮೇಲಣನಂತಭವದ ದುಃಖಮಂ ಭಾವಿಸದೆ ಪೆರ್ಚಿಂದಂ ಕೂಸಂ ಕುಡುವೆನೆಂಬ ನಿಮ್ಮ ಮರುಳ್ತನಕ್ಕೆನಗೆ ಪಿರಿದುಂ ವಿಸ್ಮಯಮಾದಪುದು ; ನಿಮ್ಮಂತಪ್ಪ ಸದ್ದೃಷ್ಟಿಗಳುಮಿಂತಪ್ಪ ಕಜ್ಜಮಂ ಮನದೆ ಕೊಳ್ವರೆಂದೊಡಿಂ ಮತ್ತಿನಟಿಶ್ರಾವಕರ ಮತಿಹೀನತೆಗಂ ಕೇಡಿಂಗಮೆಬಿಲಲಾಗದು ॥ ೫೭

---

1 ಸೀರ್ಕರಡಿಯು ಮುಂದಿಕ್ಕಿದರೆಂಬಂತಾನುಂ, ಕಿಚ್ಚಿಂಗೆ ತಲ್ಲಣಿಸಿ ಬಂದವನಂ ಕುದಿವೆಣ್ಣೆಯೊಳಿಕ್ಕಿದರೆಂಬಂತಾನುಂ, (ಗ)

ಸಿರಿ ಭಾವಿಪೊಡೆತ್ತಾನುಂ
ದೊರೆಕೊಳ್ಗುಂ ಜೈನದರ್ಶನಂ ಧಾರಿಣಿಯೊಳ್ ।
ದೊರೆಕೊಳ್ಳದದಱಿನಱಿವೊಡೆ
ಸಿರಿಗಂ ಸದ್ದರ್ಶನಕ್ಕಮೇನಂತರಮೋ ॥ ೫೮

[ಪಲವುಭವಕ್ಕೊರ್ಮೆ ಮಹೀ
ತಳದೊಳ್ ಸಾಮ್ರಾಜ್ಯಲಕ್ಷ್ಮಿದೊರೆಕೊಳ್ಗುಂ ನಿ ।
ರ್ಮಳಮಪ್ಪಜೈನಧರ್ಮಂ
ಮಳರಹಿತಂ ಬೇಗಮಂತೆ ದೊರೆಕೊಂಡಪುದೇ ॥ ೫೯

ಬಲದಿಂ ಕುತ್ಸಿತದಾನದ
ಫಲದಿಂದೆತ್ತಾನುಮೊರ್ಮೆ ಸಿರಿ ಸಮನಿಸುಗುಂ ।
ಘೞಿಲೆನಲಱಿವುದದಕ್ಕಂ
ಪೞಿಯಿಲ್ಲದ ದರ್ಶನಕ್ಕಮೇನಂತರಮೋ ॥ ೬೦

ಕಿಡುವ ಸಿರಿಗಳಪಿ ಕೆಮ್ಮನೆ
ಕಿಡದ ಸುಖಾಸ್ಪದಮನೀವ ಸದ್ದರ್ಶನಮಂ ।
ಬಿಡುವಾತಂ ಬಿರ್ದೂಟಮ
ನೊಡಬಡದೆ ಗಂಜಿಗುಡಿವ ಮರುಳಂ ಪೋಲ್ಕುಂ ॥ ೬೧

ಅಱಿಸಿರಿಗಮಲ್ಪಬುದ್ಧಿಗ
ಮಳಪಿ ಸದಾ ಸುಖಮನೀವ ಸದ್ದರ್ಶನಮಂ ।
ತಿಳಿವಿಲ್ಲದೆ ಬಿಡುವಂ ಭೂ
ತಳಮಂ ಬಿಸುಟಳಪಿ ತಿರಿವ ಮರುಳಂ ಪೋಲ್ಕುಂ ॥ ೬೨

ದರಿಯು ಮರಂ ಕಣ್ತ ಮರಂ
ಸುರಧನು ತಿರಿದುಂಬ ತಿರಿಕರೊಳ್ ಕೂಟಮಿದೊಂ ।
ದರಿಸಿನದ ಬಣ್ಣಮೆನ್ನದೆ
ಸಿರಿ ಶಾಶ್ವತಮೆಂದು ನಂಬಿ ಪದೆವನೆ ಗಾಂಪಂ ॥ ೬೩

ಮರುಳರಸುತನಂ ಮೋಘದ
ನೆರವಿಯು ನೆರೆಪರ್ಕನುಷ್ಣ ಮಳಿಪನ ಧನಮು ।
ಮೆರೆಯೊಳ್ ಸಂಪತ್ತೆನ್ನದೆ
ಕರಮಾದರದಿಂದಮೊಲ್ದು ಪದೆವನೆ ಗಾಂಪಂ ॥ ೬೪

ಸಿರಿಯುಳ್ಳವರಂ ಧನದೊಳ್
ಪಿರಿಯರುಮಂ ಕಾಣಲಪ್ಪುದಿಳೆಯೊಳ್ ಪಲರಂ ।
ದರುಶನಶುದ್ಧರುಮಂ ಸ
ಚ್ಚರಿತರುಮಂ ನೋಡ ಕಾಣಲೇಂ ಬಂದಪುದೇ ॥ ೬೫

ಕಲ್ಲುಂ ಕಬ್ಬುನಮುಂ ನೋ
ಡೆಲ್ಲಿಯುಮೋರಂತೆ ಪಡೆಯಲಪ್ಪುದು ಪೊನ್ನಂ ।
ಸಲ್ಲಲಿತಮಪ್ಪ ರತ್ನಮ
ನೆಲ್ಲಿಯುಮೋರಂತೆ ಪಡೆಯಲಪ್ಪುದೆ ಧರೆಯೊಳ್] । ೬೬

ಅಂತು ಪಡೆಯಲ್ಬಾರದಪೂರ್ವಮಪ್ಪ ದರ್ಶನಮುಂ ಸದ್ಧರ್ಮಮುಂ ಪಿರಿದಪ್ಪ ಪುಣ್ಯದಿಂದಲ್ಲದೆ ಸಮನಿಸವಂತಪ್ಪ ದರ್ಶನಮುಮಂ ಸದ್ಧರ್ಮಮುಮಂ [ಔದಾಸೀನ್ಯಂಗೆಯ್ದು ಬಿಟ್ಟು, ಸಂಸಾರದೞಿಸಿರಿಗಂ ಮರುಳಿಲ್ಲದ ಸಂಪತ್ತಿಗಮಳಿಪಿ, ಪಾದರಿಗಗಂಡನಂ ನಂಬಿ ಮನೆಯ ಗಂಡನಂ ಬಿಡುವಂತೆ ಸಜ್ಜನವೆಂಡತಿಯನೊಲ್ಲದೆ ಗಾಳುವಪ್ಪ ಸೂಳೆಯಂ ಮೆಚ್ಚುವಂತೆ] ಮೂಱುದಿನದ ಪಗರಣಕ್ಕೆ ಗಡ್ಡಮಿಸೆಮಂಡೆಯಂ ಬೋಳಿಸಿಕೊಳ್ವಂತೆ ಮುಂದಿರ್ದ ಕೆಱೆಯನೆಯ್ದಲಾಱದಲಸಿ ಕೆಸಱ ನೀರಂ ಕುಡಿವಂತೆ ಸ್ವರ್ಗಮೋಕ್ಷದೊಳಪ್ಪನಂತಸುಖಮಂ ನೀರೊಳೞ್ದು ನರಕತಿರ್ಯಗ್ಗತಿಗಳೊಳ್ ತಿಱನೆ ತಿರಿವ ಕಜ್ಜಮನೆತ್ತಿಕೊಳ್ವೊಡೆ ನೀಮಱಿವಿರ್; ನಿಮಗಾದಿತ್ಯಂಗೆ ಸೊಡರಂ ತೋಱಿಸಿದರೆಂಬಂತೆ [ತೊಱೆಗೆ ನೀರನಡುಕಿದರೆಂಬಂತೆ] ಎನ್ನಂತಪ್ಪ ಜಡಮತಿಗಳ್ ಬುದ್ಧಿವೇೞ್ಪುದುಚಿತಮಲ್ಲದು; ಗಂಡನಿದಿರೊಳ್ ಪೆಂಡತಿ ನುಡಿಯಲಾಗದು; ಮಾಱಿ ಕೊಟ್ಟರಪ್ಪೊಡೆಮಗೆ ಬಸದಿಯೆ ಶರಣೆಂದು ಧನಶ್ರೀ ನುಡಿದು ಮಾಣ್ಬುದುಂ ॥ ೬೭

[ಸರಸಿರುಹಮುಖಿಯರ್
ತ್ಪರಮೇಶ್ವರಪಾದಪಂಕಜಭ್ರಮರೆಯು ಮಾ ।
ತೆರಡಿಲ್ಲವೆಂದು ಚಿತ್ತಮ
ನುರುಮುದದಿಂ ನಚ್ಚಿ ಪೆರ್ಚಿ ವನಿತೆಯು ಮೊಗಮಂ] ॥ ೬೮

ಆದರದಿಂದಂ ಹೃದಯಾ
ಹ್ಲಾದದಿನಚ್ಯುತರ್ ನೋಡಿ ದರ್ಶನದೊಳ್ ಮು ।
ನ್ನಾದಿಯು ಸೀತೆಗೆ ರಂಭೆಗೆ
ಮೇದಿನಿಯೊಳಗೀಕೆ ನೋಡೆ ಪಾಸಟಿಯುಪ್ಪಳ್ ॥ ೬೯

[ಸಿರಿಯೇವುದೊ ಧನಮೇವುದೊ
ಪಿರಿದಪ್ಪೈಶ್ವರ್ಯಮೇವುದವನೀತಳದೊಳ್ ।
ದರುಶನಮಿಲ್ಲದ ಪೆಂಡತಿ
ದೊರೆಕೊಂಡ ನರಂಗೆ ರಾಜ್ಯಮೇವುದೊ ಧರೆಯೊಳ್ ॥ ೭೦

ದರುಶನಮಿಲ್ಲದ ಪೆಂಡಿರ
ವರಭೋಗಂ ನರಕಗತಿಯು ಪೆರ್ಬಟ್ಟೆ ಮಹಾ ।
ದುರಿತದ ನೆಲೆ ದುರ್ಗುಣದಾ
ಗರ ಮದದಿಂದಡಸಿ ಪೊಯ್ವ ಪೆರ್ಬುಲಿಯು ನೃಂ ॥ ೭೧

ಒದವಿದ ಧರ್ಮಬುದ್ಧಿ ತನಗಿಲ್ಲದ ಗಂಡನ ಮಾತನೊಲ್ದು ಕೇ
ಳದ ಜಿನಪಾದಮಂ ನೆನೆದು ಪೂಜಿಸಿ ನೋಡುವ ಚಿತ್ತವೃತ್ತಿಯಿ
ಲ್ಲದ ಮುನಿಗನ್ನಮಂ ಕುಡುವುದಾರತೆಯಿಲ್ಲದ ನಿರ್ಮಳಕ್ಕೆಯಿ
ಲ್ಲದ ಮುನಿಭಕ್ತಿಯಿಲ್ಲದ ಕುಲಾಂಗನೆಯೇಂ ಸತಿಯೆಂಬ ಲೆಕ್ಕಮೇ ॥ ೭೨

ವಿದಿತಮೆನಿಪ್ಪ ಸಚ್ಚರಿತಮಿಲ್ಲದ ನಿರ್ಮಳಜೈನಭಕ್ತಿಯಿ
ಲ್ಲದ ಪತಿಗಂಜಿ ಬೆರ್ಚಿ ಬೆಸಕೆಯ್ಯದ ದಾನದೊಳರ್ತಿ ತಿಣ್ಣಮಿ
ಲ್ಲದ ಪತಿಯೆಂದುದಂ ಪದೆದು ಕೇಳದ ಪಾಪಿಗಳಪ್ಪವರ್ಗೆ ಬೆ
ಚ್ಚದ ಪತಿಯರ್ಥಮಂ ಕಳುವ ಪೆಂಡತಿಯುಂ ಸತಿಯಾಗಿ ಸಲ್ವಳೇ ॥ ೭೩

ಎಂದು ಕುಲಾಂಗನೆಯೊಳಾದ ವಿಪರೀತಭಾವನೆಯುಂ ಭಾವಿಸಿ ನೋಡಿ ದರ್ಶನಮುಂ ಧರ್ಮಬುದ್ಧಿಯುಮಿಲ್ಲದ ಪೆಂಡತಿಗಳಪಿ ಮೋಹದಿಂದಿರ್ದವಂ ಪಱಿದ ಪಱುಗೋಲನೇಱಲಾ ಪಱುಗೋಲುಂ ತಾನುಂ ತೊಱೆಯೊಳರ್ದು ಸಾಯುವಂತೆ ಪೆಂಡತಿಯುಂ ತಾನುಮೊಡನೆ ನರಕಕ್ಕಿಱಿದು ದುಃಖಮಂ ಪೊರ್ದುಗುಂ ; ದರ್ಶನಶುದ್ಧಿಯುಂ ಸದ್ಧರ್ಮಸಮೇತೆಯುಮಪ್ಪ ಪೆಂಡತಿಯುಂ ನಚ್ಚಿ ಕೂರ್ತು ಕೈಕೊಂಡಾತಂ ಬಲ್ಭೈತ್ರಮನೇಱಿದವನೆಂತು ಸಮುದ್ರದೊಳಾಳದೆ ಸುಖದಿಂ ಸಮುದ್ರದ ತಡಿಯನೆಯ್ದುಗುಮಂತೆ ಪೆಂಡಿರುಂ ತಾನುಂ ಸ್ವರ್ಗಮೋಕ್ಷಮನೆಯ್ದಿ ಪಿರಿದಪ್ಪ ಸುಖಮನೆಯ್ದುವರದಱಿಂ ॥ ೨೪

ಈವನಿತೆಯನಮಳಾಂಗಿಯ
ನೀವನಿತಾಜನವಿನೂತರತ್ನೆಯನಖಿಳೋ ।
ರ್ವೀವಳಯಸ್ತುತೆಯಂ ಪಡೆ
ದೀವಿಭವಮಿದೆನಗೆ ಪುಣ್ಯದಿಂ ಸಮನಿಸಿತೋ ॥ ೨೫

ಮನದೊಳ್ ರಾಗಿಸಿ ಕೂಸಂ
ಜನನಾಥಂಗಿತ್ತು ಧರೆಯನಾಳ್ವಂ ಸುಖಮಂ ।
ಬಿನಿತಂ ಬಗೆಯದೆ ಮೇಲ
ಪ್ಪನಿತಂ ಮುಕ್ತಿಯನೆ ಬಗೆದಳಿಂತಿದು ಚೋದ್ಯಂ ॥ ೨೬

ಧನಮಂ ಗಳಿಸುವ ಗಂಡನ
ಧನಮಂ ಕಳ್ದೀವಿ ತಮ್ಮವರ್ಗೀವ ಗುಣಂ ।
ವನಿತೆಯರ್ಗೆ ಸಹಜಮಿಂತೀ
ವನಿತೆಗಮಾಕಷ್ಟೆಯರ್ಗಮೇನಂತರಮೋ ॥ ೨೭

ಮುಱಿಕಿಸುವ ಧರ್ಮಮೆಂದೊಡೆ
ಗುಱುಗುಱಿಸುವ ಗಂಡನಿದಿರೊಳ್ದ್ದಾಡುವ ಬೇ ।
ಳ್ವಱಸುಗಳಂ ಕಿಸುಗುಳೆಯರ
ನಱಿವೊಡೆ ಪೋಲಿಪುದೆ ಧರ್ಮರತ್ನಾಕರೆಯಂ] ॥ ೨೮

ಎಂದು ಮನದೊಳ್ ಪೊಗೞ್ದು ಧನಶ್ರೀಯ ಸಮ್ಯಕ್ತ್ವದೊಳಾದ ನಂಬುಗೆಗೆ ಕರಂ ಮೆಚ್ಚಿ ಸಂತೋಷಂಬಟ್ಟು ಮುಯ್ವಂ ನೋಡಿ ಕರ್ಮರಾಜನೊಡ್ಡನಿೞಿಯಲ್ ನೆರಂಬಡೆದೆನೆಂದು ಪೆರ್ಚಿ ಸುಬಂಧುಶ್ರೀಯ ಸಮ್ಯಕ್ತ್ವಮುಮಂ [ಜಿನಭಕ್ತಿಯುಮಂ] ಆರಯಲೆಂದು ಮಗಳಂ ಕರೆದು ತೊಡೆಯನೇಱಿಸಿಕೊಂಡು [ಕದಪಂ ಕರ್ಚಿ ತಂಬುಲಮನಿಕ್ಕಿ ಮೊಗಮಂ ನೋಡಿ ಕಿಱಿದುಬೇಗಂ ಮಗಳ ಮುದ್ದುನುಡಿಗಳಂ ಕೇಳ್ದು ಹರ್ಷಚಿತ್ತನಾಗಿ] ಗುಣಪಾಲಸೆಟ್ಟಿ ಮೆಲ್ಲನಿಂತೆಂದಂ ॥ ೭೮

ನಿನ್ನಂತು ಮಗಳೆ ಪುಣ್ಯ
ಕ್ಕಿನ್ನೋಂತವರಾರೊ ಮಾಳವೇಶ್ವರನದಟಿಂ ।
ಸನ್ನುತ ಗುಣಗಣನಿಳಯಂ
ನಿನ್ನಂ ತನಗರಸಿಮಾಡಿದಪ್ಪಂ ಪದೆಪಿಂ ॥ ೭೯

ನೀನರಸಿಯಾದೆಯಪ್ಪೊಡೆ
ಮಾನವಪತಿ ನಿನಗೆ ಮುಖ್ಯಪದಮಂ ಕುಡುಗುಂ ।
ಶ್ರೀನಿಳಯೆಯಾಗಿ ಸುಖದಿಂ
ನೀನಿರ್ಪೈ ರಾಜ್ಯಲೀಲೆಯಿಂ ಕ್ರೀಡಿಸುತುಂ ॥ ೮೦

[ನೀಂ ಪಟ್ಟದರಸಿಯಾದೊಡೆ
ಪೆಂಪಿಂದಂ ನಿನಗೆ ಪುಟ್ಟಿದಾತಂಗಿಳೆ ಸಾ ।
ರ್ಗುಂ ಪಡಿಮಾತೊಯ್ಯನೆ ರಾ
ಜ್ಯಂ ಪೆಱತೇನಕ್ಕ ನಮಗೆ ಸಾರ್ಗುಂ ಕ್ರಮದಿಂ ॥ ೮೧

ಪರದಂಗೆ ಪುಟ್ಟಿ ನಿನ್ನಂ
ತರಸುತನಕ್ಕಂ ಮಹಾವಿಭೂತಿಗಮುರ್ವೀ ।
ಧರನ ಕಡುಗೂರ್ಮೆಗಂ ವಿ
ಸ್ತರದಿಂ ರಾಜ್ಯಾಸ್ಪದಕ್ಕಮಿಂ ನೋಂತವರಾರ್] ॥ ೮೨

ಎಂಬುದುಂ ಸುಬಂಧುಶ್ರೀ ತಂದೆಯ ಮಾತಿಂಗೆ ನಕ್ಕು ನಿಮ್ಮಂ ತಪ್ಪ ಮಹಾಪುರುಷರಿಂತಪ್ಪ ನಿರ್ಬುದ್ಧಿತನಮಂ ಮಾಡಲಾಗದೀಶ್ರೀಗೆಱಗಿ ಧರ್ಮಮಂ ಬಿಡುವುದಾವ ಬುದ್ಧಿ [1]; ಕಂಚಕಂ ಬಿಟ್ಟೋಡಂ ಪಿಡಿವ, ತಾಯುಂ ಬಿಟ್ಟು ರಕ್ಕಸಿಯುಂ ಪೊರ್ಮವ, ಭೂಸರಂ ಬಿಟ್ಟು ಪೊಲೆಯರಂ ಕೆಳಗೊಳ್ವ, ನಂಟರಂ ಬಿಟ್ಟು ಪಗೆಯುಂ ಕೂಡುವ, ಕುದುರೆಯನೊಲ್ಲದೆ ನಾಯನೇಱುವ, ಪಟ್ಟದಾನೆಯುಂ ಕೊಟ್ಟು ಕೋಡಗಮುಂ ಕೊಳ್ವ, ಪಾಲನೊಲ್ಲದೆ ನಂಜಂ ಕುಡಿವ, ಸಕ್ಕರೆಯನೊಲ್ಲದೆ ಮೆಳಲಂ ಮೆಲ್ವ, ಕಂಕಣಮನೊಲ್ಲದೆ ಬಳೆಯುಂ ತುಡುವ, ಧಾನ್ಯಮುಂ ಕೊಟ್ಟು ಪೊಳ್ಳಂ ಕೊಳ್ವ, ನೆಲೆವಾೞಂ ಬಿಟ್ಟು ತಿರಿದುಂಬ, ಮರುಳಂ ಪೋಲ್ಕುಂ; ಬೆಕ್ಕು ಪಾಲಂ ಕಾಣ್ಬುದಲ್ಲದೆ ಮೇಗೆ ಬಂದಡಸುವ ಬಡಿಗೆಯುಂ ಕಾಣದಂತೆ ಮೂರ್ಖರಪ್ಪರುಮಿಲ್ಲಿಯ ಸುಖಮನೆ ಶಾಶ್ವತಮಾಗಿ ಕಾಣ್ಬರಲ್ಲದೆ ಮೇಗಣ ನರಕದೊಳಾದ ಮಹಾದುಃಖಮನಱಿಯರೆನಗಿಂತಪ್ಪ ಮಾಯಾವಚನಂಗಳಿಂ ಮಕ್ಕಳ ಕೈಯ ಮಾಣಿಕಮಂ ಗುಗ್ಗುರಿಯುಂ [2] ತೋಱಿ ನಂಬಿಸಿ ಕೊಳ್ವಂತೆ ಸುದರ್ಶನಮಂ ಬಿಡಿಸಿ ಕಿಡುವ ಕಜ್ಜಮಂ ಪೇೞ್ವ ಈ ಶ್ರೀಯುಮನಲ್ಪಸುಖಮುಮಂ ತೋಱಿ ಟಕ್ಕಿಕ್ಕಿ ಮಾತಾಡವೇಡ ॥ ೮೩

ಜಿನಧರ್ಮಂ ಪ್ರಾಣಿಗಾವರ್ಮಂ ತ್ರಿಭುವನತಿಲಕಂ ಸರ್ವಲೋಕೈಕಪೂಜ್ಯಂ
ಮನುಜೇಂದ್ರಶ್ರೀವಿಲಾಸಂ ವಿಬುಧಪತಿನುತಶ್ರೀವಧೂಕರ್ಣಪೂರಂ ।
ಘನಮುಕ್ತಿಶ್ರೀರಮಾಂಗೀವಿಮಳಮುಖಲಸದ್ದರ್ಪಣಂ ಖೇಚರಶ್ರೀ
ವನಿತಾಲಂಕಾರಮೆಾದ್ಯತ್ಸಕಲಸುಖಮುಮಂ ಬೇಗಮೀವಿಂದ್ರಭೂಜಂ ॥

ಆಸದ್ಧರ್ಮಂ ಪುಣ್ಯಾನಿ
ವಾಸಿಗೆ ದೊರೆಕೊಳ್ಗ್ಗ ವೇಘಸವೇತಂಗನ್ಯತಾ ।

---

1 ಮಾತಿನಂದಕ್ಕೆ ಮುಗುಳ್ನಗೆಯುಂ ನಕ್ಕು ನಿಮ್ಮಂತಪ್ಪ ಮಹಾಪುರುಷರಿಂತಪ್ಪ ಮಾತುಗಳಂ ನಿರ್ಬುದ್ಧಿತನದಿಂ ಮಾತನಾಡಲಾಗದಳಿಶ್ರೀಗೆಱಗಿ ಧರ್ಮಮಂ ಕೆಡಿಸುವುದಾವುದು ಕಜ್ಜಂ (ಗ).

2 ಗುರುಗುಂಜಿಗಳಂ (ಗ).

ನಾಸಂಗೆ ಮಿಕ್ಕ ಪುರುಷಾ
ಭಾಸಂಗಸುಖಾವಹಂಗೆ ದೊರೆಕೊಂಡಪುದೇ ॥ ೮೫

ವಿಮಳಮಿದೆನಿಸುವ ಜೈನಾ
ಗಮಮಂ ನೀಮಱಿದುಮಱಿಯದೆಗ್ಗರ ತೆಱದಿಂ ।
ರಮೋಘಿಯುಮೆಂದು ರಾಜ್ಯ
ಕ್ರಮಕ್ಕೆ ಬೆಚ್ಚಿಲ್ಲದೆಳಸಲಪ್ಪುದೆ [1] ಮನದೊಳ್ ॥ ೮೬

ಅಂತಲ್ಲದೊಡಂ ಕರ್ಮರಾಜನೆಂಬ [ವ್ಯಾಧರಾಜಂ ಕೋಪಮೆಂಬ ತೀವ್ರಾಯುಧಮನುರ್ಚಿಕೊಂಡು ಮಿಥ್ಯಾತ್ವರುಚಿಯೆಂಬ ಕುದುರೆಯ ನೇಱಿ ಮಾಯೆಯೆಂಬಡ್ಡಣಮಂ ಪಿಡಿದು ಮೋಹಮೆಂಬ ಸುರಗಿಯುಂ ಕಟ್ಟಿ ಲೋಭಮೆಂಬ ಸಮಂಗಮಂ ತೊಟ್ಟು ಮಾಣದಷ್ಟಮದಮೆಂಬ ಘುಂಘುಕಮನಿಕ್ಕಿ ರಾಗದ್ವೇಷಮೆಂಬ ಕೀಳಂ ಪಿಡಿದು ತ್ರಿದಂಡಮೆಂಬ ಸೋಟಂಬೆರಸು ಶಂಕಾದ್ಯಷ್ಟಮಳಮೆಂಬ ಮೇಳದಾಳ್ವೆರಸು ಆರ್ತ ರೌದ್ರಧ್ಯಾನಮೆಂಬ ಮುಂಗೊಳೆಯದ ನಾಯಕರ್ವೆರಸು ದುರ್ಜನರ ಕೂಟಮೆಂಬ ಪಿಂಗೊಳೆಯದ ವೀರರ್ವೆರಸು ಕುದಾನಪ್ರೀತಿಯೆಂಬ ಪೂಣ್ಕೆಯಾಳ್ವೆರಸು ದುರ್ಬುದ್ಧಿಯೆಂಬ ಪೊಲಂಬಿಗರ್ವೆರಸು ನಿಲ್ಲದೆ ಲ್ಲಿಯುಂ ಬೆನ್ನಟ್ಟಿ ತಗುಳ್ದು ಸದ್ದರ್ಶನಾಂತರಾಯಮೆಂಬೇಱುಗಳಂ ಋಷಿದೂಷಣಮೆಂಬ ಬಡಿಗಳಂ ಕೆಡೆಯೆ ಮೋದುತ್ತುಂ ಸುತತ್ತ್ವಭೀತಿಗ ಳೆಂಬಂಬುಗಳಿಂದಂ ಮಿಯಗ್ಗಣದೆ ಸುಯ್ಯುತ್ತುಂ] [2] ಬಱಲ್ದರ ಮೊಗ ದೊಳ್ ನೀರಂ ತಳಿದು ಬೀಸು ಚೇತರಿಸಿದಾಗಳ್ ಮತ್ತಂ ದಂಡಣೆಗಳಂ ಮಾಡುವಂತೆ ಕೋಟಿಕೋಟಿ ಸಾಗರೋಪಮಕಾಲಕ್ಕೊರ್ಮೆ ಹೀನರಾ ಜ್ಯಮುಮನಲ್ಪಶ್ರೀಯುಮನಲ್ಪಸುಖಮುಮಂ ತೋಱಿ ನರಕದೊಳಂ ತಿರಿಕದೊಳಮೆಡೆಯಱಿಯದೆ ನಿಷ್ಕರುಣನಾಗಿ ಮೆಚ್ಚಿದ ಕೊಲೆಗಳಂ ಕೊಲ್ವಾತನಂ ಕಂಡು ಬೆಚ್ಚಿ ಶರಣರಪ್ಪರೊರ್ವರುಮಿಲ್ಲದೊಳಱಿ

---

1 ಎಳಸದಿರ್ಪುದು (ಗ).

2 ಚಕ್ರವರ್ತಿ ಮಿಥ್ಯಾತ್ವಮೆಂಬಕುದುರೆಯನೇಱಿ ರಾಗದ್ವೇಷಮೆಂಬ ಕೀಳಂ ಪಿಡಿದು ಬಹುಕಾಂಕ್ಷೆಯೆಂಬ ಕವಣೆಯಂ ಪಿಟ್ಟಿ ಸದ್ಧರ್ಮದ್ವೇಷಮೆಂಬ ಮುರಗೋ

[ಪೆಳಱಿ] ಬಾಯ್ವಿಟ್ಟಂತಾನುಮೆನ್ನ ಭಾಗ್ಯದಿಂ ಸದರ್ಮಸಮೇತನಪ್ಪ ನಿನ್ನಂ ಶರಣ್ಬುಗುವಂತೆ ಪುಟ್ಟಿದೆನ್ನಂ ರಕ್ಷಿಸದೆ ಕರ್ಮರಾಜಂಗೆ ಮಗುಳೆ ಪಿಡಿದೊಪ್ಪಿಸುವುದು ಪಾೞಿಯಲ್ಲದೆಂತುಂ ನಿಮಗೆನ್ನ ಮೇಲೆ ಮುಳಿಸುಳ್ಳೊಡೆ ನಿಮ್ಮ ಮೆಚ್ಚಿದ ದಂಡನೆಯಂ ಮಾಡಿಮೇಗೆಯ್ದುಂ ಮಿಥ್ಯಾದೃಷ್ಟಿಗೆ ಕುಡುವೆವೆಂಬ ಬಗೆಯಂ ಮಾಣ್ಬುದೆಂದು ಕಣ್ಣನೀರಂ ನೆಗಪುವುದುಂ ಮಗಳ ಮನದ ಸ್ವಚ್ಛತೆಗಂ ಸಮ್ಯಕ್ತ್ವದೊಳಾದ ನಂಬುಗೆಗಂ ಗುಣಪಾಲಸೆಟ್ಟಿ ಮನದೊಳಚ್ಕರ್ತರ್ ॥ ೮೩

ಎನ್ನ ಗುಣಕ್ಕಂ ಬಗೆವಂ
ದೆನ್ನ ವಧೂಟಿಯ ಗುಣಕ್ಕ ಮಿೞಕೆಯ ಗುಣಮ ।

ಡಂ ಮಲಗಿ ಜಿನದೂಷಣೆಯೆಂಬ ಖಡ್ಗಂಬೆರಸು ಋಷಿವೈರವೆಂಬ ಚಮ್ಮಟಿಗೆವೆರಸು ಕೋಪವೆಂಬ ಸಬಳವಂ ಪಿಡಿದು, ಮಾನವೆಂಬ ಖಡ್ಗಮುಂ ಪಿಡಿದು ಮಾಯೆಯೆಂಬ ಸುರಗಿಯಂ ಕಟ್ಟಿ ಲೋಭವೆಂಬ ಸವಗಮಿಕ್ಕಿ ಮೋಹವೆಂಬಸಿಕವನಿಕ್ಕಿ ಶಲ್ಯತ್ರಯವೆಂಬ ಕಾಲ್ಗಾಪಿನಾಳ್ವೆರಸು ಕುಲಮದವೆಂಬ ರಥಂಬೆರಸು ಜಾತಿಮದವೆಂಬ ಕೊಂತದಾಳ್ವೆರಸು ಅಜ್ಞಾನಮದವೆಂಬ ಕಡಿತಲೆವೆರಸು ಐಶ್ವರ್ಯಮದವೆಂಬ ಬಿಟ್ಟೇಱುಕಾಱರವೆರಸು ಬಲಮದವೆಂಬ ಕಟ್ಟುಗೆಕಾಱರವೆರಸು ರೂಪುಮದವೆಂಬ ಕುದುರೆಯದಳಂ ಬೆರಸು ತಪೋಮದವೆಂಬ ಸೂಱೆಕಾಱರ್ವೆರಸು ವಿಜ್ಞಾನಮದವೆಂಬ ಪೂಣ್ಕೆಯಾಳ್ವೆರಸು ಹಿಂಸಾನಂದವೆಂಬ ಮುಂಗುಡಿಯಾಳ್ವೆರಸು ಅನೃತಾನಂದವೆಂಬ ಬಾಂಗುಳಾಳ್ವೆರಸು ಸ್ತೇಯಾನಂದವೆಂಬ ಮನ್ನೆಯಾಳ್ವೆರಸು ಸಂರಕ್ಷಣಾನಂದವೆಂಬ ನಾಯಕರ್ವೆರಸು ಪರವನಿತಾರತಿಯೆಂಬ ನಂಬುಗೆಯಾಳ್ವೆರಸು ಶಂಕಾದ್ಯಷ್ಟಗುಣಂಗಳೆಂಬ ಕರಿಘಟೆಗಳ್ವೆರಸು ಸಪ್ತವ್ಯಸನವೆಂಬ ಜೀವಿತದಾಳ್ವೆರಸು ಕುದಾನಪ್ರೀತಿಯೆಂಬ ಮೇಳದಾಳ್ವೆರಸು ನಿರ್ದಯವೆಂಬ ಬಿಲ್ವಡೆವೆರಸು ದುರಾಚಾರವೆಂಬ ಕಳ್ವಾಳ್ವೆರಸು ರೌದ್ರಧ್ಯಾನವೆಂಬ ಗುಪ್ತನಡೆವೆರಸು ಆರ್ತಧ್ಯಾನವೆಂಬ ಮನ್ನಣೆಯರ್ವೆರಸು ದುಷ್ಟಗೋಷ್ಠಿಯೆಂಬ ಸಾಮಂತರ್ವೆರಸು ದುರ್ಬುದ್ಧಿಯೆಂಬ ಪೊಲಂಬಿಗರ್ವೆರಸು ನಿಲ್ಲದೆಲ್ಲಿಯುಂ ಬೆನ್ನಟ್ಟಿ ತಗುಳ್ದು ದರ್ಶನಾಂತರಾಯುಮೆಂಬೇಱುಗಳಿಂ ಸದ್ಧರ್ಮವಿಘ್ನವೆಂಬ ಪೊಯ್ಲುಗಳಿಂ ಸನ್ಮುನಿನಿಂದೆಯೆಂಬ ಘಾಪುಗಳಿಂ ಸತ್ಪೂಜಾಭಂಗವೆಂಬ ಬಯ್ಗುಳಿಂ ಸದ್ದರ್ಶನಾಲಸ್ಯವೆಂಬ ಕೊಂತಂಗಳಿಂ ತತ್ವಭೀತಿಯೆಂಬ ತಿವುಗಳುಗಳಿಂ ಸದ್ಗೋಷ್ಠಿದೂರವೆಂಬ ಕಡಿಖಂಡಂಗಳಿಂ ಬೀಳೆ ಮೋದುತ್ತುಂ ದಂಡಣೆಯುಂ ಮಾಡುತ್ತುಂ. (೧)

ತ್ಯನ್ನ ತಮೆನಿಸಿದುದದಱಿಂ
ದೆನ್ನಂತಾರ್ ಪುಣ್ಯವಂತರವನೀತಳದೊಳ್ ॥ ೮೮

[ಬದರೀಕಂಟಕರೆಂದೆನಿ
ಸದೆ ಪಂದೆಯು ಯುದ್ಧದಂತೆ ಸದ್ಧರ್ಮಕ್ಕಂ ।
ಜಿದರಿವರೆನಿಸದೆ ಸಮ್ಯ
ಕ್ತ್ವದೊಳಿಂತಿವರಿರ್ವರಂತೆ ನೇರಿದರೊಳರೇ ॥] ೮೯

ದುರಿತಾರಿಯನದಟಲೆದೋ
ಸರಿಸದೆ ಮೋಕ್ಷಕ್ಕೆ ಸಲ್ವ ಜೀವಾದಿಗಮು ।
ರ್ವರೆಯೊಳ್ ಸುತತ್ತ್ವರುಚಿ ತಾಂ
ಸಿರಿಖಂಡದ ಕಂಪಿನಂತೆ ಸಹಜಮೆನಿಕ್ಕುಂ ॥ ೯೦

ದುರಿತಯುತನಾಗಿ ಗಮ್ಮನೆ
ನರಕಕ್ಕಿೞಿಯಲ್ಕೆ ಬಗೆವ ಜೀವಾಳಿಗಮು ।
ರ್ವರೆಯೊಳ್ ಕುತತ್ತ್ವರುಚಿ ತಾಂ
ದೊರೆಕೊಳ್ಗುಂ ಪೇಲ್ಗೆ ಪುಟ್ಟುವಂತಸುಗಂಧಂ ॥ ೯೧

[ಮತ್ತಂ ಕತ್ತುರಿಕರ್ಪುರಶ್ರೀಖಂಡಾದಿದ್ರವ್ಯಂಗಳಂ ಸೋಂಕಿ ಪರಿವ ಗಾಳಿ ಗಂಪಪ್ಪಂತೆ ಪಾಪದೊಳ್ ಪೊರ್ದದ ಪೊಲ್ಲಮೆಯೊಳೊಂದದ ಜಿನೇಂದ್ರಧರ್ಮಮಂ ಪೊರ್ದಿದ ಮಹಾತ್ಮಂಗೆ ಸುತತ್ತ್ವವಿಚಾರಮುಂ ಮಿಥ್ಯಾತ್ವಭೀರುತ್ವಮುಂ ಸಹಜಮಕ್ಕುಂ ; ಅಮೇಧ್ಯಕಳ್ಮಾಂಸಾದಿ ದುರ್ಗಂಧಮಪ್ಪಂತೆ ಲೋಲತೆಯೊಳ್ ಪೊರ್ದಿದ ಪೊಲ್ಲಮೆಯೊಳೊಂದಿದ ಮಿಥ್ಯಾದರ್ಶನಂಗಳಂ ಪೊರ್ದಿದ ದುರಾತ್ಮಂಗೆ ಕುಮಾರ್ಗಾನುರಾಗಮುಂ ಕುತತ್ತ್ವರುಚಿಯುಂ ಮಿಥ್ಯಾತ್ವಪ್ರೀತಿಯುಂ ಸಹಜಮೆಂದು ತನ್ನೊಳ್ ವಿಚಾರಿಸಿ ಧನಶ್ರೀಯ ಗುಣಂಗಳಂ ಮನದೊಳ್ ಪೊಗೞ್ದು ತನ್ನ ಮನದ ಕಾರ್ಯಮನಿರ್ವರ್ಗಂ ತಿಳಿಯೆ ಪೇೞ್ದು ॥ ೯೨

ತಡೆದಿಲ್ಲಿ ನಿಂದೆನಪ್ಪೊಡೆ
ಕುಡವೇೞ್ಕುಂ ಭೂಭುಜಂಗೆ ಮಗವಂ ಕೂಸಂ ।

ಕಡುಗೂರ್ತು ಕೊಟ್ಟೆನಪ್ಪೊಡೆ
ಕಿಡುಗುಂ ಮೇಲಪ್ಪ ನಮ್ಮ ಮೋಕ್ಷದ ಸೌಖ್ಯಂ] ॥ ೯೩

ಎಂದಾಲೋಚಿಸಿ [1] ಧನಶ್ರೀ ಗರ್ಭಿಣಿಯಪ್ಪ ಕಾರಣದಿಂ [ದೊಡಗೊಂಡು ಪೋಗಲೊಲ್ಲದೆ] ತನ್ನ ಪ್ರಾಣಮಿತ್ರನಪ್ಪ ಶ್ರೀವತ್ಸನೆಂಬ ಪರದನ ಮನೆಯೊಳ್ ಗುಪ್ತದಿಂದಿರಿಸಿ ನೂಱೆಂಟುಕೋಟಿ ಪೊನ್ನುಮಂ ನಿರ್ವಾಹಮುಮಂ ಬಿಸುಟ್ಟು ॥ ೯೪

ಮಗಳನೊಡಗೊಂಡು ಪುರದಿಂ
[ಬಗೆಯದೆ ಪೆಱಪೆಱತನಳಿಪದೊಂದಕ್ಕಂ ಕೈ ।
ಮಿಗೆ ಜೈನಧರ್ಮವಾರಿಧಿ
ಮೃಗಾಂಕನನುಪಮಗುಣಾಂಬುನಿಧಿ ಪೊಱಮಟ್ಟಂ ॥ ೯೫

ಅಂತು] ಪೊಱಮಟ್ಟು ಕತಿಪಯಪ್ರಯಾಣಂಗಳಿಂ ಕೌಶಾಂಬಿಯೆಂಬ ಪುರಮನೆಯ್ದಿ ॥ ೯೬

ಸಿರಿಯಂ ಚಿಂತಿಸಿ ಕಂದಿ ಕುಂದಿರದೆ ನಿರ್ವಾಹಕ್ಕೆ ಕೇಡಾದುದೆಂ
ದಿರುಳೆಲ್ಲಂ ಮತಿಗೆಟ್ಟು ಬಾಯ್ವಿಡದೆ ದೇಶತ್ಯಾಗಮಾಯ್ತೆಂದು ನಿ
ಷ್ಠುರದುಃಖಕ್ಕೆಡೆಯಾಗದುತ್ತಮಗುಣಂ ಚಾರಿತ್ರಪಾರಾಯಣಂ
ಪಿರಿದುಂ ಸಂತಸದಿಂದಮಿರ್ದನಮಳಶ್ರೀಧರ್ಮರತ್ನಾಕರಂ [2] ॥ ೯೭

[ಅಂತಿರ್ಪುದುಮಿತ್ತಲರಸಂ ಗುಣಪಾಲಸೆಟ್ಟಿ ಪೆಂಡಿರ ಮಕ್ಕಳ ಕೈಯುಂ ಪಿಡಿದು ಪಿರಿದಪ್ಪ ಧನಮುಮಂ ನಿರ್ವಾಹಮುಮಂ ನೀಡಾಡಿ ಪೋದನೆಂಬುದಂ ಕೇಳ್ದು ಬೆಱಗಾಗಿ ಪ್ರಧಾನರ ಮೊಗಮಂ ನೋಡಿ ॥ ೯೮

ತನ್ನ ತನೂಜೆಯುನೆನಗಿ
ತ್ತುನ್ನತಿಯಿಂದಿರದೆ ಬಿಟ್ಟು ನಿರ್ವಾಹಮುಮಂ ।
ಪೊನ್ನುಮನೋಡುವ ಮರುಳವ
ನನ್ನರ್ ಅರೊಳರೆ ಬಗೆವೊಡುರ್ವೀತಳದೊಳ್ ॥ ೯೯

---

[1] ಎಂದು ಮಚ್ಚಿ (ಗ)   [2] ನೋಲಪಿಂ ವಾತ್ಸಲ್ಯರತ್ನಾಕರಂ (ಗ)

ತಾನಪ್ಪೊಡೆ ವೈಶ್ಯಾತ್ಮಜ
ನಾನಪ್ಪೊಡೆ ರಾಜಪುತ್ರನೆಂದೊರೆಯುಲ್ಕಂ ।
ದೇನಿರದೆ ಪೋದನಪ್ಪೊಡ
ಮೇನಂತರಮಣ್ಣ ನೋಪ್ಪೊಡೆನಗಂ ತನಗಂ ॥ ೧೦೦

ಸುತೆಯುಂ ಕೊಟ್ಟೆನಗಖಿಳ
ಕ್ಷಿತಿಯುಮನಾಳ್ದಿರದೆ ಸುಖದಿನತಿಚಪಳಂ ದು ।
ರ್ಮತಿಯಾಗಿ ಬಿಚ್ಚೆ ಪೋಪೊಂ
ದತಿಶಯಮೇಕಿಂತು ಪುಣ್ಯಹೀನರುಮೊಳರೇ ॥ ೧೦೧
ಎಂದು ಹಾಸ್ಯಂಮಾಡಿ ನಗುವರಸಂಗೆ ಪೆರ್ಗಡೆಗಳಿಂತೆಂದರ್ ॥೧೦೨

ದೇವಲೋಕವಿಭೂತಿಗಂ ವರಚಕ್ರವರ್ತಿಯ ಲಕ್ಷ್ಮಿಗಂ
ಭಾವಿಸಂದಪವರ್ಗಲಕ್ಷ್ಮಿಯ ಕೂರ್ಮೆಗಂ ಪಿರಿದಪ್ಪ ವಾ
ಕ್ಷೋಪಧೂಪ್ರಿಯನಲ್ಮೆಗಂ ಸುಖದೊಂದು ಪತ್ತುಗೆಗಂ ಜಯ
ಶ್ರೀವಧೂವರಮಪ್ಪ ಪೈಮೆಗಮುನ್ನತಿಕ್ಕೆಗಮಾಜ್ಞೆಗಂ ॥ ೧೦೩

ಕೊಲೆಯೊಳ್ ಪೊರ್ದದಿರ್ದ ಸದ್ಧರ್ಮಕಿ ಮುಖ್ಯಮಪ್ಪುದಱಿಂ ಧರ್ಮದ ಮೋಹದಿಂ ಶ್ರೀಯುಮಂ ಸಂಪತ್ತುಮನುದಾಸೀನಂಮಾಡಿ ದೇವ ನೀಂ ಶ್ರಾವಕನಲ್ಲಮಪ್ಪುದಱಿಂ ಮಿಥ್ಯಾತ್ವಕ್ಕಂ ಮೇಲೆ ಬರ್ಪ ನರಕದುಃಖಕ್ಕಂ ಭಯಸ್ಥನಾಗಿ ಕುಡಲೊಲ್ಲದೆ ಪೋದನೆಂಬುದಂ][1] ವಿಶ್ವಂಧರಮಹಾರಾಜಂ ಚೋದ್ಯಂಬಟ್ಟು ॥ ೧೦೪

ಸಿರಿಯುಂ ಬಿಟ್ಟು ವಿಭೂತಿಯುಂ ತೊಱೆದು ನಿರ್ವಾಹಕ್ಕೆ ತಚ್ಚಿತ್ತದೊಳ್
ಪಿರಿದುಂ ಮೋಹಿಸಲೊಲ್ಲದಂಜಿ ಮಗಳಂ ವೈಶ್ಯಾತ್ಮಜಂ ಸಂತಸಂ
ಬೆರಸುತ್ಸಾಹದಿನೀಯುದೆನ್ನ ಸಿರಿಯುಂ ಪೆಂಪಂ ಮನಂಗೊಳ್ಳದಾ
ದರಮಂ ಧರ್ಮದೊಳುಂಟುಮಾಡಿ ಪೊಱಮಟ್ಟೀದೇಶದಿಂದೋಡಿದಂ ॥

[1] ಅಂತಿರ್ಪುದುಮಿತ್ತಲ್ ಗುಣಪಾಲಸೆಟ್ಟಿಯು ಭೋಗಂ ಕೇಳ್ದು (ಗ)

ಅದಱಿಂದಾತಂ ನಂಬಿ
ದುರ್ದೆ ದೈವಂ ವೈಶ್ಯವಂಶತಿಳಕಂ ಪಿಡಿದಿ ।
ದುರ್ದೆ ಧರ್ಮವೆಂದು ನಚ್ಚಿದ
ನುದಿತೋದಿತಕೀರ್ತಿಮಾಳ್ವೋರ್ವೀನಾಥಂ ॥ ೧೦೬

[ಪಿರಿದಪ್ಪ ಸಿರಿಯನೊಲ್ಲದೆ
ಪರತ್ರೆಯನೆ ನಂಬಿ ಪಿಡಿದನೆಂದಂದಿಂತೀ ।
ಧರೆಯೊಳಗಾವೈಶ್ಯಾಂಬರ
ತರಣಿಯ ನಚ್ಚಿರ್ದ ಧರ್ಮಮದುವೆ ಸುಧರ್ಮಂ ॥ ೧೦೭

ಎಂದಾಜಿನಧರ್ಮದೊಳ್ ಪ್ರೀತಿಯುಂ ಕುಧರ್ಮದೊಳ್ ಭೀತಿಯುಂ ಪುಟ್ಟೆ ಗುಣಪಾಲಸೆಟ್ಟಿಯಮೇಲೆ ಮೋಹಮುಂ ಸ್ನೇಹಮುಮಾಗೆ ಮನೆಗಂ ಭಂಡಾರಕ್ಕಂ ಕಾಪಂ ಪೇೞ್ದು ಜಿನಸಮಯವಾರ್ಧಿವರ್ಧನಚಂದ್ರನನೆಲ್ಲಿಯುಮಟ್ಟಿಯಱಸಿ ತನ್ನಿಮೆಂದು ದೆಸೆದೆಸೆಗೆ ಪರಿಚಾರಕರನಟ್ಟಿದನಿತ್ತ ಧನಶ್ರೀ ॥ ೧೦೮

ಗುಣಪಾಲಸೆಟ್ಟಿಯಪ್ಪೊಡೆ
ಗುಣಾಢ್ಯನವಿನೀತನಲ್ಲನಾರ್ಗಂ ವೈಶ್ಯಾ ।
ಗ್ರಣಿ ಪುಣ್ಯನಿಳಯನಾಯದ
ಕಣಿ ಸತ್ಯನಿಧಾನನೆಲ್ಲಿಯುಂ ಕೆಟ್ಟಪನೇ ॥ ೧೦೯

ವಾತ್ಸಲ್ಯರತ್ನಾಕರನಪ್ಪೊಡಧಿಕಪುಣ್ಯನುಂ ವಣಿಗ್ವಂಶಾಗ್ರಗಣ್ಯನುಮಪ್ಪನೆಲ್ಲಿ ಪೊಕ್ಕೊಡಮಾಪತ್ತುಮೆಡರುಮಿಲ್ಲೆಂದು] [1] ಮನಮಂ ಸಂತೈಸಿಕೊಂಡು [ಸುಖದಿಂ] ಕೆಲವುದಿವಸಮಿರ್ಪುದುಮೊಂದುದಿವಸಂ ಶಿವಗುಪ್ತರೆಂಬಾಚಾರ್ಯರ್ ತ್ರಿಗುಪ್ತರೆಂಬ ತಮ್ಮ ಶಿಷ್ಯರ್ವೆರಸು [ಚಂದ್ರಗತಿಯಿಂ ಚರಿಗೆಗೆವರ್ಪುದುಂ ಶ್ರೀದತ್ತಸೆಟ್ಟಿ ಕಂಡು ॥ ೧೧೦

---

[1] ಅಂತು ಮೆಚ್ಚಿ ಗುಣಪಾಲಸೆಟ್ಟಿಯನೊಡಗೊಂಡು ಬರ್ಪುದೆಂದು ದೆಸೆದೆಸೆಗೆ ಚರರನಟ್ಟಿ ಮನೆಗೆ ಕಾಪಂ ಪೇಳ್ದನಿತ್ತಲ್ ಧನಶ್ರೀ (ಗ)

ಕರಮೊದರದಿಂದಾಮುನಿ
ವರರಂ ಸದ್ಭಕ್ತಿಪೂರ್ವಕಂ ನಿಲಿಸಿ ದುರಂ ।
ತರಚರಿತರಂ ಮಹಾಗುಣ
ನಿರತರನಘನಿಕರತೀವ್ರವಜ್ರಾಯುಧರಂ ॥ ೧೧೧

ಬಳಗಣ್ಕಿದಿಗೊರ್ಗೊಂಡೊಯ್ಯನೆ
ಬಳಸಿದ ವಿಷ್ಟರದೊಳಿರಿಸಿ ಕಾಲಂ ಚೆತ್ತೋ ।
ಜ್ಜ್ವಲನಾಗಿ ಕರ್ಚಿ ತಾಂ ತ
ಜ್ಜಳಮಂ ಮಸ್ತಕದೊಳಾಂತು ಪೂಜಿಸಿ ಪದಮಂ ॥ ೧೧೨

ಪದಪಿಂ ಶುದ್ಧಾನ್ನಮನೀ
ವುದುಮುಂಡು ಮುನೀಂದ್ರರಿರ್ವರುಂ ಕುಳ್ಳಿರೆ ಸಂ ।
ಮದದಿಂ ಮುನೀಂದ್ರವಂದ್ಯನ
ಪದಯುಗಳಮನೊತ್ತುತಿರ್ದನಿರ್ಪನ್ನವರಂ ॥ ೧೧೩

ಧನಶ್ರೀ ವಂದಿಸಿ ಪೋಪುದುಂ ತ್ರಿಗುಪ್ತಮುನೀಂದ್ರಂ ಧನಶ್ರೀಯುಂ ಕಂಡು ಮನದೊಳ್ ವಿಸ್ಮಯಂಬಟ್ಟು ಶಿವಗುಪ್ತಭಟ್ಟಾರಕರ್ಗೆ ಪೊಡೆಮಟ್ಟು ಕೈಗಳಂ ಮುಗಿದು ವಿನಯದಿಂದಿಂತೆಂದಂ ॥ ೧೧೪

ಈವನಜಾಸ್ಯೆಗುತ್ತಮಗುಣಾನ್ವಿತೆಗಗ್ಗಳಭದ್ರಲಕ್ಷಣಂ
ತೀವಿದುವೈದೆ ಭಾವಿಸುವೊಡೆಲ್ಲೆಡೆಯುಂ ನೆರೆದೊಪ್ಪೆ ಚೆಲ್ವಿನಿಂ
ಶ್ರೀವಧುವನ್ನಳನ್ನಳನಿಪೀವಧುವುಂ ಕಡುಕಂದಿ ಕುಂದಿ ಸ
ದ್ಭಾವಮನೊಕ್ಕು ಹೀನರವೊಲನ್ಯನಿವಾಸದೊಳಿರ್ಪುದಾರಿದೇಂ ॥ ೧೧೫

ಸಂಸಾರದೊಳ್ ಬಿಟ್ಟು ಪೆಱತೊಂದು ಕಷ್ಟಮಿಲ್ಲೆಂಬುದುಂ ಶಿವಗುಪ್ತಭಟ್ಟಾರಕರಿಂತೆಂದರ್ ॥ ೧೧೬

ಅಂತೆನವೇಡ ಧಾರಿಣಿಯೊಳೀಲಲಿತಾಂಗಿಯೆ ಪುಣ್ಯವಂತೆ ಭೂ
ಕಾಂತನಡರ್ತು ತನ್ನ ಮಗಳಂ ಕುಡವೇಡ್ಕೆನಲೀಕೆಯಣ್ಮನೋ

ರಂತೆ ಜಿನೇಂದ್ರಧರ್ಮಯುತನಲ್ಲದವಂಗೆ ಮಮಾತ್ಮಜಾತೆಯುಂ
ಸಂತತಮೀಯೆನೆಂದು ಬಿಸುಟಗ್ಗದ ಧಾನ್ಯಧನಂಗೃಹಂಗಳಂ ॥ ೧೧೬

ಪೋಗುತ್ತುಮಾವನಿತೆ ಗರ್ಭಿಣಿಯಪ್ಪುದಱಿಂದೊಡಗೊಂಡು ಪೋಗಲೊಲ್ಲದೆ ಶ್ರೀದತ್ತಸೆಟ್ಟಿ ತನಗಿಷ್ಟನಪ್ಪುದಱಿಂದಿಲ್ಲಿ ಗುಪ್ತದೊಳಿರಿಸಿ ಪೋದನದಱಿಂದೀಧನಶ್ರೀ ಕಂದಿ ಕುಂದಿದಳೆಂಬುದುಂ, ಇಂತೀಧನಶ್ರೀಯ ಗರ್ಭದ ಕೂಸೀಮಂಡಳಕ್ಕೆಲ್ಲಮೊಡೆಯನಕ್ಕುಮೆಂದು ತಮ್ಮೊಳ್ ನುಡಿದು ಪೋಪುದುಂ ಶ್ರೀದತ್ತಸೆಟ್ಟಿ ಕೇಳ್ದು ಕಾರಣಮಿಲ್ಲದೆ ಮುಳಿದು ॥

ಈಸಸಿವದನೆಯ ಗರ್ಭದ
ಕೂಸೀದೇಶಕ್ಕೆ ಮುಖ್ಯನಪ್ಪಂ ಗಡ ನಾ ।
ನಾಸಿಸುವೆನುಪಾಯದೊಳ್ ವಿ
ನಾಶಂಮಾಡಲ್ಕೆ ವೇೞ್ಕುಮೆಂದತಿಮುಳಿಸಿಂ ॥ ೧೧೯

ಪೂರ್ವವೈರಮುಂಟಪ್ಪುದಱಿಂ ಮಸಗಿ ಕೃತಕದಿನಿರ್ವರ್ ತೊೞ್ತಿರನೀಧನಶ್ರೀ ಪೆಱಲೊಡಮೆಮಗಱಿಪಿಮೆಂದು ಬೇರೇಕಾಂತದೊಳ್ ಕಲಿಸಿ ಕೂರ್ಪರಂತೀ ಧನಶ್ರೀಗೆ ಸಂಘಾತಮಾಗಿರಿಮೆಂದಿರಿಸುವುದುಂ ಧನಶ್ರೀ ನವಮಾಸಂ ನೆಱೆದು ಗಂಡುಗೂಸಂ ಪೆಱುವುದುಂ ಮುನ್ನಮಿರಿಸಿದ ತೊೞ್ತಿರ್ವರುಂ ಪರಿತಂದು ಶ್ರೀದತ್ತಸೆಟ್ಟಿಗಱಿಪುವುದುಂ ॥ ೧೨೦

ಮುನಿಸೊದವೆ ಕೊಲ್ವೆನೆಂಬೀ
ಮನದಿಂ ಪರಿತಂದು ನೋಡಿ ಕೂಸಂ ಕಂಡೊ ।
ಯ್ಯನೆ ಕೂರ್ಪರಂದದಿಂದಂ
ವನಿತೆಯುನಱ್ಕಿರ್ತು ತಡವಿ ಕೃತಕದಿನಾಗಳ್] [1] ॥ ೧೨೧

---

[1] ಶ್ರೀದತ್ತಸೆಟ್ಟಿಯ ಮನೆಯೊಳ್ ನಿಂದು ತ್ರಿಗುಪ್ತಿಭಟ್ಟಾರಕರಿಂತಪ್ಪ ಭದ್ರಲಕ್ಷಣೆ ಬಡವಟ್ಟಿಂತೇಕೆ ಇರ್ದಪಳೆಂದು ಶಿವಗುಪ್ತಭಟ್ಟಾರಕರಂ ಬೆಸಗೊಳ್ವುದುಂ ತತ್ಪ್ರಪಂಚಮೆಲ್ಲಮಂ ಪೇಳ್ದೀಧನಶ್ರೀ ಪುಣ್ಯಾಂಗನೆ ಯೀಕೆಯ ಗರ್ಭದ ಕೂಸು ಈ ಮಾಳವದೇಶಕ್ಕಧಿಪತಿಯಕ್ಕುಮೆಂಬುದುಂ ಶ್ರೀದತ್ತಸೆಟ್ಟಿ ಕೇಳ್ದು ಕಾರಣವಿಲ್ಲದೆ ಮುನಿದು ಕೊಲ್ವ ಮನಕದಿಂದಿರ್ದ ಧನಶ್ರೀ ಪ್ರಸೂತೆಯಾಗಲೊಡನೆ (ಗ)

ಕುವಳಯನೇತ್ರೆಗೆ ಗರ್ಭ
ಸ್ರವಮಾದುದು ಕೆಟ್ಟೆನೆನಗೆ ಕೈಲೆಡೆ [1] ಯೆಂದೀ ।
ಧವಳಾಕ್ಷಿಯನಣ್ಣ [2] ವಣಿ
ಗ್ಭವನಿರಿಸಿದನಕಟ ಪೊಲ್ಲದಾಯ್ತೆಂದಾಗಳ್ ॥ ೧೦೨

ಧನಶ್ರೀಯುಂ ಪಾಸಿನಮೇಲೆ ಪಟ್ಟಿರಿಸಿ ಕೂಸಿನ ಪೊರೆಯೊಳಿರ್ದ ವರೆಲ್ಲರುಮಂ ಪೊಱಮಡಿಸಿ ಕಳೆದು ಕೂಸು ಸತ್ತುದೆಂದು ಪುಸಿದು ಪೊಱಗಣ್ಗೆ ಕೂಸನೊಯ್ದು ಮೆಲ್ಲನೇಕಾಂತದೊಳೂರ್ವ ಕ್ರೂರನಪ್ಪ ಪೊಲೆಯಂಗೆ ಸಾಲ್ವನಿತು ಪೊನ್ನಂ ಕೊಟ್ಟು ಮುನ್ನಮೆ ಸಮಕಟ್ಟಿ ಕೊಲ್ಲೆಂದಾತನ ಕಯ್ಯೊಳ್ ಕೊಟ್ಟು ಕಳೆದಿತ್ತಲ್ ॥ ೧೦೩

[ಸಾವಿಲ್ಲದೊಡೀಕೂಸಿನ
ಭಾವಮುಮಿಾಶಿಶುವಿನೋಜೆಯುಂ ಗುಣಮುಂ ಸ ।
ದ್ಭಾವಮುಮೊಳ್ಪಂ ಸಕಳೋ
ರ್ವೀವಳಯಮುಮನೆಱಗಿಪ್ಪುದಿದು ಸಂದೆಯಮೇ] ॥ ೧೦೪

ಎನ್ನನೆ ನಂಬಿ ತನ್ನ ಸತಿಯುಂ ಗುಣಪಾಳನುದಾತ್ತವೈಶ್ಯವಂ
ಶೋನ್ನತನಚ್ಚಿಱಿಂದಿರಿಸಿ ಪೋದನಮಂಗೆ ಮನೋನುರಾಗದಿಂ
ದೆನ್ನ ಸಖಿತ್ವಮಂ ಮೆಱೆದು ಕೂಸುಮನೀಕೆಯುಮಂ ಸಮಂತು ಸಂ
ಪನ್ನತೆಯಿಂದಮೊಪ್ಪಿಸುವ ಭಾಗ್ಯಮನಾಂಪಡೆಯೆಂದುರಾತ್ಮನಂ ॥ ೧೦೫

[ಪೊಂಗಂ ಮುದದಿಂದಾದಿ
ತ್ಯಂಗಂ ಪುಟ್ಟಿದವೊಲಧಿಕತೇಜಂ ಚೆಲ್ವಿಂ ।
ಗಂಗಜನನಿಱಿಪ ರೂಪು ಬೆ
ಡಂಗುಂ ಸತ್ತೆನಗೆ ಪೊಲ್ಲದಾಯ್ತೆಂದಟ್ಟಿಂ] ॥ ೧೦೬

ಎಂದು ಧನಶ್ರೀಯ ಮನದ ಸಂಕಲ್ಪಂ ಪೋಪಂತಾಗೆ ಮಾಯಾವಿ ಪ್ರಳಾಪಂಗೆಯ್ಯೆ ಧನಶ್ರೀ ಅವನ ಮನದ ಕಪಟಮನಱಿಯದೆ ನಿಶ್ಚಯ ಮತ್ತಪನೆಂದು ನಂಬಿ ದುಃಖಮನಾಱಿಸಲೆಂದಿಂತೆಂದಳ್ ॥ ೧೦೭

---

[1] ಕೈಯೆಡೆ (ಬ. ಕ.) [2] ನೋಡ (ಕ. ಬ.)

ಕೞಿದವರ್ಗೇಕೆ ಪಂಬಲಿಪುದೇಕೆ ಪಲುಂಬುವುದೇಕೆ ಚಿತ್ತದೊಳ್
ಕೊಱಚೆವುದದೇಕೆ ಚಿಂತಿಸುವುದೇಕೆ ಬೞಲ್ವುದದೇಕೆ ದುಃಖದೊಳ್
ಮುೞುಗುವುದೇಕೆ [1] ಬಾಯ್ವಿಡುವುದೇಕೆ ಕನಲ್ವುದದೇಕೆ ಶೋಕದೊಳ್
ಪಳಯಿಸುತಿರ್ಪುದೇಕೆ ಬಗೆಗೆಟ್ಟು ಬೞಲ್ವುದದೇಕೆ ನೋವುದೋ ॥ ೧೭೮

ಬೇಡೆಂದು ವಾಣಿಸುವುದುಂ ಮಾಯಾವಿಪ್ರಳಾಪಮಂ ಮಾಣ್ದು [ಋಷಿಯರ ವಚನಮಂ ಪುಸಿಮಾಡಿದೆರ್ದೆಯುಂ ನೀವಿಕೊಂಡು ಮಗವು ಸತ್ತುದೆಂದು ರಾಗಿಸಿ] ದನಿತ್ತಲ್ ಪೊಲೆಯುಂ ಪಸುಗೂಸಂ ನಿರ್ಮಾನುಷ್ಯಮಪ್ಪಡವಿಗೊಯ್ದು ಗಂಟಲಂ ಮುಱಿದು ಕೊಲ್ವೆನೆಂದು ಮಗವಂ ನೋಡುವುದುಂ ॥ ೧೭೯

ಅರುಣತೆಯಿಂದಮೊಪ್ಪುವಧರಂ ಕನಕಚ್ಛವಿ ನೀಳ್ದ ಬಾಹು ಪಂ
ಕರುಹಮುಖಂ ನಿಮಿರ್ಕೆವಡೆದೊಪ್ಪುವ ನಾಭಿ ನೊಸಲ್ ಪೊದಳ್ದ ಭಾ
ಸುರತರಕೆಂಪಿನಿಂದೆಸೆವ ಪಾಣಿತಳಂ ನಸುಗೆಂಪನಾಳ್ವಸ
ತ್ತರಳವಿಲೋಚನೋದಯಮುಮಗಲ್ದುರಮುನ್ನತಿವೆತ್ತ ಮಸ್ತಕಂ ॥ ೧೮೦

ಸೊಗಯಿಸಿ ತೋಱಿ ಕರಂ ಮಿಗೆ
ಮೊಗಮಂ ನೋಡುತ್ತೆ ನಲಿವ ಶಿಶುವಂ ಪೊಲೆಯಂ ।
ಮಿಗೆ ನೋಡಿ ನೋಡಿ ತನ್ನೊಳ್
ಬಗೆದಂ ದಯೆ ಪುಟ್ಟೆ ಮೋಹಮೊದವಿರೆ ಮನದೊಳ್] [2] ॥ ೧೮೧

ಕೊಲೆಯನುಡುಗಿ ಬಂದು ಪಳ್ಳದೊಳ್ ಮಳಲಂ ಬಗೆದು ಮಾವಿನೆಳದಳಿರ್ಗಳಂ ಪಾಸಿ ಕೂಸನಲ್ಲಿ ಪಟ್ಟಿರಿಸಿ ಸುರರಾಜನಿಭನಪ್ಪೀತನೀತೀವ್ರಮಪ್ಪ ಬಿಸಿಲೊಳ್ ತಾನೆ ಹುಡುಹುಡನೆ ಮಗ್ಗಿ ಮಿಡುಮಿಡು ಮಿಡುಕಿ ಸಾಯದೆ ಮಾಣನಾನೇಕೆ ಪಾಪಮಂ ಮಾಡಿಕೊಳ್ವೆನೆಂದುಸಿರದೆ ಪೋದನನ್ನೆಗಮಿತ್ತಲಾತನ ಪುಣ್ಯಮೆ ಬರ್ಪಂತೆ ಖಿಲ್ವಬಿಲ್ವಸಂಯೋಗದಿಂ ಶ್ರೀದತ್ತಸೆಟ್ಟಿಯ ಮೈದುನನಪ್ಪಿಂದ್ರದತ್ತಸೆಟ್ಟಿ ಪರದುವೋಗುತ್ತುಮಲ್ಲಿ

---

[1] ಕೊಲೆವುದದೇಕೆ ಚಕ್ಕನೆ ಮನಂ ಮುಱಿದಿರ್ಪುದದೇಕೆ ಮಲ್ಕಲು ಮುೞುಗುತೆ ಮತ್ತೆ (ಗ)

[2] ನೋಡಿ ಚೆಲುವನಪ್ಪ ಕೂಸಂ ಕಂಡು (ಗ)

[ಬಿಟ್ಟಿರ್ಪುದುಂ, ಆತನ ಬೇಡಿನವರಿಂಧನಾರ್ಥಮೆತ್ತಿತ್ತ ತೊಟಿಲುತ್ತು ಮೆಳದಳಿರಮೇಲೆ ಪಟ್ಟಿರ್ದು ನಲಿವ ಶಿಶುವಂ ಕಂಡು ॥ ೧೩೨

ಕರವೊಳ್ಳಿತಾಯ್ತು ಸೆಟ್ಟಿಗೆ
ಪಿರಿದುತ್ಸವಮಾಗೆ ರಾಗದಿಂ ಶಿಶುವಂ ನಾಂ ।
ತ್ವರಿತದಿನೆಯ್ದೊಪ್ಪಿಸಿ ಕೊಡೆ
ಪಿರಿದಪ್ಪೊಂದರ್ಥಲಾಭಮುಂ ನಮಗಕ್ಕುಂ ॥ ೧೩೩

ಎಂದು ಕೂಸಂ ನಿಧಾನಮನೆತ್ತುವಂತೆತ್ತಿ ಕೊಂಡು ಬಂದಿಂದ್ರದತ್ತಸೆಟ್ಟಿಗೊಪ್ಪಿಸುವುದುಂ ತನಗೆ ಮಕ್ಕಳಿಲ್ಲದುದಱಿಂ ಬಡವಂ ಕಡಾರದ ಪೊನ್ನಂ ಕಂಡಂತೆ ಪೆರ್ಚಿ ತನ್ನ ಭಾರ್ಯೆ ಶ್ರೀದತ್ತನ ತಂಗೆಯಪ್ಪ ರಾಧೆಯಂ ಕರೆದು ನಿನಗೆ ಪುತ್ರಲಾಭಮಾಯ್ತೆಂದು ಬಾಲಾರ್ಕಸನ್ನಿಭ ಶಿಶುವಂ ಕೊಟ್ಟು ಕೂಸಂ ತಂದವರ್ಗೆ ಗುಪ್ತದಿಂ ಬೇಳ್ಪನಿತು ಪೊನ್ನಂ ಕೊಟ್ಟು ಸೆಟ್ಟಿತಿ ಗೂಢಗರ್ಭದಿಂ ಗಂಡುಗೂಸಂ ಪೆತ್ತಳೆಂದೊಸಗೆಯುಮಂ ಜಿನಾಭಿಷೇಕಪೂಜೆಯುಮಂ ಮಾಡಿ ಸಂತೋಷದಿಂದಿರ್ಪುದುಂ ॥ ೧೩೪

ಪಡೆದನೊರ್ವ್ವವ ಪುತ್ರನಂ ಸುರರಾಜಸನ್ನಿಭನಂ ಮನಂ
ಬಿಡೆ ಮನೋಭವರೂಪನಂ ಪಡೆದಿಂದ್ರದತ್ತವಣಿಗ್ವರಂ
ತಡೆಯದೆಂಬುದನಯ್ದೆ ತೊಟ್ಟನೆ ಕೇಳ್ದು ವಿಸ್ಮಯಮಾದುದೆಂ
ದುಡಗದಾವಚನಕ್ಕೆ ನಾಡೆಯುಮಳ್ಕಿ ಬಳ್ಕಿ ನಿರಂತರಂ] [1] ॥ ೧೩೫

ಎನ್ನ ತಂಗೆಯಪ್ಪ ರಾಧೆಗೆ ಗರ್ಭಮಿಂದುವರಮಿಲ್ಲೆಂಬುದನಿಂಬಾಗಿ ಬಲ್ಲೆಂ ಭೋಂಕೆನೆ ಮಗನಂ ಪಡೆದಳೆಂಬ ಮಾತಾದುದು ಧನಶ್ರೀಯ ಮಗನಕ್ಕುಮೋ ವಿಪರೀತಮಿದನಾರ್ಯೆವೆನೆಂದು ಬೆಗಡುಗೊಂಡು ತಂಗೆಯ ಮನೆಗೆ ವಂದು [ಗುಣಪಾಲಸೆಟ್ಟಿಯೊಳಚ್ಚೊತ್ತಿದಂತಪ್ಪ ಶಿಶುವಂ ಕಂಡಱಿದು ಬೆರ್ಚಿ] [2] ಕಲ್ಲಂ ತಾಗಿದ ಮಿಾಂಟೆಯಂತೆ ಮುಟ್ಟು

[1] ಬಿಟ್ಟು ಕೂಸಂ ಕಂಡು ತನ್ನ ಪೆಂಡತಿಯಪ್ಪ ರಾಧೆಗೆ ಕೊಟ್ಟು ಗೂಢಗರ್ಭದಿಂ ಗಂಡುಗೂಸಂ ಪೆತ್ತಳೆಂದು ತನ್ನ ಪುರಕ್ಕೆ ಪೋಗಿ ರಾಗದಿಂದಿರ್ಪುದುಮದಂ ಶ್ರೀದತ್ತಸೆಟ್ಟಿ ಕೇಳ್ದಿಂತು (ಗ) [2] ಕೂಸಂ ನೋಡಿ (ಗ)

ಗೆಟ್ಟ ಪೆಂಡಿರ ಪೊಲ್ಲಮೆಯುಂ ಕಂಡ ಗಂಡನಂತೆ ಮನಂಮುಱಿದು ಬೇಸ ಗೆಯೊಳುಪ್ಪಂ ತಿಂದನಂತೆ ಮೆಲ್ಲಮೆಲಂ ಮಱುಗಿ ಮತ್ತಂ ಕೊಲ್ವೆನೆಂಬ ಬಗೆಯುಂ ತಂದುಪಾಯದಿಂ [ಶ್ರೀದತ್ತಸೆಟ್ಟಿ ಪುಸಿಗೂರ್ಮೆಯಿಂದಿಂದ್ರ ಸೆಟ್ಟಿಯನಿಂತೆಂದಂ ॥ ೧೩೬

ಅನುಜೆಗೆ ಪುತ್ರರಿಲ್ಲ ಸಿರಿಯುಂ ಧನಮುಂ ವ್ಯಥೆಯಾದುದೆಂದು ಮ
ನ್ಮನದೊಳಗಾಗಳುಂ ಮಱುಗುತಿರ್ದೆನಿಳಾವಳಯೈಕವಂದ್ಯನಂ
ತನಯನನೀಗಳರ್ತಿವೆರಸಾದರದಿಂ ನೆಱೆ ಕಂಡು ಸಂತಸಂ
ಮನದೊಳುದಾತ್ತಮಾದುದೆಲೆ ಪೋದುದು ಚಿಂತೆಯುಮೆನ್ನ ದುಃಖ
ಮುಂ॥ ೧೩೭

ಎಂದು ಚಾಟುಕಾರವಚನಂಗಳಿಂ ನಂಬೆ ನುಡಿದು ತಂಗೆಯ ಮೈದುನನ ಮೊಗಮಂ ನೋಡಿ ಮುನ್ನಪ್ಪೊಡಿನಿತುಕಾಲಮಱಿಯದ ನಲ್ಲಿಂ ರಾಧೆಗೆ ಗರ್ಭಮಿಲ್ಲೆಂಬುದಂ ಬಲ್ಲೆನಿದೆನಗಾಶ್ಚರ್ಯಮಾದ ಪುದಿದನೆನಗಱಿಪಂತಾಗೆ ಪೇೞಿಮೆನೆ ದಿಟಮಿಾತನೆನಗೆ ಕೂರ್ಪನೆಂದು ಕೂಸಿನ ವೃತ್ತಾಂತಮೆಲ್ಲಮಂ ಪೇೞೆ ರಾಧೆಯು ಮಾತಂ ಕೇಳ್ದು ಕೃತಕದಿಂ ರಾಗಿಸಿ ॥ ೧೩೮

ಬಸಗೆಯನಿಂಬಾಗಿರೆ ಸಂ
ತಸದಿಂ ಮಾಡಿಸೆನೆ ಗೆವುವುಗೇನೊಪ್ಪಿರೆ (?) ಕ ।
ಟ್ಟಿಸೆನೆ ಬಯಕೆಯುಮನೀಯೆನೆ
ಪೊಸತಾಗಿರೆ ನಂಟರಕ್ಕಱಿಂ ನೋಡುವಿನಂ ॥ ೧೩೯

ಬಡವರ ಮಕ್ಕಳಂತೆ ಹೀನೋತ್ಸಾಹಮಂ ಮಾಡದೆನ್ನ ತಂಗೆಯು ಮೆನನ್ನಳಿಯನುಮನೆನ್ನೂರಿಂಗೊಡಗೊಂಡು ಪಿರಿದಪ್ಪುತ್ಸಾಹಮಂ ಮಾಡವೇೞ್ಪುದೆಂದಿಂದ್ರದತ್ತಸೆಟ್ಟಿಯುಮನೊಡಂಬಡಿಸಿ ರಾಧೆಯು ಮಂ ಕೂಸುಮನುಜ್ಞಯಿನಿಗೊಡಗೊಂಡು ಬಂದು ಕಪಟೋತ್ಸಾಹಮಂ ಮಾಡಿ ಕೆಲವುದಿವಸಂಬೞಿಕ್ಕೆ ನಿಷ್ಠುರನಪ್ಪೊರ್ವ ಮಾದೆಗಂಗೆ ಪಿರಿದ

ಪ್ಪರ್ಥಮುಂ ಕೊಟ್ಟೊಡಂಬಡಿಸಿ ಕೂಸಂ ನಡಪುವ ದಾದಿಯನೊಡಂಬಡಿಸಿ ಕೂಸು ಸತ್ತಿತೆಂದು ಮಾಡಿ ಪೊರಗಣ್ಗೊಯ್ದು ಮಾದೆಗನ ಕೈಯೊಳ್ ಕೊಲ್ಲೆಂದು ಕೊಟ್ಟಟ್ಟಿ ರಾಧೆಯುಮಂ ತನ್ನ ಪೆಂಡತಿಯಪ್ಪ ವಿಶಾಖೆ ಯುಮಂ ತನ್ನ ಮಗನಪ್ಪ ಮಹಾಬಳನುಮಂ ನಂಬಿಸಲ್ವೇಡಿ ಮಾಯಾ ಪ್ರಳಾಪಮಂ ಪಣ್ಣಿ ॥ ೧೪೦

ಪಿರಿದಪ್ಪರ್ಥವನೀವೆನೆನ್ನ ಮಗಳಂ ಕೂರ್ತೀಗಳೀವೆನ್ಟ್ರಿತರ್ಗೆ ಮಾ
ಣ್ದಿರದುತ್ಸಾಹಮನೀಪುರಕ್ಕೆ ವಿಭವಂ ತಾನಾಗೆ ಮಾಳ್ಪೆಂ ನರೇ
ಶ್ವರನಂ ಮಾಣಿಸಿ ಭೂಷಣಾವಳಿಗಳಂ ಚೆಲ್ವಾಗಿ ಮುಂದಿರ್ದ ಚೆ
ಚ್ಚರದಿಂ ಮಾಡಿಸಿ ಕೂರ್ಮೆಯಿಂ ಕುಡುವೆನೆಂದಿರ್ದೆಂ ಮಹೋತ್ಸಾ
ಹದಿಂ ॥ ೧೪೧

ಎನ್ನ ಪಡೆದೊಡವೆಗಂ ವೈ
ಶ್ಯೋನ್ನತನೆನಿಸಿರ್ದ ನಿನ್ನ ತಂದೆಯು ಪಡೆದಾ ।
ಪೊನ್ನಿಂಗೆ ನೀನೆ ಮುಖ್ಯನೆ
ನಿಕ್ಕುಂ ನಿನ್ನಂತು ಭಾಗ್ಯಹೀನರುಮೊಳರೇ] [1] ॥ ೧೪೨

ಅನಿಮಿಷಸನ್ನಿಭನಂ ಚಂ
ದ್ರನನಿಱುಸುವ ಸೌಮ್ಯರೂಪನಂ ಪಡೆದುಂ ನಂ ।
ದನನಂ ಪಡೆಯದ ತೆಱದಿಂ
ನಿನಗಾದುದು ದುಃಖಮುಕ್ಕ ಪಾಪೋದಯದಿಂ ॥ ೧೪೩

ಕಂದರ್ಪನಿಭಂ ತಂಗೆಗೆ
ನಂದನನುದಯಾರ್ಕತೇಜನಾದಂ ಲೇಸಾ ।
ಯ್ತೆಂದಿರ್ದೆನೆನ್ನ ತನು ದ
ಳ್ಳೆಂದುರಿದಪುದೀಗಳೆತ್ತ ಪೋಪೆನೊ ಕಱುವೇ ॥ ೧೪೪

[1] ತನ್ನ ತಂಗಿಯಪ್ಪ ರಾಧೆಯುಮಂ ಕೂಸುಮಂ ತನ್ನ ಮನೆಗೊಡಗೊಂಡು ಬಂದು ಕೆಲವುದಿವಸಮಿರಿಸಿ ಕೃತಕದಿಂ ಮುನ್ನೊರ್ವ ಮಾದೆಗನನೊಡಂಬಡಿಸಿ ಕೂಸು ಸತ್ತುದೆಂದು ಮಾಡಿ ಪೊಱಗೊಯ್ದು ಮಾತಂಗನ ಕಯ್ಯೊಳ್ ಕೊಲ್ಲೆಂದು ಕೊಟ್ಟಟ್ಟಿ ರಾಧೆಯುಮಂ ತನ್ನ ಪೆಂಡತಿಯಪ್ಪ ವಿಶಾಖೆಯುಮಂ ತನ್ನ ಮಗನಪ್ಪ ಮಹಾಬಳನುಮಂ ನಂಬಿಸಲ್ವೇಡಿ ಮಾಯಾಪ್ರಲಾಪಮಂ ಪಣ್ಣಿ (ಗ)

ಎಂದು ತಂಗೆಯಱೇಲಿಲುವಿಱಯುಲುಂ ನೋಡಿ ಕೃತಕದಿಂ ಪ್ರಳಾಪಂಗೆಯ್ಯುತಿರ್ದನಿತ್ತಲ್ ಮಾದೆಗಂ ಕೂಸನಡವಿಗೊಯ್ದು ಗಂಟಲಂ ಮೆಟ್ಟಿ ಕೊಲ್ವೆನೆಂದು ಕೂಸಂ ಪೆಗಲಿಂ ನೆಲಕ್ಕಿಱಿಪುವುದುಮಿಱಿಯಲೊಲ್ಲದೆ ಮಾದೆಗನ ಪಱಿಗಡ್ಡಮನೆಡಗಯ್ಯೊಳ್ ಪಿಡಿದು ಬಲದ ಕಯ್ಯೊಳ್ ಮೊಗಮಂ ಪೊಯ್ಯುತ್ತುಂ ಕುಂಕುಮದುರುಳಿಯನನುಕರಿಸಿರ್ಪ ಮಡಂಗಳಿಂದೆರ್ದೆಯನೊದೆಯುತ್ತುಮಿರೆ ದುರಾತ್ಮಂ ಶಿಶುವಿನ [ರೂಪುಮಂ ಗಾಡಿಯುಮಂ ವಿಳಾಸಮುಮಂ] ಮುದ್ದಾಟಮುಮಂ ನೋಡಿ ಕರುಣಮುಂ ಸ್ನೇಹಮುಂ ತೀವ್ರಮಾಗೆ ಕೊಲಲಾಱದೆ ತೊಱೆಯ ಪುಳಿನಸಳದೊಳ್ ಮಳಲ ಪಾಸಂ ಮಾಡಿ ಮೆಲ್ಲನಲ್ಲಿ ಪಟ್ಟಿರಿಸಿ ನಿನ್ನ ಮೆಚ್ಚಿದಂತಾಗೆಂದು ಪೋದನನ್ನೆಗಂ ॥ ೧೪೫

ತೊಱೆಯೊಳ್ ನೀರುಣಲೆಂದು ಬಂದು ತುಱುಗಳ್ ಪಟ್ಟಿರ್ದ ಪೂರ್ಣೇಂದುವಂ
ನೆಱೆ ಪೋಲ್ತುನ್ನತನಂ ಸುರೇಂದ್ರನಿಭನಂ ತದ್ಬಾಲನಂ ಕಂಡು ಮೂ
ಗಿಱಿಯುತ್ತುಂ ಕುಡಿವಾಲಮೆತ್ತಿ ಕೆನೆಯುತ್ತಾನಂದದಿಂ ಸುತ್ತಿ ಮು
ತ್ತಿಱಿದತ್ತಿತ್ತಲವುಂಕಿ ಪೋಗದಿರೆ ಕಂಡೆಯ್ತಂದು ಗೋಪಾಲಕರ್ ॥೧೪೬

[ಇದೇನಾನೊಂದಾಶ್ಚರ್ಯಮಾಗಲೆವೇೞ್ಕುಮೆಂದು ಬಳಸಿರ್ದ ಜೀವಧನಂಗಳಂ ತೊಲಗಬಡಿದು ನೋೞ್ಪುದುಂ ॥ ೧೪೭

ಲೀಲೆಯೊಳ್ ಮಳಲ ಜಗಲಿಯ
ಮೇಲೆ ಸರೋಜಾತಸಖಗೆ ಮಿಗಿಲೆನಿಸುವ ಸ।
ಲ್ಲೀಲೆಯ ತೇಜೋಧಿಕನಂ
ಬಾಲಕನಂ ನಲಿಯುತಿರ್ದನಂ ಕಂಡಾಗಳ್ ॥ ೧೪೮

ಈತಂ ಭಾವಿಸಿ ನೋೞ್ಪೊಡೆ
ಭೂತಳನಾಥಂಗೆ ಪುಟ್ಟಿದನ್ನಂ ಧರಣೀ ।
ಖ್ಯಾತಂ ಕೇವಲಮಲ್ಲಂ
ಪ್ರೀತಿಯಿನೀಶಿಶುವನೊಯ್ದು ಕರಮುತ್ಸವದಿಂ ॥ ೧೪೯

ನಮ್ಮಾಳ್ದಂಗೆ ಕುಡುವೆನೆಂದು ಗೋಪಾಲರಾಶಿಶುವನೆತ್ತಿಕೊಂಡು ಬಂದು ಗೋವಿಂದನೆಂಬ ತುೞುಗಾೞಂಗೆ ಕುಡುವುದುಮಾತಂ ಕರಮೊಸೆದು ಗೋಪಾಲರ್ಗೆ ಮೆಚ್ಚುಗೊಟ್ಟು ತನ್ನ ಪೆಂಡತಿಯಪ್ಪ ನಂದೆಯೆಂಬ ತುೞುಗಾರ್ತಿಯುಂ ಕರೆದು ಪುತ್ರಲಾಭಮಾದುದೆಂದು ಮಗನಂ ಕೊಟ್ಟು ತುೞುಪಟ್ಟಿಯೊಳೂಸಗೆಯುಂ ಮಾಡಿ ಕೂಸಿಂಗೆ ಧನಕೀರ್ತಿಯೆಂದು ಪೆಸರಿಟ್ಟು ಕೊಂಡಾಡಿ ನಡಪುತ್ತುಮಿರ್ಪುದುಂ ಶುಕ್ಲಪಕ್ಷದ ಚಂದ್ರನಂತೆ ಬಳೆದು] [1] ॥ ೧೫೦

ಧನಕೀರ್ತಿಕುಮಾರಂ ಕಾ
ಮನಿಭಂ ತುೞುಪಟ್ಟಿಗರಸನಾಗಿರ್ಪಿನೆಗಂ ।
ಮನಮೊಲ್ದೊಂದುದಿನಂ ವೈ
ಶ್ಯನುತಂ ಶ್ರೀದತ್ತಸೆಟ್ಟಿ ಕರಮಾದರದಿಂ ॥ ೧೫೧

ತನ್ನ ಮಗಳಪ್ಪ ಶ್ರೀಮತಿಯ ಮದುವೆಯುಂ ಮಾಳ್ಪೆನೆಂದು ತುಪ್ಪಮಂ ಕೊಳಲೆಂದು ಪಲಂಬರ್ ಭೃತ್ಯರ್ವೆರಸು ತುೞುಪಟ್ಟಿಗೆವಂದು ಗೋಪಾಲಪರಿವೃಢನಾಗಿರ್ದ ಧನಕೀರ್ತಿಕುಮಾರನಂ ಕಂಡು ಗುಣಪಾಲಸೆಟ್ಟಿಯ ಮಗನಪ್ಪನೆಂದು ನಿಶ್ಚಯಿಸಿ [ಮನದೊಳ್ ಬೆಗಡುಗೊಂಡು ॥ ೧೫೨

ಪಿಂಗದೆ ನಾನಾಮಾದೀ
ಗಂಗೆ ಮಹಾನಿಷ್ಠುರಂಗೆ ಪಲವಂ ಪೊನ್ನಂ ।
ಭಂಗಿಯೊಳ್ ಕೊಟ್ಟು ಮತ್ತೊಂ
ದಂ ಗಡ ಬಗೆದಳಿಪದೊಯ್ದು ಬೇಗಂ ಶಿಶುವಂ ॥ ೧೫೩

ಕೊಲ್ಲೆಂದಟ್ಟಿದೊಡಾತಂ
ಕೊಲ್ಲದೆ ಕಡುಕಷ್ಟನಾಗಿ ತುೞುಗಾೞಂಗಿ ।

1 ಕಂಡು ತಮ್ಮಾಳ್ದನಪ್ಪ ಗೋವಿಂದನೆಂಬ ತುೞಂಗಾೞಂಗಱಿಪುವುದುಮಾತಂ ಶಿಶುವಂ ಮನೆಗೊಯ್ದು ಧನಕೀರ್ತಿಯೆಂಬ ಪೆಸರನಿಟ್ಟು ನಡಪುವುದುಂ (ಗ)

ತ್ತಲ್ಲಿಯುಮರ್ಥವನೋವದೆ
ಮೆಲ್ಲನುಪಾರ್ಜಿಸಿದನಕ್ಕುಮತಿಲೋಭತೆಯಿಂ ॥ ೧೫೪

ಆದೊಡಮೇನಾಯ್ತು ಬೊಜಂಗನ ಕಷ್ಟತಿಕ್ಕೆಯುಲ್ಲದೆ ಸೂಳೆ ಗಂಡರಿಲ್ಲದಿರಳೆಂಬಂತೆ ಮಾದೆಗನ ಕಷ್ಟತಿಕ್ಕೆಯುಕ್ಕುಮಲ್ಲದಾನೆಂತುಮಿ ವನಂ ಕೊಲ್ಲದೆ ಮಾಣೆನೆಂದು ತನ್ನೊಳ್ ಗುಜುಗುಜಿಸಿಕೊಂಡು ತುಱು ಗಾಱನಂ ವಸ್ತ್ರತಾಂಬೂಲಭೋಜನಾದಿಗಳಿಂ ತನಗೆ ವಶಗತಂಮಾಡಿ ಕೆಳಗೊಂಡು ಪತ್ತೆಂಟುದಿವಸಮಲ್ಲಿರ್ದೊಂದು ದಿವಸಂ ಗೋವಿಂದನಂ ಬರಿಸಿ ತಾಂಬೂಲಮಂ ಕೊಟ್ಟು ಶ್ರೀದತ್ತನಿಂತೆಂದಂ ॥ ೧೫೫

ಪಿರಿದಪ್ಪವಸರಮಾದುದು
ಭರವಶದಿಂದೆನ್ನ ಪುತ್ರನಲ್ಲಿಗೆ ಬೇಗಂ ।
ಬರೆದೋಲೆಯನೀಗಳ್ ಚೆ
ಚ್ಚರದಿಂದಂ ಪೋಗಿ ಕುಡುವನಂ ತತ್ಕ್ಷಣದಿಂ ॥ ೧೫೬

ನೀಂ ಪೇೞ್ವುದೆಂಬುದುಂ ಗೋವಿಂದಂ ತನ್ನ ಮಾನಿಸರ ಮೊಗ ಮಂ ನೋಡಿ ಪೇೞಲೆಂದಿರ್ಪುದುಂ ಶ್ರೀದತ್ತನಿಂತೆಂದಂ ॥ ೧೫೭

ಮತ್ತಿನ ಬಂಟರೊಳಾಗದು
ಚಿತ್ತಜನಿಭನೆನಿಪ ನಿನ್ನ ಮಗನಂ ಸೌಂದ ।
ರ್ಯೋತ್ತಮನಂ ಧನಕೀರ್ತಿಯ
ನುತ್ತಮಗುಣಗಣನನಟ್ಟವೇೞ್ಪುದು ಬೇಗಂ ॥ ೧೫೮

ಎಂಬುದುಂ ಗೋವಿಂದಂ ಶ್ರೀದತ್ತಂ ಮುಂ ಕೂರ್ತು ಕೊಟ್ಟ ದ್ರವ್ಯಾದಿಗಳಂ ನೆನೆದು ಮಱುಮಾತನೀಯದೆ ತನೂಜನಂ ಪೋಗವೇ ೞ್ವುದುಂ ತತ್ಕ್ಷಣದಿಂ ॥ ೧೫೯

ಧನಕೀರ್ತಿಗೆ ಕೂರ್ಪಂತೊ
ಯ್ಯನೆ ಮಾಯಾಪುಂಜನಿತ್ತು ತಾಂಬೂಲಮುಮಂ ।

ಧನಮುಮನಾತನ ಚಿತ್ತ
ಕ್ಕನುನಯಮಪ್ಪಂತು ಮಾಡಿ ಕೃತಕದಿನಾಗಳ್ ॥ ೧೬೦

ತನ್ನ ಪಂಕ್ತಿಯೊಳುಣಲಿಕ್ಕಿಸಿ ಚಿತ್ತೋತ್ಸಾಹಮಂ ಮಾಡಿ ತನ್ನ ಪಾಸಿನ ಕೆಲದೊಳ್ ಮತ್ತೊಂದು ಪಾಸನಿಕ್ಕಿಸಿ ನೀನಿಲ್ಲಿ ಪಟ್ಟಿರೆಂದೇಕಾಂತಕ್ಕೆ ಪೋಗಿ ॥ ೧೬೧

ಎನಗೆ ಕೂರ್ಪೊಡೆ ಬೇಗದಿಂ ತಡವಿಲ್ಲದಿಂದೆ ಮಹಾಬಲಾ
ಮನೆಯ ಪಿತ್ತಿಲೊಳೀತನಂ ಪಿಡಿದೊಯ್ದು ಭೋಂಕನೆ ಕೊಂದು ನೆ
ಟ್ಟನೆ ಪೆಱರ್ಗನುರಾಗದಿಂದಮೆ ಪೇೞದೊರ್ವೆಯೆ ಗುಪ್ತದಿಂ
ಮನದೆಗೊಂಡುೞಿಪೂೞ್ವುದೆಂದು ಕಷಾಯದಿಂ ಬರೆದೋಲೆಯಂ॥೧೬೨

ಮುದ್ರಿಸಿ ಬೆಳಗಪ್ಪ ಜಾವದೊಳ್ ಧನಕೀರ್ತಿಯ ಕೈಯೊಳ್ ಕೊಟ್ಟು ಪೋಗೆಂದಟ್ಟುವುದುಂ] [1] ಆತಂ ಪೊಱಮಟ್ಟು ಪವನವೇಗದಿಂ ದುಜ್ಜಯಿನಿಗೆ ವಂದು ಪಥಶ್ರಾಂತನಾಗಿ ಬೞಲ್ದು ಸಿಂಪಾನದಿಯಂ ಪೊಕ್ಕು ಮೆಯ್ಯಂ ಕರ್ಚಿಕೊಂಡು ತೃಷೆ ಪೋಪಿನಂ ನೀರಂ ಕುಡಿದು ತನ್ನದೀತೀರದೊಳೊಪ್ಪುವ ಕೆಂದಳಿರ ಮಾವಿನ ಕೆಳಗೆ ಪಟ್ಟಿರ್ದನನ್ನೆಗ ಮಿತ್ತಲ್, ಮೃಗಸೇನೆಯೆಂಬ ಸೂಳೆ ಪೊತ್ತುಪೋಗಿಂಗೆ ಕೆಳದಿಯರ್ವೆರಸು ಪೊೞಲಿಂ ಪೊಱಮಟ್ಟು ಸಿಂಪಾನದಿಯ ತಡಿವಿಡಿದು ಬರುತ್ತುಂ॥೧೬೩

ಕೆಂದಳಿರೋಳಿಯಿಂ ಮೆಱೆವ ತುಂಬಿಗಳಿಂ ನೆರೆದಿರ್ದ ಕೋಕಿಲಾ
ನಂದದಿನೊಪ್ಪಿ ಮನ್ಮಥಮಹೀಶ್ವರನೋಲಗಶಾಲೆಯಂತಿರಾ
ನಂದದಿನಿರ್ದ ಮಾಮರದ ಚೆಲ್ವು ಲತಾಂಗಿಯ ಕಣ್ಗೆ ಸೋಲಮಂ
ಕುಂದದೆ ಮಾಡೆ ಬಣ್ಣಿಸುತೆ ಮಾಮರನಲ್ಲಿಗೆ ಮೆಲ್ಲನರ್ತಿಯಿಂ ॥ ೧೬೪

---

[1] ಮತ್ತಂ ಕೊಲುವ ಕಜ್ಜಮನೆತ್ತಿಕೊಂಡು ಗೋವಿಂದಂ ತನಗೆ ಪಂನಿಗನಪ್ಪುದಱಿಂದಿವನನೊಂದು ಕಾರ್ಯಕ್ಕಟ್ಟಿದಪೆನೆಂದೊಡಂಬಡಿಸಿ ಮಹಾಬಳಂಗೀತನಂ ಬೇಗಂ ಕೊಲ್ವುದೆಂದೋಲೆಯಂ ಬರದು ಧನಕೀರ್ತಿಯ ಕಯ್ಯೊಳ್ ಕೊಟ್ಟಟ್ಟುವುದುಂ (ಗ)

ಮೃಗಸೇನೆ ಬಂದು ತಚ್ಚೂತಮಹೀಜಾತದ ಕೆಳಗೆ ಪಟ್ಟಿರ್ದ ಜಿನಸಮಯವಾರ್ಧಿವರ್ಧನಚಂದ್ರನಂ ಕಂಡು ಕಳೆದ ಭವಮಂ ಕಣ್ಣಾಱಿದುದೆಂಬ ಮಾತಂ ದಿಟಂಮಾಡಿ ॥ ೧೬೫

ತಂದೆಯನೆ ಕಂಡ ತೆಱದಿಂ
ದಿಂದೀವರನಯನೆ ಮನದೊಳಚ್ಚಿರ್ತು ಮಹೀ ।
ವಂದಿತನಂ ಗುಣನಿಳಯನ
ನಂದಾಗಳ್ ನೋಡಿ ಪೋಗಲಾಱದೆ ಪದೆಪಿಂ ॥ ೧೬೬

ಸಾರೆ ಕುಳ್ಳಿರ್ದು ॥ ೧೬೭

ತಳಿರನಿಱುಸುವ ಪಾದಮಂ ಬಾಳೆಯ ಕಂಬದಂತೊಪ್ಪುವ ನೀಳ್ತೊಡೆಗಳಂ
ಪೊಳೆವ ನಯನಮಂ ನಿಡಿದೋಳನುನ್ನತಿವೆತ್ತ ಲಲಾಟಮಂ ಬಾಯ್ದೆರೆಯಂ
ಕುಲಿಶಚಕ್ರಾದಿಲಕ್ಷಣಾಂಕಿತಮಪ್ಪ ಕೆಂದಳದೊಳೊಪ್ಪುವ ರೇಖೆಗಳಂ
ಜಲರುಹಾನನೆ ಮನಮೋತುನೋಡುತುಂ ಬಂಬಳಬಾಡುತುಂ ಸ್ನೇಹದಿಂದಂ ॥ ೧೬೮

ಅಂತಿರ್ದು ತೊಟ್ಟನೆಕೊಳೆ ಸೋಗಿಲೊಳಿರ್ದೋಲೆಯಂ ಕಂಡು ತಾಂ ಜಾಣೆಯುಂ ಸಕಲಶಾಸ್ತ್ರಪ್ರವೀಣೆಯುಮಪ್ಪುದಱಿಂ ಕಳೆದುಕೊಂಡು ಮುದ್ರೆಯನೊಡೆದು ವಾಚಿಸಿ ನೋಡಿ ಚಿಂತಾಕ್ರಾಂತೆಯಾಗಿ ತನ್ನೊಳಿಂತೆಂದಳ್ ॥ ೧೬೯

ಮನಸಿಜರೂಪನಂ ಸುರಸಮಾನನನುನ್ನತಸೂರ್ಯತೇಜನಂ
ಮುನಿನುತನಂ [1] ಸಮಸ್ತಶುಭಲಕ್ಷಣಯುಕ್ತನನೆಂತು ಕೊಲ್ವೆನೆಂ
ಬಿನಿತನೊಡರ್ಚಿ ಕೊಲ್ವ ಬಗೆದಂದನೊ ತೊಟ್ಟನೆ [2] ಪಾಪಕರ್ಮನೆಂ
ದನುಪಮಚಿತ್ತೆ ನೊಂದು ಸುರಿದಳ್ ಬಸಮಲ್ಲದ ಕಣ್ಣನೀರ್ಗಳಂ ॥ ೧೭೦

---

1 ಮನುನಿಭನಂ (ಗ) 2 ಬಗೆದಂದಪನೇಕೆ (ಗ)

ಅಂತಾಮನದ ನೋವಿಂದಿರಲಾಱದೆ ಸ್ವೈರಣೆಗೆಟ್ಟು ಕಣ್ಣ
ನೀರನಿಕ್ಕಿ ಕುಮಾರನ ಮೋಹದಿಂ ಶ್ರೀದತ್ತನಟ್ಟದೋಲೆಯಂ ಸೀಳ್ದು
ಸಿಂಪಾನದಿಯೊಳಿಕ್ಕಿ ಕೆಳದಿಯನಟ್ಟ ಮನೆಯಿಂದೋಲೆಯುಮಂ ಕಂಠ
ಮುಮಂ ತರಿಸಿ ಮಹಾಬಲ ನನಗೆ ಕೂರ್ಪನಪ್ಪೊಡೆ ಈವೋಲೆಗಂಡಾ
ಕ್ಷಣದೊಳ್ ಶೀಘ್ರಂ ತನ್ನ ತಂಗೆಯಪ್ಪ ಶ್ರೀಮತಿಯನೀತನೊಳ್ ತಡೆಯ
ದಿಂದೆ ನೆರೆಪುವುದು, ನೆರಪದೊಡೆನ್ನಾಣೆ ಕಡೆಗಣಿಸವೇಡೆಂದು ಬರೆದು
ಮುನ್ನಿನಂತೋಲೆಯಂ ಮುದ್ರಿಸಿ ಧನಕೀರ್ತಿಯ ಸೋಗಿಲೊಳಿಕ್ಕಿ
ತನ್ನ ಪಾಸಕ್ಕೆ ಪೋದಳನ್ನೆಗಮಿತ್ತಲ್ ಕುಮಾರನೆಚ್ಚತ್ತು ॥ ೧೩೧

ಪೊೞಲೊಳಗೆ ಬಂದು ವೈಶ್ಯನ
ನಿಳಯಮನಾರಯ್ದು ಪೊಕ್ಕು ವೈಶ್ಯಾತ್ಮಜನಂ ।
ಬಲಯುತನಂ ಕಂಡು ಮಹಾ
ಬಲನಂ ಮಾತಾಡಿ ಮುನ್ನ ಮುಖವಾರ್ತೆಗಳಂ ॥ ೧೩೨

ಶ್ರೀದತ್ತನಟ್ಟದೋಲೆಯ
ನಾದರದಿಂದೀಯೆ ಕಳೆದುಕೊಂಡಂತದನ ।
ತ್ಯಾದರದಿಂ ಪೊಡೆಮಟ್ಟು
ಶ್ರೀದಯಿತಂ ಬಿಟ್ಟು ನೋಡಿ ಸಂತಸದಿಂದಂ ॥ ೧೩೩

ಕರಮೊಳ್ಳಿತೆಯ್ದನಯ್ಯಂ
ಸ್ಮರಸದೃಶನನಿವನನೆನ್ನ ತಂಗೆಗೆ ವರನಾ ।
ಗಿರೆ ಮಾಡಿ ಬಗೆಪೊಡೀಕೆಗೆ
ವರನೀತನೆ ತಕ್ಕನುೞಿದವರ್ ತಗರಿಳೆಯೊಳ್ ॥ ೧೩೪

ಎಂದು ಪೆರ್ಚಿ ಮಹಾಬಲಂ ತಮ್ಮಯ್ಯಂಗತಿಭಕ್ತನಪ್ಪುದಱಿಂದಿ
ದನೇಱಿಸಿರಲಾಗದೆಂದು ತಮ್ಮಬ್ಬೆಯಪ್ಪ ವಿಶಾಖೆಗಱಿಪಿ ಮೌಹೂರ್ತಿ
ಕರಂ ಕರೆದು ಶ್ರೀಮತಿಯ ಮದುವೆಗೆ ದಿವಸಮಂ ಬೆಸಗೊಳ್ವುದುಂ
ಅವರಿಂತೆಂದರ್ ॥ ೧೩೫

ಇಂದೀವಗವಿನ ಮದುವೆಯು
ನೊಂದುಂ ಭಯಮಿಲ್ಲದುತ್ಸವಂಬೆರಸು ಧರಾ ।
ವಂದಿತ ಮಾಡಿದೆಯಪ್ಪೊಡೆ
ಮುಂದೀಯರ್ಣಾಂ ಧರಾತಳಾಧಿಪನಕ್ಕುಂ ॥ ೧೩೬

ಈಲಗ್ನದೊಳ್ಮಹಾಬಲ
ಮೇಲೆನಿಸುವ ನಿನ್ನ ತಂಗೆಗುತ್ಸವದಿಂದಂ ।
ಲೀಲೆಯೊಳ್ ಮದುವೆಮಾಡಿದೊ
ಡಾಲಲನೆಯ ಗಂಡನಿಳಗೆ ವಲ್ಲಭನಕ್ಕುಂ ॥ ೧೩೭

[ಮತ್ತಮಿಂದಿನ ದಿನಶುದ್ಧಿಯುಮಂ ಲಗ್ನದ ಫಲಮುಮಂ ಪೇಳ್ವೊಡೀ ಕನ್ನೆಯುಮೀಕೆಯ ವಲ್ಲಭನುಂ ಜಿನಸಮಯವಜ್ರಪ್ರಾಕಾರರುಂ, ಮಾಳವದೇಶಾಧೀಶ್ವರರುಂ ಸದ್ಧರ್ಮರಾಗಿಗಳುಮಪ್ಪರೆಂದಾದೇಶಂಗೆಯ್ವುದುಂ] [1] ನೈಮಿತ್ತಿಕರ ಮಾತಂ ಮಹಾಬಲಂ ಕೇಳ್ದು ಸಂತೋಷಂಬಟ್ಟು [ಮೆಚ್ಚಿ ಮೆಚ್ಚುಗೊಟ್ಟು ಎಮ್ಮಯ್ಯಂ ದಿನವೊಳ್ಳಿತಪ್ಪ ಕಾರಣದಿಂದವಧಿಮಾಡಿ ಪರನನಟ್ಟಿದ ಕಾರ್ಯಮನೇಱಿಸಲಾಗದೆಂದು] ॥ ೧೩೮

ಸರಸಿಜನೇತ್ರೆಯರ್ ನೆರೆದು ಮಂಗಳಮಂ ಮನವೊಲ್ದು ಪಾಡೆ ಭೋ
ರ್ಗರೆಯೆ ಸಮುದ್ರದಂತೆ ಪಱೆಗಳ್ ಪಲವುಂ ಪಸುರ್ವಂದರೊಪ್ಪೆ ಚಾ
ಮರಮನನಂಗಜಂಗಮಲತಾಂಗಿಯರಿಕ್ಕೆ ಮನೋನುರಾಗದಿಂ
ಪರಸಿ ಸಮಸ್ತಬಂಧುತತಿ ಸೇಸೆಯನಿಕ್ಕಿ ಮಹೋತ್ಸವಂಗಳಿಂ ॥ ೧೩೯

ಶ್ರೀಮತಿಗಂ ಧನಕೀರ್ತಿಗಂ ಪಾಣಿಗ್ರಹಣಂಮಾಡಿ ಸುಖಮಿರ್ಪುದುಂ ಶ್ರೀದತ್ತಸೆಟ್ಟಿ ಧನಕೀರ್ತಿಯನುಪಾಯದಿಂ ಮಗ್ಗಿಸಿದೆನೆಂದು ತನ್ನ ಬುದ್ಧಿಗಂ ಚಾತುರ್ಯಕ್ಕಂ ಮೆಚ್ಚಿ ತುಱುಪಟ್ಟಿಯೊಳೆರಡು ಮೂಱುದಿವಸಂಬರಮಿರ್ದು ತುಱುಪಟ್ಟಿಯಂ ಪೊಱಮಟ್ಟುಜ್ಜಯಿನಿಗೆ ವಂದು ತನ್ನ ಮನೆಯಂ ಪೊಕ್ಕು ತನ್ನ ಮಗಳ್ಗ ಮದುವೆಯಾದ ಧನಕೀರ್ತಿಯಂ ಕಂಡು ಬೆಱಗಾಗಿ ॥ ೧೪೦

1 ಎಂಬುದುಂ (ಗ)

[ಇಂತಲ್ಲದೆ ಕೊಲಬಾರದು
ಸಂತತಮಿಾಖಳನನೆಂದುಪಾಯದೊಳಾನೇ ।
ಕಾಂತದೊಳ್ ಶೀಲೆಯನಟ್ಟಿದೊ
ಡಿಂತಾದುದು ಪುಣ್ಯಮುಳ್ಳವರ್ ಸತ್ತಪರೇ ॥ ೧೮೧

ಬಳಗಿಱಿಯಲೆಂದು ಪೊಕ್ಕು ತಾಂ ಮೊಗರಿಯಪಟ್ಟನೆಂಬಂತೆ ಕಳಲೆಂದು ಪೋಪಾತನನಟ್ಟಿದಂ ... ಮುನಿದಿಂತಲ್ಲದೆ ಸಾಯನೆಂದು ಬಗೆದಿಲ್ಲಿಗಟ್ಟಿದೊಡಂ ಸಾವು ತಪ್ಪಿ ತನೂಜೆಗೆ ಮದವಣಿಗನಾಗಿರ್ದನೆಂದು ಚಿಂತಿಸಿ ಪೊಲೆಯರೊಳಂ ಕೆಟ್ಟುದಂ ಕೆಳೆಯಂಗಮಱಿಪಲಾಗೆಂಬ ನಾಣ್ಣುಡಿಯನವಧಾರಿಸಿ ತನ್ನ ಬಗೆಯನೊರ್ವಂಗಪ್ಪೊಡಮಱಿಪಲೊಲ್ಲದೆನ್ನ ಮುನಿಸಿಂತಲ್ಲದೆ ಪೋಗದೆಂದು ಶ್ರೀಮತಿ ರಂಡೆಯಾದೊಡಮಕ್ಕೆಂದು ಮತ್ತಂ ಧನಕೀರ್ತಿಯಂ ಕೊಲ್ವ ಕಜ್ಜಮನೆತ್ತಿಕೊಂಡು ಮತ್ತಂ॥ ೧೮೨

ಕ್ರೂರನಪ್ಪನನೊರ್ವನಂ ಕ್ಷಣದಿಂ ತಳಾಱನ ನಂಟನಂ
ಬೀರನಂ ಕರೆದೊಯ್ಯನಾತನ ಬೇಡಿದರ್ಥಮನಿತ್ತು ಸಂ
ಹಾರಿಸಿಂದುರಗಾಲಯಕ್ಕೆ ನಿವೇದ್ಯಮಂ ಶುಚಿಯಾಗಿ ವಿ
ಸ್ತಾರದಿಂದಿರುಳಣ್ಣ ತಂದವನಂ ವಿಚಾರಿಸದಾಕ್ಷಣಂ ॥ ೧೮೩

ಎಂದು ಸಮಕಟ್ಟಿ ನಾಗಾಲಯದೊಳಾತನನಿರಿಸಿ ಬಂದು ಮನೆಯವರನಱಿಯಲೀಯದೆ ಅಳಿಯನಪ್ಪ ಧನಕೀರ್ತಿಯಂ ಬೇರೆ ಕರೆದು ನಿನಗಂ ಶ್ರೀಮತಿಗಂ ವಿಘ್ನಮಿಲ್ಲದೆ ವಿವಾಹಮಾಗೆ ನಾಗೇಂದ್ರಂಗೆ ನಿನ್ನಿಂದಮೆ ಚರುವನಿಡಿಸುವೆನೆಂದು ಪರಸಿದೆನದಂ ಪುಸಿಮಾಡಲಾಗದು ಭಯಮಿಲ್ಲದೀನಾಗಾಲಯದ ಧರಣೇಂದ್ರಂಗೆ ತೋಱಿ ಪೊಡೆಮಟ್ಟು ಬಾಯೆಂದು ಬೇರೊಂದು ಮನೆಯೊಳಿರಿಸಿದ ಚರುಗಮಂ ಕುಡುವುದುಂ] [1] ॥ ೧೮೪

---

[1] ಸುಯ್ದು ಧನಕೀರ್ತಿಯನೇಕಾಂತಕ್ಕುಯ್ದು ನೀನೀಚರುವಂ ನಾಗಾಲಯಕ್ಕುಯ್ದು ನಾಗೇಂದ್ರಂಗೆ ತೋಱಿಬಾಯೆಂದಟ್ಟಿ ಪೆಱಗೊರ್ವ ಕ್ರೂರನಂ ಕೊಲ್ವೆಂದಟ್ಟುವುದುಂ ಅವಂ ಮುನ್ನಮೆ ಪೋಗಿರ್ದನನ್ನೆಗಂ ಚರುವನೊಯ್ವಾತನಂ ಮಹಾಬಳಸಿದಿರೊಳ್ ಕಂಡು ಎಲ್ಲಿಗೆ ಪೋದಪೆಯೆಂದು ಬೆಸಗೊಳ್ವುದುಂ ಧನಕೀರ್ತಿಯಿಂತೆಂದಂ (ಗ)

ಉರಗಾಲಯಕ್ಕೆ ನೀನೀ
ಚರುವಂ ಕೊಂಡೊಯ್ದು ನಾಗರಾಜಂಗಿತ್ತು ।
ದರದಿಂ ತೋಱಿ ಬೞಿಕ್ಕಾ
ದರದಿಂ ಪೊಱಮಟ್ಟು ಬರ್ಪುದೆಂದಿರದೆನ್ನಂ ॥ ೧೬೫

ಎಂದು ಮಾವಂ ಬೆಸಸಿದೊಡೆ ಪೋದಪೆನೆಂಬುದುಂ ಮಹಾಬಲಂ ತಮ್ಮಯ್ಯಂಗೆ ಮುನಿದು ॥ ೧೬೬

[ಮರುಳೀಮುದವಣಿಗನನಾ
ದರಿಸದೆ ದೇಸಿಗನನಟ್ಟುವಂತಿರೆ ಮತ್ತೋ ।
ವರನಟ್ಟಿದಿವನ ಕಯ್ಯೊಳ್
ಚರುವಂ ಕೊಟ್ಟಟ್ಟ ಪೊಲ್ಲಗೆಯ್ದಂ ಮೂರ್ಖಂ ॥ ೧೬೭

ಎಂದು ತಮ್ಮಯ್ಯನ ಕಪಟವೃತ್ತಿಯುನಱಿಯದೆ ಬಂದು] ಮೈದುನನ ಕಯ್ಯ ಚರುವಂ ಕಳೆದುಕೊಂಡು ಧನಕೀರ್ತಿಯುಂ ಮನೆಗೆ ಪೋಗೆಂದಟ್ಟಿ ನಾಗಾಲಯಕ್ಕೆ ಮಹಾಬಲನೊರ್ವನೆ ಬಂದು ಭಯಮಿಲ್ಲದೆ ಪುಗುವುದುಂ ॥ ೧೬೮

ಅವರಿವರೆಂದು ಭಾವಿಸದೆ ನೋಡದೆ ಭೋಂಕನೆ ಬಾಗಿಲಲ್ಲಿ ನಿಂ
ದವನವುದೊರ್ತ್ತಿ ಸಾರ್ಚಿ ತಲೆಯಂ ಪಿಡಿದೊತ್ತಿ ಧರಿತ್ರಿಗಿಕ್ಕಿ ಮ
ತ್ತವಯವದಿಂ ಕಱುತ್ತಿಱಿದು ಕೊಂದು ಮಹಾಬಲನಂ ತಳಾಱನಂ
ತವಿತಥಮಪ್ಪ ಪನ್ನಗನಿವಾಸದಿನೋಡಿದನಂಜೆ ನಿರ್ದಯಂ ॥ ೧೬೯

ಅಂತು ಮಹಾಬಲಂ ಪರಲೋಕಪ್ರಾಪ್ತನಪ್ಪುದುಮತ್ತಲ್ ಧನಕೀರ್ತಿಯಂ ಶ್ರೀದತ್ತಸೆಟ್ಟಿ ಮನೆಯೊಳ್ ಕಂಡು ವಿಸ್ಮಯಂಬಟ್ಟು ಸಾರೆ ವಂದು ಚರುವನೇಗೆಯ್ದೆಯೆಂದು ಬೆಸಗೊಳ್ವುದುಂ ಧನಕೀರ್ತಿಯಿಂತೆಂದಂ ॥ ೧೭೦

ಎಮ್ಮ ಭಾವನುದಾರಗುಣಂ ನಾಗಾಲಯದಲ್ಲಿಗೆ ಭಕ್ತಿಯಿಂ
ನಿಮ್ಮ ಪೇಳ್ಕೆಯಿನುತ್ಸವದಿಂ ಪೋಪೆನ್ನನಿದೆಲ್ಲಿಗೆ ಪೋದಪೈ
ಕೆಮ್ಮನೆಂಬುದುಮಾಂ ಭಯದಿಂ ನೀಮೆಂದುದನೆಂದೊಡೆ ಕೋಪದಿಂ
ನಿಮ್ಮನೋವದೆ ಬಯ್ದು ಮಗುಳ್ಳೀನೆಂದು ಮಗುಳ್ಚಿ ನಿವೇದ್ಯಮಂ॥೧೭೧

[ಎನ್ನ ಕಯ್ಯ ಚರುವಂ ಕಳೆದುಕೊಂಡು ನಾಗಾಲಯಕ್ಕೆ ಪೋದನೆಂಬುದುಂ] [1] ಪಾಱ್ವಿಸಿಱೊಳ್ ಸಾಸವೆಯುಂ ಕುಡಿದರಂತೆ ಮೆಱುಗಿ ಸುಂಟಿತಿಂದ ಬಾಯೊಳ್ ಬಿಸನೀರಂ ಕುಡಿದರಂತೆ ಮಿಡುಮಿಡು ಮಿಡುಕಿ ನಾಗಭವನಕ್ಕೊರ್ವನೆ [ಪರಿತಂದು ಕಡಿಖಂಡಮಾಗೆ ಪೊಯ್ಸಿಕೊಂಡು ಸತ್ತಿರ್ದ ಮಗನ ಪೆಣನಂ ಕಂಡು ಮಹಾದುಃಖಿತನಾಗಿ ಮನೆಗೆವೆಂದು ನಗರಜನಕ್ಕಂ ಕಳ್ಳರೆನ್ನ ಮಗನಂ ಕೊಂದರೆಂದು ಕೃತಕದಿಂ ಸಾವಂ ಪ್ರಕಟಂಮಾಡಿ ಪೆಣನಂ ಮನೆಗೆ ತಂದು ಮಱುದಿವಸಂ ಸಂಸ್ಕರಿಸಿ ನೀರಿೞಿದು ಲೌಕಿಕಕ್ರಿಯೆಯೆಲ್ಲಮಂ ನೆಱೆಯೆ ತೀರ್ಚಿ ॥ ೧೯೨

ಮಗನಂ ನೆನೆನೆನೆದಿರುಳುಂ
ಪಗಲುಂ ಪಂಬಲಿಸಿ ಮಱುಗಿ ಕಳ್ಳನ ತಾಯುಂ ।
ತಗಣಿತದುಃಖದಿನೊಳಗೊಳ
ಗೊಗೆದ ಮಹಾಶೋಕದಹನದಿಂ ಬೇಯುತ್ತುಂ ॥ ೧೯೩

ಈತನಂ ಕೊಲಲೆಂದತಿಧೂರ್ತರ್ಗಗ್ಗದ ನಿಷ್ಠುರರಪ್ಪವ
ರ್ಗೀತು ಮಾಣದೆ ಮೂರ್ಖನೆನಾನಂದರ್ಥಮನಿತ್ತೊಡಮೆಲ್ಲರುಂ
ಪ್ರೀತಿಯಿಂ ಕೊಲಲೊಲ್ಲದೆ ಪೋದರ್ ನಾನೆ ದರಿದ್ರನೆನಾದೆನು
ರ್ವೀತಳಸ್ತುತನಪ್ಪ ಮಗಂಗೆ ಕೇಡಿನಿತಾದುದು ಪಾಪದಿಂ ॥ ೧೯೪

ಪಣ್ಣಿಂಗಿಟ್ಟೊಡೆ ಕಾಯ್ ಬಿರ್ದುದೆಂಬ ನಾಣ್ಣುಡಿನುಡಿವರ ಮಾತೆ ನಗಾದುದೆಂದು ಮೊಗಷ್ಮೆಯುಬ್ಬಿ] [2] ಧನಕೀರ್ತಿಯುಮೀಲೆ ತೀವ್ರಮಪ್ಪ ಮುನಿಸಾಗಿ ॥ ೧೯೫

ಎನ್ನ ಕಂದನುದಾರಗುಣಂ ಮತ್ತೀತನ ಕಾರಣದಿಂದೆ ಸ
ತ್ತೆನ್ನನಾಱಡಿಗೊಂಡನಿದಂ ನಾಂ ಚಿಂತಿಸಿ ಸಾಯದೆ ಬುದ್ಧಿಯಿಂ
ದೆನ್ನ ವೈರಿಯನೀತನನಾನಿಂದಿಲ್ಲಿಯೆ ಮೆಲ್ಲನೆ ಕೊಂದು ಕೇ
ಳೆನ್ನ ಚಿತ್ತತೊಳಾದಱಲಂ ನೋವಂ ಚಲದಿಂದಮೆ ತೀರ್ಚುವೆಂ ॥ ೧೯೬

---

[1] ತಾನೊಯ್ದನೆಂಬುದುಂ (ಗ)

[2] ಪರಿದು ನೋಡಿ ಸತ್ತ ಮಗನಂ ಕಳ್ಳರ್ ಕೊಂದರೆಂದು ಸಂಸ್ಕರಿಸಿ (ಗ)

ಎಂದು ಮನದೊಳಾಲೋಚಿಸಿ ವಿಶಾಖೆಯಂ ಕರೆದು ಏಕಾಂತದೊಳ್ ಧನಕೀರ್ತಿಯ ಪ್ರಪಂಚಮನೆಲ್ಲಮನಱಿಪಿ ನೀನೀತನಳಿಯನೆಂದು ಮೋಹಿಸದೆನಗೆ ಕೂರ್ಪೊಡೆನ್ನ ಮಾತನಂತಿಂತೆನ್ನದುದಾಸೀನಂಮಾಡದೆನ್ನಮನದಱಲುಂ ಮಹಾಬಲನ ಪಗೆಯುಂ ಪೋಪಂತು ವಿಷಪ್ರಯೋಗದಿಂದೊರ್ವರುಮಱಿಯದಂತಿಂದುನಾಳಿನೊಳಗೆ ತಡೆಯದೆ ಕೊಲಲ್ವೇಳ್ಕೆಂದು ಕಯ್ಯಂ ಮುಗಿದು ಪ್ರಾರ್ಥಿಸುವುದುಂ ॥ ೧೯೭

[ಸರಸಿಜಾಕ್ಷಿ ವಿಶಾಖೆ ಗಂಡನ ಮಾತನೇಳಿಸಲಾಗದೆಂ
ದುರಗರಾಜಸಮಾನಭೋಗಿಯನಿಂದು ಮಾಣದೆ ಕೊಲ್ವೆನೆಂ
ದಿರದೆ ದೊಡ್ಡಿದುಮಪ್ಪ ಲಡ್ಡುಗೆಯಲ್ಲಿ ತೀವ್ರದ ನಂಜನೋ
ಸರಿಸದಿಕ್ಕಿ ಮಗಳ್ಗೆ ನಿನ್ನ ವರಂಗೆ ನೀನನುರಾಗದಿಂ ॥ ೧೯೮

ತಡೆಯದಿಕ್ಕುವುದೆಂದು ಪೇೞ್ದು ವಿಶಾಖೆ ನೆರೆಮನೆಗೆ ಪೋಗಿ ದೂರ್ತಿಂದಱಿಯದವಳಂತಿರ್ಪುದುಂ ಶ್ರೀಮತಿ ಧನಕೀರ್ತಿಯ ಕಾಲಂ ಕರ್ಚಿ ವಿನಯದಿಂದೊಳಗಣ್ಗೆ ಕರೆದು ಪ್ರಿಯದಿಂದೇಱಲಿಕ್ಕಿ ತಳಿಗೆಯಲಿಕ್ಕುವುದುಂ] [1] ಆ ಪ್ರಸ್ತಾವದೊಳ್ ॥ ೧೯೯

ಹಿಂಸಾವಿರಹಿತನೈ ನೀ
ನಿಂ ಸಲೆ ಬಾಪ್ ಪಾಪಕರ್ಮನೆಂ ಪೆಱರಱಿವಂ ।
ಹಿಂಸೆಯನೆ ಬಯಸಿ ಮಱುಗುವ
ನಾಂ [2] ಸತ್ತಪೆನೆಂದು ಪೂಣ್ದು ಬರ್ಪನ ತೆಱದಿಂ ॥ ೨೦೦

ಶ್ರೀದತ್ತಸೆಟ್ಟಿಯುಂ ಪಸಿದು ಬರ್ಪುದುಂ ಇದಿರಾಗಿ ಪರಿತಂದಾ ಶ್ರೀಮತಿ ಕಾಲಂ ಕರ್ಚಿ ಬೇಗಮೊಳಗಣ್ಗೆ ಕರೆದು ವಿಸ್ತರಮಪ್ಪ ವಿಷ್ಟರಮನಿಕ್ಕಿ ಪಿರಿಯಡ್ಡಣಿಗೆಯುಮಂ ಪರಿಯಣಮುಮನಿಟ್ಟು ॥ ೨೦೧

---

1 ಲಡ್ಡುಗೆಯೊಳ್ ವಿಷಮನಿಕ್ಕಿ ನಿನ್ನ ಮದವನಿಗಗಿವನಿಕ್ಕೆಂದು ಶ್ರೀಮತಿಗೆ ಪೇಳ್ವುದುಂ (ಗ)   2 ಬಯಸಿ ಸಲೆ ಕುದಿದಾಂ (ಗ)

ದ್ದೊಡ್ಡಿದುವಾಗಿ ನುಣ್ಪೆಸೆದು ಸರ್ಕರೆಯೊಳ್ ಸಮನಪ್ಪ ಪೆಂಪಿನಾ
ಲಡ್ಡುಗೆಯಂ ಮನೋಮುದದಿನನ್ನವರಂಗಳಿಪಿಂತೆ ಮುನ್ನಮಾರಿ
ಬಡ್ಡಿಸಿದಂದು ನೋಡ ಪದೆದೀಗಳ ಡೊಂಬಿತಿ ಜೋಡೆ ಸೋಲದಿಂ
ಬಡ್ಡಿಸಿದಪ್ಪಳೆಂದು ನೆಱ ದೂರುವರೆನ್ನನವಜ್ಞೆಯಿಂ ಪೆಱರ್ ॥ ೧೦೨

ಎಂದು ಕಿಱಿಯುವಪ್ಪ ಲಡುಗೆಗಳಂ ಧನಕೀರ್ತಿಗಿಕ್ಕಿ ವಿಷದೊಳ್ ಪುದಿದಿರ್ದ ದೊಡ್ಡಿದುವಪ್ಪ ಲಡ್ಡುಗೆಗಳಂ ತಂದೆಗೆ ಬಡಿಸುವುದುಮಿರ್ವರುಂ ರುಚಿಕರಮಾದುದೆಂದು ಬಾಯ್ಸುವಿಗೆ ಸೋಲ್ತು ಮೆಲ್ವುದುಂ ಶ್ರೀದತ್ತಂ ವಿಷವೇರಾವರಿಸಿ ನಿಲಲಾಱದೆ ಕಣ್ಗಿರಿದು ನೆಲಕ್ಕೆ ಬಿರ್ದು ನಿಶ್ಚೇಷ್ಟನಾಗಿ ಮೆಯ್ಯಱಿಯದೆ ಬೆಸುತ್ತುರ್ ॥ ೧೦೩

ಪೆಱರೞಿವಂ ಬಯಸುವರೀ
ತೆಱದಿಂ ಮತಿಗೆಟ್ಟು ಸಾವರೆಂದೆಲ್ಲರ್ಗಂ ।
ನೆಱೆ ಸಾಱಿ ತೋಱಿ ಬೇಗದಿ
ನಱಿಪುವವೋಲ್ ಯಮಪುರಕ್ಕೆ ಸಂದಂ ಚುಟಿಲಂ ॥ ೧೦೪

[ತಂದೆಯು ನೋವಂ ತೊಟ್ಟನೆ
ನಂದನೆ ಕಂಡಱ್ತು ಬೆರ್ಚಿ ಬಾಯ್ವಿಟ್ಟು ಮನಂ ।
ಗುಂದಿ ಪಿರಿದಪ್ಪ ತಲ್ಲಣ
ದಿಂದಂ ಮೆಯ್ಯಱಿಯದಯ್ಯನಂ ನೋಡುತ್ತುಂ ॥ ೧೦೫

ಇರೆ ಮದವಣಿಗಂ ಮಾವನ
ಮರಣಕ್ಕತಿದುಃಖಮಾಗೆ ಮನದೊಳ್ ಮಱುಗು ।
ತ್ತಿರೆ ಮನೆಯವರೆಲ್ಲಂ ಭೋ
ರ್ಗರೆದೞತುಂ ನೊಂದು ಬೆಂದು ಪೞವಿಸುತಿರ್ದರ್ ॥ ೧೦೬

ಅಂತವರ ಹಾಹಾಕ್ರಂದನಮಂ ನೆರೆಮನೆಯೊಳಿರ್ದ ವಿಶಾಖೆ ಕೇಳ್ದು ಧನಕೀರ್ತಿ ಸತ್ತನೆಂದು ಗಂಡನ ಸಾವನಱಿಯದೆ ರಾಗಿಸಿ ಶ್ರೀದತ್ತಸೆಟ್ಟಿಬೇಳಾಗಿತನ್ನರ್ಥಮಂ ಪಲವುಸೂಱ್ ಕ್ರೂರರಪ್ಪವರ್ಗೆ ಕೊಟ್ಟು

ಕೊಲಲಾಱನಂತಪ್ಪ ಧನಕೀರ್ತಿಯುಂ ಕಿವಿಗೇಳದಂತಱಿಯದಂತನಯವದಿಂದೊರ್ವೆಯ ಘರ್ಮ್ಮನೆ ಕೊಂದೆನೆಂದು ಪೆಟ್ಟುವೆರ್ಚೆ ಪೆಱರಂ ನಂಬಿಸಲ್ವೇಡಿ ಹಾಹಾಶೋಕಮಂ ಪಣ್ಣಿ ಕೇಳ್ದು ಕೆಟ್ಟೆನಱದೆನೆಂದು ಪ್ರುಯ್ಯಲಿಟ್ಟುಱುತ್ತುಮಱಿಯದಂತೆ ಬಂದೊಳಗೆ ಪೊಕ್ಕು ಸತ್ತಿರ್ದ ಗಂಡನುಮಂ ಕೆಲದೊಳ್ ಕುಳ್ಳಿರ್ದಳಿಯನುಮಂ ಕಂಡು ॥ ೨೦೭

ಬೇಱಾಗಿ ತಳೋದರಿ ಮೆ
ಯ್ಯಱಿಯದೆ ನಿಲಲಾಱದೆೞ್ದು ಗೋಱುಟ್ಟುಱುತುಂ ।
ಮಱುಕದಿನಾಣ್ಮನ ಪೆಣನಂ
ಪೆಱಿಮುಱಿ ತಕ್ಕೈಸಿಕೊಂಡು ಕೆಟ್ಟೆನೆನುತ್ತುಂ] [1] ॥ ೨೦೮

ಆನೊಂದಂ ಬಗೆಯಲ್ ಬಿದಿ
ತಾನೊಂದಂ ಬಗೆದು ಮಾಡಿಗರ್ದಿದುದೆನ್ನಂ ।
ನೀನಱವೆಯೆಂದು ಮಾಡಿದೊ
ಡಾನೆಂದೆಂ ಮಗಳ್ ನಿನ್ನ ಪುಣ್ಯಂ ಕಿಱಿದೇಂ ॥ ೨೦೯

[ಕುಂದದೆ ಕಿಱುಯುಂದಿಂತೊ
ಟ್ಟಂದುವರಂ ನಿನ್ನನಱಪುಪಾಯಮನದಟಿಂ ।
ಸಂದಿಸಿ ಮಾಡಿದ ಫಲಮಂ
ಸಂದೆಯಮಿಲ್ಲಣ್ಣ ತಾನೆ ಕಂಡಂ ತುದಿಯೊಳ್] ॥ ೨೧೦

ಕೊಲೆಯಿಲ್ಲದ ಜಿನಧರ್ಮದ
ಫಲದಿಂ ನೀನುಗ್ರಮಪ್ಪ ಕಂಟಕಮಂ ಮುಂ ।
ಪಲಮಂ ನೀಗಿದೆ ಹಿಂಸೆಯ
ಫಲದಿಂದೆನ್ನಾಣ್ಮನೆಯ್ದಿದಂ ಯಮಪುರಮಂ ॥ ೨೧೧

ಮುನಿವರರೆಂದ ದಿವ್ಯವಚನಂ ಪುಸಿಯಪ್ಪುದೆ ಕಂದ ಮಾಳವಾ
ವನಿಪತಿಯಾಗಿ ಜೈನಸಮಯಾಂಬುಧಿಗಗ್ಗದ ಚಂದ್ರನಾಗಿ ಮೇ

1 ಅಂತು ಸಾವುದುಂ ವಿಶಾಖೆ ಕಂಡು (ಗ)

ದಿನಿಪತಿವಂದ್ಯನಾಗಿ ಪರಮಾಂಡಳಿಕರ್ ಬೆಸಕೆಯ್ಯೆ ರಾಜ್ಯಗೋ
ಮಿನಿಧರನಪ್ಪ ನಿನ್ನನಘವಿಂಶ್ರಿತರಿನ್ನೞಿಯಲ್ಕೆ ಬರ್ಕುಮೇ ॥ ೨೧೨

ಎಂದಳಿಯನ ಮೊಗಮಂ ನೋಡಿ ಬಸಿಱಂ ಬಡಿದುಕೊಂಡೞ್ತು ॥ ೨೧೩

ನರಪತಿಪೂಜ್ಯನಪ್ಪ ಧನಕೀರ್ತಿಗೆ ಪೆಂಡತಿಯಾಗಿ ಪುಣ್ಯದಿಂ
ಧರಣಿಯನಾಳ್ದ ಬೆರ್ಚಿ ಬೆಸಕೆಯ್ಯೆ ವಿಳಾಸಿನಿಯರ್ ವಿಳಾಸದಿಂ
ಪರಮವಿಭೂತಿಯಂ ಪಡೆಯಲಿರ್ದವಳಂ ಮುನಿದಕ್ಕ ನಿನ್ನನ
ಚ್ಚರಿಯೆನೆ ರಂಡೆಮಾಡುವಳಿಪಂ ಬಗೆವರ್ಗಱವಾಗದಿರ್ಕುಮೇ ॥ ೨೧೪

ಎಂದು ಮಗಳ ಮೊಗಮಂ ನೋಡಿ ಪಳಯಿಸಿ ತಲೆಯಂ ಪೊಯ್ದು ಕೊಂಡೞ್ತು ನೆರೆದ ನಂಟರ ಬಳಸಿರ್ದ ಪೌರರ ಮೊಗಮಂ ನೋಡಿ ॥ ೨೧೫

ಇರುಳೊಳ್ ಚಂದ್ರನ ರಶ್ಮಿಯಂ ಕಿಡಿಸಲೆಂದಿರ್ಪಾತನುಂ ಕೋಪದು
ಬ್ಬರದಿಂದಂ ಪಗಲೊಳ್ [1] ದಿವಾಕರನ ತೀವ್ರೋಷ್ಣಾಂಶುವಂ ಮಾಣಿಪೆಂ
ಭರದಿಂದೆಂಬನುಮುರ್ವಿಯೊಳ್ ನಿಖಿಲಪುಣ್ಯಾಂಭೋಧಿಯಪ್ಪಾತನಂ
ಪುರುಡಿಂದಂ ಕೊಲಲೆಂದು ಕಾಯ್ವ ನರನುಂ ಗಾಂಪಂ ಪೆಱರ್ ಗಾಂಪರೇ ॥

ಮರುಳಾಗಿ ಕೆಮ್ಮನೀತನ
ನುರಿಯಂ ಕಾಣ್ಬಂತೆ ಕಂಡು ಱಿಕ್ಕಟಮುನಿಸಿಂ ।
ಹರಿಯಿಸುವೆನೆಂದು ಪಾಪದ
ಭರದಿಂ ನರಕಕ್ಕೆ ಜಗುಳ್ದನೆನ್ನಾತ್ಮೇಶಂ ॥ ೨೧೬

[ಪೆಱರಂ ನಂಬದೆ ನಂಬಿ ತನ್ನ ಸತಿಯಂ ಪೋಗುತ್ತುಮಿರ್ದೊರ್ಯ್ಯನ
ಕ್ಕಱನೆನ್ನಣ್ಮನನಾಪ್ತನೆಂದು ಗುಣಪಾಲಂ ಗುಪ್ತದಿಂ ಬುದ್ಧಿವೇ
ೞ್ದಱೆ ತಾಂ ಕೈಯೆಡೆಯೆಂದು ಪೇೞರಿಸಿ ಪೋದಂತಪ್ಪುದಂ ಗಾವಿಲಂ
ಮಱೆದಂತಾತನ ಪುತ್ರನಂ ಕಿಡಿಪೆನೆಂಬಾತಂಗಿದೇಂ ಚೋದ್ಯಮೋ]॥ ೨೧೭

---

[1] ಭರದಿಂ ಪುಣ್ಣಮೆಯೊಳ್ ಶಶಾಂಕನೊದವಂ ಮಾಣ್ಪೆರ್ನೆಂಬಾತನುಂ ಕರಮುಕ್ಕಿಂ ಪಗಲೊಳ್ (ಗ)

ಎಂದು ಕಪಟಮಿಲ್ಲದೆ ಮಾಯೆಯಂ ಬಿಟ್ಟು ಶ್ರೀದತ್ತಂ ಮಾಡಿದ ಪೊಲ್ಲಮೆಯೆಲ್ಲಮನೊಂದುಗುಂದದೆಲ್ಲಮನೆಲ್ಲರ್ಗಮಱಿಪಿ [ಗುಣಪಾಲ ಸೆಟ್ಟಿಯ ಮಗನಂದಱಿಯೆ ಪೇೞ್ದು ಧನಕೀರ್ತಿಕುಮಾರನಂ ಮಾಳವಾಧೀಶ್ವರನಾಗಿ ಜಿನಧರ್ಮದೊಳೆಜೆಯಿಂ ನಡೆದು ಪ್ರಾಣಿಗಳನೋವಿ ವಾತ್ಸಲ್ಯರತ್ನಾಕರನೆನಿಸಿ ಸುಖದಿಂ ರಾಜ್ಯಂಗೆಯ್ಯೆಂದು ಪರಸಿ ಮಗಳುಮಂ ದರ್ಶನಶುದ್ಧಿಯೊಳ್ ಶಚೀಮಹಾದೇವಿಯುಮಂ ಪತಿವ್ರತಾಗುಣದೊಳ್ ಪ್ರಭಾವತಿಯುಮಂ ಸೀತೆಯುಮಂ ದೃಢವ್ರತದೊಳ್ ಚೇಳನಿಯುಮಂ ಸದ್ದರ್ಶನಗುರುಭಕ್ತಿಗಳೊಳ್ ರುಕ್ಮಿಣೀಮಹಾದೇವಿಯುಮಂ ಸುಲೋಚನೆಯುಮಂ ಪೋಲ್ತು ಪಟ್ಟದರಸಿಯಾಗೆಂದು ಪರಸಿ] ಪಲರುಂ ಬೇಡವೇಡೆನೆ ಮನದಚಲಿಂದಿರಲಾಱದೆ ವಿಷಪೂರಿತಮಪ್ಪ ಲಡ್ಡುಗೆಗಳಂ ತಿಂದು ವಿಶಾಖೆಯುಂ ಸಾವುದುಂ ॥ ೨೧೯

ಪುರಜನಮುಂ ಬಾಂಧವರುಂ
ತರಳಾಕ್ಷಿಯ ವಚನದಿಂದಮಱಿದಾತನ ನಿ ।
ಷ್ಕರುಣತೆಗೆ ನಾಡೆಯುಂ ಕೊ
ಕ್ಕರಿಸಿ ಮನಂನೊಂದು ಮಱುಗಿ ಚೋದ್ಯಂಬಟ್ಟರ್ ॥ ೨೨೦

ಜಿನಸಮಯದಾಗಮಂಗಳ
ನನುನಯದಿಂ ಕೇಳದೋದದಾನೊಳ್ಳಿದನೆಂ ।
ದನವರತಂ ಪೊಂಗಿಪರ್ಗ
ತನ ಮಾಡುವ ಧರ್ಮದಲ್ಲಿ ಪುರುಳಱಸುವುದೇ ॥ ೨೨೧

ಚರಿತಪುರಾಣಮುಂ ಸಮಯದುನ್ನತಿಯುಂ ಭುವನತ್ರಯಂಗಳೊಂ
ದಿರವನಪೂರ್ವಮಪ್ಪ ಜಿನಧರ್ಮದ ಪೆಂಪಿನಗುರ್ವುವೆತ್ತ ದು
ರ್ಧರತಪಮಂ [1] ಚತುಸ್ಸಮಯದೊಳೆಜೆಯನೊಳ್ಳಿದನಾಗಿ ನಿಚ್ಚಲುಂ
ವರಮುನಿನಾಥರೊಳ್ ನೆಱೆ ವಿಚಾರಿಸಲೊಲ್ಲದನುಂ ಮನುಷ್ಯನೇ॥ ೨೨೨

---

1 ಅಗುರ್ವುವೆತ್ತ ಲೋಗರ ಮತಮಂ (ಗ)

ಎಂದು ತಮ್ಮೊಳ್ ನುಡಿದು ಶ್ರೀದತ್ತಸೆಟ್ಟಿಯು ಮಾಡಿದ ಕಷ್ಟತೆಗೆ ಬೈದು ಜೈನಧರ್ಮಮನಱಿಯದ ಜಡಂ ಮಾಡದ ಪಾಪಮಿಲ್ಲೆಂದು ಪೇಸಿ ಶ್ರೀದತ್ತನ ವಿಶಾಖೆಯ ಪೆಣಂಗಳ್ಗಂ ದಹನಕ್ರಿಯೆಗಳಂ ಮಾಡಿ ಲೌಕಿಕಕ್ರಿಯೆಯೆಲ್ಲಮಂ ನೆಱೆಪುವುದುಂ ॥ ೧೩೩

[ಪಿರಿದಪ್ಪಾಪತ್ತಂ ಪರಿ
ಹರಿಸಿ ಮಹಾಪುಣ್ಯಮೂರ್ತಿ ಕೀರ್ತಿನಿಧಾನಂ ।
ಪರಮಾರ್ಥಂ ಬದುಕಿದನು
ರ್ವರೆಯೊಳಿದಾಶ್ಚರ್ಯಮೆಂದು ಕೈಮುಗಿದು ಜನಂ ॥ ೧೩೪

ಬಂದೆಕೆೊರಲೊಳ್ ಪೊಗೞುತ್ತುಮಿರೆ ॥ ೧೩೫

ನಿನ್ನಂತು ನೋಂತರಾರ್ ಧೈ
ರ್ಯೋನ್ನತ ನಿನ್ನಂತು ಪುಣ್ಯಮೂರ್ತಿಗಳಾರ್ ನಿ ।
ನ್ನನ್ನರ್ ಗುಣವಂತರದಾರ್
ನಿನ್ನಂತಾರ್ ಧರೆಗೆ ಕೀರ್ತಿಭಾಜನರಾದರ್ ॥ ೧೩೬

ನೀನುಂ ನಿಮ್ಮಯ್ಯನಂತೆ ವೈಶ್ಯಾಗ್ರಗಣ್ಯನುಂ ವಿಶೇಷಪುಣ್ಯನುಂ ಜಿನಸಮಯವಾರ್ಧಿವರ್ಧನನುಮಾಗಿ ಬಾೞೆಂದು ಪುರಜನಮುಂ ಬಂಧುವರ್ಗಮುಂ ನೆರೆದು ಪರಮಾಶೀರ್ವಚನಶತಸಹಸ್ರಂಗಳಿಂ ಪರಸಿ ನಾನಾಪ್ರಕಾರದಿಂ ಪೊಗೞ್ದು] ಶ್ರೀದತ್ತಸೆಟ್ಟಿಯು ಮನೆಗಮರ್ಥಕ್ಕಮೊಡೆಯನಾಗೆಂದಿರಿಸಿ ಪೋದರದಂ ವಿಶ್ವಂಧರಮಹಾರಾಜಂ ಕೇಳ್ದು ॥ ೧೩೭

[ಮಾಳವಪತಿಯಪ್ಪಂ ಗಡ
ಪಾಲಿಸುವಂ ಗಡ ಸಮಸ್ತಭೂಪಾಲಕರಂ ।
ಲೀಲೆಯೊಳ್ ವೀರದೊಳ್ ಬಾ
ಯ್ಕೆಳಿಸುವಂ ಗಡ ಸಮಸ್ತವಸುಧಾತಳಮಂ ॥ ೧೩೮

ಜಿನಸಮಯವರ್ಧನಂ ಗಡ
ಮನವರತಂ ಭವ್ಯಜನವಿನೋದಂ ಗಡ ಮಾ ।

ತನನಿಂದು ನೋೞ್ಪೆವೆಂದಿಂ
ತನುಪಮಗುಣನಿಳಯನಕ್ಕುಱಿಂ ನಲಿಯುತ್ತುಂ ॥ ೨೦೯

ಧನಕೀರ್ತಿಕುಮಾರನರಮನೆಗೆ ಮಹಾವಿಭೂತಿಯಿಂ ರಾಜಕುಮಾರಪರಿವೃತನಾಗಿ ಮಾಳವಾಧೀಶಂ ಬಂದು ವಾತ್ಸಲ್ಯರತ್ನಾಕರನಂ ನೋಡಿ ಮೆಚ್ಚಿ ॥ ೨೩೦

ಈತೇಜಮುಮೀರೂಪುಂ
ಮಾತೇನಿಂತಪ್ಪ ವಿನಯಮುಂ ಗುಣಮುಂ ವಿ।
ಖ್ಯಾತಿಯುಮೀತನನಿನಿತುಂ
ಭೂತಳಪತಿಮಾೞ್ಪುದೆಂಬುದೊಂದಚ್ಚರಿಯೇ ॥ ೨೩೧

ಎಂದು ತನ್ನೊಳ್ ನುಡಿದು ಬೞಿಕ್ಕಮಾತನ ವೃತ್ತಾಂತಮೆಲ್ಲಮಂ ಕೇಳ್ದು ತಲೆಯಂ ತೂಗಿ ಗುಣಪಾಲಸೆಟ್ಟಿಯಪ್ಪೊಡೆ ಪುಣ್ಯಮೂರ್ತಿಯುಂ ದೃಢವ್ರತನುಮಪ್ಪನಂತಪ್ಪ ಮಹಾಪುರುಷಂಗೆ ಪುಟ್ಟಿದನೆಂದೊಡೀತನುಂ ಕೇವಳನಲ್ಲನಾದೇಶಪುರುಷನಪ್ಪನೆಂದು ಧನಕೀರ್ತಿಯನರಮನೆಗೊಡಗೊಂಡು ಪೋಗಿ ವಿಶ್ವಾವತಿಕನ್ನೆಯುಮನರ್ಧರಾಜ್ಯಮುಮಂ ಕುಡಲೆಂದಿರ್ಪುದುಂ ॥ ೨೩೨

ಗುಣಪಾಲಸೆಟ್ಟಿ ವೈಶ್ಯಾ
ಗ್ರಣಿ ದೇವಮನೋನುರಾಗದಿಂದಿರ್ದಂ ಧಾ।
ರಿಣಿಪೂಜ್ಯನಪ್ಪ ನರರ
ಗ್ರಣಿ ಕೌಶಾಂಬಿಪುರಿಯೊಳ್ ಮಹೋನ್ನತಿಯಿಂದಂ ॥ ೨೩೩

ಎಂದೊರ್ವಂ ಬಿನ್ನವಿಪುದು
ಮಂದಾಗಳ್ ಕೇಳ್ದು ಭೂಭುಜಂ ಮೆಚ್ಚಿ ಸದಾ।
ನಂದಂ ಮೆಯ್ಯುಱಿಯದೆ ಮುದ
ದಿಂದಂ ಮೆಯ್ವೆರ್ಚೆ ನಲಿದು ರಾಗಿಸಿ ನಯದಿಂ ॥ ೨೩೪

[library stamp]

ಬಂದ ದೂತಂಗಂಗಚಿತ್ತಮಂ ಕೊಟ್ಟು ಮಱುದಿವಸಂ ಕೌಶಾಂಬಿಗೆ ಪೆರ್ಗಡೆಗಳನಟ್ಟಿ ಗುಣಪಾಲಸೆಟ್ಟಿಯುಂ ಬರಿಸಿ ಪುರದೊಳಷ್ಟಶೋಭೆಯುಂ ಮಾಡಿಸಿ ಸಕಳಸಾಮಂತಪರಿವೃತನಾಗಿ ಧನಕೀರ್ತಿಯುಂ ತಾನುಂ] [1] ಮಹಾವಿಭೂತಿಯಿಂದಿದಿರ್ಗೊಂಡು ಮನೆಯುಂ ಪುಗಿಸಿ ಮುನ್ನಿನ ಪದವಿಯುಂ ಕೊಟ್ಟು ॥ ೨೩೫

ನಿನ್ನರ್ಥಮುಮಂ ಮನೆಯುಮ
ನಿನ್ನೆವರಂ ಕಾದು ಮೋಹದಿಂ ರಕ್ಷಿಸಿದೆಂ ।
ನಿನ್ನರ್ಥಮುಮಂ ಮನೆಯುಮ
ನುನ್ನತ ಕೈಕೊಂಡು ಸುಖದೊಳಿರ್ ಸಂತಸದಿಂ ॥ ೨೩೬

[ನಿನ್ನಭಿಮಾನಮುಮಂ ವ್ರತ
ದುನ್ನತಿಯುಮನಱಿದು ಬೞಿಕೆ ಚೋದ್ಯಂಬಟ್ಟೆಂ ।
ನಿನ್ನಂ ತಳ್ವಿಲ್ಲದೆ ಕಾ
ಣ್ಬನ್ನೆವರಂ ದಿವ್ಯಭೋಗಮಂ ತೊಱೆದಿರ್ದೆಂ] ॥ ೨೩೭

ಎನಗೆ ಸಖನಾಗಿಯುಂ ನಂ
ಟನಾಗಿಯುಂ ನೀನೆ ನಿನ್ನ ನಂಬಿರ್ದ ಜಿನೇ ।
ಶನ ಧರ್ಮದಂದಮಂ ಪೇ
ೞ್ದನುಪಮಜಿನಪಾದಸೇವೆಯುಂ ಮಾಡೆನಗಂ ॥ ೨೩೯

ಎಂದು ತನ್ನ ಕೂರ್ಮೆಯುಂ ಸಭೆಗೆಲ್ಲಂ ತೋಱುವಂತೆ ನುಡಿದು ॥

ನಿನ್ನ ತನೂಭವಂಗೆ ಧನಕೀರ್ತಿಗೆ ಮಾಳವದೇಶದರ್ಥಮಂ
ಭಿನ್ನಸರೋಜವಕ್ತ್ರೆ ವೆರಸಿತ್ತಪೆನರ್ತಿಯೊಳಿಂತಿದಕ್ಕೆ ಮ
ತ್ತೆನ್ನದೆ ಸತ್ಯಶೌಚನಿಧಿ ಮಾನವವಂದಿತ ಮರ್ತ್ಯರತ್ನ ವೈ
ಶ್ಯೋನ್ನತ ನೀನೊಡಂಬಡುವುದೆಂದು ಮಹೀಶ್ವರನಂದಿತಕ್ರಮಂ ॥ ೨೪೦

---

[1] ಧನಕೀರ್ತಿಯುಂ ಬರಿಸಿ ವಿಶ್ವಾವತಿಯೆಂಬ ತನ್ನ ಮಗಳುಮನರ್ಧರಾಜ್ಯಮಂ ಕುಡಲೆಂದಿರ್ದನನ್ನೆಗಂ, ಚಾರರ್ಬಂದು ಗುಣಪಾಲನಿರ್ದೆಡೆಯುಮನಱಿಪುವುದುಂ ಪೆರ್ಗಡೆಗಳನಟ್ಟಿಯುಂ ಬರಿಸಿ (ಗ)

ಕೈಮುಗಿದು ಬೇಡಿಕೊಂಡು ಮತ್ತಮಿಂತೆಂದಂ ‖ ೬೪೧

ಜಿನಪಾದಭಕ್ತನಲ್ಲಂ
ಜನೇಶನೆಂದೆನ್ನದೆಸೆಗೆ ಬೆಚ್ಚದೆ ಮುನ್ನಂ ।
ವಿನುತವ್ರತಮಂ ಕೊಟ್ಟೊ
ಯ್ಯನೆ ನಂಬಿ ಬೞಿಕ್ಕೆ ವೈಶ್ಯವಂಶಲಲಾಮಾ ‖ ೬೪೨

[ಧನಕೀರ್ತಿಗೆನ್ನ ಮಗಳಂ ಪ್ರಾಣವಲ್ಲಭೆಮಾಡೆಂದು ಮುನ್ನಾ ತನ ಮನವನಱಿವನಪ್ಪುದಱಿಂ ಗುಣಪಾಲಸೆಟ್ಟಿಯು ಮನದ ಸಂಶಯಮಂ ಪಿಂಗೆ ನುಡಿದೊಡಂಬಡಿಸಿ ರಾಜಭವನಕ್ಕೆ ಪೋಗಿ ಗುಣಪಾಲಸೆಟ್ಟಿಯ ದರ್ಶನಶುದ್ಧಿಯೊಳಾದ ದೃಢತೆಯನಂದಿನ ದಿವಸಮೆಲ್ಲಂ ಪೊಗೞ್ದು ಮೞು ದಿವಸಂ ನೈಮಿತ್ತಿಕರಂ ಕರೆದು ಶುಭದಿನಮಂ ಬೆಸಗೊಂಡು] [1] ‖ ೬೪೩

ಪಸೆ ಪಸುರ್ವಂದರೊಪ್ಪೆ ಗಣಿಕಾನಿಕರಂ ಮನವೊಲ್ದು ಪಾಡೆ ಸಂ
ತಸದಿನಮರ್ಕೆವೆತ್ತಿರೆ ವಿವಾಹಗೃಹಂ ವರರತ್ನದಿಂ ವಿರಾ
ಜಿಸೆ ಪಱೆಗಳ್ಪಯೋಧಿ ಮೊೞೆವಂತಿರೆ ತಮ್ಮೊಳಗುರ್ವುವೆತ್ತು ಘೂ
ರ್ಣಿಸೆ ಜಿನಪೂಜೆಯೊಪ್ಪೆ ಪೊಗೞುತ್ತಿರೆ ಸುತ್ತಲುಮಿರ್ದು ಬರ್ಪವರ್ ‖

ಧನಕೀರ್ತಿಕುಮಾರಂಗಂ
ತನೂಜೆಗಂ ಮನದೊಳೂಸೆದು ಪರಮೋತ್ಸವದಿಂ ।
ಜಿನಗಂಧೋದಕದಿಂದಂ
ಜನಾಧಿಪಂ ತಾನೆ ಬಂದು ಕೈನೀರೆಱೆದಂ ‖ ೬೪೫

[ಅಂತು ಕೈನೀರೆಱೆದು ವಿವಾಹಮಂ ಮಾಡಿ ಗುಣಪಾಲಸೆಟ್ಟಿ ಮೊದಲಾದ ಬಂಧುಸಮೂಹಕ್ಕಂ ರಾಜನಿಕುರಂಬಕ್ಕಮುಡಲುಂ ತುಡ ಲುಂ ಕೊಟ್ಟು ತದನಂತರಂ ಹಯವಾರಣಭಂಡಾರಗಳೊಳರ್ಧಮನಳಿ ಯಂಗೆ ಕೊಟ್ಟು ಕ್ಷೀರೋದಕನ್ಯಾಯದಿಂದೊಡಗೂಡಿ ರಾಜ್ಯಶ್ರೀಯನನು ಭವಿಸುತ್ತುಂ ಪತ್ತೆಂಟುದಿವಸಮನುಭವಿಸುತ್ತಿರ್ಪನ್ನೆಗಂ] [2] ‖ ೬೪೬

---

1 ಎಂದೊಡಂಬಡಿಸಿ (ಗ)

2 ಅಂತು ಮದುವೆಯಂ ಮಾಡಿ ತನ್ನರ್ಧರಾಜ್ಯಮಂ ಕೊಟ್ಟು ಮಹಾಮಹಿ ಮೆಯಿಂದಿರ್ಪುದುಂ (ಗ)

[library stamp]

ನಿಮಗೆ ಸಮಾನಮಿಲ್ಲ ಧರಣೀತಳದೊಳ್ ತಡವೇಕೆ ಬೇಗಮೊ
ಪ್ಪುವ ಜಿನಮಾರ್ಗಮಂ ದುರಿತಹಾರಿಯನಕ್ಷಯಸೌಖ್ಯದಾಯಿಯಂ
ಪ್ರವರಗುಣಾಬ್ಧಿಯಂ ನೆಱೆ ವಿಚಾರಿಸಿ ಪೊರ್ದುವುದೆಂದು ಪೇೞಿಲೆಂ
ದವಿತತಮೋಕ್ಷಲಕ್ಷ್ಮಿ ಪದೆದಟ್ಟಿದ ದೂತನೆ ಬರ್ಪ ಮಾರ್ಗದಿಂ ‖ ೧೪೭

ಯಶೋಧರರೆಂಬರೊರ್ವರೇಕವಿಹಾರಿಗಳ್ ವಿಹಾರಿಸುತ್ತುಮುಜ್ಜಯಿನಿಗೆ [ವಂದು ಪೊಱಮೊೞಲೊಳಿರ್ಪುದುಂ ಋಷಿನಿವೇದಕಂ ಕಂಡು ಬಂದು ವಿಶ್ವಂಧರಮಹಾರಾಜಂಗೆ ಬಿನ್ನಪಂಗೆಯ್ವುದುಂ ಋಷಿನಿವೇದಕಂಗಂಗಚಿತ್ತಮಂ ಕೊಟ್ಟಾನಂದಭೇರಿಯಂ ಪೊಯ್ಸಿ ಗುಣಪಾಲಸೆಟ್ಟಿ ಮೊದಲಾದ ಶ್ರಾವಕರುಂ ಧನಕೀರ್ತಿಮೊದಲಾದ ಕುಮಾರಕರುಂ ವಿಶ್ವಾವತಿ ಮೊದಲಾದ ನಂದನೆಯರುಂ ಧನಶ್ರೀಯುಂ ಶ್ರೀಮತಿಯುಂಮೊದಲಾದ ಶ್ರಾವಕಿತಿಯರುಂ ಲಕ್ಷ್ಮೀಮತಿಮೊದಲಾದರಸಿಯರುಂ ಬೆರಸು ಅರಸುವ ಬಳ್ಳಿ ಕಾಲೊಳ್ ತೊಡರ್ದುದೆಂಬಂತೆ ಸುವ್ರತಾರೂಢರಾಗಲೆಂದಿರ್ದೆಮಗೆ ಮಹಾಪುರುಷರ್ ಭಾಗ್ಯದಿಂದಿದಿರ್ವಂದರೆಂದು ವಿಶ್ವಂಧರ ಮಹಾರಾಜಂ ‖ ೧೪೮

011342

ರಾಗದಿನತಿಶಯದಿಂ ತಳ್ವ
ವಾಗದೆ ಪೊಱಮಟ್ಟು ಬಂದು ಪಿರಿದುತ್ಸವದಿಂ ।
ಯೋಗೀಂದ್ರವಂದ್ಯಪಾದನ
ನಾಗಳ್ ಬಲವಂದು ಮೂಱುಸೂೞಮವನೀಶಂ ‖ ೧೪೯

ಪಲವರ್ಚನೆಯಿಂದರ್ಚಿಸಿ ತ್ರಿಕರಣಶುದ್ಧಿಯಿಂ ಬಂದಿಸಿ ಪೊಡೆಮಟ್ಟು ಕುಳ್ಳಿರೆ ಗುಣಪಾಲಸೆಟ್ಟಿ ಸುಕವಿನಿಕರಪಿಕಮಾಕಂದಂಗಭಿಮುಖನಾಗಿ ಕರಕಮಲಂಗಳಂ ಮುಗಿದು ವಿನಯದಿಂದಾಪ್ತಾಗಮಪದಾರ್ಥಂಗಳಂ ಚಿತ್ತದ ಶಂಕೆ ಪೋಪಿನಂ ಕೇಳ್ದು, ಅರಸನುಂ ಧನಕೀರ್ತಿಯುಂ ಮೊದಲಾದನೇಕರುಂ ಕೇಳ್ದು ನಂಬಿ ಪಂಚಾಣುವ್ರತಮಹಾವ್ರತರತ್ನಂಗಳಂ ಧರಿಯಿಸಲೆಂದಿರ್ಪುದುಂ, ಗುಣಪಾಲಸೆಟ್ಟಿ ಧರ್ಮಶ್ರವಣಾ

ನಂತರಂ ಪರಮಾವಧಿಲೋಚನರಪ್ಪ ತಪೋನಿಧಿಗಳಂ][1] ಧನಕೀರ್ತಿಗೆ ಶ್ರೀಧತ್ತಸೆಟ್ಟಿ ಮಾಡಿದ್ದುದುಮಂ ಕಂಟಕಂಗಳುಂ ತಪ್ಪಿ ರಾಜ್ಯಮಾದುದಾವ ಭವದ ಪುಣ್ಯದ ಫಲಮೆಂದು ಬೆಸಗೊಳ್ವುದುಂ ॥ ೬೫೦

ಪರಮಾವಧಿಲೋಚನದಿಂ
ದುರಿತೇಂಧನದಹನನಱಿದು ಪೇಳ್ದಂ ಸಖೆ ಝೇಂ।
ಕರಿಸಿ [2] ಧನಕೀರ್ತಿಧರಣೀ
ಶ್ವರವಂದಿತಪಾದಯುಗನ ಮುನ್ನಿನ ಭವಮಂ ॥ ೬೫೧

[ಸುರರಾಜನ ಪುರವರದೊಳ್
ದೊರೆಯೆನಿಸಿ ನೆಗಳ್ತೆವೆತ್ತ ಪುರಮುಜ್ಜಯಿನೀ।
ಪುರಮದರ ಕೆಲದೊಳಿರ್ಪುದು
ಸಿರಿಷ್ಟಮೆಂಬೂರ್ ಧರಿತ್ರಿಯೊಳ್ ಕಡುರಯ್ಯಂ] [3] ॥ ೬೫೨

ಆ [ಶಿರಿಷ್ಟ] ಗ್ರಾಮದೊಳ್ ಮೃಗಸೇನನೆಂಬ ಮೀಂಬುಲಿಗನಿರ್ಪ ನಾತನ ಪೆಂಡತಿ ಘಂಟಿಯೆಂಬಳಾ [ಯಿರ್ವರುಂ ಪಲಕಾಲಂ ಪಾಪಾನುರಾಗದಿಂದಿರ್ದೊಂದು] [4] ದಿವಸಂ ಬಲೆಯುಂ ಕೊಂಡು ಸಿಂಪಾನದಿಗೆ ಪೋಗುತ್ತುಮೆಡೆಯೊಳ್ ಯಶೋಧರರೆಂಬ ಋಷಿಯರ ಕೆಲದೊಳ್ ಧರ್ಮಮಂ ಕೇಳ್ವ ನೆರವಿಯುಮಂ ಕಂಡು [ಪಾಪದುಪಶಮದಿಂದೇನಾನುಮೊಂದು ಚೋದ್ಯಮಾಗಲೆವೇೞ್ಕುಮೆಂದು ನೋಡಲರ್ತಿವೆರಸು ಶಾಂತರೂಪದಿಂದೆಯ್ದುವಂದು ಬಲೆಯನಿೞಿಪಿ ದೂರದೊಳ್ ಕುಳ್ಳಿರ್ದು] ತನ್ನೊಳಿಂತೆಂದಂ ॥ ೬೫೩

ಹಾರದ ಮುತ್ತಿನ್ನೆಸರದ ವಜ್ರದ ಕಂಕಣದೊಪ್ಪುವೆತ್ತ ಕೇ
ಯೂರದ ರತ್ನಕುಂಡಲದ ವಸ್ತ್ರದ ಮುದ್ರಿಕೆಯೊಂದು ಮಿಕ್ಕಲಂ

1 ಬರ್ಪುದುಂ ಅವರ ಬರವಂ ಋಷಿನಿವೇದಕನಿಂದಱಿದು ವಿಶ್ವಂಧರಮಹಾರಾಜಂ ಸಕಲಪರಿಜನಂವೆರಸು ಪೋಗಿ ವಂದಿಸಿ ಧರ್ಮಶ್ರವಣಾನಂತರಂ (ಗ)

2 ಸಖಿಜೇಂಕರಿಸೆ (ಬ.), ಸಖೆಜಿಂಕಱಿಸಿ (ಕ)

3 ಈ ಪುರದ ಕೆಲದೊಳ್ ಸಿರಸಿಗ್ರಾಮಮೆಂಬುದು (ಗ)

4 ತನೊಂದು (ಗ)

ಕಾರದ ಮಾರಸುಪ್ಪ ಪುರುಷರ್ ನೆರೆದದ್ಭುತಮಲ್ತೆ ಕಟ್ಟಲುಂ
ಸೀರೆಯುಮಿಲ್ಲದೀಗುರುವನರ್ಚಿಸಿ ಕೈಮುಗಿದಂಜಿ ಸುತ್ತಲುಂ ॥ ೨೫೪

ಇರ್ದ ಪರೀತಂ ಪ್ರತ್ಯಕ್ಷದೇವನಾಗಲೆವೇಳ್ಕುಮೆಂದು ತಾನುಂ ಕಯ್ಮುಗಿದು ಧರ್ಮಮಂ ಕೇಳುತ್ತುಮಿರೆ ॥ ೨೫೫

ವರಮುನಿ ಮಧುರಸ್ವರದಿಂ
ಪರಮಾಗಮಮಂ ಸಮಸ್ತಭವ್ಯಜನಕ್ಕಾ ।
ದರದಿಂ ಪೇಳುತ್ತಿರೆ ನಿ
ಷ್ಕರುಣದ ನೆಲೆ ಜಾಲಗಾರನುಂ ಕೇಳುತ್ತುಂ ॥ ೨೫೬

ಇರ್ದನನ್ನೆಗಂ ಸಕಲಶ್ರಾವಕರುಂ ತಂತಮ್ಮ ಬಯಸುವ ವ್ರತಂಗಳಂ ಕಯ್ಕೊಂಡು ದರ್ಶನದೊಳಂ ದೃಢರಾಗಿ ಮುನಿವರಂಗೆ ಪೊಡೆಮಟ್ಟು ಪೋಪ್ಪುದುಂ ಮೃಗಸೇನನುಮೆರ್ದು ನಿಂದಿರ್ದು ಕಯ್ಯಂ ಮುಗಿದು ॥ ೨೫೭

ದೇವ ಮಹಾಪ್ರಸಾದ ಪರಮೇಶ್ವರ ನಿನ್ನನವಜ್ಞೆಗೆಯ್ದು ಸ
ದ್ಭಾವಮನೊಕ್ಕು ಬತ್ತಲಿಗನೆಂದೆಳಸಿರ್ದೆನನಂತಕಾಲಮುಂ
ಕೇವಲಮೆನ್ನ ಕರ್ಮವಶದಿಂ ನೆರೆದೀಪ್ರಜೆಗೆಲ್ಲಮರ್ತಿಯಿಂ
ಭಾವಿಸಿ ಬೇಡಿದಂತುಟನೆ ನೀನೊಸೆದೀವುದನೆಯ್ದೆ ಕಂಡು ಕೇಳ್ ॥ ೨೫೮

ದೇವನೆಂದಾನೀಗಳ್ ನಂಬಿದೆನೆನಗೊಂದು ಬ್ರತಮಂ ದಯೆಗೆಯ್ವುದೆನೆ ಮುನೀಶ್ವರರಿಂತೆಂದರ್ ॥ ೨೫೯

ಕಳ್ಳಂ ಮಾಣೆನೆ ನಿಮ್ಮಡಿ
ಕಳ್ಳಲ್ಲದೊಡಿಂದೆ ಸಾವೆನೆನೆ ಮುನಿ ಮತ್ತಂ ।
ಪೊಲ್ಲದು ಕೊಲೆಯುಂ ಮಾಣೆನೆ
ಕೊಲ್ಲದೊಡಾನೆಂತು ಪೊರೆವೆನೆನ್ನಂಗನೆಯುಂ ॥ ೨೬೦

ಪುಸಿಯುಂ ಮಾಣೆನೆ ನಿಮ್ಮಡಿ
ಪುಸಿಯುಂ ಮಾಣಲೊಂದು ಬಾಳಬಾರದು ಧರೆಯೊಳ್ ।

ಪುಸಿ ಮುಖ್ಯಮೆಂಬುದಂ ಭಾ
ವಿಸಿ ಮುನಿಪಂ ಕಳವನುೞಿವುದೆಂಬುದುಮಾಗಳ್ ॥ ೨೬೧

ಕಳವೆಂಬುದು ಮುನಿಪತಿ ಮ
ತ್ಕುಲಕ್ಕೆ ಬಿಡಬಾರದದನೆ ಬಿಟ್ಟೊಡೆ ಬಾಷ್ಪೊಂ ।
ದಳವಾವುದೊ ಪೇೞಿಂ ಭೂ [1]
ತಳದೊಳ್ ಮೀಂಗುಲಿಗನಪ್ಪವಂಗದು ಮುಖ್ಯಂ ॥ ೨೬೨

ಎಂಬುದುಂ [ಪಂಚಾಣುವ್ರತಮೊಂದುಂ ಕೈಕೊಳ್ಳದೆನೆ ಮತ್ತೆ ನೀಂ ಬಲೆಯುಂ ಬೀಸಿದಲ್ಲಿ ಮೊದಲ್ ಸಿಕ್ಕಿದೊಂದು ಮೀನಂ ಬಿಡುವುದೆನೆ, ಅಂತೆ ಗೆಯ್ವೆನೆಂದು] [2] ಬಲೆಯುಂ ಕೊಂಡು ಸಿಂಪಾನದಿಯ ಪೆರ್ಮಡುವಿಂಗೆ ಪೋಗಿ ಜಾಲಮಂ ಬೀಸುವುದುಂ ಪಿರಿದಪ್ಪ ಮೀನ್ ಬಂದೊಡೆ ಗುರುವಚನಮನುಲ್ಲಂಘಿಸಲಾಗದೆಂದು ಕುಱುಪಿಂಗೆ ನೇಣಂ ಕಟ್ಟಿ ಮಗುೞೆ ಮಡುವಿನೊಳ್ ಬಿಟ್ಟು ಸಿಂಪಾನದಿಯ ತಡಿವಿಡಿದರೆಗಾವುದಂ ತರಮಂ [ಪೋಗಿ ಬಲೆಯುಂ ಬಿಡುವುದುಂ ಮುನ್ನಂ ಬಿಟ್ಟ ಮೀನೆ ಸಿಕ್ಕೆ ಕುಱುಪಂ ಕಂಡಱಿದು ॥ ೨೬೩

ಯತಿಪತಿವಂದ್ಯಂ ಕೊಟ್ಟಾ
ವ್ರತಮಂ ನೆನೆದಾಗಳಂತೆ ಬಿಟ್ಟಾ ಮೀನಂ ।
ದ್ರುತಿವೆರಸು ತೊಱೆಯ ತಡಿವಿಡಿ
ದತಿಶಯದಿಂ ಪೋಗಿ ನೂಱುಮಾರಂತರಮಂ] [3] ॥ ೨೬೪

---

1 ಬಿಡದದನೆ ಬಿಟ್ಟೆನಪ್ಪೊಡೆ ಬಾಳ್ವೊಂ । ದಳಿಪಾವುದೊ ಪೇೞಿ ಮಹೀ (ಗ)

2 ಅಂತಪ್ಪೊಡೆ ನೀನಿಂದು ಮೊದಲಾಗಿ ಬಲೆಯೊಳ್ ಮುನ್ನಂ ಬಂದ ಮೀನಂ ಬಿಟ್ಟು ಕಳೆವುದೆಂಬುದುಮದಕ್ಕೊಡಂಬಟ್ಟು ಮಹಾಪ್ರಸಾದಂ ಕೈಕೊಂಡೆನೆಂ ಬಂದುಮವರಿಂತೆಂದರ್ :—

ಸಾವೆಡೆಯೊಳ್ ನೀನೊಲವಿಂ ಶ್ರಾವಕರಪ್ಪವರು ತಾಳ್ದ ಸುವ್ರತಚಯಮಂ ।
ಶ್ರೀವರಮುನಿಸಾಕ್ಷಿಯೊಳಾವಗಮೊಳಕೊಂಡೆನೆಂದು ನೆಱೆ ನೆನೆ ಮನದೊಳ್ ॥

ಎನುತ್ತಂ ಜೀವಮಂ ಬಿಡುವುದೆಂಬುದುಂ ಅಂತೆ ಗೆಯ್ವೆನೆಂದು (ಗ)

3 ಬಂದು (ಗ)

ಬಲೆಯುಂ ಬೀಸುವುದುಂ ಸಂ
ಚಲಮೆನಿಸದೆ ಮತ್ತಮಾಮಹಾಮತ್ಸ್ಯಮೆ ನಿ।
ಶ್ಚಲಮಾಗೆ ಬಂದೊಡಾಮಿಾಂ
ಗುಲಿಗಂ ಬೆಱಗಾಗಿ ನೆನೆದು ತನ್ನ ವ್ರತಮಂ ॥ ೧೬೫

ಮಗುೞೆ ತೊಱೆಯೊಳ್ ಬಿಟ್ಟು ಮತ್ತಮರೆಗಾವುದಂತರಂ ತೊಱೆಯ ತಡಿವಿಡಿದು ಪೋಗಿ ಬಲೆಯುಂ ಬೀಸುವುದುಂ, ಮುನ್ನಿನ ಮಿಾನೆ ಬರ್ಪುದುಂ ಮುನಿ ಕೊಟ್ಟ ವ್ರತಮಂ ॥ ೧೬೬

ಅವಧರಿಸಿ ಮಗುೞೆ ತೊಱೆಯೊಳ್
ವಿವೇಕದಿಂ ಬಿಟ್ಟು ತೊಱೆಯ ತಡಿವಿಡಿದು ಮಹೋ।
ತ್ಸವದಿಂ ಮೃಗಸೇನಂ ಮಾ
ನವರತ್ನಂ ನೂಱುಮಾರಿನಂತರದೆಡೆಯೊಳ್ ॥ ೧೬೭

ಪೋಗಿ ಜಾಲಮಂ ಬೀಸುವುದುಂ ಮುನ್ನಿನ ಮಹಾಮತ್ಸ್ಯಮೆ ಬಲೆಯೊಳ್ ಬರೆ ವಿಸ್ಮಯಂಬಟ್ಟು ನಿಂದಿರ್ಪುದುಂ ॥ ೧೬೮

ಕೊಲೆಯೊಳ್ ಮತಿಯುಂ ಮಾಣದೆ
ನಿಲಿಸುವರೀಮಾರ್ಗದಿಂದೆ ನರಕಕ್ಕಿೞಿವರ್ ।
ಚಲದಿಂದಮೆಂದು ತೋರ್ಪವೊ
ಲಲಂಘ್ಯಗುಣನರ್ಕನಪರವಾರಿಧಿಗಿೞಿದಂ ॥ ೧೬೯

ಅಂತು ನೇಸಱ್ ಪಡುವುದುಂ ಬಱಿದೆ ಪೋಗಲಾಗದೆಂದು ಪುಳ್ಳಿಗಳಂ ಕೊಂಡು ಮನೆಗೆವರ್ಪುದುಂ ತಳ್ವಿದನೆಂದು ಕನಲುತ್ತುಮಿರ್ದ ಘಂಟೆ ಮಿಾನಿಲ್ಲದೆ ಬಱಿದೆ ಪುಳ್ಳಿಯುಂ ಕೊಂಡು ಬಂದ ಮೃಗಸೇನನಂ ಕಂಡು ಕಿನಿಸಿ ಪೊಱಗಣ್ಗೆ ನೂಂಕುವುದುಂ ಭಯಸ್ಥನಾಗಿ ಕಾಲಮೇಲೆ ಬಿರ್ದು ತನ್ನ ತಳ್ವಿದ ಕಾರಣಮೆಲ್ಲಮಂ ಪೇೞೆ ಕಣ್ಗಳಂ ಕಿಡಿಯುಂ ಕೆಂಡಮುಂ ಪಾಯೆ ॥ ೧೭೦

ಕೆಲನಂ ಪೊಯ್ಯೆ ತಗುಳ್ದು ಬರ್ದ ಮೊಲೆಗಳ್ ಪದಱಡುವಂತಿರ್ದ ಕೆಂದಲೆ ಕೋಪೋದ್ಭವದುಗ್ರದಿಂ ನಡುಗೆ ಸೀಳ್ದುಂದಾಗಿ ನೀರ್ಪಾಯ್ವಿನಂ ಕೊಪೆಗಣ್ಮಿಳ್ಳಿಸೆ ದೊಡ್ಡವೊಟ್ಟೆಕುಣಿಯಲ್ ಪೊಯ್ದಾಳ್ ಮಹಾಕೋಪಿ ಕಾವಲಿಯಂತಪ್ಪ ಕರಾಗ್ರದಿಂದೊದೆಯುತುಂ ಕರ್ಗಿರ್ದ ಪಾದಂಗಳಿಂ ॥

ಅಂತು ನುಗ್ಗಾಗೆ ಬಡಿದು ನಿನಗೆ ವ್ರತಮನಿತ್ತ ಋಷಿಯರ ಮನೆಗೆ ಪೋಗೆಂದು ಪೊಱಮಡಿಸಿ ಪಡಿಯಂ ಕೀಱುವುದುಂ ಮೃಗಸೇನಂ ದುಃಖಿತನಾಗಿ ॥ ೧೩೨

[ಒಂದುದಿನಂ ವ್ಯವಸಾಯಂ
ಕುಂದಿದೊಡೀಕಾಂತೆ ಮುಳಿದು ಬಯ್ದುಪಳದಱಿಂ ।
ಸೌಂದರಿಯುಂ ಸುತರುಂ ಬೇ
ಡೆಂದಱಿಪುವ ದಿವ್ಯಮುನಿಯ ವಚನಮನೀಗಳ್ ॥ ೧೩೩

ಅನ್ನವರ ಕಂಡು ಪಾಪದಿ
ನುನ್ನತಸದ್ಧರ್ಮರತ್ನಮಂ ಬಿಟ್ಟಳಿಪಿಂ ।
ದೆನ್ನ ಸತಿಯೆಂದು ನಂಬಿದೆ
ನಿನ್ನಱಿದೆಂ ಸತಿಯರಾಗದೆಂಬುದನೀಗಳ್] ॥ ೧೩೪

ಮುಳಿದೆನ್ನಂ ಕರುಣಿಸದ
ಗ್ಗಳವಾಗಿರೆ ಬಡಿದ ಸತಿಯುಮಂ ಮನೆಯುಮನು ।
ಜ್ಜ್ವಲವಾಗಿ ತೊಱೆದು ನೆಟ್ಟನೆ
ಮಲರಹಿತನನೆಯ್ದಿ ಕೇಳ ಬೆಳಗಾದಾಗಳ್ ॥ ೧೩೫

ಶ್ರಾವಕಕ್ರಮಮಂ ಕೊಳ್ವೆನೆಂದು ಚಿತ್ತದೊಳ್ ನೆನೆಯುತ್ತುಂ ನಿದ್ರೆಗೆಯ್ವುದುಂ ನಡುವಿರುಳಪ್ಪಾಗಳ್ ಕಪ್ಪೆಯನಟ್ಟುತ್ತುಂ ಬಂದ ಪಾವು ಕಪ್ಪೆ ತಪ್ಪಿ ಮೃಗಸೇನನಂಗುಟಮಂ ಪಿಡಿವುದುಂ ವಿಷಮೋಱಿ ಕಂಠಗತಪ್ರಾಣನಾಗಿ ಸುವ್ರತದ ಫಲದಿಂ ನಿನಗೆ ಧನಕೀರ್ತಿಯಾಗಿ ಪುಟ್ಟಿದಂ ॥ ೧೩೬

ಭರವಸದಿಂದಾವಿಱಾನಂ
ಗುರುವಚನವನೊಳ್ಳಿತಾಗಿ ಮನದೊಳ್ ನೆನೆದಾ ।
ದರದಿಂದಮೆಯ್ದು ಸೂೞ್ವರ
ಭರದಿಂದಂ ಬಿಟ್ಟನಪ್ಪ ಕಾರಣದಿಂದಂ ॥ ೧೭೭

ಶ್ರೀದತ್ತಂ ಮಾಡಿದ್ರೈವುಂ ಕೊಲೆಯುಂ ಪರಿಹರಿಸಿ ವಿಶ್ವಂಧರ ಮಹಾರಾಜನ ರಾಜ್ಯದರ್ಧಕ್ಕೆ ಮುಖ್ಯನಾದನಿಂತು ॥ ೧೭೮

ಮೃಗಸೇನನ ಪೆಣನಂ ತೊ
ಟ್ಟಗೆ ಸವಳದೆ ಘಂಟೆ ಕಂಡು ದುಃಖಿಸಿ ತಾನುಂ ।
ಮೃಗಸೇನನ ಸುವ್ರತಮಂ
ಮೃಗಾಕ್ಷಿ ಕೇಳ್ದನುಮೆಯ್ದೆ ತಾಳ್ದದೆನೆನುತುಂ ॥ ೧೭೯

ಗಂಡನೊಡನೆ ಸತ್ತು ತದ್ವ್ರತಮಂ ಕೈಕೊಂಡೆನೆಂದ ಫಲದಿಂ ಘಂಟೆಯುಂ ಶ್ರೀದತ್ತಸೆಟ್ಟಿಗೆ ಶ್ರೀಮತಿಯೆಂಬ ಮಗಳಾಗಿ ಮತ್ತಂ ಧನಕೀರ್ತಿಗೆ ವಲ್ಲಭೆಯಾದಳಾವಿಱಾನುವಿಱಾಪುರದೊಳ್ ಮೃಗಸೇನೆಯೆಂಬ ಸೊಳೆಯಾಗಿ [ಪೊತ್ತುಪೋಗಿಂಗೆ ಕೆಳದಿಯರ್ವೆರಸು ಸಿಂಪಾನದಿಯ ತಡಿವಿಡಿದು ಬರುತ್ತುಂ ಕೆಂದಳಿರ ಮಾವಿನ ಕೆಳಗೆ ಪಟ್ಟಿರ್ದ ಧನಕೀರ್ತಿಯುಂ ಕಂಡು ತಂದೆಯುಂ ಕಂಡಂತೆ ಸ್ನೇಹಿತೆಯಾಗಿ ಸಾರೆ ಕುಳ್ಳಿರ್ದು ರೂಪನಚ್ಚಿಕರ್ತು ನೋಡುತ್ತುಂ ಸೋಗಿನೊಳಿರ್ದೋಲೆಯುಂ ಕಂಡು ವಾಚಿಸಿ ನೋಡಿ ಮಱುಗಿ ತಲ್ಲೇಖಮಂ ಸೀಳ್ದೀಡಾಡಿ ಶ್ರೀಮತಿಯನೀ ವೋಲೆಗಾಣಲೊಡನೆ ಮಹಾಬಳನೀತಂಗೆ ಕುಡುವುದೆಂದು ಬರೆದು ಮೇಗುಳ್ ಮುದ್ರಿಸಿ ಮುನ್ನಿನಂತೆ ಸೋಗಿನೊಳಿಕ್ಕಿ ಪೋದಳಪ್ಪುದಱಿಂ ಧನಕೀರ್ತಿಯ ಸಾವು ತಪ್ಪಿತೆಂದು ಮೂವರ ಭವಮುಮಂ ಪೇಳ್ದಂ॥ ೧೮೦

ಮುನಿಪತಿ ಪೇೞೆ ಕೇಳ್ದು ಗುಣಪಾಲವಣಿಗ್ವರನುಂ ಮಹೀಶನುಂ
ವನರುಹನೇತ್ರೆಯುಂ ಸಕಲಭೂಭುಜರುಂ ಧನಕೀರ್ತಿಭೂಮಿಪಾ

ಲನು ಮೃಗಸೇನೆಯುಂ ಮನದೊಳಚ್ಚರಿವಟ್ಟು ಜಿನೇಂದ್ರಧರ್ಮಮಂ
ಜನನುತಮಂ ಕರಂ ಪಡೆದು ನಂಬಿದವರ್ಗೆಡರುಂಟೆ ಲೋಕದೊಳ್] ‖

ಕಿಱಿದಪ್ಪೀವ್ರತದಿಂದಮೀಮಹಿಮೆಯಂ ಮತ್ತೀಮಹಾಧೈರ್ಯಮಂ
ನೆಱೆದೀರಾಜ್ಯಮನೀಸುಖೋನ್ನತಿಯನೀಸದ್ರೂಪನೀತೇಜಮಂ
ತಱಿಸಂದೀಧನಕೀರ್ತಿ ಪೆತ್ತನೆನೆ ಪಂಚಾಣುವ್ರತಾನೀಕಮಂ
ನೆಱೆ ಕೈಕೊಂಡ ನರಂಗೆ ನಿರ್ವೃತಿಸುಖಂ ಕೈಸಾರ್ವುದೇನದ್ಭುತಂ ‖

ಎಂದು ತಮ್ಮೊಳ್ ನುಡಿದು ದಂಟನೂದುವಂಗೆ ಕೊಟಿಲ್ ದೊರೆ ಕೊಂಡುದೆಂಬಂತೆ ಕೋಣನನೇಱುವಂಗೆ ಮದಕರಿ ದೊರೆಕೊಂಡಂತೆ ಪುಲ್ಗುಡಿಸಲಿನೊಳಿರ್ಪಂಗೆ ಮಣಿಮಾಡಮಾದಂತೆ ನಾಯಕತನಂಗೆಯ್ದಂಗೆ ಚಕ್ರವರ್ತಿತ್ವಮಾದಂತೆ ಮುನ್ನಮೆ ಬ್ರತಮಂ ಕೊಳಲೆಂದಿರ್ದವರಹಿಂಸಾವ್ರತದ ಪ್ರತ್ಯಕ್ಷಫಲಮಂ ಕಂಡು ವಿಶ್ವಂಭರಮಹಾರಾಜನುಂ ಗುಣಪಾಲಸೆಟ್ಟಿಯುಂ ಲಕ್ಷ್ಮೀಮತಿಮಹಾದೇವಿಯುಂ ಧನಶ್ರೀಯುಂ ಜಿನದೀಕ್ಷೆಯಂ ಕೈಕೊಂಡರ್. ಧನಕೀರ್ತಿಕುಮಾರಂ ಮೊದಲಾಗೆ ಸಮಸ್ತರಾಜಕುಮಾರರುಂ ಶ್ರೀಮತಿ ಮೊದಲಾಗೆ ಪಲಂಬರರಸಿಯರುಂ ಸಕಲಪರಿಜನಮುಂ ನಿರ್ವಾಣಲಕ್ಷ್ಮಿಯ ತೊಡವಿನೊಳ್ ಕೀಲಿಸಿರ್ದ ಪಂಚರತ್ನಮೆನಿಪ ಪಂಚಾಣುವ್ರತಂಗಳಂ ಕೈಕೊಂಡು ದರ್ಶನದೊಳ್ ದೃಢರಾಗಿ ಮುನಿರಾಜಹಂಸನಂ ಬಂದಿಸಿ ಪೊೞಲ್ಗೆವಂದು ಸಂತೋಷಂ ಬೆರಸಿರ್ದರ್ ‖ ೨೮೩

ಭರತನ ಸಗರನ ಮಘವನ
ಸುರಪನ ರಾಘವನ ವಜ್ರಜಂಘನ ಲಕ್ಷ್ಮೀ ।
ಧರನ ದೊರೆ ಜೈನಧರ್ಮದೊ
ಳುರುಮುದದಿಂ ಮಿಕ್ಕರೆನಿಸಿ ವಸುಮತಿಯೆಲ್ಲಂ ‖ ೨೮೪

---

1 ಪುಟ್ಟ ಧನಕೀರ್ತಿಗುಪಕಾರಂಗೆಯ್ದಳ್ ಶ್ರೀದತ್ತಸೆಟ್ಟಿ ಕೊಲೆಯನೊಡರ್ಚಿದ ಪಾಪದ ಫಲದಿಂ ನರಕದೊಳ್ ಬಿರ್ದನೆಂದು ಮುನಿಪತಿ ಪೇಳೆ ಕೇಳ್ದು (ಗ)

ಕೈವಾರದಿಂ ಪೊಗೞೆ [ಸನತ್ಕುಮಾರಚಕ್ರವರ್ತಿಯಂತೆ ತೇಜಸ್ವಿಯುಂ ಜಿನಧರ್ಮೋದ್ಧಾರಕನುಂ ಶ್ರೀಷೇಣಮಹಾರಾಜನಂತೆ ವೀರನುಂ ಅನ್ನದಾನವಿನೋದನುಂ ಪಂಚಮಚಕ್ರಧರನಂತೆ ಸದ್ಧರ್ಮನಿಶ್ಶಂಕನುಂ ಶ್ರುತವಿನೂತನುಂ ಅಭಯಕುಮಾರನಂತೆ ಕುಶಲನುಂ ಅಭಯದಾನಸಮೇತನುಂ ನಾಗಕುಮಾರನಂತೆ ಸುಭಗನುಂ ಜಿನಪೂಜಾನಂದನುಂ ಧನ್ಯಕುಮಾರನಂತೆ ಮುನಿಜನಾನಂದನುಂ ವಿನೀತನುಮಾಗಿ] ಧನಕೀರ್ತಿ ಮಹಾರಾಜಂ ಪಲಕಾಲಂ ರಾಜ್ಯಂಗೆಯ್ಯುತ್ತುಮಿರ್ದೊಂದುದಿವಸಂ ಕೆನ್ನೆಯ ನರೆಯಂ ಕಂಡು ॥ ೧೮೫

ಎನ್ನಂತಪ್ಪತಿಮೂರ್ಖರಿಲ್ಲ ಜಗದೊಳ್ ಬೇಳಾಗಿ ನಿಷ್ಕಾರಣಂ
ಚೆನ್ನಂ ಸ್ತ್ರೀಯರ ಭೋಗಮಂ ಮಹಿಮೆಯಂ ಶ್ರೀಯಂ ಮಹೀಚಕ್ರಮಂ
ತನ್ನಂ ತಾನಱಿಯುತ್ತುಮಿರ್ದ ತನುವಂ ನಂಬಿರ್ದ ಕೆಟ್ಟೆಂ ಜವಂ
ಗೆನ್ನಂ ತಿಂಗುರಿ ಮಾಡದೀಗಳೆ ಜಿನಶ್ರೀದೀಕ್ಷೆಯಂ ತಾಳ್ದುವೆಂ ॥ ೧೮೬

ಉಡು ಕಣ್ಣಂ ಮುಚ್ಚಿರ್ದೆ
ನ್ನಡೆಯಂ ಕೇಳಾರುಮಱಿಯರೆಂಬೆಗ್ಗಿಂದಂ ।
ಮಡಿವಂತೆ ಮಾಯ್ದು ಜಡರುಂ
ಕಿಡುವರ್ ಧನಗೇಹಮೆನ್ನದೆಂಬಳಿಪಿಂದಂ ॥ ೧೮೭

[ಉದಯಂಗೆಯ್ದಾದಿತ್ಯಂ
ಪದುಳಂ ನಡೆದಸ್ತಮಾನನಪ್ಪಂತೆವೊಲಂ ।
ಮುದದಿಂ ನರರುಂ ಕ್ರಮದಿಂ
ವಿದಿತಂ ನೀಡಿಲ್ಲದಱಿದು ದುರ್ಗತಿಗಿೞಿವರ್] ॥ ೧೮೮

ಮಾಗಿಯ ಕಾಲಂ ತೊಟ್ಟನೆ
ಬೇಗಂ ಹಿಮಮೆಯ್ದುವಂತೆ ಸಾವೆಯ್ದುವುದುಂ ।
ನೀಗದ ದುಃಖಂ ಘಮ್ಮನ
ಲಾಗಳೆ ಬಂದಿರ್ಕುಮಲ್ಲಿ ಸಂದೆಯಮುಂಟೇ ॥ ೧೮೯

ಊರಂ ಸಾರದೆ ಸಾರವಸ್ತುಚಯುಮಂ ತಾಳ್ದೊಪ್ಪಿ ನಿರ್ಗ್ರಂಥದಿಂ
ದಾರಣ್ಯಂಗಳೊಳಿರ್ಪನುಂ ಕನಕಭಂಡಾರಕ್ಕೆ ಕಾಪಿಲ್ಲದು
ಗ್ರಾರಣ್ಯಂಗಳೊಳುಣ್ಮಿ ಪೊಣ್ಮಿ ಚಲದಿಂ ಪೋಪಾತನುಂ ಕಷ್ಟಸಂ
ಸಾರೋಗ್ರಾಹಿಗೆ ಬೆಚ್ಚಲೊಲ್ಲದವನುಂ ಕೇಡೆಯ್ದುವಂ ನಿಚ್ಚಯುಂ॥೨೯॥

ಎಂದು ಸಂಸಾರಕ್ಕೆ ಪೇಸಿ ಸುಕೀರ್ತಿಯೆಂಬ ತನ್ನ ಪಿರಿಯು ಮಗಂಗೆ ಪಟ್ಟಮಂ ಕಟ್ಟಿ ರಾಜ್ಯಮಂ ತೊಱೆದು ಮುನ್ನಿನ ಯುಶೋಧರಭಟ್ಟಾರಕರಲ್ಲಿ ಜಿನದೀಕ್ಷೆಯುಂ ಕೈಕೊಂಡು ಸಕಲಶ್ರುತಪಾರಾವಾರ ಪಾರಗನಾಗಿ ಗುರುಗಳಾಜ್ಞೆಯಿಂದೇಕವಿಹಾರಮನೆತ್ತಿಕೊಂಡುಗ್ರೋಗ್ರಮಪ್ಪ ತಪದೊಳ್ ಪ್ರಾಯೋಪಗಮನದಿಂ ಸಂನ್ಯಸನವಿಧಿಯಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱು ಸಾಗರೋಪಮ ಕಾಲಮಾಯುಷ್ಯಮನೆಯೆಡೆಯುನುಮಹಮಿಂದ್ರನುಮಾಗಿ ಪುಟ್ಟಿದಂ ॥

ಸಿರಿಯುಂ ಬಿಟ್ಟು ಸಮಸ್ತಭೂವಳಯುಮಂ ಕೈಕೊಳ್ಳದೋರಂತೆ ಸೌಂ
ದರಹೇಮಾಂಗಿಯರೆಲ್ಲರಂ ತೊಱೆದು ಬಿಟ್ಟಾನಂದಮಂ ಭೋಗಮಂ
ಪರಮಶ್ರೀವಧುವಿಂಗೆ ಸೋಲ್ತು ಜಿನಪಾದಾಂಭೋಜಮಂ ಪೊರ್ದಿ ಸ
ಚ್ಚರಿತಂ ಮತ್ಪತಿ ಜೈನದೀಕ್ಷೆಗೊಡಲಂ ತಾನೊಡ್ಡಿದಂ ಧೈರ್ಯದಿಂ ॥

ಎನ್ನ ಸಂಪತ್ತೇನೆಂದು ಮಗನ ಮೋಹಮುಮಂ ರಾಜ್ಯದ ಕಾಂಕ್ಷೆಯುಮಂ ಬಿಸುಟು ಶ್ರೀಮತಿಯುಂ ವಿನಯುಮತಿಯುರೆಂಬ ಕಂತಿಯುರಲ್ಲಿ ದೀಕ್ಷೆಯುಂ ಕೈಕೊಂಡು ನಿರ್ಮಾಯೆಯಾಗೆ ನೆಗಱ್ದು ಕಡೆಯೊಳ್ ಸಮಾಧಿವಿಧಿಯಿಂ ಮುಡಿಪಿ ದೇವಲೋಕದೊಳ್ ಪುಟ್ಟಿದಳ್. ವಿಶ್ವಂಧರಮುನಿ[ಕುಂಜರನುಂ ಗುಣಪಾಲಮುನಿಯುಂ ಲಕ್ಷ್ಮೀಮತಿಯುಂ ಧನಶ್ರೀಯುಂ ಮೃಗಸೇನೆಯುಂ ತಪದೊಳುತ್ತರೋತ್ತರಂ ನೆಗಱ್ದು][1] ಸಮಾಧಿಮರಣದಿಂ ಮುಡಿಪಿ ದೇವಲೋಕದೊಳ್ ಪುಟ್ಟಿದರದುಕಾರಣದಿಂ॥

ಕೊಲೆಯುಂ ಬಿಟ್ಟ ಮಹಾತ್ಮಂ
ಸುಲಲಿತಕೈವಲ್ಯಕಾಮಿನೀಶ್ವರನಕ್ಕುಂ ।

---

[1] ಮೊದಲಾಗೆಲ್ಲರುಂ (ಗ)

ಪಲವುಂ ಮಾತಿನೊಳೇನೊ
ೞ್ಗಲಿಯಾಗಿ ಸಮಸ್ತಧಾತ್ರಿಯಂ ತಾನಾೞ್ಗುಂ ॥ ೧೯೪

ಕೊಲೆಯೊಳ್ ಕೂಡಿದ ಕಷ್ಟಂ
ತಲೆಕೆಳಗಾಗಿರ್ಕುಮುಗ್ರನರಕಾರ್ಣವದೊಳ್ ।
ಸಲೆ ತಿರಿಕಯೋನಿಯೊಳ್ ತಾಂ
ಸಲೆ ತಿರುಗುಗು [1] ಮೂವಕಾಲಮುಮಂ ಭವಭವದೊಳ್ ॥ ೧೯೫

ಎಂದಹಿಂಸಾವ್ರತದ ಪ್ರತ್ಯಕ್ಷಫಲಮುಮಂ ಹಿಂಸೆಯೊಳಾದ ಪೊಲ್ಲಮೆಯುಮಂ ಗಣಧರಸ್ವಾಮಿಗಳ್ ಪೇೞೆ ಕೇಳ್ದ ॥ ೧೯೬

ವರಭವ್ಯಾಂಭೋಜಸೂರ್ಯಂ ನಿರುಪಮಗುಣನುದ್ಯತ್ತಪಂ ದೇವಧಾತ್ರೀ
ಧರಧೈರ್ಯಂ ವಾಗ್ವಧೂವಲ್ಲಭನಘಕುಲವಿದ್ರಾವಣಂ ಸತ್ಯರತ್ನಾ
ಭರಣಂ ತ್ರೈವಿದ್ಯಚೂಡಾಮಣಿವಿಮಲಪದಾಂಭೋಜಭೃಂಗಂ ವಿನೇಯಾಂ
ಬರಚಂದ್ರಂ ತುಷ್ಟನಾದಂ [2] ಸುಕವಿಜನಮನಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪತಿನೃಪಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ಅಹಿಂಸಾವ್ರತವರ್ಣನಂ
ದಶಮಾಶ್ವಾಸಂ.

---

1 ಸಲೆ ತಿರುಗುಂ ಮತ್ತಂ ಮೇಲಮಲಮುಱುಗುಗು (ಬ. ಕ.)

2 ಧರ್ಮರತ್ನಾಕರನುರ್ವೀಪೂಜ್ಯನಂಗೋದ್ಭವಮದಗಜಸಂಹಾರತ್ರೈವಿದ್ಯಚಕ್ರೇಶ್ವರಪಾದಾಂಭೋಜಭೃಂಗಂ (ಬ. ಕ)

ಏಕಾದಶಾಶ್ವಾಸಂ

ಶ್ರೀಮದಹಿಂಸಾವ್ರತಮಿದು
ಸಾಮಾನ್ಯಮೆ ಸಕಲಸುಖಮನೀವಗ್ಗದ ಚಿಂ ।
ತಾಮಣಿಯೆಂದೊಸೆದಂ ಧರ
ಣೀಮಹಿತಂ ಸುಕವಿನಿಕರಪಿಕಮಾಕಂದಂ ॥ ೧

[ಅಂತಹಿಂಸಾವ್ರತದ ಕಥೆಯುಂ ಕೇಳ್ದು ಮನದ ಪೆರ್ಚಿಂ ಮಗಧ ನಾಯಕಂ ಮತ್ತಂ ಗಣಧರಸ್ವಾಮಿಗಳ್ಗೆ ಪೊಡೆಮಟ್ಟು ಮುಂದಣ ಸತ್ಯ ವ್ರತದ ಕಥೆಯುಂ ಬೆಸಸುವುದೆಂದು ಕೈಗಳಂ ಮುಗಿದಿರ್ಪುದುಂ ನಿರ್ವೃತಿ ಕಾಂತೆಯ ಕೂಟಕ್ಕಿದು ತಥ್ಯಮೆನಿಸುವ ಸತ್ಯವ್ರತದ ಕಥೆಯುಂ ಗೌತಮ ಸ್ವಾಮಿಗಳಿಂತೆಂದು] [1] ಪೇೞ್ದರ್ :— ವೀರದೊಳ್ ಕೂಡಿ ಪರಿಗೆಯುಂ ಬಿಟ್ಟೇಱುಂಬೆರಸಿರ್ಪಂತೆ, ಕ್ಷತ್ರಿಯಂಗೆ ಪುಟ್ಟ ಸಿಂಹಾಸನಮುಂ ಬೆಳ್ಗೊಡೆ ಯುಂಬೆರಸಿರ್ಪಂತೆ, ಶಕ್ತಿಯೊಳ್ ಕೂಡಿ ಪೆಂಡಿರುಂ ಮಕ್ಕಳುಂಬೆರಸಿ ರ್ಪಂತೆ, ಶ್ರೀಯೊಳ್ ಕೂಡಿ ತೇಜಮುಂ ಮಹಿಮೆಯುಂಬೆರಸಿರ್ಪಂತೆ, [ಜಾತ್ಯಶ್ವಮನೇಱಿ ಸಬಳಮುಮಡಾಯುಧಮುಂಬೆರಸಿರ್ಪಂತೆ, ಬಲ್ಗೋ ಟೆಯೊಳ್ ಪೊಕ್ಕು ನೀರುಂ ಧಾನ್ಯಮುಂಬೆರಸಿರ್ಪಂತೆ, ಬೀಜದೊಳ್ ನೆರೆದು ಬಂಟರೆತ್ತಿನೊಳ್ ಬೆರಸಿರ್ಪಂತೆ, ಭೂಬಲದೊಳ್ ಕೂಡಿ ಬಲ ದೊಳಂ ಬೆರಸಿರ್ಪಂತೆ, ಜವ್ವನದೊಳ್ ಕೂಡಿ ವಿಳಾಸದೊಳಂ ಶೃಂಗಾರ ದೊಳಂ ಕೂಡಿರ್ಪಂತೆ], ಸಮ್ಯಗ್ದರ್ಶನದೊಳ್ ಕೂಡಿ ಕೊಲ್ಲದ ವ್ರತ ದೊಳಂ ಪುಸಿಯದ ವ್ರತದೊಳಂ ಬೆರಸಿರ್ಪುದು ॥ ೨

---

1 ಅಂತು ಕೊಲ್ಲದ ವ್ರತದ ಕಥೆಯನಱಿದು ಮುಕ್ತಿಕಾಮಿನಿಯ ಕೂಟಕ್ಕೆ ದುವೆ ಪಥ್ಯಮೆನಿಸುವ ಸತ್ಯವ್ರತದ ಕಥೆಯುಂ ಬೆಸಸಿಮೆಂಬುದುಮಿಂತೆಂದು (ಗ)

ವಸುಧಾವಳಯುಂ ವಿಶ್ವಾ
ಸಿಸಿ ಪೊರ್ದುವುದಿವನೆ ದೇವನೆಂದೆಲ್ಲಂ ಪೂ ।
ಜಿಸುವುದದಱಿಂದಮಗ್ಗಳ
ಪುಸಿಯಿಲ್ಲದ ಸುವ್ರತಕ್ಕೆ ದೊರೆ ಪೆಱತೊಳವೇ ॥ ೩

ಇನ್ನದಱ ಪೆಂಪೆಂತೆಂದೊಡೆ, ॥ ೪

ತುಱುಗಿದ ನಂದನಾವಳಿಯಿನೊಪ್ಪುವ ವಾರಿಜಷಂಡದೋಳಿಯಿಂ
ನೆಱೆದತಿಶೋಭೆಯಿಂ ಬಳಸಿದೂರ್ಗಳಿನೊಪ್ಪುವ ಕೆಯ್ವೊಲಂಗಳಿಂ
ಮಿಱುಗುವ ರತ್ನದಿಂದೆಸೆವ ಜೈನನಿವಾಸದಿನೆಯ್ದೆ ನೀಳ್ದ ಸು
ತ್ತಿಱಿದ ತಟಾಕದಿಂ ಕರಮೆ ರಂಜಿಸುತಿರ್ಪುದು ವೆಂಗಿಮಂಡಲಂ ॥ ೫

[ತದ್ವೆಂಗಿಮಂಡಲದೊಳಂ
ವಿದ್ವಜ್ಜನದಿಂ ಸುರೇಶ್ವರನಿಭಾನ್ವಿತರಿಂ ।
ಸದ್ವಚನಯುಕ್ತರಿಂ ದೃಢ
ಸದ್ವ್ರತರಿಂ ವಿಟವಿಟೀನಿಕಾಯದಿನಧಿಕಂ ॥ ೬

ರಮಣೀಯಮಪ್ಪುದು ಪ್ರತಿಪಾಲಪುರಮೆಂಬುದದನಾಳ್ವಂ ಧನದ ಮಹಾರಾಜನೆಂಬ ಮಹಾಮಾಂಡಳಿಕನಾತಂ ॥ ೭

ಜಿನನಾಥಾರ್ಚನೆಯೊಳ್ ಸುರಾಧಿಪತಿಯುಂ ಶ್ರೇಯಾಂಸನಂ ದಾನದೊಳ್
ಮುನಿಪಾದಾಂಬುಜಭಕ್ತಿಯೊಳ್ ಮಘವನಂ ನಾಗೇಂದ್ರನಂ ಭೋಗದೊಳ್
ಧನದೊಳ್ ಖೇಚರರಾಜನಂ ಚೆಲುವಿನೊಳ್ ಕಂದರ್ಪನಂ ಬುದ್ಧಿಯೊಳ್
ಮನುವಂ ತೇಜದೊಳರ್ಕನಂ ಭರತಚಕ್ರಾಧೀಶನಂ ಪೆಂಪಿನೊಳ್ ॥ ೮

ಪೋಲ್ತು ಸುಖಸಂಕಥಾವಿನೋದದಿಂ ರಾಜ್ಯಲಕ್ಷ್ಮೀಮನೋಹರನಾಗಿರ್ಪುದುಮೊಂದುದಿವಸಂ ಚರನೊರ್ವನರಸನ ಚಿತ್ತವೃತ್ತಿಯನಱಿದು ತನ್ನ ಮನದ ಕಾರ್ಯಮನಱಿಪಿ ಮೆಚ್ಚುಗೊಳ್ವಪೇಕ್ಷೆಯಿಂ ಮೆಲ್ಲನೆ ಸಾರ್ದು ಸಾಷ್ಟಾಂಗವೆಱಗಿ ಪೊಡೆಮಟ್ಟು ದೂರದೊಳ್ ನಿಂದು ಕೈಗಳಂ ಮುಗಿದು ಬಿನ್ನಪಮೆಂದಿಂತೆಂದಂ ॥ ೯

ಮದನನ ಕೈಪಿಡಿ ಕಾಮನ
ಪದಪಿನ ತೀವ್ರಾಸಿ ಮನ್ಮಥನ ನಚ್ಚಿನ ನಂ ।
ಬಿದ ಕೈದು ಕಾಮದೇವನ
ಮದದಾನೆ ಮನೋಜನೃಪನ ಪೂವಿನ ಬಾಣಂ ॥ ೧೦

ಬಿದಿ ಕಾಡಲೆಂದು ಜಗಮಂ
ಸುದತಿಯನಚ್ಚಿ ಕರ್ತು ಪಡೆದು ಮೆಲ್ಲನೆ ಕೊಟ್ಟಂ ।
ಮದನಂಗೆ ಬಿದಿಯು ಬೆಸದಿಂ
ಮದನನುಮವಳಿಂದಮಲೆಯದಿರ್ದಪನಿಳೆಯುಂ ॥ ೧೧

ಆಪದ್ಮಾಕ್ಷಿಯು ಸೊಗಯಿಪ
ರೂಪಂ ಕೇಳ್ದವರುಮೆಳಪಿ ಮಱುಗುವರೆನೆ ಧಾ ।
ತ್ರೀಫಾಲಕ ತದ್ವನಿತೆಯ
ರೂಪಂ ನೆಱೆ ಕಂಡೊಡಳಿಪದಿರ್ಪವನಾವಂ ॥ ೧೨

ಸಂಘಶ್ರೀಯೆಂಬ ಬುದ್ಧ ಪಾಶಕನಾತನ ಮಗಳ್ ಕಮಳಶ್ರೀಯೆಂಬ ಕನ್ಯೆಯಿರ್ದಪಳಾಕನ್ಯೆ ದೇವರ್ಗೆ ಪ್ರಾಣವಲ್ಲಭೆಯಾಗಲ್ ತಕ್ಕವಳೆಂಬುದುಂ ಧನದಮಹಾರಾಜನಾತಂಗಂಗಚಿತ್ತಮನಿತ್ತು ಪೆರ್ಗಡೆಗಳಂ ಸಂಘಶ್ರೀಯಲ್ಲಿಗೆ ಕಳುಪಿ ಕಮಲಶ್ರೀಯಂ ಬೇಡಟ್ಟುವುದುಂ ಸಂಘಶ್ರೀ ಪೆರ್ಗಡೆಗಳ ಬರವನಱಿದಿದಿರ್ಗೊಂಡು ಪೋಗಿ ಪಿರಿದಪ್ಪ ವಿಷ್ಟರಮನಿಕ್ಕಿ ವಸ್ತ್ರತಾಂಬೂಲಾದಿಗಳಿಂ ಸಂತೋಷಂಬಡಿಸಿ, ಬೆಸನಾವುದೆಂಬುದುಂ ಪೆರ್ಗಡೆಗಳಿಂತೆಂದರ್ ॥ ೧೩

ನಿನ್ನ ತನೂಜೆಯಂ ವನಜಲೋಚನೆಯಂ ಲಲಿತಾಂಗಿಯಂ ವಿಳಾ
ಸೋನ್ನತೆಯಂ ಮನೋಜಗಜಗಾಮಿನಿಯಂ ರಮಣೀಯವಕ್ತ್ರೆಯಂ
ಸನ್ನುತರೂಪೆಯಂ ಧನದಭೂಪತಿ ಭೂವಳಯೈಕವಂದ್ಯನ
ತ್ಯುನ್ನತತೇಜನಿಂದ್ರವಿಭವಂ ನಯದಿಂ ಜಿನಪಾದಶೇಖರಂ ॥ ೧೪

ಬೇಡಿಯಟ್ಟಿದನೆಂಬುದುಂ ಪೊಲೆಯಂಗೆ ಪೊರ್ ದೊರೆಕೊಂಡಂತೆ ಪೆರ್ಚಿ ತಿಮಿರವ್ಯಾಧಿಯುಳ್ಳರಂತೆ ಮೆಯ್ಯುಱಿಯದೆ ಸಂಘಶ್ರೀ ತನ್ನ ಮನದೊಳ್ ಗುಡಿಗಟ್ಟಿ ಧನದಮಹಾರಾಜನಪ್ಪೊಡೆ ಋಷಿಯರ್ಗಮತಿಭಕ್ತನಾತನೆನ್ನೊಡೆಯಂ, "ಯಥಾ ರಾಜಾ ತಥಾ ಪ್ರಜಾಃ" ಎಂಬೀನೀತಿವಾಕ್ಯದಂತೆ ನಾಡುಂ ಬೀಡುಂ ಪ್ರಜೆಯುಂ ಪರಿಗ್ರಹಮುಂ ಮೊದಲಾಗೆಲ್ಲರುಂ ಜೈನರೆ ; ಎನ್ನ ಪಿಡಿದ ಬುದ್ಧಸಮಯಮಿಾತನ ದೇಶದೊಳಂ ಪುರದೊಳಮೆಸೆಗುಮಿಾತನೆ ಯೆನ್ನ ಮಗಳಪ್ಪ ಕಮಳಶ್ರೀಯುಂ ತಂದನಪ್ಪೊಡೆ, ಮತ್ತೆನಿಸದಾಕೆ ಕಾರಣಮಾಗಿ ಮೋಹದಿನೆನ್ನಿಷ್ಟದೈವಮಪ್ಪ ಸುಗತಂಗಂ ಭಕ್ತನಕ್ಕುಮೆನಗುಂ ಪಿರಿದಪ್ಪ ನಿರ್ವಾಹಮಾತನ ದೆಸೆಯಿಂ ದೊರೆಕೊಳ್ಗುಮೆಂದಾಳೋಚಿಸಿ ಪೆರ್ಗಡೆಗಳ್ಗಿಂತೆಂದಂ ॥ ೧೪

ಧರಣೀಶಂ ಬೇೞ್ಪಂ ಗಡ
ಮರವಿಂದಾನನೆಯನೆನ್ನ ಮಗಳಂ ಜಗದೊಳ್ ।
ಪಿರಿದಪ್ಪ ಜನಕ್ಕೆನ್ನಂ
ತಿರೆ ನೋಂತವರಾರ್ ಮನುಷ್ಯರೊಳ್ ನಿಶ್ಚಯದಿಂ ॥ ೧೫

ಧರಣೀಶ್ವರಜಿನಪಾದಾಂ
ಬುರುಹಂ ಭವ್ಯಜನವಾರಿಜಾರ್ಕಂ ಬೇಡಲ್ ।
ತರುಣಿಯನೀಯದೆ ಮಾಣ್ಬನೆ
ಸಿರಿ ಬರೆ ಮೊಣಕಾಲನಾಂಪ ಗಾಂಪರುಮೊಳರೇ ॥ ೧೬

ಎಂದು ಪೆರ್ಚಿ ನುಡಿದು ಕಮಲಶ್ರೀಯನೊಡಗೊಂಡು ಪೋಗಿಮೆಂಬುದುಂ ಪೆರ್ಗಡೆಗಳ್ ಕುಮಾರಿಯನಾನೆಯನೇಱಿಸಿಕೊಂಡು ಅರಮನೆಗೆವಂದು ಅರಸಂಗೊಪ್ಪಿಸುವುದುಂ ॥ ೧೭

ಅರಸಂ ಕನ್ನೆಯ ರೂಪಂ
ಪರಿಭಾವಿಸಿ ನೋಡಿ ನೋಡಿ ಲಾವಣ್ಯಕ್ಕ ।
ಚ್ಚರಿವಟ್ಟು ತೂಗಿ ತಲೆಯಂ
ಸುರೇಂದ್ರಸತಿಗೀಕೆ ಚೆಲ್ವಿನೊಳ್ ಮಿಗಿಲಪ್ಪಳ್ ॥ ೧೮

ಆತನ ಪೇಟ್ಕೆಗೆ ರೂಪುಪ
ಮಾತೀತಂ ಚೆಲ್ವಿನೇಳ್ಗೆಯೊಳ್ ಮೇನಕಿಗಂ ।
ಸೀತೆಗಮಬ್ಜಾನನೆ ತಾಂ
ಭೂತಳದೊಳಗೀಕೆ ನಾಲ್ವೆರಳ್ಮಿಗಿಲಪ್ಪಳ್ ॥ ೨೦

ಎಂದು ಮನದೊಳ್ ಪೊಗಳ್ದು ಕಮಳಶ್ರೀಯುಂ ॥ ೨೧

ಸಿರಿಯೊಳ್ ನಾರಾಯಣಂ ರಂಭೆಯೊಳಮರವರಾಧೀಶ್ವರಂ ಸೀತೆಯೊಳ್ ಭೂ
ಧರವಂದ್ಯಂ ರಾಘವೇಶಂ ರತಿಯೊಳಮಳಚಿತ್ತೋದ್ಭವಂ ರೋಹಿಣೀಸೌಂ
ದರಶೋಭಾಕಾರೆಯೊಳ್ ಚಂದ್ರಮನನುನಯದಿಂ ಕೂರ್ತು ಕೂಡಿರ್ಪವೋಲ್ ಭೂ
ಧರಧೈರ್ಯಂ ಕನ್ಯೆಯೊಳ್ ಸಂತಸದಿನೊಸೆದು ಕೂಡಿರ್ದನುತ್ಸಾಹದಿಂದಂ ॥ ೨೨

ಅಂತಿರ್ದೊಂದುದಿನಂ ಭೂ
ಕಾಂತಂ ಜಿನಪಾದಪದ್ಮಮಧುಪಂ ರಿಪುಭೂ ।
ಪಾಂತಕನೊರ್ಮೆಯೆ ತನ್ನೊಳ್
ಚಿಂತಿಸಿದಂ ಸಾರಮಲ್ಲದೀಸಂಸ್ಕೃತಿಯಂ] [1] ॥ ೨೩

ಪೆಂಡಿರ ವಶಮಾಗಿ ಮಹೀ
ಮಂಡಲದೊಳ್ ಪಲರುಮೆಯ್ದಿದರ್ ದುರ್ಗತಿಯಂ ।
ಪಂಡಿತರಪ್ಪವರದಱಿಂ
ಪೆಂಡಿರ ಬಳಸಿಂಗೆ ಬೇಗಮೆಳಸುವರಲ್ಲಂ ॥ ೨೪

1 ಆದೇಶದೊಳ್ ಪ್ರತಿಪಾಲಪುರವೆಂಬುದು ಪುರಮುಂಟದನಾಳ್ವಂ ಧನದ ಮಹಾರಾಜನೆಂಬ ಮಾಂಡಳಿಕಂ ಸಂಘಶ್ರೀಯೆಂಬ ಬೌದ್ಧನ ಸುತೆ ಕಮಲಶ್ರೀಯೆಂಬ ಕುಮಾರಿಗೆ ಸೋಲ್ತು ವಲ್ಲಭೆಮಾಡಿ ಸಂಘಶ್ರೀಗೆ ಮಂಡಲಮಂ ಕೊಟ್ಟು ಕೆಲವು ದಿವಸಂ ಸುಖವಿರ್ದೊಂದುದಿವಸಂ ತನ್ನ ಮರುಳ್ತನಕ್ಕೆ ವಿಸ್ಮಯಂಬಟ್ಟು (ಗ)

ಜಿನಪಾದಸೇವೆಯಂ ಬಿ
ಟ್ಟನವರತಂ ಪೆಂಡಿರೆಱಕದಿಂದಿರ್ಪ ನರಂ ।
ಜನನಿಯುಮನೊಲ್ಲದೆ ರಾಕ್ಷಸ
ವನಿತೆಯನಪ್ಪಿರ್ದು ಪೊರ್ದುವೆಗ್ಗನನಿಱಿಕುಂ ॥ ೧೫

[ಜಿನಮುನಿಗಳ ಭಕ್ತಿಯನುೞಿ
ದನುನಯದಿಂ ಪೆಂಡಿರೆಱಕದಿಂದಿರ್ಪಾತಂ ।
ಕನಕಮನೀಡಾಡಿ ಮರು
ಳ್ತನದಿಂದಿದ್ದಿಲನೆ ಕೊಳ್ವ ಮರುಳಂ ಪೋಲ್ಕುಂ] ॥ ೧೬

ಜಿನಭಕ್ತಿಯಿಲ್ಲದಾಕೆಯೊ
ಳನಂಗವಶನಾಗಿ ಸೋಲ್ತು ಕೂಡಿರ್ಪಾತಂ ।
ತನಗೆ ಕಡುಮುಳಿವ ನರನಂ
ಮನೆಯಂ ಪೊಕ್ಕಿಪ್ಪ ಗಾಂಪನಂ ನೆಱೆ ಪೋಲ್ಕುಂ ॥ ೧೭

[ನಡುಮನೆಯೊಳ್ ನಿಧಾನಮಂ ಕಂಡದನಗೞ್ವನಿತು ಕಾಯಕ್ಲೇಶಕ್ಕಾಱದೆ ಬಡತನದೊಳ್ ನವೆವನುಂ, ಪಲಕಾಲಂ ಗೊರೆಕೊಳ್ಳದ ಸದ್ಧರ್ಮಂ ಪುಣ್ಯದಿಂ ದೊರೆಕೊಂಡೊಡೆ ಧರ್ಮದೊಳಾದಲ್ಪ ದುಃಖಕ್ಕೆ ತನುವುಮಂ ಧನಮುಮನೊಡ್ಡಲಾಱದೆ ಪೆಂಡಿರ ರಾಜ್ಯದ ಧನಶ್ರೀಯೊಳಾದಲ್ಪಸುಖಕ್ಕೞಿಪಿ ನರಕದೊಳ್ ಬಿರ್ದು ಮಹಾದುಃಖದೊಳ್ ಕುದಿವರುಮೊಗ್ಗರೆಂದು ಭಾವಿಸಿ ಕಮಳಶ್ರೀಯೊಳಾದ ವಿರಹಾಗ್ನಿಯಂ ಜಿನವಚನವಾರಿಯಿಂ ಮೆಲ್ಲನೆ ನಂದಿಸಿ][1] ಪಲವು ತೆಱದ ಧರ್ಮಶ್ರವಣದಿಂ ಕಮಳಶ್ರೀಯಂ ಸದ್ಧರ್ಮಕ್ಕೆ ತಂದು ಸಕಳಶ್ರಾವಕವ್ರತಂಗಳಂ ದೇವಗುರುಸನ್ನಿಧಾನದೊಳ್ ಕೈಕೊಳಿಸಿ ದರ್ಶನಶುದ್ಧಿಯಪ್ಪಂತು ಮಾಡಿ ಸಂಘಶ್ರೀಯುಮಂ ಶ್ರಾವಕನಂ ಮಾೞ್ಪ ಬಗೆಯಂ ತಂದು ತನ್ನೊಳಿಂತೆಂದಂ ॥ ೧೮

1 ಎಂದು ಭಾವಿಸಿ (ಗ)

ಮುಳ್ಳುಳ್ಳ ವೃಕ್ಷಮಂ ಕರ
ಮಲ್ಲದೆ ಪೊರ್ದಿದ ಲತಾಳಿ ಕಿಡುವಂತಿರೆ ಪೆಂ।
ಪಿಲ್ಲದ ಕುಮಾರ್ಗಗಳುಮಂ
ಮೆಲ್ಲನೆ ಪೊರ್ದಿರ್ದ ನರರ ಗುಣಮುಂ ಕಿಡುಗುಂ ॥ ೨೯

ಬಿಡದೆಂಜಲ ಕುೞಿಯುಂ ನೇ
ರ್ಪಡೆ ಪೊರ್ದಿದ ವಾರಿ ಪೊಲ್ಲದೆನಿಪವೊಲಳಿಪಿಂ।
ಕಡುಪೊಲ್ಲರಪ್ಪ ಮಾನವ
ರೊಡಗೂಡಿದ ಮಾನಿಸರ್ಗೆ ಸದ್ಗುಣವೞಿಗುಂ ॥ ೩೦

ಅದುಕಾರಣದಿಂ ಪೆಂಡತಿಗೆ ಕೂರ್ಪಾತನತ್ತೆಯೊಡನೆ ಕಿರ್ಚುರ್ವೊಕ್ಕನೆಂಬ ನಾಣ್ಣುಡಿಯುಂ ನನ್ನಿಮಾಡಿ, ಕೆಮ್ಮನಪ್ಪ ಕುಮತಪ್ರೀತನುಂ ದುಷ್ಕರ್ಮಸಮೇತನುಮಪ್ಪ ಸಂಘಶ್ರೀಯಂ ಕಮಳಶ್ರೀಯು ಮೋಹದಿಂ ಪಿಡಿದು ಕೊಂಡಾಡಿ ಸುಗತಿಯಿಂ ಕೆಟ್ಟು ಸದ್ಧರ್ಮಮಂ ಬಿಟ್ಟು ದುರ್ಗತಿಗೆ ಸಲ್ವ ಕಜ್ಜಮಂ ಬಗೆಯಲಾಗದಾತನುಮಂ ಧರ್ಮದೊಳ್ ದೃಢನಪ್ಪಂತು ಮಾಡಿ ಬೞಿಕ್ಕಾತನಮೇಲೆ ಮೋಹಮಂ ಮಾಡುವೆನೆಂದು ದಿವಸಕ್ಕಂ ಕ್ರಮಕ್ರಮದಿಂ ನಿರ್ವೃತಿಯ ಸೈದಾರಿಯೆನಿಪ ಜಿನಾಗಮಮನಿಂತೆಂದು ಪೇೞ್ದಂ ॥ ೩೧

ಆರಯ್ದು ನೋಡಿ ನಾಡೆ ವಿ
ಚಾರಿಸಿ ಸದ್ಧರ್ಮಮಪ್ಪುದಂ ಪಿಡಿಯದೆ ನಿ।
ಷ್ಕಾರಣಮವಿಚಾರತೆಯಿಂ
ಸಾರಂಗೆಟ್ಟಿರ್ದ ಧರ್ಮಮಂ ಪೊರ್ದುವುದೇ ॥ ೩೨

ವ್ರತದ ನೆಗೞ್ತೆಗೆ ಜೆಂಬಿ
ರ್ದತಿಶಯಸದ್ಧರ್ಮರತ್ನಮಂ ಬಿಟ್ಟು ಮಹೋ।
ನ್ನತಿಯಿಂ ಕುಧರ್ಮಮಂ ಸಂ
ತತಮುಳಿಪಿಂ ಪಿಡಿದು ನಲಿವ ಮನುಜನೆ ಗಾಂಪಂ ॥ ೩೩

ತನ್ನಯ ಮನಮವಿಚಾರಿಸೆ
ತನ್ನ ಮನಂಬೊಕ್ಕ ಬಳಿಕೆ ಮುಕ್ತಿಯನೀವ ।
ತ್ಯುನ್ನತಧರ್ಮಮನಱಿವಿಂ
ಸನ್ನುತಮತಿಯಾಗಿ ಪಿಡಿಯದಾತನೆ ಗಾಂಪಂ ॥ ೩೪

ಊರಾವುಗಳೋಡುವುದಂ ಕಂಡು ಕುರುಡಾವುಂ ಓಡಿತೆಂಬಂತೆ ವಿಜ್ಞಾನಹೀನರುಂ ದುರ್ಗತಿಭಾಜನರುಂ ಅಘಸಮೇತರುಮವಿಚಾರಿಗಳು ಮಪ್ಪ ದುರ್ಮತಿಗಳಂ ಕಂಡು ಬೆಳಬೆಂಜನನಾಗಿ, ಕೊಲೆಯೊಳ್ ಪೊರ್ದಿದ ಪುಸಿಯೊಳೊಡಂಬಟ್ಟ ಕಳವಿನೊಳ್ ಕೂಡಿದ ಪರಸ್ತ್ರೀಯ ರೊಳಂದಿದ ಪರಿಗ್ರಹಾಪೇಕ್ಷೆಯಿಂ ಮತಿಗೆಟ್ಟು ಮಱುಗುವ ಕುತ್ಸಿತ ಧರ್ಮಮುಮಂ, ರಾಗದ್ವೇಷಾದಿ ದೋಷಯುಕ್ತನುಂ [ವನಿತಾಸ ಕ್ತನುಂ] ರೌದ್ರಾತ್ಮನುಂ ನಿರ್ದಯನುಮಪ್ಪ ದೇವನುಮಂ, ಪೆಸರಿಲ್ಲ ದುಪದೇಶಮಿಲ್ಲದ [ನಿಯಮಮಿಲ್ಲದ] ನಿಷ್ಠೆಯಿಲ್ಲದ ದುರಾಚಾರದೊಳ್ ಪೊರ್ದಿದ ವ್ರತಮುಮಂ, ಅಭಿಮಾನಮಿಲ್ಲದ ಧೈರ್ಯವಿಲ್ಲದ ಶಾಂತರೂಪ ಲ್ಲದ ಕೋಪದೊಳ್ ಕೂಡಿದ ಮಾಯಾವಿಯಾಗಿ ಮೆಚ್ಚಿದಂತೆ ನೆಗಳ್ವ ತಪಮುಮಂ, ಕೊಂಡಾಡುವ ಕೈಕೊಳ್ವ ಕೈಮುಗಿವ ಸುಗತಿವಡೆವೆ ನೆಂಬ ಮಾನಿಸಂ ಕಟ್ಟೆಗ್ಗನಕ್ಕುಮದೆಂತೆಂದೊಡೆ, ಮತ್ತಿಯೆಲೆಯುಂ ತಾಂಬೂಲದೆಲೆಯೆಂದು ಮೆಲ್ದು ಪಲ್ಗಱಿಗಾಸೆಗೆಯ್ವನುಮಂ ಬೂದಿಯು ಬೆಳ್ಪುಮಂ ನುಣ್ಪುಮಂ ಕಂಡು ಕಳವೆಯಕ್ಕಿಯ ಪಿಟ್ಟೆಂದು ಕಾವಲಿ ಯೊಳ್ಱಿದೌಗನಡುವೆನೆಂಬನುಮಂ ಪೋಲ್ಕುಮಿಂತು ॥ ೩೫

ಕಸಮಂ ಸೋದಿಸಿ ಮಾಣದುತ್ತು ಮನೆಯುಂ ಸದ್ಭಾರ್ಯೆಯುಂ ಬಿಟ್ಟು ಸಂಕಿಸದೋರಂತಿರೆ ಕಾದು ಪಟ್ಟು ಪದೆಪಿಂ ಮಣ್ಣಿಕ್ಕಿ ಲೇಸಾಗಿ ಬಿ ತ್ತಿ ಸಮಂತೊಯ್ಯನೆ ಧಾನ್ಯಮಂ ಪಡೆವವೊಲ್ ಸದ್ಧರ್ಮದಿಂದಾದ ಬೇ ವಸಮಂ ಸೈರಿಸಿ ನಿಂದು ಮುಕ್ತಿಸುಖಮಂ ಕೈಕೊಳ್ವುದಾನಂದದಿಂ ॥

ಮತ್ತಂ ನೀರೊಳಗಣ ಮರದಂತೆ ಮೆಚ್ಚಿದಂತು ಪರಿಯದೆ ಕಡು ವೆಳದ ಮರದಂತೆ ಮನದೊಳಲ್ಲಾಡದೆ ಪಂದೆಯುಪ್ಪನಂಕದಂತೆ ಪಲವಂ

ನೆನೆಯದೆ ಕಲಿಯಪ್ಪ ಮೂರ್ಖನಂತೆ ಮೆಯ್ಮಱೆಯದೆ ಪಲಕಾಲದ ವೃದ್ಧನಂತೆ ಮತಿಗಿಡದೆ ಪಾಣ್ಬೆಯಪ್ಪ ಸಜ್ಜನೆಯಂತೆ ಸಿಡಿಮಿಡಿಗೊಳ್ಳದೆ ಪೊಲೆಬೂತಿನಂತೆ ಕಿಡೆ ನುಡಿಯದೆ ಪಾದರಸದಂತೆ ನೆಲೆಗೆಟ್ಟು ಪರಿಯದೆ ಬೆಂದ ಮುತ್ತುಗಳಂತೆ ಪೆಟ್ಟುವೆರ್ಚದೆ ಬಕದಂತೆ ಪೊಲ್ಲಮೆಯಂ ಪಾರದೆ [1] ಬೇಸಗೆಯ ಪೊನಲಂತೆ ಕ್ಷಣಿಕನಾಗದೆ ಪಗರಣಿಗರಂತೆ ಬೇಳಂಬಮಾಗದೆ ಪುಲ್ಲೆಯ ನೋಟದಂತೆ ಸಂಚಳನಾಗದೆ ಕಷ್ಟರ ನನ್ನಿಯಂತೆ ಕಿಡದೆ ಕುಲಜನಂ ಕಂಡ ಪೊಲೆಯನಂತೆ ಪುಸಿಯದೆ ನಿಂದು ಸುವ್ರತಂಗಳಂ ತಾಳ್ದಿ ಪರತ್ರೆಯ ಮಹಾಸುಖಮಂ ಪಡೆವುದು ॥ ೩೭

ಕೆಮ್ಮನೆ ಮೂರ್ಖರ ಪೇೞ್ಕೆಗೆ
ತಮ್ಮ ಮನಂಸೋಲ್ತು ಸುವ್ರತಕ್ಕಾಱದೆ ಕಾ ।
ಡೆಮ್ಮೆಯ ತೆಱದಿಂ ಮಲೆವರ್
ಕೆಮ್ಮನೆ ಸದ್ದರ್ಶನಕ್ಕೆ ಮುನಿವರ್ ಧೂರ್ತರ್ ॥ ೩೮

ಪಿಡಿಯಚ್ಚು ಮಿಡಿದು ಕೆಮ್ಮನೆ
ಜಡಮತಿಗಳ್ ತಮ್ಮ ಬೆಸನಮಂ ಸಲಿಸುವುದಂ ।
ಬಿಡಲಾಱದೆ ನಿರ್ವೃತಿಯಂ
ಕಿಡಿಸಿ ಕುಕಿಲ್ದೆಯ್ದಿ [2] ಪೊರ್ದುವರ್ ದುರ್ಮತಮಂ ॥ ೩೯

ಮುಱುಮಿಕ್ಕಿ ಪೊರೆದು ಗೊಡ್ಡಂ
ಕಱೆದೊಡೆ ಪಾಲುಂಟೆ ದೋಷಿಯಪ್ಪಾತನುಮಂ ।
ಪೆಱಪಿಂಗದೆ ಪಿಡಿದಿರ್ದೊಡೆ
ನೆಱೆ ನಿರ್ವೃತಿಸುಖಮನಣ್ಣ ಪೇೞ್ಪಡೆದಪರೇ ॥ ೪೦

---

1 ಬಡಿವೆತ್ತ ಬೇಡನಂತೆ ಮುನಿಯದೆ ದಾಸಂಬಡೆಯದ ಪಾರ್ವನಂತೆ ಮನಂಗುಂದದೆ ಸೋಂಬನಂತಲಸದೆ ನಿರ್ಮಲನಾಗಿ ದೇವನುಮಂ ಧರ್ಮಮುಮಂ ವಿಚಾರಿಸಿ ಕೈಕೊಂಡು ಮರನ ಮೊದಲಂತಲ್ಲಾಡದೆ ತಿಪ್ಪೆಯ ನೀರಂತೆ ಪೊಲ್ಲನಿಸದೆ ಬೇಸಗೆಯ (ಗ)

2 ಕುಡುಗೆಂಪು ಕುಕಿಲ್ವ (ಬ. ಕ.)

ಒರೆಗೀಪೊನ್ನಿಗೀಪೊನ್ನಿನಿ
ವಿರಿದೀಪೊನ್ನಿದು ಸಮಂತು ಕಿಱಿದೆಂದಾರ |
ಯ್ದುರುಮುದದಿನಱಿಯದಾಡುವ
ಪರದನವೊಲ್ ದೈವಮೆಱಿಯದವನುಂ ಕಿಡುಗುಂ || ೪೧

ಪದನಱಿದು ಬಿತ್ತದ ಬೆಳಸುಂ, ಪ್ರಾಯಮಱಿದು ಪಡೆಯದ ಸೂಳೆಯ ಪಡಪುಂ, ಲಾಭಮಱಿಯದಾಡಿದ ಪರದುಂ, [1] ಪಾಲಱಿದು ಮಾಱುಗೊಳ್ಳದ ಪಯನುಂ, ವಿಚಾರಮೆಱಿಯದೆ ತಿರ್ದುವ ತಿರ್ದುಂ, ಜಾತಿಯಱಿಯದೆ ಕುಡುವ ಕೂಸುಂ, ಬೀರಮೆಱಿಯದೆ ಪೊರೆದ ಬಂಟನುಂ, ಶೀಲಮಱಿಯದ ಪೆಂಡಿರ ಕೂರ್ಮೆಯುಂ, ಪೊನ್ನಳವಿಯಱಿಯದಾತನ ಪರದುಂ [2], ರುಚಿಯಱಿಯದೂಟಮುಂ, ಬಡತನಮಱಿಯದ ಬೇಟಮುಂ, ಶಕ್ತಿಯಱಿಯದ ಪೋಱೆಯುಂ, ಪೆಸರಱಿಯದಂಗೆ ಕೊಟ್ಟ ಸಾಲಮುಂ, ಪೊಲನಱಿಯದ ತೋಟಮುಂ, ಮನಮಱಿಯದಾಟಮುಂ, ಸಲುಗೆಯಾದವನ ಪುರುಡುಂ, ದೇವನುಮುಂ ಧರ್ಮಮುಮಂ ವ್ರತಮುಮನಱಿಯದೆ ಮೂಗಂ ಮೇಲೆತ್ತಿ ಪೊಟ್ಟೇಱಿಸಿ ದುರ್ಮಾರ್ಗಮಂ ತನ್ನಿಚ್ಛೆಗೆ ನಚ್ಚಿ ಮೆಚ್ಚಿ ಕೊಂಡಾಡಿ ಮುದದಿಂದೆನ್ನ ಪಿಡಿದುದೆ ದೈವಮೆನ್ನ ಮಾಡುವುದೆ ಧರ್ಮಮೆನ್ನ ನೆಗಱ್ದೆ ತಪಮೆಂದು ಮುಯ್ಪಂ ನೋಡುವ ಮಾನಿಸರುಂ ತುದಿಯೊಳ್ ಮಹಾದುಃಖಮನೆಯ್ದುವರಲ್ಲದೆ ಸುಖಮನೆಯ್ದುವರಲ್ಲರಿಂತು || ೪೨

ತೆಂಗಿನಕಾಯದೊಂದು ಕಠಿನತ್ವಮನೊರ್ಮೆಯೆ ಕಂಡು ಪೊಲ್ಲದೆಂ
ದೇಂ ಗಳ ಬೆಚ್ಚಿ ಭೀರುತನದಿಂ ಬಿಡದೊಯ್ಯನೆ ಮೂಸಿ ನೋಡಿ ನಾ
ಯ್ಪಿಂಗಿದುದೆಂಬ ಬೆಳ್ತನಮನೊಯ್ಕನೆ ಮಾಡದೆ ಬುದ್ಧಿವಂತರುಂ
ಪಿಂಗದೆ ಪೊರ್ದಿ ಮೆಲ್ಲನೆ ವಿಚಾರಿಸಿ ಪೊರ್ದುವುದಾಪ್ತನಪ್ಪನಂ || ೪೩

---

1 ಬಳೆಗಱಿಯದ ಕೋಟೆ ಕಳೆಗಮುಂ (ಗ)

2 ಮನಮಱಿಯದಾತನ ಕೆಳೆಯುಂ ಕುಲಮಱಿಯದಾತನೆಂಜಲುಂ ಬಲಮಱಿಯದಾತನ ಕಾಳೆಗಮುಂ ನೆಲೆಯಱಿಯದೆ ತೋಱೆಯಂ ಪಾಯ್ವನುಂ (ಗ)

ದಕ್ಕಿನೊಳ್ ಮಾಡಿದ ಮನೆ ಸೊಕ್ಕಿದಾನೆ ಸೋಂಕೆ ಕೆಡೆದು ಬೀೞ್ವಂತೆ ದೋಷಿಯಪ್ಪ ದೇವನಂ ಪಿಡಿದ ಮಾನಿಸನುಂ ಕರ್ಮರಾಜನೊಡ್ಡಂ ಮಾರ್ಕೊಳಲಾಱದೆ ನರಕದೊಳ್ ತಲೆ ಕೆಳಕಾಗಿ ಬೀೞ್ಗುಮಿಂತು ॥ ೪೪

ಮಿಳಿಯೊಳ್ ಮಾತಂಗಮಂ ಕಟ್ಟಿದೊಡೆ ನಿಲುಗುಮಂತಲ್ಲದಾದಂದು ಕೂರ್ಪಂ
ಬಲದಿಂ ಮುಯ್ವಾಂತು ಪೇರಾನೆಯನವಯವದಿಂ ಪಂಜಿಯೊಳ್ ಕಟ್ಟಿದಂದು
ಮ್ರಳದಿಂ ಮತ್ತದ್ವಿಪಂ ನಿಂದಪುದೆ ಮರುಳೆ ಸದ್ಧರ್ಮದಿಂದಲ್ಲದುರ್ವೀ
ತಳದೊಳ್ ದುಷ್ಕರ್ಮಬಂಧಂ ಕಿಡಲಱಿಗುಮೆ ಮತ್ತನ್ಯಧರ್ಮಂಗಳಿಂದಂ ॥ ೪೫

ಕಾೞ್ಕಿಚ್ಚಿಗಂಜಿದಾತಂ ಪೆರ್ಮಡುವಂ ಪೊಕ್ಕೊಡೆ ಬಾೞ್ಗುಮುದ್ಧತಿಯಿಂ ಕರಂಡಮಂ ಪೊಕ್ಕೊಡೆ ಕಱಿಮುಱಿಯಾಗಿ[1] ಬೇಗುಮಂತೆ ನರಕತಿರಿಕಂಗಳೊಳ್ ಕರಟದ ಕದಿರಂತೆ ತಿರಿಪುವ ಕರ್ಮಕಂಜುವಾತಂ ಸದ್ಧರ್ಮಮಂ ಪಿಡಿದೊಡೆ ಸುಖಿಯಕ್ಕುಮಲ್ಲದೆ ಕೊಲೆಯೊಳ್ ಕೂಡಿದ ಕುಧರ್ಮಮಂ ಪಿಡಿದೊಡೆ ನರಕಮಂ ಪೊಕ್ಕು ಮಹಾದುಃಖಮನೆಯ್ದುಗುಂ ॥ ೪೬

ಬೇವಿಂಗೆ ಕಯ್ಪು ಸಹಜಂ
ಭೂವಳಯದೊಳೆಂಬ ತೆಱದಿನತಿಪಾಪಿಗಳುಂ ।
ಶ್ರೀವರಸದ್ಧರ್ಮದ ದೆಸೆ
ಗೋವದೆ ಮುನಿಯುತ್ತುಮಿರ್ಪರಘವಶದಿಂದಂ ॥ ೪೭

ಒಡೆಯರ ಸಿರಿಯಂ ಕಂಡೊಡೆ
ಬಡವರ್ಮ್ಮುನಿವಂತೆ ನರಕಗತಿಗಿೞಿವವರುಂ ।
ತಡೆಯದೆ ನಿರ್ವೃತಿಸುಖಮಂ
ಪಡೆವವರಂ ಕಂಡೊಡಾಗಳುಂ ಕಡುಗಾಯ್ವರ್ ॥ ೪೮

---

1 ಕರಿಮುರಿಯಾಗಿ (ಗ)

ಪೊನ್ನುಳ್ಳವರಂ ಕಳ್ಳರ
ಬೆನ್ನಟ್ಟ ತಗುಳ್ವ ತೆಱದಿನತಿನಿರ್ಮಳರಂ ।
ಸನ್ನುತದರ್ಶನಶುದ್ಧರ
ನುನ್ನತರಂ ಪಾಪಿಯುಪ್ಪರುಂ ನೆಱೆ ತಗುಳ್ವರ್ ॥ ೪೯

ಮಡೆ ಮೊಕ್ಕಳಮಾದೊಡೆ ತೋಱೆ ಪೆರ್ಚಿ ಪರಿಗುಮಲ್ಲದೆ ಸಮುದ್ರಂ ಪೆರ್ಚಿ ಪರಿಯದಂತೆ ಕುತ್ಸಿತಧರ್ಮದ ಮಹಿಮೆಗೆ ಮಿಥ್ಯಾದೃಷ್ಟಿಗಳಪ್ಪ ದುರಾತ್ಮರ್ ಪೆರ್ಚುವರಲ್ಲದೆ ಸದ್ದೃಷ್ಟಿಗಳಪ್ಪ ಮಹಾತ್ಮರ್ ಪೆರ್ಚಲಱಿಯರ್ ॥ ೫೦

ಸಾರಂ ಚಾಮೀಕರಭಂ
ಡಾರಕ್ಕಟ್ಟಿರ್ದು ಕಾಪನಿಡುವವೊಲಲೆ ಸಂ ।
ಸಾರಭಯಮುಳ್ಳ ಭವ್ಯನು
ಮೋರಂತಿರೆ ಕಾದುಕೊಳ್ಗೆ ರತ್ನತ್ರಯಮಂ ॥ ೫೧

ಏಗೆಟ್ಟುದೆಂದು ಹೀನೋ
ದ್ಯೋಗದಿನೇಱಿದರ ಮಾತನಾಲಿಸಿ ಕಿಡದು ।
ದ್ಯೋಗಿಯಿವನೆನಿಪ ಭವ್ಯಂ
ಬೇಗಂ ತಿಳಿದಾತ್ಮು ಪಿಡಿಗೆ ಸದ್ದರ್ಶನಮಂ ॥ ೫೨

ಮತ್ತಂ [ಹೋಮಮಂ ಮಾಡುವ ಬ್ರಾಹ್ಮಣಂ ನೋಣವು ಬೆನ್ನನೂಱಿದೊಡೆ ಸೈರಿಸಲಾಱದೆ ಬೆನ್ನಂ ಪೊಯ್ದುಕೊಳ್ವುದುಂ ಕೆಲದೊಳಿರ್ದವರೆಲ್ಲಂ ಕೊಡನ ತುಪ್ಪದೊಳ್ ಕೈಯನದ್ದಿಕೊಂಡು ತಮ್ಮ ಬೆನ್ನಳಂ ಪೊಯ್ದು ಕೊಂಡರೆಂಬ ಗಾವಿಲಿಕೆಯಂ ಮಾಡಿ] ಲೋಕವಾಡಿದಂತಾಡಿ ಕುಮಾರ್ಗಮಂ ಪತ್ತದೆ ಮೂಢತ್ರಯಮಂ ಬಿಟ್ಟು ಮುಕ್ತಿಯನೆಯ್ದಿ [ಸುವ ಸದ್ಧರ್ಮಮಂ] ನಿರ್ದೋಷಿಯಪ್ಪ ದೇವನುಮಂ [1] [ಮಹಾಪರೀಷಹಂಗಳಂ ಗೆಲ್ವಂತಪ್ಪ ತಪಮುಮಂ] ಪೊರ್ದುವುದೆಂದು ಧನದ ಮಹಾರಾಜನಾಪ್ತಧರ್ಮದ ತಪದ ಸ್ವರೂಪಮಂ ಪೇೞ್ವುಡಂ ಸಂಘಶ್ರೀ ಧರ್ಮಕ್ಕೆ[ಂತುಂ ಬಾರದಿರ್ಪುದುಮೊಂದುದಿವಸಂ ॥ ೫೩

---

1 ಕೊಲೆಯೊಳ್ ಪೊರ್ದದ ಸದ್ಧರ್ಮಮಂ (ಗ)

ಪರಮತಪೋಧನರ್ ದುರಿತಸಂಹರಣರ್ ನಿಖಿಳಾಗಮಾನ್ವಿತರ್
ಗುರುಪದಭಕ್ತರೂರ್ಜಿತಯಶರ್ ಜಿನಧರ್ಮಸರೋರುಹಾರ್ಕರು
ತ್ತಮಗುಣರಿಂದ್ರಶೈಲಸದೃಶಕ್ಷಮರುಗ್ರಕಷಾಯಹೀನರುಂ
ಸುರನರಪೂಜಿತಕ್ರಮಪಯೋರುಹರುನ್ನತಪುಣ್ಯಮೂರ್ತಿಗಳ್ ॥ ೫೪

ಪೂರ್ವವಿದೇಹದಿಂ ಚಾರಣಋಷಿಯರ್ ವೈಕ್ರಿಯಿಕ ಋದ್ಧಿ ಪ್ರಾಪ್ತರಪ್ಪುದಱಿಂ ತಮ್ಮ ಪಂಚಶತಚಾಪೋತ್ಸೇಧಮಪ್ಪ ದೇಹಮಂ ಭರತಕ್ಷೇತ್ರದವರ ದೇಹದಸತು ಪ್ರಮಾಣಂಮಾಡಿ ಪೊಳೆವೆಳವೆರೆಯಂತೆ ತೊಟಿತೊಟಿ ತೊಳಗುವ ದೇಹಮನೊಡೆಯರಂತರಿಕ್ಷದೊಳ್ ಪೋಗುತ್ತಿರ್ದರವರಂ ಸಾಮಂತರಾಜಕುಮಾರಮಕುಟಬದ್ಧಪರಿವೃತನಾಗಿರ್ದ ವಾತ್ಸಲ್ಯರತ್ನಾಕರಂ ಕಂಡು ॥ ೫೫

ಖರಕರನುದಯದೊಳರಲದ
ಸರೋಜದಂತಾಗಳೆಯ್ದೆ ಭಕ್ತಿಯ ಭರದಿಂ ।
ಕರಮಲ್ಲದರಲೆ ಮುಖಪಂ
ಕರುಹಂ ಧರಣೀಶನೆರ್ದ ಸಿಂಹಾಸನದಿಂ ॥ ೫೬

ಚಾರಣಋಷಿಯರ ರೂಪಂ
ಚಾರುಗುಣಂ ನೋಡಿ ಸಂತಸಂ ಮಿಗೆ ಹಸ್ತಾಂ ।
ಭೋರುಹಮಂ ಮುಗಿದು ಗುಣಾ
ಧಾರಂ ಕಳಕಳಿಸಿ ನಕ್ಕು ಮಂತ್ರಿಯ ಮುಖಮಂ ॥ ೫೭

ನೋಡಿ, ನೋಡ ಸದ್ಧರ್ಮದೊಳಾದ ಮಹಿಮೆಯನೆಂದು ಮುನಿಯುಗಳಮಂ ತೋಱಿ ತಪದೊಳಪ್ಪ ಋದ್ಧಿಗಳುಮಂ ದಾನದಿಂದಪ್ಪ ಮಹಾಭೋಗಂಗಳುಮಂ ಪೂಜೆಯಿಂದಪ್ಪ ಪರಮೈಶ್ವರ್ಯಂಗಳುಮಂ ಸಮ್ಯಕ್ತ್ವದಿಂದಪ್ಪ ನಿರ್ವೃತಿಶ್ರೀಯುಮಂ ಪೇೞೆ, ಸಂಘಶ್ರೀ ಕೇಳ್ದು ಧರ್ಮದ ಪ್ರತ್ಯಕ್ಷ ಫಲಮಂ ಕಣ್ಣಾರೆ ಕಂಡು ಸದ್ಧರ್ಮಾಭಿಮುಖ

ನಾಗಿ ಮನದ ಶಂಕೆ ಪೋಗೆ ಮಿಥ್ಯಾತ್ವಕ್ಕೆ ಪೇಸಿ ಶ್ರಾವಕ ವ್ರತಂಗಳ ನೇಱಿಸಿಕೊಂಡು ದೃಢವ್ರತಿಯಪ್ಪುದುಂ ಧನದಮಹಾರಾಜಂ ರಾಗದಿಂ ದಿರ್ಪುದುಂ][1] ‖ ೫೮

ದೊರೆಕೊಳ್ಳದ ಜಿನಧರ್ಮಂ
ದೊರೆಕೊಂಡುದು ಧನದಭೂಪನಿಂದೆನಗೆಂದಾ ।
ದರದಿಂ ಸಂಘಶ್ರೀ ಸುರ
ನರಪೂಜಿತಜಿನಪದಾಬ್ಜಮಂ ನಂಬುಗೆಯಿಂ ‖ ೫೯

ಪೊರ್ದಿ ಮತ್ತಿನ ಕುವರ್ಮಾಳಾಪಮಂ ಪತ್ತುವಿಟ್ಟು ಧನದ ಮಹಾರಾಜಂಗೆ ಪರಮಮಿತ್ರನಾಗಿ ಸಲುತ್ತುಮಿರ್ದೊಂದುದಿವಸಂ [ಅರಸನ ವಂಶಾವತಾರಮಂ ತದ್ರಾಜಧಾನಿಗೆ ಪ್ರತಿಪಾಲಪುರಮೆಂಬ ಪೆಸರಾದ ಕಾರಣಮಂ ಬೆಸಗೊಳ್ವೆನೆಂಬರ್ತಿಯಿಂದೋಲಗಂಗೊಟ್ಟಿರ್ದ ಸಮ್ಯಕ್ತ್ವ ಚೂಡಾಮಣಿಗೆ ಪೊಡೆಮಟ್ಟು ವಿನಯದಿಂ ಕೈಗಳಂ ಮುಗಿದು ಬಿನ್ನಪಮೆಂದು ತನ್ನ ಮನದೆಱಕದಿಂ ಬೆಸಗೊಳ್ವುದುಮರಸಂ ಬುದ್ಧಿ ಸಾಗರನೆಂಬ ಪೆರ್ಗಡೆಯ ಮೊಗಮಂ ನೋಡುವುದುಂ ‖ ೬೦

ಅರಸನ ಚಿತ್ತಮನಱಿದೋ
ಸರಿಸದೆ ಸಮ್ಯಕ್ತ್ವಜಲಧಿಯನ್ವಯಮಂ ವಿ ।
ಸ್ತರದಿಂ ಸಂಘಶ್ರೀಗು
ರ್ವರೆಪೂಜ್ಯಂ ನುಡಿದನಂಬುನಿಧಿನಿಸ್ವನದಿಂ ‖ ೬೧

---

[1] ಬಾರದಿರ್ದೊಂದು ದಿವಸಮಾಕಾಶದೊಳ್ ಪೋಳೆವ ಯೆಳೆವೆಱೆಯಂತೆ ತೊಳತೊಳಗುತ್ತ ಪೋಪ ಚಾರಣಋಷಿಯುಂನರಸಂ ಕಂಡು ಸಿಂಹಾಸನದಿಂದಿಳಿದು ಮೋಲಗದೊಳಿರ್ದ ಸಮಸ್ತಮಕುಟಬದ್ಧರ್ವೆರಸು ಭಕ್ತಿಯಿಂ ಪೊಡವಡುವುದುಂ ಸಂಘಶ್ರೀ ತಪದ ಮಹಿಮೆಗಾಶ್ಚರ್ಯಂಬಟ್ಟು ತಾನುಂ ಪೊಡಮಟ್ಟು ಮುನ್ನಮ ರಸಂ ತನಗೆ ಪೇಳ್ವ ಧರ್ಮಶ್ರವಣಮನಿಂತು ಮನದಗೊಂಡು ನಂಬಿ ಶ್ರಾವಕವ್ರತ ಮಂ ಕೈಕೊಂಡು ಧರ್ಮದೊಳ್ ದೃಢನಾಗಿ (ಗ)

ಶ್ರೀವಾಸುಪೂಜ್ಯಜಿನನ ಮ
ಹಾಸನಿಪಾಲಾರ್ಚಿತಾಂಘ್ರಿಪದಯುಗನ ವರ ।
ಶ್ರೀವರನ ತೀರ್ಥಕಾಲದೊ
ಳೀವಿಭುವಿನ ವಂಶಜಂ ಯಶೋಧರನೆಂಬಂ ॥ ೬೧

ಇಕ್ಷ್ವಾಕುವಂಶಪವಿತ್ರನಂಗವಿಷಯದ ಚಂಪಾಪುರಮನಾಳ್ವನಾತ ನರಸಿ ಸೌಂದರಿಮಹಾದೇವಿ ಯೆಂಬಳಾಯಿರ್ವರ್ಗಂ ಪುಟ್ಟಿದ ಕುಮಾರ ರನಂತವೀರ್ಯನುಂ ಪ್ರಿಯಬಳನುಮೆಂಬರಂಗಜಸನ್ನಿಭರವರೊಳ್ ಕೂಡಿ ಯಶೋಧರಮಹಾರಾಜಂ ರಾಜ್ಯಂಗೆಯ್ಯುತ್ತುಮಿರ್ದೊಂದು ದಿವಸಂ ತನ್ನೊಳಿಂತೆಂದು ಬಗೆದಂ ॥ ೬೩

ಪರಮಂಡಲದರಸುಗಳಂ
ನಿರಾಕುಳಂ ವೀರದಿಂದಮಂಜೆಸಿ ಕಪ್ಪಂ ।
ಬೆರಸು ಬೆಸಕೆಯ್ಸಿಕೊಳ್ಳದ
ರರಸದು ಚತುರಂಗದರಸನನುಕರಿಸಿಕರ್ಗಂ ॥ ೬೪

ಸಕಲಧರಿತ್ರೀತಲಮುಮ
ನಕಳಂಕಚರಿತ್ರನಾಗಿ ಬೆಸಕೆಯ್ಸಿ ಯಶಃ ।
ಪ್ರಕಟಂಮಾಡದೆ ವೈರಿ
ಪ್ರಕರಮನೆಱಗಿಸದನರಸು ವಿರಸಮೆನಿಕ್ಕುಂ ॥ ೬೫

ಭರದಿಂ ಷಟ್ಖಂಡಭೂಮಂಡಲಮನಿದಿರ ನಿಕ್ಷೇಪಮಂ ಬೇಗದಿಂ ಕೊಂ ಡುರುತೇಜಂ ತೇಜದಿಂದಬ್ಬರಿಸಿ ಪೊರೆದು ಸದ್ಧರ್ಮಮಂ ರಾಜ್ಯಸೌಖ್ಯೋ ತ್ಕರನಾಗಿರ್ದರ್ದು ಬೆಂಬೀೞದೆ ನರಕದೊಳಾನಂದದಿಂ ಮುಕ್ತಿವೆತ್ತಂ ಭರದಿಂ ತ್ರೈಲೋಕ್ಯವಂದ್ಯಂ ಬಗೆವೊಡೆ ಧರಣೀನಾಥರಿಂತಾಗವೇಡಾ ॥

ಅದುಕಾರಣದಿಂ ಸಮುದ್ರಮುದ್ರಿತವಸುಂಧರಾಚಕ್ರದೊಳ್ ಕೀರ್ತಿಲತೆಯುಂ ಧರ್ಮಮುಂ ಪೆರ್ಚುವಂತಾಗೆ ರಾಜ್ಯಂಗೆಯ್ವುದರಸಂ ಕಡಬರಸಂ ಪಾದರಸಂ ನಿಶ್ಚಯಮರಸಲ್ಲೆಂದು ತನ್ನೊಳ್ ಭಾವಿಸಿ ರಿಪು

ನೃಪರನಲ್ಲಾಡಿಸಲುಂ ಪ್ರತಾಪಪರರಪ್ಪ ಭೂಪರನೊತ್ತಿ ಕಪ್ಪಂಗೊಳಲುಂ ಭವ್ಯನಿಕರದ ಮನಕ್ಕಾಹ್ಲಾದಮಂ ಮಾಡಲುಂ ಸದ್ಧರ್ಮಮಂ ಬೆಳಗಲುಂ ವಿರೋಧಿನೃಪಸಾಧನಮಂ ಬೆಂಕೊಳ್ಳಲುಂ ಬಗೆದು ॥ ೬೭

ಕರೆದು ನಿಜಮಂತ್ರಿವರ್ಗಮ
ನರಸಂ ಲೇಸಾಗಿ ತನ್ನ ಬಗೆಯಂ ಪೇೞ್ದು ।
ಚರಿಯಾಗೆ ತಡೆದು ನಿಲ್ಲದೆ
ಬರವೇೞ್ದು ಸಮಸ್ತ ಮಕುಟಬದ್ಧರನಾಗಳ್ ॥ ೬೮

ಶರನಿಧಿಗಳ್ ಘೂರ್ಣಿಸುವಂ
ತಿರೆ ತೂರ್ಯರವಂಗಳೆಸೆಯೆ ಜಿನಪೂಜೆಯುಮಂ ।
ನಿರುಪಮಜಿನಾಭಿಷವಮುಮ
ನರಸಂ ನೆಱೆ ಮಾಡಿ ಮೂಱುದಿವಸಂಬರೆಗಂ ॥ ೬೯

ತದನಂತರಮೊಸೆದು ಮಹೀ
ಸುದತೀಶಂ ವೈರಿಭೂಮಿಪಾಲರ ಚಿತ್ತಂ ।
ಬೆದಱೆ ಯಶೋಧರಭೂಪಾ
ಭ್ಯುದಯಂ ಪೊಯ್ಸಿ ಪ್ರಯಾಣಭೇರಿಯನಾಗಳ್ ॥ ೭೦

ದಕ್ಷಿಣದಿಶಾವರಕೆತ್ತಿ ಮಾಳವ ಮಗಧ ಕರ್ಣಾಟ ಗೊಲ್ಲ ಕರಹಾಟ ಗೌಳ ಲಾಟ ಚೋಳ ಚೇರ ಪಾಂಡ್ಯ ಕಳಿಂಗಾದಿವಿಷಯಂಗಳಂ ಸಾಧಿಸಿ ಕಪ್ಪಂಗೊಂಡು ತನಗೆ ಬೆಸಕೆಯ್ವಂತು ಮಾಡಿ ವೆಂಗಿಮಂಡಲಕ್ಕೆ ವಂದು ತದ್ವಿಷಯದೊಳಾದ ಚೆಲ್ವಿಂಗೆ ಸೋಲ್ತೆನಗಿಪೂರ್ಡೀವಿಷಯಮೆ ತಕ್ಕುದೆಂದು ತನ್ನ ಮನದೊಳ್ ಬಗೆದು ಸಮಸ್ತಧಾತ್ರೀವಳಯಮುಮಂ ತಾನೊರ್ವನೆ ಪ್ರತಿಪಾಲಿಸಿದನಪ್ಪುದಱಿಂ ಲೋಕಕ್ಕೆ ತನ್ನಳವುಮಂ ಪ್ರಕಟಂ ಮಾೞ್ಪಂತೆ ಪಿರಿದಪ್ಪ ಪೊೞಲಂ ಮಾಡಿ ಪ್ರತಿಪಾಲಪುರಮೆಂದು ಪೆಸರಿಟ್ಟು ಕೊಂಡಾಡಿ ॥ ೭೧

ಸುರುಚಿರರತ್ನಾಳಿಗಳಿಂ
ಸುರರ ವಿಮಾನಂಗಳೆನಿಪ ಜಿನಭವನಮನಾ ।
ಪುರವರದ ಸುತ್ತಲುಂ ಭಾ
ಸುರತೇಜಂ ಗುಣಕರಂಡಕಂ ಮಾಡಿಸಿದಂ ॥ ೩೦

ತನ್ನಾಳ್ದ ಮಹೀವಳಯದೊ
ಳುನ್ನತಿಯಿಂ ಕೂಡೆ ಪಲವು ಜಿನಮಂದಿರಮಂ ।
ಸನ್ನುತಮತಿ ಮಾಡಿದನೆನ
ಲಿನ್ನಾತನ ಧರ್ಮದಳವನೇವಣ್ಣಿಪುದೋ ॥ ೩೧

ಜಿನಪತಿಯೆ ದೇವನಾಜಿನ
ಮುನಿಗಳೆ ಸದ್ಗುರುಗಳಾಜಿನಾಧೀಶ್ವರಭ ।
ಕ್ತನೆ ನಂಟನೆಂಬನಿನ್ನಾ
ಜನಪನ ಸಮ್ಯಕ್ತ್ವದಳವನೇವಣ್ಣಿಪುದೋ] [1] ॥ ೩೪

ಸುರರ ವಿನೋದದೊಳ್ ಜಿನರ ಪೂಜೆಯೊಳುತ್ತಮಮಪ್ಪ ಧಾರಿಣೀ
ಸ್ತುತರೆನಿಸಿರ್ದ ದಿವ್ಯಮುನಿನಾಥರ ಸೇವೆಯೊಳೈದೆ ಭವ್ಯಸಂ
ತತಿಯ ವಿನೋದದೊಳ್ ಪದಪದಾರ್ಥವಿಚಾರಣೆಯೊಳ್ ತಗುಳ್ದು ಭೂ
ಪತಿ ಬುಧಗೋಷ್ಠಿಯೊಳ್ ಜನಪರೋಲಗದೊಳ್ ಮನಮೊಲ್ದು ನಿಚ್ಚಲುಂ॥

---

[1] ಧನದಮಹಾರಾಜನನ್ವಯಮಂ ಮುಂಡಿಯ ವಂಶಮೆಂಬಿದಕ್ಕೆ ಕಾರಣ ಮುಮಂ ತದ್ರಾಜಧಾನಿಗೆ ಪ್ರತಿಪಾಲಪುರಮೆಂಬ ನಾಮಮಾದ ವೃತ್ತಾಂತಮುಮ ನರಸನ ಸನ್ನಿಧಾನದೊಳ್ ಬುದ್ಧಿಸಾಗರನೆಂಬ ಪೆರ್ಗಡೆಯು ಬೆಸಗೊಳ್ವುದು ಸಂಘ ಶ್ರೀಗೆ ತಿಳಿವಂತಾಗಲೆಂತೆಂದು ಪೇಳ್ದಂ. ವಾಸುಪೂಜ್ಯಭಟ್ಟಾರಕರ ಕಾಲದೊಳೀ ಮಹೀಶ್ವರನ ವಂಶದೊಳ್ ಯಶೋಧರನೆಂಬ ಮಹಾಮಂಡಲಿಕಂ ಇಕ್ಷ್ವಾಕುವಂ ಶತಿಲಕನನಂತವೀರ್ಯನುಂ ಶ್ರೀಧರನುಂ ಪ್ರಿಯಂಬಕನುಮೆಂಬ ಮೂವರ್ ಕ್ಕಳ್ವೆ ರಸಂಗ ವಿಷಯದ ಚಂಪಾಪುರಮನಾಳುತ್ತಮಿರ್ದು ಪ್ರತಾಪದಿಂ ದಕ್ಷಿಣದೇಶಮಂ ಸಾಧಿಸಿ ತನಗೆ ಮಾಡಿ ವೆಂಗಿಮಂಡಲಂ ಚೆಲುವನಪ್ಪುದಱಿಂದೆನಗೀದೇಶಮುಮಂ ಪ್ರತಿಪಾಲಿಸಿದನಪ್ಪುದಱಿಂ ಪ್ರತಿಪಾಲಪುರಮೆಂಬ ಪೆಸರನಿಟ್ಟು (ಗ).

[ಕಾಲಮಂ ಕಳೆಯುತ್ತಿರ್ದೊಂದುದಿವಸಂ ಸಕಲಾಂತಃಪುರ ಪುರಂಧ್ರಿಯರ್ವೆರಸು ವನಕ್ರೀಡೆಗೆ ಪೋಗಿ ॥ ೭೬

ಓಳಿಯೊಳಂಗಸಂಭವನ [1] ಬೀಡಿನ ಕೆಂಗುಡಿಯಂತೆ ಸುತ್ತಲುಂ
ಲೀಲೆಯಿನಂಕುರಪ್ರಕರದಿಂ ಮಿಡಿಯಿಂ ತಳಿರಿಂ ಮುಸುಂಕಿ ಭೂ
ಪಾಲನ ಸ್ಸೈನ್ಯಮಂ ಪದೆಪಿನಿಂದಿದಿರ್ಗೊಳ್ವವೊಲಿರ್ದ ಭೂ
ಜಾಳಿಗಳೊಪ್ಪಮಂ ಮನದ ಸೋಲದಿನಚ್ಚರಿವಟ್ಟು ಭೂಭುಜಂ ॥ ೭೭

ನೋಡುತ್ತುಂ ನಂದನವನದೊಳಗೆ ಪೊಕ್ಕು ಜಲಕ್ರೀಡೆಯುಮಂ ಹಿರಿದು ಪೊತ್ತಾಡಿ ನೆಱೆಯೆ ಶೃಂಗಾರಂಗೆಯ್ದು ಗಂಧಸಿಂಧುರಾರೂಢನಾಗಿ ದಿವಿಜೇಂದ್ರಲೀಲೆಯಿಂ ಪುರಕ್ಕೆ ಮಗುಳ್ವಾತಂ ರಾಜಪತ್ನಿಯರುಂ ವಿಳಾಸಿನಿಯರುಂ ವಿನೋದದಿಂ ತಿರಿಯೆ ತಱಂಟಾದ ಮಾವಿನ ಬಱುಗೊಂಬುಗಳಂ ಕಂಡು ಬೆಱಗಾಗಿ ॥] [2] ೭೮

ತಳಿರಿಂದೊಪ್ಪುವ ಚೂತಭೂಜನಿಕರಂ ಮತ್ಸ್ಯೈನ್ಯದಿಂ ನೋಡೆ ನೋ
ಡೆ ಲಯಕ್ಕೆಯ್ದಿದುವಕ್ಕಟಾ ನರರ ಪೆಂಪುಂ ಶ್ರೀಯುಮಾಯುಷ್ಯಮುಂ
ಬಳಮುಂ ಪೆಂಡಿರ ಭೋಗಮುಂ ಮಹಿಮೆಯುಂ ಸೌಭಾಗ್ಯಮುಂ ಭೋಗಮುಂ
ತಿಳಿವಂದೀತೆಱದಿಂದೆ ಘುಸ್ಮ್ರನಱುಗುಂ ಕೇಳಲ್ಲಿ ಸಂದೇಹಮೇ ॥ ೭೯

ಬೂತಿನ ಮಾತಂ ನಂಬಿ ಕಾಳಗಕ್ಕೆ ಪೋಪನುಂ, ಕಳ್ಳನೊಡಗೂಡಿ ವ್ಯವಹಾರಕ್ಕೆ ಪೋಪನುಂ, ಸೋಂಬನೊಡಗೂಡಿ ಕೆಲಸಂಗೆಯ್ಯುದಿರ್ಪನುಂ [3] ಬಂದಿಕಾಱನ ಮಾತಂ ನಂಬಿ ಸಂಚಿತಧನಮಂ ತೋರ್ಪನುಂ, ತಳಾಱನ ಮಾತಂ ನಂಬಿ ಮನದ ಪೊಲ್ಲಮೆಯುಂ ಪೇೞ್ವನುಂ,

---

1 ಸನ್ನಿಭನ (ಕ. ಬ.)

2 ರಾಜ್ಯಂಗೆಯ್ಯುತ್ತಮಿರ್ದೊಂದು ದಿವಸಂ ವನಕ್ರೀಡೆಯನಾಡಿ ಮಗುಳ್ದು ತಂ ವಿಲಾಸಿನಿಯರಿಂ ಪೆಂಡವಾಸದೊಳ್ ಪೆಂಡಿರಿಂ ತಿಱಿಯೆ ತರಂಟಾದ ಮಾವಿನ ಶಾಖೆಯುಮರಂಗಳಂ ಕಂಡು (ಗ).

3 ಕೆಲಸಂಗೆಯ್ವ ವಿಪ್ರನುಂ (ಕ. ಬ.)

ಧೂರ್ತನಂ ನಂಬಿ ಬಾವಿಯೊಳ್ ಬೀೞ್ವನುಂ, ಟಕ್ಕನ ವಚನಮಂ ನಂಬಿ ನೆರೆಯೂರ್ಗೆ ಪೋಪನುಂ, ಡೊಂಬನ ಮಾತಂ ನಂಬಿ ಕೂಸುಗುಡುವನುಂ ಪಂಚೇಂದ್ರಿಯಂಗಳ ವಶಮಾಗಿ ಸಂಸಾರದಲ್ಪಭೋಗಮಂ ಪತ್ತಿ ಧರ್ಮಮಂ ಬಿಟ್ಟು ನೆಗೞ್ವನುಂ, ದುಃಖಕ್ಕಂ ದುರ್ಯಶಕ್ಕಂ ಭಾಜನನಕ್ಕು
ಮಲ್ಲದೆ ಮಱಿದಪ್ಪೊಡಂ ಸುಖಮನೆಯ್ದಲಾಱಂ ॥ ೮೦

ಜಲಮಂ ಕಡೆದು ಧರಿತ್ರೀ
ತಳದೊಳ್ ಬೆಣ್ಣೆಗೊಳಲಿರ್ಪ ನರನುಂ ವಿಷಯಂ ।
ಗಳೊಳಳಸಿ ನಿಂದು ಸೌಖ್ಯ
ಕ್ಕಳಿಪುವನುಂ [1] ಮರುಳ ಬಾಲಮಾಗದೆ ಪೋಗಂ ॥ ೮೧

ಮಿಂಚಿನ ಬೆಳಕಂ ನಂಬಿ ಕ
ರಂ ಚಲದಿಂ ಬಟ್ಟೆವೋಪೆನೆಂಬನುಮಳಿಪಿಂ ।
ಪಂಚೇಂದ್ರಿಯಸುಖಮಂ ಪಿಡಿ
ದಂಚಿತಮೋಕ್ಷಕ್ಕೆ ಪೋಪನೆಂಬವನೆಗ್ಗಂ ॥ ೮೨

ಒಡೆಗೆಱೆಯುಂ ನಂಬಿ ಮನಂ
ಬಿಡೆ ಬೆಳಸಿಂಗಾಸೆಗೆಯ್ವನುಂ ಸಂಸೃತಿಯೊಳ್ ।
ಕಿಡುವೊಡಲಂ ನಂಬಿ ಸುಖ
ಕ್ಕೊಡರಿಸುವವನೆಯ್ದಲಾಱನೆಂತುಂ ಫಲಮಂ ॥ ೮೩

ಎನಗೆಂದುಂ ಸಾವಿಲ್ಲೆಂ
ದನವರತಂ ಸೊರ್ಕವೇಡ ಸಾವುಳ್ಳವನೊ ।
ಯ್ಯನೆ ಸಾವ ಮನುಜರಂ ಕಂ
ಡೆನಗಂ ಸಾವುಂಟು ಬೇಗಮೆಂದಱಿಗಱಿವಂ ॥ ೮೪

---

1 ಎಳಸುವನುಂ (ಗ).

ಸಾವವರಂ ಕಂಡಿರ್ದುಂ
ಸಾವೆಯ್ದಿದ ನರರನೊಯ್ದು ಸುಟ್ಟುಂ ಮತ್ತಂ [1] ।
ಸಾವೆನಗಿಲ್ಲೆಂದಿರ್ಪನೆ
ಗಾವಿಲನಾರಯ್ದು ನೋಡುವೆಂದುರ್ವರೆಯೊಳ್ ॥ ೮೫

ಸಿರಿ ಕೆಟ್ಟು ಕರ್ಮವಶದಿಂ
ತಿರಿವವರಂ ಕಂಡು ಕಂಡು ಶಾಶ್ವತಮೆಂದಾ ।
ಸಿರಿಯುಂ ನಬಿರ್ಪಾತಂ
ಮರುಳಿಳೆಯೊಳ್ ಮತ್ತೆ ಮರುಳ್ಗೆ ಕೋಡೆರಡೊಳವೇ ॥ ೮೬

ಮುನ್ನಿನ ಚಾಗಿ [2] ಗಳಾವೆಡೆ
ಮುನ್ನಿನ ವಿಭವಾನ್ವಿತರ್ಕಳಾವೆಡೆ ಮತ್ತಂ ।
ಮುನ್ನಿನ ಸಧರ್ಮ [3] ರಾವೆಡೆ
ಮುನ್ನಿನ ಚಕ್ರೇಶರೆಲ್ಲಿದರ್ ವಸುಮತಿಯೊಳ್ ॥ ೮೭

ಅಱಿತದೊಳಂ ಪಿರಿಯನೆಂಬಂ
ಕುಱಿಯಾಗದೆ ನಂಬಿ ಕಿಡದೆ ಸಂಸೃತಿಯುನಿದಂ ।
ತೊಱೆದು ತಪದಿಂದೆ ತನ್ನಂ
ಮೆಱೆದು ಸದಾಚಾರನಾಗಿ ನೆಗೞ್ವೇಡಾ ॥ ೮೮

ನಿಲ್ಲದ ತನುವನಿದಂ ತಳು
ವಿಲ್ಲದೆ ತಪದಿಂದೆ ತವಿಸಿ ಕೈವಲ್ಯಶ್ರೀ ।
ವಲ್ಲಭನಾಗಲ್ವೇಡಾ
ಬಲ್ಲಿಂ ಸಂಸಾರದಱಿವನೆಂಬ ಮನುಷ್ಯಂ ॥ ೮೯

---

1 ನರರನೆಯ್ದೆ ಪುಟ್ಟಿರ್ದುಂ ತಾ (ಗ).

2 ಭೋಗಿ (ಗ). 3 ಸೋದರ (ಗ),

ಎಂದು ಭಾವಿಸಿ ಪಟ್ಟದರಸಿಯರ ರೂಪುಗಳಂ ನೋಡುವುದುಂ, ಎಮಗೆ ಕಾಂಕ್ಷೆಯಂ ಮಾಡಿದಿರಪ್ಪೊಡೆ ನಿಮ್ಮಾತ್ಮಕಾರ್ಯಕ್ಕೆಡಱಿಲ್ಲದೆ ಸಯ್ತಾಗಲಱಿಯದೆಂದು ಪೇೞ್ವಂತೆ ಕೊಂಕಿದ ಕುರುಳ್ಗಳುಮಂ[1] ಎಮಗೆಱಕಂಮಾಡಿದಿರಪ್ಪೊಡೆ ಕೀನಾಶನ ಸುತ್ತುವಲೆಗೊಳಗಪ್ಪಿರೆಂದು ಪೇೞ್ವಂತಿರ್ದ ಮೇಖಳೆಯುಮಂ, ಎಮಗಪೇಕ್ಷೆಮಾಡಿದಿರಪ್ಪೊಡೆ ಕರ್ಮರಾಜಂ ಪಿಡಿಯಿಂದಲ್ಲಾಡಿಸದೆ ಮಾಣನೆಂದು ಪೇೞ್ವಂ[ತಲ್ಲಾಡುವ[2] ಮೇಲುದುಮಂ, ಎಮಗೆಱಗಿದಿರಪ್ಪೊಡೆ ಅಂತಕನಿಂದಿಱಂಕೆಪಡುವಿರೆಂದು ಪೇೞ್ವಂತಿರ್ದ ತೊಡೆಯೊಳಿಱಂಕಿದ ನಿಱಿಯುಮಂ, ಎಮಗೆ ಮನಂಗೊಟ್ಟಿರಪ್ಪೊಡೆ ಸಂಸೃತಿಯ ಕೈಗೊಳಗಪ್ಪಿರೆಂದು ಪೇೞ್ವಂತಿರ್ದ ತೋಳುಮಂ, ಎಮಗೞ್ಕಿರ್ತಿರಪ್ಪೊಡೆ ನಾರಕರ ಕಾಲ ತುಳಿಪಕ್ಕೊಳಗಪ್ಪಿರೆಂದು ಪೇೞ್ವಂತಿರ್ದ ಚರಣಾರವಿಂದಂಗಳುಮಂ] ಎಮಗೆ ಮೋಹಿಸಿದಿರಪ್ಪೊಡೆ ನಿರ್ಬುದ್ಧಿಗಳಪ್ಪಿರೆಂದು ಪೇೞ್ವಂತಿರ್ದ ದೊಡ್ಡಿದುವಪ್ಪ ಮುಡಿಗಳುಮಂ, ಎಮಗೆ ಸ್ನೇಹಂಗೆಯ್ದಿರಪ್ಪೊಡೆ ಕುಮಾರ್ಗಕ್ಕೆ ಸಲ್ವಿರೆಂದು ಪೇೞ್ವಂತೆ ಕೆಳಗಿೞಿದ ಬಾಸೆಗಳುಮಂ, ಎಮಗೆ ಬಗೆಗೊಟ್ಟಿರಪ್ಪೊಡೆ[3] ನರಕಕ್ಕೆೞಿವಿರೆಂದು ಪೇೞ್ವಂತೆ ನಸುಜೋಲ್ದ ಮೊಲೆಗಳುಮಂ, ಎಮಗೆ ಪತ್ತುಗೆಯಂ ಮಾಡಿದಿರಪ್ಪೊಡೆ ಸುಖದೊಳ್ ನೆಲೆಸದೆ ತಿರಿವಿರೆಂದು ಪೇೞ್ವಂತೆ ಸುಂಚಳಿಸುವ ಕಣ್ಗಳುಮಂ, ನೋಡಿ ವೈರಾಗ್ಯಂ ಪೆರ್ಚೆ, [ಪೆಱರ ಮನೆಯ ಮದುವೆಯೊಳ್ ಲೋಗರಂ ನಂಟುಮಾಡಿಕೊಳ್ವದ

---

1 ಎಮಗೆಳಸಿದಿರಪ್ಪೊಡೆ ಮೇಲಸಿಯಂತಾಗದೆ ಮಾಣರೆಂದು ಪೇೞ್ವಂತೆ ಬೞವಾದ ನಡುವುಮಂ ನಮಗಾಸೆಗೆಯ್ದಿರಪ್ಪೊಡೆ ಸಂಸಾರದೊಳ್ ಸೞಿಯದೆ ಮಾಣಿರೆಂದು ಪೇೞ್ವಂತೆ ಸುೞಿದಿರ್ದ ಪೊಕ್ಕುಳುಮಂ ಎಮಗೆ ನಚ್ಚಿದಿರಪ್ಪೊಡೆ ಜನನ ಪಾಶಂ ಪೊತ್ತದೆ ಪೋಗದೆಂದು ಪೇೞ್ವಂತಿರ್ದ ಕೊರಲ ರೇಖೆಗಳುಮಂ ಎಮಗೆಱಗಿದಿರಪ್ಪೊಡೆ ಮೃತ್ಯುರಾಜನ ಪೊಳೆವ ಸರಳ್ಗಳು ಕೊಳ್ಳದೆ ಮಾಣವೆಂದು ಪೇೞ್ದಂತಿರ್ದ ದಂತಪಂತಿಗಳುಮಂ ಎಮಗಾಸೆಗೆಯ್ದಿರಪ್ಪೊಡೆ ಕೃತಾಂತನ ಕೂರಲಗಿಂಗೊಳಗಪ್ಪಿರೆಂದು ಪೇೞ್ವಂತಿರ್ದ ಸೆಳ್ಳುಗುರುಗಳುಮಂ (ಗ).

2 ಪೇೞ್ವಂತಿರ್ದ ಆಭರಣಂಗಳುಮಂ (ಗ).

3 ಕೈಮೊಗ್ಗಿದಿರಪ್ಪೊಡೆ (ಗ).

ವೆನುಂ ಶಾಶ್ವತಮಲ್ಲದೊಡಲುಮಂ ನಿರಂತರಮಲ್ಲದ ಧನಮುಮಂ ತವಿಸಿ ಧ್ರುವಮಪ್ಪ ಸುಖಮಂ ಪಡೆಯುದವೆನುಂ ಬುದ್ಧಿವಂತರಲ್ಲರೆಂದು ತನ್ನೊಳ್ ನುಡಿದು ಸಂಸಾರವಳ್ಳಿಯಂ ಬೇರ್ವೆರಸಿ ಕಿೞ್ತೀಡಾಡುವ ಕಜ್ಜಮನೆತ್ತಿಕೊಂಡು] ರಾಜಮಂದಿರಕ್ಕೆ ವಂದು [ಮಱುದಿವಸಮನಂತವೀರ್ಯನಂ ಮೊದಲಾದ] ಕುಮಾರರಂ ಬರಿಸಿ [ಮುಂದೆ ಕುಳ್ಳಿರಿಸಿ ಯಶೋಧರಮಹಾರಾಜನಿಂತೆಂದಂ ॥ ೯೦

ಸಕಳೋರ್ವೀಚಕ್ರಮಂ ಸಾಧಿಸಿ ಭುಜಬಲದಿಂ ತಾಳ್ದ ವೀರತ್ವದಿಂ ಭೂ
ಪಕದಂಬಂ ಹಸ್ತಕಂಜದ್ವಯಮುಕುಳಿತರಾಗಿರ್ದು ಕೈವಾರದಿಂ ಸೇ
ವಕರಾಗಿರ್ಪಂತು ಮಾಡಿ ಪ್ರಕಟಿಸಿ ಜಸಮಂ ವಾರ್ಧಿಯುಂ ತಾಪಿನಂ ಶ
ತ್ರುಕದಂಬಂ ಬೆರ್ಚಿ ಕಪ್ಪಂದಿಱುಸಿದೆನೊಲವಿಂದಿನ್ನೆಗಂ ಲೀಲೆಯಿಂದಂ॥

ರಾಜ್ಯಂಗೆಯ್ದಿನ್ನೆನಗೆ ತಡೆಯಲೆಡೆಯಿಲ್ಲ ಮುಕ್ತಿಶ್ರೀಯುಂ ಕುಡುವ ಜಿನೇಂದ್ರಪದಪದ್ಮಂಗಳಂ ಶರಣ್ಬುಗಲ್ವೇೞ್ಪುದು ಧರಾಭಾರಮಂ ಕೈಕೊಳ್ಳವೆಂಬುದುಮನಂತವೀರ್ಯನಿಂತೆಂದಂ ॥][1] ೯೧

ದೇವ ಮರುಳಲ್ಲೆನೆನಗಂ[2]
ದೇವರ್ ಕೈಕೊಂಬ[3] ತಪಮೆ ಸಾಲ್ಗುಂ ಮುಕ್ತಿ ।
ಶ್ರೀವನಿತೆಯಲ್ಲದಳಿಪಿ ಮ
ಹೀವನಿತೆಗೆ ಸೋಲ್ತು ಕಿಡುವ ಗಾಂಪನೆನಲ್ಲೆಂ[4] ॥ ೯೨

[ಈಭವದ ಸುಖಕ್ಕೆನಗೆ ಮ
ಹಾಭಯಮೇಗೆಯ್ದುಮೊಲ್ವೆನಲ್ಲೆಂ ನೆಱೆ ಧಾ ।
ತ್ರೀಭಾರಮನವನೀಶ ಧ
ರಾಭಾರಮನಾಂತು ಕಿಡಿಸಲಾಱೆಂ ಸುಖಮಂ ॥ ೯೩

---

[1] ರಾಜ್ಯಮಂ ಕೈಕೊಳ್ಳೆನೆಂಬುದುಂ ಅನಂತವೀರ್ಯನುಂ ವಾತ್ಸಲ್ಯರತ್ನಾಕರನುಮಿಂತೆಂದು ಪೇಳ್ದರ್ (ಗ).

[2] ಮರುಳಲ್ಲದೇವಗಂ (ಗ). [3] ಕೈಕೊಳ್ವ (ಗ), [4] ಗಾಂಪವರೆಲ್ಲಂ (ಗ).

ಎನಗೆ ದಯೆಗೆಯ್ವುದವನೀ
ವನಿತೇಶ್ವರ ದಿವ್ಯಮಪ್ಪ ಜಿನದೀಕ್ಷೆಯೆ ಸಾ ।
ಲ್ಗಿನಿತೆಂಬುದುಂ ನೃಪಂ ಪ್ರಿಯ
ತನಯನ ಮಾತಿಂಗೆ ಪೆರ್ಚಿ ಮನದಾದರದಿಂ ॥ ೯೫

ಈತಂ ಸಂಸಾರಕ್ಕತಿ
ಭೀತಂ ರಾಜ್ಯಕ್ಕೆ ಮೋಹಮುಳ್ಳವನಲ್ಲಂ
ಭೂತಳಭಾರಮನೆತ್ತುವೆ
ನೀತನ ತಮ್ಮಂಗೆ ತಡೆಯದೀಗಳ ಮುದದಿಂ ॥ ೯೬

ಎಂದು ಯಶೋಧರಮಹಾರಾಜಂ ಶ್ರೀಧರಕುಮಾರನ ಮೊಗಮಂ ನೋಡಿ ವೆಂಗಿಮಂಡಲಂಮೊದಲಾದ ಸಮುದ್ರಮುದ್ರಿತಮಹೀವಳಯ ಮೆಲ್ಲಮಂ ಕೊಂಡು ರಾಜ್ಯಲಕ್ಷ್ಮೀಮನೋಹರನಾಗಿ ಸುಖದಿಂದಿರ್ಪುದೆಂ ಬುದುಂ ವಾತ್ಸಲ್ಯರತ್ನಾಕರಂ ಮುಗುಳ್ನಗೆನಕ್ಕಿಂತೆಂದಂ ॥ ೯೭

ದೇವರ್ ಧರಿಯಿಸುವಿಳೆಯಂ
ಭೂವಳಯದೊಳಮ್ಮವಂದಿಗರ್ ತಮ್ಮಳವಂ ।
ಭಾವಿಸದೆ ಸೊಕ್ಕಿ ಪೆಂಪಿಂ
ಗಾವಿಲತನದಿಂದ ಮುಕ್ತಿ ಧರಿಯಿಸಲಳವೇ ॥] ೯೮

ದೇವರ್ ದಯೆಗೆಯ್ವೊಡೆ ಸ
ದ್ಭಾವದಿನಪವರ್ಗಲಕ್ಷ್ಮಿಯುಂ ತತ್ಕ್ಷಣದಿಂ ।
ದೀವ ಜಿನರಾಜದೀಕ್ಷೆಯ
ನೀವುದು ಪೆಱತೇವುದೆಮಗೆ ನಾಡುಂ ಬೀಡುಂ ॥ ೯೯

ಕಳವೆಯಕೂೞುಮಂ ತಿಳಿದುಪ್ಪಮುಮಂ ಬಿಸುಟ್ಟು ನುಚ್ಚುಗೂೞುಮನೆಣ್ಣೆಯುಮನುಣ್ಬನುಮಂ ಬಾೞೆಯ ಪಣ್ಣುಮಂ ಖಂಡಶರ್ಕರೆಯುಮಂ ಬಿಸುಟು ಎಱೆಯ ಮಣ್ಣುಂ ಮೆಲ್ವನುಂ ಪಾಸುಮಂ ಬಿಸುಟ್ಟು ಸಱಿಯ ಮೇಲೆ ಪಡುವನುಂ ನಂಟರುಮಂ ಕೆಳೆಯರು

ಮಂ [1] ಬಿಟ್ಟು ದಾಯಿಗರಂ ಪೊರ್ದುವನುಂ ಕುದುರೆಯುಮನಾನೆಯುಮ ನೊಲ್ಲದೆ ನಾಯನೇಱುವನುಂ ಅಮೂಲ್ಯಮಪ್ಪ ಅಣುವ್ರತಮಹಾವ್ರತಂ ಗಳುಮನುದಾಸೀನಂಗೆಯ್ದು ಸಂಸಾರದಲ್ಪಸುಖಮಂ ಪೊರ್ದುವನುಂ ಮರುಳರಲ್ಲದೆ ಚತುರರಲ್ಲರ್ ॥ ೧೦೦

[ಅದಱಿಂ ಕೈವಲ್ಯಶ್ರೀ
ಸುದತಿಯನಾರ್ತೀವ ಜೈನದೀಕ್ಷೆಯನೆ ಶುಭಾ ।
ಭ್ಯುದಯಮನೆ ಕುಡುವುದಲ್ಲದೆ
ವಿದಿತಂ ದಯೆಗೆಯ್ಯಬೇಡ ರಾಜ್ಯಶ್ರೀಯುಂ] ॥ ೧೦೧

ಎನಗೆಳ್ಳನಿತುಂ ಸಾಸವೆ
ಯನಿತುಂ ಸೀರನಿತು ಮೋಹಮಿಲ್ಲವನಿಯಮೋ ।
ಲೆನಗೆ ಪಿರಿದಪ್ಪ ಮೋಹಂ
ಜಿನದೀಕ್ಷೆಯೊಳುಂಟು ದೇವ ನಿಶ್ಚಯದಿಂದಂ ॥ [2] ೧೦೨

ಎಂದು [ಪಲವಂ ನುಡಿಯದೊಂದನೆ ಪರಿಚ್ಛೇದಮಾಗಿ ನುಡಿದು ಮಾಣ್ಬುದುಂ ಯಶೋಧರಮಹಾರಾಜಂ ಸಮ್ಯಕ್ತ್ವಚೂಡಾಮಣಿಯು ಮನದ ನಿರ್ಮಳಿಕೆಯುಮನಱಿದು ಪೆಱತಂ ನುಡಿಯದೀಪ್ರಿಯಬಂಧು ಕುಮಾರಂಗೆ ಪಟ್ಟಮಂ ಕಟ್ಟಿ ಧರಾಭಾರಮಂ ಕೊಟ್ಟು ಮೆಯ್ಸುಖಕ್ಕೆ ಳಸದನಂತವೀರ್ಯಕುಮಾರನುಂ ವಾತ್ಸಲ್ಯರತ್ನಾಕರನುಂಬೆರಸು ಪೊ ೞಲಂ ಪೊಱಮಟ್ಟು ಪೋಗಿ] [3] ವಿಶ್ವಸೇನರೆಂಬಾಚಾರ್ಯರಲ್ಲಿ ಜಿನದೀ ಕ್ಷೆಯಂ ಕೈಕೊಂಡು ಸಕಳಶ್ರುತಮುಮನೋದಿ ॥ ೧೦೩

---

1 ನಂಟರ ಕೆಳೆಯಂ (ಗ)

2 ಎಮಗೆ ಮನದೊಳಗೆ ಕೇಳ್ ಸಾ । ಸವೆಯನಿತುಂ ಮೋಹಮಿಲ್ಲ ಭೂವನಿತೆ ಯುಮೋ ॥ ಲೆಮಗೆ ಪಿರಿದಪ್ಪ ಮೋಹಂ । ಭುವನೇಶ್ವರ ॥ ಜೈನದೀಕ್ಷೆಯೊಳ್ ನಿಶ್ಚ ಯದಿಂ (ಗ)

3 ಮಱುಮಾತಿಂಗೆಡೆಯಿಲ್ಲದಂತು ನುಡಿವುದುಂ ಪ್ರಿಯಂಬಕಕುಮಾರಂಗೆ ಪಟ್ಟಮಂ ಕಟ್ಟಿ ಮೂವರುಂ (ಗ)

ಗುರುಪದಸೇವೆಯಿಂದಮುಳ್ಳಚಿತ್ತದಿನುಜ್ಜ್ವಲಮಪ್ಪದೊಂದುದು
ರ್ಧರಚರಿತಂಗಳಿಂದಮಿರ್ದ ಸಂಯಮದಿಂ ಮನದೋಜೆಯಿಂ ಮನಂ
ಮುರಿಯದೆ ಬಾಹ್ಯದಿವ್ಯತಪದುನ್ನತಿಯಿಂ ಪಲವುಂ ಪರೀಷಹೋ
ತ್ಕರದೊಳವಿರ್ದ ಬಾಧೆಗೆ ಮನಂಗಿಡದೂರ್ಜಿತಮಪ್ಪ ಧೈರ್ಯದಿಂ ॥

[ಇವರ್ಗೆ ದೊರೆಯಿಲ್ಲ ಬಗೆವೊಡೆ
ಭವನದೊಳೆಂದರ್ತಿವೆರಸು ಭಕ್ತಿಯ ಭರದಿಂ ।
ಪ್ರವರಗುಣಾಢ್ಯರ್ ಬಣ್ಣಿಸೆ
ವಿವಿಧಗುಣರ್ ತಪದೊಳುತ್ತರೋತ್ತರಮಾದರ್ ॥ ೧೦೫

ಮುನ್ನಿನ ಸಿರಿಯಂ ನೆನೆಯದೆ
ಮುನ್ನಿನ ಲೀಲೆಗಳನೆಯ್ದೆ ಪಂಬಲಿಸದೆ ಭೂ ।
ಪೋನ್ನತರರಟ್ಟ(?) [1] ತಪದೊಳ್
ಮುನ್ನಿನ ಸಚ್ಚರಿತರೋಜೆಗೆಣೆಯನೆ ನೆಗೞ್ದರ್] ॥ ೧೦೬

ಬೆಂಬೀೞದೆ ಪೆಱಪೆಱತಂ
ಪಂಬಲಿಸದೆ ಕರ್ಮವೈರಿಗೆಡೆಗುಡದೆ ಶರೀ ।
ರಂ ಬಡವಾದಪ್ಪುದೆನ್ನದೆ
ಡೊಂಬಿಲ್ಲದೆ ಶುದ್ಧವೃತ್ತಿಯೊಳ್ ನೆಱೆ ನೆಗೞ್ದರ್ ॥ ೧೦೭

ಎಂತುಟು ಜಿನೇಂದ್ರವಚನಮ
ದಂ ತಪ್ಪದೆ ಪೆಱರ ಪೂಜೆಗೆಳಸದೆ ಸುಖಮಂ ।
ಚಿಂತಿಸದೆ ನಿರ್ವೃತಿಶ್ರೀ
ಕಾಂತೆಯ ಕೂಟಮನೆ ಬಯಸಿ ನೆಗೞ್ದರ್ ತಪದೊಳ್ ॥ ೧೦೮

ಪಾವಸೆಗಲ್ಲಂ ಮೆಟ್ಟದಂತೆ ಸನ್ಮಾರ್ಗಮಂ ಮೀಱಿ ಪರಿಯದೆ [ತ್ರಿದಂಡರಹಿತರುಂ ತ್ರಿಶಲ್ಯವರ್ಜಿತರುಂ ಚತುಷ್ಕಷಾಯದೂರರುಂ ತ್ರಯೋದಶವಿಧಚಾರಿತ್ರಸಂಪನ್ನರುಂ ಪಂಚಾಚಾರಯುಕ್ತರುಂ ದಶ

1 ಭೂಪೋನ್ನತರದಱಿಟ್ಟ (ಕ).

ಧರ್ಮಧರರುಮಾಗಿ] ಗುರುಗಳಾಜ್ಞೆಯಿಂ ಗುರುಗಳನಗಲ್ದು ವಿಹಾರಿಸುತ್ತುಂ ಬಂದು ಜಟಾಶಿಖರಮೆಂಬ ಪರ್ವತಮನೆಯ್ದಿ ತದ್ಗಿರಿಯೊಳ್ ಯಶೋಧರಭಟ್ಟಾರಕರುಮನಂತವೀರ್ಯಮುನಿಪುಂಗವನುಂ ಅಷ್ಟಕಕರ್ಮಮಂ ಕಿಡಿಸಿ [1] ಪರಮಶ್ರೀಮನಃಪ್ರಿಯರಾದರಕಳಂಕರೆನಿಸಿದ ಶ್ರೀಧರಾಚಾರ್ಯರಾಗಿರಿಯೊಳುಗ್ರೋಗ್ರಮಪ್ಪ ತಪದೊಳ್ ನೆಗೞುತ್ತುಮಿರ್ದರನ್ನೆಗಂ ‖ ೧೦೯

ಪ್ರತಿಪಾಲಪುರಮುಮಂ ಸಂ
ತತಮವನೀತಳಮುಮಂ ಮಹೋನ್ನತಿಯಿಂದು ।
ದ್ಧತವೈರಿದರ್ಪದಳನಂ
ನುತಸತ್ಪ್ರಿಯಬಲಕುಮಾರಕಂ ಪಾಲಿಸುತುಂ ‖ ೧೧೦

[ಸುಖಸಂಕಥಾವಿನೋದದಿಂದಿರ್ಪುದುಮೊಂದುದಿವಸಂ ವನಪಾಲಕನೊರ್ವಂ ಬಂದು ಜಿನಸಮಯವಾರ್ಧಿವರ್ಧನಚಂದ್ರನಂ ಕಂಡು ತನ್ನ ತಂದ ಪೊಸಮಾವಿನೆಳದಳಿರುಮಂ ಜಾದಿಯ ಮಲ್ಲಿಗೆಯ ಪಾದರಿಯ ಪೊಸಪುಷ್ಪಮುಮಂ ಕೊಟ್ಟು ಪೊಡೆಮಟ್ಟು ‖ ೧೧೧

ಅಳಿಗಳ ಗಾಯನಂ ನಿಮಿಱೆ ಕೋಕಿಲನಿಸ್ವನಮುಣ್ಮೆ ಕೇಕಿಸಂ
ಕುಳರವಮೊಪ್ಪೆ ಕೆಂದಳಿರ ಗೊಂದಣದಿಂ ಸಹಕಾರಭೂರುಹಾ
ವಳಿ ಕಡುರಯ್ಯಮಾಗೆ ವನಜಂಗಳರಲ್ದಿರೆ ಕೂಡೆ ಚಂದ್ರನು
ಜ್ಜ್ವಳಿಸಿ ವಿನೋದದಿಂ ಪದೆಯೆ ಬಂದನೊರಲ್ದು ವಸಂತವಲ್ಲಭಂ ‖ ೧೧೨

ಅಂತು ಬಂದ ವಸಂತಮಾಸಮಂ ವ್ಯರ್ಥಮಾಡದೆ ವನಕ್ರೀಡೆಗೆ ಬಿಜಯಂಗೆಯ್ವುದೆಂದು ಬಿನ್ನಪಂಗೆಯ್ವುದುಂ, ಪ್ರಿಯಬಳಕುಮಾರಂ ವನಪಾಲಕನ ಮಾತಿಂಗೆ ಮೆಚ್ಚಿ ಪಸಾಯದಾನಮುಂ ಕೊಟ್ಟು ಮನಮಂ ಲೇಸುಮಾಡೆಂದು ಕಳುಪಿ ಮಱುದಿವಸಮುತ್ಸಾಹಭೇರಿಯುಂ ಪೊಯ್ಸಿ ‖

[1] ಅಷ್ಟವಿಧಕರ್ಮನಿರ್ಮೂಲನಂ ಮಾಡಿ (ಗ)

ನೆಲೆಮೊಲೆ ಶೋಭೆವೆತ್ತಿರೆ ಮುಖಾಂಬುರುಹಂ ಕಡುರಮ್ಯಮಾಗೆ ಸಂ
ಚಲನಯನದ್ವಯಂ ಪೊಳೆಯೆ ಕರ್ಣಯುಗಂ ಕರಮೊಪ್ಪೆ ನೀಲಕುಂ
ತಲದ ಬೆಡಂಗು ಶೋಭೆವಡೆದುನ್ನತಿವೆತ್ತಿರೆ ಗಾಡಿವೆತ್ತ ಕೋ
ಮಲೆಯುರಿನೊಪ್ಪಿ ಬಂದನವನೀಶ್ವರನಂದಮರೇಂದ್ರಲೀಲೆಯಿಂ ‖ ೧೧೪

ಅಂತು ಬಂದು ತನ್ನ ಬರವಿಂಗೆ ತೋರಣಂ ಗಟ್ಟಿದಂತಿರ್ದ ಮಾಧವೀಲತೆಗಳುಮಂ, ತನ್ನ ಬರವಿಂಗೆ ವನದೇವತೆಯರ್ ನೆರೆದು ಮಂಗಳಂ ಪಾಡುವಂತೆ ಮೃದುನಿನಾದದಿಂ ಪಾಡುವ ಮಱಿದುಂಬಿಗಳುಮಂ, ತನ್ನ ಪಡೆಯನಿದಿರ್ಗೊಳ್ವಂತಿರ್ದ ಸರೋವರಗಳುಮಂ ತನ್ನಪಡೆಗೆ ವಸಂತರಾಜಂ ಬಿರ್ದಂ ಸಮೆದನೆಂಬಂತೆ ತನಿರಸದಿಂ ತೀವಿ ಬೀಗಿ ಬೆಳೆದ ಪಣ್ಗಳ ಭಾರದಿಂ ಮುಱಿವಂತಿರ್ದ ಮೃಂದವಾಟೆಗಳುಮಂ, ತನ್ನ ಬರವಿಂಗೆ ಪೂವಲಿಗೆದಱಿದರೆಂಬಂತೆ ನೆಲದೊಳಿಕ್ಕಿರ್ದ ಸುರಗಿಯ ನಾಗಸಂಪಗೆಯ ಪಾದರಿಯ ಪೂಗಳುಮಂ, ತನ್ನ ಪಡೆಗೆ ಬಿಡಲೆಂದು ಕಾಮದೇವಂ ಸಮೆದ......ಲತಾಮಂಟಪಂಗಳುಮಂ ನೋಡುತ್ತುಂ, ನಂದನವನದೊಳಗೆ ಪೊಕ್ಕು ಪಿರಿದುಬೇಗಂ ತನ್ನ ಮನದಲಪು ಪೋಪಂತೆ ವನಕ್ರೀಡೆಯುಮನಾಡಿ ಮತ್ತಂ ತದ್ವನದಿಂ ಪೊಱಮಟ್ಟು ಪೋಗಲಾಱದೆ ವಿನೋದದಿಂ ತೊಳಲುತ್ತುಮೊಂದುಲತಾಮಂಟಪದೊಳಗೆ ಪೊಕ್ಕು ಕರ್ಪೂರದ ಜಗುಲಿಯುಮೇಲೆ ಕಂಕೆಲ್ಲಿಯ ಪಲ್ಲವಂಗಳಿಂ ಸಮೆದ ತಳಿರ್ವಾಸಿನಮೇಲೆ ಪವಡಿಸಿ ‖ ೧೧೫

ನರನಾಥಂ ಸುಖದಿಂದಿರೆ
ಕರಮುಗ್ರವಿಷಾಹಿಯಪ್ಪ ಪಾವೆಯ್ತಂದೋ ।
ಸರಿಸದೆ ನೃಪನುಂಗುಟಮಂ
ಭರದಿಂದಂ ಕಪ್ಪೆಯೆಂದು ಪಿಡಿವುದುಮರಸಂ] [1] ೧೧೬

---

1 ಅಂತು ಸುಖದಿನಿರ್ದೊಂದುದಿವಸಂ ವನಕ್ರೀಡೆಯನಾಡಿ ವಲ್ಲಭೆವೆರಸು ಕೆಂದಳಿರ್ವಾಸಿನ ಕೆಳಗಣ ಲತಾಮಂಟಪದೊಳ್ಪಟ್ಟಿರ್ಪುದುಂ ಸುಗಂಧಕ್ಕೆಳಸಿ ಬಂದ ಪಾವು ತಲೆಯುಂ ಪಿಡಿವುದುಂ (ಗ)

ಬೆಱಗಾಗಿ ತನ್ನ ತನುವಂ
ತೊಱೆದು ಮಹಾರಾಜ್ಯಲಕ್ಷ್ಮಿಯುಂ ನೆನೆದು ಕರಂ ।
ಮಱುಗದೆ ಜಿನೇಂದ್ರಪದಮಂ
ಸೆಱೆವಿಡಿದಂ ಜ್ಞಾನಿಯುಪ್ಪವಂ ಕೆಟ್ಟಪನೇ ॥ ೧೧೭

ಜಿನಪದಯುಗವಾರಿಜಮಂ
ನೆನೆಯುತ್ತುಂ ರಾಜ್ಯಮೋಹಮಂ ಬಿಟ್ಟು ಧರಾ ।
ವನಿತೇಶಂ ಗೀರ್ವ್ವಾಣಾಂ
ಗನೆಯುರೊಳೊಡಗೂಡಿದಂ ಸಮಾಧಿಯ ಫಲದಿಂ ॥ ೧೧೮

[ಇತ್ತಲಿಂದ್ರಪ್ರಭನೆಂಬ ಪೆರ್ಗಡೆ ಪ್ರಿಯಬಳಕುಮಾರಂ ಪರಲೋಕಪ್ರಾಪ್ತನಪ್ಪುದನಱಿದು ಮನದೊಳ್ ಮಲಮಲಮಱುಗಿ ॥ ೧೧೯

ಸಂತತಿಯಿಲ್ಲದ ರಾಜ್ಯಂ
ಪಿಂತಾದುದು ವೈರಿಭೂಭುಜರ್ಗೆಡೆಯಾಯ್ತು ।
ನ್ನೆಂತಕ್ಕುಮೊ ಪೇೞ್ ಬಿದಿಯೆಂ
ದಂತರದೊಳ್ ಮಱುಗಿ ಕುದಿದು ಬೆದೆಬೆದೆಬೆಂದಂ ॥ ೧೨೦

ಅಂತು ಕುಮಾರನ ಸಾವಿಂಗಂ ಪೆಱಗಣ ರಾಜ್ಯಭಾರಮಂ ತಾಳ್ವಂತಪ್ಪ ಸಂತತಿಯಿಲ್ಲದುದಕ್ಕಂ ಬೆಱಗಾಗಿ ಕುಮಾರಂ ಸತ್ತನೆಂಬುದ ನಾರ್ಗಮಱಿಪದೆ ಗುಪ್ತದಿಂದರಸಂ ವನಕ್ರೀಡೆಯಾಡಿ ಬೞಲ್ದನೆಂದು ರಾಜಭವನಕ್ಕೆ ತಂದು ರಾತ್ರಿಯೊಳ್ ಸಂಸ್ಕರಿಸಿ ನಾಡ ಗಡಿಗೆ ಪರಮಾಂಡಲಿಕರಿಂ ಬಾಧೆಯಾಗದಂತೆ ದಂಡಂ ಪೇೞ್ದು ವಾತ್ಸಲ್ಯರತ್ನಾಕರಂ ಋಷಿನಿವಾಸಪರ್ವತತೊಳಿರ್ದನೆಂಬುದಂ ಚರರ ದೆಸೆಯಿಂದಮಱಿದು ತನ್ನ ಪಿರಿಯ ಮಗಂಗರಸನವಸಾನಮನಱಿಪಿ ಬೀಡಿನ ಕಾಪಂ ಪೇೞ್ದು ॥

ತೆಂಕಣ ಭೂಪಾಲಕರಂ
ಭೋಂಕನೆ ಪರಿದೆಯ್ದಿ ದರ್ಪಮಂ ಕಿಡಿಸಿ ಮನಂ ।
ಶಂಕಿಸದೆ ಕಾದಿ ಚಲದಿಂ
ದಂ ಕಪ್ಪಂದಪ್ಪುದೆಂದು ವೆಂಗಿಯ ನಾಥಂ ॥ ೧೨೧

ಎನಗೆ ಬೆಸಸಿದನೆಂದು ಕೃತಕವಚನಮಂ ಪೊೞಲೊಳಗೆಲ್ಲಂ ಪ್ರಕಟಂಮಾಡಿ ಚಾತುರಂಗಬಲಂಬೆರಸು ಪೊಱಮಟ್ಟು ಕತಿಪಯಪ್ರಯಾಣಂಗಳಿಂ ಋಷಿನಿವಾಸಪರ್ವತಮನೆಯ್ದಿ ಪರ್ವತನಿತಂಬದೊಳ್ ಬೀಡಂ ಬಿಟ್ಟು ಕತಿಪಯಜನಂಬೆರಸು ಪರ್ವತಮನೆಯ್ದಿ ೞಿಯ ಜಿನಭವನಂಗಳಂ ಪೂಜಿಸಿ ಶ್ರೀಧರಾಚಾರ್ಯರಲ್ಲಿಗೆವಂದು ತನ್ಮುನೀಂದ್ರನ ಪಾದಪಂಕಜಂಗಳಂ ಪಲವರ್ಚನೆಯಿಂದರ್ಚಿಸಿ ಪೊಡೆವಟ್ಟು ಮುಂದೆ ಕುಳ್ಳಿರ್ದು ಕಿಱಿದು ಬೇಗಂ ಧರ್ಮಮಂ ಕೇಳ್ದು ಕೃತಕವಿನಯದಿಂದಿಂತೆಂದಂ ‖ ೧೨೩

ಪರಮಮುನೀಶ್ವರ ನೀವೀ
ಗಿರಿಯೊಳ್ ನೆಲೆಸಿರ್ದಿರೆಂಬುದಂ ಕೇಳ್ದು ಸದಾ ।
ಚರಿತಗುಣರಾಶಿ ನಿಮ್ಮಯ
ಚರಣಸರೋಜಾತಯುಗಳಮಂ ನಿಶ್ಚಯದಿಂ ‖ ೧೨೪

ಕಾಣ್ಬೆವೆಂಬರ್ತಿಯಿಂ ವೆಂಗಿಮಂಡಲದಿಂ ಬಂದೆವಾವಪ್ಪೊಡೆ ಪರದರೆವಾನ್ನುಯದ (?) ಶ್ರಾವಕರೆವಿನ್ನುಂ ನಿಮ್ಮಡಿಗಳ ಶ್ರೀಪಾದಮಂ ಕಾಣಲೆಂದು ಪಲಂಬರುಂ ಪಿರಿದಪ್ಪ ವ್ರತಂಬೆರಸು ಬಂದು ಪರ್ವತದ ಕೆಳಗಿರ್ದರೀಗಿರಿಯನೇಱಲಾಱರ್ ಕಡುವೃದ್ಧರವರಂ ನಿಮ್ಮಡಿಗಳ್ ಬಿಜಯಂಗೆಯ್ದು ಪರಸಿ ಸಂತೋಷಮಂ ಮಾೞ್ಪುದೆಂದು ಪ್ರಾರ್ಥಿಸಿ ಮಗುಳೆ ವಂದಿಸಿ ತಮ್ಮ ಬಿಟ್ಟಬೀಡಿಂಗೆ ಬಂದರನ್ನೆಗಂ ಮುನಿಮುಖ್ಯನವರ ಮಾತಿಂಗೆ ಕರುಣಿಸಿ ಮಧ್ಯಾಹ್ನದೊಳ್ ಚರ್ಯಾಮಾರ್ಗದಿಂ ಪೊಱಮಟ್ಟು ‖

ಅವರ ಮಾತುಗಳೆಲ್ಲಮಂ ಮುನಿಪುಂಗವಂ ದಿಟವೆಂದು ಭೂ
ಭುವನವಂದಿತಪಾದಪಂಕಜನಾದರಂಬೆರಸರ್ತಿಯಿಂ
ವಿವಿಧಶೀಲಗುಣಾಬ್ಧಿ ನಂಬಿದನಂತು ಮೆಲ್ಲನೆ ಶೈಳದಿಂ
ದವನಿಗೆಯ್ತರೆ ನೋಡಿ ಕಂಡು ಮನೋನುರಾಗದಿನಾಖಳಂ ‖ ೧೨೫

ಭಕ್ತಿಪೂರ್ವಕಂ ನಿಲಿಸಿ ನಿದ್ರೆ ಪಿರಿದಪ್ಪಂತಪ್ಪ ಮದ್ದುಗಳಂ ಕೂಟೊಳ್ ಬೆರಸಿ ಕಯ್ಯೆಲಿಕ್ಕುವುದುಂ ಶ್ರೀಧರಮುನಿನಾಥನವರ ಕಪಟ

ವೃತ್ತಿಯನಱಿಯದುಂಡು ಸೊಕ್ಕಿ ಮೆಯ್ಯಱಿಯದೆ ಟಕ್ಕನಿಕ್ಕಿದಂತು ಕೆಡೆದು ನಿದ್ರೆಗೆಯ್ವುದುಂ ಪೆರ್ಚಿ ಪಿರಿದಪ್ಪುತ್ಸವದಿಂ ಸಿವಿಗೆಯೊಳಿಕ್ಕಿ ದಾಹಾದಾಱಿಯಿಂ ಬಂದು ಪ್ರತಿಪಾಲಪುರಮಂ ಪೊಕ್ಕು ಮಱೆದು ಪಟ್ಟ ಮುನಿಪತಿಗೆ ರತ್ನಾಭರಣಂಗಳಂ ತುಡಿಸಿ ಸುಗಂಧದ್ರವ್ಯಂಗಳಂ ಪೂಸಿ ದಿವ್ಯವಸ್ತ್ರಮನುಡಿಸಿ ರೋಮಜವೆಂಬ ಪಾಸಿನಮೇಲೆ ಪಡಿಸಿ ಸುತ್ತಿ ಮುತ್ತಿ ಬಂದೋಲಗಿಸುತ್ತುಮಿರ್ಪುದುಂ ಮೂಱನೆಯ ದಿವಸಕ್ಕೆ] [1] ‖

ಪರಮಗುಣಾಂಬುರಾಶಿ ಖಳನಿಕ್ಕಿದ ಮರ್ದಿನ ತೀವ್ರಮಪ್ಪ ನಿ
ಷ್ಠುರವಿಷದುಕ್ಕುಪೋಗೆ ತನು ಘರ್ಮ್ಮನಲೊರ್ಮೆಯೆ ನೊಚ್ಚಿ ತಾಗೆ ತ
ದ್ಗಿರಿಯೊಳ್ ನಿಂದೆನೆಂಬ ಬಗೆಯಿಂ ಮಱಿದೊಯ್ಯನೆ ಮೆಯ್ಯನಾದರಂ
ಬೆರಸು ನಿಮಿರ್ಚೆ ಕಾಲನೊದೆದೆರ್ದು ಕರಂಗಳನಾತ್ಮದೇಹಮಂ‖೧೭೮

ತಡವರಿಸಿ ನೋಡಿ ತುಡಿಸಿದ ತೊಡವುಗಳುಮನುಡಿಸಿದ ಸೀರೆಯುಮಂ ಪೂಸಿದ ಶ್ರೀಖಂಡಮುಮಂ ಪಟ್ಟಿರ್ದ ಪಾಸುಮಂ ಸುತ್ತಿಮುತ್ತಿರ್ದ ಮಕುಟಬದ್ಧರುಮಂ ಕಂಡು ಬೆಱಗಾಗಿ ‖ ೧೭೯

ಸುರವರಪೂಜ್ಯಮಪ್ಪ ದಿವಿಜೇಶ್ವರಲಕ್ಷ್ಮಿಗಮೂಲ್ಯಮಪ್ಪ ಸೌಂ
ದರಮೆನಿಸಿರ್ದ ನಿರ್ವೃತಿಯನೆಯ್ದಿಸಲಾರ್ಪ ಸಮಸ್ತದೋಷದೊಳ್

[1] ಇತ್ತಲಿಂದ್ರಪ್ರಭನೆಂಬ ಪ್ರಧಾನಂ ಕುಮಾರನ ಸಾವನಱಿದು ಸಂತತಿಯಿಲ್ಲದುದಕ್ಕೆ ಮಲ್ಮಲಂ ಮಱುಗಿ ಶ್ರೀಧರಾಚಾರ್ಯರ್ ದಿಗಂಬರಗಿರಿಯೊಳಿರ್ದುದನಱಿವನಪ್ಪುದಱಿಂ ತನ್ನಮಗಂಗೆ ಕುಮಾರನ ಕಾರ್ಯಮನಱಿಪಿ ಪುರಕ್ಕೆ ಕಾಪಾಗಿರಿಸಿ ದಕ್ಷಿಣಭಾಗದವರನಳವಡಿಸಿ ಬಂದಪೆನೆಂದು ರುಷಿನಿವಾಸಪರ್ವತಕ್ಕೆ ಬಂದು ಶ್ರೀಧರಾಚಾರ್ಯರಂ ವಂದಿಸಿ ಮುಂದೆ ಕುಳ್ಳಿರ್ದು ಧರ್ಮಮಂ ಕೇಳ್ದು ತದನಂತರಂ ನಿಮ್ಮ ಶ್ರೀಪಾದಮಂ ಕಾಣಲೆಂದು ಫಲಂಬರುಂ ವ್ರತವಿಶೇಷದಿಂ ದೂರದೇಶದೊಳಿರ್ದು ಬಂದ ವೃದ್ಧರಪ್ಪುದಱಿಂ ಪರ್ವತಮನೇಱಲಾಱದಿರ್ದಪರೆಂಬುದುಮವರ್ಕರುಣಿಸಿ ತದ್ಗಿರೀಂದ್ರದಿಂದಿಳಿದವರ್ಬಿಟ್ಟ ಬೀಡಿನೊಳು ಚರಿಗೆಗುಡುವುದುಮಿಂದ್ರಪ್ರಭಂ ನಿರಿಸಿ ನಿದ್ರೆಬರ್ಪಂತಾಹಾರಮನಿಕ್ಕುವುದುಂ ಪಕ್ಕಗೊಂಡಂತೆ ತೂಂಕಡಿಸಿ ಕೆಡೆದರಾನೆಯಮೇಲೆ ದಾಳಾದಾಳಿಯಿಂ ಪ್ರತಿಪಾಲಪುರಕ್ಕೆ ವಂದರಮನೆಯಂ ಪೊಕ್ಕು ದಿವ್ಯಾಭರಣಂಗಳಂ ತೊಡಿಸಿ ಪಾಸಿನ ಮೇಲಿರಿಸಿ ಸುತ್ತಿ ಮುತ್ತಿಕೊಂಡೋಲಗಿಸುತ್ತುಮಿರ್ಪುದು ಮೂಱನೆಯ ದಿವಸದಂದಿಂಗೆ (ಗ)

ಪೊರೆಯದ ದುಃಖಮಂ ಮಱೆದು ಪೊರ್ದಿಸಲೀಯದ ಜೈನದೀಕ್ಷೆಯಂ
ಪರಿಹರಿಪಂತುಟೊಂದು ವಿಧಿಯುಂ ದೊರೆಕೊಂಡುದು ಕರ್ಮದೇಷ್ಟೆ
ಯಿಂ ॥ ೧೩೦

ಪುಸಿದು ದುರಾತ್ಮನೆನ್ನ ಗುಣಮಂ ಭುವನತ್ರಯಪೂಜ್ಯನಪ್ಪುದಂ
ಕುಸಿಯಿಸಿ ತನ್ನ ಬಾಳ್ಕೆಗೆಡೆಯಿಲ್ಲದೆ ವೈಶ್ಯರೆವೆಂದು ಬಂದು ನಂ
ಬಿಸಿ ಕಡುದೂರ್ತಿನಿಂ ಪಲವುಟಕ್ಕುಗಳಿಂ ಸಮೆದನ್ನಮಂ ಸಮಂ
ಜಸಿಕೆಯನೊಕ್ಕು ಬೇಗಮೆನಗಿಕ್ಕಿ ಬಟಿಕ್ಕೆ ಮನೋನುರಾಗದಿಂ ॥ ೧೩೧

ಇಲ್ಲಿಗೆ ತಂದು ತಮ್ಮಂತು ಮಾಡಿದನೆಂದು ಕೇಡಿಂಗೆ ಬಿಸುಸುಯ್ದು ಪಾಸಿನಮೇಲೆ ಬೀೞ್ವುದುಂ ಶೀತಲಕ್ರಿಯೆಗಳಿಂದೆಚ್ಚಱಿಸಿಸಯ್ತು ಕುಳ್ಳಿರಿಸಿ ಸಮ್ಯಕ್ತ್ವಚೂಡಾಮಣಿಗೆ ಸಮಸ್ತಬಂಧುಜನಮುಂ ಪ್ರಧಾನರುಂ [1] ಮೆಯ್ಯನಿಕ್ಕಿ ಬಿನ್ನಪಮೆಂದಿಂತೆಂದರ್ ॥ ೧೩೨

ಸಂತತಿಯಿಲ್ಲದ ರಾಜ್ಯಮು
ನಿಂತಿದನಡಿಗರ್ದಿ ಕಿಡಿಸದುನ್ನತಗುಣ ನಿ ।
ಶ್ಚಿಂತಂ ನಿಱಿಸಿ ಬಟಿಕ್ಕಂ
ಸಂತತಿಯಂ ಮಾಡಿ ದೇವ ತಪದೊಳ್ ನಿಲ್ ನೀಂ ॥ ೧೩೩

[ಪರಮಾಂಡಳಿಕರ್ ಭಯದಿಂ
ಕರಂಗಳಂ ಮುಗಿದು ಕಪ್ಪಮಂ ತಂದೀವರ್ ।
ಕರಮಂಜಿ ನಿನ್ನ ಜನಕಂ
ಗೆರಡಿಲ್ಲದೆ ದೇವ ನೀನಿದಂ ಕಿಡಿಸುವುದೇ] ॥ ೧೩೪

ಎಂದು ಬಿನ್ನಪಂಗೆಯ್ದು ಕಾರುಣ್ಯಮಪ್ಪಂತು ಕಣ್ಣನೀರ್ಗಳನಿಕ್ಕಿ ನಿಷ್ಕರುಣಿಯಾಗಿ ಪೋಪೆನೆಂಬ ಬಗೆಯುಳ್ಳೊಡನಿಬರುಮಂ [2] ಕೊಂದು ಪೋಗೆಂದು ಮದದಾನೆಯಂ ಕಂಬಕ್ಕೆ ತರ್ಪಂತೆ ಲಲ್ಲೆಗೆಯ್ದು

---

1 ಸಾಮಂತರುಂ (ಗ) 2 ಉಳ್ಳೊಡೆ ನೀವೇಮ್ಮುಮಂ (ಗ)

ಬಲ್ಲಾಳ್ತನದಿಂ ಪಟ್ಟಮಂ ಕಟ್ಟಿ ಸಿಂಹಮಂ ಸೆಱೆಯಿಡುವಂತೆ ರಾಜ್ಯ
ದೊಳ್ ನಿಱಿಸಿ ಪಲವುತೆಱದ ಕಾಪುಗಳಿಂ ಮಿಡುಕಬಾರದಂತಾಗೆ ಕಾದು
ರಾಜ್ಯಂಗೆಯ್ಯುತ್ತಿರ್ಪುದುಂ ॥ ೧೩೫

ಬಿಸುಟು ನುತರಾಜ್ಯಲಕ್ಷ್ಮಿಯ
ನಸದೃಶಮೆನಿಸಿರ್ದ ಮುಕ್ತಿಗೋಮಿನಿಯೊಳ್ ಸಂ ।
ತಸದೊಳ್ ಕೂಡುವುದೆಂಬಂ
ತಸಹಾಯ[1] ಪರಾಕ್ರಮಂ ಮಗಂ ಪುಟ್ಟುವುದುಂ ॥ ೧೩೬

[ಕರಮೆಲ್ಲದೊಸೆದು ರಾಗಂ
ಬೆರಸು ಮಹೀಪಾಲನಾತ್ಮಪುತ್ರಂಗೆ ಮನೋ ।
ಹರಮಪ್ಪ ತನ್ನ ತಂದೆಯ
ವರನಾಮವನಿಟ್ಟು ಕಟ್ಟಿ ಪಟ್ಟಮನಾಗಳ್][2] ॥ ೧೩೭

ಸೆಱೆಮನೆಯೊಳಿರ್ದ ಮನುಜಂ
ಸೆಱೆ ಬಿಟ್ಟ ಬೞಿಕ್ಕ ನಿಲ್ಲದೋಡುವ ತೆಱದಿಂ ।
ಪೆಱಪಿಂಗಿ ಸೆಡೆದು ನಿಲ್ಲದೆ
ತಱಿಸಲದಿಂ ಬಿಟ್ಟು ಸಕಲರಾಜ್ಯಶ್ರೀಯುಂ ॥ ೧೩೮

[ಪೋಗಿ ಜಿನದೀಕ್ಷೆಯಂ ಕೈಕೊಂಡು ದ್ವಾದಶವಿಧತಪದೊಳುತ್ತ
ರೋತ್ತರಂ ನೆಗೞ್ದು ಮುನ್ನಿನ ಋಷಿನಿವಾಸಪರ್ವತದೊಳ್ ಪಲವುಕಾಲ
ಮಿರ್ದು ಕರ್ಮಕ್ಷಯಂಗೆಯ್ದು ನಿರ್ವಾಣಶ್ರೀಸಮೇತನಾದನಂದಿನಿಂದಿ
ತ್ತಲುಂ ಋಷಿನಿವಾಸಗಿರಿ ಶ್ರೀಧರಾಚಾರ್ಯರ ಪೆಸರೆ ಪೆಸರಾಗಿ ಶ್ರೀಪ
ರ್ವತಮೆಂದು ಪ್ರಸಿದ್ಧಿಗೆ ಸಂದುದು. ತದ್ಗಿರಿಯ ದಕ್ಷಿಣಭಾಗದೊ
ಳೊಂದು ವಟವೃಕ್ಷದ ಕೆಳಗಿರ್ದು ಮುಕ್ತಿಗೆ ಸಂದರಪ್ಪುದಱಿಂದಾಸ್ಥ

[1] ಸಂತಸದಿಂ ನೆರೆಯಲ್ ಬೇಗದಿನಸಹಾಯ (ಗ)
ಪುಟ್ಟೆ ಯಶೋಧರನೆಂದು ಪೆಸರಿಟ್ಟು ರಾಜ್ಯಮಂ ಕೊಟ್ಟು (ಗ)

ನಕ್ಕೆ ಸಿದ್ಧವಟವೆಂಬ ಪೆಸರಾಯ್ತು. ಶ್ರೀಧರಕೇವಲಿಗಳ್ಗೆ ಕೇವಲಜ್ಞಾನ ಪೂಜೆಯಂ ಮಾಡಲೆಂದು ಚತುರ್ವಿಧದೇವನಿಕಾಯಂ ನೆರೆದರಪ್ಪುದಱಿಂ ದಾಸ್ಥಾನಕ್ಕಮರಾವತಿಯೆಂಬ ಪೆಸರಾಯ್ತು. ತನ್ಮುನಿ ತಪಂಗೆಯ್ವ ಕಾಲದೊಳ್ ಅರ್ಜುನವೃಕ್ಷದ ಕೆಳಗಿರ್ದರಂ ಖೇಚರರ್ ಮಲ್ಲಿಗೆಯರಳಿಂ ಪೂಜಿಸಿದರಪ್ಪುದಱಿಂದಾಸ್ಥಾನಕ್ಕೆ ಮಲ್ಲಿಕಾರ್ಜುನವೆಸರಾಯ್ತು. ಇಂದ್ರ ಪ್ರಭನಾಮಮುನಿಯಂ ಭದ್ರಿಸಲ್ವೇಡಿ ವೃದ್ಧರ್ ಬಂದಿರ್ದರೆಂದೊಡೆ ವೃದ್ಧ ಗಿರಿಯಾದುದು. ಯಶೋಧರಕುಮಾರಂ ಋಷಿಪುತ್ರನಪ್ಪುದಱಿಂದಾ ತನ ಮೈದುನರ್ ಮೇಳದಿಂ ಮುಂಡಿಯ ವಂಶಜನೆಯೆಂದು ಕುಮಾರ ನೊಡನೆ ನಗುವುದಱಿಂದದುವೆ ಪ್ರಸಿದ್ಧವಾಗಿ ಮುಂಡಿಯ ವಂಶಮಾದು ದೆಂದು ಬುದ್ಧಿಸಾಗರಂ ಧನದಮಹಾರಾಜನ ವಂಶಾವತಾರಮುಮಂ ಪ್ರತಿ ಪಾಲಪುರದ ಪೆಸರ ವೃತ್ತಾಂತಮುಮಂ ಪೇೞೆ ಸಂಘಶ್ರೀ ಸಂತೋಷಂ ಬಟ್ಟು ॥ ೧೪೯

ಈತನ ವಂಶದವರ್ ವಿ
ಖ್ಯಾತರ್ ಸಾಮಾನ್ಯರಲ್ಲರೆಂದುಂ ಧರ್ಮೋ।
ಪೇತರದಱಿಂದಮಿನ್ನೃಪ
ಜಾತನನಾನೆನಿತು ಪುಣ್ಯದಿಂ ಪೊರ್ದಿ-ದೆನೋ [1] ॥ ೧೫೦

ಏನೆಂದಱಿಯದೆ ಮುನ್ನಪ
ಮಾನಂ ಗೆಯ್ದಿರ್ದೆನುಱದು ಜಿನತತ್ತ್ವಮನ।
ಜ್ಞಾನತೆಯಿನೀಗಳಱಿದೆಂ
ಮಾನವಪತಿಯಿಂದಮೊಳ್ಳಿತೆಂಬುದನಿಂಬಿಂ] [2] ॥ ೧೫೧

---

1 ಜಾತನನಾಗಿಂತು ಪುಣ್ಯದಿಂ ಪೊರ್ದಿದವೆನೇ (ಕ. ಬ.)

2 ಜಾತರೂಪಧರನಾಗಿ ಕರ್ಮಕ್ಷಯಂಗೆಯ್ದು ನಿರ್ವಾಣಲಕ್ಷ್ಮಿಯೊಳ್ ಕೂಡಿ ದನಿತ್ತಲ್ ಯಶೋಧರಕುಮಾರನ ಮೈದುನಂ ಮುಂಡಿಯವಂಶಜನೆಂದು ಕಾಡು ವುದುಮದುವೆ ಪ್ರಕಟಮಾಗಿ ಮುಂಡಿಯವಂಶಜಮಾದುದೆಂದಬ್ಧಿಸಾಗರರ್ ಪೇಳ್ವುದುಂ ಸಂಘಶ್ರೀ ಲೇಸಾಗಿ ತಿಳಿದು ಸಂತೋಷಂಬಟ್ಟು (ಗ)

ನರನಾಥನ ದೆಸೆಯಿಂ ಭೂ
ಸುರಮೋಕ್ಷಮನೀವ ಧರ್ಮಮುಮಂ ಪಿರಿದಪ್ಪೀ ।
ಸಿರಿಯುಮಂ ದೊರೆಕೊಂಡುದು ವಿ
ಸ್ತರದಿಂದೆನ್ನಂತು ನೋಂತನಾವನೊ ಜಗದೊಳ್ ॥ ೧೪೨

[ಎಂದು ಸಂತೋಷಂಬಟ್ಟು ಸುಖದಿಂದಿರ್ಪುದುಮೊಂದುದಿವಸಂ ಸಂಘಶ್ರೀಯು ಮುನ್ನಿನ ಗುರು ಬುದ್ಧಶ್ರೀಯೆಂಬ ಭಿಕ್ಷುಕಂ ಸಂಘಶ್ರೀ ಧನದಮಹಾರಾಜನ ಪೇಳ್ಕೆಯಿಂ ಶ್ರಾವಕನಾದನೆಂಬುದಂ ಕೇಳ್ದು ಮುನಿದು ಮನೆಗೆ ಬರ್ಪುದುಂ ಸಂಘಶ್ರೀ ಮುನ್ನಿನ ಮಾರ್ಗದಿಂ ಪೊಡೆ ಮಡದೆ ಮನ್ನಿಸದೆ ಮೋನಂಗೊಂಡುದಾಸೀನಂಗೆಯ್ದಿರ್ಪುದುಂ ॥ ೧೪೩

ಮುನ್ನಿನ ಮಾರ್ಗದೊಳೆನ್ನಂ
ಮನ್ನಿಸದೀಖಳನನಾವ ಪಾಂಗಿನೊಳಂ ಸಂ ।
ಪನ್ನತೆಯಿಂ ಕಿಡಿಸುವೆನೆಂ
ದುನ್ನತಿಯಿಂ ಪೂಣ್ದು ನೋಡಿ ಸಂಘಶ್ರೀಯಂ ॥ ೧೪೪

ನೀನಪ್ಪೊಡೆ ಧನದಧರಿ
ತ್ರೀನಾಥನ ಮನೆಗೆ ಮುಖ್ಯನೈ ನಿನ್ನಗೃಹ ।
ಕ್ಕಾನಿಂದು ಬಂದೊಡಿಂತಪ
ಮಾನಂ ಮಾಡುವುದು ಮಂತ್ರಿಗಿದು ಗುಣದೊಳವೇ ॥ ೧೪೫

ನಿನಗಿದು ಪಾಟಿಯಲ್ತು ಮೊಗನೀಯದೆ ಮನ್ನಿಸದುದ್ಧತಿಕ್ಕೆಯಿಂ
ಮುನಿಸಿದವರಂತೆ ಕೇಳ್ ನುಡಿಯದಿರ್ಪುದು ನೆಟ್ಟನೆ ಮುನ್ನಿನಂತೆ ನೀ
ನೆನಗತಿಭಕ್ತನೆಂದು ಬಗೆಗೆಟ್ಟು ಭವದ್ಭವನಕ್ಕೆ ಬಂದೆನಿಂ
ತಿನಿತಪಮಾನಮಂ ನೆಱೆಯೆ ಮಾಪ್ಪೊಡೆ ಬರ್ಪನೆ ಹೀನವೃತ್ತಿಯಿಂ ॥

ಆನಾದೊಡಮಕ್ಕೆ ತನ್ನ ಗೃಹಕ್ಕೆ ಬಂದೊಡೆ ಗರ್ವದಿಂ
ದೇವನಂತಿಚಿಸಿರ್ಪುದುಂ ಕಡುಪೊಂಗಿ ಬಿಂಕದಿನಿರ್ಪುದುಂ
ಭಾವಕಂಗೆ ಬುಧಂಗೆ ಮಂತ್ರಿಗೆ ಸಜ್ಜನಪ್ರಿಯನಪ್ಪವಂ
ಗಾವುದೊಳ್ಗುಣಮಾವುದುನ್ನತಿ ಪೆಂಪದಾವುದು ಧಾತ್ರಿಯೊಳ್ ॥ ೧೪೭

ಎಂದು ಮೃದುವಚನಂಗಳಿಂ ಸಂಘಶ್ರೀಯು ಮನಂಗೊಳಿಸಲೆಂದು ನುಡಿದಾತನಂ ಸದ್ಧರ್ಮದಿಂ ಪತ್ತುವಿಡಿಸಿ ಮಿಥ್ಯಾತ್ವಮಂ ಪೊರ್ದಿಸುವ ಬುದ್ಧಿಯಿನಿಂತೆಂದಂ][1] ೧೪೮

ನೀಂ ಬುದ್ಧಾಗಮದೊಳ್ ಕುಶ
ಲಂ ಬಗೆವೊಡೆ ನಿನ್ನ ದೊರೆಯುಂ ಚತುರನುಮೊದಂ ।
ನಂಬಿ ಪೆಱತೊಂದು ಸಮಯಮ
ನಿಂಬಿಂ ಪೊರ್ದಿರ್ದನೆಂದೊಡಿಂತಿದು ಚೋದ್ಯಂ ॥ ೧೪೯

[ವ್ರತಮಂ ಪಾಲಿಸಿ ದೇಹಮಂ ತೊಱೆದು ವಿದ್ಯಾನೀಕಮಂ ಬಿಟ್ಟು ಪೆಂಡತಿಯಂ ಧಾನ್ಯಮನಾತ್ಮಜಪ್ರತತಿಯುಂ ಮುಂ ಬಿಟ್ಟು ಗಾಂಪಿಂದೆ ನಿರ್ವೃತಿಯಂ ಸಾಧಿಪೆನೆಂಬ ಸಾಹಸಿಗರಂ ದಿಗ್ವಾಸರಂ ನಂಬಿ ದುರ್ಮತ ನೀಂ ಗಾವಿಲರಂತಿದೇಕೆ ಕಿಡಿಪೈ ಸಂಸಾರಸೌಖ್ಯಂಗಳಂ ॥ ೧೫೦

ಸುರತದೊಳಿಚ್ಛೆಯುಂ ಸಲಿಸುವೆಂಬುರಹಾಕ್ಷಿಯರೊಳ್ ನಿರಂತರಂ
ನೆರೆವುದು ದಿವ್ಯಭೋಜನಮನುಣ್ಬುದು ತನ್ನ ಮನಕ್ಕೆವಂದರೊಳ್
ಪರಿಸುವುತಿರ್ಪ (?) ದುದ್ಧತಿಯಿನಿಂದ್ರಿಯದಿಚ್ಛೆಯೊಳಿರ್ಪುದಾಗಳುಂ
ಮರುಳ ವಿನೋದದಿಂ ನಲಿಯುತಿರ್ಪುದು ಮೋಕ್ಷಮನಾರು ಕಂಡವರ್ ॥

ಎಂಬುದುಂ ಸಂಘಶ್ರೀಯಿಂತೆಂದಂ ॥ ೧೫೦

ಜಿನವಚನಂ ಪುಸಿಯುಪ್ಪೊಡೆ
ಧನದಮಹಾರಾಜನೆನಗೆ ತೋಱಿದನಘೌಜೇ ।
ವನದಿ ಬಡಬಾಗ್ನಿಯೆನಿಸುವ
ಮುನಿಯುಗಳಮನಂತರಿಕ್ಷದೊಳ್ ಪೋಪವರಂ][2] ॥ ೧೫೨

---

1 ಎಂದು ರಾಗದಿಂದಿರ್ಪುದುಂ ಸಂಘಶ್ರೀ ಶ್ರಾವಕನಾಗಿರ್ದನೆಂಬುದುಂ ಸಂಘಶ್ರೀಯ ಮುನ್ನಿನ ಗುರು ಬುದ್ಧಶ್ರೀಯೆಂಬ ಭಿಕ್ಷುಕಂ ಕೇಳ್ದು ಬಂದು ಸಂಘಶ್ರೀಗಿಂತೆಂದಂ (ಗ)

2 ಎಂಬುದುಂ ಸಂಘಶ್ರೀಯಿಂತೆಂದಂ (ಗ)

ವರತಪದೊಳಾದ ವೃದ್ಧಿಯು
ನೆರಡಿಲ್ಲದೆ ಕಂಡು ನಂಬಿದೆಂ ಜಿನಮತಮಂ ।
ಮರುಳಲ್ಲೆನೆನಗೆ ನಿನ್ನೀ
ಪುರುಳಿಲ್ಲದ ಧರ್ಮ ಬಾರ್ತೆಯಲ್ಲದು ಮತ್ತಂ ॥ ೧೫೪

ಎಂದು ನುಡಿವುದುಂ ಬುದ್ಧಶ್ರೀ ಸಂಘಶ್ರೀಯನೆಂತಾದೊಡಂ ಕಿಡಿಸುವೆನೆಂಬ ಕಜ್ಜದಿನಿಂತೆಂದಂ ॥ ೧೫೫

ಧನದಮಹೀಶ್ವರಂ ವಿಬುಧಬಂಧು ಚತುರ್ಬಲದಿಂದೆ ಕಾದಿ ಜೀ
ವನಧಿಪರೀತಭೂವಳಯಮಂ ನೆಱೆ ಸಾಧಿಸಿಕೊಂಡನೆಂದೊಡಿಂ
ನಿನಗೆ ಜನೇಶನಂಬರದೊಳಿರ್ಪರನುತ್ಸವದಿಂ ಮುನೀಂದ್ರರಂ
ಮನಮುರಿತೋಱಿ ತನ್ನ ವಶಮಾಗಿರೆ ಮಾೞ್ಪುದದಾವ ವಿಸ್ಮಯಂ ॥

ಎಂದು ಕಳಕಳಿಸಿ ನಕ್ಕು ಮತ್ತಮನಿತಾನುಂ ಕುತ್ಸಿತಮಪ್ಪುದಾಹರಣೆಗಳಂ ತೋಱಿ ಶೂನ್ಯವಾದಮಂ ಮಾಡಿ ತಡಂಗಾಲ್ವೊಯ್ವುದುಂ ಸಂಘಶ್ರೀ ಬುದ್ಧಶ್ರೀಯ ವೃಥಾಲಾಪಕೊಳಗಾಗಿ ಲೋಚನಹೀನನಂತೆ ಶೋಭೆಗೆಟ್ಟು [ತಿಗಂಗೆಟ್ಟು] ಕುದುರೆಯಂತೆ ಮನಂಗೆಟ್ಟು, ಮಾಗಿಯ ತೊೞೆ[1] ಯಂತೊಳಸಾರ್ದು, ಇರುಳ್ ಕಣ್ಣಾಣದರಂತೆ ತೊಟ್ಟನೆ ಕಣ್ಗೆಟ್ಟು [ಸದ್ಧರ್ಮ] ವಿಮುಖನಾಗಿ "ಪುನಃ ಶ್ವಾನೋ ಭವಿಷ್ಯತಿ" ಯೆಂಬ ನೀತಿಯನ್ನುಂಟುಮಾಡಿ ಮಿಥ್ಯಾತ್ವಮಂ ಪೊರ್ದಿದನಿಂತು ॥ ೧೫೭

[ಎನ್ನ ಚಲಂ ಕೂಡಿದುದೆಂ
ದುನ್ನತಿಯಿಂ ಪೆಟ್ಟುವೆರ್ಚಿ ಬುದ್ಧಶ್ರೀ ಪೋ ।
ದನ್ನಯದೊಳತ್ತಲಿಘಚಯ
ದುನ್ನತಿಯಿಂ ಕಷ್ಟನಾದನಪಗತಪುಣ್ಯಂ॥] ೧೫೮

[1] ಕೋಗಿಲೆ (ಕ. ಖ.)

ಜಿನಪದಸೇವನೆಯುಂ [1] ಬಿ
ಟ್ಟನೇಕದುರ್ಗತಿಗಳೊಡನೆ ಕೂಡಿ ಮಹಾದು ।
ರ್ದಿನಯುದಿನನಂತಸುಖಮಂ
ತನಗೀವಂತಪ್ಪ ಧರ್ಮತರುವಂ ಕಡಿದಂ [2] ॥ ೧೫೯

ವಿಮಲಗುಣಗಣಮನೊಕ್ಕು
ತ್ತಮಧರ್ಮಮನೊಲ್ಲದಧಿಕಪಾಪಂ ಶೂನ್ಯಾ ।
ಗಮಮಂ ಪೊರ್ದಿದನದಱಿಂ
ಸಮಂತು ಸದ್ಧರ್ಮವಿಪ್ರ್ರದಂ ಕಂಡವರಾರ್ ॥ ೧೬೦

ತಡೆಯದೆ ಮಹಾನಿಧಾನಂ
ಬಡವನ ಕೈಸಾರ್ದು ಭೂಪರಱಿಯದೆ ನೆಲಸಿ ।
ರ್ಪೊಡವೊಳ್ಳಿತಪ್ಪ ಧರ್ಮಂ
ಕಿಡದಿರ್ಪೊಡಮವರೆ ಪುಣ್ಯವಂತರ್ ಧರೆಯೊಳ್ ॥ ೧೬೧

[3] ಕುಂಕುಮಮಂ ಬಿಟ್ಟು ಜಾದಂ ಪೂಸುವಂತೆ ಮನೆಯುಂ ಬಿಟ್ಟು ಬೀದಿಯೊಳಿರ್ಪಂತೆ ಪಟ್ಟಣಮಂ ಬಿಟ್ಟು ಪೊಲೆಗೇರಿಯೊಳ್ ಪಡುವಂತೆ [4] ಪಾಲಂ ಬಿಟ್ಟು ಕಳ್ಳಂ ಕುಡಿನಂತೆ ರಾಜಕುಮಾರರ ಕೆಳೆಯುಂ ಬಿಟ್ಟು ಪುಲ್ಲಡಕಿಯೊಳ್ ಕೆಳೆಗೊಳ್ವಂತೆ ಸೀರೆಯುಂ ಬಿಟ್ಟು ನಾರನುಡುವಂತೆ ದಿವ್ಯಾಭರಣಂಗಳಂ ಬಿಟ್ಟು ಬಳ್ಳಿಗಳಂ ಕಟ್ಟುವಂತೆ ಸೊಡರ ಬೆಳಗಂ ಬಿಟ್ಟು ಕೊಳ್ಳಿಯ ಬೆಳಗಿನೊಳುಣ್ಬಂತೆ ಕಱುಮಾಡಮಂ ಬಿಟ್ಟು ಪುಲ್ಗುಡಿಸಲನಾಶ್ರಯಿಸುವಂತೆ ಜಾದಿಯ ಪೂವಂ ಬಿಟ್ಟು ಬೇವಿನ ಪೂವಂ ತುಱುಂಬುವಂತೆ ಸದ್ಧರ್ಮಮಂ ಬಿಟ್ಟು ಮಿಥ್ಯಾತ್ವಪ್ರೀತನಾಗಿರ್ಪುದುಂ ವಾತ್ಸಲ್ಯರತ್ನಾಕರನಱಿದು ತನ್ನೊಳಿಂತೆಂದಂ ॥ ೧೬೨

---

1 ಜಿನಪದಸೇವೆಗಳಂ (ಗ) 2 ಅದಂ ಧನದಮಹಾರಾಜಂ ಕೇಳ್ದು ಕಮಲಶ್ರೀಯ ಮೊಗಮಂ ನೋಡಿ ನಗುತಮಿಂತೆಂದಂ ವಿಮಲಗುಣ....(ಗ)

3 ಎಂದು ಸಂಘಶ್ರೀಯಂ ಬರಿಸಿ ಮತ್ತಂ ಧರ್ಮಮಂ ಪೇಳುವುದುಂ ಎಂತುಂ ನಂಬದಿರ್ಪುದು ಮಿಂತೆಂದಂ (ಗ) 4 ಇರ್ಪಂತೆ (ಗ)

ಮೊಱಲೆಂದಳಿಪಿಂ ಮಣಿಗ್ವರನೊಯ್ದು ಕರ್ಪೂರಮಂ ಕರಂ
ತೋಱೆ ಭಾವಿಸಿ ನೋಡಿ ತಾಂ ಪ್ರೊಲೆಯಂ ದಿಟಂ ಕಳುಹಿಂಗೆ (?) ನೀಂ
ತೋಱು ಕೊಂಡಪೆನೆನ್ನ ಬಳ್ಳದೊಳೆಂಬವೋಲ್ ಪರಧರ್ಮಮಂ
ಕೇಱು ಪೇೞ್ದಡಮೊಲ್ವರಲ್ಲರಘಾನ್ವಿತರ್ ಗುಣವರ್ಜಿತರ್ ॥ ೧೬೩

ನಾಯ ಕುನ್ನಿಗೆ ಕೂರ್ತು ರಾಜ್ಯಮನಿತ್ತು ಪಾಸಿನ ಮೇಲೆ ತಂ
ದಾಯತಿಕ್ಕೆಯಿನೊಪ್ಪವಾಗಿರಿಸಿ ಪ್ರಭೂತ್ಕರಮಿರ್ದು ಕ
ಟ್ಟಾಯದಿಂದೊಡನೋಪದೋಲಗಿಸುತ್ತುಮಿರ್ಪೊಡೆ ಮತ್ತಮಾ
ನಾಯ ಕುನ್ನಿ ಸಮಂತು ಮಾಣ್ಬುದೆ ಪೇಲ ತಿಂಬುದನೆಲ್ಲಿಯುಂ ॥ ೧೬೪

ಎಂದು [ಭಾವಿಸಿ ಸಂಘಶ್ರೀಯುಂ ಬರಿಸಿ ಮುಂದೆ ಕುಳ್ಳಿರಿಸಿ ಧರ್ಮಶ್ರವಣಮಂ ಮಾಡೆ] [1] ಮೂಗರಂತೆ ಮಱುಮಾತುಗುಡದೆ ಮರ [2] ದಂತೆ ಬಿಟ್ಟಾಡದೆ ಬೆಳ್ಪುರಸಿನಂತೆ [3] ಶೂನ್ಯಹೃದಯನಾಗಿ ಬೆಳೆದ ಕೆಯ್ಯಂತೆ ತಲೆಯಂ ಬಾಗಿ ಮಿಥ್ಯಾತ್ವಗ್ರಹಾವಿಷ್ಟನಾಗಿ ಕೇಳದಿರ್ಪುದುಂ, ಪಲವು ದಿವಸಮಾತನನೆಂತುಂ ಧರ್ಮಕ್ಕೆ ತರಲಾಱದೆ ಕಮಳಶ್ರೀಯು ಸಾಮಂತರ ಮೊಗಮಂ ನೋಡಿ ಧನದಮಹಾರಾಜನಿಂತೆಂದಂ ॥ ೧೬೫

ಕಲ್ಲೆಂತುಂ ನನೆಯದವೋಲ್
ಪೊಲ್ಲಮೆಯೊಳ್ ಕೂಡಿ ರೌರವಕ್ಕೆಱುವವರುಂ ।
ಸಲ್ಲಲಿತಮಪ್ಪ ಧರ್ಮ
ಕ್ಕೆಲ್ಲಿಯುಮೋರಂತೆ ಬಾರರಘವಶದಿಂದಂ ॥ ೧೬೬

ಇರುಳಪ್ಪಾಗಳ್ ಪಶ್ಚಿಮ
ಶರನಿಧಿಗಿೞಿವಂತೆ ಸೂರ್ಯನಘಸಂಕುಲದಿಂ ।
ಪೊರೆದಿರ್ದ ತೀವ್ರರುಂ ನಿ
ಷ್ಠುರನರಕಕ್ಕೆಱುವರಲ್ಲಿ ಸಂದೆಯಮುಂಟೇ ॥ ೧೬೭

[1] ಮುಟ್ಟನುಡಿವುದಾಂ (ಗ) [2] ಮಂದರ (ಕ. ಬ.) [3] ಬೀಳ್ಪರಸಿನಂತೆ (ಗ)

ಎನಿತು ಕಡುಗೂತೋಡಂ ಬೇ
ವಿನ ಮರನಂ ಮಳಯಜೋರ್ವಿಜಂಮಾಡುವೆನೆಂ ।
ಬನೆ ಗಾಂಪನಂತೆ ಪಾತಕ
ರೆನಿತೆಂದೊಡಮುಮಳಧರ್ಮಮಂ ಪೊರ್ದುವರೇ ॥ ೧೬೮

ಎಂದು ನುಡಿಯುತ್ತುಂ [ಧರ್ಮವಾತ್ಸಲ್ಯದಿಂ ಕಾರುಣ್ಯರಸಮೊ
ದವೆ ಸಂಘಶ್ರೀಯುಂ ನರಕಕ್ಕೆ ಸಲಲೀಯದೆ ಪಂಚಮಗತಿಯುನೆಯ್ದಿಸು
ವೆನೆಂಬ ಮೋಹದಿಂದೆ]ನಿತಾನುಂ ತೆಱದ ಕಥೆಗಳುಮಂ ದೃಷ್ಟಾಂತಂ
ಗಳುಮಂ ತೋಱಿ ನುಡಿದುಂ ವ್ರತಕ್ಕೆತರಲಾಱದೆ ॥ ೧೬೯

ವರಚಾರಣಋಷಿಯರನಂ
ಬರದೊಳ್ ಪೋಗುತ್ತುಮಿರ್ದರಂ ನಿನಗಂದಾ ।
ದರದಿಂ ತೋಱಿದೆನದನ
ಚ್ಚರಿವಟ್ಟು ಮನೋನುರಾಗದಿಂ ಕಂಡುಂ ನೀಂ ॥ ೧೭೦

ಜಡಮತಿಯಾಗಿ ನಿರ್ಬುದ್ಧಿತನದಿಂ ಮಿಥ್ಯಾತ್ವಯುತರಪ್ಪ ಧೂರ್ತ
ರ ಮಾತಂ ಕೇಳ್ದು ಪರತ್ರೆಯುಮಿಲ್ಲ [1] ದೈವಮುಮಿಲ್ಲೆಂದು ಬೆಣಕಚಂ
ಗೆಡೆಯಬೇಡ ॥ ೧೭೧

ಅನುಪಮತಪದ ಫಲಂ ಮೋ
ದಿನಿಯೊಳ್ ಪೇೞಲ್ಲದಂದು ಪ್ರತ್ಯಕ್ಷಂ ನೀಂ ।
ಘನಪದದೊಳ್ ಪೋಪವರಂ
ಮುನಿವರರಂ ವೃದ್ಧಿಯುಕ್ತರಂ ನಿಚ್ಚಯದಿಂ ॥ ೧೭೨

ಕಂಡಿರ್ದುಂ ಮತ್ತಂ ಮೇ
ತಂಡದ ಮೀಹಮನೆ ಮಾಡಿ ಸುವ್ರತಮುಂ ಕೈ ।
ಕೊಂಡು ಮತಿಗೆಟ್ಟು ಬಿಡುವೀ
ಮಿಂಡರ ಮಾತಿಂಗೆ ಬೆಚ್ಚಿ ಸದ್ದರ್ಶನಮಂ [2] ॥ ೧೭೩

---

1 ಧರ್ಮಮುಮಿಲ್ಲ (ಗ) 2 ಬೆಚ್ಚಿಸಲ್ ಸದ್ಧನಮಂ (ಕ. ಬ.)

ನಿನ್ನ ಗುರುವಪ್ಪ ಬೆಳಪುಂಜನ ವಚನಮನಂತಿರಿಸು ನೀನೆ ಪ್ರತ್ಯಕ್ಷಮಾಗೆ ನಭೋಂಗಣದೊಳ್ ಪೋಪ ಚಾರಣಋಷಿಯರಂ ಕಂಡುದುಂಟೋ ಪೇೞಿಲ್ಲವೋ ಪುಸಿಯದೆ ಪೇೞೆನೆ ಬುದ್ಧಶ್ರೀಯು ಕುಹೇತುದೃಷ್ಟಾಂತವನೆ ನಂಬಿ ತಱಂಟಿಗವೊಱಂಟಿಗಂ ಮರ್ದಿಲ್ಲೆಂಬುದಂ ನನ್ನಿಮಾಡಿ ಚಾರಣಋಷಿಯರಂ ಕಾಣೆನೆಂದು ತಲೆವುಯ್ಟರಸನೊಡನೆ ಬಾಯಂ ಬಡಿವುದುಂ॥ ೧೭೪

ಪುರದೇವತೆಗಳ್ ಮುನಿಸಿಂ
ಪರಿತಂದು ದುರಾತ್ಮನೆರಡು ಕಣ್ಗಳುಮಂ ನಿ।
ಷ್ಠುರವಾಗಿ ಪೊಯ್ದು ತೊಟ್ಟನೆ
ಕುರುಡಾದಂ ಪುಸಿಯ ಪೊಟ್ಟಣರ್ಗದು [1] ಪಿರಿದೇ ॥ ೧೭೫

ತಲೆ ನೋಯೆ ಕಣ್ಗಳೆರಡುಂ
ನೆಲದೊಳ್ ಬಿರ್ದಿರೆ ಸಭಾಳಿ ಬೆಱಗಾಗೆ ಖಳಂ।
ನೆಲನಂ ತಡವರಿಸುತ್ತುಂ
ಪೊಲೆಯರ ತೆಱದಿಂದೆ ದೂರದೊಳ್ ಕುಳ್ಳಿರ್ದಂ ॥ ೧೭೬

ಅಂತಿರ್ದ ಸಂಘಶ್ರೀಯುಂ ಸಭಾಜನಂ ನೋಡಿ ಪಾಪದ ಪ್ರತ್ಯಕ್ಷಫಲಮಂ ಕಂಡು ತಮ್ಮೊಳಿಂತೆಂದರ್ ॥ ೧೭೭

ಸರಸಿಜಮಿತ್ರನಂತೆ ತನು ಶೋಭಿಸೆ ಮಾನವದೇವಖೇಚರೇ
ಶ್ವರನತಪಾದಪಂಕರುಹರುತ್ತಮರೂರ್ಜಿತರಂದು ಚಾರಣರ್
ನಿರುಪಮರಂತರಿಕ್ಷದೊಳಗುರ್ವಿಸಿ ಪೋಪರನೊಳ್ಳಿತಾಗೆ ಭಾ
ಸುರಗುಣ [2] ತೋಱೆ ಕಂಡು ಖಳನಕ್ಕಟ ನೋಡಿರೆ ಕಾಣೆನೆಂದಪಂ॥ ೧೭೮

ಇವನಿಂ ಬಿಟ್ಟು ಬ್ರಹ್ಮೇತಿಕಾಱರುಂ ದುಃಖಭಾಜನರುಮಸತ್ಯವಾದಿಗಳುಮಿಲ್ಲೆಂದು ಮತ್ತಮಿಂತೆಂದರ್ ॥ ೧೭೯

---

[1] ಪೊಟ್ಟಳರ್ಗದು (ಕ. ಖ.) [2] ಭಾಸುರಮಣಿ (ಕ. ಖ.)

ಉಳ್ಳುದನಿಲ್ಲೆಂದೀತಂ
ಕಳ್ಳಂ ನುಡಿದಂತೆ ಪುಸಿದ [1] ಪಾಪದ ಫಲದಿಂ ।
ದೆಲ್ಲಿಯುಂ ನಿಲ್ಲದೆ ತಾಂ ತಳು
ವಿಲ್ಲದೆ ಕಣ್ಣೊಡೆದು ದುಃಖಭಾಜನನಾದಂ ॥ ೧೮೦

ವಸುಮತಿಯೊಳ್ ವಿಬುಧರ್ ಭಾ
ವಿಸುವೊಡೆ ನರಕಕ್ಕೆ ಪೋಪ ಪೆರ್ದಾರಿ ಮಹಾ ।
ವ್ಯಸನಕ್ಕೆ ಮೂಲಮಱುವೊಡೆ
ಪುಸಿಯಿಂದಂ ಬಿಟ್ಟು ಪಾತಕಂ ಪೆಱತೊಳವೇ ॥ ೧೮೧

[2] ಎಂದು ಸಮಸ್ತಜನಮುಂ ಸಂಘಶ್ರೀಯನಶ್ರೀಯುಂ ಕಂಡಂತೆ ಬಯ್ಯುತ್ತಿರೆ [ಧನದ ಮಹಾರಾಜಂ ಮಿಥ್ಯಾತ್ವಕ್ಕೆ ಗಡಗಡನಡುಗಿ ಕಣ್ಣೊಡೆದು ನೆಲದೊಳ್ ಪೊರಳ್ವ ಸಂಘಶ್ರೀಯುಮಂ ಮನೆಗೆ ಪೊತ್ತುಕೊಂಡು ಪೋಗಿಮೆಂದು ಪೇೞ್ದು ಕಳುಪುವುದುಂ.] ಸಂಘಶ್ರೀ ಚಿಂತೆಯಿಂ ಜರ್ಜರನೆ ಜಱಿದು ದುಃಖಪೀಡಿತನಾಗಿ [ಕೆಲವುದಿವಸಕ್ಕೆ] ಸತ್ತು ನರಕಕ್ಕಿೞಿದು ದೀರ್ಘಸಂಸಾರಿಯಾದನವನೇೞ್ತಿಲೆವರೆಗಂ ಪುಟ್ಟಿದ ಮಕ್ಕಳೆಲ್ಲ ಮಂಧಕರಪ್ಪುದಱಿಂದಾದೇಶಕ್ಕಂಧಕವಿಷಯಮೆಂದು ಪೆಸರಾಯ್ತು. ವೆಂಗಿವಲ್ಲಭನಪ್ಪ ಧನದಮಹಾರಾಜನಿತ್ತಲ್ ಸಂಸಾರದ ವಿಚಿತ್ರಮಂ ಕಂಡು ರಾಜ್ಯಕ್ಕೆ ಬೆಚ್ಚಿ ವಿಷಯಸುಖಕ್ಕೆ ಭಯಸ್ಥನಾಗಿ ॥ ೧೮೨

ಚಾರಣಋಷಿಪದಯುಗಳಮ
ನೋರಂತಿರೆ ಕಂಡು ಕಾಣೆನೆಂದಂ ದುಷ್ಟ ।
ಪ್ರೇರಣೆಯಿಂದೇನಾಗದೊ
ಧಾರಿಣಿಯೊಳ್ ದುಷ್ಟಸಂಗತಂ ಪೊಲ್ಲದಱಿಂ ॥ ೧೮೩

---

1 ಕಳ್ಳಂ ಕುಡಿದಂತೆ ಪುಸಿದು (ಗ)

2 ಮಸಣದ ಕಿಚ್ಚಿನಿಂ ನರಕಪಾಲದ ಭಾಂಡಮನಿಟ್ಟು ಮಜ್ಜೆಯ
ರಸವೆಸರಾಗೆ ಕೀಲಿಗನ ಹೆಂಡತಿ ತಾಂ ತೊಳಸುತ್ತ ಮೂಳೆಯೊಳ್
ಪುಸಿವನ ಕಾಲ ದೂಳಿಯೊಳಪೊಕ್ಕಪುದೆಂದೆಡಗಾಲ ಕೆಪ್ಪಿನಿಂ
ದೆಸೆಮುಸಿಯಾಗಿ ಮುಚ್ಚಿದಳಿದೇಂ ಪುಸಿ ಪೊಲ್ಲದು ಭೂತಳಾಗ್ರದೊಳ್ ॥(ಗ)

ಕಣ್ಣೊಳವಾಗಿಯುಂ ಕಟ್ಟಲೆಯೊಳ್ ಮುಂದಿರ್ದ ಮಾನಿಸರಂ ಕಾಣದಂತೆ ಜೀವಕ್ಕೆ ಮೂಱುಂ ಲೋಕಮನಱಿವ ಶಕ್ತಿಯುಂಟಾಗಿಯುಂ ಕರ್ಮದ ತೀವ್ರತೆಯಿಂ ಸದ್ದರ್ಶನಮನಱಿಯಲಾಱದುದಱಿಂ ದಾಪಾಪಮೆ ಕಡುಬಲ್ಲಿತ್ತೆಂದು ॥ ೧೧೪

ಮಿಥ್ಯಾತ್ವಬಂಧದಿಂದಂ
ಮಿಥ್ಯಾದೃಷ್ಟಿಗಳ ಮಾತೆ ರುಚಿಯಾಗಿರ್ಕುಂ ।
ಮಿಥ್ಯಾಹಾರಕರೆಂದುದೆ
ಪಥ್ಯಂ ಜೀವಕ್ಕೆ ಬಗೆದು ನೋೞ್ಪೊಡೆ ಜಗದೊಳ್ ॥ ೧೧೫

ಮತ್ತಂ ಕೋಡಗಂ ಮಾನಿಸರಂತಾಗಿಯುಂ ಮಾನಿಸಗುಣಮಂ ಪೋಲದಂತೆ, ಬೆಕ್ಕು ಪುಲಿಯ ರೂಪಾಗಿಯುಂ ಪುಲಿಯಲ್ಲದಂತೆ, ಪಿತ್ತಳೆ ಪೊನ್ನಂತಾಗಿಯುಂ ಪೊನ್ನಲ್ಲದಂತೆ, ಹೊಱಸು ಹಂಸೆಯಂತಾಗಿಯುಂ ಹಂಸೆಯಲ್ಲದಂತೆ, ತೊತ್ತು ವ್ಯವಸಾಯವಂತೆಯಾಗಿಯುಂ ಪೆಂಡತಿಯಲ್ಲದಂತೆ, ಪೊಲೆಯರ್ ಧನಕ್ಕೊಡೆಯರಾಗಿಯುಂ [1] ಮೇಲ್ಜಾತಿಯಾಗದಂತೆ, ಹಱುಹೆ [2] ಮಡಿಯಾಗಿಯುಂ ಬಲ್ವಸ್ತ್ರಮಾಗದಂತೆ, ಬೇಡಗೊಟ್ಟಮೂರಾಗಿಯುಂ [ಪಟ್ಟಣಮಾಗದಂತೆ, ಬಳೆ ತುಡಿಗೆಯಾಗಿಯುಂ ಸರಿಗೆಯಲ್ಲದಂತೆ, ಸಾವೆ ಬೆಳಸೆಯಾಗಿಯುಂ ಕಳವೆಯ ಬೆಳೆಯಲ್ಲದಂತೆ], ಪಗರಣಿಗನರಸಾಗಿಯುಂ ಕ್ಷತ್ರಿಯನಲ್ಲದಂತೆ, ಪಕ್ಷಿಗಳಾಕಾಶದೊಳ್ ಪೋಪುವಾಗಿಯುಂ ವಿದ್ಯಾಧರರಲ್ಲದಂತೆ, ನಾಯ್ ಸಿಂಹಾಕಾರಮಾಗಿಯುಂ ಸಿಂಹಮಲ್ಲದಂತೆ, ಜಾದು ಕೆಚ್ಚನಾಗಿಯುಂ ಕುಂಕುಮಮಲ್ಲದಂತೆ, [3] ಗುಡಿಸಿಲ್ ಚೆಲ್ವಾಗಿಯುಂ ಮಾಳಿಗೆಯಲ್ಲದಂತೆ, [4] ಬೂತೊಳ್ಳಿದನಾಗಿಯುಂ ಪ್ರಭುವಲ್ಲದಂತೆ, [5] ಪಗಿನಿನಿದಾಗಿಯುಂ ಬೆಲ್ಲಮಲ್ಲದಂತೆ, ಕಾಲುಗುರುದ್ದಮಾಗಿಯುಂ ಸೆಳ್ಳುಗುರಲ್ಲದಂತೆ, ದೂರಭವ್ಯರುಮಭ

---

[1] ಧನಮೊಡೆಯರಾಗಿಯುಂ (ಗ) [2] ಪರುಹೆ (ಕ. ಬ.)

[3] ಕಳ ಹಳಿಯಾಗಿಯುಂ ಅಳೆಯಲ್ಲದಂತೆ (ಗ)

[4] ಹೊರಸು ನೇರಿತಾಗಿಯುಂ ಹಾಸಲ್ಲದಂತೆ (ಗ)

[5] ಹಿಂಟೆ ಬಲ್ಲಿತ್ತಾಗಿಯುಂ ಕಲ್ಲಲ್ಲದಂತೆ (ಗ)

ವ್ಯರುಂ ಶ್ರಾವಕರಾಗಿಯುಂ ಋಷಿಯರಾಗಿಯುಂ ಮೋಕ್ಷಗಾಮಿಗಳಲ್ಲರ್; ಬೆಳಗುಂ ಬೆಂಕೆಯುಂಬೆರಸಾದಿತ್ಯನೆಂತು, ಬಣ್ಣಮುಮೊರೆಯುಂಬೆರಸು ಪೊನ್ನೆಂತು, ಕಾಂತಿಯುಂ ಸೌಮ್ಯತೆಯುಂಬೆರಸು ಚಂದ್ರನೆಂತು, ಕಂಪುಂ ಕೆಂಪುಂ [1] ಬೆರಸು ಸಂಪಗೆಯೆಂತು, ಗುಣ್ಪುಮಗಲಮುಂ ಬೆರಸು ಸಮುದ್ರಮೆಂತು, ತೋರಮುಮುದ್ದಮುಂಬೆರಸು ಮಂದರಮೆಂತು, ಪಾಸುಂ ಪೊಕ್ಕುಂಬೆರಸು ಸೀರೆಯೆಂತು, ಮದವಣಿಗನುಂ ಮದವಳಿಗೆಯುಂಬೆರಸು ಮದುವೆಯೆಂತು, ನಾಡುಂ ಬೀಡುಂಬೆರಸು ರಾಜ್ಯಮೆಂತು, ಬಿಲ್ಲುಮಂಬುಂವೆರಸು ಬಿಲ್ಗಾಱನೆಂತು, ಕರಮೊಪ್ಪುಗುಮಂತೆ ಭಾವದೊಳಂ ಸಮ್ಯಕ್ತ್ವದೊಳಂ [2] ಬಳ್ಳಿದರೆನಿಸಿ ನೆಗಷ್ದಾಸನ್ನಭವ್ಯರೆ [3] ಮೋಕ್ಷಗಾಮಿಗಳೆಂದು ಮನದೊಳ್ ಭಾವಿಸಿ ॥ ೧೮೬

ಹೆಪ್ಪಿಟ್ಟೊಡೆ ಪಾಲ್ ಮೊಸರಾ
ಗಿಪ್ಪಂತಿರೆ ನೀರ್ಗಳಾಗಲಱಿಗುಮೆ ಭವ್ಯರ್ ।
ಬಪ್ಪಂತಿರಭವ್ಯರ್ಕಳ್ [4]
ಬಪ್ಪರೆ ಸದ್ದರ್ಶನಕ್ಕೆ ಬಾರದೆ ಪೋಪರ್ ॥ ೧೮೭

ಎಣ್ಣೆ ನುಣ್ಪಂ ಮಾಡುವಂತೆ ಕಳ್ಳಿ ಮಾಡುಗುಮೆ, ಕೂಟ್ತಣಿವಂ ಮಾಡುವಂತೆ ಬಾಡು ಮಾಡುಗುಮೆ, ಸಿರಿ ಮೆಯ್ಯೊಪ್ಪಂ ಮಾಡುವಂತೆ ಗೋಣಿ ಮಾಡುಗುಮೆ, ಕಿಚ್ಚು ಪುಳ್ಳಿಯಂ ಬೂದಿಮಾಡುವಂತೆ ಬಿಸಿಲ್ ಮಾಡುಗುಮೆ, [5] ಮಾಡಲಾಱವಂತೆ ಸಮ್ಯಕ್ತ್ವಂ ಕರ್ಮಗಳ್ಗೆ ಕೇಡಂ ಮಾಡುವಂತೆ ಮಿಥ್ಯಾತ್ವಂ ಮಾಡಲಾಱದಾಸಮ್ಯಕ್ತ್ವ [ದ ಮಿಥ್ಯಾತ್ವದ] ಭೇದಮಂ ಪೇೞ್ವೊಡೆ, ತೋಂಟದ ಗಿಡುವಿನ ಮಾಳದ ಗಿಡುವಿನ, ಸಮರ್ಥರ ಶಿಶುವಿನ ಪೊಲೆಯರ [6] ಶಿಶುವಿನ, ಪೊನ್ನ ರಾಶಿಯು

1 ಪೆಂಪುಂ (ಗ)   2 ಸುವ್ರತದೊಳಂ (ಕ. ಬ.)

3 ಆ ಸನ್ನುತಭವ್ಯರೆ (ಗ)   4 ಬಪ್ಪಂತಿರೆ ಕಷ್ಟನರರ್ (ಗ)

5 ಕೊಳಲಿ ವರನಂ ಕಡಿಖಂಡಂ ಮಾಡುವಂತೆ ಕುಡುಗೋಲ್ಮಾಡುಗುಮೇ (ಗ)

6 ಬಡವರ (ಗ)

ಮಣ್ಣ ರಾಶಿಯು, ರತ್ನದ ತೊಡವಿನ ನೂಲ ತೊಡವಿನ, ಸೊಡರಿನ ಕಾಱ್ಕಿಚ್ಚಿನ, ರಕ್ಷೆಯಂತರಿದುವೇೞಿದವುಮಕ್ಕಂ ॥ ೧೪೮

ಕಾಸಿದೊಡೆ ಬೆಣ್ಣೆ ತುಪ್ಪಂ
ಲೇಸಪ್ಪವೊಲೆಣ್ಣೆ ಕಾಸೆ ಘೃತಮಪ್ಪುದೆ ಕೇ।
ಳಾಸನ್ನಭವ್ಯನಮೃತ
ಶ್ರೀಸತಿಗಿರದೆಱಗುವಂತೆ ಖಳನೆಱಗುಗುಮೇ ॥ ೧೪೯

ಕೆಸಱೊಳ್ ನೆಲ್ ಬೆಳಗುಮಲ್ಲದೆ ಜೋಳಂ ಬೆಳೆಯಲಱಿಯದು ಬಯಲೊಳ್ ಜೋಳಂ ಬೆಳೆವಂತೆ ನೆಲ್ ಬೆಳೆಯಲಱಿಯದಂತೆ ಪುಸಿವ ಕಷ್ಟರುಂ ಪುಸಿವರನೆ ಪೊರ್ದುವರಲ್ಲದೆ ಸತ್ಯಮುಳ್ಳರಂ ಪೊರ್ದಲಱಿಯರ್, ಸತ್ಯಮುಳ್ಳವರ್ ಸತ್ಯಮುಳ್ಳವರನಲ್ಲದೆ ಪುಸಿವರಂ ಪೊರ್ದಲಱಿಯರೆಂದು ಭಾವಿಸಿ ಮಿಥ್ಯಾತ್ವದ ಪ್ರತ್ಯಕ್ಷಫಲಮಂ ಕಣ್ಣಾರೆ ಕಂಡು ಮತ್ತೆ ಪುಸಿಯೊಳ್ ಪೊರ್ದದ ಕೊಲೆಯೊಳ್ ಪೊರೆಯದ ಜಿನೇಂದ್ರದೀಕ್ಷೆಯನುದಾಸೀನಂಗೆಯ್ದು ಸಂಘಶ್ರೀಯಂತೆ ಮಿಥ್ಯಾತ್ವಕ್ಕೆಡೆಗೊಟ್ಟು ನರಕದೊಳ್ ತಲೆಕೆಳಗಾಗಿ ಬಿರ್ದು ಮಱುಗುತಿರ್ಪುದು ಕಜ್ಜಮಲ್ಲೆಂದು ತನ್ನೊಳ್ ಬಗೆದು ॥ ೧೫೦

ಪರಮಜಿನೇಂದ್ರದೀಕ್ಷೆಯನುದಾರತೆಯಿಂ ನೆಱೆ ತಾಳ್ದಿ ಕರ್ಮಭೂ
ಮಿರುಹಮನೊಪ್ಪದಿಂ ಕಡಿದು ಶಾಶ್ವತಸೌಖ್ಯಮನೆಯ್ದುವೆಂ ವಸುಂ
ಧರೆ ಮರ್ಬು ಭಾಪು ಜೀಯೆನೆ ಧರಿತ್ರಿಯ ಭಾರಮನಾಂತು ಱಿಕ್ಕಟಂ
ನರಕದೊಳರ್ದು ದುಃಖಜಲರಾಶಿಯನೀಸುವ ಗಾಂಪದೇವುದೋ ॥ ೧೫೧

ಎಂದು ಪರಿಚ್ಛೇದಿಸಿ ತನ್ನ ಮಗನಪ್ಪ [ಇಂದ್ರಗುಪ್ತನಂ ಬರಿಸಿ ಮುಂದೆ ಕುಳ್ಳಿರಿಸಿ ಧರಣೀಭಾರಮನೊಪ್ಪುಗೊಳ್ಳೆಂಬುದುಮಾತನಿಂತೆಂದಂ ॥ ೧೫೨

[ಕ]ರಿ ತಾಳ್ದಿ ನಿಂದ ಪುಷ್ಪಕ
ಭರಮಂ ಭರದಿಂದೆ ತಾಳ್ದಲಾರ್ಪುದೆ ಕಪಿ ದೇ।
ವರ[ತಾಳ್ದಿ] ನಿಂದ ಧರಣೀ
ಭರಮಂ ತ್ರಾಳಲ್ಕೆ ದೇವ ಪೇಪೆನ್ನಳವೇ ॥ ೧೫೩

ಎಂಬುದುಂ ಮಗನ ಮಾತಿಂಗಂ ವಿನಯಕ್ಕಂ ಮೆಚ್ಚಿ ತಕ್ಕೈಸಿಕೊಂಡು ಮೊಗಮಂ ನೋಡಿ ಪಲತೆಱದ ಮೃದುವಚನಂಗಳಿಂದೆಂತಾನುಮೊಡಂಬಡಿಸಿ ॥ ೧೯೪

ನೆರೆದು ಲತಾಂಗಿಯರ್ ಪದೆದು ಮಂಗಳಮಂ ಮೃದುನಾದದಿಂದೆ ಸು
ಸ್ವರದಿನಗುರ್ವಿನಿಂದೊದವಿ ಪಾಡೆ ವಿದಗ್ಧೆಯರೊಲ್ದು ಪೊನ್ನ ಚಾ
ಮರಮನಳುರ್ಕೆಯಿಂ ಮುದದಿನಿಕ್ಕೆ ಪಯೋನಿಧಿಯಂತೆ ದುಂದುಭಿ
ಸ್ವರಮೆಸೆದೊಪ್ಪೆ ಕಟ್ಟಿದನಿಳಾಧಿಪನಾತ್ಮಸುತಂಗೆ ಪಟ್ಟಮಂ ॥ ೧೯೫

ಅಂತು ಪಟ್ಟಮಂ ಕಟ್ಟಿ ವೆಂಗಿಮಂಡಲಂಮೊದಲಾಗೆ ಸಕಲಧರಾಭಾರಮಂ ಕೊಟ್ಟು ಧರ್ಮಮುಮಂ ಜಿನೇಂದ್ರಪದಸೇವೆಯುಮಂ ಚಾತುರ್ವರ್ಣ್ಯಸಂಘದೊಳಾದ ಕೂರ್ಮೆಯುಮಂ ದರ್ಶನದೊಳಾದ ನಂಬುಗೆಯುಮಂ ಭವ್ಯರೊಳಾದ ಕೆಳೆಯುಮಂ ಸುಕವಿಗಳೊಳಾದ ಗೋಷ್ಠಿಯುಮಂ ದಾನದೊಳಾದ ವಿನೋದಮುಮಂ ಪೂಜೆಯೊಳಾದಾನಂದಮುಮಂ ಬಿಡವೇಡೆಂದು ಬುದ್ಧಿವೇೞ್ದು ಕೈಮುಗಿದು ಬೇಡಿಕೊಂಡು][1] ॥ ೧೯೬

ಧರಣಿಯ ಮೋಹದಿಂ ಸೆಡೆದು ನಿಲ್ಲದೆ ಪುತ್ರನ ಮೋಹದಿಂ ಮನಂ
ಮುರಿಯದೆ ಮೆಯ್ಪುಳಕ್ಕೆಳಸಿ ನಿಲ್ಲದೆ ಪೆಂಡಿರೊಳಾದ ಮೋಹಮಂ
ಸ್ಮರಿಯಿಸಿ ಮೆಲ್ಲಮೆಲ್ಲನೊಳಸಾರದೆ ವಾರಣತಂತ್ರವಾಹನೋ
ತ್ಕರದೞಿಮೋಹದಿಂ ಸೆಱಗುವಾರದೆ ಚೆಕ್ಕನೆ ಬಿಟ್ಟು ರಾಜ್ಯಮಂ ॥ ೧೯೭

ನಾನೂರ್ವರರಸುಮಕ್ಕಳ್ವೆರಸು ಪುರದಿಂ ಪೊಱಮಟ್ಟು[2] ಪೋಗಿ ಶ್ರುತಾರ್ಣವರೆಂಬಾಚಾರ್ಯರಲ್ಲಿ ಜಿನದೀಕ್ಷೆಯಂ ಕೈಕೊಂಡು ದ್ವಾದಶಾಂಗಶ್ರುತಧರರಾಗಿ ಗುರುಗಳಾಜ್ಞೆಯಿಂದೇಕವಿಹಾರಮನೆತ್ತಿಕೊಂಡು॥

---

1 ಇಂದ್ರಗುಪ್ತಂಗೆ ಪಟ್ಟಮಂ ಕಟ್ಟಿ (ಗ) 2 ನಾಲ್ಸಾಸಿರ್ವರ್ ಮಕುಟಬದ್ಧರ್ವೆರಸು (ಗ)

[ಹಿಮುವಂ ತಕ್ಕೈಸಿಕೊಂಡುದ್ಧತಿಯಿನಡರಿ ಸನ್ಮಾರುತಂ ತೀಡೆ ಧಾತ್ರೀ
ರಮಣಿ ಪ್ರಖ್ಯಾತೆ ಮುತ್ತಿಂ ಸವೆದ ತುಡಿಗೆಯುಂ ತೊಟ್ಟಳೆಂಬಂದದಿಂದಂ
ಕ್ರಮದಿಂ [ಮಂ]ಜೊಪ್ಪೆ ಶೀತಂ ಜಗಮನಲೆಯೆ ಬಂದೌಕಿದೊಂದೈಕಿ
ಲೊಳ್ ಕೇ
ಳ ಮನಂಗೆಟ್ಟೋಡದಿರ್ದರ್ ತೊಱೆಯ ಕೆಱೆಯ ತೀರಂಗಳೊಳ್
ಧೈರ್ಯದಿಂದಂ ॥ ೧೯೯

ಅಂತು ಬೆಳ್ಳಾಳಂತೆ ತಲ್ಲಣಿಸದೆ ಮಾಗಿಯ ನಾಲ್ಕುತಿಂಗಳುಂ
ಬೆಳ್ಳವಾಸ (?) ದೊಳಿರ್ದರ್ ॥ ೨೦೦

ಬಿಸಿಲುರ್ವಿಂದಳ್ಕಿ ಬೆಂಬೀಱದೆ ತೃಷೆಯೊದವಿಂಗಳ್ಕಿ ಬಾಯ್ವಿಟ್ಟು ಬೇಗಂ
ಕುಸಿದೋರಂತಣ್ಮುಗೆಟ್ಟೋಡದೆ ಸುರಧರಣೀಂದ್ರಂಬೊಲುರ್ವೀತಳಂ ಸಂ
ತಸದಿಂದಂ ಜೀಯ ಭೂಪೆಂದಧಿಕವಿನಯದಿಂ ನಿಲ್ದೋರಂದದಿಂ ಬ
ಣ್ಣಿಸೆ ನಿಂದಂ ಯೋಗಿಸಂದ್ಯಂ ಗಿರಿಶಿಖರದೊಳುಗ್ರೋಗ್ರಮಾತಂಗಸಿಂಹಂ॥

ಅಂತು ದೇಸಿಗನ ಕಾಳಗದಂತೋಸರಿಸಿ ನುಸುಳ್ದು ಪೋಗದೆ
ಬೇಸಗೆಯ ನಾಲ್ಕುತಿಂಗಳುಂ ಕಲ್ಸೆಲೆನಿಂದು ॥ ೨೦೨

ಕುಡುಮಿಂಚಾಶ್ಚರ್ಯಮಂ ಪುಟ್ಟಿಸುತಿರೆ ಭಯಮಂ ಮಾಡೆ ಮೇಘ
ಸ್ವನಂ ನೇ
ರ್ಪಡೆ ಪಾವಂ ವ್ಯೋಮದಿಂದಂ ತಡೆಯದೆಱತೆಯೊಳಿಕ್ಕಿದಂತೆಲ್ಲಿಯುಂ
ಮಾ
ಣ್ದುಡುಗಿತ್ತೆಂಬೊಂದುಮಾತಂ ಪಡೆಯದೆ ಮಳೆ ಭೋರೆಂದು ಕೀಳ್
ಪೊಯ್ಯೆ ವೀರಂ
ದೃಢಚಿತ್ತಂ ಶಂಕೆಯಿಂ ಬೆಚ್ಚದೆ ಮರವೊದಲೊಳ್ ನಿಂದನತ್ಯಂತಧೈ
ರ್ಯಂ ॥ ೨೦೩

ಅಂತು ಮಱೆಗಾಲದ ನಾಲ್ಕುತಿಂಗಳುಂ ದರವುರಿಗರಂತರವರಿಸದೆ
ಮರವೊದಲೊಳಿರ್ದರ್] ॥ ೨೦೪

ದುರಿತವಿರೋಧಿಯುನದಟಲೆ
ದರವರಿಸದೆ ಮೋಕ್ಷವೆಂಬ ಬಲ್ಗೋಂಟೆಯುನಾ ।
ದರದಿಂದೀಭವದೊಳ್ ಚ
ಚ್ಚರದಿಂದಂ ಕೊಳ್ವೆನೆಂಬ ಮನದೊಲವಿಂದಂ ॥ ೨೦೫

ಧರೆ ಜೀಯೆನೆ ದೇವೇಂದ್ರ
ರ್ವೆರಸು ಸುರರ್ ನಚ್ಚಿ ಮೆಚ್ಚಿ ಬಣ್ಣಿಸುತಿರೆ ದು ।
ರ್ಧರಘೋರವೀರತಪದೊಳ್
ಚರಿಯಿಸಿದಂ ಸುಕವಿನಿಕರಪಿಕವಮಾಕಂದಂ ॥ ೨೦೬

[ಜಿನತತ್ತ್ವಾನುರಾಗನುಂ ವಾತ್ಸಲ್ಯರತ್ನಾಕರನುಂ ಚತುಷ್ಕಷಾಯದೂರನುಂ ನಿಷ್ಕಳಂಕನುಂ ನವವಿಧಬ್ರಹ್ಮಚರ್ಯೋಪೇತನುಂ ಚತುರ್ಗತಿಗಮನಭೀತನುಂ ಷಡ್ವಿಧಜೀವೋಪೇತನುಂ ಲೋಕಪೂಜಾಲಾಭನಿರಪೇಕ್ಷನುಮಾಗಿ ತಪದೊಳರ್ತಿವೆರಸು] [1] ನೆಗಬ್ದ [2] ಅವಂತಿವಿಷಯದ ವಿದಿಸೆ [3] ಯೆಂಬ ತೊಱೆಯ ತಡಿಯ್ವೈರಣೆ [4] ಯೆಂಬಪರ್ವತದೊಳಷ್ಟವಿಧಕರ್ಮಂಗಳಂ ಕಿಡಿಸಿ ಕೈವಲ್ಯಲಕ್ಷ್ಮೀಮನಃಪ್ರಿಯನಾದನದಱಿಂ ॥ ೨೦೭

ಪುಸಿಯಿಂದಂ ಸಂಘಶ್ರೀ
ಕುಸಿದಿರ್ದಂ ರೌರವಾಂಬುರಾಶಿಯೊಳದಱಿಂ ।
ಪುಸಿ ಪೊಲ್ಲೆಂದಂಜುವ ಮಾ
ನಿಸನೆಯ್ದುಗುಮಲ್ತೆ [5] ನಿರ್ವೃತಿಶ್ರೀಸುಖಮಂ ॥ ೨೦೮

ಪುಸಿ ಪೊಲ್ಲೆಂದಂಜಿ ಕರಂ
ವಸುಧೇಶಂ ತಪದೊಳೆಸಗಿ ನಿರ್ವೃತಿಯುಂ ಸಂ ।
ತಸದಿಂ ಪೊರ್ದಿದನದಱಿಂ
ಪುಸಿ ಪೊಲ್ಲೆಂದಂಜಿ ಬೆಚ್ಚಿ ನಡೆವುದು ಪುರುಷಂ ॥ ೨೦೯

---

1 ಮೋಕ್ಷವೆಂಬ ಪಟ್ಟಣಮಂ ಚೆ। ಚ್ಚರದಿಂ ಪೊಗುವುಜ್ಜುಗದಿಂ ಭರದಿಂದಂ ಸುಕವಿನಿಕರಪಿಕವಮಾಕಂದಂ (ಗ) 2 ಅಂತು (ಗ) 3 ವಿದದದ್ದೆ (ಗ)
4 ಯುರಣೆ (ಗ) 5 ಮತ್ತೆ (ಗ)

ಎಂದು [1] ಸತ್ಯದೊಳಾದ ಸುಖ [2] ಮುಮನಸತ್ಯದೊಳಾದ ದುಃಖ [3] ಮುಮಂ [ಪ್ರತ್ಯಕ್ಷಮಾಗೆ ಗಣಧರಸ್ವಾಮಿಗಳ್ ಪೇೞ್ದುದುಂ] [4] ॥೨೧೦

ಪರಮಶ್ರೀಜೈನತತ್ತ್ವಾಮೃತಜಲನಿಧಿವಿಸ್ತೀರ್ಣಸಂಪೂರ್ಣಚಂದ್ರಂ
ಸುರಶೈಲೇಂದ್ರಕ್ಷಮಂ ವಾಗ್ವಧುಪತಿ ಧರಣೀಸ್ತುತ್ಯನತ್ಯಂತಶುದ್ಧಾ
ಭರಣಂ ತ್ರೈವಿದ್ಯಚಕ್ರೇಶ್ವರವಿಮಲಪದಾಂಭೋಜಭೃಂಗಂ ಮುನೀಂದ್ರಾಂ
ಬುರುಹಾರ್ಕಂ ಹೃಷ್ಟನಾದಂ ಸುಕವಿಜನಮನಃಪದ್ಮಿನೀರಾಜಹಂಸಂ [5] ॥

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ಸಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಸತ್ಯವ್ರತವರ್ಣನಂ
ಏಕಾದಶಾಶ್ವಾಸಂ.

---

1 ಅಂತು (ಗ) 2 ಮೋಕ್ಷ (ಗ) 3 ನರಕ (ಗ) 4 ಪೇಳ್ಕೇಳ್ದ (ಗ)

5 ಪರಮಶ್ರೀಕಾಮಿನೀವಲ್ಲಭನಜಿತಜಿನಾಂಘ್ರಿದ್ವಯಾಂಭೋಜಭೃಂಗಂ
ಸುರಶೈಲೇಂದ್ರಕ್ಷಮಂ ವಾಗ್ವಧುಪತಿಧರಣೀಸ್ತುತ್ಯನಂಗೋದ್ಭವೇಭ
ದ್ವಿರದೇಂದ್ರಾರಾತಿಕರ್ಮಾಚಲನುತಪವಿ ಸಚ್ಚರಿತ್ರೈವಿದ್ಯಲಕ್ಷ್ಮೀ
ವರಪಾದದ್ವಂದ್ವಭಕ್ತಂ ಸುಕವಿಜನಮನಃಪದ್ಮಿನೀರಾಜಹಂಸಂ॥ (ಕ. ಬ.)

ದ್ವಾದಶಾಶ್ವಾಸಂ

ಶ್ರೀಸತ್ಯವ್ರತಮಮೃತ
ಶ್ರೀಸತಿಯ ವಿಳಾಸಮೆಂದು ಸವ್ಯಕ್ತ್ವಗುಣಾ ।
ವಾಸಂ ನಲಿದಂ ಮನದೊಳ್
ಲೇಸಾಗಿರೆ ಸುಕವಿನಿಕರಪಿಕಮಾಕಂದಂ ॥ ೧

ಅಂತು [ಸತ್ಯವ್ರತದ ಕಥೆಯಂ ಮನದರ್ತಿವೆರಸು ಕೇಳ್ದು ಮತ್ತಂ ಮಗಧಾಧಿಪತಿ ಮುನೀಂದ್ರೋತ್ತಮಂಗೆ ಭಕ್ತಿಯಿಂ ಪೊಡೆಮಟ್ಟು ಕೈಗಳಂ ಮುಗಿದು ॥ ೨

ಮುನಿಜನವಂದಿತಪದಯುಗ
ವನರುಹ ಪೆಱಗಣ ಕಥಾಳಿಯಂ ನಿಮ್ಮಡಿ ಕೇ ।
ಳ್ದನಗೆ ಕಡುರಾಗಮಾದುದು
ಮನಸಿಜಮದಹರಣ ದುರಿತತಮಭಾನುನಿಭಾ] [1] ॥ ೩

ಗುಣಜಲನಿಧಿ ನಯದಿಂ ಮುಂ
ದಣ ಕಳದಾ ದಿವ್ಯಮಪ್ಪ ಸುವ್ರತಮಂ ಧಾ ।
ರಿಣಿ ಮೆಚ್ಚೆ ತಾಳ್ದ ಲೋಕಾ
ಗ್ರಣಿಯಾದರ ಕಥೆಯನೆನಗೆ ಬೆಸಸಲ್ವೇಳ್ಕುಂ ॥ ೪

ಎಂಬುದುಂ [ಗೌತಮಸ್ವಾಮಿಗಳ್ ದುರಿತದ ಬಲಕ್ಕೆ ನಿಸ್ತೇಜಂ] [2] ಮಾಳ್ಪಸ್ತ್ರೀಯವ್ರತದ ಕಥೆಯನಿಂತೆಂದು ಪೇಳ್ದರ್:—ಅರಸಿನೊಳ್ ಕೂಡಿ ಪರಿಗ್ರಹದಿಂದರಸಿಯರಿಂ ಪರಿಜನದಿಂದರಮನೆಯೊಪ್ಪುವಂತೆ, ಪ್ರಭುವಿನೊಳ್ ಕೂಡಿ ಕೋಂಟೆಯಿಂ ಕೇರಿಯಿಂದರಮನೆಯಿಂದೂರೊಪ್ಪುವಂತೆ, ಮಳೆಯೊಳ್ ಕೂಡಿ ಕೆಱೆಯಿಂ ಕೆಯ್ಯಿಂ ತೋಂಟದಿಂ ಪೊಲನೊಪ್ಪು

1 ನಲಿದು (ಗ)   2 ಕರ್ಮರಾಜನೊಡ್ಡಿಂಗೆ ಸಿಸ್ತಯಂ (ಗ)

ವೆಂತೆ, ತಂಬುಲದೊಳ್ ಕೂಡಿ ನಾಲಗೆಯಿಂ ಪಲ್ಲಿಂದಧರದಿಂ ಬಾಯೊಪ್ಪುವಂತೆ, ಕಾಡಿಗೆಯೊಳ್ ಕೂಡಿ ಬಿಳಿಯಾಲಿಯಿಂ ಕಱಿಯಾಲಿಯಿಂದೆಮೆಯಿಂ ಕಣ್ಣೊಪ್ಪುವಂತೆ, ಬಲ್ಲಿದರೊಳ್ ಕೂಡಿ ಗಿರಿದುರ್ಗದಿಂ ಜಲದುರ್ಗದಿಂ ವನದುರ್ಗದಿಂ ಕೋಂಟೆಯೊಪ್ಪುವಂತೆ, ಕೂರ್ಮೆಯೊಳ್ ಕೂಡಿ ಪುರುಡಿಂ ಮುದ್ದಿಂ ಪೆರ್ಮೆಯಿಂ ಪೆಂಡಿರೊಪ್ಪುವಂತೆ, ಬಲ್ಗುದುರೆಯೊಳ್ ಕೂಡಿ ಮೆಱುಗೋಡಿಂದಂಕವಣೆಯಿಂ ಬಲದಿಂದಶ್ವಾಧಾರಿ [1] ಯೊಪ್ಪುವಂತೆ, ಶುದ್ಧಮಾಸದೊಳ್ ಕೂಡಿ ಚಂದ್ರಬಲದಿಂ ತಾರಾಬಲದಿಂ ಮದುವೆಯೊಪ್ಪುವಂತೆ, ಸಲುಗೆಯೊಳ್ ಕೂಡಿ ನುಡಿಯಿಂ [2] ಪೊಡರ್ಪಿಂ ಮಂತ್ರಿಯೊಪ್ಪುವಂತೆ, ಸಮ್ಯಕ್ತ್ವದೊಳ್ ಕೂಡಿ ಕೊಲೆಯಿಂ ಪುಸಿಯಿಂ ಕಳವಿಂದಗಲ್ದ ಸುವ್ರತಂಗಳಿಂ ಭವ್ಯರುಮೊಪ್ಪುವೆರಸಿರ್ಪುದು [3] ॥ ೫

ಮನಮಂ ಪೇೞ್ವುದು ಬಯಕೆಯ
ಧನಮುಮನಱಿಪುವುದು ನೀನೆ ಶರಣೆಂಬುದು ಮೇ ।
ದಿನಿಚಕ್ರಂ ಕಡುಗೂರ್ಮೆಯೊ
ಳೆನೆ ನೆಗೞ್ದೀಸುವ್ರತಾ [4] ಧಿಪಂಗೆಣೆಯೊಳರೇ ॥ ೬

ಇನ್ನಾವ್ರತದ ಮಹಿಮೆಯುಂ ಪೇೞ್ವೊಡೆ ॥ ೭

[ಬಳಸಿದ ನಂದನವನದಿಂ
ತಳೆದಿರ್ದ ಸರೋರುಹಾಕರಂಗಳಿನೆತ್ತಂ ।
ಬಳಸಿದ ಪಲವುಂಗ್ರಾಮಂ
ಗಳಿನೊಪ್ಪುವುದೊಪ್ಪುವೆತ್ತವಂತೀವಿಷಯಂ ॥ ೮

ಆವಿಷಯದೊಳ್ ತದ್ಧರಾಂಗನೆಯ ತೊಟ್ಟ ಮಣಿಭೂಷಣದಂತೆ ನಾನಾಶೋಭೆಗಳಿಂದುಜ್ಜಯಿನಿಯೆಂಬ ಪೊೞಲೊಪ್ಪುಗುಮಾಪೊೞಲನಾಳ್ವಂ ಧರ್ಮಧರಮಹಾರಾಜನೆಂಬನಾತನ ರಾಜಶ್ರೇಷ್ಠಿ ॥ ೯

---

[1] ಮಱುಗೋಡಿಂದಕವಣೆಯೆಂಬಳದಿಂದಶ್ವದಾರಿ (ಕ. ಬ.) ಯಿಂದಶ್ವಾವಳಿ (ಗ) [2] ನುಡಿಯಿಂ ನಾಲಗೆಯಿಂ (ಕ) [3] ಒಪ್ಪಂಬೆರಸು ಸುಖಮಿರ್ಪುದು (ಗ)
[4] ಕಳ್ಳದ ಸುವ್ರತ (ಕ. ಬ.)

ಅನುಪಮಗುಣನಿಳಯಂ
ಜಿನಪಾದಪಯೋಜಷಟ್ಪದಂ ಜನನುತನಿಂ ।
ದ್ರನಿಭನವೆಳಾಂಗನಿರ್ಪಂ
ಜಿನದತ್ತಂ ಜೈನಸಮಯವಾರಿಧಿಚಂದ್ರಂ ॥ ೧೧

ಆತನ ಪೆಂಡತಿ ಧರಣೀ
ಖ್ಯಾತೆ ಸದಾಶುದ್ಧ ಚರಿತೆ ಭವ್ಯಜನೈಕ ।
ಪ್ರೀತೆ ಸಮಸ್ತಗುಣಾಂಬುಧಿ [1]
ಮಾತೇನೊ ಜಿನೇಂದ್ರದಾಸಿಯೆಂಬಳ್ ಪೆಸರಿಂ ॥ ೧೨

ನೆಗಟ್ದ ಜಿನದತ್ತಂಗಂ
ಮೃಗನಯನೆಜಿನೇಂದ್ರದಾಸಿಗಂ ಮದನನಿಭಂ ।
ಜಗತೀಪೂಜ್ಯಂ ವಿಕ್ರಮ
ಮೃಗಾರಿ ಜಿನದಾಸನೆಂಬನಗ್ರತನೂಜಂ ॥ ೧೩

ಅಂತವರ್ ಸುಖದಿಂ ಪಲಕಾಲಮಿರ್ಪನ್ನೆಗಂ ॥ ೧೪

ದುರಿತಘನಪವನರುಜ್ಜ್ವಲ
ಚರಿತರ್ ಜೈನಾಗಮಾಂಬುನಿಧಿಹಿಮಕಿರಣರ್ ।
ಧರಣೀಸ್ತುತ್ಯರ್ ಮುನಿಜನ
ಪರಿವೃಢರಂಗಜಮದೇಭವಿಘಟನಸಿಂಹರ್ ॥ ೧೫

ಜಿನಪಾಲಿತರೆಂಬ ತಪೋಧನರೊರ್ವರೇಕವಿಹಾರಿಗಳ್ ವಸುಧಾವಳಯಮಂ ತೊಊಲುತ್ತುಂ ಬಂದುಜ್ಜಯಿನಿಗೆ ಬಂದು ನೇಸಱ್ ಪಟ್ಟಬಱಿಕ್ಕಂ ತೊಊಲ್ವುದು ಸಂಯಮಧರರಪ್ಪ ಋಷಿಯರ್ಗೆ ಮಾರ್ಗಮಲ್ಲೆಂದು ಗಂಧವತಿಯೆಂಬ ತೊಱೆಯ ತಡಿಯೊಳ್ ರೌದ್ರಮಪ್ಪ ಶ್ಮಶಾನಭೂಮಿಯ ನಡುವೆ ॥ ೧೬

1 ಸದ್ಗುಣಮಹಾಂಬುಧಿ (ಗ)

ಪೊಲ್ಲೆನಿಸದ ಜೀವಾಳಿಗ
ಳಿಲ್ಲದ ರಮಣೀಯಮಪ್ಪ ಪಾಸಱೆಯಂ ತ ।
ಳ್ವಲ್ಲದೆ ಬೆಳಗಿನೊಳಾರ
ಯ್ದುದ್ದಳಿಕ್ಕದ ಗಂಡನಘಕಮಂದದಿನೇಶಂ ॥ ೧೬

ಸನ್ನುತರವಿಯುದಯಂಗೆ
ಯ್ವನ್ನೆವರಂ ಮಿಸುಕೆನೆಂದು ಮಂದರಧೈರ್ಯಂ ।
ತನ್ನಣ್ಮಿಂದಂ ಮಿಡುಕದೆ
ಸನ್ನುತಮತಿಯೊಂದೆ ಮುಗ್ಗುಲೊಳ್ ಪಟ್ಟಿರ್ದಂ ॥ ೧೭

ಅಂತು ಗುಣಗಣಾಭರಣಂ ನಿತ್ಯಯೋಗಂಗೊಂಡೇಱಿಸಿದ ಬಿಲ್ಲಂತೆ ಶರೀರಮಂ ಚಳಿಯಿಸದೆ ಪಾರ್ಶ್ವದೊಳ್ ಪಟ್ಟಿರ್ಪುದುಮಿತ್ತಲುಜ್ಜಯಿನಿಯಿಂದೊರ್ವ ವಿಡಂಬನೆಂಬ ಸಾಧಕಂ ನಿಧಿನಿಕ್ಷೇಪಂಗಳಂ ಸಾಧಿಸಲೆಂದು ಯಥೋಚಿತಮಪ್ಪ ಬಲಿವೆರಸು ಪಲ್ಲಂ ಸುಲಿದು ಮಿಂದು ಶುಚಿರ್ಭೂತನಾಗಿ ಧೌತಾಂಬರಮನುಟ್ಟು ವೀರದಿನುಪವಾಸಂಕೈಕೊಂಡು ತನ್ನ ನಿವಾಸಮಂ ಪೊಱಮಟ್ಟು ನಟ್ಟಿರುಳ್ ತನ್ನ ಕಟ್ಟಾಳ್ತನದಿಂ ॥ ೧೮

ಪಲವುಂ ಪೂಣ್ಕೆಗಳಿಂದಂ
ಚಲದಿಂದಸಹಾಯವಿಕ್ರಮಂ ತನ್ನಳವಂ ।
ಕಲಿತನಮಂ ನಂಬಿ ಬಲಂ
ತಳರದೆ ಸಾಧಿಸುವೆನೆಂಬ ಬಳಕೆಯಿನಾತಂ ॥ ೧೯

ಕರಡಿಯ ತೊವಲಂ ಕಾಡಿಗೆಯೊಳರ್ದಿ ವಿಧಾತ್ರಂ ಲೋಕಮಂ ಬಾಸಣಿಸಿದನೆಂಬಂತಪ್ಪ ಕತ್ತಲೆಯೊಳ್ ಕೂಡಿದ ರಾತ್ರಿಯೊಳ್ ಗಂಧವತಿಯ ತಡಿವಿಡಿದು ಬಂದು ಪಿತೃವನಮಂ ಪೊಕ್ಕು ತನ್ನ ಕೈಯ ಸೊಡರಿಂ ॥ ೨೦

ತಲೆ ಪಱಿದಿರ್ದ ಪೆರ್ದಸಿಯಮೇಲೆ ಮಹಾದ್ಭುತದಿಂದಮಿದ್ದ ಕ
ಣ್ಗಳನರೆಮುಚ್ಚಿಕೊಂಡು ಕೆಡೆದಿರ್ದ ಕರುಳ್ ಪಱಿದಿರ್ದ ಭೂ
ತಳಮನ ಕಚ್ಚಿ ವ್ಯೈಮಱೆಯುತಿರ್ದ ಭಯಂಕರಮಾಗಿ ಪಟ್ಟು ಕ
ಣ್ಣೊಳ್ ತೆಗೆದಿರ್ದ ವೇದನೆಗೆ ಸೈರಣೆಗೆಟ್ಟೞುತಿರ್ದ ಭೀತರಂ ॥ ೨೧

ನೋಡುತ್ತುಂ ಬಂದೇಕಪಾರ್ಶ್ವದೊಳ್ ಪಟ್ಟಿರ್ದ ಜಿನಪಾಲಿತ ಮುನಿಯುಮಂ ಕಂಡು ಪೆಣನೆಂದು ಬಗೆದು ಬೇಗದಿನಲ್ಲಿಗೆ ಮತ್ತೆರಡು ಪೆಣಂಗಳಂ ತಂದು ಮೂಱುದಲೆಯುಮನೊಲೆಗಲ್ಲೂಡಿ ಕೆಳಗೆ ಕಿರ್ಚಂ ಪೊತ್ತಿಸಿ ಚರುವನಡುತ್ತಿರ್ಪುದುಂ] [1] ॥ ೨೧

ಘೋರೆನೆ ಕಿಚ್ಚಿನ ನಾಲಗೆ
ನೇರಿದವಾಗಳುರೆ ನೋವಿನೊಳ್ ಸೈರಣೆಗೆ [2] ।
ಟ್ಟೋರಂತೆ ಮಱುಗಿ ಕುದಿಯದೆ
ಧೀರಂ [3] ಜಿನಪಾದಪದ್ಮಮಂ ನೆನೆಯುತ್ತುಂ ॥ ೨೨

ಮಿಾಯದೆ ಮೆಯ್ಯೊಳ್ ಶ್ರೀಖಂಡವಮಂ ಪೂಸುವೆನೆಂಬ, ಪಿಂಡು ಗೂಱಿನೊಳಗಗುಳನುಣ್ಬೆನೆಂಬ [4] [ಮದುವೆಯಾಗದೆ ಮಕ್ಕಳ್ವಡೆವೆನೆಂಬ, ಗಡ್ಡಂಬಾರದಂದವಿಡುವೆನೆಂಬ ಕಡೆಯದೆ ಬೆಣ್ಣೆಗೊಳ್ವೆನೆಂಬ] ಬೆಳೆಯದೆ ಹಗವಂ ತೋಡುವೆನೆಂಬ, ಪುಟ್ಟದ ಕೂಸಿಂಗೆ ಪೆಸರಿಡುವೆನೆಂಬ, ಸಾಲಿಸದೆ ಬಡ್ಡಿವೇೞ್ಕೆಂಬ, [5] [ನೆಯ್ಯದೆ ಸೀರೆಯನುಡುವೆನೆಂಬ], ಮಾಡದೆ ಮನೆಯಂ ಪೊಕ್ಕಪೆನೆಂಬ ಮರುಳನಂತೆ, ಪೆಱವುಣಿಸುಗಳನ ರೋಚಕಂಮಾೞ್ಪಿ ತುಯ್ಯಲ್ತುಪ್ಪದಂತಪ್ಪ, ಮುತ್ತಿನ ಪೆಂಡಿರ್ಗೆ ಪೇಸು

---

1 ಮಾಳವದೇಶದೊಳುಜ್ಜೇನಿಯೆಂಬುದು ಪುರಮದನಾಳ್ವಂ ಧರ್ಮಧ್ವಜ ಮಹಾರಾಜನೆಂಬನಾತನ ರಾಜಶ್ರೇಷ್ಠಿ ಜಿನದತ್ತನೆಂಬನಾತನ ಭಾರ್ಯೆ ವಿಮಳಮತಿಯೆಂಬಳಾಯಿರ್ವರ್ಗಂ ಪ್ರಿಯನಂದನಂ ಜಿನೇಂದ್ರದಾಸನೆಂಬನಂತವರ್ಸುಖದಿಂದವಿರ್ಪುದುಂ ಜಿನಪಾಲರೆಂಬ ಮಹಾತಪೋಧನರ್ ವಿಹಾರಿಸುತ್ತುಮಾಪುರಕ್ಕೆ ವಂದು ಗಂಧಮತಿಯೆಂಬ ತೊಱೆತಡಿಯ ಮಹಾಕಾಳವೆಂಬ ಸ್ಮಶಾನಭೂಮಿಯೊಳ್ ಯತ್ರಾಸ್ತಮಿತವಾಸಿಗಳಪ್ಪುದಱಿಂ ನೇಸರ್ ಪಡುವುದುಂ ಪೋಗಲಱಿಯದೆ ಪಾರ್ಶ್ವದೊಳ್ ಯೇಱಿಸಿದ ಬಿಲ್ಲಿನಂತೆ ಪಟ್ಟಿರ್ಪುದುಂ ವಿಡಂಬನೆಂಬ ಸಾಧಕಂ ಬಂದು ನೋಡಿ ಪೆಣನೆಂದು ಮತ್ತಮೆರಡುಪೆಣಂಗಳನಲ್ಲಿಗೆತಂದು ಮೂಱುತಲೆಯುಮನೊಲೆಕಲ್ಲೂಡಿ ಚರುವನಡಲೆಂದು ಮಡಕೆಯುಮನೇಱಿಸಿ ಕೆಳಗೆ ಕಿಚ್ಚನುರುಹುವುದುಂ (ಗ) 2 ನೊಂದು ಸೈರಣೆಯುಂ ಬಿ (ಗ) 3 ವೀರಂ (ಗ)

4 ಹಿಂಡುಗೂಱಿನೊಳಗೆ ಗೊಳನುಣ್ಬೆನೆಂಬ (ಗ), ಪಿಡುಗೂಳೊಳಳೆಯ ಕೂಳನಣ್ಬೆನೆಂಬ (ಕ) 5 ಸಾಲಮಿಾಯದೆ ಬಡ್ಡಿಗೊಳ್ವೆನೆಂಬ (ಗ)

ಗೆಯುಂ ಪುಟ್ಟಿಸುವ [1] ನಾಯಕಸ್ತ್ರೀಯಂತಪ್ಪ, ಪೊಲ್ಲ ನೀರ್ಗೆ ಮನಂಗಿಡಿಸುವ ಶೀತಲಜಲದಂತಪ್ಪ, ಹೀನದ್ರವ್ಯಂಗಳ್ಗೆ ಚಿತ್ತಮಂ ಮಾಡದ ಪೊನ್ನರಾಶಿಯಂತಪ್ಪ, ಕಪ್ಪವಸ್ತ್ರಂಗಳ್ಗೆ ಬಗೆಯಂ ಮಾಡದ ದುಕೂಲವಸ್ತ್ರದಂತಪ್ಪ, ಪುಲ್ಲನೆಗೆ [2] ಪೆರ್ಚಂ ಮಾಡದ ಮಣಿಮಾಡದಂತಪ್ಪ, ಕಿಡುವ ಬೆಳಗುಗಳ್ಗೆ ಕಪ್ಪಮಂ ಮಾಳ್ಪ ಸೂರ್ಯರಶ್ಮಿಯಂತಪ್ಪ, ಕಾಚಿನ ತುಡಿಗೆಗೆ ನಿಸ್ತೇಜಂ [3] ಮಾಳ್ಪ ಮುತ್ತಿನಾಭರಣದಂತಪ್ಪ, ಹೀನಶ್ರೀಗಂ ಕಿಱುಕುಳರಾಜ್ಯ [ಭೋಗಕ್ಕಮೂನಸುಖಕ್ಕಂ] ವಿರಾಗಂ ಮಾಡಿ ಮುಕ್ತಿ [ಶ್ರೀ]ಯೊಳ್ ಕೂಡುವ, ಚಕ್ರವರ್ತಿಪದವಿಯುಮಂ ದೇವೇಂದ್ರಪದವಿಯುಮಂ ಮೊದಲ ಮೂಱುಸಂಹನನಮುಮಂ ಶ್ರುತಬುದ್ಧಿಯ ಸಂಪೂರ್ಣತೆಯುಮಂ ಕ್ಷಪಕಶ್ರೇಣಿಯನೆಯ್ದಿಸುವ ಮಹಿಮೆಯುಮಂ ಪುಟ್ಟಿಸುವ ಪುಣ್ಯಮಂ ನೆರೆಪುವ ಪಂಚಪರಮೇಷ್ಠಿಗಳ ಭಕ್ತಿಯುಮಂ ಪೂಜೆಯುಮಂ ಕೊಂಡಾಟಮುಮಂ ನಚ್ಚುಗೆಯುಮಂ ಬಿಸುಟು, ನೆಲ್ಲನಕ್ಕಿಮಾಡಲಲಸಿ ಲೇಸೆಂದಟ್ಟುಂಬ, ಕಲ್ಲಂ ನುಣ್ಪುಮಾಡದೆ ಚಿತ್ರಂಬರೆವ, ಪೊನ್ನನಾಭರಣಂಮಾಡದೆ ತುಡುವ, ಕೈಯ್ಯನುಱದೆ ಬಿತ್ತುವ, ನೂಲಂ ಪೊಸೆಯದೆ ಮಣಿಯಂ ಕೋವ, ಪುಳ್ಳಿಯಿಲ್ಲದೆ ಕಿರ್ಚಿನೊಳಡುವ [4] ಗಾಲಿಯಿಲ್ಲದೆ ಬಂಡಿವರಿಯಿಸುವ, ಬಲಮಿಲ್ಲದೆ ಕಾದುವ, ಕೂಱಿಲ್ಲದೆ ಮದ್ದಳೆಯಂ ಬಡಿವ, ಕಱೆಯದೆ ಪಾಲಂ ಬಯಸುವ, ಬೆಲೆಗುಡದೆ ಬಂಡಮರಸುವ, ಬಿದಿರೆಲೆಯೊಳ್ ರಸಮನಱಸುವ ಕಳ್ಳಿಯ ಪಾಲೊಳ್ ಬೆಣ್ಣೆಯನಱಸುವ, ತೊಱೆಯ ಸಿಪ್ಪಿನೊಳ್ ಮುತ್ತನಱಸುವ; (...?) ಧಾನ್ಯದಂತೆ ಪಸಿಯ ಧಾನ್ಯದಂತೆ ಬಱಗಿದ ಧಾನ್ಯದಂತೆ ಮಿಡಿಯುತ್ತಿಪ ಧಾನ್ಯದಂತೆ ಉಯ್ಯವೆರಸಿರ್ದ ಧಾನ್ಯದಂತೆ ಕೇಸಕ್ಕಿಯಂತೆ ತಳಿಸಿದಕ್ಕಿಯಂತೆ ಕರ್ಚಿದಕ್ಕಿಯಂತೆ ಬೇವ ಕೂಱನಂತೆ ಬೆಂದಿಱಿಪಿದ ಕೂಱನಂತೆ ತಳಗೆಗೆವಂದ ಕೂಱನಂತೆ ಬಾಡು ತುಪ್ಪಂ ಮೊದಲಾದ ಪರಿಕರಂವೆರಸುಣ್ಬ ಕೂಱನಂತೆ, [ನೆಲದಂತೆ] ಭೂಮಿ

---

1 ಮನಮಂ ಪೇಸುಗೆಯಂ ಮಾಳ್ಪ (ಗ) 2 ಹಲವು ಮನೆಗಳ್ಗೆ (ಗ)
3 ಪೇಸುಗೆಯಂ (ಗ) 4 ಕಿಚ್ಚದನುರುಹ (ಕ. ಖ.)

ಶೋಧನೆಯಂತೆ ಗುಂಡೋತ್ತರದಂತೆ ನೆಲಗಟ್ಟಿನಂತೆ ರಂಗಘಟ್ಟಣೆಯುಂತೆ [1] ಕಂಭನಿಱಿಸುಗೆಯುಂತೆ ಕರುಮಾಡದಂತೆ ಬೋದಿಗೆಯುಕೂಟದಂತೆ ಮುಚ್ಚಳಂತೆ ಪ್ರತಿಷ್ಠೆಯಂತೆ ಮೇಲ್ಗಣ ಬೆಸದಂತೆ ಸೊದೆಯಂತೆ ಕಳಶಾರೋಹಣದಂತೆ, ಕೆಯ್ಯಂತೆ ಕೆಯ್ಯುಱುಮೆಯಂತೆ [ಕೆಯ್ಯೊಳ್] ಪದಂಬಡೆವಂತೆ ಬಿತ್ತಣದಂತೆ ಸಸಿಯಂತೆ ಪೊಡೆಯಂತೆ ಪಾಲ್ದೆನೆಯಂತೆ ಕೊಯ್ಲಾದಂತೆ ಸೂಡಿನಂತೆ ಕಳಕ್ಕೆವರ್ಪಂತೆ [2] ಒಕ್ಕಣದಂತೆ [3] ರಾಶಿಯಂತೆ ಮಿಥ್ಯಾದೃಷ್ಟಿ ಸಾಧನಸಮ್ಯಗ್ದೃಷ್ಟಿ ಸಮ್ಯಙ್ಮಿಥ್ಯಾದೃಷ್ಟಿ ಅಸಂಯತಸಮ್ಯಗ್ದೃಷ್ಟಿ ದೇಶಸಂಯತ ಪ್ರಮತ್ತ ಅಪ್ರಮತ್ತ ಅಪೂರ್ವಕರಣ ಅನಿವೃತ್ತಕರಣ ಸೂಕ್ಷ್ಮಸಾಂಪರಾಯ ಉಪಶಾಂತ ಕಷಾಯ [4] ಸಯೋಗಿ [ಅಯೋಗಿ] ಎಂಬೀ [5] ಪದಿಮೂಱು ಗುಣಸ್ಥಾನಂಗಳಿರ್ಪುವು. ಅವಱೊಳಗಾವ ಗುಣಸ್ಥಾನದೊಳ್ ತಾನಿರ್ಪನಾಗುಣಸ್ಥಾನಕ್ಕೆ ತಕ್ಕುದಂ ನೆಗಱ್ವುದು; ನೆಗೞಲೊಲ್ಲದೆ ಮತ್ತೊಂದು ಗುಣಸ್ಥಾನದೊಳ್ ನೆಗಱ್ವೆನೆಂದು ನೆಗೞುತ್ತುಮಿರ್ಪೊಡೆ ಪೊಡೆಯಂ ಕೊಯ್ದು ಧಾನ್ಯಮರಸುವ, ಪಸಿಯಂ ಕುಟ್ಟಿಯಕ್ಕಿಯುಱಿಸುವ, ಬೇವ ಕೂೞಿನೊಳ್ ರುಚಿಯುಱಿಸುವ, [ನೆಲ್ಲನಟ್ಟು ಮೃದುಗೂೞನಱಿಸುವ] ನೆಲಗಟ್ಟಿನ ಮೇಲೆ ಕಲಶಮನಿಡುವ, ಗುಂಡೋತ್ತರದ [6] ಮೇಲೆ ಸೊದೆಯಂ ಬೞಿವ, ಕಂಭನಿಱುಗೆಯಿಲ್ಲದೆ ಜಿನಭವನಮಂ ಮಾಳ್ಪ, ಮುಚ್ಚಳಮಿಲ್ಲದೆ ಪ್ರತಿಷ್ಠೆಯಂ ಮಾಳ್ಪ, ರಂಗಮಿಲ್ಲದೆ ಕಂಭಮಂ ನಿಱಿಸುವ, ಪಾಲ್ದೆನೆಯನೊಕ್ಕುವ, ಸಸಿಯಂ ಕೊಯ್ದು ಮೆದೆಯನೊಟ್ಟುವ, ಬಿತ್ತುವ ಕಾಲದೊಳ್ ಬೆಳಸನಱಿಸುವ, ಬಿತ್ತದೆ ಸಸಿಯಂ ನೋಡುವ, ಕಟ್ಟೆಗ್ಗನಂ ಪೋಲ್ಕುಮದುಕಾರಣದಿಂದನ್ನೆವರಂ ದೇಶಸಂಯತಗುಣಸ್ಥಾನದೊಳಂ ಪ್ರಮತ್ತಾಪ್ರಮತ್ತಗುಣಸ್ಥಾನದೊಳಮಿರ್ಪನ್ನೆವರಮಣುವ್ರತಿಗಳುಂ ಮಹಾವ್ರತಿಗಳುಂ ಮಱೆಯದೇಕಚಿತ್ತದಿಂದಾಹಾರಾಭಯಭೈಷಜ್ಯಶಾಸ್ತ್ರದಾನದೊಳಂ ಅನಶನಾದಿತಪದೊಳಮಾರ್ತಣ್ಮಿ ನೆಗೞುತ್ತುಂ

---

1 ರಂಗಗಟ್ಟಣದಂತೆ (ಗ) 2 ಕಣಕ ಬಂದಂತೆ (ಬ. ಕ.)

3 ಭಕ್ಷಣದಂತೆ (ಕ. ಬ.) 4 ಉಪಶಾಂತಕಷಾಯ ಕ್ಷೀಣಯೋಗಿಸಯೋಗಿ (ಗ) 5 ಪದಿನಾಲ್ಕುಂ (ಗ) 6 ಗುಂಡವತ್ತದ (ಕ. ಬ.)

ಜಿನಸ್ವಾಮಿಯುಂ ಪೂಜಿಸುವುದು ಬಣ್ಣಿಸುವುದು [1] ನಿಚ್ಚನಿಚ್ಚಲೆಂದು
ಪರಮಾಗಮದೋಜೆಯುಂ ಭಾವಿಸ ॥ ೨೪

ನಯವಿದನಪ್ಪುದಱಿಂ ದು
ರ್ನಯಮಂ ಬಿಸುಟೇಕಚಿತ್ತದಿಂ ನಂಬಿರ್ದಂ ।
ಭಯಮಿಲ್ಲದೆ ಜಿನಪತಿಯಂ
ನಯಸೇನಂ ಸುಕವಿನಿಕರಪಿಕಮಾಕಂದಂ ॥ ೨೫

ದಿವಿಜೇಂದ್ರಂ ಜಿನಪೂಜೋ
ತ್ಸವದೆಸಕದಿನಿಲ್ಲಿ ಬಂದು ಮುಕ್ತಿವಧೂಟೀ ।
ಧವನಪ್ಪನೆಂದೊಡಿನ್ನೂ
ಪ್ಪವೆ ಜಿನರಂ ನಂಬಿದಂಗೆ ಕೇಳರಡುಂಟೇ ॥ ೨೬

ಜಿನರೂಪಿಂದಮಭವ್ಯನು
ಮಿನಿತು ನವಗ್ರೈವೆಯಲ್ಲಿ [2] ಪುಟ್ಟುವನೆನೆ ಮೇ ।
ದಿನಿಯೊಳ್ ಜಿನೇಂದ್ರಭಕ್ತಂ
ಗನಘಶ್ರೀ ಸೋಲ್ವಳೆಂಬುದಾವುದು ಗಹನಂ ॥ ೨೭

ಕಿಱಿದಪ್ಪ ವ್ರತದಿಂಗಂ [3]
ದೆಱಗಿದ ಮಾದೆಗನುಮಗ್ಗದ ವ್ಯಂತರಿಗ ।
ರ್ಗೆಱೆಯುಂ ತಾನಾದಂ ಪದೆ [4]
ದೆಱಗೆ ಜಿನಂಗಮೃತಪದವಿ ಗಹನಮೆ ಜಗದೊಳ್ ॥ ೨೮

ಪದೆಪಿಂ ಕಾಗೆಯ ಮಾಂಸದ
ಬಿದುಪಿಂಗಂ ಖದಿರಸಾಗರಂ ದಿವಿಜಸುಖಾ [5] ।
ಸ್ಪದನಾದನೆಂದೊಡರ್ಹ
ತ್ಪದಮಂ ಪಿಡಿದಂಗೆ ಮೋಕ್ಷಮಾವುದು ಗಹನಂ ॥ ೨೯

---

[1] ನೆನೆವುದುಂ (ಗ) [2] ಮೇನಿಪನಮಗ್ರೈಯಲ್ಲಿ (ಕ. ಬ.) ಮಿನಿತುಂನವಗ್ರೈವೆ (ಗ) [3] ದಿಂಗಂ (ಗ) [4] ರ್ಗೆಱಿಯುದೆರೆಯುನಾದನೆನೆಸಂ (ಕ. ಬ.)
[5] ಮಾಂಸನು ಮುದದಿಂದಂ ಬಿಟ್ಟು ಕದಿರಸಾಗರ ದಿವಿಜಾ (ಗ)

ಓದನಮುಂಡಂ [1] ಮನ್ನಣೆ
ಗಾದ ಮಹಾಮೋದದಿಂದೆ ತಪಮಂ ಕೈಕೊಂ ।
ಡಾದಂ ಸುರೇಶನೆನೆ ಜಿನ
ಪಾದಶರಣ್ಯಂಗೆ [2] ಜಗದೊಳರಿದೊಂದುಂಟೇ ॥ ೨೦

ದೃಢಸೂರ್ಪನೆಂಬ ಕಳ್ಳಂ
ಗಡ ಜಿನಶರಣೆಂಬ ಪೆಂಪಿನಾಱಕ್ಕರಮಂ ।
ಪಿಡಿದಮರನಾದನೆಂದೊಡೆ
ಪಿಡಿದಂಗರಿದುಂಟೆ ಲೋಕದೊಳ್ ಜಿನಪದಮಂ ॥ ೨೧

ವರದತ್ತಯೋಗಿಗಿಕ್ಕಿದ
ಪರಮಾನ್ನದಿನಂದು ಸೋಮಶರ್ಮನ ಸತಿ ಭಾ ।
ಪುರೆ ಯಕ್ಷಿಯಾದಳೆಂದೊಡೆ [3]
ಪರಮಜಿನಂಗೆಱಗಿದಂಗೆ ಪೇೞರಿದುಂಟೇ ॥ ೨೨

ಪುರುದೇವನನಾರಾಧಿಸೆ
ಧರಣೇಂದ್ರಂ ಬಂದು ನಮಿವಿನಮಿಗಳ್ಗ ವಿಯ ।
ಚ್ಚರಪದಮನಿತ್ತ [4] ನೆಂದೊಡೆ
ಪರಮಜಿನೇಶ್ವರನ ಪೆಂಪು ಸಾಧಾರಣಮೇ ॥ ೨೩

ದ್ರುಮಸೇನಂ ಜಿನನಾಥ
ಕ್ರಮಮಂ ಮತಿಯಲ್ಲಿ ನಿಲಿಸಿ ಕರ್ಮಂಗಳನ ।
ಶ್ರಮದಿಂ ಕಿಡಿಸಿದನೆಂದೊಡೆ
ವಿಮಳಜಿನಾರಾಧಕಂಗೆ ದುರ್ಗಮೆ ಮೋಕ್ಷಂ ॥ ೨೪

ಬಿಡದೆ ರಥನೇಮಿ ಜಿನರಂ
ಬಿಡದೆ ಮಹಾವ್ಯಸನಿಯಾಗಿಯುಂ [5] ನಿರ್ವೃತಿಯಂ ।

---

1 ಓದನಮುನುಂಡು (ಗ) 2 ಪಾದಂ ಶರಣಂಗೆ (ಗ)
3 ಯಕ್ಷನಾದನೆಂದೊಡೆ (ಗ) 4 ಮಹಿಮೆಯಿತ್ತ (ಗ)
5 ಪಡದ ಮಹಾತ್ಮಂಗೆ ಸಕಳಸುಖ (ಕ. ಖ.)

ಪಡೆದನೆನೆ ಕೇಳ ಬಲ್ವಿಡಿ
ವಿಡಿದಂಗೆಡಱುಂಟೆ ಜಿನರ ಚರಣದ್ವಯುವಮಂ ॥ ೩೫

ಜಿನನಾಳ್ದಂ ಬಂಟನೆ ನಾಂ
ಜಿನಪತಿಗೆಂಬನಿತಱಿಂ ಶಿಳಾಪುತ್ರಂ ನೆ ।
ಟ್ಟನೆ ಮುಕ್ತನಾದನೆಂದೊಡೆ
ಜಿನಪತಿಗಾಳಾಗೆ ಮುಕ್ತಿಪದಮರಿದಾಯ್ತೇ ॥ ೩೬

ಇಲ್ಲಿಯೆ ಜೈನವ್ರತಮಂ
ಬಲ್ಲಿತುಪಿಡಿದಂಗೆ ಬಾಧೆಯಾಗದು ಬಿಟ್ಟಂ ।
ಗೆಲ್ಲಿಲ್ಲದ ಪೀಡೆಗಳುಂ
ನಿಲ್ಲದೆ ಬಂದಡಸುಗೆಲ್ಲರುಂ ಬಲ್ಲರಿದಂ ॥ ೩೭

ಕೊರಳ ಶಕ್ತಿಯಿಲ್ಲದೊರಳಂ ನುಂಗುವೆನೆಂಬ, [1] ಕಯ್ಯ ಶಕ್ತಿಯಿಲ್ಲದೆ ಕಳ್ಳನಂ ಪಿಡಿವೆನೆಂಬ, ತಲೆಯ ಶಕ್ತಿಯಿಲ್ಲದೆ ಪೆರ್ಗಲ್ಲಂ [2] ಪೊಱುವೆನೆಂಬ, ಮೆಯ್ಯ ಶಕ್ತಿಯಿಲ್ಲದೆ ಬಲ್ಲೂಟಮನುಣ್ಬೆನೆಂಬ ನಿರ್ಬುದ್ಧಿಯಂತೆ, ವರುಷಮಱುದಿಂಗಳುಪವಾಸಂಮಾಳ್ಪ, ವರುಷಮಱುದಿಂಗಳೊಂದೆಡೆಯೊಳ್ ನಿಲ್ವ, ಬೇಡರ ಪಗೆವರ ಕ್ರೂರಮೃಗಂಗಳ ನಿಷ್ಠುರಮಪ್ಪಬಾಧೆಯಂ ಸೈರಿಸುವ, ಸಕಳಶ್ರುತಮುಮನಱಿವ, ಮುನ್ನಿನ ಮಹಾಪುರುಷರ್ಗೆ ಧ್ಯಾನಮೆರಡುಗಳಿಗೆಯಿಂ ಮೇಲೆ ನಿಲ್ಲದೆಂದು "ಉತ್ತಮಸಂಹನನಸ್ಯೈಕಾಗ್ರಚಿಂತಾ [ನಿರೋಧೋ] ಧ್ಯಾನಮಂತಮು‍ರ್ಹೂರ್ತಾತ್" [3] ಎಂಬೀಸೂತ್ರಮಂ ಪೂರ್ವಾಚಾರ್ಯರ್ ನುಡಿದರದುಕಾರಣದಿಂ ಬೇಳಾಗದೆ "ದರ್ಶನಶುದ್ಧತಾವಿನಯಸಂಪನ್ನತಾಶೀಲವ್ರತೇಷ್ವನತಿಚಾರಃ" ಎಂಬ ಜಿನೋದಿತಮಂ ನಂಬಿ ತಮ್ಮ ಗುಣಸ್ಥಾನಮನಱಿದು ಪ್ರಥಮಾನು [4] ಯೋಗದ [5] ಕರಣಾನು [6] ಯೋಗದ ದ್ರವ್ಯಾನು [7]

---

[1] ಕಾಲಶಕ್ತಿಯಿಲ್ಲದೆ ಪರಿದು ಪರಿವೆನೆಂಬ, (ಗ) [2] ಪೆಗ್ಗಳಮಂ (ಗ)
[3] ಮುಹೂರ್ತಂ (ಗ)
[4], [5], [6] ನಿಯೋಗ (ಗ) [7] ಚರಣಾನಿಯೋಗದ (ಗ)

ಯೋಗದ ಪೇೞ್ದ ಕ್ರಮಮಂ ತಪ್ಪಲೀಯದೆ ಲೇಸಾಗಿ ಭಾವಿಸಿ, ಸಸಿ ಧಾನ್ಯದೊಳ್ ತೋಂಟಂ ಗಿಡುವಿನ ಫಲದೊಳ್ ಶಿಶು ಕುಮಾರತ್ವದೊಳ್ ಕಬ್ಬು ರಸದೊಳ್ [ವೀರರ್ ಗೆಲ್ಲದೊಳ್] ಪಾಲ್ ತುಪ್ಪದೊಳ್ ಕಾರ್[1] ಮೞೆಯೊಳ್ ಭೂಪರ್ ತೆಱೆಯೊಳ್ ಮಗಂ ಮುಪ್ಪಿನೊಳ್ ಪೆಂಡತಿ ಕುತ್ತದೊಳ್ ಫಲಮಂ ತೋರ್ಪಂತೆ, ಮುನ್ನಮಧ್ಯಾತ್ಮಂ ಮೊದಲಾದ ಜೈನಾಗಮಮನಱಿದು ಆತ್ಮತತ್ತ್ವಫಲಮಂ ನಿರ್ವೃತಿಯ ಫಲಮುಮನೆ ಯ್ದುವ ಶ್ರಾವಕಂಗೆ ದಾನಾದಿಧರ್ಮಂ ಋಷಿಯರ್ಗೆ ಕ್ಷಮೆ ಮೊದ ಲಾದ ದಶಧರ್ಮಮಿಂತಿವಱೊಳ್ ಶಕ್ತಿಗೆ ತಕ್ಕಂತು ನೆಗೞ್ದು ಕಡೆಯೊಳ್ ಲ್ಲಮಂ ತೊಱೆವುದಧ್ಯಾತ್ಮದ ಫಲಮಿನಿತಲ್ಲದೆ ತಳಾಱನ ಮನೆಯಂ ಕಳ್ಳಂ ಪೊಕ್ಕನೆಂಬ ಮಾಸಾಳು ಕುತ್ತನೆಂಬ ನೀರುರಿದುದೆಂಬ ಸೊಬಗೆಗೆ ಸವತಿಯಾದಳೆಂಬ ಜೋೞಿಸನ ಮಗಳ್ [ಪಸೆಯಮೇಲೆ] ರಂಡೆಯಾದ ಳೆಂಬ ಸಕುನಿಗನುಟ್ಟುದಂ ಕೊಟ್ಟನೆಂಬ [ಕಲಿ ಬಡಿವೆತ್ತನೆಂಬ] ಕಷ್ಟ ತಿಕ್ಕೆಯಂ ಮಾಡಿ ಪೆಱರ್ ತತ್ತ್ವಮನೆನ್ನಂತಾರಱಿಯರೆಂದು ಪೊಟ್ಟೇ ೞಿಸಿ ತನ್ನ ಶಕ್ತಿಯು[ಮಂ ಮತಿಯುಮ] ನೊಂದುಮನಱಿಯದೆ ಶುದ್ಧಾಚಾರಮಂ ಬಿಟ್ಟು ವಜ್ರವೃಷಭನಾರಾಚಸಂಹನನದವರಂ ನೋಡಿ ತಾನುಂ ಷಡಾವಶ್ಯಕಕ್ರಿಯೆಗಳಂ ಪರಿಹರಿಸಿ ಮೆಚ್ಚಿದಂತೆ ನೆಗೞ್ದು ಜಿನರನಗಲ್ದು ಮುಕ್ತಿವಡೆವೆನೆಂಬುದು ಸೊಡರುಮಾದಿತ್ಯನುಂಚಂದ್ರನು ಮಿಲ್ಲದೆ ಕಾಣ್ಬೆನೆಂಬ,[2] ಕಿರ್ಚಿಲ್ಲದೆ ಸೊಡರಂ ಪೊತ್ತಿಸುವೆನೆಂಬ ಬೆಳ್ತನ ಮಕ್ಕುಮದಱಿಂ ಕ್ಷೀಣಕಷಾಯರಾಗದನ್ನೆವರಮಿತ್ತಣವರ್ಗೆಲ್ಲಂ[3] ಜಿ ನೇಂದ್ರಪದಮೆಂಬ ಬಟ್ಟೆಯಂ ಪೊರ್ದದೆ ಜಿನೇಂದ್ರಭಕ್ತಿಯೆಂಬ ಕುದು ರೆಯನೇಱದೆ ಜಿನೇಂದ್ರಾರಾಧನೆಯೆಂಬ[4] ಪೊಲಂಬಿಗನಿಲ್ಲದೆ ಜಿನೇಂದ್ರ ನಮಸ್ಕಾರಮೆಂಬ ನೆರಮಂ ಪಾರದೆ[5] ಜಿನೇಂದ್ರಾಲೋಕನಾನಂದಮೆಂಬ

---

1 ಕಾಲಂ (ಗ)

2 ಮೞೆಯಿಲ್ಲದೆ ಬಿತ್ತುವೆನೆಂಬ, ನೆಲವಿಲ್ಲದೆ ಬೆಳವೆನೆಂಬ, ಕಣ್ಣಿಲ್ಲದ ಕಾಣ್ಬೆ ನೆಂಬ (ಗ) 3 ಅನ್ನೆಗಮುತ್ತಮಗುಣಸ್ಥಾನದವರ್ಗೆಲ್ಲಂ (ಗ)

4 ಜಿನೇಂದ್ರಾಧಾರಮೆಂಬ (ಗ) 5 ನೆರಮಂ ಪೊಗದೆ (ಗ)

ಸಂಬಳವಿಲ್ಲದೆ ನಿರ್ವಾಣಪುರಕ್ಕೆ ಪೋಗಲ್ಬಾರದೆಂದು ಜಿನಾಗಮದಿಷ್ಟ
ದಿಂ ತತ್ತ್ವಮಂ ಮನದೊಳವಧಾರಿಸಿ ॥ ೩೮

ಜಿನನೆ ಗುರು ಜಿನನೆ ದೈವಂ
ಜಿನನೆ ಕುಲಸ್ವಾಮಿ ಜಿನನೆ ನಂಬಿರ್ದಾಳ್ವಂ[1] ।
ತನಗೆಂಬ ಪೆರ್ಚಿನಿಂ ನೆ
ಟ್ಟನೆ ನಲಿದಂ ಸುಕವಿನಿಕರಪಿಕಮಾಕಂದಂ ॥ ೩೯

ಮನದೊಳ್ ಜಱಿಯದೆ ಬೆಚ್ಚದೆ
ಮುನಿಯದೆ ಸೆಡೆಯದೆ ನಿಳಿಂಪನಗನಿಭಧೈರ್ಯಂ ।
ತನುವಿನಮೇಲಣ ಮೋಹಂ
ತನಗಿಲ್ಲದೆ ತಳರದಿರ್ದನುನ್ನತಚಿತ್ತಂ ॥ ೪೦

ಅಂತು ಚಿತ್ತದೊಳಳ್ಕದೆ ಜಿನಾಗಮಮಂ ಭಾವಿಸುತ್ತುಮಿ
ರ್ಪುದುಂ [ಪಗಲೆಲ್ಲಂ ಬೆಂದು] ತೋಳ ಮೊದಲಂ ಕಿರ್ಚಳುರ್ವಾಗಳ್
ನರವುಗಳ್ ತೆಗೆದು ತೋಳ್ ತನಗೆ ತಾನೆ ನೆಗೆವುದುಂ, ವಿಡಂಬಂ [ಸೊಡ
ರಂ ಕಂಡ ಕೋಡಗದಂತೆ ಬೆಬ್ಬಳಿಸಿ] ಕಾಡೆದುರ್ದೆಂದು ಬೆರ್ಚಿ [ಬೆಗ
ಡು ಗೊಂಡು ತಾಂ ಮಂತ್ರವ್ಯಾಕರಣಮನಱಿಯನಪ್ಪುದಱಿಂ ಮಂತ್ರ
ದೊಳಾದ ಹೀನಾಧಿಕಮನಱಿಯದೆ ಮತಿಗೆಟ್ಟು ॥ ೪೧

ಮರನುಂ ಗಿಡುವುಂ ಪೊದರುಂ
ತರತರದಿಂದಿರ್ದ ತರುನಿಕಾಯಮುಮೆರ್ದು ।
ಬ್ಬರಮಾಗೆ ಬಂದು ತನ್ನಂ
ಸೆರಗಿಲ್ಲದೆ ನುಂಗುವಂತೆ ತೋರ್ಪುದುಮಾಗಳ್ ॥ ೪೨

ಕೆಟ್ಟೆನೆಂದು ಬಾಯ್ವಿಟ್ಟು ತಡವರಿಸಿ ಪೆಱಗಣ್ಗೆ ಬಿರ್ದಟ್ಟುದುಮಂ
ಸುರಗಿಯುಮನೀಡಾಡಿ ಮೆಯ್ಯಱಿಯದೆ] ಕೊಳ್ಪಟ್ಟರಂತೆ ಬತ್ತಲೆ
ಕರುಳ್ ಪಱಿವಿನಮೋಡುವುದುಂ ಜಿನಪಾಲಿತಮುನಿನಾಥಂ ಪಾಪಭೀರು
ವಪ್ಪುದಱಿಂದಾತನ ಪಾದಘಟ್ಟನೆಯಿಂ ತ್ರಸಸ್ಥಾವರಜೀವಂಗಳ್ಗೆ ಬಾಧೆ

---

1 ಜಗದಾರಾಧ್ಯಂ (ಗ)

ಯಾಗದೆ ಮೋಣದಕ್ಕಟಾ ಪೊಲ್ಲದಾಯ್ತೆಂದು [1] ಕಾರುಣ್ಯಹೃದಯನಾಗಿ ರ್ಪುದುಂ, [ವನದೇವತೆಯರುಂ] ನಗರದೇವತೆಯರುಂ ನೆರೆದು, ವಿಡಂಬನ ಡೊಂಬಾಟಕ್ಕಂ ಸಮ್ಯಕ್ತ್ವಚೂಡಾಮಣಿಯ ಧೈರ್ಯಕ್ಕಂ ಮನದೊಳಾದ ಜೀವದಯೆಗಂ ವಿಸ್ಮಯಂಬಟ್ಟು ಜಯಜಯನಿನಾದಮುಂ ದೇವದುಂದುಭಿಯುಮೊಡನೊಡನೆ ಸಮುದ್ರದಂತೆ ಘೂರ್ಣಿಸೆ [ಮೆಯ್ಯಱಿಯದೆ ರಾಗದಿಂ ಬಂದು] ನಮೋರು ಮಂದಾರಪಾರಿಜಾತಕಲ್ಪವೃಕ್ಷದರಲ್ಗಳಂ ಮುನಿಪುಂಗವನಮೇಲೆ ಸುರಿದು ಕರಕಮಲಂಗಳಂ ಮುಗಿದು ॥ ೪೩

[ಈ ಮುನಿನಾಥನಂತೆ ಮನದೊಳ್ ಕರಮಳ್ಕದೆ ನಿಂದ ಧೀರರಾ
ರೀಮುನಿವಂದ್ಯನಂತೆ ತನುವಂ ತೊಱೆದಳ್ಕದೆ ನಿಲ್ವ ಧೀರರಾ
ರೀಮುನಿರಾಜನಂತೆ ಜಿನತತ್ತ್ವದೊಳುನ್ನತನಾದನಾವನಿ
ನ್ನೀಮುನಿಪೂಜ್ಯನಂತೆ ದೃಢರಾರೊ ಮನಸ್ವಿಗಳಾರೊ ಲೋಕದೊಳ್ ॥

ತನ್ನಳವಂ ವಿಚಾರಿಸದೆ ನೋಡದೆ ಕೆಮ್ಮನೆ ತನ್ನ ವೀರಮಂ
ಕಿನ್ನರಭೂತಕಿಂಪುರುಷದೈತ್ಯನಿವಾಸಮನೆಯ್ದಿ ಡೊಂಬಿನಿಂ
ದುನ್ನತಚಿತ್ತನಂ ಪೆಣನೆ ಗೆತ್ತು ಖಳಂ ಪಿರಿದಪ್ಪ ಕಿರ್ಚಿನಿಂ
ದನ್ನೆಱೆ ಸುಟ್ಟೊಡಂ ಮನದೊಳಳ್ಕದೆ ಬಳ್ಕದೆ ಮಂದರಕ್ಷಮಂ ॥ ೪೫

ಮುನಿನಾಥನ ನಿಡುದೋಳ್ಗೆ
ದನಿತಱೊಳೋಡಾಗಿ ಸಾಧಕಂ ಭಯದಿಂ ಭೋಂ ।
ಕೆನೆ ಕೆಟ್ಟೆನೆಂದೊಡೀಪಿತೃ
ವನಮಂ ಪುಗುವಂಗೆ ಮತ್ತಮೆಂಟೆರ್ದೆಯೊಳವೇ ॥] ೪೬

ತನುವಂ ಧನಮಂ ಕೊಱೆದಿರ
ಲನುಪಮರೆನಿಸಿರ್ದ ಜೈನಯೋಗಿಗಮಭಿಮಾ ।
ನನಿಧಾನರಪ್ಪುಪಾಸಕ
ಜನಕ್ಕಮಳಪಡುಗುಮುಱಿದವರ್ಗದು ಮೊಗ್ಗೇ ॥ ೪೭

---

1 ತನ್ನಂ ತಾನೆ ನಿಂದಿಸಿಕೊಂಡು (ಗ)

ತನುವಿನ ಮೋಹಮಂ ಬಿಸುಟು ಪೆಂಡಿರ ಮಕ್ಕಳ ಪೊನ್ನ ಮೋಹದಿಂ
ಮನಮುರಿಬಟ್ಟು ಮೆಯ್ಸುಖಮನೊಲ್ಲದೆ ಬರ್ಪ ಪರೀಷಹಂಗಳಂ
ಘನತರಮಾಗೆ ತಾಳ್ದು ಪರಮಂ ನೆಱೆ ಸಾಧಿಸಲಯ್ಯ ಭಾಪು ಭಾ
ಪನುಪಮಜೈನಯೋಗಿಗಳ್ ಬಲ್ಲರಿಳಾತಳದೊಳ್ ನಿರಂತರಂ ॥ ೪೮

ಮನೆಯ ಕುಟುಂಬಮಂ ಪೊರೆಯಲೆಂದೆಡೆಯಾಡಿ ಪಲಂಬರಲ್ಲಿಗೊ
ಯ್ಯನೆ ಸುರರಾಯುಃಕ್ಕೆ ಸಿರಿಯಕ್ಕೆ ಮಹಾಸುಖಮಕ್ಕೆ ಮಕ್ಕಳ
ಕ್ಕೆನುತುಮಭೀಷ್ಟಮಂ ಕುಸಿದು ಪಲ್ದೆಱೆದಕ್ಕಟ ಬೇಡಿ ಬಾಳ್ವ ದು
ರ್ಜನತತಿ [1] ಪೇೞಿ ಪೆತ್ತಪರೆ ಜೈನರವೊಲ್ ಸುರರಾಜಸೌಖ್ಯಮಂ ॥ ೪೯

ಪಱಿಯದೆ ವಾರವಾಳಿಯುಣಿಸಿಂಗೆ ಸಮರ್ಥರನಾಸೆವಟ್ಟು ಬಂ
ದೆಱೆಯದೆ ದೈನ್ಯವೃತ್ತಿಗೊಳಗಾಗದೆ ಸಂಸೃತಿವಾರ್ಧಿಯಲ್ಲಿ ಬಿ
ದ್ದುರುಳದೆ ವೀರವೃತ್ತಿಯನೆ ಪಾಟಿಸಿ ಮೋಕ್ಷಸುಖಕ್ಕೆ [2] ಚಿತ್ತಮಂ
ತಿರಿಪುತುಮಿರ್ದ ಜೈನಮುನಿಪುಂಗವರಿಂ ಮಿಗಿಲಾರೊ ಲೋಕದೊಳ್ ॥೫೦

ಎಂದು ಪಲತೆಱದಿಂ [ಪೊಗೞ್ವ ದೇವನಿಕಾಯದ ಕಳಕಳಮಂ ಪೊಯ್ವ ಪಂಚಮಹಾಶಬ್ದಪ್ರಘೋಷಮಂ] [3] ಪುರದವರೆಲ್ಲಂ ಕೇಳ್ದು ವಿಸ್ಮಯಂಬಡುತಿರ್ದರನ್ನೆಗಂ ॥ ೫೧

[ಮನಸಿಜನಾಗಕೇಸರಿ ಜಿನಾಗಮದೋಜೆಯಿನದ್ರಿಯಂತೆ ನಿಂ
ದನುಪಮಚಿತ್ತನಂ ಗುಣಕರಂಡನನುಜ್ಜ್ವಳಕೀರ್ತಿಕಾಂತನಂ
ಮುನಿಜನವಂದ್ಯನಂ ತಡೆಯದೀಗಳ್ ನೋಡುವೆನೆಂಬ ಮಾೞ್ಕೆಯಿಂ
ದಿನಕರನೇಱಿದಂ ದಿವಿಜರಾಜದಿಶಾವರಧಾರಿಣೀಂದ್ರಮಂ ॥ ೫೨

ಅಂತಾ]ದಿತ್ಯಂ ಪೂರ್ವಾಚಲಶಿಖರಶೇಖರನಪ್ಪುದುಂ ಪೂಣ್ಕೆ ತೀರ್ದ ಜಿನಪಾಲಿತಮುನಿವೃಂದಾರಕಂ ಯೋಗಮಂ ನಿರ್ವರ್ತಿಸಿ ತಡೆಯದಲ್ಲಿಂದೆರ್ದು ಬರ್ಪುದುಂ ತನ್ಮುನಿನಾಥನಂ ಜಿನದತ್ತಂ ಕಂಡು ಮನದಾದರದಿಂ ವಂದಿಸಿ ತನ್ಮಮನೆಗೆ ಬಡಗೊಂಡು ಬಂದು ದೇಹಾರದೊಳಿರಿಸಿ ॥ ೫೩

---

[1] ಜನಪತಿ (ಕ.ಬ.) ದುರ್ಜನರತಿ (ಗ)

[2] ಪಥಕ್ಕೆ (ಕ.ಬ.)   [3] ಪುರದೇವತೆಗಳುಂ (ಗ)

[ಅಲ್ಲಿಗೆ ದಿವ್ಯೌಷಧವುಂ
ಬಲ್ಲವರಂ ತರಿಸಿ ವೈಶ್ಯತಿಲಕಂ ಮುಂದಿ ।
ರ್ದಲ್ಲಿಂದಗಲದೆ ಬೀಯ
ಕ್ಕುಳ್ಳಳ್ಕದೆ ಕೊಟ್ಟು ಪೊಂಗಳಂ ಪ್ರಿಯದಿಂದಂ ॥ ೫೪

ಮತ್ತಂ] ತಾನೆ ಕೆಲದೊಳಿರ್ದು ಪಥ್ಯಪಾನಂಗಳಂ ಪ್ರಯತ್ನದಿಂ ಮಾಡಿ ನಿರ್ದಯನಂತೆ ನಿಷ್ಕರುಣಿಯಾಗದೆ [1] ಪಾವಂ ಪಿಡಿದವರಂತೆ ದೂರದೊಳಿರದೆ, ಕುವಿಟನೊಳ್ ಕೂಡಿದ ಸೂಳೆಯಂತೆ ಮೊಗಂ ದಿರುಪದೆ, ಮನೆಯ ಗಂಡನಂ ಕಂಡ ಪಾದರಿಗಗಂಡನಂತೋಸರಿಸದೆ, [2] ಜೀವಿತಂಗುಡದಾಳ್ದನ ಬೆಸಕ್ಕಂಜುವ ಬಂಟನಂತೆ ಮನದೊಳ್ ಜಱಿಯದೆ, ಕ್ರೂರರೊಡನೆ ಬಟ್ಟೆವೋಪ ದ್ರವ್ಯಪತಿಯಂತೆ ಪೆಱಗುಱಿಯದೆ, ಪೊಲೆಬೂತಿಂಗೆ ಕೊಡುವರ್ಥದಂತೆ ಪೆಱರಮೇಲೆ ನೆವಮಿಕ್ಕದೆ, ಅಳಿಯನಂ ಕಂಡತ್ತೆಯಂತೆ [3] ಲಜ್ಜಿಸದೆ, ಕೀಳ್ಜಾತಿಯಂ ಕಂಡ ಕುಲಜನದಂತುದಾಸೀನಂಗೆಯ್ಯದೆ ಪರಮಭಕ್ತಿಯಿಂದೋವುದುಂ, ಕೆಲವುದಿವಸಕ್ಕೆ ಪುಣ್ಣೆಲ್ಲಂ ಮಾಯ್ದು [ಲೇಸಪ್ಪುದುಂ ಜಿನಪಾಲಿತಮುನಿತನ್ನೊಳಿಂತೆಂದಂ ॥ ೫೫

ವಿಪರೀತದ ಪುಣ್ಣಿನಿದಂ
ಕೃಪೆಯಿಂ ಸಾರಿರ್ದ ವೈಶ್ಯವಂಶಲಲಾಮಂ ।
ಸುಪರೀಕ್ಷೆಯುಳ್ಳ ವೈದ್ಯರಿ
ನಪಹರಿಸಿದನಿಂತು ಸಾರ್ದ್ರಹೃದಯರುಮೊಳರೇ ॥ ೫೬

ಎಂದು ಮನದೊಳ್ ಮೆಚ್ಚಿ ಕಿರ್ಚಿನೊಳಾದ ವೇದನೆಯುಂ ಮನದೊಳಾದ ಸಂಕ್ಲೇಶವುಂ ತೀರ್ದುದೆನಿತುಕಾಲಮಿಲ್ಲಿರ್ದೆನನಿತೆ ಸಾಲ್ಗುಮಿನ್ನು ಧರಣೀವಳಯದೊಳ್ ವಿಹಾರಿಸುವೆನೆಂಬ ಬಗೆಯುಂ ತಂದು,] ಸೆಟ್ಟಿಗೆ ತಮ್ಮ ಪೋಗಂ ಪೇೞ್ದು ತದಾಲಯದಿಂ ಪೊಱಮಡುವುದುಂ॥೫೭

---

1 ಚನ್ನಸೂಳೆಯಂತೆ ವಯಸ್ಸದೆ (ಕ.ಖ.)

2 ಬಳಸರಿಯದೆ (ಗ) 3 ಪೆಱರಂ ಕಂಡು (ಗ)

[ವರಮುನಿಪಾದಾಂಬುರುಹಮ
ನುರುವಂದನೆಗೆಯ್ದು ಮಗಲಲಾಱದೆ ವೈಶ್ಯಂ ।
ಬರಭಾನು ಪೆಱಗೆ ನಿಲ್ಲದೆ
ಕರಮಾದರದಿಂದೆ ತಾನುಮಾತ್ಮಾಲಯಮಿಂ ॥ ೫೮

ಪೊಱಮಟ್ಟು ಬರ್ಪುದುಂ ಮುನಿ
ಕಿಱಿದಂತರದಲ್ಲಿ ನಿಂದು ಸದ್ಧರ್ಮಮನುಂ ।
ಮಱೆಯದೆ ಸನ್ಮುನಿಮತಮಂ
ತಱುವಲಿತನದಿಂದಮೋಟಿಸದೆ ನೀಂ ಮಗನೇ ॥ ೫೯

ಸದ್ಧರ್ಮಸಮೇತನುಂ ಸನ್ಮಾರ್ಗಪ್ರೀತನುಮಪ್ಪುದೆಂದು ಜಿನದತ್ತಸೆಟ್ಟಿಯುಂ ಮೃದುವಚನಂಗಳಿಂ ಬೋಧಿಸಿ ಮನೆಗೆ ಮಗುಳ್ದು ಪೋಗಿಮೆಂಬುದುಂ ಮಹಾಪ್ರಸಾದಮಂತೆಗೆಯ್ವೆನೆಂದು ಪ್ರದಕ್ಷಿಣಂಮಾಡಿ ಬಂದಿಸಿ ಮನೆಗೆ ಬಂದಿರ್ಪನ್ನೆಗಂ ॥ ೬೦

ತಂದೆಯು ಪೋಗಂ ಕಂಡಾ
ನಂದದಿನರ್ಥಕ್ಕೆ ಮುನ್ನಮಡಹಡಿಸಿ ಮನಂ ।
ಗುಂದಿ ಕಡುನೊಂದು ಮನದೊಳ್
ಬೆಂದು ಮಹಾಮಱುಕದಿಂದಮಿರ್ಪ ದುರಾತ್ಮಂ ॥ [1] ೬೧

ಮನೆಯುವರಂ ಬಂಚಿಸಿ ಮೆ
ಲ್ಲನೆ ದೂರ್ತಿಂ ಕೊಂಡು ಬೀಯಗದ ಕಯ್ಯಂ ನೆ ।
ಟ್ಟನೆ ತೆಱೆದು ಪಡಿಯನೊರ್ವನೆ
ಮನಮಂಜದೆ ಪೊಕ್ಕು ಕಂಡು ಕನಕಮನಾಗಳ್ ॥ ೬೨

ಸಂತೋಷಂಬಟ್ಟು ಮುನ್ನಿನಂತೆ ಪಡಿಯಂ ಕೆತ್ತು ಪೊನ್ನನಿಂದು [2] ನೋಡಿ ಕಣ್ಬೇಹತನದಿಂ ತನ್ನಾರ್ಪನಿತಂ ಕಟ್ಟಿಕೊಂಡು ಪೋಪೆನೆಂದಿ

---

1 ಎಡೆವೆತ್ತಿನೆಂದು ಪೆರ್ಚಿ (ಕ)

2 ಪೊನ್ನನಿಂದುಂ (ಖ) ಪೊನ್ನನಿದುಂ (ಕ)

ಪುರ್ದುಂ ಜಿನದತ್ತಸೆಟ್ಟಿ ಬಂದು ಪೆಱತೊಂದುಮಂ ನೋಡದೆ ತನಗೆ ಪೊನ್ನೊಳಾದ ಮೋಹಂ ಪಿರಿದಪ್ಪುದಱಿಂ] [1] ಪೊನ್ನಡೆಯೊಳ್ ನಾಯುನ ಪ್ಪೊಡಂ ನಂಬಲಾಗದೆಂಬ ನಾಣ್ಣುಡಿಯುನವಧರಿಸಿ ಪೊನ್ನಿರ್ದೋವರಿಯ ಬಾಗಿಲಂ ನೋಡಿ ತನ್ನಿಕ್ಕಿದ ಬೀಯಗಮಂ ಕಾಣದೆ ಪಡಿಯಂ ನೂಂಕುವುದುಂ ಜಿನದಾಸಂ ತಂದೆ ಬಂದನೆಂದಱಿದು ಮನದೊಳ್ ಬೆಗಡುಗೊಂಡು [ನಾಡೆಯುಂ ಭಯುಸ್ಥನಾಗಿ] ಪೊಱಮಟ್ಟು ಪೋಗಲಣ್ಮದೆ ಚಿನ್ನದ ದಿಂಡಿರ್ದೆಡೆಯಂ ಪೊಕ್ಕು ಮೇಲೊಂದು ಚಿನ್ನದ ದಿಂಡಂ ತೆಗೆದುಕೊಂಡು ತಾನಲ್ಲದಂತುಸಿರದಿರ್ಪುದುಂ ಸೆಟ್ಟಿ ಮನೆಯೊಳಗೆ ಪೊಕ್ಕು ನೋಡಿ ಪೊನ್ನ ರಾಸಿಯೊಳ್ ಕಿಱಿದು ಪೋರ್ ಪೋದುದಂ ಕಂಡು ‖ ೬೩

ಮಱುಕಂ ತೊಟ್ಟನೆ ಪುಟ್ಟಿ ನೊಂದು ಮತಿಗೆಟ್ಟೋವೆಂದು ಜಾಣ್ಗೆಟ್ಟು ಬೆಂ
ದಱಿತಂಗೆಟ್ಟಿರ್ದೆಗೆಟ್ಟು ಮೆಯ್ಮಱುಗಿ ಕೆಟ್ಟೆಂ ಬಾಱೆನೆಂದತ್ತು ಬಾ
ಯ್ದೆಱೆದೋರಂತಿರೆ ಕಂದಿ ಕುಂದಿ ಮನದೊಳ್ ಮಂಕಾಗಿ...ಮೆ
ಯ್ಮಱೆದಿನ್ನೇಗುವೆನೆಂದು ಮೋಹದೊದವಿಂ ಬಿರ್ದಂ ಧರಾಚಕ್ರದೊಳ್ ‖

ಅಂತು ಬಿರ್ದು [ಕಿಱಿದುಬೇಗದಿನೆರ್ದು ಕಳ್ಳನಿರ್ದನೆಂದು ಕೋಣೆಯಿಟ್ಟೆಡೆಕುಸುಕುಱೊಳೆಲ್ಲಂ ನೋಡಿ ತದಾವಾಸದೊಳಾರುಮಂ ಕಾಣದೆ ಮನೆಯಂ ಪೊಱಮಟ್ಟು] ಪಡಿಯಂ ಕಿತ್ತು ಮುನ್ನಿನಂತೆ ಮುದ್ರಿಸಿ ಬಿಲ ಕೆಟ್ಟವರ್ ಕೀಲಂ ತಡವರಿಸಿದರೆಂಬಂ [ತೆ, ಕುದುರೆ ಕೆಟ್ಟವರ್ ಬಾದಣಮಂ ನೋಡಿದರೆಂಬಂತೆ] ನಾಣ್ಣುಡಿಯಂ ನನ್ನಿಮಾಡಿ ಮನದ ಮಱುಕದಿಂ ಭ್ರಮೆಗೊಂಡು ಜಿನಪಾಲಿತಮುನಿನಾಥನೆ ಕೊಂಡುಪೋದನೆಂದು ಬೆನ್ನನೆ ಪರಿದು ಮುನಿಕುಂಜರನಸೆಯ್ದಿ ಮಾಯಾವಿನಯದಿಂ ಪೊಡೆಮಟ್ಟು ‖ ೬೪

1 ಕಿಱಿದಂತರಂ ಕಳುಪಿ ಬಪ್ಪನ್ನೆಗಮುನ್ನಮರ್ಥಕ್ಕಡಹಡಿಸುವ ಜಿನದಾಸಂ ಭಂಡಾರಮನೆಯಂ ಪೊಕ್ಕು ಪಡಿಯಂ ಕಿತ್ತು ಪೊನ್ನನಿಂದು ನೋಡಿ ಕಣ್ಬಾಹಿತತನದಿಂ ತನ್ನಾರ್ಪನಿತಂ ಕಟ್ಟಿಕೊಂಡು ಪೋಪೆನೆಂದಿರ್ಪುದುಂ ಜಿನದತ್ತಸೆಟ್ಟಿ ಬಂದು ಪೆಱತೊಂದುಮಂ ನೋಡದೆ (ಗ.)

[ಇನ್ನೆಗವೆನ್ನನುತ್ತಮಗುಣಾಂಬುಧಿ ಭವ್ಯಪಯೋರುಹಾರ್ಕ ಮ
ತ್ತೆನ್ನದೆ ಕೂರ್ಮೆಯಿಂ ಪರಸುತಿರ್ದಿರವೋಘದಿನಿಂದು ಪೋಗಲಾ
ಗೆನ್ನನವಜ್ಞೆಗೆಯ್ದು ಬಿಸಿಲಾದುದು ನಿಮ್ಮಡಿ ನಾಳೆ ಪೋಪುದೆಂ
ದುನ್ನತಶೀಲರಂ ತೆಗೆವುದುಂ ನಯದಿಂ ಪಲವುಂ ಪ್ರತಂಗಳಿಂ ॥ ೬೬

ಮುನಿನಾಥಂ ಕಾರುಣ್ಯದಿಂ ಮಗುಳ್ವುದುಂ ಜಿನದತ್ತಸೆಟ್ಟಿ] ತನ್ನ ಮನೆಗೊಡಗೊಂಡು ಬಂದು ಪೊನ್ನಿರ್ದೋವರಿಯ ಬಾಗಿಲಲ್ಲಿ ಪಿರಿದಪ್ಪ ಮಣೆಯುಂ ತಂದಿಕ್ಕಿಸಿ [ಯತಿನಾಥನಂ] ಕುಳ್ಳಿರಿಸಿ ತಾನುಂ ಕೆಲದೊಳ್ ಕುಳ್ಳಿರ್ದು ತನ್ನೊಳಿಂತೆಂದಂ ॥ ೬೭

ತನುವಂ ಬಿಟ್ಟು ಪರತ್ರೆಯುಂ ಪಡೆವೆನೆಂಬಾಕಾಂಕ್ಷೆಯಿಂ ಜೈನಸೇ
ವನೆಯುಂ ಮಾಡುತುಮಿರ್ದು ನಿಷ್ಕಪಟದಿಂ ಪಾಪಾರಿಯುಂ ಗೆಲ್ದು ನೆ
ಟ್ಟನೆ ಕೈವಲ್ಯವಿಭೂತಿಯುಂ ಪಡೆಯದಿಂತೀಸಾಧು ಬೇಳಾಗಿ ಕೆ
ಮ್ಮನೆ ಮೋಹೋದಯದಿಂದಮೆನ್ನ ಧನಮಂ ತಾನೇಕೆ ಕಳ್ದುಯ್ದನೋ॥

ಎಂದು [ತನ್ನ] ದುರ್ಭಾವದಿಂ ಲೋಭಿ ಗುಣವಿಶೇಷಮನಱಿಯನೆಂಬುದಂ ನನ್ನಿಮಾಡಿ ಮುನಿನಾಥನಂ ಕಳ್ಳನೆಂದು ನಿಶ್ಚಯಿಸಿ [ಪೊನ್ನನೊರ್ಮೆಯೆ ಬೇಡಿದೆನಪ್ಪೊಡೆ ಮಹಾತಪೋಧನರಂ ಬಱಿದೆ ಕಾಡುತುಮಿರ್ದಪನನ್ಯಾಯಿಯೆಂದು ಕೆಲದವರೆಲ್ಲಮೆನ್ನಂ ದೂಱಿ ಕೊಳ್ವರದುಕಾರಣದಿಂ ಮೆಲ್ಲನುಪಾಯದಿಂ ನುಡಿದು ಪೊಲ್ಲಮೆಯುಂ] [1] ದುರ್ಯಶಮುಮಾಗದಂತೆ ಬುದ್ಧಿಯಿಂದೆನ್ನ ಪೊನ್ನಂ ಕೊಳ್ವೆನೆಂದು ಮೆಲ್ಲನಲ್ಲಿಗೆ ತಕ್ಕಂತಪ್ಪ ಕಥೆಯುಂ ಪೇಳ್ವ[ಪೆನೆಂದಿಂತೆಂದಂ] ॥ ೬೯

ಮುನಿಪತಿ ಕೇಳ್ ಪೇಳ್ವೆಂ ಕಥೆ
ಯುನಿದೊಂದಂ ವ್ಯಾಘ್ರಖೇಡಮೆಂಬಾಪೊೞಲೊಳ್ ।
ದಿನಕರಸನ್ನಿಭನಿರ್ಪಂ
ದಿನಕರನೆಂಬೊರ್ವನಾತನಗ್ರತನೂಜಂ ॥ ೭೦

1 ದೂರುಂ (ಗ)

ಕರಾಳನೆಂಬನಾತಂ ದುಷ್ಟಗೋಷ್ಠಿಯಿಂ ಸಪ್ತವ್ಯಸನಸಮೇತನಾಗಿ ಪಲಕಾಲಮಿರ್ದೊಂದುದಿವಸಂ ಸೂಳೆಗೆ ಕುಡಲರ್ಥಮಿಲ್ಲದೆ ರಾಜಭವನಮಂ ಕನ್ನಮನಿಕ್ಕಿ ಪೊಕ್ಕು ತನ್ನಾರ್ಪನಿತು ಪೊನ್ನಂ ಕೊಂಡು ಮುನ್ನಿನ ಪರಿಯಿಂ ಪೊಱಮಡುವುದುಂ [ತೊಱಲ್ವ] ತಳಾಱರ್ ಕಂಡು ॥

[ಕಲ್ಲಿಂ ಗುಂಡಿಂ ಒಡಿಯಿಂ
ನಿಲ್ಲದೆ ಕೈವಾರಮಿಡುತುಮವರೆಯ್ದುವುದುಂ ।
ತಲ್ಲಣಿಸಿ ಕರಾಳಂ ತಳ್ತು
ವಿಲ್ಲದೆ ನಿಲ್ಲದೆ ಭಯಸ್ಥನಾಗಿ ದುರಾತ್ಮಂ ॥ ೩೦

ಬೆನ್ನನೆ ಕಾಲ್ಗಿಸುತ್ತುಮಿನ್ನೆತ್ತ ಪೋದಪನೆಂದು ಬೆಗಡುಗೊಂಡು ಪರಿದು ಪರಿಯಲಾಱದೆ ಬಂದೊರ್ವ ಪರದನ ಕಾಲಮೇಲೆ ಬಿರ್ದು ॥ ೩೩

ಸಾವಾದುದೆನಗೆ ನೀನೀ
ಸಾವಂ ಪೋಗಿಸುವುದೊಳ್ಳಿತೆಂದೊಡಮವರುಂ ।
ನಾನಾವಿಧದಿಂ ಕೊಂದಪ
ರಾವಂಗಂ ಕಾಯಬಾರದಿಂದಿನ ಕೊಲೆಯಂ ॥ ೩೪

ಎಂದು ದೈನ್ಯವೃತ್ತಿಯಿಂ ನುಡಿದು] [1] ಕಳ್ಳನೊಳ್ಳಿದನಿಲ್ಲ ನಾಯ್ ಮೋನಿಯಿಲ್ಲೆಂಬ ನೀತಿಯಂ ಭಾವಿಸದೆ ಕಾರುಣ್ಯದಿಂ ಕರಾಳನಂ ತೆಗೆದು ತನ್ನ ಸಾರೆ ಕುಳ್ಳಿರಿಸಿ ಸೀರೆಯಂ ಪೊದೆದುಕೊಂಡಿರ್ದನನ್ನೆಗಂ ತಳಾಱರ್ ಪರಿತಂದೀಮನೆಯಂ ಪೊಕ್ಕನೆಂದು ಮನೆಯೊಳಗಱಸಿ ಕಾಣದೆ ಮುಂದೆ ಕುಳ್ಳಿರ್ದ ಸೆಟ್ಟಿ ಡೊಳ್ಳಿಗನಪ್ಪುದಱಿಂ ಪರೀಕ್ಷಿಸದೆ ಪೋದರಿತ್ತಲ್ ॥ ೩೫

[ಊರೊಳಗಾದುಲಿಯೆಲ್ಲಂ
ಭೋರೆನಲಂದುಡುಗೆ ಮನದ ನಿರ್ವೇಗಂ ವಿ ।

---

[1] ಬೆನ್ನಟ್ಟಿ ಬೆಗಡುಗೊಂಡು ಪರಿದು ಪರಿಯಲಾಱದೆ ಬಂದೊರ್ವ ಪರದನ ಮನೆಯಂ ಪೊಕ್ಕು ಕಾಲಮೇಲೆ ಬಿರ್ದು ದೈನ್ಯವೃತ್ತಿಯಂ ನುಡಿವುದುಂ (ಗ)

ಸ್ತ್ರರದೊಳ್ ಪೋಗೆ ಪರದನ
ಚೇಲಮನೊಳಗಿರ್ದು ಮೆಲ್ಲನೀಕ್ಷಿಸಿ ಚೋರಂ] ॥ ೩೬

ಪುಸಿಯ ತಾಯ್ಮನೆ ಪಾಪದಾಗರಮಿಂದ್ರಿಯಂಗಳ ಪೆರ್ಚುಶೋ
ಭಿಸುವ ಪೆಂಪಿನ ಕೇಡು ಕೋಪದ ಪುತ್ತು ದುಃಖದ ಬಿತ್ತು ದು
ರ್ವ್ಯಸನದಿಕ್ಕೆಯ ಠಾವು ರೌರವಪಂಥಮಲ್ಲದೆ ಮನ್ಮಥ
ವ್ಯಸನಮೆಂಬ ಜಿನೇಂದ್ರವಾಕ್ಯಮನಾಖಳಂ ನೆಱೆ ತೋಱಿದಂ ॥೩೭

ಮತ್ತಂ ವ್ಯಸನಿಯಿಂ ಬಿಟ್ಟು ಪಾತಕರುಂ ಪುಲಿಯಿಂ ಬಿಟ್ಟು ಕ್ರೂರರುಮಿಲ್ಲೆಂಬ ಮಾತಂ ನನ್ನಿಮಾಡಿ ॥ ೩೮

ಈಪರದನ ಕತದಿಂದೆನ
ಗಾಪತ್ತಿದು ಪೋದುದಱಿದೊಡವನಿಯೊಳನಗಿ ।
ನ್ನೀಪರದನೆ ಸಖನೆನ್ನದೆ
ಪಾಪಯುತಂ ಪೊನ್ನೊಳಾದ ಪದೆಪನೆ ಬಗೆದಂ ॥ ೩೯

ಪುಸಿವಂಗೆ ಮಾಡಿದ ಹಿತಮುಂ ಕಳ್ಳಂಗೆ ಮಾಡಿದುಪಕಾರಮುಂ ಸಮುದ್ರದೊಳ್ ಬಳಕೊಂಡ ಮೞೆಯುಂ ಗ್ರಾಮಣಿಗೆ ಮಾಡಿದ ಗುಣಮುಂ ವ್ಯಥೆಯೆಂಬುದಂ ಮಾಡಿ [1] ತನ್ನ ಕಟ್ಟದ ಗೇಣಿಂ ಪರದನಂ ಜಾಲೆಯಾಡಂ ಕೊಲ್ವಂತೆ ಪೊರಱ್ಚಿ ಕೊಂದು ಚೇಲಮಂ ಕೊಂಡು ಪೋದನಂತೆ ಕೆಲರ್ ದುರ್ಜನತ್ವಮಂ ಮಾೞ್ಪರಲ್ಲದೆ ಪರಮೋಪಕಾರಮಂ ನೆನೆಯರೆಂದು ಪೇೞ್ದು ಸಿರದಿಪುರ್ದುಂ ಮನಿಕುಂಜರಂ ಜಿನದತ್ತಂ ಪೇೞ್ದ ಕಥೆಯುಂದಕ್ಕೆ ವಿಸ್ಮಯಂಬಟ್ಟು ॥ ೪೦

ಇಂದೀಜಿನದತ್ತನ ಕಥೆ
ಯಂದಂ ಲೇಸಲ್ಲದಿದಱ ಭಾವಂ ಬೇಱೇ ।
ನೆಂದಪನೊ ತಿಳಿಯದೀತನ
ಮಂದಿರದೊಳ್ ಕೇಳ ವಸ್ತುವೊಂದೇನಾನುಂ ॥ ೪೧

1 ನೆಱೆಮಾಡಿ (ಗ)

ಕೆಟ್ಟುದಱಿಂದೀತಂ ಬಾ
ಯ್ವಿಟ್ಟು ಮಹಾಮೋಹದಿಂದೆ ಮೆಯ್ಯಱಿಯದೆ ಜಾ ।
ಣ್ಗೆಟ್ಟು ಮತಿಗೆಟ್ಟು ಗತಿಯಂ
ಬಿಟ್ಟೆಮ್ಮಂ ಕಳ್ಳನೆಂದು ಶಂಕಿಪನಕ್ಕುಂ [1] ॥ ೮೨

ಇದೆಲ್ಲಮೀತನ ಗೊಟ್ಟಾಟಮಲ್ಲ ದುಷ್ಕರ್ಮದ ಗೊಟ್ಟಾಟಮೆಂದು ಮನದೊಳ ನಕ್ಕು ವಣಿಗ್ಜಾತಂಗೆ ನಂಬುಗೆಯಪ್ಪ[ಂತಿ] ಲ್ಲಿಗೊಂದು ಕಥೆಯಂ ಮೆಲ್ಲನೆ ಪೇೞ್ದೊಂದುಪೊಲ್ಲಮೆಯಂ ಕಳೆದುಕೊಳ್ವಮೆಂದು ಸೆಟ್ಟಿಗಿಂತೆಂದರ್ ॥ ೮೩

ಅತಿಶಯದಿಂ ಕೇಳ್ ದ್ವಾರಾ
ವತಿಯೆಂಬುದು ರಾಜಧಾನಿ ವೈಶ್ಯೋತ್ತಮ ಭೂ ।
ನುತನರ್ಧಚಕ್ರಿ ಧಾತ್ರೀ
ಪತಿ ನಾರಾಯಣನುದಾತ್ತನದನಾಳ್ವರಸಂ ॥ ೮೪

ಆತನ ಪುರಕ್ಕೆ [ಧರಣೀ
ಖ್ಯಾತರ್ ಗುಣಗಣಸಮೇತರುನ್ನತಶೀಲರ್ ।
ಪ್ರೀತಿಯಿನಪಗತದುರಿತ
ವ್ರಾತರ್ದ್ವೈಯ [2] ನಿಳಯುರಮರಗಿರಿನಿಭಧೈರ್ಯರ್] ॥ ೮೫

ದಂಡಕರೆಂಬ ಋಷಿಯರ್ ಬರ್ಪುದುಮವರ [ಬರವಂ ಋಷಿನಿವೇದಕನಿಂದಱಿದು ನಾರಾಯಣಂ ಪರಿಜನಸಮೇತಂ ಬಂದು ವಂದಿಸಿ ಕಿಱಿದುಬೇಗಂ ಧರ್ಮಮಂ ಕೇಳ್ದು ಪಿರಿದಪ್ಪ ವ್ಯಾಧಿಯಿಂ ಮುನಿಪತಿ ಗಿಡಿಗಿಡಿಜಂತ್ರಮಾಗಿರ್ದುದಂ ಕಂಡು ತದ್ವ್ಯಾಧಿಯಂ ತೀರ್ಚುವೆನೆಂಬ ಬಗೆಯಂ ತಂದು ಬುದ್ಧಿವಂತನಪ್ಪುದಱಿಂ ನಿಮ್ಮಡಿ ನೀವೆನಗೆ ಕಾರುಣ್ಯಂಗೆಯ್ವಿರಪ್ಪೊಡೆ ಚಾತುರ್ಮಾಸ್ಯಮನೆನ್ನ ಪೊೞಲೊಳ್ ಮಾಡಿ ಪರಸುತ್ತಮಿರ್ಪುದೆಂದು ಪಲವುಂ ವ್ರತವಿಶೇಷದಿಂ ಬೇಡಿಕೊಳ್ವುದುಂ

---

1 ಬಿಟ್ಟು ಕರಂ ಕಳ್ಳರೆಂದು ಸುತ್ತಿಪಸಕ್ಕುಂ (ಗ)

2 ದ್ವಯ (ಕ. ಖ.)

ದಂಡಕಋಷಿ ಮೞೆಗಾಲಮುಮಡಸಿತಪ್ಪುದಱಿಂದೊಡಂಬಟ್ಟು "ತಥಾಸ್ತು" ಎಂಬುದುಂ ನಾರಾಯಣಂ ತನ್ನ ದೇಹಾರಕೊಡಗೊಂಡು ಪೋಗಿ ॥][1] ೮೬

ಶ್ರೀಕಾಂತಂ ಸದ್ವೈದ್ಯನ
ನೇಕಾಂತದೊಳೆಂದನೀಮುನೀಂದ್ರರ ರುಜೆಯಂ ।
ವ್ಯಾಕುಳನಾಗದೆ ಕಳೆ ನಿ
ರ್ವ್ಯಾಕುಲಮಪ್ಪಂತು ಬೇಗಮೆಂಬುದುಮಾತಂ ॥ ೮೭

ಅಂತೆ ಗೆಯ್ವೆನೆಂದು ಬೆಸನಂ ಕೈಕೊಂಡು ಪೋಗಿ ತದ್ವ್ಯಾಧಿಗೆ ತಕ್ಕಂತಪ್ಪ ದಿವ್ಯೌಷಧಂಗಳಂ ಕೂಡಿ ತಂದು ಭೂಪಾಲನ ಕೈಯೊಳ್ ಕುಡುವುದುಮರಸಂ ತನ್ಮುನೀಂದ್ರರೌಷಧಮೆಂದೊಡೆ ಕೊಳ್ಳರೆಂದುಪಾಯದಿಂ[ದೀಪರ್ವಮಿ]ದುಂಡೆಯ ಪರ್ವಮೆಂದು ಪ್ರಕಟಂಮಾಡಿ ಮರ್ದಂ ನವಣೆಯ ಪಿಟ್ಟನೊಳ್ ಕೂಡಿ ಕಿಱಿಯವಪ್ಪುಂಡೆಗಳಂ ಮಾಡಿ ತನ್ನ ಪದಿನಾಱುಸಾಸಿರ್ವರರಸಿಯರ ಮನೆಗೆಲ್ಲಮೀವುಂಡೆಗಳಂ ಮುನಿವಂದ್ಯರಿಂಗಿಕ್ಕುವುದೆಂದಟ್ಟುವುದುಂ ॥ ೮೮

ಅರಸಿಯರಾತ್ಮವಲ್ಲಭನ ಪೇೞ್ಕೆಯೊಳಾಮುನಿವಂದ್ಯನಂ ಮನಂ
ಮುರಿಯದೆ ನಿಚ್ಚಲುಂ ನಿಲಿಸಿ ನಿಮ್ಮಡಿಯುಂಡೆಯ ಪರ್ವಮೀಗಳೀ
ಪುರದೊಳಮೀಮಹೇಶ್ವರನ ಗೇಹದೊಳಂ ಬಗೆವಂದಿವೂಟಮೆಂ
ದಿರದವನಿಕ್ಕೆ ಕಾಂತೆಯರ ಮಾತನೆ ನಂಬಿ ಮುನೀಂದ್ರನಂತವಂ ॥ ೮೯

ಮೆಲುತ್ತುಮಿರ್ಪುದುಂ ಕೆಲವಾನುಂದಿವಸಕ್ಕೆ ತನುವಿನೊಳಾದ ಕುತ್ತಮೆಲ್ಲಂ [ಕ್ರಮದಿಂ ಪಿಂಗಿ] ಪೋಪುದುಂ [ನಾರಾಯಣಂ ದಂಡಕಋಷಿಯ ವ್ಯಾಧಿ ಪೋದುದಕ್ಕೆ ಮುಯ್ಮುದಮಾಗಿ ಸಂತೋಷದಿಂದಿರ್ಪುದುಂ, ವೈದ್ಯನುಂ ತನ್ನ ಮಾಡಿದ ಮರ್ದಿಂದಂ ರುಜೆಯೆಲ್ಲಂ ಪೋ

[1] ನರಸಂ ವಂದಿಸಿ ತನ್ಮುನೀಂದ್ರನ ವ್ಯಾಧಿಯಂ ಕಂಡು ತದ್ವ್ಯಾಧಿಯನೆ ಕಳೆವೆನೆಂದು (ಗ)

ಯ್ತನ್ನಿಂ ವೈದ್ಯರಧಿಕರಾರೆಂದು ಪೆರ್ಚಿ ಮೆಯ್ಯೆಱಿಯದೆ ತನ್ನ ವೈದ್ಯದ ಮಹಿಮೆಯಂ ನಾರಾಯಣಂಗೆ ತೋಱಿ ಮೆಚ್ಚುಗೊಳ್ವೆನೆಂದು ದಂಡಕಋಷಿಯಂ ಸಾರೆ ಕುಳ್ಳಿರ್ದು ನಾರಾಯಣನಲ್ಲಿಗೆವೆಂದು ॥ ೯೦

ಅರಸಂಗಂ ಮುನಿಪತಿಗಂ
ಕರಮಾದರದಿಂದಮೆಱಗಿ ಕುಳ್ಳಿರ್ದು ಮುನೀ ।
ಶ್ವರಮುಖಕಮಲಮುಮಂ ವಿ
ಸ್ತರದಿಂದಂ ನೋಡಿ ನುಡಿದನಾಗಳ್ ವೈದ್ಯಂ ॥ ೯೧

ನಿತ್ತರಿಸಬಾರದೆನಿಸುವ
ಕುತ್ತಂ ಕಯ್ಕೊಂಡು ಬಿಡದೆ ಪತ್ತಿರ್ದುದು ಲೋ ।
ಕೋತ್ತಮರನಿನ್ನೆವರೆಗಂ
ಮತ್ತೆನಿಸದೆ ಬಿಟ್ಟು ಪೋದುದೀಗಳ್ ನಯದಿಂ] [1] ೯೨

ಕಡುಲೇಸಾಯ್ತೆಂದಾತಂ
ತಡವಿಲ್ಲದೆ ಭಾಷೆಯಿಂದಮೆಂದೊಡೆ ಮುನಿಪಂ ।
ನುಡಿದಂ ಕರ್ಮದಿನಕ್ಕುಂ
ಕಡುದುಃಖಂ ಕಿಡುಗುಮತ್ತಮದಱುಪಶಮದಿಂ ॥ ೯೩

ಅದಾವುದು ಚೋದ್ಯಂ [ದುಃಖಂ ಕರ್ಮದೊದವಿನೊಳಮದಱುಪಶಮದಿಂ ಸುಖಂ ಸಮನಿಸುಗುಮೆಂದು ಮುನಿರಾಯನವನಭಿಪ್ರಾಯಮನಱಿಯದೆ ಜಿನಾಗಮದೋಜೆಯಿಂದುಳ್ಳುದನುಳ್ಳಂತೆ ನುಡಿವುದುಂ ವೈದ್ಯಂ ಮುನಿದೆನ್ನ ಮಾಡಿದ ದಿವ್ಯೌಷಧದಿಂದುಪಶಮಮಾದುದೆನ್ನದೆ ಶುಭಕರ್ಮೋದಯಂ ಕಳೆದುದೆಂದೆನ್ನ ವೈದ್ಯಮನರಸನ ಮುಂದೆ ಕುಂಟುಮಾಡಿದನೆಂದು ಋಷಿಯ ಮೇಲೆ ಕೋಪಂ ಪುಟ್ಟೆ ಪಲಕಾಲಕ್ಕೆ ಪಿರಿದಪ್ಪಾರ್ತಂ ಪುಟ್ಟಿ] [2] ಸತ್ತು ಕೋಡಗಮಾಗಿ ಪುಟ್ಟಿದನಿತ್ತಲ್ ॥ ೯೪

---

1 ವೈದ್ಯಂ ಬಂದರಸಂಗಂ ಮುನೀಂದ್ರಂಗಂ ಪೊಡವಟ್ಟು ನಿಮ್ಮಡಿಗಳ ಕುತ್ತಮೀಗಳ ಲೇಸಾಗಿ ಪೋದುದೆಂಬುದುಂ ॥ (ಗ)

2 ಎಂಬುದುಂ ವೈದ್ಯಂ ರುಷಿಯರಮೇಲೆ ಕೋಪಂ ಪುಟ್ಟಿಪಿರಿದಪ್ಪಾರ್ಥದಿಂ(ಗ)

ಯತಿನಾಥನುಮೊಂದ್ಸ್ವರಾ
ವತಿಯಂ ಪೊಱಮಟ್ಟು ಮುನ್ನಿನಾ ಕ್ರಮದಿಂದಂ ।
ಕ್ಷಿತಿಯೊಳ್ ವಿಹಾರಿಸುತ್ತುಂ
ನುತವಾಕ್ಯಂ ತತ್ಕಪೀಂದ್ರನಿದ್ರ್ದಾಬನಮಂ ॥ ೯೫

ಪೊಕ್ಕೊಂದುಮಾವಿನ [ಮರದ] ಕೆಳಗೆ ಶುದ್ಧಮಪ್ಪೆಡೆಯಂ ಪ್ರತಿಲೇಖನಂಗೆಯ್ದು ಕುಳ್ಳಿರ್ದು ಪಂಥಾತಿಚಾರಮಂ [1] ಮಾಡುತ್ತುಮಿರ್ಪುದುಂ, ಮುನ್ನಿನ ವೈದ್ಯಚರನಪ್ಪ ಕೋಡಗಂ ಕಂಡು ಜಾತಿಸ್ಮರನಾಗಿ ಪೂರ್ವವೈರಮಂ ನೆನೆದು ॥ [2] ೯೬

[ಸೊಕ್ಕಿಂದಂದೆನ್ನಂ ಕರ
ಮುಕ್ಕಿಸಿಯಂಭೋರುಹಾಕ್ಷನಾಸ್ಥಾಯಿಕೆಯೊಳ್ ।
ದಕ್ಕುಂದಲೆವಾಯ್ದೀಮುನಿ
ಯುಕ್ಕಂ ಲೇಸಾಗಿ ಕಿಡಿಸಿ ನೋವಂ ಮಾಪ್ಪೆಂ ॥] ೯೭

ಎಂದು ಕಪಿ ಮಸಗಿ ಮರ್ಕಟ
ವೃಂದಂಬೆರಸೊಂದುಮಾವಿನೊಣಗಿದ ಕೊಂಬಂ ।
ತಂದಿಕ್ಕುವುದುಂ ಮುನಿಜನ
ವಂದಿತಪದಯುಗನ ತೊಡೆಯನಿರ್ಮ್ಮುಯ್ಗಾಣಲ್ ॥ ೯೮

ಅದು ಚಿಕ್ಕನಲುರ್ಕುವುದುಂ
ಸದಮಲಚಾರಿತ್ರನಳ್ಕಿ ತಲ್ಲಣಿಸದೆ ಬೆ ।
ಚ್ಚದೆ ನೊಂದೆನೆಂದು ಮನದೊಳ್
ಕುದಿಯದೆ ತನುವೆನ್ನದಲ್ಲದೆಂಬಂತಿರ್ದಂ ॥ ೯೯

[3] [ಮೋನದಿಂ ಮುನಿನಾಥನಿರ್ಪುದುಮಾಗಳಾಕಪಿ ನೋಡಿ ಸಜ್ಜಾನಿ ಮಂದರಧೈರ್ಯನೀಮುನಿ ತನ್ನ ದೇಹಮನೊಲ್ಲದಂ

1 ಪಂಥಾಚಾರನೇಮಮುಂ (ಗ) 2 ನೆನೆದುಕೊಲಲೆಂದು (ಗ)
3 ಅಂತಿರ್ಪುದುಂ (ಗ)

ಗಾನು ಮಾಡುವೆನೆಂಬುದೆಗ್ಗಱವೈದ್ಯಮಂ ಕಡುಪಾಪಿಯಿಂ
ಹೀನನೆಂ ಕರಮೆಗ್ಗನೆಂ ಮುನಿಸಿಂ ವಿಚಾರಣೆಯಿಲ್ಲದಾಂ ‖] ೧೦೦

ನಿರಪರಾಧಂಗೆ ನೋವಂ ಮಾಡಿದೆನೆಂದು ತನ್ನಂ ತಾನೆ ನಿಂದಿಸಿ ಕೊಂಡು ಪಲವುಕೋಡಗಂಗಳ್ವೆರಸು ತೊಡೆಯನುರ್ಚಿ ನಟ್ಟಿರ್ದ ಕೊರಡಂ ಕಿೞ್ತು ಕಳೆದು ತಾಂ ಮುನ್ನಂ ವೈದ್ಯನಪ್ಪುದಱಿಂದಲ್ಲಿಗೆ ತಕ್ಕ ಮರ್ದಂ ಮಾಡಿ ಪುಣ್ಣಂ ಕಳೆದು ಬೞಿಕ್ಕಣುವ್ರತಧಾರಿಯಾಗಿ ಮುಡಿಪಿ ದೇವಗತಿವಡೆದುದಂತೆ ಕೆಲಂಬರ್ ಮೂರ್ಖರ್ ವಿಚಾರಣೆಯಿಲ್ಲದೆ ಸಾಧುಗಳಪ್ಪವರಂ ಬೞಿದೆ ಕಾಡುವರೆಂಬುದುಂ ಜಿನದತ್ತಸೆಟ್ಟಿ [ತನ್ನೊಳಿಂತೆಂದಂ ‖ ೧೦೧

ಪಡೆಯಲ್ಬಾರದ ಧನಮಂ
ಕಡುಲೋಭಂ ಕೊಂಡು ಕೈಗೆವಂದದನೆಂತುಂ ।
ಬಿಡಲಾಱದೆನ್ನ ಪೊನ್ನಂ
ಪಿಡಿದಿರ್ದಪನೇವನೆಂದು ಮನದೊಳ್ ನೋವಿಂ ‖ ೧೦೨

ಮೆಲಮೆಲಮಱುಗಿ ಕಿಱಿದುಬೇಗಂ ಹಮ್ಮರಂಬೋದರಂತುಸಿರದಿರ್ದು ಸೈರಿಸಲಾಱದಿನ್ನುಂ ಕಥೆಯನುಪಾಯದಿಂ ಪೇೞ್ದೆನ್ನ ಪೊನ್ನಂ ಕೊಳ್ವೆನೆಂದು] ಮತ್ತೊಂದುಕಥೆಯನಿಂತೆಂದು ಪೇೞ್ದಂ ‖ ೧೦೩

ಭಾನುಪುರಮೆಂಬ ಪುರದೊಳ
ನೂನಗುಣಂ ಕಪಿಲನೆಂಬ ಪಾರ್ವಂ ಸುಖದಿಂ ।
ತಾನಿರ್ದು ತನ್ನೊಳೊಮ್ಮೆ ಮ
ಹೀನುತನಾರಯ್ದು ಕಂಡನೊಂದೊಳ್ನಯಮಂ ‖ ೧೦೪

ಅನುಪಮವಿದ್ಯೆಗಳಂ ಬ
ಲ್ಲೆನವೋಘಂ ಬಲ್ಲೆನಾಗಿಯುಂ ಗಾರುಡಮೊಂ ।
ದನೆ ಕಲ್ಲದನ್ನೆವರೆಗಂ
ಜನಕೆಲ್ಲಂ ವಿದ್ಯೆಯಿಂದೆ ಬಿಣ್ಮಿದನಲ್ಲೆಂ ‖ ೧೦೫

ಎಂದು ಚಿಂತಿಸಿ [ಲಾಭಮುಂ ಕೀರ್ತಿಯುಮಿಂತಲ್ಲದಾಗದೆಂದು ಭಾನುಪುರಮಂ ಪೊಱಮಟ್ಟು ಗಾರುಡವಿದ್ಯೆಯನೆಲ್ಲಿ ಪೊಕ್ಕಪ್ಪೊಡಂ ಕಲಿವೆನೆಂದು ಪೂಣ್ದು] ಪೂರ್ವದೇಶಕ್ಕೆವೋಗಿ ತದ್ದೇಶದೊಳೂರ್ವ ಪ್ರಸಿದ್ಧನಪ್ಪ ಮಂತ್ರವಾದಿಯುಂ ಪೊರ್ದಿ ॥ ೧೦೭

[ತಿರಿದುಂಡಾತನ ಪೇೞ್ಕೆಗೆಯ್ದು ಕಪಟೋಪಾಯಂಗಳಿಂ ಉಲ್ಲೆಯಿಂ ದರಿದೆಂದೋವದೆ ಶಿಷ್ಯವೃತ್ತಿಯನವಂ ಪೂಣ್ದಿರ್ಪುದುಂ ನಾಡೆಯುಂ ಕರುಣಂಬಟ್ಟುಪದೇಶಮಂ ಕುಡುವುದುಂ ಕೈಕೊಂಡು ತದ್ದೇಶದಿಂ ಬರುತುಂ ಬಟ್ಟೆಯೊಳೊಂದು ಸತ್ತ ಪುಲಿಯುಂ ಕಂಡಾಗಳಂತಾದ್ವಿಜಂ॥

ಪಾವು ಕೊಂಡು ಸತ್ತಿತ್ತೆಂದಱಿದು ಕಾರುಣ್ಯದಿಂ ತನ್ನ ಮಂತ್ರಮಂ ನಚ್ಚುವವೆನಪ್ಪುದಱಿಂ] [1] ೧೦೮

ನೀರಂ ಮಂತ್ರಿಸಿ ತಳಿಯೆ ಚ
ಮೂರಂ ವಿಷಮಿೞಿದು ರಾಗದಿಂದೆರ್ದ ಮಹಾ ।
ಕ್ರೂರತೆಯಿಂ ವಿಪ್ರನನುಪ
ಕಾರಂಬುದುಲಂಡ (?) ಮೆಂಬನಾಪ್ತಾಗೆ ದೆಯುವ್ರೋಲ್ ॥ ೧೦೯

ಪಿಡಿದೊತ್ತಿ ಸೀೞ್ದು ತಿಂದುದು
ಗಡ ನಿಮ್ಮಡಿ ತನ್ನನುಗ್ರಫಣಿ ಮುಳಿಸಿಂದಂ ।
ಮಡಿಪಿದೊಡೆತ್ತಿದನಂ ಕೂ
ಗಿಡೆ ನುಣ್ಣನೆ ನೊಣೆದೊಡಾವ ಧರ್ಮಂ ಮುನಿಪಾ ॥ ೧೧೦

ಎಂದುಸಿರದಿರ್ಪುದುಂ ಜಿನದತ್ತನ ಮನದ ಕಪಟವೃತ್ತಿಯನ ಱಿದು ತಮ್ಮ ಮನದ ಶುದ್ಧವೃತ್ತಿಯನುಪಾಯದಿಂದಾತಂಗೆ ಪೇೞ್ವಂತೆ ಮತ್ತೊಂದುಕಥೆಯನಿಂತೆಂದು ಪೇೞ್ದರ್ ॥ ೧೧೧

---

[1] ವಿಷವಾದಮಂ ಕಲ್ತು ಬರುತ್ತಮೊಂದು ಸತ್ತ ಪುಲಿಯುಂ ಕಂಡು ಕಾರುಣ್ಯದಿಂ ತನ್ನ ಮಂತ್ರಮಂ ನಚ್ಚುವನಪ್ಪುದಱಿಂ (ಗ)

ಕೇಸರಿಪುರವೆಂಬುದದಂ
ವಾಸವನೆಂಬವನಿಪಾಲನಾಳುತ್ತಿರ್ಪಂ ।
ಭಾಸುರಕೀರ್ತಿಪತಾಕಂ
ವಾಸವನಿಭವಿಭವನಮಳನೆಂಬಂ ಪೆಸರಿಂ [1] ॥ ೧೧೨

ರಾಜಶ್ರೇಷ್ಠಿ ತದ್ವಣಿಗ್ರಾಜ್ಞತನ ನಂದನಂ ವಿಮಳನೆಂಬ ಶಿಶು ಬಾಳಾಭರಣಸಮೇತ [ನಾಗಿ ನಿಚ್ಚಲುಂ ತನ್ನ ಮನೆಯಂಗಣದೊಳಾಡುತ್ತಿರ್ಪುದುಂ ॥ ೧೧೩

ನೆರೆಮನೆಯಾಕೆ ಕಂಡು ಕಡುವೇೞದಿನಾಶಿಶು ತೊಟ್ಟ ಮಿಂಚುವಾ
ಭರಣಮನೊಯ್ಯನೊಯ್ಯನಳಿಪಿಂ ಪೆಱರೇಗುವರೆನ್ನನೆಂದು ನಿ
ಷ್ಠುರೆ ಕರಮಲ್ಲದುಮ್ಮಳಿಸಿ ತಚ್ಛಿಶುವಂ ಪಿಡಿದೊತ್ತಿ ಗಂಟಲಂ
ಮುಱಿದು ಕವರ್ತೆ ಗೊಳ್ವತೆಱದಿಂ ಬಿಡದಾಭರಣಂಗಳೆಲ್ಲಮಂ ॥ ೧೧೪

ಕೊಂಡು ಮಗವಿನ ಪೆಣನನೀಮನೆಯೊಳ್ ಪೂೞ್ದನಪ್ಪೊಡೆ ವಿಷಮರಪ್ಪ ತಳಾಱರ ದೆಸೆಯಿಂದೆನಗೆ ಕೇಡು ಪುಟ್ಟುಗುಂ ಕಜ್ಜಮಲ್ಲದಿದನೀಗಳ್ ಕೊಂಡೊಯ್ದು ಬೀದಿಯೊಳಾಡುವ ಸಾದುಬಸವನ ಕೋಡಿನೊಳಗಿಕ್ಕಿ ಬುದ್ಧಿಯಿಂದೆತ್ತು ಕೊಂದುದು ಕೂಸನೆಂಬಂತು ಮಾಡಿ ದೂಱನೆತ್ತಿನಮೇಲಿಕ್ಕಿ ಸುಖದಿಂದಿರ್ಪೆನೆಂಬ ಸಮಕಟ್ಟನೆತ್ತಿಕೊಂಡು ಕೂಸಿನ ಪೆಣನನೊಯ್ದು ॥ ೧೧೫

ಪಗಲೆಲ್ಲಂ ತಿರಿತಂದು ಬೀದಿಗಳೊಳಾರಾನುಂ ಭರಂಗೆಯ್ದು ಕ
ಬ್ಬುಗಳಂ ಜೋಳವನಕ್ಕಿಯುಂ ಕಡಲೆಯುಂ ತೌಡಂ ಮನಂಪೆರ್ಚೆ ಪಿಂ
ಡಿಗಳಂ ಪುಲ್ಗಳನಿಕ್ಕೆ ಮೇದು ತಣಿವಿಂ ಮೆಲ್ಕೊತ್ತುಗುಂ ನೋಡ ಪ
ಟ್ಟಗವೇಂದ್ರಾಧಿಪನಲ್ಲಿಗಾಕುಟಿಲೆ ಬಂದಾಗಳ್ ಮನೋರಾಗದಿಂ ॥ ೧೧೬

ಕೂಸಿನ ಪೆಣನಂ ತಾಟಕಿ
ಲೇಸಾಗಿರೆ ಬಸವನೆಡದ ಕೋಡಿನಮೇಲ ।

1 ನೆಂಬುವನೋರ್ವಂ (ಗ)

ತ್ಯಾಸುರಮಪ್ಪಂತಿಕ್ಕಿ ನಿ
ವಾಸಕ್ಕಾಧೂರ್ತೆ ಪೋದಳನ್ನೆಗಮಿತ್ತಲ್ ॥ ೧೧೭

ಅಮರ್ದಿನೊಳ್ದೊರೆಯಪ್ಪ ಬಾೞೆಯ ಪಣ್ಣನೊಯ್ಯನೆ ಕೊಂಡು ಬಂ
ದಮಿತಸೌಖ್ಯನುದಾರನಾಮಣಿಗೀಶ್ವರಂ ಮಗನೆಲ್ಲಿದಂ
ಕಮಲಲೋಚನನೆಂದು ಪುತ್ರನ ಮೋಹದಿಂ ಬೆಸಗೊಳ್ವುದುಂ
ಭ್ರಮೆಯಿನೆಲ್ಲರುಮಲ್ಲಿಗಲ್ಲಿಗೆ ನೋಡಿ ಕಾಣದೆ ದುಃಖದಿಂ] [1] ॥ ೧೧೮

ಬೀದಿಬೀದಿಗಳೊಳೆಲ್ಲಂ ಪರಿದು ನೋಡುತ್ತುಮಿರ್ದು ಬಸವನ ಕೋಡಿನೊಳಿರ್ದ ಪೆಣನಂ ಕಂಡು ಮೆಯ್ಮಱಗಿ ಸೈರಿಸಲಾಱದೆ ಪಾಪಂ ಗೆಯ್ದಿತ್ತುಕೊಂದುದೆಂದು ಸುತ್ತಿ ಮುತ್ತಿಕೊಂಡು ಬಾಲಮಂ ಬಡಿದು ಕಂಡರ್ ಕಂಡ ಮುಖದೊಳ್ ನುಗ್ರುನುಗ್ಗಾಗೆ ಬಡಿವುದುಂ ಬಸವಂ ವೇದನೆಗಿರಲಾಱದೆ ಗೋೞುಟ್ಟೊಳಱು ದೆಸೆಗೆ ಬಿರ್ದು ಪರಿಯುತ್ತುಂ ತನ್ನ ಮನದ ನಿರ್ಮಲತೆಯನೆಲ್ಲರ್ಗಂ ತೋಱುವಂತೆ ಕಮ್ಮಱನ ಮನೆಯುಂ ಪೊಕ್ಕು ಕಾಸುತಿರ್ದ ಕಾಯ್ದ ಕಬ್ಬಿನಮಂ ಕರ್ಚಿ ನೆರೆದ ನೆರವಿಗೆ ಇದಿರಾಗಿ ಬರ್ಪುದುಂ ॥ ೧೧೯

ನೆರೆದು ನೋಡುವ ನೋಟಕರ್ ಬೆಱಗಾಗಿ ಮೋಣಿಸಿ ಪೊಯ್ಗಳಂ
ನಿರುತಮಿಂತಿದು ಕೊಲ್ಲದೀಮಗನಂ ಪೆಱರ್ ಧನಮಂಚಕರ್
ಕರುಣಮಿಲ್ಲದೆ ಕೊಂದರೆಂದು ತಳಾಱನಂ ಕ್ಷಣಮಾತ್ರದಿಂ
ಕರೆಮು ನೀನಿದನಿಂತುಪೇಕ್ಷಿಸಿ ಪೋಗಲೀಯದೆ ಕಳ್ಳನಂ ॥ ೧೨೦

ತರವೇೞ್ಕುಮೆಂದು ಪೇೞ್ವುದು
ಮರವರಿಸದೆ ಪೋಗಿ ನೋಡಿ ಬುದ್ಧಿಯ ಬಲದಿಂ ।

---

1 ನಾಗಿರ್ದನಾಮಗನಂ ನೆರಮನೆಯಾಕೆ ಕೊಂದಾಭರಣಮೆಲ್ಲಮಂ ಕೊಂಡು ಮಗವಿನ ಪೆಣನಂ ನೆರಮನೆಯೊಳ್ ಪೂಳ್ದನಪ್ಪೊಡೆ ವಿಷಮರಪ್ಪ ತಳಾಱರ ದೆಸೆಯಿಂ ದೆನಗೆ ಕಿಡುಗು ಪುಟ್ಟುಗುಮದುಕಜ್ಜಮಲ್ಲೆಂದು ಕೊಂಡೊಯ್ದು ಬೀದಿಯೊಳಾಡುವ ಬಡಸಾದುಬಸವನ ಕೋಡಿನೊಳಿಕ್ಕಿ ದೂರ್ತೆ ಪೋದಳನ್ನೆಗಮಿತ್ತಲ್ ಮಗವಿನಱಿಕೆಯಾಗಿ (ಗ)

ಪರಿಣತನಾರಯ್ದಱಿದಂ
ದುರಿತಂ ಪೊಳ್ಗುಂಟೆ ಕೊಂದವರ್ ಬದ್ದಪರೇ ॥ ೧೨೧

ಅಂತು ಕಳ್ಳೆಯಂ ಪಿಡಿದಂಗಂಬೆರಸು ತಂದು ಪ್ರಜೆಗೊಪ್ಪಿಸುವುದುಂ ಬಱಿಕ್ಕೆ ಬಡಸಾಧುಗೊಂದೆಯಂ ಬಱಿದೆ ವಿಚಾರಣೆಯಿಲ್ಲದೆ ಮುಱಿಯೆ ಮೋದಿದೆವೆಂದು ತಮ್ಮಂ ತಾವೆ ಬಯ್ದುಕೊಂಡರದಱಿಂ ಮಹಾತ್ಮರಪ್ಪರವಿಚಾರಿಗಳಾಗದೆ ವಿಚಾರಿಸಿ ನೆಗೞ್ವುದೆಂಬುದುಂ ಜಿನದತ್ತಸೆಟ್ಟಿ ಯತಿಪತಿವಚನಮಂ ಕೈಕೊಳ್ಳದೆ [ಮತ್ತಮಾಮಹಾತ್ಮನೆ ಕಳ್ಳನೆಂದು ಬಗೆದು ತನ್ನ ಮನದ ಮಱುಕದಿಂ ನಿಲಲಾಱದೆ ಮುನಿನಾಥಂಗಿನ್ನೊಂದುಕಥೆಯುಂ ಪೇೞ್ದು ಮೆಲ್ಲನೆನ್ನ ಪೊನ್ನಂ ತೆಗೆವೆನೆಂದು] ಮತ್ತೊಂದುಕಥೆಯನಿಂತೆಂದು ಪೇೞ್ದಂ ॥ ೧೨೨

ಭಾರತಿಯೆಂಬೊಂದುನದೀ
ತೀರದೊಳೊರ್ವಂ ಕಪಾಲಿಯೆಂಬಂ ಗೊರವಂ ।
ಧೀರಂ ತಾಪಸತಪಸಿನೊ
ಳಾರಿಂದಂ ಕರಮೆ ಪಿರಿಯನೆಂದೊಸೆದಿರ್ದಂ ॥ ೧೨೩

ಅಂತಿರ್ಪುದುಮೊಂದುದಿನಂ
ಸಂತತಮಱಿಯಟ್ಟಿ ಪಾವನೆೞಲಿಕ್ಕಿದವೋಲ್ ।
ತಾಂ ತಗುೞ್ದು ಕರೆವುದುಂ ಮೞೆ
ಕಾಂತಾರದ ಗಿರಿಯ ಪಿರಿಯ ಪೆರ್ವೊನಲೆಲ್ಲಂ ॥ ೧೨೪

ಬಂದಾಗೆ ಕೂಡೆ ತೊಱೆ ಪೆ
ರ್ಚಿಂದಂ ವಾರಾಶಿ ಮೇರೆದಪ್ಪಿದುದೆಂಬೊಂ ।
ದಂದದೊಳ್ ಬರ್ಪುದುಂ ಧರೆ
ಗೊಂದೊಂದಾಶ್ಚರ್ಯಮದ್ಭುತಂ ಪುಟ್ಟುವಿನಂ ॥ ೧೨೫

ಅಂತು ಪೊಲನುಂ ನೆಲನುಂ ಜಲಪ್ರಳಯಮಾಗೆ [ಬಂದ] ತೊಱೆಯೊಳೊಂದಾನೆಯ ಮೞಿ ಬಿರ್ದು ಪ್ರಾಣಭಯದಿಂ ತಲ್ಲಣಿ (ಸಿ) ಬೆರ್ಚಿ

ಬೇರ್ವೆರಸಿ ಕಿತ್ತು ಬರ್ಪ ಮತ್ತಿಯ ಪೆರ್ಮರನಂ ಪಿಡಿದು [ಕೊಂಡು] ಮರನುಮಂ ತಾನುಮಂ ಬರುತ್ತಿರ್ಪುದುಮಂ ಕಪಾಲಿಭಿಕ್ಷುಕಂ [1] ಕಂಡು ॥ ೧೭೬

[ಕರುಣಂ ಕೈಮಿಗೆ ಮನದೊಳ್
ನಿರುತಂ ತೊಱೆಯೊಳಗೆ ಪೊಕ್ಕೊಡೀಯುವಸರದೊಳ್ ।
ಮರಣಮೆನಗಕ್ಕುಮೆಂದರ
ವರಿಸದೆ ನೆರೆದಿರ್ದ ತನ್ನ ಚಟ್ಟುಂ ತಾನುಂ] ॥ ೧೭೭

ಬುದಿಲೆನೆ ತೊಱೆಯುಂ ಪಾಯ್ದು ಮಾತಂಗಕಳಭಮಂ ಪಿಡಿದು ಮರಂಬೆರಸು ತಡಿಗೆ ತಂದು ಮರನಂ ಪೋಗೆಬಿಟ್ಟು ತತ್ಕರಿಯಂ ಪೊಱಗಣ್ಗೆ ನೋಯಲೀಯದೆ ತೆಗೆದು ತದ್ಗಜದ ಮನದ ಭಯಮಂ ಪಿಂಗಿಸಿ ತನ್ನ ಮಠಕ್ಕೆ ತಂದು ॥ ೧೭೮

ಪುಳಿಗೂಱಿಂ [2] ತದಿಕಿನ ಕೆಂ
ದಳಿರಂ ಪಾಲ್ಗೆನೆಯುನೆಳೆಯ ಪುಲ್ಲಂ ಕಬ್ಬಂ ।
ಬಲವಂತನಕ್ಕುಮೆಂದು
ಜ್ವಲಚಿತ್ತಂ ತಂದು ಪೊರೆವುದುಂ ಗಜಶಿಶುವಂ ॥ ೧೭೯

ಕರಿಪತಿ ಬೆಳೆದು ಸುರೇಶನ
ಕರಿಗಂ ಮಿಗಿಲೆನಿಸಿ ಮರದೊಳಿರೆ ಪಿಸುಣರ್ ತ ।
ತ್ಕರಿಯಿರ್ದುದನೊಯ್ಯನೆ ತ
ಮ್ಮರಸಂಗಱಿಪುವುದುಮರಸನಱಿದಾಕರಿಯಂ ॥ ೧೮೦

ಕವಿಲೆಗಳಲ್ಲದೆ ಗೊರವ
ರ್ಗೆ ವಿರುದ್ಧಂ ಮದಗಜೇಂದ್ರಮೇವುದು ತಾನಾ ।
ದಿವಿಜಗಜನಿಭಕರೀಂದ್ರಮ
ನೆವಗಟ್ಟುವುದಟ್ಟದಿರ್ದೊಡಂ ತಾನಱಿವಂ ॥ ೧೮೧

[1] ಕಾಪಾಲಿ (ಗ)   [2] ಹಳಿಗೂಳಂ (ಗ)

ಎಂದರಸಂ ಕಾಪಾಲಿಯಲ್ಲಿಗಾನೆಯಂ ಬೇಡಿಯಟ್ಟುವುದುಂ ಕಾಪಾಲಿ ರಾಜಭೃತ್ಯರ ದೆಸೆಯಿಂದೆ ತತ್ಪ್ರಪಂಚಮನೆಲ್ಲಮನಱಿದು ಭಯಸ್ಥನಾಗಿ ಮದಸಿಂಧುರಮಂ ಕುಡುವುದುಂ ಅವರಾನೆಯ[ನರಸನಲ್ಲಿ ಗೊಯ್ದೊಪ್ಪಿಸುವುದುಂ ಮಹೀಧರನಾನೆಯಂ ಕೈಕೊಂಡಿರ್ಪುದುಂ॥೧೩೦

ಅರಮನೆಯೊಳಗಿರಲಾಱದೆ
ಕರಿ ಪಿಡಿಮಿಡಿಗೊಂಡು ನೆನೆದು ಮುನ್ನಿನ ನೆಲೆಯಂ ।
ಪರಿಹರಿಸಿ ಕಾಪಿನವರಂ
ಪರಿತಂದುದು ಮಠಕೆ ಮನದ ಮೋಹದಿನಾಗಳ್ ॥ ೧೩೩

ಅಂತು ಬಂದಿರ್ಪುದುಂ ಧರಣೀನಾಥಂ ಮದಮಾತಂಗಂ ಕಾಪಿನವರಂ ಕೊಂದು ತನ್ನ ಮುನ್ನಿನ ಮಠಕ್ಕೆ ಪೋದುದೆಂದು ಕೇಳ್ದು ತನಗಾಗಜದಮೇಲೆ ಮೋಹಮುಂಟಪ್ಪುದಱಿಂ ಮಾನಿಸರನಟ್ಟಿ ಮಗುಳೆ ತರಿಸಿ ಮುನ್ನಿನೆಡೆಯೊಳ್ ಕಟ್ಟಿಸುವುದುಂ ಮತ್ತಂ ನಿಲಲಾಱದೆ ಮಠವೆ ಗುಱಿಯಾಗಿ ಪೋಪುದುಂ ಮಹೀನಾಥಂ ಪಲವುಸೂಳ್ತರಿಸಿ ಬೇಸತ್ತು ಕಪಾಲಿಗೆ ಮುಳಿದೆನಗೆ ಕೊಟ್ಟಾನೆಯಂ ಕುಡಲಾಱದೆ ತನ್ನ ಮಠವನೆ ನಚ್ಚಿಸಿ ಪಿಡಿದಿರ್ದನಾದೊಡೇನಾಯ್ತು ತಾನೆನ್ನ ದೇಶದಿಂ ಪೊಱಮಟ್ಟು ಪೋಪುದೆಂದಟ್ಟುವುದುಂ ಕಪಾಲಿ ಭಯಸ್ಥನಾಗಿ ತಾನುಂ ತನ್ನ ಚಟ್ಟುಗಳುಮಾನೆಯುನರಮನೆಗೆ ತಂದರಸಂಗೊಪ್ಪಿಸಿ ತನ್ನ ಪೊಲ್ಲಮೆಯಂ ಪಿಂಗಿಸಿ ಮಗುಱ್ದು ಬಂದಿರ್ಪುದುಂ ಕರಿ ಮನದೊಳ್ ಮುಳಿದು ॥ ೧೩೪

ಅರಸಂ ನಾಲ್ಕಡಿಪೋಗವೇಪ್ದೊಡೆ ಭಯಂಗೊಂಡೆನ್ನನಾಸಾಧು ತಂ
ದರಸಂಗೊಪ್ಪಿಸಿ ಪೋದನಾತನೊಳಗೇಂ ಕೇಳ್ದೋಷಮಿಲ್ಲೆಂದು ನಿ
ಷ್ಕರುಣಂ ಮಾಣದೆ ಕೊಲ್ಲನೆಂಬ ಮುಳಿಸಿಂ ಬಂದಾತನಂ ಕೊಂದುದು
ರ್ವರೆಯೊಳ್ ನಿರ್ದಯರಪ್ಪ ದುರ್ಗುಣಯುತರ್ ತಾವೊಳ್ಳಿತಂ ಮಾಳ್ಪ
ರೇ] [1] ॥ ೧೩೫

1 ನರಸಂಗೊಪ್ಪಿಸೆ ಮದಗಜಂ ಮನದೊಳ್ ಮುನಿದು (ಗ)

ಧರೆಯಂ [1] ಮೆಟ್ಟ ಪಲಂಬರುಂ ದಯೆಯನೊಕ್ಕಾನಂದದಿಂದೀಕ್ಷಿಸು
ತ್ತಿರೆ ಕಾಪಾಲಿ ಮಹೀನುತಂ ಕರುಣದಿಂ ಪೊಕ್ಕೆನ್ನನಂದೆಯ್ದಿ ವಿ
ಸ್ತರದಿಂ ರಕ್ಷಿಸಿ ಕಾದನೆನ್ನದೆ ಗಜೇಂದ್ರಂ ಕೋಪದಿಂ ಬಂದು ನ
ಟ್ಟರುಳೊಳ್ಕೊಂದುದು ಬೌದ್ಧನಂ [2] ಧರಣಿಯೊಳ್ ನಿರ್ಧರ್ಮರೇಗೆಯ್ಯ
ರೋ ॥ ೧೩೬

ಎಂದು ಜಿನದತ್ತಸೆಟ್ಟಿ ಮಾಣ್ದುಸಿರದಿರ್ಪುದುಂ, ಜಿನಪಾಲಿತ ಮುನಿ [ನಾಥಂ] ನಕ್ಕು ಲೋಭಿಯ ಮನಮುಂ [3] ಬಂದ ತೊಱೆಯುಂ ಶುದ್ಧಮಾಗಲಱಿಯುವೆಂಬ ನಾಣ್ನುಡಿ [4] ಯನೀತಂ ನನ್ನಿಮಾಡಿದನಿನ್ನು ಮೊಂದು [5] ಕಥೆಯುಂ ಪೇೞ್ದೆನ್ನಮೇಗಣ ಪೊಲ್ಲಮೆಯಂ [6] ಪಿಂಗಿಸಿ ಕೊಳ್ವೆನೆಂದು ಮತ್ತೊಂದುಕಥೆಯನಿಂತೆಂದು ಪೇೞ್ದಂ ॥ ೧೩೭

ದಂತಿಪುರಮೆಂಬ ಪೊೞಲೊಳ್
ಕಂತುವಿನರಲಂಬೆ ಪೆಣ್ಣು ರೂಪಾಯ್ತೆನ್ನಂ ।
ಬಂತೆಸೆವ ಚೆಲ್ವೆಯೊರ್ವಳ
ನಂತಶ್ರೀಯೆಂಬ ಸೂಳೆ ಸುಖದಿಂದಿರ್ಪಳ್ ॥ ೧೩೮

ಆಕೆಯ ಕೆಳದಿ ವಾಸವದತ್ತೆಯೆಂಬಳನಂತಶ್ರೀಗೊಂದುಗಿಳಿಯಂ ಮಾಱುಗೊಂಡು ಕೂರ್ಮೆಯಿಂ ತಂದು ಕುಡುವುದುಂ ಗಿಳಿಯ ಚೆಲ್ವಿಂಗೆ ನಾಡೆಯುಂ ಮನದೊಳ್ ಸೋಲ್ತು [ವಾಸವದತ್ತೆಗೆ ಮೆಚ್ಚುಗೊಟ್ಟು] ಪೊನ್ನ ಪಂಜರದೊಳ್ ಗಿಳಿಯನಿರಿಸಿ ನಾನಾಪ್ರಕಾರದ ಸೂಳ್ಮಾತುಗಳಂ ಶೃಂಗಾರವೃತ್ತಂಗಳುಮಂ ಕಲಿಸುತ್ತುಂ ಪರಮಸ್ನೇಹದಿಂ ಗಿಳಿಯ ವಿನೋದಮೆ ವಿನೋದಮಾಗಿ ಪಲವುದಿವಸಂ ಪೋಗೆ [ವೋಗೆ] ॥ ೧೩೯

[ಸಿರಿಗಂ ಸೌಭಾಗ್ಯಕ್ಕಂ
ಪಿರಿಯಳ್ ಕೈಕೊಳ್ಳದಾರುಮಂ ಮದದಿಂದಂ ।

[1] ದರಿಯಂ (ಗ) [2] ಕೊಂದೆಯೆ ಪೋಯಿತಾರ (ಗ)
[3] ಧನಮುಂ (ಕ. ಬ.) [4] ನಾಳ್ನುಡಿ (ಗ)
[5] ನಿಮಂಗಿನ್ನೊಂದು (ಗ) [6] ಶಂಕೆಯಂ (ಗ)

ಧರಣಿಯೊಳನ್ನೆನಗಾರುಂ
ಸರಿಯಲ್ಲರವೋಘಮೆನುತುಮಿರ್ಪಳಗುರ್ವಿಂ ॥ ೧೪೦

ಮತ್ತಮವಳ ಸೌಭಾಗ್ಯದ ಪೆಂಪೆಂಬ ಪೆಸರೊಳಡಕೆಯ ಭಾಗದ ಭಾಗವಿಲ್ಲೆಂದು] ॥ ೧೪೧

ಪುರದೊಳಗಣ ಸೂಳೆಯರೆ
ಲ್ಲರುಮಾಕೆಗೆ ಮುನಿದು [ಕೊಲ್ವ ಬಗೆಯಂ ತಂದಾ ।
ದರದಿಂ ವಾಸವದತ್ತೆಯು
ನೆರಡಿಲ್ಲದೆ ತಮಗೆ ಮಾಡಿಕೊಂಡನುನಯದಿಂ] ॥ ೧೪೨

ಮೆಲ್ಲನೆ ವಾಸವದತ್ತೆಗೆ
ಕೊಲ್ಲಾಕೆಯನೆಂದು ಕೊಟ್ಟು ಪಲವುಂ ಪೊನ್ನಂ ।
ಕಳ್ಳೊಳಗೆ ಕಾಳಕೂಟಮ
ನೆಲ್ಲರುಮೊಂದಾಗಿ ಕೂಡಿ ಕೂಡುವುದುಮಾಗಳ್ ॥ ೧೪೩

ವಾಸವದತ್ತೆ ಪೊನ್ನ ಮೋಹದಿನಂತೆಗೆಯ್ವೆನೆಂದು ಪಲರನುಮತದಿಂ ಕಳ್ಳಂ ಕೊಂಡು ಬಂದು [ಕೂರ್ತು ತನ್ನ] ನಂತಶ್ರೀಗೆ ಕುಡುವುದುಂ [ಅನಂತಶ್ರೀಯುಂ ॥ ೧೪೪

ಇಲ್ಲಿರಿಸಿ ಪೋಗು ಕಳ್ಳಂ
ಮೆಲ್ಲನೆ ಬಯ್ಗಿಂಗೆ ಕುಡಿವಮಿರ್ವರು ನೀನಿಂ ।
ತಿಲ್ಲಿಗೆ ಬಾಯೆಂದಾಕೆಗೆ
ಸಲ್ಲಲಿತಲತಾಂಗಿ ಮೆಚ್ಚುಗೊಟ್ಟಾದರದಿಂ ॥ ೧೪೫

ಮನ್ನಿಸುವುದುಮಾಕೆಯುಂ ಸಂತೋಷಂಬಟ್ಟು ಕಳ್ಳಂ ಮಂಚದ ಕೆಳಗಿರಿಸಿ ತನ್ನ ಮನೆಗೆ ಪೋದಳಿತ್ತಲನಂತಶ್ರೀಯುಂ ಪಾಸಿನಮೇಲೆ ಪಟ್ಟಿರ್ದಳನ್ನೆಗಂ] ಪಂಜರದೊಳಿರ್ದ ಗಿಳಿ [ಕಾಜಿನ ಬಟ್ಟಲೊಳಿರ್ದ ಸುರಾಪಾನಮಂ ನೋಡುತ್ತುಮಿರ್ಪುದುಂ] ಕಳ್ಳ ಗಂಧಕ್ಕೆ ಮೊಗಸಿದ

ನೊಣಂಗಳೆಲ್ಲಂ ಸಾವುದಂ ಕಂಡು ವಿಷಮೆಂದಱಿದು ತನ್ನೊಳಪ್ಪ ಕಾರುಣ್ಯಬುದ್ಧಿಯಿಂದೀಕಳ್ಳಂ ಕುಡಿದಳಪ್ಪೊಡನಂತಶ್ರೀ ಸಾಯ್ಗುಮೆಂದು ಗೂಡಿಂ ನೆಲಕ್ಕೆವಾಯ್ದು ಬಟ್ಟಲ ಕಳ್ಳಂ ನೆಲಕ್ಕುಗುವುದುಂ ॥ ೧೪೬

ಬೇಗಮನಂತಶ್ರೀ ಮುಳಿ
ದಾಗಿಳಿಯಂ ಕೊಂದು ಬಱಿಕಮಾಕಳ್ಳಂ ನಿ।
ರ್ವೇಗಂಬಟ್ಟಱಿತುಂ ನೋ
ಪ್ಪಾಗಳ್ ಕಳ್ಗಱಿಗಿ ಸಾವ ಮಾಕ್ಷಿಕತತಿಯಂ ॥ ೧೪೭

ತೊಟ್ಟನೆಕೊಳೆ ಕಂಡು ಮನಂ
ಗೆಟ್ಟಿರ್ದೆಯಂ ನೀವಿಕೊಂಡು ವಿಷಯುಕ್ತಮಿದಂ।
ನೆಟ್ಟನೆ ಕುಡಿದೊಡೆ ಮರಣಂ
ತೊಟ್ಟನೆ ಸಮನಿಸುಗುಮಲ್ಲಿ ಸಂದೆಯಮುಂಟೇ ॥ ೧೪೮

[ಈ ಗಿಳಿಯಿಂ ಧರ್ಮದಿಂದೊರ್ವೆಗೆ ಬದರ್ಂಕಿದೆನೆನಗುಪಕಾರಂಮಾಡಿದ ಗಿಳಿಯಂ ವಿಚಾರಿಸದೆ ಕಳ್ಗುಡಿಕಿಗಳುಂ ನಿರ್ದಯರುಂ ಮಾಡದ ಪಾಪಮಿಲ್ಲೆಂಬ ನುಡಿಯಂ (ನನ್ನಿ) ಮಾಡಿದೆಂ ಮಹಾಪಾಪಿಯೆಂದುತನ್ನಂ ತಾನೆ ಬಯ್ದುಕೊಂಡು ಬಱಿಕ್ಕಂ] [1] ಮಱುಗಿ ಗಿಳಿಯ ಪೆಣನನೆರ್ದೆಯ ಮೇಲಿಕ್ಕಿಕೊಂಡಬ್ಬಿಳಂಬಂತೆ ಬುದ್ಧಿವಂತರ [ಪ್ಪರಾಕೆಯಂತ]ವಿವೇಕಿಗಳಾಗದೆ [ನೆಗಱ್ವುದಲ್ಲದೆ ಕೆಮ್ಮನುದ್ಧತಿಕ್ಕೆಯಿಂ ನಿರ್ದೋಷಿಗಳ ಮೇಲೆ ದೋಷಮಂ ಮಾಡವೇಡೆಂಬುದುಂ ॥

ಮುನಿಪತಿಯು ಮಾತನೆಂತುಂ
ಮನದೊಳ್ ಕೈಕೊಂಡು ಶುದ್ಧರೆನ್ನದೆ ಮತ್ತಂ।
ಧನದೆಱಕದಿಂದಮಾಮುನಿ
ಜನವಂದಿತಪಾದಪಂಕಜಂಗಾಪರದಂ] [2] ॥ ೧೫೦

[1] ಎಂದು (ಗ)   [2] ವಿಚಾರಿಸಿ ನೆಗಳ್ವುದೆಂಬುದುಂ (ಗ)

ಮತ್ತಮೊಂದು ಕಥೆಯನಿಂತೆಂದು ಪೇಳ್ವಂ ॥ ೧೫೧

ವರಮುನಿವಲ್ಲಭ ಕೇಳ
ಚ್ಚರಿಯಪ್ಪೀಕಥೆಯನವನಿಭೂಷಣಮೆಂಬಾ ।
ಪುರದೊಳ್ ಬಡಗಿಯದೊರ್ವಂ
ಕರಕುಶಲಂ ಬುದ್ಧಿವಂತನಿರ್ದೊಂದುದಿನಂ ॥ ೧೫೨

ಮರನಂ ಕಡಿಯಲೆಂದು ವಿಂಧ್ಯಾಚಳಪರ್ವತಕ್ಕೆ ಪೋಗಿ ॥ ೧೫೩

ತರತರದಿಂದಂ ಗಗನಂ
ಬರೆಗಂ ನೀಳ್ದೊಪ್ಪಿ ತೋರ್ಪ ಭೂಜಂಗಳನಾ ।
ದರದಿಂ ನೋಡುತುಮಿರ್ಪವ
ಸರದೊಳ್ ಮದದಾನೆಯೊಂದು ಕಂಡತಿಭರದಿಂ ॥ ೧೫೪

ಗಿಱ್ಱನೆ ಪರಿತರೆ ಬಡಗಿಯು
ಸುಱ್ಱನೆ ಸುಗಿದಂಜಿ ನಡುಗಿ ವನದೊಳಗೆಲ್ಲಂ ।
ತಿಱ್ಱನೆ ತಿರಿತಂದು ಖಳಂ
ಖಱ್ಱನೆ ತನು ಕಂದಿ ಕುಂದಿ ಭಯವಶದಿಂದಂ ॥ ೧೫೫

ಓಡಲಾಱದೊಂದುಪೆರ್ಮರನನೇಱುವುದುಂ ಮದಗಜೇಂದ್ರಂ ಕೊಲಲಾಱದೆ ಕಿಱಿದುಬೇಗಮಿರ್ದು ಮತ್ತೊಂದುದೆಸೆಗೆ ಪೋಪುದುಂ ಬಡಗಿ ಮರದಿಂದಮಿೞಿದು ॥ ೧೫೬

[ಆಮದೇಭಮಡರ್ತು ಕೋಪದಿನೆನ್ನನಟ್ಟಿ ತಗುಳ್ದು ಬಂ
ದೀಮಹೀಜಮನೇಱೆ ಬರ್ದೆನದಿಲ್ಲದಂದೆರಡಿಲ್ಲದಾ
ಸಾಮಜಂ ತುಳಿದಿಕ್ಕಿ ಕೊಲ್ಲದೆ ಮಾಣದಾನದಱಿಂದಮಿಂ
ತೀಮರಕ್ಕುಱಿವಂ ವಿಮೋಹಿಸಿ ಮಾಡಲಾಗದು ನಿಶ್ಚಯಂ] [1] ॥ ೧೫೭

1 ಆನೆಯಂ ಬಾಱಿಯು ಕಾದುದೂ (ಗ)

ಎನ್ನದೆ ಬಡಗಿ ಕನಿಷ್ಠಂ
ತನ್ನಳಿಪಿಂ ಕಡಿದನಾಗಳಾಪುರನಂ ಪು ।
ತ್ತನ್ನದೆ ದುರ್ಜನನಪ್ಪಂ
ಸನ್ನುತರಂ ಕಿಡಿಪನೆಂಬುದಾವುದು ಚೋದ್ಯಂ ॥ ೧೫೮

ಎಂದು ವೈಶ್ಯಾತ್ಮಜನುಸಿರದಿರ್ಪುದುಂ ಮುನಿಕುಂಜರಂ [ಸೆಟ್ಟಿಯ ಮಾತಿಂಗೆ ವಿಸ್ಮಯಂಬಟ್ಟು ಸಂಶಯತುಲಾರೋಹಣನಪ್ಪೀತನನೆಂತುಂ ನಂಬಿಸುವುದರಿದೆಂದು ನಕ್ಕು ಮತ್ತಂ ತನ್ನ ಪೊಲ್ಲಮೆಯಂ ಪಿಂಗಿಸಲೆಂದು] (ಇಂತೆಂದಂ) ॥ ೧೫೯

ಜಿನದತ್ತ ಕೇಳ ಕಥೆಯೊಂ
ದನಪೂರ್ವಮನಮರಖೇಟಮೆಂಬೂರೊಳ್ ಮೇ ।
ದಿನಿದೇವನೊರ್ವ ನಿರ್ಪಂ
ಜನವಿನುತಂ ಚಂದ್ರದತ್ತನೆಂಬಾಪೆಸರಿಂ ॥ ೧೬೦

ಆತನ ಪೆಂಡತಿ ಯಜ್ಞದತ್ತೆಯೆಂಬಳಾಕೆಯೊಂದುಮುಂಗುರಿಯಂ ನಡಪಿ ಪಿರಿದುಮಕ್ಕರಿಂ ಕೊಂಡಾಡುತ್ತುಮಿರ್ದೊಂದುದಿವಸಂ ॥ ೧೬೧

ತೊಟ್ಟಿಲೊಳು ತನ್ನ ಕೂಸಂ
ಪಟ್ಟಿರಿಸಿ ಲತಾಂಗಿ ಪೊತ್ತುವೋಗಿಂಗೆ ಮನಂ ।
ಮುಟ್ಟದೆಡೆವೋದವಳನ್ನೆಗ
ಮೊಟ್ಟಜೆಯಿಂ ಪಾವು ನಿದ್ರೆಗೆಯ್ದಾ ಮಗವಂ ॥ ೧೬೨

ಬಂದು ಕೊಲಲಿರ್ಪುದುಂ ಪರಿ
ತಂದುರಗನನಟ್ಟಿ ಪಿಡಿದು ಮುಂಗುರಿ ಕೊಂದಾ ।
ನಂದಂ ಬೆರಸಿದಿರಂ ಪರಿ
ತಂದಾಕೆಯ ಕಾಲಮೇಲೆ ಪೊರಳ್ವುದುಮಾಗಳ್ ॥ ೧೬೩

ಮುಂಗುರಿಯ ಬಾಯ ನೆತ್ತರಂ ಕಂಡು ಶಿಶುವಂ ಕೊಂದುದೆಂದು ಮುನಿದು ತನ್ನ ಪಿಡಿದಿರ್ದೊನಕೆಯನೆತ್ತಿ ಮುಂಗುರಿಯ [ತಲೆಯ] ನಿರ್ಪೋಟಾಗೆ ಪೊಯ್ದು ಕೊಂದು ॥ ೧೬೪

ಮಱುಗಿ ಕಂದಿದೊಳಱಿ ಕೆಟ್ಟಂ
ಕಱುವೇ ನಾನೇವೆನೆಂದು ಬಂದೊಳಗಂ ಪೊ ।
ಕ್ಕೊಱಗುವ ಕಂದನುಮಂ ಸ
ತ್ತುಱಿಕೆಯ ವಿಷಧರನ ಪೆಣನುಮಂ ಕಂಡಾಗಳ್ ॥ ೧೬೫

ಮತಿಗೆಟ್ಟು ಮಗುಳ್ ನೋಡಹಿ
ಪತಿಯಂ ಕೊಂದಿಕ್ಕಿ ಬೇಗಮೆನ್ನಾತ್ಮಜನಂ ।
ಧೃತಿವೆರಸು ಕಾದ ಮುಂಗುರಿ
ಗತಿಶಯಮಂ ಮಾಡಿ ಪಿರಿದುಮತ್ಯಾದರದಿಂ ॥ ೧೬೬

ಕೊಂಡಾಡದೆ ಕೊಂದೆನೆಂದು ಬಱಿಕ್ಕಂ ಮಿಡುಮಿಡುಮಿಡುಕಿ ಮಱುಗಿದಳಂತೆ ಸತ್ಪುರುಷರುಮಾಕೆಯಂತವಿಚಾರಿಗಳಾಗದೆ ವಿಚಾರಿಸಿ ನೆಗೞ್ವುದೆಂಬುದುಂ ಜಿನದತ್ತಸೆಟ್ಟಿ [ಮತ್ತಂ ಮನದ ಸಂಶಯಂ ಪೋಗದೆ ಮೋಹವಶದಿಂ ಮುನೀಂದ್ರನ ಮಾತಂ ಕೈಕೊಳದೆ ಧನದೆಱಕದಿಂದಿನ್ನುಪಾಯದಿನೆನ್ನ ಪೊನ್ನಂ ಕೊಳ್ವೆನೆಂದು ಮತ್ತೊಂದು ಕಥೆಯನಿಂತೆಂದು ಪೇೞ್ದಂ] ॥ ೧೬೭

ಜಿನಪಾಲಿತಮುನಿಪತಿ ಮೋ
ದಿನಿವಂದಿತ ಕಥೆಯನೊಂದನವಧಾರಿಸಿ ಕೇ ।
ಳನಘ ಮನವೊಲ್ದು ಕಾಮುಕ
ವನಮೆಂಬುದು ದುರ್ಗಮುಂಟು ಕೇಳ್ ತದ್ವನದೊಳ್ ॥ ೧೬೮

ಪಿರಿದಪ್ಪ ಪುರಾಣಕೂಪಮುಂಟಾಕೂಪದೊಳ್ ॥ ೧೬೯

ಗರಧರನುಂ ಪುಲಿಯುಂ ವಾ
ನರನುಂ ಬಿಡದಕ್ಕಸಾಲೆಯುಂ ಬಿರ್ದಿರೆ ಭೂ ।
ಸುರನೊರ್ವಂ ಗಂಗೆಗೆ ಸ
ಚ್ಚರಿತಂ ಪೋಗುತ್ತುಮಿರ್ದು ಕೌಶಿಕನೆಂಬಂ ॥ ೧೭೦

ನೀರಡಸಿ ತತ್ಕೂಪದೆಡೆಯಂ ವನಚರರಿಂದಱಿದು [ಬಾವಿಯ ತಡಿಯೊಳ್ ನಿಂದು ತನ್ನುಟ್ಟುಂಬ ಪಡಕೆಯು ಕೋಲೊಳ್ ಬಳ್ಳಿಯಂ ಕಟ್ಟಿ ನೀರಂ ಸೇದಲೆಂದು ಬಾವಿಯೊಳಗಿಕ್ಕುವುದುಂ ॥ ೧೩೧

ತಡೆಯದೆ ಸೇದೆಯು ನೇಣಂ
ಪಿಡಿದಿರೆ ಪುಲಿ ತೋಯುವೆಂದು ತದ್ವಿಪ್ರಂ ನೇ ।
ರ್ಪಡೆ ಪೆರ್ಚಿ ತೆಗೆಯೆ ಪುಲಿ ಬಂ
ದೊಡೆ ಭಯದಿಂ ನೋಡುತಿರ್ಪುದುಂ ತದ್ವ್ಯಾಘ್ರಂ ॥ ೧೩೨

ಕೌಶಿಕಂಗೆ ಪೊಡೆಮಟ್ಟು ನಿಮ್ಮ ಪ್ರಸಾದದಿಂ ಪ್ರಾಣಭಯಂ ಪಿಂಗಿದುದೆನ್ನಂ ಬೆಸಕೆಯ್ಸಿಕೊಳ್ವುದೆಂದು ತನ್ನ ನೆಲೆಗೆ ಪೋಯ್ತಿತ್ತಲ್ ॥ ೧೩೩

ನೀರಟ್ಕೆ ಪೆರ್ಚಿ ವಿಪ್ರನು
ದಾರಂ ಪುತ್ತಿಕ್ಕೆ ಬಾವಿಯೊಳ್ ಸೇದೆಯುನಂ ।
ತೋರಂತೆ ಪಾವು ಪಿಡಿದಿರೆ
ವೀರಂ ನೀರೆಂದು ತೆಗೆವುದುಂ ತತ್ಕ್ಷಣದಿಂ ॥ ೧೩೪

ಪಾವು ಬಂದೊಡೆ ಪಾವಂ ನೋಡಿ ಬೆಱಗಾಗಿರ್ಪುದುಂ ಫಣಿಪತಿ ಕೌಶಿಕಂಗೆ ಪೊಡೆಮಟ್ಟು ನಿಮ್ಮ ಪ್ರಸಾದದಿಂದೊಂದು ಕಂಟಕಂ ಪೋಯ್ತೆಂದು ನಿಮ್ಮ ಮಾಡಿದುಪಕಾರಮನೆಂದಿಂಗಂ ಮಱೆಯಲ್ಬಾರದು ನಿಮಗೊಂದೇನಾನುಮಾಪತ್ತಾದೊಡೆ ಮಱೆಯದೆ ನೆನೆವುದೆಂದು ತನ್ನಿರ್ಪಾವಾಸಕ್ಕೆ ಪೋಯ್ತನ್ನೆಗಂ ॥ ೧೩೫

ಪಿರಿದಪ್ಪ ತೃಷ್ಣೆಯಿಂ ಭೂ
ಸುರನಾಗಳ ಮತ್ತೆ ಸೇದೆಯಂ ಭಾವಿಯೊಳೊ ।
ಪ್ಪಿರೆ ಬೇಗವಿಕ್ಕೆ ನೇಣಂ
ತ್ವರಿತಂ ಭಯದಿಂದೆ ಪಿಡಿಯೆ ವಾನರನಾಗಳ್ ॥ ೧೩೬

ನೀರೆಂದು ತೆಗೆವುದುಂ ಕೋಡಗಂ ಪೊಱಮಡೆ ಕೌಶಿಕಂ ಬೞಿಗಾಗಿರ್ಪುದುಂ ಮರ್ಕಟಂ ದ್ವಿಜಂಗೆ ವಿನತನಾಗಿ ನಿನ್ನ ಧರ್ಮದಿಂದೊಂದು ಸೂೞೆನಗೆ ಬಂದಪಮೃತ್ಯು ಪಿಂಗಿ ಪೋಯ್ತು ನಿನಗಾನೇನಂ ಮಾಡಿದೊಡಂ ಮಾಟಮಲ್ಲೆನ್ನಿರ್ಕೆಯುಮೀ ಕಾಮುಕವನಮೆ ನಿನ್ನ ಚಿತ್ತದೊಳವಧರಿಸಿ ಕಾರುಣ್ಯದಿಂದೊಂದವಸರದೊಳ್ ನೆನೆವುದೆಂದು ನಿಜಸ್ಥಾನಕ್ಕೆ ಪೋಪುದುಂ ॥ ೧೭೭

ಅಡಹಡಿಸಿ ತೃಷ್ಣೆಯಿಂದಾ
ಗಡೆ ವಿಪ್ರಂ ಬಾವಿಯೊಳಗೆ ಸೇದೆಯನಿಕ್ಕಲ್ ।
ಕಡುಭಯದಿಂದಂ ಮನದೊಳ್
ನಡುಗುತ್ತಿರ್ಪಕ್ಕಸಾಲಿ ಸೇದೆಯ ನೇಣಂ ॥ ೧೭೮

ಪಿಡಿವುದುಂ ನೀರೆಂದು ಪೊಱಗಣ್ಗೆ ತೆಗೆಯೆ ಸ್ವರ್ಣಕಾರಕಂ ಬರೆ ಕೌಶಿಕಂ ನೋಡಿ ಚೋದ್ಯಂಬಟ್ಟಿರ್ಪುದುಮಕ್ಕಸಾಲಿ ವಿಪ್ರಂಗೆ ಪೊಡೆಮಟ್ಟು ॥ ೧೭೯

ನೀನಿತ್ತ ಜೀವಮಿದು ಧರ
ಣೀನುತ ನೀನಿಲ್ಲದಂದು ಸಾವೆದು ಪುಸಿಯೇ ।
ಕಾನನದೊಳಿಲ್ಲಿ ನಿಮಗಾ
ನೇನಂ ಮಾಡುವೆನೊ ಮಾಡದಿರ್ದೊಡೆ ಕಷ್ಟಂ] [1] ॥ ೧೮೦

ಈನೆಗೞ್ದ ವನದ ಪೊರೆಯೊಳ್
ತಾನಗ್ಗದ ತಾಮ್ರಕೂಟಮೆಂಬುದು ಪೊೞಲಂ ।
ತಾನಗರದೊಳಾನಿರ್ಪೆಂ
ನೀನಲ್ಲಿಗೆ ಬರ್ಪುದೆಂದು ಕೈಮುಗಿದಾತಂ ॥ ೧೮೧

---

1 ಬಂದು ಬಾವಿಯೊಳ್ ಬಿದ್ದಿರ್ದ ಪಾವುಮಂ ಪುಲಿಯುಮಂ ವಾನರನುಮಂ ಕಾರುಣ್ಯದಿಂ ಪೊಱಮಡಿಸುವುದುಮವು ಪೊಱಮಟ್ಟು ಮಗುಳ್ದು ಬರ್ಪಾಗಳೆಮ್ಮಲ್ಲಿಗೆ ಬರ್ಪುದೆಂದು ಪೊಡರೆರಣಿಗೆನುಂ (ಗ)

ಪ್ರಾರ್ಥಿಸುವುದುಂ ಮಗುೞ್ದು ಬರ್ಪಾಗಳ್ ನಿನ್ನಲ್ಲಿಗೆ ಬಂದಲ್ಲದೆನ್ನ ನೆಲೆನೆ ಪೋಗೆನೆಂದಕ್ಕಸಾಲೆಯನೊಡಂಬಡಿಸುವುದುಮಾತನೊಡಂಬಟ್ಟು ತನ್ನ ಪುರಕ್ಕೆ ಪೋದನಿತ್ತಲ್ ಕೌಶಿಕಂ ತನ್ನಿಷ್ಟಸ್ಥಾನಕ್ಕೆ ಪೋಗಿ ಕೆಲವು ದಿವಸಕ್ಕೆ ಮಗುೞ್ದು ಬರುತುಂ ಕಾಮುಕವನಕ್ಕೆ ಬಂದು ಕೋಡಗನಿರ್ದಲ್ಲಿಗೆವರ್ಪುದುಂ ವಾನರ [ನಾನರನ] ನಱಿದು ಮುನ್ನಿನುಪಕಾರಮಂ ನೆನೆದು ಪಣ್ಬಲಂಗಳಂ ತಂದಿಕ್ಕುವುದುಂ ಪಸಿವು ಪೋಪನಂ ಮೆಲ್ದು ಪಥಪರಿಶ್ರಮಮಂ ಕಳೆದು ॥ ೧೯೨

ಪುಲಿಯಿರ್ಪ ಗುಹೆಗೆ ಬರ್ಪುದು
ಮಲಂಘ್ಯಗುಣನೆನ್ನನೆತ್ತಿದಾತಂ ಬಂದಂ ।
ಫಲಮಿತ್ತುದೆನ್ನ ಪುಣ್ಯಂ
ಕುಲಸಫಲಮುಮೆಂದು [1] ಪೆರ್ಚಿ ಪುಲಿ ಬಂದಿದಿರಂ ॥ ೧೯೩

ಅಂದು ಪೊಡೆಮಟ್ಟು ಪರಮಾ
ನಂದದಿನಟ್ಟಿತ್ತುರ್ ತಂದು ರತ್ನದ ತೊಡವಂ ।
ಮುಂದಿಡೆ ತದ್ವಿಪ್ರನುಮಾ
ನಂದದಿನವನರ್ತಿವೆರಸು ಕೊಂಡಾವನದಿಂ ॥ ೧೯೪

ಪೋಱಮಟ್ಟು ತಾಮ್ರಕೂಟಕ್ಕೆ ಬಂದು ಸ್ವರ್ಣಕಾರನ [ಮನೆಗೆ ಬರ್ಪುದುಂ ಪೂರ್ವೋಪಕಾರಮಂ ನೆನೆದಿದಿರಂ ಪರಿತಂದು ಪೊಡೆಮಟ್ಟಭ್ಯಾಗತಪ್ರತಿಪತ್ತಿಯುಂ ಮಾಡಿ ಬಟ್ಟೆಯು ಬೞಲ್ಕೆಯುಂ ಕಳೆದು ಕೌಶಿಕನಂ ಕೊಂಡಾಡುತಿರ್ಪುದುಂ ಮಱುದಿವಸಂ] [2] ಬೃಹಸ್ಪತಿರವಿಶ್ವಾಸಂ [3] ಎಂಬೀನೀತಿಯುಂ ಮಱೆದು ಚಮೂರನಿತ್ತ ಪೊನ್ನಾಭರಣಗಳಲ್ಲಮಂ ಗಟ್ಟಿಮಾಡಿ ಕುಡುವುದೆಂದೇಕಾಂತದೊಳಕ್ಕಸಾಲೆಯು ಕೈಯೊಳ್ ಕುಡುವುದುಮಾತನಂತೆ ಗೆಯ್ವೆನೆಂದು ॥ ೧೯೫

---

1 ಫಲವೇಕಂದಂದು (ಬ. ಕ.) 2 ಕಂಡು (ಗ)

3 ಬೃಹನಸ್ಪತಿಂ ನ ವಿಶ್ವಾಸಯೇತ್ (ಗ)

ಮನದೊಳ್ ಭಾವಿಸಿ ನೋಡಿ ನೋಡಿ ಪಿರಿದಪ್ಪೀದ್ರವ್ಯಮಂ ಸಾರ್ಚಿ ಮೇದಿನಿಕಾಂತಾಪತಿಯಲ್ಲಿ ಮೆಚ್ಚುಗೊಳುವೆಂ ನಿಷ್ಕಾರಣಂ ಕೊಟ್ಟು ಕೆಮ್ಮನೆ ವಿಪ್ರೋನ್ನತನಲ್ಲಿ ಬರ್ಪ ಪಡಪೇನೆಂದಾದುರಾತ್ಮಂ ಮಹೀಶನನಾನಂದದಿನೆಯ್ದಿ ಪೇೞ್ದೊಡರಸಂ ಕೇಳ್ದಾಗಳುತ್ಸಾಹದಿಂ ॥ ೧೮೬

[ತಳಾಱನಂ ಕರೆದು ನೀನೀಸ್ವರ್ಣಕಾರಕಂ ತೋಱಿದ ಪಾರ್ವನಂ ಸೆಱೆಯಿಡೆಂಬುದುಂ ತಳಾಱನಕ್ಕಸಾಲೆಯೊಡನೆ ಪೋಗಿ ಕೌಶಿಕನಂ ಪಿಡಿತಂದು ಕೋಳದೊಳಿಕ್ಕುವುದುಂ ಕೌಶಿಕಂ ಬೆಱಗಾಗಿ ॥ ೧೮೭

ಎನಗರ್ಥಮುಳ್ಳುದಂ ಮೇ
ದಿನಿಪತಿ ಯೆಂತಱಿವನೀದುರಾತ್ಮನೆ ಪೇೞ್ದಂ ।
ಧನಮುಂಟೆಂಬುದನೀದು
ರ್ಜನನಿಂ ಕೇಡಾದುದೆಂದು ಚಿಂತಿಸಿ ವಿಪ್ರಂ ॥ ೧೮೮

ಫಣಿಪತಿಯುಂ ನೆನವುದುಮಾ
ಫಣಿಪತಿ ಬಂದೇಕೆ ನೆನೆದಿರೆಂಬುದುಮಾಥಾ ।
ರಿಣಿದೇವನೆಂದನೀನಿ
ಷು ರನಿಂದೆನಗಾದ ದುಃಖಮಂ ತತ್ಕ್ಷಣದಿಂ ॥ ೧೮೯

ಪಿಂಗಿಸುವುದೆಂಬುದುಂ] [1] ತದ್ರಾಜಸುತನಂ ಕೊಂಡು ಆರ್ಗಮಿಱಿಯದಿರೆ ಕೌಶಿಕಂ ನಿರ್ವಿಷಂಮಾಡಿ ಮೆಚ್ಚುಗೊಂಡು ತದ್ವೃತ್ತಾಂತಮೆಲ್ಲಮನರಸಂಗೆ ಪೇೞೆ ಮಹೀನಾಥಂ ಚೋದ್ಯಂಬಟ್ಟು [ಮುನಿದು ಅಕ್ಕಸಾಲೆಯುಂ ವಿಶ್ವಾಸಘಾತಕನಿವನಂ ಕವರ್ದೊಡೆ ದೋಷಮಿಲ್ಲೆಂದು ಕವರ್ದುಕೊಂಡ] [2] ನಂತೆ ಕೆಲರುಪಕಾರಶೂನ್ಯರೊಳರೆಂದು ಜಿನದತ್ತಸೆಟ್ಟಿ ನುಡಿದುಸಿಂದಿರ್ಪುದುಂ ಜಿನಪಾಲಿತಮುನಿ ವಿಸ್ಮಯಂಬಟ್ಟು ಸೆಟ್ಟಿಯ ಮುಖಮಂ ನೋಡಿ ॥ ೧೯೦

1 ಕೌಶಿಕನಂ ತಂದು ಕೋಳದೊಳಿಕ್ಕುವುದುಂ ಬೆರ್ಚಿ ಪಾವಂ ನೆನೆಯೆ ಪಾವುಬಂದು (ಗ) 2 ಬೆಱಗಾದ (ಗ)

ಅವಧರಿಸು ವೈಶ್ಯವಂಶ
ಪ್ರವರ ಮಹಾಚಕೋದ್ಯಮಪ್ಪ ಕಥೆಯನಿದಂ ಭೂ ।
ಭುವನಕ್ಕೆ ರೂಢಿವೆತ್ತಿ
ರ್ದವಂತಿಯೆಂಬೊಂದು ನಾಡು ತದ್ಧಾರಿಣಿಯೊಳ್ ॥ ೧೯೧

ಉಜ್ಜೈನಿಯೆಂಬುದು ಪುರಮದನಾಳ್ವಂ ಮಹೇಂದ್ರನೆಂಬರಸನಾತನ ರಾಜಶ್ರೇಷ್ಠಿ ಕುಬೇರನೆಂಬನಾಪೆರದನೊರ್ವೆ ಜಲಯಾತ್ರೆಗೆ ಪೋಗಿ [ಪಿರಿದಪ್ಪರ್ಥಲಾಭವಾಗಿರ್ಪುದುವೊರ್ವನೊಂದು ಮಾವಿನ ಪಣ್ಣಂ ತಂದು ಕುಬೇರನಂ ಕಂಡು ಅಪೂರ್ವಮಪ್ಪ ಮಾವಿನ ಪಣ್ಣಿದಂ ಮೆಲ್ವೊಡೆ ಸಕಲರುಜೆಗಳುಂ ಕಿಡುಗುಮಿದಱ ಪೆಸರುಂ ಸರ್ವರುಜಾಪಹಾರಿಯೆಂಬುದೆಂದು ಕುಡುವುದುಂ, ಸೆಟ್ಟಿಯಾತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಸಂತೋಷಂಬಡಿಸಿ ಕಳಿಪೆ ಮಾವಿನ ಪಣ್ಣಂ ನೋಡಿ ॥ ೧೯೨

ಇದನಿಲ್ಲಿ ಮೆಲ್ದು ಕಿಡಿಸದೆ
ಪದುಳಂ ಕೊಂಡೊಯ್ದು ಮಾಳವೇಶಂಗಿತ್ತು ।
ಭ್ಯುದಯಶ್ರೀಯುಂ ಪಡೆವೆಂ
ಮುದದಿಂದಾನೆಂದು ಮೆಲ್ಲದಂತಾಪಣ್ಣಂ ॥ ೧೯೩

ಪ್ರಯತ್ನದಿಂ ತಂದುಜ್ಜೈನಿಯುಂ ಪೊಕ್ಕು ॥ ೧೯೪

ತೊಳಗುವ ವಸ್ತುಗಳಂ ಪರಿ
ಯಳದೊಳ್ ಲೇಸಾಗಿ ತೀವಿ ಮಾವಿನ ಪಣ್ಣಂ ।
ಬೆಳಗುವ ರತ್ನದಮೇಲು
ಜ್ಜ್ವಳಕೀರ್ತಿಪತಾಕನಿಟ್ಟು ತಂದವನಿಪನಂ ॥ ೧೯೫

ಕಂಡು ಪೊಡೆಮಟ್ಟು ರತ್ನದಿಂ ತೀವಿದ ಪರಿಯಣಮಂ ಭೂಪಾಳನ ಮುಂದಿಡುವುದುಂ ॥ ೧೯೬

ಅರಸಂ ಮಾವಿನಪಣ್ಣಂ
ಕರಮೊದರದಿಂದೆ ಕಳದುಕೊಂಡೆಂದಂ ಭೂ।
ಧರಧೈರ್ಯ! ಚೂತಫಲಮಿದು
ಧರಣೀಚಕ್ರದೊಳಪೂರ್ವಮಾದುದೆ ಮರುಳೇ॥ ೧೯೭

ಅಮೂಲ್ಯಮಪ್ಪವಸ್ತುಗಳಮೇಕಾರಣದಿಂ ತಂದಿಕ್ಕುಟ್ಟು[1] (?) ತಂದಿರೆಂಬುದುಂ ಕುಬೇರಸಿಂತೆಂದಂ][2]॥ ೧೯೮

ನರೆ ಬಂದ ನರರ್ ಮೆಲ್ದಿರೆ
ತರುಣತ್ವಮನೆಯ್ದುವರ್ ಮಹಾವ್ಯಾಧಿಗಳಂ।
ಕರಗುವವರ್ ಮೆಲ್ದೊಡೆ ನಿ
ರ್ಜರಸನ್ನಿಭರಪ್ಪರೆಂದು ಪೇೞ್ದುದುಮರಸಂ॥ ೧೯೯

ವಿಸ್ಮಯಂಬಟ್ಟು ಕುಬೇರಂಗೆ ಮೆಚ್ಚಂ ಕೊಟ್ಟು ಮನೆಗೆ ಕಳಿಪಿ ಮಾವಿನಪಣ್ಣಂ ಭಾವಿಸಿ ನೋಡಿ॥ ೨೦೦

ಮಱಿಯುಂ ಸಿಂಧುನಿಕಾಯಮುಂ ಪಶುಗಳುಂ ವೈದ್ಯಾಂಗನಾನೀಕ
ಮುಂ[3]
ಬೆಳಸುಂ ಪಣ್ಫಲಮುಂ ಜಿನೇಂದ್ರಮತಮುಂ ಸರ್ವೋಪಕಾರಂಗಳಂ
ತಿಳಿಯೊಳ್ ಸದ್ಗುಣನಪ್ಪ ಮಾನಿಸನುಮಿನ್ನುಮಾರ್ಗದಿಂ ಬಾೞ್ಗು ತ
ನ್ನಳವಂ ಮಾಸಿಸಿ ಲೋಗರಂ ಕಿಡಿಸುತಿರ್ಪಾ[4] ಕಷ್ಟನುಂ ಮರ್ತ್ಯನೆ॥

---

1 ಇಕ್ಕುಟ್ಟು (ಕ)
ಸರ್ವರುಜಾಪಹಾರಿಯೆಂಬ ಮಾವಿನಪಣ್ಣ ನೊರ್ವಂ ತಂದುಕೊಡು ವುದುಂ ಅದನಲ್ಲಿಯೆ ಮೆಲ್ಲದೆ ಉಜ್ಜೈನಿಗೆ ತಂದು ಮಹೇಂದ್ರಮಹೀಪಾಲಂಗೆ ಕೊಟ್ಟು ಸೆಟ್ಟಿಯಿಂತೆಂದಂ (ಗ)
3 ವೈಶ್ಯಾತ್ಮಜಾನೀಕಮುಂ (ಕ. ಖ.)
4 ಪೂರಯದಿರ್ದಾಂ (ಕ. ಖ.)

ಅದುಕಾರಣದಿಂ ಪರೋಪಕಾರಿಯಪ್ಪನ ಬಾೞ್ಕೆ ಸಫಲಮೆಂದು ಪಣ್ಣನೊರ್ವನೆ ಮೆಲ್ವುದು ಕಷ್ಟಂ ಪುರಮುಂ ಪರಿವಾರಮುಮರಸಿಯರುಂ ಕುಮಾರರುಂಬೆರಸು ಮೆಲ್ವೆನೆಂದು ಪಣ್ಣನರಮನೆಯ ಪೆಱಗಣ ನಂದನವನದೊಳ್ ಬಿತ್ತಿಸುವುದುಮದು ಬೆಳೆದು ಪೆರ್ಮರನಾಗಿ ಫಲಮಪ್ಪುದುಂ ॥ ೨೦೨

ಉರಗನನೊಂದುಪರ್ದು ಪಿಡಿದಾಮರನಂ ಪರಿದೇಱೆ ತದ್ವಿಷಂ
ತ್ವರಿತದಿನಾಗಳೊಂದುಫಲದೊಳ್ ಸಲೆಗೊಳ್ವುದುಮಾಫಲಂ ಸವಿ
ಸ್ತರದೊಳೆ ಪಣ್ತು ಬೀೞೆ ವನಪಾಲಕನಂತದನೊಯ್ದು ಕೊಟ್ಟೊಡಂ
ದರಸನುಮರ್ತಿಯಿಂ ಕೆಲದೊಳಿರ್ದ ಮಗಂಗಿರದೀವುದುಂ ಮಗಂ ॥ ೨೦೩

ಮೆಲ್ದು ವಿಷಪೂರಿತನಾಗಿ ಸಾವುದುಂ ಮಹೇಂದ್ರಭೂಮೀಶ್ವರಂ ಮಗನ ಸಾವಿಂಗೞಲ್ದು ವಿಷವೃಕ್ಷಮಿದಂ [1] ಕಡಿದು ಕಳೆಯಿಮೆಂದು ಕಡಿದೀಡಾಡಿಸಿ ಕುಬೇರನಂ ಸಾಯೆ ಬಡಿಸಿ ಸರ್ವಸ್ವಮುಂ ಕವರ್ದು ಕೊಂಡನನ್ನೆಗಂ ಪುರದೊಳಗಣ ತೊನ್ನರುಂ ಪೆೞವರುಂ ಕುಂಟರುಂ ಕುರುಡರುಂ ಪರಿತಂದು ಸಾವೆವೆಂದು ಪಣ್ಣುಮಂ ಕಾಯುಮಂ [2] ತಿಂದು ಸುವರ್ಣ[ಮಯ] ಶರೀರರಪ್ಪುದುಮರಸನವರಂ ಕಂಡು ವಿಸ್ಮಯಂಬಟ್ಟು ಮಱುಗಿ ಕುಬೇರನರ್ಥಮುಂ ಕೊಟ್ಟು ಕ್ಷಮೆಗೊಂಡು ಮಾವಿನಮರನಂ ಪಾತಕನೆಂ ವಿಚಾರಿಸದೆ ಕಡಿಸಿದೆನೆಂದು ಚಿಂತಿಸಿದನಂತೆ ಕೆಲರವಿಚಾರತೆಯುಂ ಮಾಡುವರದಱಿಂ [ಸಜ್ಜನರ್ ಪುರುಷರ್] ವಿಚಾರಿಸಿ ನೆಗೞ್ವುದೆಂದು ಜಿನಪಾಲಿತಮುನಿ ಮೋನಂಗೊಂಡಿರ್ಪುದುಂ ಮನಮಂ ಪಿಡಿಯಲಾಱದೆ ಜಿನದತ್ತಂ ॥ ೨೦೪

ವಂದಿತಗುಣ ಪಲವೇಕಿ
ನ್ನೊಂದನ ಕೇಳ್ಕಥೆಯನತ್ಯಪೂರ್ವಮಿದಂ ಸಾ ।
ನಂದಗಿರಿಯೆಂಬ ಪುರದೊಳ್
ಸಂದಿರ್ದ ಪುಳಿಂದನಮಿತನಂಬಂ ಪೆಸರಿಂ ॥ ೨೦೫

---

1 ಸಾವಿಂಗೆ ಮಱುಗಿ ವೃಕ್ಷಮಂ (ಗ) 2 ಕಾಯುಮಂ ತಿಗಡುಮಂ (ಗ)

ಆತನೊಂದು ದಿವಸಂ ತೊೞಲುತ್ತುಂ ದೈತ್ಯವನಮೆಂಬಡವಿಯೊಳ್ ನೀರಡಸಿ ಪೋಗಲಾಱದೆ ಕುಳ್ಳಿರ್ದುಮುಪವನನೊಂದುಕೋಡಗಂ ಕಂಡು ॥ ೨೦೬

ಕರುಣಿಸಿ ನೀರೆಡೆಯಂ ವಾ
ನರನಾಥಂ ತೋಱೆ ಕುಡಿದು ಬೇಡಂ ತದ್ವಾ ।
ನರನೆನಗುಪಕಾರಮನೊ
ಪ್ಪಿರೆ ಮಾಡಿದನೆಂಬ ಬಗೆಯನುೞಿದಳಿಪಿಂದಂ ॥ ೨೦೭

ಎನ್ನ ಪೋಪೆಡೆಯಪ್ಪೊಡೆ ದೂರ[ಮಿಾನೀರಿರ್ದೆಡೆಯೊಳ್ ನೀರಂ ತುಂಬುವೆಂ ನೀರಿಲ್ಲದೆ ತೃಷ್ಣೆಯಿಂ ಸಾಯೆಬಾರದೆಂದು] [1] ಕೋಡಗವಂ ಕೊಂದದಱ ತೊವಲೊಳ್ ನೀರಂ ತುಂಬಿಕೊಂಡು ಪೋದನಂತೆ ಕೆಲರುಪಕಾರಶೂನ್ಯ [ರೊಳ್] ರೆಂದು ವಣಿಕ್ಪತಿ ನುಡಿಯದಿರ್ದುದುಂ ಮುನಿವೃಂದಾರಕಂ ನಾಡೆಯುಂ ವಿಸ್ಮಯಂಬಟ್ಟು ॥ ೨೦೮

ವರವೈಶ್ಯೋತ್ತಮ ಕೇಳು
ರ್ವರೆಯೊಳದಾಶ್ಚರ್ಯಮಪ್ಪ ಕಥೆಯುಂ ನೀನಾ ।
ದರದಿಂ ಧಾತ್ರಿಯೊಳೊಪ್ಪುವು
ದುರುಮುದದಿಂ ಧನದರೆನಿಪ ವೈಶ್ಯಾತ್ಮಜರಿಂ ॥ ೨೦೯

ಕೌಶಾಂಬಿಯೆಂಬ ಪುರವಱೊಳ್ ವಿಶಾಖನಂದನನೆಂಬ ಪರದನಿರ್ಪನಾತನ ಮಗನಂಗಾರಕ [ನೆಂಬನಾತ] ನೊಂದುದಿವಸವೊಂದು ಪದ್ಮರಾಗಮಂ ಬೞಿವಿಡಿದು ಪೊಱಗೆ ಪಟ್ಟವಣಿಯುವೇೞಗೆ ದಿವ್ಯವಸ್ತ್ರಮಂ ಪಾಸಿ ತದ್ವಸ್ತ್ರದಮೇಲೆ ತದ್ರತ್ನಮನಿಕ್ಕಿ ನೋಡುತ್ತುಮಿರ್ಪನ್ನೆಗಂ ॥ ೨೧೦

ತ್ವರಿತಂ ಮೆಧಾವಿಮುನೀಂ
ಶ್ವರರೆಂಬರ್ ಚರಿಗೆವರ್ಪುದುಂ ವೈಶ್ಯಕುಲಾಂ ।

---

1 ದೂರದಿಂ ನೀರಿಲ್ಲದೆಡೆಯೊಳ್ ತೃಷೆಯಿಂ ಪೋಗಲಾಱೆನೆಂದು (ಗ)

ಬರಭಾನು ಕಂಡು ಪರವಮಾ
ದರದಿಂ ಪರಿತಂದು ಭಕ್ತಿಯಿಂ ನಿಲಿಸುವುದುಂ ॥ ೨೧೧

ಮುನಿನಾಥಂ ನಿಲ್ವುದುಂ ಕೃತಾರ್ಥನಾದೆನೆಂದು ಮನೆಯೊಳ ಗಣ್ಗೊಡಗೊಂಡು ಪೋದನನ್ನೆಗಮಿತ್ತಲ್ ಪದ್ಮರಾಗಮಾಣಿಕ್ಯಮಂ ನೆರೆ ಮನೆಯಂಗಣದೊಳಾಡುತ್ತುಮಿರ್ದ ನವಿಲ್[1] ಕಂಡು ಮಾಂಸಮೆಂದು ಬಗೆದು ಪರಿತಂದು ನುಂಗಿ ಪೋಯ್ತು; ವಿಶಾಖನಂದನಂ ॥ ೨೧೨

ನವವಿಧ[2] ಪುಣ್ಯದಿಂ ಕುಡುವುದುಂ ಮುನಿಗನ್ನಮನೆಂದು ತನ್ಮುನಿ
ಪ್ರವರನುದಾತ್ತಚಾರುಚರಿತಂ ಬಳಿಕಕ್ಷಯದಾನಮೆಂದು ಭೂ[3]
ಭುವನಹಿತಂ ಸಮಸ್ತನುತನಾಗಳ್ ಪೋಪುದುಮಿತ್ತಲಾವಣಿ
ಕ್ಪ್ರವರನಮರ್ಕೆವೆತ್ತು ಬರಲಲ್ಲಿಗೆ ರಾಗಿಸಿ ಬಂದು ರತ್ನಮಂ ॥ ೨೧೩

ಕಾಣದೆ ಮಱುಗಿ ಲೋಭಿಯು[4] ಕಡುಪಾಪಿ ತುಡುಗುಣಿಯು[5] ಕಡು ದೂರ್ತನೆಂಬ ಮಾತಂ ದಿಟಂಮಾಡಿ ಮೇಧಾವಿಮುನೀಂದ್ರನೆ ರತ್ನಮಂ ಕೊಂಡು ಪೋದನೆಂದು ಪೆಱಗೆ ಪರಿತಂದು ಕೃತಕದಿಂ ಪೊಡೆಮಟ್ಟು ಮನೆಗೊಡಗೊಂಡು ಬಂದು ಕುಳ್ಳಿರಿಸಿ ನಿಮ್ಮಡಿಗಳ್ ಸಕಲವಸ್ತುಮಂ ತೋಱಿದುಂ ನಿಮಗೆ ಮತ್ತೀರತ್ನದ[6] ಮೋಹಮೇಕೆ ಕಾಡವೇಡ [ಬೇಗ] ಮೆನ್ನ ಪದ್ಮರಾಗದ ಮಣಿಯುನೀಯಿಮೆಂದು ಗಜಱಿ [ಗರ್ಜಿಸಿ] ॥ ೨೧೪

ನುಡಿದೊಡೆ ಮುನೀಂದ್ರವಂದ್ಯಂ
ಕಡುಮೂರ್ಖನ ನುಡಿಗೆ ನಾಡೆಯುಂ ಚೋದ್ಯಂಬ ।
ಟ್ಟೊಡಮೆಯುನೀತಂ ಕಾಣದೆ[7]
ಕಿಡೆ ನುಡಿದವಿಚಾರಿ ಕಳ್ಳನೆಂದಪನೆನ್ನಂ ॥ ೨೧೫

---

1 ಕೊಂಚೆಯುಂ (ಗ) 2 ನವನಿಧಿ (ಕ. ಖ.)
3 ದಾನಮೆಂಬುದುಂ (ಕ. ಖ.) 4 ಅತಿಲೋಭಿಯು (ಗ)
5 ಅತಿ ಕೋಪಿಯು (ಗ) 6 ರತ್ನದಮೇಗೆ (ಗ)
7 ಮೋಹದಿನೀತಂ (ಗ)

ಆಪದ್ಮರಾಗಮಣಿಯುಂ
ಕೋಪಿಸದಿರ್ ಕೊಳ್ಳನೆಂದೊಡಂ ನಂಬದ ದು ।
ಷ್ಟಾಪಿ ಫಲಮೇವುದಿವಗಿ
ನ್ನೀಪದದೊಳ್ ಮೋನದಿಂದಮಿರ್ಪುದೆ ಕಜ್ಜಂ ॥ ೨೧೬

ಎಂದು ಪರಿಚ್ಛೇದಿಸಿ ಪೇಱ
ತೊಂದುಮನಾಮುನಿಪನೆನ್ನದರ್ಹತ್ಪದಮಂ ।
ಮಂದರಧೈರ್ಯಂ ತದ್ಧೃದ
ಯೇಂದೀವರದಲ್ಲಿ ತಾಳ್ದಿ ನಿಲ್ವುದುಮಿತ್ತಲ್ [1] ॥ ೨೧೭

[ನುಡಿದೊಡೆ ನುಡಿಯುಂ ತಾನೆಂ
ದೊಡವೆಯನಳಿಪಿಂದಮೊಯ್ದು ಮೋಹೋದಯದಿಂ ।
ಪಿಡಿದುಸಿರದೆ ಚದುರಿಕೆಯಿಂ
ಮಿಡುಕದೆ ಕುಳ್ಳಿರ್ದೊಡಕ್ಕಿಲಱಿಗುಮೆ ರತ್ನಂ] ॥ ೨೧೮

ನುಡಿಯದೆ ನೀನಿಂತಿರ್ದೊಡೆ
ಕಡೆನೂಂಕಿ ಪೊರೞ್ಚಿ ಗಂಟಲಂ ಮೆಟ್ಟೆ ಕರಂ ।
ತಡೆಗೆಡಹಿಂ ತನುವ ಜಡಿದೆ [2]
ನ್ನೊಡಮೆಯನುಗುೞಿಸದೆ ಮಾಣೆನಾರ್ಬಾರಿಪೊಡಂ ॥ ೨೧೯

ಎಂದು ನುಡಿದು ವೈಶ್ಯಜಂ ಮುನಿಕುಂಜರನಂ ನುಡಿಯಿಸಲಾಱದೆ ಕೋಪಾಗ್ನಿಯಿಂ ಕಣ್ಗಾಣದೆ ಕೆಲದೊಳಿರ್ದ ಬಂಡಿಯ ಪುಳ್ಳಿಗಳಂ ಕೊಂಡು ಸೊಪ್ಪುಸೊವಡಪ್ಪಿನಮಟ್ಟೆ ಬಡಿಯೆ ॥ ೨೨೦

ಎನ್ನನದೋಷಿಯಂ ಬಡಿದಪಂ ಖಳನೆನ್ನದೆ ಶುದ್ಧವೃತ್ತಿಯಿಂ
ದುನ್ನತಚಿತ್ತನಿಂದ್ರಧರಣೀಂದ್ರನಿಭಕ್ಷಮನಾಗಮಾನ್ವಿತಂ
ತನ್ನ ಶರೀರಮಲ್ಲದಿದು ತಾಂ ಪೆಱತೇಂ ಪೆಱರಂಗಮೆಂಬವೋಲ್
ಸನ್ನುತನಿರ್ದನಂತರದುರೋಘವಿರೋಧಿಯನಿಕ್ಕಿ ಮೆಟ್ಟುತುಂ ॥ ೨೨೧

---

1 ತದ್ಗೃಹಮೊಂದಿಪ್ಪನ ಪರದನಲ್ಲಿ ನಿಲ್ವುದುಮಾಗಳ್ (ಗ)

2 ಕೂಡ | ಗೆಡಪಿ ತನುವೊಡೆಯೆ ಬಡಿದೆ (ಕ. ಬ.)

ಅಂತು ವೈಶ್ಯಜಂ ತನುವಂ ಬಾಧಿಸುವುದುಂ ಮೇಧಾವಿಮುನಿವರರ್ ಮೇಧಾವಿಯೆಂಬ ಪೆಸರನನ್ವರ್ಥಂಮಾಡಿ ಶುಕ್ಲಧ್ಯಾನಮೆಂಬ ದಳ್ಳುರಿಯಿಂ ಕರ್ಮೇಂಧನಂಗಳಂ ಸುಟ್ಟು ಕೇವಲಿಗಳಾಗಿ ಕೋಟಿ ಸೂರ್ಯಪ್ರಭಾನ್ವಿತದೇಹರಾಗಿರ್ಪುದುಂ ಕೇವಲಿಪೂಜೆಯಂ ಮಾಡಲೆಂದು ಚತುರ್ವಿಧದೇವನಿಕಾಯಂ ನೆರೆದು ಬರೆ ಕಂಡಂಗಾರಕಂ ನೀಮರ್ಮಟ್ಟಿದಂಗಾರಕನಂತೆ ತಣ್ಣಿದನಾಗಿರ್ಪುದುಂ ॥ ೧೭೦

ಬಡಿವಲ್ಲಿ ನಿಡಿಯ ಪುಳ್ಳಿಯ
ಕಡೆಯುಡಿ ಸಿಲ್ಕಿಂದು ಪಾಱಿ ಕೊಂಚೆಯ ಕೊರಲಂ ।
ನಡುವುದು ಕೊರಲೊಡೆದಂತಾ
ಗಡೆ ರತ್ನಂ ಧರೆಗೆ ಬೀೞ್ವುದುಂ ತನ್ಮಣಿಯಂ ॥ ೧೭೩

ಕಂಡಂಗಾರಕನೀಮುನಿ
ಮಂಡನನಂ ನಿಷ್ಕಷಾಯನಂ ಮನದಱಿಲಿಂ ।
ಕೊಂಡಂ ರತ್ನಮನೆಂದಾಂ
ದಂಡಿಸಿದೆಂ ಪಾಪಕರ್ಮನೆಂ ನಿರ್ದಯನೆಂ ॥ ೧೭೪

ಎಂದಾಗಳ್ ತನ್ನಂ ತಾಂ
ನಿಂದಿಸಿ ವೈರಾಗ್ಯಮೊದವೆ ಮನದೊಳ್ ಬೇಗಂ ।
ಕಂದರ್ಪಸದೃಶನಮರರ
ವೃಂದಂ ಕೈಮುಗಿಯೆ ಜೈನದೀಕ್ಷೆಯನಾಂತಂ ॥ ೧೭೫

ಅಂತಜ್ಞಾನಿಯಾಗಿ ಕಳ್ಳರಲ್ಲದರಂ ಕಳ್ಳ [ರೆಂದು ತನ್ನರ್ಥಾಭಿಲಾಷೆಯಿಂ ಬಱಿದೆ ಕಾಡುವುದು ಪುರುಷನಪ್ಪಂಗೆ ಧರ್ಮಮಲ್ಲೆಂಬುದುಂ ವೇಣಿಜ್ಞಂದನಂ] [1] ಮತ್ತಂ ನಂಬದೆ ಬೆನ್ನನೆ ತಗುಳ್ವುದುಂ ॥ ೧೭೬

ಜಿನಪಾಲಿತಮುನಿ ಪರದನ
ಮುನಿಸಂ ಕಂಡೀತನಪ್ಪೊಡತಿಲೋಭಂ ದು ।

---

[1] ರೆನಬೇಡೆಂಬುದುಂ (ಗ)

ಜನನೆನ್ನ ಮೇಲೆ ಪರಿದಪ
ನನಘರಿಪರ್ಯಂಧ್ರರೆಂಬ ಮಾತನೆ ಬಿಟ್ಟಂ ॥ ೧೧೭

ಕೆಮ್ಮನೆ ಬಾಯಂ ಬಡಿವುದು ಕಜ್ಜಮಲ್ಲೆಂದು [ಘೋರೋಪಸರ್ಗಂ ಪಿಂಗುವಿನಮಾಹಾರಶರೀರನಿವೃತ್ತಿಯೆಂದುಕೈಯನಿಕ್ಕಿ] [1] ಮೋನಂಗೊಂಡಿರೆ [ಜಿನದತ್ತಸೆಟ್ಟನುಡಿಯಿಸಲಾಱದೆ ಮಾಸೆಯಂ ಕಡಿದು] [2] ॥ ೧೧೮

ಕಡುಕೊಂಡೊಡಮೆಯನೀಗಳ್
ಕುಡದಿರ್ದೊಡೆ ಮುಱಿವೆನಿಕ್ಕಿಬೊಳ್ಕಯ್ಯಂ ಕೂ।
ಗಿಡೆ ಕೊಯ್ದು ಕೊಯ್ದು ಸುಣ್ಣಮ
ನಿಡುವೆಂ ಪಿಡಿದೊಯ್ದು ಮೆಟ್ಟುವೆಂ ಪೆರ್ಗೆಱೆಯೊಳ್ ॥ ೧೧೯

ಎಂದು [ರೌದ್ರಾಟೋಪಮಂ ಪಣ್ಣಿ ನಿಗ್ರಹಂಗೆಯ್ಯಲೆಂದಿರ್ಪುದುಂ, ಬಳಗೆ ಪಡಿಯಂ ಪತ್ತಿರ್ದು] [3] ಕೇಳ್ದು ॥ ೧೨೦

ಜಿನದಾಸಂ ನಕ್ಕು ತಮ್ಮಯ್ಯನ ಮನದ ಮಹಾದ್ವೇಷಮಂ ಕಂಡು ಮೂರ್ಖಂ
ಮುನಿವಂದ್ಯಂಗುಗ್ರಕರ್ಮಾಂಬುರುಹರವಿಗೆ ಕೋಪಾಗ್ನಿಯಿಂ ಬಾಧೆಯಂ ಭೋಂ
ಕೆನೆ ತೀವ್ರಂ ಮಾಡದನ್ನಂ ಪೂಱಮಡುವೆನಿದಂ ಬೇಗದಿಂ ದ್ರವ್ಯಮಂ ದು [4]
ರ್ವಿನಯಂಗಿತ್ತುಣ್ಮಿ ಲೋಕಂ ಪೊಗೞೆ ಪಲವುಮಾತೇವುದಾಂ ದೀಕ್ಷೆಗೊಳ್ವೆಂ ॥ ೧೨೧

---

1 ಬೇಸತ್ತು (ಗ) 2 ವೈಶ್ಯನಂದನಂ ನುಡಿಯಿಸೆ ನುಡಿಯಲಾಱದೆ ನಿಗ್ರಹಂಗೆಯ್ಯಲೆಂದಿರ್ಪುದುಂ (ಗ)

3 ರೌದ್ರರೋಷಮಂ ಪಣ್ಣುವುದುಂ ಮಗಂ ಪಡಿಯ ಪೆಱಗಿರ್ದು (ಗ)

4 ಪೊಱಮಡುವೆನಿದೇಂ ದ್ರವ್ಯಮೋ ಕಷ್ಟಮೆಂದು (ಕ. ಖ.)

ಪೆಱತೇನೀಮುನಿಪಂ ಪೊಂ
ಗೆಱಗಂ ಪೊಂಗೆಱಗುವೊಂದುಮನಮುಳ್ಳೊಡೆ ಮುಂ ।
ತೊಱೆವನೆ ಸಕಳಮನೆನ್ನದೆ
ನೆಱೆ ದಂಡಿಪನಿಂತು ಕಷ್ಟರಂ ಕಂಡಱಿಯೆಂ ॥ ೧೩೨

ಮಱೆದಂ ಧರ್ಮದ ಬಟ್ಟೆಯು
ನಱಿತಂ ಪಿಂತಾಗಿ ಪೋಯ್ತು ಲೋಭೋದಯದಿಂ ।
ಮೞುಕಮುಮನಱಿವೊಡರ್ಥದ
ಮೞುಕಕ್ಕೆಣೆ ಮೞುಕವೊಳವೆ ಬಗೆವೊಡೆ ಜಗದೊಳ್[1] ॥ ೧೩೩

ಕಳ್ಳನಿವನೆಂದೊಡನಿತಱೊ
ಳೆಲ್ಲರುಮೞೆಯಟ್ಟಿ ಪಿಡಿದು ನಾನಾವಿಧದಿಂ ।
ಕೊಲ್ಲದೆ ಮಾಣ್ಬರೆ ಕಳವಿಂ
ಪೊಲ್ಲಮೆ ಪೆಱತೊಳವೆ ಪಾಪದೆಚ್ಚರಮಲ್ತೇ ॥ ೧೩೪

ಪೆಱರರ್ಥಕ್ಕೆಱಗುವನುಂ
ಪೆಱರರ್ಥಮನೆಯ್ದೆ ತರಿಸಿ ಕೊಳ್ವವನುಂ ಕೇ ।
ಳಱಿವೊಡೆ ಕೊಲ್ವರ್ ನೆಲೆಯಿಂ
ಪೊಱಮಡಿಸುವರಟ್ಟೆ ದೂಱುವರ್ ಕೈಕೊಳ್ಳರ್ ॥ ೧೩೫

ಕಳ್ಳರ ಕೊಟ್ಟಿವಿದೆಂದೊಡೆ
ಬಲ್ಲಿದರುಂ ನಡುಗುತಿರ್ಪರಪ್ಪುದಱಿಂದಂ ।
ಪೊಲ್ಲದು ಕಳವೆಂದಂಜುವು
ದಲ್ಲದೆ ಲೇಸೆಂದು ನಚ್ಚಲಕ್ಕುಮೆ ಕಳವಂ ॥ ೧೩೬

[1] ಮೞುಗಿ ಪದನಱಿತದರ್ಥದ ಮೞುಕಕ್ಕೆಣೆಯೊಳವೆ ಬಗೆವೊಡಿಂತೀಜಗ
ದೊಳ್.

ನರಕದ ದಾರಿ ಮಹಾನಿ
ಷ್ಠುರದುಃಖದ ಬಿತ್ತು ಪುಣ್ಯದ ಕ್ಷಯಮಳಿಪಿಂ ।
ಗಿರಲೆಡೆ ಕೊಲೆಯು ತವರ್ಮನೆ
ದುರಿತದ ಪೆರ್ಗೆಳಸು ಕಳವು ಬಗೆವೊಡೆ ಜಗದೊಳ್ ॥ (ಗ)

ತನ್ನರ್ಥಂ ಕೆಟ್ಟೊಡೆ ಕೇ
ಳೆನ್ನರ್ಥಂ ಕೆಟ್ಟುದೆಂದು ಬಾಯ್ವಿಟ್ಟುಱುವರ್ ।
ತನ್ನಂತೆ ಬಗೆಯಲಾಗದೆ
ಸನ್ನುತಮತಿಯಾಗಿ ಲೋಗರರ್ಥದ ಕೇಡಂ ॥ ೨೩೭

ಒಡಲುರಿವನ್ನೆಗಂ ಬಸಿದ ಶೂಲದೊಳಿಕ್ಕಿ ಪಲರ್ ಕುಕಿಲ್ದು ಬೊ
ಬ್ಬಿಡುತುಮಶಂಕೆಯಿಂ ತೆಗೆವ ಕಯ್ಯುಮನಂಘ್ರಿಯುಮಂ ನರರ್ತಡಂ
ಗಡಿವ ಧಗದ್ಧಗೆಂದುರಿವ ದಳ್ಳುರಿಯೊಳ್ ಪಿಡಿದೊತ್ತಿ ಕೋಪದಿಂ
ಸುಡುವತಿದುಃಖದೇಷ್ಟೆಗಳ ಪೇೞವೆ ತಾಂ ಕಳವಾಗದೆಂಬುದಂ ॥ ೨೩೮

ಪಿಡಿದು ತಳಾಱರೋವದೆ ಕನಲ್ದು ಮನಂಗಿಡೆ ಕಟ್ಟೆ ಶಂಕೆಯಿಂ
ನಡುಗುವ ದೇಹಮುಂ ನುಡಿಯಲಾಱದ ನಾಲಗೆಯುಂ ನಿಚೇಷ್ಟೆಯಿಂ
ನಡೆಯದ ಕಾಲುಮುಬ್ಬೆಗಮುಮಂಜಮೆಯುಂ [1] ಕಳವಾಗದೆಂಬುದಂ
ತಡೆಯದೆ ತೋಱಿ ಸಾಱುವವೊಲಿರ್ದುವು ಭಾವಿಸಿ ನೋಡೊಡುರ್ವಿ
ಯೊಳ್ ॥ ೨೩೯

ಎಂದು ಕಳವಿನ ಕಷ್ಟವೃತ್ತಿಯುಮಂ ದ್ರವ್ಯದೊಳಾದ ಸಂಕ್ಲೇಶಮುಮಂ ವಿಚಾರಿಸಿ ಸಂಸಾರಕ್ಕೆ ಪೇಸಿ ಪಡಿಯಂ ತೆಱೆಯಿಸಿ ಪೊಱಮಟ್ಟು [ಮಹಾಪಾತಕಂ ಲೋಭದಿಂ ಮತಿಗೆಟ್ಟು ಸುಗತಿಯಂ ಕಿಡಿಸುವ ಕಜ್ಜಮನೆತ್ತಿಕೊಂಡು ಗಣಧರರಪ್ಪವರಂ ಬಱಿದೆ ಸುತ್ತುತ್ತಿರ್ದಪೆ] ಕೊಳ್ ನಿನ್ನ ಪೊನ್ನನೆಂದು ಪೊನ್ನಂ ತಂದೆರ್ದೆಯುಮೋಲೀಡಾಡಿ [ಮುನಿನಾಥಂಗೆ ಪೊಡೆಮಟ್ಟು ಮುಂದೆ ನಿಂದಿರ್ದು ॥ ೨೪೦

ದುರಿತಮದಗಂಧಸಿಂಧುರ
ಹರಿ ಚಾರುಚರಿತ್ರ ನಿರ್ವೃತಿಶ್ರೀಸತಿಯಂ ।
ಬರಿಸುವ ಜಿನೇಂದ್ರದೀಕ್ಷೆಯ
ನುರುಮುದದಿಂದೀವುದೆಂದು ಬೇಡುತೆ ಮುನಿಯಿಂ [2]] ॥ ೨೪೧

---

1 ಮುಚ್ಚಿಗಮನೀಯುವೆಯುಂ (ಗ) 2 ಬೇಱ್ಪುದು ಮುನಿಯುಂ (ಕ. ಖ.)

ಪರಮಶ್ರೀಯೊಳ್ ನೆರೆಪುವ
ದುರಿತಾರಿಯನಱಿಪ ದೇವರಿಂ ಪೊಗೞಿಸ ಭಾ ।
ಸುರಜೈನದೀಕ್ಷೆಯುಂ ಸ
ಚ್ಚರಿತಂ ಜಿನದಾಸನಾಕ್ಷಣಂ [1] ಕೈಕೊಂಡಂ ॥ ೨೪೨

ಅಂತು ಜಿನದಾಸಂ ಜಾತರೂಪಧರನಾಗಿರ್ಪುದುಂ ಜಿನದತ್ತ ಸೆಟ್ಟಿಯುಂ ವೈರಾಗ್ಯಂ ಪುಟ್ಟಿ ತನ್ನ ಮಾಡಿದ ಮಾಟಕ್ಕೆ [ಕರಮೆಲ್ಲದೆ] ನೊಂದೆನ್ನ ಪಾಪಮಿಂತಲ್ಲದೆ ಪೋಗದೆಂದು ತಾನುಂ ಜಿನದೀಕ್ಷೆಯುಂ ಕೊಂಡು ತಪಂಗೆಯ್ದು ಸಂನ್ಯಸನವಿಧಿಯಿಂ ಮುಡಿಪಿ ಮಹರ್ಧಿಕ ದೇವನಾಗಿ ಪುಟ್ಟಿದಂ. ಜಿನದಾಸಮುನೀಂದ್ರನುಂ ಪಲಕಾಲಂ ತಪಂಗೆಯ್ದು ಸಮಾಧಿಮರಣದಿಂ [ಮುಡಿಪಿ] ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱುಸಾಗರೋಪಮಾಯುಷ್ಯಮನೊಡೆಯನಹಮಿಂದ್ರನಾಗಿ ಪುಟ್ಟಿದನದಱಿಂ ॥ ೨೪೩

[ಕಳವಿನ ಮಾತಂ ನೆಱೆ ಪಂ
ಬಲಿಸದೆ ಜಿನಪಾದಸೇವೆಯಿಂದಿರ್ಪ ನರಂ ।
ಮಲಹಾರಿಯಾಗಿ ನಿರ್ವೃತಿ
ಲಲನೆಗೆ ಪತಿಯಪ್ಪನೆಂಬುದೊಂದಚ್ಚರಿಯೇ] ॥ ೨೪೪

ಕಳವಿನ ಮಱೆಯೊಳ್ ಮೆಲ್ಲನೆ
ಮುಳಿಸಿಂದಘಮೆಂಬ ಬೇಡನಿರ್ದೆಚ್ಚಪನಾ ।
ಖಳನಂ ಬಂಚಿಸಿ ಸುಖದೊಳ್
ನೆಲಸುವ ಮನಮುಳ್ಳೊಡಂಜಿ ಮಾಣ್ಬುದು ಕಳವಂ ॥ ೨೪೫

ಎಂದು ಗಣಧರಸ್ವಾಮಿಗಳ್ ಕಳವಿನೊಳಾದ ಪೊಲ್ಲಮೆಯುಮನ ಸ್ತೇಯದೊಳಾದ ಮಹಾಮಹಿಮೆಯುಮಂ ಪೇೞ್ವುದುಂ ॥ ೨೪೬

---

[1] ತಡೆದಿರದೆ ಕೂರ್ಮೆಯಿಂ (ಕ. ಬ.)

ದುರಿತಾರಾತೀಭಕಂಠೀರವನಘಗಿರಿವಜ್ರಾಯುಧಂ ವಾಗ್ವಧೂಸೌಂ
ದರರೂಪಂ ಕೇಳ್ದು ರಾಗಂಬೆರಸು ನಲಿದನತ್ಯೂರ್ಜಿತಂ ದೇವಧಾತ್ರೀ
ಧರಧೈರ್ಯಂ ನಿರ್ಮಲಂ ಸಂಸೃತಿನಿಧಿಮದನಧ್ವಂಸಿ ತ್ರೈವಿದ್ಯಚಕ್ರೇ
ಶ್ವರ [1] ಪಾದಾಂಭೋಜಭೃಂಗಂ ಸುಕವಿಜನಮನಃಪದ್ಮಿನೀರಾಜಹಂಸಂ||

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಅಸ್ತೇಯವ್ರತವ್ಯಾವರ್ಣನಂ
ದ್ವಾದಶಾಶ್ವಾಸಂ.

---

1 ಲಕ್ಷ್ಮೀವರ (ಗ)

ತ್ರಯೋದಶಾಶ್ವಾಸಂ

ಶ್ರೀಮತ್ಸುರೇಂದ್ರವಂದ್ಯಂ
ಸಾಮಾನ್ಯಮೆ ಕಳ್ಳದ ವ್ರತಂ ಚಿಂತಿತಚಿಂ ।
ತಾಮಣಿಯೆಂದೊಸೆದಂ ಧರ
ಣೀಮಹಿತಂ ಸುಕವಿನಿಕರಪಿಕಮಾಕಂದಂ ॥ ೧

[ಅಂತಸ್ತೇಯವ್ರತಮಂ
ಕಂತುನಿಭಂ ಕೇಳ್ದು ಸಂತಸಂಬಟ್ಟು ಮಹೀ ।
ಕಾಂತಂ ನಾಲ್ಕನೆಯ ವ್ರತ
ಮಂ ತಡೆಯದೆ ಕೇಳ್ವೆನೆಂದು ಕರಮಾದರದಿಂ ॥ ೨

ಗೌತಮಸ್ವಾಮಿಗಳ್ಗೆ ಪೊಡೆಮಟ್ಟು ಕೈಗಳಂ ಮುಗಿದು ಕರ್ಮರಾಜನೊಡ್ಡಂ ಕಿಡಿಸುವ ನಿಬ್ರಹ್ಮದ] [1] ಕಥೆಯನೆನಗೆ ನಿಮ್ಮಡಿ ಬೆಸಸಿಮೆಂಬುದುಂ ॥ ೩

ಗಣಧರಮುನಿಮುಖ್ಯರ್ ಗುಣ
ಗಣನಿಳಯರ್ ಮೃದುನಿನಾದದಿಂ ಭೂಪ [2] ಶಿಖಾ ।
ಮಣಿಗೆ ಸುರಮನುಜಪನ್ನಗ
ಗಣಪರ್ ಕೈಮುಗಿಯೆ ಪೇೞಲುದ್ಯತರಾದರ್ ॥ ೪

[ಇಂತೆಂದು ಪೇೞ್ದರ್:—]ಹಣಿತೆಯೊಳ್ ಕೂಡಿ ಬತ್ತಿಯಿಂದೆಣ್ಣೆಯಿಂದಂ ಬೆಂಕಿಯಿಂದಂ ಬೆಳಗಿಂದಂ ಸೊಡರೆಂತೊಪ್ಪುಗುಂ, ಕರಿಯ ಭೂಮಿಯೊಡಗೂಡಿ ಮೊದಲಿಂದಂ ಪಣಿಯಿಂದಂ ಪೆರ್ಗೊಂಬುಗಳಿಂದಂ

[1] ಅಂತು ಕಳ್ಳದ ವ್ರತದ ಕಥೆಯನಱಿದು ಮುಂದಣ ಕರ್ಮರಾಜನಬಲಮಂ ನಿಬ್ರಹ್ಮ ಕೆಡಿಸುವ ಅಬ್ರಹ್ಮದ (ಗ) [2] ಭವ್ಯ (ಗ)

[ಕಿಱುಗೊಂಬುಗಳಿಂದಂ]ಆಲದಮರನೆಂತೊಪ್ಪುಗುಂ, ಬಲ್ಲವರೊಡಗೂಡಿ ಬಣ್ಣದಿಂದೊರೆಯಿಂ ತೂಕದಿಂ ಮೆಚ್ಚಿಕೆಯಿಂದಂ [1] ಪೊನ್ನೆಂತೊಪ್ಪುಗುಂ, ರೂಪಿನೊಡಗೂಡಿ ವಸ್ತ್ರದಿಂ ತಿಳಕದಿಂ [ತೊಡವಿಂ] ಕಾಡಿಗೆಯಿಂ ಸ್ತ್ರೀಯೆಂತೊಪ್ಪುಗುಂ, ಬೆಳ್ದಿಂಗಳೊಡಗೂಡಿ ತಂಗಾಳಿಯಿಂ ದುಯ್ಯಲ್ಗಳಿಂ ವಿಲಾಸದಿಂ ತಿಳಿಗೊಳಂಗಳಿಂ ವಸಂತ [ಮಾಸ] ಮೆಂತೊಪ್ಪುಗುಮಂತೆ ಸಮ್ಯಕ್ತ್ವದೊಳ್ ಕೂಡಿ ಕೊಲ್ಲದ ಪುಸಿಯದ ಕಳ್ಳದ ಪಾದರಮಿಲ್ಲದ ವ್ರತಂಗಳಿಂದಂ ಶ್ರಾವಕನುಮೊಪ್ಪುವುದು ॥ ೫

ಪರವನಿತೆಗೆಱಗದವನಂ
ಧರೆ ನಂಬುವುದವನಿಪಾಳರುಂ ಕೈಕೊಳ್ವರ್ ।
ಕರಮಾದರದಿಂದೆನೆ ಪಾ
ದರಮಂ ಮಾಣೆಂಬ ಸುವ್ರತಂ ಕೇವಳಮೇ ॥ ೬

[ಇನ್ನಾ ವ್ರತದ ಮಹಿಮೆಯೆಂತೆಂದೊಡೆ, ಈ ಜಂಬೂದ್ವೀಪದ ಭರತಕ್ಷೇತ್ರದ ವತ್ಸಕಾವತೀವಿಷಯದ ಕೌಶಾಂಬಿಯೆಂಬ ಪೊೞಲನಾಳ್ವ] [2] ದಂತಬಳನೆಂಬ ಮಹಾಮಾಂಡಳಿಕನಾತನ ಪಟ್ಟದರಸಿ ಧಾರಿಣೀಮಹಾದೇವಿ ಯೆಂಬಳವರ್ಗೆ ಪ್ರಿಯನಂದನಂ ॥ ೭

[ಸುರಪತಿವಿಭವಂ ಧಾತ್ರೀ
ಧರಧೈರ್ಯಂ ಕಾಮದೇವಸನ್ನಿಭನಹಿತ ।
ದ್ವಿರದೇಂದ್ರಸಿಂಹನರ್ಹ
ಚ್ಚರಣಸರೋಜಾತಭೃಂಗನಮಳಚರಿತ್ರಂ ॥ ೮

ಪ್ರಮಾಥಿಯೆಂಬಗ್ರನಂದನ] [3] ನಂತವರ್ ಸುಖದಿಂ ರಾಜ್ಯಂಗೆಯ್ಯುತ್ತುಮಿರ್ಪುದುಂ ॥ ೯

---

1 ಈ ಪದವು (ಗ) ಪುಸ್ತಕದಲ್ಲಿ ಮಾತ್ರ ಕಾಣುಬರುತ್ತದೆ.

2 ಇನ್ನದಱ ಮಹಿಮೆಯಂ ಪೇಳ್ವಡೆ ವತ್ಸವಿಷಯದ ಕೌಶಂಬಿಯೆಂಬ ಪುರಮನಾಳ್ವಂ (ಗ)

3 ಪ್ರಮಾಥಿ ಕುಮಾರನೆಂಬ (ಗ)

ವನಜಂಗಳ್ ದಳವೇಱೆ ಚೂತಲತೆಗಳ್ ನೀರೇಱೆ ಶೀತಾಂಶು ತೊ
ಟ್ಟನೆ ಪೂರ್ವಾದ್ರಿಯನೇಱೆ ಮನ್ಮಥಗಜಂ ಸೊಕ್ಕೇಱೆ ಪೊನ್ನುಯ್ಯಾಲಂ
ವನಜಾತಾಕ್ಷಿಯರೇಱೆ ಕಾಮನ ಶರಂ ಕೂರ್ಪೇಱೆ ಪುಂಡ್ರೇಕ್ಷುಚಾ
ಪನ ಚಾಪಂ ಗೊಲೆಗೇಱೆ ಬಂದುದು ವಸಂತಂ ಸಂತತೋತ್ಸಾಹದಿಂ ॥೧೦

[ಜಿನವಚನಾಮೃತಾಬ್ಧಿ ಜಗಮಂ ನೆಱೆ ಪರ್ವಿತೊ ಮೇಣ್ ಧರಿತ್ರಿಯಂ
ಜಿನವರಕೀರ್ತಿ......ನೆಱೆ ತೀವಿತೊ ಮೇಣಮೃತಾಬ್ಧಿ ಲೋಕಮಂ
ತನಗೆಡೆಮಾಡಿಕೊಂಡುದೊ ಮಹಾದ್ಭುತಮೆಂಬಿನಮುಜ್ಜ್ವಳಕ್ಕೆಯಿಂ
ವನಜವಿರೋಧಿಯೊಂದುನಿಜಕಾಂತಿ ಬಸಂತದೊಳೊಪ್ಪಿ ತೋಱುಗುಂ ॥

ಓಳಿಯೊಳಿರ್ದ ಚೂತಮಹಿಜಾತಸಮೂಹದ ಚೆಲ್ವುವೆತ್ತ ಸ
ಲ್ಲೀಲೆಯ ಕೆಂದಳಿರ್ಗಳಿಪಿ ಪೊರ್ದಿದ ತುಂಬಿಗಳರ್ತಿವಟ್ಟು ಸ
ಲ್ಲೀಲೆಯಿನಿಂದ್ರನೀಲದ ಪರಲ್ಗಳನಾವನದೇವಿಯರ್ ಮೃಗೇಂ
ದ್ರಾಳಿಗೆ ಕೆಂದಳಂಗಳಿನುದಾರತೆಯಿಂ ಕುಡುವಂತೆ ರಂಜಿಕುಂ ॥ ೧೧

ಕೊಸಗಿನ ಪೂವಿನೊಪ್ಪು ಸುರಹೊನ್ನೆಯ ಪುಷ್ಪದ ಚೆಲ್ವು ಪೆಂಪುವೆ
ತ್ತ ಸಕದಿನಿರ್ದ ಸಂಪಗೆಯ ಪೂವಿನೊಳಾದ ಬೆಡಂಗು ನಾಡೆ ರಂ
ಜಿಸೆ ವನದೇವಿಯರ್ ನಲಿದು ಮನ್ಮಥರಾಜನ ಬರ್ಪುದಕ್ಕೆ ರಾ
ಗಿಸಿ ಮನವೊಲ್ದು ಪೊತ್ತಿಸಿದ ದೀವಿಗೆಯಂದದಿನೊಪ್ಪಿ ತೋಱುಗುಂ॥೧೨

ನಲಿನಲಿದತ್ತಲಿತ್ತಲೆಡೆಯಾಡುವ ಸೋಗೆನವಿಲ್ಕಡಂಗಿ ಮೆ
ಲ್ಲುಲಿ ತರವೊಂದಿ ಪಾಡುವ ಮದಾಳಿ ಮನೋಭವರಾಗಮುಣ್ಮೆ ಬಂ
ದೆಳಸುವ ಜಕ್ಕವಕ್ಕಿ ಪುಗಲೆಂದದಟಿಂ ದನಿಗೆಯ್ಯುತಿರ್ಪ ಕೋ
ಗಿಲೆ ವಿಟರರ್ತಿಯುಂ ಸಲಿಸಿ ಮೆಲ್ಲನೆ ತೀಡುವ ದಕ್ಷಿಣಾನಿಲಂ ॥ ೧೩

ಅಂತು ವಿಟವಿಟೀಜನಕ್ಕಭ್ಯುದಯಮಾಗೆ ಬಂದ ವಸಂತಮಾಸದೊಳ್ ವನಪಾಲಕಂ ಬಂದು ದಂತಿಬಲ ಮಹಾರಾಜಂಗೆ ಬಿನ್ನಪಂಗೆಯ್ವುದುಮರಸನ...ಹೃದಯನಾಗಿ ವನಪಾಲಕಂಗಂಗಚಿತ್ತಮನಿತ್ತು ವನಮಂ ಲೇಸುಮಾಡೆಂದು ಪೋಗಲ್ವೇೞ್ದು ಮಱುದಿವಸಂ ವನಕ್ರೀಡೆಗೆ ಪೋಪ ಬಗೆಯಿಂದಾನಂದಭೇರಿಯಂ ಪೊಯ್ಸುವುದುಂ ॥ ೧೪

ಪೊಳವಲರ್ಗಣ್ಣ ನೀಳ್ದ ನಿಡುವುರ್ವಿನ ಸುಕ್ಕಿದಮೆರ್ಕೆವೆತ್ತ ಕುಂ
ತಳದ ಪೊದಳ್ಕೆವೆತ್ತಸಿಯ ಬಾಸೆಯ ಪೊಂಗಳಸಂಬೊಲಿರ್ದ ಪೆ
ರ್ಮೊಲೆಯ ಲತಾಂಗದುಳ್ಳುಡೆಯ ತೆಳ್ವಸಿಱಿಂದುನಿಭಾಸ್ಯದಂಗನಾ
ವಳಿ ನೆರೆದಂದು ಬಂದುದು ಮನೋಜನ ತಂತ್ರದವೋಲ್ ವಿಲಾಸದಿಂ [1] ॥

ಪೊಳಪಿಂದಂ ಚಲ್ಲಗಣ್ ಕಾಮನ ಕುಸುಮಶರಾನೀಕಮಂ ಪೋಲೆ ಭೂಷಾ
ವಳಿಯುಂ ಕಯ್ಯಾಗೆಯುದುಚ್ಚುತ್ತಿರೆ ವಿಟಜನಮಂ ಸತ್ಕಟಾಕ್ಷಂಗಳಿಂದ
ವ್ವಳಿಸುತ್ತುಂ ಕಾಮಪಾಶಕ್ಕೆಣೆಯೆನಿಸಿ ಕರಂ ಸುತ್ತಿ ರಾಜಾಲಯಕ್ಕ
ಗ್ಗಳವೊಪ್ಪಂಬೆತ್ತು ಬಂದಿರ್ದುದು ನಯದೊದವಿಂ ವಾರನಾರೀಕದಂಬಂ॥

ಅಂತು ಪೆಂಡವಾಸಮುಂ ಪುರಪುರಂಧ್ರಿಯರುಂ ರಾಜಕುಮಾರರುಂ ಪ್ರಮಾಥಿಕುಮಾರಂ ಮೊದಲಾದ ಕುಮಾರರುಂಬೆರಸು ಧಾರಿಣೀಮಹಾದೇವಿಯುಂ ತಾನುಂ ಗಂಧಸಿಂಧುರಾರೂಢರಾಗಿ ॥ ೧೮

ಕರಡೆಯ ಡಕ್ಕೆಯ ಪವಳದ
ಪರಿಡಕ್ಕೆಯಮರ್ದ ದನಿಗಳುಂ ಭೋರ್ಗರೆಯಲ್ ।
ಶರನಿಧಿಗಂಭೀರರವ
ಕ್ಕೊರೆಯಾಗಿರೆ ಬಂದು ದಂತಿಬಳನರನಾಥಂ ॥ ೧೯

ಮಹೋತ್ಸಾಹದಿಂ ಪೊಱಮಟ್ಟು ಬಂದು ವನಮಂ ಪೊಕ್ಕು ವಸಂತರಾಜನ ಕಟಕದಂತಿರ್ದ ವನದ ಚೆಲ್ವುಮಂ ನೋಡಿ ಧಾರಿಣೀಮಹಾದೇವಿಗಿಂತೆಂದಂ ॥ ೨೦

ಗಾಳಿಯ ತೀಟದಿಂದುಲಿವ ಕೆಂದಳಿರ್ಗಳ್ಪಱೆಯುಂ ಪೊದಳ್ದ ಭೃಂ
ಗಾಳಿಯ ನಿಸ್ವನಂ ನಿಮಿರ್ದ ಮಂಗಳಗೀತಮನಂತೆ ಚೂತಭೂ
ಜಾಳಿಗಳೊಳ್ಪು ಮಂಟಪದ ಭಂಗಿಯನಾವಗಮೇನೊ ಪೋಲೆ ಸ
ಲ್ಲೀಲೆಯಿನೀವನಂ ನೆಱೆಯೆ ಪೋಲ್ತುದು ನೋಡ ವಿವಾಹಗೇಹಮಂ॥ ೨೧

---

[1] ವಳಿವೆರಸಿಂದು ಬಂದುವನವುಂ ವಿಭು ಪೊಕ್ಕ ನನಂಗನಂದದಿಂ (ಗ)

ಎಂದು ಮುಂದೆ ಕಿಱಿದಂತರಮಂ ಪೋಗಿ ಗಗನತಳದ ನಿರ್ಮಳತೆಯಂ ನೋಡಿ ನಲ್ಲಳ್ಗಿಂತೆಂದಂ ॥ ೭೦

ದುರಿತದೊಳೊಂದದಿರ್ಪ ಮತದಂದಮುಮಂ ದುರಿತಾರಿಯಪ್ಪ ಭಾ
ಸುರಜಿನವಾಕ್ಯದಂದಮುಮನೊಳ್ಳಿತುಗೇಳ್ದ ಮಹಾತ್ಮನಪ್ಪವಂ
ಪರಮತಮಂ ಬಿಸುಟ್ಟು ವಿಮಳಾಂತರನಾದವೊಲಭ್ರಮಂ ಸವಿ
ಸ್ತರದೊಳ್ ಬಿಟ್ಟು ನಿರ್ಮಲತೆಯಂ ನೆಱೆ ತಾಳ್ದುದಾನಭೋಂಗಣಂ॥ ೭೩

ಎನುತ್ತುಂ ಬರ್ಪ್ಪತನರಲ್ದ ತಾವರೆಗೊಳಂಗಳಂ ನೋಡಿ ಮನಃಪ್ರಿಯೆಗಿಂತೆಂದಂ ॥ ೭೪

ಸುರಪತಿವಂದಿತಕ್ರಮಪಯೋರುಹನಪ್ಪ ಜಿನೇಶನೊಳ್ ಮನಂ
ಮುರಿಯದೆ ನಿಂದು ಕಾದಿ ಗೆಲಲಾಱದೆ ಕೆಟ್ಟೊಳಸಾರ್ದು ಪೋಗಿ ಬೆ
ಳ್ಳರಳ್ಗಳಪ್ಪ ಲೋಕದ ಜಡಾತ್ಮರನಂಜಿಪನೆಂದು ಧಾರಿಣೀ
ವರವಧು ಕಾಮನಂ ನಗುವ ಭಂಗಿಯೊಳಿರ್ದುವು ವಾರಿಜಾಕರಂ ॥ ೭೫

ಎಂದು ನಗುತ್ತುಂ ಕಿಱಿದಂತರಂಬರಂ ನಡೆದು ಮನೋಜರಾಜನ ಮನೆಯಂತಿರ್ದ ಸಹಕಾರಮಹೀರುಹಂಗಳುಮಂ ಸುಜನರ ಮನದಂತೆ ನೇರಿತ್ತಾಗಿ ನಲಂಬೆತ್ತಿರ್ದ ಕಳಲತೆಗಳುಮಂ ಜಿನಧರ್ಮದಂತೆ ನಿರ್ಮಳಮಾಗಿ ಸೊಗಯಿಸುವ ತಿಳಿಗೊಳಂಗಳುಮಂ ಸಜ್ಜಾಜನಿಯ ಮನದಂತೆ ಚೆಲ್ವುವೆತ್ತಶೋಕೆಯ ಮರಂಗಳುಮಂ ಸಹಜಕವಿಯ ವಚನದ ರಚನೆಯಂತಿನಿದಪ್ಪ ವೃಂದವಾಡೆಗಳುಮಂ ಮನೋವಲ್ಲಭೆಗೆ ತೋಱುತ್ತುಂ ಬಂದು ತದನಂತರಂ ಮೊಲ್ಲೆಯ ಸಂಪಗೆಯ ಸುರಹೊನ್ನೆಯ ಕುಸುಮನಿಚಯದಿಂ ವಿನಿರ್ಮಿಸಿದ ಬಾಸಿಗಮುಮಂ ಸುರಗಿಯ ಜಾದಿಯರಲ್ಗಳಿಂ ವಿರಚಿಸಿದ ಕಂಕಣಮುಮಂ ಮನೋರಮೆಗೆ ಮನೋನುರಾಗದಿಂ ತುಡಿಸಿ ತಾನುಂ ತೊಟ್ಟು ನೆಱೆಯೆ ಶೃಂಗಾರಂಗೆಯ್ದು ಪ್ರಮಾಥಿಕುಮಾರಂ ಮೊದಲಾದ ಕುಮಾರರ್ಗಂ ಕೊಟ್ಟು ಪಿರಿದುಬೇಗಂ ವನಕ್ರೀಡೆಯನಾಡಿ ಬೞಲ್ದು ಬಂದೊಂದು ಮಾವಿನ ಲತಾಮಂಟಪದೊಳಗೆ

ತಳಿರ ಪಾಸಿನಮೇಲೆ ಪಟ್ಟಿರ್ಪುದುಂ ರಾಜಕುಮಾರರುಂ ವಿಳಾಸಿನೀಜನಮುಂ ಕುಮಾರತಂಡಮುಂ ತಂತಮ್ಮ ಮನಕ್ಕೆ ಬಂದ ಸಹಕಾರಮಹೀರುಹಂಗಳಂ ಸಾರ್ದು ವಿನೋದದಿಂದಿರ್ದರನ್ನೆಗಂ ಪ್ರಮಾಥಿಕುಮಾರನುಂ ಸೌಂದರದೇವಿಯುಮಾನಂದದಿಂದೊಂದು ಕಂಕೆಲ್ಲಿಮಹೀಜಾತದ ಕೆಳಗೆ ॥ ೨೬

ಅರಲ ಪಾಸಿನಮೇಲೆ ರಂಭೆಯುಮಿಂದ್ರನುಂ ರತಿಯುಂ ಮಹೋ
ಜ್ಜ್ವಳಯಶೋನ್ವಿತನಪ್ಪ ಕಾಮನುಮಿರ್ಪ ಭಂಗಿಯೊಳಿರ್ದು ಕೋ
ಮಳೆಯು ಹಾಸವಿಲಾಸವಿಭ್ರಮಮಂ ನೃಪಾತ್ಮಜನಾಮಹಾ
ಬಲನ ಗಾಡಿಯನೊಪ್ಪುವಾಸತಿ ಕೂರ್ತು ನೋಡುತುಮರ್ತಿಯಿಂ ॥ ೨೭

ಮೊರೆವಳಿಗಳ ಮೃದುನಿನಾದಕ್ಕಂ ಪಾಡುವ ಗಾಂಧರ್ವರ ಗೇಯದ ನುಣ್ಪುವೆತ್ತ ಕೋಮಲನಿನಾದಕ್ಕಂ ಜನದ ಕಳಕಳಕ್ಕಂ ಕಿವಿಸೋಲ್ತು ಪುರುಡಿಂ ಸವತಿವೆಂಡತಿ ಮುನಿದಗಲ್ವಂತೆ ನಿದ್ರಾಂಗನೆ ಸೌಂದರಮಹಾದೇವಿಯನೊಲ್ವುದುಂ ॥ ೨೮

ಅರೆಮುಚ್ಚುತ್ತಿರ್ದ ನೇತ್ರದ್ವಯದ ಪೊಳಪು ಪಾಠೀನಯುಗ್ಮಂ ಸರೋಜಾ
ಕರದಿಂದಂ ಮೇಲೆ ಬಂದುಮ್ಮಳಿಸಿ ಪುಗುವವೋಲ್ ನೋಡೆ ಕಣ್ಗೊಪ್ಪೆ ನಿದ್ರಾ
ಭರದಿಂ ಮೆಯ್ಯೊಲೆ ಹಾರಂ ಕೆಲಕೆ ತೊಲಗೆ ಸುಯ್ಗಂಪಿನೊಳ್ ಕೂಡಿ ಪೊಣ್ಮು
ತ್ತಿರೆ ಧಮ್ಮಿಲ್ಲಂಗಳತ್ತಂ ಪರಿಯೆ ತೊಲಗೆ ದಿವ್ಯಾಂಬರಂ ದೇಹದಿಂದಂ॥ ೨೯

ಅಂತು ನಿದ್ರಾಂಗನಾಲಿಂಗಿತೆಯಾಗಿರ್ದ ನಲ್ಲಳಂ ತೆಗೆದು ತಕ್ಕೈಸಿ ಮೆಲ್ಲನೆ ಪ್ರಸೂನಶಯ್ಯೆಯೊಳ್ ಪಟ್ಟಿರಿಸಿ ದಿಶಾವಲೋಕನಂಗೆಯ್ಯುತ್ತಿರ್ಪಿನಮೊರ್ವ ಮಹಾಸಾಮಂತನ ಮಗಂ ವಸಂತನೆಂಬಂ ತನ್ನ ಪ್ರಾಣವಲ್ಲಭೆಯಪ್ಪ ವಸಂತತಿಲಕೆಯೆಂಬ ರಾಜಪುತ್ರಿಗೆ ತನ್ನ ಬಿಲ್ಲಬಲ್ಮೆಯುಂ ತೋಱಲೆಂದು ಪುಂಖಾನುಪುಂಖಮೆಂಬ ಸೀಮಾವಿನ ದೋರೆ

ಗಾಯ್ಗಳಂ ಗೊಲೆವೆರಸು ನೆಲಕ್ಕೆ ಬೀೞಲೀಯದೆ ಸಾಯಕಮೆ ಕೈ
ಯೆನೆ ಪಟ್ಟಿರ್ದ ಮಾರ್ಗದೊಳ್ ಲೀಲೆಯಿಂದೆಚ್ಚು ಮನೋಹರಿಗೆ
ಕುಡುತಿರ್ಪುದುಂ ಅದಂ ಪ್ರಮಾಥಿಕುಮಾರಂ ಕಂಡು ॥ ೨೦

ಕಡುಜಾಣಂ ಬಿಲ್ಲೊಳೀತಂ ಸ್ಮರನಿಭನದಟಂ ನಲ್ಲಳೆಂದಂದು ನೇ
ರ್ಪಡೆ ನಾನಾಭಂಗಿಯಿಂ ತೋಱಿದಪನಿವನ ಕೌಶಲ್ಯಮಂ ಬೇಗದಿಂ ಕಂ
ಡೊಡೆ ನೀನುಂ ತೋಱವೇೞ್ಕೆನ್ನದೆ ಬಱಿದಿರಳೀಕಾಂತೆಯುಂ ಚಾಪ
ಮಂ ತಾಂ
ಪಿಡಿಯಲ್ ಜಾಣಿಲ್ಲ ಕೇಳಿಲ್ಲೆನಗೆನೆ ಪೆಱತೇಂ ಬಲ್ಲೆನತ್ಯಂತದೂರಂ ॥ ೨೧

ಅದನೀ ಕಾಮಿನಿ ಕಾಣದೆ
ಕದ (?) ಲೇಸಾಯ್ತೆನ್ನ ಪುಣ್ಯದಿಂದೀ ಪದದೊಳ್ ।
ಮದಗಜಗಮನೆಗೆ ನಿದ್ರೆಯು
ಮುದಯಿಸಿದುದು ಕೇಳದೊಂದತಿಶ್ರಮದಿಂದಂ ॥ ೨೨

ಇವಳಱಿಯದ ಕಳಗಳ್ ಭೂ
ಭುವನದೊಳಿಲ್ಲೀಕೆ ನಿದ್ರೆಯಿಂದಿರ್ದು ಮಹೀ ।
ಧವ ನಿನ್ನ ಬಿಲ್ಲ ಬಲ್ಮೆಯ
ನಿವನಂತಿರೆ ತೋಱವೇೞ್ಕುಮೆನ್ನದ ಮುನ್ನಂ ॥ ೨೩

ಪೋಪೆನೆಂದೆರ್ದು ಮೆಲ್ಲನೆ ಪೊಱಮಟ್ಟು ತನ್ನ ಪೋಗನೊರ್ವರ್ಗ ಪ್ಪೊಡಂ ಪೇೞದೆ ಧನುರ್ವಿದ್ಯೆಯಂ ಕಲ್ವೆನೆಂಬುದ್ಯೋಗಮನೆತ್ತಿಕೊಂಡು ಕತಿಪಯಪ್ರಯಾಣಂಗಳಿಂ ಪಾಟಲೀಪುತ್ರಮೆಂಬ ನಗರಕ್ಕೆ ಬಂದು ದ್ರೋಣಾಚಾರ್ಯರಂ ಕಂಡು ॥ ೨೪

ಬೆಲೆಯಿಲ್ಲೆನಿಸುವ ರತ್ನಾ
ವಳಿಯಿಂ ಬಿಲ್ಲೋಜನಂಘ್ರಿಯುಗಮಂ ಧಾತ್ರೀ ।

ತಳನಾಥಸುತಂ ಪೂಜಿಸಿ
ಪೊಡೆಮಟ್ಟು ಬೞಿಕ್ಕೆ ವಿನಯದಿಂದಿರೆ ಭೂಪಂ][1] ೩೫

ದ್ರೋಣಾಚಾರ್ಯರ್ ಮನದೊಳ್
ಜಾಣನಿವಂ ಚಾರುರೂಪನತ್ಯಧಿಕಗುಣಂ ।
ಕ್ಷೋಣೀಶನಾಗವೇೞ್ಕುಂ
ಕ್ಷೋಣಿಯೊಳುೞದವರ್ಗೆ ವಿನಯಗುಣಮಿನಿತೊಳವೇ ॥ ೩೬

[ಆವಿನಯಕ್ಕಂ ಬ್ರಾಹ್ಮಣ
ನವನೀನಾಥಂ ಸಮಸ್ತಗುಣಯುತನಕ್ಕುಂ ।
ಪ್ರವರವಣಿಕ್ತನಯಂ ಸಂ
ದ ವಿದಗ್ಧಂ ಜಾಡ್ಯನಕ್ಕುಮೆಂತುಂ ಶೂದ್ರಂ ॥ ೩೭

---

[1] (ಗ) ಪುಸ್ತಕದಲ್ಲಿ ದಂತಬಲಮಹಾರಾಜನ ವನಕ್ರೀಡಾವರ್ಣನೆಯಿಲ್ಲ. ೧೦ನೆಯ ಪದ್ಯದಿಂದ ಮುಂದೆ ಅದರ ಪಾಠವು ಹೀಗಿದೆ :—

ಅಂತು ಬಂದ ವಸಂತಮಾಸದೊಳ್ ಪ್ರಮಾಥಿಕುಮಾರಂ ತನ್ನ ಮನಃಪ್ರಿಯೆ ವಸಂತಮಾಲೆವೆರಸು ವನಕ್ರೀಡೆಯನಾಡಲೆಂದು ಅರ್ತಿವೆರಸು ॥
ಪೊಳೆವಲರ್ಗಣ್ಣ....(ಪದ್ಯ೧೬)ಅಂತು ಪೊಕ್ಕು ನಲ್ಲಳ ಮೊಗಮಂ ನೋಡಿ ॥
ಗಾಳಿಯ ತೀಂಟದಿಂ......(ಪದ್ಯ೨೧)ಎಂದು ಕಿಱಿದಂತರಮಂ ಪೋಗಿ ॥
ಒಳಿಯೊಳಿರ್ದ......(ಪದ್ಯ೧೨)ಎಂದುಮೆಚ್ಚುತ್ತುಂ ಕಿಱಿದೆಡೆಯಂಪೋಗಿ ॥
ಕೊಸಗಿನ ಪೂವಿನೊಪ್ಪ....(ಪದ್ಯ೧೩)ಎಂದು ಮುಂದೆಕಿಱಿದಂತರಂ ನಡೆದು ॥
ಸುರಪತಿವಂದಿತ......(ಪದ್ಯ೨೫) ಎಂದು ಮನೋವಲ್ಲಭೆಯಪ್ಪ ವಸಂತಮಾಲೆಯ ಕಯ್ಯಂ ಪೊಯ್ದು ನಗುತಂ ಪೋಗಿ ವನಕ್ರೀಡೆಯುಮಂ, ಜಲಕ್ರೀಡೆಯುಮನಾಡಿ ನಿಂದಿರ್ಪುದುಂ, ವಿಶ್ವಸೇನನೆಂಬ ರಾಜಕುಮಾರಂ ಶ್ರೀಮತಿಯೆಂಬ ತನ್ನ ವಲ್ಲಭೆಗೆ ಮಾವಿನೆಳೆಗಾಯ್ಗಳಂ ಸರಸಂಧಾನಂಬೇಸಿ ನೆಲನಂ ಮುಟ್ಟಲೀಯದೆ ತರಿಸಿ ಕೊಡುವುದುಂ, ಪ್ರಮಾಥಿಕುಮಾರಂ ಕಂಡು ತನಗರ್ತಿಯಾಗಿ ರಾಜಭವನಕ್ಕೆ ಬಂದು ಚಾಪವಿದ್ಯೆಯುಂ ಕಲ್ತು ಬರ್ಪೆನೆಂದು ನಡುವಿರುಳಪ್ಪಾಗಳಿದರ್ಗಂ ಪೇಳದೆ ಪಾಟಲಿಪುರಕ್ಕೆ ಪೋಗಿ ದ್ರೋಣಾಚಾರ್ಯರಂ ಕಂಡು ಪಲವುರತ್ನಂಗಳಂ ಪಾದದೊಳಿಕ್ಕಿ ವಿನಯದಿಂದಿಚ್ಛಾಕಾರಂಗೊಟ್ಟು ನಿಮ್ಮಲ್ಲಿಯೆ ಬಿಲ್ವಿದ್ಯೆಯುಂ ಕಲ್ವೆನೆಂದು ಬಂದೆನೆನ್ನ ಪೆಸರ್ಜಿನಭಕ್ತನೆಂದು ಪೇಳ್ವುದುಂ (ಗ)

ಚಾಗಿಗುಣಂ ಧಾರಿಣಿಪತಿ
ಗೋಗಡಿಸದೆ ವೈಶ್ಯಜಂಗೆ ಲುಬ್ಧಗುಣಂ ಕೇ।
ಳಾಗಳುಮೆಲೆ ಶಾಠ್ಯಗುಣಂ
ಬೇಗಂ ವಿಪ್ರಂಗೆ ಸಹಜಮೆಕ್ಕುಂ ಜಗದೊಳ್ ॥ ೩೮

ಎಂದು ಪೂರ್ವೋಕ್ತನೀತಿಶಾಸ್ತ್ರಮಂ ನೋಡಿ ತಲೆಯಂ ತೂಗಿ ಮಹಾವಿನಯುಪರನೀತಂ ಕ್ಷತ್ರಿಯತನಯನಪ್ಪನೆಂದು ಪ್ರಮಾಥಿಕುಮಾರನ ಮೊಗಮಂ ನೋಡಿ ನೀಮೆಲ್ಲಿಂ ಬಂದಿರೆಲ್ಲಿರ್ಪಿರ್ನಿಮ್ಮ ಪೆಸರೇನೆಂಬುದಿಲ್ಲಿಗೇಂಕಾರಣಂ ಬಂದಿರೆಂದು ಬೆಸಗೊಳ್ವುದುಂ ಪ್ರಮಾಥಿಕುಮಾರನಿಂತೆಂದಂ ॥ ೩೯

ದೂರದೇಶದೊಳಿರ್ದು ಬಂದೆನಿಳಾಮರಾತ್ಮಜನೆಂ ಸವಿ
ಸ್ತಾರದಿಂ ಜಿನಭಕ್ತನೆಂಬುದು ಪೇೞಲೆನ್ನ ಪೆಸರ್ ಗುಣಾ
ಧಾರ ಪೆಂಪಿನ ಚಾಪವಿದ್ಯೆಯನರ್ತಿಯಿಂ ಕಲಲೆಂದು ಪಂ
ಕೇರುಹೋದರವಂಶಭಾಸ್ಕರ ಬಂದೆನೆಂದೊಡೆ ಕುಂಭಜಂ॥ ೪೦

ಪ್ರಮಾಥಿಕುಮಾರನ ನುಡಿವ ಭಾವಕ್ಕಂ ವಿನಯಕ್ಕಂ ಮನದೆಗೊಂಡು ಚಾಪವಿದ್ಯೆಯೊಳೀತನಂ ಜಾಣನಂ ಮಾಡುವೆನೆಂದು ಚಿತ್ತದೊಳ್ ಪೂಣ್ದು ಪ್ರಮಾಥಿಕುಮಾರನ ಕಯ್ಯಂ ಪಿಡಿದೊಡಗೊಂಡು ಪೋಗಿ ಪಂಕ್ತಿಯೊಳುಣಲಿಕ್ಕಿಸಿ ವಸ್ತ್ರತಾಂಬೂಲಾದಿಗಳಿಂ ಸಂತೋಷಂಬಡಿಸಿ ಪಥಶ್ರಮಂಕಳೆದು ಮಱುದಿವಸಮಿಂತೆಂದಂ ॥ ೪೧

ಜಿನಭಕ್ತ ಚಾಪವಿದ್ಯೆಯ
ನನುನಯದಿಂದೆನ್ನ ಸಾರೆ ಧಾತ್ರೀತಳದೊಳ್ ।
ಮನವೊಲ್ದು ಕಲ್ತನವನಾ
ವನೊ ಭಾವಿಸಿ ನೋೞ್ಪೊಡಣ್ಣ ಕೇಳಿನ್ನೊಂದಂ ॥ ೪೨

ಚಾಪವಿದ್ಯೆಯೊಳ್ ನಿನ್ನಂ ಸವ್ಯಸಾಚಿಗಂ ಭೀಮಂಗಮಧಿಕನೆಂಬಂತು ಮಾಡುವೆನಂಜದೆ ಬಿಲ್ಲಂ ಕಲ್ಲೆಂಬುದುಂ ದ್ರೋಣಾಚಾರ್ಯ

ರೊಳಾದ ಕಾರುಣ್ಯಕ್ಕೆ ಮನದೊಳ್ ಮೆಚ್ಚಿ] [1] ಪ್ರಮಾಥಿ ಕುಮಾರಂ ತನ್ನೊಳಿಂತೆಂದಂ ॥ ೪೩

ಓಲಗಿಪಂಗೆ ಭೂಭುಜರ ಕೂರ್ಮೆಯುಮುತ್ತಮಮಪ್ಪ ಧರ್ಮಮಂ
ಕೇಳಲು ಬಂದವಂಗೆ ಮುನಿನಾಥರ ಕೂರ್ಮೆಯುಮೆಯ್ದೆ ಶಸ್ತ್ರಶಾ
ಸ್ತ್ರಾಳಿಯುಮಂ ಕರಂ [2] ಕಲಿಪಪಂಗಿರದೋಜರೊಳಾದ ಕೂರ್ಮೆಯುಂ
ಲೀಲೆಯಿನಾದೊಡಾತನೆ ಮಹೋದಯನಾತನೆ ಧನ್ಯನಲ್ಲನೇ ॥ ೪೪

[ಎಂದು ನಲಿದು ಬಿಲ್ಲ ಬಲ್ಮೆ ತನಗಾಗಳಾದಂತೆ ಮುಯ್ಯಮ್ಮದಮಾಗಿ ಶುಭದಿನದೊಳ್ ಚಾಪವಿದ್ಯೆಯಂ ಮೊದಲ್ಗೊಂಡು ॥ ೪೫

ಬಂದೆಡೆಯೊಳುಂಡೆನಪ್ಪೊಡೆ
ಸಂದೀಬಿಲ್ವಿದ್ಯೆಯಾಗಲಱಿಯದು ತಿರಿದುಂ ।
ಡಂದಲ್ಲದೆ ಮೆಯ್ಮಣಿಯದು
ಸಂದೆಯಮಿನ್ನೇಕೆ ಬಿಲ್ಲನಾಂ ಕಲ್ವೆನೆಗಂ ॥ ೪೬

ತಿರಿದುಂಬೆನೆಂದು ಪೂಣ್ದು ವಿದ್ಯೆ ಕಾರಣಮಾಗೆ ಮೆಯ್ಸುಖಮಂ ಬಿಟ್ಟು ದ್ರೋಣಾಚಾರ್ಯರ ಮಾತಂ ಮೀಱದೆ ಭಿಕ್ಷಾಹಾರಮನುಂಡು ಪಲವುದಿವಸಮುಪಾಧ್ಯಾಯರ್ ಪೇೞ್ದೋಜೆಯೊಳ್ ನೆಗೞ್ದು ಚಾಪವಿದ್ಯೆಯೊಳತಿಪ್ರೀತನಾಗಿ ॥ ೪೭

ಜಿನಭಕ್ತನ ದೊರೆಯಾರ್ ಮೇ
ದಿನಿಯೊಳ್ ದೊರೆಯೊಪ್ಪೊಡರ್ಜುನಂ ಕರ್ಣಂ ರಾ ।
ಮನಮೋಘನಕ್ಕುಮಲ್ಲದೆ
ಜನಪಸುತರ್ ಚಾಪವಿದ್ಯೆಯೊಳ್ ಪೋಲ್ತಪರೇ ॥ ೪೮

1 ಎಂದು ಭಾವಯುತದಿಗಂಬರದಾಸನ ಮಾತಿಂದ ಪರಮಜೈನನೆಂದಱಿದು ಮನದೊಳ್ಮೆಚ್ಚಿ ಭೀಮಂಗರ್ಜುನಂಗು ಚಾಪವಿದ್ಯೆಯೊಳ್ ನಿನ್ನನಧಿಕಂ ಮಾಡುವೆನೆಂದಂಜದಿರೆಂದು ಕೂರ್ಮೆಯಿಂ ನುಡಿವುದುಂ (ಗ)

2 ನರ್ಥಿಯಿಂ (ಗ)

ಎಂದು ಪುರಜನಮುಂ ಜಗಜ್ಜನಮುಮೊಂದೆ ಕೊರಲೊಳ್ ಪೊಗೞೆ ಪ್ರಸಿದ್ಧಿಗೆ ಸಂದು ಚಟ್ಟುತ್ತರ[1]ಮೆಂಬ ನಾಣ್ಣುಡಿಯುಂ ನನ್ನಿಮಾಡಿ ದ್ರೋಣಾಚಾರ್ಯರ್ಗಂ ಮಿಗಿಲೆನಿಸಿ ಸುಖದಿಂದಿರ್ಪುದುಂ ॥

ಎನ್ನ ಚಟ್ಟರೊಳಲ್ಲಮೀತನೆ ಬಿಲ್ಲ ಬಲ್ಮೆಗೆ ಜಾಣನ
ತ್ಯುನ್ನತಂ ಕಡುವೀರನುತ್ತಮಜೈನನೂರ್ಜಿತತೇಜನು
ತ್ಪನ್ನಬುದ್ಧಿ ವಿವೇಕಿ ಧೈರ್ಯಪರಂ ಜನಸ್ತುತನೆಂದು ತಾಂ
ತನ್ನ ಚಿತ್ತದೊಳಾಗಳುಂ ಕಡುಗೂರ್ಮೆಯಿಂ ದ್ವಿಜವಂದಿತಂ ॥ ೫೦

ಪೊಗೞುತ್ತುಮತ್ಯಾದರದಿಂ ಪುತ್ರಸ್ಥಾನೀಯನಂ ಮಾಡಿಕೊಂಡಾಡುತ್ತಿರ್ದೊಂದುದಿವಸಂ ಜಿನಭಕ್ತಕಂ ಮೊದಲಾದ ಶಿಷ್ಯನಿಕಾಯಮುಂ ಬೆರಸು ಪೊೞಲಿಂ ಪೊಱಮಟ್ಟು ಪೋಗುತ್ತುಮಿರ್ಪುದುಮಾಪುರಮನಾಳ್ವ ಸಿಂಹಸೇನಮಹಾರಾಜನ ಮಗಳಪ್ಪ ಚಂದ್ರಲೇಖೆಯೆಂಬ ಕುಮಾರಿ ಕತಿಪಯಪರಿಜನಂಬೆರಸು ಪುರದ ಪೊಱಗಣ ಸಹಸ್ರಕೂಟ ಚೈತ್ಯಾಲಯಮನಂ ಬಂದಿಸಿ ಮಗುೞ್ದು ಬರುತ್ತುಮಿರ್ಪುದುಂ ॥ ೫೧

ಮದದಿಂ ಕಣ್ಗೆಟ್ಟು ಘೋರೆಂದಧಿಕಬಲದಿನೇವಯ್ಸಿ ಕಾಪಿರ್ದರಂ ಕ
ಟ್ಟಿದ ಶುಂಭತ್ಕಂಬಮಂ ಕಿತ್ತಡಸಿ ಬಡಿಯುತುಂ ಸೀಳುತುಂ ಸೊರ್ಕಿನಿಂ ತೂ
ಳ್ದಿದಯುಂ ಮೆಯ್ವೊರ್ಕೆಮುಂ ಬಂಧಿಸಿದ ನಿಗಳಮಂ ಚಕ್ಕನೆಕ್ಕೆಂಬಿನಂ ಕೋ
ಪದಿನಾಗಳ್ ನುಗ್ಗುನುಗ್ಗಪ್ಪಿನೆಗ ಮುಱಿದು ಕಾಡಾನೆವೋಲ್ ತೀವ್ರದಿಂದಂ ॥ ೫೨

ದೂರದಿಂ ಮಾರಿಯು ಮೂರಿಯಂತೆ ಬರ್ಪ ಸೊರ್ಕಿದಾನೆಯುಂ ಕಂಡು ವೀರರೊಳಸಾರೆ ಗಱಿಸರೊಳಸುರ್ಕೆ ಪೊಂಕಮುಳ್ಳವರ್ ಪೊಂಕಂಗೆಟ್ಟೋಡೆ, ಬಿರುದರರಿದೆಂದು ಪೆಱಪಿಂಗೆ, ಬಂಟರ್ ಕೊಂಡಾಡುವರ್ಗೆಂಟೊಳರೆ, ಬೆಸದವರ್ ಬೆಸದವರಂತೆ ಸಿವಿಗೆಯನಿರಿಸಿ ಪೋಗೆ ಚಂದ್ರಲೇಖೆಯೊರ್ವಳ್ ॥ ೫೩

1 ಬಟ್ಟುತ್ತರ (ಗ)

ಪರಮಜಿನೇಂದ್ರಪಾದಪದುಮದ್ವಯಮಂ ಹೃದಯಾಂಬುಜಾತದೊಳ್
ಧರಿಯಿಸಿ ಚಿತ್ತದೊಳ್ ಕದಡದುಜ್ಜ್ವಳಚಿತ್ತದಿನೀಗಜೇಂದ್ರನಿ
ಷ್ಠುರದುಪಸರ್ಗಮೊರ್ಮೊದಲೆ ಪಿಂಗುವಿನಂ ತನುವೆನ್ನದಲ್ಲವೆಂ
ದರಸನ ಪೆರ್ಮೆಯಂ ತೊಱೆದು ಪಂಚಪದಂಗಳನೋದುತಿರ್ಪಿನಂ ॥ ೫೪

ದ್ರೋಣಾಚಾರ್ಯರ ಶಿಷ್ಯರೆಲ್ಲಂ ಬೆತ್ತಿಬೆಟ್ಟಾಗೆ ಗೂಡುಗೊಂಡು ನೋಡುತಿರ್ಪುದುಂ ಜಿನಭಕ್ತಂ ಚಂದ್ರಲೇಖೆಯ ಮನದ ಧೈರ್ಯಮುಮಂ ಧರ್ಮದೊಳಾದ ನಂಬುಗೆಯುಮಂ ತಳರದೆ ನಿಂದ ಪರಿಚ್ಛೇದಮುಮಂ ಕಂಡು ಮೆಚ್ಚಿ ಸಮಯವಾತ್ಸಲ್ಯಮಂ ಮೆಱೆವೆನೆಂದು ಕೋಪಾಟೋಪದಿಂ ಕುಮಾರಿಗಾಗಿ ಪರಿತರ್ಪ ಗಂಧಸಿಂಧುರಕ್ಕಡ್ಡಂ ಬಂದು ನಿಂದು] [1] ॥ ೫೫

ತುಂಗಮೆನಿಸಿರ್ದ ಪಂಚಪ
ದಂಗಳನೋದುತ್ತುಮಧಿಕಗುಣಿ ಕರಿಪತಿಯಂ ।
ಭಂಗಂಮಾಡಿ ಗಜೇಂದ್ರದ
ಬೆಂಗೇಱಿದನಯ್ಯ ಭಾಪು ಜೀಯೆನೆ ಪಲರುಂ ॥ ೫೬

[1] ಎಂದು ಚಾಪವಿದ್ಯೆ ತನಗಾಗಳಾದಂತೆ ಮುಯ್ಯುಪ್ಪದ್ದಮಾಗೆ ಶುಭದಿನದೊಳ್ ಮೊದಲ್ಗೊಂಡು ಚಟ್ಟುತ್ತರಮಾಯ್ತೆಂಬ ನುಡಿಯಂ ನನ್ನಿಮಾಡಿ ಬಿಲ್ಲ ಬಲ್ಮೆಯೊಳ್ ದ್ರೋಣರ್ಗಂ ತಾನೆ ಮಿಗಿಲಾಗಿರ್ಪುದುಂ ಆ ಪುರಮನಾಳ್ವ ಸಿಂಹಸೇನಮಹಾರಾಜನಾತನ ಮಗಳಪ್ಪ ಚಂದ್ರಲೇಖೆಯೆಂಬ ಕುಮಾರಿ ಪುರದ ಪೊಱಗಣ ಸಹಸ್ರಕೂಟಮೆಂಬ ಬಸದಿಗೆ ಪೋಗಿ ದೇವರುಮಂ ಋಷಿಯರುಮಂ ವಂದಿಸಿ ಬರುತ್ತಿರ್ಪುದುಂ ಮುಂದೊಂದುಮದದಾನೆ ಕಂಭಮಂ ಮುಱಿದು ಘೂಳಿಯಂತೆ ವೇಗಿಯುಂ ಕಲಿಯಂತೆ ನಿಶ್ಶಂಕನುಂ ಮದ್ಯಪಿಯಂತವಿವೇಕಿಯುಂ ಮೂರ್ಖನಂತೆ ತೀವ್ರನುಂ ತಣಿಯುಂಡ ಪಾರ್ವನಂತಾಶದೃಷ್ಟಿಯುಂ ಬೇಡನಂತೆ ಮೂರ್ಖನುಂ ಕ್ರೂರನುಂ ಪಾಪಿಯಂತೆ ನಿಃಕರುಣಿಯುಮಾಗಿರ್ಪುದಂ ಕಂಡು ಭಯಂಗೊಂಡೆಲ್ಲರುಮೋಡುವುದುಂ ಚಂದ್ರಲೇಖೆಕುಮಾರಿ ಪೋಗದೆ ತಿರಿಗಿಯುಪಸರ್ಗಂ ಪಿಂಗುವಿನಮಾಹಾರಶರೀರನಿವೃತ್ತಿಯೆಂದು ಕಾಯೋತ್ಸರ್ಗವಿರೆ ದ್ರೋಣಾಚಾರ್ಯರ ಭಟ್ಟರೆಲ್ಲಂ ಬಿಟ್ಟದಂತೆ ಚಿಟ್ಟಾಡದಂಜಿ ನಿಲೆ ವಾತ್ಸಲ್ಯರತ್ನಾಕರಂ ಧರ್ಮವಾತ್ಸಲ್ಯದಿಂ ಬಂಧುರಕ್ಕಡ್ಡಂಬಂದು ನಿಂದು (ಗ)

ಅಂತು ವಿದ್ಯಾಧರಕರಣದಿಂದಾನೆಯೇಱಿ ಮಸೆದಸಿಯುಂ ಕಟ್ಟಿದ ನೇಣುಂ ಕೂರಂಕುಶಮಾಗೆ [ಸಿಂಹಮೆನಿಸಿದಾನೆಯುಂ ಗ್ರಾಮಸಿಂಹಮೆನಿಸಿ ನೆರೆದ ನೆರವಿ ಕಯ್ಮುಗಿಯೆ ಕುಮಾರಿಯಲ್ಲಿಗೆ ಬಂದು ॥ ೫೭

ಜಿನಧರ್ಮೋತ್ಪಳಚಂದ್ರಿಕೆ
ನಿನಗಾರ್ದೊರೆ ಶುದ್ಧಮಪ್ಪ ದರ್ಶನದೊಳ್ ಮೇ ।
ದಿನಿಪೂಜ್ಯೆ ನೀನೆ ಪಿರಿಯಳ್
ಜನವಂದಿತೆ ಕೇಳ ನೂಱುಸೂೞ್ ಬಣ್ಣಿಪೊಡಂ ॥ ೫೮

ಎಂದು ಮನದೊಳಾಡಾದರ ಭಾವದಿಂ ಪೊಗೞ್ದುಪಸರ್ಗಂ ಪಿಂಗಿತ್ತು ಕಯ್ಯನೆತ್ತಿಕೊಳ್ಳಿಮೆಂಬುದುಂ ಚಂದ್ರಲೇಖೆ ಕಯ್ಯನೆತ್ತಿಕೊಂಡು ಜಿನಭಕ್ತನಂ ನೋಡಿ ಮಹಾತ್ಮನೆಂದಱಿದು ಮನದೊಳ್ ಪೊಗೞ್ದು ಇನ್ನೆನಗೀಭವದೊಳೀತನೆ ಗಂಡನುೞಿದ ರಾಜಕುಮಾರರ್ ಮೊಱೆಯಲ್ಲರೆಂದು ಪೂಣ್ದು ರಾಜಮಂದಿರಕ್ಕೆ ಪೋದಳಿತ್ತಲ್ ಪ್ರಮಾಥಿಕುಮಾರನಾನೆಯುಂ ಪೂರ್ವಸ್ಥಾನಕ್ಕೊಯ್ದು ಕಟ್ಟಿ ಮಗುೞ್ದು ಬಂದು ದ್ರೋಣಾಚಾರ್ಯರೊಳ್ ಕೂಡಿರ್ದನಿರ್ಪುದುಂ ॥ ೫೯

ಪುರಮುಂ ಭೂಮೀಶನುಂ ದ್ರೋಣನುಮತಿಶಯದಿಂದೀತನಂ ಮೆಚ್ಚಿ ಚಾಮೀ
ಕರಶೈಲೇಂದ್ರಕ್ಷಮಂ ವಾಸವವಿಭವನನಂಗಾಭನುದ್ಯದ್ಗುಣಂ ಖೇ
ಚರಶೌರ್ಯಂ ಚಾಪವಿದ್ಯಾಪರಿಣತನದಟಂ ವೀರನುರ್ವೀಸ್ತುತಂ ಭಾ
ಸ್ಕರತೇಜಂ ಸೌಮ್ಯನೆಂದೆಂದಣಮುಱಿಯದಲೋರಂತೆ ಕೊಂಡಾಡುತಿರ್ದರ್ ॥ ೬೦

ಎಂದು ಛಾತ್ರರೆಲ್ಲರುಂ ನೆರೆದು ಗುಜುಗುಜುಗೊಂಡು ಪಲ್ಮೊಱೆಯುತ್ತುಮಿರ್ಪುದುಮವರ ದುರ್ಜನತ್ವಮಂ ದ್ರೋಣಾಚಾರ್ಯರ್ ಮಾರ್ಕೊಂಡು ತಮ್ಮೊಳಿಂತೆಂದರ್] [1] ॥ ೬೧

---

[1] ಗಜಮನಜಂ ಮಾಡಿ ಕುಮಾರಿಯುಪಸರ್ಗಮಂ ಪಿಂಗಿಸಿ ದ್ರೋಣರ ಜೇಂಕರಿಸೆ ಕರಿಯುನರಿಯುನುಯ್ವಂತೆ ಪೂರ್ವಸ್ಥಾನಕ್ಕೊಯ್ದು ಕಟ್ಟುವುದುಂ ಲಲಿತ ಘಟಿಯು ಮುನಿದು ಪಲ್ಮೊರೆಯುತಿರ್ಪುದುಮಾದಂ ದ್ರೋಣಾಚಾರ್ಯರುಮಱಿದು (ಗ)

ಕವಿನಾಥರ್ ಕವಿಪುಂಗವರ್ಗೆ ಬಿರುದರ್ ಬೀರರ್ಗೆ ಭೂಪಾಲಕರ್
ಭುವನೇಶರ್ಗೆ ವಿಟರ್ ವಿಟರ್ಗೆ ಚತುರರ್ ಚಾತುರ್ಯರಪ್ಪರ್ಗೆ ವೈ
ಶ್ಯವರರ್ ವೈಶ್ಯವರರ್ಗೆ ಬಂಟರದಟಿಂ ಬಂಟರ್ಗೆ ಪುಣ್ಯಾಂಗನಾ
ನಿವಹಂ ಪುಣ್ಯವಧೂಜನಕ್ಕೆ ಸಹಜಂ ಕಾಯ್ವರ್ ಮಹೀಚಕ್ರದೊಳ್ ॥

[ಇವರ ಮುಳಿಸಿದಾಶ್ಚರ್ಯಮಲ್ಲದೆಂದು ಬೆಲಂ ಪಿಡಿದು ಸಿಂಗವ ದನಿಯುಂ ಕೇಳದನ್ನೆಗಂ ಗಜಂಗಳ್ ಪ್ರತಾಪಂಗೆಯ್ಗುಂ ಸಿಂಗದದನಿಯಂ ಕೇಳ್ದೊಡೆ ಭಯಂಗೊಟ್ಟೋಡುಗುಮೆಂತೆ ಜಿನಭಕ್ತನ ಧನುರ್ವಿದ್ಯೆಯುಂ ಕಾಣವನ್ನೆವರೆಗವಿರಾಲಲಿತಘಟೆ ತಾನೆಂಮುದಂ ಮೆಟ್ಟಿ ಧನುರ್ವಿದ್ಯೆಯೊಳಾವೆ ಪ್ರವೀಣರೆಂದಿರ್ಪರಾತನ ಶರಾಸನದೊಳಾದ ಪರಿಣತೆಯುಂ ಕಂಡ ರಪ್ಪೊಡೆ ತಂತಮ್ಮ ದರ್ಪವನುಡುಗುವರೆಂದೀಕಾರಣದಿಂ ॥ ೬೩

ಜಿನಭಕ್ತಂ ಚಾಪವಿದ್ಯಾಪರಿಣತನಧಿಕಂ ವೀರನತ್ಯಂತಧೀರಂ
ಮನುಮಾರ್ಗಂ ಜೀಯ ಭಾಪೆಂದಿವರ ಮನದ ಮಾತ್ಸರ್ಯಮುಂ ದರ್ಪಮುಂ ಭೋಂ
ಕನೆ ಪೋಪಂತಾಗೆ ನಾನಾಸ್ತ್ರವನದಿನಿಳ್ ಕೈವಾರದಿಂ ಕೂರ್ಮೆಯಿಂ ನೆ
ಟ್ಟನೆ ಬಣ್ಣಿಪ್ಪಂತು ಮಾಪ್ಪೆಂ ಸೆಡೆದು ತಡೆವುದೇಕೆಂದುಪಾಧ್ಯಾಯನಾಗಳ್ ॥ ೬೪

ಜಿನಭಕ್ತನುಮಂ ಸಮಸ್ತಶಿಷ್ಯರುಮಂ ಕರೆದು ನಿಮ್ಮ ನಿಮ್ಮ ಧನುರ್ವಿದ್ಯೆಯೊಳಾದ ಕೌಶಲ್ಯಮನೆನಗೆ ತೋಱಲ್ವೇಱ್ಪುದೆಂದು ಪೇಱ್ವು ದುಮಂತೆ ಗೆಯ್ವೆವೆಂದು ಚಾಪೋಪಾಧ್ಯಾಯರ್ಗೆ ಪೊಡೆಮಟ್ಟು ಮಱು ದಿವಸಮೊರ್ವರೊರ್ವರ್ಗೆ ಮಿಗಿಲಾಗಿ ನೆಱೆಯೆ ಶೃಂಗಾರಂಗೆಯ್ದು ದ್ರೋಣಾಚಾರ್ಯರಲ್ಲಿಗೆ ಬರ್ಪುದುಂ ಶಿಷ್ಯನಿಕಾಯಂಬೆರಸು ಪುರದ ಬಹಿರುದ್ಯಾನವನಕ್ಕೆ ಬಂದು ॥ ೬೫

ಇನಿಬರುಮೋರಂತಿರೆ ತೆಂ
ಗಿನಕಾಯ್ಗಳನಿಳ್ಗೆ ಬೀಱಲೀಯದೆ ಧರೆ ಜೀ ।
ಯೆನೆ ಬಾಣನಿಕರದಿಂ ಮೆ
ಲ್ಲನೆ ತರವೇಱ್ಪೆಂದು ಬೆಸಸೆ ಗುರುವಿನ ಮಾತಂ ॥ ೬೬

ಮಿಾಱದೆ ಕುಮಾರರನಿಬರು
ಮೊಱೆಂದಿಕ್ಕೆಂದು ಸೆಡೆದು ನಿಲ್ಲದೆ ಜಾಣಂ ।
ತೋಱುವೆವೆಧಿಕರ ಪಟ್ಟಂ
ಪಾಱಿಸುವೆವೆಮೋಘಮೆಂದು ನಲಿನಲಿದಾಗಳ್ ॥ ೬೭

ಕರಮಾದರದಿಂದಂ ದ್ರೋ
ಣರ ಪಾದಕ್ಕೆಱಗಿ ಕೊಂಡು ಬಿಲ್ಗಳನವರು ।
ರ್ವರೆ ಪೊಗಪೆ ನೆರವಿ ನೋಡು
ತ್ತಿರೆ ತೆಂಗಿನಕಾಯ್ಗಳಂ ಮನೋಹರರೂಪರ್ ॥ ೬೮

ಪಲವುಸೂಱೆಚ್ಚು ದುಃಖಂಬಟ್ಟುಮೆಂತುಂ ನೆಲಕ್ಕೆ ಶರನಿಚ ಯದಿಂ ದ್ರೋಣರಲ್ಲಿಗೆ ತರಲಾಱದೆ ಬಟ್ಟೆವೋಪ ಕುತ್ತಂಗುಳಿಯಂತೆ ಸೇದೆಗೆಟ್ಟು, ಜವ್ವನಗಾಳ್ದನಾದ ಮುದುಪನಂತೆ ಪಲ್ಗಿಡಿಗಿಱಿದು, ಬಿರು ದರೊಳ್ ತೊಡರ್ದ ಪಂದೆಯಂತೆ ಕುಂದಿ, ಸಂತತಿಯಿಲ್ಲದ ದ್ರವ್ಯಪತಿ ಯಂತೆ ಮಱುಗಿ, ನಾಂದೆರೆಯ ಪೆಟ್ಟೆಯಂತೆ ಕರಗಿ, ರಾಹುವಿಂ ಪಿಡಿ ವೆತ್ತ ಚಂದ್ರನಂತೆ ಮನದೊಳ್ ಕಂದಿ, ಪಲರ್ಗೆ ಲಜ್ಜಿಸಿ ದ್ರೋಣಾ ಚಾರ್ಯರ ಮೊಗಮಂ ನೋಡಲಱಿಯದೆ ತೋರ ತೆನೆಯಂತೆ ತಲೆಯಂ ಬಾಗಿಪ್ಪುದುಂ, ದ್ರೋಣಾಚಾರ್ಯರುಂ ತನ್ನೊಳಂತೆಂದಂ] [1] ॥ ೬೯

ಕುನರರ್ ಸತ್ಪುರುಷರ್ಗೆ ಕುತ್ಸಿತಗುಣರ್ ಮಾನ್ಯರ್ಗೆ ದುಷ್ಪಾಪಿಗಳ್
ಜಿನಧರ್ಮೋದಯರಪ್ಪವರ್ಗೆ ಬಡವರ್ ಧನ್ಯರ್ಗೆ ಹೀನರ್ ಜಗ
ಜ್ಜನವಂದ್ಯರ್ಗೆ ಕುರೂಪಿಗಳ್ ಬಿಡದೆ ಸೌರೂಪ್ಯರ್ಗೆ ದುರ್ಭಾವದಿಂ
ಮುನಿದುಂ ಕಾಯ್ದು ಮಱಲ್ದುಮೇವರವರಿಂ ತಾನಪ್ಪುದೇಂ ಪೋಪುದೇ [2] ॥

1 ಎಂದವರ ಗರ್ವಮುಂ ಮುಱಿಯಲ್ವೇಡಿ ನೀಪಿರ್ವರುಮಿಾವನದ ತೆಂಗಿನ ಕಾಯ್ಗಳಂ ನೆಲನಂ ಮುಟ್ಟಲೀಯದಂತೆ ಅಂತರಿಕ್ಷದೊಳ್ ಶರಸಂಧಾನದಿಂದೆಮ್ಮಲ್ಲಿಗೆ ತನ್ನಿಮೆಂಬುದುಂ ತರಲಾಱದೆ ಕುತ್ತಂಗೂಳಿಯಂತೆ ಖಲಂಗೆಟ್ಟು ಜವ್ವನಗಾಣ್ಮ ನಾದ ಮುದುಕನಂತೆ ಪಲ್ಗಿಡಿಗಿಱಿದು ಬಿರುದನೊಳ್ ತೊಡರ್ದ ಪಂದೆಯಂತೆ ಕುಂದಿ ನೀರ್ಮುಟ್ಟಿದೆರೆಯ ಪೆಟ್ಟೆಯಂತೆ ಪಡಿಲ್ದು ನಾಂದ ಕೋಳಿಯಂತುಲಿಪಂಗೆಟ್ಟು ಲಜ್ಜಿಸಿ ನೆಲನಂ ನೋಡುತಿರ್ಪುದುಂ ದ್ರೋಣಾಚಾರ್ಯರಿಂತೆಂದರ್ (ಗ)

2 ಬಪ್ಪುದೇಂ (ಗ)

[ಎಂದು ಮನದೊಳ್ ನಕ್ಕು ಜಿನಭಕ್ತನಂ ಕರೆದು ನೀಂ ನಾಳಿಕೇರ ಫಲಂಗಳನಿಲ್ಲಿಗೆ ನೆಲನಂ ಮುಟ್ಟಲೀಯದಂತರಿಕ್ಷದೊಳ್ ತಡೆಯದೆ ತರ್ಪುದೆಂಬುದು ಮಂತೆಗೆಯ್ವನೆಂದು ಪೊಡೆಮಟ್ಟು ಬಿಲ್ಲಂ ತಳೆದುಕೊಂಡು ಜೇವೊಡೆಗೆಯ್ದು ॥ ೩೧

ಪರಮಜಿನಚರಣಯುಗಮಂ
ಸ್ಮರಿಯಿಸಿ ತೊದಳಿಲ್ಲದೆರಡುಗೇಳದೆ ಮನದೊಳ್ ।
ಜರಿಯದೆ ಕೊಂಡೊಡೆ ಕರಮು
ಬ್ಬರಿಸದೆ ಬಱಿದಂತೆ ಪೆಟ್ಟುವೆರ್ಚದೆ ನಯದಿಂ ॥ ೩೨

ಶರಸಂಧಾನಮೆಂಬಲಗಿಂ ತೆಂಗಿನಕಾಯ್ಗಳಂ (ಕೊಯ್ದು) ನೆರೆದ ನೆರವಿ ಮೆಚ್ಚು ಭಾಪೆಂದು ಝೇಂಕರಿಸೆ ದ್ರೋಣಾಚಾರ್ಯರಲ್ಲಿಗೆ ನೆಲನಂ ಮುಟ್ಟಲೀಯದೆ ಬಾಣನಿಚಯದಿಂ ತರ್ಪುದುಂ ನಾಡುಂ ಬೀಡುಂ ಜಿನಭಕ್ತನಂ ಬಿಲ್ಲ ಬಲ್ಮೆಗೆ ಸಂತೋಷಂಬಟ್ಟು ಪೊಗೞುತ್ತುಮಿರ್ದರಿರ್ಪುದುಂ ದ್ರೋಣಾಚಾರ್ಯರ್ ಛಾತ್ರನಿಕುರಂಬಂಬೆರಸು ಮನೆಗೆವಂದು ಸುಖದಿಂದಿರ್ಪುದುಂ ಛಾತ್ರರೆಲ್ಲಂ ಪುರುಡಿಸಿ ॥ ೩೩

ಇವನೊಳ್ ಮುಂ ಕೆಳೆಗೊಂಡು ಕೂಡಿ ಬಱಕಂ ಕೂರ್ತಂತೆಗೆಯ್ದೀತನಂ
ಜವನಂತಪ್ಪ ಮದಾಂಧಸಿಂಧುರದ ಮುಂದಣ್ಗೊಯ್ದು ನೀನೀಗಜೇಂ
ದ್ರಮನೋರಂತಿರೆ ವೀರದಿಂದಡಸಿ ಪೊಯ್ಯೆಂದಾರ್ದು ಪಿಂಗಿರ್ದು ನೋ
ಡುವಮಿದೂರ್ತನನಾಗಜಂ ತುಳಿವುದಕ್ಕೆ ಪಚ್ಚದೆ ಮಂತಣಂ (?) ॥ ೩೪

ಎಂದು ತಮ್ಮನಿಬರುಂ ಸಮಕಟ್ಟಿ ಪುಸಿಗೂರ್ಮೆಯಿಂ ಜಿನಭಕ್ತನಂ ನಂಬಿಸಿ ಕೆಲವಾನುಂದಿವಸಂಪೋಗಲಿತ್ತೊಂದುದಿವಸಂ ಪೊಱವೊಟಲೊಳಾಡುತ್ತುಮಿರ್ಪುದುಂ ಅವರ ಬಗೆಗೊಡಂಬಟ್ಟಂತೆ ಮದದಿಂ ಕಣ್ಗಾಣದವರ ಬಯಸುವ ಮದಗಜಮೆ ಮೆಯ್ಯಱಿಯದೆ ಕಂಬಮಂ ಮುಱಿದುಕೊಂಡು ಗಾಳಿಯಂತೆ ವೇಗಿಯುಂ ನಿಚ್ಚಗಲಿಯಂತೆ ನಿಶ್ಶಂಕನುಂ ಕಳ್ಗುಡಿಕನಂತೆ [1] ತೀವ್ರನುಂ ಮೂರ್ಖನಂತವಿವೇಕಿಯುಂ

1 ಕಳ್ಗುಡುಹಿಯಂತೆ (ಕ. ಬ.)

ತಣಿಯುಂಡ ಪಾರ್ವನಂತಾಕಾಶದೃಷ್ಟಿಯುಂ ಗ್ರಾಮಣಿಯಂತೆ ನಿಷ್ಕರುಣೆಯುಂ ಕಿರಾತನಂತೆ ಕ್ರೂರನುಮಾಗಿರ್ಪ ಸೊಕ್ಕಿದಾನೆಯಂ ಕಂಡು ||

ಜಿನಭಕ್ತಂ ವೀರದೊಳ್ ಫಲ್ಗುಣನನಿಱುಸುವಂ ಧಾರಿಣೀಪೂಜ್ಯನಿಂತೀ
ತನೆ ಪೋರ್ಗಂ ಮಿಕ್ಕರೇವರ್ ದ್ವಿಪವರನದಟಂ ತಾಗೆ ಬಂದೆಂದು ದೂರ್ತರ್
ಮುನಿಸಿಂ ಕೂರ್ತಂತೆಗೆಯ್ದುತ್ತರಿಸಿ ಪೊಗೞ್ವುದುಂ ಬರ್ಪ ಪೇರಾನೆಯಂ ಭೋಂ
ಕನೆ ವೀರಂ ಶಾಂತಿತೀರ್ಥೇಶ್ವರಪದಯುಗಮಂ ಚಿತ್ತದೊಳ್ ತಾಳ್ದಿ ಧೀರಂ||

ತನ್ನ ಕೆಲದೊಳಿರ್ದ ತಿರಿದುಂಬ ದುಲ್ಲಟಿಯುಂ ಕೊಂಡು ಗಜಮನ ಜವನಿಡುವಂತೆ ಭಯಮಿಲ್ಲದಿಡುವುದುಂ ಕರಿ ನರಿಯಂತೆ ಕೀಱುಟ್ಟಾಱಿಟ[1] ಭಯದಿಂದಿದಿರಾಗಿ ಬರಲಣ್ಮದೆ ಮಗುೞ್ದು ತನ್ನ ನೆಲೆಗೆ ಪೋಯಿತಿತ್ತಲ್ ಜಿನಭಕ್ತಂ ಹರಿಕಾಂತನಂತೆ ಮುಯ್ವಂ ನೋಡದೆ ಕುಪ್ಪಕಾಱಿ[2] ಯಾಡುವ ಮಕ್ಕಳಂತೆ ತನ್ನಂ ಪೊಗೞ್ದುಕೊಳ್ಳದೆ ನವಿಲಂತೆ ತನ್ನಾಟಕ್ಕೆ ತಾನೆ ನಲಿಯದೆ ಸಮುದ್ರದಂತೆ ಗಂಭೀರನಾಗಿರ್ಪುದುಂ ದ್ರೋಣನ ಚಟ್ಟರೆಲ್ಲರುಂ ಜಿನಭಕ್ತನ ಪುಣ್ಯದ ಮಹಿಮೆಗಂ ಮನದ ಧೈರ್ಯಕ್ಕಂ ಚೋದ್ಯಂಬಟ್ಟು ಮನದ ಕೋಪಮಂ ಪತ್ತುವಿಟ್ಟು ಸಮ್ಯಕ್ತ್ವಚೂಡಾಮಣಿಗೆ ಮನದೊಳ್ ಪೊಡೆವಟ್ಟು ದ್ರೋಣಾಚಾರ್ಯರ್ಗೆ ತಮ್ಮ ದುರ್ಭಾವಮುಮಂ ವಾತ್ಸಲ್ಯರತ್ನಾಕರನ ಭಾಗ್ಯದ ಪೆಂಪುಮಂ ಪೇೞ್ವುದುಂ ದ್ರೋಣನಿಂತೆಂದಂ][3] || ೩೩

---

1 ಕೀಳಿಜ್ವಾಱಿಳ (ಕ. ಖ.)   2 ಕುಱಿ (ಕ. ಖ.)

3 ಎಂದು ಜಿನಭಕ್ತನ ಮೊಗಮಂ ನೋಡುವುದುಂ ಅಂತರಿಕ್ಷದೊಳ್ ತೆಂಗಿನ ಕಾಯ್ಗಳಂ ಶರಸಂಧಾನದಿಂ ದ್ರೋಣರಲ್ಲಿಗೆ ತಪ್ಪದುಂ ಛಾತ್ರರೆಲ್ಲ ಮಾನಕಷಾಯಮಂ ಬಿಟ್ಟು ಭಾವಯುತದಿಗಂಬರದಾಸನ ಮೊಗಮಂ ನೋಡಿ

ಪರಮಾರ್ಥಮೆಂತುಮಿಂತುಂ | ಪರಮಜಿನೇಶ್ವರನ ಪದಮೆ ಕಟ್ಟಿದ ಫೇಣಾ |
ಗಿರೆ ನಂಬುವೇಡ ನಿನಗಾರ್ | ದೊರೆ ಪೇಳ್ವೆ ಸುಕವಿನಿಕರಪಿಕಮಾಕಂದಾ ||
ವಿನುತಜಿನಾಗಮರಸಸೇ | ವನೆಯೊಳ್ ನಿನ್ನಂತು ತುಷ್ಟನಾವಂ ನಿನ್ನಂ |

ನೆವನೆವದಿಂದೆ ಧಾರಿಣಿ ಸುವಸ್ತು ಲತಾಲಲಿತಾಂಗಿಯರ್ ಮಹೋ
ತ್ಸವಮತಿರಾಗಮುಣ್ಮೆ ಮಹಿಮಾಸ್ಪದಮುನ್ನತಿ ಪೆಂಪು ಸೌಖ್ಯ ಮಿ
ಕ್ಕವಿರಳಬುದ್ಧಿ ವೀರ್ಯಮಭಿವೃದ್ಧಿ ಮತಂಗಜಚಯಂ ಹಯಾಳಿ ಸಂ
ಭವಿಸುಗು ಮುನ್ನುಪಾರ್ಜಿಸಿದ ಪುಣ್ಯದಿನಣ್ಣ ಮಹೀತಳಾಗ್ರದೊಳ್ ॥

ನುಡಿಯದೆ ಸಾರ್ದು ಕೈಮುಗಿದು ಸೇವಿಸಿ ಘುಮ್ಮನೆ ಬಾಯ್ಗೆ ವಂದುದಂ
ನುಡಿದೊಡಮಂತದೊಳ್ನುಡಿ ವಿರೋಧಿಬಲಕ್ಕಿದಿರಾಗಿ ದರ್ಪದಿಂ
ಮಡಿ [1] ದೊಡಮಂತದಾರಿಪುಗೆ ತಲ್ಲಣಮರ್ಥಿಗೆ ಬೇಡಿದರ್ಥಮಂ
ಕುಡುವೊಡಮಂತದಕ್ಷಯಮೆನಲ್ ನೆಱೆ ಬಣ್ಣಿಪರಾರೊ ಪುಣ್ಯಮಂ ॥೭೯

ಬಲ್ಲದೆ ಕಾಡಿ ಖಂಡಿ [2] ಸುವೊಡಂ ನಿಲಲಾಱದೆ ಸಲ್ಲತಾಂಗಿಯರ್
ಮೆಲ್ಲನೆ ಪೊರ್ದಿ ಕಾಲ್ವಿಡಿದು ಬೇಡುವುದುಂ [3] ದೆಸೆಯೆಲ್ಲಮಂಜಿ ತ
ಳ್ವಿಲ್ಲದೆ ಬಂದು ನಿಂದು [4] ಬೆಸಕೆಯ್ವುದುಮಬ್ಧಿಯೊಳಿರ್ದ ರತ್ನಮುಂ
ನಿಲ್ಲದೆ ಬಂದು ಪೊರ್ದುವುದು ಸಂಚಿತಪುಣ್ಯಫಲಂಗಳಲ್ಲವೇ ॥ ೮೦

[ಉದಯದಿಂ ತೊಡಗಿ ನೇಸಱ್ ಪಡುವನ್ನೆಗಂ ಊರವರ್
ಕೊಡಂಗೊಂಡಡಕಿದೊಡಂ ತುಂಬುರ್ಚಿ ಕೆಯ್ಗಳ್ ಪರಿಯಿಸಿದೊಡಂ
ಪಶುಮೊದಲಾದನೇಕಜೀವಂಗಳುಂಡೊಡಂ ಕೆಱೆಯ ನೀರ್ ಮಱಿಯ
ನೀರುಳ್ಳನ್ನವರಂ ತವೆಯದು ಮಱೆ ಪೋಗಲೊಡಮೊರ್ ಬಂದು ರಕ್ಷಿಸು
ವೊಡಂ ಬತ್ತುಗುಮಂತೆ ಪುಣ್ಯಾಧಿಕನಪ್ಪ ಮಹಾತ್ಮಂಗೆ ಸದ್ವಿದ್ಯೆಗಳುಂ

ತನುಪವಮನಾವಂ ಸಲೆ ಪೇ | ದನಿಯೊಳ್ ಕೇಳ್ಸುಕವಿನಿಕರಪಿಕಮಾಕಂದಾ ॥
ನೆರವಿ ಮಜ ಭಾಜ್ಸ್ಪ ಭಾಜ್ಪನೆ | ಕರಿಪತಿಗಿದಿರಾಗಿ ಪಿರಿದು ತಾಗಿದ ಪೆಂಪ |
ಚ್ಚರಿ ಮನದೊಳ್ ಜಿನನಿರಲ | ಚ್ಚರಿಯುಂಟೆ ಸುಕವಿನಿಕರಪಿಕಮಾಕಂದಾ ॥
ಅರಸನ ಕುಮಾರಿ ಕೈಯಿ | ಕ್ಕಿರೆ ಧರ್ಮದೊಳಾದ ಮೋಹದಿಂ ನಿನ್ನಂತಾರ್ |
ಪಿರಿದೀ ಭವದೊಳ್ ಮಾಱುಂ | ತರವರಿಸದೆ ಸುಕವಿನಿಕರಪಿಕಮಾಕಂದಾ ॥
ವಾತ್ಸಲ್ಯರತ್ನಾಕರನೆಂಬ ಪೆಸರ್ ನಿನಗೊಪ್ಪುಗುಂ ನೀನೆ ಪುಣ್ಯಾಧಿಕಂ ಪುಣ್ಯಾಧಿಕರಿಗೆ
ತೀರದುದು ಲೋಕದೊಳಾವುದೆಂಬುದುಂ ದ್ರೋಣಾಚಾರ್ಯರಿಂತೆಂದರ್ ॥ (ಗ)

1 ನಡೆ (ಗ) 2 ಕಟ್ಟಿ (ಗ) 3 ಬೇಗದಿಂದಕೇಳ್ ಸಲ್ಲಲಿತಾಂಗಿ
ಯರ್ ನೆರೆದು ಕೂಡುವುದುಂ (ಗ) 4 ಬಂದು (ಗ)

ವೀರಮುಂ ಧನಮುಂ ಭೋಗಮುಂ ಬುದ್ಧಿಯುಮೆಂದುತ್ತರಮಾಗೆ ಪೆರ್ಚುಗುಂ ಆಪುಣ್ಯಮಿಲ್ಲದಾಗಳೆನಿತುಪ್ರಯತ್ನಪರನಾದೊಡಂ ಪರಿಭವಮುಂ ಕಷ್ಟವೃತ್ತಿಯುಮಕ್ಕುಮೆಂದು ಧರ್ಮದೊಳಾದ ಮಹಿಮೆಯುಮಂ ಕರ್ಮದೊಳಾದ ಪೊಲ್ಲಮೆಯುಮಂ ಪೇಳ್ದು ಮತ್ತಂ ಪಾಪದೊಳಾದ ಹೀನತೆಯುಮನಿಂತೆಂದು ಪೇಳ್ದಂ ॥ ೮೧

ಸಿರಿಗೆ ನಿಲಯಂ ಸೂರ್ಯಂ ಮಿತ್ರಂ ಸರಸ್ವತಿಯಿಕ್ಕೆಯಾ
ಗಿರಲುಮರವಿಂದಂಗಳ್ ಶೀತಾಂಶು ಭೋಂಕನೆ ಮೂಡಿ ನಿ
ತ್ತರಿಸಿ ಬಲದಿಂ ಮತ್ತಂ ಪೆರ್ಚಿಂದಮಿರ್ದಪು ದರ್ಪದಿಂ
ಕೊರಗಿ ಮುಗಿಯಲ್ [1] ಕರ್ಮಕ್ಕಡ್ಡಂ ಬರಲ್ ಬಲಮುಳ್ಳರಾರ್ ॥ ೮೨

ಬಲದೊಳಧಿಕಂ ಕ್ರೂರಂ ಬಲ್ಲಾಳ್ವಿವೇಕಪರಾಯಣಂ
ಕುಲದೊಳಧಿಕಂ ವಿದ್ಯಾಧೀಶಂ ವಿಯಚ್ಚರವಲ್ಲಭಂ
ಕುಲಿಶವಿಭವಂ ಧೀರಂ ಲಂಕೇಶ್ವರಂ ಮೊದಲಾಗಿ ದು
ರ್ಮನದಿನಱಿದಂ ಕರ್ಮಕ್ಕಡ್ಡಂಬರಲ್ಕೆ ಸಮರ್ಥರಾರ್ ॥ ೮೩

ಅದುಕಾರಣದಿಂ ಕರ್ಮಮುಳ್ಳಂಗೆ ನೇಣಂ ಪಿಡಿದೊಡಂ ಪಾವಾಗಿ ತಿಂಗುಂ ಪೊನ್ನಂ ಪಿಡಿದೊಡಂ ಮಣ್ಣಾಗಿರ್ಕುಂ ಆಯುಮುಳ್ಳೊಡಂ ರಾಜಾಧಿಕನಾಗಿ ನಮೆಗುಂ ಪಲವುಂ ಶಸ್ತ್ರಶಾಸ್ತ್ರವಿದ್ಯೆಗಳಂ ಕಲ್ತೊಡಂ ಫಲಮಿಾಯಲಱಿಯವೆಂದು ಮಿಥ್ಯೆಯುಂ ಪತ್ತುವಿಟ್ಟುಳ್ಳದನುಳ್ಳಂತೆ ನುಡಿವುದು ॥ ೮೪

ಧರ್ಮಮೆ ತಂದೆ ಧರ್ಮಮೆ ಮನೋಹರಿ ಧರ್ಮಮೆ ಬಂಧುವರ್ಗಮೊ
ಳ್ಧರ್ಮಮೆ ಸೋದರಂ ನೆಗಳ್ದ ಧರ್ಮಮೆ ಸತ್ಸಖಿ ದಿವ್ಯಮಪ್ಪ ಸ
ದ್ಧರ್ಮಮೆ ಪಜ್ಜನುತ್ತಮದ ಧರ್ಮಮೆ ಭಾವಿಪೊಡಜ್ಜನೆಲ್ಲಿಯುಂ
ಧರ್ಮಮೆ ಮುಖ್ಯಮೆಂದು ಪರಿಭಾವಿಸುತಿರ್ಕೆ ಸುಖಾರ್ಥಿಯಪ್ಪವಂ ॥

ಧರ್ಮದಿನಕ್ಕುಮೊಳ್ಗುಣಿಸುಮುಳ್ಳಣಮುಂ(?)ಸುರರಾಜಭೋಗಮುಂ
ಧರ್ಮದಿನಕ್ಕುಮುನ್ನತಿಯುಮಾಜ್ಞೆಯುಮೊಳ್ನುಡಿಯುಂ ವಿವೇಕಮುಂ

ಮುಗಿವವು (ಕ. ಖ.)

ಧರ್ಮದಿನಕ್ಕುಮಪೂರ್ವಮದಟುಂ ಸುಜನತ್ವಮುಮುನ್ನತಿಕ್ಕೆಯುಂ
ಧರ್ಮದಿನಕ್ಕುಮಗ್ಗಳದ ತೇಜಮುಮಕ್ಷಯಚಾರುಸೌಖ್ಯಮುಂ ॥ ೮೬

ಎಂದಾದ್ರೋಣಾಚಾರ್ಯರ್ ಛಾತ್ರರ್ಗೆ ಧರ್ಮದ ಮಹಾಗುಣಮುಮಂ ಪಾಪದ ಮಹಾಕಷ್ಟಮುಮಂ ಲೇಸಾಗೆ ತತ್ಸ್ವರೂಪದಿಂದಿಷ್ಟಂ ಧರ್ಮೇಣ ಯೋಜಯೇತ್ ಎಂಬ ನೀತಿಶಾಸ್ತ್ರದೋಜೆಯಂ ತೋಱಿ ಪೇಳ್ವುದುಮವರ್ ತಂತಮ್ಮ ಮನದ ಕೋಪಮನುಡುಗಿ ಜಿನಭಕ್ತನಂ ಕ್ಷಮೆಗೊಂಡು ಪರಮಮಿತ್ರರಾಗಿ ದ್ರೋಣಾಚಾರ್ಯರ್ಗೆ ಪರಮಭಕ್ತರಾಗಿ ವಿದ್ಯಾಭ್ಯಾಸಂಗೆಯ್ಯುತ್ತುಂ ಸುಖಸಂಕಥಾವಿನೋದದಿಂದಿರ್ಪುದುಮೊಂದುದಿವಸಂ][1] ॥ ೮೭

ಆವನಾದೊಡಮಕ್ಕೆ ಚಂದ್ರಕವೇಧಮಂ ಮನದರ್ತಿಯಿಂ
ದೋವದೆಚ್ಚು ಜಗಕ್ಕೆ ಚಾಪದ ಬಲ್ಮೆಯಂ ಮೆಱೆವಂಗೆ ಲ
ಕ್ಷ್ಮೀವಿಳಾಸೆಯನುನ್ನತಿಕ್ಕೆಯ ಚಂದ್ರಲೇಖೆಯನರ್ತಿಯಿಂ
ದೀವೆನೆಂದು ಮಹೀಶ್ವರಂ ತೊಡಳಿಲ್ಲದಾಪುರಮಧ್ಯದೊಳ್ ॥ ೮೮

ಗೋಸಣೆಗಳವುದುಂ [2] ಪ್ರಮಾಥಿಕುಮಾರಂ [ಭಿಕ್ಷಾನ್ನಮಂ ನದೀತೀರದೊಳುಣಲೆಂದು ಪೋಗುತ್ತುಮಿರ್ದು ಗೋಸಣೆಯಂ ಕೇಳ್ದು ತಡವಿಲ್ಲದೆ ಪರಿತಂದು ಗೋಸಣೆಯಂ ಪಿಡಿವುದುಮವರ್ ಜಿನಭಕ್ತಂಬೆರಸು ಸಿಂಹಸೇನಮಹಾರಾಜನಲ್ಲಿಗೆವಂದು ಗೋಸಣೆಯನೀತಂ ಪಿಡಿದನೆಂದು ತೋಱಿ ಬಿನ್ನಪಂಗೆಯ್ವುದುಂ ಅರಸಂ ಪ್ರಮಾಥಿಕುಮಾರನಂ ಕಂಡು॥

ಇವನೀಚಂದ್ರಕವೇಧಮ
ನವಯವದಿಂದೆಸೆಗುಮಲ್ಲಿ ತೊಡಳಿಲ್ಲ ಮಹೀ ।
ಧವತನಯನಕ್ಕುಮಲ್ಲದೊ
ಡಿವಗಿಂತೀರೂಪುಶೌರ್ಯಮಿಂತೊಪ್ಪುಗುಮೇ ॥ ೯೦

---

1 ಎಂದು ಪುಣ್ಯದೊಳಾದ ಫಲಮಂ ಪೇಳ್ವುದುಂ ಎಲ್ಲರುಂ ಪ್ರಮಾಥಿಕುಮಾರಂಗೆ ಮಿತ್ರರಾಗಿರ್ಪುದುಂ ಒಂದುದಿವಸಂ (ಗ)

2 ಗೋಸಣೆಗೊಳ್ವುದುಂ (ಗ)

ಅದಟಂ ಪ್ರತಾಪಿ ಶೌರ್ಯಾ
ಭ್ಯುದಯಂ ಜಿನಪಾದಭಕ್ತನಮಲಚರಿತ್ರಂ ।
ಮದನಾವತಾರನರಿಬಲ
ಮದಭಂಜನನೀತನೆಮ್ಮ [1] ಕಿಱುಕುಳನಲ್ಲಂ ॥ ೯೧

ಎಂದು ಸಿಂಹಸೇನಮಹಾರಾಜಂ ವಾತ್ಸಲ್ಯರತ್ನಾಕರನ ಮೂರ್ತಿಯಂ ನೋಡಿ ನಚ್ಚಿ ಮೆಚ್ಚಿ ಮನದೊಳ್ ಪೊಗೞ್ದು ಕಯ್ಯಂ ಪಿಡಿದೊಡಗೊಂಡು ಪೋಗಿ ಮಜ್ಜನಭೋಜನತಾಂಬೂಲವಸ್ತ್ರಾಭರಣಾದಿಗಳಿಂ ಸಂತೋಷಂಬಡಿಸಿ ಮಱುದಿವಸಂ ದ್ರೋಣಾಚಾರ್ಯರ್ಮೊದಲಾಗೆ ಚಾಪವಿದ್ಯಾಪರಿಣತರುಮಂ ವಿದ್ವಜ್ಜನಮುಮಂ ಬರಿಸಿ ಚಂದ್ರಕವೇಧ್ಯಮನೀತನೆಚ್ಚಪಂ ಪರೀಕ್ಷಿಸಿಮೆಂಬುದುಮವರಂತೆ ಗೆಯ್ವೆವೆಂದು ನೋಡುತ್ತಿರ್ಪುದುಂ] [2] ॥ ೯೨

ಸೆರಗಂ ಪಾರದೆ ಬೆಚ್ಚದಳ್ಕದೆ ಭಯಂಗೊಂಡೋಡದಲ್ಲಾಡದೊ
ರ್ವರನಾಶ್ರಯಿಸದೆ ದೃಷ್ಟಿಮುಷ್ಟಿಶರಸಂಧಾನಂಗಳಿಂ ಭೂಪನ
ಚ್ಚರಿವಟ್ಟದ್ಭುತವೆಂದು ತೂಗೆ ತಲೆಯಂ ದ್ರೋಣಂ ಮನಂಗೊಂಡು ಸು
ಸ್ವರದಿಂ ಬಣ್ಣಿಸೆ ನೋಟಕರ್ ಪೊಗೞೆ ಭಾಪ್ಪೈಯೆಂದು ಸಂತೋಷದಿಂ ॥

ಚಂದ್ರವೇಧಮನಿಸುವುದುಂ [ಸಿಂಹಸೇನ ಮಹಾರಾಜಂ ಮಹಾವಿಭೂತಿಯಿಂದರ್ಧರಾಜ್ಯಮುಮಂ ಪ್ರತಿಜ್ಞೆಯಿರ್ದ ಚಂದ್ರಲೇಖೆಯುಮಂ ಕುಡುವುದುಂ ಕೈಕೊಂಡು ಪ್ರಮಾಥಿಕುಮಾರಂ ಪೂರ್ವೋಪಾರ್ಜಿತಪುಣ್ಯದ ಫಲದಿಂ ಚಂದ್ರಲೇಖೆಯೊಳ್ ಕೂಡಿ ಮಾಳವಾರ್ಧಾಧೀಶ್ವರನಾಗಿ ಸುಖದಿಂ] [3] ರಾಜ್ಯಂಗೆಯ್ಯುತ್ತುಮಿರ್ಪುದುಂ ॥ ೯೪

---

1 ಈತನೆಮಗೆ (ಗ)   2 ಪಿಡಿದು (ಗ)

3 ಅದಟಂಪ್ರತಾಪಿ....ಕಿಱುಕುಳನಲ್ಲಂ (ಪದ್ಯ ೯೧). ಎಂದು ಸಿಂಹಸೇನ ಮಹಾರಾಜಂ ಚಂದ್ರಲೇಖೆಯುಮನರ್ಧರಾಜ್ಯಮುಮಂ ಕುಡೆ ಕೈಕೊಂಡು (ಗ)

ಅರಸಂಗೊರ್ವ್ವಂ ಬಂದ
ಚ್ಚರಿ ದೇವ ಮಹಾಪ್ರತಾಪದಿಂ ಕೌಶಾಂಬೀ ।
ಪುರಮಂ ಪರಮಂಡಳಿಕರ್
ನೆರೆದು ಭಯಂಗೆಯ್ದು [1] ಮುತ್ತಿ ಕಾದಿಪರಿನ್ನುಂ ॥ ೯೫

ದಂತಬಲನೃಪತಿ ಕೋಂಟೆಯು
ನೆಂತುಂ ಕೊಳಲೀಯದೊಳಗೆ ಪೆರ್ಬಲದಿಂದಂ ।
ಭ್ರಾಂತಿಂ ಕಾದುತುಮಿರ್ದಪ
ನಿಂತಲಸದೆ ಪತ್ತಿ ಕಾದುವನ್ನರನಱಿಯೆಂ ॥ ೯೬

[ಪೊಱಗೆ ಬಳಸಿರ್ದ ರಿಪುನೃಪ
ರಱಿಯಟ್ಟಿ ತಗುಳ್ದು ಪೂಣ್ದು ಪೋಗದೆ ಚಲದಿಂ ।
ಕಱುಪಿಂ ಕಾದುತುಮಿರ್ದಪ
ರಱಿದೆನವರಪೋ್ರಗಲಱಿಯಲಾತನ ಪುಣ್ಯಂ ॥ ೯೭

ಎಂಬ ಮಾತನರಸನ ಕೆಲದೊಳಿರ್ದ ಪ್ರಮಾಥಿಕುಮಾರಂ ಕೇಳ್ದು ಸಿಂಹದಂತೆ ಗರ್ಜಿಸಿ ಮುನಿದು ಸಿಂಹಸೇನಮಹಾರಾಜಂಗಱಿಪಿದೊಡೆ ಪೋಗಲೀಯನೆಂದು ತತ್ಪುರೋದ್ಯಾನನಿವಾಸಿಯಪ್ಪ ಧರ್ಮೋಜ್ವಳ ನೆಂಬ ಯಕ್ಷಂ ಕೊಟ್ಟದೃಶ್ಯಾಂಜನಪ್ರಯೋಗದಿಂ ನಡುವಿರುಳಪ್ಪಾಗಳ್ ತಾನುಂ ನಲ್ಲಳುಂ ಸ್ಯಂದನಾರೂಢರಾಗಿ ಪುರದಿಂ ಪೊಱಮಟ್ಟು ॥ ೯೮

ನಿಲ್ಲದೆ ಮುನಿಸಿಂ ಸಾಹಸ
ಮಲ್ಲಂ ರಿಪುಬಲಮನಲೆಯಲೆಂದದಟಿಂದಂ ।
ತಲ್ಲಣಿಸದ ಗಂಡಂ ಕೊಂ
ಕಿಲ್ಲದ ಕಲಿ ಕುಪಿಯದದಟನೂರ್ಜಿತತೇಜಂ ॥ ೯೯

ಬರುತ್ತುಂ ನದೀನಿಕರಂಗಳಂ ಕಳೆದು ಧೂರ್ತನಂತೆ ಮೇಲೆ ಪಾಯ್ದು ಪುಲಿಗಳಂ ಪಿಸುಣನಂತೆ ಜಿನುಂಗುವ ನೊಣಗಳಂ ದುರ್ಜನ ನಂತೆ ಕವಿವ ಸೀನ್ನಾಯ್ಗಳಂ ದಾಯಾದನಂತೆ ಮಲೆವ ಕಾಡೆಮ್ಮೆಗಳಂ

---

[1] ಭರಂಗೆಯ್ದು (ಕ. ಬ.)

ಕುರ್ತ ತೊತ್ತಿನಂತೆ ಚಿತ್ತಮನಱಿಯದೆ ಸೀಳ್ವ ಸೀರ್ಕರಡಿಗಳಿಂದ ದ್ಭುತಮಪ್ಪ ಭೀಮವನಮೆಂಬ ಪೆರಡವಿಯೊಳಗೆ ಪೊಕ್ಕು ತನಗಿದಿರಾಗಿ ಗಜಱಿ ಗರ್ಜಿಸಿ ಪಾಯ್ತಂದ ಸಿಂಹಮಂ ಚಕ್ರಾಘಾತದಿಂ ಶಾರ್ದೂಲನಂ ಶರವೇಧದಿಂ ಮದಾಂಧಸಿಂಧುರಮಂ ಶರಸಂಧಾನದಿಂ ದೃಷ್ಟಿವಿಷಮಪ್ಪ ನಾಗರಂ ಧ್ವನಿಯೆಂಬ ಶರದಿಂದೋಡಿಸಿ ವಲ್ಲಭೆಗೆ ತನ್ನ ಬಿಲ್ಲ ಬಲ್ಮೆಯಂ ತೋಱುತ್ತುಂ ಮೆಲ್ಲಮೆಲ್ಲನೆ ಬರುತ್ತಿರ್ಪುದುಂ ॥ ೧೦೦

ಆನಟ್ಟವಿಯೊಳಿರ್ದಂ
ಹೀನಗುಣಂ ಪಾಪಯುಕ್ತನವಿಚಾರಿ ಸದಾ ।
ಸ್ತೇನವಿನೋದಂ ಚೋರಜ
ನಾನಂದಂ ಭೂಮಿಪಾಲನಪಗತಶೋಕಂ ॥ ೧೦೧

ಸುವೇಗನೆಂಬಂ ದಾಯಾದರ್ ಬಲ್ಲಿದರಾಗಿ ರಾಜ್ಯಮಂ ಕೊಂಡೊಡೆ ತದ್ವನಮಂ ಪೊಕ್ಕು ಕಳ್ಳರೆಲ್ಲರುಮಂ ಕೂಡಿಕೊಂಡು ॥ ೧೦೨

ದ್ರೋಣಾಚಾರ್ಯರ ರೂಪಂ
...ಮಾಡಿಟ್ಟು ಪಲವುಪುಷ್ಪವಳಿಯಿಂ ।
ಮಾಣದೆ ಪೂಜಿಸಿ ನೆನೆದ
ಕ್ಷೋಣನ ಪದಪಂಕಜಂಗಳಂ ಚೋರೇಶಂ ॥ ೧೦೩

ನಿಚ್ಚಲುಂ ಬಿಲ್ಲಂ ಶ್ರಮಂಗೆಯ್ಯುತ್ತಿರ್ಪುದುಂ ॥ ೧೦೪

ಕರಮಲ್ಲದೆ ಕೋದಂಡದೊ
ಳರಡಿಲ್ಲದೆ ಫಲ್ಗುಣಂಗಮಾತನೆ ಜಗದೊಳ್ ।
ಪರಿಣತನೆನಿಸಿದನದಱಿಂ
ಗುರುಪದಭಕ್ತಂಗೆ ಸಾಧ್ಯಮಲ್ಲದುದುಂಟೇ ॥ ೧೦೫

ಅಂತು, ಬಿಲ್ಲೊಳತಿಜಾಣನುಂ ಪ್ರವೀಣನುಮೆನಿಸಿದ ಸುವೇಗಂ ಪ್ರಮಾಥಿಮಹಾರಾಜನ ಕೆಲದೊಳಿರ್ದ ಚಂದ್ರಲೇಖೆಯುಂ ಕಂಡು ಕಣ್ಬೇಟಂಗೊಂಡು, ಜ್ವರಮಾದರಂತೆ ದಾಹದಿಂ ಮೆತ್ತಿ, ಕಾಯ್ದ ಕಬ್ಬುನದಂತೆ

ಮೆಯ್ಕಾಯ್ದು, ಗಾಳಿಮುಟ್ಟಿದರಲೆಯಂತೆ ನಡುಗಿ, ಗ್ರಹಂಪಿಡಿದ ಮನುಷ್ಯನಂತೆ ಪರವಶನಾಗಿ, ಕೊಂತಗೊಂಡವನಂತೆ ಜೋಲ್ದು, ಬೇಸಗೆಯೊಳ್ ಪಯಣಂಬೋಪನಂತೆ ಬೆಮರ್ತು, ಬಿಸಿಲೊಳಿರ್ದ ಶಿಶುವಿನಂತೆ ಕೊಱಗಿ, ಕಱು ಸತ್ತ ಪಶುವಿನಂತೆ ಮಱುಗಿ, ದಿವ್ಯಮಂ ಪಿಡಿದು ಸೋಲ್ತವನಂತೆ ಕೊಱಗಿ, ಬೇಗೆವೋದ ಬೆಟ್ಟದಂತೆ ಕಂದಿ, ನುಯ್ಗೊಟ್ಟ ಪಟ್ಟಪುಲ್ಲೆಯಂತೆ ಬೆದಱಿ, ಬೇತಾಳನಂ ಕಂಡ ಪಂದೆಯಂತೆ ಮೂರ್ಛೆವೋಗಿ, ಬಲವಿಲ್ಲದ ಕಾಳೆಗದಂತೆ ಕಗಮೆ ಸೋಲ್ತು, ಶೀತಳಮಪ್ಪೆಡೆಯೊಳ್ ಪಡಲುಂ ಗಾಳಿಗೆ ಮೆಯ್ಯನೊಡ್ಡಲುಂ ಚಂದನಕರ್ಪೂರಂಗಳಂ ಮೇಲೊಟ್ಟಿಕೊಳಲುಂ ತಣ್ಣನಿರ್ಪ ನೀರಂ ಪೊಕ್ಕಿರಲುಂ ಮೇಲೆಱಚಿಕೊಳಲುಂ ಮನಮಾಗಿ ವಿರಹಾನಳನಿಂದಿರಲಾಱದೆ][1] ‖ ೧೦೬

ಸಲ್ಲಲಿತಾಂಗಿಯುನ್ನತಿಯನಾರ್ಪೊಗೞಿರ್ ಬಗೆವಂದು ಕಾಮನಂ
ಬಲ್ಲದೆ ಕಾಮದೇವನಧಿದೇವತೆಯಲ್ಲದೆ ಕಾಮನಿರ್ಪ ಬೀ
ಡಲ್ಲದೆ ಕಾಮದೇವನ ಪತಾಕಿನಿಯಲ್ಲದೆ ಕಾಮನಾಡುವ
ಚ್ಚಲ್ಲದೆ ಕಾಮನೇಱುವ ಮದದ್ವಿಪಮಲ್ಲದೆ ಕಾಂತೆಯಲ್ಲಿವಳ್ ‖ ೧೦೭

ಮನಸಿಜನಾರಡಿಕಾಱಂ
ಮುನಿಸಿಂದೀಕಾಂತೆಯೆಂಬ ಕೂರಲಗಿಂ ಗಿ ।
ಱ್ಱನೆ ತೊಳ್ದು ಬೇಗಮಿಱಿದಪ
ನೆನಗಿಂ ಸಾವಲ್ಲದುೞಿವ ತೆಱನಂ ಕಾಣೆಂ ‖ ೧೦೮

---

1 ಎಂಬುದುಮಾಮಾತ್ರಂ ಪ್ರಮಾಥಕುಮಾರಂ ಕೇಳ್ದು ಸೈರಿಸಲುಮಾಱದೆ ಧೂಮಧ್ವಜನೆಂಬ ಯಕ್ಷಂ ಕೊಟ್ಟಂಜನಪ್ರಯೋಗದಿಂ ತಾನುಂ ನಲ್ಲಳುಂ ಅದೃಶ್ಯರೂಪದಿಂ ಸ್ಯಂದನಮನೇಱಿ ಪುರದಿಂ ಪೊಱಮಟ್ಟು ಪೊಱವೊಳಲೊಳಂಜನಪ್ರಯೋಗಮಂ ಬಿಸುಟು ಈರ್ವರುಂ ಸರ್ವಾಭರಣಭೂಷಿತರಾಗಿ ದಿವ್ಯವಸ್ತ್ರಮನುಟ್ಟು ವಿನೋದದಿಂ ಭೀಮವನಮೆಂಬ ಪೆರಡವಿಯೊಳ್ ಖರ್ಪನಂ ಸುವೇಗನೆಂಬೊರ್ವ ಕ್ಷತ್ರಿಯಪುತ್ರಂ ಪಗೆವರ್ಗಂಜಿ ತದ್ವನಮಂ ಪೊಕ್ಕು ಕಳ್ಳನಾಯ್ಕನಾಗಿ ಚಾಪವಿದ್ಯೆಯೊಳ್ ಗರ್ವಪರ್ವತಾರೂಢನಾಗಿರ್ದಾತಂ ಪ್ರಮಾಥಕುಮಾರನ ಕೆಲದೊಳಿರ್ದ ಚಂದ್ರಲೇಖೆಯುಂ ಕಂಡು ಕಣ್ಬೇಟಂಗೊಂಡು (ಗ)

ನೆರವಿಲ್ಲದಿಱಿವ ಕಷ್ಟಂ
ಸರೋಜಮುಖಿಯಿಾಕೆ ಯೆನ್ನಳಂ ಬಲ್ನೆರವಂ ।
ನಿರುತಂ ಪಡೆವೊಡೆ ಮೊಣ್ಬನೆ
ಮರುಳಪ್ಪಂ ಮಕ್ಕಳಾದೊಡಂ ಮೊಣ್ಡಪನೇ ॥ ೧೦೯

ಬಿರುದನೆನೆಂಬ ಮಾತು ಪೆಱಪಿಂಗಿದುದೊಳ್ಭಟನೆಂಬ ಮಾತು ನಿ
ಬ್ಬರಮುಡುಗಿತ್ತು ವೀರನೆನಿಪಗ್ಗದ ಮಾತದು ದೂರಮಾಯ್ತು ನಿ
ಷ್ಠುರನಿವನೆಂಬ ಮಾತು ತೊಱಿವಾದುದು ಪೆಂಪಿನ ಮಾತು ಕೆಟ್ಟುದೀ
ತರುಣಿಯ ಕಾಣ್ಕೆಯೊಳ್ ಭಯಮು ಮೋಹಮುಮಾದಪುದೆತ್ತವೋ
ಪೆನೋ ॥ ೧೧೦

ಎಡೆದಪುದೆತ್ತಿ ನೂಂಕಿದಪುದಿರ್ದೆಡೆಯಿಂ ಕಡಿಕೆಯ್ದು [1] ದರ್ಪದಿಂ
ತೊಲಗಿಪುದುರ್ವಿ ಬೇರ್ವಱಿದು ಕೀಲಿಸಿ ಕಾಡಿಪುದಟ್ಟಿ ಮುಟ್ಟಿ ಮಾ
ರ್ಮಲೆದಪುದೆನ್ನ ಚಿತ್ತಮನಗುರ್ವಿನೊಳೀಕೆಯ ಚೆಲ್ವು ರೂಪು ಸಂ
ಚಲನಯನಂ ಘನಸ್ತನಯುಗಂ ನುತಹಾವವಿಳಾಸವಿಭ್ರಮಂ ॥ ೧೧೧

ಸಲ್ಲಲಿತಾಂಗಿಯ ರೂಪ್ಪಮ [2]
ನೆಲ್ಲಿಯುಮಾಪಾದಮಸ್ತಕಂಬರೆಗಂ ತ ।
ಳ್ವಲ್ಲದೆ ನೋಟ್ಪೊಡೆ ಚೋದ್ಯಂ
ಚೆಲ್ಲಂ ಬೀಱುವವೊಲಿರ್ದುವವಯವವನಿತುಂ ॥ ೧೧೨

ಬಿರುದರೊಳಾಂತು ಕಾದಿ ಸೆಡೆದುಳ್ಕನೆ [3] ವೀರರೊಳಾಂತು ಕಾದಿ ಮೆ
ಯ್ಮುರಿಯನೆ [4] ಸೊಕ್ಕಿ ಮಿಕ್ಕದಟರೊಳ್ ತೊಡರ್ದಾಯ್ಗನೆ [5] ಯುದ್ಧ
ದೊಳ್ ಮನಂ
ದಿರಿಯನೆ ಕಾಮನೆಂಬ ಖಳನೀಲಲಿತಾಂಗಿಯನೊತ್ತುಗೊಂಡು ಚೆ
ಚ್ಚರಮಿಸೆ ಪುಷ್ಪಬಾಣತತಿಗಳ್ಕಿದೆನಳ್ಕಿದನೋವೊ ಬೆರ್ಚಿದೆಂ ॥ ೧೧೩
೭೮

[1] ಕಡುಕೆಯ್ದು (ಗ) [2] ತಾಂಗವನೊಪ್ಪವ (ಕ. ಬ.)
[3] ಉಳ್ಕನೆ (ಕ. ಬ.) [4] ಮುರಿಯೆನೆ (ಕ. ಬ.)
ತೊಡರ್ದಾಡೆನೆ (ಕ. ಬ.)

ಇವಳ ಕಟಾಕ್ಷಮೆನ್ನೆರ್ದೆಯನುರ್ಚಿಪುದೀಕೆಯ ರೂಪು ದಾಱಿಯೊಳ್
ಕವಿದಪುದೆತ್ತಲೀಸತಿಯ ಜವ್ವನಮೆನ್ನನಡರ್ತು ತಾಗಿ ಕಾ
ಡುವುದತಿಕೋಪದುಬ್ಬರದಿನೀಲಲಿತಾಂಗಿಯ ಗಾಡಿ ಸೊಕ್ಕಿ[1] ಕಾ
ದುವ ಬಲುಬಂದಿಕಾಱನವೊಲಾಱಿಡಿಗೊಂಡಪುದೆನ್ನ ಚಿತ್ತಮಂ ॥ ೧೧೪

ಪೋಗದೆ ಸುತ್ತಿ ಮುತ್ತಿ ಪೊಣರ್ದಾಳ್ಕೆದೆ...ತನ್ನ ಗಂಡನಿಂ
ಬಾಗಿರೆ ತೋಱಲೀಸತಿಯ ಮುಂದೆ ಮನೋಭವನೆನ್ನನೆತ್ತಲುಂ
ತಾಗಿ ಕನಲ್ದು ಪುಷ್ಪಶರಸಂತತಿಯಿಂ ಬಿಡದೆಚ್ಚು ತಾಳುತ
ಟ್ಟಾಗೆ ತಗುಳ್ದು ಕಾದಿದಪನಾವನನಾಂ ಶರಣೆಂದು ಕಾಣ್ಬೆನೋ ॥ ೧೧೫

ಕುರುಳ ಬೆಡಂಗುಮಂ ಮುಡಿಯ ಚೆಲ್ವುಮನಂಬುಜವಕ್ತ್ರದೊಳ್ಪ
ಮಂ
ಕೊರಲ ಸಮುನ್ನತಸ್ತನದ[2] ತೋಳ ಕವುಂಕುಳ[3] ಬೆನ್ನ ಭಂಗಿವೆ
ತ್ತಿರವುಮನಣ್ಣ ಬಾಯ್ದೆಱೆಯ ಪುರ್ವಿನ ಮೂಗಿನ ಕಂಗಳು[4]
ಬ್ಬರಿಪ ವಿಳಾಸದಂದಮುಮನೀಕ್ಷಿಸಿ ಸೋಲದ ಗಂಡನಾವನೋ ॥ ೧೧೬

ಎಂದು ತನ್ನೊಳೆ ನುಡಿದು[5] ॥ ೧೧೭

ಸುರರಾಜಂ ಬಂದು ಮಾರ್ಕೊಂಡೊಡಮಹಿಪತಿ ಬಂದಡ್ಡಮಾಗಿರ್ದೊಡಂ
ಭಾ
ಸ್ಕರನಣ್ಮಿಂ ಪೊಂಗಿ ಬಂದಾಂತೊಡಮವನಿಯೊಳುಳ್ಳ ಕ್ಷಿತೀನಾಥರೆಲ್ಲಂ
ಭರದಿಂ ಕೈಕೊಂಡು ವೀರಂಬೆರಸು ಪೊಣರ್ದೊಡಂ ಮಾಣೆನೀಕಾಂತೆ
ಯಂ ವಿ
ಸ್ತರದಿಂ ಕೈಕೊಂಡು ಕೊಂದೀತನನವಯವದಿಂ ಭೋಗಿಪೆಂ ರಾಗ
ದಿಂದಂ ॥ ೧೧೮

---

1 ಪೊಕ್ಕು (ಗ)
2 ಲಸದ್ಘಟಸ್ತನದ (ಗ)
3 ತೋಳಿನಕೌಂಕುಳ (ಗ)
4 ನೀಳ್ದಕಣ್ಣಳು (ಕ. ಖ.)
5 ಬಗೆದು (ಕ. ಖ.)

[ಎಂದು ಮನದೊಳ್ ಪ್ರಮಾಥಿಕುಮಾರನಂ ಕೊಲ್ವ ಕಜ್ಜಮನೆತ್ತಿಕೊಂಡು ಪ್ರತಾಪಪರನಪ್ಪುದಱಿಂ ಪ್ರಮಾಥಿಕುಮಾರನೊರ್ವನೆಂದೇಳಿಸಿ ತಾನೆತ್ತಲೊಲ್ಲದೆ ತನ್ನನಾಯಕನೊರ್ವನಂ ಕರೆದು ಬಟ್ಟೆವೋಪ ಬಡವನಂ ಕೊಂದು ಕೋಮಲಲತಾಲಲಿತಗಾತ್ರೆಯುಮಂ ವನಜನೇತ್ರೆಯುಮಪ್ಪಾತನ ಪೆಂಡತಿಯುಮನಿಲ್ಲಿಗೆ ತದ್ರಥಂಬೆರಸು ತರ್ಪುದೆಂದು ಬೆಸನಂ ಪೇೞ್ವುದುಮವನಂತೆಗೆಯ್ವೆನೆಂದು ಬೆಸನಂ ಕೈಕೊಂಡು ಪೊಡೆಮಟ್ಟು ತನ್ನ ನೆಲೆಗೆವಂದು ತನ್ನ ಬಲಮೆಲ್ಲಮಂ ಕೂಡಿಕೊಂಡು ಪ್ರಮಾಥಿಕುಮಾರನನ್ಯದಿ ತಾಗಿ] [1] ‖ ೧೧೯

ನಿನಗೇಕೀತರಳಾಯತಾಕ್ಷಿ ನಿನಗೇಕೀಸೌಂದರಾಕಾರೆ ಕಾ
ಮಿನಿಯಂ ಕಾಯದೆ [2] ಬಿಟ್ಟು ಪೋಗು ಪದಪಿಂದೀ ಕಾತೆಯಂ ಬಿಟ್ಟು ಭೋಂ
ಕನೆ ನೀಂ ಪೋಗದೆ ನಿಂದೆಯಪ್ಪೊಡೞಿವಕ್ಕೆಂದಾರ್ದು ಬಿಲ್ಲಾಳ್ಮಹಾ
ಮುನಿಸಿಂದಂ ಶರವೃಷ್ಟಿಯಂ ಸುರಿವುದುಂ ವಾತ್ಸಲ್ಯರತ್ನಾಕರಂ ‖೧೨೦

ಜಿನಪಾದಾಂಬುಜಯುಗ್ಮಮಂ ನೆನೆದು ಬಿಲ್ಲಂ ಕೊಂಡು ಕೈಗಾಯದೊ
ರ್ವನೆ ಬಂದೊಡ್ಡಿದ ವೈರಿಯಾಳನದಟಂ ಬಾಣಾಳಿಯಿಂದಿಕ್ಕಿ ಮೆ
ಲ್ಲನೆ ವೀರಂ ನಗುತುಂ ಮನೋರಮೆಗೆ ತೋಱುತ್ತಿರ್ಪಿನಂ ಭೃತ್ಯನೊ
ರ್ವನಮೋಘಾಸ್ತ್ರನ ಬಾಣದಿಂ ಬರ್ದುಕಿ ಭೀತಾತ್ಮಂ ಮಹಾಭೀತಿ
ಯಿಂ ‖ ೧೨೧

ಬಂದು ಸುವೇಗಂಗೆ [ನಾಯಕರ] ಭೃತ್ಯರ ಸಾವುಮಂ ಪ್ರಮಾಥಿಕುಮಾರನ ವೀರಮುಮಂ ಬಿನ್ನಪಂಗೆಯ್ವುದುಂ ಮುನಿದು ಕೋಪಾವೇ

---

[1] ಎಂದು ಪ್ರತಾಪಿಯಪ್ಪಾದಿತ್ಯಂ ತಾನೆತ್ತಲೊಲ್ಲದೆ ತನ್ನ ನಾಯಕನೊರ್ವನ ಕರೆದು ಬಟ್ಟೆವೋಪ ಬಡಸಾದುವಂ ರಥವೆರಸನ್ನಲ್ಲಿಗೆ ಕೊಂಡುಬಾ ಬಾರಲೊಲ್ಲಂ ದೊಡಾತನಂ ಕೊಂದಾತನ ಪೆಂಡತಿಯನೊಡಗೊಂಡುಬಾಯೆಂದು ಬೆಸಸುವುದುಮಾತನಂತೆ ಗೆಯ್ವೆನೆಂದು ತನ್ನ ಬಲಮೆಲ್ಲಮನೊಂದಾಗಿ ಕೂಡಿಕೊಂಡು ಪೋಗಿ (ಗ)

[2] ಸಾಯದೆ (ಕ. ಬ.)

ಶದಿಂ ನಾಯಕರೆಲ್ಲರಂ ಕರೆದು ಬೆಟ್ಟಮಂ ಗುಂಗುರು ಕಾಡಿತ್ತೆಂಬ, ಗಜಮಂ ನರಿ ನುಂಗಿತ್ತೆಂಬ, ಸಿಂಹಮಂ ನಾಯ್ ಕೆಣಕಿತೆಂಬ, ಶರಭನ ನೆರಲೆ ಜೋಡಾಡಿಸಿತೆಂಬ, ಮಾತಿನಂತೆ ಬಟ್ಟೆವೋಪ ತಿರಿಕನೊರ್ವನೆನ್ನ ನಾಯಕನಂ ಕೊಂದು ಬಲಮೆಲ್ಲಮನಿಕ್ಕಿ ವೀರಕ್ಕೆ ತೊನೆದುದ್ಧತಂ ಮೆಟ್ಟಿ ಗಂಡಿಂಗಾನೆ ಪಿರಿಯನೆಂದಿರ್ದಪಂ ಗಡಮವನನೀಗಳ್ ನೀವಿನಿ ಬರಂ ಪೋಗಿ ಕಾದಿ ದರ್ಪಮಂ ಕಿಡಿಸಿ ಕೊಲಲ್ವೇಡ ಪಿಡಿದು ಕೋಡಗ ಗಟ್ಟುಗಟ್ಟಿ ಕೊಂಡೆನ್ನಲ್ಲಿಗೆ ತನ್ನಿ [ಮಾತನನೆನ್ನ ಕಣ್ಣಾಣಿವಿನಮಾನೆ ನಾನಾವಿಧದಿಂ ಕೊಂದು ದೆಸೆವಲಿಗೆಯ್ದು ಬೞಿಕಮಾತನ ಪೆಂಡತಿಯನರಸಿ ಮಾಡಿಕೊಳ್ವೆನೆಂದು ಬೆಸಸುವುದುಂ] [1] ‖ ೧೨೦

ನೆರೆದು ಸಮಸ್ತತಸ್ಕರರಗುರ್ವಿನೊಳುರ್ವಿ ಕಡಂಗಿ ಪೆರ್ವಲಂ
ಬೆರಸು ಮಹಾಸಮುದ್ರಮಿಳೆಯಂ ತಳರ್ವಂತೆ ಧರಿತ್ರಿ ಭಾರದಿಂ
ಬಿರಿಯೆ ಧರಿತ್ರಿ ಮರ್ತ್ಯಮಯ [2] ಮಾದವೊಲದ್ಭುತಮಾಗೆ ಕೋಪದಿಂ
ದುರಿಯುತುಮುಕ್ಕಿ ಸೊಕ್ಕಿ ಕಡುಪಿಂ ತಳರ್ದತ್ತು ಪುಳಿಂದಸಾಧನಂ‖

ಅಂತೆತ್ತಿ ಬಂದು ಪ್ರಮಾಥಿಕುಮಾರನ ರಥಮಂ ಮೂವಳಸಾಗೆ ಮುತ್ತಿಕೊಂಡು ಪೋಗದಡ್ಡಂಬಿನ [ಕೂರಂಬಿನ ಕವೆಲಂಬಿನ] ಪಾಱಂ ಬಳೆಯ ಕಕ್ಕಡೆಯ [ಮಿಟ್ಟೆಯ] ವೊಟ್ಟೆಸರಲ ಬಲ್ಸರಿಯಂ ಸುರಿಯೆ ‖

ಇದು ಪೆರ್ವಲಮಾನೊರ್ವನೆ
ಕದನಂ ಪಿರಿದಕ್ಕುಮೆಂದು ಮನದೊಳ್ ಬೆಚ್ಚ ।
ಲ್ಲದೆ ಕೋಪಮಿಲ್ಲದಿರ್ದಂ
ವಿದಿತಯಶಃಪ್ರಕರ [3] ನಮಳಚಾರುಚರಿತ್ರಂ ‖ ೧೨೧

ಅಂತಿದಿರ್ದೊಯ್ಯನೆ ಲೀಲೆಯಿಂದನಿತುಬಾಣಕ್ಕಂ ಭರಂಗೆಯ್ದು ನಿ
ಶ್ಚಿಂತಂ ಸಾಯಕಮೊಂದನೆಚ್ಚನಿತುಮಂ ಬಿಲ್ಬಲ್ಮೆಯಿಂ ಭೂಪನೋ

---

[1] ಎನೆ (ಗ) [2] ಬಿರಿಯೆಯುಂ ಮರ್ತ್ಯಲೋಕಮಯ (ಗ)
[3] ಪ್ರವರ (ಕ. ಬ.)

ರಂತಲ್ಲಾಡೆ ತಗುಳ್ದು [1] ಖಂಡಿಸುವುದುಂ ಸಿಗ್ಗಾಗಿ ಬಂದೆಗ್ಗಿನೊ
ಳ್ಪಿಂತಿಂಗೋಡದೆ ಬೆಚ್ಚಿ [2] ಕಟ್ಟದಲಗಿಂ ಕಿತ್ತಣ್ಮಿನಿಂದಿರ್ಪುದುಂ ‖ ೧೨೬

ಚಂದ್ರಲೇಖೆ ನಕ್ಕು ದೇವ ನಿನಗಿವರ್ ದೊರೆಯಲ್ಲ, ಇವರ ನಿನ್ನ ಪ್ರತಾಪಮನಾರಯ್ವೊಂದು ಸಿಂಹದ ನಾಯು ಕರಿಯು ನರಿಯು ಪುಲಿಯು ಪುಲ್ಲೆಯು ತೋಳನ ಕುಱಿಯು ಗರುಡನ ಪಾವಿನ ಬಲಾಬಲಂಗಳಂ ಪೋಲ್ಕು [ಮಿವರ್ ತಮ್ಮ ಬಂದೆಗ್ಗಿನೊಳ್ ಸಿಗ್ಗಾಗಿ ತಮ್ಮಾಳ್ದನ ಮೊಗಮಂ ಮಗುಳ್ದು ಪೋಗಿ ನೋಡಲ್ ನಾಣ್ಚಿ ದೇವರ ಬಾಣಾವಳಿಯೊಳ್ ಬಿರ್ದಕ್ಕಾಱಲ್ ಬಗೆದಪರ್ ; ಗೆಲ್ಲದ ಕಾಳೆಗದಿಂದೋಟಮೆ ಲೇಸೆಂಬುದು ; ನರಿಯಂ ಬಡಿದೊಡೆ ಪೇಲ್ ಸುರಿಗುಮಲ್ಲದೆ ಲಾಭಮಿಲ್ಲದದು ಕಾರಣದಿಂ ದಿನಿಬರುಮಂ ಬಱಿದೆ ಕೊಂದು ಪಾಪಮಂ ಮಾಡಿಕೊಳ್ಳದೆ ನಿದ್ರಾಬಾಣ ದಿಂದಿನಿಬರ್ಗಂ ನಿದ್ರೆಯಂ ಮಾಡಿ ಸುಖದಿಂ ಪೋಪಮೆಂಬುದುಂ ಪ್ರಮಾಥಿಕುಮಾರಂ ನಲ್ಲಳ ಮಾತಿಂಗಂ ಮನದ ಕಾರುಣ್ಯಬುದ್ಧಿಗಂ ಮೆಚ್ಚಿ ದರ್ಶನಶುದ್ಧಿಯೆಂದಱಿದು ‖ ೧೨೭

ಇನಿಯಳ ಬುದ್ಧಿಯಂ ಮನದೆಗೊಂಡು ಮಹೀಶ್ವರನಾಗಳಲ್ಲಿ ದು
ರ್ಜನರನಪಾಯದಿಂ ಕೊಲಲುಚಿಂತೆನಡರ್ತು (?) ವಿವೇಕದಿಂದೆ ಮೆ
ಲ್ಲನೆ ದಯೆ ಪುಟ್ಟೆ ನಿದ್ರೆಯನೆ ಮಾಡುವ ಶಕ್ತಿಯನುಳ್ಳ ಬಾಣಮೊಂ
ದನೆ ತೆಗೆದಾರ್ದು ನಿಂದಿಸುವುದುಂ ರಿಪುಸೇನೆ ಬೞಲ್ದು ನಿದ್ರೆಯಿಂ ‖ ೧೨೮

ಬಡಿಕೊಂಡ ನೆಲ್ಲಿಯಂತೆ ನೆಲಕ್ಕೆ ಬೀೞ್ವುದುಂ] [3] ಅವರಪಜಯಮಂ ಸುವೇಗಂ ಕೇಳ್ದುಕ್ಕುಡಿಸೆ, [4] ನೆಲನಂ ಪೊಯ್ದು ಮೆಯ್ಯಱಿಯದೆ ತನ್ನ ಮುಂದಣ ನರಕಗಮನಮಂ ತೋರ್ಪಂತೆ ಕಂಪಿಸುವ ಮೆಯ್ಯುಂ ಕೆಚ್ಚನಾದ ಕಣ್ಣುಂ ಬೆಚ್ಚನಾದ ತನುವುಂ ಉರಿವೆರ್ದೆಯುಂ ಬೆರಸಗುರ್ವಾಗೆ ಮಸಗಿದ ಸಿಂಹದಂತಿರ್ದ ಸುವೇಗಂಗೆ ಪ್ರಧಾನ [ರುಂ ಬುದ್ಧಿ

[1] ರಳ್ಳಂತಾಡದೆ ತಳರ್ದು (ಗ) [2] ಪಿಂತಣ್ಗೋಗದೆ ಪೆರ್ಚಿ (ಕ. ಬ.)

[3] ಮಿವರಂ ಕೊಲಲ್ವೇಡೆಂಬುದುಂ ನಿದ್ರಾಬಾಣದಿಂದಿವರ್ಗೆ ನಿದ್ರೆಯುಂ ಮಾಡಿ ಪೋಪುದುಂ (ಗ) [4] ಕೇಳ್ದು (ಗ) ಕೇಳ್ದುಕ್ಕಿರಿಸಿ (ಕ. ಬ.)

ವೆಂತರುಂ ಚಾತುರ್ಯಮಪ್ಪವರುಂ ದೀರ್ಘಶರೀರಿಗಳುಂ ಕಾರ್ಯವೇದಿ
ಗಳಪ್ಪವರುಮಿಂತೆಂದು ಪೇೞ್ದರ್] [1] ॥ ೧೨೯

ಸೆರಗಂ ಪಾರದೆ ನಮ್ಮ ನಾಯಕರನಿಂದಾಟಂದು ಕೊಂದಿಕ್ಕಿ ಭಾ
ಸ್ಕರತೇಜಂ ಕಲಿಯಾಗಿ ಪೋಗದೆ ಭರಂಗೆಯ್ದಿರ್ದನೆಂದಂದು ನಿ
ಷ್ಠುರವೀರತ್ವಮನಾರ್ಪ ನಣ್ಮ ನದಟಂ ಶೌರ್ಯತ್ವಮಂ ಪೆಂಪನು
ರ್ವರೆಯೊಳ್ ಬಣ್ಣಿಪನಾವನಾತನಿದಿರೊಳ್ ನಿಂದಾಂತು ಮೆಯ್ಯಾಗ್ವರಾರ್ [2] ॥

ನೆರವಿಲ್ಲೊರ್ವನೆ ದಿವ್ಯಕಾಮಿನಿಯನೀ ರೌದ್ರಾಟವೀಮಧ್ಯದೊಳ್
ಭರದಿಂದೊಯ್ದಪನೆಂದೊಡಾತನಳವಂ ಸೌಂದರ್ಯಮಂ ಧೈರ್ಯಮಂ
ಬಿರುದಂ ಬಣ್ಣಿಪನಾವನೇೞದತನಂಗೆಯ್ದಾತನಂ ಕೊಂದು ಸೌಂ
ದರಿಯೊಳ್ ಕೂಡುವೆನೆಂಬುದೆಗ್ಗು ಮರುಳೇ ಸೀಳಿಕ್ಕದೇಂಮೊಣ್ಬನೇ ॥

ಪರಪೆಣ್ಗೊಳ್ಳಿದಳೆಂದು ಕೂರ್ತು ಸೆಱೆಯಿಟ್ಟಾರೆಂದೊಡಂ ಮೊಣದೊ
ರ್ವರುಮಂ ಕಾಣಿಕೆಗೊಳ್ಳದುಕ್ಕಿ [3] ಬಲಮಂ ನಚ್ಚಿರ್ದ ಲಂಕೇಶನಾ
ದೊರೆಯಂ ನಾಯುವೊಲಣ್ಮುಗೆಟ್ಟು ಮಡಿದಂ ತಾನೆಂದೊಡಾಡಾಗಿ ಸಾ
ಯರೆ ದೂರಿಂಗೆಡೆಯಾಗಿ ಬೇಯರೆ ಪರಸ್ತ್ರೀಗಾಸೆಗೆಯ್ದಿರ್ಪವರ್॥ ೧೩೦

ಪರವಧುವೆನ್ನದಗ್ನಿಜೆಗೆ ಸೋಲ್ತು ಸುಯೋಧನನನ್ನನುಂ ಮಹೀ
ಧರನಿಭಧೈರ್ಯನಪ್ಪ ವಿಭುವಪ್ಪ ಮಹಾಗುಣಿಯಪ್ಪ ಭೀಮನಿಂ
ದರಿಯುವೊಲಟ್ಟಿ ತೂಳ್ದಿ [4] ಗದೆಯಿಂ ನೆಱೆ ಮೋದಿಸಿಕೊಂಡು ಸತ್ತನಾ
ದೊರೆಯನುಮೆಂದೊಡಾರೞಿಯರನ್ಯರ ಪೆಂಡತಿಗಾಸೆವಟ್ಟವರ್ ॥ ೧೩೧

ಅದುಕಾರಣದಿಂ ಪರಸ್ತ್ರೀಯ ನೋಟವಂ ಜವನ ಕಾಟವೆನ್ನದೆ, ಪೆಱರ ಪೆಂಡಿರ ಚೆಲ್ವುಮಂ ಸೂಳವೆನ್ನದೆ [5], ಲೋಗರ ಭಾರ್ಯೆಯರ ವಿಳಾಸಮಂ ಮೃತ್ಯುವಿನ ಕಯ್ಯ ಪಾಶಮೆಂದೆನ್ನದೆ, ಅನ್ಯಾಂಗ

1 ರಿಂತೆಂದರ್ (ಗ)   2 ಮೇಗೆಯ್ವರೋ (ಗ)

3 ಕಾಣಿಗೆಕೊಳ್ಳದುಕ್ಕಿ (ಕ. ಬ.)   4 ತೂಳ್ದು (ಗ)

5 ಕಾಯ್ದಂತಕನ ಮಸೆದಲಗೆಂದೆನ್ನದೆ (ಕ. ಬ.)

ನೆಯರ ರೂಪಂ ಪಾಪದ ಬಟ್ಟೆಯೆನ್ನದೆ, ಮೆಚ್ಚಿ ನಚ್ಚಿ ಕೂಡುವ ಬಯಕೆಯನುಳ್ಳಾತಂ ಸಱಿಯನೇಱಿ ನೆಲಕ್ಕೆ ಬೀೞ್ವ, ಕರಡಿಗಿದಿರಾಗಿ ಪುಯ್ಯಲಿಡುವ, ಪುಲಿಯ ಮುಂದೆ ಪಟ್ಟಿರ್ಪ, ಪಸಿದ ರಕ್ಕಸಿಯಂ ಕೆಳೆಗೊಳ್ವ, ಸಿಂಗದ ಮೀಸೆಯಂ ಕೀಳ್ವ, ಶರಭಮಂ ಪಿಡಿದೇಱುವ, ನೃಪರನುಂಡೆಯಂ ಪೊಯ್ವ, ಮಸೆದ ಸುರಗಿಯಂ ನುಂಗುವ, [1] ಕಿಚ್ಚಂ ಪುಗುವ, ಪಾವಿನ ಬಾಯೊಳ್ ಕೈಯನಿಡುವ, ಪರಿವ ಬಂಡಿಗೆ ಕಾಲಂ ನೀಡುವ, ಸುಣ್ಣಮಂ ಬಱಿದೆ ತಿಂಬೆಗ್ಗನಂ ಪೋಲ್ಕುಮಿಂತು ॥ ೧೩೪

ಪರಕಾಂತಾನಿಕರಕ್ಕೆ ಸೋಲ್ತು ಮನಮಂ ಸಂತಯ್ಸಲೇನಾಱದು
ಬ್ಬರದಿಂದುಬ್ಬರಮಾಗೆ ಕೂಡಿ ಪಿರಿದಾಟಂದೆತ್ತಿನೊಳ್ಪಾಡಿ ಮೇ
ಣ್ಪಿರಿದಂ ನಿಗ್ರಹದಿಂದೆ ದಂಡಿಸಿ ಮಹಾದುಃಖತ್ವಮಂ ಮಾಡಿ ಪೋಣ್
ಧರಣೀಶರ್ ಕೊಲೆ ಸತ್ತು ಮತ್ತೆ ನರಕಂಬೊಕ್ಕಿರ್ಪರಾಪಾತಕರ್॥೧೩೫

ಪರವಧುಗಾಸೆಗೆಯ್ವ ನರನಂ ಕುಲಮೆಂಡಿರನೊಲ್ಲದಿರ್ಪ ನಿ
ಷ್ಠುರನುಮುದಾರನಲ್ಲದರಸಂ ನೆರೆಯಂ ಪಗೆಗೊಳ್ವ ಗ್ರಾಂಪನಂ
ಗುರುವನವಜ್ಞೆಗೆಯ್ವ ರುಷಿಯುಂ [2] ಪದಪಿಲ್ಲದ ದಾನಿಯುಂ ಜಿನೇ
ಶ್ವರಪದಸೇವೆಯಿಲ್ಲದವನುಂ ನೆಱೆ ರಂಜಿಸಲಾಱರುರ್ವಿಯೊಳ್ ॥ ೧೩೬.

ಪರವಧುಗಾಸೆಗೆಯ್ದು ಗತಿಗೆಟ್ಟು ಪರತ್ರಿಯನೊಕ್ಕು ಕಂಡರೆ
ಲ್ಲರುಮಱಿಯುಟ್ಟೆ ಮುಟ್ಟೆ ಮುನಿದೋವದೆ ಪೊಯ್ದು ಕವರ್ತೆಗೊಂಡು ನಿ
ಷ್ಕರುಣದಿನೊತ್ತಿ ಮೆಟ್ಟಿ ತಲೆಯಂ ಕಡಿದಾಕೆಯ ಮೂಗನೊಳ್ಳಿತಾ
ಗಿರೆ ನಡುಬೀದಿಯೊಳ್ ಪಲರಮುಂದರಿಪೊಂದಪಮಾನವೊಳ್ಳಿತೇ ॥೧೩೭

ಪರವಧುಗೋತ ದುರ್ಜನನನಾಗಳೆ ಕೊಂದು ಧರಿತ್ರಿ ನೋಡೆ ಪಾ
ದರಿಗೆಯ ಮೂಗನಾಗಳರಿದಾತನ ಮುಂಡೆಯನಾಗಳಾಕೆಗಾ
ಭರಣಮದೆಂದು ಕಟ್ಟಿ ನೆಱೆ ಬೀದಿಗಳೊಳ್ ಪಲರಾರ್ದು ಡಂಗುರಂ
ಬೆರಸು ತೊೞಲ್ವ ಕಷ್ಟತೆಯ ಪೇೞ್ದೆ ಮುಂದಣ ದುರ್ಗತಿತ್ವಮಂ ॥

1 ಬೈಕೆಯುಸಗಳ್ವ (ಗ)   2 ಶಿಶುವುಂ (ಗ)

ಪರವಧುಗೋತು ಕೂಡಲೆಡೆಯಿಲ್ಲದೆ ನೋಡಿ ಕನಲ್ದು ಜೋಲ್ದು ಕೊ
ಕ್ಕರಿಸಿ ಪೆಱರ್ಗೆ ಬೆಚ್ಚಿ ಮನೆಗೋಗಿ [1] ಮಹಾಮೆಱುಕಕ್ಕೆ ಭೂಮಿ ಯೊಳ್
ಪೊರಳುತುಮಿರ್ದು ನೀರಡಿಸಿ ಬಾಯ್ ಪೊಗೆವೋಗೆ ನಿರರ್ಥಕತ್ವದಿಂ
ದುರಿಯುತುಮಿರ್ಪ ತನ್ನೆರ್ದೆಯ ದಾಹಮೆ ಪೇೞದೆ ಪೊಲ್ಲದೆಂಬುದಂ ॥

ಮಾವಿನ ಪಣ್ಣನೊಲ್ಲದೆ ಬೇವಿನ ಪಣ್ಣಂ ತಿಂಬಂತೆ, ನಿರ್ಮಲ
ಮಪ್ಪ ನೀರಂ ಕುಡಿಯದೆ ಕೆಸಱ ನೀರಂ ಕುಡಿವಂತೆ, ಹಂಸೆಯ ಪಾಸ
ನೊಲ್ಲದೆ ಮುಳ್ಳಮೇಲೆ ಪಡುವಂತೆ, ಬಟ್ಟೆಯೊಳ್ ಪೋಗದೆ ಕಾಡಂ ಪುಗು
ವಂತೆ, ಕೞವಾಪಂ ಪೊರೆಯದೆ ಗೊಡ್ಡಂ ಪೊರೆವಂತೆ, ತೋಂಟಕ್ಕೆ ನೀರ
ನೆತ್ತದೆ ಬೀದಿಗೆ [2] ನೀರನೆತ್ತುವಂತೆ, ಮನೆಯುಂ ಬಿಟ್ಟು [3] ಶ್ಮಶಾನದೊಳಿ
ರ್ಪಂತೆ, ಬಾವಿಯುಂ ಪೂೞ್ದು ಬೆಟ್ಟಮನಗೞ್ವಂತೆ, ಮಗನಂ ತೊಱೆದು
ಕಳ್ಳನನೊಳಕೊಳ್ವಂತೆ, ಸೀರೆಯುಂ ಕೊಟ್ಟು ನಾರಂ ಕೊಳ್ವಂತೆ,
ತೆಂಗಿನ ಮರನಂ ಕಡಿದು ಸಾವೆಗೆ ಬೇಲಿಯನಿಕ್ಕುವಂತೆ, ಕಳವೆಯ
ನೊಕ್ಕು ಮಳಲಂ ಕೊಳ್ವಂತೆ, ಮಾಣಿಕವುಂ ಬಿಟ್ಟು ಗುರುಗುಂಜೆಯುಂ
ಪಿಡಿವಂತೆ, ಕರ್ಪೂರಮನೊಲ್ಲದೆ ಪಗಿನಂ ಕೊಳ್ವಂತೆ, ಸಿರಿಯನೊಲ್ಲದೆ
ತಿರಿದುಂಬಂತೆ, ಮಾನಿಸವಾೞ್ಗೆಲಸಿ ನಂಜಂ ಕುಡಿವಂತೆ, ಸಮ್ಯಕ್ತ್ವ
ಮುಮಂ [4] ಸುಖಮುಮಂ ಪುತ್ರಲಾಭಮುಮನೀವ ಕುಲಾಂಗನೆಯ
ನೊಲ್ಲದೆ ಪರಪೀಡೆಯುಮಂ ಮನೋದುಃಖಮುಮಂ ಬಹುಕ್ಲೇಶ
ಮುಮಂ ಕೀರ್ತಿಯೞಿವುಮಂ ಧರ್ಮಕ್ಷಯಮುಮಂ ನರಕದ ಮಹಾ
ದುಃಖಮುಮಂ ಮಾೞ್ಪ ಪರಾಂಗನೆಗಳಿಪುವುದು ಕಜ್ಜಮಲ್ಲೆಂದು [5]
ಧರ್ಮಸ್ವರೂಪಮಂ ನುಡಿವುದುಂ ॥ ೧೪೦

ಅವರ ವಚನಂಗಳಂ ಕೇ
ಳ್ದವಧಾರಿಸಿ ಪೊಲ್ಲದೆಂಬ ಬಗೆಯಿಲ್ಲದ ಲೋ ।

---

1 ಮೂರು ಪುಸ್ತಕಗಳಲ್ಲಿಯೂ 'ಮನೆಗೋಗಿ' ಎಂದೇ ಇದೆ.
2 ಬಿದಿರಿಗೆ (ಗ) 3 ಸುಟ್ಟು (ಕ. ಬ.)
4 ಸಂಪತ್ತುಮಂ (ಕ. ಬ.) 5 ಬುದ್ಧಿಯಲ್ಲೆಂದು (ಗ)

ಕವಿರುದ್ಧಮಪ್ಪ ಕಜ್ಜಮ
ನವಯವದಿಂದೆತ್ತಿಕೊಂಡು ಮಾಣದೆ ಚಲದಿಂ ॥ ೧೪೧

ಮುನ್ನಿನ ನಾಯಕರ್ ಮಡಿದರೆಂಬುದನೊಯ್ಯನೆ ಕೇಳ್ದು ಭೀತಿಯಿಂ
ದನ್ನಡುಗುತ್ತುಮುಳ್ಳಳುಕಿ ಕಾದುವ ಬುದ್ಧಿಯನೊಲ್ಲದಂತುಮಿಂ [1]
ತುನ್ನೆಱ ಲೋಗರಂಗನೆಗೆ ಸೋಲದಿರೆಂದೆನಗೆಯ್ದೆ ಧರ್ಮಮಂ
ಸನ್ನುತಮಾಗಿ ಪೇೞ್ವಿರಱಿವೆಂ ಗಳ ನಿಮ್ಮ ಪರಾಕ್ರಮಂಗಳಂ ॥ ೧೪೨

ನಾಯ ಬಾಲಮಂ ಪಿಡಿದು ತೊಱೆಯಂ ಪಾಯ್ವಂತೆ ನಿಮ್ಮ ಬಲಮಂ ಪಿಡಿದು ಕಾದಿ ವಿಳಾಸವತಿಯನೆನಗೆ ಮಾಡಲಿರ್ದ ಗಾವಿಲನಲ್ಲೆನೆನ್ನ ಭುಜಬಲಮೆ ಸಾಲ್ಗುಂ ಪಂದೆತನದಿಂದೆನ್ನೊಡನೆ ಕಾಳೆಗಕ್ಕೆ ಬರಲೊಲ್ಲಿರಪ್ಪೊಡಿಲ್ಲಿಯೆ ಮಾಣ್ದು ಸಿರದಿರ್ಪುದಲ್ಲದೆ ನಿಮ್ಮ ಕಾಪ್ [2] ಧರ್ಮಶ್ರವಣಮಂ ಪೇೞವೇಡೆಂಬುದುಂ ಪ್ರಧಾನರ್ ಸುವೇಗನ ಮನದ ತೀವ್ರತೆಯಂ ಕಂಡು ತಮ್ಮೊಳಿಂತೆಂದರ್ ॥ ೧೪೩

ದಿನಪತಿಗುಷ್ಣಮಂಬುರುಹವೈರಿಗೆ ಶೀತಳಮಬ್ಧಿಗುಪ್ಪುನೀರ್
ವನಿತೆಗೆ ಮಾಯವೃತ್ತಿ [3] ಫಣಿಗುಗ್ರವಿಷಂ ಸಹಜಂಗಳಂತು ಮೇ
ದಿನಿಯೊಳಗಂತೆ ದುರ್ಮತಿಯುಮುದ್ಧತಿಯುಂ ಪುರುಳ್ಗೆಟ್ಟ ವಾಕ್ಯಮುಂ
ಮುನಿಸುಮುಪಾಯಚಿಂತೆಗಳುಮಿಂ ಸಹಜಂ ಕುನಯರ್ಗೆ ಲೋಕ
ದೊಳ್ ॥ ೧೪೪

ಪಾಪದೊಳಾದ ಚಿಂತೆಯುಂ ಕೊಲೆಯೊಳಾದ ರಾಗಮುಂ ಸದ್ಧರ್ಮದೊಳಾದ ಮುನಿಸುಂ ಪರಸ್ತ್ರೀಯೊಳಾದ ಕೂರ್ಮೆಯುಂ ಬೆಸನಿಗಳೊಳಾದ ಕೂಟಮುಂ ಕಳವಿನೊಳಾದ ಪ್ರೀತಿಯುಂ ಪುಸಿಯೊಳಾದ ಜಾಣುಂ ಪರಪೀಡೆಯೊಳಾದ ಪ್ರವೀಣತ್ವಮುಂ [4] ಸಾಧುಗಳೊಳಾದ ದುರ್ವಚನಮುಂ ವಿಷಯಂಗಳೊಳಾದ ಮೋಹಮುಂ ದ್ರವ್ಯದೊ

1 ಬುದ್ಧಿಯನೆಯ್ದಲೊಲ್ಲದಂ (ಗ)

2 ಕೊಳ್ (ಗ)   3 ಮಾಯೆಮೃತ್ತಿ (ಕ. ಬ.)

4 ಚತುಃ ಕಷಾಯದೊಳಾದ ಪೆರ್ಚುಗೆಯುಂ (ಗ)

ಳಾದ ಕಡುಲೋಭಮುಂ ನಿರ್ದೋಷಿಪರಮಾತ್ಮನೊಳಾದ ದೂಷಣೆ ಯುಂ ಸದ್ಧ್ಯಾನದೊಳಾದಾಲಸ್ಯಮುಂ ಕುತ್ಸಿತದಾನದೊಳಾದ ಪೆರ್ಚುಗೆಯುಂ [1] ನರಕಂಬುಗಲ್ವೇಡಿರ್ದ ಜೀವಕ್ಕೆ ಸಹಜಮದಂ ಮಾಣಿಸುವೆನೆಂಬುದು ಸರ್ವಜ್ಞಂಗಂ ಬಾರದದುಕಾರಣದಿಂ ನರಕಂಬುಗಲ್ವೇಡಿರ್ದಂಗೆ ಪರವೆಣ್ಣೊಳಾದ ಪ್ರೀತಿ ಪೋಗಲಱಿಯದು ["ದುರಾಗ್ರಹಸ್ಯ ಹಿತೋಪದೇಶೋ ಬಧಿರಸ್ಯಾಗ್ರತೋ ಗಾನಮಿವ" ಎಂಬ ನೀತಿಯುಂಟೇ] ತಂಗಾವೇನೆಂದೊಡಂ ನಮ್ಮ ಮಾತು ಕೀೞಿಕ್ಕುಮಲ್ಲದೀತಂ ಕೇಳ್ವನಲ್ಲ ನಾಮಿನ್ನುಸಿರದಿರ್ಪವೆಂದು ಪ್ರಧಾನರುಸಿರದಿರ್ಪುದುಂ ಸುವೇಗಂ ವೇಗಿಯಾಗಿ ಯುದ್ಧಕ್ಕೆ ನಡೆದು ॥ ೧೪೫

ಪೋಗದಿರೆಂದು ತಾಗಿ ರಥಮುಂ ಸೆಡೆದುಳ್ಕದೆ ಪತ್ತಿ ಮುತ್ತಿ ಚೆ
ಲ್ವಾಗಿರೆ ತನ್ನ ಚಾಪದ ಪರಿಶ್ರಮಮಂ ನೆಱೆ ತೋರ್ಪೆನೆಂದು ಧ
ನ್ವಾಗಮವೇದಿಯುಂ ಜಿನಪದಾಂಬುಜಭೃಂಗನನಾಗಳತ್ಯಗು
ರ್ವಾಗೆ ಕುಕಿಲ್ದು ಕಾರ ಸರಿವೋಲ್ [2] ಸುರಿದಂ ಶರಸಂಕುಲಂಗಳಂ ॥

ಸರಳ ಸರಿಯಂ ನಿಕೃಷ್ಟಂ
ಸುರಿವುದುಮಪರಿಮಿತಮಾಗೆ ಭಯಮಿಲ್ಲದೆ ಝೇಂ ।
ಕರಿಸಿ ರಿಪುಸೇನೆ ಬಾಣೋ
ತ್ಕರದಿಂ ಕಯ್ದಾಯದನಿತುಮಂ ಖಂಡಿಸಿದಂ ॥ ೧೪೭

ಎಡೆಯೊಳ್ ಬಾಣಾವಳಿಯುಂ
ಕಡಿವುದುಮವನಾರ್ದು ಮತ್ತೆ ಸಾಯಕಚಯಮಂ ।
ಬಿಡುವುದು ಮಹಿಪನ ರಥಮಾ
ಗಡೆ ಸರಳಿಂ ಬಿದಿರ ಪೊದಱಿನಂತಾಯ್ತೆಸಿಸುಂ ॥ ೧೪೮

ಅನಿತುಂ ಸಾಯಕತತಿಯಂ
ಮನುಜೇಂದ್ರಂ ನೋಡಿ ನಕ್ಕು [3] ಮತ್ತೊಂದಂಬಿಂ ।

1 ಹರ್ಷತ್ವಮುಂ (ಗ) 2 ಕಾಡ್ಸರಿವೋಲ್ (ಗ)
3 ಬೇಗ (ಕ. ಖ.)

ದನಿತುಮನರಿಸೈನ್ಯಂ ಭೋಂ
ಕನೆ ಮನದೊಳ್ ಜಱಿಯೆ ಕುಸಿಯೆ ತತ್ತಱದಱದಂ ॥ ೧೪೯

ತಱಿವುದುಮಾತಂ ಮಲಮಲ
ಮಱುಗಿ ಮಹಾಕೋಪದಿಂ ಶರಾವಳಿಯುಂ ಮ ।
ತ್ತಱಿಯುಟ್ಟ ಬೇಗಮಿಸುವುದು
ಮಱಿದುಂಬಿಗಳಂತೆ ಮೇಗೆ ನೆಗೆದೊಬ್ಬುಳಿಯಿಂ ॥ ೧೫೦

ಬರುತಿರ್ಪ ಬಾಣಮಂ ಸೌಂ
ದರರೂಪಂ ಕಂಡು ಬಾಣಮೊಂದಱಿನವನಂ ।
ತರದೊಳ್ ನಿರಿಸುವುದುಂ ವಿ
ಸ್ತರದಿಂ ರಮಣೀಯಮಾಯ್ತು ಪೀಲಿಯ ತಟಮ್ಪೋಲ್ ॥ ೧೫೧

ಅಂತಂಬರದೊಳ್ ನಿಂದಂ
ಬಂ ತಡೆಯದೆ ಕಂಡು ಕೋಪದೊದವಿಂದಾಕ ।
ರ್ಣಾಂತಂಬರೆಗಂ ತೆಗೆದಿಸೆ
ಸಂತತಮೊಡನೊಡನೆ ಮೇಗಣಿಂ ಬರ್ಪಂಬಂ ॥ ೧೫೨

ವಸುಧೀಶಂ ಕಂಡು ಬಾಣಾವಳಿಯೊಳನಿತುಮಂ ತತ್ಕ್ಷಣಂ ಕೋಪದಿಂ ಖಂ
ಡಿಸೆ ಭೂಭಾಗಕ್ಕೆ ಬಿರ್ದಿರ್ದಲಗುಗಱಿಚಯುಂ ಕೋಲ್ಗಳಂಭೋಧಿಯುಂ ರಂ
ಜಿಸೆ ನೀಲಾದ್ರೀಂದ್ರಮಂ ದುರ್ಗಮನನುನಯದಿಂ ಪೋಲೆ ತತ್ಸ್ಯಂದನಂ ಭಾ
ವಿಸಿ ನೋಟ್ಪಿಂದೊಪ್ಪಿ ಲಂಕಾಪುರದ ಮಹಿಮೆಯುಂ ಸೂಱಿಗೊಂಡಂತಿರಕ್ಕುಂ ॥ ೧೫೩

ಅಂತು ಪೋಗದೆಯಿಸೆ ಉಕ್ಕುಕ್ಕಂ [1] ತಾಗುವಂತೆ ತಾಗಿ ಸೆರಗುಗೆಯ್ಯದೆ ಕಾದುತ್ತಿರ್ಪುದುಂ ಪ್ರಮಾಥಿಕುಮಾರನ ಕಯ್ಯಂಬುಗಳರಡು

1 ಪಣಿದುಕಕ್ಕಂ (ಗ)

ಱಿಯೆ [1] ಮತ್ತೆಲ್ಲಂ ತಪ್ಪುವುದುಂ ಚಂದ್ರಲೇಖೆ ಕಂಡು ಬೆಱಗಾಗಿ ಪಲ್ಲಿಲ್ಲದ ಪುಲಿಯುಂ ನಖವಿಲ್ಲದ ಸಿಂಹಮುಮೆನಿತುಬಲ್ಲಿತಾದೊಡಮೇಗೆಯ್ವುದು ಈತನಪ್ಪೊಡೆ ಬಲ್ಲಿದಂ ಬಲ್ಲಿದನಾಗಿಯುಂ ಕೈದುವಿಲ್ಲದೇಗೆಯ್ಗುಂ [2] ಸಾವು ನಿಶ್ಚಯಮಾಯ್ತೆಂದು ಚಿಂತಾಕ್ರಾಂತೆಯಾಗಿ ॥ ೧೫೪

ಪತಿಯಂ ಬಿಟ್ಟು ಪರತ್ರೆಗೆಟ್ಟು ಕುಲಮಂ ಕಿತ್ತಿಕ್ಕಿ ನಾಯಾಗಿ ದು
ರ್ಮತಿಯಿಂ ದುರ್ಜನದೊಳ್ ದುರಾಚರಿತರೊಳ್ ನಿರ್ಧರ್ಮರೊಳ್ ಕೂಡಿ ಸ
ನ್ಮತಮಂ ಬಿಟ್ಟು ಪತಿವ್ರತಾಗುಣಮನೊಕ್ಕಾನಂದದಿಂದಿರ್ಪ ಸಂ
ಸ್ಮೃತಿಸೌಖ್ಯೋನ್ನತಿಯಿಂ ಮಹಾಮಹಿಮೆಯಿಂ ಸಾವೇಂ ಕರಂ ಪೊಲ್ಲದೋ ॥ ೧೫೫

ಉರಿಯೊಳ್ ತಂದಿಕ್ಕಿ ಕಾಯ್ವೆಣ್ಣೆಯನೆಱೆದರಿದೀಡಾಡಿ ಖಂಡಂಗಳಂ ಸಿಂ
ಧುರದಿಂ ನುಗ್ಗಾಗೆ ಕಾಲ್ಕೈಮುಱಿಯೆ ತುಳಿಸಿ ಕೊಂತಂಗಳಿಂ ಕುತ್ತಿ ಶಸ್ತ್ರೋ
ತ್ಕರದಿಂ ಛೇಱಿಟ್ಟು ಖೈರಂದಱಿದು ಕಡಿದು ನಾನಾಪ್ರಕಾರಂಗಳಿಂ ನಿ
ಷ್ಠುರದುಃಖವ್ರಾತದಿಂ ದಂಡಿಸುವ ನರಕಜಗರ್ಗೇವೊ ಮೆಯ್ಯೊಡ್ಡಲಾಱೆಂ ॥ ೧೫೬

ನರಿ ನಾಯ್ ಬೆಕ್ಕೋಂತಿ ವಿರ್ಪ ಪೇರ್ ನೊಣಮುಂಡು ಕರಿ ಪೆರ್ಬಾವು ಪಾರಾವತಂ ವಾ
ನರನೆತ್ತಾಡಂಚೆ ಸಿಂಹಂ ಕರಡಿ ಮಹಿಷಿ ಪೆರ್ಮಾನಜಂ ಕೋೞಿ ಗಾರ್ದಂ
ಶರಭಂ ಸಾರಂಗಮಶ್ವಂ ಪಶು ಪುಲಿಯಿಲಿ ಕಾಡೆಮ್ಮೆ ಕಾಟ್ಕೋೞಿಯೆಂ ಬೀ
ತಿರಿಕವ್ರಾತಂಗಳೊಳ್ ಸಂಭವಿಸಿ ದುರಿತದಿಂ ದುಃಖಮಂ ಪೇೞಲಾಱೆಂ ॥

1 ಬಂದೆರಡುಱಿಯೆ (ಗ) 2 ಏಗುವಂ (ಗ)

ಲಲಿತ [1] ಪತಿವ್ರತಾಗುಣಮನುರ್ವಿಸೆ ಕಾಂತನೊಳಾದ ಭಕ್ತಿಯಂ
ನಿಲಿಸಿ ಪೊದಟ್ದಿ ದುಃಖಮುಮನಾರ್ಪಮುಮಂ ಕಡುನೋವುಮಂ ಮಹೀ
ವಳಯದೊಳಾಂತು ಬೆಬ್ಬಳಿಸದಂಜದೆ ನೋಡ ಸುಖಕ್ಕೆ ಕೀರ್ತಿಗ
ಗ್ಗಳಿಕೆಗೆ ಮುಖ್ಯರಾದರದಱಿಂ ಗುಣಮುಳ್ಳರೆ ಪೂಜ್ಯರಲ್ಲರೇ ॥ ೧೫೮

ಎಂದು ಮುನ್ನಿನ ಮಹಾಗುಣವಂತರಪ್ಪರ ಕಥಾಂತರಂಗಳಂ ಭಾವಿಸಿ ಪ್ರಮಾಥಿಕುಮಾರನಿಂ ಮುನ್ನೆನ್ನ ಪತಿವ್ರತಾಗುಣಕ್ಕಂ ದರ್ಶನಕ್ಕಂ ಹಾನಿಯಾಗಲೀಯದೆ ಸಾವೆನೆಂದು ಶರೀರಮಂ ತೊಱೆದು ಧರ್ಮಧ್ಯಾನದಿಂ ಪಂಚಪರಮೇಷ್ಠಿಗಳ [ಶ್ರೀಪಾದಂಗಳಂ] ಹೃತ್ಕಮಲದೊಳ್ ತಾಳ್ದಿ ಪಂಚನಮಸ್ಕಾರಂಗಳನೋದುತ್ತುಂ ಬರ್ಪಂ [ಬಿ] ಗಿದಿರಾಗಿ ರಥದಿಂ ಪೊಱಮಟ್ಟು ನಿಂದಿರ್ಪುದುಂ ಸುವೇಗಂ ಚಂದ್ರಲೇಖೆಯ ಸರ್ವಾಂಗಮಂ ಕಂಡು ॥ ೧೫೯

ಕೀಲಿಸಿದಂತಿರೆ ನಯನಂ
ಬಾಲೆಯ ಲಲಿತಾಂಗದಲ್ಲಿ ನಟ್ಟಿರೆ ಮತಿಗೆ ।
ಟ್ಟಾಲಾಪಮಿಲ್ಲದಱಿಯದೆ
ಕಾಳೆಗದೊಳ್ ಕೂವ [2] ಕಂಭದಂತಿರೆ ನಿಂದಂ ॥ ೧೬೦

ಅಂತಿರ್ಪುದುಂ ಪ್ರಮಾಥಿಕುಮಾರನೆಡೆವೆತ್ತು ಕೂರಂಬೊಂದಂ [3] ತೊಟ್ಟು ತೀವಿ ತೆಗೆದಿಸುವುದುಂ ॥ ೧೬೧

ತಲೆ ಪಱಿದು ಜೋಲ್ದು ತೊಪ್ಪನೆ
ನೆಲದೊಳ್ ತನು ಬೀೞೆ ಸತ್ತು ಪರವನಿತೆಗೆ ಸೋ ।
ಲ್ತುಳಿಪಿದ ಪಾಪದ ಫಲದಿಂ
ಮಲಿನಮನಂ ಜವನ ದಾಡೆಗಂದೊಳಗಾದಂ [4] ॥ ೧೬೨

---

[1] ಸುಳಿಸಿ (ಕ. ಬ.) [2] ಕೂನ (ಕ. ಬ.)
[3] ಪ್ರಮಾಥಿಕುಮಾರನಂಬೊಂದಂ (ಗ)
[4] ಹೀನಮನಂ ಶೀಘ್ರಮಿರದೆ ನರಕಂಬೊಕ್ಕಂ (ಕ. ಬ.)

ನೋಡಿರೆ ಪಾಪದ ಪೆರ್ಚಂ
ಕೂಡದೆ ಪಿರಿದಱ್ಕಱಿಂದಮೊದವಿರೆ ಸಲೆ ಮಾ ।
ತಾಡದೆ ದೂರಾಂತರದೊಳ್
ನೋಡಿದ ಫಲದಿಂದಮಿಱಿದನಸುಗತಿಗಾತಂ ॥ ೧೬೩

[ಕಾಳಗಮಪ್ಪುದನಱಿದುಂ
ಬಾಲೆಗೆ ಸೋಲ್ತುತ್ತಲಿತ್ತು ಮಿಡುಕದೆ ನಿಂದೊ ।
ಳ್ಳಾಳಱಿದನೆಂದೊಡನ್ಯರ
ಬಾಲೆಗೆ ಸೋಲ್ತಂಗೆ ಬುದ್ಧಿ ದೊರೆಕೊಂಡಪ್ಪುದೇ ॥ ೧೬೪

ಗತಿಯುಂಟೋ ದಯೆಯುಂಟೋ
ಮತಿಯುಂಟೋ ಸುಗತಿಯುಂಟೊ ನಿರ್ವೃತಿಯುಂಟೋ ।
ಧೃತಿಯುಂಟೋ ಕೇಳನ್ಯರ
ಸತಿಯರ್ಗಳಿಪಿದ ನರಂಗೆ ವಸುಧಾತಳದೊಳ್ ॥ ೧೬೫

ಅಂತು ಪ್ರಮಾಥಿಕುಮಾರನ ಬಾಣದಿಂ ಮಿಡಮಿಡಮಿಡುಕಿ ಸುವೇಗಂ ನರಕದೊಳ್ ಪುಟ್ಟಿದಂ. ಸಮ್ಯಕ್ತ್ವಚೂಡಾಮಣಿ ರಿಪುವಂ ಗೆಲ್ದು ಮುನ್ನಿನವರ ನಿದ್ರೆಯೆಲ್ಲಮನುಪಸಂಹರಿಸಿ ನಿಮ್ಮ ನಿಮ್ಮ ಮನೆಗೆ ಪೋಗಿಮೆಂದು ಕಳುಪಿ ಮನಃಪ್ರಿಯೆವೆರಸು ಕೌಶಾಂಬಿಗೆವಂದು ॥ ೧೬೬

ಬಿರುದಿಂ ಪೋಗಿ ಕಡಂಗಿ ದರ್ಪದೊದವಿಂ ಸುತ್ತಿರ್ದ ಭೂಪಾಲರೆ
ಲ್ಲರುಮಂ ಬೇಗದೆ ತಾಗಿ ಬಾಣತತಿಯಿಂ ಕೈಗಾಯ್ದುದೆಚ್ಚುರ್ವಿ ನಿ
ಷ್ಠುರಕೋಪಾನಳನಿಂ ತಗುಳ್ದು ಹಯು.........
..................ಗೊಂಡು ವಿಜಯಶ್ರೀಗೀಶನಾಗಿರ್ಪುದುಂ ॥ ೧೬೭

ದಂತಿಬಲಮಹಾರಾಜಂ ಪ್ರಮಾಥಿಕುಮಾರನಪ್ಪುದಂ ದೂರದಿಂ ದಱಿದು ಪುರಮಂ ಶೃಂಗಾರಂಗೆಯ್ದಿದಿಗೋಳಲ್ ಗುಡಿತೋರಣಂಗಳಂ ಕಟ್ಟಿಸಿ ಸಮಸ್ತಬಲಂಬೆರಸು ರಾಗದಿಂದಿದಿರ್ವಪ್ಪುದುಂ ಕುಮಾರನ ಯ್ಯಂಗೆ ಬಂದು ಚಂದ್ರಲೇಖೆವೆರಸು ಪೊಡೆಮಡುವುದುಂ ॥ ೧೬೮

ಜಿನಪದಭಕ್ತನಾಗು ಜಿನಧರ್ಮದೊಳೊಳ್ಳಿದನಾಗು ಜೈನಶಾ
ಸನವರದೀಪನಾಗು ಜಿನಸೇವನೆಯೊಳ್ ದೃಢನಾಗು ರಾಜ್ಯಗೋ
ಮಿನಿಗಧಿನಾಥನಾಗಿ ಸಲೆ ಭವ್ಯಜನಾಳಿಯೊಳೊಂದಿ ಕೂರ್ತು ಸ
ಜ್ಜನನುತನಾಗಿ ಪಾಲಿಸು ಮಹಾವನಿಯುಂ ರವಿಚಂದ್ರರುಳ್ಳಿನಂ [1] ‖೧೯೯

ಎಂದು ಪರಸಿ ತಕ್ಕೈಸಿಕೊಂಡು ಮಹಾವಿಭೂತಿಯಿಂದರಮನೆ ಗೊಡಗೊಂಡು ಬಂದು ಸಂತೋಷದಿಂ ಜಿನಾಭಿಷೇಕ ಪೂಜೆಗಳಂ ಮಾಡಿ ಕೆಲವುದಿವಸಕ್ಕೆ ಬಸಗೆಮರುಳ್ಗೊಂಡು ‖ ೧೭೦

ತನಯುಂಗೆ ರಾಜ್ಯಭರವಂ
ಮನುಜೇಂದ್ರಂ ಕೊಟ್ಟುಮಿಾಪರಿಗ್ರಹದಿಂ ಬೇ ।
ಳನಿಸದೆ ಜಿನೇಂದ್ರಪದಸೇ
ವನೆಯೊಳ್ ಸಚ್ಚಿತ್ತನಾಗಿ ನಿಲ್ವುದುಮಾಗಳ್ ‖ ೧೭೧

ಧರಣೀಶರ್ ಬೆಸಕೆಯ್ಗೆ ಕೂರ್ತು ಸತತಂ ಕೈವಾರದಿಂದೆಯ್ದೆ ಭೃ
ತ್ಯರುದಾರರ್ ಪದಪಿಂದೆ ಪೊರ್ದೆ ಪರಭೂಪಾಲರ್ ಮಹಾಭೀತಿಯಿಂ
ನರಿಯುಂತಂಜಿ ಕುನುಂಗಿ ತಮ್ಮ ಧನಮಂ ತಂದೀಯೆ ಭವ್ಯಾಳಿ ಪೆ
ರ್ಚಿರೆ ಸದ್ಧರ್ಮದಗುರ್ವು ಪರ್ವೆ ಧರೆಯುಂ ಭೂಭಾಗಮಂ ತಾಳ್ದಿದಂ ‖

ಅಂತು ರಾಜ್ಯಶ್ರೀಯುಂ ತಾಳ್ದಿ ಸೌಂದರಮಹಾದೇವಿಯುಂ ಚಂದ್ರಲೇಖೆಯುಂ ಮೊದಲಾದನೇಕರಸಿಯರೊಳ್ ಕೂಡಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ಪಿನಮಾಪುರಕ್ಕೊರ್ವ ಧರ್ಮಘೋಷಭಟ್ಟಾರಕರೆಂಬಧಿಕಗುಣರಪ್ಪ ರಾಜರ್ಷಿಯರ್ ಬರ್ಪುದುಂ ಅವರ ಬರವಂ ಋಷಿನಿವೇದಕಂ ಬಂದರಸಂಗೆ ಬಿನ್ನಪಂಗೆಯ್ವುದುಮಾತಂಗಂಗ ಚಿತ್ತಮನಿತ್ತು ‖ ೧೭೩

ಪರಮೋತ್ಸವದಿಂ ಪುಣ್ಯಂ
ದೊರೆಕೊಂಡುದು ದಿವ್ಯಮುನಿಯ ಬರವಿನೊಳಮಗೆಂ ।

[1] ಈ ಪದ್ಯವು (ಗ) ಪುಸ್ತಕದಲ್ಲಿ ಈ ಅಧ್ಯಾಯದ ಕೊನೆಗೆ ಬರುತ್ತದೆ.

ದರಸಂ ರಾಜಕುಮಾರರ್
ವೆರಸು ಸುರಾಧೀಶನಂತೆ ಪೊಱಮಟ್ಟಾಗಳ್ ॥ ೧೩೪

ಬಂದು ಜಿನಭಕ್ತಿಯಿಂ ಮುನಿ
ವೃಂದಾರಕನಂಘ್ರಿಯುಗಳಮಂ ಪೂಜಿಸಿ ಭೂ ।
ವಂದಿತಪದಪಂಕರುಹಂ
ವಂದಿಸಿ ಕುಳ್ಳಿರ್ದು ಮುಗಿದು ಹಸ್ತಾಂಬುಜಮಂ ॥ ೧೩೫

ನಿರ್ವಾಣಶ್ರೀಯ ಶೃಂಗಾರಮೆನಿಸಿದ ಜಿನಧರ್ಮಮಂ ಕಿವಿಯಾಂತೇಕಚಿತ್ತದಿಂ ಕೇಳುತ್ತುಮಿರ್ದು ವಾತ್ಸಲ್ಯರತ್ನಾಕರಂ ಪರಾಂಗನೆಗಳಿಪಿ ಕೆಡೆದ ಸಹಸ್ರಭಟನಪ್ಪ ಸುವೇಗನಂ ನೆನೆದು ಮನದೊಳ್ ವಿಸ್ಮಯಂಬಡುತ್ತಿರ್ಪುದುಂ ಧರ್ಮಘೋಷಣಭಟ್ಟಾರಕರವಧಿಜ್ಞಾನರಪ್ಪುದಱಿಂ ಸಮ್ಯಕ್ತ್ವಚೂಡಾಮಣಿಯ ಮನದ ಚಿಂತೆಯನಱಿದಿಂತೆಂದರ್] [1] ॥ ೧೩೬

ನೀಂ ನೆನೆಯುತ್ತಿರ್ಪ ಸುವೇ
ಗಂ ನಿನ್ನಂಗನೆಗೆ ಸೋಲ್ತ ಪಾಪದ ಫಲದಿಂ ।
ದಂ ನರಕಕೆಯ್ದಿ ವೇದನೆ
ಯಿಂ [2] ನವೆದಪನೀಗಳೆಂಬುದುಂ ನೃಪತನಯಂ ॥ ೧೩೭

[ಬೆಱಗಾಗಿ ಕರ್ಮ ಜೀವಿಗ
ಳಱಿಯದೆ ಮತಿಗೆಟ್ಟು ಪೆಱರ ಪೆಂಡಿರಯಿಂಪಿಂ ।
ಗೆಱಗಿ ಮತಿಗೆಟ್ಟು ಜಗುಪ್ಸೆಡೆ
ಯಱಿಯದೆ ಮಱುಗುತ್ತುಮಿರ್ಪರೇಂ ಸಾಸಿಗರೋ ॥ ೧೩೮

1 ಅಂತಾತನಂ ಕೊಂದು ಕೌಶಂಬಿಗೆ ಬಂದು ಪೊಱಗಿರ್ದರಿಬಲಮಂ ಕಾದಿ ಗೆಲ್ದು ದಂತಿಬಳಮಹಾರಾಜನೊಳ್ ಕೂಡುವುದುಂ, ಧರ್ಮಘೋಷಣರೆಂಬಾಚಾರ್ಯರ್ ರಾಪುರಕ್ಕೆ ಬರ್ಪುದುಂ ಅವರಂ ತಾನುಂ ತಮ್ಮಯ್ಯನುಂ ಪೋಗಿ ವಂದಿಸಿ ಧರ್ಮಮಂ ಕೇಳುತ್ತುಮಿರ್ಪುದು ವಾತ್ಸಲ್ಯರತ್ನಾಕರನು ಚಂದ್ರಲೇಖೆಗಳಿಪಿ ಸತ್ತ ಸಹಸ್ರಭಟನಪ್ಪ ಸುವೇಗನನಂ ನೆನೆವುದುಂ ಮುನಿವೃಂದಾರಕನವಧಿಯಿಂದಱಿದು ಇಂತೆಂದಂ (ಗ) 2 ದಿನ್ನುಂ ನರಕದ ನೆಲೆಯಿಂದಂ (ಗ)

ಸಾರಂ ಸ್ತ್ರೀಸುಖಮೆಂದವಿ
ಚಾರತೆಯಿಂ ಬಱದೆ ಮಱುಗಿ ಬೆಳ್ತನದಿಂ ಸಂ ।
ಸಾರಿಗಳಱಗುವರನ್ಯರ
ನಾರಿಗೆ ನರಕಕ್ಕೆ ಜಗುಪ್ಸೆ ಸಮಕಟ್ಟಿಂದಂ ॥ ೧೭೯

ತವುಡಂ ತಿಂದು ತುಯ್ಯಲನುಂಡೆನೆಂಬಂತೆ ನಾಯನೇಱಿ ಕರಿಯನೇಱಿದೆನೆಂಬಂತೆ ಗಂಜಿಯಂ ಕುಡಿದು ಕಳವೆಯ ಕೂೞನುಂಡೆನೆಂಬಂತೆ ಬಾಷೆಲೆಯಂ ತಿಂದು ಪಣ್ಣಂ ತಿಂದೆನೆಂಬಂತೆ ಕಬ್ಬಿನಡಿಯ ಬೇರಂ ತಿಂದು ಕಬ್ಬಂ ಮೆಲ್ದೆನೆಂಬಂತೆ ಸಂಸಾರದಲ್ಪಸುಖಮಂ ಸಂಕಲ್ಪದಿಂ ಮಹಾಸುಖಮೆಂದು ನಂಬಿ ನರಕದೊಳಾದ ಮಹಾದುಃಖಕ್ಕೊಳಗಾದರಕ್ಕಟಾ ಮೂರ್ಖರೆಂದು ತನ್ನೊಳ್ ಭಾವಿಸಿ ಮುನಿಕುಂಜರಂಗೆ ಪುನರ್ನಮಸ್ಕಾರಂಗೆಯ್ದು ತನ್ನ ಮನೆಗೆವಂದು] [1] ॥ ೧೮೦

ಪುಲಿಯಂ ಸೊರ್ಕಿದ ಗಂಧಸಿಂಧುರಮನತ್ಯಾಳಾಪಿಯಾಗಿರ್ದ ದು
ಷ್ಕುಲನಂ ಪನ್ನಗನಂ ವಿಷೋತ್ಕರಮನಸ್ತ್ರಾನೀಕಮಂ ಸಿಂಹಸಂ
ಕುಲಮಂ ಕಾಣ್ಬವೊಲಂಜಿ ಸಾರದೆ ಪರಸ್ತ್ರೀಯರ್ಕಳಂ ಭೂರಿಭೂ
ತಳದೊಳ್ ತಾಯ ಸಮಾನಮೆಂದು ಬಗೆದಂ ವಾತ್ಸಲ್ಯರತ್ನಾಕರಂ॥೧೮೧

ಎಸೆವ ಪರಸ್ತ್ರೀಯರ ತೆ
ಳ್ವಸಿಱಂ ಪೆತ್ತ ಬಸುಱೆಂಬನಲ್ಲದೆ [2] ಮತ್ತೊಂ ।
ದಸದಾಳಾಪಮನೆನ್ನಂ
ವಸುಮತಿಯೊಳ್ ಸುಕವಿನಿಕರಪಿಕಮಾಕಂದಂ ॥ ೧೮೨

ಮಂಡಿತಮೆನಿಸುವ ಲೋಗರ
ಪೆಂಡಿರ ಪೆರ್ಮೊಲೆಯುಮಂ ಮನೋಮುದದಿಂ ಮು ।

---

[1] ಬೞಿಗಾಗಿ ದಂತಬಳಮಹಾರಾಜನದುವೆ ನಿರ್ವೇಗವಾಗಿ ಸಾಸಿರ್ವರರಸುಮಕ್ಕಳ್ವೆರಸು ಜಾತರೂಪಧರನಾಗಿ ಪೋದನಿತ್ತಲ್ ಸಮ್ಯಕ್ತ್ವಚೂಡಾಮಣಿ (ಗ)

[2] ಪರಸ್ತ್ರೀರತಿಯೊಳ್ ಬಱಿಂಬೆತ್ತ ಬಸುಱಿಂಬನಲ್ಲದೆ (ಗ) ಪರಸ್ತ್ರೀಯರ ತೆಳ್ಪಸುರುಗಳಂ ಪೆತ್ತ ಬಸಿರೆಂದೆಂಬಂ (ಕ. ಖ.)

ನ್ನುಂಡ ಮೊಲೆಯೆಂಬನವನೀ
ಮಂಡಲದೊಳ್ ಸುಕವಿನಿಕರಪಿಕಮಾಕಂದಂ ‖ ೧೮೩

ಬಿತ್ತರದಿಂದನ್ಯರ ಸಂ
ಪತ್ತಿನ ವನಿತೆಯರ ನೀಳ್ದ ನಿಡಿದೋಳ್ ಕಿಱಿಯುಂ ।
ದೆತ್ತಿದ ತೋಳಿಂದಿರ್ಪನು
ದಾತ್ತತೆಯಿಂ [1] ಸುಕವಿನಿಕರಪಿಕಮಾಕಂದಂ ‖ ೧೮೪

ಅಂತು ಕಾಳಕೂಟದೊಳ್ ಬೆರಸಿದ ಕೂೞಂತೆ ದೃಷ್ಟಿವಿಷ ಮಪ್ಪ ಪಾವಿನ ತಲೆಯ ಮಾಣಿಕದಂತೆ ಬೆಟ್ಟದಡಿಯಲ್ಲಿರ್ದ ನಿಧಿಯಂತೆ ನೆಗೞಿಳ್ಳ ಮಡುವಿನೊಳಿರ್ದ ನಿಕ್ಷೇಪದಂತೆ ಚಕ್ರವರ್ತಿಯ ಬಾಯ ತುತ್ತಿನಂತೆ ಕತ್ತಿರಿವಾಣಿಯೊಳಗಣ ಕರ್ಪಿನಂತೆ] ಪುಲಿಯ ಮಿಾಸೆಯೊ ಳಿರ್ದ ಮುತ್ತಿನಂತೆ ಸಿಂಹದ ದಾರಿಯೊಳಿರ್ದ ಗಾರಿಗೆಯಂತೆ ಡಾಕಿನಿಯರ ಕೈಯ ಪೋೞಿಗೆಯಂತೆ ರಕ್ಕಸಿಯರಮನೆಯ ಬೆಲ್ಲದಂತೆ ಕಲ್ಲ ಬಿಡಮೆಯೊ ಳಿರ್ದ ಪಣವಿನಂತೆ] ಸಿಡಿಲೊಳಗಿರ್ದ ಸಕ್ಕರೆಯಂತೆ ಕಾಡೆಮ್ಮೆಯ ಮೊಲೆಯ ಪಾಲಂತೆ ಕಟ್ಟರಿದಪ್ಪ ಪರವನಿತೆಯುರಂ ಪಂಬಲಿಸುವ [2] ನಾಲಗೆ ಯೊಳ್ ಪಣವನಿಕ್ಕಿ ತೋಱುವ ಕಣ್ಸನ್ನೆಗೆಯ್ವ ಸಂಕೇತಮಂ ನುಡಿವ ಬೞಿಯುಟ್ಟುವ ಮರುಳಂ, ಕಾಲ ಕಿಚ್ಚನೆರ್ದೆಗೆ [3] ತೆಗೆವ ಬೆಟ್ಟೇಱಿ ಮೃತ್ಯುಗರೆವ ಸುಣ್ಣಮಂ [ಬೞಿದೆ] ಕುಡಿಪ ಕಣ್ಣೊಡೆದುಕೊಳ್ವ ಕೋೞಕ್ಕೆ ಕಾಲಂ ನೀಡುವ ಶೂಲಮನೇಱಿ ಕುಳ್ಳಿರ್ಪ [4] ಕೊಲ್ವಾನೆಯ ಕಾಲಂ ಪಿಡಿವವನಂ ಪೋಲ್ಕುಂ. ಗಂಡನ ನೆರೆಯ ಪೊರೆಯ ತಳಾಱರ ಲೋಗರ [5] ಮಿಂಡರ ಭೂಪರ ಬಾರಿಗೆ ಬಿರ್ದು ಬೋಡಾಗಿ ನಾಯಾಗಿ ತೇಜಂಗೆಟ್ಟು ಸಾಗುಮದು ತಪ್ಪಿ ಪಾದರಂ ಮೆಯ್ಯಿಕ್ಕಿದೊಡಂ, ಕದಾದ್ಧ ತನರಸನ ಕಯ್ಯೊಳ್, ಕದ್ದು ಪರದಾಡುವಂ ಸುಂಕಿಗನ ಕಯ್ಯೊಳ್,

---

1 ಉದಾತ್ತಯಶಂ (ಕ. ಬ.)

2 ಪಂಬಲಿಸುವವನುಂ ನೆವನೆವದಲೆ ಮಱುಗುವವನುಂ (ಗ)

3 ನಿದ್ರೆಗೆ (ಗ) 4 ಕೊಲುವಾನೆಗೆ ಪಾಳಂಬಪ್ಪುವನು (ಗ)

5 ಮುನಿವರ (ಗ)

ತುಡುಗುಣಿನಾಯ್ ಮನೆಯುವರ ಕಯ್ಯೊಳ್, ಪಂಚಕ[ರಪ್ಪ ಗಂಡುಗ]ಳ್ ತಳಾಱರ ಕಯ್ಯೊಳ್, ಪಲವುಸೂಪ್ [ನೀರನೀ] ಸುವಂ ನೀರ ಕಯ್ಯೊಳ್, ಪಾವಡಿಗಂ ಪಾವಿನ ಕಯ್ಯೊಳ್, ಪುಲಿವೇಂಟೆಗಾಱಂ ಪುಲಿಯು ಕಯ್ಯೊಳ್, ಕಡುಬಿರುದಂ [1] ಕಲಿಯು ಕಯ್ಯೊಳ್, ತುಡುಗಾಡುವ ಬಸವನಾರಂಬಿಗನ ಕಯ್ಯೊಳ್, ಇರುಳ್ವಟ್ಟೆಗಾಱಂ ಕಳ್ಳನ ಕಯ್ಯೊಳ್, ಸಿಕ್ಕುವಂತೆ ನಾರಕರ ಬಾರಿಯೊಳ್ ಬಿರ್ದು ಬಾಱದ ಭವಂ ಬರ್ಕುಮೆಂಬ ಜಿನಾಗಮದೋಜೆಯುಂ ಭಾವಿಸಿ ಪಾರದರದ ವ್ಯಸನಕ್ಕೆ ಭಯಸ್ಥನಾಗಿ ॥ ೧೮೫

ರತಿ ರಂಭೆ ತಿಲೋತ್ತಮೆ ಭಾ
ರತಿಯೆಂಬಿವರೊರೆಗೆ ಬರ್ಪ ಪರವನಿತೆಯರ್ಗ |
ನ್ನತರಾಜವಂಶತಿಲಕಂ
ಗತಿಶಯದಿಂ ಸೋಲವಲ್ತೆ ಕಣ್ಣುಂ ಮನಮುಂ ॥ ೧೮೬

[ಅಂತು ಪಂನಾರ್ಗೀನಂದನನುಂ ಜಿನಪಾದಪದ್ಮಷಟ್ಪದನುಂ ಸದ್ಧರ್ಮವಿನೋದನುಂ ಮುನಿಪಚನಾನಂದಹೃದಯನುಂ ಸಮ್ಯಕ್ತ್ವಚೂಡಾಮಣಿಯುಂ ಭವ್ಯಜನಸರೋಜಿನೀರಾಜಹಂಸನುಮಾಗಿ] [2] ಪಲವುಕಾಲಂ ರಾಜ್ಯಂಗೆಯ್ದೊಂದುದಿವಸಂ ಗಂಟಲನಡಸಿ ಪಿಡಿದ ಜವನ ಕಯ್ಯುಗುರಿನಂತೆ ಸಾವು ಮುಟ್ಟಿವೆಂದುದೆಂದು ಕಿವಿಯೊಳ್ [3] ಪರ್ಚಿ ಪೇೞಲ್ ಬಂದ ಯಮಧರ್ಮರಾಜನ [4] ದೂತನಂತೆ ಮೃತ್ಯುರಾಜನ ತಳಾಱ [ರಣೆದ]ಡಂಗೆಯ್ವ ಸುಣ್ಣದಂತೆ ಮುನ್ನಂ ಧರ್ಮದ್ರೋಹನಾಗಿರ್ದ ಬೆಳ್ತನದ ಬೆಳ್ಪನಂತೆ ತಲೆಗೆ ಬಿಗಿದ ಕೃತಾಂತನ ಕಯ್ಯ ನೂಲನೇಣಿನಂತೆ ಕೊಲಲೆಂದು ಮೊಗಮಿಕ್ಕಿದ ಯಮಗಜದಂತದಂತೆ ಕೀನಾಶನೆಂಬ ಕಿರಾತನೆಚ್ಚ ಕವಲಂಬಿನ ಮೊನೆಯಂತೆ ತಲೆಗೆ [5] ಪಾಯ್ವಂತಕನೆಂಬ ಪುಲಿಯ ಪಲ್ಲೆಂಬಂತೆ ಜವ್ವನಮೆಂಬ ಸೂರ್ಯನ ಕೇಡಿಂ ಮರಣಮೆಂಬ ರಾತ್ರಿಯೊಳುದಯಂಗೆಯ್ದ ಳವೆಱೆಯೆಂಬಂತೆ ಕುಂದಿದಾ

---

1 ಕಡುವಿರಿಪಂ (ಗ) 2 ಎನಿಸಿ (ಗ)
3 ಕಿವಿಯಿಲ್ (ಕ. ಬ.) 4 ಕರ್ಮರಾಜನ (ಗ)
5 ಪರಿದಱಿಪುವಕಾಳಮುಖನಸಿತಪೀತಾಕೆಯಂತೆ (ಗ)

ಯುಷ್ಯವೆಂಬ ತೊಱೆಯೆರಡುತಡಿಯು ಬಿಳಿಯು ಮಳಲ ದಿಂಟೆಯಂತೆ ಪಿಡಿದಡಸಿ ನುಂಗುವ ಸಂಸೃತಿಯೆಂಬ ಶಾಕಿನಿಯು ಕಡೆಗಣ್ಣೆಂಬಂತೆ ಭಯಂಕರಮಾಗಿರ್ದ ಕೆನ್ನೆಯು ನರೆಯುಮಂ ಕನ್ನಡಿಯೊಳ್ ಕಂಡು ॥೧೮೭

ಎನಿಸೆನಿಸು ಸಿರಿಯೊಳಿರ್ದೊಡ
ಮನಿಸನಿಸು ಮನಕ್ಕೆ ಮೋಹಮೊದವುತ್ತಿರ್ಕುಂ ।
ಮನವಿಂಗೆ ಸಹಜಮದಱಿಂ
ಮನಮೆಂದುದನಾಡುತಿರ್ಪ ಮನುಜನೆ ಗಾಂಪಂ ॥ ೧೮೮

ಧನಮನುಪಾರ್ಜಿಸುವುದು ಮ
ತ್ತೆನಗೆಂದುಂ ಮರಣಮಿಲ್ಲ ಶಾಶ್ವತಮೆಂಬಂ ।
ತನುನಯಮೊದವುಗುಮಳಿಪುಂ
ಘನಮಕ್ಕುಂ ಸಹಜಮಸುಗಿದಂ [1] ಬಾರಿಪರಾರ್ ॥ ೧೮೯

ಸಾವಕ್ಕುಂ ಕಡುನೋಗುಂ
ಭಾವದೊಳಲ್ಲಾಡುತಿರ್ಪ ಮತಿಲೋಲತೆಯಿಂ ।
ಭಾವಿಪುದು ಧರ್ಮಮೆಂದೊಡೆ
ಜೀವಂ ಧಾರಿಣಿಯೊಳಂತಿದಂ ಬಾರಿಪರಾರ್ ॥ ೧೯೦

ಪರವನಿತೆಗೋತು ಕೂಡಿರೆ
ಧರಣೀಶರ್ ಪಿಡಿಯೆ ಮೋಹಮಿಲ್ಲದೆ ಪೊನ್ನಂ ।
ಪಿರಿದೀವಂ ಧರ್ಮಕ್ಕೊಂ
ದರೆಗಾಣಿಗೆ ಜೀವಮಕಟ [2] ಮೋಹಿಸುತಿರ್ಪಂ ॥ ೧೯೧

ನಿಕ್ಕಾರಣಮರಸರ್ ಪಿಡಿ
ದಕ್ಕಟ ತೆಱಿಮೆಂದು ಬೇಡೆ ಬೇಡಿದ ಪೊನ್ನಂ ।
ನಿಕ್ಕುವವಿಶಾಪಕರ್ಗಳೊಂ
ದಕ್ಕಿಯುಮಂ ಧರ್ಮಮೆಂದೊಡೀವವರೊಳರೇ ॥ ೧೯೨

1 ಸಹಜಮನುಜಗಿದ (ಗ) 2 ಜೀವನದಕೆ (ಗ)

ಪರಿತಂದು ಬಂದಿಕಾಱರ್
ಕೊರಲಂ ಪಿಡಿದೊತ್ತೆ ಬೇಡಿದರ್ಥಮನೀವರ್ ।
ವರಧರ್ಮಕ್ಕೊಂದಡಕೆಯು
ನೆರೆದೊಡಮಣಮೀವರೊಳರೆ ವಸುಧಾತಳದೊಳ್ [1] ॥ ೧೯೩

ಮರಣಂ ಸಾರ್ಚಿದೊಡಂ ಪೆಣಂ ಕೆಡೆವೊಡಂ ದಾರಿದ್ರರಾಗಿರ್ದೊಡಂ
ಸಿರಿಯುಂ ಚಿಂತಿಸಿ ಪೆಂಡಿರಂ ನೆನೆದು ಪುತ್ರಾನೀಕಮಂ ನೋಡಿ ನಿ
ಷ್ಠುರದಿಂ ಬರ್ದುಗುವಲ್ಲದಣ್ಣ ಧರೆಯೊಳ್ ಕೂಡಿರ್ಪ ಸದ್ಧರ್ಮಮಂ
ನಿರುತಂ ಚಿಂತಿಸಲಾಱರಲ್ತೆ ಸಹಜಂ ಜೀವಕ್ಕೆ ಭೂಲೋಕದೊಳ್॥ ೧೯೪

ಎಂದು ಜೀವನೊಳಾದ ಹೀನಸ್ವಭಾವಮಂ ಚಿಂತಿಸಿ [ರಾಜ್ಯದೊಳೆನಿತುಕಾಲಮಿರ್ದೊಡಂ ಜೀವಕ್ಕೆ ಮೋಹಮುಗುವರ್ಗೊದವುಗುಮಲ್ಲದೆ ಸಾವೊಡಂ ಪೋಗದೆಂದು ನಕ್ಕು] ತನ್ನ ಪಿರಿಯಮಗನಪ್ಪ ವಿಮಲಕೀರ್ತಿಯೆಂಬಂಗೆ ಪಟ್ಟಮಂ ಕಟ್ಟಿ ರಾಜ್ಯಮಂ [ತೊಱೆದು ತಪಂಗೆಯ್ದು] [2] ಸಮಾಧಿಮರಣದಿಂ [ಮುಡಿಪಿ ದೇವಗತಿವಡೆ]ದಾರಣಮೆಂಬ ಪದಿನೈದನೆಯ [3] ಸ್ವರ್ಗದೊಳಿಪ್ಪತ್ತೆರಡುಸಾಗರೋಪಮಾಯುಷ್ಯಮನುಳ್ಳ ಕೀರ್ತಿಧರನೆಂಬ ಮಹರ್ಧಿಕದೇವನಾಗಿ ಪುಟ್ಟಿದನಿಂತು ॥ ೧೯೫

[4] ಪರವನಿತೆಗೆ ಸೋಲ್ತೊಡೆ ತಾಂ
ಪರವನಿತೆಯೆ ಕಷ್ಟಮೆಂದು ಪರವನಿತೆಯರೊಳ್ ।

---

1 ಧರೆಯೊಳ್ ಧರ್ಮಕ್ಕನೆ ಕೇಳರೆಯುಡಕೆಯು ನೀವರೊಳರೆ ವಸುಧಾತಳದೊಳ್ (ಗ)

2 ಕೊಟ್ಟು॥ ಜಿನಪದಭಕ್ತನಾಗು........ರವಿಚಂದ್ರರುಳ್ವಿನಂ (೧೬೯ನೆಯ ಪದ್ಯ.) ಎಂದು ಪರಸಿ ಬುದ್ಧಿವೇಳ್ದು ಮುನ್ನಿನ ಧರ್ಮಘೋಷಣಭಟ್ಟಾರಕರಲ್ಲಿ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಪ್ರಮಾಧಿಮುನೀಂದ್ರಂ ಕಡೆಯೊಳ್ (ಗ)

3 ಪದಿನಾಱನೆಯ (ಗ)

4 [ಪರವನಿತೆಗೆಱಗದನ್ಯರ
ತರುಣಿಗೆ ಮನಮೀಯದೇಕಚಿತ್ತದಿನಮರೇಂ ।

ನೆರೆಯದೆ ಜೀನೇಂದ್ರಪದಮಂ
ಸ್ಮರಿಯಿಸಿದ ಮಹಾತ್ಮನೆಯ್ದುಗುಂ ನಿರ್ವೃತಿಯಂ ॥ ೧೯೬

ಎಂದು ಸ್ವದಾರಸಂತುಷ್ಟತೆಯಿಂ ದೇವಗತಿವಡೆದ ಪ್ರಮಾಥಿ ಕುಮಾರನ, ಪರಸ್ತ್ರೀರತಿಯಿಂ ನರಕಕ್ಕೆ ಸಂದ ಸುವೇಗನ [1] ಕಥೆಯಂ ಗಣಧರಸ್ವಾಮಿಗಳ್ ಪೇೞ್ವುದುಂ [2] ॥ ೧೯೭

ಸುರರಾಜಾದ್ರೀಂದ್ರಧೈರ್ಯಂ ಪರಮತಗಿರಿವಜ್ರಾಯುಧಂ ಜೈನಯೋಗೀಶ್ವರದಾಸಂ ವಾಗ್ವಧೂವಲ್ಲಭನಘತಮ [3] ತೀವ್ರಾಂಶು ಪೆರ್ಚಿರ್ದನುರ್ವೀಶ್ವರಪೂಜ್ಯಂ ರಾಗದಿಂದಂ ಗುಣಗಣನಿಳಯಂ ಕೇಳ್ದು ತ್ರೈವಿದ್ಯಚಕ್ರೇಶ್ವರಪಾದಾಂಭೋಜಭೃಂಗಂ ಸುಕವಿಜನಮನಃಪದ್ಮಿನೀರಾಜಹಂಸಂ [4] ॥

ಇದು ನಿಖಿಲದಿವಿಜಪರಿನೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಬ್ರಹ್ಮ [5] ವ್ರತವ್ಯಾವರ್ಣನಂ
ತ್ರಯೋದಶಾಶ್ವಾಸಂ.

ದ್ರನನಿಳಿಂಪನನ್ನುಪದನಂ
ನೆನೆಯುತ್ತಿರೆ ಮೋಕ್ಷಮೆಂಬುದಾವುದುಗಹನಂ] (ಕ. ಖ.)

1 ಸುವೇಗನಿಂದಬ್ರಹ್ಮದೊಳಾದ (ಕ. ಖ.) 2 ಪೇಳೆಕೇಳ್ದು (ಗ)

3 ಎಲ್ಲಾ ಪ್ರತಿಗಳಲ್ಲಿಯೂ ಈ ಶಬ್ದವು ಅಕಾರಾಂತವಾಗಿಯೇ ಕಂಡು ರುತ್ತದೆ.

4 ವಾಗ್ವಧೂವಲ್ಲಭಘನತಮಚಂಡಾಂಶು ಪೆರ್ಚಿರ್ದನಂದಾ। ದರದಿಂ ತ್ರೈವಿದ್ಯಚಕ್ರೇಶ್ವರನಮಲಪದಾಂಭೋಜಭೃಂಗಂ ಜಿನ ಶ್ರೀ। ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ ॥ (ಗ) 5 ಸಬ್ರಹ್ಮ (ಗ)

ವಿದ್ಯಾಲಯ ... ಗ್ರಂಥಾಲಯ ... ಹಂಪಿ - 583221

ಚತುರ್ದಶಾಶ್ವಾಸಂ

ಶ್ರೀವಿಳಸಜ್ಜನವಂದ್ಯಂ
ಪಾವನಸಬ್ರಹ್ಮ [1] ಸುವ್ರತಂ ನಿರ್ವಾಣಂ ।
ಶ್ರೀವಿಭವವೆಂದು ನಲಿದಂ
ಭೂವಿದಿತಂ ಸುಕವಿನಿಕರಪಿಕಮಾಕಂದಂ ॥ ೧

ಅಂತು ಬ್ರಹ್ಮವ್ರತದ [2] ಕಥೆಯಂ ಕೇಳ್ದು ತದನಂತರಂ [ಶ್ರೇಣಿಕಮಹಾರಾಜನಮೃತಶ್ರೀರಮಣಿಯ ಗೃಹಮೆನಿಸುವಪರಿಗ್ರಹದ ಕಥೆಯುನೆನಗೆ ನಿಮ್ಮಡಿ ಬೆಸಸುವುದೆಂದು ॥ ೨

ಕರಕಮಲಂಗಳಂ ಮುಗಿದು ಸಂತಸದಿಂದಿರೆ ಗೌತಮರ್ ಮಹೀ
ಧರನಿಭಧೈರ್ಯರೂರ್ಜಿತರನಂಗಹರರ್ ಮುನಿವಂದಿತಕ್ರಮಾಂ
ಬುರುಹರುದಾತ್ತಚಾರುಚರಿತರ್ ಜಲರಾಶಿನಿನಾದದಿಂ ಮಹೀ
ಶ್ವರರತಿಭಕ್ತಿಯಿಂದೊಸೆದು ಕೈಮುಗಿಯುತ್ತಿರೆ ಪೇಳ್ದರರ್ತಿಯಿಂ] [3] ॥೩

ಫಲಮಿಲ್ಲದೆ ಪೂವನೆ ತೋಱಿ ಪೋಪ ಸಂಪಗೆಯಂತೆ ಬಱಿ [4] ಮಾತನೆ ತೋಱಿ ಪೋಗದೆ, ತಳಿರನೆ ತೋಱಿ ಪೋಪಶೋಕೆಯಂತೆ ಸಿರಿಯನೆ ತೋಱಿ ಪೋಗದೆ, ಪರೆಪನೆ ತೋಱಿ ಪೋಪ ಆಲದಂತೆ ಬಳಸನೆ ಸುತ್ತಿ ಪೋಗದೆ, ಬಲ್ಪನೆ ತೋಱಿ ಪೋಪ ತರಿಯಂತೆ [5] ಮಹಿಮೆಯನೆ ತೋಱಿ ಪೋಗದೆ, ನಾರನೆ ತೋಱಿ ಪೋಪ ಸೆಣಂಬಿನಂತೆ ತನ್ನನೆ ಮೆಱೆದು [6] ಪೋಗದೆ ; ಮಾವಿನಂತೆಲ್ಲಪೆಱೊಳಂ ನೆಱೆದು ಪುಣಿಸೆಯಂತೆ ಪಲವೆಱೊಳವೊಪ್ಪಿ, ಲವಣದಂತೆ ಸದ್ವೃಷಿಗಳ ಕೂಟ

---

[1] ಸದ್ಧರ್ಮ (ಗ) [2] ಸುವ್ರತದ (ಗ) [3] ನಿಯಮಿತ ಪರಿಗ್ರಹದ ಕಥೆಯುಂ ಬೆಸಸಿವೆಂಬುದುಂ ಇಂತೆಂದು ಪೇಳ್ದರ್ (ಗ) [4] ಮಱು (ಗ)
[5] ತಱಿಯ ಮರದಂತೆ (ಗ) [6] ತೋಱಿ ಮೆರೆದು (ಗ)

ದೊಳ್ ರುಚಿವಡೆದು, ದೀಪವರ್ತಿಯಂತೆ ಪಂಚಪರಮೇಷ್ಠಿಗಳ್ಗೆಱಕಂ ಮಾಡಿ, ಸೊಡರಂತೆ ಚಾತುರ್ವರ್ಣ್ಯದೊಳ್ ಸ್ನೇಹದಿಂ ಕೂಡಿ; ಸಮೆದ ಚೀಲದೊಳ್ ಪೊನ್ನನಿಕ್ಕುವಂತೆ, ಕಿಚ್ಚುಳ್ಳೊಲೆಯೊಳ್ ಕೂೞನಡುವಂತೆ, ಪಣ್ಣಿದಾನೆಯನೇಱುವಂತೆ, ಮಡಿಯಾದ ಸೀರೆಯನುಡುವಂತೆ, ಮದುವೆಯಾದಳಂ ಮನೆಗೆ ತರ್ಪಂತೆ, ರಾಶಿಯಾದ ಧಾನ್ಯಮನಳೆವಂತೆ, ಸಮೆದಾಭರಣಮಂ [1] ತುಡುವಂತೆ, ತಂದೆ ತೋಱಿದ ಬಯ್ಕೆಯನಗಳ್ವಂತೆ [ಬಂದ ನಿಧಾನಮಂ ಕೈಕೊಳ್ವಂತೆ] ಸಮ್ಯಕ್ತ್ವಂಬೆರಸು ಪಂಚಾಣುವ್ರತಮಂ ಕೈಕೊಂಡು; ಕೋಡಗಂ ತಂಬುಲಮಂ ತಿಂಬಂತೆ, ಮರುಳ್ ಸೀರೆಯನುಡುವಂತೆ, ಕಾಗೆ ಕೂೞಂ ತಿಂಬಂತೆ, ಕುರುಡಿ ಜೋಳವಮಂ ಕುಟ್ಟುವಂತೆ, ಪಸುಗೂಸು ಪಾಲ್ಗುಡಿವಂತೆ, ಪಲ್ಲಿಲ್ಲದೆಮ್ಮೆ ಪುಲ್ಲಂಮೇವಂತೆ, ಮುದುಕಂ ಪೂಗಟ್ಟುವಂತೆ, ಜ್ವರಬಂದವನುಣ್ಬಂತೆ, ಮೋಟಂ ನೀರ್ಗುಡಿವಂತೆ, ಹಂಚುಹಱಿಮಾಡಿ ಕಿಡಿಸದೆ ಲೇಸಾಗಿ ನಡಪಿ; ವ್ಯವಹಾರಕ್ಕೆ ಪೋದನೆಡೆಯ ದುಃಖಮಂ ಸೈರಿಸಿ ಲಾಭಂಬೆರಸಿ ಮನೆಯಂ ಪುಗುವಂತೆ, ಷಟ್ಖಂಡಮಂ ಸಾಧಿಸಿದ ಚಕ್ರವರ್ತಿ ಗೆಲ್ಲಂ ಬೆರಸು ಪುರಮಂ ಪುಗುವಂತೆ, ಕೆಯ್ಯಂ ಕಾದು ದುಃಖಬಟ್ಟೊಕ್ಕಲಿಗಂ ಧಾನ್ಯಂಬೆರಸೂರಂ ಪುಗುವಂತೆ, ಪಲಕಾಲಂ ನಿಧಾನಮಂ ಸಾಧಿಸಿದಾತಂ ನಿಧಿವೆರಸು ನೆಲೆಗೆ ಪೋಪಂತೆ, ಕೂಸುಕಾರಣಮಾಗಿ ಮಾವಂಗೆ ಬೆಸಕೆಯ್ದಳಿಯಂ ಮದುವೆಯಾಗಿ ಸುಖಮಿರ್ಪಂತೆ, ಸಿರಿಯುಳ್ಳ ತಂದೆಗೆಡಱದೆ ಮನದನ್ನನಾಗಿ ತೊೞ್ತುವೆಸಂಗೆಯ್ದ ಮಗಂ ತಂದೆಯ ಸಿರಿಗೊಡೆಯನಾಗಿರ್ಪಂತೆ ಕಡೆಯೊಳ್ ದೇವೇಂದ್ರಚಕ್ರವರ್ತಿಗಳ ಪದಮನೆಯ್ದಿ ಕ್ರಮದಿಂ ಮೋಕ್ಷಶ್ರೀಯೊಳ್ ಕೂಡಿ ಸುಖಮಿರ್ಪುದು ‖ ೪

ಎನಿತು ಪರಿಗ್ರಹದ ತೊಡ
ರ್ಪನಿತೆ ಮನೋದುಃಖಮೆಂಬುದಂ ತಾಂ ತನ್ನೊಳ್ ।
ನೆನೆದು ಪರಿಗ್ರಹಮಂ ತೊಱೆ
ವನೆ ದೇವಂ [2] ಮುಕ್ತಿವನಿತೆಗಾತನೆ ಕಾಂತಂ ‖ ೫

1 ಸಲುಗೆಯಾದಾಭರಣಮಂ (ಗ) 2 ತಂಅನನೆತೊಱೆವಂ (ಗ)

ಇನ್ನಾ ಪರಿಗ್ರಹದೊಳಾದ ಮಹಾಮಹಿಮೆಯೆಂತೆಂದೊಡೆ, [ಜಂಬೂದ್ವೀಪದ ಭರತಕ್ಷೇತ್ರದ ಕುರುಜಾಂಗಣವಿಷಯದ ಶ್ರಾವಂತಿಯೆಂಬ ಪುರಮಾಪುರಮನಾಳ್ವನುಪರಿಚರಮಹಾರಾಜನೆಂಬನಾತನ ಮನೋಹರಿಯರ್ ಪದ್ಮಾವತಿಯುಂ ಪ್ರಭಾವತಿಯುಂ ಸುಪ್ರಭೆಯುಂ ಕನಕಪ್ರಭೆಯು] [1] ಮೆಂಬ ನಾಲ್ವರ್ ಪಟ್ಟಮಹಾದೇವಿಯರ್ ಮೊದಲಾಗೈನೂರ್ವರರಸಿಯರಿಂತು ‖ ೬

ಶತದಳನಯನೆ ಮನೋಭವ
ಲತಾಂಗಿ ಸಮ್ಯಕ್ತ್ವನಿಳಯೆ ಸೀತಾನಿಭೆ [2] ಸ।
ನ್ನುತರೂಪೆಯೆನಿಪ ಪದ್ಮಾ
ವತಿಯು ಮಗಂ ತಾನನಂತವೀರ್ಯಂ ಪೆಸರಿಂ ‖ ೭

ಆತಂ ಮೊದಲಾಗೈನೂರ್ವರ್ [ಕುಮಾರರುಂ ಮಕುಟಬದ್ಧರುಂ ವಿಳಾಸಿನೀಜನಮುಂಬೆರಸು ದೇವೇಂದ್ರನಂತೊಡ್ಡೋಲಗಂಗೊಟ್ಟು ರಸಗೀತಮುಮಂ ಪರಮಾಂಡಳಿಕರ ಪೆರ್ಗಡೆಗಳ ಮಾತುಗಳುಮಂ ಕೇಳುತ್ತುಂ ಕುಮಾರರ ವಿಳಾಸಿನೀಜನದ ಅರಸಿಯರ ರೂಪುಗಳಂ ನೋಡುತ್ತುಂ ಮಹಾವಿನೋದದಿಂದಿರ್ಪುದುಂ ‖ ೮

ಸುರಗಿಯು ಸಂದ ಸಂಪಗೆಯು ಪೊನ್ನೆಯು ಜಾದಿಯು ಚೆಲ್ವುವೆತ್ತ ಪಾ
ದರಿಯು ಸುಗಂಧಮಪ್ಪ ಕುಸುಮಾವಳಿಯಿಂ ನನೆಯಿಂ ಮುಗುಳ್ಗಳಿಂ
ಕರಮತಿಶೋಭೆಯಿಂ ಸಮೆದ ಹಾರಮುಮಂ ಸಹಕಾರಪಲ್ಲವೋ
ತ್ಕರಮುಮನೊಪ್ಪುವೆತ್ತೆಳೆಯ ಕಾಯ್ಗಳ ಗೊಂಚಲುಮಂ ಸರಾಗದಿಂ ‖

ವನಪಾಲಕಂ ತಂದೊಡ್ಡೋಲಗಂಗೊಟ್ಟಿರ್ದುಪರಿಚರಮಹಾರಾಜಂಗೆ ಕೊಟ್ಟು ಮೆಯ್ಯಿಕ್ಕಿ ಪೊಡೆಮಟ್ಟು ದೂರದೊಳ್ ನಿಂದು ಕೈಗಳಂ ಮುಗಿದು ದೇವಾ ವಸಂತದ ಪುಗಿಲೊಳ್ ವನಂ ವನದೇವಿಯ

---

[1] ಕಣಾದವಿಷಯದ ಸಾವಂತಿಯೆಂಬ ಪುರಮನಾಳ್ವನುಪಚರಿತಮಹಾರಾಜನೆಂಬನಾತಂಗೆ ಪದ್ಮಾವತಿಯುಮಮಿತಮತಿಯುಂ ಸುಪ್ರತಿಯುಂ ಪ್ರಭಾವತಿಯು(ಗ)

[2] ಶೀಲಾಂಬುದೆ (ಗ)

ಜವ್ವನದಂತೆ ರಯ್ಯಮಾಗಿರ್ದಪುದದಂ ದೇವರ್ಗೆ ಬಿನ್ನಪಂಗೆಯ್ವೆಲೆಂದು ಬಂದೆನವಧಾರಿಸುವುದೆಂದುಸಿರದಿರ್ಪುದುಮರಸನಾತಂಗಂಗಚಿತ್ತಮಂ ಕೊಟ್ಟು ನಾಳೆ ಸಕಲಜನಂಬೆರಸು ವನಕ್ರೀಡೆಗೆ ಬಂದಪೆಂ ವನಮಂ ಲೇಸುಮಾಡುವುದೆಂದು ಪೋಗಲ್ವೇೞ್ದು ಕುಮಾರರ್ಗಮರಸಿಯರ್ಗಂ ವನಪಾಲಕಂ ಕೊಟ್ಟ ಕುಸುಮದ ತೊಡವುಗಳುಮಂ ಪಿರಿಯರ್ಕಿೞಿಯರಱಿದು ಕೊಟ್ಟು ಮಱುದಿವಸಂ ॥ ೯೦

ಶರನಿಧಿಯಂತೆ ತೂರ್ಯರವಮುಣ್ಮೆ ಮಹೀಶ್ವರನಂದನರ್ ಮದ
ದ್ವಿರದಘಟಾಳಿಯಿಂ ಮದಗಜೇಂದ್ರಮನೇಱಿ ಮನೋಜನಂದದಿಂ
ಬರೆ ತನಯರ್ ಮನೋಹರಮದದ್ವಿರದಂಗಳನೇಱಿ ಸುತ್ತಲುಂ
ಬರೆ ಗಣಿಕಾಜನಂ ನೆರೆದು ಚಾಮರಮಿಕ್ಕೆ ವಿಭೂತಿಯಿಂ ನೃಪಂ ॥ ೧೧

ಪದ್ಮಾವತಿ ಮೊದಲಾದೈನೂರ್ವರರಸಿಯರುಂ ವಿಳಾಸಿನೀಜನಮುಂಬೆರಸು ಪೊಱಮಟ್ಟು ವನಕ್ಕೆ ಬಂದು ವನದ ಚೆಲ್ವಿಂಗೆ ಸಂತೋಷಂಬಟ್ಟು ಪಿರಿದುಬೇಗಂ ವನಕ್ರೀಡೆಯನಾಡಿ ಬೞಿಲ್ದು ಮತ್ತಿನರಸಿಯರುಮಂ ರಾಜಕುಮಾರರುಮಂ ದೂರದೊಳಿರವೇೞ್ದು ಮನೋನಯನವಲ್ಲಭೆಯಪ್ಪ ಪದ್ಮಾವತಿಯುಮಮಿತಮತಿಯುಂ ಸುಪ್ರಭೆಯುಂ ಪ್ರಭಾವತಿಯುಮೆಂಬ ನಾಲ್ವರ್ ಪಟ್ಟದರಸಿಯರುಂ ತಾನುಂ ಚಂದನಕರ್ಪೂರಕಾಳಾಗರುಕುಂಕುಮಂ ಮೊದಲಾದನೇಕದ್ರವ್ಯಂಗಳಂ ಮುನ್ನಮೆ ವನಪಾಲಕಂ ಕದಡಿದ ಸುದರ್ಶನಮೆಂಬ ಕೊಳಕ್ಕೆ ಬಂದು ॥ ೧೨

ಜಲವಿಹಗಂಗಳಿಂ ಸುೞಿವ ಹಂಸೆಗಳಿಂದೆಸೆದಿರ್ದ ನೆಯ್ದಿಲಿಂ
ಜಲದನಿಕಾಯದಿಂ ನೆಗೞ್ದ ನೀಳಸರೋರುಹದೊಪ್ಪದಿಂ ಮಹೋ
ಜ್ಜ್ವಲತರಮಪ್ಪ ರತ್ನನಿಕುರಂಬದ ಕಾಂತಿಗಳೆತ್ತಲುಂ ತಳ
ತ್ತಳಸುವ ಕೋಂಟೆಯಿಂ ಬಳಸಿಯುಂ ನೆಱೆ ಪತ್ತಿದ ಸಲ್ಲತಾಳಿಯಿಂ॥೧೩

ಒಪ್ಪುವ ಕೊಳನಂ ನೀಡುಂ ನೋಡಿ ಸರೋವರದ ಚೆಲ್ವಂ ಮನದೆಗೊಂಡು ರತ್ನಮಯಮಪ್ಪ ಸೋಪಾನಂಗಳಂ ಮೆಟ್ಟಿ ಮೆಲ್ಲಮೆಲ್ಲನಿೞಿದು ನೀರಂ ಪೊಕ್ಕು ॥ ೧೪

ನರಪತಿ ಕೊಂಡು ಚೀರ್ಕೊಳವೆಯಂ ಬಿಡದೊಯ್ಯನೆ ಕೂರ್ಮೆಯಿಂ ಮನೋ
ಹರಿಯುರ ಮೇಲೆ ಚಿಮ್ಮೆ ನಯದಿಂದೆ ತದಂಬು ಮೃದುತ್ವದಿಂ ತಳೋ
ದರಿಯುರ ಮೆಯ್ಯ ಕುಂಕುಮದೊಳೊಂದಿ ನಿಮಿರ್ಕೆಯಿನೊಪ್ಪಿ ಮಾಣಿಕಾ
ಭರಣದ ಭಂಗಿಯಂ ನೆಱೆಯೆ ತಾಳ್ದಿದುದದ್ಭುತಮೆಂಬಿನಂ ಜನಂ ॥ ೧೫

ಅರಸಿಯುರಾತ್ಮವಲ್ಲಭನಮೇಲೆ ತುಳುಂಕೆ ತದಂಬು ಮೇದಿನೀ
ಶ್ವರನತಪಾದಪಂಕಜನ ಪೂಸಿದ ಚಂದನಪಂಕದೊಳ್ ಸವಿ
ಸ್ತರಮೊಡಗೂಡಿ ಚೆಲ್ವುವಡೆದೊಪ್ಪುವುದದ್ಭುತಮಾಗೆ ಮೌಕ್ತಿಕಾ
ಭರಣಮಿದೆಂದು ಬೆಬ್ಬಳಿಸಿ ನೋಡುವ ನೋಟಕರುಂ ನರೇಂದ್ರರುಂ ॥
ಬ

ಸುರಗಿಯ ಕೋದ ಮಲ್ಲಿಗೆಯ ಜಾದಿಯ ಮೊಲ್ಲೆಯ ಬೆಳ್ಪಿನಿಂ ಮನೋ
ಹರಮೆನಿಸಿರ್ದ ಕುಂಕುಮರಜಂಗಳ ಶೋಭನಮಪ್ಪ ಕೆಂಪಿನಿಂ
ಸುರುಚಿರಮಪ್ಪ ಕಸ್ತುರಿಯೊಳೊಂದಿ ವಿರಾಜಿಪ ಕರ್ಪಿನಿಂ ಸರೋ
ವರಮೆಸೆದಿರ್ದುದಂಗಜನ ಲೀಲೆಯ ಚಿತ್ರಪಟಂಬೊಲೊಪ್ಪದಿಂ ॥ ೧೭

ಅರಸಂ ಸರಸಿರುಹಾನನೆ
ಯುರಮೇಲೆ ತುಳುಂಕೆ ರಾಗದಿಂದಂ ನೋಡು ।
ತ್ತಿರೆ ಬಿಡದೆ ವಾರಿಜಾನನೆ
ಯುರುಮುರಸನಮೇಲೆ ಸೂಸೆ ಜಲಮಂ ನಗುತುಂ ॥ ೧೮

ಅಂತು ರಾಗರಸಮೊದವೆ ಚಿತ್ತಾಹ್ಲಾದದಿಂ ಮೆಯ್ಯಱಿಯದೆ ಜಲಕ್ರೀಡೆಯನಾಡುತ್ತುಮಿರ್ಪನ್ನೆಗಂ ವಿಜಯಾರ್ಧಪರ್ವತದುತ್ತರಶ್ರೇಣಿಯೊಳಳಕಾಪುರಮೆಂಬುದುಂಟಾಪೊಳಲನಾಳ್ವಂ ಖೇಚರರಾಜಂ ವಜ್ರದಾಡನೆಂಬಂ ತನ್ನ ಪ್ರಾಣವಲ್ಲಭೆಯಪ್ಪ ಮದನವೇಗೆಯೆಂಬ ಪಟ್ಟದರಸಿವೆರಸಿ ಭೌಮವಿಹಾರಾರ್ಥಂ ವಿಮಾನಾರೂಢನಾಗಿ ದಕ್ಷಿಣಾಶಾಭಾಗಕ್ಕೆ ಬರುತ್ತಿರ್ಪಲ್ಲಿ ಪ್ರಾಣೇಶ್ವರಿಯರೊಳ್ ಕೂಡಿ ಜಲಕ್ರೀಡೆಯನಾಡುವುಪರಿಚರಮಹಾರಾಜನುಮಂ ಮುಂದಿರ್ದ ನಾಲ್ವರ್ ಮಹಾದೇವಿಯರುಮಂ

ನೆರೆದಿರ್ದಂತಃಪುರಪುರಂಧ್ರಿಯರುಮಂ ಬಳಸಿ ಸಂದಣಿಸಿರ್ದ ರಾಜಕುಮಾರರುಮಂ ಕಂಡರ್ತಿವಟ್ಟು ಪೋಗದೆ ನೋಡುತ್ತಿರ್ಪುದುಂ ಮದನವೇಗೆಯಿಂತೆಂದಳ್] [1] ॥ ೧೯

ಈತರಳಾಯತಾಕ್ಷಿಯರಿನೀ ನೆರೆದಿರ್ದ ಕುಮಾರರಿಂ ಮಹಾ
ಖ್ಯಾತಿಯನುಳ್ಳ ಭೂಪನಿಕುರಂಬದೀನಿಹಯಕೋಟಿಯಿಂ ಕರಿ
ವ್ರಾತದಿನೀವಿಳಾಸದ ವಿಳಾಸಿನಿಯರ್ಕಳನೀಭಟಾಳಿಯಿಂ
ದೀತನ ರಾಜ್ಯಲೀಲೆ ಸುರರಾಜನ ಲೀಲೆವೊಲೊಪ್ಪಿ ತೋಱುಗುಂ ॥ ೨೦

ಎಂದಂಗಾರ[ಕ]ವಾರದ ಪೆಸರ್ ಮಂಗಳವಾರವೆಂಬಂತೆ ಬಱಿದೆ ಕಾಗೆಗಳಂತಂತರಿಕ್ಷದೊಳ್ ಪಾಱುವ ನಮಗೆ ವಿದ್ಯಾಧರರೆಂಬೊಣ ಪೆಸರಲ್ಲದೀಮಹೀನಾಥನಂತೆ ವಿಭವಾನ್ವಿತರಲ್ಲರೆಂಬುದುಂ [ನಲ್ಲಳ ಮಾತಂ ಕೇಳ್ದು ವಜ್ರದಾಡನುಪರಿಚರಮಹಾರಾಜನಮೇಲೆ ಕೋಪಂ ಪುಟ್ಟಿ ಮದನವೇಗೆಯನಳಕಾಪುರಕ್ಕೆ ಕಳಿಪಿ ಮಗುಳ್ದು ಬಂದು] [2] ॥ ೨೧

ಪಿರಿದಪ್ಪಱೆಯಂ ಖಚರೇ
ಶ್ವರನೊರ್ಮೊದಲೆತ್ತಿ ತಂದು ಮುನಿಸಿಂ ಪದ್ಮಾ ।
ಕರಮನಲೊದವೆ ಪರಿಜನ
ಮರಿದಾಯ್ತೆಂದೊಡನೆ ಮುಚ್ಚಿ ಪೋಪುದುಮಾಗಳ್ ॥ ೨೨

[ಜನಪನುಮರಸಿಯರುಂ ಭೋಂ
ಕೆನೆ ಪಾಸಱೆ ಕೊಳದಮೇಲೆ ಕವಿದಿರೆ ಪೊಱಗ ।

1 ಕುಮಾರರವೆರಸು ಸುಖದಿನಿರ್ಪುದುಪರಿಚರಿತಮಹಾರಾಜಂ ರಾಜ್ಯಂಗೆಯ್ಯುತ್ತಮಿರ್ದೊಂದುದಿವಸಂ ಸುದರ್ಶನವೆಂಬ ಸರೋವರದೊಳ್ ನಾಲ್ವರರಸಿಯರುಂ ತಾನುಂ ಜಲಕ್ರೀಡೆಯನಾಡುತಿಪ್ಪನ್ನೆಗಂ ವಜ್ರಕುಮಾರನೆಂಬ ವಿದ್ಯಾಧರಂ ಮದನವೇಗೆಯೆಂಬ ತನ್ನ ಪ್ರಾಣವಲ್ಲಭೆವೆರಸು ಭೌಮವಿಹಾರಾರ್ಥಮಾಕಾಶದೊಳ್ ವಿಮಾನಾರೂಢನಾಗಿ ಬರುತ್ತಿರ್ಪಲ್ಲಿ ಮದನವೇಗೆ ಪ್ರಾಣೇಶ್ವರಿಯರೊಳ್ ಕೂಡಿ ಜಲಕ್ರೀಡೆಯನಾಡುತ್ತಿಪ್ಪುಪರಿಚರಿತಮಹಾರಾಜನಂ ಕಂಡು ತಲೆಯಂ ತೂಗಿ ವಜ್ರದಾಡನ ಮೊಗಮಂ ನೋಡಿ (ಗ) 2 ಮುನಿದು (ಗ)

ಣ್ಗೆನಸುಂ ಪೊಱಮಡಲಱಿಯದೆ
ಘನವಪ್ಪಾವಿಗೆಯ ಕಿರ್ಚಿನಂತೊಳಗಿರ್ದರ್ ॥ ೨೩

ತಡೆಯದೆ ಮೇಲೆತ್ತಲ್ ಬ
ಲ್ಲಡಿಗರ್ ಬಲದಿಂದೆ ಕೆಡೆಯೆ ನೂಂಕಲುಮೆಂತುಂ ।
ಗಡ ಬಾರದೆನಿಪ ಬೆಟ್ಟಂ
ಗಡಹಡಿಸದೆ ನೋಡಿ ನಾಲ್ವರುಂ ಕಾಮಿನಿಯರ್] [1] ॥ ೨೪

ಇದು ಕರ್ಮದೇಷ್ಟೆಯಿಂದಾ
ಯ್ತು ದಕ್ಕೆ ನಾವಲಸಿ ಮಱುಗಿ ಮನದೞಲಿಂದಂ ।
ಕುದಿದೊಡೆ ಪೋಕುಮೆ ಪೋಗದು
ಬಿದಿ ಬರೆದಕ್ಕರಮನೊರಸಿ ಕಳೆದವರೊಳರೇ ॥ ೨೫

ಪಾಪೋದಯದಿಂ ಪೊರ್ದುಗು
ಮೇ ಪಡೆಮಾತಧಿಕದುಃಖಮುಂ ಸಾವುಗಳುಂ ।
ಪೋಪುವೆ ಪೋಗವು ಕೆಮ್ಮನೆ
ಚಾಪಲಮನರಾಗಿ ಮಱುಗಲಕ್ಕುಮೆ ಭವ್ಯರ್ ॥ ೨೬

[ಈಗಳಿನಾಯ್ತೆ ಸುಖಮಂ
ಬೀಗರ್ವಂ ಬೇಡ ತೀವ್ರಕರ್ಮೋದಯದಿಂ ।
ದಾಗದೆ ಪೋಕುಂ ಚಿಂತೆಯ
ನಾಗಳ್ ಪುಟ್ಟಿಸುಗುಮಘಮನಾರ್ಬಾರಿಸುವರ್ ॥ ೨೭

ತನಯರುಮಯ್ಯನುಮಜ್ಜನು
ಮನುಜರುಮತಿಮಿತ್ರರಪ್ಪರುಂ ಪತಿಯುಂ ಕಾಂ ।
ಚನಮುಂ ಮನೆಯುಂ ನಿಕ್ಕುವ
ಮೆನಗೆಂದುಂ ತಿಬ್ಬಮೆಂದು ನಲಿವನೆ ಗಾಂಪಂ] ॥ ೨೮

1 ಅದಂ ಅರಸಿಯರ್ ಕಂಡು (ಗ)

ಮಱುಗುವುದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ಸೇದೆಗೆ
ಟ್ಟೞಿಯದೆ ಬೇವುದೇಕೆ ಮನದೊಳ್ ಕಡುಗುಂದುವುದೇಕೆ ಚಿತ್ತದೊಳ್
ಮಱುಗದೆ ನೊಂದು ಚಿಂತಿಸದೆ ನಾಡೆ ಪಲುಂಬದೆ ಮತ್ತೆ ಸೇದೆಗೆ
ಟ್ಟೞಿಯದೆ ಬೇಯದಾತ್ಮಹಿತಮಂ ನೆಱೆ ಮಾಡುಗೆ ಬುದ್ಧಿಯುಳ್ಳವರ್ ॥

ಎಂದು ತಮ್ಮೊಳೋರೊರ್ವರ್ಗೆ ಧರ್ಮಶ್ರವಣಂಗೆಯ್ದು ಶುದ್ಧ ಮನರಾಗಿ [ನಮ್ಮಂ ಪೊರ್ದಿದರಸನ ಮನಮಂ ಸುಖಮಪ್ಪಂತು ಮಾಡು ವೆವೆಂದು ರಾಜ್ಯಾಭಿಲಾಷಾಚಿತ್ತನುಂ, ಅಧರ್ಮಮನನುಂ ಸ್ತ್ರೀಲಂಪಟನುಂ ಗದ್ಗದಕಂಠನುಂ ವಿಹ್ವಲೀಭೂತನುಂ ಮಹಾಭಯಸ್ಥನುಂ] ಮರಣಭೀರುವುಮಾಗಿರ್ದ ಪರಿಚರಮಹಾರಾಜಂಗಭಿಮುಖರಾಗಿ ಧರ್ಮಮ ನಿಂತೆಂದು ಪೇೞ್ದರ್ ॥ ೩೦

ಸಾವಾದುದೆಂದು ಬೆೞ್ಕದೆ
ಕಾವವರಾರೆನ್ನನೆಂದು ಜಱಿಯದೆ ಮನದೊಳ್ ।
ನೋವಿಂಗೇಗುವೆನೆನ್ನದೆ
ಭಾವಿಸು ಜಿನಪದಮನನ್ಯರಂ ಭಾವಿಸದಿರ್ ॥ ೩೧

[ಮುನ್ನಿನ ಸಿರಿಯುಂ ಮಹಿಮೆಯು
ನುನ್ನತಿಯುಂ ಗಜಮನಶ್ವಮುಂ ನಂದನರಂ ।
ಭಿನ್ನಾಂಬುಜವದನೆಯರಂ
ನೀನ್ನನೆಯದೆ ದೇವ ನೆನೆ ಜಿನೇಶ್ವರಪದಮಂ] ॥ ೩೨

ಏನಾನುಮ ನೆನೆದಾರ್ತ
ಧ್ಯಾನದಿನೆಲೆ ಸತ್ತು ತಿರಿಕರೊಳ್ ತಿರಿಯದೆ ಸ ।
ಜ್ಜ್ಞಾನಾಂಭೋಧಿಯನಮೃತಸು
ಖಾನಂದನ ದಿವ್ಯಪಾದಮಂ ನೆನೆ ಮನದೊಳ್ ॥ ೩೩

[ಬಿಡು ರಾಜ್ಯದ ಮೋಹಮನೆಡೆ
ಯುಡುಗದೆ ನೆನೆ ಜೈನಧರ್ಮಮಂ ಕಿಡುವ ಪರಿ ।

ಗ್ರಹಯುಗಮಂ ಪಿಡಿಯದೆ ಬಿಡು
ಪಡಿಮಾತೇಂ ಬಿಟ್ಟೊಡೆಯ್ದುವೈ ಶುಭಗತಿಯಂ] ॥ ೩೪

ಮತ್ತಂ [ಪರಿಗ್ರಹದ] ಮೋಹದಿಂ ಸಂಸಾರದೊಳ್ ತಿಱನೆ ತಿರಿದು ದೆಸೆಗೆಟ್ಟು ಮಱುಗಿದ ಪಟಹಸ್ತನ ಕಡಾರಪಿಂಗಳನ ಪಿಣ್ಯಾಕ[1] ಗಂಧನ ದಂಡಕಮಹಾರಾಜನ ಬ್ರಹ್ಮದತ್ತನಂತೆ ಮಹಾದುಃಖಕ್ಕೊಳಗಾಗದೆ ಬಾಹ್ಯಾಭ್ಯಂತರ [ಪರಿಗ್ರಹ]ಂಗಳಂ ಬಿಟ್ಟೇಕಚಿತ್ತದಿಂ ಜಿನಪಾದ ಪಲ್ಲವಂಗಳಂ ನೆನೆಯುತ್ತಿರ್ಪುದೆಂದು ಪೇೞ್ದು ॥ ೩೫

ಎನಿಸುಪರಿಗ್ರಹಭರಮುಂ
ಟನಿತುಮನಿಂಬಾಗೆ ಬಿಟ್ಟು ನಿರ್ಮಲನಂ ದೇ।
ವನಿಕಾಯವಂದ್ಯನಂ ಮ
ತ್ತನಿಸದೆ ಜಿನನಂ ಸುಚಿತ್ತದಿಂ ನೆನೆಯುತ್ತುಂ ॥ ೩೬

ಮುಡಿಪಿ ಸೌಧರ್ಮಕಲ್ಪದೊಳ್ ಸ್ವಸ್ತಿಕಾವರ್ತಮೆಂಬ ವಿಮಾನದೊಳೊಂದುಸಾಗರೋಪಮಾಯುಷ್ಯಮನೊಡೆಯ ಆನಂದನುಂ ಕಾಂತನುಂ ಅಮಿತಕಾಂತನುಂ ಸುಕಾಂತನು[2] ಮೆಂಬ ಸಾಮಾನಿಕದೇವರಾಗಿ ಪುಟ್ಟಿದರಿತ್ತಲ್ ಉಪರಿಚರಮಹಾರಾಜಂ ॥ ೩೭

[ಕರಿತುರಗಂ ಪದಾತಿ ರಥಸಂತತಿ ಸಂತತಮೊಪ್ಪೆ ಸುತ್ತಲುಂ
ಬರೆ ತರಳಾಯತಾಕ್ಷಿಯರನಂಗಲತಾಂಗಿಯರಿಕ್ಕೆ ಕೂರ್ತು ಚಾ
ಮರಮನಗುರ್ವಿನಿಂ ದಿವಿಜರಾಜನವೋಲ್ ನೆಱೆ ರಾಜವೀಧಿಯೊಳ್
ಕರಮನುರಾಗದಿಂದೆಸೆದು ಬರ್ಪುದನಾಂ ನೆನೆದೆಂತು ಸೈರಿಪೆಂ ॥ ೩೮

ನಿಕ್ಕುವಮಿಂದ್ರನ ಭಂಡಾ
ರಕ್ಕಂ ಖಚರಾಧಿಪತಿಯ ಪೆಂಪಿನ ಭಂಡಾ।
ರಕ್ಕಂ ನೋಡೆನ್ನರ್ಥಂ
ಮೊಕ್ಕಳಮದನೆಂತು ಬಿಸುಟು ಪೋಪೆನೊ ಬಿದಿಯೇ ॥ ೩೯

---

1 ಪಿಂಗಳಕ (ಕ. ಖ.)   2 ಅತಿಕಾಂತನುಂ ಸುರಕಾಂತನುಂ (ಗ)

ಧರಣೇಂದ್ರನ ಸತಿಯರ್ಗಂ
ಸುರರಾಜನ ಪೆಂಡವಾಸದೊಳ್ಪೆಂಡಿರ್ಗಂ ।
ಕರಮೆನ್ನರಸಿಯರಯ್ಯೋ
ರ್ವರುಮಗ್ಗಳಮವರನೆಂತು ಬಿಸುಟಾನಿರ್ಪೆಂ ॥ ೪೦

ಪನ್ನಗರಾಜನ ಸಿರಿಗಂ
ಸನ್ನುತಸುರಪತಿಯ ಪಿರಿಯ ಸಿರಿಗಂ ಬಗೆವಂ ।
ದೆನ್ನ ಸಿರಿ ಮಿಗಿಲಿದಂ ಬಿ
ಟ್ಟೆನ್ನೆಲ್ಲಿಗವಾಯ್ದುವಗನೆ (?) ನಾಂ ಪೋದಪೆನೋ ॥ ೪೧

ಎಂದು] ಪರಿಗ್ರಹಕಾಂಕ್ಷೆಯಿಂ ಕುದಿವ ನೀರಂತೆ ಮಱುಗಿ ತಱಿದಿಕ್ಕಿದ ತಳಿರಂತೆ ಕಂದಿ ಮಾಗಿಯ ತೊಱೆಯಂತೆ ಕುಂದಿ ಪಿಡಿವೆತ್ತ ಪಾವಿನಂತೆ ಸುಯ್ದು ಬಿದಿಯಂ ಬೈದಾರ್ತಧ್ಯಾನದಿಂ ಸತ್ತು ಮನೋಹರಮೆಂಬುದ್ಯಾನದೊಳ್ ಸರ್ವಾಶ್ರಯಮೆಂಬ ಗುಹೆಯೊಳ್ ಪೆರ್ಬಾವಾಗಿ ಪುಟ್ಟಿದನಿತ್ತಲ್ ಅನಂತವೀರ್ಯಂ ಮೊದಲಾದೈನೂರ್ವರ್ ಕುಮಾರರುಮರಸಿಯರುಂ ಸಾಮಂತರುಂ ಪರಿಜನಮುಮರಸಂಗೆ [1] ತೊಟ್ಟನೆ ಕೇಡಾದುದಕ್ಕೆ ॥ ೪೨

[ಚಿಂತಿಸಿ ದುಃಖಾನಳನಿಂ
ಸಂತತಮೆರ್ದೆಯುರಿಯೆ ಮಱುಕದಿಂ ಮತಿಗೆಟ್ಟೋ ।
ರಂತೆ ನೆನೆನೆನೆದು ಧರಣೀ
ಕಾಂತನ ಕಾಂತಿಯುರ ಗುಣಮನಿರುಳುಂ ಪಗಲುಂ] [2] ॥ ೪೩

ಪಿರಿದು ವಿಭೂತಿಯಿಂ ಮದಗಜೇಂದ್ರಮನೇಱಿ ಸಮಸ್ತಭೂಮಿಪರ್
ವೆರಸು ಸಮಸ್ತಕಾಮಿನಿಯರುಂ ಪರಿವಾರಮುಮಾತ್ಮಜಾತರುಂ
ಬೆರಸು ವನಕ್ಕೆ ರಾಗದಿನುದಾರ [3] ಗುಣಾಂಬುಧಿ ಪೋಪುದೇಕೆ ನಿ
ಷ್ಠುರದಪಮೃತ್ಯು ಬಂದ ತಸಿ ಮುಟ್ಟುವುದೇಕಿದು ಚೋದ್ಯಮಲ್ಲವೇ ॥ ೪೪

---

1 ಅರಸಂಗೆ ಅರಸಿಯರ್ಗೆ (ಗ) 2 ಬೞಿಗಾಗಿ (ಗ)

3 ಪೆರ್ಚಿದನುದಾರ (ಕ. ಬ.)

[ಸಿರಿಯುಂ ಖೇಚರರಾಜರ್
ಪುರುಡಿಸಿ ತಂದಿಕ್ಕಿ ಪೋದರೋ ದೂರ್ತಿಂ ವ್ಯಂ ।
ತರದೇವರಿಕ್ಕಿ ಪೋದರೊ
ಪರೀಕ್ಷಿಸಂದಿದು ಮಹಾದ್ಭುತಂ ಧಾರಿಣಿಯೊಳ್ ॥ ೪೫

ಎಂದು ಮಹೀನಾಥನ ಪದ್ಮಾವತಿವೊದಲಾದ ನಾಲ್ವರರಸಿಯರ ಗುಣಮಂ ನೆನೆನೆನೆದು ಮಱುಗಿ ಕುದಿದು ಕೆಟ್ಟೆನೆಂದೊಳಱಿ ಮೆಯ್ಯಱಿಯದಱಲ್ವನಂತವೀರ್ಯಂ ಮೊದಲಾದ ಕುಮಾರರಂ] [1] ಬುದ್ಧಿವಂತರ್ ಧರ್ಮಶ್ರವಣದಿಂ ಮೋಣಿಸಿ ದುಃಖಮನಾಱಿಸಿ ಮಱುದಿವಸಂ ॥ ೪೬

ಮಂಗಳವೞಿ ಘೋರೆನೆ ವಾ
ರಾಂಗನೆಯರ್ ನೆರೆದು ಪಾಡೆ ಮಂಗಳಮಂ ಪು ।
ಣ್ಯಾಂಗನೆಯರಿಕ್ಕೆ ಸೇಸೆಯ
ನಂಗಜಸದೃಶಂಗನಂತವೀರ್ಯಂಗಾಗಳ್ ॥ ೪೭

[ನಲಿನಲಿದು ಮಕುಟಬದ್ಧರ್
ವಿಳಾಸದಿಂ ಕಟ್ಟೆ ಪಟ್ಟಮಂ ಜಿನಧರ್ಮೋ ।
ತ್ಪಲಚಂದ್ರನಾಗು ಮುನಿಜನ
ವಿಳಸಿತಪದಭಕ್ತನಾಗು ನೆಲನುಳ್ಳನೆಗಂ ॥ ೪೮

ಎಂದು ಪರಸಿ] [2] ಸಂತೋಷದಿಂದಿರೆ ಮಱುದಿವಸಂ ಸಾರಸ್ವತರೆಂಬಾಚಾರ್ಯರವಧಿಜ್ಞಾನಿಗಳಯ್ನೂರ್ವರ್ಮುನಿವರರ್ವೆರಸು ವಿಹಾರಿಸುತ್ತುಂ [ಶ್ರಾವಂತಿಪುರಕ್ಕೆ ಬಂದು ಮನೋಹರೋದ್ಯಾನದೊಳ್ ಲೇಸಪ್ಪ ಶಿಲಾತಳದಮೇಲೆ ಕುಳ್ಳಿರ್ದು ಪಂಥಾತಿಚಾರನೇಮಮಂ ಮಾಡುತ್ತಿರ್ಪುದುಮವರ ಬರವಂ ಋಷಿನಿವೇದಕನನಂತವೀರ್ಯಮಹಾರಾಜಂಗೆ ಬಿನ್ನಪಂಗೆಯ್ವುದುಂ ಅರಸನವರಿರ್ದದೆಸೆಯತ್ತಲೇೞಡಿಯುಂ ನಡೆದು ಪೊಡೆಮಟ್ಟು ಋಷಿನಿವೇದಕಂಗೆ ಮೆಚ್ಚುಗೊಟ್ಟು] [3] ॥ ೪೯

---

[1] ಎಂದು ಮಱುಗುವನಂತವೀರ್ಯಂ ಮೊದಲಾದೆಲ್ಲರ್ಗಂ (ಗ)

[2] ಅಂತು ಪಟ್ಟಮಂ ಕಟ್ಟೆ (ಗ) [3] ಅಲ್ಲಿಗೆ ಬರ್ಪುದುಂ (ಗ)

ಪಿರಿದುವಿಭೂತಿಯಿನರ್ಚನೆ
ವೆರಸು ಸಮಸ್ತಾವನೀಶ್ವರರ್ವೆರಸು ಮಹೀ।
ಶ್ವರನರ್ತಿವೆರಸು ಯೋಗೀ
ಶ್ವರರಲ್ಲಿಗೆ ಬಂದು ಮುನಿಕದಂಬಮನಾಗಳ್ ॥ ೫೦

ಬಲವಂದು ಮೂಱುಸೂೞ್ನಿ
ರ್ಮಲನಂಘ್ರಿಯನಷ್ಟವಿಧಸದರ್ಚನೆಯಿಂದು।
ಜ್ಜ್ವಲಮನದಿಂದರ್ಚಿಸಿ ನಿ
ಶ್ಚಲಚಿತ್ತಂಗೆಱಗಿ ಭಕ್ತಿಪೂರ್ವಕದಿಂದಂ ॥ ೫೧

ವಂದಿಸಿ ನರೇಂದ್ರನಾದರ
ದಿಂದಂ ನಿರ್ಮಳರನುೞಿದ ಋಷಿಯರುಮಂ ಸಾ।
ನಂದಮನಂ ಗುರುಪರಿವಿಡಿ
ಯಿಂದಂ ವಂದಿಸಿ ಮನೋನುರಾಗದಿನಾಗಳ್ ॥ ೫೨

ಮುನಿಸತಿಯ ಮುಂದೆ ಕುಳ್ಳಿ
ರ್ದನುಪಮಸದ್ಧರ್ಮಮಂ ಮನೋಭವರೂಪಂ।
ಮನಮಾರೆ ಕೇಳ್ದುಬೇಗಂ
ಜನನಾಥಂ ಕೇಳ್ದು ತಿಳಿದು ತದನಂತರದೊಳ್ ॥ ೫೩

ಎಮ್ಮ ಜನಕಂಗಂ ಜನನಿಯರ್ಗಮಾಕಸ್ಮಿಕಮೆ ಕಾರಣಂ ಸಾವಾದುದೆಂತು ನಿಮ್ಮಡಿ ಬೆಸಸಿಮೆಂಬುದುಂ ಮುನೀಶ್ವರನವಧಿಲೋಚನದಿಂದಱಿದು [ವಜ್ರದಾಡನೆಂಬ ವಿದ್ಯಾಧರಂ ಭೌಮವಿಹಾರಾರ್ಥಂ ಮದನವೇಗೆಯೆಂಬ ತನ್ನ ಪೆಂಡತಿವೆರಸು ಬರುತ್ತುಂ ಜಲಕ್ರೀಡೆಯನಾಡುತ್ತುಮಿರ್ಪೀನಿಮ್ಮಯ್ಯನಂ ನೋಡುತ್ತುಮಿರ್ಪುದುಂ ಮದನವೇಗೆ ಮಹೀನಾಥರೊಳೀತನ ರಾಜ್ಯಮೆ ಸಫಲಮೆಂದು ಪೊಗೞ್ವುದುಮಾಮಾತಿಂಗೆ ವಜ್ರದಾಡಂ ಪುರುಡಿಸಿ ಮದನವೇಗೆಯನಳಕಾಪುರಕ್ಕೆ ಕಳಿಪಿ ಪಿರಿದಪ್ಪ ಶಿಲೆಯುಂ ಕೊಂಡು ಬಂದು ನಿಶ್ಛಿದ್ರಮಾಗಿ ಮುಚ್ಚಿ ಪೋದನವನಿಂ ಸಾವಾಯ್ತೆಂದು ಪೇೞ್ವುದುಂ ॥ ೫೪

ನರನಾಥನಱಿದು ಮತ್ತಂ
ವರಮುನಿನಾಥಂಗೆ ಭಕ್ತಿಯಿಂ ಪೊಡೆಮಟ್ಟು ।
ದರದಿಂ ನಿಮ್ಮಡಿ ಭೂಮೀ
ಶ್ವರನುಂ ಜನನಿಯರುಮೆಲ್ಲಿ ಪುಟ್ಟಿರ್ದಪರೋ ॥ ೫೫

ಬೆಸಸುವುದದನೆನೆ ಕೀರ್ತಿ
ಪ್ರಸರಂ ಜೈನಾಂಗಮಾಂಬುನಿಧಿಶಿಶಿರಕರಂ ।
ವಸುಧಾಧಿಪತಿಗೆ ನೆಱೆ ಸಂ
ತಸಮಪ್ಪಂತಾಗೆ ಪೇೞಲುದ್ಯತನಾದಂ ॥ ೫೬

ನಿನ್ನ ಜನನಿಯರ್ ಪದ್ಮಾವತಿಮೊದಲಾದ ನಾಲ್ವರುಂ ಮೇಲೆ ಭಯಂಕರಮಾಗಿರ್ದ ಶಿಲೆಗಂಜದೆ ಪ್ರಾಣಭಯಮಾಯ್ತೆಂದು ಮನದೊಳ್ ನಡುಗದೆ ಚಿತ್ತದೊಳ್ ಕೊಂಕದೆ] [1] ॥ ೫೭

ತನುವಂ ಮತ್ತಿಹಲೋಕದಲ್ಪಸುಖಮಂ ದಿವ್ಯಾಂಬರಾನೀಕಮಂ
ಧನಮಂ ಭೂಷಣಮಂ ಸುಭೋಜನಮನಾತ್ಮಾಧೀಶನಂ ಕೂರ್ಪನಂ
ದನರಂ ಚಿಂತಿಸಿ ಕಂದಿ ಕುಂದಿರದೆ ಬಿಟ್ಟಾನಂದದಿಂ ಶುದ್ಧಭಾ
ವನೆಯಿಂ ನಿರ್ಮಲಚಿತ್ತದಿಂ ಮುಡಿಪಿ ತತ್ಸೌಧರ್ಮಸತ್ಕಲ್ಪದೊಳ್ ॥ ೫೮

[ಸ್ವಸ್ತಿಕಾವರ್ತಮೆಂಬ ವಿಮಾನದೊಳ್] ಸಾಮಾನಿಕದೇವರಾಗಿ ಪುಟ್ಟಿದರ್ ನಿಮ್ಮಯ್ಯಂ [ರಾಜ್ಯವಿಭೂತಿಯುಂ ಮಕ್ಕಳ ಭಂಡಾರದ ಪೆಂಡಿರ ಸ್ನೇಹಮುಂ ನಿನ್ನ ಚಾಗದ ಭೋಗದ ಪರಿಗ್ರಹದ ನಾಡಿನ ಬೀಡಿನ ಚಾತುರಂಗಬಲದ ರಾಜ್ಯಭರದ ಮೋಹೋದಯದಿಂ]ದಾರ್ತಧ್ಯಾನಪರನಾಗಿ ಸತ್ತು ಮಱುಕದಿಂ ಬಂದೀವನದೊಳ್ ಸರ್ಪಾಶ್ರಯಮೆಂಬ ಗುಹೆಯೊಳ್ ಪೆರ್ಬಾವಾಗಿ ಪುಟ್ಟಿರ್ದಪನೆಂಬುದುಂ ಜನನಿಯರ್ ಪರಿಗ್ರಹನಿವೃತ್ತಿಯಿಂದಾದ [ಶುಭಪರಿಣಾಮದಿಂ ಪಡೆದ] ದೇವಗತಿಯುಮಂ, ಜನಕಂ ಪರಿಗ್ರಹದಿಂದಾದ [ದುಷ್ಪರಿಣಾಮದಿಂ ಪಡೆದ ತಿರಿಕ] ಗತಿಯುಮಂ ಕಂಡು ಬೆಱಗಾಗಿ ॥ ೫೯

[1] ಅವರ ಮರಣದೊಳಾದ ವೃತ್ತಾಂತಮೆಲ್ಲಮಂ ಪೇಳ್ವುದುಂ ಅಱಿದವರೆಲ್ಲಿ ಪುಟ್ಟಿದರೆಲ್ಲಿರ್ದಪರೆನೆ ನಿನ್ನ ಜನನಿಯರ್ ನಾಲ್ವರುಂ (ಗ)

ಒಱಿದೆ ಪರಿಗ್ರಹಕ್ಕೆ ಅಗಿ ದುಷ್ಪರಿಣಾಮದಿನೇಷ್ಟೆಗೆಟ್ಟು ಪಾಂ
ಗಱಿಯದೆ ಸೌಖ್ಯಭೂಮಿರುಹಮಂ ಕಡಿದಕ್ಷಯಲಕ್ಷ್ಮಿಯಂ ಮನಂ
ಮುಱಿಯಿಸಿ ಪುಟ್ಟಿ ನಾಡೆ ತಿರಿಕಂಗಳೊಳಕ್ಕಟ ತೀವ್ರದುಃಖದಿಂ
ಮಱುಗುತುಮಿರ್ಪ ಕಾರ್ಯಮೆನೆ ಚಿಂತಿಸುತಿರ್ಪವು ದುಃಖಜೀವಿಗಳ್ [1]॥

ತನುವುಂ ಗೇಹಮುಮರ್ಥಮುಂ [2] ಕರಿಗಳುಂ ಜಾತ್ಯಶ್ವಮುಂ ಸಂದ ನಂ
ದನರುಂ ಮಿತ್ರರುಮಯ್ಯನುಂ ಜನನಿಯುಂ ಮುನ್ನಾರೊಡಂಬೋದರೊ
ಯ್ಯನೆ ಮುನ್ನಾವನನೊತ್ತಿ ಕಾದರದಱಿಂ [3] ತಾಂ ಬೇಱು ದೇಹಾದಿಯು
ಪ್ಪನಿತುಂ ಬೇಱೆನುತಿರ್ಪ ಭವ್ಯನೆ ವಲಂ ಧನ್ಯಂ ಪೆಱರ್ ಧನ್ಯರೇ ॥ ೬೧

ಎಂದು [ಪರಿಗ್ರಹದ ನಿಷ್ಪರಿಗ್ರಹದ ಹೀನಾಧಿಕತ್ವಮಂ ಮನದೊಳ್ ವಿಚಾರಿಸಿ ಮುನಿನಾಥಂಗೆ ಕರಕಮಲಂಗಳಂ ಮುಗಿದಿಂತೆಂದಂ ॥ ೬೨

ಉಪರಿಚರನೃಪತಿ ನಿಮ್ಮಡಿ
ವಿಪರೀತಧ್ಯಾನದಿಂ ದುರಾಗ್ರಹಿಯಾಗಿ ।
ರ್ದಪನೀಗಳಾತನಂ ನಿ
ಷ್ಕಪಟಜಿನೇಶ್ವರಮತೋಕ್ತಿಯಿಂ ಪ್ರಿಯದಿಂದಂ ॥ ೬೩

ತಿಳಿಪಲ್ ಬರ್ಕುಮೊ ಬಾರದೊ
ಘಳಿಲೆನೆ ಬೆಸಸುವುದು ಶೀಘ್ರಮೆಂಬುದುಮವನೀ ।
ತಳಪತಿಗೆ ನುಡಿದರುರ್ವೀ
ತಳಪೂಜ್ಯರ್ ವಿಮಳರಂಬುನಿಧಿನಿಸ್ವನದಿಂ] [4] ॥ ೬೪

ನೀಂ ಪೋಗಿ ಧರ್ಮಮಂ ಪೇೞ್ವುದುಮಾಪಾವು ಜಾತಿಸ್ಮರನಾಗಿ ತನ್ನ ಮುನ್ನಿನ ಭವಮನಱಿದು ಧರ್ಮಮಂ ಕೈಕೊಳ್ಗುಮನ್ನೆಗಂ ದೇವಲೋಕದಿಂ ನಿಮ್ಮ ಜನನಿಯರಪ್ಪ ನಾಲ್ವರುಂ ಬಂದು ಪೂರ್ವ

---

1 ಜೀವರಾಶಿಗಳ್ (ಗ) 2 ಸಂಚಿಸಿದರ್ಥಮುಂ (ಗ)
3 ಕೊಂದರದಱಿಂ (ಗ) 4 ಬಗೆದು ಎಮ್ಮಯ್ಯನ ಪಾಪಮಂ ತಿಳಿಪಲುಂ ಬರ್ಕುಮೊ ಬಾರದೊ ಬೆಸಸಿಮೆನೆ (ಗ)

ಸ್ವರೂಪದಿಂ ನಿನಗೆ [1] ಸಂಘಾತಮಾಗಿರೆ ಧರ್ಮಮಂ [ಪೇೞ್ದು ತದನಂತರಂ ಸದ್ಧರ್ಮದೊಳಾದ ಪರಮೈಶ್ವರ್ಯಮುಮಂ ಜಿನಪದಸ್ಮರಣೆಯೊಳಾದ ಮಹಾವಿಭವಮುಮಂ ನಿಷ್ಪರಿಗ್ರಹವ್ರತದೊಳಾದ ಪೆಂಪುಮಂ ತೋಱಿ ಸಾಱಿ ಲೋಕಕ್ಕಂ ನಿನಗಂ ಪೇೞ್ವಂತೆ ದಿವ್ಯಸ್ವರೂಪಮಂ ಕೈಕೊಂಡು ಗಗನತಳಕ್ಕೆ ನೆಗೆದು ತಂತಮ್ಮ ಶ್ರೀಯುಮಂ ವಿಭೂತಿಯುಮಂ ತೋಱಿ ದೇವಲೋಕಕ್ಕೆ ಪೋಪರೆಂಬುದುಂ ‖ ೬೫

ಮುನಿಪತಿಗನಂತವೀರ್ಯಾ
ವನಿನಾಥಂ ಭಕ್ತಿಪೂರ್ವಕಂ ಪೊಡೆಮಟ್ಟೊ ।
ಯ್ಯನೆ ಸರ್ಪನಿರ್ದ ಪುತ್ತಿಂ
ಗನುನಯದಿಂ ಬಂದು ಗುಹೆಯ ಬಾಗಿಲ ಪೊರೆಯೊಳ್] [2] ‖ ೬೬

ನಿಂದಿರ್ದು ನೋೞ್ಪುದುಂ ಮುನಿ
ವೃಂದಾರಕನೆಂದ ಮಾರ್ಗದಿಂ ಸುಯ್ಯುತ್ತುಂ ।
ಮುಂದಿರ್ದ ನಾಗನಂ ಕಂ
ಡೆಂದಂ ನೃಪನಿಚಯಮುಕುಟಘಟ್ಟಿತಚರಣಂ ‖ ೬೭

ವನಿತೆಯರಾಗಿರ್ದುಂ ನೆ
ಟ್ಟನೆ ವೀರಂಬೆರಸು ತೊಱೆದು ಸಕಳಮುಮಂ ಸ ।
ಜ್ಜನಪಾದಭಕ್ತಿಯಿಂ ದೇ
ವನಿವಾಸಕ್ಕೊಗೆದರಂತುಟಾಗಲ್ವೇಡಾ ‖ ೬೮

ಮೀಸೆಗಳಂ ಪೊತ್ತಿರ್ದುಂ
ಸಾಸಂಗೆಟ್ಟಳ್ಕಿ ಬಳ್ಳಿ ಮನದುಬ್ಬೆಗದಿಂ ।
ಪೇಸುಪತಮಾಗಿ ನಾಗನಿ
ವಾಸದೊಳೋವಯ್ಯ ಪುಟ್ಟಿ ತಿರಿವುದು [3] ಮಾಯ್ತೇ ‖ ೬೯

---

[1] ಪೂರ್ವಸ್ವರೂಪಮಂ ತೋಱಿ ನಿಮಗೆ (ಗ)

[2] ಪೇಳ್ವರೆಂಬುದುಂ ಸರ್ಪಾಶ್ರಯಮೆಂಬ ಗುಹೆಗೆ ಬಂದು (ಗ)

[3] ನಮೆವುದು (ಗ)

ಅರಸಿಯುರನಿಬರುಮರ್ಹ
ಚ್ಚರಣವೆ ಶರಣೆಂದು ವೀರದಿಂ ಮುಡಿಪಿ ಸುರಾ।
ಸುರವಂದ್ಯರಾದರದಱಿಂ
ಧರೆಯೊಳ್ ಸನ್ಮತಿಗಳಪ್ಪವರ್ ಕೆಟ್ಟಪರೇ ॥ ೬೦

ತೊಡರ್ದ ಪರಿಗ್ರಹಯುಗದೊಳ್
ದೃಢನಲ್ಲದೆ ಬಿಟ್ಟು ಜೈನಪದಸೇವನೆಯುಂ।
ಮಡಿದಿಲ್ಲಿ ಸರ್ಪನಾದೈ
ಕಡುಮೂರ್ಖರ್ ಕಿಡುವರೆಂಬುದಾವುದು ಚೋದ್ಯಂ ॥ ೬೧

ಸುರುಚಿರರತ್ನಾವಳಿಯಿಂ
ಕರಮೊಪ್ಪುವ ರಾಜಭವನದೊಳ್ ಮುನ್ನಿರ್ಪೈ।
ದುರಿತದ ಫಲದಿಂ ಫಣಿಮಂ
ದಿರದೊಳ್ ನೀನೀಗಳಿರ್ದ ನಮೆವಂತಾದೈ ॥ ೬೨

ನರಪತಿ ನೀಂ [1] ದಿವ್ಯಸ್ತ್ರೀ
ಯರ ನಡುವೆ ವಿಳಾಸಮೊದವೆ ಮುನ್ನಿರ್ಪೈ ನಿ।
ಷ್ಠುರಪಾಪದಿಂದಮೀಗಳ್
ಗರಳಧರರ ನಟ್ಟ [2] ನಡುವೆ ನಿಲ್ವಂತಾದೈ ॥ ೬೩

ಕಳವೆಯ ಕೂೞಂ ಸೊಗಯಿಪ
ತಿಳಿದುಪ್ಪಂಬೆರಸು ಲೀಲೆಯಿಂ ಮುನ್ನುಣ್ಬೈ।
ಪುೞುಗಳನಿಲಿಗಳನಾಯ್ದಾ
ಯ್ದುೞಲೊಳಮೋವಮ್ಮ ಈಗ [3] ತಿಂಬಂತಾದೈ ॥ ೬೪

ಮೃದುಶಯ್ಯೆಯೊಳಂಗನೆಯರ್
ಪದಪಿಂದಂ ಸೋಂಕೆ ರಾಗದಿಂ ಪವಡಿಸುವೈ।
ಮುದಮೊದವೆ ಮುನ್ನಮೀಗಳ್
ಮೃದುವಲ್ಲದ ಪರಲಮೇಲೆ ಪಡುವಂತಾದೈ ॥ ೬೫

1 ನರನಾಥರ (ಗ) 2 ಪಾಪದಲ್ಲಿನೀನಜಗರ ಸಂಕುಲಗೃಹದ (ಗ)
3 ಯ್ದಾಣಲೋವೋವಸ್ಮಲಿಗ (ಕ.ಖ.) ಯ್ದುಳಲೊಡವಿದ ಕಪ್ಪೆಗಳುಮಂ(ಗ)

ಈಗಳಿನ ಕಷ್ಟತನಮುಮ
ನೋಗಡಿಸದೆ ಮುನ್ನಮಾದ ಮಹಿಮೆಯುಮಂ ನೀಂ ।
ಬೇಗಂ ಚಿಂತಿಸಿ ಬಿಡುವುದು
ಭೋಗದ ದೇಹದ ತೊಡರ್ಪುಮಂ ಮೋಹಮುಮಂ ॥ ೩೬

ತನುವಿನ ಧನವಿನ ಪೆಂಡಿರ
ತನಯುನ ಕಡು [1] ಮೋಹದಿಂದೆ ನೀನಿಂತಾದೈ ।
ವಿನಯಪರನಾಗಿ ಮುನ್ನಿನ
ವನಿತುಮನಿಂಬಾಗಿ ಬಿಟ್ಟು ನಿರ್ಮಳನಾಗೈ ॥ ೩೭

[ವಿಷಯಂಗಳ ಕಾಂಕ್ಷೆಯಿನೆಲೆ
ವಿಷಧರನಾಗಿರ್ದೆಯಿನ್ನುಮತಿಲೋಲತೆಯಿಂ ।
ವಿಷಮಂ ತಾಳ್ದಿದೆಯಪ್ಪೊಡೆ
ವಿಷಮಮಿದೆನಿಸಿರ್ದ ನರಕವಾರಿಧಿಗಿೞಿವೈ] ೩೮

ಎಂದು ಪೇೞ್ವುದುಮುಪರಿಚರನಪ್ಪ ಪೆರ್ಬಾವು ಜಾತಿಸ್ಮರನಾಗಿ ತನ್ನ ಮುನ್ನಿನ ಭವಮನಱಿದು [ಗುಹೆಯ ಬಾಗಿಲ್ಗೆ ಬಂದು ಕಿವಿಯಾಂತ]ನಂತವೀರ್ಯಮಹಾರಾಜನ ಮಾತುಗಳಂ ಕೇಳುತ್ತುಮಿರ್ಪುದುಂ ದೇವಲೋಕದೊಳ್ ಪುಟ್ಟಿದರಸಿಯರ್ [ನಾಲ್ವರುಂ ಪರಿಗ್ರಹಕಾಂಕ್ಷೆಯಿಂ ಸ್ವಸ್ವಾಮಿಯಪ್ಪುಪರಿಚರನಾರ್ತಧ್ಯಾನದಿಂ ಸತ್ತು ಪೆರ್ಬಾವಾಗಿ ಪುಟ್ಟಿರ್ದುದನವಧಿಜ್ಞಾನದಿಂದಱಿದು ಧರ್ಮವಾತ್ಸಲ್ಯದಿಂ ಬೋಧಿಸಲೆಂದು ಮನೋಹರೋದ್ಯಾನವನಕ್ಕೆ ದೇವಲೋಕದಿಂದಿೞಿದು] ಮುನ್ನಿನ ರೂಪಿಂ ಬಂದು ಗುಹೆಯ ಬಾಗಿಲೊಳಿರ್ದ ಪಾವಿಂಗೆ [ಮೃದುನಿನಾದದಿಂ] ಧರ್ಮಮನಿಂತೆಂದು ಪೇೞ್ದರ್ ॥ ೩೯

ಕಿಡುವ ಪರಿಗ್ರಹಯುಗಮಂ
ಪಿಡಿದು ದುರಾಚಾರ ನಿನ್ನ ಪಾಪೋದಯದಿಂ ।

---

[1] ಮೋಹತೊಡರ್ಪಿನಿಂದಿಂತಪ್ಪೈ (ಗ)

ಕಡುದುಃಖಾಬ್ಧಿಯೊಳಿರ್ದುದ
ನೊಡರಿಸಿ ಪಾವಾಗಿ ಪುಟ್ಟಿ ನವೆವೆಂತಾದ್ಯೆ ॥ ೮೦

ತೊಱೆವುದು ದುಷ್ಪರಿಗ್ರಹಮೆನೆಂದು ಜಿನೋಕ್ತಿಯಿನೆಮ್ಮ ಪೇೞ್ದುದಂ ಮಱೆದು ಪರಿಗ್ರಹಕ್ಕೆಱಗಿ ದುರ್ಮತಿಯಿಂ ಮರಣಕ್ಕೆ ಗೂಡುಗೊಂಡೞಿತಮನೊಕ್ಕು ಸತ್ತು ದುರಿತೋದಯದಿಂ ಫಣಿಯಾಗಿ ಪುಟ್ಟಿದೈ ಕುಱಿ ಪೆಱರಾರೊ ನೀನೆ ಕುಱಿ ನೀನೆ ಜಡಾತ್ಮನೆ ನೀನೆ ಗಾಂಪನೈ ॥೮೧

[ಮುನ್ನೆಮ್ಮ ಪೇೞ್ದ ಧರ್ಮಮ
ದನ್ನೆನೆಯದೆ ತಿರಿಕಯೋನಿಯೊಳ್ ಪುಟ್ಟಿದೆಯಿ ।
ನ್ನಿನ್ನ ಮರುಳಾಟಮಂ ಬಿ
ಟ್ಟುನ್ನತಜಿನಪಾದಪದ್ಮಮಂ ನೆನೆ ಮನದೊಳ್ ॥ ೮೨

ಜಿನಪಾದಪದ್ಮಮಂ ಬಿ
ಟ್ಟನಿತೊಂದಪಮಾನವೃತ್ತಿಗೊಳಗಾದ್ಯೆ ನೀಂ ।
ಮನದೊಳ್ ಬಗೆಯದೆ ಪೆಱತಂ
ನೆನೆ ರಾಗದಿನಿಂದ್ರವಂದ್ಯನಂಘ್ರಿದ್ವಯಮಂ] ॥ ೮೩

ನಿಷ್ಕಾರಣಂ ತೆರಳಿಯು ಪುೞುವಿನಂತೆ ನಿನ್ನಂ ನೀನೆ ದುಷ್ಪರಿಣಾಮದಿಂ ಸುತ್ತಿಕೊಂಡು ಬೆಟ್ಟದೊಳ್ ಪೂಣಿರ್ದ ಕೋಡಿಲ್ಲದ ಕಾಡಾನೆಯಂತೆ ಕೂಡದ ಸುಖಕ್ಕೆ ಬಯಸಿ ಸೇದೆಗಿಡದೆ, ಕಂಪಲೊಳ್ ಬಿರ್ದ ಪಶುವಿನಂತೆ ಸಂಸಾರದೊಳ್ ಬಿರ್ದು ನವೆಯದೆ, [ಮೋನಂಗೊಂಡ] ಚಪಳನಂತೆ ತಿರಿಕಯೋನಿಯೊಳ್ ಪುಟ್ಟಿ[ಮಲಮಲ]ಮಱುಗದೆ, ಸಾಲಂಗೊಂಡ [ಬಡ]ವನಂತೆ ಸ್ತ್ರೀ ಸುಖಕ್ಕೆಳಸಿ ಮನದೊಳ್ ಜಱಿಯದೆ, ಮಾರ್ಬಲಮಂ[1] ಕಂಡ ಪಂದೆಯಂತೆ ಸದ್ಧರ್ಮದೊಳಾದ ನಡೆವಳಗೆ ಬೆದಱದೆ, ತುಡುಗುಣ್ಬ ತೊತ್ತಿನಂತೆ ಕೊಲ್ಲದ ವ್ರತಕ್ಕಲಸಿ ನಡುಗದೆ, ಸುರಗಿಯಂ ಕಂಡ ಪುಲ್ಲೆಯಂತೆ ಸತ್ಯವ್ರತಕ್ಕಾಱದೋಸರಿಸದೆ, ತೇೞ್ತಿಂದ

1 ಪೂರ್ವಬಲಯುಮಂ (ಗ)

ಮೃಗವಿನಂತೆ ಕೊಲ್ಲದ ವ್ರತಕ್ಕೆ ಬೇಸತ್ತು ದೆಸೆಗಿಡದೆ [1], ಕಳವುಪೋದ ಮನೆಯಂತೆ ಬ್ರಹ್ಮವ್ರತಕ್ಕೆ ಬೆರ್ಚಿ ತಲ್ಲಣಿಸದೆ, ಪುಲ್ಲಕಡ್ಡಿಯಂ ಕಂಡ ತೃಣಗ್ರಾಹಿಯಪ್ಪನಿಲದಂತೆ ಗುಣವ್ರತಕ್ಕೆ [2] ಸಂಚಲಿಸದೆ, ತೂಂಕಡಿಸುವ ವೃದ್ಧನಂತೆ ಶಿಕ್ಷಾವ್ರತಕ್ಕೆ ಭಯಸ್ಥನಾಗಿ ಜೋಲದೆ, ಪಱುಗೋಲೆಳೊಳ ರ್ದಂಬಿಗನಂತೆ [3] ಗುರುವಚನಮಂ ಬಿಟ್ಟು ಪೋಗದೆ, ಮೊದಲ್ಗೆಟ್ಟ ಪರದನಂತೆ ಘಳಿಗೆಗೊಂದಂ ನೆನೆಯದೆ, ಶೃಂಗಾರಕರ್ತಿಗನಪ್ಪ ಬಡವನಂತೆ ಚಿಂತಿಸಿ ಕೆಡದೆ, ವನಿತೆಗೋತ ಋಷಿಯಂತೆ ಶುಭಧ್ಯಾನದಿಂ ಕಿಡದೆ, ಕಾಲೂರ ಸೂಳೆಯಂತೆ ಬಱಿದೆ ದುರ್ಮತಕ್ಕೆ ತೊನೆಯದೆ, ಸನ್ಮಾರ್ಗಧಾರಿಯಾಗಿ ಮುನ್ನಿನವಗುಣಂಗಳಂ ಬಿಟ್ಟು ನಿರ್ಮಳಚಿತ್ತದಿಂ ಧರ್ಮದೊಳ್ ಕೂಡಿ ಜಿನಪಾದಸೇವೆಯೊಳಿರ್ದು ಸ್ವರ್ಗಾಪವರ್ಗ [ಸುಖ]ಕ್ಕೆ ಭಾಜನನಾಗೆಂದು ತಮ್ಮ ವೀರವೃತ್ತಿಯಿಂ ಪಡೆದ ದೇವಗತಿಯುಮಂ ಭೀತಮನದಿಂದನಿವೃತ್ತಿಯಿಂದುಪರಿ [4] ಚರಮಹಾರಾಜಂ ಪಡೆದ ತಿರಿಕಗತಿಯು ಪಡೆಪುವಮಂ ಪೇೞ್ದು ತದನಂತರಂ ॥ ೮೪

ಉರದೊಳ್ ಮುತ್ತಿನಹಾರಮೊಪ್ಪೆ ಶಿರದೊಳ್ ಮಿಕ್ಕಿರ್ದ ರತ್ನಾವಳೀ
ಸ್ಫುರಿತೋದ್ಯನ್ಮಕುಟಂ ಪಳಂಚೆ ಪೊಳಪಿಂ ಚೆಲ್ವಾಗಿ ಹಸ್ತಾಗ್ರದೊಳ್
ಕರಮಿಂಬಾಗಿರೆ ದಿವ್ಯರತ್ನವಳಯಂ ಸರ್ವಾಂಗದೊಳ್ ಭೂಷಣೋ
ತ್ಕರಮಲ್ಲಲ್ಲಿಗಮರ್ಕೆವೆತ್ತಿರೆ ಸುರರ್ ಲೋಕಕ್ಕಗುರ್ವಪ್ಪಿನಂ ॥ ೮೫

ದಿವ್ಯಾಂಬರಭೂಷಣಾಲಂಕೃತರಾಗಿ ॥ ೮೬

ಇವರ್ಗಂ ಸೂರ್ಯಂಗಮೇನಂತರಮವನಿಯೊಳಾರ್ ನೋೞ್ಪೊಡಂ ತೇಜದೊಳ್ ಮ
ತ್ತಿವರ್ಗಂ ಚಂದ್ರಂಗಮೇನಂತರಮವನಿಯೊಳಾರ್ ನೋೞ್ಪೊಡಂ ಕಾಂತಿಯೊಳ್ ಮ

---

[1] ಸೆಡೆಯದೆ (ಗ)

[2] ಅನಿಲದಂತೆ ಪರಿಗ್ರಹಕೆಳಗದೆ ಬಿಸಿಲೊಳಿರ್ದ ವಿಾನಂತೆ ಗುಣವ್ರತಕ್ಕೆ (ಗ)

[3] ಪರುಗೋಲರ್ದಂಬಿಗನಂತೆ (ಕ. ಬ.) [4] ದಾದನೀಚಯಿದೆಂದುಪರಿ (ಗ)

ತ್ರಿವರ್ಗಂ ಕಾಮಂಗಮೇನಂತರಮವನಿಯೊಳಾರ್ ನೋೞ್ಪೊಡಂ ರೂಪಿನೊಳ್ ಭೂ
ಭುವನಕ್ಕಾಶ್ಚರ್ಯಮೆಂಬಂತೊಗೆದು ಗಗನದೊಳ್ ನಿಂದರತ್ಯಂತಧೈರ್ಯರ್ ‖ ೮೭

ಅಂತು ಮುಕ್ತಾಜಾಲ [ಘಂಟಾಜಾಲಕ]ಂಗಳಿಂದೊಪ್ಪುವ ವಿಮಾನಾರೂಢರಾಗಿ ಸಮುದ್ರರವಕ್ಕೆಣೆಯೆನಿಸಿ ಘೂರ್ಣಿಸುವ ದೇವದುಂದುಭಿ ವೆರಸು [ಗಗನತಳದೊಳ್ ನಿಂದು ನಾಲ್ವರ್ ದೇವರುಂ ತಂತಮ್ಮ ವಿಭೂತಿಯುಮಂ] [1] ಪರಿಗ್ರಹನಿವೃತ್ತಿಯೊಳಾದ ಮಹಾಫಲಮುಮಂ ಪೇೞ್ದು ದೇವಲೋಕಕ್ಕೆ ಪೋದರಿತ್ತಲನಂತವೀರ್ಯಮಹಾರಾಜನುಂ ನೆರೆದ ನೆರವಿಯುಂ ವಿಸ್ಮಯಂಬಟ್ಟು ‖ ೮೮

[ಜಿನತತ್ತ್ವೋಕ್ತಿಯೊಳೂಂದಿ ಜೈನಮತಮಂ ಲೇಸಾಗಿ ಸಚ್ಚಿತ್ತದಿಂ
ಮನದೊಳ್ ಸಂಶಯಮಾಗದಾತ್ಮಹಿತಮೆಂದಾದಂ ಮನಂಗೊಂಡು ಸ
ಜ್ಜನರಂ ಮೆಚ್ಚಿಸಿ ಜೀಯಜೀಯೆನಿಸಿ ತಾಳ್ದಿರ್ದಾ ಮಹಾತ್ಮಂಗೆ ದೇ
ವನಿಕಾಯಂ ಬೆಸಕೆಯ್ವುದಚ್ಚರಿಯೆ ದೇವೇಂದ್ರತ್ವಮಾಶ್ಚರ್ಯಮೇ]‖

ಸಂದಾಣುವ್ರತಮಯ್ದುಮಂ ವಿಮಳಸದ್ರತ್ನಂಗಳಿಂದಂದು ಸಾ
ನಂದಂ ತಾಳ್ದಿ ಚತುಷ್ಕಷಾಯಭಟರಂ ತೂಳ್ದಟ್ಟಿ ಪಾಪಾರಿಯಂ
ಪೊಂದಲ್ಕೀಯದೆ ಕೂಡಿ ಸತ್ಪುರುಷರೊಳ್ ಜೈನಾಂಘ್ರಿಯಂ ತಾಳ್ದಿ ನಿಂ
ದಂದಕ್ಕುಂ ದಿವಿಜೇಂದ್ರದಿವ್ಯಸುಖಮುಂ ನಿರ್ವಾಣಸಾಮ್ರಾಜ್ಯಮುಂ ‖

[ಎಂದು ಜಿನಧರ್ಮದೊಳಾದ ವಿಭವಮುಮಂ ಜಿನಪಾದಸೇವೆಯ ಪೆಂಪುಮಂ ಪೊಗೞ್ದು ಮಗುೞ್ದು ಬಂದು ಸಾರಸ್ವತಮುನಿನಾಥಂಗೆ ಪೊಡೆವಟ್ಟು ನಿಮ್ಮ ಬೆಸಸಿದಂತೆಲ್ಲಾ ಕಾರ್ಯಮಾದುದಿನ್ನಾ ಪಾಪಿಂಗಾಯುಷ್ಯಮೆನಿತುಂಟೆಂದು ಬೆಸಗೊಳ್ವುದುಂ ಮುನಿನಾಥನಿಂತೆಂದಂ ‖ ೯೧

1 ಜಿನಾಧಿಪತಿಯ ಚರಣಸೇವೆಯೊಳಾದ ಫಲಮುಮಂ (ಗ)

ನರಪತಿ ಪದಿನೈದುದಿನಂ
ಬರೆಗಂ ಫಣಿಗುಂಟು ಜೀವಿತಂ ಮಿಗಿಲಿಲ್ಲೊಂ ।
ದರೆಗಳಿಗೆಯುಮೆನೆ ಭೂಮೀ
ಶ್ವರನಱಿದಾಶ್ಚರ್ಯವೆಂದು ಮತ್ತಿಂತೆಂದಂ ॥ ೯೨

ಅಂತಾದೊಡೆ ನಿಮ್ಮಡಿ ನೀವಲ್ಲಿಗೆ ಬಿಜಯಂಗೆಯ್ದು ತತ್ಫಣಿಗೆ ತೊಱವಿಯಂ ಕುಡುವುದೆಂಬುದುಂ ಸಾರಸ್ವತಮುನಿನಾಥಂ ಸಕಲಮುನಿವೆರರ್ವೆರಸು ಸರ್ಪಾಶ್ರಯಗುಹೆಗೆವಂದು ಬಾಗಿಲೊಳಿರ್ದು ಪೆರ್ಮಾವಿಂಗೆ ಧರ್ಮಂಪೇೞ್ದು ಮುಕ್ತಿಲಕ್ಷ್ಮಿಯ ಕುಡುವ ಪಂಚರತ್ನಮೆನಿಸುಪ ಪಂಚಾಣುವ್ರತಮಂ ಕಾರುಣ್ಯದಿಂ ಕೊಟ್ಟು ಮೆಲ್ಲನಿಂತೆಂದರ್ ॥ ೯೩

ನಿನಗಾಯುಷ್ಯಂ ಪಿರಿದಿ
ಲ್ಲನುನಯದಿಂ ಮೇಲೆ ನೋಡ ಪದಿನೈದುದಿನಂ ।
ಮನವಿಕ್ಕಿ ಕುಂದಿ ಜಱೆಯದೆ
ನಿನಗಪ್ಪುದಿದೊಳ್ಳಿತಾಗಿ ನೆನೆ ನೀಂ ಮನದೊಳ್ ॥ ೯೪

ಮುನ್ನಿನ ಭವದೊಳ್ ನೀನ
ತ್ಯುನ್ನತನೈ ರಾಜಪುತ್ರನೈ ದುರ್ಮನದಿಂ ।
ದೆನ್ನ ಸಿರಿಯೆಂದು ಮೋಹಿಸಿ
ಪನ್ನಗನಾದೈ ಜಡಾತ್ಮ ದುರಿತೋದಯದಿಂ ॥ ೯೫

ನೀನಱಿಯ ನಿನ್ನ ವನಿತೆಯ
ರೇನುಮನಱ್ಕಿರ್ತು ನೆನೆದು ಕುದಿಯದೆ ಜಿನನಂ ।
ಧ್ಯಾನಿಸಿ ತತ್ಫಲದಿಂದಮ
ನೂನಸುಖಾಸ್ಪದಮನೆಯ್ದಿದರ್ ಮಱುಭವದೊಳ್ ॥ ೯೬

ಅದುಕಾರಣದಿಂ ಸೌಖ್ಯಾ
ಭ್ಯುದಯಂ ಜಿನಪಾದಸೇವೆ ಮತ್ತುಱಿವವು ದುಃ ।
ಖದ ಪುತ್ತು ಚಿಂತೆಯಾಗರ
ಮೊದವಿದ ದುರ್ಗತಿಯ ದಾರಿ ನೋವಿನ ಮಡುಗಳ್ ॥ ೯೭

ಜಿನರೂಪಸ್ಮರಣೆಯೆ ಜೀ
ವನಿಕಾಯಕ್ಕಾರ್ಮಮಾತ್ಮಹಿತಮಘಹರಣಂ ।
ಜಿನನುತಮಪವರ್ಗಶ್ರೀ
ವನಿತೆಯ ತೊಡವಮರಪತಿಯ ಲಕ್ಷ್ಮಿಯ ತಿಲಕಂ] ॥ ೯೮

ಅದಕ್ಕೆ ಸಂದೆಯಮಿಲ್ಲೆಂದು ಜಿನಧರ್ಮದೊಳಾದ ವಿಭವಮುಮಂ ಜಿನಪಾದಸೇವೆಯ ಪೆಂಪುಮಂ ಪೊಗೞ್ದು [ಮತ್ತಮಾರಾಧನೆಯಿನರ್ಚಿಸಿ ಸ್ವಾಧ್ಯಾಯಂಗೊಂಡು] [1] ಮೃದುನಿನಾದದಿನಿಂತೆಂದು ಪೇೞ್ದರ್ ॥ ೯೯

ಜೀವಂಬಿಡುವೆಡೆಯೊಳ್ ದೃಢ
ಭಾವನೆಯಿಂ ತನುವನನ್ನಮಂ ತೊಱೆದವನು ।
ರ್ವೀವೆಳಯಮೞಿಯಲಮೃತ
ಶ್ರೀವನಿತೆಯೊಳರದೆ ನೆರೆದು ಸುಖಿಯಾಗಿರ್ಕುಂ [2] ॥ ೧೦೦

ಮುನ್ನಂ ಪಲವುಭವಂಗಳೊ
ಳನ್ನೆರಪಿದ ಕರ್ಮಚಯಮುಮೀಭವದೊಳ್ ಮ ।
ತ್ತೆನ್ನಬೆ ಮಾಡಿದ ಪಾಪಮು
ಮೇಂ ನಿಲಲಱಿದಪುದೆ ತೊಱೆದ ಭವ್ಯಂಗಳೆಯೊಳ್ ॥ ೧೦೧

ಮತ್ತಂ ಸಂನ್ಯಸನದ ಪೆಂಪಂ ಪೇೞ್ವೊಡೆ ಸಂನ್ಯಸನಮಂ ಕೈಕೊಂಡ ಮಹಾಪುರುಷನ ಕರ್ಮಂ ಕಿಚ್ಚು ಪತ್ತಿದ ಕರಡದಂತೆ ಭಸ್ಮಮಕ್ಕುಂ ವಜ್ರಂ ತಾಗಿದ ಗಿರಿಯಂತೆ ನುಚ್ಚುನೂಱಕ್ಕುಂ ಸೂರ್ಯನ ರಶ್ಮಿ ಮುಟ್ಟಿದ ಮಂಜಿನಂತೆ ಕರಗುಗುಂ, ಬಲ್ಲಿದಂಗೆ ಪೊಣರ್ದೊಡ್ಡಿದನಂತೆ ಕೆಟ್ಟೋಡುಗುಂ, ಗಾಳಿಗೊಳಗಾದ ಮುಗಿಲಂತೆ ಪಾಱುಗುಂ,

---

1 ಸಾರಸ್ವತಮುನಿ ಝಲ್ಲಿಗೆ ಬಂದೆಲ್ಲಮಂ ಪೇೞ್ವುದುಮವರ್ ಪಾವಿನಲ್ಲಿಗೆ ಬಂದು ನಿನಗಿಂ ಪದಿನೈದು ದಿವಸಮಾಯುಷ್ಯಮೆಂದಱಿಪಿ ಪಂಚಾಣುವ್ರತಮುಮಂ ಸಂನ್ಯಸನಮುಂ ಕೊಟ್ಟಾರಾಧನೆಯನರ್ಚಿಸಿ ಸ್ವಾಧ್ಯಾಯಮುಮಂ ಕೊಟ್ಟು (ಗ)

2 ವಳೆಯುದ್ಧೊಳಪ್ಪುನರ್ಭವಜೀವನರುಹಮುಖಿಯೊಳರ್ತಿಯಿಂ ನೆರೆದಿರ್ಕ್ಕುಂ (ಕ, ಖ,)

ಪೆರ್ವೊನಲಿಂಗಿದಿರಾದ ಮಳಲೇಱಿಯಂತೆ ಜರಿಗುಂ, ಸೊಡರಂ ಪೊರ್ದಿದ ಪತಂಗದಂತೆ ತವುಗುಂ, ಬೆಂಕೆಯಂ ಪೊರ್ದಿದ ತಱಗೆಲೆಯಂತೆ ಕರಿಸುರಿಯಕ್ಕುಂ, ಚಂದ್ರನ ಕಿರಣಕ್ಕಿದಿರಾದ ಕತ್ತಲೆಯಂತೆ ಪರಿದೋಡುಗುಂ, ಸಿಂಹಕ್ಕಿದಿರಾದ ಗಜದಂತೆ ಕಿಡುಗು[1] ಮಿಂತು ॥ ೧೦೨

ಜಿನರಂ ನೆನೆ ಮನದೊಳ್ ಮೆ
ತ್ತಿನ ತನು ಮೊದಲಾದ ದುಷ್ಪರಿಗ್ರಹಮಂ ಬೆ ।
ಳ್ಪನದಿಂ ಪಂಬಲಿಸದಿರೊ
ಯ್ಯನೆ ಕೇಳುತ್ತಿರು ಮದೀಯವಚನಾಮೃತಮಂ[2] ॥ ೧೦೩

ಮತ್ತಂ, ಪುಲ್ಲ ಕಿರ್ಚಿನಂತೆ ಸುರಚಾಪದಂತೆ ಬೀದಿಯ ಸೊಡರಂತೆ ಬಯಲೊಱೆಯಂತೆ ಮಾಗಿಯ ಮರದೆಲೆಯಂತೆ ಶರೀರಂ ಮೊದಲಾಗೆಲ್ಲಾವಸ್ತುಗಳುಂ ನಿಷ್ಠೆಯಲ್ಲೆಂದು[3] ಪೇೞ್ವಧ್ರುವಮುಮಂ ; ನೀರಂ ಕಂಡ ಕತ್ತೆಯಂತೆ ಕಿರ್ಚಂ ಕಂಡ ಪುಲಿಯಂತೆ ಸೊಡರಂ ಕಂಡ ಕೋಡಗದಂತೆ ನಾಯಂ ಕಂಡ ಪುಲ್ಲೆಯಂತೆ ನಾಡರಸಂ ಕಂಡ ಮನ್ನೆಯನಂತೆ ತನು ಮೊದಲಾದ ಸಮಸ್ತಮುಂ ಶರಣಲ್ಲೆಂದು ಪೇೞ್ವ ಶರಣಮುಮಂ ಕಳನೇಱಿದಂಕನಂತೆ ಸೂಲಮೇಱಿದ ಕಳ್ಳನಂತೆ ಸಾವ ಮಾನಿಸನಂತೆ ಕುತ್ತದೊಳ್ ನವೆವನಂತೆ ಕೊಳದೊಳರ್ದನಂತೆ ಜೀವಮೆಲ್ಲಿಯುಮೇಕಮೆಂದು ಪೇೞ್ವೇಕತ್ವಮುಮಂ ; ಕಾೞ್ಕಿಚ್ಚಿಂಗೆ ಪುಲ್ಲ ಬೇಲಿ ಪೆರ್ವೊನಲಿಂಗೆರೆಯ ಪೆಟ್ಟೆ ಗಜಘಟೆಗೆ ಬಾಟೆಯ ಬನಂ ಬಡಿಗೆಗೆ ಮಡಕೆಯ ಮೆಟ್ಟು ಪೆರ್ಗಾಳಿಗೆ ಬೂದಿಯ ರಾಶಿ ಬಲ್ಲಿತಲ್ಲದಂತೆ ಮಂತ್ರ ದುರ್ಗ ಬುದ್ಧಿಬಲ ಮಿತ್ರ ಬಾಂಧವರ್ಮೊದಲಾಗೆಲ್ಲಂ ಸಾವುಮಂ ಕೇಡುಮಂ ತಪ್ಪಿಸಲಾಱರೆಂದು ಪೇೞ್ವನನ್ಯತ್ವಮುಮಂ ; ಪಗರಣಿಗರಂತೆ ಪಚ್ಚೊಳಂತಿಯಂತೆ [ತಿರಿವನ ಪಡಪಿನಂತೆ ಸೂರ್ಯನಂತೆ] ಬೆಳೆವ ಸಸಿಯಂತೆ[4]

---

[1] ಬೆದಱಿ ಕಿಡುಗು (ಗ) [2] ಧರ್ಮಾಮೃತಮಂ (ಗ)

[3] ಮೊದಲಾದ ದುಃಪರಿಗ್ರಹಮುಂ ಸಮಸ್ತಮುಂ ನಿತ್ಯಮಲ್ಲೆಂಬುದುಮಂ (ಗ) [4] ಪ್ರತಿಸೂರ್ಯನಂತೆ (ಗ)

ಜೀವಂಗಳ್ ಬಗೆದ ಬಣ್ಣಿಗೆಯುಕ್ಕುವೆಂದು ಪೇೞ್ವ ಸಂಸಾರವುಮಂ ; ಸುರಗಿಯ ಮಾಟದಂತೆ ಬೆಲ್ಲವಡುಗೆಯಂತೆ ಕಾಳಗದ ಗೆಲ್ಲದಂತೆ ಬಂದಿಕಾಱನ ಪಡಪಿನಂತೆ ಸಾಧನೆಕಾಱನ ಸಿರಿಯಂತೆ ಕಡುದುಃಖಮುಂ ಸುಖಮುಮಿಾ ಸ್ವರೂಪಮೆಂದು ಪೇೞ್ವ ಲೋಕಮುಮಂ ; ಪಡಿಗದಂತೆ ತೊವಲ ಕುೞಿಯಂತೆ ಪೊಲೆಯರ ಮನೆಯಂತೆ ಪಾವಿನ ಕಣ್ಣದಂತೆ ಕಳ್ಳಮಡಕೆಯಂತೆ ಶರೀರಂ ಪೊಲ್ಲೆಂದು ಪೇೞ್ವಶುಚಿತ್ವಮುಮಂ ; ಸೂಜಿಯ ಬೞಿಯ ದಾರದಂತೆ ತಾಯ ಬೞಿಯ ಶಿಶುವಿನಂತೆ ಕಾಲ ಬೞಿಯ ನೀರಂತೆ ಮೊೞಗಿನ ಬೞಿಯ ಮಿಂಚಿನಂತೆ ಬೞಲ್ಕೆಯ ಬೞಿಯ ನಿದ್ರೆಯಂತೆ ಆರ್ತ ರೌದ್ರ ಧರ್ಮ ಶುಕ್ಲಮೆಂಬ ನಾಲ್ಕುಂ ಧ್ಯಾನದ ಬೞಿವಿಡಿದು ಶುಭಾಶುಭಕರ್ಮಮಾಶ್ರಯಿಸುಗುಮೆಂದು ಪೇೞ್ವಾಶ್ರಯಮುಮಂ ; ಬಡ್ಡಿಯಿಕ್ಕುವಂ ಮೊದಲಂ ಕೊಟ್ಟು ಪತ್ರಮಂ ಸೀೞ್ವಸುವಂತೆ ಕೇಣಿಕಮಿಕ್ಕುವ ಪರದನೊತ್ತೆಯಂ ಬಿಡಿಸುವಂತೆ [1] ನಡೆವ ಬಟ್ಟೆಯೊಳ್ ಪೊಂಗೆಡಿಸಿ ಅರಸುವಂತೆ [2] ಭಂಡಾರಮನೊಪ್ಪಿಸಿ ಪೋಪ ಸೇನಬೋವನಂತೆ ಸಿದ್ಧಾಯಮನಿಕ್ಕಿ ವಿಶುದ್ಧಿಯಂ ಕೊಂಬ ಗ್ರಾಮಣಿಯಂತೆ ಬರ್ಪ ಕರ್ಮಮಂ ತೆಗೆವ ಇರ್ದ ಕರ್ಮಮಂ ಗೆಲ್ವುಪಾಯಮಂ ಪೇೞ್ವ ಸಂವರೆಯುಮಂ ; ಸೊಡರೆಣ್ಣೆಯಂ ಪೀರ್ವಂತೆ ಬಿಸಿಲ್ ನೀರಂ ಪೀರ್ವಂತೆ ಮಂತ್ರಾಕ್ಷರಂ ವಿಷಮಂ ಪೀರ್ವಂತೆ ಕಿರ್ಚು ನೀರಂ ಪೀರ್ವಂತೆ ಆನೆಯ ಹೃದಗ್ನಿ ಬೇಳದ ಕಾಯ ತಿರುಳಂ ಪೀರ್ವಂತೆ ಮಹಾಪರೀಷಹಂಗಳಿಂ ಕರ್ಮಂಗಳ್ ಕಿಡುಗುಮೆಂದು ಪೇೞ್ವ ನಿರ್ಜರೆಯುಮಂ ; ಚಂದ್ರೋದಯದಿಂ ಸಮುದ್ರಂ ಪೆರ್ಚುವಂತೆ ಗೊಬ್ಬರದಿಂ ಬೆಳಸು ಪೆರ್ಚುವಂತೆ ಆಜ್ಞೆಯಿಂ ನಾಡು ಪೆರ್ಚುವಂತೆ ಪಿಂಡಿಯಿಂ [3] ದೆಮ್ಮೆಯ ಪಾಲ್ ಪೆರ್ಚುವಂತೆ ಮೊಲೆವಾಲಿಂ ಮಕ್ಕಳ್ ಪೆರ್ಚುವಂತೆ ದಾನಪೂಜೆಶೀಲೋಪವಾಸದಿಂ ಧರ್ಮದಿಂದಮುತ್ತಮಕ್ಷಮಾದಿತಪೋನುಷ್ಠಾನದಿಂ ಪುಣ್ಯಂ ಪೆರ್ಚುಗುಮೆಂದು ಪೇೞ್ವ

---

[1] ನಂಬಿ ಕೊಡುವಂತೆ (ಕ. ಖ.) [2] ನೋಡುವಂತೆ (ಗ)

[3] ಪಿಂಡಿಯಿಂದಕ್ಕಿಯಿಂ (ಗ)

ಧರ್ಮಮುಮಂ ; ಚಕ್ರಾಯುಧದಂತೆ [1] ಬಿದಿಯು ರತ್ನದಂತೆ ಪರುಷವೇ
ದಿಯಂತೆ ನಿಧಿಯಂತೆ ಅಪೂರ್ವಮಪ್ಪ ಜೋಧಿಯುಮಂ ಕ್ರಮಂ ತಪ್ಪ
ಲೀಯದೆ ಪೇಳ್ದು ॥ ೧೦೪

ಬಂದುಭವಂ ಸಮಾಧಿಮರಣಂ ದೊರೆಕೊಂಡೊಡೆ ಕಷ್ಟವೃತ್ತಿಯೊಳ್
ಪೊಂದದೆ ದೇವಮಾನವಪತಿತ್ವಮನೆಯ್ದಿ ಸಮಸ್ತಕರ್ಮಮಂ
ಕುಂದಿಸಿ ಬೇಗಮೆಂಟುಭವದಿಂದೊಳಗಕ್ಷಯಮೋಕ್ಷಲಕ್ಷ್ಮಿಯೊಳ್
ಸಂದೆಯಮಿಲ್ಲದೊಂದಿ ಸುಖಮಿರ್ಪರಸಂಚಲರಾಗಿ ರಾಗದಿಂ ॥ ೧೦೫

ದುಕೂಲಮನೀಡಾಡಿ ಬಣ್ಣಮನುಡುವ [2], ಸೊಡರಂ ಪೊಱಗಿಕ್ಕಿ ಮಿಂಬುಳುವನೊಳಗಿಡುವ, ಕಣ್ಣಂ ಕಳೆದು ಪೀಲಿಯ ಕಣ್ಣನಿಡುವ ಕಯ್ಯಂ ಕಡಿದು ಮರಗಯ್ಯಂ[ಕಟ್ಟಿ]ಕೊಳ್ವ, ಪೊನ್ನಂ ಕೊಟ್ಟು ಮೂಗ ನರಿಸಿಕೊಳ್ವ, ಮೇಲುದಂ ಕೊಟ್ಟು ತಲೆಯುಂ ಬೋಳಿಸಿಕೊಳ್ವ, ಕೆಯ್ಯಂ ಕೊಟ್ಟು ಪುಲ್ಲಂ ಕೊಳ್ವ, ಕಂಕಣಮಂ ಬಿಟ್ಟು ಬಳೆಯುಂ ಕೊಳ್ವ, ಪೆಂಡಿರಂ ಮಾಱಿ ತೊಟ್ಟುರಂ ಕೊಳ್ವ, ಹಾರಮನೀಡಾಡಿ ಪಾವಂ ಕಟ್ಟುವ, ಪಸುವಂ ಮಾಱ್ದು ನಾಯುಂ ಕಱೆವ, ತಂಬುಲಮಂ ಬಿಟ್ಟು ಸಗಣಮಂ ತಿಂಬ [3], ಕರ್ಪುರಮಂ ಬಿಟ್ಟು ಪಗಿನಂ ಕೊಳ್ವ [4] ಜಾತ್ಯ ಶ್ವಮಂ ಬಿಟ್ಟು ಮರಗಾಲಂ ಕೊಳ್ವ, ತುಪ್ಪಮಂ ಕೊಟ್ಟು ನೀರಂ ಕೊಳ್ವ, ಕೋಟಿವೇದಿಯಪ್ಪ ರಸಮಂ ಬಿಟ್ಟು ಎಣ್ಣೆಯುಂ ಕೊಳ್ವ, ಭಂಡಾರಮಂ ಕೊಟ್ಟು ಪಿಂಡಿಯುಂ ಮೆಲ್ವ, ಗಾವಿಲನಂತಾಗಿ ಶಾಶ್ವತ ಸುಖಮನೀವ ರತ್ನತ್ರಯಂಗಳಂ ಬಿಟ್ಟು ಕಿಡುವ ಪರಿಗ್ರಹಮುಮಂ ನೆನೆಯುತ್ತುಮಿರಲಾಗದೆಂದು ಧರ್ಮಮಂ ಪೇೞುತ್ತುಮಿರ್ಪುದುಮಿತ್ತ ಲನಂತವೀರ್ಯಮಹಾರಾಜಂ ಪದಿನೈದುದಿವಸಂಬರಂ ಜಿನಪೂಜೆಗಳಂ

---

1 ಪರುಷವೇದಿಯುಂತೆ ಚಕ್ರಾಯುಧದಂತೆ ಚಿಂತಾಮಣಿಯುಂತೆ (ಗ)

2 ಹಱುಕೆಯನುಡುವ (ಗ)

3 ನಂದನವನಮಂ ಕಡಿದು ಮನೆಯುಮಮಾಡುವ (ಗ)

4 ಪೊನ್ನ ಮಡಕೆಯುಂ ಕೊಟ್ಟು ಮಣ್ಣ ಮಡಕೆಯುಂಕೊಳ್ವ (ಗ)

ಮಾಡಿಸುತ್ತುಮಿರ್ಪುದುಂ ಉಪರಿಚರನಪ್ಪ ಪೆರ್ಬಾವು ಧರ್ಮಮಂ ಕೇಳುತ್ತುಂ ಪ್ರಾಣವಿಯೋಗದೊಳ್ ವಜ್ರದಾಡನ ಮಾಡಿದ ಸಾಹಸಮಂ ನೆನೆಯುತ್ತುಂ ಸತ್ತು ಭವನವಾಸಿಗರಲ್ಲಿ ಮೂಱುಪಳಿತೋಪಮಾಯುಷ್ಯ ಮನೊಡೆಯನಾಗಿ ವ್ಯಂತರಕುಲದೊಳ್ ವಿಮಳನೆಂಬ [ಪೆಸರ] ದೇವ ನಾಗಿ ಪುಟ್ಟಿದನಿತ್ತಲನಂತವೀರ್ಯಮಹಾರಾಜಂ ಮುನೀಂದ್ರೋತ್ತಮರಂ ಬೆಸಗೊಂಡು ದುರ್ಭಾವದಿಂ ಭವನವಾಸಿಗಲೋಕದೊಳ್ ತತ್ಫಣಿ ಪುಟ್ಟಿ ದುದನಱಿದು ಬೆಱಗಾಗಿ ॥ ೧೦೬

ಪಿರಿದಪ್ಪ ಪರಿಗ್ರಹಮಂ
ಪರಿಹರಿಸಿದ ಫಲದಿನುಪರಿಚರನರಸಿಯರೊ ।
ಪ್ಪಿರೆ ದಿವಿಜಮೆಂದ್ರರಾದರ್
ಪರಿಗ್ರಹಾಪೇಕ್ಷೆಯಿಂದಮಿವನಿಂತಾದಂ ॥ ೧೦೭

ಎಂದು ಬೆರ್ಚಿ ತನ್ನ ಪಿರಿಯ ಮಗನಪ್ಪ ಸುಬಾಹುಕುಮಾರಂಗೆ ರಾಜ್ಯಪಟ್ಟಮಂ ಕಟ್ಟಿ [ಸಕಳ] ಸಾಮ್ರಾಜ್ಯಮಂ ತೊಱೆದು [ಸಮಸ್ತ ರಾಜಕುಮಾರರ್ವೆರಸು] [1] ಜಿನದೀಕ್ಷೆಯಂ ಕೈಕೊಂಡುಗ್ರತಪಶ್ಚ ರಣಂಗೆಯ್ದು [2] ಸಂಮೇಧಪರ್ವತದೊಳ್ ಕರ್ಮಕ್ಷಯಂಗೆಯ್ದು ನಿರ್ವೃ ತಿಯನೆಯ್ದಿದನಿತ್ತಲ್, ಭವನವಾಸಿಗನಪ್ಪ ವಿಮಲದೇವಂ ವಜ್ರದಾಡ ನಪ್ಪ ವಿದ್ಯಾಧರನಂ ಕಂಡು ವಿಭಂಗಜ್ಞಾನದಿಂ ಪೂರ್ವವೈರಮನ ಱಿದು ॥ ೧೦೮

ಮುನಿದು ಕಡುಕೋಪದಿಂ ಭೋಂ
ಕನೆ [3] ಖಚರನ ವಿದ್ಯೆಯೆಲ್ಲಮಂ ಕಿಡಿಸಿ ಮಹಾ ।
ವನಧಿಗೆಱೆದೊಯ್ದು ಖಚರೇ
ಶನುಮಂ ಖಚರಾಧಿಪತಿಯ ವಲ್ಲಭೆಯರುಮಂ ॥ ೧೦೯

---

1 ಸಾರಸ್ವತಭಟ್ಟಾರಕರಲ್ಲಿ (ಗ)   2 ತಪದೊಳ್ ನೆಗಳ್ದು (ಗ)
3 ಭೋಂಕೆನೆ (ಗ)

ಎನ್ನರಸಿಯುರುಮನೆನ್ನು ಮ
ನುನ್ನತಿಯಿಂ ಪೆಟ್ಟುವೆರ್ಚೆ ಪುರುಡಿಸಿ ಕೊಂದೈ ।
ಮುನ್ನಿಷ್ಕರುಣತೆಯಿಂ ನೀಂ
ನಿನ್ನಂ ಕಂಡೀಗಳಂತು ಸೈರಿಸಲಾರ್ಪೆಂ ॥ ೧೧೦

ಕುಡಿಕುಡಿ ನೀರಂ ಬಾಯುಂ
ಬಿಡು ಬಿಡು ನೋವಿಂಗೆ ಸೆಡೆಯದಿರ್ ಸೆಡೆಯದಿರೆಂ ।
ದಡಿಗಡಿಗೆ ನಗುತುವೋರಂ
ತೆಡೆಯುಡುಗದೆ ಪಿರಿದುಬೇಗವಾಖಗಪತಿಯುಂ ॥ ೧೧೧

ಪುಡುಕುನೀರರ್ದಿ ಮೊದಲಿಸುತ್ತುಮಿರ್ಪುದುಂ ವಜ್ರದಾಡವಿದ್ಯಾಧರಂ ಕಳತ್ರಂಬೆರಸು ಕೊಂದಕೋಲೆಸತ್ತರೆಂಬ ನಾಣ್ಣುಡಿಯುಂ ದಿಟಂ ಮಾಡಿ ರೌದ್ರಧ್ಯಾನದಿಂ ಸತ್ತು ಮೊದಲ ನಂಕದೊಳ್ ಮೂಱುಪಳಿತೋಪಮಾಯುಷ್ಯಮನೊಡೆಯನಾರಕನಾಗಿ ಪುಟ್ಟಿದಂ. ಇತ್ತಲ್ ಕುರುಜಾಂಗಣವಿಷಯದೊಳ್ ಹಸ್ತಿನಾಪುರಮನಾಳ್ವ ಜಯದತ್ತಮಹಾರಾಜನಾತನರಸಿ ವಿಜಯಮಹಾದೇವಿಯೆಂಬಳ್ ॥ ೧೧೨

ವನಜಾನನೆ ಸುತರಿಲ್ಲದೆ
ಮನಕತದಿಂ ಬಂದು ಗುರುಗಳಂ ವಂದಿಸಿ ಮೆ ।
ಲ್ಲನೆ ಬೆಸಗೊಳ್ವುದುಮಾಸ
ನ್ನಮನಿಯೆಂದಂ ಮಗಳ್ ನಿನಗೆ ಪರಮೋತ್ಸವದಿಂ ॥ ೧೧೩

ಮದನನಿಭಂ ಜಿನಧರ್ಮಾ
ಭ್ಯುದಯುಂ ಭುವನೈಕವಂದ್ಯನಮಲಚರಿತ್ರಂ ।
ವಿದಿತಯಶಂ ಪುಟ್ಟುಗುಮೆಂ
ಬುದುಮಾಗಳ್ ನಲಿದು ದಿವ್ಯಮುನಿಪನ ನುಡಿಯಂ ॥ ೧೧೪

ನಂಬಿರ್ಪುದುಂ ಕೇಲವುದಿಸಕ್ಕೆ ವಿಮಾನದೇವನಪ್ಪ ಭವನವಾಸಿಗಂ ಬಂದು ಗರ್ಭದೊಳ್ ನೆಲೆಸುವ್ವುದುಂ ಗರ್ಭವಾಗಿ ನವಮಾಸಂ ನೆಱೆದು

ಗಂಡುಗೂಸಂ ಪೆತ್ತು ಗುರುದತ್ತಭಟ್ಟಾರಕರಾದೇಶದಿಂ ಪುಟ್ಟಿದನಪ್ಪು ದಱಿಂ ಗುರುದತ್ತನೆಂದು ಪೆಸರಿಟ್ಟು ಕೊಂಡಾಡುತ್ತಿರೆ ಸಕಲಶಾಸ್ತ್ರ ದೊಳ್ ಪರಿಣತನಪ್ಪುದಱಿಂ ವಿಜಯದತ್ತಮಹಾರಾಜಂ ಗುರುದತ್ತಂಗೆ ಪಟ್ಟಮಂ ಕಟ್ಟಿ ಧರಾಭಾರಮನೊಪ್ಪಿಸಿ ಸುಧರ್ಮಭಟ್ಟಾರಕರಲ್ಲಿ ದೀಕ್ಷೆಯಂ ಕೈಕೊಂಡು ಪೋದನಿತ್ತಲ್ ॥ ೧೧೫

ಗುರುದತ್ತನೃಪತಿ ಸಕಲೋ
ರ್ವರೆಯಂ ತಮ್ಮಯ್ಯನೆಡೆಗೆ ತಾಂ ಮಿಕ್ಕೊ ।
ರ್ಬರಲಧಿಕಮೆಂದು ಧರೆ ಘೋ
ಷರಿಸೆ ಮಹಾಖ್ಯಾತಿವೆರಸು ವಿಭವದಿನಾಳ್ದಂ ॥ ೧೧೬

ಅಂತಿರ್ದೊರ್ಮೆ ಚಂಪಾಪುರದ ಧಾತ್ರೀವಾಹನನ ಮಗಳಪ್ಪ ಭಯಮತಿಯಂ ಬೇಡಿ ಪೆರ್ಗಡೆಗಳನಟ್ಟುವುದುಂ ಕೊಡಲೊಲ್ಲೆನೆಂದೊಡೆ ಭಂಗವೊದ ಸಿಂಗದಂತೆ ಪೋಗದೆತ್ತಿ ಕಾದುವುದುಂ ಏೞನೆಯ ದಿವಸದಂದು ಮಹೀಂದ್ರದತ್ತನೆಂಬ ರಾಜಪುತ್ರನಂಗೈ ಪಱಿದು ನೆಲಕ್ಕೆ ಬೀೞ್ವುದುಂ ಅದನೊಂದುಗಿಡುಗಂ ಕೊಂಡು ಪೋಗಿ ಕನ್ಯಾಮಾಡದ ಮುಂದಿಕ್ಕುವುದುಮದನಭಯಮತಿಕುಮಾರಿ ಕಂಡು ತದ್ವೃತ್ತಾಂತಮನೆಲ್ಲಮನಱಿದು ಜೀವಬಾಧೆಗೆ ಪಿರಿದುಂ ಭಯಸ್ಥೆಯಾಗಿ [1]॥ ೧೧೭

---

[1] ಈ ಗದ್ಯಕ್ಕೆ ಬದಲಾಗಿ (ಕ) ಪುಸ್ತಕದಲ್ಲಿ ಮುಂದೆ ಬರೆದಿರುವ ಭಾಗವಿದೆ :—

ಅಂತು ರಾಜ್ಯಲಕ್ಷ್ಮೀಮನೋಹರನಾಗಿರ್ಪುದುಮೊಂದುದಿವಸಂ ಪರದನೊರ್ವನಮೂಲ್ಯವಸ್ತುಗಳನೊಂದುಪಟಮುಮಂ ತಂದರಸನ ಮುಂದಿಟ್ಟು ನಿಂದಿರ್ಪುದು ಮರಸನಾಪಟದೊಳ್ ಬರೆದ ಪೆಣ್ಣ ರೂಪಂ ನೋಡಿ ವಿಸ್ಮಯಂಬಟ್ಟದಾರ ರೂಪೆಂದು ಬೆಸಗೊಳ್ವುದುಮಂಗವಿಷಯದ ಚಂಪಾಪುರಮನಾಳ್ವ ಧಾತ್ರೀವಾಹನ ಮಹಾರಾಜನ ಮಗಳಪ್ಪಭಯಮತಿಕುಮಾರಿಯ ರೂಪೆಂದು ಬಿನ್ನಪಂಗೆಯ್ವುದುಂ ॥

ಪರದಂಗೆ ಮೆಚ್ಚಿ ಧರಣೀ
ಶ್ವರವಾದ್ಯಂ ಮೆಚ್ಚುಗೊಟ್ಟು ತದನಂತರದೊಳ್ ।
ಸರಸಿಜಮುಖಿಯುಂ ಮದಸಿಂ
ಧುರಗಮನೆಯನೆನಗೆ ಕುಡುವುದೆಂದವನೀಶಂ ॥

ಎನಗೆ ಗುರುದತ್ತನಲ್ಲದೆ
ಜನನಾಥರ್ ತಸ್ಮ ರೂಪು ನಿಶ್ಚಯಮೆಂದಾ ।
ವನಜಮುಖಿ ದಾದಿಯುಂ ನೆ
ಟ್ಟನೆ ವಸುಧಾಧೀಶನಲ್ಲಿಗಟ್ಟುವುದಾಗಳ್ ॥ ೧೧೮

ಧಾತ್ರೀವಾಹನಮಹಾರಾಜಂ ಮಗಳಟ್ಟಿದ ಮಾತಂ ಕೇಳ್ದು ಸಂತೋಷಂಬಟ್ಟು ಕಾಳಗಮಂ ಮಾಣಿಸಿ ಗುರುದತ್ತಮಹಾರಾಜಂಗೆ ಕುಮಾರಿ

ಪೆರ್ಗಡೆಗಳನಟ್ಟುವುದುಂ ಧಾತ್ರೀವಾಹನಮಹಾರಾಜನಭಯಮತಿಯುಂ ಕೂಡಲೊಲ್ಲದೆ ಕಲಹಮಂ ಪಣ್ಣಿ ವಿಶ್ವಮತಿಯುಂ ವಿಶ್ವಕರ್ಮನುಮೆಂಬಿರ್ವರ್ ಬಡಗಿಯುರಂ ಕಂಡು ಗುರುದತ್ತನಪ್ಪೊಡೆ ಇಲ್ಲಿದನಾತನಂ ಪಗೆಗೊಂಡು ನಮಗೆ ಮೈಮೆಱೆದಿಪ್ಪುದು ಕಜ್ಜಮಲ್ಲೆಂದು ನೀಮೋರ್ವರೋರ್ವರಾಱುತಿಂಗಳಿಂದೊಳಗೆ ತಡೆಯದೈನೂಱು ರಥಂಗಳಂ ಮಾಡುವುದೆಂಬುದುಂ ವಿಶ್ವಮತಿ ಬೇಗಮಾಱುತಿಂಗಳಿಂದೊಳಗೆ ಅಯ್ನೂರು ರಥಂಗಳಂ ಮಾಡಿ ತಂದೊಪ್ಪಿಸಿದಂ. ವಿಶ್ವಕರ್ಮನಾಱುತಿಂಗಳಿಂದೊಂದು ರಥದ ಗಾಲಿಯುಂ ಸವಿಸ್ತರಂ ಮಾಡಿ ತಂದರಸಂಗೆ ತೋಱುವುದುಮರಸನದಱ ಗುಣಮನಱಿಯದೆವೊಂದೆ ಗಾಲಿಯುಂ ತಂದನೆಂದು ॥

ಮುನಿದು ಕೊಲವೇಳ್ಪುದೊಯ್ಯನೆ
ಬಡಗಿಯುಮವಾರಥದ ಗಾಲಿಯುಂ ಭರದೊಳ್ಮೇ ।
ದಿನಿಯೊಳಿರದಿಕ್ಕಿ ಗುರುದ
ತ್ತನರೇಶ್ವನಲ್ಲಿಗಂಜಿ ಬಂದವಯಮದಿಂ ॥

ವಾತ್ಸಲ್ಯರತ್ನಾಕರನಂ ಕಂಡು ತನ್ನ ಬಂದ ವೃತ್ತಾಂತಮೆಲ್ಲಮಂ ಪೇಳ್ದು ಶರಣ್ಬೊಕ್ಕಿರ್ದನಿತ್ತಲಾರದದ ಗಾಲಿ ನೆಲದೊಳ್ ಬೀಳದೆ ಪದಿನೈದುದಿವಸಂಬರಮೊಡೆಯುಡುಗದೆ ಅಂತರಿಕ್ಷದೊಳ್ ತಿಱ್ಱನೆ ತಿರಿಯುತ್ತಿರೆ ಧಾತ್ರೀವಾಹನಮಹಾರಾಜಂ ಕಂಡು ಮೆಚ್ಚಿ ವಿಶ್ವಕರ್ಮನೆಲ್ಲಿದನೆನೆ ಗುರುದತ್ತಮಹಾರಾಜನಂ ಶರಣ್ಬೊಕ್ಕಿರ್ದಪನೆಂಬುದುಂ ಅರಸಂ ಮುನಿದವನಂ ಶೀಘ್ರಮಟ್ಟುವುದೆಂದು ಗುರುದತ್ತಮಹೀಶನಲ್ಲಿಗೆ ಪೆರ್ಗಡೆಗಳನಟ್ಟುವುದುಮಭಯಮತಿಯುಂ ಕೂಡಲೊಲ್ಲದೆ ರೋಷದೊಳಗಿರುತ್ತಿಪ್ಪಾತನೀಮಾತಿಂಗೆ ಭಂಗಮಾದ ಸಿಂಗದಂತೆ ಪೊದಳ್ದಿತ್ತಿ ಚಂಪಾಪುರಮಂ ಮೂವಳಸಾಗಿ ಸುತ್ತಿ ಮುತ್ತಿಕೊಂಡು ॥

ಸರಸಿಜಮುಖಿಯುಂ ಕಪ್ಪಂ
ಬೆರಸೀವುದು ಬೇಗಮಿಱಿಯದಿರ್ದೊಡೆ ತನ್ನಂ ।

ಯುಂ ಕುಡುವುದುಂ ವಾತ್ಸಲ್ಯರತ್ನಾಕರನಭಯಮತಿಗೆ ಮಹಾದೇವೀಪಟ್ಟಮುಂ ಕಟ್ಟಿ ಹಸ್ತಿನಾಪುರಕ್ಕೆವಂದು ಸುಖದಿಂ ರಾಜ್ಯಂಗೆಯ್ಯುತ್ತುಮಿರ್ಪುದುಂ ವಜ್ರದಾಡನಪ್ಪ ನಾರಕಂ ನರಕದಿಂ ಬಂದು ನೀಲಗಿರಿಯೆಂಬ ಪರ್ವತದೊಳ್ ಪುಲಿಯಾಗಿ ಪುಟ್ಟಿ ತದ್ಗಿರೀಂದ್ರದ ಕೆಳಗಿರ್ದ ನಾಡವರೆಲ್ಲರುಮಂ ಕಾದುತ್ತಿರ್ಪುದುಮಾನಾಡವರೆಲ್ಲಂ ಗುರುದತ್ತಮಹಾರಾಜನರಮನೆಗೆ ಬಂದು ಪುಯ್ಯಲಿಡುವುದುಂ [1] ಪೂರ್ವವೈರಮುಂಟಪ್ಪುದಱಿಂ ತೊಟ್ಟನೆ

ಧುರದೊಳಿರಡಿಲ್ಲದಿಕ್ಕುವೆ
ನರವರಿಸುವ ಗಂಡನಲ್ಲೆನೀಯುವ ಶರದೊಳ್ ‖

ಎಂದು ಪೆರ್ಗಡೆಗಳನಟ್ಟುವುದುಂ ಧಾತ್ರೀವಾಹನಮಹಾರಾಜನವರ ಮಾತಿಂಗೆ ನಕ್ಕು ‖

ಲಿಂಗಿಯುಮಂ ದೂತರುಮಂ
ಸಂಗರದೊಳ್ ಭೀತನಪ್ಪ ಬಂಟನುಮಂ ಪೇ ।
ೞಂಗನೆಯುರುಮಂ ಕೈದುಗ
ೞಂ ಗೆಂಟಾಗಿರ್ದ ನರರುಮಂ ಕಲಿಯಪ್ಪರ್ ‖

ಕೊಲಲಾಗದು ನೀವುಸಿರದೆ ಪೋಗಿಮೆಂದು ಯುದ್ಧಸನ್ನದ್ಧನಾಗಿ ಪೊಱಮಟ್ಟು ಸಮುದ್ರಂ ಸಮುದ್ರಮಂ ತಾಗುವಂತೆ ತಾಗಿ ಕಾದುತ್ತಿರ್ಪುದುಮೇೞನೆಯ ದಿವಸದಂದು ಬ್ರಹ್ಮೇಂದ್ರದತ್ತನೆಂಬ ರಾಜಪುತ್ರನ ಮುಂಗೈ ಪಱಿದು ನೆಲಕ್ಕೆ ಬೀೞ್ವುದುಮದನೊಂದು ಗಿಡಿಗಂ ಕೊಂಡು ಕನ್ಯಾಮಾಡದ ಮುಂದಿಕ್ಕುವುದುಮದನಭಯಮತಿಕುಮಾರಿ ಕಂಡು ತದ್ವೃತ್ತಾಂತಮೆಲ್ಲಮನಱಿದು ‖

ಗುರುದತ್ತನುನಂಗಮಹೀ
ಶ್ವರನುಂ ಮುಗ್ರಾಗಿ ತಾಗಿ ಚಾತುರ್ಬಲಮುಂ ।
ಧುರದೊಳಱೆಯಟ್ಟಿ ಕೊಂದಪ
ನರಿದಾಯ್ತೋವೆನ್ನ ಪಾಪಕರ್ಮದ ಕಥದಿಂ ‖

ಚಲದಿಂ ಮೆಯ್ಯೞಿಯದೆ ಪಲ
ರಳಿವಂ ಕೈಕೊಳ್ಳದೆಯ್ದೆ ನಿಃಕರುಣದಿನು ।
ಜ್ವಲದಯೆಯುಂ ಮನದಿಂದಂ
ತೊಲಗಿಸಿದಘರ್ಮಪರಿರ್ವರುಂ ಮುನಿಸಿಂದಂ ‖

[1] ನರನಾಥಂ ಕೇಳ್ದು ಸವಿ
ಸ್ತರದಿಂ ಖರವೇಳ್ದು ಕೇಳ್ವುದುಂ ನಾಡವರಂ ।

ಕೋಪದಿಂ ಪುಲಿಯಿರ್ದ ಗುಹೆಯ ಬಾಗಿಲೊಳ್ ಬೆಟ್ಟಾಗಿ ಪುಳ್ಳಿಯ ನೊಟ್ಟಿಸಿ ಕಿಚ್ಚ ನಿಕ್ಕುವುದುಂ ಪಱಿಯ ರಭಸಕ್ಕೆ ಪುಲಿ ಪೊಱಮಡಲ ಪ್ಪದೆ ಬೆಂದು ಸತ್ತು ಕಾಮನಿರ್ಜರೆಯೆಂಬ ಸೌರಾಷ್ಟ್ರವಿಷಯದ ದ್ರೋಣಿಮಂಥ ಮೆಂಬ ಪರ್ವತದ ಕೆಳಗಿರ್ದ ಪಳ್ಳಿಖೇಟಮೆಂಬೂರೊಳಿ ಳಾಭರಣನೆಂಬ ಪಾರ್ವಂಗಂ ಕಂಟಕೆಯೆಂಬ ಪಾರ್ವಿತಿಗಂ [1] ಹಳಮುಖ ನೆಂಬ ಮಗನಾಗಿ ಪುಟ್ಟಿ ಬಳೆಯುತಿರ್ದನಿತ್ತಲ್ ಗುರುದತ್ತಮಹಾರಾ ಜನಮೃತಾಶ್ರಯಭಟ್ಟಾರಕರೇಕವಿಹಾರಿಗಳ್ ತನ್ನ ಪುರಕ್ಕೆ ಬಂದೊಡ ವರಂ ವಂದಿಸಿ [2] ತನ್ನ ಭವಮಂ ಬೆಸಗೊಳ್ವುದುಂ ಅವರುಪರಿಚರ ಮಹಾರಾಜನಾದ ಭವಂ ಮೊದಲಾಗೆ ಗುರುದತ್ತನಾದಲ್ಲಿವರಮಾದ ನಾಲ್ಕು ಭವದೊಳಾದ ವೃತ್ತಾಂತಮೆಲ್ಲಮಂ ಪೇಳ್ವುದುಂ ‖ ೧೧೯

ಅಭಯಮತಿದೇವಿಯುಂ ತ
ನ್ನ ಭವಮನಱ್ತಿರ್ದು ಕೇಳ್ವುದುಂ ಮುನಿಪಂ ಸಂ ।
ದಭಯಮತಿಗಱಿಪಿದಂ ಪೂ
ರ್ವಭವಮನಿಂತೆಂದು ದುಂದುಭಿಧ್ವನಿಯಿಂದಂ ‖ ೧೨೦

ಚಂಪಾಪುರದೊಳೊರ್ವಂ ಗರುಡವೇಗನೆಂಬ ಕಿರಾತನಿರ್ದ

ದರಸಂಗೆ ಪುಲಿಯೊಳಾದು
ಬ್ಬರಮಂ ಬಿನ್ನವಿಪುದುಂ ನರೇಂದ್ರಾರಾಧ್ಯಂ ‖ (ಕ.)

[1] ಪಾರ್ವತಿಗಂ (ಗ) [2] ಗುರುದತ್ತಮಹಾರಾಜಂ ಪುಲಿಯುಂ ಕೊಂದು ಮಹೋತ್ಸಾಹದಿಂ ಪೊಳಲ್ಗೆ ವಂದು ರಾಜ್ಯಂಗೆಯ್ಯುತ್ತಿರ್ಪುದುಮೊಂದು ದಿವಸಂ ‖

ಧರಣೀಭೂಷಣಮೆಂಬುದು
ಗಿರಿ ತದ್ಗಿರಿಯೊಳ್ ದುರಘೌಘಹರಣರ್ ಗುಣಸಾ ।
ಗರರೂರ್ಜಿತಧರ್ಮನೋಭವ
ಹರಣರ್ಸಕಳಾಗಮೈಕಪಾರಗರಮಳರ್ ‖

ಪಿಳನೂರ್ವರ್ ರುಷಿಯರ್ವೆರಸು ಅಮೃತಾಸ್ರವಭಟ್ಟಾರಕರ್ ವಂದಿರ್ದರೆಂ ಬುದಂ ಕೇಳ್ದು ಸಮ್ಯಕ್ತ್ವಚೂಡಾಮಣಿ ಸಕಳಮಕುಟಬದ್ಧರುಮಭಯಮತಿ ಮಹಾದೇವಿಯುಂಬೆರಸು ಪೋಗಿ ಮುನಿವರರಂ ವಂದಿಸಿ ಮುಂದೆ ಕುಳ್ಳಿರ್ದು ಧರ್ಮಮಂ ಕೇಳ್ದು ತದನಂತರಂ (ಕ.)

ನಾತನ ಪೆಂಡತಿ ಗೋಮುಖಿಯೆಂಬಳೊಂದುದಿವಸಂ ಶ್ರಾವಕರೆಲ್ಲರುಂ ಸಮಾಧಿಗುಪ್ತಾಚಾರ್ಯರಲ್ಲಿ ವ್ರತಂಗಳಂ ಕೈಕೊಳ್ವುದುಂ ಕಂಡರ್ತಿಯಾಗಿ ತಾನುಂ ಪಂಚಾಣುವ್ರತಂಗಳಂ ಕೈಕೊಂಡು ಪೋಗಿ ಗರುಡವೇಗಂ ಬಲೆಯನೊಡ್ಡಿ ತಂದ ಪಕ್ಕಿಗಳೆಲ್ಲಮಂ ಬಿಟ್ಟು ಕಳೆವುದುಂ ಜೇಡಂ ಬಂದು ಬಡಿವುದುಂ ಗಂಡನಂ ಬಿಟ್ಟು ನಂಟರ ಮನೆಯೊಳ್ ಪೊರ್ದಿರ್ದು ಧಾತ್ರೀವಾಹನ ಮಹಾರಾಜನ ಸಿರಿಯಂ ನೋಡಿ ಬಯಸಿ ಕೆಲವಾನುಂ ಕಾಲಕ್ಕೆ ವ್ಯಾಧಿಯಿಂ ಸತ್ತು ತದ್ವ್ರತದ ಫಲದಿಂ ಮಗಳಾಗಿ ಪುಟ್ಟಿದೆಯೆಂಬುದುಂ ‖ ೧೭೧

ಜನಪತಿಯುಮರಸಿಯುಂ ಮು
ನ್ನಿನ ತಮ್ಮ ಭವಂಗಳಂ ಸವಿಸ್ತರದಿಂ ಮೆ |
ಲ್ಲನೆ ಕೇಳ್ದು ನಂಬಿ ಸಂಸೃತಿ
ವನಧಿಯುಮಂ ದಾಂಟಿ ಪೋಪ ಬಗೆಯನೆ ಬಗೆದರ್ ‖ ೧೭೨

ಜವನೆಂಬ ನಾಯು ಬಾರಿಗೆ
ಭವಭವದೊಳ್ ಜೀವನೆಂಬ ಮೊಲನಘವಟ್ಟುಂ [1] |
ಭವಮಱಿಯದೆ ಬೆಚ್ಚಿಲ್ಲದೆ
ಜವನನೆ ಮೆಚ್ಚಿಪ್ಪುದೊಲ್ಲದತಿಶಯಸುಖಮಂ ‖ ೧೭೩

ಪುಸಿವರ ಪಿಸುಣರ ದೆಸೆಯಿಂ
ವಸುಮತಿ ಕಿಡುಗೆನ್ನದವರ ಮಾತನೆ ಪಿಡಿವಾ |
ಲಿಸುವವನಿಪಾಳರಂದದಿ
ನಸುವಂ [2] ಬಿಡದಿಂದ್ರಿಯಂಗಳೆಂದುದನೆಂಗುಂ ‖ ೧೭೪

ಅಳಿಪಿಂ ಸಂಸೃತಿಯಂ ಮು
ನ್ನೊಳಗಱಿಯದೆ ನಂಬಿ ಕೆಟ್ಟ ಕೇಡದೆ ಸಾಲ್ಗುಂ |
ಮಳರಹಿತಮಪ್ಪ ಜಿನರು
ಜ್ಜ್ವಳಪಾದಪಯೋಜಯುಗ್ಮಮಂ ಪೊರ್ದಿರ್ಪೆಂ ‖ ೧೭೫

---

1 ಮೊಲನಟ್ಟುವುದುಂ (ಗ) 2 ಅಸುವುಂ (ಕ. ಬ.)

ಮನೆಯುಂ ನಿಲಿಸುವ ಸಜ್ಜನ
ವನಿತೆಯನೀಡಾಡಿ ಸೂಳಗೆಳಸಿರ್ಪ ಜಡಾ ।
ತ್ಮನ ತೆಱದಿನೆಗ್ಗನಾಗದೆ
ಜಿನಮತಮಂ ಪಿಡಿವೆನನ್ಯಮತಮಂ ಬಿಡುವೆಂ ॥ ೧೭೬

ದಿವಿಜೇಂದ್ರಖೇಚರೇಂದ್ರವಿ
ಭವಮುಂ ಮನುಜೇಂದ್ರ[1] ರಱಿಸುಖಂಗಳುಮೋವ ।
ಧ್ರುವಮವನವೋಘಮೊಲ್ಲೆಂ
ಪ್ರವರಜಿನರ್ ಪಡೆದ ಮೋಕ್ಷಪದಮದೆ ಸಾಲ್ಗುಂ ॥ ೧೭೭

ನಿಲ್ಲದೆ ನಾಲ್ಕುಂಗತಿಗಳೊ
ಳೆಲ್ಲಂ ತಿರಿತಂದೆನನ್ಯರಂ ಪೊರ್ದಿ ಮನಂ ।
ತಲ್ಲಣಿಸಿದುದೀಜಿನಪದ
ಪಲ್ಲವಮಂ ಪೊರ್ದಿ ಪೊರ್ದುವೆಂ ನಿರ್ವೃತಿಯಂ ॥ ೧೭೮

ಎಂದು ಭಾವಿಸಿ ಶ್ರೀದತ್ತನೆಂಬ ತನ್ನ ಪಿರಿಯಮಗಂಗೆ ಪಟ್ಟಮಂ ಕಟ್ಟಿ ಧರಾಭಾರಮನೊಪ್ಪಿಸಿ ಸಕಲರಾಜ್ಯಮುಮಂ[2] ತೊಱೆದಮೃತಾಸ್ರವಭಟ್ಟಾರಕರಲ್ಲಿ ಜಿನದೀಕ್ಷೆಯಂ ಕೈಕೊಂಡು ದ್ವಾದಶಾಂಗಶ್ರುತಧರನಾಗಿ[3] ಪಲವುಕಾಲಂ ಗುರುಸೇವೆಯೊಳಿರ್ದು ಗುರುಗಳಾಜ್ಞೆಯಿಂದೇಕವಿಹಾರಿಗಳಾಗಿ ಪೋದರಿತ್ತಲಭಯಮತಿಯುಮವರ ಗುರುಗಳಾಗೆ ಸುವ್ರತಗಂತಿಯರಲ್ಲಿ ಜಿನದೀಕ್ಷೆಯಂ ಕೈಕೊಂಡು[ಗ್ರೋಗ್ರ] ತಪ[ಶ್ಚರಣ]ಂಗೆಯ್ದು [ಸಮಾಧಿಮರಣದಿಂ] ಮುಡಿಪಿ ಕಾಪಿಥ[4] ಮೆಂಬೆಂಟನೆಯ ಕಲ್ಪದೊಳ್ ಮಿತ[5] ಕಾಂತನೆಂಬ ದೇವನಾಗಿ ಪುಟ್ಟಿದಳಿತ್ತ ಗುರುದತ್ತಭಟ್ಟಾರಕರುಂ ವಿಹಾರಿಸುತ್ತುಂ ಬಂದು ಪಳ್ಳಿಖೇಡಪೊಱಲೊಳ್

[1] ನರೇಂದ್ರ (ಕ. ಖ.) [2] ಕಟ್ಟಿ ಸಾಮ್ರಾಜ್ಯಮಂ ಕೊಟ್ಟು ತಾಂ ತೊಱೆದ (ಕ. ಖ.) [3] ಧಾರಿಯಾಗಿ (ಗ)
[4] ಕಾಪಿಷ್ಟ (ಕ. ಖ.) [5] ಅಮೃತ (ಗ)

ಯತ್ರಾಸ್ತಮಿತವಾಸಿಗಳಪ್ಪುದಱಿಂ ನೇಸರ್ಪಡುವುದುಂ ಪೋಗಲೊಲ್ಲದೆ ರಾತ್ರಿಪ್ರತಿಮೆನಿಂದು ಬೆಳಗಾದಾಗಳ್ ಪುಱಿ ಪಿರಿದಾಗೆ ನೆಲನಪ್ರಾಸುಕವೆಂದು ಸೂರ್ಯಪ್ರತಿಮೆನಿಂದರನ್ನೆಗಂ ವಜ್ರದಾಡ [ಚರ] ನಪ್ಪ ಹಳಮುಖನುಱಲೆಂದು ಪೋಗುತ್ತೆ [ತನ್ನ ವಲ್ಲಭೆಗೆ ಮೂಡಣಕೆಯ್ಗೆ ಕೂೞಿಂತರ್ಪುದೆಂದು ಪೇೞ್ದು ಪೋಗಿ] [1] ಮೂಡಣಕೆಯ್ ಕೆಸಱಾಗಿರೆ ಪಡುವಣಕೆಯ್ಗೆ [ಪೋಗುತ್ತೆ ಮೂಡಣಕೆಯ್ ಕೆಸಱ್ ಪಿರಿದಾದೊಡೆ ಪಡುವಣ ಕೆಯ್ಗೆ ಪೋದಂ ಕೂೞನಲ್ಲಿಗೊಯ್ಯೆಂದು ಪೇೞ್ವುದೆಂದು ಮುನಿವರರ ಮುಂದೆ ನುಡಿದು] [2] ಪೋಗಿ ಮೂಱುಜಾವಂಬರಮುತ್ತು ಪೆಂಡತಿಯ ಬರವಂ ಕಾಣದೆ ಪಸಿದು ಮನೆಗೆ ಬಂದು [ಪಸಿದ ಕೋಪದಿಂ ತನ್ನ] ಭಾರ್ಯೆಯಂ ಸಾಯಬಡಿವುದುಮಾಕೆ ನಿಮ್ಮ ಪೋದ ದೆಸೆಯನಱಿಯದಿರ್ದೆನೆನೆ ಅಲ್ಲಿ ನಿಂದ ರಿಸಿಯರ್ಪೇೞ್ದರಿಲ್ಲಾ [ಪೇಽಪನೆ ಅವಳಂಜಿ ಪೇೞ್ದರಿಲ್ಲೆಂದು ಪುಸಿದು] [3] ಪೇೞ್ವುದುಂ ಮುನಿನಾಥನಮೇಲೆ ಮುನಿಸಾಗಿ ದುಷ್ಟಱುಷಿಯಂ ಸುಟ್ಟು ಕೊಂದಲ್ಲದುಣ್ಣೆನೆಂದು [ಪರಿದು] ಪೋಗಿ ಸೀರೆಯನೆಣ್ಣೆಯೊಳದ್ದಿ ಪಾದದಿಂ ತಲೆವರಂ ಸುತ್ತಿ ಕಿಚ್ಚಂ ತಗುಳ್ಚುವುದುಂ ॥ ೧೨೯

ಹಳಮುಖನೆನ್ನಂ ಕೆಮ್ಮನೆ
ಮುಳಿಸಿಂ ನಾನಾಪ್ರಕಾರದಿಂ ಸುಟ್ಟಪನೆಂ ।
ದೊಳಗುರಿಯದೆ ತಲ್ಲಣಿಸದೆ
ತಳರದೆ ಸಂಕಿಸದೆ ನಿಂದನಚಲಿತಧೈರ್ಯಂ ॥ ೧೩೦

ಆತಂಗೆ ಮುನಿಯಲೊಲ್ಲದೆ
ಭೀತಿಯಿನಲ್ಲಾಡದೊಂದೆಮನದಿಂ ಕರ್ಮ ।
ವ್ರಾತಮನರಿದಂ ಬಗೆವೊಡೆ
ಭೂತಳದೊಳ್ ಕೋಪಮಿಲ್ಲದಾತನೆ ಧನ್ಯಂ ॥ ೧೩೧

---

1 ತನ್ಮಸೀಂದ್ರುರಂ ಕಂಡು (ಗ) 2 ಪೋದಂ ಕೂೞನಲ್ಲಿಗಯ್ಯೆಂದೆನ್ನ ಪೆಂಡತಿಗೆ ಪೇಳ್ದು (ಗ) 3 ಪೇಳಿಮೆನೆ ಪೇಳದುಸಿರದಿರ್ದನೆಂದು (ಗ)

ಮುನ್ನಿನ ಕರ್ಮಮೆ ನೆವನೆವೆ
ದಿನ್ನೆಟ್ಟನೆ ಬಂದು ಫಲಮನಿತ್ತಪುದದಱಿಂ ।
ದಿನ್ನಾಕರ್ಮಕ್ಕಲ್ಲದೆ
ಸನ್ನುತಮತಿಯವರ್ಗೆ ಮುಳಿವೊದೊಂದೆಗ್ಗಲ್ತೇ ॥ ೧೩೭

ಮುನಿದೊಡೆ ಕರ್ಮವಿರೋಧಿಗೆ
ಮುನಿವುದು ತತ್ಕರ್ಮರಾಜನ ಪ್ರೇರಣೆಯಿಂ ।
ಘನಮಪ್ಪ ಪೀಡೆಯಂ ನೆ
ಟ್ಟನೆ ಮಾಡುವ ದುರ್ಜನರ್ಗೆ ಮುನಿವುದು ಚದುರೇ ॥ ೧೩೮

ಬಱಿವೆರಸಿದೇೞುಂ ಕುಪ್ಪಸವೆರಸಿದ ಮಿಾಹಮುಂ ಮುಗಿಲ್ವೆರಸಿದ ಮದುವೆಯುಂ ಮಣ್ವೆರಸಿದ ನೀರುಂ ಕಿಸುವೆರಸಿದ ಪೊನ್ನುಂ ಗಸಿವೆರಸಿದೆಣ್ಣೆಯುಂ ನೀರ್ವೆರಸಿದ ಪಾಲುಂ ಕಪ್ಪುವೆರಸಿದ ಮಾಣಿಕಮುಂ ಮುನಿಸುವೆರಸಿದ ಕೂರ್ಮೆಯುಂ ಮುಳ್ವೆರಸಿದ ಕೂೞುಮೆಂತುಂ ಲೇಸಲ್ಲದಂತೆ ಶರೀರದ ಪರಿಗ್ರಹ [ದ] ಮೋಹದೊಳ್ ಬೆರಸಿದ ಧ್ಯಾನಮುಮೊಪ್ಪದು ಮತ್ತಂ ತೊೞಿ ಕಾರಣಮಾಗಿ ಪೞುಗೋಲಂ ಮುಳ್ ಕಾರಣಮಾಗಿ ಕೆರ್ಪಂ ಸೂಳ್ ಕಾರಣಮಾಗಿ ಕುಂಟಣಿಯುಂ ಮಗಳ್ ಕಾರಣಮಾಗಿ ಅಳಿಯನಂ ಬೆಸಂ ಕಾರಣಮಾಗಿ ಬಂಟನಂ ಕೊಂಡಾಡುವಂತೆ ಸ್ವರ್ಗಾಪವರ್ಗಂ ಕಾರಣಮಾಗಿ ಶರೀರಮುಮಂ ಪರಿಗ್ರಹಮುಮಂ ತಕ್ಕಂತೆ ಕೊಂಡಾಡುವುದು. ರಸಂ ಬಂದೊಡೆ ತಂಬುಲಮಂ, ಎಳ್ ಬಂದೊಡೆ ಕೊದಳಿಯುಂ, ಬೆಳಸು ಬಂದೊಡೆ ನೆಲನಂ, ಸಾಲಂ ಬಂದೊಡೆ ಬಟ್ಟೆಗುತ್ತನಂ, ಕೂೞುನುಂಡೊಡೆ ಪುಲ್ಲಿಗೆಯುಂ [1] ಬಿಡುವಂತೆ, ತನ್ನ ಕಾರ್ಯಂ ತೀರ್ದ ಬೞಿಕ್ಕೆ ಕಡೆಯೊಳ್ ಶರೀರಮುಮಂ ಪರಿಗ್ರಹಮುಮಂ ತ್ರಿಶುದ್ಧಿಯಿಂ ಬಿಟ್ಟು ಪರಿಚ್ಛೇದಿಯುಪ್ಪುದೀನೀತಿಯಲ್ಲದೆ [2] ಸ್ವರ್ಗಾಪವರ್ಗಂಗಳನೆಯ್ದುವೆನೆಂಬಂ [ಗಳವೆರಸು ಬಿಲಂಬುಗುವೆನೆಂಬ ಕಡಿತಲೆವೆರಸು ಪಾಸಿನಮೇಲೆ ನಿದ್ರೆಗೆಯ್ವೆನೆಂಬ ಕುದುರೆಯ

[1] ಪತ್ಥಳೆಯುಂ (ಗ) [2] ಪರಿಚ್ಛೇದಿಸಿಯಿಪ್ಪುದಿನಿಸಲ್ಲದ (ಗ)

ನೇಱು ಮಾಡಕೆಯ್ದುವೆನೆಂಬ ಬಂಡಿವೆರಸು ಕೋಂಟೆಯಂ ಲಂಘಿಸುವೆನೆಂಬ] ಬಿಟ್ಟೇಱುವೆಡ್ಡಣಂಬೆರಸು ತೊಱೆಯನೀಸುವೆನೆಂಬ ಬೆಳ್ತನ [1] ಮೆಕ್ಕುಮೆಂದು ಶರೀರಮುಮಂ ಪರಿಗ್ರಹಮುಮಂ ತೊಱೆದು ಶುಕ್ಲ ಧ್ಯಾನದಿಂ ಘಾತಿಕರ್ಮಂಗಳಂ ಕಿಡಿಸಿ ಕೇವಲಜ್ಞಾನಿಯಾಗಿರ್ಪುದುಂ ಚತುರ್ವಿಧದೇವರ್ಕಳುಂ ಕೇವಲಿಪೂಜೆಯಂ ಮಾಡಲ್ವೇಡಿ ಬಂದು ಪೂಜಿಸಿ ಮುಂದೆ ನಿಂದು [ಸ್ತುತಿಸಿದರಿಂತು] ॥ ೧೩೪

ಜಯ ದಿವಿಜಮಹಿತ ಜಯ ದೋಷರಹಿತ
ಜಯ ದಿವ್ಯಮೂರ್ತಿ ಜಯ ವಿದಿತಕೀರ್ತಿ
ಜಯ ಮದನವೈರಿ ಜಯ ದುರಿತಹಾರಿ
ಜಯ ಗುಣನಿಧಾನ ಜಯ ಸುಖನಿಧಾನ
ಜಯ ಶಾಂತರೂಪ ಜಯ ವಿಜಿತಕೋಪ [2]
ಜಯ ಮೋಹವಿಳಯ ಜಯಧರ್ಮನಿಳಯ
ಜಯ ಭವ್ಯವಂದ್ಯ ಜಯ ಜಗದ್ವಂದ್ಯ
ಜಯ ಕಾಂತಿಧಾಮ ಜಯ ಪುಣ್ಯಧಾಮ
ಜಯ ಮುನಿಗಣೇಶ ಜಯ ಮದವಿನಾಶ
ಜಯ ದಯಸಮುದ್ರ ಜಯ ನಯಸಮುದ್ರ
ಜಯ ಸಚ್ಚರಿತ್ರ ಜಯ ಜಗಪವಿತ್ರ
ಜಯ ಸೇವ್ಯವಚನ ಜಯ ಸತ್ಯವಚನ
ಜಯ ಯಮಕೃತಾಂತ ಜಯ ಮುಕ್ತಿಕಾಂತ
ಜಯ ಬೋಧರೂಪ ಜಯ ನಷ್ಟತಾಪ
ಜಯ ಸಕಲರುಂದ್ರ ಜಯ ಜಯ ಜಿನೇಂದ್ರಾ ॥ ೧೩೫

ಶ್ರೀಯುಂ ನಿಶ್ಶ್ರೇಯಸಸಂ
ಶ್ರೀಯುಂ ಜಿನ ನಿನ್ನ ಪಾದಸೇವನೆಯಿಂ ವಾ ।
ಕ್ಶ್ರೀಯುಂ ಧವಳತಕೀರ್ತಿ
ಶ್ರೀಯುಂ ದೊರೆಕೊಳ್ಗುಮಲ್ಲಿ ಸಂದೆಯುಮುಂಟೇ ॥ ೧೩೬

---

[1] ಬೆಳಂಬ (ಗ) [2] ಪಾಪ (ಕ. ಖ.)

ಸುರರಾಜಮಕುಟಘಟ್ಟಿತ
ಚರಣದ್ವಯ ಕರ್ಮಜಲಧಿಬಡಬಾನಲ ಭಾ ।
ಸುರಬೋಧ ನಿನ್ನನಱಿಯದೆ
ದುರಿತಯುತರ್ ಪೊರ್ದಲಾರ್ಪರಕ್ಷಯಸುಖಮಂ ॥ ೧೩೭

ನರಕದೊಳಡಿಗಡಿಗೆ ಮಹಾ
ದುರಿತದ ಫಲದಿಂದೆ ಬಿರ್ದು ನವೆವರ್ ನಿನ್ನಂ ।
ಸ್ಮರಿಯಿಸಲೊರ್ಚಿಸಲೊಲ್ಲದೆ
ನರರವನಿಯೊಳಲ್ಲಿ ದೇವ ಸಂದೆಯಮುಂಟೇ ॥ ೧೩೮

ದಿನಕರನುದಯಂಗೆಯ್ಯದೆ
ಘನಮಪ್ಪ ಮಹಾಂಧಕಾರಮುಡುಗದ ತೆಱದಿಂ ।
ಜಿನನಾಥ ನಿನ್ನ ಪದಮಂ [1]
ನೆನೆಯದ ಮನುಜಂಗೆ ಪೋಗದೆಂತುಂ ಕರ್ಮಂ ॥ ೧೩೯

ತಾರಾಧೀಶ್ವರನುದಯದೆ
ವಾರಾಸಿ ಕಡಂಗಿ ಪೆರ್ಚುವಂತಿರೆ [2] ಮುಕ್ತಿ ।
ಶ್ರೀರಮಣ ನಿನ್ನ ಮಹಿಮೆಗೆ
ಧಾರಿಣಿಯೊಳ್ ಭವ್ಯನಪ್ಪ ಮನುಜನೆ ನಲಿಗುಂ ॥ ೧೪೦

ಪಿಂಗದ ಬೆಳ್ದಿಂಗಳ್ ಕ
ಳ್ಗಂಗೆಂತುಂ ಶೋಭೆವಡೆಯದಂತದಱಿಂದು ।
ತುಂಗಗುಣ ನಿನ್ನ ಮೃದುವಚ
ನಂಗಳುಮೇಗೆಯ್ದುಮೊಪ್ಪವೆಱಮನದಂಗಂ ॥ ೧೪೧

ನಿನ್ನಾಗಮಮಿರ್ದಂತಿರೆ
ತನ್ನಿಚ್ಛೆಗೆ ನಚ್ಚಿ ಮೆಚ್ಚಿ ಕಷ್ಮರಮನಮಂ ।

---

[1] ಮತಮಂ (ಕ. ಖ.) [2] ತಾರಾಧಿಪನುದಯದೊಳ್ಭೋರಾಕ್ಕಡಂಗಿ ಪೆರ್ಚುವಂದದಿ (ಗ)

ಮನ್ನಿಸಿ ನೆಱೆ ಕೇಳ್ವ ನರಂ
ಸನ್ನುತಸೌಖ್ಯಕ್ಕೆ ದೇವ ಭಾಜನನಲ್ಲಂ ॥ ೧೪೨

ಬಿಡದಭವ ನಿನ್ನ ಮತಮಂ
ಪಿಡಿದಿರ್ದನೆ ಪಡೆಗುಮಕ್ಷಯಶ್ರೀಸುಖಮಂ ।
ಕುಡುವುದು ನಿನ್ನಭಿಮತಮಂ
ಬಿಡದಿರ್ಪತಿಶಯಸುಬುದ್ಧಿಯಂ ದುರಿತಹರಾ ॥ ೧೪೩

ಎಂದನೇಕಸ್ತುತಿಶತಸಹಸ್ರಂಗಳಿಂ ಸ್ತುತಿಯಿಸುವ ದಿವಿಜನಿಕಾಯ ಮಂ ಹಳಮುಖಂ ಕಂಡು ಭಯಂಗೊಂಡು ಗುರುದತ್ತಕೇವಳಿಗಳ ಶ್ರೀ ಪಾದಪದ್ಮಂಗಳ್ಗೆಱಗಿ ಪೊಡೆಮಟ್ಟು ತನ್ನ ಮುನ್ನಿನ ನಾಲ್ಕುಭವಂಗಳಂ ಕೇಳ್ದು ಸಂಸಾರಕ್ಕೆ ವಿಸ್ಮಯಂಬಟ್ಟು ವಿರಕ್ತನಾಗಿ ಅವಸರ್ಪಿಣೀಕಾ ಲದ ಸಾಮರ್ಥ್ಯಮೆನೆನಗೆ ಬೆಸಸುವುದೆಂದು ವಿನಮಿತಮಸ್ತಕನಾಗಿರ್ಪ ದುಂ ಜಿನಸಮಯವಾರ್ಧಿವರ್ಧನಚಂದ್ರನಿಂತೆಂದು ಪೇೞ್ದಂ ॥ ೧೪೪

ಪರಹಿತರಿಲ್ಲ ಧರ್ಮಪರರಿಲ್ಲ ದಯಾನ್ವಿತರಿಲ್ಲ ಮರ್ತ್ಯರೊಳ್
ಕರುಣಿಗಳಿಲ್ಲ ಸಚ್ಚರಿತರಿಲ್ಲ ದೃಢವ್ರತರಿಲ್ಲ ಮೋಹದೊಳ್
ಪೊರೆಯದರಿಲ್ಲ ಶೀಲಗುಣಮುಳ್ಳವರಿಲ್ಲ ಸಮಸ್ತಶಾಸ್ತ್ರದೊಳ್
ಪರಿಣತರಿಲ್ಲ ಧಾರಿಣಿಯೊಳುರ್ವಿದ ದುಷ್ಷಮಕಾಲದೇೞ್ಗೆಯೊಳ್ [1] ॥೧೪೫

ದರಪುರಮಾಗಿ [2] ಪೋಕು ಮಱೆ ಪೆರ್ಚಿಳಸೆಲ್ಲಿಯುಮಾಗದೊರ್ವರುಂ
ಸ್ಥಿರಗುಣರಿಲ್ಲ ಭೂಭುಜರೊಳಾಜ್ಞೆಗಳಿಲ್ಲ ಕವರ್ತೆ ಮೊಕ್ಕಳಂ
ತಿರಿವರನೇಕರರ್ಥಪತಿಗಳ್ ಪಲರಿಲ್ಲ ಜನಕ್ಕೆ ಪೀಡೆ ತ
ಸ್ಕರರಿನಿಳೇಶರಿಂದೊದವುಗುಂ ಸಲೆ ದುಷ್ಷಮಕಾಲದೇೞ್ಗೆಯೊಳ್ ॥೧೪೬

ಸಿರಿ ದೊರೆಕೊಳ್ಳದಾಸಿರಿಗೆ ಚಿಂತಿಸುತಿರ್ಪರನೇಕರಾಗಮ
ಜ್ಞರ ನುಡಿದೋಜೆಯಿಂ ನಡೆವರಿಲ್ಲ ತದಾಗಮಮಂ ಧರಿತ್ರಿಯೊಳ್

1 ಕಲಿಗಾಲದೇಳ್ಗೆಯೊಳ್ (ಕ.)   2 ದಾರದರ (ಗ)

ಕರವಮನುರಾಗದಿಂ ಪದೆದು ಕೇಳದೆ ದುರ್ಗತಿಹೇತುವಪ್ಪ ದು
ಶ್ಚರಿತಕಥಾಳಿಯೊಳ್ನಲಿವರೊಪ್ಪಿರೆ ದುಷ್ಷಮಕಾಲದೇಶ್ಗೆಯೊಳ್ ॥ ೧೪೩

ದಯೆದಮಮಪ್ಪ ಧರ್ಮಮನೇಕರುಮೊಲ್ಲದೆ ಕಷ್ಟಮಪ್ಪ ನಿ
ರ್ದಯೆವೆರಸಿರ್ದ ಧರ್ಮಮನುದಾರತೆಯಿಂ ನೆಱೆ ಪೂರ್ದುವರ್ ಗುಣಾ
ಶ್ರಯರನವುಂಕಿ ಬಾಧಿಸಿ ಕನಿಷ್ಠಗುಣಾನ್ವಿತರಪ್ಪರೊಳ್ ಮಹಾ
ಪ್ರಿಯಮನೆ ಮಾಡುವರ್ ಪಟೆದು ಮಾಣದೆ ದುಷ್ಷಮಕಾಲದೇಶ್ಗೆಯೊಳ್॥

ಗಂಡರಮೇಲೆ ಸತ್ಯಗುಣಮುಂ ಪ್ರಭುಶಕ್ತಿಯುಮಾಯತಿಕ್ಕೆಯುಂ
ಪೆಂಡಿರಮೇಲೆ ದಿವ್ಯಗುಣಮುಂ ಪತಿಭಕ್ತಿಯುಮುನ್ನತಿಕ್ಕೆಯುಂ
ಪಂಡಿತರಪ್ಪರೊಳ್ಗುಣಮುಮಾಗಮದೋಜೆಯುಮುನ್ನತಿಕ್ಕೆಯುಂ
ಮಂಡಲದೊಳ್ ವಿಚಾರಿಸುವೊಡಾಗವು ದುಷ್ಷಮಕಾಲದೇಷ್ಗೆಯೊಳ್ [1] ॥

ಬಡವರಮೇಲುದಾರಗುಣಮುಳ್ಳವರೊಳ್ ಕಡುಲೋಭಮೊಳ್ಳಿತಂ
ನುಡಿವವರೊಳ್ ದರಿದ್ರತೆ ಕುಲಾನ್ವಿತರೊಳ್ ಕಡುಹೀನವೃತ್ತಿ ನೋ
ಪ್ಪೊಡೆ ಕುಲಹೀನರೊಳ್ ಮಹಿಮೆ ಗಾವಿಲರೊಳ್ ಸಿರಿ ಬುದ್ಧಿವಂತರೊಳ್
ಬಡತನಮಾವಗಂ ಜನಿಯಿಕುಂ ಸಲೆ ದುಷ್ಷಮಕಾಲದೇಷ್ಗೆಯೊಳ್ ॥

---

[1] (ಕ) ಮತ್ತು (ಗ) ಪುಸ್ತಕಗಳಲ್ಲಿ ೧೪೯ನೆಯ ಪದ್ಯವಾದ ಮೇಲೆ
ಕುಲಜರ ಸತ್ಯಮುಳ್ಳವರ ಧರ್ಮಸಮೇತರ ಮಾತನಾರುಮೊ
ಬ್ಬಳತವುಡಿಂಗೆ ಕೊಳ್ಳರದನಾಲಿಸದೆಲ್ಲಿಯುಮೊಲ್ವ ಧಾತ್ರಿಪರ್
ಖಳರ ಕುಲಾಪಹಾರಿಗಳ ಕಷ್ಟರ ಮಾತನೋತು ಭೂ
ತಳದೊಳವಜ್ಞೆಗೈಯುದೆ ಮನಂಬಿಡೆ ದುಸ್ಸಮಕಾಲದೇಳ್ಗೆಯೊಳ್ ॥
ಎಂಬ ಪದ್ಯವೂ, ೧೫೦ನೆಯ ಪದ್ಯವಾದ ಮೇಲೆ
ಗುರುಗಳ ವಾಣಿಯಿಂ ನಡೆವ ಶಿಷ್ಯರನುತ್ತಮಮಪ್ಪ ಧರ್ಮದೊಳ್
ಚರಿಯಿಪ ಮಾರ್ತ್ಯರಂ ಸುಜನರೆಂದುದನಾಲಿಪ ಕೇಳ್ವ ಭೂಮಿಪಾ
ಲರನೆಡಗರ್ಗಪ್ಪ ಬಾಂದವರನೊಳ್ಳಿದಗರ್ೞ್ಳಿದರಾಗಿ ಬಾಳ್ವರಂ
ಕರಮರಿದಣ್ಣ ಕಾಣ್ಬುದು ವಿಚಾರಿಸಿ ದುಸ್ಸಮಕಾಲದೇಳ್ಗೆಯೊಳ್ ॥
ಎಂಬ ಪದ್ಯವೂ ಇವೆ.

ಸಸಿ ಕಿಡುಗುಂ ತೃಣಂ ಬಹಳಮಕ್ಕುಮಸತ್ಯಮೆ ಪೆರ್ಚುಗುಂ ಶ್ರುತಂ[1]
ಕುಸಿಗುಮನಿಷ್ಟಕಾರ್ಗಳ ಬಾಳ್ವಿರುದಾರರೆ ಸಾವರೆತ್ತಲುಂ
ಮಿಸುಕದು ಜೈನಧರ್ಮದ ನೆಗೞ್ತೆ ಕುಲಿಂಗಿಗಳುಂ ಕುದೈವಮುಂ
ವಸುಧೆಯೊಳುರ್ವುಗುಂ ನಿಮಿರ್ದು[2] ದುಷ್ಷಮೆಕಾಲದೇೞ್ಗೆಯೊಳ್ ॥

ದುರಿತದೊಳಾರ್ತು ಕೊರ್ತೆಸಗಿ ದುರ್ಮತಮಂ ಪಿಡಿದುರ್ಕಿ ಸೊಕ್ಕಿ ನಿ
ಷ್ಠುರನರಕಾಬ್ಧಿಯೊಳ್ ಕೆಡೆದು ದುಃಖಮನುಣ್ಬರುರ್ವಿಯೊಳ್ ಪಲರ್
ನಿರುಪಮಮಪ್ಪ ಜೈನಪದಸೇವನೆಯಿಂ ಸುರಲೋಕಕೆಯ್ದುವರ್
ಧರೆಯೊಳಪೂರ್ವಮಚ್ಚರಿ ವಿಚಾರಿಸೆ ದುಷ್ಷಮೆಕಾಲದೇೞ್ಗೆಯೊಳ್॥ ೧೫೨

ಎಂದು ಪೇೞ್ವುದುಂ ದುಷ್ಷಮೆಕಾಲಕ್ಕಂ ತನ್ನ ಮುನ್ನಗೆಯ್ದ ಪಾಪಕ್ಕಂ ನಡುಗಿ ಜಿನದೀಕ್ಷೆಯುಂ ಕೈಕೊಂಡು ಪೋದಂ ; ಗುರುದತ್ತಮುನಿನಾಥಂ[3] ಧರಣೀಚಕ್ರದೊಳ್ ವಿಹಾರಿಸುತ್ತುಂ [ಬಂದು] ಪಳ್ಳಿಖೇಟದೊಳ್[4] ಜಾತಿಜರಾಮರಣತ್ರಯದೂರಮಪ್ಪ ನಿರ್ವಾಣಶ್ರೀಯನೆಯ್ದಿದನದುಕಾರಣದಿಂ ॥ ೧೫೩

ಕರಮೆ ಪರಿಗ್ರಹಮಂ ಪಿಡಿ
ದಿರದೆ ಜಿನೇಂದ್ರಾಗಮೋಕ್ತಿಯಿಂದಿರ್ಪ ಮಹಾ ।
ಪುರುಷಂಗೆ ತಡೆಯದಕ್ಷಯ
ಸಿರಿಯಕ್ಕುಂ ಸುಕವಿನಿಕರಪಿಕಮಾಕಂದಾ ॥ ೧೫೪

ಜಿನಪದಸೇವನೆಯುಂ ಮನ
ದನವರತಜಿನೇಂದ್ರಭಕ್ತಿಯುಂ ತತ್ಪದಭಾ ।
ವನೆಯುಂ ಭಾವಿಸೆ ಸಹಜಂ
ನಿನಗಿಳೆಯೊಳ್ ಸುಕವಿನಿಕರಪಿಕಮಾಕಂದಾ ॥ ೧೫೫

---

1 ನೃತಂ (ಬ.) 2 ಪಸರಿಸುಗುಂ ಸವಿಸ್ತರದೊಳುರ್ವುಗು (ಬ.)

3 ಜಿನಾಧೀಶ್ವರಂ (ಗ) 4 ಯೋಗನಿರೋಧಂಗೆಯ್ದು ಯೋಗಿಭಟ್ಟಾರಕನಾಗಿ ಪಂಚಹ್ರಸ್ವಾಕ್ಷರೋಚ್ಚಾರಣಮಾತ್ರದಿಂದಾಯುಷ್ಯನಾಮಗೋತ್ರವೇದನೀಯಮೆಂಬ ನಾಲ್ಕುಮಘಾತಿಕರ್ಮಂಗಳಂ ಕೆಡಿಸಿ ತತ್ಸಮಯದೊಳ್ (ಗ. ಕ.)

ಪಿಂಗದೆ ಮಿಥ್ಯಾವಾದಿಗ
ಳಂ ಗೆಡೆಗೊಂಡಾಡದಿರ್ಪ ಕಾರಣದಿಂದಂ ।
ಪಿಂಗದ ಸಂಸೃತಿಯನಿದಂ
ನೀಂ ಗೆಲ್ದೈ ಸುಕವಿನಿಕರಪಿಕಮಾಕಂದಾ ॥ ೧೫೬

ಉಱಿ ಸೆಱಿವಿಡಿದಿರ್ದುದಱಿಂ
ಮಱಿಯದೆ ಜಿನಪಾದಯುಗ್ಮಮಂ ದುರಿತಂಗಳ್ ।
ಪೆಱಪಿಂಗಿದುವಮೃತಶ್ರೀ
ಗೆಱಿಯನೆ ನೀಂ ಸುಕವಿನಿಕರಪಿಕಮಾಕಂದಾ ॥ ೧೫೭

ಮುಟ್ಟಲೆಗಂಡ ಸ್ತ್ರೀಯಂ
ತಿಟ್ಟುವಿರಲ್ಕಿಲ್ಲ ನಾಲ್ಕುದಿವಸಂ ನಿನಗಿಂ ।
ಕಟ್ಟಾಸನ್ನಮುಮೆಂದೆನೆ
ನಿಟ್ಟಿಸುವೊಡೆ ಸುಕವಿನಿಕರಪಿಕಮಾಕಂದಾ ॥ ೧೫೮

ಧರೆಯಂ ಬಿಟ್ಟತ್ತಿತ್ತಲ್
ಸುರಗಿರಿ ತೊಲಗದವೊಲರ್ಹನಂಘ್ರಿಯನೆಂತುಂ ।
ಪರಿಹರಿಸದು ನಿನ್ನ ಮನಂ
ಪರಮಾರ್ಥಂ ಸುಕವಿನಿಕರಪಿಕಮಾಕಂದಾ ॥ ೧೫೯

ಕೆಱಿಯಂ ಕಂಡು ಕಳವೆಯಂ ಬಿತ್ತುವಂತೆ ರಪಣಮಂ ಕಂಡು ಕಡನಂ ಕುಡವಂತೆ ಮದವಣಿಗೆಯಂ ಕಂಡು ಮದುವೆಗೊಡಱ್ಚುವಂತೆ ಮಱಿಯಂ ಕಂಡು ಆರಂಬಕ್ಕೊಡಱ್ಚುವಂತೆ ಕೂಟಂ ಕಂಡು ಬಿದ್ದಿನರಂ ಕರೆವಂತೆ [1] ಪಯಿನಂ ಕಂಡು ಕಱುವಂ ಬಿಡುವಂತೆ ಬೆಳಗಂ ಕಂಡು ಪೊನ್ನಂ ನೋಡುವಂತೆ ಕಂಬಮಂ ಕಂಡು ಮನೆಯುಂ ಮಾಡುವಂತೆ ಬೆಳೆದ ಕೆಯ್ಯಂ ಕಂಡು ಕಣನಂ ಮಾಡುವಂತೆ ಸಸಿಯಂ ಕಂಡು ನೀರಂ ಬಿಡುವಂತೆ ಮೊದಲೊಳ್ ನಿದೋಷಿಯಪ್ಪ ದೇವನನಱಿದು ಸಮ್ಯಕ್ತ್ವಂಬೆರ

---

1 ತಡವಂತೆ (ಖ, ಗ.)

ಸು ವ್ರತಂಗಳೊಳಂ ಧರ್ಮದೊಳಂ ನೆಗಟ್ವಾತಂಗೆ ವ್ರತದೊಳ್ ತಪದೊಳಾದ ಕಾರ್ಯಸಿದ್ಧಿಯಕ್ಕುಂ. ಸಮ್ಯಕ್ತ್ವಮಿಲ್ಲದೆ ವ್ರತಮುಂ ಧರ್ಮಮುಂ ತಪಮುಂ ಪ್ರಭುವಿಲ್ಲದೂರಂತೆ ಸೂರ್ಯನಿಲ್ಲದ ಪಗಲಂತೆ ಬಟ್ಟೆಯಿಲ್ಲದ ಪಯಣದಂತೆ ಕೆಚ್ಚಲಿಲ್ಲದಾವಿನಂತೆ ನೀರಿಲ್ಲದ ಬೆಳಸಿನಂತೆ ಮಡಿಯಿಲ್ಲದ ಶೃಂಗಾರದಂತೆ ಮೊಲೆವಾಲಿಲ್ಲದ ತಾಯಂತೆ ಬಾರ್ತೆಯಿಲ್ಲದದು ಕಾರಣದಿಂ ದರ್ಶನಾಂಗಂಗಳ ನಿಶ್ಶಂಕಾದ್ಯಷ್ಟಗುಣಂಗಳ ಫಲದಿಂ, ದರ್ಶನಂಬೆರಸಿದಯ್ದಣುವ್ರತಫಲದಿಂ, ದರ್ಶನಂಬೆರಸಿ, ಸುಖಮನೆಯ್ದಿದ ವಸುಭೂತಿಯುಮಂಜನಚೋರನುಂ ಅನಂತಮತಿಕುಮಾರಿಯುಂ ಒದ್ದಾಯನಮಹಾರಾಜನುಂ ರೇವತೀಮಹಾದೇವಿಯುಂ ಜಿನೇಂದ್ರಭಕ್ತನುಂ ವಾರಿಷೇಣಕುಮಾರನುಂ ವಜ್ರಕುಮಾರನುಂ ವಿಷ್ಣುಕುಮಾರನುಂ ಧನಕೀರ್ತಿಕುಮಾರನುಂ ಧನದಮಹಾರಾಜನುಂ ಜಿನೇಂದ್ರದಾಸನುಂ ಪ್ರಮಾಥಿಕುಮಾರನುಂ ಗುರುದತ್ತ ಮಹಾರಾಜನುಮೆಂಬೀ ಪದಿನಾಲ್ವರ್[ಮಹಾ] ಪುರುಷರೊಳಾದ ಪದಿನಾಲ್ಕುಂಕಥೆಗಳ ನಱಿದು ತಾನುಮನರಂತೆ ನೆಗಱ್ದಿ ಸಂಸಾರಸಮುದ್ರಮುಂ ಕಳೆವುದೆಂದು ಗೌತಮಸ್ವಾಮಿಗಳ್[1] ಪೇಱೆ ಕೇಳ್ದು ಮಗಧಾವನೀವಲ್ಲಭಂ ತನಗಾಗಳ್ ಮುಕ್ತಿಶ್ರೀ ಕೈಸಾರ್ದುದೆಂಬಂತೆ ಸಂತೋಷಂಬಟ್ಟು ಪುರಕ್ಕೆವಂದು ಪೆರ್ಚಿಂದಿಪ್ಪತ್ತನಾಲ್ವರ್[2] ತೀರ್ಥಕರ ಪರಮದೇವರ್ಗೆಯಭಿಷೇಕಮುಮಂ ಪೂಜೆಯುಮಂ ಮಾಡಿ ಪಲವುತೆಱದ ರತ್ನಂಗಳಿಂದರ್ಚಿಸಿ ಕೈಗಳಂ ಮುಗಿದು ‖ ೧೬೦

ಪುರುಪರಮೇಶ್ವರ ಸೌಖ್ಯಸದನ ಜಯ
ದಿವಿಜಗಣಾರ್ಚಿತಪಾದಪದ್ಮ ಜಯ
ವಿಲಸದಜಿತಜಿನ ದುರಿತಹರಣ ಜಯ
ಶತಮಖಶತನುತಚಾರುಚರಣ ಜಯ
ಶಂಭವಜಿನಪತಿ[3] ದುರಘದೂರ ಜಯ
ಮುಕ್ತಿಶ್ರೀಕುಚನೂತ್ನಹಾರ ಜಯ

1 ಗೌತಮಗಣಧರ ಸ್ವಾಮಿಗಳ್ (ಗ) 2 ಪೆರ್ಚಿದರ್ಗಹಾರದಾನದಿಂದಂ ಇಪ್ಪತ್ತನಾಲ್ವರ್ (ಖ) 3 ಸಂಭವದುಜ್ವಲ (ಖ. ಗ.)

ಸಂದಭಿನಂದನ ವಿಗತಮೋಹ [1] ಜಯ
ರಮ್ಯಾಲಂಕೃತಗುಣಸಮೂಹ ಜಯ
ಸುಮತಿಜಿನೇಶಪರೋಪಕಾರಿ ಜಯ
ಮನಸಿಜಮದಗಜಸಿಂಧುರಾರಿ ಜಯ
ಪದ್ಮಪ್ರಭಜಿನ ಶಾಂತರೂಪ ಜಯ
ಲೋಕತ್ರಯಹಿತ ಪೂಜ್ಯಪಾದ ಜಯ
ಸತ್ಸುಪಾರ್ಶ್ವ ಭುವನೈಕಸಾರ ಜಯ
ಕರ್ಮಮಹೀರುಹವರಕುಠಾರ ಜಯ
ಚಂದ್ರಪ್ರಭ ಹಿಮಕಿರಣತೇಜ ಜಯ
ಭಾಕ್ತಿಕಜನಕಲ್ಪಾವನೀಜ ಜಯ
ಪುಷ್ಪದಂತ ದಿಗ್ರಮ್ಯವಸ್ತ್ರ ಜಯ
ಕಿಲ್ಬಿಷನಗಕುಲವಾಸವಾಸ್ತ್ರ ಜಯ
ಶೀತಲ ಶೀತಲಸದೃಶವಚನ ಜಯ
ವಜ್ರಶಿಲಾತಲಲಿಖಿತವಚನ ಜಯ
ಸುಶ್ರೇಯಾಂಸಜಿನೇಂದ್ರರುದ್ರ ಜಯ
ದುಷ್ಕೃತಪನ್ನಗಪತಿಖಗೇಂದ್ರ ಜಯ
ವಾಸುಪೂಜ್ಯದೇವಾಧಿದೇವ ಜಯ
ಸನ್ಮುನಿಸೇವ್ಯ ಮಹಾನುಭಾವ ಜಯ
ವಿಮಲ ಗುಣರತ್ನರಾಶಿ ಜಯ
ನಿಖಿಲಶೀಲಗುಣತೋಯರಾಶಿ ಜಯ
ಅನಂತ ಗುಣಾಂಬುಧಿ [2] ವೀತರಾಗ ಜಯ
ಪಂಚಮಹಾಕಲ್ಯಾಣಯೋಗ್ಯ ಜಯ
ಧರ್ಮಜಿನೇಶ್ವರ ಧರ್ಮವಾರ್ಧಿ ಜಯ
ನಿಷ್ಠುರಾಷ್ಟಕರ್ಮಭ್ರಪವನ ಜಯ
ಶಾಂತಿಜಿನೇಶ್ವರ ಪುಣ್ಯನಿಳಯ ಜಯ

---

[1] ವೃಜಿನಮೋಹ (ಬ.) [2] ಜಯನನಂತ ಜಿನ (ಗ)

ಶರಣಾಗತಜನಕರ್ಮವಿಲಯ ಜಯ
ಕುಂಥುಜಿನೇಶ್ವರ ಜಗದ್ವಂದ್ಯ ಜಯ
ಗುಣಮಣಿ ಮುನಿಗಣ [1] ನಿಕರ ವಂದ್ಯ ಜಯ
ಅರಜಿನ ಸುರನರನಿಕರವಂದ್ಯ ಜಯ
ಸಾರಸ್ವತತತ್ತ್ವವಿದಿತನೂತ ಜಯ
ಮಲ್ಲಿಜಿನೇಶ್ವರ ಸುಸ್ವರೂಪ ಜಯ
ಕರ್ಮಕಲಂಕತಮಃಪ್ರದೀಪ ಜಯ
ಮುನಿಸುವ್ರತ ಜಿನರಾಜಹಂಸ ಜಯ
ಸುಗತಿವಧೂಕರ್ಣಾವತಂಸ ಜಯ
ನಮಿಜಿನ ಮುಕ್ತಿಶ್ರೀನಿವಾಸ ಜಯ
ಸಕಲಶ್ರೀವನಿತಾವಿಲಾಸ ಜಯ
ನೇಮಿಜಿನೇಶ್ವರ ವಿನುತಶರಣ ಜಯ
ಹರಿಕುಲಗಗನಸಹಸ್ರಕಿರಣ ಜಯ
ಪಾರ್ಶ್ವಜಿನೇಶ್ವರ ದಿವ್ಯಮೂರ್ತಿ ಜಯ
ಲೋಕಾಲೋಕವ್ಯಾಪ್ತಕೀರ್ತಿ ಜಯ
ವರ್ಧಮಾನಜಿನ ಭುವನಪೂಜ್ಯ [2] ಜಯ
ನೆಗಳ್ದಷ್ಟಾದಶದೋಷರಹಿತ ಜಯ ಜಯಜಯಾ [3] ‖ ೧೬೧

ಎಂದ[ನೇಕಸ್ತುತಿಶತಸಹಸ್ರಂಗಳಿಂ] ಸ್ತುತಿಸಿ ‖ ೧೬೨

ಪ್ರಿಯದಿಂ ತೂರ್ಯಸ್ವನಂ ವಾರಿಧಿವೊಳೆಸೆಯಲುಂ ವಾರನಾರೀಕದಂಬಂ
ನಯದಿಂ ಕೈಗೆಯ್ದು ಸುತ್ತಂ ಬರಲುವೊಸಗೆಯಿಂ ಪುಣ್ಯಕಾಂತಾಜನಂ ಸೇ
ಸೆಯನುತ್ಸಾಹದಿಂದಂ ಪರಸಿ ವಿಭವದಿಂದಿಕ್ಕಲುಂ ಬಂದು ರಾಜಾ
ಲಯಮಂ ಚೆಲ್ವಾಗೆ ಪೊಕ್ಕಂ ಸುಕವಿಜನಮನಃಸದ್ಮಿನೀರಾಜಹಂಸಂ ‖

---

1 ಗಣಧರಾದಿಮುನಿ (ಕ) 2 ವರ್ಧಮಾನಭುವನೈಕಮಹಿತ (ಗ)
3 ರಹಿತಜಯ ಜಯಗುಣನಿಧಾನಾ (ಗ)

ಗಿರಿಶಿಖಿವಾಯುವಾರ್ಗಶಶಿಸಂಖ್ಯೆಯೊಳಾವಗವೊಂದಿ ವರ್ತಿಸು
ತ್ತಿರೆ ಶಕಕಾಲಮುನ್ನತಿಯ ನಂದನವತ್ಸರದೊಳ್ ಮಹೋತ್ಸವಂ
ಬೆರಸೆಸೆದಿರ್ದ ಭಾದ್ರಪದಮಾಸದೊಳಗ್ಗದ ಶುಕ್ಲಪಕ್ಷದೊಳ್
ನಿರುಪಮಮಪ್ಪ ಪಾಡಿವದೊಳೊಪ್ಪುವ ಹಸ್ತಯುತಾರ್ಕವಾರದೊಳ್ ॥

ಧರಣೀಪೂಜ್ಯಂ ಭವ್ಯೋ
ತ್ಕರವಂದ್ಯಂ ಕಾವ್ಯರತ್ನಮಮಳಯಶಶ್ರೀ ।
ಕರಮೆನಿಸಿರ್ದೀಗ್ರಂಥಂ
ನಿರುತಂ [1] ನಿರ್ವಾಹ [2] ಮಾಯ್ತು ನಿರ್ವಿಘ್ನತೆಯಿಂ ॥ ೧೬೫

ವರಚಕ್ರಾದಿಲಸಚ್ಚತುರ್ದಶ [3] ಮಹಾರತ್ನಂಗಳಂ ತಾಳ್ದಿ ನಿಂ
ದರಮೋಘಂ ನುತಚಕ್ರವರ್ತಿಪದದೊಳ್ ನಿಲ್ವಂತೆ ಸದ್ದರ್ಶನಾ
ದ್ಯರದೇವಾನತಸಚ್ಚತುರ್ದಶವಿದಗ್ಧಪ್ರೀತಿಯುಪ್ಪೀಕಥೋ
ತ್ಕರಮಂ ತಾಳ್ದಿದರುಂ ವಿಶೇಷಪದದೊಳ್ ನಿಲ್ವರ್ ಮಹೋತ್ಸಾಹದಿಂ ॥

ಪಲರುಂ ಧರ್ಮಮನೊಲ್ಲದುಗ್ರನರಕಾಂಭೋರಾಶಿಯೊಳ್ ಬಿರ್ದು ಕೋ
ಟಲೆಗೊಳ್ವರ್ಗಳಿವಂತು ಕನ್ನಡದಿನೊಪ್ಪಂಬೆತ್ತು ಜಾಣ್ಮಾತಿನಿಂ
ಪಲವುಂ ದೇಸೆಯಿ [4] ಸಂದುದಾಹರಣೆಯಿಂ ಪೇಳ್ದಿಂ ಬುಧರ್ಕೂರ್ಮೆಯಿಂ
ತಲೆಯುಂ ತೂಗುವಿನಂ ಜಿನೇಂದ್ರಮತಮಂ ವಾತ್ಸಲ್ಯರತ್ನಾಕರಂ ॥೧೬೭

ಮುಳುಗುಂದದೊಳಿರ್ದು ಮಹೋ
ಜ್ಜ್ವಳಧರ್ಮಾಮೃತಮನರ್ತಿಯಿಂದಂ ಭವ್ಯಾ ।
ವಳಿಗಱಿಪಿದಂ ಧರಿತ್ರೀ
ತಳಪೂಜ್ಯಂ ಸುಕವಿನಿಕರಪಿಕಮಾಕಂದಂ ॥ ೧೬೮

ಕುಲಶೈಲಾವಳಿ ನಿಲ್ವಿನಂ ಸುರನಿವಾಸಂ ನಿಲ್ವಿನಂ ಧಾರಿಣೀ
ವಲಯಂ ನಿಲ್ವಿನಮಂಬುರಾಶಿನಿಕುರಂಬಂ ನಿಲ್ವಿನಂ ನಿಲ್ಕೆ ನಿ

---

[1] ಹರುಷದ (ಗ) [2] ನಿರ್ವಾಣ (ಕ. ಖ.)
[3] ವರಚಕ್ರಾಧಿಪರುಂ ಚತುರ್ದಶ (ಕ. ಖ. ಗ.) [4] ದೇಸೆಯು (ಗ)

ರ್ಮಲಧರ್ಮಾಮೃತಮೆಯ್ದೆ ತೋಯನಿಧಿಪರ್ಯಂತಂಬರಂ ಪರ್ವಿ ಭೂ
ತಳದೊಳ್ ಕಾಂಚನರಾಶಿಯಂತೆಸೆಯುತುಂ ಚಂದ್ರಾರ್ಕರುಳ್ಳನ್ನೆಗಂ ॥

ಜಿನಧರ್ಮಂ ಸಕಲಾವನೀತಳಮುಮಂ ಪರ್ವಿಕ್ಕೆ ಭೂಪಾಲಕರ್
ಜನಮಂ ನ್ಯಾಯದೊಳೊಂದಿ ರಕ್ಷಿಸುಗೆ ಭೂಲೋಕಕ್ಕೆ ಸಂತೋಷಮ
ಪ್ಪಿನೆಗಂ ಪೆರ್ಮಟೆ ಕೊಳ್ಗ ಭವ್ಯನಿಕರಕ್ಕಾನಂದಮುಂ ಬೇಳ್ಪ ಕಾಂ
ಚನಮುಂ ಕೀರ್ತಿಯುಮಕ್ಕೆ ದಿವ್ಯಸುಖಮುಂ ಭದ್ರಂ ಶುಭಂ ಮಂ
ಗಳಂ ॥ ೧೩೦

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ಸಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಅಪರಿಗ್ರಹ[1] ವ್ರತವ್ಯಾವರ್ಣನಂ
ಚತುರ್ದಶಾಶ್ವಾಸಂ.

ಧರ್ಮಾಮೃತಂ ಸಂಪೂರ್ಣಂ.

---

1 ನಿಃಪರಿಗ್ರಹ (ಗ)

ಶ್ರೀಮದ್ರಾಕ್ಷಸವತ್ಸರೇ ವಿಮಲಿನೇ ಮಾಸೇ ಪುನಃ ಫಾಲ್ಗುನೇ
ವಾರೇ ದೇವಗುರೋಸ್ಸ್ವಕಾರ್ಯವಿಹಿತೇ ಶ್ರಿಪೌರ್ಣಮಾಸ್ಯಾಂ ತಿಥೌ
ಆದಿಶ್ರೀಯತಿಪುಂಗವಾಯ ಜಗತೀಪೂಜ್ಯಾಯ ವಿಪ್ರಾನ್ವಯೋ
ರಾಜಾಖ್ಯಸ್ಸ್ವಯಮಾದರೇಣ ಲಿಖಿತಂ ದತ್ತೇ ಸ್ಮ ಧರ್ಮಾಮೃತಂ (ಬ)

ಕನ್ನಡ ವಿಶ್ವವಿದ್ಯಾಲಯ
ಗ್ರಂಥಾಲಯ
ಹಂಪಿ - 583221